ಭಗವಾನ್ ಶ್ರೀವೇದವ್ಯಾಸಪ್ರಣೀತ

ಮಹಾಭಾರತ

ಲಕ್ಷಾಲಂಕಾರಕ್ಕೆ ಅನುಗುಣವಾಗಿ
ಮಹಾಭಾರತತಾತ್ಪರ್ಯನಿರ್ಣಯದೊಂದಿಗೆ
ಪ್ರತಿ ಶ್ಲೋಕಗಳ ಜೊತೆಗೆ ಕನ್ನಡಾನುವಾದ

ಆದಿಪರ್ವ

ಭಾಗ–1

ಪ್ರಕಾಶಕರು

ತತ್ವಸಂಶೋಧನಸಂಸತ್ (ರಿ.)

ಕರ್ನಾಟಕ ಸಂಸ್ಕೃತ ವಿಶ್ವವಿದ್ಯಾನಿಲಯದ ಮಾನ್ಯತೆ ಪಡೆದಿದೆ

ಪಲಿಮಾರು ಮಠ, ಉಡುಪಿ

॥ ಶ್ರೀರಾಮಶ್ರೀ ॥

॥ ಶ್ರೀವೇದವ್ಯಾಸೋ ವಿಜಯತೇ ॥

ಭಗವಾನ್ ಶ್ರೀವೇದವ್ಯಾಸ ಪ್ರಣೀತ

ಮಹಾಭಾರತ

ಭಾಗ-೧

(ಶ್ರೀಮದಾನಂದತೀರ್ಥರ ತಾತ್ಪರ್ಯನಿರ್ಣಯ ಶ್ರೀವಾದಿರಾಜತೀರ್ಥರ
ಲಕ್ಷಾಲಂಕಾರದೊಂದಿಗೆ ಪ್ರತಿ ಶ್ಲೋಕಗಳ ಜೊತೆಗೆ ಕನ್ನಡಾನುವಾದ)

ಪರಮಪೂಜ್ಯ ಶ್ರೀ ಶ್ರೀ ವಿದ್ಯಾಧೀಶತೀರ್ಥ ಶ್ರೀಪಾದರು

ಶ್ರೀಹೃಷೀಕೇಶತೀರ್ಥಸಂಸ್ಥಾನಂ, ಪಲಿಮಾರು ಮಠ, ಉಡುಪಿ

ಅನುವಾದಕರು :

ವಿದ್ವಾನ್॥ ಪಿ. ಎಸ್. ಶೇಷಗಿರಿ ಆಚಾರ್ಯ,

ಮೈಸೂರು.

ಪ್ರಕಾಶಕರು :

ತತ್ವಸಂಶೋಧನಸಂಸತ್ (ರಿ.)

ಕರ್ನಾಟಕ ಸಂಸ್ಕೃತ ವಿಶ್ವವಿದ್ಯಾಲಯದ ಮಾನ್ಯತೆ ಪಡೆದಿದೆ

ಶ್ರೀಪಲಿಮಾರು ಮಠ, ಉಡುಪಿ.

ಮಹಾಭಾರತ - ಭಾರತತಾತ್ಪರ್ಯನಿರ್ಣಯ- ಲಕ್ಷಾಲಂಕಾರ ಕನ್ನಡಾನುವಾದದ ಸಮಗ್ರ ಯೋಜನೆಯ ಕೃತಿಗಳನ್ನು ಪರಮಪೂಜ್ಯ ಶ್ರೀ ಶ್ರೀ ವಿದ್ಯಾಧೀಶತೀರ್ಥ ಶ್ರೀಪಾದರ ಷಷ್ಟ್ಯಪೂರ್ತಿಯ ಸಮಾರಂಭದಲ್ಲಿ ಮನ್ಮಥ ಸಂ/ ಕಾರ್ತಿಕ ಬಹುಳ ತೃತೀಯಾ (28.11.2015) ದಂದು ತಿರುಮಲಕ್ಷೇತ್ರದಲ್ಲಿ ಪರಮಪೂಜ್ಯ ಶ್ರೀ ಶ್ರೀ ವಿಶ್ವೇಶತೀರ್ಥ ಶ್ರೀಪಾದರು ಅನಾವರಣಗೊಳಿಸಿ ಶ್ರೀನಿವಾಸನ ಅಡಿದಾವರೆಗಳಲ್ಲಿ ಸಮರ್ಪಿಸಿದರು.

ಆದಿಪರ್ವ ಭಾಗ-೧

© ತತ್ತ್ವಸಂಶೋಧನ ಸಂಸತ್ (ರಿ.), ಪಲಿಮಾರು ಮಠ, ಉಡುಪಿ.

ISBN : 978-93-81807-24-8

ಪುಟಗಳು	-	LXXXVI + 628= 714
ಮುದ್ರಿತ ಪ್ರತಿಗಳು	-	1000
ಬೆಲೆ	-	**ರೂ. 425/-**
ಅನುವಾದಕರು	-	ವಿದ್ವಾನ್ ಪಿ.ಎಸ್. ಶೇಷಗಿರಿ ಆಚಾರ್ಯ, ಮೈಸೂರು.
ಪ್ರಕಾಶಕರು	-	ತತ್ತ್ವಸಂಶೋಧನಸಂಸತ್, ಪಲಿಮಾರು ಮಠ, ಉಡುಪಿ.
ಪುಟ ಸಂಯೋಜನೆ	-	ಎಂ. ಶರತ್ ಚಂದ್ರ
ಅಕ್ಷರ ಜೋಡಣೆ	-	ಬೆಮ್ಮತ್ತಿ ಶ್ರೀನಿವಾಸ ಮತ್ತು ಶ್ರೀಮತಿ ಎಸ್. ನಾಗಲತಾ
ಮುದ್ರಕರು	-	ಪವನ್ ಪ್ರಿಂಟರ್ಸ್, ಬೆಂಗಳೂರು ☎ : 96864 89131
ಗ್ರಂಥಪ್ರಾಪ್ತಿ	-	ಪಲಿಮಾರು ಮಠ, ಉಡುಪಿ.



ವಾಸಿಷ್ಠಕೃಷ್ಣ ಮಮ ದೇಹಿ ಕರಾವಲಂಬಂ



ನವನವಗುಣಸಾಂದ್ರಂ ನೌಮಿ ಮಧ್ವಾಖ್ಯಚಂದ್ರಂ



ಶ್ರೀಮದ್ವಾದಿರಾಜಕೇಸರಿಣೇ ನಮಃ



ವಿದ್ಯಾಮಾನ್ಯಾನ್ಮನೀನ್ನುಮಃ



ಪರಮಪೂಜ್ಯ ಶ್ರೀ ಶ್ರೀ ವಿದ್ಯಾಧೀಶತೀರ್ಥ ಶ್ರೀಪಾದರು

ಜಗದ್ಗುರು ಶ್ರೀಮನ್ಮಧ್ವಾಚಾರ್ಯಮೂಲಮಹಾಸಂಸ್ಥಾನಮ್

ಪರಮಪೂಜ್ಯ ಶ್ರೀಶ್ರೀವಿಶ್ವೇಶತೀರ್ಥ ಶ್ರೀಪಾದರು

ಶ್ರೀ ಪೇಜಾವರ ಅಧೋಕ್ಷಜ ಮಠ, ರಥಬೀದಿ, ಉಡುಪಿ.

ಅನುಗ್ರಹ ಸಂದೇಶ

ಜಗತ್ತಿನ ಆಧ್ಯಾತ್ಮಿಕ ಮತ್ತು ಧಾರ್ಮಿಕ ತತ್ವಗಳನ್ನು ಅರಿಯಲು ನಮಗೆ ಇರುವ ಮುಖ್ಯ ಪ್ರಮಾಣಗಳು ವೇದ-ಉಪನಿಷತ್ತುಗಳು ಮತ್ತು ಮಹಾಭಾರತ ಹಾಗೂ ಬ್ರಹ್ಮಸೂತ್ರಗಳು. ಯಾವ ವ್ಯಕ್ತಿಯೂ ನಿರ್ಮಿಸದಿರುವ ಅಪೌರುಷೇಯಗಳಾದ ವೇದೋಪನಿಷತ್ತುಗಳ ಸಂದೇಶದಲ್ಲಿ ನಾವು ಸಂದೇಹ ಪಡಲು ಅವಸರವೇ ಇಲ್ಲ. ವ್ಯಕ್ತಿಯ ಬೌದ್ಧಿಕದೌರ್ಬಲ್ಯವೆನಿಸಿದ ಭ್ರಾಂತಿ ಅಜ್ಞಾನಗಳಿಂದ ಅವನು ನಿರ್ಮಿಸಿದ ಗ್ರಂಥದಲ್ಲಿಯೂ ದೋಷಗಳು ಸಂಭವಿಸಲು ಸಾಧ್ಯ. ವ್ಯಕ್ತಿಯ ಬುದ್ಧಿಯನ್ನೇ ಮೀರಿನಿಂತ ಅಪೌರುಷೇಯ ವೇದೋಪನಿಷತ್ತುಗಳಲ್ಲಿ ಯಾವ ಬೌದ್ಧಿಕ ದೋಷಗಳ ಪ್ರತಿಫಲನವೂ ಇರಲು ಸಾಧ್ಯವಿಲ್ಲ.

ಅದರಂತೆಯೇ ಸರ್ವಜ್ಞನಾದ ಭಗವಂತನೇ ವೇದವ್ಯಾಸರೂಪದಲ್ಲಿ ಅವತರಿಸಿ ರಚಿಸಿದ ಮಹಾಭಾರತವೂ ಪರಮ ಪ್ರಮಾಣವೆನಿಸಿದೆ. ಭಗವಂತನ ಅನಂತ ವಿಶಾಲ ಜ್ಞಾನದಲ್ಲಿ ವೇದಗಳಲ್ಲಿ ಹೇಳದ ಅಪೂರ್ವ ವಿಷಯಗಳೂ ಗೋಚರವಾಗುತ್ತವೆ. ಅಂತಹ ಪರಮಾತ್ಮನೇ ರಚಿಸಿದ ಮಹಾಭಾರತದಲ್ಲಿಲ್ಲದ ಸತ್ಯವನ್ನು ಮತ್ತೆಲ್ಲಿ ಕಾಣಲು ಸಾಧ್ಯ? ಈ ಎಲ್ಲ ಪ್ರಮಾಣ ಗ್ರಂಥಗಳ ನಿಜಾರ್ಥವನ್ನು ತಿಳಿಯಲು ವೇದವ್ಯಾಸರೇ ರಚಿಸಿದ ಸರ್ವಶಾಸ್ತ್ರ ನಿರ್ಣಾಯಕವಾದ ಬ್ರಹ್ಮಸೂತ್ರಗಳ ಅವಶ್ಯಕತೆಯೂ ಇದೆ. ಹಿಡಿಯಿಲ್ಲದ ಕತ್ತಿ ಕೊಡಲಿಗಳಿಂದ ಯಾವುದನ್ನೂ ಛೇದಿಸಲು ಶಕ್ಯವಾಗದಂತೆ ಬ್ರಹ್ಮಸೂತ್ರದ ಹಿಡಿಯಿಲ್ಲದ ಪ್ರಮಾಣ ಗ್ರಂಥಗಳಿಂದ ನಮ್ಮ ಅಜ್ಞಾನವನ್ನು ಛಿನ್ನ ಭಿನ್ನಗೊಳಿಸಲು ಸಾಧ್ಯವಿಲ್ಲ. ಈ ರೀತಿಯಲ್ಲಿ ವೇದ, ಮಹಾಭಾರತ, ಬ್ರಹ್ಮಸೂತ್ರವೆಂಬ ಮಹಾಗ್ರಂಥಗಳು ನಮ್ಮ ಅಧ್ಯಾತ್ಮ ದರ್ಶನಕ್ಕೆ ಅತ್ಯಾವಶ್ಯಕವಾಗಿದೆ.

ಇವುಗಳಲ್ಲಿ ಮಹೋನ್ನತಗ್ರಂಥವೆನಿಸಿದ ಮಹಾಭಾರತ ಗ್ರಂಥಕ್ಕೆ ಸಂಬಂಧಿಸಿದ ಅಷ್ಟಮಠದ ಪ್ರಾಚೀನ ಪ್ರತಿಗಳಲ್ಲಿರುವ ಪಾಠಗಳನ್ನು ಇತರ ಮುದ್ರಿತ ಪುಸ್ತಕದಲ್ಲಿರುವ ಪಾಠಗಳನ್ನು ಅನೇಕ ವಿದ್ವಾಂಸರ ಸಹಕಾರದಿಂದ ಗುರುತಿಸಿ ಶ್ರೀ ವಿದ್ಯಾಧೀಶತೀರ್ಥ ಶ್ರೀಪಾದರು ಮಹಾಭಾರತದ ಶುದ್ಧಪಾಠವನ್ನು ಸಮಾಜಕ್ಕೆ ಅರ್ಪಿಸುತ್ತಿದ್ದಾರೆ.

ಶ್ರೀಮಧ್ವಾಚಾರ್ಯರ ಕಾಲದಲ್ಲಿಯೇ ಮಹಾಭಾರತ ಪಾಠದಲ್ಲಿ ಬಹಳಷ್ಟು ವಿಕೃತಿಗಳಾಗಿವೆ. ಪಾಠಗಳ ಲೋಪ, ವ್ಯತ್ಯಾಸ, ಪ್ರಕ್ಷೇಪಗಳ ಗೊಂದಲ ಸಾಕಷ್ಟು ನಡೆದಿವೆ. ಶುದ್ಧಪಾಠದ ಕೋಟ್ಯಾಂಶವೂ ಇಲ್ಲವೆಂದು ಆಚಾರ್ಯರೇ ಹೇಳಿದ್ದಾರೆ. ಬೇರೆ ಬೇರೆ ಪ್ರದೇಶಗಳಲ್ಲಿರುವ ಅನೇಕ ಗ್ರಂಥಗಳನ್ನು ಪರಿಶೀಲಿಸಿ ಶ್ರೀ ವೇದವ್ಯಾಸರು ಹೇಗೆ ಹೇಳಿದ್ದಾರೋ ಅದೇ ರೀತಿಯ ಅಧಿಕೃತ ಗ್ರಂಥವನ್ನು ಶ್ರೀಮಧ್ವಾಚಾರ್ಯರು ಸಂಶೋಧಿಸಿ ಅದಕ್ಕೆ ಅನುಗುಣವಾಗಿ ಮಹಾಭಾರತ ತಾತ್ಪರ್ಯ ನಿರ್ಣಯವನ್ನು ರಚಿಸಿದ್ದಾರೆ. ಇನ್ನೂ ಸಾಕಷ್ಟು ಪ್ರಕ್ಷೇಪ ವಿಕ್ಷೇಪಗಳು ಆಗಿವೆ. ಆದುದರಿಂದ ಶ್ರೀಮಧ್ವಾಚಾರ್ಯರ ತಾತ್ಪರ್ಯ ನಿರ್ಣಯ, ಶ್ರೀ ವಾದಿರಾಜರ ಲಕ್ಷಾಭರಣ ಗ್ರಂಥಗಳನ್ನು ಆಧರಿಸಿ ಸರಿಯಾದ ಪಾಠ ಸಂಶೋಧನೆಯ ಕಾರ್ಯವು ಆಗಬೇಕಾಗಿದೆ. ಶ್ರೀಪಾದರು ಇವುಗಳ ಸಂಯೋಜನೆಯ ಜೊತೆಯಲ್ಲಿ ಹಮ್ಮಿಕೊಂಡಿರುವ ಪಾಠ ಸಮೀಕ್ಷಾತ್ಮಕವಾದ ಸಂಶೋಧನಾತ್ಮಕವಾದ ಈ ಸತ್ಕರ್ಮವು ಅತ್ಯಂತ ಶ್ಲಾಘನೀಯವಾಗಿದೆ.

ನಮ್ಮ ವಿದ್ಯಾಗುರುಗಳಾದ ಶ್ರೀ ಶ್ರೀ ವಿದ್ಯಾಮಾನ್ಯತೀರ್ಥರ ಮೂಲಪಾಠ ಶೋಧನೆಯ ಕನಸು ಶ್ರೀ ವಿದ್ಯಾಧೀಶತೀರ್ಥ ಶ್ರೀಪಾದರ ಮೂಲಕ ನನಸಾಗಿದೆ. ಈ ಯೋಜನೆಯು ಪೂರ್ಣತೆಯನ್ನು ಪಡೆಯಲಿ ಎಂದು ಭಗವಂತನಲ್ಲಿ ಪ್ರಾರ್ಥಿಸುತ್ತೇವೆ. ಇದರಲ್ಲಿ ಪರಿಶ್ರಮವಹಿಸಿದ ವಿದ್ವಾನ್ ಪಿ.ಎಸ್. ಶೇಷಗಿರಿ ಆಚಾರ್ಯರಿಗೂ ಮತ್ತು ಅನೇಕ ವಿದ್ವಾಂಸರಿಗೂ ಶ್ರೀಹರಿವಾಯುಗುರುಗಳ ಅನುಗ್ರಹವನ್ನು ಬಯಸಿ ಈ ಕೃತಿಯು ಸಮಸ್ತ ಜಿಜ್ಞಾಸುಗಳಿಗೂ ದೊರಕುವಂತಾಗಲೆಂದು ಅಪೇಕ್ಷಿಸುತ್ತೇವೆ.

ನಾರಾಯಣ ಸ್ಮರಣೆಗಳು

ಶ್ರೀ ಶ್ರೀ ವಿಶ್ವೇಶತೀರ್ಥ ಶ್ರೀಪಾದಂಗಳವರು
ಶ್ರೀ ಪೇಜಾವರ ಅಧೋಕ್ಷಜ ಮಠ, ಉಡುಪಿ.

ಜಗದ್ಗುರು ಶ್ರೀಮನ್ಮಧ್ವಾಚಾರ್ಯಮೂಲಮಹಾಸಂಸ್ಥಾನಮ್

ಪರಮಪೂಜ್ಯ ಶ್ರೀಶ್ರೀವಿಶ್ವಪ್ರಿಯತೀರ್ಥ ಶ್ರೀಪಾದರು

ಶ್ರೀ ಅದಮಾರು ಮಠ, ರಥಬೀದಿ, ಉಡುಪಿ.

ಅನುಗ್ರಹ ಸಂದೇಶ

ಶಬ್ದ ಅರ್ಥ ಎರಡರಲ್ಲೂ ಗುರುಭೂತವಾದ ಗ್ರಂಥ. ಆದ್ದರಿಂದ ಇದಕ್ಕೆ ಮಹಾಭಾರತ ಎಂದು ಹೆಸರು. ಈ ಗ್ರಂಥವು ಒಳಗೊಳ್ಳದ ವಿಷಯವಿಲ್ಲ. ಮಹಾಭಾರತದಲ್ಲಿ ಒಂದು ವಸ್ತುವಿನ ಪರಿಚಯ ಇಲ್ಲ ಅಂದರೆ ಆ ವಸ್ತು ಜಗತ್ತಿನಲ್ಲಿ ಎಲ್ಲಿಯೂ ಇಲ್ಲ ಎಂದರ್ಥ.

ಸಾತ್ವಿಕ ಜೀವರಾಶಿಗಳಿಗೆ ಸರಿಯಾದ ತಿಳುವಳಿಕೆ ಬರಬೇಕು. ಅವರು ಉದ್ಧ್ವತರಾಗಬೇಕು. ಸ್ವರೂಪದಲ್ಲಿ ಯೋಗ್ಯತೆ ಇದ್ದರೂ ದೈಹಿಕವಾಗಿ ಕೆಲವರಿಗೆ ವೇದಾಧ್ಯಯನದ ಮೂಲಕ ಮೇಲೇರಲು ಅಸಾಧ್ಯ. ಉದಾ- ಸ್ತ್ರೀಯರು, ಶೂದ್ರರು. ಜನ್ಮಾಂತರದಲ್ಲಿ ಉತ್ತಮ ವರ್ಣದವರಾಗಿಯೋ ಪುರುಷರಾಗಿಯೋ ಹುಟ್ಟಿ ಅಧ್ಯಯನ ಮಾಡಬಹುದು. ಆದರೆ ಈ ಜನ್ಮ ವ್ಯರ್ಥವಾಗಬಾರದು. ಅದಕ್ಕಾಗಿ ವೇದವ್ಯಾಸರು ರಚಿಸಿದ ಗ್ರಂಥವೇ ಮಹಾಭಾರತ. ಇದಕ್ಕೆ ಪಂಚಮವೇದ ಎಂದು ಹೆಸರು. ಈ ಗ್ರಂಥಕ್ಕೆ ಸ್ತ್ರೀ-ಶೂದ್ರರೂ ಅಧಿಕಾರಿಗಳು. ತಥಾಚ ಎಲ್ಲಾ ವಿಷಯಗಳನ್ನೂ ಒಳಗೊಂಡ ಎಲ್ಲರಿಗೂ ಎಟಕುವ ಗ್ರಂಥ ಎಂಬುದು ಇದರ ಮಹತ್ವ.

ಮೇಲ್ನೋಟಕ್ಕೆ ಈ ಗ್ರಂಥವನ್ನು ನೋಡಿದಾಗ ಆಸ್ತಿಗಾಗಿ ಅಣ್ಣತಮ್ಮಂದಿರಲ್ಲಿ ನಡೆದ ಜಗಳವಾಗಿ ತೋರುತ್ತದೆ. ಇಷ್ಟೇ ಆಗಿದ್ದರೆ ಮಹತ್ವ ಬರುತ್ತಿರಲಿಲ್ಲ. ಆಚಾರ್ಯ ಮಧ್ವರ ಆಧ್ಯಾತ್ಮಿಕ ಪರವಾಗಿ ಅರ್ಥಮಾಡಿ ಇದರ ಮಹತ್ವವನ್ನು ಶಿಖರಕ್ಕೆ ಏರಿಸಿದ್ದಾರೆ. ಆದ್ದರಿಂದ ಪ್ರತಿಯೊಬ್ಬರು ಅಭ್ಯಸಿಸಬೇಕಾದ ಗ್ರಂಥವಿದು.

ಆದರೆ ಶುದ್ಧವಾದ ಪಾಠಕ್ಕೆ ದಾರಿದ್ರ್ಯ ಇದೆ. ಆದ್ದರಿಂದ ಅರ್ಥಕ್ಕಿಂತ ಅನರ್ಥವಾಗುವುದೇ ಜಾಸ್ತಿ. ಇದನ್ನು ಮನಗಂಡ ಪಲಿಮಾರು ಮಠಾಧೀಶರಾದ ಶ್ರೀ ಶ್ರೀ ವಿದ್ಯಾಧೀಶತೀರ್ಥರು ಸರಿಯಾದ ಪಾಠಕ್ಕಾಗಿ ಶ್ರಮಿಸಿದರು. ಬೇರೆ

ಬೇರೆ ರಾಜ್ಯಗಳ ಪ್ರಾಚೀನ ಗ್ರಂಥಗಳನ್ನು ಏಕತ್ರ ಸೇರಿಸಿದರು. ವಿದ್ವಾಂಸರುಗಳಿಂದ ಕೃಷಿ ಮಾಡಿಸಿದರು. ಸರಿಯಾದ ಪಾಠವನ್ನು ಆಸ್ತಿಕ ಸಮಾಜಕ್ಕೆ ಒದಗಿಸುತ್ತಿದ್ದಾರೆ. ವಿದ್ಯಾಧೀಶರ ಆಶ್ರಮಗುರುಗಳಾದ ನಮ್ಮ ವಿದ್ಯಾಗುರುಗಳಾದ ಶ್ರೀ ಶ್ರೀ ವಿದ್ಯಾಮಾನ್ಯರ ಜನ್ಮಶತಾಬ್ದಿಯ ಸಂದರ್ಭದಲ್ಲಿ 100 ಸಂಪುಟಗಳಲ್ಲಿ ಹೊರತರುವುದು ಸಾಮಾನ್ಯ ಕೆಲಸವಲ್ಲ. ಇವರ ಈ ಕೆಲಸದಲ್ಲಿ ಆಸ್ತಿಕ ಸಮಾಜವು ಕೈ ಜೋಡಿಸಲಿ. ಪುಣ್ಯಸಂಪಾದಿಸಲಿ. ಪಾವನವಾಗಲಿ ಎಂದು ಉಡುಪಿ ಶ್ರೀಕೃಷ್ಣ-ಮುಖ್ಯಪ್ರಾಣರಲ್ಲಿ ನಮ್ಮ ಪ್ರಾರ್ಥನೆ.

ನಾರಾಯಣ ಸ್ಮರಣೆಗಳು

ಶ್ರೀ ಶ್ರೀ ವಿಶ್ವಪ್ರಿಯತೀರ್ಥ ಶ್ರೀಪಾದಂಗಳವರು

ಶ್ರೀ ಅದಮಾರು ಮಠ, ಉಡುಪಿ.

ಜಗದ್ಗುರು ಶ್ರೀಮನ್ಮಧ್ವಾಚಾರ್ಯಮೂಲಮಹಾಸಂಸ್ಥಾನಮ್

ಪರಮಪೂಜ್ಯ ಶ್ರೀಶ್ರೀವಿದ್ಯಾಧೀಶತೀರ್ಥ ಶ್ರೀಪಾದರು

ಶ್ರೀ ಹೃಷೀಕೇಶತೀರ್ಥ ಸಂಸ್ಥಾನಮ್, ಶ್ರೀಪಲಿಮಾರು ಮಠ, ಉಡುಪಿ.

ಅನುಗ್ರಹ ಸಂದೇಶ

ಶ್ರೀಮಹಾಭಾರತ ಮತ್ತು ಶ್ರೀಮದ್ಭಾಗವತ ವೇದಪುರುಷನ ಎರಡು ದಿವ್ಯನೇತ್ರಗಳು, ವೇದಾರ್ಥಪರಿಬೃಂಹಿತವಾದವುಗಳು, ವೇದಾರ್ಥ ನಿರ್ಣಾಯಕಗಳು, ಎರಡು ಕೃತಿಗಳು ಏಕಕರ್ತೃಕಗಳು.

ಭಾಗವತದಲ್ಲಿ ಎಲ್ಲಿಲ್ಲದ ಒಲವು, ಮಹಾಭಾರತದಲ್ಲಿ ಭಯವು. ಮಹಾಭಾರತದ ಬಗ್ಗೆ ಅದೆಷ್ಟು ಭಯ ಎಂದರೆ ಮನೆಯೊಳಗೆ ಪುಸ್ತಕಕ್ಕೆ ಪ್ರವೇಶ ನಿಷಿದ್ಧ. ಮಹಾಭಾರತದ ಬಗೆಗಿರುವ ತಪ್ಪು ಕಲ್ಪನೆಗಳೇ ಇದಕ್ಕೆ ಮೂಲ. ಜಗಳದ ಆತಂಕವೇ ಇದಕ್ಕೆಲ್ಲ ಕಾರಣ. ಮಹಾಭಾರತ ಎಂಬ ಶಬ್ದ ಜಗಳಕ್ಕೆ ಪರ್ಯಾಯ ಪದವಾಗಿ ರೂಢಿಯಲ್ಲಿದೆ. ವಾಸ್ತವಿಕವಾಗಿ ಮಹಾಭಾರತವು ಜಗಳ ಗ್ರಂಥವಲ್ಲ, ಜಯಗ್ರಂಥ, ಜಯಪ್ರದ ಮಂತ್ರ.

'ಜಯೋ ನಾಮೇತಿಹಾಸೋऽಯಂ ಕೃಷ್ಣದ್ವೈಪಾಯನೇರಿತಃ' ಎನ್ನುವುದು ವ್ಯಾಸರದ್ದೇ ಮಾತು. ಈ ಮಾತನ್ನು ಶ್ರೀಮದಾಚಾರ್ಯರು ಗೀತಾರ್ಥ ಚಿಂತನೆಯಲ್ಲಿ ಉದ್ಧರಿಸಿದ್ದುಂಟು. ಮಹಾಭಾರತದ ಹೆಸರು ಹೇಳಿದರೆ ಸಾಕು ಜಗಳವಾಗುವುದಿಲ್ಲ; ಅಷ್ಟೇ ಅಲ್ಲ ಕಲಹಕ್ಕೆ ಕಾರಣವಾದ ಸಕಲ ದುರಿತ ತರಿಯುವ ತಾಕತ್ತು ಅದಕ್ಕಿದೆ ಅನ್ನುತ್ತಾರೆ. ಎಷ್ಟೋ ಜನ ಅನುಭವಿಸಿಯೂ ಇದ್ದಾರೆ.

ಮಹತ್ತ್ವಾತ್ ಭಾರವತ್ತ್ವಾಚ್ಚ ಮಹಾಭಾರತಮುಚ್ಯತೇ ।
ನಿರುಕ್ತಮಸ್ಯ ಯೋ ವೇದ ಸರ್ವಪಾಪೈಃ ಪ್ರಮುಚ್ಯತೇ ॥

ಭಾರಭರಿತ ಗ್ರಂಥವಿದು. ಅದಕ್ಕೆಂದೇ ಭಾರತ. ಪುಸ್ತಕವೂ ಭಾರ. ಶಬ್ದಗಳೂ ಭಾರ. ಅರ್ಥಗಳೂ ಭಾರ. ಶಬ್ದಗಳ ಜೋಡಣೆ, ಅನುರಣನೆ ಇಲ್ಲಿದೆ. ಆರ್ಷಭಾಷೆಯ ಸೊಬಗು ತುಂಬಿತುಳುಕಿದೆ. ಮೇಲ್ನೋಟಕ್ಕೆ ಬಿಡಿಸಲಾಗದ

ಗಂಟಿನ ಒಗಟಿನಂಥ ಚಿಂತನೆಗಳನ್ನು ಮುತ್ತಿನ ಮಾತಿನಲ್ಲಿ ಪೋಣಿಸಿದ್ದಾರೆ. ಭಾರತದ ಭವ್ಯಶಬ್ದಗಳ ಶ್ರವಣವೇ ಆಪ್ಯಾಯಮಾನ. ಕರ್ಣ ರಸಾಯನ. ವೇದಪ್ರತಿಬಿಂಬವಾದ ಈ ಮಹಾಭಾರತವು ವೇದದಂತೆ ಮೂರು ರೀತಿಯಾಗಿ ತನ್ನನ್ನು ತೆರೆದುಕೊಳ್ಳುತ್ತದೆ.

ಮನ್ವಾದಿ ಕೇಚಿದ್ ಬ್ರುವತೇ ಹ್ಯಾಸ್ತೀಕಾದಿ ತಥಾಪರೇ ।
ತತೋಪರಿಚರಾದನ್ಯೇ ಭಾರತಂ ಪರಿಚಕ್ಷತೇ ॥

ಅತೀಂದ್ರಿಯವಾದ ಚಿಂತನೆಯನ್ನೊಪ್ಪುವ ಪಾಂಡವರ ಕಥೆ ಇಲ್ಲಿದೆ. ದೇವರನ್ನೊಪ್ಪದೆ ದಾರಿತಪ್ಪಿದ ಕೌರವರ ಇತಿಹಾಸ ಇಲ್ಲಿದೆ. ಮನನೀಯವಾದ ಗುಣಗಳ ಚಿಂತನೆ ತುಂಬಲ್ಪಟ್ಟಿದೆ. ಸರ್ವರಿಗಿಂತಲೂ ಉಪರಿ ಸಂಚಾರ ಮಾಡುವ ಸರ್ವೋತ್ತಮನಾದ ಭಗವಂತನ ಮಹಿಮೆಯ ಬಣ್ಣನೆ ಸಮಗ್ರ ಭಾರತದಲ್ಲಿದೆ. ಭಾರತದ ಲಕ್ಷಶ್ಲೋಕಗಳಿಗೂ ಲಕ್ಷ್ಯ ಶ್ರೀಕೃಷ್ಣನತ್ತ. ಚಿತ್ತ ಶ್ರೀಹರಿಯತ್ತ. ಮೂರು ಮೂರು ಅರ್ಥವ್ಯಾಪ್ತಿಯುಳ್ಳ ವೇದಪ್ರತಿಬಿಂಬವಾದ ಮಹಾಭಾರತವು ಅಕ್ಷರಶಃ ಹತ್ತು ಹತ್ತು ಅರ್ಥಗಳನ್ನೊಳಗೊಂಡು ಭಾರತವೆನ್ನುವ ಹೆಸರು ಅನ್ವರ್ಥವಾಗಿದೆ. ನೂರು ಅರ್ಥಗಳ ಸಾವಿರ ನಾಮಗಳಡಗಿಕೊಂಡಿರುವುದು ಮಹಾಭಾರತದ ಗರ್ಭದಲ್ಲಿ.

ತ್ರಯೋರ್ಥಾಃ ಸರ್ವವೇದೇಷು ದಶಾರ್ಥಾ ಸರ್ವಭಾರತೇ ।
ವಿಷ್ಣೋಃ ಸಹಸ್ರನಾಮಾಪಿ ನಿರಂತರಶತಾರ್ಥಕಮ್ ॥

ಮಹಾಭಾರತ ರಚನೆಗೊಂಡದ್ದು ಪಾತ್ರಧಾರಿಗಳು ಬಂದಮೇಲಲ್ಲ. ಬರುವ ಮೊದಲೇ ಎನ್ನುವುದು ವ್ಯಾಸರ ಸಾರ್ವಜ್ಞಕ್ಕೆ, ದೇವತ್ವಕ್ಕೆ ಸಾಕ್ಷಿ. ಎಷ್ಟೋ ವರ್ಷಗಳ ನಂತರ ನಡೆಯುವ ಯುದ್ಧದ ವರ್ಣನೆ ರೋಮಾಂಚನ ಹುಟ್ಟಿಸುತ್ತದೆ. ಯುದ್ಧ ನೋಡಿರುವವನೇ ಯುದ್ಧದಲ್ಲಿ ನಡೆಯುವುದನ್ನು ವರ್ಣಿಸಲು ಸೋಲುತ್ತಾನೆ. ಮುಂದೆ ನಡೆಯುವ ಯುದ್ಧವನ್ನು ತದ್ವತ್ತಾಗಿ ವರ್ಣಿಸಿದ ವ್ಯಾಸರನ್ನು ನಾರಾಯಣನಲ್ಲದೇ ಬೇರೆಯವನನ್ನಾಗಿ ತಿಳಿಯಬಾರದು ಎನ್ನುವುದೂ ವ್ಯಾಸದರ್ಶನವೇ ಆಗಿದೆ.

'ಕೋ ಹ್ಯನ್ಯಃ ಪುಂಡರೀಕಾಕ್ಷಾತ್ ಮಹಾಭಾರತಕೃದ್ಭವೇತ್'

ಇಂತಹ ಮಹಾಭಾರತದ ಅಧ್ಯಯನ ಪಂಚಭೂತಗಳ ಸಮಸ್ಯೆಯುಳ್ಳ ಪ್ರಪಂಚವನ್ನೇ ಮರೆಯುವಂತೆ ಮಾಡುತ್ತದೆ, ಎತ್ತರದ ಆನಂದದಲ್ಲಿ ಮುಳುಗಿಸುತ್ತದೆ ಎನ್ನುವುದು ಖಂಡಿತ ಉತ್ಪ್ರೇಕ್ಷೆಯಲ್ಲ. ಈ ಉದ್ದೇಶದಿಂದ ಆಚಾರ್ಯ ಮಧ್ವರ ತಾತ್ಪರ್ಯನಿರ್ಣಯ, ಶ್ರೀವಾದಿರಾಜರ ಲಕ್ಷಾಲಂಕಾರವನ್ನು ಆಧರಿಸಿ ಮೂಲಪಾಠ ಶೋಧನೆಯ ಹಿನ್ನೆಲೆಯಲ್ಲಿ ಗ್ರಂಥದ ಪ್ರಕಟನೆಯನ್ನು ಮಾಡುತ್ತಿದ್ದೇವೆ.

ಇದರ ಹಿಂದೆ ಇದಕ್ಕಾಗಿ ಜೀವನವನ್ನೇ ಮುಡಿಪಾಗಿಟ್ಟ ಒಂದು ತಂಡವೇ ಇದೆ. ಇದರ ನೇತೃತ್ವ ವಿದ್ವಾಂಸರಾದ ಶ್ರೀ ಶೇಷಗಿರಿ ಆಚಾರ್ಯರದ್ದು. ಶ್ರೀ ವಿಶ್ವೇಶತೀರ್ಥರ ವಿದ್ಯಾಪೀಠದಲ್ಲಿ ಓದಿದ ಇವರ ಸಾಧನೆ ಬಹಳ ಶ್ರೇಷ್ಠವಾದುದು. ತಿರುಪತಿಯ ತಿಮ್ಮಪ್ಪನ ಎತ್ತರದ ಸನ್ನಿಧಾನದಲ್ಲಿ ಭಾರತ ಪರ್ವಗಳ ಪರ್ವತದ ಆವಿಷ್ಕಾರ ಶೇಷಗಿರಿ ಆಚಾರ್ಯರಿಂದ ಎನ್ನುವುದು ಸಂತಸದ ಸಂಗತಿಯೇ ಆಗಿದೆ. ಶ್ರೀ ಶೇಷಗಿರಿ ಆಚಾರ್ಯರ ಹಿಂದೆ ಅನೇಕ ವಿದ್ವಾಂಸರು ಧ್ವನಿಗೂಡಿಸಿದ್ದಾರೆ. ಅವರೆಲ್ಲರ ಸಹಕಾರದಿಂದ ಈ ಹೊತ್ತಿಗೆ ತಿಮ್ಮಪ್ಪನಿಗೆ ಸಮರ್ಪಣೆ ಆಗುವಂತಾಗಿದೆ. ಅವರೆಲ್ಲರಿಗೂ ಶ್ರೀಕೃಷ್ಣ-ಮುಖ್ಯಪ್ರಾಣರ ಅನುಗ್ರಹದ ರಕ್ಷೆ ಇರಲೆಂದು ಪ್ರಾರ್ಥಿಸುತ್ತೇವೆ.

ನಾರಾಯಣ ಸ್ಮರಣೆಗಳು

ಶ್ರೀ ಶ್ರೀ ವಿದ್ಯಾಧೀಶತೀರ್ಥ ಶ್ರೀಪಾದಂಗಳವರು

ಶ್ರೀ ಪಲಿಮಾರು ಹೃಷೀಕೇಶ ಮಠ, ಉಡುಪಿ.

ಜಗದ್ಗುರು ಶ್ರೀಮನ್ಮಧ್ವಾಚಾರ್ಯಮೂಲಮಹಾಸಂಸ್ಥಾನಮ್

ಪರಮಪೂಜ್ಯ ಶ್ರೀಶ್ರೀವಿಶ್ವವಲ್ಲಭತೀರ್ಥ ಶ್ರೀಪಾದರು

ಸೋದೆ ಶ್ರೀ ವಾದಿರಾಜ ಮಠ, ರಥಬೀದಿ, ಉಡುಪಿ.

ಅನುಗ್ರಹ ಸಂದೇಶ

ಕುರುಡನಿಗೂ ದೂರದ ದರ್ಶನ ಮಾಡಿಸಿದ ಶಕ್ತಿ ವೇದವ್ಯಾಸರದ್ದು. ಕೃಮಿಯನ್ನೂ ರಾಜನನ್ನಾಗಿಸಿದ ಶಕ್ತಿ ಅವರದ್ದು. ಮರಣಾಸನ್ನರಿಗೂ ಜೀವನವನ್ನು ನೀಡಿದ ಶಕ್ತಿ ಅವರದ್ದು. ಅವರಂತೆ ಅವರ ಗ್ರಂಥಕ್ಕೂ ಮಿಗಿಲಾದ ಸಾಮರ್ಥ್ಯವಿದೆ. ಸಂಸಾರದ ದುಃಖವೈತರಣಿಯಲ್ಲಿ ಮುಳುಗಿದವರು ಅವರ ಗ್ರಂಥದ ಮನನದಿಂದ ಆನಂದ ಕ್ಷೀರಸಮುದ್ರದಲ್ಲಿ ವಿಹರಿಸುತ್ತಾರೆ. ಆ ಗ್ರಂಥಗಳಲ್ಲೂ ಮಹಾಭಾರತ ಮಿಗಿಲಾದದ್ದು. 'ವೇದಾದಪಿ ಪರಂ ಚಕ್ರೇ ಮಹಾಭಾರತಮುತ್ತಮಮ್' ವೇದಪ್ರತಿಪಾದ್ಯ ರಚಿಸಿದ ಕೃತಿ ವೇದಗಳಿಗಿಂತಲೂ ಮಿಗಿಲಾಗಿದೆ. ಜೀವನದುದ್ದಕ್ಕೂ ಬೇಕಾಗುವ ನೀತಿ, ಸಂಪತ್ತು, ಧರ್ಮ, ಕಾಮ, ವ್ಯವಹಾರ ಎಲ್ಲವನ್ನೂ ಆಖ್ಯಾನ, ಉಪಾಖ್ಯಾನಗಳ ಮುಖಾಂತರ ತಿಳಿಹೇಳಿ ಪರಲೋಕದ ಸಾಧನೆಯನ್ನೂ ಬೋಧಿಸುವ 'ವಿಜ್ಞಾನದೀಪ' ಇದು. 'ಯದಿಹಾಸ್ತಿ ತದನ್ಯತ್ರ ಯನ್ನೇಹಾಸ್ತಿ ನ ಕುತ್ರಚಿತ್'. ಇಲ್ಲಿ ಇರುವುದೇ ಬೇರಡೆ ಇದೆ. ಇಲ್ಲಿ ಇಲ್ಲದ್ದು ಎಲ್ಲೂ ಇಲ್ಲ ಎನ್ನುವ ಮಾತನ್ನು ಸ್ವತಃ ವ್ಯಾಸರೇ ಹೇಳಿದ್ದಾರೆ. ಪಾತ್ರಗಳು ತಾತ್ಕಾಲಿಕವಾದರೂ ಹೆಜ್ಜೆ ಹೆಜ್ಜೆಗೆ ಮೂಡುವ ಸಂದೇಶ ಸಾರ್ವಕಾಲಿಕ.

ಇಂತಹ ಮಹಾಭಾರತವೆಂಬ ಮೇರುಕೃತಿ ಇದ್ದರೂ ಶುದ್ಧಪಾಠ ನಮಗೆ ಉಪಲಬ್ಧವಾಗಿರಲಿಲ್ಲ. ವೇದವ್ಯಾಸದೇವರ ಆದೇಶದಂತೆ ಮಹಾಭಾರತ ಗ್ರಂಥಕ್ಕೆ ಶ್ಲೋಕರೂಪದಲ್ಲಿ ವ್ಯಾಖ್ಯಾನ ಮಾಡಿದ ಶ್ರೀಮದಾಚಾರ್ಯರು ಪ್ರಕ್ಷೇಪ ವಿಕ್ಷೇಪಗಳಿಂದ ಕೋಟ್ಯಂಶವೂ ಉಪಲಬ್ಧವಾಗುವುದಿಲ್ಲ. ನಾನು ಅನೇಕ ಪ್ರದೇಶಗಳಲ್ಲಿರುವ ಪಾಠಗಳನ್ನು ಶೋಧಿಸಿ ಈ ವ್ಯಾಖ್ಯಾನಕ್ಕೆ ಮುಂದಾಗಿದ್ದೇನೆ ಎಂದು ಹೇಳಿದ್ದಾರೆ. 'ಸ್ವಯಂ ವ್ಯಾಸೋ ಹಿ ತದ್ವೇದ ಬ್ರಹ್ಮಾ ವಾ ತತ್ಪ್ರಸಾದತಃ' ಎಂದು ತಿಳಿಸಿದಂತೆ ಗ್ರಂಥವನ್ನು ಬರೆದ ವೇದವ್ಯಾಸರೇ ಬಲ್ಲವರು. ಅವರ ಅನುಗ್ರಹದಿಂದ ಬ್ರಹ್ಮದೇವರು ತಿಳಿದಿದ್ದಾರೆ. ಇಂತಹ ಲೋಕೋದ್ಧಾರಕವಾದ

ಗ್ರಂಥರತ್ನದ ರಕ್ಷಣೆ ಬೋಧನೆಗಾಗಿಯೇ ಇಬ್ಬರು ಭಾವಿಬ್ರಹ್ಮರು ವ್ಯಾಖ್ಯಾನಿಸಿದ್ದಾರೆ. ಶ್ರೀಮದಾಚಾರ್ಯರು 'ಮಹಾಭಾರತತಾತ್ಪರ್ಯನಿರ್ಣಯ' ಹಾಗೂ 'ಯಮಕಭಾರತ' ಎಂಬ ಎರಡು ಗ್ರಂಥಗಳನ್ನು ನೀಡಿದರೆ ಶ್ರೀವಾದಿರಾಜ ಗುರುಸಾರ್ವಭೌಮರು 'ಲಕ್ಷಾಲಂಕಾರ'ವನ್ನು ನೀಡಿದ್ದಾರೆ. ಈ ಸರ್ವಜ್ಞರ ಕೃತಿಗಳನ್ನು ಆಧರಿಸಿ ಶೋಧಿಸಿದರೆ ಮಾತ್ರ ನಮಗೆ ಶುದ್ಧಪಾಠ ದೊರೆಯಲು ಸಾಧ್ಯ.

ಈ ನಿಟ್ಟಿನಲ್ಲಿ ಅನೇಕರು ಪ್ರಯತ್ನಿಸಿ ವಿಫಲರಾಗಿದ್ದಾರೆ. ನಮ್ಮ ಪಲಿಮಾರು ಮಠಾಧೀಶರಾದ ಶ್ರೀ ಶ್ರೀ ವಿದ್ಯಾಧೀಶತೀರ್ಥರು ಭಗೀರಥನಂತೆ ಬೆಂಬಿಡದ ಪ್ರಯತ್ನದಿಂದ ಸಾಧಿಸಿದ್ದಾರೆ. ಅನೇಕ ವಿದ್ವಾಂಸರ ಮುಖಾಂತರ ಪ್ರಾಚ್ಯಲಿಪಿಗಳನ್ನು ಪರಿಶೀಲಿಸಿ ಶುದ್ಧಪಾಠವನ್ನು ನೀಡುತ್ತಿದ್ದಾರೆ. ಜೊತೆಗೆ ತಾತ್ಪರ್ಯನಿರ್ಣಯ ಹಾಗೂ ಲಕ್ಷಾಲಂಕಾರಗಳನ್ನೂ ನೀಡುತ್ತಿದ್ದಾರೆ. ಎಲ್ಲ ಸಜ್ಜನರೂ ಈ ಗ್ರಂಥರತ್ನದ ಉಪಕಾರವನ್ನು ಪಡೆಯಲಿ ಎಂದು ನಮ್ಮ ಆರಾಧ್ಯಮೂರ್ತಿಯಾದ ಮಧ್ವವಾದಿರಾಜವರದ ಭೂವರಾಹ-ಹಯಗ್ರೀವ-ವೇದವ್ಯಾಸ ದೇವರಲ್ಲಿ ಪ್ರಾರ್ಥಿಸುತ್ತಿದ್ದೇವೆ.

ಇತ್ಯನೇಕ ಶ್ರೀಮನ್ನಾರಾಯಣ ಸ್ಮರಣೆಗಳು

ಶ್ರೀ ಶ್ರೀ ವಿಶ್ವವಲ್ಲಭತೀರ್ಥ ಶ್ರೀಪಾದಂಗಳವರು
ಶ್ರೀಸೋದೆ ವಾದಿರಾಜ ಮಠ, ಉಡುಪಿ.

ಮಹಾಭಾರತದ ಹಿರಿಮೆ

ಶ್ರೀಮಹಾಭಾರತವು ಬಾದರಾಯಣರಿಂದ ರಚಿತವಾದುದು. ತಾವು ಅವತಾರ ಮಾಡಿದ ಮೂರು ವರ್ಷಗಳ ನಂತರ ಬಾದರಾಯಣರು ಎಂದರೆ ವೇದವ್ಯಾಸರು ಈ ಗ್ರಂಥವನ್ನು ರಚಿಸಿದರೆಂದು ಪುರಾಣಗಳಿಂದ ತಿಳಿದುಬರುತ್ತದೆ. ಮಹಾಭಾರತದ ಆದಿಪರ್ವದಲ್ಲಿಯೇ **'ಕೋ ಹ್ಯನ್ಯಃ ಪುಂಡರೀಕಾಕ್ಷಾತ್ ಮಹಾಭಾರತಕೃದ್ ಭವೇತ್'** ಪುಂಡರೀಕಾಕ್ಷನನ್ನು ಬಿಟ್ಟು ಬೇರೆ ಯಾರು ಮಹಾಭಾರತವನ್ನು ರಚಿಸಲು ಸಾಧ್ಯ ಎಂಬ ಉದ್ಗಾರವಿದೆ. ಮಹಾಭಾರತದ ಪ್ರಶಂಸೆಯು ಪುರಾಣಾದಿಗಳಲ್ಲಿ ಮತ್ತೆ ಮತ್ತೆ ಕೇಳಿಬರುತ್ತದೆ.

ಲೋಕೇಶಾ ಬ್ರಹ್ಮರುದ್ರಾದ್ಯಾಃ ಸಂಸಾರೇ ಕ್ಲೇಶಿನಂ ಜನಮ್ ।
ವೇದಾರ್ಥಜ್ಞಮಧೀಕಾರವರ್ಜಿತಂ ಚ ಸ್ತ್ರಿಯಾದಿಕಮ್ ॥
ಅವೇಕ್ಷ್ಯ ಪ್ರಾರ್ಥಯಾಮಾಸುಃ ದೇವೇಶಂ ಪುರುಷೋತ್ತಮಂ ।
ತತಃ ಪ್ರಸನ್ನೋ ಭಗವಾನ್ ವ್ಯಾಸೋ ಭೂತ್ವಾ ಚ ತೇನ ಚ ॥
ಅನ್ಯಾವತಾರರೂಪೈಶ್ಚ ವೇದಾನುಕ್ತಾರ್ಥಭೂಷಿತಂ ।
ಕೇವಲೇನಾತ್ಮಬೋಧೇನ ದೃಷ್ಟಂ ವೇದಾರ್ಥಸಂಯುತಂ ।
ವೇದಾದಪಿ ಪರಂ ಚಕ್ರೇ ಪಂಚಮಂ ವೇದಮುತ್ತಮಂ ॥

–ನಾರಾಯಣಾಷ್ಟಾಕ್ಷರ ಕಲ್ಪ (ಗೀ.ಭಾ)

ಲೋಕೇಶರಾದ ಬ್ರಹ್ಮರುದ್ರಾದಿಗಳು ಅಧಿಕಾರಹೀನರಾಗಿ ವೇದಾರ್ಥವನ್ನು ತಿಳಿಯದೆ ಸಂಸಾರದಲ್ಲಿ ಕ್ಲೇಶಪಡುವ ವನಿತಾದಿ ಅಧಿಕಾರಿಗಳನ್ನು ನೋಡಿ ಅವರ ಮೇಲಿನ ಅನುಕಂಪೆಯಿಂದ ದೇವೇಶನಾದ ಪುರುಷೋತ್ತಮನನ್ನು ಪ್ರಾರ್ಥಿಸಿದರು. ಆಗ ಪ್ರಸನ್ನನಾದ ಭಗವಂತನು ವ್ಯಾಸರೂಪದಿಂದ ಅವತಾರ ಮಾಡಿ ವೇದದಲ್ಲಿಯೂ ಹೇಳದಿರುವ ಅರ್ಥಗಳಿಂದ ಭೂಷಿತವಾದ, ಕೇವಲ ತನ್ನ ಜ್ಞಾನಕ್ಕೆ ವಿಷಯವಾದ, ವೇದಾರ್ಥಕ್ಕೆ ಅವಿರೋಧಿಯಾದ, ಅನೇಕ ಅರ್ಥಗಳಿಂದ ಕೂಡಿರುವ ಪಂಚಮವೇದವೆಂದು ಕರೆಯಲ್ಪಡುವ ವೇದಗಳಿಗಿಂತಲೂ ಉತ್ತಮವಾದ ಶ್ರೇಷ್ಠವಾದ ಮಹಾಭಾರತವನ್ನು ರಚಿಸಿದನು ಎಂದು ನಾರಾಯಣಾಷ್ಟಾಕ್ಷರಕಲ್ಪದಲ್ಲಿ ಹೇಳಿದೆ.

ಬ್ರಹ್ಮಾದ್ಯೈಃ ಪ್ರಾರ್ಥಿತೋ ವಿಷ್ಣುರ್ಭಾರತಂ ಸ ಚಕಾರ ಹ ।
ಯಸ್ಮಿನ್ ದಶಾರ್ಥಾಃ ಸರ್ವತ್ರ ನ ಜ್ಞೇಯಾಃ ಸರ್ವಜಂತುಭಿಃ ॥

– ನಾರದೀಯ (ಗೀ.ಭಾ)

ಗ್ರಂಥರತ್ನದ ರಕ್ಷಣೆ ಬೋಧನೆಗಾಗಿಯೇ ಇಬ್ಬರು ಭಾವಿಬ್ರಹ್ಮರು ವ್ಯಾಖ್ಯಾನಿಸಿದ್ದಾರೆ. ಶ್ರೀಮದಾಚಾರ್ಯರು 'ಮಹಾಭಾರತತಾತ್ಪರ್ಯನಿರ್ಣಯ' ಹಾಗೂ 'ಯಮಕಭಾರತ' ಎಂಬ ಎರಡು ಗ್ರಂಥಗಳನ್ನು ನೀಡಿದರೆ ಶ್ರೀವಾದಿರಾಜ ಗುರುಸಾರ್ವಭೌಮರು 'ಲಕ್ಷಾಲಂಕಾರ'ವನ್ನು ನೀಡಿದ್ದಾರೆ. ಈ ಸರ್ವಜ್ಞರ ಕೃತಿಗಳನ್ನು ಆಧರಿಸಿ ಶೋಧಿಸಿದರೆ ಮಾತ್ರ ನಮಗೆ ಶುದ್ಧಪಾಠ ದೊರೆಯಲು ಸಾಧ್ಯ.

ಈ ನಿಟ್ಟಿನಲ್ಲಿ ಅನೇಕರು ಪ್ರಯತ್ನಿಸಿ ವಿಫಲರಾಗಿದ್ದಾರೆ. ನಮ್ಮ ಪಲಿಮಾರು ಮಠಾಧೀಶರಾದ ಶ್ರೀ ಶ್ರೀ ವಿದ್ಯಾಧೀಶತೀರ್ಥರು ಭಗೀರಥನಂತೆ ಬೆಂಬಿಡದ ಪ್ರಯತ್ನದಿಂದ ಸಾಧಿಸಿದ್ದಾರೆ. ಅನೇಕ ವಿದ್ವಾಂಸರ ಮುಖಾಂತರ ಪ್ರಾಚ್ಯಲಿಪಿಗಳನ್ನು ಪರಿಶೀಲಿಸಿ ಶುದ್ಧಪಾಠವನ್ನು ನೀಡುತ್ತಿದ್ದಾರೆ. ಜೊತೆಗೆ ತಾತ್ಪರ್ಯನಿರ್ಣಯ ಹಾಗೂ ಲಕ್ಷಾಲಂಕಾರಗಳನ್ನೂ ನೀಡುತ್ತಿದ್ದಾರೆ. ಎಲ್ಲ ಸಜ್ಜನರೂ ಈ ಗ್ರಂಥರತ್ನದ ಉಪಕಾರವನ್ನು ಪಡೆಯಲಿ ಎಂದು ನಮ್ಮ ಆರಾಧ್ಯಮೂರ್ತಿಯಾದ ಮಧ್ವವಾದಿರಾಜವರದ ಭೂವರಾಹ-ಹಯಗ್ರೀವ-ವೇದವ್ಯಾಸ ದೇವರಲ್ಲಿ ಪ್ರಾರ್ಥಿಸುತ್ತಿದ್ದೇವೆ.

ಇತ್ಯನೇಕ ಶ್ರೀಮನ್ನಾರಾಯಣ ಸ್ಮರಣೆಗಳು



ಶ್ರೀ ಶ್ರೀ ವಿಶ್ವವಲ್ಲಭತೀರ್ಥ ಶ್ರೀಪಾದಂಗಳವರು
ಶ್ರೀಸೋದೆ ವಾದಿರಾಜ ಮಠ, ಉಡುಪಿ.

ಮಹಾಭಾರತದ ಹಿರಿಮೆ

ಶ್ರೀಮಹಾಭಾರತವು ಬಾದರಾಯಣರಿಂದ ರಚಿತವಾದುದು. ತಾವು ಅವತಾರ ಮಾಡಿದ ಮೂರು ವರ್ಷಗಳ ನಂತರ ಬಾದರಾಯಣರು ಎಂದರೆ ವೇದವ್ಯಾಸರು ಈ ಗ್ರಂಥವನ್ನು ರಚಿಸಿದರೆಂದು ಪುರಾಣಗಳಿಂದ ತಿಳಿದುಬರುತ್ತದೆ. ಮಹಾಭಾರತದ ಆದಿಪರ್ವದಲ್ಲಿಯೇ **'ಕೋ ಹ್ಯನ್ಯಃ ಪುಂಡರೀಕಾಕ್ಷಾತ್ ಮಹಾಭಾರತಕೃದ್ ಭವೇತ್'** ಪುಂಡರೀಕಾಕ್ಷನನ್ನು ಬಿಟ್ಟು ಬೇರೆ ಯಾರು ಮಹಾಭಾರತವನ್ನು ರಚಿಸಲು ಸಾಧ್ಯ ಎಂಬ ಉದ್ಗಾರವಿದೆ. ಮಹಾಭಾರತದ ಪ್ರಶಂಸೆಯು ಪುರಾಣಾದಿಗಳಲ್ಲಿ ಮತ್ತೆ ಮತ್ತೆ ಕೇಳಿಬರುತ್ತದೆ.

ಲೋಕೇಶಾ ಬ್ರಹ್ಮರುದ್ರಾದ್ಯಾಃ ಸಂಸಾರೇ ಕ್ಲೇಶಿನಂ ಜನಮ್ ।
ವೇದಾರ್ಥಾಜ್ಞಮಧೀಕಾರವರ್ಜಿತಂ ಚ ಸ್ತ್ರಿಯಾದಿಕಮ್ ॥
ಅವೇಕ್ಷ್ಯ ಪ್ರಾರ್ಥಯಾಮಾಸುಃ ದೇವೇಶಂ ಪುರುಷೋತ್ತಮಂ ।
ತತಃ ಪ್ರಸನ್ನೋ ಭಗವಾನ್ ವ್ಯಾಸೋ ಭೂತ್ವಾ ಚ ತೇನ ಚ ॥
ಅನ್ಯಾವತಾರರೂಪೈಶ್ಚ ವೇದಾನುಕ್ತಾರ್ಥಭೂಷಿತಂ ।
ಕೇವಲೇನಾತ್ಮಬೋಧೇನ ದೃಷ್ಟಂ ವೇದಾರ್ಥಸಂಯುತಂ ।
ವೇದಾದಪಿ ಪರಂ ಚಕ್ರೇ ಪಂಚಮಂ ವೇದಮುತ್ತಮಂ ॥

–ನಾರಾಯಣಾಷ್ಟಾಕ್ಷರ ಕಲ್ಪ (ಗೀ.ಭಾ)

ಲೋಕೇಶರಾದ ಬ್ರಹ್ಮರುದ್ರಾದಿಗಳು ಅಧಿಕಾರಹೀನರಾಗಿ ವೇದಾರ್ಥವನ್ನು ತಿಳಿಯದೆ ಸಂಸಾರದಲ್ಲಿ ಕ್ಲೇಶಪಡುವ ವನಿತಾದಿ ಅಧಿಕಾರಿಗಳನ್ನು ನೋಡಿ ಅವರ ಮೇಲಿನ ಅನುಕಂಪೆಯಿಂದ ದೇವೇಶನಾದ ಪುರುಷೋತ್ತಮನನ್ನು ಪ್ರಾರ್ಥಿಸಿದರು. ಆಗ ಪ್ರಸನ್ನನಾದ ಭಗವಂತನು ವ್ಯಾಸರೂಪದಿಂದ ಅವತಾರ ಮಾಡಿ ವೇದದಲ್ಲಿಯೂ ಹೇಳದಿರುವ ಅರ್ಥಗಳಿಂದ ಭೂಷಿತವಾದ, ಕೇವಲ ತನ್ನ ಜ್ಞಾನಕ್ಕೆ ವಿಷಯವಾದ, ವೇದಾರ್ಥಕ್ಕೆ ಅವಿರೋಧಿಯಾದ, ಅನೇಕ ಅರ್ಥಗಳಿಂದ ಕೂಡಿರುವ ಪಂಚಮವೇದವೆಂದು ಕರೆಯಲ್ಪಡುವ ವೇದಗಳಿಗಿಂತಲೂ ಉತ್ತಮವಾದ ಶ್ರೇಷ್ಠವಾದ ಮಹಾಭಾರತವನ್ನು ರಚಿಸಿದನು ಎಂದು ನಾರಾಯಣಾಷ್ಟಾಕ್ಷರಕಲ್ಪದಲ್ಲಿ ಹೇಳಿದೆ.

ಬ್ರಹ್ಮಾದ್ಯೈಃ ಪ್ರಾರ್ಥಿತೋ ವಿಷ್ಣುರ್ಭಾರತಂ ಸ ಚಕಾರ ಹ ।
ಯಸ್ಮಿನ್ ದಶಾರ್ಥಾಃ ಸರ್ವತ್ರ ನ ಜ್ಞೇಯಾಃ ಸರ್ವಜಂತುಭಿಃ ॥

– ನಾರದೀಯ (ಗೀ.ಭಾ)

ಬ್ರಹ್ಮಾದಿಗಳಿಂದ ಪ್ರಾರ್ಥಿತನಾದ ವಿಷ್ಣುವು ಎಲ್ಲರ ಬುದ್ಧಿಗೂ ಗೋಚರವಾಗದ ಹತ್ತು ಅರ್ಥಗಳನ್ನು ಸರ್ವತ್ರ ಹೊಂದಿರುವ ಭಾರತವನ್ನು ರಚಿಸಿದನು ಎಂದು ನಾರದೀಯ ಪುರಾಣದಲ್ಲಿ ಹೇಳಿದೆ.

ಭಾರತಂ ಚಾಪಿ ಕೃತವಾನ್ ಪಂಚಮಂ ವೇದಮುತ್ತಮಂ ।
ದಶಾವರಾರ್ಥಂ ಸರ್ವತ್ರ ಕೇವಲಂ ವಿಷ್ಣುಬೋಧಕಂ ।
ಪರೋಕ್ಷಾರ್ಥಂ ತು ಸರ್ವತ್ರ ವೇದಾದಪ್ಯುತ್ತಮಂ ತು ಯತ್ ॥

– ಸ್ಕಾಂದೇ (ಗೀ.ಭಾ)

ವೇದವ್ಯಾಸರು ಸರ್ವತ್ರ ಕನಿಷ್ಠ ಹತ್ತು ಅರ್ಥಗಳಿಂದ ಕೂಡಿರುವ ಕೇವಲ ವಿಷ್ಣು ಬೋಧಕವಾದ ಸರ್ವತ್ರ ಪರೋಕ್ಷಾರ್ಥ (ಸಾಂಕೇತಿಕಾರ್ಥ)ವನ್ನುಳ್ಳ ವೇದಗಳಿಗಿಂತಲೂ ಶ್ರೇಷ್ಠವಾದ ಮಹಾಭಾರತವನ್ನು ರಚಿಸಿದರು ಎಂದು ಸ್ಕಾಂದಪುರಾಣದಲ್ಲಿ ಹೇಳಲಾಗಿದೆ.

ಮಹತ್ವಾದ್ ಭಾರವತ್ವಾಚ್ಚ ಮಹಾಭಾರತಮುಚ್ಯತೇ ।
ಧರ್ಮೇ ಚಾರ್ಥೇ ಚ ಕಾಮೇ ಚ ಮೋಕ್ಷೇ ಚ ಭರತರ್ಷಭ ।
ನಿರುಕ್ತಮಸ್ಯ ಯೋ ವೇದ ಸರ್ವಪಾಪೈಃ ಪ್ರಮುಚ್ಯತೇ ॥

– ಭಾರತೇ (ಗೀ.ಭಾ)

ಗಾತ್ರದ ಮಹತ್ವದಿಂದಲೂ ಅರ್ಥಗೌರವದಿಂದಲೂ ಕೂಡಿರುವುದರಿಂದ ಇದಕ್ಕೆ ಮಹಾಭಾರತವೆಂದು ಹೆಸರು. ಯಾವನು ಈ ಮಹಾಭಾರತ ಶಬ್ದದ ನಿರ್ವಚನವನ್ನು ತಿಳಿಯುತ್ತಾನೆಯೋ ಅವನು ಸರ್ವಪಾಪಗಳಿಂದಲೂ ಮುಕ್ತನಾಗುತ್ತಾನೆ.

ಯದಿಹಾಸ್ತಿ ತದನ್ಯತ್ರ ಯನ್ನೇಹಾಸ್ತಿ ನ ತತ್ ಕ್ವಚಿತ್ ॥

ಈ ಮಹಾಭಾರತದಲ್ಲಿರುವುದೇ ಬೇರೆ ಗ್ರಂಥಗಳಲ್ಲಿಯೂ ಇದೆ. ಇಲ್ಲಿ ಇಲ್ಲದಿರುವುದು ಎಲ್ಲಿಯೂ ಇಲ್ಲ ಎಂದು ಭಾರತದಲ್ಲಿಯೇ ಹೇಳಲ್ಪಟ್ಟಿದೆ.

ಭಾರತಂ ಸರ್ವಶಾಸ್ತ್ರೇಷು ಭಾರತೇ ಗೀತಿಕಾ ವರಾ ।
ವಿಷ್ಣೋಃ ಸಹಸ್ರನಾಮಾಪಿ ಜ್ಞೇಯಂ ಪಾಠ್ಯಂ ಚ ತದ್ ದ್ವಯಂ ॥

– ಮಹಾಕೌರ್ಮೇ (ಗೀ.ಭಾ)

ಎಲ್ಲ ಶಾಸ್ತ್ರಗಳಲ್ಲಿಯೂ ಭಾರತವು ಶ್ರೇಷ್ಠವಾದುದು. ಅದರಲ್ಲಿಯೂ ಭಗವದ್ಗೀತೆ ಮತ್ತು ವಿಷ್ಣುಸಹಸ್ರನಾಮವು ಅಧ್ಯಯನ ಮತ್ತು ಪಾರಾಯಣ ಮಾಡಲ್ಪಡಬೇಕಾದವು ಎಂದು ಮಹಾಕೂರ್ಮಪುರಾಣದಲ್ಲಿ ಹೇಳಿದೆ.

ನಿರ್ಣಯಃ ಸರ್ವಶಾಸ್ತ್ರಾಣಾಂ ಭಾರತಂ ಪರಿಕೀರ್ತಿತಂ ।
ಭಾರತಾನ್ನವಿರಾಗಾಯ ಭಾರತಾನ್ನ ವಿಮುಕ್ತಯೇ ॥

– ಬ್ರಹ್ಮಾಂಡೇ

ಎಲ್ಲಾ ಶಾಸ್ತ್ರಗಳಲ್ಲಿ ಹೇಳಿರುವ ಪ್ರಮೇಯಗಳ ನಿರ್ಣಯವು ಭಾರತದಲ್ಲಿ ಉಂಟಾಗುತ್ತದೆ. ವೈರಾಗ್ಯವನ್ನು ಸಂಪಾದಿಸಲು ಮತ್ತು ಮೋಕ್ಷವನ್ನು ಪಡೆಯಲು ಭಾರತಕ್ಕಿಂತ ಶ್ರೇಷ್ಠವಾದ ಗ್ರಂಥವಿಲ್ಲ ಎಂದು ಬ್ರಹ್ಮಾಂಡ ಪುರಾಣದಲ್ಲಿ ಹೇಳಲಾಗಿದೆ.

ಇತಿಹಾಸ ಪುರಾಣಾಭ್ಯಾಂ ವೇದಂ ಸಮುಪಬೃಂಹಯೇತ್ ।
ಬಿಭೇತ್ಯಲ್ಪಶ್ರುತಾದ್ ವೇದೋ ಮಾಮಯಂ ಪ್ರಚಲಿಷ್ಯತಿ ॥

– ಭಾರತೇ (ಗೀ.ಭಾ)

ಇತಿಹಾಸ ಪುರಾಣಗಳಿಂದ ವೇದದ ಅರ್ಥವನ್ನು ತಿಳಿಯಬೇಕು. ಅಲ್ಪ ಶ್ರುತನಾದವನು ವೇದಕ್ಕೆ ಅರ್ಥವನ್ನು ಮಾಡಲು ಹೊರಟರೆ ಇವನು ನನಗೆ ಅಪಾರ್ಥವನ್ನು ಮಾಡುತ್ತಾನೆಂದು ವೇದವೇ ಹೆದರುತ್ತದೆ ಎಂದು ಭಾರತದಲ್ಲಿಯೇ ಹೇಳಿದೆ. ಇತಿಹಾಸವೆಂದು ಕರೆಯುವುದು ಭಾರತವನ್ನೇ.

ಈ ಎಲ್ಲಾ ಪ್ರಮಾಣ ವಾಕ್ಯಗಳಿಂದ ಮಹಾಭಾರತದ ಮಹತ್ತ್ವವು ತಿಳಿದುಬರುತ್ತದೆ. ಅಂತಹ ಮಹಾಭಾರತದ ಅಧ್ಯಯನವು ಅತ್ಯಂತ ಅವಶ್ಯಕವೆಂಬುದು ನಿರ್ಗಲಿತವಾದ ಅರ್ಥವಾಗಿದೆ.

ಸಂಶೋಧನೆಯ ಕುರಿತು

ಇಂತಹ ಮಹಾಭಾರತವು ಇದುವರೆಗೆ ಅನೇಕಬಾರಿ ಮುದ್ರಣವನ್ನು ಹೊಂದಿದೆ. ಇದರಲ್ಲಿ ಮುಖ್ಯವಾಗಿ ಔತ್ತರೇಯ ಪಾಠ ಮತ್ತೂ ದಾಕ್ಷಿಣಾತ್ಯಪಾಠ ಎಂದು ಎರಡು ಪಾಠಗಳಿವೆ. ಔತ್ತರೇಯಪಾಠವು ಗೋರಖಪುರದ ಗೀತಾ ಪ್ರೆಸ್ ಮೊದಲಾದ ಸಂಸ್ಥೆಗಳಿಂದ ಮುದ್ರಿತವಾಗಿದೆ. ದಾಕ್ಷಿಣಾತ್ಯಪಾಠವು ಮದ್ರಾಸಿನ ವಾವಿಳ್ಳಿ ರಾಮಸ್ವಾಮಿ-ಯವರಿಂದಲೂ, ಕುಂಭಕೋಣದ ಟಿ.ಆರ್. ಕೃಷ್ಣಾಚಾರ್ಯರಿಂದಲೂ ಮತ್ತು ಇನ್ನೂ ಕೆಲವರಿಂದಲೂ ಮುದ್ರಿತವಾಗಿದೆ. ಪುಣೆಯ ಭಂಡಾರಕರ ಸಂಶೋಧನಾ ಸಂಸ್ಥೆಯು ತಮಗೆ ಸಿಕ್ಕಿದ ಎಲ್ಲಾ ಪಾಠಗಳನ್ನೂ ಸಂಕಲನ ಮಾಡಿ ಸಂಶೋಧನೆಯ ಆವೃತ್ತಿ ಮತ್ತು ಜನಪ್ರಿಯ ಆವೃತ್ತಿ ಎಂದು ಎರಡು ಆವೃತ್ತಿಗಳನ್ನು ಹೊರಗೆ ತಂದಿದ್ದಾರೆ. ಆದರೆ ಇದುವರೆಗೆ ಮುದ್ರಿತವಾಗಿರುವ ಯಾವ ಆವೃತ್ತಿಯೂ ಶುದ್ಧವಾಗಿಲ್ಲ ಎಂದು ಮುಂದೆ ಹೇಳುವ ಕಾರಣಗಳಿಂದ ತಿಳಿದುಬರುತ್ತದೆ.

ಮಹಾಭಾರತದಲ್ಲಿ ಎರಡುಸಾವಿರ ಅಧ್ಯಾಯಗಳೂ ಮತ್ತು ಒಂದು ಲಕ್ಷ ಶ್ಲೋಕಗಳೂ ಇವೆ ಎಂದು ಆದಿಪರ್ವದಲ್ಲಿಯೇ ಉಲ್ಲೇಖವಿದೆ. ಶ್ರೀವಾದಿರಾಜರು ಲಕ್ಷಾಲಂಕಾರದಲ್ಲಿ ಒಂದು ಲಕ್ಷಕ್ಕಿಂತ ೩೧೩೪ ಶ್ಲೋಕಗಳು ಅಧಿಕ ಇವೆ. ಸ್ಥೂಲಾಭಿಪ್ರಾಯದಿಂದ ಒಂದು ಲಕ್ಷ ಎಂದು ಗಣನೆ ಎಂದು ಹೇಳಿದ್ದಾರೆ. ಆದರೆ ಮುದ್ರಿತವಾದ ಯಾವ ಪುಸ್ತಕದಲ್ಲಿಯೂ ಒಂದು ಲಕ್ಷ ಶ್ಲೋಕಗಳು ದೊರಕುವುದಿಲ್ಲ. ಎಲ್ಲಾ ಪುಸ್ತಕಗಳಲ್ಲಿಯೂ ಸಾಧಾರಣವಾಗಿ ೯೩,೦೦೦ ರಿಂದ ೯೫,೦೦೦ ಶ್ಲೋಕಗಳವರೆಗೆ ದೊರೆಯುತ್ತವೆ. ಕುಂಭಕೋಣದ ಕೃಷ್ಣಾಚಾರ್ಯರ ಪುಸ್ತಕದಲ್ಲಿ ಸುಮಾರು ೧,೨೩,೦೦೦ ಶ್ಲೋಕಗಳು ಸಿಗುತ್ತವೆ. ಆದ್ದರಿಂದ ಉಳಿದ ಪ್ರತಿಗಳಲ್ಲಿ ೫,೦೦೦-೭,೦೦೦ ಶ್ಲೋಕಗಳು ಲುಪ್ತವಾಗಿರಬಹುದಾದರೂ ಕುಂಭಕೋಣ ಪ್ರತಿಯಲ್ಲಿ ೨೦,೦೦೦ ಶ್ಲೋಕಗಳು ಜಾಸ್ತಿಯಾಗಿ ಸೇರಿಕೊಂಡಿವೆ. ಆದ್ದರಿಂದ ಅದರಲ್ಲಿ ಸಾಕಷ್ಟು ಪ್ರಕ್ಷಿಪ್ತ ಶ್ಲೋಕಗಳು ಇರಲೇಬೇಕು. ಯಾವುದು ಪ್ರಕ್ಷಿಪ್ತ ಯಾವುದು ಶುದ್ಧ ಎಂದು ನಿರ್ಣಯಿಸುವುದು ಕಷ್ಟವಾದರೂ ಮಹಾಭಾರತದಲ್ಲಿ ಇಲ್ಲದಿರುವ ಯಾವುದೋ ೨೦,೦೦೦ ಶ್ಲೋಕಗಳು ಅದರಲ್ಲಿ ಸೇರಿಕೊಂಡಿವೆ ಎಂಬ ವಿಷಯದಲ್ಲಿ ಸಂಶಯವಿಲ್ಲ. ಈಗ ನಾವು ಪ್ರಕಾಶನ ಮಾಡಲು ಹೊರಟಿರುವ ಪುಸ್ತಕದಲ್ಲಿಯೂ ಸಹ ಪರ್ವಸಂಗ್ರಹ ಪರ್ವದಲ್ಲಿ ಹೇಳಿರುವ ಸಂಖ್ಯೆಗಳಿಂದ ಒಟ್ಟು ೯೬,೯೩೦ ಶ್ಲೋಕಗಳಾಗುತ್ತವೆ. ಆಗಲೂ ೧,೩೦೦ ಶ್ಲೋಕಗಳು ಕಡಿಮೆಯಾಗುತ್ತವೆ. ಪೂರ್ಣವಾಗಿ ಶೋಧನೆ ಮಾಡಿ ಪ್ರಕಟಿಸಿದ ಮೇಲೆ ಇದೇ ಸಂಖ್ಯೆಯು ಸರಿಯಾಗಿ ಬರುತ್ತದೆಯೋ ಅಥವಾ ಅದರಲ್ಲಿ ಹೆಚ್ಚು ಕಡಿಮೆ ಆಗುತ್ತದೆಯೋ ನೋಡಬೇಕು. ಆದ್ದರಿಂದ ಈಗ ನಾವು ಶೋಧಿಸಿ ಪ್ರಕಾಶಿಸುತ್ತಿರುವ ಪಾಠವೂ ಸಹ ನೂರಕ್ಕೆ ನೂರರಷ್ಟು ಶುದ್ಧ ಎಂದು ಹೇಳುವ ಧೈರ್ಯವು ನಮಗೂ ಇಲ್ಲ. ಆದರೆ ಉಳಿದೆಲ್ಲಾ ಪ್ರತಿಗಳಿಗಿಂತ ಹೆಚ್ಚು ಶುದ್ಧವಾದುದು ಎಂದು ಮಾತ್ರ ಹೇಳಬಹುದು. ಇದಕ್ಕೆ ಕಾರಣಗಳನ್ನು ಮುಂದೆ ಕೊಡಲಾಗುತ್ತದೆ.

ಮಹಾಭಾರತದ ಪಾಠವು ಆಚಾರ್ಯರ ಕಾಲಕ್ಕೇ ಅಶುದ್ಧವಾಗಿತ್ತೆಂಬ ಅಂಶವು ಆಚಾರ್ಯರ ಮಹಾಭಾರತ ತಾತ್ಪರ್ಯನಿರ್ಣಯದಿಂದ ತಿಳಿದುಬರುತ್ತದೆ.

ಕ್ವಚಿದ್ ಗ್ರಂಥಾನ್ ಪ್ರಕ್ಷಿಪಂತಿ ಕ್ವಚಿದಂತರಿತಾನಪಿ ।
ಕುರ್ಯುಃ ಕ್ವಚಿಚ್ಚ ವ್ಯತ್ಯಾಸಂ ಪ್ರಮಾದಾತ್ ಕ್ವಚಿದನ್ಯಥಾ ॥

ಎಂದು ಆಚಾರ್ಯರು ಅಶುದ್ಧಿಗೆ ಕಾರಣವನ್ನೂ ನಿರೂಪಿಸಿದ್ದಾರೆ. ಆಯಾ ವಾದಿಗಳು ತಮಗೆ ಅನುಕೂಲವಾದ ಶ್ಲೋಕಗಳನ್ನು ರಚಿಸಿ ಅದನ್ನು ಸೇರಿಸಿದ್ದಾರೆ. ಪ್ರತಿಕೂಲವಾದ ಶ್ಲೋಕಗಳನ್ನು ಗ್ರಂಥದಿಂದ ತೆಗೆದುಹಾಕುತ್ತಾರೆ. ಇನ್ನು ಕೆಲವು ಕಡೆ ಹೆಸರುಗಳನ್ನು

ಬದಲಾಯಿಸಿ ತಮಗೆ ಬೇಕಾದ ಪಾತ್ರಕ್ಕೆ ಶ್ರೇಷ್ಠತೆಯನ್ನು ಸಂಪಾದಿಸಲು ಯತ್ನಿಸಿದ್ದಾರೆ. ಇನ್ನು ಕೆಲವು ಕಡೆ ಲೇಖಕ ಪ್ರಮಾದಗಳಿಂದ ತಪ್ಪುಗಳನ್ನು ಉಂಟಾಗಿವೆ ಎಂದು ತಿಳಿಸಿದ್ದಾರೆ.

ಗ್ರಂಥೋಪ್ಯೇವಂ ವಿಲುಳಿತಃ ಕಿಮ್ವರ್ಥೋ ದೇವದುರ್ಗಮಃ ॥

ಮೂಲ ಗ್ರಂಥವೇ ಇಂತಹ ವಿನಾಶಕ್ಕೆ ಒಳಗಾಗಿದೆ ಇನ್ನು ದೇವ ದುರ್ಗಮವಾದ ಅರ್ಥದ ವಿಷಯದಲ್ಲಿ ಹೇಳುವುದೇನಿದೆ ಎಂದು ಉದ್ಗರಿಸಿದ್ದಾರೆ. 'ಬ್ರಹ್ಮಾಪಿ ತನ್ನ ಜಾನಾತಿ ಈಷತ್ ಸರ್ವೋಪಿ ಜಾನತಿ' ಎಂಬ ನಾರದೀಯ ಪುರಾಣವಚನದಂತೆ ಅಲ್ಪಸ್ವಲ್ಪ ಅರ್ಥವು ಎಲ್ಲರಿಗೂ ತಿಳಿದರೂ ಪೂರ್ಣವಾದ ಅರ್ಥವು ಬ್ರಹ್ಮದೇವರಿಗೂ ಗೋಚರವಾಗುವುದಿಲ್ಲ ಎಂದು ತಿಳಿಯುವುದರಿಂದ ಭಾರತತಾತ್ಪರ್ಯನಿರ್ಣಯವನ್ನು ಮಾಡಲು ಹೊರಟ ಆಚಾರ್ಯರ ಪ್ರಯತ್ನವು ಅತ್ಯಂತ ಸಮಂಜಸವೆಂದು ಹೇಳಬೇಕು.

ಇದಕ್ಕೆ ಸೂಕ್ತವಾದ ಉದಾಹರಣೆಯೆಂದರೆ ಮಹಾಭಾರತದ ಮೊದಲನೆಯ ಶ್ಲೋಕ. ಅದು ಹೀಗಿದೆ–

ನಾರಾಯಣಂ ಸುರಗುರುಂ ಜಗದೇಕನಾಥಂ
ಭಕ್ತಪ್ರಿಯಂ ಸಕಲಲೋಕನಮಸ್ಕೃತಂ ಚ ।
ತ್ರೈಗುಣ್ಯವರ್ಜಿತಮಜಂ ವಿಭುಮಾದ್ಯಮೀಶಂ
ವಂದೇ ಭವಘ್ನಮಮರಾಸುರಸಿದ್ಧವಂದ್ಯಮ್ ॥

ಆಚಾರ್ಯರ ಕಾಲಕ್ಕೇ ಈ ಶ್ಲೋಕವು ಆದಿಯಲ್ಲಿ ಇರಲಿಲ್ಲ. ಲಕ್ಷಾಲಂಕಾರದಲ್ಲಿ 'ಉಗ್ರಶ್ರವಾಃ' ಎನ್ನುವುದೇ ಮಂಗಳಾಚರಣೆ ಎಂದು ಒಂದು ಪ್ರಕ್ಷಿಪ್ತವಾಕ್ಯ ಸೇರಿದೆ. ವಾದಿರಾಜರ ತಾತ್ಪರ್ಯ ನಿರ್ಣಯದ ಭಾವಪ್ರಕಾಶಿಕಾ ವ್ಯಾಖ್ಯಾನಕ್ಕೆ ಇದು ವಿರುದ್ಧವಾದ್ದರಿಂದ ಪ್ರಕ್ಷಿಪ್ತವೆಂದೇ ನಿರ್ಣಯಿಸಬಹುದು. ಆದ್ದರಿಂದ ಆಚಾರ್ಯರು ಕೇವಲ ದೇವತೆಯಾಗಿ ನಿರ್ಣಯವನ್ನು ಹೇಳದೆ ಒಬ್ಬ ಪ್ರಾಮಾಣಿಕ ಸಂಶೋಧಕನಂತೆಯೂ ದೇಶದೇಶಗಳಲ್ಲಿ ತಿರುಗಿ ಗ್ರಂಥಗಳನ್ನು ಸಂಗ್ರಹಿಸಿ, ಸಂಶೋಧಿಸಿ ಅದರ ಆಧಾರದಿಂದಲೂ ಹರಿಯ ಅನುಗ್ರಹದಿಂದಲೂ ನಿರ್ಣಯಗಳನ್ನು ಹೇಳಿದ್ದಾರೆ.

ಕಲಾವೇವಂ ವ್ಯಾಕುಲಿತೇ ನಿರ್ಣಯಾಯ ಪ್ರಚೋದಿತಃ ।
ಹರಿಣಾ ನಿರ್ಣಯಾನ್ ವಚ್ಮಿ ವಿಜಾನನ್ ತತ್ಪ್ರಸಾದತಃ ।
ಶಾಸ್ತ್ರಾಂತರಾಣಿ ಸಂಜಾನನ್ ವೇದಾಂಶ್ಚಾಸ್ಯ ಪ್ರಸಾದತಃ ।
ದೇಶೇ ದೇಶೇ ತಥಾ ಗ್ರಂಥಾನ್ ದೃಷ್ಟ್ವಾ ಚೈವ ಪೃಥಗ್ವಿಧಾನ್ ।
ಯಥಾ ಸ ಭಗವಾನ್ ವ್ಯಾಸಃ ಸಾಕ್ಷಾನ್ನಾರಾಯಣಃ ಪ್ರಭುಃ ।
ಜಗಾದ ಭಾರತಾದ್ಯೇಷು ತಥಾ ವಕ್ಷ್ಯೇ ತದಾಜ್ಞಯಾ ॥

'ಹೀಗೆ ಕಲಿಯುಗದಲ್ಲಿ ಗ್ರಂಥಗಳೆಲ್ಲವೂ ಅಶುದ್ಧವಾಗಿರುವಾಗ ಹರಿಯಿಂದ ನಿರ್ಣಯವನ್ನು ಮಾಡಲು ಆದೇಶವನ್ನು ಹೊಂದಿ, ಅವನ ಅನುಗ್ರಹದಿಂದಲೇ ವೇದಗಳನ್ನು ಶಾಸ್ತ್ರಾಂತರಗಳನ್ನು ಚೆನ್ನಾಗಿ ತಿಳಿದು, ದೇಶದೇಶಗಳಲ್ಲಿ ಸಂಚರಿಸಿ ಅನೇಕ ವಿಧವಾದ ಗ್ರಂಥಗಳನ್ನು ನೋಡಿ, ಸಾಕ್ಷಾನ್ನಾರಾಯಣನೂ ಪ್ರಭುವೂ ಆದ ವ್ಯಾಸರು ಹೇಳಿದಂತೆ (ಅವರಿಗೆ ಸಮ್ಮತವಾಗುವಂತೆ) ಭಾರತಾದ್ಯರ್ಥವನ್ನು ಹೇಳುತ್ತೇನೆ' ಎಂದು ಪ್ರತಿಜ್ಞೆ ಮಾಡಿದ್ದಾರೆ.

ಮೊದಲನೆಯ ಶ್ಲೋಕದ ಅನಂತರ ಬರುವ 'ಕೃಷ್ಣೋ ಯಜ್ಞೈರಿಜ್ಯತೇ...' ಎಂಬ ಶ್ಲೋಕವೂ ಅದರ ಅನಂತರ 'ಸೃಷ್ಟಾ ಬ್ರಹ್ಮಾದಯೋ ದೇವಾಃ....' ಎಂಬ ಶ್ಲೋಕವೂ ಹೀಗೆಯೇ ಅದರ್ಶನವನ್ನು ಪಡೆದಿದೆ. ಅದರ ಅನಂತರ ಬರುವ 'ನಾರಾಯಣಂ ನಮಸ್ಕೃತ್ಯ....' ಎಂಬ ಶ್ಲೋಕವು ಆ ಸ್ಥಳದಲ್ಲಿಲ್ಲದೆ ಬೇರೆ ಮಧ್ಯಸ್ಥಳದಲ್ಲಿ ಈಗ ಪಠಿಸಲ್ಪಡುತ್ತದೆ.

ಲಕ್ಷಾಲಂಕಾರ ಮತ್ತು ವಾದಿರಾಜರು

ಇಂತಹ ಸಂದರ್ಭದಲ್ಲಿ ಶ್ರೀವಾದಿರಾಜರು ರಚಿಸಿರುವ ಲಕ್ಷಾಲಂಕಾರ ಗ್ರಂಥವು ಬಹಳ ಉಪಕಾರವನ್ನು ಮಾಡುತ್ತದೆ. ಲಕ್ಷಾಲಂಕಾರ ಗ್ರಂಥದ ಬಗ್ಗೆ ಪರಂಪರೆಯಿಂದ ಬಂದ ಒಂದು ಕಥೆ ಇದೆ. ವಾದಿರಾಜರ ತಾಯಿ ಗೌರಮ್ಮನವರು ವಾದಿರಾಜರ ಜನನಕ್ಕಿಂತ ಮುಂಚೆಯೇ ಒಂದು ಗಂಡುಮಗು ಜನಿಸಿದರೆ ಕೃಷ್ಣದೇವರಿಗೆ ಸಹಸ್ರ ಸುವರ್ಣಾಭರಣಗಳನ್ನು ಅರ್ಪಿಸುವುದಾಗಿ ಹರಕೆಹೊತ್ತುಕೊಂಡಿದ್ದರಂತೆ. ಅನಂತರ ವಾದಿರಾಜರು (ಅವರ ಪೂರ್ವಾಶ್ರಮನಾಮ ಭೂವರಾಹ) ಜನಿಸಿದರು. ಅವರು ಬಾಲ್ಯದಲ್ಲಿಯೇ ಸಂನ್ಯಾಸಿಗಳಾದರು. ಅವರು ಸುಮಾರು ಮಧ್ಯವಯಸ್ಸಿಗೆ ಬಂದಾಗ ಅವರ ತಾಯಿ ಕೃಷ್ಣದೇವರಿಗೆ ಮಾಡಿಕೊಂಡಿದ್ದ ಈ ಒಂದು ಹರಕೆ ಉಳಿದು ಹೋಗಿದೆ ಎಂದು ಹೇಳಿದರಂತೆ. ಆಗ ವಾದಿರಾಜರು ಸುವರ್ಣ ಎಂದರೆ ಒಳ್ಳೆಯ ಅಕ್ಷರಗಳು. ಅಂತಹ ಒಂದು ಲಕ್ಷ ಅಥವಾ ಅದಕ್ಕಿಂತಲೂ ಮಿಗಿಲಾದ ಸಂಖ್ಯೆಯಿಂದ ಕೂಡಿದ ಅಕ್ಷರಗಳಿಂದ ಮಹಾಭಾರತಕ್ಕೆ ಒಂದು ವ್ಯಾಖ್ಯಾನವನ್ನು ರಚಿಸಿ ಅದನ್ನು ಕೃಷ್ಣದೇವರಿಗೆ ಸಮರ್ಪಿಸಿದರೆ ಹರಕೆಯು ತೀರುತ್ತದೆ ಎಂದು ಆಲೋಚಿಸಿ ಲಕ್ಷಾಲಂಕಾರ ಗ್ರಂಥವನ್ನು ರಚಿಸಿ ಕೃಷ್ಣದೇವರಿಗೆ ಸಮರ್ಪಿಸಿದರೆಂದು ಕೇಳಿಬರುತ್ತದೆ.

ಶ್ರೀವಾದಿರಾಜರ ಕ್ರಿ.ಶ. ೧೪೮೦-೧೬೦೦ ಅವರಿಗಿಂತ ಅವರ ತಾಯಿ ೩೦ ವರ್ಷ ದೊಡ್ಡವರೆಂದು ಇಟ್ಟುಕೊಂಡರೂ ಅವರಿಗೆ ೫೦ ವರ್ಷ ವಯಸ್ಸಾಗುವಾಗ ಎಂದರೆ

ಸುಮಾರು ಕ್ರಿ.ಶ. ೧೫೩೦ ರ ವೇಳೆಗೆ ಲಕ್ಷಾಲಂಕಾರ ಗ್ರಂಥದ ರಚನೆಯಾಗಿದೆ ಎಂದು ಊಹಿಸಬಹುದು.

ಶ್ರೀಮಧ್ವಾಚಾರ್ಯರು ಮಹಾಭಾರತಕ್ಕೆ ಕೊಟ್ಟ ಮಹತ್ತ್ವವನ್ನು ಬೇರೆ ಯಾವ ಆಚಾರ್ಯರೂ ಕೊಡಲಿಲ್ಲ. ಆಚಾರ್ಯರು ಮಹಾಭಾರತವನ್ನು ವಿವರಿಸಲು ಮಹಾಭಾರತ ತಾತ್ಪರ್ಯನಿರ್ಣಯ ಮತ್ತು ಯಮಕ ಭಾರತ ಗ್ರಂಥಗಳನ್ನು ರಚಿಸಿದುದಷ್ಟೇ ಅಲ್ಲ. ಆಚಾರ್ಯರ ಕಾಲದಿಂದಲೂ ಮಹಾಭಾರತ ಪ್ರವಚನವು ಆ ಕಾರಣದಿಂದ ವಿಶೇಷವಾಗಿ ನಡೆದುಕೊಂಡು ಬಂದಿತು. ಅದರಲ್ಲಿಯೂ ವಾದಿರಾಜರು ಲಕ್ಷಾಲಂಕಾರವನ್ನು ರಚಿಸಿದ ಮೇಲೆ ಮಹಾಭಾರತದ ಪ್ರಚಾರವು ಜನತೆಯಲ್ಲಿ ವಿಶೇಷ ರೀತಿಯಿಂದ ನಡೆಯಿತು. ಮಹಾಭಾರತವನ್ನು ಬರೆಯುವುದು ಒಂದು ದೊಡ್ಡ ಲೇಖನ ಯಜ್ಞವೆಂದು ಭಾವಿಸಿ ಅನೇಕರು ತಾಳೆಗರಿಗಳಲ್ಲಿ (ಆಗಿನ್ನೂ ಮುದ್ರಣವಿರಲಿಲ್ಲ) ಬರೆದರು. ಅಂತಹ ತಾಳೆಗರಿಗಳು ಉಡುಪಿಯ ಅಷ್ಟಮಠಗಳಲ್ಲಿ ಈಗಲೂ ಲಭ್ಯವಾಗಿವೆ.

ಪುಣೆಯ ಭಂಡಾರಕರ ಸಂಶೋಧನಾ ಸಂಸ್ಥೆಯವರು ಮಾಡಿದ ಒಂದು ನ್ಯೂನತೆ ಎಂದರೆ ಅವರು ಭಾರತ ದೇಶದಲ್ಲಿ ಬೇರೆ ಎಲ್ಲಾ ಕಡೆಗಳಲ್ಲಿಯೂ ತಿರುಗಿ ಶಾರದಾ ಲಿಪಿ, ನಾಗರೀಲಿಪಿ, ದೇವನಾಗರೀ ಲಿಪಿಗಳಲ್ಲಿದ್ದ ಮಹಾಭಾರತ ಪ್ರತಿಗಳನ್ನು ಸಂಗ್ರಹಿಸಿದರೂ ಉಡುಪಿಗೆ ಬಂದು ಅಲ್ಲಿಂದ ಯಾವ ಪ್ರತಿಯನ್ನೂ ಸಂಗ್ರಹಿಸಲಿಲ್ಲ. ಉಡುಪಿಯು ದೊಡ್ಡ ತತ್ತ್ವಜ್ಞಾನ ಕೇಂದ್ರ ಮತ್ತು ಅಧ್ಯಯನ ಕೇಂದ್ರವಾಗಿದ್ದುದರಿಂದ ಅವರು ಅವಶ್ಯವಾಗಿ ಉಡುಪಿಗೆ ಬಂದು ಸಂಗ್ರಹ ಮಾಡಬೇಕಾಗಿದ್ದಿತು. ಆದರೆ ಅವರು ಹಾಗೆ ಮಾಡದಿದ್ದುದರಿಂದ ಅವರ ಸಂಶೋಧನ ಆವೃತ್ತಿಯಲ್ಲಿ ಉಳಿದೆಲ್ಲಾ ಪಾಠಾಂತರಗಳನ್ನೂ ಸಂಗ್ರಹ ಮಾಡಿದ್ದರೂ ಉಡುಪಿಯ ತಾಳೆಗರಿಗಳಲ್ಲಿದ್ದ ಪಾಠಾಂತರಗಳನ್ನು ಸಂಗ್ರಹ ಮಾಡಲಿಲ್ಲವಾಗಿ ಲಕ್ಷಾಲಂಕಾರಕ್ಕೆ ಅನುಗುಣವಾಗಿ ಮಹಾಭಾರತವನ್ನು ಅಧ್ಯಯನ ಮಾಡುವವರಿಗೆ ಈ ನ್ಯೂನತೆಯು ಎದ್ದು ಕಾಣುತ್ತದೆ.

ಲಕ್ಷಾಲಂಕಾರ ವ್ಯಾಖ್ಯಾನವಾದರೂ ಮಹಾಭಾರತದ ಪ್ರತಿಯೊಂದು ಶ್ಲೋಕಕ್ಕೂ ಇಲ್ಲ. ಎಲ್ಲಿ ಶಬ್ದವು ಅಥವಾ ಅರ್ಥವು ಕ್ಲಿಷ್ಟವಾಗುತ್ತದೆಯೋ ಅಥವಾ ವಿಶೇಷ ಪ್ರಮೇಯಗಳನ್ನು ಹೇಳಬೇಕಾಗುತ್ತದೆಯೋ ಅಂತಹ ಸ್ಥಳದಲ್ಲಿ ಮಾತ್ರ ವ್ಯಾಖ್ಯಾನವನ್ನು ಬರೆದುಕೊಂಡು ಹೋಗುತ್ತಾರೆ. ಆ ಕಾರಣದಿಂದಲೇ ಅವರು 'ನಾರಾಯಣಂ...' ಎಂದು ಪ್ರಾರಂಭವಾಗುವ ಮೊದಲಿನ ನಾಲ್ಕು ಶ್ಲೋಕಗಳಿಗೆ ವ್ಯಾಖ್ಯಾನವನ್ನು ಬರೆದಿಲ್ಲ. ಆಚಾರ್ಯರೇ ಆ ಶ್ಲೋಕಗಳಿಗೆ ವ್ಯಾಖ್ಯಾನವನ್ನು ಮಾಡಿರುವುದರಿಂದ ತಾವು ಇಲ್ಲಿ ಹೇಳಬೇಕಾದ ವಿಷಯವಿಲ್ಲವೆಂದೂ ಏನಾದರೂ ಹೇಳಬೇಕಾದುದಿದ್ದರೆ ಅದನ್ನು

ಆಚಾರ್ಯರ ವ್ಯಾಖ್ಯಾನವನ್ನು ವಿವರಿಸುವ ಸಂದರ್ಭದಲ್ಲಿಯೇ ಹೇಳಬಹುದೆಂದೂ ಆಲೋಚಿಸಿ ಇಲ್ಲಿ ಬರೆದಿದ್ದಾರೆ. ಆದ್ದರಿಂದ ವಾದಿರಾಜರ ಅಭಿಪ್ರಾಯದಲ್ಲಿ ಭಾರತದ ಆದಿಯಲ್ಲಿ 'ನಾರಾಯಣಂ...' ಎಂಬ ಶ್ಲೋಕವಿಲ್ಲ ಎಂದು ಹೇಳುವುದಕ್ಕೆ ಯಾವ ಆಧಾರವೂ ಇಲ್ಲ. ಅದರ ಅನಂತರ ಬರುವ ಮೊದಲನೆಯ ಗದ್ಯದಲ್ಲಿ ಹೇಳಬೇಕಾದ ಅಧ್ಯಾಹಾರಾದಿ ವಿಷಯಗಳಿರುವುದರಿಂದ ಅಲ್ಲಿಂದ ತಮ್ಮ ವ್ಯಾಖ್ಯಾನವನ್ನು ಪ್ರಾರಂಭಿಸಿದ್ದಾರೆ.

ಲಕ್ಷಾಲಂಕಾರದಲ್ಲಿ ಪರ್ವ ಮತ್ತು ಅಧ್ಯಾಯ ಸಂಖ್ಯೆಯನ್ನು ಹೇಳಿ ಅನಂತರ ಪ್ರತೀಕ ಗ್ರಹಣವನ್ನು ಮಾಡಿ ಅರ್ಥವನ್ನು ಹೇಳಿದ್ದಾರೆ. ನಾವು ಮುದ್ರಿತಪುಸ್ತಕಗಳನ್ನು ಅನುಸರಿಸಿ ಹೋದರೆ ಆದಿಪರ್ವದ ಮೊದಲನೆಯ ಕೆಲವು ಅಧ್ಯಾಯಗಳು ಕಳೆದ ಮೇಲೆ ಲಕ್ಷಾಲಂಕಾರದಲ್ಲಿ ಹೇಳಿದ ಅಧ್ಯಾಯಗಳಲ್ಲಿ ಅಲ್ಲಿ ಹಿಡಿಯುವ ಪ್ರತೀಕಗಳು ದೊರೆಯುವುದಿಲ್ಲ. ಅವು ಬೇರೆ ಅಧ್ಯಾಯದಲ್ಲಿ ದೊರೆಯುತ್ತವೆ. ಇದರಿಂದ ವಾದಿರಾಜರ ಕಾಲದಲ್ಲಿದ್ದ ಭಾರತಪಾಠಕ್ಕೂ ಮತ್ತು ಇದುವರೆಗೆ ಮುದ್ರಿತವಾದ ಭಾರತಪಾಠಕ್ಕೂ ಎಷ್ಟು ಅಂತರವಿದೆಯೆಂದು ತಿಳಿಯುತ್ತದೆ. ಆದರೆ ಉಡುಪಿಯ ಅಷ್ಟಮಠಗಳಲ್ಲಿರುವ ತಾಳೆಗರಿಗಳಲ್ಲಿ ಅಧ್ಯಾಯದ ಸಂಖ್ಯೆಗಳು ಪ್ರಾಯಃ ಒಂದೇ ರೀತಿ ಇವೆ. ಎಲ್ಲದರಲ್ಲಿಯೂ ಪ್ರಾರಂಭದಲ್ಲಿ ಹೆಚ್ಚಾಗಿ 'ಶ್ರೀವಾದಿರಾಜ ಗುರುಭ್ಯೋ ನಮಃ' ಎಂಬ ಬರವಣಿಗೆ ಇರುವುದರಿಂದ ಅವೆಲ್ಲವೂ ವಾದಿರಾಜರ ಅನಂತರ ಆದರೆ ಸಮೀಪದ ಕಾಲಕ್ಕೆ ಸೇರಿದುದು ಎಂದು ತಿಳಿದುಬರುತ್ತದೆ. ತಾಳೆಗರಿಗಳ ಸ್ಥಿತಿ ಮತ್ತು ಅದರಲ್ಲಿರುವ ಲಿಪಿಗಳ ಶೈಲಿಯನ್ನು ಗಮನಿಸಿ ಇದನ್ನು ನಿರ್ಣಯಿಸಬಹುದು.

ಪ್ರಾಚೀನ ಹಸ್ತಪ್ರತಿಗಳು

ತುಳುಲಿಪಿ ಎಂದು ಕರೆಯುವ ಆ ಲಿಪಿಯು ಪ್ರಾಚೀನ ಮಲಯಾಳಂ ಲಿಪಿಯೇ ಆಗಿರುವುದರಿಂದ, ಈಚೆಗೆ ಮಲಯಾಳ ಲಿಪಿಯಲ್ಲಿ ಸ್ವಲ್ಪ ಸುಧಾರಣೆಯನ್ನು ತಂದುಕೊಂಡಿದ್ದರೂ ಸುಮಾರು ೪೦೦ ವರ್ಷಗಳ ಹಿಂದೆ ಇದ್ದ ಆ ಲಿಪಿಯೇ ತಾಳೆಗರಿಗಳಲ್ಲಿ ಕಂಡುಬರುವುದರಿಂದ ಇವೆಲ್ಲವೂ ಸುಮಾರು ೪೦೦ ವರ್ಷ ಹಿಂದನವು. ಆದ್ದರಿಂದ ನಮ್ಮ ಮಹಾಭಾರತ ಪಾಠವು ೪೦೦ ವರ್ಷ ಹಿಂದಿನದು ಎಂದು ಊಹಿಸಬಹುದಾಗಿದೆ. ಈ ತಾಳೆಗರಿಗಳಲ್ಲಿ ಮೂರು ಮಾತೃಕೆಗಳಲ್ಲಿ ಮಹಾಭಾರತದ ಆದಿಯಲ್ಲಿಯೇ 'ನಾರಾಯಣಂ ಸುರಗುರಂ...' ಎಂಬ ಶ್ಲೋಕವು ಅದರ ಅನಂತರದ ಮೂರು ಶ್ಲೋಕಗಳೂ ಕಂಡುಬರುತ್ತವೆ. ಆದ್ದರಿಂದ ವಾದಿರಾಜರ ಕಾಲದಲ್ಲಿ ಅವರು ಸಂಶೋಧಿಸಿದ ಪಾಠದ ಪ್ರತಿಗಳು ಇವುಗಳಾಗಿವೆ ಎಂದು ಊಹಿಸಬಹುದಾಗಿದೆ. ಆ

ಕಾರಣದಿಂದಲೇ ಈ ನಮ್ಮ ಪುಸ್ತಕದಲ್ಲಿ ಅದರಂತೆ 'ನಾರಾಯಣಂ ಸುರಗುರುಂ' ಎಂಬ ಶ್ಲೋಕದಿಂದಲೇ ಗ್ರಂಥವನ್ನು ಪ್ರಾರಂಭಿಸಿದ್ದೇವೆ.

ಮಹಾಭಾರತಕ್ಕೆ ನೀಲಕಂಠದೀಕ್ಷಿತರು ಬರೆದು ಒಂದು ವ್ಯಾಖ್ಯಾನವಿದೆ. ಅದು ಬಹಳ ಸಂಕ್ಷಿಪ್ತವಾದುದು. ನೀಲಕಂಠ ದೀಕ್ಷಿತರು ಅಪ್ಪಯ್ಯ ದೀಕ್ಷಿತರ ಪೌತ್ರರು. ಅಪ್ಪಯ್ಯ ದೀಕ್ಷಿತರೂ ವಿಜಯೀಂದ್ರರೂ ಮತ್ತು ವಾದಿರಾಜರೂ ಸಮಕಾಲೀನರು. ಆದ್ದರಿಂದ ಉಪಲಬ್ಧ ವ್ಯಾಖ್ಯಾನಗಳಲ್ಲಿ ವಾದಿರಾಜರದೇ ಪ್ರಾಚೀನ ವ್ಯಾಖ್ಯಾನ ಎಂಬ ಕಾರಣದಿಂದಲೂ ಲಕ್ಷಾಲಂಕಾರ ಪಾಠಗಳನ್ನೇ ಆದರಿಸಲಾಗಿದೆ.

ಮುದ್ರಣವಾಗಿರುವ ಅನೇಕ ಪಾಠಗಳಲ್ಲಿ ವಾವಿಳ್ಳಿ ರಾಮಸ್ವಾಮಿಯವರು ಪ್ರಕಾಶಿಸಿರುವ ಪಾಠವೇ ತಾಳೆಗರಿಗಳಲ್ಲಿರುವ ಪಾಠಕ್ಕೆ ಬಹಳವಾಗಿ ಸರಿ ಹೊಂದುವ ಪಾಠ. ಆದ್ದರಿಂದ ಕುಂಭಕೋಣದ ಪ್ರತಿಯ ಅನೇಕ ಪಾಠಗಳನ್ನು ಕೈಬಿಟ್ಟು ತಾಳೆಗರಿ ಮತ್ತು ವಾವಿಳ್ಳಿಯವರ ಪಾಠಗಳನ್ನೇ ನಮ್ಮ ಈ ಗ್ರಂಥದ ಸಂಪಾದನೆಯಲ್ಲಿ ಉಪಯೋಗಿಸಲಾಗಿದೆ.

ನಾವು ಈ ಪ್ರಯತ್ನದಿಂದ ಆಚಾರ್ಯರಿಗೆ ಸಮ್ಮತವಾದ ಮಹಾಭಾರತ ಪಾಠವನ್ನು ಸಂಪಾದನೆ ಮಾಡಲು ಸಾಧ್ಯವಿಲ್ಲ. ವಾದಿರಾಜರ ಕಾಲದಲ್ಲಿದ್ದ ಅವರಿಗೆ ಸಮ್ಮತವಾದ ಪಾಠವನ್ನೂ ಸಂಪಾದನೆ ಮಾಡಲು ಸಾಧ್ಯವಾಗುವುದಿಲ್ಲ. ಏಕೆಂದರೆ ಲಕ್ಷಾಲಂಕಾರದಲ್ಲಿ ಎಲ್ಲಾ ಶ್ಲೋಕಗಳ ಎಲ್ಲಾ ಪ್ರತೀಕಗಳನ್ನೂ ಹಿಡಿದು ವ್ಯಾಖ್ಯಾನ ಮಾಡಿಲ್ಲ. ಆದರೆ ವಾದಿರಾಜರಿಗೆ ಅಭಿಮತವಾದ ಪಾಠಕ್ಕೆ ಸಮೀಪದಲ್ಲಿರುವ ಪಾಠವನ್ನು ಮಾತ್ರ ಸಂಪಾದನೆ ಮಾಡಲು ಸಾಧ್ಯ . ಅದೇ ಉದ್ದೇಶದಿಂದ ಈ ಪ್ರಯತ್ನದಲ್ಲಿ ತೊಡಗಿದ್ದೇವೆ.

ಅಷ್ಟಮಠಗಳ ಕೊಡುಗೆ

ನಮಗೆ ಪಲಿಮಾರು ಮಠ, ಪೇಜಾವರ ಮಠ, ಸೋದೆ ಮಠ, ಕೃಷ್ಣಾಪುರ ಮಠ, ಕಾಣಿಯೂರು ಮಠ, ಅದಮಾರು ಮಠ, ಪುತ್ತಿಗೆ ಮಠ ಮತ್ತು ಸುಬ್ರಹ್ಮಣ್ಯ ಮಠದ ಪೂಜ್ಯ ಅಧೀಶ್ವರರು ತಮ್ಮ ತಮ್ಮ ವಶದಲ್ಲಿದ್ದ ತಾಳೆಗರಿಗಳನ್ನು ಕೊಟ್ಟು ಅನುಗ್ರಹಿಸಿದ್ದಾರೆ. ಈ ಪ್ರಯತ್ನದಿಂದ ಏನಾದರೂ ಶ್ರೇಯಸ್ಸು ಉಂಟಾಗುವುದಾದರೆ ಅದು ಈ ಮಹನೀಯರುಗಳಿಗೆ ಸಲ್ಲಬೇಕಾದದ್ದು. ಅವರ ಚರಣಾರವಿಂದಗಳಲ್ಲಿ ಯಾವಾಗಲೂ ನಮ್ಮ ಸಾಷ್ಟಾಂಗ ಪ್ರಣಾಮಗಳಿವೆ.

ಲಕ್ಷಾಲಂಕಾರ ಗ್ರಂಥವು ಹಿಂದೆ ಶ್ರೀ ಸೋದೆ ಮಠದಿಂದಲೇ ಮುದ್ರಿತವಾಗಿದೆ. ಆದರೆ ಆ ಮುದ್ರಿತ ಪುಸ್ತಕದಲ್ಲಿಯೂ ಸಹ ಕೆಲವು ಮುದ್ರಣ ದೋಷಗಳಿವೆ. ಮತ್ತು ಅವರು ಮುದ್ರಣಕ್ಕೆ ಉಪಯೋಗಿಸಿದ ಮೂಲ ಮಾತೃಕೆಗಳಲ್ಲಿ ಲೇಖಕ ಪ್ರಮಾದದಿಂದ

ಬಂದಿರುವ ದೋಷಗಳೂ ಹಾಗೆಯೇ ಮುದ್ರಿತ ಪುಸ್ತಕದಲ್ಲಿ ಮೂಡಿಬಂದಿವೆ. ನಮ್ಮ ಬಳಿಯಲ್ಲಿ ಮಠದವರು ಕೊಟ್ಟಿರುವ ಲಕ್ಷಾಲಂಕಾರದ ತಾಳೆಗರಿಯ ಪಾಠಗಳಿಂದ ಇಂತಹ ದೋಷಗಳನ್ನು ಸಾಧ್ಯವಿದ್ದಷ್ಟು ತಿದ್ದಿ ಸರಿಮಾಡಲು ಪ್ರಯತ್ನ ಪಡಲಾಗಿದೆ.

ಇತಿಹಾಸ ಪುರಾಣಗಳ ವ್ಯಾಖ್ಯಾನಗಳನ್ನು ಗಮನಿಸಿದಾಗ ನಮಗೆ ಈ ಒಂದು ಅಂಶವು ತಿಳಿಯುತ್ತದೆ. ಅವುಗಳಲ್ಲಿ ಅನೇಕ ಪ್ರಯೋಗಗಳು ಪಾಣಿನಿಯ ವ್ಯಾಕರಣಕ್ಕೆ ಅನುಗುಣವಾಗಿಲ್ಲದಿರುವುದು ಮತ್ತು ಅಲ್ಲಿ ಪ್ರಯೋಗಿಸಿರುವ ಅನೇಕ ಶಬ್ದಗಳಿಗೆ ಕೋಶ, ನಿಘಂಟುಗಳಲ್ಲಿ ಅರ್ಥವು ದೊರೆಯದಿರುವುದು ಇನ್ನೊಂದು ಅಂಶ. ಕೆಲವು ಸಲ ಆ ಶಬ್ದಗಳೇ ಯಾವ ಕೋಶಗಳಲ್ಲಿಯೂ ಸಿಗುವುದಿಲ್ಲ. ಇನ್ನು ಕೆಲವು ಕಡೆ ಮೂಲದಲ್ಲಿರುವ ಪದ್ಯ, ಗದ್ಯಗಳಿಗೆ ಪರಸ್ಪರವಾಗಿ ಅನ್ವಯವೇ ತಿಳಿಯದಿರುವುದು ಮತ್ತು ತೋರುವ ಅನ್ವಯವು ಶಾಸ್ತ್ರಕ್ಕೆ ವಿರುದ್ಧವಾಗಿರುವುದು. ಇಂತಹ ಅನೇಕ ಉದಾಹರಣೆಗಳು ಕಂಡುಬರುತ್ತವೆ. ಅಂತಹ ಸಂದರ್ಭದಲ್ಲಿ ವ್ಯಾಖ್ಯಾನ ಮಾಡುವವರು ಆ ಶಬ್ದವನ್ನೇ ಬದಲಾಯಿಸಿ ಅದನ್ನು ಸಾಧುವನ್ನಾಗಿ ಮಾಡಿ, ಅದರ ಅರ್ಥವು ಕೋಶದಲ್ಲಿ ದೊರೆಯುವಂತೆ ಮಾಡಿ ವ್ಯಾಖ್ಯಾನ ಮಾಡಿ ಏನೋ ಒಂದು ಅರ್ಥವನ್ನು ಹೇಳುತ್ತಾರೆ. ಆದರೆ ಮಧ್ವರ ಪರಂಪರೆಯಲ್ಲಿ ಎಂದೂ ಇಂತಹ ಅಕಾರ್ಯವನ್ನು ಮಾಡುವುದಿಲ್ಲ. ವೇದ ಪುರಾಣಗಳಲ್ಲಿ ಸಿಗುವ ಶಬ್ದಗಳು ಈಚೆಗೆ ರಚಿತವಾದ ವ್ಯಾಕರಣಗಳಿಗಾಗಲೀ, ಕೋಶಗಳಿಗಾಗಲೀ ಅನುಗುಣವಾಗಿರಬೇಕೆಂಬ ಯಾವ ನಿರ್ಬಂಧವೂ ಇಲ್ಲ. ಆ ಶಬ್ದಗಳನ್ನು ಗಮನಿಸದೆ ಕೋಶ ವ್ಯಾಕರಣಗಳನ್ನು ರಚಿಸುವುದು ಅವರ ತಪ್ಪು ಅಷ್ಟೆ. ಆದ್ದರಿಂದಲೇ ಪಾಣಿನಿಯೇ 'ಛಂದಸಿ ಸರ್ವೇ ವಿಧಯಃ ವಿಕಲ್ಪ್ಯಂತೇ' ಎಂದು ಹೇಳಿ ಈ ವ್ಯಾಕರಣದಲ್ಲಿ ಹೇಳಿರುವ ನಿಯಮಗಳು ಅನುಸರಿಸಲ್ಪಟ್ಟಿರಬೇಕು ಎಂಬ ನಿಯಮವಿಲ್ಲ ಎಂದು ಹೇಳಿದ್ದಾನೆ. ಮಧ್ವರ ಮತ್ತು ಅವರ ಪರಂಪರೆಯ ವ್ಯಾಖ್ಯಾನದ ಮೂಲಸೂತ್ರ 'ಶಬ್ದಾ ಯೋಗವೃತ್ತಯಃ' ಎಂದರೆ ಶಬ್ದಗಳು ಮುಖ್ಯವಾಗಿ ಯೌಗಿಕವಾದ ಅರ್ಥವನ್ನು ಹೇಳುತ್ತವೆ ಎಂಬುದು. ಯೌಗಿಕಾರ್ಥಕ್ಕೂ ರೂಢವಾದ ಅರ್ಥಕ್ಕೂ ವಿರೋಧವಿಲ್ಲದಿರುವಾಗ ಯಾವ ಅನುಪಪತ್ತಿಯೂ ಇಲ್ಲ. ವಿರೋಧವಿರುವಾಗ ರೂಢಾರ್ಥವನ್ನು ಬಿಟ್ಟು ತೆಗೆದುಕೊಂಡರೆ ಪ್ರಮಾಣಾಂತರ ವಿರೋಧವು ಬರುವ ಸಂದರ್ಭದಲ್ಲಿ ರೂಢಾರ್ಥವನ್ನು ಯೌಗಿಕಾರ್ಥವನ್ನೇ ತೆಗೆದುಕೊಳ್ಳಬೇಕು. ಇದಕ್ಕೆ ಅನೇಕ ಉದಾಹರಣೆಗಳನ್ನು ಮಧ್ವಭಾಷ್ಯದಲ್ಲಿಯೂ ಮತ್ತು ಪ್ರಕೃತವಾದ ಲಕ್ಷಾಲಂಕಾರದಲ್ಲಿಯೂ ನೋಡಬಹುದು.

ಲಕ್ಷಾಲಂಕಾರದ ಮಹತ್ತ್ವವನ್ನು ತಿಳಿಯುವುದಕ್ಕಾಗಿ ಕೆಲವು ಉದಾಹರಣೆಗಳನ್ನು ಕೊಟ್ಟು ಚರ್ಚಿಸುತ್ತೇನೆ.

ತಾಳೆಗರಿಗಳ ಪಾಠಗಳ ಸ್ವಾರಸ್ಯ

೧. **ಆಹುಃ ಕೇಚಿನ್ನ ತಸ್ಯೈತೇ ತಸ್ಯೈತೇ ಇತಿ ಚಾಪರೇ ।**
ಯದಾ ಚಿರಮೃತಃ ಪಾಂಡುಃ ಕಥಂ ತಸ್ಯೇತಿ ಚಾಪರೇ ॥

ಇದು ಎಲ್ಲಾ ಮುದ್ರಿತಪುಸ್ತಕಗಳಲ್ಲಿಯೂ ಇರುವ ಪಾಠ. ಪಾಂಡುವಿನ ಮರಣದ ನಂತರ ಪಾಂಡುವಿನ ಮಕ್ಕಳನ್ನು ಧೃತರಾಷ್ಟ್ರನ ಸಭೆಗೆ ಕರೆದುಕೊಂಡು ಬಂದಾಗ ಅಲ್ಲಿದ್ದ ಜನಗಳ ಪ್ರತಿಕ್ರಿಯೆಯನ್ನು ಹೇಳುವ ಸಂದರ್ಭವಿದು.

''ಕೆಲವರು ಇವರು ಅವನ ಮಕ್ಕಳಲ್ಲ ಎಂದರು. ಕೆಲವರು ಅವನ ಮಕ್ಕಳು ಎಂದರು. ಪಾಂಡುವು ಮರಣಹೊಂದಿ ಬಹಳ ಸಮಯವಾದುದರಿಂದ ಹೇಗೆ ಅವನ ಮಕ್ಕಳಾಗುತ್ತಾರೆ? ಎಂದು ಕೆಲವರು ಹೇಳಿದರು''. ಇದು ಈ ಶ್ಲೋಕದ ತಾತ್ಪರ್ಯ. ಆದರೆ ಇದು ಶುದ್ಧವಾದ ಪಾಠವಲ್ಲ . ಶುದ್ಧಪಾಠವು ಲಕ್ಷಾಲಂಕಾರದಲ್ಲಿ ಹೀಗೆ ದೊರೆಯುತ್ತದೆ.

ಆಹುಃ ಕೇಚಿನ್ನ ಕಸ್ಯೈತೇ ಕಸ್ಯೈತೇ ಇತಿ ಚಾಪರೇ ।
ಯದಾ ಚಿರಂ ಮೃತಃ ಪಾಂಡುಃ ಕಥಂ ಕಸ್ಯೇತಿ ಚಾಪರೇ॥ ಎಂಬುದಾಗಿ.

ಉತ್ತರಾರ್ಧದಲ್ಲಿ ಅರ್ಥದಲ್ಲಿ ವ್ಯತ್ಯಾಸವಿಲ್ಲ. 'ಚಿರಂ ಮೃತಃ' 'ಚಿರಮೃತಃ' ಎಂದಿಷ್ಟೇ ವ್ಯತ್ಯಾಸ. ಪೂರ್ವಾರ್ಧದಲ್ಲಿ ಕಸ್ಯೈತೇ ಎಂದು ಇದೆ. ಇದನ್ನು ಅರ್ಥಮಾಡಲು ಬರಲಿಲ್ಲ, ಆದ್ದರಿಂದ ಅದನ್ನು ತಸ್ಯೈತೇ ಎಂದು ತಿದ್ದಿದರು. ಆದರೆ ಶುದ್ಧಪಾಠದಲ್ಲಿ ಅರ್ಥದ ಸೊಗಸನ್ನು ಗಮನಿಸಬೇಕು. ಪಾಂಡುವಿನ ಮಕ್ಕಳ ಸೌಂದರ್ಯ, ಓಜಸ್ಸುಗಳನ್ನು ನೋಡಿ ಇಂತಹ ಮಕ್ಕಳು ಯಾರಿಗೆ ಬೇಡ! ಎಂದು ಉದ್ಗರಿಸಿದರು ಎಂದು ಮೊದಲನೆಯ ಪದದ ತಾತ್ಪರ್ಯವು. ಈಗಲೂ ಒಳ್ಳೆಯ ವಸ್ತುವನ್ನು ನೋಡಿದರೆ 'ಇದು ಯಾರಿಗುಂಟು ಯಾರಿಗಿಲ್ಲ' 'ಇದು ಯಾರಿಗೆ ಬೇಕು, ಯಾರಿಗೆ ಬೇಡ' ಎಂದು ಉದ್ಗರಿಸುತ್ತೇವಷ್ಟೆ ! ಎಲ್ಲರಿಗೂ ಬೇಕು ಎಂಬುದೇ ತಾತ್ಪರ್ಯ. ಪಾಂಡವರ ಮಹಿಮೆಯನ್ನು ಈ ಪಾದವು ಹೇಳುತ್ತದೆ. ಇನ್ನು ಕೆಲವರು ಇವರು ಯಾರ ಮಕ್ಕಳು? ಎಂದು ಚಿಂತಿಸಿದರು ಎಂದು ಎರಡನೆಯ ಪದದ ತಾತ್ಪರ್ಯ. ಈ 'ಕಸ್ಯೈತೇ' ಎಂಬ ಪಾಠವು ಎಲ್ಲಾ ತಾಳೆಗರಿಗಳಲ್ಲಿಯೂ ದೊರೆಯುತ್ತದೆ ಎಂಬುದು ದೊಡ್ಡ ಸಂತೋಷದ ಸಂಗತಿ. ಅಲ್ಲದೆ ಶ್ರೀವಾದಿರಾಜರು ತಮ್ಮ ಲಕ್ಷಾಲಂಕಾರದಲ್ಲಿ ಹೀಗೆಯೇ ಪಾಠವನ್ನು ಹಿಡಿದು ವ್ಯಾಖ್ಯಾನ ಮಾಡಿದ್ದಾರೆ.

೨. ಯದಾಶ್ರೌಷಂ ದ್ರೋಣಪುತ್ರಂ ಚ ಶೂರಂ
ದುಶ್ಶಾಸನಂ ಕೃತವರ್ಮಾಣಮುಗ್ರಮ್ ।
ಯುಧಿಷ್ಠಿರಂ ವೀರಮಮರ್ಷಯಂತಂ
ತದಾ ನಾಶಂಸೇ ವಿಜಯಾಯ ಸಂಜಯ ॥

ಇದೂ ಆದಿಪರ್ವದ ಮೊದಲನೆಯ ಅಧ್ಯಾಯದಲ್ಲಿ ಬರುವ ಶ್ಲೋಕ. ಹೆಚ್ಚಿನ ಮುದ್ರಿತ ಪುಸ್ತಕದಲ್ಲಿ ಹೀಗೆ ಪಾಠವಿದೆ. ಒಂದು ಮುದ್ರಿತ ಪುಸ್ತಕದಲ್ಲಿ ಮೂರನೆಯ ಪಾದವು 'ಯುಧಿಷ್ಠಿರಂ ಧರ್ಮರಾಜಂ ಜಯಂತಂ' ಎಂದಿದೆ. ಇದಂತೂ ವಿರುದ್ಧವಾದ ಪಾಠ. ಇದು ಧೃತರಾಷ್ಟ್ರನು ಸಂಜಯನಿಗೆ ಹೇಳುವ ಮಾತು. ಮೇಲೆ ಹೇಳಿದ ಎರಡು ಪಾಠಗಳಲ್ಲಿಯೂ ಈ ಅರ್ಥವು ಅಸಂಗತವಾಗುತ್ತದೆ. ''ವೀರನಾದ ಯುಧಿಷ್ಠಿರನನ್ನು ಅಶ್ವತ್ಥಾಮಾದಿಗಳು ಪರಾಭವಗೊಳಿಸಲಿಲ್ಲ, ಆದ್ದರಿಂದ ನನಗೆ ವಿಜಯ ಆಶೆ ಇಲ್ಲ'' ಇದು ಈ ಶ್ಲೋಕದ ಆರ್ಥ. ಇದರಲ್ಲಿ ಯಾವ ಸಮರ್ಥನೆಯೂ ತೋರುವುದಿಲ್ಲ, ವೀರನಾದ್ದರಿಂದಲೇ ಧರ್ಮರಾಜನು ಅವರಿಗೆ ವಶನಾಗಲಿಲ್ಲ, ಇದರಲ್ಲಿ ಅನುಪಪತ್ತಿ ಏನು? ಅಲ್ಲದೆ ಅಶ್ವತ್ಥಾಮಾದಿಗಳನ್ನು ಶೂರರೆಂದು ಕರೆಯುವುದರಲ್ಲಿ ಯಾವ ಔಚಿತ್ಯವೂ ಇರುವುದಿಲ್ಲ. ಎರಡನೆಯ ಪಾಠದಲ್ಲಿಯೂ ''ವೀರನಾದ ಯುಧಿಷ್ಠಿರನನ್ನು ಶೂರರಾದ ಅಶ್ವತ್ಥಾಮಾದಿಗಳು ಜಯಿಸಿದ್ದರಿಂದ ನನಗೆ ವಿಜಯದ ಆಶೆ ಇಲ್ಲ'' ಎಂಬ ಅರ್ಥವು ಬರುವುದರಿಂದ ಇದು ವಿರುದ್ಧ ಮತ್ತು ಹಾಸ್ಯಾಸ್ಪದವಾಗುತ್ತದೆ.

ತಾಳೆಗರಿಗಳಲ್ಲಿರುವ ಪಾಠದಲ್ಲಿ ಮೂರನೆಯ ಪಾದ ಈ ರೀತಿ ಇದೆ. 'ಯುಧಿಷ್ಠಿರಂ ಶೂನ್ಯಮಧರ್ಷಯಂತಂ' ಎಂದು.

ಇಲ್ಲಿರುವ ಶೂನ್ಯಶಬ್ದವು ಯಾರಿಗೂ ಅರ್ಥವಾಗಲಿಲ್ಲವಾದ ಕಾರಣ ಅದನ್ನು 'ವೀರಂ' ಎಂದು ತಿದ್ದಿ ಅಸಂಗತಿಯನ್ನು ಉಂಟು ಮಾಡಿದ್ದಾರೆ. 'ಶೂನ್ಯಂ' ಎಂಬ ಪಾಠದ ಸ್ವಾರಸ್ಯವನ್ನು ಗಮನಿಸಿ. 'ಶೂನ್ಯಂ' ಎಂದರೆ ರಹಿತನಾದವನನ್ನು ಎಂದರ್ಥ. ಪ್ರಕೃತಸಂದರ್ಭದಲ್ಲಿ ಭೀಮಾರ್ಜುನರಿಂದ ರಹಿತನಾದವನು, ಎಂದರೆ ಭೀಮಾರ್ಜುನರಿಂದ ದೂರದಲ್ಲಿದ್ದವನು ಎಂದರ್ಥ. ದ್ರೋಣರು ಸೇನಾಧಿಪತ್ಯವನ್ನು ವಹಿಸಿಕೊಂಡ ಕ್ಷಣದಿಂದ 'ಭೀಮಾರ್ಜುನರನ್ನು ಧರ್ಮರಾಜನಿಂದ ದೂರಮಾಡಿದರೆ ಧರ್ಮರಾಜನನ್ನು ಜೀವಂತವಾಗಿ ಸೆರೆ ಹಿಡಿಯುತ್ತೇನೆ ಎಂದು ತಿಳಿಸಿದ್ದಾರೆ. ಧರ್ಮರಾಜನು ಸ್ವತಃ ದುರ್ಬಲ. ಭೀಮಾರ್ಜುನರ ಬಲವೇ ಅವನಿಗೆ ಬಲ. ಆದ್ದರಿಂದ ಹೀಗೆ ಮಾಡಿದರೆ ಅವನನ್ನು ಸೆರೆ ಹಿಡಿಯಬಹುದೆಂದು ದ್ರೋಣರ ಎಣಿಕೆ. ಆದರೆ ಭೀಮಾರ್ಜುನರಿಂದ ದೂರಮಾಡಲ್ಪಟ್ಟ ಧರ್ಮರಾಜನನ್ನು ಶೂರರಾದ ಅಶ್ವತ್ಥಾಮಾದಿಗಳು

ಸೆರೆ ಹಿಡಿಯಲಾಗಲಿಲ್ಲ ಎಂಬ ವಾರ್ತೆ ಧೃತರಾಷ್ಟ್ರನಿಗೆ ಬಂದಿದೆ. ಆಗ ಧೃತರಾಷ್ಟ್ರನ ಮಾತಿದು ''ಸ್ವತಃ ಶೂರರೂ ಬಲಿಷ್ಠರೂ ಆದ ಅಶ್ವತ್ಥಾಮಾದಿಗಳು ಸ್ವತಃ ದುರ್ಬಲನಾಗಿಯೂ ಭೀಮಾರ್ಜುನರಿಂದ ರಹಿತನಾಗಿಯೂ ಇರುವ ಧರ್ಮರಾಜನನ್ನು ಸೆರೆ ಹಿಡಿಯಲಾಗಲಿಲ್ಲ ಎಂದಮೇಲೆ ನನಗೆ ಜಯದ ಆಶೆ ಇಲ್ಲ'. ಇದು ಧೃತರಾಷ್ಟ್ರನ ತರ್ಕಬದ್ಧವಾದ ಉಪಪಾದನೆ. ಈ ಶುದ್ಧಪಾಠವನ್ನು ಅರ್ಥಮಾಡಿಕೊಳ್ಳಲಾಗದೆ ಪಾಠವನ್ನೇ ತಿದ್ದಿ ಮೂಲಕಾರರಿಗೆ ಮಾಡಿರುವ ಅಪರಾಧ ಇದು.

ಲಕ್ಷಾಲಂಕಾರದಲ್ಲಿ ಶ್ರೀವಾದಿರಾಜರು ಮೂರನೆಯ ಪಾದದಲ್ಲಿ 'ಶೂನ್ಯಂ' ಎಂಬ ಪದವನ್ನೇ ಹಿಡಿದು ಮೇಲೆ ಹೇಳಿದಂತೆ ವ್ಯಾಖ್ಯಾನ ಮಾಡಿದ್ದಾರೆ. ಇದರಿಂದಲೂ ತಾಳೆಗರಿಗಳ ಪಾಠಗಳು ಎಷ್ಟು ಶುದ್ಧವಾದವು ಎಂದು ತಿಳಿಯುತ್ತದೆ.

೩. **ಉಭೇ ಸಂಧ್ಯೇ ಜಪನ್ ಕಿಂಚಿತ್ ಸದ್ಯೋ ಮುಚ್ಯೇತ ಕಿಲ್ಬಿಷಾತ್ ।**
ಅನುಕ್ರಮಣ್ಯಾ ಯಾವತ್ ಸ್ಯಾದಹ್ನಾ ರಾತ್ರ್ಯಾ ಚ ಸಂಚಿತಮ್ ।
ಭಾರತಸ್ಯ ವಪುರ್ಹ್ಯೇತತ್ ಸತ್ಯಂ ಚಾನೃತಮೇವ ಚ ॥

ಇದೂ ಆದಿಪರ್ವದ ಅನುಕ್ರಮಣಿಕಾಧ್ಯಾಯದಲ್ಲಿ ಕೊನೆಯಲ್ಲಿ ಬರುವ ಒಂದು ಶ್ಲೋಕ. ಮೇಲೆ ತೋರಿಸಿರುವುದು ಮುದ್ರಿತ ಪುಸ್ತಕಗಳಲ್ಲಿ ಕಂಡುಬರುವ ಪಾಠ. ಅನುಕ್ರಮಣಿಕಾಧ್ಯಾಯವನ್ನು ಎರಡು ಸಂಧ್ಯಾಕಾಲದಲ್ಲೂ ಸ್ವಲ್ಪ ಜಪಮಾಡುವವನು ಹಗಲು ಮತ್ತು ರಾತ್ರಿ ಮಾಡಿದ ಪಾಪಗಳಿಂದ ತತ್‌ಕ್ಷಣದಲ್ಲಿ ಮುಕ್ತನಾಗುತ್ತಾನೆ ಎಂದು ಮೊದಲನೆಯ ಎರಡು ಸಾಲುಗಳ ತಾತ್ಪರ್ಯ. ಸತ್ಯ ಮತ್ತು ಅನೃತಗಳು ಭಾರತಗ್ರಂಥದ ಸ್ವರೂಪ ಎಂದು ಮೂರನೆಯ ಸಾಲಿನ ಅರ್ಥ. ಸತ್ಯವನ್ನು ಭಾರತದ ಸ್ವರೂಪವೆಂದು ಹೇಳಬಹುದು. ಆದರೆ ಅನೃತವು ಭಾರತದ ಸ್ವರೂಪವಾಗುವುದು ಹೇಗೆ? ಇದು ಸರಿಯಲ್ಲ ಎಂದು ಯೋಚಿಸಿ ಅನೃತಶಬ್ದವನ್ನು ಅಮೃತ ಎಂದು ತಿದ್ದಿದ್ದಾರೆ. ಸತ್ಯ ಮತ್ತು ಅಮೃತ ಭಾರತದ ಸ್ವರೂಪ ಎಂದು ಸಿದ್ಧಿಸುತ್ತದೆ ಎಂದು ಮನಸ್ಸಿಗೆ ಸಮಾಧಾನವನ್ನು ತಂದುಕೊಂಡರೆ ಆದರೆ ತಾಳೆಗರಿಗಳಲ್ಲಿ ಈ ಶ್ಲೋಕದ ಪಾಠವೇ ಬೇರೆ ರೀತಿಯಾಗಿದೆ.

''ಉಭೇ ಸಂಧ್ಯೇ ಜಪನ್ ಕಿಂಚಿತ್ ಸದ್ಯೋ ಮುಚ್ಯೇತ ಕಿಲ್ಬಿಷಾತ್ ।
ಅನುಕ್ರಾಮಣಮಧ್ಯಾಯಮಹೋರಾತ್ರ್ಯಾ ಚ ಸಂಚಿತಮ್।
ಭಾರತಶ್ರಾವಪುಣ್ಯೇನ ಸತ್ಯಂ ಚಾನೃತಮೇವ ಚ ।
ನವನೀತಂ ಯಥಾ ದಧ್ನ್ಯಃ .. ತಥಾ ಭಾರತಮುಚ್ಯತೇ॥''

ಇನ್ನು ವಾದಿರಾಜರು ಲಕ್ಷಾಲಂಕಾರದಲ್ಲಿ ಹೀಗೆಯೇ ಉದಾಹರಿಸಿ ಮುಂದಿನ ಶ್ಲೋಕದಿಂದ 'ಯಥಾ, ತಥಾ' ಶಬ್ದಗಳನ್ನು ಅನುಕರ್ಷಮಾಡಿ

೨. ಯದಾಶ್ರೌಷಂ ದ್ರೋಣಪುತ್ರಂ ಚ ಶೂರಂ
ದುಶ್ಶಾಸನಂ ಕೃತವರ್ಮಾಣಮುಗ್ರಮ್ ।
ಯುಧಿಷ್ಠಿರಂ ವೀರಮಮರ್ಷಯಂತಂ
ತದಾ ನಾಶಂಸೇ ವಿಜಯಾಯ ಸಂಜಯ ॥

ಇದೂ ಆದಿಪರ್ವದ ಮೊದಲನೆಯ ಅಧ್ಯಾಯದಲ್ಲಿ ಬರುವ ಶ್ಲೋಕ. ಹೆಚ್ಚಿನ ಮುದ್ರಿತ ಪುಸ್ತಕದಲ್ಲಿ ಹೀಗೆ ಪಾಠವಿದೆ. ಒಂದು ಮುದ್ರಿತ ಪುಸ್ತಕದಲ್ಲಿ ಮೂರನೆಯ ಪಾದವು 'ಯುಧಿಷ್ಠಿರಂ ಧರ್ಮರಾಜಂ ಜಯಂತಂ' ಎಂದಿದೆ. ಇದಂತೂ ವಿರುದ್ಧವಾದ ಪಾಠ. ಇದು ಧೃತರಾಷ್ಟ್ರನು ಸಂಜಯನಿಗೆ ಹೇಳುವ ಮಾತು. ಮೇಲೆ ಹೇಳಿದ ಎರಡು ಪಾಠಗಳಲ್ಲಿಯೂ ಈ ಅರ್ಥವು ಅಸಂಗತವಾಗುತ್ತದೆ. ''ವೀರನಾದ ಯುಧಿಷ್ಠಿರನನ್ನು ಅಶ್ವತ್ಥಾಮಾದಿಗಳು ಪರಾಭವಗೊಳಿಸಲಿಲ್ಲ, ಆದ್ದರಿಂದ ನನಗೆ ವಿಜಯ ಆಶೆ ಇಲ್ಲ'' ಇದು ಈ ಶ್ಲೋಕದ ಆರ್ಥ. ಇದರಲ್ಲಿ ಯಾವ ಸಮರ್ಥನೆಯೂ ತೋರುವುದಿಲ್ಲ, ವೀರನಾದ್ದರಿಂದಲೇ ಧರ್ಮರಾಜನು ಅವರಿಗೆ ವಶನಾಗಲಿಲ್ಲ, ಇದರಲ್ಲಿ ಅನುಪಪತ್ತಿ ಏನು? ಅಲ್ಲದೆ ಅಶ್ವತ್ಥಾಮಾದಿಗಳನ್ನು ಶೂರರೆಂದು ಕರೆಯುವುದರಲ್ಲಿ ಯಾವ ಔಚಿತ್ಯವೂ ಇರುವುದಿಲ್ಲ. ಎರಡನೆಯ ಪಾಠದಲ್ಲಿಯೂ ''ವೀರನಾದ ಯುಧಿಷ್ಠಿರನನ್ನು ಶೂರರಾದ ಅಶ್ವತ್ಥಾಮಾದಿಗಳು ಜಯಿಸಿದ್ದರಿಂದ ನನಗೆ ವಿಜಯದ ಆಶೆ ಇಲ್ಲ'' ಎಂಬ ಅರ್ಥವು ಬರುವುದರಿಂದ ಇದು ವಿರುದ್ಧ ಮತ್ತು ಹಾಸ್ಯಾಸ್ಪದವಾಗುತ್ತದೆ.

ತಾಳೆಗರಿಗಳಲ್ಲಿರುವ ಪಾಠದಲ್ಲಿ ಮೂರನೆಯ ಪಾದ ಈ ರೀತಿ ಇದೆ. 'ಯುಧಿಷ್ಠಿರಂ ಶೂನ್ಯಮಧರ್ಷಯಂತಂ' ಎಂದು.

ಇಲ್ಲಿರುವ ಶೂನ್ಯಶಬ್ದವು ಯಾರಿಗೂ ಅರ್ಥವಾಗಲಿಲ್ಲವಾದ ಕಾರಣ ಅದನ್ನು 'ವೀರಂ' ಎಂದು ತಿದ್ದಿ ಅಸಂಗತಿಯನ್ನು ಉಂಟು ಮಾಡಿದ್ದಾರೆ. 'ಶೂನ್ಯಂ' ಎಂಬ ಪಾಠದ ಸ್ವಾರಸ್ಯವನ್ನು ಗಮನಿಸಿ. 'ಶೂನ್ಯಂ' ಎಂದರೆ ರಹಿತನಾದವನನ್ನು ಎಂದರ್ಥ. ಪ್ರಕೃತಸಂದರ್ಭದಲ್ಲಿ ಭೀಮಾರ್ಜುನರಿಂದ ರಹಿತನಾದವನು, ಎಂದರೆ ಭೀಮಾರ್ಜುನರಿಂದ ದೂರದಲ್ಲಿದ್ದವನು ಎಂದರ್ಥ. ದ್ರೋಣರು ಸೇನಾಧಿಪತ್ಯವನ್ನು ವಹಿಸಿಕೊಂಡ ಕ್ಷಣದಿಂದ 'ಭೀಮಾರ್ಜುನರನ್ನು ಧರ್ಮರಾಜನಿಂದ ದೂರಮಾಡಿದರೆ ಧರ್ಮರಾಜನನ್ನು ಜೀವಂತವಾಗಿ ಸೆರೆ ಹಿಡಿಯುತ್ತೇನೆ ಎಂದು ತಿಳಿಸಿದ್ದಾರೆ. ಧರ್ಮರಾಜನು ಸ್ವತಃ ದುರ್ಬಲ. ಭೀಮಾರ್ಜುನರ ಬಲವೇ ಅವನಿಗೆ ಬಲ. ಆದ್ದರಿಂದ ಹೀಗೆ ಮಾಡಿದರೆ ಅವನನ್ನು ಸೆರೆ ಹಿಡಿಯಬಹುದೆಂದು ದ್ರೋಣರ ಎಣಿಕೆ. ಆದರೆ ಭೀಮಾರ್ಜುನರಿಂದ ದೂರಮಾಡಲ್ಪಟ್ಟ ಧರ್ಮರಾಜನನ್ನು ಶೂರರಾದ ಅಶ್ವತ್ಥಾಮಾದಿಗಳು

ಸೆರೆ ಹಿಡಿಯಲಾಗಲಿಲ್ಲ ಎಂಬ ವಾರ್ತೆ ಧೃತರಾಷ್ಟ್ರನಿಗೆ ಬಂದಿದೆ. ಆಗ ಧೃತರಾಷ್ಟ್ರನ ಮಾತಿದು ''ಸ್ವತಃ ಶೂರರೂ ಬಲಿಷ್ಠರೂ ಆದ ಅಶ್ವತ್ಥಾಮಾದಿಗಳು ಸ್ವತಃ ದುರ್ಬಲನಾಗಿಯೂ ಭೀಮಾರ್ಜುನರಿಂದ ರಹಿತನಾಗಿಯೂ ಇರುವ ಧರ್ಮರಾಜನನ್ನು ಸೆರೆ ಹಿಡಿಯಲಾಗಲಿಲ್ಲ ಎಂದಮೇಲೆ ನನಗೆ ಜಯದ ಆಶೆ ಇಲ್ಲ'. ಇದು ಧೃತರಾಷ್ಟ್ರನ ತರ್ಕಬದ್ಧವಾದ ಉಪಪಾದನೆ. ಈ ಶುದ್ಧಪಾಠವನ್ನು ಅರ್ಥಮಾಡಿಕೊಳ್ಳಲಾಗದೆ ಪಾಠವನ್ನೇ ತಿದ್ದಿ ಮೂಲಕಾರರಿಗೆ ಮಾಡಿರುವ ಅಪರಾಧ ಇದು.

ಲಕ್ಷಾಲಂಕಾರದಲ್ಲಿ ಶ್ರೀವಾದಿರಾಜರು ಮೂರನೆಯ ಪಾದದಲ್ಲಿ 'ಶೂನ್ಯಂ' ಎಂಬ ಪದವನ್ನೇ ಹಿಡಿದು ಮೇಲೆ ಹೇಳಿದಂತೆ ವ್ಯಾಖ್ಯಾನ ಮಾಡಿದ್ದಾರೆ. ಇದರಿಂದಲೂ ತಾಳೆಗರಿಗಳ ಪಾಠಗಳು ಎಷ್ಟು ಶುದ್ಧವಾದವು ಎಂದು ತಿಳಿಯುತ್ತದೆ.

೩. **ಉಭೇ ಸಂಧ್ಯೇ ಜಪನ್ ಕಿಂಚಿತ್ ಸದ್ಯೋ ಮುಚ್ಯೇತ ಕಿಲ್ಬಿಷಾತ್ ।**
ಅನುಕ್ರಮಣ್ಯಾ ಯಾವತ್ ಸ್ಯಾದಹ್ನಾ ರಾತ್ರ್ಯಾ ಚ ಸಂಚಿತಮ್ ।
ಭಾರತಸ್ಯ ವಪುರ್ಹ್ಯೇತತ್ ಸತ್ಯಂ ಚಾನೃತಮೇವ ಚ ॥

ಇದೂ ಆದಿಪರ್ವದ ಅನುಕ್ರಮಣಿಕಾಧ್ಯಾಯದಲ್ಲಿ ಕೊನೆಯಲ್ಲಿ ಬರುವ ಒಂದು ಶ್ಲೋಕ. ಮೇಲೆ ತೋರಿಸಿರುವುದು ಮುದ್ರಿತ ಪುಸ್ತಕಗಳಲ್ಲಿ ಕಂಡುಬರುವ ಪಾಠ. ಅನುಕ್ರಮಣಿಕಾಧ್ಯಾಯವನ್ನು ಎರಡು ಸಂಧ್ಯಾಕಾಲದಲ್ಲೂ ಸ್ವಲ್ಪ ಜಪಮಾಡುವವನು ಹಗಲು ಮತ್ತು ರಾತ್ರಿ ಮಾಡಿದ ಪಾಪಗಳಿಂದ ತತ್‌ಕ್ಷಣದಲ್ಲಿ ಮುಕ್ತನಾಗುತ್ತಾನೆ ಎಂದು ಮೊದಲನೆಯ ಎರಡು ಸಾಲುಗಳ ತಾತ್ಪರ್ಯ. ಸತ್ಯ ಮತ್ತು ಅನೃತಗಳು ಭಾರತಗ್ರಂಥದ ಸ್ವರೂಪ ಎಂದು ಮೂರನೆಯ ಸಾಲಿನ ಅರ್ಥ. ಸತ್ಯವನ್ನು ಭಾರತದ ಸ್ವರೂಪವೆಂದು ಹೇಳಬಹುದು. ಆದರೆ ಅನೃತವು ಭಾರತದ ಸ್ವರೂಪವಾಗುವುದು ಹೇಗೆ? ಇದು ಸರಿಯಲ್ಲ ಎಂದು ಯೋಚಿಸಿ ಅನೃತಶಬ್ದವನ್ನು ಅಮೃತ ಎಂದು ತಿದ್ದಿದ್ದಾರೆ. ಸತ್ಯ ಮತ್ತು ಅಮೃತ ಭಾರತದ ಸ್ವರೂಪ ಎಂದು ಸಿದ್ಧಿಸುತ್ತದೆ ಎಂದು ಮನಸ್ಸಿಗೆ ಸಮಾಧಾನವನ್ನು ತಂದುಕೊಂಡರೆ ಆದರೆ ತಾಳೆಗರಿಗಳಲ್ಲಿ ಈ ಶ್ಲೋಕದ ಪಾಠವೇ ಬೇರೆ ರೀತಿಯಾಗಿದೆ.

''ಉಭೇ ಸಂಧ್ಯೇ ಜಪನ್ ಕಿಂಚಿತ್ ಸದ್ಯೋ ಮುಚ್ಯೇತ ಕಿಲ್ಬಿಷಾತ್ ।
ಅನುಕ್ರಾಮಣಮಧ್ಯಾಯಮಹೋರಾತ್ರ್ಯಾ ಚ ಸಂಚಿತಮ್।
ಭಾರತಶ್ರಾವಪುಣ್ಯೇನ ಸತ್ಯಂ ಚಾನೃತಮೇವ ಚ ।
ನವನೀತಂ ಯಥಾ ದಧ್ನ್ಯಃ .. ತಥಾ ಭಾರತಮುಚ್ಯತೇ॥''

ಇನ್ನು ವಾದಿರಾಜರು ಲಕ್ಷಾಲಂಕಾರದಲ್ಲಿ ಹೀಗೆಯೇ ಉದಾಹರಿಸಿ ಮುಂದಿನ ಶ್ಲೋಕದಿಂದ 'ಯಥಾ, ತಥಾ' ಶಬ್ದಗಳನ್ನು ಅನುಕರ್ಷಮಾಡಿ

'ಅನುಕ್ರಮಣಮಧ್ಯಾಯಂ' ಎಂಬ ಶ್ಲೋಕಕ್ಕೆ ಅರ್ಥಮಾಡಬೇಕೆಂದು ತಿಳಿಸಿದ್ದಾರೆ. ಮೂರನೆಯ ಸಾಲಿನಲ್ಲಿ 'ಭಾರತಸ್ಯ ವಪುರ್ಹ್ಯೇತತ್' ಬದಲಾಗಿ 'ಭಾರತಶ್ರಾವ್ಯಪುಣ್ಯೇನ' ಎಂದಿದೆ. ತಾತ್ಪರ್ಯ ಹೀಗೆ — ''ಹಗಲು ಸತ್ಯದೊಡನೆ ಸಂಬದ್ಧವಾಗಿದೆ. ರಾತ್ರಿಯು ಚೌರ್ಯ ಮೊದಲಾದ ಕೃತ್ಯಗಳ ಅವಕಾಶದಿಂದ ಅನೃತದೊಡನೆ ಸಂಬದ್ಧವಾಗಿದೆ. ಹೇಗೆ ಹಗಲು ರಾತ್ರಿಗಳು ಸತ್ಯ, ಅನೃತದೊಡನೆ ಸಂಬದ್ಧವಾಗಿವೆಯೋ, ಹಾಗೆ ಅನುಕ್ರಮಣಿಕಾಧ್ಯಾಯವು ಸಮಗ್ರ ಭಾರತಶ್ರವಣಜನ್ಯ- ಪುಣ್ಯದಿಂದ ಸಂಬದ್ಧವಾಗಿದೆ ಎಂದು ಜ್ಞಾನಿಗಳು ಹೇಳುತ್ತಾರೆ'' ಎಂದು. ಎಂದರೆ ಅನುಕ್ರಮಣಿಕಾಧ್ಯಾಯವನ್ನು ಶ್ರವಣಮಾಡಿದರೆ ಸಮಗ್ರ ಭಾರತವನ್ನು ಶ್ರವಣ ಮಾಡಿದ ಪುಣ್ಯವು ದೊರೆಯುತ್ತದೆ ಎಂದು. ಈ ಅರ್ಥವನ್ನು ತಿಳಿದುಕೊಳ್ಳಲಾಗದೇ ತಪ್ಪು ಪಾಠಗಳನ್ನು ಇಟ್ಟು ಕೊಂಡು ಅರ್ಥಮಾಡಲು ಹೆಣಗಿರುವುದು ಈ ಸಂದರ್ಭದಲ್ಲಿ ಕಂಡು ಬರುತ್ತದೆ.

೪. ಪಾಣೌ ಗೃಹೀತಃ ಪುತ್ರೇತಿ ಕೌರವ್ಯೋ ರೂಪದರ್ಪಿತಃ ।
ವಿಚಿತ್ರವೀರ್ಯೋ ಧರ್ಮಾತ್ಮಾ ಕಾಮಾತ್ಮಾ ಸಮಪದ್ಯತ ॥

ಇದು ಸಂಭವಪರ್ವದಲ್ಲಿ ಬರುವ ಒಂದು ಶ್ಲೋಕ. ಹೀಗೆಯೇ ಮುದ್ರಿತ ಪುಸ್ತಕಗಳಲ್ಲಿ ಕಂಡು ಬರುತ್ತದೆ. ಇದಕ್ಕೆ ಅರ್ಥವನ್ನು ಹೇಳುವುದೇ ಕಷ್ಟ. ಏನು ಹೇಳಿದರೂ ಅಸಂಗತವಾಗುತ್ತದೆ.

'ಪಾಣಿಗೃಹೀತನಾದವನು ಮಗನೆಂದು ಕುರುವಂಶದಲ್ಲಿ ಜನಿಸಿದ ವಿಚಿತ್ರವೀರ್ಯನು ರೂಪದರ್ಪಿತನಾಗಿ ಧರ್ಮಾತ್ಮನಾಗಿದ್ದವನು ಕಾಮಾತ್ಮನಾದನು' ಎಂದು ಅರ್ಥ ತೋರುತ್ತದೆ. ಇದರಲ್ಲಿ ಒಂದಕ್ಕೊಂದು ಸಂಬಂಧವೇ ಇಲ್ಲ. ತಾಳೆಗರಿಗಳಲ್ಲಿರುವ ಪಾಠವನ್ನು ಗಮನಿಸಿ –

ಪಾಣೌ ಗೃಹೀತಃ ಪುತ್ರೇತಿ ವೇದೇ ಚ ಕಥಿತಂ ಭೃಶಮ್।
ಧರ್ಮಂ ಮನಸಿ ಸಂಸ್ಥಾಪ್ಯ ಬ್ರಾಹ್ಮಣಾನ್ ತಾಃ ಸಮಭ್ಯಯುಃ॥

ಇದೂ ಸುಲಭವಾಗಿ ಅರ್ಥವಾಗುವುದಿಲ್ಲ. ವಾದಿರಾಜರು ಲಕ್ಷಾಲಂಕಾರದಲ್ಲಿ ಈ ಶ್ಲೋಕದ ಪಾಠವನ್ನು ಹೀಗೆಯೇ ಹಿಡಿದು ಅರ್ಥವನ್ನು ವಿವರಿಸಿದ್ದಾರೆ.

ಧಾರಾಪೂರ್ವಕವಾಗಿ ಸ್ವೀಕರಿಸಿದ ದತ್ತುಪುತ್ರನೇ ಪಿತೃಗಳನ್ನು ನರಕದಿಂದ ರಕ್ಷಿಸುತ್ತಾನೆ ಎಂದು ವೇದದಲ್ಲಿ ಚೆನ್ನಾಗಿ ಹೇಳಲ್ಪಟ್ಟಿದೆ. ಹೀಗಿರುವಾಗ ಔರಸಪುತ್ರನಿಂದ ಸದ್ಗತಿಯಾಗುವುದರಲ್ಲಿ ಸಂದೇಹವಿಲ್ಲ ಎಂದು ಮನಸ್ಸಿನಲ್ಲಿ ಯೋಚಿಸಿ ತಮ್ಮ ಪತಿಗಳನ್ನು ಕಳೆದುಕೊಂಡ ಕ್ಷತ್ರಿಯ ಸ್ತ್ರೀಯರು ಮಗನನ್ನು ಪಡೆಯುವುದಕ್ಕಾಗಿ ಬ್ರಾಹ್ಮಣರ ಬಳಿಗೆ

ಹೋದರು ಎಂದು ಅರ್ಥ ದೊರೆಯುತ್ತದೆ. ಇದರಲ್ಲಿ ಯಾವ ಅಸಂಗತಿಯೂ ಇಲ್ಲ. ಮುದ್ರಿತಪುಸ್ತಕಗಳ ಪಾಠದಲ್ಲಿ ಪಾಣಿಗೃಹೀತ ಪುತ್ರನಿಗೂ, ರೂಪದರ್ಪಿತನಾದ ವಿಚಿತ್ರವೀರ್ಯನು ಧರ್ಮಾತ್ಮನಾಗಿದ್ದವನು ಕಾಮಾತ್ಮ ನಾಗುವುದಕ್ಕೂ ಯಾವ ಸಂಬಂಧವೂ ಇರುವುದಿಲ್ಲ.

ಇದರಿಂದ ತಾಳೆಗರಿಯ ಪಾಠಗಳು ಎಷ್ಟು ಪ್ರಾಮಾಣಿಕ ಎಂದು ತಿಳಿಯುತ್ತದೆ. ಇಂತಹ ಅನೇಕಾನೇಕ ಉದಾಹರಣೆಗಳನ್ನು ಕೊಡಬಹುದು.

ಲಕ್ಷಾಲಂಕಾರ ವ್ಯಾಖ್ಯಾನದ ಸ್ವಾರಸ್ಯಗಳು

೧. **ತವ ವಾ ನಾಹುಷ ಕುಲೇ ಈಃ ಸ್ತ್ರಿಯಂ ಸ್ಪೃಷ್ಟುಮರ್ಹತಿ** (ಆದಿ 71-20)

ಇದು ಶರ್ಮಿಷ್ಠೆಯು ಯಯಾತಿಗೆ ಹೇಳುವ ಮಾತು. ಯಯಾತಿಯೇ, ನಿಮ್ಮ ಕುಲದಲ್ಲಿ ಯಾವನು ಸ್ತ್ರೀಯನ್ನು ಮುಟ್ಟಬಲ್ಲ ಎಂದು ಅರ್ಥವಾಗುತ್ತದೆ. ವಾದಿರಾಜರು ತವಕುಲೇ ಎಂಬುದಕ್ಕೆ ವಿದ್ಯಮಾನಾಂ ಎಂದು ಅಧ್ಯಾಹಾರವನ್ನು ಮಾಡಿ ನಿನ್ನ ಕುಲದಲ್ಲಿರುವ ಸ್ತ್ರೀಯನ್ನು ಯಾವ ಇನ್ನೊಬ್ಬನು ಮುಟ್ಟಬಲ್ಲ ಎಂದು ಅರ್ಥಮಾಡಿದ್ದಾರೆ. ಹೀಗೆ ಮಾಡದಿದ್ದರೆ ಶ್ಲೋಕದ ಅರ್ಥವು ಅಸಂಗತವಾಗುತ್ತದೆ.

೨. **ಅಪಾಪಾಂ ಪಾಪವರ್ಧಿನೀಮ್** (ಆದಿ 72-18)

ದೇವಯಾನಿಯು ಮದ್ಯಪಾನವನ್ನು ಮಾಡಿ ಯಯಾತಿಯನ್ನು ನಿಂದಿಸುತ್ತಿರುವಾಗ ಯಯಾತಿಯು ಅವಳನ್ನು ಗದರಿಸುವ ಸಂದರ್ಭದಲ್ಲಿ ಈ ಮಾತು ಬಂದಿದೆ. ಪಾಪವಿಲ್ಲದವಳು ಮತ್ತು ಹೆಚ್ಚುಪಾಪವನ್ನು ಸಂಪಾದನೆ ಮಾಡುತ್ತಿರುವವಳು ಎಂದು ಅರ್ಥವಾಗುತ್ತದೆ. ಇದು ವ್ಯಾಹತ. ಆದ್ದರಿಂದ ರಾಜರು, ಸ್ವಾಭಾವಿಕವಾಗಿ ಪಾಪವಿಲ್ಲದವಳು ಆದರೆ ಮದ್ಯಪಾನದಿಂದುಂಟಾದ ಭ್ರಾಂತಿಯಿಂದ ಪತಿಯನ್ನು ನಿಂದಿಸಿ ಅಧಿಕ ಪಾಪವನ್ನು ಸಂಪಾದನೆ ಮಾಡುತ್ತಿರುವವಳು ಎಂದು ಅರ್ಥಮಾಡಿ ವಿರೋಧವನ್ನು ಪರಿಹರಿಸಿದ್ದಾರೆ.

೩. **ಸ ಚೋಡುಪ್ಲವಸಂತಾರಸ್ತತ್ರನಿತ್ಯಂ ಭವಿಷ್ಯಸಿ** (ಆದಿ 73-12)

ಇದು ಯಯಾತಿಯು ತುರ್ವಸುವಿಗೆ ಶಾಪವನ್ನು ಕೊಡುತ್ತಾ ಹೇಳುವ ಮಾತು. ಉಡು ಎಂದರೆ ನಕ್ಷತ್ರ. ಪ್ಲವ ಎಂದರೆ ದೋಣಿ. ಆದ್ದರಿಂದ ಉಡುಪ್ಲವ ಶಬ್ದವು ಪರಸ್ಪರ ಅನನ್ವಿತವಾಗಿ ಕಾಣುತ್ತದೆ. ಅದಕ್ಕೆ ರಾಜರು, ಉಡುವತ್ ಎಂದು ಲುಪ್ತೋಪಮೆಯನ್ನು ಮಾಡಿ ಉಡುವಿನಂತೆ ಎಂದರೆ ನಕ್ಷತ್ರದಂತೆ ಅಲ್ಲಿಂದಿಲ್ಲಿಗೆ ಸಾಗುವ ದೋಣಿಯನ್ನು ನಡೆಸುವವನಾಗುತ್ತೀಯೆ ಎಂದು ಅರ್ಥಮಾಡಿ ಅನನ್ವಯವನ್ನು ಪರಿಹಾರಮಾಡಿದ್ದಾರೆ.

೪. **ವೇದೋಕ್ತಂ ಸಂಭವಂ ಮಹ್ಯಮನೇನ**
ಹೃದಯೋದ್ಭವಮ್ ತಸ್ಯ ಜಾತಮಿದಂ ಕೃತ್ಸ್ನಂ (ಆದಿ 74-25)

ಇದು ಯಯಾತಿಯು ತನ್ನ ಮಾತನ್ನು ಕೇಳಿದ ಪುರುವಿಗೆ ಆಶೀರ್ವಾದ ಮಾಡುತ್ತಾ ಹೇಳುವ ಮಾತು. ಈ ಶ್ಲೋಕದ ಅರ್ಥವೇ ತಿಳಿಯುವುದಿಲ್ಲ. ಅದಕ್ಕಾಗಿ ರಾಜರು ಹೀಗೆ ಅರ್ಥಮಾಡುತ್ತಾರೆ. ಸಂಭವ ಎಂಬುದು ಬಹುವ್ರೀಹಿ ಸಮಾಸ. ಯಾವುದರಿಂದ ಸಮೀಚೀನವಾದ ಏಳಿಗೆ ಉಂಟಾಗುತ್ತದೆಯೋ ಅದು ಸಂಭವ. ಅದು ಯಾವುದೆಂದರೆ ವೇದೋಕ್ತವಾದ ಯಾಗಾದಿರೂಪವಾದ ಕರ್ಮ. ಹೃದಯೋದ್ಭವ ಎಂದರೆ ಕಾಮ, ರತಿಸುಖೇಚ್ಛಾ ಎಂದು ಅರ್ಥ. ಪೂರುವು ತನ್ನ ಯೌವನವನ್ನು ಕೊಟ್ಟದುದರಿಂದ ನಾನು ವೇದೋಕ್ತವಾದ ಅನೇಕ ಯಜ್ಞಗಳನ್ನು ಮಾಡಿದೆ ಮತ್ತು ಕಾಮತೃಪ್ತಿಯನ್ನು ಪಡೆದೆ ಎಂದು ಅರ್ಥಮಾಡಿ ಎಲ್ಲವನ್ನೂ ಸಮಂಜಸವನ್ನಾಗಿ ಮಾಡಿದ್ದಾರೆ.

೫. **ಪ್ರತಿಕೂಲಂ ಕರ್ಮಣಾಂ ಪಾಪಮಾಹುಃ ।**
ತದ್ವರ್ತನೇ ಪ್ರಾಪಣೇ ಪಾಪಲೋಕ್ಯಮ್ ॥ (ಆದಿ 78-4)

ಇದು ಯಯಾತಿಯು ಅಷ್ಟಕನೊಡನೆ ಸಂವಾದಮಾಡುತ್ತಾ ಹೇಳುವ ಒಂದು ಮಾತು. ಸಾಹಿತ್ಯ ವ್ಯುತ್ಪತ್ತಿಯಿಂದ ಈ ಶ್ಲೋಕಕ್ಕೆ ಯಾವ ಅರ್ಥವನ್ನೂ ಹೇಳಲು ಸಾಧ್ಯವಿಲ್ಲ. ರಾಜರು ಒಗಟನ್ನು ಬಿಡಿಸಿದಂತೆ ಈ ಮಾತನ್ನು ಬಿಡಿಸುತ್ತಾರೆ. ಪಾಪಲೋಕ್ಯಂ = ಪಾಪಲೋಕ ಎಂದರೆ ನರಕಲೋಕ ಸಂಬಂಧಿಯಾದ ಎಂದರೆ ನರಕಸಾಧನವಾದ, ಪಾಪಂ = ಪಾಪವನ್ನು, ತದ್ವರ್ತನೇ = ಹಿಂದಿನ ಪ್ರಕರಣದಲ್ಲಿ ಪ್ರಸ್ತುತವಾದ ಸತ್ಕರ್ಮಗಳ ಪ್ರವರ್ತನೆಯ ವಿಷಯದಲ್ಲಿ ಮತ್ತು ಪ್ರಾಪಣೇ = ಸತ್ಕರ್ಮಫಲವಾದ ಸ್ವರ್ಗಾದಿ ಪ್ರಾಪ್ತಿಯ ವಿಷಯದಲ್ಲಿ, ಪ್ರತಿಕೂಲಂ = ಪ್ರತಿಬಂಧಕವಾದುದೆಂದು, ಆಹುಃ = ಜ್ಞಾನಿಗಳು ಹೇಳುತ್ತಾರೆ. ಹೀಗೆ ಮಾತನ್ನು ಬಿಡಿಸದಿದ್ದರೆ ಶ್ಲೋಕವು ಅಸಂಗತವಾಗಿ ಕಾಣುತ್ತಿತ್ತು.

೬. **ರೇತೋಧಾಃ ಪುತ್ರಂ ನಯತಿ ನರದೇವ ಯಮಕ್ಷಯಮ್** (ಆದಿ 93-6)

ಇದು ದೇವತೆಗಳು ದುಷ್ಷಂತನನ್ನು ಕುರಿತು ಹೇಳುವ ಮಾತು. ಮೇಲೆ ತೋರುವ ಅನ್ವಯದಂತೆ ಎಲೈ ರಾಜನೇ, ಗರ್ಭಾಧಾನವನ್ನು ಮಾಡಿದವನು ಮಗನನ್ನು ಯಮಲೋಕಕ್ಕೆ ಕರೆದುಕೊಂಡು ಹೋಗುತ್ತಾನೆ ಎಂದು ಅರ್ಥವಾಗುತ್ತದೆ. ಇದು ಸರ್ವಶಾಸ್ತ್ರವಿರುದ್ಧವಾದ ಅರ್ಥ. ಅದಕ್ಕಾಗಿ ರಾಜರು, ರೇತೋಧಾಃ, ಪುತ್ರಂ ಎಂಬ ಎರಡು ಪದಗಳಲ್ಲಿರುವ ವಿಭಕ್ತಿಯನ್ನು ವಿನಿಮಯಮಾಡಿ ರೇತೋಧಾತಾರಂ, ಪುತ್ರಃ ಎಂದು ತೆಗೆದುಕೊಳ್ಳಬೇಕು, ಹಾಗೆಯೇ ಯಮಕ್ಷಯಮ್ ಎಂಬಲ್ಲಿ ಯಮ್

ಅಕ್ಷಯಮ್ ಎಂದು ಪದಚ್ಛೇದ ಎಂದು ತಿಳಿಸಿ ಶಾಸ್ತ್ರಸಮ್ಮತರೀತಿಯಲ್ಲಿ ಜನಿಸಿದ ಪುತ್ರನು ತನ್ನ ತಂದೆಗೆ ಅಕ್ಷಯಲೋಕ ಪ್ರಾಪ್ತಿಯನ್ನು ಉಂಟುಮಾಡುತ್ತಾನೆ ಎಂದು ಹೇಳಿ ಎಲ್ಲಾ ವಿರೋಧವನ್ನೂ ಪರಿಹಾರ ಮಾಡಿದ್ದಾರೆ.

೭. ಗಂಗಾದ್ವಾರೇ ವಿಭಜನಂ ಭವಿತಾ ನಚಿರಾದಿವ (ಆದಿ 102-21)

ಇದು ಋಚೀಕರು ದ್ರುಪದನ ಪುತ್ರನಾದ ಶಿಖಂಡಿಯನ್ನು ಕುರಿತು ಹೇಳುವ ಮಾತು. ವಿಭಜನಂ ಎಂಬ ಶಬ್ದಕ್ಕೆ ವಿಭಾಗ ಎಂದು ಕೋಶದಲ್ಲಿ ಸಿಗುವ ಅರ್ಥ. ಆ ಅರ್ಥದಿಂದ ಇಲ್ಲಿ ಏನೂ ಉಪಯೋಗವಿಲ್ಲ. ಆದ್ದರಿಂದ ರಾಜರು, ವಿಭಜನ ಎಂಬ ಶಬ್ದಕ್ಕೆ ವಿನಮಯ ಎಂದು ಅರ್ಥಮಾಡಿದ್ದಾರೆ. ತಮ್ಮಲ್ಲಿದ್ದ ಪದಾರ್ಥವನ್ನು ಕೊಟ್ಟು ತೆಗೆದುಕೊಂಡವರಿಂದ ಇನ್ನೊಂದು ವಸ್ತುವನ್ನು ಸ್ವೀಕರಿಸುವುದು ವಿನಿಮಯ. ಅದೇ ಇಲ್ಲಿ ವಿಭಜನ ಶಬ್ದಾರ್ಥ. ಅಲ್ಲಿ ಬರುವ ಗಂಧರ್ವರಾಜನಾದ ತುಂಬುರುವಿಗೆ ನಿನ್ನ ಸ್ತ್ರೀತ್ವವನ್ನು ಕೊಟ್ಟು ಅವನಿಂದ ಪುಂಸ್ತ್ವವನ್ನು ಪಡೆ ಎಂದು ಅಭಿಪ್ರಾಯ. ಹೀಗೆ ತಿಳಿಸಿ ಅನನ್ವಯದೋಷವನ್ನು ಪರಿಹಾರಮಾಡಿದ್ದಾರೆ.

೮. ಪಾಣೌ ಗೃಹೀತಃ ಪುತ್ರೇತಿ ವೇದೇ ಚ ಕಥಿತಂ ಭೃಶಮ್

(ಆದಿ 104-10)

ಇದು ಭೀಷ್ಮ ಸತ್ಯವತೀ ಸಂವಾದದಲ್ಲಿ ಬಂದ ಒಂದು ವಚನ. ಪಾಣಿಗ್ರಹಣ ಮಾಡಿಕೊಂಡವನು ಪುತ್ರನೆನಿಸುತ್ತಾನೆ ಎಂದು ವೇದದಲ್ಲಿ ಹೇಳಲ್ಪಟ್ಟಿದೆ ಎಂದು ಅರ್ಥವಾಗುತ್ತದೆ. ಇದು ಅಸಂಗತ. ರಾಜರು ಅರ್ಥವನ್ನು ಬಿಡಿಸಿ ಧಾರಾಪೂರ್ವಕವಾಗಿ ಪಾಣಿಯಿಂದ ಸ್ವೀಕರಿಸಿದ ದತ್ತಪುತ್ರನೂ ನರಕದಿಂದ ದಾಟಿಸುವವನಾಗುತ್ತಾನೆ. ಹೀಗಿರುವಾಗ ಔರಸಪುತ್ರನು ನರಕದಿಂದ ಉದ್ಧಾರ ಮಾಡುವುದರಲ್ಲಿ ಯಾವ ಸಂಶಯವಿದೆ ಎಂದು ಸ್ಪಷ್ಟಪಡಿಸುತ್ತಾರೆ.

೯. ಸ್ವಾಂ ತು ಧಾತ್ರೇಯಿಕಾಂ ತಸ್ಮೈ ವೃದ್ಧಾಯ ಪ್ರಾಹಿಣೋತ್ ತದಾ

(ಆದಿ 104-40)

ಇದೂ ಭೀಷ್ಮರ ವಚನ. ಬಲಿ ಎಂಬ ರಾಜನ ಪತ್ನಿಯಾದ ಸುದೇಷ್ಣೆಯು ನಿಯೋಗಪದ್ಧತಿಗೆ ಅನುಸಾರವಾಗಿ ತಾನು ದೀರ್ಘತಮಸ್ ಮುನಿಗಳ ಬಳಿಗೆ ಹೋಗದೆ, ಅವರು ಅಂಧರು ಮತ್ತು ವೃದ್ಧರೆಂದು ತಾನು ಇಷ್ಟಪಡದೆ ತನ್ನ ಧಾತ್ರೇಯಿಕೆಯನ್ನು ಕಳುಹಿಸಿದಳು ಎಂದು ಅರ್ಥ. ಧಾತ್ರೇಯಿಕೆ ಶಬ್ದಕ್ಕೆ ಎಲ್ಲರೂ ಧಾತ್ರೀ (ದಾದಿ) ಎಂದೇ ಅರ್ಥ ಮಾಡಿದ್ದಾರೆ. ರಾಜರು, ಧಾತ್ರಿಯ ಮಗಳು ಧಾತ್ರೇಯಿಕೆ ಎಂದು ಹೇಳಿ ಸ್ಪಷ್ಟಪಡಿಸಿದ್ದಾರೆ.

೧೦. **ಉತ್ತಿಷ್ಠನ್ಪ್ರವೀದೇನಾಂ ತ್ವಂ ಭುಜಿಷ್ಯಾ ಭವಿಷ್ಯಸಿ** (ಆದಿ 108-39).

ವ್ಯಾಸರು ಅಂಬಿಕೆಯ ದಾಸಿಯ ಶಯನದಿಂದ ಏಳುತ್ತಾ ನೀನು ಭುಜಿಷ್ಯೆಯಾಗುತ್ತೀಯೆ ಎಂದು ಹೇಳಿದರು ಎಂದು ಅರ್ಥ. ಭುಜಿಷ್ಯಾ ಎಂದರೆ ದಾಸಿ ಎಂದು ಅರ್ಥ. ಅವಳು ಈಗಲೇ ದಾಸಿಯಾಗಿದ್ದಾಳೆ. ಆದ್ದರಿಂದ ನೀನು ದಾಸಿಯಾಗುವಿ ಎಂಬ ಅರ್ಥವು ಅಸಂಗತವಾದುದು. ಅದಕ್ಕಾಗಿ ರಾಜರು, ಪ್ರಮಾಣವನ್ನು ಉದಾಹರಿಸಿ ದಾಸಿಯಾಗಿದ್ದವಳು ರಾಜನಿಂದ ಪುತ್ರಜನ್ಮವನ್ನು ಪಡೆದರೆ ಅವಳು ಭುಜಿಷ್ಯೆ ಎನಿಸುತ್ತಾಳೆ. ಭುಜಿಷ್ಯೆಯಾದ ಮೇಲೆ ಅವಳು ಪುನಃ ದಾಸಿಯಾಗಿರುವುದಿಲ್ಲ ಎಂಬ ಸೂಕ್ಷ್ಮ ಪ್ರಮೇಯವನ್ನು ತಿಳಿಸಿದ್ದಾರೆ.

೧೧. **ಯುವಾಭ್ಯಾಂ ದುಷ್ಕರಂ ಮೈತತ್ ವದಂತಿ ದ್ವಿಜಪುಂಗವಾಃ**

(ಆದಿ 121-72)

ಇದು ಪಾಂಡುವು ಮೃತನಾದಾಗ ಋಷಿಗಳು ಕುಂತೀ ಮತ್ತು ಮಾದ್ರಿಯರನ್ನು ಉದ್ದೇಶಿಸಿ ಹೇಳುವ ಮಾತು. ನೀವಿಬ್ಬರೂ ಸಹಗಮನಮಾಡಲು ಸಾಧ್ಯವಿಲ್ಲ ಎಂದು ಬ್ರಾಹ್ಮಣರು ಹೇಳುತ್ತಾರೆ ಎಂದು ಅರ್ಥವಾಗುತ್ತದೆ. ಆದರೆ ಆ ಅರ್ಥ ಸರಿಯಲ್ಲ, ಇಬ್ಬರೂ ಸಹಗಮನವನ್ನು ಮಾಡಲು ಸ್ಪರ್ಧಿಸುತ್ತಿದ್ದಾರೆ. ಆದ್ದರಿಂದ ದುಷ್ಕರ ಶಬ್ದಕ್ಕೆ ಅಸಾಧ್ಯ ಎಂದು ಅರ್ಥವಲ್ಲ. ಮಾಡಬಾರದು ಎಂದಿಷ್ಟೇ ಅರ್ಥ. ದೇವತಾಕಾರ್ಯವು ಇನ್ನೂ ಉಳಿದಿರುವುದರಿಂದ ನೀವಿಬ್ಬರೂ ಸಹಗಮನ ಮಾಡಬಾರದು (ಮಾದ್ರಿಯು ಮಾತ್ರ ಸಹಗಮನವನ್ನು ಮಾಡಲಿ) ಎಂದು ಬ್ರಾಹ್ಮಣರ ಅಭಿಪ್ರಾಯವೆಂದು ಋಷಿಗಳು ತಿಳಿಸುತ್ತಾರೆಂದು ರಾಜರು ವ್ಯಾಖ್ಯಾನ ಮಾಡುತ್ತಾರೆ.

೧೨. **ಸಶೇಷತ್ವಾನ್ನಸಂಪ್ರಾಪ್ತೋ ಜಲೇ ಶೂಲಾನಿ ಪಾಂಡವಃ**

(ಆದಿ 126-24)

ಗಂಗಾನದಿಯಲ್ಲಿ ಶೂಲಗಳನ್ನು ನೆಟ್ಟು ಭೀಮಸೇನನನ್ನು ಉಕ್ಕಿನ ಹಗ್ಗಗಳಿಂದ ಬಿಗಿದು ದುರ್ಯೋಧನನು ಪ್ರಮಾಣಕೋಟಿ ಮಡುವಿನಲ್ಲಿ ಕೆಡವಿದನು. ಆದರೆ, 'ಸಶೇಷತ್ವಾತ್' ಭೀಮಸೇನನು ಶೂಲಗಳನ್ನು ತಲುಪಲಿಲ್ಲ ಎಂದು ಅರ್ಥ. ಇಲ್ಲಿ ಸಶೇಷತ್ವಾತ್ ಎಂದರೆ ಏನು ಅರ್ಥ, ಶೂಲವನ್ನು ತಲುಪದೆ ಇರುವುದಕ್ಕೆ ಅದು ಹೇಗೆ ಕಾರಣ ಎಂದು ತಿಳಿಯುವುದಿಲ್ಲ. ರಾಜರು ಅರ್ಥವನ್ನು ಸ್ಪಷ್ಟಪಡಿಸುತ್ತಾರೆ. ಪ್ರಮಾಣಕೋಟಿಯು ಬಹಳ ಆಳವಾದ ಮಡು. ದೋಣಿಯಲ್ಲಿ ಕರೆದುಕೊಂಡು ಹೋಗಿ ಭೀಮಸೇನನನ್ನು ಅಲ್ಲಿ ಎತ್ತಿ ಹಾಕಿದರೂ ಭೀಮಸೇನನು ಬಿದ್ದಸ್ಥಳಕ್ಕೂ ಮತ್ತು ಶೂಲಗಳ ತುದಿ ಇದ್ದ ಸ್ಥಳಕ್ಕೂ ಮಧ್ಯೆ ಅಪಾರಜಲರಾಶಿ (ಜಲಶೇಷ) ಇದ್ದುದರಿಂದ ಶೂಲಗಳನ್ನು ತಲುಪುವುದಕ್ಕಿಂತ

ಮುಂಚೆಯೇ ಭೀಮಸೇನನು ಎಚ್ಚರಗೊಂಡು ತನ್ನ ಬಂಧನಗಳನ್ನು ಕಡಿದು ಹಾಕಿ ಮೇಲೆ ಬಂದನು ಎಂದು ಅಭಿಪ್ರಾಯ.

೧೩. ಹತಂ ಸರ್ಪವಿಷೇಣಾಶು ಸ್ಥಾವರಂ ಜಂಗಮೇನ ತು

(ಆದಿ 128-28)

ಇದೂ ಮೇಲಿನ ಪ್ರಸಂಗದಲ್ಲಿಯೇ ಬಂದಿರುವ ಇನ್ನೊಂದು ವಚನ. ಜಂಗಮವಾದ ಸರ್ಪವಿಷದಿಂದ ಸ್ಥಾವರವು ಹತವಾಯಿತು ಎಂದು ಅರ್ಥ. ಏನೂ ಸ್ಪಷ್ಟವಾಗುವುದಿಲ್ಲ. ಅದಕ್ಕಾಗಿ ರಾಜರು ಅರ್ಥವನ್ನು ಬಿಡಿಸುತ್ತಾರೆ. ಇದು ಭೀಮಸೇನನಿಗೆ ವಿಷದ ಲಡ್ಡುಗೆಗಳನ್ನು ತಿನ್ನಿಸಿ ಅವನನ್ನು ಪ್ರಜ್ಞಾಶೂನ್ಯನನ್ನಾಗಿ ಮಾಡಿ ಇನ್ನೊಮ್ಮೆ ಗಂಗೆಯಲ್ಲಿ ಮುಳುಗಿಸಿದಾಗ ನಡೆದ ಘಟನೆ. ಲಡ್ಡುಗೆಗಳ ವಿಷವು ಭೀಮಸೇನನ ಶರೀರದಲ್ಲೆಲ್ಲಾ ವ್ಯಾಪಿಸಿತ್ತು. ಅವನು ಹಾಗೆಯೇ ಗಂಗೆಯ ತಳಕ್ಕೆ ಹೋದಾಗ ನಾಗಲೋಕದ ಸರ್ಪಗಳು ಅವನನ್ನು ಕಚ್ಚಿದವು. ಆದರೆ ಭೀಮಸೇನನು ನಿರ್ವಿಷನಾಗಿ ಎಚ್ಚರಗೊಂಡನು. ಭೀಮಸೇನನ ಶರೀರದಲ್ಲಿದ್ದ ವಿಷ ಸ್ಥಾವರ ವಿಷ. ಸರ್ಪಗಳು ಕಡಿದುದರಿಂದ ಅವನ ದೇಹಕ್ಕೆ ಬಂದ ವಿಷ ಜಂಗಮ ವಿಷ. ಮುಳ್ಳಿನಿಂದ ಮುಳ್ಳನ್ನು ತೆಗೆದಂತೆ ಅವೆರಡು ವಿಷಗಳೂ ಪರಸ್ಪರವಾಗಿ ಪ್ರತಿಕ್ರಿಯಿಸಿ ತಮ್ಮ ವಿಷಶಕ್ತಿಯನ್ನು ಕಳೆದುಕೊಂಡವು. ಆದ್ದರಿಂದ ನಿರ್ವಿಷನಾದ ಭೀಮಸೇನನು ಮೇಲೆದ್ದು ಬಂದ ಎಂದು ಅಭಿಪ್ರಾಯವನ್ನು ತಿಳಿಸಿ ಆದ್ದರಿಂದ ಭೀಮಸೇನನಿಗೆ ದುರ್ಜರವಾದ ವಿಷವನ್ನು ಜೀರ್ಣಿಸಿಕೊಳ್ಳುವುದು ಮತ್ತು ನಿರ್ಜರರ ಅಧಿಪತಿಯಾಗಿರುವುದು ಏನು ಆಶ್ಚರ್ಯವೆಂದು ರಾಜರು ಭೀಮಸೇನನ ಚರ್ಯೆಗೆ ತಮ್ಮ ದುಡ್ಡುಗೆಯನ್ನು ಸೂಚಿಸುತ್ತಾರೆ.

೧೪. ಓಷಧೀಭಿರ್ವನಘ್ನೀಭಿಃ ಸುಗಂಧೀಭಿರ್ವಿಭೂಷಿತಃ । (ಆದಿ 126-57)

ಇದೂ ಮೇಲಿನ ಸಂದರ್ಭದಲ್ಲಿಯೇ ಬಂದಿರುವ ವಚನ. ಭೀಮಸೇನನು ನಾಗಲೋಕದಲ್ಲಿ ಸುಗಂಧಯುಕ್ತವಾದ ಓಷಧಿಗಳಿಂದ ಅಲಂಕರಿಸಲ್ಪಟ್ಟನು ಎಂದು ಅರ್ಥ. ಆದರೆ, ಇಲ್ಲಿ ಓಷಧೀಭಿಃ ಎಂಬ ಶಬ್ದಕ್ಕೆ ವನಘ್ನೀಭಿಃ ಎಂದು ವಿಶೇಷಣವಿದೆ. ವನಘ್ನೀಭಿಃ ಎಂಬ ಶಬ್ದಕ್ಕೆ ಪಾಪವನ್ನು ನಾಶಮಾಡುವ ಎಂಬ ಅರ್ಥವು ಸಹಜವಾಗಿ ತೋರುತ್ತದೆ. ಆದರೆ ಅದು ಇಲ್ಲಿ ಸಂಗತವಾಗುವುದಿಲ್ಲ. ಆದ್ದರಿಂದ ರಾಜರು ಅರ್ಥವನ್ನು ಬಿಡಿಸುತ್ತಾರೆ. ವನಘ್ನೀಭಿಃ ಎಂಬಲ್ಲಿರುವ ಘ್ನೀ ಎಂಬ ಭಾಗವು 'ಹನ ಹಿಂಸಾಗತ್ಯೋಃ' ಎಂಬ ಧಾತುವಿನಿಂದ ನಿಷ್ಪನ್ನವಾಗಿದೆ. ಹನ ಎಂದರೆ ಕೊಲ್ಲು, ನಾಶಮಾಡು ಎಂಬ ಅರ್ಥವಿದೆ. ಅದನ್ನು ತೆಗೆದುಕೊಂಡು ನಮಗೆ ಸಂಶಯವು ಬರುತ್ತದೆ. ಅದಕ್ಕಾಗಿ ರಾಜರು ಹನ ಧಾತುವಿಗೆ ಇರುವ ಗತ್ಯರ್ಥವನ್ನು ವ್ಯಾಪಿಸುತ್ತಾರೆ. ವನಘ್ನೀಭಿಃ ಎಂದರೆ ವನದಲ್ಲಿರುವ

(ಓಷಧಿಗಳಿಂದ) ಎಂದು ಅರ್ಥ. ಈ ಅರ್ಥದಲ್ಲಿ ಯಾವ ಅನುಪಪತ್ತಿಯೂ ಇಲ್ಲ. ಹೀಗೆ ಶಬ್ದದ ಮೂಲರೂಪಕ್ಕೆ ಹೋಗಿ ಸಹಜವಾದ ಅರ್ಥವನ್ನು ಹೇಳುವುದು ರಾಜರ ಪದ್ಧತಿ. ಇದನ್ನು ತಾವು ಶ್ರೀಮದಾಚಾರ್ಯರಿಂದ ಕಲಿತೆವೆಂದು ಅವರು ವಿನಯದಿಂದ ಹೇಳಿಕೊಳ್ಳುತ್ತಾರೆ.

೧೫. ತದೃಷಿದ್ರೋಣ ಆದಧತ್ (ಆದಿ 128-5)

ಇದು ದ್ರೋಣರ ಉತ್ಪತ್ತಿಯ ಸಮಯದಲ್ಲಿ ಬಂದ ಒಂದು ವಚನ. ಭರದ್ವಾಜರು ಘೃತಾಚಿಯನ್ನು ನೋಡಿ ರೇತಃಸ್ಖಲನವನ್ನು ಹೊಂದಿ ಆ ರೇತಸ್ಸನ್ನು ಒಂದು ದೊನ್ನೆಯಲ್ಲಿ ಹಿಡಿದರು ಎಂದು ಎಲ್ಲರೂ ಅರ್ಥವನ್ನು ಹೇಳುತ್ತಾರೆ. ಆದರೆ ರಾಜರು ಇಲ್ಲಿ ದ್ರೋಣಶಬ್ದಕ್ಕೆ ದೊನ್ನೆ ಎಂದು ಅರ್ಥವಲ್ಲ. ಅದೊಂದು ಪರಿಮಾಣ (ಅಳತೆ) ವಾಚಕಶಬ್ದ. ದ್ರೋಣೋ ವ್ರೀಹಿಃ ಮುಂತಾದ ಪ್ರಯೋಗಗಳು ಪ್ರಸಿದ್ಧವಾಗಿವೆ. ಆದ್ದರಿಂದ ದ್ರೋಣ ಪರಿಮಾಣದ ತಮ್ಮ ಕಲಶದಲ್ಲಿ ಆ ವೀರ್ಯವನ್ನು ಹಿಡಿದರು ಎಂದು ಅರ್ಥ ಎಂದು ಹೊಸದೊಂದು ಪ್ರಮೇಯವನ್ನು ರಾಜರು ತಿಳಿಸಿದ್ದಾರೆ.

೧೬. ಭುಕ್ತವಾನೇವ ಕೌಂತೇಯಃ (131-4)

ಒಮ್ಮೆ ದ್ರೋಣರ ಪತ್ನಿಯು ರಾತ್ರಿ ಅರ್ಜುನನಿಗೆ ಊಟವನ್ನು ಬಡಿಸುತ್ತಿದ್ದಾಗ ದೀಪವು ನಂದಿಹೋಯಿತು. ತನ್ನ ಹಸ್ತದ ಪ್ರಕಾಶದಿಂದ ಅರ್ಜುನನು ಭೋಜನವನ್ನು ಮುಂದುವರಿಸಿದನು ಎಂದು ಮೂಲಶ್ಲೋಕದಿಂದ ತಿಳಿದುಬರುತ್ತದೆ. ಬೆಳಕಿಲ್ಲದಿದ್ದರೂ ಹಸ್ತವು ತಪ್ಪದೇ ಬಾಯಿಗೇ ತುತ್ತನ್ನು ಇಡುವಂತೆ ಅಭ್ಯಾಸದಿಂದ ಬೆಳಕಿಲ್ಲದಿದ್ದರೂ ಬಾಣಪ್ರಯೋಗವನ್ನು ಮಾಡಬಹುದೆಂದು ತಿಳಿದು ಅರ್ಜುನನು ರಾತ್ರಿಕಾಲದಲ್ಲಿಯೂ ಧನುರ್ವಿದ್ಯೆಯನ್ನು ಅಭ್ಯಾಸಮಾಡಿದ ಎಂಬುದು ಒಂದು ಪ್ರಮೇಯ. ರಾಜರು ಇನ್ನೊಂದು ರಹಸ್ಯವನ್ನು ಇಲ್ಲಿ ತಿಳಿಸುತ್ತಾರೆ. ಅರ್ಜುನನು ಸತತವಾಗಿ ಬಾಣಪ್ರಯೋಗವನ್ನು ಮಾಡುವುದರಿಂದ ಅವನ ಹಸ್ತವೇ ಹೊಳೆಯುತ್ತಿತ್ತು. ಆದ್ದರಿಂದಲೇ ದೀಪವಿಲ್ಲದೆ ಊಟಮಾಡಬಾರದೆಂಬ ನಿಯಮವನ್ನು ತಿಳಿದಿದ್ದರೂ ಸಹ ಅರ್ಜುನನು ತನ್ನ ಹಸ್ತದ ಪ್ರಕಾಶವೇ ಇರುವುದರಿಂದ ಭೋಜನವನ್ನು ಮುಂದುವರೆಸಿದನು. ಇದನ್ನು ಗಮನಿಸಿದ ದ್ರೋಣರು ತಮ್ಮ ಪತ್ನಿಗೆ ಇನ್ನು ಮುಂದೆ ಎಂದೂ ಅರ್ಜುನನಿಗೆ ಕತ್ತಲಿನಲ್ಲಿ ಬಡಿಸಬಾರದು ಎಂದು ಅಪ್ಪಣೆ ಮಾಡಿದರು. ಏಕೆಂದರೆ ಕತ್ತಲಿನಲ್ಲಿ ಯಾರಾದರೂ ಅರ್ಜುನನ ಕೈಯನ್ನು ಗಮನಿಸಿದರೆ ಅದರ ಪ್ರಕಾಶವನ್ನು ನೋಡಿ ಅರ್ಜುನನಿಗೆ ದೃಷ್ಟಿದೋಷವು ತಗುಲಬಹುದು. ಹಾಗಾಗದಿರಲಿ ಎಂಬ ಅಭಿಪ್ರಾಯದಿಂದ ದ್ರೋಣರು ಹೀಗೆ ಅಪ್ಪಣೆ ಮಾಡಿದರೆಂದು ರಾಜರು ತಿಳಿಸುತ್ತಾರೆ.

೧೭. ಸೌತ್ರಾಮಣಿಂ ತು ತಾಂ ಪತ್ನೀಂ ತತಃ ಕಾಲೇಽಭ್ಯಧಾತ್ ತದಾ

(ಆದಿ 138-48)

ಯಾಜೋಪಯಾಜರು ದ್ರುಪದನ ಸಲುವಾಗಿ ಯಾಗವನ್ನು ಮಾಡಿ ಯಾಗಾವಸಾನದಲ್ಲಿ ಪತ್ನಿಗೆ ಹವಿರ್ಭಾಗವನ್ನು ಕೊಡಲು ದ್ರುಪದನ ಪತ್ನಿಯನ್ನು ಆಹ್ವಾನಿಸಿದರು. ಅವಳು ಸರ್ವಾಲಂಕಾರ ಭೂಷಿತಳಾಗಿದ್ದಳೆಂದು ತಿಳಿಸಬೇಕಾಗಿದೆ. ಅದಕ್ಕೆ ವ್ಯಾಸರು ಅಪ್ರಸಿದ್ಧವಾದ ಸೌತ್ರಾಮಣಿ ಎಂಬ ಶಬ್ದವನ್ನು ಬಳಸಿದ್ದಾರೆ. ಸೂತ್ರಗಳಿಂದ ಪೋಣಿಸಿದ, ಮಣಿಗಳಿಂದ ಅಲಂಕೃತಳಾದವಳು ಎಂಬ ಅರ್ಥವೇನೋ ಆ ಶಬ್ದದಿಂದ ಬರುತ್ತದೆ. ಆದರೆ, ವ್ಯಾಸರು ಏಕೆ ಇಂತಹ ಅಪ್ರಸಿದ್ಧವಾದ ಶಬ್ದವನ್ನು ಪ್ರಯೋಗಿಸಿದ್ದಾರೆ ಎಂದು ತಿಳಿಯುವುದಿಲ್ಲ. ಅದನ್ನು ರಾಜರು ಸ್ಪಷ್ಟಪಡಿಸುತ್ತಾರೆ. ಅವಳನ್ನು ಆಹ್ವಾನ ಮಾಡಿದಾಗ ಅವಳು 'ನಾನು ಇನ್ನೂ ಮುಖಕ್ಕೆ ಲೇಪನವನ್ನು ಮಾಡಿಕೊಂಡಿಲ್ಲ, ಸುಗಂಧಗಳನ್ನು ಪೂಸಿಕೊಂಡಿಲ್ಲ, ಮಕ್ಕಳು ಸಿದ್ಧವಾಗಿದ್ದಾರೆ ಬಾ ಎಂದು ಕರೆಯುವುದಕ್ಕೆ ನಾನು ನಿನ್ನ ಪತ್ನಿಯಲ್ಲ. ನಾನು ಬರುವವರೆಗೂ ತಡೆ' ಎಂದು ಅಹಂಕಾರದ ಮಾತುಗಳನ್ನು ಆಡುತ್ತಾಳೆ. ಯದ್ಯಪಿ ಅವಳು ಸ್ವಾಭಾವಿಕವಾಗಿ ವಿನಯದಿಂದ ನಡೆದುಕೊಳ್ಳುವವಳು. ಇಂತಹ ಮಾತುಗಳನ್ನು ಆಡುವವಳಲ್ಲ. ಆದರೂ ಈಗ ಆಡಿದ್ದಾಳೆ. ಅದಕ್ಕೆ ಕಾರಣ ಅವಳು ಮಾಡಿರುವ ಮದ್ಯಪಾನ. ಕ್ಷತ್ರಿಯರಿಗೆ ವಿಹಿತವೂ ಆಗಿದೆ. ಆದ್ದರಿಂದ ಅವಳ ಈ ಅಹಂಕಾರದ ಮಾತುಗಳಿಗೆ ಅವಳು ಮಾಡಿರುವ ಮದ್ಯಪಾನವು ಕಾರಣವೆಂದು ಸೂಚಿಸಲು ವ್ಯಾಸರು ಇಂತಹ ಅಪ್ರಸಿದ್ಧವಾದ ಶಬ್ದವನ್ನು ಪ್ರಯೋಗಿಸಿದ್ದಾರೆಂದು ರಾಜರು ತಿಳಿಸುತ್ತಾರೆ.

೧೮. ಭಾರದ್ವಾಜ ಮಮಾಚಕ್ಷ್ವ (ಆದಿ 142-3).

ಇದು ದುರ್ಯೋಧನ (ಅಥವಾ ಧೃತರಾಷ್ಟ್ರನು) ಕಣಿಂಕನನ್ನು ಕುರಿತು ಹೇಳುವ ಮಾತು. ಇಲ್ಲಿ ಭಾರದ್ವಾಜ ಎಂದು ಋಷಿಗಳ ಹೆಸರಿದೆ. ಕಣಿಂಕನಾದರೂ ದುರ್ನೀತಿಯನ್ನು ಭೋಧಿಸುವವನು. ಇವೆರಡನ್ನೂ ಕೂಡಿಸಲು ಸಾಧ್ಯವಿಲ್ಲ ಎಂದು ಬಹಳ ಜನರು 'ಕಣಿಂಕ ತ್ವಂ ಮಮಾಚಕ್ಷ್ವ' ಎಂದು ಪಾಠವನ್ನೇ ತಿದ್ದಿದ್ದಾರೆ. ರಾಜರು ಮಾತ್ರ ಕಣಿಂಕನು ಭಾರದ್ವಾಜಗೋತ್ರದಲ್ಲಿ ಜನಿಸಿದ ಒಬ್ಬ ದುಷ್ಟಬ್ರಾಹ್ಮಣ. ಆದ್ದರಿಂದ ಅವನನ್ನು ಭಾರದ್ವಾಜ ಎಂದು ಸಂಬೋಧಿಸುವುದು ಉಪಪನ್ನವಾಗುತ್ತದೆ ಎಂದು ಸಮರ್ಥಿಸಿದ್ದಾರೆ.

೧೯. ಕ್ಷತ್ತಾ ಆರ್ತಬಂಧುರಸ್ಮಾಕಂ ಪ್ರಚ್ಛನ್ನಸ್ತು ಯತಃ ಪರೇ

(ಆದಿ 143-20).

ಇದು ದುರ್ಯೋಧನನು ಧೃತರಾಷ್ಟ್ರನ ಬಳಿ ವಿದುರನ ಬಗ್ಗೆ ಹೇಳುವ ಮಾತು. ವಿದುರನು ನಮಗೆ ಆರ್ತಬಂಧುವಾಗಿದ್ದಾನೆ. ಧರ್ಮರಾಜಾದಿಗಳಿಗೆ ಪ್ರಚ್ಛನ್ನ ಬಂಧುವಾಗಿದ್ದಾನೆ ಎಂದು ಅರ್ಥ. ಆರ್ತಬಂಧು ಮತ್ತು ಪ್ರಚ್ಛನ್ನ ಬಂಧು ಎಂಬ ಶಬ್ದಗಳಿಗೆ ಅರ್ಥವು ತಿಳಿಯುವುದಿಲ್ಲ. ಅದನ್ನು ರಾಜರು ಬಿಡಿಸುತ್ತಾರೆ. ನಮಗೆ ಅವನು ಆರ್ತಬಂಧು ಎಂದರೆ ಮನಸ್ಸಿನಲ್ಲಿ ನಮ್ಮ ಬಗ್ಗೆ ಕ್ಲೇಶವಿರುವ ಬಂಧು ಎಂದು ಅರ್ಥ. ಬಂಧುವೇನೋ ಸರಿ ಆದರೆ ಆ ಬಾಂಧವ್ಯದ ಬಗ್ಗೆ ವಿದುರನಿಗೆ ಕ್ಲೇಶವಿದೆ ಸಂತೋಷವಿಲ್ಲ ಎಂದು ಅರ್ಥ. ಧರ್ಮರಾಜಾದಿಗಳಿಗೆ ಪ್ರಚ್ಛನ್ನ ಬಂಧು ಎಂದರೆ ಅವನ ಪ್ರೀತಿ ವಿಶ್ವಾಸಗಳು ಧರ್ಮರಾಜಾದಿಗಳಲ್ಲಿವೆ. ಅದನ್ನು ತೋರಗೊಡದೆ ನಮ್ಮ ಜೊತೆಯಲ್ಲಿ ಇದ್ದಾನೆ ಎಂದು ಅರ್ಥಮಾಡಬೇಕೆಂದು ರಾಜರು ತಿಳಿಸುತ್ತಾರೆ.

೨೦. ಪ್ರಾಜ್ಞಃ ಪ್ರಾಜ್ಞಪ್ರಲಾಪಜ್ಞಃ ಸಮ್ಯಗ್ ಧರ್ಮಾರ್ಥದರ್ಶಿವಾನ್।
ವಿಜ್ಞಾಯೇದಂ ತಥಾ ಕುರ್ಯಾತ್ ಅಪದಂ ನಿಸ್ತರೇದ್ ಯಥಾ ॥

ಅಲೋಹಂ ನಿಶಿತಂ ಶಸ್ತ್ರಂ ಶರೀರಪರಿಕೃಂತನಮ್।
ಯೇ ವಿದಂತಿ ನ ತಾನ್ ಘ್ನಂತಿ ಪ್ರತಿಘಾತವಿದಸ್ತಥಾ॥

ಕಕ್ಷಘ್ನಂ ಶಿಶಿರಘ್ನಂ ಚ ಮಹಾಕುಕ್ಷಿಬಲೌಜಸಮ್ ।
ನ ಸಹೇತೇತಿ ಚಾತ್ಮಾನಂ ಯೋ ರಕ್ಷತಿ ಸ ಜೀವತಿ ॥

ನಾಚಕ್ಷುರ್ವೇತ್ತಿ ಪಂಥಾನಂ ನಾಚಕ್ಷುರ್ವೇತ್ತಿ ವೈ ದಿಶಃ ।
ನಾಧೃತಿರ್ಭೂತಿಮಾಪ್ನೋತಿ ಬುಧ್ಯಸ್ವೈನಂ ಪ್ರಬೋಧಿತಃ ॥

ನಾನಾಪ್ತೈರ್ದತ್ತಮಾದತ್ತೇ ಧೀರಃ ಶಸ್ತ್ರಮಲೋಹಜಮ್ ।
ಶ್ವಾವಿಟ್ ಶರಣಮಾಸಾದ್ಯ ಪ್ರಮುಚ್ಯೇತ ಹುತಾಶನಾತ್ ॥

ಪರಂ ಮಾರ್ಗಾನ್ ವಿಜಾನಾತಿ ನಕ್ಷತ್ರೈರ್ವಿಂದತೇ ದಿಶಃ ।
ಆತ್ಮನಾ ಚಾತ್ಮನಃ ಪಂಚ ಪೀಡಯನ್ ನ ಸ ಪೀಡ್ಯತೇ॥

(ಆದಿ ೧೪೫; ೨೦-೨೫)

ಇದು ಧರ್ಮರಾಜಾದಿಗಳು ಹಸ್ತಿನಾಪತಿಯಿಂದ ವಾರಣಾವತಕ್ಕೆ ಹೋಗುವ ಸಂದರ್ಭದಲ್ಲಿ ವಿದುರನು ಧರ್ಮರಾಜನನ್ನು ಕುರಿತು ಎಚ್ಚರಿಕೆಯಿಂದಿರಬೇಕೆಂದು ಹೇಳಿದ ಒಗಟಿನ ಮಾತುಗಳು: ಇವುಗಳ ಅಭಿಪ್ರಾಯವನ್ನು ರಾಜರು ಹೀಗೆ ಬಿಡಿಸುತ್ತಾರೆ:

ಪ್ರಾಜ್ಞಃ = ಸ್ವಯಂ ಕುಶಲನಾಗಿದ್ದು, ಪ್ರಾಜ್ಞಪ್ರಲಾಪಜ್ಞಃ = ಇನ್ನೊಬ್ಬ ಪ್ರಾಜ್ಞನು ಸ್ಪಷ್ಟವಾಗಿ ಹೇಳದೇ ಸಂಜ್ಞೆಯ ಮೂಲಕವಾಗಿ ತಿಳಿಸಿದ ಮಾತುಗಳ ಅರ್ಥವನ್ನು ತಿಳಿದುಕೊಳ್ಳುವವನು. ಇದಂ ವಿಜ್ಞಾಯ = ನಾನು ಇನ್ನು ಹೇಳುವ ವಚನಗಳ ಅರ್ಥವನ್ನು ತಿಳಿದವನಾಗಿ, ಯಥಾ ನಿಸ್ತರೇತ್ = ಹೇಗೆ ದಾಟುತ್ತಾನೆಯೋ, ತಥಾ ಕುರ್ಯಾತ್ = ಹಾಗೆಯೇ ಮಾಡಬೇಕು ಎಂದು. ಇದು ಧರ್ಮರಾಜನಿಗೇ ನೀತಿಕಥನನೆಪದಿಂದ ಹೇಳುವ ಬುದ್ಧಿಯ ಮಾತು. ಅಲೋಹಂ = ಲೋಹಮಯವಲ್ಲದ, ಶರೀರಪರಿಕೃಂತನಂ = ಸಮಗ್ರವಾದ ಶರೀರವನ್ನು ಕತ್ತರಿಸಿ ನಾಶಮಾಡುವ, ನಿಶಿತಂ = ಹರಿತವಾದ, ಶಸ್ತ್ರಂ = ಆಯುಧವನ್ನು, ಯೇ = ಯಾರು, ವಿದಂತಿ = ತಿಳಿಯುತ್ತಾರೆಯೋ, ತಾನ್ = ಅವರನ್ನು, ಪ್ರತಿಘಾತವಿದಃ = ಕಪಟತಂತ್ರಗಳಿಂದ ತಮ್ಮ ಶತ್ರುಗಳನ್ನು ಕೊಲ್ಲಲು ಬಯಸುವವರು, ನಘ್ನಂತಿ = ಕೊಲ್ಲಲಾರರು. ಇದು ಕಪಟಗೃಹದ ವಿಷಯದಲ್ಲಿ ಎಚ್ಚರಿಕೆಯಿಂದಿರಬೇಕೆಂದು ಸೂಚನೆ.

ಕಕ್ಷಘ್ನಂ = ಕಾಡನ್ನು ನಾಶಮಾಡುವ, ಶಿಶಿರಘ್ನಂ = ಹಿಮವನ್ನು ನಾಶಮಾಡುವ, ಮಹಾಕುಕ್ಷಿಬಲೌಜಸಮ್ = ದೊಡ್ಡ ಉದರಕ್ಕೆ ಬಲವನ್ನೂ, ಸಾಮರ್ಥ್ಯವನ್ನೂ ಕೊಡುವ ವಸ್ತುವನ್ನು, ನ ಸಹೇತ = ಮನುಷ್ಯ ದೇಹವು ಸಹಿಸಲಾರದು, ಇತಿ = ಎಂದು ತಿಳಿದು, ಯಃ = ಯಾವನು, ಆತ್ಮಾನಂ = ತನ್ನನ್ನು, ರಕ್ಷತಿ = ರಕ್ಷಿಸಿಕೊಳ್ಳುತ್ತಾನೆಯೋ, ಸ = ಅವನು, ಜೀವತಿ = ಬದುಕುತ್ತಾನೆ. ವನನಾಶಕವಾದ, ಹಿಮನಾಶಕವಾದ ಜಠರಕ್ಕೆ ಬಲವನ್ನು ಕೊಡುವ ವಸ್ತುವೆಂದರೆ ಅಗ್ನಿ. ಅದನ್ನು ಮನುಷ್ಯದೇಹವು ಸಹಿಸಲಾರದು. ಆದ್ದರಿಂದ ಅಗ್ನಿಯ ಅಪಘಾತದಿಂದ ನಿಮ್ಮನ್ನು ನೀವು ರಕ್ಷಿಸಿಕೊಳ್ಳಬೇಕೆಂದು ಎಲ್ಲರಿಗೂ ಸೂಚನೆ.

ಅಚಕ್ಷುಃ = ಕಣ್ಣಿಲ್ಲದವನು, ಪಂಥಾನಂ = ಮಾರ್ಗವನ್ನು, ನ ವೇತ್ತಿ = ತಿಳಿಯುವುದಿಲ್ಲ. ಅಚಕ್ಷುಃ = ಕಣ್ಣಿಲ್ಲದವನು, ದಿಶಃ = ದಿಕ್ಕುಗಳನ್ನೂ, ನ ವೇತ್ತಿ = ತಿಳಿಯುವುದಿಲ್ಲ. ಅಧೃತಿಃ = ಧೈರ್ಯವಿಲ್ಲದವನೂ, ಭೂತಿಂ = ಐಶ್ವರ್ಯವನ್ನು, ನ ಆಪ್ನೋತಿ = ಹೊಂದುವುದಿಲ್ಲ. ಆದ್ದರಿಂದ ಮಾರ್ಗಗಳನ್ನೂ, ದಿಕ್ಕುಗಳನ್ನೂ ತಿಳಿದು ಧೈರ್ಯಗೆಡದೆ ಅಪಾಯದಿಂದ ಪಾರಾಗಬೇಕೆಂದು ಇದು ಭೀಮಸೇನನಿಗೆ ಸೂಚನೆ.

ಧೀರಃ = ಧೀರನಾದವನು, ಅನಾಪ್ತೈಃ = ದತ್ತರು, ವಿಶ್ವಾಸಪಾತ್ರರಲ್ಲದವರು ನೀಡಿದ, ಅಲೋಹಜಮ್ = ಲೋಹಮಯವಲ್ಲದ, ಶಸ್ತ್ರಂ = ನಾಶಕವಾದ ವಸ್ತುವನ್ನು, ನ ಆದತ್ತೇ = ಸ್ವೀಕರಿಸುವುದಿಲ್ಲ. ಈ ಮಾತುಗಳಿಂದ ಶತ್ರುಗಳು ಕೊಟ್ಟ ಅನ್ನಪಾನಾದಿಗಳನ್ನು ಭುಂಜಿಸಬಾರದು. ಅದು ಲೋಹಮಯವಲ್ಲದ ಜೀವಿತಾಂತಕರವಾದ ಶಸ್ತ್ರ ಎಂದು

ಪಾಂಡವರಿಗೆ ವಿದುರನು ಎಚ್ಚರಿಕೆಯನ್ನು ನೀಡುತ್ತಿದ್ದಾನೆ. ಶ್ವಾವಿಟ್‌ಶರಣಮಾಸಾದ್ಯ = ಮುಳ್ಳುಹಂದಿಯ ಬಿಲವನ್ನು ಸೇರಿದರೆ, ಹುತಾಶನಾತ್ = ಅಗ್ನಿಯಿಂದ, ವಿಮುಚ್ಯೇತ = ವಿಮುಕ್ತನಾಗುತ್ತಾನೆ. ಹೀಗೆ ಹೇಳಿ ವಿದುರನು ಬಿಲವಾಸ ಮತ್ತು ಬಿಲಮಾರ್ಗವಾಗಿ ಗಮನವನ್ನು ಸೂಚಿಸುತ್ತಿದ್ದಾರೆ.

ಚರನ್ = ಸಂಚರಿಸುವವನು, ಮಾರ್ಗಂ = ದಾರಿಗಳನ್ನು, ವಿನಾಜಾತಿ = ತಿಳಿಯುತ್ತಾನೆ. ನಕ್ಷತ್ರೈಃ = ನಕ್ಷತ್ರಗಳಿಂದ, ದಿಶಃ = ದಿಕ್ಕುಗಳನ್ನು ತಿಳಿಯುತ್ತಾನೆ. ಆತ್ಮನಾ = ಬುದ್ಧಿಯಿಂದ, ಆತ್ಮನಃ = ತನ್ನ ಪ್ರತಿನಿಧಿಗಳಾದ ಪುರೋಚನನ ತಂಗಿಯ ಐದು ಮಕ್ಕಳನ್ನು, ಪೀಡಯನ್ ಸಃ = ಹಿಂಸಿಸುವವನು, ನ ಪೀಡ್ಯತೇ = ತಾನು ಹಿಂಸೆಗೆ ಒಳಗಾಗುವುದಿಲ್ಲ. ಈ ಮಾತುಗಳಿಂದ ಹಗಲೂ, ರಾತ್ರಿಯೂ ಸಂಚರಿಸಿ ಮಾರ್ಗಗಳನ್ನು ತಿಳಿದುಕೊಂಡು ಪುರೋಚನ, ಅವನ ತಂಗಿ ಮತ್ತು ಅವಳ ಐದು ಮಕ್ಕಳನ್ನೂ ಸಂಹರಿಸಿ ಬಿಲಮಾರ್ಗದಿಂದ ನೀವೆಲ್ಲರೂ ತಪ್ಪಿಸಿಕೊಂಡು ಹೋಗಬೇಕೆಂದು ವಿದುರನು ಸೂಚಿಸುತ್ತಿದ್ದಾನೆ ಎಂದು ರಾಜರ ಅಭಿಪ್ರಾಯ.

ಹೀಗೆ ಲಕ್ಷಾಲಂಕಾರದ ಬೆಳಕಿನಲ್ಲಿ ಮಹಾಭಾರತದ ಅರ್ಥವನ್ನು ತಿಳಿಯುವುದು ಅತ್ಯವಶ್ಯಕವಾದ್ದರಿಂದ ನಾವು ಈ ಪ್ರಯತ್ನವನ್ನು ಮಾಡಿದ್ದೇವೆ. ಈ ನಮ್ಮ ಪ್ರಯತ್ನವು ನೂರಕ್ಕೆ ನೂರರಷ್ಟು ಯಶಸ್ವಿಯಾಗಿದೆ ಎಂದು ನಾವು ಎಂದೂ ಹೇಳಲಾರೆವು. ಇನ್ನೂ ಬಗೆಹರಿಸಲಾರದ ಸಮಸ್ಯೆಗಳಿರುವ ಅನೇಕ ಸ್ಥಳಗಳಿವೆ. ಆದರೂ ಇದುವರೆಗೆ ಮುದ್ರಿತವಾದ ಮಹಾಭಾರತದ ಆವೃತ್ತಿಗಳಿಗಿಂತಲೂ ಇದು ಹೆಚ್ಚು ಶುದ್ಧವಾಗಿದೆ ಎಂಬುದಿಷ್ಟೇ ನಮಗೆ ಸಮಾಧಾನಕರವಾದ ವಿಷಯ.

ನಮ್ಮ ಈ ಗ್ರಂಥಗಳಲ್ಲಿ ತಪ್ಪುಗಳನ್ನು ತೋರಿಸಿ ತಿದ್ದಿಕೊಳ್ಳಲು ಸಹಾಯ ಮಾಡುವ ವಿದ್ವಾಂಸರಿಗೆ ನಾವು ಎಂದೂ ಕೃತಜ್ಞರಾಗಿರುತ್ತೇವೆ.

ಮತ್ತು ಈ ನಮ್ಮ ಪ್ರಯತ್ನವು ಹರಿವಾಯುಗುರುಗಳ ಮನಸ್ಸಿಗೆ ಬಂದು ಅವರು ನಮಗೆ ಶ್ರೇಯಸ್ಸನ್ನು ಉಂಟುಮಾಡಲಿ ಎಂದೂ ಪ್ರಾರ್ಥಿಸುತ್ತೇನೆ.

– ಶ್ರೀಪಾದ ಚರಣ ಸೇವಕ
ಪಿ.ಎಸ್. ಶೇಷಗಿರಿ ಆಚಾರ್ಯ

—0—

ಆದಿಪರ್ವವನ್ನು ಕುರಿತು...

ಆದಿಪರ್ವದಲ್ಲಿ೨೧೮ ಅಧ್ಯಾಯಗಳಿವೆಯೆಂದು ಆದಿಪರ್ವದಲ್ಲಿಯೇ ಪರ್ವಸಂಗ್ರಹ ಪರ್ವದಲ್ಲಿ ಹೇಳಲಾಗಿದೆ. ಆದರೆ ನಾವು ಸಂಪಾದನೆ ಮಾಡಿದಂತೆ ೨೩೭ ಅಧ್ಯಾಯಗಳಾಗಿವೆ. ಲಕ್ಷಾಲಂಕಾರದಲ್ಲಿ ೨೦೦ ಅಧ್ಯಾಯಗಳವರೆಗೆ ವ್ಯಾಖ್ಯಾನವಿದೆ. ಅದರ ನಂತರ 'ಸಮಾಪ್ತಮಾದಿಪರ್ವ' ಎಂದೂ ಇದೆ. ಲಕ್ಷಾಲಂಕಾರದಲ್ಲಿ ೨೦೦ನೆಯ ಅಧ್ಯಾಯವೆಂದು ಹಿಡಿದಿರುವ ಪ್ರತೀಕಗಳು ನಮ್ಮ ಪುಸ್ತಕದಲ್ಲಿ ೨೩೭ನೆಯ ಅಧ್ಯಾಯದಲ್ಲಿ ದೊರೆಯುತ್ತವೆ. ಇದುವರೆಗೆ ಲಕ್ಷಾಲಂಕಾರಕ್ಕೂ ಮತ್ತು ತಾಳೆಗರಿಗಳಿಗೂ ಅಧ್ಯಾಯಗಳ ಸಮಾಪ್ತಿ ಸರಿಹೊಂದುವುದಿಲ್ಲ. ಆದರೆ ತಾಳೆಗರಿಗಳಲ್ಲಿ ಅಧ್ಯಾಯ ಸಮಾಪ್ತಿಗಳು ಪ್ರಾಯಃ ಪರಸ್ಪರ ಸಂವಾದಿಗಳಾಗಿವೆ. ಅಧ್ಯಾಯದ ವಿರಾಮದಲ್ಲಿ ಬೇರೆ ಕ್ರಮವನ್ನು ಅನುಸರಿಸುವುದರಿಂದ ಎಲ್ಲ ಶ್ಲೋಕಗಳೂ ದೊರಕಿದರೂ ಅಧ್ಯಾಯ ಸಂಖ್ಯೆಯಲ್ಲಿ ಮಾತ್ರ ಈ ವ್ಯತ್ಯಾಸವಿದೆ ಎಂದು ತಿಳಿಯ ಬೇಕಾಗುತ್ತದೆ. ''ಪುರುವಂಶಕಥನವಿರುವ ೬೩ನೆಯ ಅಧ್ಯಾಯವೇ ಪುನಃ ೮೩ನೆಯ ಅಧ್ಯಾಯವಾಗಿ ಎಲ್ಲಾ ತಾಳೆಗರಿಗಳಲ್ಲಿ ಬರೆಯಲ್ಪಟ್ಟಿದೆ. ಲಕ್ಷಾಲಂಕಾರದಲ್ಲಿಯೂ ಸಹ ಎರಡು ಸ್ಥಾನದಲ್ಲಿಯೂ ಅದೇ ಪ್ರತೀಕಗಳನ್ನೂ ಅದೇ ವ್ಯಾಖ್ಯಾನಗಳನ್ನೂ ಬರೆಯಲಾಗಿದೆ. ಆದ್ದರಿಂದ ನಾವೂ ಸಹ ಆ ಅಧ್ಯಾಯವನ್ನು ಎರಡು ಬಾರಿ ಹಾಕಿದ್ದೇವೆ.''

ಆದಿಪರ್ವದಲ್ಲಿ ಬರುವ ಒಂದೊಂದು ಆಖ್ಯಾನಗಳೂ ಎರಡು, ಮೂರು ಅಥವಾ ನಾಲ್ಕುಬಾರಿ ಪುನರುಕ್ತವಾಗಿದೆ. ಸಂಶೋಧನೆ ಮಾಡುವವರಿಗೆ ಇದೇನು ಲೇಖಕ ಪ್ರಮಾದದಿಂದ ಉಂಟಾಗಿದೆಯೋ ಅಥವಾ ಮೂಲಗ್ರಂಥದಲ್ಲಿಯೇ ಹಾಗೆಯೇ ಇದೆಯೋ ಎಂದು ಸಂಶಯವು ಮೂಡುವುದು. ಆದರೆ ಲಕ್ಷಾಲಂಕಾರದಲ್ಲಿ ಅವತಾರಿಕೆಗಳನ್ನು ಕೊಡುತ್ತಾ ಇಂತಹ ಆಖ್ಯಾನವನ್ನು, ಅದರ ಮಹತ್ತ್ವಪ್ರಯುಕ್ತವಾಗಿ ಅಥವಾ ಸಿಂಹಾವಲೋಕನ ನ್ಯಾಯದಿಂದ ಪುನಃ ಹೇಳುತ್ತಿದ್ದಾರೆ ಎಂದು ಹೇಳಿರುವುದರಿಂದ ಈ ಸಂಶಯವು ನಿವಾರಣೆಯಾಗುತ್ತದೆ.

ಪರಾಶರರು ಮತ್ತು ಸತ್ಯವತಿಯ ವಿವಾಹದ ಬಗ್ಗೆ ಸಾಕಷ್ಟು ವಿವಾದವಿದೆ. ಕೆಲವು ವಿಮರ್ಶಕರು ವಿವಾಹವೇ ನಡೆಯಲಿಲ್ಲ. ಈ ಭಾಗವೆಲ್ಲ ಪ್ರಕ್ಷಿಪ್ತ ಎಂದು ಹೇಳುತ್ತಾರೆ. ಆದರೆ ಲಕ್ಷಾಲಂಕಾರದಲ್ಲಿ ಆ ಅಧ್ಯಾಯಗಳ ಕೆಲವು ಶ್ಲೋಕಗಳನ್ನು ಹಿಡಿದು ವ್ಯಾಖ್ಯಾನ ಮಾಡಿದ್ದಾರೆ. ಆದ್ದರಿಂದ ಆ ಭಾಗಗಳು ವಾದಿರಾಜರಿಗಿಂತ ಹಿಂದಿನ ಕಾಲದಿಂದಲೂ ಗ್ರಂಥಸ್ಥವಾಗಿದೆ ಮತ್ತು ವಾದಿರಾಜರಿಗೆ ಸಮ್ಮತವಾಗಿದೆ ಎಂದು ತಿಳಿದುಬರುತ್ತದೆ. ಅಲ್ಲದೆ

ಕುಂತಿಯು ವನದಲ್ಲಿ ಮಕ್ಕಳನ್ನು ಪಡೆಯುವುದಕ್ಕಿಂತ ಮೊದಲು ಪಾಂಡುವಿನ ಜೊತೆಯಲ್ಲಿ ಮಾತನಾಡುತ್ತಾ ಸತ್ಯವತಿ ಪರಾಶರರ ವಿವಾಹವನ್ನು ಉಲ್ಲೇಖಿಸುತ್ತಾಳೆ. ಆದ್ದರಿಂದ ವಿನಾ ಕಾರಣ ಅಧ್ಯಾಯಗಳನ್ನಾಗಲೀ, ಆಖ್ಯಾನಗಳನ್ನಾಗಲೀ ಅಥವಾ ಶ್ಲೋಕಗಳನ್ನಾಗಲೀ ಪ್ರಕ್ಷಿಪ್ತ ಎಂದು ಹೇಳುವುದರಲ್ಲಿ ಯಾವ ಅರ್ಥವೂ ಇಲ್ಲ.

ಕಣಿಂಕ (ಕಳಿಂಗ)ನ ದುರ್ನೀತಿಯ ಉಪದೇಶದ ನಿರೂಪಣೆಯು ೧೪೨ನೆಯ ಅಧ್ಯಾಯದಲ್ಲಿದೆ. ಮುದ್ರಿತ ಪುಸ್ತಕಗಳಲ್ಲಿ ಧೃತರಾಷ್ಟ್ರನ ಸಮ್ಮುಖದಲ್ಲಿಯೇ ಕಣಿಂಕನು ಉಪದೇಶ ಮಾಡಿದನೆಂದೂ ಕೊನೆಯಲ್ಲಿ ಧೃತರಾಷ್ಟ್ರನು ವಿಷಣ್ಣನಾದನೆಂದೂ ವಾಕ್ಯಗಳಿವೆ. ಆದರೆ ಆಚಾರ್ಯರು 'ಅಜ್ಞಾತ ಏವ ಧೃತರಾಷ್ಟ್ರಮುಖೈಃ...' ಎಂದು ಧೃತರಾಷ್ಟ್ರನಿಗೆ ತಿಳಿಯದಂತೆ ಕಣಿಂಕನು ಉಪದೇಶ ಮಾಡಿದನೆಂದು ಹೇಳಿರುವುದರಿಂದ ಧೃತರಾಷ್ಟ್ರನ ಸಮ್ಮುಖದಲ್ಲಿ ಉಪದೇಶ ಮಾಡಿದನೆಂಬುದು ಅಪ್ರಾಮಾಣಿಕವಾದುದು. ಬಹುಶಃ ಎರಡು ಅಧ್ಯಾಯಗಳಲ್ಲಿ ಧೃತರಾಷ್ಟ್ರನ ಎದುರಿನಲ್ಲಿ ಸ್ವಲ್ಪ ಒಳ್ಳೆಯ ಮಾತುಗಳನ್ನಾಡಿ, ಅವನ ಅನುಪಸ್ಥಿತಿಯಲ್ಲಿ ದುರ್ಯೋಧನಾದಿಗಳನ್ನು ಕುರಿತು ಈ ಅಧ್ಯಾಯದಲ್ಲಿರುವ ಉಪದೇಶವನ್ನು ಮಾಡಿದನೆಂದು ಹೇಳಲು ಸಾಧ್ಯವಾಗಿದ್ದರೆ ಸಮಂಜಸವಾಗುತ್ತಿತ್ತು. ಆದರೆ ಅವನ ಉಲ್ಲೇಖವು ಒಂದೇ ಅಧ್ಯಾಯದಲ್ಲಿ ಬಂದಿರುವುದರಿಂದ ನಮಗೆ ಹಾಗೆ ನಿರ್ಣಯ ಮಾಡಲು ಸಾಧ್ಯವಿಲ್ಲ. ಕಾಲಕ್ರಮದಲ್ಲಿ ಒಂದು ಅಧ್ಯಾಯವು ಲುಪ್ತವಾಗಿರಲೂ ಬಹುದು.

ಮುದ್ರಿತ ಪುಸ್ತಕಗಳಲ್ಲಿಯೂ ತಾಳೆಗರಿಗಳಲ್ಲಿಯೂ ಯಯಾತಿಯ ಉಪಾಖ್ಯಾನ ಮತ್ತು ದುಷ್ಮಂತನ ಉಪಾಖ್ಯಾನಗಳು ಒಂದೊಂದರಲ್ಲಿ ಒಂದೊಂದು ರೀತಿ ಇದೆ. ಕೆಲವು ಪ್ರತಿಗಳಲ್ಲಿ ದುಷ್ಮಂತನ ಉಪಾಖ್ಯಾನ ಮೊದಲು ಬರುತ್ತದೆ. ಇನ್ನು ಕೆಲವು ಪ್ರತಿಗಳಲ್ಲಿ ಯಯಾತಿಯ ಉಪಾಖ್ಯಾನವು ಮೊದಲು ಬರುತ್ತದೆ. ಆದರೆ ಪುರುವಂಶದಲ್ಲಿ ಮೊದಲು ಯಯಾತಿಯು ಬಂದು ಅನಂತರ ಅನೇಕ ರಾಜರುಗಳ ನಂತರ ಇರಿಲನ ಮಗನಾಗಿ ದುಷ್ಮಂತನು ಬರುವುದರಿಂದ ನಾವು ಯಯಾತಿಯ ಚರಿತೆಯನ್ನು ಮೊದಲು ಹೇಳುವ ತಾಳೆಗರಿಯ ಪಾಠವನ್ನು ಅನುಸರಿಸಿ ಅದರಂತೆಯೇ ಇಲ್ಲಿ ನಿವೇಶ ಮಾಡಿದ್ದೇವೆ.

ದ್ರೌಪದಿಯ ಪಂಚಪತಿತ್ವ ವಿಷಯದಲ್ಲಿಯೂ ಸಮಸ್ಯೆ ಇದೆ. ಪಾರ್ವತಿ, ಶ್ಯಾಮಲಾ, ಶಚಿ ಮತ್ತು ಉಷೆಯರು ಬ್ರಹ್ಮದೇವರ ಶಾಪನಿಮಿತ್ತವಾಗಿ ನಾಲ್ಕುಬಾರಿ ಭೂಮಿಯಲ್ಲಿ ಅವತಾರ ಮಾಡಬೇಕಾಗಿ ಬಂದಾಗ ಅವರೆಲ್ಲರೂ ಭಾರತಿಯನ್ನು ಕುರಿತು ತಪಸ್ಸು ಮಾಡಿ 'ಅತಸ್ತ್ವಯೈಕದೇಹತ್ವಮಿಚ್ಛಾಯೋ ದೇವಿ ಜನ್ಮಸು । ಚತುರ್ಷ್ವಪಿ ಯತೋಸ್ಮಾಕಂ ಶಾಪದ್ವಯ ನಿಮಿತ್ತತಃ' (ನಮಗೆ ಎರಡು ಶಾಪಗಳಿಂದ ಬಂದಿರುವ ನಾಲ್ಕು

ಜನ್ಮಗಳಲ್ಲಿಯೂ ನಿನ್ನ ಜೊತೆಯಲ್ಲಿ ಏಕದೇಹತ್ವವನ್ನು ಬಯಸುತ್ತೇವೆ) ಎಂದು ಕೇಳಿಕೊಂಡಿದ್ದಾರೆ. ಆದ್ದರಿಂದ ಭಾರತಿ ಮತ್ತು ಆ ನಾಲ್ಕು ದೇವಿಯರು ಒಂದೇ ದೇಹದಲ್ಲಿರುವ ನಾಲ್ಕು ಜನ್ಮಗಳು ಬೇಕು. ಆ ನಾಲ್ಕು ಜನ್ಮಗಳು ಯಾವುವು ಎಂಬುದು ಪ್ರಶ್ನೆ. ವಿಪ್ರಕನ್ಯಾ, ಇಂದ್ರಸೇನಾ, ದ್ರೌಪದಿ ಇವು ಮೂರು ಜನ್ಮಗಳು ಎಂದು ಬಹಳ ಜನ ವ್ಯಾಖ್ಯಾತೃಗಳು ಹೇಳುತ್ತಾರೆ. ಹಾಗಾದರೆ ನಾಲ್ಕನೆಯ ಜನ್ಮ ಯಾವುದು? ಅದು ಆಚಾರ್ಯರು ಅವತಾರ ಮಾಡಿದಾಗ ಭಾರತಿಯು ಅವತಾರ ಮಾಡಿದ 'ಚಂದ್ರಾ' ಎಂದು ಕೆಲವು ವಿಮರ್ಶಕರು ಹೇಳುತ್ತಾರೆ. 'ಕಾಲೀ ಚಂದ್ರೇತಿ ಚೋಚ್ಯತೇ', 'ತದೈವ ಕೃಷ್ಣಾಪಿ ಭುವಿ ಪ್ರಜಾತಾ' ಎಂಬ ತಾತ್ಪರ್ಯನಿರ್ಣಯ ವಾಕ್ಯಗಳು ಈ ವಿಷಯಕ್ಕೆ ಪುಷ್ಟಿ ಕೊಡುತ್ತದೆ ಎಂದು ಅಭಿಪ್ರಾಯ ಪಡುತ್ತಾರೆ. ಇದನ್ನು ಇನ್ನು ಕೆಲವರು ಒಪ್ಪುವುದಿಲ್ಲ. ಭಾರತಿಯ ನಾಮಗಳನ್ನು ಹೇಳುವ ಸಂದರ್ಭದಲ್ಲಿ ಬೃಹದಾರಣ್ಯಕ ಭಾಷ್ಯದಲ್ಲಿ 'ಶಿವಕನ್ಯೇಂದ್ರಸೇನಾ ಚ ದ್ರೌಪದೀ ಕಾಶಿಜಾ ತಥಾ । ಚಂದ್ರೇಕ್ಯಾದಿ ಸ್ವರ್ಣಪಾಯಾಃ' ಎಂದು ಕಾಶಿಜಾ (ಕಾಳೀ), ಚಂದ್ರಾ ಇವು ಭಾರತಿಯ ಹೆಸರುಗಳೆಂದು ಹೇಳಿರುವುದರಿಂದ ಈ ಎರಡು ವಾಕ್ಯಗಳನ್ನೂ ಶುದ್ಧ ಭಾರತಿಯ ಸ್ವರೂಪದ ವಿವಕ್ಷೆಯಿಂದಲೇ ಕೂಡಿಸಬಹುದು ಎಂದು ಅಭಿಪ್ರಾಯಪಡುತ್ತಾರೆ. ವಾದಿರಾಜರು ಮಾತ್ರ ಆದಿಪರ್ವ ೧೯೬-೩೦ ರಲ್ಲಿ

'ಪುರಾ ಪೂರ್ವಜನ್ಮನಿ ಪೂರ್ವೋಕ್ತ ಪ್ರಕಾರೇಣ ನಾಳಾಯನೀತಿ ವಿಶ್ರುತಾ । ಪಶ್ಚಾತ್ ಸೈವ ಇಂದ್ರಸೇನೇತಿ ವಿಖ್ಯಾತಾ ಜಾತಾ । ಪೂರ್ವಜನ್ಮನಿ ನಾಳಾಯನೀತಿ ವಿಶ್ರುತಾ ನಳಪ್ರತೀತ್ವಾತ್ ಸೈವ ನಾಳಾಯನೀ ನಳನಂದನೀತಿ ಚ ವಿಶ್ರುತಾ । ತಸ್ಯಾಃ ಮುದ್ಗಲಃ ಪತಿಃ । ದ್ವಿತೀಯೇ ಜನ್ಮನಿ ಇಂದ್ರಸೇನಾ । ತಸ್ಯಾಮೌದ್ಗಲ್ಯಃ ಮುದ್ಗಲಪುತ್ರಃ ಪತಿಃ'

ಹಿಂದಿನ ಜನ್ಮದಲ್ಲಿ ನಳನ ಪುತ್ರಿಯಾಗಿದ್ದ ಇಂದ್ರಸೇನೆಯೇ ನಳನ ಪುತ್ರಿಯಾದ ಕಾರಣದಿಂದ ನಾಳಾಯನೀ ಎಂದು ನಳನಂದಿನೀ ಎಂದೂ ಪ್ರಖ್ಯಾತಳಾಗಿದ್ದಳು. ಮುಂದಿನ ಜನ್ಮದಲ್ಲಿ ಅವಳಿಗೆ ಇಂದ್ರಸೇನಾ ಎಂದು ಹೆಸರು. ಈ ಜನ್ಮದಲ್ಲಿ ನಳನ ಪುತ್ರಿಯಲ್ಲ. ಹೀಗಾಗಿ ಇಂದ್ರಸೇನೆಯರು ಇಬ್ಬರು. ಮೊದಲನೆಯ ಇಂದ್ರಸೇನೆಗೆ ಮುದ್ಗಲರು ಪತಿ. ಎರಡನೆಯ ಇಂದ್ರಸೇನೆಗೆ ಮುದ್ಗಲಪುತ್ರರಾದ ಮೌದ್ಗಲ್ಯರು ಪತಿ ಎಂದು ಹೇಳಿದ್ದಾರೆ. ಈ ಕಲ್ಪದಲ್ಲಿ ನಾಲ್ಕುಜನ್ಮಗಳನ್ನೂ ಕೂಡಿಸುವುದಕ್ಕೆ ತೊಂದರೆ ಇಲ್ಲ. ಆದರೆ ಎರಡನೆಯ ಇಂದ್ರಸೇನೆಯ ಮಾತಾಪಿತೃಗಳು ಯಾರು ಎಂಬ ವಿಷಯವು ತಿಳಿಯುವುದಿಲ್ಲ. ಅಲ್ಲದೆ ಆಚಾರ್ಯರು ಮುದ್ಗಲರಿಗೆ ಶಾಪ ಬಂದುದು, ಅವರು ಇಂದ್ರಸೇನೆಗೆ ಪತಿಯಾಗಬೇಕಾಗಿ ಬಂದುದು, ಅವರ ದೇಹದಲ್ಲಿದ್ದು ವಾಯುದೇವರೇ

ಎಲ್ಲವನ್ನೂ ನಿರ್ವಹಿಸಿದುದು ಈ ಎಲ್ಲಾ ವಿಷಯಗಳನ್ನೂ ಹೇಳಿದ್ದಾರೆ. ಮುದ್ಗಲ ಪುತ್ರರಾದ ಮೌದ್ಗಲ್ಯರ ವಿಷಯದಲ್ಲಿ ಯಾವ ಮಾತನ್ನೂ ಆಡಿಲ್ಲ. ಆದ್ದರಿಂದ ಲಕ್ಷಾಲಂಕಾರವನ್ನು ಅರ್ಥಮಾಡಿಕೊಳ್ಳುವುದು ಹೇಗೆ ಎಂದು ಪ್ರಶ್ನೆ. ಅಲ್ಲದೆ ಮಹಾಭಾರತ ಮೂಲದಲ್ಲಿ ಈ ಪ್ರಕರಣದಲ್ಲಿ ಮೌದ್ಗಲ್ಯ ಎಂಬ ಹೆಸರಿದೆಯೇ ಹೊರತು ಮುದ್ಗಲ ಎಂಬ ಹೆಸರಿಲ್ಲ. ಮುದ್ಗಲ ಏವ ಮೌದ್ಗಲ್ಯಃ ಎಂದು ವ್ಯಾಖ್ಯಾನ ಮಾಡಿ ಮೌದ್ಗಲ್ಯ ಎಂದರೆ ಮುದ್ಗಲರೇ ಎಂದು ಹೇಳುವುದಾದರೆ ಮುದ್ಗಲಪುತ್ರರಾದ ಮೌದ್ಗಲ್ಯರ ಪ್ರಸ್ತಾಪವನ್ನು ಹೇಗೆ ಕೂಡಿಸಬೇಕೆಂದು ಪ್ರಶ್ನೆಯು ಹಾಗೆಯೇ ಉಳಿಯುತ್ತದೆ.

ಹೀಗೆ ಅಲ್ಲಲ್ಲಿ ಅಧ್ಯೇತೃಗಳಿಗೆ ಇನ್ನೂ ಅನೇಕ ಪ್ರಶ್ನೆಗಳು ಬರಬಹುದು. ವಿದ್ವಾಂಸರು ವಿಮರ್ಶೆ ಮಾಡಿ ಪರಿಹಾರಗಳನ್ನು ಕಂಡುಕೊಳ್ಳಬೇಕಾಗುತ್ತದೆ.

ಈ ಕಾರ್ಯಕ್ಕೆ ಪ್ರೇರಕರಾದ ಹರಿಪದವಾಸಿಗಳಾದ ಶ್ರೀವಿದ್ಯಾಮಾನ್ಯತೀರ್ಥರನ್ನು ಮತ್ತು ನಮ್ಮ ವಿದ್ಯಾಗುರುಗಳಾದ ಶ್ರೀಪೇಜಾವರ ಮಠಾಧೀಶರನ್ನೂ ಭಕ್ತಿಯಿಂದ ನಮಸ್ಕರಿಸುತ್ತೇನೆ. ಪಲಿಮಾರು ಮಠಾಧೀಶರಾದ ಶ್ರೀ ವಿದ್ಯಾಧೀಶತೀರ್ಥರ ಅದಮ್ಯ ಉತ್ಸಾಹ ಮತ್ತು ನಮ್ಮ ಮೇಲಿನ ಅನುಗ್ರಹದಿಂದ ಈ ಗ್ರಂಥವು ಪ್ರಕಾಶವನ್ನು ಕಾಣುತ್ತಿದೆ. ಅನೇಕ ವಿಷಯಗಳನ್ನು ಚರ್ಚಿಸಿ ಸೂಕ್ತವಾದ ಮಾರ್ಗದರ್ಶನವನ್ನು ನೀಡಿದ ಶ್ರೀ ಭಂಡಾರಕೇರಿ ಮಠಾಧೀಶರಾದ ಶ್ರೀ ವಿದ್ಯೇಶತೀರ್ಥರನ್ನೂ ಮತ್ತು ಶ್ರೀ ರಾಘವೇಂದ್ರ ಮಠದ ಶ್ರೀ ಸುಶಮೀಂದ್ರತೀರ್ಥರ ವರಕುಮಾರರಾದ ಶ್ರೀ ಸುವಿದ್ಯೇಂದ್ರತೀರ್ಥರನ್ನೂ ಈ ಸಂದರ್ಭದಲ್ಲಿ ಭಕ್ತಿಯಿಂದ ಸ್ಮರಿಸಿ ನಮಸ್ಕರಿಸುತ್ತೇನೆ. ಶ್ರೀ ಬನ್ನಂಜೆ ಗೋವಿಂದಾಚಾರ್ಯರ ಜೊತೆಯಲ್ಲಿಯೂ ಅನೇಕ ವಿಷಯಗಳನ್ನು ಚರ್ಚಿಸಿ ಸಲಹೆಯನ್ನು ಪಡೆದಿದ್ದೇನೆ. ಅವರಿಗೂ ನನ್ನ ಕೃತಜ್ಞತೆಗಳು. ಈ ಕಾರ್ಯದಲ್ಲಿ ಎಡಬಿಡದೆ ನನ್ನ ಜೊತೆಯಲ್ಲಿರುವ ನಮ್ಮ ಅಣ್ಣನವರ ಸುಪುತ್ರ ಚಿ॥ ಬೆಮ್ಮತ್ತಿ ವೇಂಕಟೇಶಾಚಾರ್ಯರಿಗೂ ಮತ್ತು ನನಗೆ ಸಹಾಯ ಮಾಡಿರುವ ಉಳಿದೆಲ್ಲರಿಗೂ ಧನ್ಯವಾದಗಳು.

– ಶ್ರೀಪಾದ ಚರಣ ಸೇವಕ
ಪಿ.ಎಸ್. ಶೇಷಗಿರಿ ಆಚಾರ್ಯ

—0—

ಪ್ರಕಾಶಕರ ನುಡಿ

ಸಾಕ್ಷಾತ್ ಶ್ರೀಮನ್ನಾರಾಯಣನ ಅವತಾರಭೂತರಾದ ಬಾದರಾಯಣರಿಂದ ಪ್ರಣೀತವಾದ ಮಹಾಭಾರತವೆಂಬ ಇತಿಹಾಸಗ್ರಂಥವು ಪೌರುಷೇಯವಾದ ಪಂಚಮ ವೇದವೆನಿಸಿದೆ. 'ವೇದಾದಪಿ ಪರಂ ಚಕ್ರೇ ಪಂಚಮಂ ವೇದಮುತ್ತಮಮ್' ಎಂಬ ಹೆಗ್ಗಳಿಕೆ ಭಾರತದ್ದು. ಭಾರತವನ್ನು ರಚಿಸಿದ ಭಗವಾನ್ ವ್ಯಾಸರ ಬಗ್ಗೆ 'ದೇವತಾನಾಂ ಯಥಾ ವ್ಯಾಸಃ' ಎಂದು ವ್ಯಾಸರೇ ಉದ್ಗರಿಸಿದ್ದಾರೆ. 'ಕೋಹ್ಯನ್ಯಃ ಪುಂಡರೀಕಾಕ್ಷಾತ್ ಮಹಾಭಾರತ ಕೃದ್ ಭವೇತ್' ಎಂಬ ವ್ಯಾಸರ ಮಾತೇ ವ್ಯಾಸರ ದೇವತ್ವಕ್ಕೆ ಪ್ರಮಾಣ. ಇಂತಹ ವ್ಯಾಸರ ಭಾರತವು 'ವಿಶ್ವದ ಸಂಪತ್ತು' ಎನಿಸಿದೆ. ಹೀಗಿದ್ದರೂ ಈ ಸಂಪತ್ತನ್ನು ಸುಲಭವಾಗಿ ಎಲ್ಲರಿಗೂ ಅನುಭವಿಸಲಾಗದು. ಭಾರತದ ಶ್ಲೋಕ-ಶ್ಲೋಕಗಳಿಗೆ ನೂರು ಅರ್ಥಗಳಿವೆ. ದರ್ಶನ-ಗುಹ್ಯ-ಸಮಾಧಿಗಳೆಂಬ ಭಾಷಾ ತೈವಿದ್ಯವಿದೆ. ಆದ್ದರಿಂದಲೇ ಲಕ್ಷಾಭರಣದ ವ್ಯಾಖ್ಯೆಯ ಕೊನೆಯಲ್ಲಿ 'ಭಾರತಸ್ಯ ಸುಧಾಂಬೋಧೇಃ ಭಾರತೀಶಾದಯಃ ಸುರಾಃ । ಯಥಾವನ್ ಮಥನೇ ಶಕ್ತಾಃ ಕೃತಶಿಕ್ಷಾಹರೇರ್ಮುಖಾತ್ ।' ಎಂದು ಹೇಳಿದ್ದಾರೆ. ಬ್ರಹ್ಮಾದಿಗಳು ವ್ಯಾಖ್ಯಾನ ಮಾಡಲು ಅರ್ಹರು. ಆದ್ದರಿಂದಲೇ ಸತ್ಯಲೋಕಾಧಿಪತಿಗಳಾದ ವಾಯುದೇವರು ಆನಂದತೀರ್ಥರಾಗಿ ಅವತರಿಸಿ ಮಹಾಭಾರತ ತಾತ್ಪರ್ಯ ನಿರ್ಣಯವನ್ನು ರಚಿಸಿದ್ದಾರೆ.

ಮಹಾಭಾರತ ಮೂಲಶೋಧನೆಯಲ್ಲಿ ಸಹಕಾರಿಗಳಾಗಿ ನಿಲ್ಲಬಲ್ಲ ಎರಡು ವ್ಯಾಖ್ಯಾನಗಳು ತಾತ್ಪರ್ಯನಿರ್ಣಯ ಮತ್ತು ಲಕ್ಷಾಲಂಕಾರ. ಇವೆರಡೂ ಮಾಧ್ವರ ಸಂಪತ್ತು ಎಂಬುದು ಹೆಮ್ಮೆಯ ವಿಷಯ. ಪ್ರತಿಶ್ಲೋಕಗಳ ಅನುವಾದದ ಸಂದರ್ಭದಲ್ಲಿ ಲಕ್ಷಾಲಂಕಾರವಿಲ್ಲದೆ ವ್ಯಾಖ್ಯಾನಿಸುವುದು ಅನರ್ಥಕ್ಕೆ ಕಾರಣವಾಗುತ್ತದೆ. ಉದಾ:-

★ 'ಕುಂತ್ಯಾ ಸಾಹ್ಯಂ ದ್ವೈಪಾಯನೋಬ್ರವೀತ್' ಎಂಬಲ್ಲಿ ಎಲ್ಲರೂ 'ಸಾಹ್ಯಂ= ಸಹಾಯವನ್ನು ಎಂದು ವ್ಯಾಖ್ಯಾನಿಸಿದ್ದಾರೆ. ಆದರೆ ರಾಜರು ಸಾಹ್ಯಂ= ಸಹನಶೀಲತಾ ಎಂದು ಸಂದರ್ಭೋಚಿತವಾಗಿ ವ್ಯಾಖ್ಯಾನಿಸಿದ್ದಾರೆ.

★ 'ಸುಭದ್ರಾಹರಣಾದೂರ್ಧ್ವಂ ಜ್ಞೇಯಂ ಹರಣಹಾರಿತಂ' ಎಂಬ ಅನುಕ್ರಮಣಿಕಾ ಅಧ್ಯಾಯದಲ್ಲಿ ಹರಣಹಾರಿತ ಎನ್ನುವುದನ್ನು ಯಾರು ಅನುವಾದಿಸಿಲ್ಲ. ರಾಜರು 'ಹರೇರಿದಂ ಹಾರಿ ತಸ್ಯಹರಣಸ್ಯ ಭಾವಃ ಹಾರಿತಾ ಹರಣಹಾರಿತಾ' ಎಂದು ವ್ಯಾಖ್ಯಾನಿಸಿದ್ದಾರೆ. ಸುಭದ್ರಾಹರಣಕ್ಕೆ ಶ್ರೀಹರಿಯ ಸಹಾಯವು ಎಂಬ ಕಥೆಯನ್ನು ಈ ಶಬ್ದದಿಂದ ತೋರಿಸಿದ್ದಾರೆ.

★ ಮಂತ್ರಪರ್ವ ತತಃ ಪರಂ= ರಾಜಸೂಯಾದ್ಯಾಲೋಚನ ಪರ್ವ.

★ 'ಅಚೋದಯದಮೇಯಾತ್ಮಾ ಫಣೀಂದ್ರಂ ಪದ್ಮಲೋಚನಃ' ಎಂಬ ಸಮುದ್ರ ಮಥನ ಪ್ರಕರಣದ ವಾಕ್ಯದಲ್ಲಿ ಫಣೀಂದ್ರನು ಮಂದರಗಿರಿಯನ್ನು ತಂದ ಎಂದು ಭಾಗವತಕ್ಕೆ ವಿರುದ್ಧವಾದಾಗ ಫಣೀಂದ್ರ ಪದಕ್ಕೆ 'ಗರುಡ'ನೆಂದು ವ್ಯಾಖ್ಯಾನಿಸಿ ವಿರೋಧ ಪರಿಹರಿಸಿದ್ದಾರೆ. 'ಫಣಿನಾಂ ಈಂ ಐಶ್ವರ್ಯಂ ದ್ರಾವಯತೀತಿ ಫಣೀಂದ್ರಃ'.

★ ಶ್ರಪಿತಾರ= ಅಡಿಗೆಯವವ

★ ಪ್ರಸ್ಥ= ಅಳತೆ ಬಟ್ಟಲು

★ ಶಾರ್ದೂಲ= ಶತರೇಖೋಪೇತ ಹಿಂಸ್ರಪ್ರಾಣಿ

★ ದ್ವೀಪಿ= ಸೂಕ್ಷ್ಮರೇಖಾಂಕನ ಉಳ್ಳ ಹಿಂಸ್ರಪ್ರಾಣಿ

★ ವಿಪೋಟಕಃ= ಸದೋಷಃ ಸ್ವಯಮನ್ಯೇಷಾಂ ನಿಂದಕಸ್ತು ವಿಪೋಟಕಃ

★ ರತ್ನಿ= ಮುಷ್ಟಿ ಅಳತೆ

★ ಅರತ್ನಿ= ಒಂದು ಗೇಣು. 'ಬದ್ಧ ಮುಷ್ಟಿಃ ಸ್ಮೃತೋ ರತ್ನಿರರತ್ನಿಃ ಪ್ರಸೃತಾಂಗುಲಿಃ' ಹಲಾಯುಧ.

★ ಖಗಮಾ= 'ಖಂ ಗಚ್ಛಂತೀತಿ ಖಗಮಾಃ' = ಬಾಣಗಳು

★ ಐಷ್ಟಕಃ= ಇಟ್ಟಿಗೆ ಮಾಡುವವ ದಾರುಕ= ಬಡಗಿ, ವಪ್ರಮಾನುಷಃ= ಗೋಡೆ ಕಟ್ಟುವವ

★ ಅರಿಷ್ಟಃ= ಕಾಗೆ 'ಅರಿಷ್ಟಃ ಕಶಟಃ ಕಾಕಃ' ಹಲಾಯುಧ

★ ಸ್ತ್ರೀ= ಒಮ್ಮೆ ಹಡೆದವಳು. ಗೌರೀ= ಇಪ್ಪತ್ತೆರಡು ವರ್ಷದವಳು ಶ್ಯಾಮಾ= ಯೌವ್ವನದ ಮಧ್ಯದಲ್ಲಿರುವವಳು. 'ದ್ವಾವಿಂಶದ್ವಾರ್ಷಿಕಾ ಗೌರೀ ಶ್ಯಾಮಾ ಯೌವನಮಧ್ಯಗಾ'

★ ಕೃತಾಕೃತಂ= ಬಂಗಾರ 'ಹೇಮರೂಪ್ಯೇ ಕೃತಾಕೃತೇ'

★ ಕಿಷ್ಕು= ಹಸ್ತಪರಿಮಿತಿ 'ಮೊಳ' 'ಕಿಷ್ಕುರ್ಹಸ್ತೇ ವಿತಸ್ತೌ ಚ'

★ ಕಲಾಪ= ಭೂಷಣ 'ಕಲಾಪೋ ಭೂಷಣೇ ಬರ್ಹೇ' ಅಭಿಧಾನ

★ ಪೌಷ್ಕರಿಕ= ಪದ್ಮನಾಭ

★ ತ್ರಿಶಿಖಾ= ಕೋಪದಿಂದ ಮೂಡಿದ ಹಣೆಯ ರೇಖೆಗಳು

★ ಗೋಶೀರ್ಷಕಂ=ಗೋರೋಚನ 'ತೈಲಪರ್ಣಿಕ ಗೋಶೀರ್ಷ ಹರಿಚಂದನಮಸ್ತ್ರಿಯಾಂ'

★ ಕಾಲೇಯಕ= ಕಾಶ್ಮೀರಿ ಕುಂಕುಮ (ಕಾಲೀದೇಶದಲ್ಲಿ ಹುಟ್ಟಿದ್ದು ಕಾಲೇಯಕ)

★ ಕುಣೇನಾಮಿವ ಬಿಲ್ವಾನಿ= ಕುಣಿ= ಕುತ್ತಿತವಾದ ಕೈಯುಳ್ಳವ 'ಸ್ಯಾದೇಡೇ ಬಧಿರಃ ಕುಬ್ಜೇ ಜಡುಲಃ ಕುಕರೇ ಕುಣಿಃ'

★ ಶೀಧುಪಾನೇನ= ಮಧುಪಾನದಿಂದ 'ಮೈರೇಯಮಾಸವಃ ಶೀಧುಃ'

★ ಪೃಥುಪ್ರೋಥಾನ್ಮಹಾಹನೂನ್= ಪೃಥು= ಪೃಷ್ಟವು ಪ್ರೋಥಃ= ಕಟಿ ಪ್ರದೇಶವು 'ಸ್ತ್ರಿಯಾಂ ಸ್ಫಿಜಾಕಟಿಃ ಪ್ರೋಥ ಉಪಸ್ಥೋ ವಕ್ಷ್ಯಮಾಣಯೋಃ'

★ ಅರಂಜಲ= ರಂಜಣಿಗೆ

★ ನಗ್ನಿಕಾ= ಅಪ್ರೌಢ ಕನ್ಯಾ 'ನಗ್ನಿಕಾನಾಗತಾರ್ತವಾ'

ಹೀಗೆ ಅನೇಕ ಕಠಿಣವಾಕ್ಯಗಳಿಗೆ ಸಂದರ್ಭೋಚಿತವಾಗಿ ವ್ಯಾಖ್ಯಾನಿಸುವ ಕೌಶಲ ರಾಜರದ್ದು.

★ ಮತ್ತೊಂದು ಕಡೆ 'ಸರಸ್ವತ್ಯಾಂ ಜರಾಸಂಧಂ' ಎಂದಿದೆ. ಸರಾಂಸಿ ಅಸ್ಯಾಂ ಅಸ್ತಿ ಇತಿ ಸರಸ್ವತೀ ಎಲ್ಲ ನದಿಗಳು ಇವಳಲ್ಲಿ ಇವೆಯಾದ್ದರಿಂದ ಸರಸ್ವತೀ ಎಂದರೆ 'ಯಮುನೆ' ಎಂದರ್ಥ ಮಾಡಿದ್ದಾರೆ.

★ ಪಾಂಡುವರೆಲ್ಲರು ಭಾರ್ಗವ ಕರ್ಮಶಾಲೆಯನ್ನು ಪ್ರವೇಶಿಸಿದರು ಎಂದಿದೆ. ಇಲ್ಲಿ ಭಾರ್ಗವ ಶಬ್ದಾರ್ಥ ತಿಳಿಯದು. ಭಾರ್ಗವ= ಕುಂಬಾರ. ಬಿಭರ್ತಿ ಭಾಂಡಭಾರಂ ಗಚ್ಛತಿ ವಾಪಯತಿ ಪ್ರಾಪಯತಿ ತತ್ತದಪೇಕ್ಷಿತ ಪಾತ್ರಾಣಿ ಇತಿ ಭಾರ್ಗವಃ. 'ಕುಲಾಲೋ ಭಾರ್ಗವಶ್ಚೈವ ಕುಂಭಕಾರೋ ನಿಗದ್ಯತೇ' ಅನುಶಾಸನ.

★ 'ರೇತೋಧಾಃ ಪುತ್ರಂ ನಯತಿ' ಎಂಬುದು ಶಕುಂತಲೆಯು ದುಷ್ಷಂತನಿಗೆ ಹೇಳುವ ವಚನ. ರೇತೋಧಾತಾರನಾದ ತಂದೆಯನ್ನು ಅಕ್ಷಯಲೋಕವನ್ನು ಕುರಿತು ಒಯ್ಯುತ್ತಾನೆ. ಇಲ್ಲಿ 'ರೇತೋಧಾತಾರಂ' ಎಂದಾಗಬೇಕಿತ್ತು. 'ವ್ಯತ್ಯಯೋ ಬಹುಲಮ್' ಎಂಬ ಸೂತ್ರದಿಂದ ತಮ್ಮ ಗ್ರಂಥವು ವೇದಸಮಾನವೆಂದು ತೋರಿಸಲು ವ್ಯಾಸರು ಹೀಗೆ ವ್ಯತ್ಯಾಸಗಳನ್ನು ಮಾಡಿದ್ದಾರೆ.

★ ಇದೇ ಪ್ರಸಂಗದಲ್ಲಿ ಶಕುಂತಲೆಗೆ ದುಷ್ಷಂತನು 'ವಾಮಾಃ ಸ್ತ್ರಿಯಃ' 'ಅರಿಷ್ಟ ಇವ ದುರ್ಬುದ್ಧಿಃ' ಎಂದು ನಿಂದಿಸುತ್ತಾನೆ. ಇಲ್ಲಿ ರಾಜರು ವಾಮಾಃ= ಗಂಡನಿಗೆ ಪ್ರತೀಕಾರ ಮಾಡುವವರು ಎಂದು ಕೋಶದ ಆಧಾರದಲ್ಲಿ ಅರ್ಥೈಸಿದ್ದಾರೆ. ಅರಿಷ್ಟ ಇವ= ಎಂದರೆ ಕಾಗೆಯಂತೆ ಎಂದು ಅರ್ಥೈಸಿದ್ದಾರೆ.

'ಬ್ರಹ್ಮಾಪಿ ತನ್ನ ಜಾನಾತಿ ಈಷತ್ಸರ್ವೋಽಪಿ ಜಾನತಿ ।
ಬಹ್ವರ್ಥಂ ಋಷಯಸ್ತತ್ತು ಭಾರತಂ ಪ್ರವದಂತಿ ಹಿ ॥'

ಎಂಬ ಮಾತು ರಾಜರ ಲಕ್ಷಾಲಂಕಾರವನ್ನು ಗಮನಿಸಿದಾಗ ದಿಟವೆನಿಸುತ್ತದೆ.

ಸಂದಿಗ್ಧಾರ್ಥಕ, ವಿಪರೀತಾರ್ಥಕ ಶಬ್ದಗಳಿಗೆ ಸಾಂದರ್ಭಿಕವಾಗಿ ಸ್ವಾರಸ್ಯ ಪೂರ್ಣ ಅರ್ಥವನ್ನು ಹೇಳಿದ ಕೀರ್ತಿ ರಾಜರಿಗೆ ಸಲ್ಲುತ್ತದೆ.

ಇತ್ತೀಚೆಗೆ ಮಹಾಭಾರತದ ವಿಮರ್ಶಾತ್ಮಕ ಸಂಸ್ಕರಣವನ್ನು ಪ್ರಕಟಿಸಬೇಕೆಂದು ಆಧುನಿಕ ವಿದ್ವಾಂಸರು ಆಲೋಚಿಸಿದಾಗ ಮದ್ರಾಸ್ ವಿಶ್ವವಿದ್ಯಾನಿಲಯ ಪ್ರೊ. ಪಿ.ಎಸ್. ಶಾಸ್ತ್ರಿಯವರು ಶ್ರೀವಾದಿರಾಜರು ತಮ್ಮ ವ್ಯಾಖ್ಯಾನಕ್ಕೆ ಮೂಲವಾಗಿ ಹಿಡಿದ ಮಹಾಭಾರತದ ಪಾಠವೇ ಸರಿಯಾದ ಪಾಠ ಎಂದು ಹೇಳಿ ಅದನ್ನನುಸರಿಸಿಯೇ ತಮ್ಮ ವಿಮರ್ಶಾತ್ಮಕ ಸಂಸ್ಕರಣವನ್ನು ಪ್ರಕಟಿಸಿದರು. ಸಭಾಪರ್ವದ ಲಾಕ್ಷಾಭರಣವನ್ನು ಪ್ರಕಟಿಸಿರುವರು.

ವಾವಿಳ್ಳ ರಾಮಸ್ವಾಮಿಯವರ ಮುದ್ರಿತ ಪುಸ್ತಕದಲ್ಲಿಯೂ ಸಭಾಪರ್ವದಲ್ಲಿ ಲಕ್ಷಾಲಂಕಾರದ ವ್ಯಾಖ್ಯಾನವನ್ನು ಸೇರಿಸಿರುವುದು ಅಚ್ಚರಿಯ ಸಂಗತಿ. ಅವರು ಹಸ್ತಪ್ರತಿಗಳನ್ನು ಶೋಧನೆ ಮಾಡುವಾಗ ಲಕ್ಷಾಲಂಕಾರದ ಮಾರ್ಗದರ್ಶನದಲ್ಲಿಯೇ ಸಂಶೋಧನೆ ಮಾಡಿರುವುದು ಇದರಿಂದ ಸಾಬೀತಾಗುತ್ತದೆ. ಆದರೆ ಮುಂದಿನ ಪರ್ವಗಳಲ್ಲಿ ಲಕ್ಷಾಲಂಕಾರದ ಮುದ್ರಣವನ್ನು ಕೈಬಿಟ್ಟಿರುವುದು ಕಂಡು ಕೆಲವರು ತಡೆಯುಂಟು ಮಾಡಿದ್ದನ್ನು ಊಹಿಸಬಹುದು.

ಮುದ್ರಿತಪುಸ್ತಕಗಳಲ್ಲಿ ವಾವಿಳ್ಳ ರಾಮಸ್ವಾಮಿಯವರ ಪುಸ್ತಕ ನಮಗೆ ಹೆಚ್ಚು ಹತ್ತಿರವಿರುವುದನ್ನು ಇಲ್ಲಿ ಸ್ಪಷ್ಟಪಡಿಸಬೇಕಾಗಿದೆ.

ಪುಣೆಯ ಭಂಡಾರಕರ ಸಂಸ್ಥೆಯ ವಿಮರ್ಶಾತ್ಮಕ ಸಂಸ್ಕರಣದ ಯೋಜನೆಯನ್ನು ರೂಪಿಸಿದ ಡಾ॥ ಸುಕ್ಥಂಕರರು ಕೂಡ ಲಕ್ಷಾಭರಣವನ್ನು ಅನುಸರಿಸುವ ಪಾಠ ಪ್ರಾಮಾಣಿಕ ಎಂದು ಸಾರಿದರು. ಅವರು ತಮ್ಮ 'Meaning of Mahabharatha' ಎಂಬ ಗ್ರಂಥದಲ್ಲಿ ಶ್ರೀಮಧ್ವಾಚಾರ್ಯರ ಮಹಾಭಾರತ ತಾತ್ಪರ್ಯ ನಿರ್ಣಯವನ್ನು ಮುಕ್ತಕಂಠದಿಂದ ಹೊಗಳಿರುವರು.

ಶ್ರೀವಾದಿರಾಜರು ಸನತ್ಸುಜಾತೀಯ ವಿಷ್ಣುಸಹಸ್ರನಾಮ ಇತ್ಯಾದಿ ಅಧ್ಯಾತ್ಮಿಕ ಭಾಗಗಳಿಗೆ ಲಾಕ್ಷಾಭರಣದಲ್ಲಿ ವಿಸ್ತಾರವಾಗಿ ವ್ಯಾಖ್ಯಾನ ಮಾಡಿರುವರು. ಆದ್ದರಿಂದ ಇವು ಪ್ರತ್ಯೇಕ ಗ್ರಂಥಗಳಂತೆಯೇ ಪ್ರಕಟಿಸಲ್ಪಟ್ಟಿರುವುವು. ಇನ್ನುಳಿದ ಕಡೆಗೆ ಮುಖ್ಯವಾದ

ಪದಗಳನ್ನು ಮಾತ್ರ ವಿವರಿಸಿರುವರು. ತಮ್ಮ ವ್ಯಾಖ್ಯಾನವನ್ನು ಸಮರ್ಥಿಸಲು ಅನೇಕ ಕೋಶಗಳ ವಚನಗಳನ್ನು ಉಲ್ಲೇಖಿಸಿರುವರು. ಶ್ರೀವಾದಿರಾಜರ ವ್ಯಾಖ್ಯಾನವು ಮೂರು ವೈಶಿಷ್ಟ್ಯಗಳಿಂದ ಕೂಡಿದೆ.

೧. ಆಪಾತತಃ ತೋರುವ ಅರ್ಥಕ್ಕಿಂತ ಆಳವಾಗಿ ಹೋಗಿ ದಾರ್ಶನಿಕ ಮಹತ್ವವುಳ್ಳ ಅರ್ಥಗಳನ್ನು ವಿವರಿಸುವರು.

೨. ಪ್ರಮೇಯಗಳ ವಿವರಗಳನ್ನೂ ಪೌರಾಣಿಕ ವಿವರಗಳನ್ನೂ ಒದಗಿಸುವರು.

೩. ಪೂರ್ವೋತ್ತರ ಕಥಾ ಸಂದರ್ಭಗಳನ್ನು ಒದಗಿಸುವರು ಮತ್ತು ವಿರೋಧವನ್ನು ಪರಿಹರಿಸುವರು.

ಉದಾಹರಣೆಗೆ 'ಕಾಲಃ ಸೃಜನೇ' ಎಂಬ ವಾಕ್ಯಕ್ಕೆ ಕಾಲವು ಸೃಷ್ಟಿ ಮಾಡುತ್ತತೆ ಎಂದು ಆಪಾತತಃ ಅರ್ಥವಾಗುತ್ತದೆ. ಇದನ್ನು ಶ್ರೀವಾದಿರಾಜರು 'ಕಲ ಜ್ಞಾನೇ' ಧಾತುವಿನಿಂದ ನಿಷ್ಪನ್ನವಾದ ಕಾಲ ಪದದಿಂದ ಕಾಲ ನಿಯಾಮಕ ಸರ್ವಜ್ಞನಾದ ವಿಷ್ಣುವು ವಾಚ್ಯನಾಗಿದ್ದಾನೆ. ಅವನೇ ಸೃಷ್ಟಿ ಮಾಡುತ್ತಾನೆ ಎಂದು ವಿವರಿಸಿದ್ದಾರೆ. 'ಸದಸದಾತ್ಮಕಂ' ಎಂಬುದಕ್ಕೆ ಸತ್ ಮತ್ತು ಅಸತ್ ಎರಡೂ ಆದವನು ಎಂದು ಆಪಾತತಃ ಅರ್ಥವು ತೋರುತ್ತದೆ. ಇದನ್ನು ಕಾರ್ಯಕಾರಣ ರೂಪವಾದ ಜಗತ್ತಿನ ಅಂತರ್ಯಾಮಿ ಎಂದು ವಿವರಿಸುತ್ತಾರೆ. ಸತ್ ಅಂದರೆ ಸಜ್ಜನರು ಅಸತ್ ಅಶುಭ ಜೀವರು ಆತ್ಮನ ಉದರದಲ್ಲಿ ಯಾರಿಗೆ ಇರುವರೋ ಆ ಪರಮಾತ್ಮನು ಎಂದು ವಿವರಿಸುತ್ತಾರೆ.

'ಪ್ರಜಾನಾಂ ಪತಯಃ ಏಕವಿಂಶತಿಃ' ಎಂಬುದನ್ನು ವಿವರಿಸುತ್ತ ೧೪ ಮನುಗಳಲ್ಲಿ ಸ್ವಾಯಂಭುವ ಮನು ವಿಷ್ಣು ಬಿಟ್ಟು ೧೨ ಮನುಗಳು ಒಂಭತ್ತು ಲೋಕಪಾಲಕರು ಹೀಗೆ ೨೧ ಸಂಖ್ಯೆಯನ್ನು ಹೊಂದಿಸುತ್ತಾರೆ.

'ರಹಸ್ಯಂ ತ್ರಿವಿಧಂ' ಎಂಬಲ್ಲಿ ದೇವರಹಸ್ಯ ವೇದರಹಸ್ಯ ಧರ್ಮ ರಹಸ್ಯಗಳನ್ನು ಎರಡು ರೀತಿಯಿಂದ ಹೊಂದಿಸುತ್ತ ಪ್ರಕೃತ ಮಹಾಭಾರತದ ಕಥೆಯಲ್ಲಿ ದ್ರೌಪದಿಯಲ್ಲಿ ಐದು ಜನ ಅಧಿಷ್ಠಾನವಿರುವುದು ದೇವರಹಸ್ಯ, ಕುಂತಿಗೆ ದೂರ್ವಾಸರು ಮಂತ್ರಗಳನ್ನು ಉಪದೇಶ ಮಾಡಿದ್ದು ವೇದರಹಸ್ಯ, ಮಹಾಭಾರತದಲ್ಲಿ ಸ್ತ್ರೀಯರು ಸಂತಾನಾರ್ಥವಾಗಿ ದೇವಸ್ಥಾನಾದಿ ಪುರುಷಾಂತರ ಸಮಾಗಮ ಮಾಡಿದ್ದು ಧರ್ಮರಹಸ್ಯ ಎಂದು ವಿವರಿಸಿದ್ದಾರೆ.

ಹೀಗೆ ಶ್ರೀವಾದಿರಾಜರ ಲಾಕ್ಷಾಭರಣವು ಕೇವಲ ಮಹಾಭಾರತದ ಕೆಲವು ಶ್ಲೋಕಗಳ ಕೆಲವು ಪದಗಳಿಗೆ ಪದಪದಾರ್ಥ ಬರೆದ ವ್ಯಾಖ್ಯಾನವಲ್ಲ. ಹೊರತು ಮಹಾಭಾರತದ

ಕಥೆಯಲ್ಲಿಯ ಧರ್ಮಸೂಕ್ಷ್ಮಗಳು ಪ್ರಮೇಯಗಳು ಪೌರಾಣಿಕ ವಿವರಗಳು ಪರಮಾತ್ಮನ ಮಹಿಮೆ ಹೀಗೆ ಭಾಷಾತ್ರಯರಿಂದ ತಿಳಿದುಕೊಳ್ಳಬೇಕಾದ ವಿಷಯಗಳನ್ನು ವಿವರಿಸುವ ಶ್ರೇಷ್ಠ ಗ್ರಂಥ. ಅವರ ಯುಕ್ತಿಮಲ್ಲಿಕಾದಲ್ಲಿ ಅನೇಕ ವಿಷಯ ವಿಸ್ತಾರವಿರುವಂತೆ ಇಲ್ಲಿಯೂ ವಿಷಯ ವಿಸ್ತಾರವಿದೆ.

ಹೀಗೆ ಲಕ್ಷಾಲಂಕಾರವನ್ನು ಗಮನಿಸದೆ; ತಾತ್ಪರ್ಯನಿರ್ಣಯವನ್ನು ಅವಲೋಕಿಸದೆ ಅನುವಾದಗೊಂಡಿರುವ ಅನೇಕ ಪುಸ್ತಕಗಳು ಇವೆ. ಇವುಗಳಿಂದ ಭಾರತಾರ್ಥವು ಪೂರ್ಣವೇದ್ಯವಾಗದು. ಇದು ನಮಗೆ ಉಪಲಬ್ಧ ಇರುವ ಅನೇಕ ಮೂಲಪ್ರತಿಗಳು ಮತ್ತು ವ್ಯಾಖ್ಯಾನ ಗ್ರಂಥಗಳನ್ನು ಆಧರಿಸಿ ಲಕ್ಷಾಲಂಕಾರ ವ್ಯಾಖ್ಯಾನದ ಜೊತೆಗೆ ಆಯಾ ಅಧ್ಯಾಯಕ್ಕೆ ಸಂಬಂಧಿಸಿದ ಶ್ರೀಮದಾಚಾರ್ಯರ ತಾತ್ಪರ್ಯ ನಿರ್ಣಯದ ಭಾಗಗಳನ್ನು ಅದರ ಅನುವಾದವನ್ನೂ ಸೇರಿಸಿದ್ದೇವೆ. ಸಹೃದಯ ಜಿಜ್ಞಾಸು ಓದುಗರಿಗೆ ಈ ಗ್ರಂಥ ರಸಾಂಬುಧಿಯಲ್ಲಿ ಆನಂದಮಜ್ಜನೋತ್ಸವವು ನಿಯಮೇನ ನಡೆಯುತ್ತದೆ ಎಂಬುದು ನಮ್ಮ ಗ್ರಹಿಕೆ.

ನಮ್ಮ ಈ ಯೋಜನೆಯು ಪರಮಪೂಜ್ಯ ಪ್ರಾತಃಸ್ಮರಣೀಯರಾದ ಶ್ರೀ ಶ್ರೀ ವಿದ್ಯಾಮಾನ್ಯತೀರ್ಥರ ಪರಮಾನುಗ್ರಹದಿಂದ ಅವರ ಜನ್ಮಶತಮನೋತ್ಸವದ ಅಂಗವಾಗಿ ಹೊರಹೊಮ್ಮುತ್ತಿದೆ. ನಿತ್ಯವೂ ಇವರ ಅನುಗ್ರಹ ರಕ್ಷೆಯನ್ನು ಬಯಸುತ್ತೇವೆ.

ಇದರಂತೆ ನಮ್ಮ ಸಮಸ್ತ ಸತ್ಕರ್ಮಗಳಲ್ಲಿಯೂ ವಿಶೇಷವಾಗಿ ಬೆಂಬಲಿಸಿ ಪ್ರೋತ್ಸಾಹಿಸುವ ಪಂಚಮ ಪರ್ಯಾಯೋತ್ಸವವನ್ನು ಕೈಗೊಳ್ಳಲಿರುವ ಪರಮಪೂಜ್ಯ ಪೇಜಾವರ ಮಠಾಧೀಶರಾದ ಶ್ರೀ ಶ್ರೀ ವಿಶ್ವೇಶತೀರ್ಥರು ಉತ್ತಮವಾದ ಅನುಗ್ರಹ ಸಂದೇಶವನ್ನಿತ್ತು ಅನುಗ್ರಹಿಸಿದ್ದಾರೆ. ಗುರುಗಳಿಗೆ ಅನಂತ ಸಾಷ್ಟಾಂಗ ನಮಸ್ಕಾರ ಪೂರ್ವಕ ಕೃತಜ್ಞತೆಗಳು. ಪಲಿಮಾರು ಮಠಾಧೀಶರಾದ ಪರಮಪೂಜ್ಯ ಶ್ರೀ ಶ್ರೀ ವಿದ್ಯಾಧೀಶ ತೀರ್ಥ ಶ್ರೀಪಾದರು ಅನೇಕ ವರ್ಷಗಳಿಂದ ಈ ಕೃತಿರತ್ನವನ್ನು ಸಮಾಜಕ್ಕೆ ನೀಡಲು ಅವಿರತ ಶ್ರಮ ವಹಿಸಿರುತ್ತಾರೆ. ಈ ಭಾರತಗಂಗೆಯ ಭಾಗೀರಥರು ಶ್ರೀಪಾದರು, ನಿರ್ಮಲ ಜ್ಞಾನಗಂಗೆಯು ಪ್ರವಹಿಸಲೆಂದು ಒದಗಿ ಬಂದ ಅನೇಕ ವಿಡ್ಡೂರಗಳ ಗುಡ್ಡೆಯನ್ನೇ ಛೇದಿಸಿದ್ದಾರೆ. ಇವರ ತಾಳ್ಮೆ-ಜಾಣ್ಮೆ-ಪರಿಶ್ರಮ-ಧನದ ವಿನಿಯೋಗ-ಪಂಡಿತ ಪೋಷಣೆ- ಪ್ರೋತ್ಸಹಗಳ ಪ್ರತೀಕವಾಗಿ ಈ ಕೃತಿಯು ಸಮಾಜದ ಸಜ್ಜನರ ಕೈ ತಲುಪುತ್ತಿದೆ. ಶ್ರೀಪಾದರಿಗೆ ಈ ಸತ್ಕರ್ಮದಲ್ಲಿ ತೊಡಗಿಸಿಕೊಂಡಿರುವ ನಾವೆಲ್ಲರೂ ಋಣಿಗಳಾಗಿದ್ದೇವೆ.

ಪರಮಪೂಜ್ಯ ಪಲಿಮಾರು ಶ್ರೀಪಾದರ ಯೋಜನೆಗೆ ವಿಶೇಷವಾದ ಪ್ರೋತ್ಸಾಹವನ್ನು ನೀಡುವುದರ ಜೊತೆಗೆ ಅನುಗ್ರಹ ಸಂದೇಶವನ್ನೂ ದಯಪಾಲಿಸಿದ ಅದಮಾರು

ಮಠಾಧೀಶರಾದ ಪರಮಪೂಜ್ಯ ಶ್ರೀ ಶ್ರೀ ವಿಶ್ವಪ್ರಿಯತೀರ್ಥಶ್ರೀಪಾದರಿಗೆ ಸಾಷ್ಟಾಂಗ ಪ್ರಣಾಮ ಪೂರ್ವಕ ಕೃತಜ್ಞತೆಗಳು.

ಇದರಂತೆ ಅನೇಕ ಮಠಾಧೀಶರು ಸಂಶೋಧನೆಗೆ ಬೇಕಾದ ಮೂಲ ಮಾತೃಕೆಗಳನ್ನು ಒದಗಿಸಿಕೊಟ್ಟು ಅನುಗ್ರಹಿಸಿರುತ್ತಾರೆ. ಎಲ್ಲ ಮಠಾಧೀಶರನ್ನೂ ಕೃತಜ್ಞತಾಪೂರ್ವಕ ನಮಿಸುತ್ತೇವೆ. ಪರಮಪೂಜ್ಯ ಸೋದೆ ಶ್ರೀವಾದಿರಾಜ ಮಠಾಧೀಶರಾದ ಶ್ರೀ ಶ್ರೀ ವಿಶ್ವವಲ್ಲಭತೀರ್ಥ ಶ್ರೀಪಾದರು ಲಕ್ಷಾಲಂಕಾರದ ಮೂಲ ಮಾತೃಕೆಗಳನ್ನು ಸಂಶೋಧನೆಗಾಗಿ ನೀಡಿ ಉಪಕರಿಸಿದ್ದಲ್ಲದೆ ಉತ್ತಮ ಅನುಗ್ರಹ ಸಂದೇಶವನ್ನಿತ್ತು ಅನುಗ್ರಹಿಸಿರುತ್ತಾರೆ. ಇವರಿಗೂ ನಮ್ಮ ಸಂಸತ್ತಿನ ವತಿಯಿಂದ ಸಾಷ್ಟಾಂಗ ನಮಸ್ಕಾರ ಪೂರ್ವಕ ಕೃತಜ್ಞತೆಗಳನ್ನು ಸಲ್ಲಿಸುತ್ತೇವೆ. ಮತ್ತು ಅದಮಾರು ಕಿರಿಯ ಮಠಾಧೀಶರಾದ ಶ್ರೀ ಶ್ರೀ ಈಶಪ್ರಿಯತೀರ್ಥ ಶ್ರೀಪಾದರು ಸಾಕಷ್ಟು ಪ್ರೋತ್ಸಾಹವನ್ನು ನೀಡಿದ್ದಾರೆ. ಇವರಿಗೂ ಸಾಷ್ಟಾಂಗ ಪ್ರಣಾಮ ಪೂರ್ವಕ ಕೃತಜ್ಞತೆಗಳು.

ಮಹಾಭಾರತ ಶ್ಲೋಕಗಳ ಅನುವಾದಕಾರ್ಯದಲ್ಲಿ ಅವಿರತ ಪರಿಶ್ರಮವನ್ನು ಪಟ್ಟಿರುವ ವಿದ್ವಾನ್ ಪಿ.ಎಸ್. ಶೇಷಗಿರಿ ಆಚಾರ್ಯರು ಅಭಿನಂದನಾರ್ಹರಾಗಿದ್ದಾರೆ. ಲಕ್ಷಾಲಂಕಾರದ ಹಿನ್ನೆಲೆಯಲ್ಲಿ ಸಮಗ್ರ ಆದಿಪರ್ವ ಸಭಾಪರ್ವಗಳನ್ನು ಅನುವಾದಿಸಿ ಕೊಟ್ಟಿದ್ದಾರೆ. ಗ್ರಂಥ ಸಂಶೋಧನೆಯಲ್ಲಿಯೇ ತೊಡಗಿಸಿಕೊಂಡಿರುವ ಇವರ ಅನೇಕ ಸತ್ಕರ್ಮರೂಪವಾದ ಕೃತಿಗಳು ಶ್ಲಾಘನೀಯವಾದದ್ದು.

ವಿದ್ವಾನ್ ಕೆ. ಹಯವದನ ಪುರಾಣಿಕರು ಮಾಡಿದ ತಾತ್ಪರ್ಯ ನಿರ್ಣಯದ ಅನುವಾದದ ಕೆಲವು ಭಾಗಗಳನ್ನು ಸೇರಿಸಿದ್ದೇವೆ. ಶ್ರೇಷ್ಠ ವಿದ್ವಾಂಸರಾದ ಇವರಿಗೂ ಸಂಸತ್ತಿನ ವತಿಯಿಂದ ಕೃತಜ್ಞತೆಗಳು. ಶ್ರೀ ಹೃಷೀಕೇಶತೀರ್ಥರು ಬರೆದ ಮಹಾಭಾರತ ತಾತ್ಪರ್ಯ ನಿರ್ಣಯದ ಶುದ್ಧಪಾಠವನ್ನು ಸಂಶೋಧಿಸಿ ಕೊಟ್ಟ ಉತ್ತಮ ಮಾರ್ಗದರ್ಶನವನ್ನು ನೀಡಿರುವ ವಿದ್ಯಾವಾಚಸ್ಪತಿ ಶ್ರೀ ಬನ್ನಂಜೆ ಗೋವಿಂದಾಚಾರ್ಯರಿಗೆ ನಮಸ್ಕಾರ ಪೂರ್ವಕ ಕೃತಜ್ಞತೆಗಳು.

ವಿದ್ವಾನ್ ಪಿ.ಎಸ್. ಶೇಷಗಿರಿ ಆಚಾರ್ಯರ ಅನುವಾದವನ್ನು ಆಮೂಲಾಗ್ರವಾಗಿ ಪರಿಶೀಲಿಸಿ ಕೊಟ್ಟ ವಿದ್ವಾನ್ ಪಾಂಡುರಂಗ ಪಾಂಡುರಂಗಿಯವರಿಗೆ ಕೃತಜ್ಞತೆಗಳು.

ಮಹಾಭಾರತ ಬೃಹದ್ ಯೋಜನೆಯ ದೊಡ್ಡ ಜವಾಬ್ದಾರಿಯನ್ನು ತಲೆಗೇರಿಸಿಕೊಂಡು ಎಲ್ಲಾ ವಿದ್ವಾಂಸರನ್ನು ಸೇರಿಸಿ ಶ್ರೀಪಾದರಿಗೆ ಸಮ್ಮತವಾಗುವಂತೆ

ಯೋಜನೆಯನ್ನು ಕ್ರಮಬದ್ಧಗೊಳಿಸಿದ ವಿದ್ವಾನ್ ಬೆಮ್ಮತ್ತಿ ವೇಂಕಟೇಶಾಚಾರ್ಯರು ಅಭಿನಂದನೀಯರಾಗಿದ್ದಾರೆ. ಯೋಜನೆಗಾಗಿ ಅನೇಕವರ್ಷ ಯೋಚಿಸಿದ್ದಾರೆ; ಶ್ರಮವಹಿಸಿದ್ದಾರೆ. ಇವರ ಪರಿಶ್ರಮದ ಫಲವಾಗಿಯೂ ಈ ಕೃತಿಯು ಹೊರಹೊಮ್ಮಿದೆ. ಇವರಿಗೆ ಸಂಸ್ಥೆಯ ವತಿಯಿಂದ ಕೃತಜ್ಞತೆಗಳು.

ಕೃತಿ ಪ್ರಕಾಶನಕ್ಕೆ ಅನೇಕ ಮಹನೀಯರು ಧನಸೇವೆಯನ್ನು ಸಲ್ಲಿಸಿದ್ದಾರೆ. ಉದಾರ ಹೃದಯದ ಸಜ್ಜನವರ್ಗಕ್ಕೆ ನಮ್ಮ ಕೃತಜ್ಞತೆಗಳು. ಪ್ರಕಾಶನಕ್ಕೆ ನಿತ್ಯ ಶ್ರಮವಹಿಸಿದ ವಿದ್ವಾನ್ ಗಿರೀಶಾಚಾರ್ಯ, ಶ್ರೀಯುತ ಸಿ. ಮುರಳೀ, ಬೆಂಗಳೂರು, ಶ್ರೀಯುತ ಕಿರಣ ರಾಘವೇಂದ್ರ, ಬೆಂಗಳೂರು, ಬಿ.ಎನ್. ಶ್ರೀಶ, ಹಾಗೂ ಕರಡುಪ್ರತಿಯನ್ನು ತಿದ್ದಲು ಸಹಕರಿಸಿದ ಮೈಸೂರಿನ ಅನೇಕ ಅಧ್ಯಾತ್ಮ ಬಂಧುಗಳು. ಪ್ರತ್ಯಕ್ಷವಾಗಿ ಪರೋಕ್ಷವಾಗಿ ಸಹಕರಿಸಿದ ಎಲ್ಲರಿಗೂ ಸಂಸ್ಥೆಯ ವತಿಯಿಂದ ಕೃತಜ್ಞತೆಗಳು.

ಪ್ರಕಾಶಕರು

ತತ್ತ್ವಸಂಶೋಧನಸಂಸತ್, ಉಡುಪಿ.

ಮಹಾಭಾರತದ ಮಹತ್ವ

ಮಹಾಭಾರತದ ಸ್ಥಾನಮಾನ ಅದ್ಭುತ ! ಯಾರಿಂದಲೂ ಊಹಿಸಲಾಗದಷ್ಟು ದೊಡ್ಡ ಕೃತಿ. ಈ ದೇಶದ ನೆಲದಲ್ಲಿ ಓಡಾಡುತ್ತಿರುವ ಪ್ರತಿಯೊಬ್ಬರ ನರನಾಡಿಗಳಲ್ಲಿ ಹರಿಯುತ್ತಿರುವ ಗ್ರಂಥವೆಂದರೆ ಅದು 'ಮಹಾಭಾರತ' ಮಾತ್ರ. ಪ್ರತಿಯೊಬ್ಬ ಭಾರತೀಯರ ಅವಿಭಾಜ್ಯ ಅಂಗ 'ಮಹಾಭಾರತ'. ಅಷ್ಟೇ ಅಲ್ಲದೇ ಭಾರತೀಯ ಸಂಸ್ಕೃತಿ, ಕಲೆ, ಶಿಲ್ಪಶಾಸ್ತ್ರ ಎಲ್ಲವೂ ಕೂಡ ನಮ್ಮ ದೇಶದಲ್ಲಿ ಪ್ರವಹಿಸುತ್ತಿರುವುದು ಮಹಾಭಾರತದ ಹಿನ್ನೆಲೆಯಲ್ಲಿ, ಮಹಾಭಾರತವು ಸಮಾಜದ ಎಲ್ಲ ಸ್ತರಗಳಲ್ಲಿಯೂ ತನ್ನ ಮಾರ್ಗದರ್ಶನದ ಅಚ್ಚೊತ್ತಿದೆ.

ಪ್ರಪಂಚದಲ್ಲಿ ಏನೇನು ಒಳಿತುಗಳು ಶುಭಕಾರ್ಯಗಳು ಕಾಣಿಸುತ್ತಿವೆಯೋ, ಆ ಎಲ್ಲಾ ಕಾರ್ಯಗಳಿಗೂ ಮಹಾಭಾರತವೇ ಆಕರ. ಮಹಾಭಾರತದಲ್ಲಿ ಇಲ್ಲದ್ದನ್ನು ಬೇರೆ ಎಲ್ಲಿಯೂ ನಾವು ಕಾಣಲಾರೆವು. ಬೇರೆ ಎಲ್ಲಿಯೇ ಕಂಡಿರುವುದೂ ಕೂಡ ಮಹಾಭಾರತದಲ್ಲಿಯೇ ಇದೆ. ಈ ಹೇಳಿಕೆ ಸಾರ್ವದೇಶಿಕ ಹಾಗೂ ಸಾರ್ವಕಾಲಿಕ.

'ಮಹಾಭಾರತ' ಎಂಬ ಒಂದು ಗ್ರಂಥವಿದ್ದರೆ ಎಲ್ಲವೂ ಇದ್ದಂತೆ. 'ಮಹಾಭಾರತ' ಎಂಬ ಒಂದು ಗ್ರಂಥ ಇಲ್ಲದಿದ್ದರೆ ಯಾವ ಗ್ರಂಥವೂ ಕೂಡ ಇಲ್ಲದಂತೆ. ಈ ಗ್ರಂಥವು ಸಾಗರಕ್ಕಿಂತಲೂ ಆಳ ಮತ್ತು ಗಂಭೀರ, ಆಕಾಶಕ್ಕಿಂತಲೂ ಎತ್ತರ ಮತ್ತು ವಿಶಾಲ.

ಪ್ರತಿಯೊಬ್ಬ ಭಾರತೀಯರಲ್ಲಿ ಹುದುಗಿರುವ ಧೈರ್ಯ, ಸ್ಥೈರ್ಯ, ಸಂಸ್ಕೃತಿ, ಪ್ರಜ್ಞೆ ಈ ಎಲ್ಲಾ ಗುಣಗಳನ್ನು ನೀಡಿರುವುದೇ ಮಹಾಭಾರತ. ಆದ್ದರಿಂದ ಅನೇಕ ರಾಜಕೀಯ ಅಲ್ಲೋಲ-ಕಲ್ಲೋಲಗಳು, ಶತ್ರುಗಳ ಆಕ್ರಮಣಗಳು, ನಾಸ್ತಿಕರ ಮಾನಸಿಕ ಹಿಂಸೆಗಳು ಇವೆಲ್ಲವೂ ನಮ್ಮ ದೇಶದಲ್ಲಿ ನಡೆದಿದ್ದರೂ ಅವೆಲ್ಲವನ್ನು ಎದುರಿಸಿ ಮಹಾಭಾರತ ಗ್ರಂಥವು ಅಚಲವಾಗಿ ನಿಂತಿದೆ. ಗಂಗೆಯಂತೆ ನಿರ್ಮಲವಾಗಿ ಪ್ರವಹಿಸುತ್ತಲೇ ಇದೆ. ಎಲ್ಲಿಯವರೆಗೆ ನಾವು ಮಹಾಭಾರತದಲ್ಲಿ ತಿಳಿಸಿರುವ ಪದ್ಧತಿಯನ್ನು ಅನುಸರಿಸುತ್ತಿರುತ್ತೇವೋ, ಅಲ್ಲಿಯ ತನಕವೂ ನಾವು ಕ್ಷೇಮವಾಗಿಯೇ ಇರುತ್ತೇವೆ. ಯಾವಾಗ ಮಹಾಭಾರತದಲ್ಲಿ ತಿಳಿಸಿರುವ ಪದ್ಧತಿಯನ್ನು ತಿರಸ್ಕರಿಸುತ್ತೇವೋ ಅಂದೇ ನಮ್ಮ ಅಧಃಪತನ ಪ್ರಾರಂಭ.

ನಮ್ಮ ಜೀವನದ ಕೆಲವು ಕಾಲದ ಅಲೆಗಳ ಮಧ್ಯದಲ್ಲಿ ಯಾವ ಕ್ಷಣಗಳಲ್ಲಿ ಮಹಾಭಾರತದ ಮಾರ್ಗದರ್ಶನದಿಂದ ನಾವು ದೂರವಾಗಿದ್ದೇವೋ, ಅಂದಿನ ದಿನಗಳೆಲ್ಲೆಲ್ಲಾ ಅನೇಕ ಕಷ್ಟ-ನಷ್ಟಗಳನ್ನೇ ಅನುಭವಿಸಿದ್ದೇವೆ. ಆದರೆ ನಮ್ಮ ಜೀವನದಲ್ಲಿ ಯಾವ ಕ್ಷಣಗಳನ್ನು ಮಹಾಭಾರತದ ಮಾರ್ಗದರ್ಶನದಲ್ಲಿ ಪುರಾತನ ಸಂಸ್ಕೃತಿಯ

ಹಿನ್ನೆಲೆಯಲ್ಲಿ ಪ್ರಾಮಾಣಿಕವಾಗಿ ಪರೋಪಕಾರಕ್ಕಾಗಿ ದೇವರ ಸೇವೆಗಾಗಿ ಮುಡಿಪಾಗಿಟ್ಟಿದ್ದೇವೋ, ಅಂದಿನ ಕ್ಷಣಗಳೆಲ್ಲವೂ ಅತ್ಯಂತ ಶಾಂತಿದಾಯಕವಾಗಿವೆ.

ಅನೇಕ ಮಹಾತ್ಮರು ಅನೇಕ ಬಾರಿ ಜನಿಸಿ, ನಮ್ಮನ್ನು ತಪ್ಪುದಾರಿಯಿಂದ ಸುಗಮದಾರಿಗೆ' ತಂದು ರಕ್ಷಿಸುತ್ತಿರುತ್ತಾರೆಂಬ ಧೈರ್ಯವನ್ನು ನೀಡುವ ಗ್ರಂಥವೇ ಮಹಾಭಾರತ.

''ಎಚ್ಚರದಿಂದ ಇರು ! ಮಹಾಭಾರತ ತಿಳಿಸುವ ಹಾದಿಯಲ್ಲಿ ಸಂಚರಿಸು. ಅದೇ ಭಾರತದ ಜೀವನಾಡಿ'' ಎಂಬ ಕನ್ನಡದ ನಾಣ್ನುಡಿ ಮೂರುಕಾಲಗಳಲ್ಲಿಯೂ ಸತ್ಯವಾದದ್ದು.

ನಾವು ಬಾಲ್ಯದಲ್ಲಿ ಮಹಾಭಾರತದ ಧೀರನಾಯಕರ ಮತ್ತು ಸಾಧ್ವಿಶಿರೋಮಣಿಗಳಾದ ವನಿತೆಯರ ಕಥೆಗಳನ್ನೆಲ್ಲಾ ಜೀವನಗಾನದ ಜೋಗುಳದಲ್ಲಿ ನಿದ್ರಿಸಿ ಬೆಳೆದಿದ್ದೇವೆ. ಪುನಃ ತಾರುಣ್ಯದಲ್ಲಿ ಮಹಾಭಾರತದ ಹೊಸ-ಹೊಸ ವಿಚಾರಗಳನ್ನು ಮನಗಾಣುತ್ತಾ, ಬಾಲ್ಯದಲ್ಲಿ ಕೇಳಿದ ಕಥೆಗಳನ್ನು ಮೆಲುಕುಹಾಕುತ್ತಾ ಜೀವನರಥದಲ್ಲಿ ಸಾಗುತ್ತಿದ್ದೇವೆ. ಪುನಃ ವೃದ್ಧಾಪ್ಯದ ಅವಸ್ಥೆಯಲ್ಲಿ ಮಹಾಭಾರತದ ಮಾರ್ಗದೀವಿಗೆಯಂತೆ ಮೋಕ್ಷಮಾರ್ಗಕ್ಕಾಗಿ ದಾರಿಹಿಡಿಯುತ್ತೇವೆ. ಹೀಗೆ ಮಹಾಭಾರತವು ಹುಟ್ಟಿನಿಂದ ಅಂತ್ಯದವರೆಗೂ ನಮ್ಮನ್ನು ಎಲ್ಲ ರೀತಿಯಲ್ಲಿಯೂ ನಿರ್ದೇಶಿಸುತ್ತಾ, ರಕ್ಷಿಸುತ್ತಾ ನಮ್ಮೆಲ್ಲರ ಲಕ್ಷೋಪಲಕ್ಷ ಸಂಖ್ಯೆಯ ಜೀವನಗಳನ್ನೇ ನಿರ್ವಹಿಸುತ್ತಿದೆ.

ಈ ಭಾರತದೇಶದಲ್ಲಿ ಹುಟ್ಟಿ ಯಾವ ನಮ್ಮ ಹಿರಿಯರು ಯಾವ ಗ್ರಂಥದಿಂದ ಧೀರೋದಾತ್ತ ವ್ಯಕ್ತಿಗಳಾಗಿ ಬೆಳೆದರೋ, ಅಂತಹ ಮಹಾಭಾರತವನ್ನು ನಾವು ಹೆಮ್ಮೆಯಿಂದ ಕಾಣಲೇಬೇಕು. ಇದು ಸಾರ್ವಕಾಲಿಕವಾದ ಶ್ರೇಷ್ಠಗ್ರಂಥ. ಇದಕ್ಕೆ ಸರಿಸಾಟಿಯಾದ ಗ್ರಂಥ ಇದುವರೆಗೂ ರಚನೆಯಾಗಿರುವುದಿಲ್ಲ. ಮುಂದೆಯೂ ಕೂಡ ಪ್ರಪಂಚದ ಯಾವ ಮೂಲೆಮೂಲೆಯಲ್ಲಿಯೂ ರಚನೆಯಾಗುವ ಸಾಧ್ಯತೆಯೂ ಇಲ್ಲ. ಇದೊಂದು ಶ್ರೇಷ್ಠವಾದ ಇತಿಹಾಸ ಗ್ರಂಥ.

ಬೇರೆ ಯಾವುದೋ ಗ್ರಂಥವನ್ನು ನಾವು ಓದುವಾಗ ಬೇಸರ ಎನಿಸಬಹುದು. ಆದರೆ ಮಹಾಭಾರತ ಗ್ರಂಥವನ್ನು ಓದುವವರಿಗೆ ಎಂದೂ ಸಹ ಬೇಸರವುಂಟಾಗಲು ಸಾಧ್ಯವೇ ಇಲ್ಲ. ಹಾಗೇನಾದರೂ ಮಹಾಭಾರತದಿಂದ ಬೇಸರವಾಯಿತೆಂದರೆ ತನ್ನ ಜೀವನದಲ್ಲಿಯೇ ತಾನು ಬೇಸರ ಪಟ್ಟಿದ್ದಾನೆಂದರ್ಥ. ಪ್ರತಿಯೊಬ್ಬರಿಗೂ ಅತ್ಯಂತ ಉತ್ಸಾಹವನ್ನು ನೀಡಿ ಸನ್ಮಾರ್ಗದಲ್ಲಿ ಕರೆದುಕೊಂಡು ಹೋಗುವ ಏಕೈಕ ಕೃತಿಯೆಂದರೆ 'ಮಹಾಭಾರತ' ಮಾತ್ರ.

ನಮ್ಮ ಭಾರತದೇಶದಲ್ಲಿ ಪಾಶ್ಚಾತ್ಯಸಂಸ್ಕೃತಿ ಹೆಚ್ಚುತ್ತಾ ಹೆಚ್ಚುತ್ತಾ ಮಹಾಭಾರತವು ನೀಡಿರುವ ಸಂಸ್ಕೃತಿಯು ನಶಿಸಿಹೋಗುವ ಕಾಲವು ಹತ್ತಿರವಾಗುತ್ತಿದೆ. ಇಂತಹ ತುರ್ತುಪರಿಸ್ಥಿತಿಯಲ್ಲಿ ನಾವು ಮಹಾಭಾರತ ಗ್ರಂಥವನ್ನು ಉಳಿಸಬೇಕು, ಬೆಳೆಸಬೇಕು, ಪ್ರಚಾರ ಮಾಡಬೇಕು. ಅದಕ್ಕಾಗಿ ಜೀವನವನ್ನೇ ಅರ್ಪಣೆ ಮಾಡಬೇಕು. ಹೀಗೆ ಮಾಡದೆ ನಾವೇನಾದರೂ ಉದಾಸೀನ ಮಾಡಿದರೆ ಮುಂದೊಂದು ದಿವಸ ಎಂದೂ ಕೂಡ ಮರಳಿಬಾರದ ಪ್ರಪಾತದಲ್ಲಿ ಬಿದ್ದುಬಿಡುತ್ತೇವೆ; ಇದು ಖಚಿತ.

ಪಾಶ್ಚಾತ್ಯದೇಶದವರು ನಮ್ಮ ಭಾರತದೇಶದಲ್ಲಿ ಅನಕ್ಷರಸ್ಥರ ಸಂಖ್ಯೆ ಬಹಳ ಮಿಗಿಲಾಗಿದೆಯೆಂದು ತೆಗಳಬಹುದು. ಆದರೆ ಸಾಕ್ಷರತಾರಹಿತರಾಗಿದ್ದರೂ ಭಾರತೀಯಮಕ್ಕಳಲ್ಲಿ, ಯುವಕರಲ್ಲಿ, ವೃದ್ಧರಲ್ಲಿ, ಸ್ತ್ರೀಯರಲ್ಲಿ ಎಲ್ಲರಲ್ಲಿಯೂ ಈ ಮಹಾಭಾರತದ ಗುಣಗಳ ಪ್ರಭಾವವಿದೆ, ಉತ್ತಮ ಗುಣಗಳಿವೆ, ಧಾರ್ಮಿಕ ಹಾಗೂ ಲೌಕಿಕ ಕಾರ್ಯಗಳಲ್ಲಿ ಶ್ರದ್ಧಾಳುಗಳಾಗಿ ಬಾಳಿ ಬೆಳಗುತ್ತಿದ್ದಾರೆ. ಈ ಅಧ್ಯಾತ್ಮಶ್ರೇಷ್ಠತೆ ಬೇರೆ ಇನ್ನ್ಯಾವ ದೇಶದಲ್ಲಿ ಹರಿದು ಬರಲು ಸಾಧ್ಯ ? ನಮ್ಮ ಸಮಾಜದ ಸಾಕ್ಷರತೆ ಎಂದರೆ ಇದೇ ಹೊರತು ಬೇರೆ ಯಾವುದೂ ಅಲ್ಲ.

ಯಾರು ಸಾಕ್ಷರರು ಯಾರು ನಿರಕ್ಷರು ? ಯಾರು ಸುಂದರ ಯಾರು ಸುಂದರರಲ್ಲ ? ಯಾವುದು ಶ್ರೇಷ್ಠ ? ಯಾವುದು ಕನಿಷ್ಠ ? ಯಾವುದು ಶುಭ ಯಾವುದು ಅಶುಭ ? ಯಾವುದು ಸರಿ ಯಾವುದು ತಪ್ಪು ? ಎಂಬ ಗಹನವಾದ ಗಂಭೀರವಾದ ಪ್ರಶ್ನೆಗಳಿಗೆಲ್ಲಾ ಉತ್ತರ ಸಿಗುವುದು ಮಹಾಭಾರತದಲ್ಲಿ ಮಾತ್ರ. ಈ ಎಲ್ಲಾ ಪ್ರಶ್ನೆಗಳಿಗೆ ಸರಿಯಾದ ಉತ್ತರವನ್ನು ತಿಳಿದವರು ಭಾರತದೇಶದಲ್ಲಿ ಹುಟ್ಟಿದವರು ಮಾತ್ರ. ಒಂದುವೇಳೆ ಮಹಾಭಾರತವನ್ನು ಓದದಿದ್ದರೆ ಮೇಲಿನ ಯಾವ ಪ್ರಶ್ನೆಗಳಿಗೂ ಉತ್ತರ ಕೊಡಲು ಯಾರಿಂದಲೂ ಸಾಧ್ಯವಿಲ್ಲ.

ಇಂತಹ ಶ್ರೇಷ್ಠವಾದ ಮಹಾಭಾರತ ಗ್ರಂಥವನ್ನು ಮಹಾವಿಷ್ಣುವೇ ಸಾಕ್ಷಾತ್ ವೇದವ್ಯಾಸದೇವರಾಗಿ ಅವತರಿಸಿ ರಚಿಸಿದ್ದಾನೆ. ಇಂತಹ ಶ್ರೇಷ್ಠವಾದ ಗ್ರಂಥಕ್ಕೆ ಸರಿಸಾಟಿಯಾದ ಗ್ರಂಥ ಮುಂದೆ ಎಂದೂ ಕೂಡ ನಿರ್ಮಾಣವಾಗಲು ಸಾಧ್ಯವಿಲ್ಲ. ವೇದವ್ಯಾಸರಂತಹ ಕರ್ತೃಗಳು ಹುಟ್ಟಲೂ ಕೂಡ ಸಾಧ್ಯವಿಲ್ಲ.

ಈ ಎಲ್ಲಾ ಕಾರಣಗಳಿಂದ ಮಹಾಭಾರತಕ್ಕೆ 'ಪಂಚಮವೇದ' ಎಂಬ ಬಿರುದು ಪ್ರಸಿದ್ಧವಾಗಿದೆ. 'ಭಾರತಃ ಪಂಚಮೋ ವೇದಃ' ಈ ಮಹಾಭಾರತವೆಂಬ ಗ್ರಂಥಕ್ಕೆ ಗಾತ್ರದಲ್ಲಿ ಮತ್ತು ವಿಚಾರದಲ್ಲಿ ಸರಿಸಾಟಿಯಾದ ಕೃತಿ ಮತ್ತೊಂದಿಲ್ಲ. 'ಯದಿಹಾಸ್ತಿ ತದನ್ಯತ್ರ ಯನ್ನೇಹಾಸ್ತಿ ನ ತತ್ ಕ್ವಚಿತ್' ಎಂಬ ಹಾಗೇ ಇದರ ಮಹತ್ತ್ವವನ್ನು ತಿಳಿಸುತ್ತಿದೆ.

ಸಮಸ್ತ ಪ್ರಪಂಚದ ಮನೋವಿಜ್ಞಾನಿಗಳೆಲ್ಲರೂ ಯಾವ ಗ್ರಂಥದಿಂದ ಆಶ್ಚರ್ಯಕರವಾದ ವಿಷಯಗಳನ್ನೆಲ್ಲಾ ತಿಳಿದು ಅದನ್ನೇ ಅನುಸರಿಸುತ್ತಿದ್ದಾರೋ, ಅಂತಹ ಶ್ರೇಷ್ಠವಾದ ವಿಶ್ವಮಾನ್ಯವಾದ 'ಭಗವದ್ಗೀತೆ' ಉದಿಸಿರುವುದು ಈ ಮಹಾಭಾರತದಿಂದಲೇ. ಈ ಮಹಾಭಾರತ ಗ್ರಂಥವನ್ನು ಪ್ರಶಂಸೆ ಮಾಡದ ವಿದ್ವಾಂಸರಿಲ್ಲ. ಪ್ರಶಂಸೆ ಮಾಡದ ಕೃತಿಗಳಿಲ್ಲ. ಅಷ್ಟೇ ಏಕೆ ಸಾಕ್ಷಾತ್ ವೇದವ್ಯಾಸದೇವರೇ ಹದಿನೆಂಟು ಪುರಾಣಗಳಲ್ಲಿಯೂ ಕೂಡ, ಅನೇಕ ಸ್ಮೃತಿಗ್ರಂಥಗಳಲ್ಲಿಯೂ ಕೂಡ ಮಹಾಭಾರತ ಗ್ರಂಥವನ್ನು ಮುಕ್ತಕಂಠದಿಂದ ಹಾಡಿಕೊಂಡಾಡಿದ್ದಾರೆ.

ಮಹಾಭಾರತವು ಕೇವಲ ದಾಯಾದಿಗಳ ಆಸ್ತಿಯ ಕಲಹವನ್ನು ನಿರೂಪಿಸುವ ಕೃತಿಯಲ್ಲ. ಅದು ಧರ್ಮ-ಅಧರ್ಮಗಳ, ನ್ಯಾಯ-ಅನ್ಯಾಯಗಳ, ಸ್ವಾರ್ಥ-ಪರೋಪಕಾರಗಳ, ವಿಷಯಾಸಕ್ತಿ-ಭಗವಂತನಲ್ಲಿ ಆಸಕ್ತಿ ಇವೆಲ್ಲದರ ನಡುವಿನ ಸಂಘರ್ಷದಲ್ಲಿ 'ಯತೋ ಧರ್ಮ ತತೋ ಜಯಃ' ಧರ್ಮವೇ ಜಯಶಾಲಿ-ಯಾಗುವುದು ಎಂಬ ಧರ್ಮದ ಜಯವನ್ನು ಪ್ರತಿಬಿಂಬಿಸುವ ಅಪೂರ್ವವಾದ ಇತಿಹಾಸ ಗ್ರಂಥ.

ಇವೆಲ್ಲದಕ್ಕಿಂತ ಹೆಚ್ಚಾಗಿ ಪ್ರತಿಯೊಬ್ಬರೂ ಗಮನಿಸಲೇಬೇಕಾದ ಮತ್ತೊಂದು ಬಹಳ ಮುಖ್ಯವಾದ ವಿಚಾರವಿದೆ. ಈ ಮುಖ್ಯ ವಿಚಾರವನ್ನು ತಿಳಿಯದೇ ಉಳಿದ ಎಲ್ಲಾ ವಿಚಾರವನ್ನು ಮಹಾಭಾರತದಿಂದ ತಿಳಿಯುವುದರಿಂದ ಪರಮಲಾಭವು ಸರ್ವಥಾ ಆಗುವುದಿಲ್ಲ. ಮಹಾಭಾರತದಿಂದ ಮುಖ್ಯವಾಗಿ ತಿಳಿಯಬೇಕಾದ ಶ್ರೇಷ್ಠ ಪ್ರಧಾನವಿಚಾರವನ್ನು ಘಂಟಾಘೋಷವಾಗಿ ಸಾರಿದವರು ಶ್ರೀಮನ್ಮಧ್ವಾಚಾರ್ಯರು ಮಾತ್ರ. ಅದು ಹೀಗಿದೆ –

ವಾಸುದೇವಸ್ಯ ಮಹಿಮಾ ಭಾರತೇ ನಿರ್ಣಯೋದಿತಃ ।
ತದರ್ಥಾಸ್ತು ಕಥಾಃ ಸರ್ವಾಃ ನಾನ್ಯರ್ಥಂ ವೈಷ್ಣವಂ ವಚಃ ॥

ಭಗವಂತನಾದ, ದೇವದೇವೋತ್ತಮನಾದ, ಅಖಿಲಾಂಡಕೋಟಿ ಬ್ರಹ್ಮಾಂಡ ನಾಯಕನಾದ ವಾಸುದೇವನ ಸ್ವಾತಂತ್ರ್ಯವನ್ನು ನಿರ್ಣಯಿಸುವುದಕ್ಕಾಗಿಯೇ ಈ ಮಹಾಭಾರತಗ್ರಂಥವು ಹೊರಟಿದೆ. ಇದರ ನಿರ್ಣಯಕ್ಕಾಗಿಯೇ ಸಾವಿರಾರು ಉಪಾಖ್ಯಾನಗಳು ಮಹಾಭಾರತದಲ್ಲಿ ಹೆಣೆದುಕೊಂಡಿದೆ. 'ವಿಷ್ಣುವೇ ಸರ್ವೋತ್ತಮ' ಎಂಬ ತತ್ವವನ್ನು ಬಿಟ್ಟು, ಬೇರೆ ಯಾವ ವಿಚಾರವನ್ನೂ ಕೂಡ ಮುಖ್ಯಗುರಿಯನ್ನಾಗಿ ಪ್ರತಿಪಾದಿಸಲು ಈ ಗ್ರಂಥ ಹೊರಟಿರುವುದಿಲ್ಲ.

ಇಂತಹ ಶ್ರೇಷ್ಠವಾದ ಪರಮತತ್ವವನ್ನು ಸಾರಿ ಹೇಳಲು ಹೊರಟಿರುವ ಗ್ರಂಥದಿಂದ ಅಲ್ಪವಾದ ಜೀವನತತ್ವಗಳನ್ನಷ್ಟೇ ತಿಳಿದುಕೊಂಡು ಕೃತಕೃತ್ಯನಾಗುವ ವ್ಯಕ್ತಿ ಮೂರ್ಖನಾಗುತ್ತಾನೆ ಈ ವಿಷಯದಲ್ಲಿ ಯಾವ ಸಂಶಯವೂ ಇಲ್ಲ.

ಎಂಟೇ ಅಕ್ಷರಗಳಲ್ಲಿ ಮಹಾಭಾರತ ವರ್ಣನೆ

ಹಗಲಿನ ಶ್ರಮವನ್ನು ಪರಿಹರಿಸಿ ಒಳಗಣ್ಣನ್ನು ತೆರೆಸುವ ಸಂಜೆಯ ಪಶ್ಚಿಮದ ಸೂರ್ಯ. ಇಂತಹ ಮುಸ್ಸಂಜೆಯ ಕಾಲದಲ್ಲಿ ಒಬ್ಬ ಕವಿ ಸವಾಲೊಡ್ಡುತ್ತಾನೆ. ೧. ಒಂದೆಡೆ ತೋಟದಲ್ಲಿ ಸಿಹಿರಸವನ್ನು ತುಂಬಿಕೊಂಡಿರುವ ಕಬ್ಬಿನ ರಾಶಿ, ೨. ಮತ್ತೊಂದೆಡೆ ದಿಗಂತದಲ್ಲಿ ಕಣ್ಣುಹಾಯಿಸಿದಾಗ ರಾಶಿರಾಶಿ ನೀರಿರುವ ಸಮುದ್ರ. ೩. ಮತ್ತೊಂದುಕಡೆ ರಾಶಿರಾಶಿ ಚಿಂತನೆಗಳ ಪ್ರವಾಹವಿರುವ ಮಹಾಭಾರತ ಗ್ರಂಥ. ಒಂದೇ ಸಾಲಿನ ಎಂಟು ಅಕ್ಷರಗಳಲ್ಲಿ ಈ ಮೂರನ್ನೂ ಕೂಡ ವರ್ಣನೆ ಮಾಡಬೇಕು ಎಂದು -

ಭಾರತಂ ಚ ಇಕ್ಷುದಂಡಂ ಚ ಸಮುದ್ರಂ ಚಾಪಿ ವರ್ಣಯ ಶ್ಲೋಕೇನೈಕೇನ ಪಾದೇನ

.....

ಈ ಸವಾಲಿಗೆ ಮತ್ತೊಬ್ಬ ಕವಿ ಅತ್ಯಂತ ಚಮತ್ಕಾರದಲ್ಲಿ ಉತ್ತರಿಸುತ್ತಾ ಎಂಟು ಅಕ್ಷರಗಳಿರುವ ಶ್ಲೋಕದ ಒಂದೇ ಪಾದದಿಂದಲೇ ಮೂರು ಪದಾರ್ಥಗಳನ್ನು ಅದ್ಭುತವಾಗಿ ವರ್ಣಿಸುತ್ತಾ ಶ್ಲೋಕವನ್ನು ಪೂರ್ಣ ಮಾಡುತ್ತಾನೆ.

ಪ್ರತಿಪರ್ವ ರಸೋದಯಃ

೧. ಸಮುದ್ರವು ಪ್ರತೀಪರ್ವಕಾಲಗಳಲ್ಲಿ ತನ್ನ ಆರ್ಭಟದ ತೆರೆಗಳನ್ನು ಹೆಚ್ಚಿಸುತ್ತದೆ.

೨. ಕಬ್ಬಿನ ಜೆಲ್ಲೆಯು ಪ್ರತಿಯೊಂದು ಗಂಟಿನಲ್ಲಿಯೂ ರಸವನ್ನು ತುಂಬಿಕೊಂಡಿರುತ್ತದೆ.

೩. ಮಹಾಭಾರತವು ಪ್ರತಿಪ್ರತ್ಯೊಂದು ಪರ್ವಗಳಲ್ಲಿಯ್ಲೂ ಕಾವ್ಯರಸವನ್ನು ತುಂಬಿಕೊಂಡಿದೆ.

ಮಹಾಭಾರತವು ನವರಸಭರಿತವಾದ ಮಹಾಕಾವ್ಯ. ಶೃಂಗಾರ, ವೀರ, ಕರುಣ, ಅದ್ಭುತ, ಹಾಸ್ಯ, ಭಯಾನಕ, ಬೀಭತ್ಸ, ರೌದ್ರ, ಶಾಂತ ಎಂಬ ಒಂಭತ್ತು ರಸಗಳು ಆಯಾ ಸ್ಥಾನಗಳಲ್ಲಿ ಅತ್ಯಂತ ಉಚಿತವಾಗಿ ತುಂಬಿಕೊಂಡಿದೆ.

ಮಹಾಭಾರತದಿಂದ ದೊರೆಯುವ ಲಾಭ

ಹ್ರದಾನಾಮುದಧಿಃ ಶ್ರೇಷ್ಠೋ ಗೌರ್ವರಿಷ್ಠಾ ಚತುಷ್ಪದಾಮ್ ।
ಯಥೈತಾನಿ ವಿಶಿಷ್ಟಾನಿ ತಥಾ ಭಾರತಮುಚ್ಯತೇ ॥

ಎಲ್ಲ ಸರೋವರಗಳಿಗಿಂತಲೂ ಸಮುದ್ರವು ಶ್ರೇಷ್ಠವಾದುದು. ಎಲ್ಲ ಚತುಷ್ಪಾದ ಪ್ರಾಣಿಗಳಿಗಿಂತಲೂ ಗೋವು ಶೇಷ್ಠವಾದುದು ಹೇಗೆಯೋ ಹಾಗೆ ಪ್ರಮೇಯವನ್ನು ನಿರೂಪಿಸುವ ಎಲ್ಲ ಗ್ರಂಥಗಳಲ್ಲಿ ಭಾರತವು ಶ್ರೇಷ್ಠವಾದುದು.

ಯಶ್ಚೇದಂ ಶ್ರಾವಯೇಚ್ಛ್ರಾದ್ಧೇ ಬ್ರಾಹ್ಮಣಾನ್ ಪಾದಮಂತತಃ ।
ಅಕ್ಷಯ್ಯಮನ್ನದಾನಂ ತತ್ ಪಿತೃಂಸ್ತಸ್ಯೋಪತಿಷ್ಠತಿ ॥

ಶ್ರಾದ್ಧಕಾಲದಲ್ಲಿ ಬ್ರಾಹ್ಮಣರಿಗೆ ಯಾವನು ಕೊನೆಯಪಕ್ಷ ಈ ಭಾರತದ ಒಂದು ಪಾದವನ್ನಾದರೂ ಶ್ರವಣ ಮಾಡಿಸುತ್ತಾನೆಯೋ ಅವನು ಪಿತೃಗಳಿಗೆ ಮಾಡಿದ ಅನ್ನದಾನವು ಅಕ್ಷಯವಾಗಿ ಅದು ಪಿತೃಗಳನ್ನು ತಲಪುತ್ತದೆ.

ಇತಿಹಾಸಪುರಾಣಾಭ್ಯಾಂ ವೇದಂ ಸಮುಪಬೃಂಹಯೇತ್ ।
ಬಿಭೇತ್ಯಲ್ಪಶ್ರುತಾದ್ ವೇದೋ ಮಾಮಯಂ ಪ್ರಹರಿಷ್ಯತಿ ॥

ಇತಿಹಾಸ ಪುರಾಣಗಳಿಂದ ವೇದದ ಅರ್ಥವನ್ನು ವಿಸ್ತಾರಮಾಡಿ ತಿಳಿಯಬೇಕು. ಅಲ್ಪವಿದ್ಯೆಯುಳ್ಳ ಮನುಷ್ಯನು ವೇದದ ವ್ಯಾಖ್ಯಾನವನ್ನು ಮಾಡಲು ಹೊರಟರೆ ನನಗೆ ಇವನು ಅಪಾರ್ಥವನ್ನು ಮಾಡುತ್ತಾನೆ ಎಂದು ವೇದವು ಹೆದರುತ್ತದೆ.

ಕಾರ್ಷ್ಣಂ ವೇದಮಿಮಂ ವಿದ್ವಾನ್ ಶ್ರಾವಯಿತ್ವಾಽರ್ಥಮಶ್ನುತೇ ।
ಭ್ರೂಣಹತ್ಯಾಕೃತಂ ಚಾಪಿ ಪಾಪಂ ದಹ್ಯಾನ್ನ ಸಂಶಯಃ ॥

ಈ ಮಹಾಭಾರತವು ವೇದವ್ಯಾಸರು ರಚಿಸಿದ ಪಂಚಮವೇದ. ಇದರ ವ್ಯಾಖ್ಯಾನವನ್ನು ಮಾಡಿದರೆ ಎಲ್ಲಾ ಪುರುಷಾರ್ಥಗಳ ಪ್ರಾಪ್ತಿಯಾಗುತ್ತದೆ. ಭ್ರೂಣಹತ್ಯೆಯನ್ನು ಮಾಡಿದ ಪಾಪವೂ ಕೂಡ ಇದರಿಂದ ಪರಿಹಾರವಾಗುತ್ತದೆ ಎಂಬ ವಿಷಯದಲ್ಲಿ ಸಂಶಯವಿಲ್ಲ.

ಯಶ್ಚೇದಂ ಶೃಣುಯಾನ್ನಿತ್ಯಮಾರ್ಷಂ ಶ್ರದ್ಧಾಸಮನ್ವಿತಃ ।
ಸ ದೀರ್ಘಮಾಯುರವ್ಯಗ್ರಾಂ ಚ ಸ್ವರ್ಗತಿಂ ಚಾಪ್ನುಯಾನ್ನರಃ॥

ಪರಮಮುನಿಪ್ರವರಾದ ವೇದವ್ಯಾಸರಿಂದ ರಚಿತವಾದ ಈ ಭಾರತವನ್ನು ಯಾವನು ಶ್ರದ್ಧೆಯಿಂದ ಕೇಳುತ್ತಾನೆಯೋ ಅವನು ದೀರ್ಘವಾದ ಆಯುಷ್ಯವನ್ನೂ ಮತ್ತು ದೀರ್ಘಕಾಲದ ಸ್ವರ್ಗವಾಸವನ್ನೂ ಹೊಂದುತ್ತಾನೆ.

ಭಕ್ತಾಶ್ಚ ವಿಬುಧೋ ವೇದಾ ಭಾರತಂ ಚೈತಮೋತಥಃ ।
ಸಮಾಗಚ್ಛೇ ಮುತಪ್ರಿಷ್ಟಮಾಖ್ಯಾನೋಪಗತಂ ಪುರಾ ॥

ದೇವತೆಗಳು ಮತ್ತು ಋಷಿಗಳೆಲ್ಲರೂ ಒಂದು ಕಡೆ ಸೇರಿ ಒಂದು ತಕ್ಕಡಿಯಲ್ಲಿ ಒಂದು ಕಡೆ ನಾಲ್ಕುವೇದಗಳನ್ನೂ ಇನ್ನೊಂದು ಕಡೆ ಭಾರತವನ್ನೂ ಇಟ್ಟು ತೂಗಿದರು.

ಮಹತ್ತ್ವೇಚ ಗುರುತ್ವೇಚ ಧೃಯಮಾಣಂ ತತೋಽಧಿಕಮ್ ।
ಮಹತ್ತ್ವಾದ್ ಭಾರವತ್ತ್ವಾಚ್ಚ ಮಹಾಭಾರತಮುಚ್ಯತೇ ।
ನಿರುಕ್ತಮಸ್ಯ ಯೋ ವೇದ ಸರ್ವಪಾಪೈಃಪ್ರಮುಚ್ಯತೇ ॥

ಮಹಾಭಾರತವಿದ್ದ ತಕ್ಕಡಿಯ ತಟ್ಟೆಯು ಗಾತ್ರದಿಂದ ಮತ್ತು ಭಾರದಿಂದ ಕೆಳಗೆ ಹೋಯಿತು. ಗಾತ್ರದಲ್ಲಿ ಮಹತ್ತಾಗಿರುವುದರಿಂದ ಮತ್ತು ಅರ್ಥದಿಂದ ಭಾರವಾಗಿರುವುದರಿಂದ ಇದನ್ನು ಮಹಾಭಾರತ ಎಂದು ಕರೆಯುತ್ತಾರೆ. ಮಹಾಭಾರತ ಶಬ್ದದ ಅರ್ಥವನ್ನು ಯಾವನು ತಿಳಿಯುತ್ತಾನೋ ಅವನು ಎಲ್ಲಾ ಪಾಪಗಳಿಂದಲೂ ಮುಕ್ತನಾಗುತ್ತಾನೆ.

ತಪೋನ ಕಲ್ಕೋಽಧ್ಯಯನಂ ನ ಕಲ್ಕಃ
ಸ್ವಭಾವಿಕೋ ವೇದವಿಧಿರ್ನ ಕಲ್ಕಃ ।
ಪ್ರಸಹ್ಯ ವಿತ್ತಾಹರಣಂ ನ ಕಲ್ಕ-
ಸ್ತಾನ್ಯೇವ ಭಾವೋಪಹತಾನಿ ಕಲ್ಕಃ ॥

ತಪಸ್ಸು ಕೆಟ್ಟದ್ದಲ್ಲ, ಅಧ್ಯಯನವು ಕೆಟ್ಟದ್ದಲ್ಲ, ಸ್ವಭಾವವನ್ನು ಅನುಸರಿಸಿದ ವೇದವಿಧಿಗಳು ಕೆಟ್ಟದ್ದಲ್ಲ, ರಾಜರು ಪ್ರಜೆಗಳಿಂದ ಬಲಾತ್ಕಾರಮಾಡಿ ಯೋಗ್ಯವಾದ ಧನವನ್ನು ಸ್ವೀಕರಿಸುವುದು ಕೆಟ್ಟದ್ದಲ್ಲ, ಆದರೆ ಉದ್ದೇಶವು ದುಷ್ಟವಾದರೆ ಮಾತ್ರ ಇದೆಲ್ಲವೂ ಕೆಟ್ಟದ್ದಾಗುತ್ತದೆ.

ಯೋ ವಿದ್ಯಾಚ್ಚತುರೋ ವೇದಾನ್ ಸಾಂಗೋಪನಿಷದೋ ದ್ವಿಜಃ ।
ನ ಚಾಖ್ಯಾನಮಿದಂ ವಿದ್ಯಾನ್ನೈವ ಸ ಸ್ಯಾದ್ ವಿಚಕ್ಷಣಃ ॥

ಯಾವ ಬ್ರಾಹ್ಮಣನು ನಾಲ್ಕು ವೇದಗಳನ್ನು, ವೇದಾಂಗಗಳು ಮತ್ತು ಉಪನಿಷತ್ತುಗಳ ಜೊತೆಯಲ್ಲಿ ತಿಳಿದಿದ್ದರೂ ಈ ಭಾರತಾಖ್ಯಾನವನ್ನು ತಿಳಿಯದಿದ್ದರೆ ಅವನು ವಿದ್ವಾಂಸನೇ ಆಗುವುದಿಲ್ಲ.

ಶ್ರುತ್ವಾ ತ್ವಿದಮುಪಾಖ್ಯಾನಂ ಶ್ರಾವ್ಯಮನ್ಯನ್ನ ರೋಚತೇ ।
ಪುಂಸ್ಕೋಕಿಲರುತಂ ಶ್ರುತ್ವಾ ರೂಕ್ಷಾ ಧ್ವಾಂಕ್ಷಸ್ಯ ವಾಗಿವ ॥

ಪುಂಸ್ಕೋಕಿಲಸ್ವರವನ್ನು ಕೇಳಿ ಕಾಗೆಯ ಒರಟಾದ ಧ್ವನಿಯು ಹೇಗೆ ರುಚಿಸುವುದಿಲ್ಲವೋ ಹಾಗೆ ಈ ಮಹಾಭಾರತ ಆಖ್ಯಾನವನ್ನು ಕೇಳಿದ ಮೇಲೆ ಬೇರೆ ಯಾವುದನ್ನೂ ಕೇಳಲು ರುಚಿಸುವುದಲ್ಲ.

ಇತಿಹಾಸೋತ್ತಮಾದಸ್ಮಾಜ್ಜಾಯಂತೇ ಕವಿಬುದ್ಧಯಃ ।
ಪಂಚಭ್ಯ ಇವ ಭೂತೇಭ್ಯೋ ಲೋಕಾಃ ಸಂವಿಧಯಸ್ತ್ರಯಃ ॥

ಪಂಚಭೂತಗಳಿಂದ ಎಲ್ಲ ಲೋಕಗಳ ನಿರ್ಮಾಣ- ವಾದಂತೆ ಎಲ್ಲ ಕವಿಗಳ ಬುದ್ಧಿಗಳೂ ಈ ಶ್ರೇಷ್ಠವಾದ ಇತಿಹಾಸದಿಂದ ಉಂಟಾಗುತ್ತವೆ.

ಅಸ್ಯಾಖ್ಯಾನಸ್ಯ ವಿಷಯೇ ಪುರಾಣಂ ವರ್ತತೇ ದ್ವಿಜಾಃ ।
ಅಂತರಿಕ್ಷಸ್ಯ ವಿಷಯೇ ಪ್ರಜಾ ಇವ ಚತುರ್ವಿಧಾಃ ॥

ಎಲೈ ಬ್ರಾಹ್ಮಣರೇ, ಆಂತರಿಕ್ಷದಲ್ಲಿ ಚಲಿಸುವ ಸೂರ್ಯನ ವಿಷಯದಲ್ಲಿ ಬ್ರಾಹ್ಮಣ, ಕ್ಷತ್ರಿಯ, ವೈಶ್ಯ, ಶೂದ್ರರೆಂಬ ನಾಲ್ಕುವಿಧವಾದ ಪ್ರಜೆಗಳು ಗೌರವವನ್ನು ಹೊಂದಿರುವಂತೆ ಎಲ್ಲ ಪುರಾಣಗಳೂ ಈ ಭಾರತದ ಬಗ್ಗೆ ಗೌರವವನ್ನು ಸೂಚಿಸುತ್ತವೆ.

ಕ್ರಿಯಾಗುಣಾನಾಂ ಸರ್ವೇಷಾಮಿದಮಾಖ್ಯಾನಮಾಶ್ರಯಃ ।
ಇಂದ್ರಿಯಾಣಾಂ ಚ ಸರ್ವೇಷಾಂ ಚಿತ್ತೈವ ಮನಸಃ ಕ್ರಿಯಾಃ ॥

ಎಲ್ಲ ಇಂದ್ರಿಯಗಳ ವಿಚಿತ್ರಕ್ರಿಯೆಗಳಿಗೆ ಮನಸ್ಸು ಆಧಾರವಾದಂತೆ, ಗ್ರಂಥರಚನೆಯಲ್ಲಿರಬೇಕಾದ ಎಲ್ಲಾ ಗುಣಗಳಿಗೆ ಈ ಭಾರತದ ಆಖ್ಯಾನವು ಆಶ್ರಯವಾಗಿದೆ.

ಅನಾಶ್ರಿತ್ಯೇತದಾಖ್ಯಾನಂ ಕಥಾ ಭುವಿ ನ ವಿದ್ಯತೇ ।
ಆಹಾರಮನಪಾಶ್ರಿತ್ಯ ಶರೀರಸ್ಯೇವ ಧಾರಣಮ್ ॥
ಇದಂ ಸರ್ವೈಃ ಕವಿವರೈರಾಖ್ಯಾನಮುಪಜೀವ್ಯತೇ ।
ಉದಯಪ್ರೇಪ್ಸುಭಿರ್ಭೂತೈರಭಿಜಾತ ಇವೇಶ್ವರಃ ॥

ಆಹಾರವನ್ನು ಆಶ್ರಯಿಸದೆ ಶರೀರವು ಹೇಗೆ ಉಳಿಯುವುದಿಲ್ಲವೋ ಹಾಗೆ ಈ ಭಾರತವನ್ನು ಉಪಜೀವಿಸದೆ ಭೂಮಿಯಲ್ಲಿ ಯಾವ ಕಥೆಯೂ ಇರುವುದಿಲ್ಲ. ಶ್ರೇಯಸ್ಕಾಮಿಗಳಾದ ಜನರು ಮತ್ಸ್ಯಕೂರ್ಮಾದಿ ಅವತಾರಗಳನ್ನು ಧರಿಸಿದ ನಾರಾಯಣನನ್ನು ಉಪಜೀವಿಸುವಂತೆ ಎಲ್ಲ ಶ್ರೇಷ್ಠ ಕವಿಗಳೂ ಈ ಭಾರತವನ್ನು ಉಪಜೀವಿಸುತ್ತಾರೆ.

ದ್ವೈಪಾಯನೌಷ್ಠಪುಟನಿಃಸೃತಮಪ್ರಮೇಯಂ
ಪುಣ್ಯಂ ಪವಿತ್ರಮಥ ಪಾಪಹರಂ ಶಿವಂ ಚ ।
ಯೋ ಭಾರತಂ ಸಮಾಧಿಗಚ್ಛತಿ ವಾಚ್ಯಮಾನಂ
ಕಿಂ ತಸ್ಯ ಪುಷ್ಕರಜಲೈರಭಿಷೇಚನೇನ ॥

ಯಾವನು ವೇದವ್ಯಾಸರ ಓಷ್ಠಪುಟಗಳಿಂದ ಹೊರಗೆ ಹರಿದುಬಂದ ಪುಣ್ಯಪ್ರದವೂ, ಪವಿತ್ರವೂ, ಪಾಪಹರವೂ, ಮಂಗಳಪ್ರದವೂ ಆದ ಈ ಭಾರತದ ಕಥೆಯನ್ನು ನಿರೂಪಿಸುವುದನ್ನು ಕೇಳುತ್ತಾನೆಯೋ ಅವನಿಗೆ ಪುಷ್ಕರತೀರ್ಥದ ಜಲದ ಸ್ನಾನದಿಂದ ಆಗಬೇಕಾದ ಪ್ರಯೋಜನವೇನು?

ಯೇನ ತ್ವಯಾ ಭಾರತತೈಲಪೂರ್ಣಃ ಪ್ರಜ್ವಾಲಿತೋ ಜ್ಞಾನಮಯಃ ಪ್ರದೀಪಃ ॥

ಮಹಾಭಾರತವೆಂಬ ತೈಲದಿಂದ ಪೂರ್ಣವಾದ ಜ್ಞಾನವೆಂಬ ದೀಪವನ್ನು ತಾವು ಪ್ರಜ್ವಲಿಸಿದ್ದೀರಿ.

ಸರ್ವೇಷಾಂ ಕವಿಮುಖ್ಯಾನಾಂ ಉಪಜೀವ್ಯೋ ಭವಿಷ್ಯತಿ ।
ಪರ್ಜನ್ಯ ಇವ ಭೂತಾನಾಮಕ್ಷಯೋ ಭಾರತದ್ರುಮಃ ॥

ಎಲ್ಲಾ ಬಗೆಯ ಕವಿಗಳೆಂಬ ಹಕ್ಕಿಗಳಿಗೆ ಆಸರೆ ನೀಡುವ ಸಂಸಾರತಾಪದಿಂದ ಬಳಲಿದವರಿಗೆ ನೆರಳನ್ನು ನೀಡುವ ಮಹಾಭಾರತವು ವೃಕ್ಷದಂತೆ ಕಂಗೊಳಿಸುತ್ತಿದೆ.

ಅಜ್ಞಾನತಿಮಿರಾಂಧಸ್ಯ ಲೋಕಸ್ಯ ತು ವಿಚೇಷ್ಟತಃ ।
ಜ್ಞಾನಾಂಜನಶಲಾಕಾಭಿರ್ನೇತ್ರೋನ್ಮೀಲನಕಾರಕಮ್॥

ಅಜ್ಞಾನವೆಂಬ ಕತ್ತಲೆಯಿಂದ ಕುರುಡನಾಗಿ ಹಾದಿಯನ್ನು ತಿಳಿಯದೇ ವಿಭ್ರಾಂತರಾದವರಿಗೂ ಕಣ್ಣುಗಳನ್ನು ತೆರೆಸುವುದೇ ಈ ಮಹಾಭಾರತ.

ಧರ್ಮಾರ್ಥಕಾಮಮೋಕ್ಷಾರ್ಥೈಃ ಸಮಾಸವ್ಯಾಸಕೀರ್ತನೈಃ ।
ತ್ವಯಾ ಭಾರತಸೂರ್ಯೇಣ ನೃಣಾಂ ವಿನಿಹತಂ ತಮಃ ॥

ಧರ್ಮ, ಅರ್ಥ, ಕಾಮ, ಮೋಕ್ಷ ಇವುಗಳನ್ನು ಸಂಕ್ಷೇಪವಾಗಿ ಮತ್ತು ವಿಸ್ತಾರವಾಗಿ ಹೇಳುವ ಮೂಲಕ ಮಹಾಭಾರತವೆಂಬ ಸೂರ್ಯವು ಅಜ್ಞಾನಿಗಳ ಕತ್ತಲೆಯನ್ನು ಪರಿಹರಿಸುತ್ತದೆ.

ಧರ್ಮೇಚಾರ್ಥೇ ಚ ಕಾಮೇ ಚ ಮೋಕ್ಷೇ ಚ ಭರತರ್ಷಭ ।
ಯದಿಹಾಸ್ತಿ ತದನ್ಯತ್ರ ಯನ್ನೇಹಾಸ್ತಿ ನ ತತ್ಕ್ವಚಿತ್ ॥

ಧರ್ಮ, ಅರ್ಥ, ಕಾಮ, ಮೋಕ್ಷಗಳ ವಿಷಯದಲ್ಲಿ ಈ ಗ್ರಂಥದಲ್ಲಿ ಯಾವ ಯಾವ ವಿಷಯಗಳಿವೆಯೋ ಅದು ಬೇರೆ ಗ್ರಂಥಗಳಲ್ಲಿ ಇದ್ದೇ ಇರುತ್ತದೆ. ಈ ಮಹಾಭಾರತದಲ್ಲಿ ಯಾವುದಿಲ್ಲವೋ ಅದು ಬೇರೆ ಎಲ್ಲಿಯೂ ಇರುವುದಿಲ್ಲ.

ಯಥಾ ಸಮುದ್ರೋ ಭಗವಾನ್ ಯಥಾ ಚ ಹಿಮವಾನ್ ಗಿರಿಃ ।
ಖ್ಯಾತಾವುಭೌ ರತ್ನನಿಧೀ ತಥಾ ಭಾರತಮುಚ್ಯತೇ ॥

ರತ್ನಕರಗಳಲ್ಲಿ ಸಮುದ್ರ ಹಾಗೂ ಹಿಮಾಲಯಗಳು ಹೇಗೆ ಪ್ರಸಿದ್ಧವಾಗಿವೆಯೋ ಅದಕ್ಕಿಂತಲೂ ಹೆಚ್ಚು ಅನೇಕ ಜನ್ಮಗಳನ್ನೇ ಬೆಳಗಿಸುವ ಅನಂತ ರತ್ನಗಳು ಮಹಾಭಾರತದಲ್ಲಿವೆ.

ಮೂಲ ಮಹಾಭಾರತದಲ್ಲಿರುವ ಸಮಸ್ಯೆಗಳು

ಪ್ರತಿಯೊಬ್ಬ ಮತಾಚಾರ್ಯರೂ ಕೂಡ ತಮ್ಮ ತಮ್ಮ ಕೃತಿಗಳಲ್ಲಿ ನೂರಾರು ಪ್ರಾಚೀನ ಗ್ರಂಥಗಳನ್ನು ಉದಾಹರಿಸುತ್ತಾರೆ. ಅದರಲ್ಲಿಯೂ ವಿಶೇಷವಾಗಿ ಶ್ರೀಮನ್ಮಧ್ವಾಚಾರ್ಯರು ತಮ್ಮ ಗ್ರಂಥಗಳಲ್ಲಿ ನೂರಾರು ಗ್ರಂಥಗಳನ್ನು ಬಹಳವಾಗಿ ಉಲ್ಲೇಖಿಸುತ್ತಾರೆ. ಆದರೆ ಆ ಎಲ್ಲಾ ಗ್ರಂಥಗಳೂ ಕೂಡ ಕಾಲಪ್ರವಾಹದಲ್ಲಿ ಕೊಚ್ಚಿಹೋಗಿರುವುದೇ ನಮ್ಮ ದುರ್ದೈವ. ಮಹಾಭಾರತ ಗ್ರಂಥವೂ ಕೂಡ ೬೦ ಲಕ್ಷ ಶ್ಲೋಕದಿಂದ ಮೊದಲು ರಚಿತವಾಗಿತ್ತು ಎಂಬ ಉಲ್ಲೇಖವಿದೆ. ಆದರೆ ನಮಗೆ ಈಗ ದೊರೆಯುತ್ತಿರುವುದು ಕೇವಲ ೧ ಲಕ್ಷ ಶ್ಲೋಕಗಳು ಮಾತ್ರ. ಒಟ್ಟಾರೆ ಸಾರಸ್ವತ ಪ್ರಪಂಚದಲ್ಲಿ ಗ್ರಂಥಕೋಟಿಯ ಒದಂಶವೂ ಕೂಡ ಇಂದು ನಮಗೆ ದೊರೆಯುತ್ತಿಲ್ಲ. ದೊರೆಯುತ್ತಿರುವ ಅಲ್ಪಸ್ವಲ್ಪ ಗ್ರಂಥಗಳೂ ಕೂಡ ಪರಿಶುದ್ಧವಾಗಿಲ್ಲ -

ಅನುತ್ಸನ್ನಾ ಅಪಿ ಗ್ರಂಥಾಃ ವ್ಯಾಕುಲಾಃ ಇತಿ ಸರ್ವಶಃ ।
ಉತ್ಸನ್ನಾಃ ಪ್ರಾಯಶಃ ಸರ್ವೇ ಕೋಟ್ಯಂಶೋಪಿ ನ ವರ್ತತೇ ॥

ದುರ್ದೈವ ಎಂದರೆ ಕೆಲವು ಮಂದಿ ಇಂತಹ ಶ್ರೇಷ್ಠವಾದ ಗ್ರಂಥಗಳಲ್ಲಿಯೂ ತಮ್ಮ ಕೈವಾಡವನ್ನು ತೋರಿಸಿಬಿಟ್ಟಿದ್ದಾರೆ. ಶುದ್ಧವಾದ ಪಾಠವನ್ನು ತೆಗೆದುಹಾಕಿ, ಅಶುದ್ಧವಾದ ಪಾಠಗಳನ್ನು ಗ್ರಂಥದಲ್ಲಿ ಸೇರಿಸಿ ತಾಳೆಗರಿಗಳಲ್ಲಿ ಬರೆದಿಟ್ಟುಬಿಟ್ಟಿದ್ದಾರೆ. ಮತ್ತು ಇನ್ನು ಕೆಲವರು ಇರುವ ಶ್ಲೋಕಗಳನ್ನೇ ತಿದ್ದಿ ವ್ಯತ್ಯಾಸ ಮಾಡಿಬಿಟ್ಟಿದ್ದಾರೆ. ತಮ್ಮಲ್ಲಿರುವ ಅಜ್ಞಾನದ ದೋಷದಿಂದ ಗ್ರಂಥವನ್ನು ಹಾಳುಮಾಡಿದ್ದಾರೆ. ಹಿಂದಿನ ಕಾಲದಿಂದಲೂ ಹೀಗೆಯೇ ನಮ್ಮ ಗ್ರಂಥಗಳ ಮೇಲೆ ಅನೇಕ ಆಕ್ರಮಣಗಳು ನಡೆದುಬಿಟ್ಟಿವೆ.

ಆದರೆ ಮತ್ತೊಂದು ಜನರ ಗುಂಪು ಶುದ್ಧವಾದ ಪಾಠವನ್ನು ನಾವು ಉಳಿಸಿಕೊಳ್ಳಬೇಕು.

ಅದನ್ನು ಬೆಳೆಸಬೇಕು, ಪ್ರಚಾರ ಮಾಡಬೇಕು ಎಂದು ಹೋರಾಡುತ್ತಲೇ ಇದ್ದಾರೆ. ಹಲವು ಶತಮಾನಗಳಿಂದ ಸಂಶೋಧನೆಯು ನಡೆಯುತ್ತಲೇ ಬರುತ್ತಿದೆ.

ಶುದ್ಧ ಪಾಠವನ್ನು ನಿರ್ಣಯಿಸುವ ಬಗೆ ಹೇಗೆ ?

ಮಹಾಭಾರತವು ವೇದವ್ಯಾಸರಿಂದ ೬೦ ಲಕ್ಷ ಶ್ಲೋಕಗಳಿಂದ ರಚಿತವಾಯಿತು. ಅದರಲ್ಲಿ೩೦ ಲಕ್ಷಶ್ಲೋಕಗಳು ದೇವಲೋಕದಲ್ಲಿ, ೧೫ ಲಕ್ಷಶ್ಲೋಕಗಳು ಪಿತೃಲೋಕದಲ್ಲಿ, ೧೪ ಲಕ್ಷಶ್ಲೋಕಗಳು ಗಂಧರ್ವಲೋಕದಲ್ಲಿ ಇರುತ್ತವೆ. ಉಳಿದ ೧ ಲಕ್ಷಶ್ಲೋಕಗಳು ಮಾತ್ರ ಭೂಲೋಕದಲ್ಲಿ ಉಳಿದಿದೆ ಎಂಬ ವಾಡಿಕೆ ಇದೆ. ಕೆಲವರು ೧ಲಕ್ಷ ಶ್ಲೋಕಗಳೂ ಕೂಡ ಮಹಾಭಾರತದಲ್ಲಿ ಇರುವುದಿಲ್ಲ. ವೇದವ್ಯಾಸದೇವರಿಂದ ನೇರವಾಗಿ ಬಂದಿರುವ ಶ್ಲೋಕಗಳು ಕೇವಲ ೨೪೦೦೦ ಮಾತ್ರ, ಉಳಿದವು ವೈಶಂಪಾಯನರಿಂದ ಅನಂತರ ಪ್ರಕಟಣೆಗೊಂಡವು ಎಂದು ಹೇಳುತ್ತಾರೆ. ಆದರೆ ಇದು ನಿರಾಧಾರವಾದುದು.

ಪ್ರಪ್ರಥಮವಾಗಿ ಮಹಾಭಾರತದ ಸಂಶೋಧನೆ- ಯನ್ನು ಮಾಡಿ, ಶುದ್ಧಪಾಠಕ್ಕನುಗುಣವಾಗಿ ಮಹಾಭಾರತದಲ್ಲಿ ಅನೇಕ ಸಮಸ್ಯೆಗಳನ್ನು ಪರಿಹರಿಸುವ ಮೂಲಕ ವ್ಯಾಖ್ಯಾನವನ್ನು ಬರೆದವರು ಶ್ರೀಮನ್ಮಧ್ವಾಚಾರ್ಯರು. ಶ್ರೀಮನ್ಮಧ್ವಾಚಾರ್ಯರು ಎಲ್ಲಿಯ ತನಕ ಮಹಾಭಾರತಕ್ಕೆ ವ್ಯಾಖ್ಯಾನವನ್ನು ಬರೆಯಲಿಲ್ಲವೋ, ಅಲ್ಲಿಯ ತನಕ ಮಹಾಭಾರತದಲ್ಲಿ ಇರುವ ಸಮಸ್ಯೆಗಳ ಜಟಿಲತೆಯೂ ಪರಿಹಾರವಾಗಿರಲಿಲ್ಲ.

ಮಹಾಭಾರತದ ಮಂಗಳಶ್ಲೋಕದಲ್ಲಿಯೇ ವಿವಾದವಿರುವುದು ಇನ್ನೂ ಹೆಚ್ಚಿನ ಆಶ್ಚರ್ಯಕ್ಕೆ ಕಾರಣವಾಗಿದೆ. ಕೆಲವರು 'ನಾರಾಯಣಂ ನಮಸ್ಕೃತ್ಯ' ಎಂಬುದನ್ನು ಮಂಗಳಶ್ಲೋಕವೆನ್ನುತ್ತಾರೆ. ಇನ್ನೂ ಕೆಲವರು 'ರೋಮಹರ್ಷಣಪುತ್ರಃ ಉಗ್ರಶ್ರವಃ' ಎಂಬುದನ್ನೇ ಮಂಗಳಶ್ಲೋಕವೆನ್ನುತ್ತಾರೆ. ಆದರೆ ಶ್ರೀಮನ್ಮಧ್ವಾಚಾರ್ಯರು

'ನಾರಾಯಣಂ ಸುರಗುರುಂ ಜಗದೇಕನಾಥಂ
ಭಕ್ತಪ್ರಿಯಂ ಸಕಲಲೋಕನಮಸ್ಕೃತಂ ಚ ।
ತ್ರೈಗುಣ್ಯವರ್ಜಿತಮಜಂ ವಿಭುಮಾದ್ಯಮೀಶಂ
ವಂದೇ ಭವಘ್ನಮರಾಸುರಸಿದ್ಧವಂದ್ಯಮ್ ॥

ಎಂಬುದೇ ಮಹಾಭಾರತದ ಮಂಗಳಶ್ಲೋಕವೆಂದು ಘೋಷಿಸಿದ್ದಾರೆ.

ಶ್ರೀಮನ್ಮಧ್ವಾಚಾರ್ಯರ ಪರಂಪರೆಯಲ್ಲಿ ಬಂದಿರುವ ಮತ್ತೊಬ್ಬ ಧೀರೋದಾತ್ತ ವ್ಯಾಖ್ಯಾನಕರ್ತೃಗಳೆಂದರೆ ಶ್ರೀಮನ್ ವಾದಿರಾಜತೀರ್ಥರು. ಇವರು

ಮಹಾಭಾರತಗ್ರಂಥಕ್ಕೆ 'ಲಕ್ಷಾಲಂಕಾರ' ಎಂಬ ವ್ಯಾಖ್ಯಾನವನ್ನು ಬರೆದಿದ್ದಾರೆ. ಮತ್ತು ಶ್ರೀಮದಾಚಾರ್ಯರ 'ಮಹಾಭಾರತ ತಾತ್ಪರ್ಯನಿರ್ಣಯ' ಎಂಬ ಗ್ರಂಥಕ್ಕೂ ಕೂಡ ವ್ಯಾಖ್ಯಾನವನ್ನು ಬರೆದಿದ್ದಾರೆ. ಶ್ರೀಮನ್ಮಹಾಭಾರತತಾತ್ಪರ್ಯನಿರ್ಣಯದ ವ್ಯಾಖ್ಯಾನದಲ್ಲಿ ಶ್ರೀ ವಾದಿರಾಜರು 'ನಾರಾಯಣಂ ಸುರಗುರುಂ' ಎಂಬ ಶ್ಲೋಕವೇ ಮಂಗಳಶ್ಲೋಕವೆಂದು ದಾಖಲಿಸಿದ್ದಾರೆ. ತಾವು ಕೇರಳ ಪ್ರದೇಶದಲ್ಲಿ ಸಂಚರಿಸುತ್ತಿರುವಾಗ ಅಲ್ಲಿ ದೊರೆತ ತಾಳೆಗರಿಯಲ್ಲಿ ಈ ಪಾಠವು ದೊರೆತಿದೆ ಎನ್ನುತ್ತಾರೆ – 'ಕೇರಳದೇಶಸ್ಯ ಪುರಾತನ ಪುಸ್ತಕೇಷು ಅದ್ಯಾಪಿ ದೃಶ್ಯತೇ' (ತಾತ್ಪರ್ಯನಿರ್ಣಯ ೨-೫೭).

ಶ್ರೀಮದಾಚಾರ್ಯರು ಅನೇಕ ಶೈಥಿಲ್ಯಗಳನ್ನು ತಮ್ಮ ಪ್ರಭಾವದಿಂದ, ಉಪನ್ಯಾಸಗಳಿಂದ, ಗ್ರಂಥಗಳ ರಚನೆಯಿಂದ ಬಹಳವಾಗಿ ಸರಿಪಡಿಸಿದ್ದಾರೆ. ಹಾಗೂ ಗ್ರಂಥಗಳ ಸರಿಯಾದ ಅರ್ಥವನ್ನು ಪ್ರಚುರ ಪಡಿಸಿದ್ದಾರೆ. ಈ ರೀತಿಯಾಗಿ ಮಾಡಿರುವ ಕಾರ್ಯವೈಖರಿ ಬೇರೆ ಯಾರಲ್ಲಿಯೂ ಕಾಣಿಸುವುದಿಲ್ಲ. ಮಹಾಭಾರತವನ್ನು ಸರಿಯಾಗಿ ಅರ್ಥ ಮಾಡಿಕೊಳ್ಳಬೇಕಾದರೆ, ಹಿಂದೆಯೂ ಮತ್ತೆ ಇಂದಿಗೂ ಶ್ರೀಮನ್ಮಧ್ವಾಚಾರ್ಯರೇ ದಾರಿದೀಪವಾಗಿದ್ದಾರೆ. ಈ ಕಾರಣದಿಂದ ಶ್ರೀಮನ್ಮಧ್ವಾಚಾರ್ಯರ ಮತ್ತು ಶ್ರೀಮನ್‌ವಾದಿರಾಜತೀರ್ಥರ ಮಾರ್ಗದರ್ಶನದಲ್ಲಿ ಮೂಲಮಹಾಭಾರತವನ್ನು ನಾವು ತಿಳಿದುಕೊಳ್ಳಬೇಕು. ಆದರೆ ಇಲ್ಲಿಯ ತನಕ ಈ ಕೆಲಸ ಆಗಿರುವುದಿಲ್ಲ.

ಇಂದು ದೊರಕುತ್ತಿರುವ ಹಲವಾರು ತಾಳೆಗರಿ ಪ್ರತಿಗಳಲ್ಲಿ ಶುದ್ಧಪಾಠವನ್ನು ಹುಡುಕುವುದೇ ಒಂದು ಸಾಹಸದ ಕೆಲಸ. ಇದಕ್ಕಾಗಿ ನೈಪುಣ್ಯಪಡೆದ ಸಂಶೋಧಕ ಪಡೆಯೇ ಬೇಕಾಗುತ್ತದೆ. ಅನೇಕ ವಿದ್ವಾಂಸರ ಪರಸ್ಪರ ಸಹಕಾರ ಅನಿವಾರ್ಯವಾಗುತ್ತದೆ. ಮತ್ತು ಶ್ರೀಮನ್ಮಧ್ವಾಚಾರ್ಯರ ಮಹಾಭಾರತತಾತ್ಪರ್ಯನಿರ್ಣಯ ಮತ್ತು ಶ್ರೀಮನ್‌ವಾದಿರಾಜತೀರ್ಥರ ಲಕ್ಷಾಲಂಕಾರಗಳ ವಿಶೇಷ ಅಧ್ಯಯನವನ್ನು ಹೊಂದಿರುವ ವಿದ್ವಾಂಸರೇ ಈ ಸಂಶೋಧನೆಯನ್ನು ನಡೆಸಬೇಕು. ಅಂತಹ ಸಂಶೋಧಕರು ನಮ್ಮಲ್ಲಿ ಇದ್ದಾರೆಂಬುದೇ ಹೆಮ್ಮೆಯ ವಿಷಯ.

ನಾವು ಮಾಡುತ್ತಿರುವ ಕಾರ್ಯ

ನಮ್ಮ ಬಳಿ ಸುಮಾರು ೫೦೦ ವರ್ಷಗಳಿಗಿಂತಲೂ ಪ್ರಾಚೀನವಾದ ಮಹಾಭಾರತ ತಾಳೆಗರಿಗಳ ಸಂಗ್ರಹವಿದೆ. ಈ ತಾಳೆಗರಿಗಳು ಬಹುಷಃ ಶ್ರೀಮದ್ ವಾದಿರಾಜತೀರ್ಥರ ಕಾಲದಲ್ಲಿ ಬರೆದಿರಬಹುದೆಂದು ಊಹಿಸಲಾಗಿದೆ. ತಾತ್ಪರ್ಯನಿರ್ಣಯ ಹಾಗೂ ಲಕ್ಷಾಲಂಕಾರ ಎಂಬ ವ್ಯಾಖ್ಯಾನಗಳಿಗೆ ಇವುಗಳಲ್ಲಿರುವ ಪಾಠ ಬಹಳ ಹತ್ತಿರವಾಗಿವೆ.

ಇಷ್ಟು ಅಮೂಲ್ಯವಾದ ತಾಳೆಗರಿಗಳ ಗ್ರಂಥಸಮುದಾಯವು ಇದುವರೆಗೂ ಪ್ರಕಾಶನವೇ ಆಗಿರುವುದಿಲ್ಲ. ಇದನ್ನು ಪ್ರಕಾಶನ ಪಡಿಸುವುದು ಸುಲಭದ ಮಾತೂ ಅಲ್ಲ. ಅನೇಕ ವಿದ್ವಾಂಸರ ಸಹಕಾರವಷ್ಟೇ ಅಲ್ಲದೇ ಸಾವಿರಾರು ಜನರ ಬೆಂಬಲ ಬೇಕಾಗುತ್ತದೆ. ಅತ್ಯಂತ ಶ್ರದ್ಧೆಯಿರುವ ಪೀಠಾಧಿಪತಿಗಳಿಂದಷ್ಟೇ ಇಂಥಾ ದೊಡ್ಡ ಕಾರ್ಯವನ್ನು ನಡೆಸಲು ಸಾಧ್ಯ. ಸಾಮಾನ್ಯವ್ಯಕ್ತಿಗಳಿಗೆ ಇಂಥ ಘನಕಾರ್ಯದ ಕಷ್ಟವನ್ನು ಊಹಿಸಲೂ ಕೂಡ ಸಾಧ್ಯವಿಲ್ಲ.

ನಾವು ಪ್ರಕೃತ ಅನೇಕ ತಾಳೆಗರಿಗಳ ಪಾಠಗಳನ್ನು ಹೊಂದಿರುವುದಷ್ಟೇ ಅಲ್ಲದೇ ಮುದ್ರಿತ ಪುಸ್ತಕಗಳೆಲ್ಲವನ್ನೂ ಕೂಡ ಸಂಗ್ರಹಿಸಿದ್ದೇವೆ. ನಮ್ಮ ಕಣ್ಣೆದುರಿಗೆ ಕಾಣಿಸುವ ಎಲ್ಲ ಗ್ರಂಥಗಳನ್ನು ಒಟ್ಟು ಸೇರಿಸಿ, ಪ್ರಾಚೀನ ತಾಳೆಗರಿಗಳನ್ನು ಓದಲು ಪರಿಣತರಾದ ಯುವಕ ವಿದ್ವಾಂಸರ ಬಳಿ ಅವುಗಳನ್ನೆಲ್ಲಾ ತರ್ಜುಮೆಗೊಳಿಸಿ ಸಂಶೋಧನೆಯ ಕಾರ್ಯ ಭರದಿಂದ ನಡೆಯುತ್ತಿದೆ.

ಮೊಟ್ಟಮೊದಲು ಶುದ್ಧವಾದ ಪಾಠವನ್ನು ನಿರ್ಣಯಿಸುವುದೇ ದೊಡ್ಡ ಕೆಲಸ. ಶುದ್ಧ ಪಾಠ ದೊರೆತ ಮೇಲೆ ಪ್ರಥಮಬಾರಿಗೆ ಕನ್ನಡಭಾಷೆಯಲ್ಲಿ ಪ್ರತಿಶ್ಲೋಕಗಳ ಅನುವಾದವನ್ನೂ ಮಾಡುತ್ತಿದ್ದೇವೆ.

ಒಂದು ದೊಡ್ಡ ಕಟ್ಟಡವನ್ನು ನಿರ್ಮಾಣ ಮಾಡಬೇಕೆಂದರೆ ಶ್ರೀಮಂತನಾದ ವ್ಯಕ್ತಿಯಿಂದ ಹಿಡಿದು ಕೂಲಿಕೆಲಸಗಾರನ ತನಕ ಪ್ರತಿಯೊಬ್ಬನೂ ದುಡಿಯಬೇಕು. ತಮ್ಮ ತಮ್ಮ ಅರ್ಹತೆಗೆ ತಕ್ಕಂತೆ ತಾವು ದುಡಿದಾಗ ಮಾತ್ರ ಅಚ್ಚುಕಟ್ಟಾದ ಕಟ್ಟಡವು ನಿರ್ಮಾಣವಾಗುತ್ತದೆ. ಅದರಂತೆ ನಾವೂ ಕೂಡ ಮಹಾಭಾರತ ಎಂಬ ಸುಭದ್ರವಾದ ಅರಮನೆಯನ್ನು ಕಟ್ಟಬೇಕಾಗಿದೆ. ಇದಕ್ಕಾಗಿ ಶ್ರೀಮಂತರಾದ ವ್ಯಕ್ತಿಗಳಷ್ಟೇ ಅಲ್ಲದೇ, ಅಥವಾ ಶ್ರೇಷ್ಠವಿದ್ವಾಂಸರಷ್ಟೇ ಅಲ್ಲದೇ ಪ್ರತಿಯೊಬ್ಬ ಜನಸಾಮಾನ್ಯರೂ ಕೂಡ ಇದರಲ್ಲಿ ಪಾಲ್ಗೊಳ್ಳಬೇಕು. ನೀವು ನೀಡುವ ಪ್ರತಿಯೊಂದು ರೂಪಾಯಿಗಳೇ ಶ್ಲೋಕದಲ್ಲಿರುವ ಅಕ್ಷರಗಳ ಜೋಡಣೆ.

ಮೂವತ್ತೆರಡು ಅಕ್ಷರಗಳು ಸೇರಿ ಒಂದು ಶ್ಲೋಕವಾಗುತ್ತದೆ. ಈ ಮೂವತ್ತೆರಡು ಅಕ್ಷರಗಳ ಮಧ್ಯದಲ್ಲಿ ಒಂದು ಅಕ್ಷರವಿಲ್ಲದಿದ್ದರೂ ಶ್ಲೋಕವು ಪರಿಪೂರ್ಣ- ವಾಗುವುದಿಲ್ಲ. ಅದರಂತೆ ನೀವು ನೀಡುವ ಒಂದು ರೂಪಾಯಿ ಇಲ್ಲದಿದ್ದರೂ ನಮ್ಮ ಈ ಯೋಜನೆ ಪರಿಪೂರ್ಣವಾಗುವುದಿಲ್ಲ. ಅದಕ್ಕಾಗಿ ನಿಮ್ಮ ಅನುಕೂಲಕ್ಕೆ ತಕ್ಕಂತೆ ಎಲ್ಲರೂ ಕೂಡ ಇದರಲ್ಲಿ ಭಾಗವಹಿಸಿರಿ. ನೀವು ಎಷ್ಟು ರೀತಿಯಲ್ಲಿ ಇದರಲ್ಲಿ ತೊಡಗಿ ಮಹಾಭಾರತವನ್ನು ರಕ್ಷಿಸುತ್ತೀರೋ ಅಷ್ಟೇ ಉನ್ನತಮಾರ್ಗದಲ್ಲಿ ಮಹಾಭಾರತ ಗ್ರಂಥವು ನಿಮ್ಮನ್ನು ರಕ್ಷಿಸುತ್ತದೆ.

'ಮಹಾಭಾರತ ಗ್ರಂಥವನ್ನು ನೀವು ರಕ್ಷಣೆ ಮಾಡಿ, ಮಹಾಭಾರತ ಗ್ರಂಥವು ನಿಮ್ಮನ್ನು ರಕ್ಷಿಸುತ್ತದೆ'. 'ಮಹಾಭಾರತ ಗ್ರಂಥವನ್ನು ನೀವು ಎಲ್ಲೆಡೆ ಬೆಳೆಸಿರಿ. ಎಲ್ಲೆಡೆ ಬೆಳೆದಿರುವ ಮಹಾಭಾರತ ಗ್ರಂಥವು ನಿಮ್ಮನ್ನೂ ಕೂಡ ಎಲ್ಲೆಡೆ ಬೆಳೆಸುತ್ತದೆ'. 'ನೀವಿಲ್ಲದೇ ಮಹಾಭಾರತವಿಲ್ಲ. ಮಹಾಭಾರತವಿಲ್ಲದೇ ನೀವಿಲ್ಲ'. 'ನಿಮ್ಮಲ್ಲಿ ಮಹಾಭಾರತ. ಮಹಾಭಾರತದಲ್ಲಿ ನೀವು'. ಬನ್ನಿ !! ಜೊತೆಯಾಗಿ ಶ್ರಮಿಸೋಣ. ಮಾನವಕುಲದ ಜ್ಞಾನದಾಹವನ್ನು ಇಂಗಿಸೋಣ. ಸರ್ವರಿಗೂ ಸುಖ-ಶಾಂತಿ ಸಮೃದ್ಧಿಯನ್ನು ಸಾಧಿಸೋಣ.

ಭಂಡಾರ್ಕರ್ ಸಂಸ್ಥೆಯ ಸಾಧನೆ

ಪುಣೆಯ ಶ್ರೀ ವಿಷ್ಣು ಎಸ್. ಸೂಕ್ತಂಕರ್ ಎಂಬ ವಿದ್ವಾಂಸರು ಕ್ರಿ.ಶ. ೧೯೧೫ ದಲ್ಲಿ ಶುದ್ಧಪ್ರತಿಗಾಗಿ ಬಹಳ ಶ್ರಮಪಟ್ಟಿದ್ದಾರೆ. ಅವರು ತಮ್ಮ ಕಾರ್ಯದಲ್ಲಿ ಔಂಧದೇಶರಾಜನಾದ ಶ್ರೀಮನ್ ಬಾಳಸಾಹೇಬ್ ಪಂತ್ ಪ್ರತಿನಿಧಿ ಎಂಬ ವ್ಯಕ್ತಿಯ ಸಹಕಾರವನ್ನು ಪಡೆದಿರುತ್ತಾರೆ. ಅಷ್ಟೇ ಅಲ್ಲದೇ, ಎಸ್. ಬೆಲ್‌ವೆಲ್‌ಕರ್, ಎ.ಬಿ. ಗಜೇಂದ್ರಗಡ್ಕರ್, ಪಿ.ಎ. ಕಾಣೆ, ಆರ್.ಡಿ. ಕರಂಕರ್, ವಿ.ಜಿ. ಪರಂಜಪೆ, ವಿ.ಕೆ. ರಾಜವಾಡೆ, ಎನ್.ಬಿ. ಉತ್‌ಜೀಕರ್, ಪಿ.ಎಲ್. ವೈದ್ಯ, ವಿ.ಪಿ. ವೈದ್ಯ ಮೊದಲಾದ ವಿದ್ವಾಂಸರ ಸಂಪೂರ್ಣ ಸಹಕಾರವನ್ನು ಬಹಳವಾಗಿ ಪಡೆದಿರುತ್ತಾರೆ. ಭಂಡಾರ್ಕರ್ ಓರಿಯಂಟಲ್ ರೀಸರ್ಚ್ ಇನ್‌ಸ್ಟಿಟ್ಯೂಟ್ ಎಂಬ ಸಂಸ್ಥೆಯ ಮೂಲಕ ಇವರೆಲ್ಲರೂ ಮಹಾಭಾರತ ಸಂಶೋಧನೆಗಾಗಿ ಬಹಳ ಪ್ರಯತ್ನಪಟ್ಟಿದ್ದಾರೆ.

ಈ ಇನ್‌ಸ್ಟಿಟ್ಯೂಟ್‌ನ ಡಿ.ಎನ್.ಆರ್. ಎಂಬ ಮುಖ್ಯಸ್ಥರು ತಮ್ಮ ಪ್ರಯತ್ನದ ಪ್ರತಿಫಲವಾದ ಮಹಾಭಾರತದ ಕ್ರಿಟಿಕಲ್ ಎಡಿಷನ್ ಎಂಬ ಪುಸ್ತಕಗಳಲ್ಲಿ ತಮ್ಮ ಅನುಭವವನ್ನು ಹಂಚಿಕೊಂಡಿದ್ದಾರೆ. ಸಂಪೂರ್ಣ ೧೮ ಪರ್ವಗಳ ಕಾರ್ಯವನ್ನು ೧೯೬೬ ರಲ್ಲಿ ಪೂರ್ಣಗೊಳಿಸಿದ್ದಾರೆ. ಡಿ.ಎನ್. ರಾಧಾಕೃಷ್ಣನ್ ಅವರು ಸೆಪ್ಟೆಂಬರ್ ೨೨, ೧೯೬೬ರಲ್ಲಿ ಭಂಡಾರ್ಕರ್ ಓರಿಯಂಟಲ್ ರೀಸರ್ಚ್ ಇನ್‌ಸ್ಟಿಟ್ಯೂಟ್ ಈ ಸಂಸ್ಥೆಯಿಂದ ಶೋಧಿಸಲ್ಪಟ್ಟ ಸಂಪೂರ್ಣ ಮಹಾಭಾರತವನ್ನು ಉದ್ಘಾಟಿಸಿದರು. ಅನಂತರ ೧೯೭೨ರ ತನಕ ಹರಿವಂಶವನ್ನು ಪ್ರಕಟಣೆ ಮಾಡಿದ್ದಾರೆ.

ವಿ.ಎಸ್. ಸೂಕ್ತಂಕರ್ ಅವರು ತಿಳಿಸುವಂತೆ ಜರ್ಮನ್ ದೇಶದ ವಿಶ್ವವಿದ್ಯಾನಿಲಯದ ಸಂಪೂರ್ಣ ಸಹಕಾರವನ್ನು ತಾವು ಪಡೆದಿದ್ದಾರೆ. ಅಷ್ಟೇ ಅಲ್ಲದೇ ನೇಪಾಳ, ಕಾಶ್ಮೀರ, ತಂಜಾವೂರು, ತಿರುವಾಂಕೂರು ಮೊದಲಾದ ಅನೇಕ ಪ್ರಾಂತಗಳಲ್ಲಿರುವ ನೂರಾರು ಪುಸ್ತಪ್ರತಿಗಳನ್ನು ತಾವು ಸಂಗ್ರಹಿಸಿ ಸಂಶೋಧಿಸಿರುವುದಾಗಿ ಹೇಳಿರುತ್ತಾರೆ. ಯೂರೋಪಿನ

ವಿದ್ಯಾವಂತರ ಕೊಡುಗೆಯ ಉಪಕಾರವನ್ನು ಸ್ಮರಿಸಿಕೊಳ್ಳುವ ಸೂಕ್ತಂಕರ್ ಅವರು ನೇಪಾಳರಾಜನ ಬಹಳ ಔದಾರ್ಯವನ್ನೂ ಕೂಡ ಸ್ಮರಿಸಿಕೊಳ್ಳುತ್ತಾರೆ. ಕ್ರಿಟಿಕಲ್ ಎಡಿಷನ್ ಎಂಬ ಬೃಹತ್ ಹೊತ್ತಿಗೆಗಳನ್ನು ಮುದ್ರಣ ಮಾಡಬೇಕೆಂಬ ಅಭಿಪ್ರಾಯವನ್ನು ಮೊದಲು ಘೋಷಿಸಿದವರು ಪ್ರೋ. ವಿಂಟರ್. ೧೮೯೭ರಲ್ಲಿ ಅಂತರರಾಷ್ಟ್ರೀಯ ಸನಾತನಿಗಳ ಸಮೂಹದ ಸಮಿತಿಯ ಮುಂದೆ ಇದನ್ನು ಪ್ರಸ್ತಾಪಮಾಡಿ ಮಹಾಭಾರತದ ಶ್ರೇಷ್ಠತೆಯನ್ನು ಎತ್ತಿಹಿಡಿದರು. ಪುನಃ ಸುಮಾರು ೧೦ ವರ್ಷಗಳ ಕಾಲ ಮಹಾಭಾರತದ ಶುದ್ಧಪಾಠದ ಶೋಧನೆಗಾಗಿ ಬಹಳ ಶ್ರಮಪಟ್ಟರು. ವಿಂಟರ್ ನಿಟ್ಸ್ ಇವರ ಅಭಿಪ್ರಾಯವನ್ನು ಅನೇಕರು ವಿರೋಧ ಮಾಡಿದರೂ ಕೂಡ ೧೯೦೪ರಲ್ಲಿ ಲಂಡನ್ ದೇಶದಲ್ಲಿನಡೆದ ಬೃಹತ್ ಸಭೆಯಲ್ಲಿ ಬರ್ಲಿನ್ ಮತ್ತು ವಿಯೆನ್ ಎಂಬ ವಿದ್ಯಾಸಂಸ್ಥೆಗಳು ಮಹಾಭಾರತದ ಶೋಧನೆಯ ಕೆಲಸವು ಮಾಡಲೇಬೇಕೆಂಬ ಸದುದ್ದೇಶದಿಂದ ಧನಸಹಾಯ ಮಾಡಿದವು. ಅನಂತರ ಕೆಲಸವು ಪ್ರಾರಂಭವಾಯಿತು.

ಒಂದನೇ ಪ್ರಪಂಚ ಯುದ್ಧದ ಬಳಿಕ ಭಂಡಾರ್ಕರ್ ಓರಿಯಂಟಲ್ ರೀಸರ್ಚ್ ಇನ್‌ಸ್ಟಿಟ್ಯೂಟ್ ಇವರು ಈ ಮಹಾಭಾರತದ ಪರಿಶೋಧನೆಯ ಕೆಲಸವನ್ನು ಉತ್ಸಾಹದಿಂದ ಸ್ವೀಕರಿಸಿದರು. ೧೯೧೮ರಲ್ಲಿ ಬಾಳಾ ಸಾಹೇಬ್ ಪಂಡಿತ್ ಇವರು ಆಗಿನ ಕಾಲದಲ್ಲಿ ಉದಾರಮನಸ್ಸಿನಿಂದ ೧ ಲಕ್ಷ ರೂ.ಗಳನ್ನು ನೀಡಿದರು. ಇದರಿಂದಲೇ ಕೆಲಸವು ಅತ್ಯಂತ ವೇಗದಲ್ಲಿ ಪ್ರಾರಂಭವಾಯಿತು. ಸಂಶೋಧನೆ ಮಾಡುವಾಗ ಔತ್ತರೇಯಪಾಠ ಹಾಗೂ ದಾಕ್ಷಿಣಾತ್ಯಪಾಠಗಳಲ್ಲಿ ಬಹಳ ವ್ಯತ್ಯಾಸ ಕಂಡುಬಂದವು. ಅಂತಿಮವಾಗಿ ಔತ್ತರೇಯ- ಪಾಠವನ್ನೇ ಸ್ವೀಕರಿಸಿ ಮಹಾಭಾರತದ ಪರಿಶೋಧನೆಯನ್ನು ಪ್ರಾರಂಭಿಸಿದರು.

೨೦೦ ಕ್ಕೂ ಹೆಚ್ಚು ವಿದ್ವಾಂಸರು ೫೦ ವರ್ಷಗಳಿಗಿಂತಲೂ ಹೆಚ್ಚು ಕಾಲ ಮಹಾಭಾರತದ ಪರಿಶೋಧನೆ ಮಾಡಿರುವ ಭಂಡಾರ್ಕರ್ ಸಂಸ್ಥೆಯ ಈ ಸಾಧನೆಯನ್ನು ಎಲ್ಲರೂ ಕೂಡ ಮೆಚ್ಚಲೇಬೇಕು.

ಆದರೂ ಕೂಡ ಉಡುಪಿಯ ಗ್ರಂಥಾಲಯಗಳಲ್ಲಿ ಇರುವ ಪ್ರಾಚೀನ ಹಸ್ತಪ್ರತಿಗಳನ್ನು ಇವರು ತಮ್ಮ ಶೋಧನೆಯಲ್ಲಿ ಸೇರಿಸಿಲ್ಲ. ಮತ್ತು ತಾತ್ಪರ್ಯನಿರ್ಣಯ ಹಾಗೂ ಲಕ್ಷಾಲಂಕಾರ ಎಂಬೆರಡು ವ್ಯಾಖ್ಯಾನಗಳು ಮಹಾಭಾರತ ಗ್ರಂಥಕ್ಕೆ ಇವೆ ಎಂಬ ವಿಚಾರವನ್ನೂ ಕೂಡ ಇವರು ಮೊದಲು ತಿಳಿದಿರಲಿಲ್ಲ. ಅನಂತರ ಎರಡನೆಯ ಮುದ್ರಣದ ಸಂದರ್ಭದಲ್ಲಿ ತಮಗೆ ಲಕ್ಷಾಲಂಕಾರ ಗ್ರಂಥದ ಪರಿಚಯವಾಯಿತೆಂದು ಮತ್ತು 'ನಾರಾಯಣಂ ಸುರಗುರುಂ' ಎಂಬ ಶ್ಲೋಕವು ಪ್ರಾರಂಭದಲ್ಲಿ ಇರುತ್ತದೆಂದು

ಅವರು ಹೇಳುತ್ತಾರೆ. ಅಷ್ಟೇ ಅಲ್ಲದೇ ವೇದವ್ಯಾಸದೇವರು ೨೪೦೦೦ ಶ್ಲೋಕಗಳು ಮಾತ್ರ ರಚನೆ ಮಾಡಿದ್ದಾರೆ. ಅನಂತರದ ಕಾಲದಲ್ಲಿ ಉಳಿದ ಗ್ರಂಥವು ಬೆಳೆದು ಬಂದಿದೆಯೆಂಬ ಅಭಿಪ್ರಾಯವನ್ನು ನೀಡುತ್ತಾರೆ.

ಇದುವರೆಗೂ ನಡೆದಿರುವ ಸಂಶೋಧನೆಗಳು

ಇದುವರೆಗೂ ಪ್ರಕಾಶನವಾಗಿರುವ ಸಂಶೋದಿತ ಮಹಾಭಾರತ ಗ್ರಂಥಗಳ ಬಗ್ಗೆ ನೋಡೋಣ.

ಬಂಗಾಳದ ಏಷ್ಯಾಟಿಕ್ ಸೊಸೈಟಿಯ ಆಶ್ರಯದಲ್ಲಿ ಅನೇಕ ವಿದ್ವಾಂಸರುಗಳು ಒಂದು ವಿದ್ಯಾಸಂಸ್ಥೆಯನ್ನು ರಚಿಸಿ, ಪ್ರಪ್ರಥಮಬಾರಿಗೆ ಪೂರ್ಣಮಹಾಭಾರತವನ್ನು ನಾಲ್ಕು ಭಾಗಗಳಲ್ಲಿ ಪ್ರಕಟಿಸಿದರು. ೧೮೩೪ ರಿಂದ ೧೮೩೯ ವರೆಗಿನ ವರ್ಷಗಳಲ್ಲಿ ಪುಸ್ತಕರೂಪದಲ್ಲಿ ಪ್ರಕಟವಾದವು. ಅಲ್ಲಿಂದ ಮುಂದೆ ಅನೇಕ ಕಡೆ ಪೂರ್ಣಮಹಾಭಾರತದ ಹಲವಾರು ಪ್ರಕಟಣೆಗಳು ಹೊರಬಂದಿವೆ. ಕೆಲವು ಮುಖ್ಯವಾದ ಪ್ರಕಟಣೆಗಳು ಹೀಗಿವೆ –

೧. ಸಂಸ್ಕೃತದ ಮಹಾಭಾರತವನ್ನು ತೆಲುಗುಲಿಪಿಯಲ್ಲಿ ನಾಲ್ಕು ಬಾರಿ ಮದ್ರಾಸಿನಲ್ಲಿ ಪ್ರಕಟಿಸಲಾಯಿತು. ೧೮೫೦ರಲ್ಲಿ ವೆಂಕಟರಾಯಶರ್ಮ ಎಂಬ ವಿದ್ವಾಂಸರು.

೨. ೧೮೫೫-೬೦ ರಲ್ಲಿ ಪುರಾಣಂ ಹಯಗ್ರೀವಶಾಸ್ತ್ರಿ ಎಂಬ ವಿದ್ವಾಂಸರು (ವಾವಿಳ್ಳ ಪ್ರೆಸ್‌ನ ಮುಖ್ಯಸ್ಥರ ಸಂಬಂಧಿಗಳು) ವಾವಿಳ್ಳಪ್ರೆಸ್‌ನಲ್ಲಿ ಪ್ರಕಟಣೆ ಮಾಡಿದರು.

೩. ೧೮೭೦ ರಲ್ಲಿ ವೆಂಕಟಸುಬ್ಬಶಾಸ್ತ್ರಿ ಎಂಬ ವಿದ್ವಾಂಸರು ಪ್ರಕಟಣೆ ಮಾಡಿದರು.

೪. ೧೯೨೯ರಲ್ಲಿ ವಾವಿಳ್ಳ ರಾಮಸ್ವಾಮಿಶಾಸ್ತ್ರಿ ಮತ್ತು ಮಕ್ಕಳು ಮಹಾಭಾರತವನ್ನು ಮಹಾಭಾರತದ ಮೂಲಪ್ರತಿಯನ್ನು ಪ್ರಕಟಣೆ ಮಾಡಿದರು.

೫. ಮತ್ತು ೧೮೭೮ರಲ್ಲಿ ಮುಂಬೈಯ ಗಣಪತಿ ಕೃಷ್ಣಾಜಿ ಪ್ರೆಸ್‌ನವರು ನೀಲಕಂಠಭಾರತ ಭಾವದೀಪದೊಡನೆ, ಮಹಾಭಾರತ ಮೂಲವನ್ನು ಪ್ರಕಟಣೆ ಮಾಡಿದರು.

೬. ಇಷ್ಟೇ ಅಲ್ಲದೇ ಪ್ರತಾಪಚಂದ್ರರೈ ಇವರು ಕಲ್ಕತ್ತಾನಗರದಲ್ಲಿ ಮಹಾಭಾರತವನ್ನು ಪ್ರಕಾಶನ ಮಾಡಿದರಷ್ಟೇ ಅಲ್ಲದೇ ಹಲವಾರು ಪ್ರತಿಗಳನ್ನು ಉಚಿತವಾಗಿ ದಾನ ಮಾಡಿದರು.

೭. ತಂಜಾವೂರು ಜಿಲ್ಲೆಯಲ್ಲಿ ರಂಗಸ್ವಾಮಿದೀಕ್ಷಿತರು ವ್ಯಾಖ್ಯಾನಸಹಿತವಾಗಿ ೧೮೮೨ರಲ್ಲಿ ಪುನಃ ೧೮೯೫ರಲ್ಲಿ ಸಂಸ್ಕೃತದ ಗ್ರಂಥಲಿಪಿಯಲ್ಲಿ ಸಾರಭೋಜಿರಾಜಪುರದ ವೇದವ್ಯಾಸ ಪ್ರೆಸ್‌ನಲ್ಲಿ ಪ್ರಕಟಣೆ ಮಾಡಿದರು.

೮. ೧೯೦೬ ರಲ್ಲಿ ಮಧ್ವವಿಲಾಸಬುಕ್‌ಡಿಪೋದ ಮಾಲೀಕರಾದ ಟಿ.ಆರ್. ಕೃಷ್ಣಾಚಾರ್ಯ ಮತ್ತು ಟಿ.ಆರ್. ವ್ಯಾಸಾಚಾರ್ಯ ಎಂಬ ಇಬ್ಬರು ವಿದ್ವಾಂಸರ ಆಶ್ರಯದಲ್ಲಿ ದಕ್ಷಿಣಭಾರತದ ಮೂಲಪ್ರತಿಗಳನ್ನೇ ಅವಲಂಬಿಸಿ ದಾಕ್ಷಿಣಾತ್ಯಪಾಠವು ಪ್ರಕಟಣೆಯಾಯಿತು.

೯. ೧೮೩೪ರಲ್ಲಿ ವಿಮರ್ಶಾತ್ಮಕವಾಗಿ ಮಹಾಭಾರತವನ್ನು ಅಭ್ಯಾಸ ಮಾಡುವುದರಲ್ಲಿ ವಿದ್ವಾಂಸರಿಗೆ ಹೆಚ್ಚು ಆಸಕ್ತಿಯು ಉಂಟಾಯಿತು. ಅದಕ್ಕಾಗಿ ಅನೇಕ ಪ್ರಾಚ್ಯವಿದ್ಯಾಸಂಸ್ಥೆಗಳು ಈ ನಿಟ್ಟಿನಲ್ಲಿ ಅನೇಕ ಪ್ರಕಟಣೆಯನ್ನು ಹೊರತರಲು ಪ್ರಯತ್ನಿಸಿದವು.

೧೦. ಪ್ರೊಫೆಸರ್ ಮಾರ್ಡೊನೆಲ್‌ರವರು ೪-೯-೧೯೧೯ರಲ್ಲಿ ಲಂಡನ್ ನಗರದಲ್ಲಿ ನಡೆದ ಏಂಟ್‌ಏಂಟಿ ಓರಿಯಂಟಲ್ ಕಾಂಗ್ರೆಸ್‌ನ ಮುಂದೆ ಮಹಾಭಾರತದ ಗ್ರಂಥಪ್ರಕಾಶವನ್ನು ಮಾಡಬೇಕೆಂದು ತಿಳಿಸಿದರು. ಆ ಸಂದರ್ಭದಲ್ಲಿ ವಿಶ್ವದ ಮೊದಲ ಮಹಾಯುದ್ಧವು (ಫಸ್ಟ್ ವರ್ಲ್ಡ್‌ವಾರ್) ನಡೆಯುತ್ತಿತ್ತು. ಮಹಾಭಾರತದ ಮೊದಲ ವಿಮರ್ಶಾತ್ಮಕ ಪ್ರತಿಯನ್ನು ಹೊರತರುವುದರಲ್ಲಿ ದೊಡ್ಡ ವಿಘ್ನವೇ ಬಂದಿತು. ಇದಕ್ಕಾಗಿ ಜರ್ಮನ್ ದೇಶದ ಅನೇಕ ಶ್ರೀಮಂತರು ೬೦೦೦ ಪೌಂಡುಗಳನ್ನು ಮಹಾಭಾರತ ಪ್ರಕಾಶನಕ್ಕಾಗಿ ನೀಡಿದ್ದರು.

೧೧. ಕೆಲವು ಕಾಲದ ಅನಂತರ ಜರ್ಮನ್‌ದೇಶದಲ್ಲಿ ಮಹಾಭಾರತದ ಪ್ರಕಾಶನವನ್ನು ಮುಂದುವರೆಸಲು ಕಷ್ಟವಾಯಿತಾದ್ದರಿಂದ ಮುಂದಿನ ಪ್ರಯತ್ನ ಭಾರತದಲ್ಲಿ ಹೆಚ್ಚಿನ ಅನುಕೂಲತೆ ಮತ್ತು ದಕ್ಷತೆಯಿಂದ ಸಂಶೋಧನಾ- ಕಾರ್ಯವನ್ನು ನಡೆಸಬಹುದು. ಭಾರತದಲ್ಲಿ ಪುರಾತನ ಮತ್ತು ನವೀನ ಸಮಕಾಲೀನ ವಿದ್ವಾಂಸರ ಪ್ರಯೋಜನವನ್ನು ಪಡೆದರೆ ಮಾತ್ರ ಈ ಕಾರ್ಯವು ಅಚ್ಚುಕಟ್ಟಾಗಿ ನಡೆಯಲು ಸಾಧ್ಯವೆಂದು ಸಭೆಯಲ್ಲಿ ವಿಚಾರ ಮಾಡಿದರು. ಆ ಸಮಯದಲ್ಲಿ ಡಾ॥ ಜೆ.ಡಬ್ಲ್ಯು. ಥಾಮಸ್ ಅವರು ಭಂಡಾರ್‌ಕರ್‌ರವರು ಮಹಾಭಾರತ ಪ್ರಕಟಣೆಯಲ್ಲಿ ತೊಡಗಿರುವುದನ್ನು ಅದಕ್ಕಾಗಿ ಸ್ವಲ್ಪ ಹಣವನ್ನು ಕೊಡುವುದಾಗಿಯೂ ತಿಳಿಸಿದರು. ಆ ಸಮಯದಿಂದ ಭಂಡಾರಕರ್ ಓರಿಯಂಟಲ್ ಇನ್‌ಸ್ಟಿಟ್ಯೂಟ್ ಪೂನಾ ಇವರು ವಿಮರ್ಶಾತ್ಮಕವಾದ ಮಹಾಭಾರತ ಪ್ರಕಟಣೆಯನ್ನು ಹೊರತರುವುದರಲ್ಲಿ ಬಹಳ ಆಸಕ್ತರಾಗಿದ್ದರು. ಸೂಕ್ತಂಕರ್ ಅವರು ಸಂಪಾದಕರಾಗಿ ಈ ಕಾರ್ಯವನ್ನು ನಡೆಸಲು ಮುಂದಾಗಿದ್ದರು. ಇವರ ಸಹಾಯಕ್ಕಾಗಿ ಸಮರ್ಥರಾದ ಪ್ರಾಚ್ಯಸಂಶೋಧಕ

ವಿದ್ವಾಂಸರ ಭಾರತೀಯ ಮತ್ತು ಇತರ ದೇಶದವರ ನೆರವನ್ನು ಪಡೆಯುವುದರಲ್ಲಿ ಆಸಕ್ತರಾಗಿದ್ದರು.

೧೨. ಸೂಕ್ತಂಕರ್ ಇವರು ಸುಮಾರು ೨೦೦ ವಿದ್ವಾಂಸರ ಸಹಕಾರದಿಂದ ಮೊದಲ ಸಂಚಿಕೆಯನ್ನು ೧೯೨೭ ರಲ್ಲಿ ಹೊರತಂದರು. ಇದರ ಹಿಂದೆ ಸುಮಾರು ೩೦ ವರ್ಷಗಳ ಸತತ ಪರಿಶ್ರಮವನ್ನೇ ಮಹಾಭಾರತ ಪ್ರಕಾಶನಕ್ಕಾಗಿ ಸೂಕ್ತಂಕರ್ ಅವರು ಹೊಂದಿದ್ದರು. ೨ನೆಯ ಮತ್ತು ೩ನೆಯ ಸಂಚಿಕೆಗಳನ್ನು ೧೯೨೮ ಹಾಗೂ ೧೯೨೯ರಲ್ಲಿ ಹೊರತಂದರು. ೪ನೆಯ ಸಂಚಿಕೆಯನ್ನು ೧೯೩೦ರಲ್ಲಿ, ೫ನೆಯ ಸಂಚಿಕೆಯನ್ನು ೧೯೩೫ರಲ್ಲಿ ಹೊರತಂದದ್ದೇ ಬಹಳ ದೊಡ್ಡ ಶ್ಲಾಘನೀಯಕಾರ್ಯವಾಗಿತ್ತು.

೧೩. ಅನಂತರ ಗೋರಕ್‌ಪುರದ ಗೀತಾಪ್ರೆಸ್ ಕೂಡ ಬಹುದೊಡ್ಡ ಕಾರ್ಯವನ್ನು ಮಾಡಿ, ಅತ್ಯಂತ ಸುಲಭದರದಲ್ಲಿ ಮಹಾಭಾರತ ಕೃತಿಯನ್ನು ಎಲ್ಲ ಆಸಕ್ತರಿಗೂ ತಲುಪಿಸುತ್ತಿದೆ. ಹಿಂದಿಭಾಷೆಯ ಅನುವಾದದೊಂದಿಗೆ ಪ್ರತಿ ಮೂಲಶ್ಲೋಕಗಳ ಅನುವಾದವೂ ಮುದ್ರಿತವಾಗಿದೆ.

೧೪. ಆಳಸಿಂಗಾಚಾರ್ಯರು ಪ್ರಪ್ರಥಮಬಾರಿಗೆ ಮಹಾಭಾರತದ ಪ್ರತಿಶ್ಲೋಕಗಳ ಕನ್ನಡ ಅನುವಾದವನ್ನು ಮಾಡಿದರು. ಆದರೆ ಶ್ಲೋಕಗಳ ಜೊತೆಗೆ ಅನುವಾದವನ್ನು ನೀಡದೇ ಕೇವಲ ಕಥಾತ್ಮಕವಾಗಿ ಅನುವಾದವನ್ನು ಮಾಡಿದ್ದಾರೆ. ಅನಂತರ ಭಾರತದರ್ಶನ ಎಂಬ ಸಂಸ್ಥೆಯು ಬೆಂಗಳೂರು ನಗರದಲ್ಲಿ ರಾಮಾನುಜಾಚಾರ್ಯರ ಮತಾನುಯಾಯಿಗಳ ವಿದ್ವಾಂಸರ ಸಹಕಾರದಿಂದ ಮಹಾಭಾರತ ಪ್ರತಿಶ್ಲೋಕಗಳ ಕನ್ನಡ ಅನುವಾದವನ್ನು ೩೨ ಸಂಪುಟಗಳಲ್ಲಿ ಹೊರತಂದಿದೆ. ಅತ್ಯಂತ ಕಡಿಮೆದರದಲ್ಲಿ ಎಲ್ಲರಿಗೂ ತಲುಪಿಸುತ್ತದೆ.

೧೫. ತೆಲುಗು, ತಮಿಳು ಭಾಷೆಗಳಲ್ಲಿಯೂ ಮಹಾಭಾರತದ ಅನುವಾದ ಪುಸ್ತಕಗಳ ಪ್ರಕಟಣೆ.

೧೬. ಪುಣೆಯ ಚಿತ್ರಶಾಲಾ ಪ್ರೆಸ್, ಮಹಾಭಾರತದ ವಿಶ್ವಾಸಾರ್ಹ, ಸಂಪೂರ್ಣ ಪಠ್ಯವನ್ನು ಹೊಂದಿದೆ.

೧೮೫೫-೬೦ರಲ್ಲಿ ನೀಲಕಂಠೀಯ ವ್ಯಾಖ್ಯಾನ ಒಳಗೊಂಡ ಅವೃತ್ತಿ. ತೆಲುಗುಲಿಪಿಯಲ್ಲಿ ಮದ್ರಾಸ್‌ನಲ್ಲಿ ಪ್ರಕಟಣೆ. ಇದೇ ೧೮೬೨ರಲ್ಲಿ ದೇವನಾಗರಿಯಲ್ಲಿ ಪ್ರಕಟಣೆ.

೧೮೮೨ರಲ್ಲಿ ಪ್ರತಾಪ್ ಚಂದರ್ ರೈ ದೇವನಾಗರಿ ಲಿಪಿಯಲ್ಲಿ ಮಹಾಭಾರತ ಪ್ರಕಟಣೆ.

೧೭. ಇಂಗ್ಲೀಷ್‌ಭಾಷೆಯಲ್ಲಿ ಆರು ವಿಸ್ತೃತ ಆವೃತಿಗಳು ಪ್ರಕಟಗೊಂಡಿವೆ

೧೮೮೩-೧೮೯೬ ರಲ್ಲಿ Kisari Mohan Ganguli ರವರಿಂದ ಪ್ರಕಟಣೆ.

೧೮೯೫-೧೯೦೫ ರಲ್ಲಿ ಮನ್ಮಥನಾಥ ದತ್ ರವರಿಂದ ಪ್ರಕಟಣೆ.

೧೯೭೩ J.A.B. Van Buitenen ಚಿಕಾಗೋ ವಿಶ್ವವಿದ್ಯಾಲಯದ ಸಹಯೋಗದಲ್ಲಿ (೩೦ ವರ್ಷಗಳಾದರೂ ಪೂರ್ಣಗೊಂಡಿಲ್ಲ.)

P. Lal and Writers Workshop

Clay Sanskrit Edition (೨೦೦೫ರ ನಂತರ)

೧೯೮೯-೨೦೧೦ರಲ್ಲಿ Vivek Devroy

೧೮. ೧೯೮೦ರಲ್ಲಿ ಬಿ.ಆರ್. ಛೋಪ್ರಾ ಅವರ ಮಹಾಭಾರತ ಜನರ ಮನೆಮಾತಾದ ಡಿಡಿ ೧ರಲ್ಲಿ ಹಿಂದಿ ಭಾಷೆಯಲ್ಲಿ ಪ್ರಸಾರವಾಯಿತು.

೧೯. ಪ್ರಸ್ತುತ ಸಿನಿವಿಸ್ತಾ ಸಂಸ್ಥೆಯ ಕಿಶನ್‌ಸೇಥಿ, ಸಾವಂತ್‌ರ ನಿರ್ದೇಶನದಲ್ಲಿ ಉದಯ ಟಿ.ವಿ.ಯಲ್ಲಿ ಮಹಾಭಾರತ ಕನ್ನಡ ಧಾರಾವಾಹಿ ಹೆಚ್ಚು ಜನಪ್ರಿಯವಾಗಿದೆ.

ಹೀಗೆ ಮಹಾಭಾರತದ ಮೇಲೆ ಅನೇಕ ಕೃತಿಗಳ ಸಂಶೋಧನೆ ಹಾಗೂ ಪ್ರಸಾರದ ಕಾರ್ಯಗಳು ನಮ್ಮ ಭಾರತ ದೇಶದಲ್ಲಿ ಆದ್ಯಂತವಾಗಿ ನಡೆಯುತ್ತಲೇ ಬರುತ್ತಿದೆ.

ದಾಕ್ಷಿಣಾತ್ಯಪಾಠವೇ ಏಕೆ ಶ್ರೇಷ್ಠ?

ಮುದ್ರಿತವಾದ ಪುಸ್ತಕಗಳಲ್ಲಿ ದಾಕ್ಷಿಣಾತ್ಯಪಾಠ ಮತ್ತು ಔತ್ತರೇಯಪಾಠ ಎಂಬ ಪ್ರಧಾನವಾದ ಎರಡು ಭಾಗಗಳಿವೆ. ಔತ್ತರೇಯಪಾಠವನ್ನು ಸಂಪೂರ್ಣವಾಗಿ ಪರಿಶುದ್ಧವೆಂದು ಸ್ವೀಕರಿಸಲು ಬರುವುದಿಲ್ಲ. ಪಾಶ್ಚಾತ್ಯರ ಆಕ್ರಮಣದಿಂದ ಅಲ್ಲಿರುವ ಶುದ್ಧಪ್ರತಿಗಳೆಲ್ಲವೂ ಯುದ್ಧದ ಸಂದರ್ಭದಲ್ಲಿಯೇ ಹಾಳಾಗಿದ್ದವು. ಆದರೆ ದಕ್ಷಿಣ ದೇಶದ ಕಡೆಗೆ ಹೆಚ್ಚಿನ ವರಸೆಗಳು ಬಾರದ ಕಾರಣ ಶುದ್ಧವಾದ ಪ್ರತಿಗಳು ಉಳಿದಿವೆ. ಮತ್ತು ಲಕ್ಷ ಶ್ಲೋಕಗಳಿಂದ ಕೂಡಿರುವ ಕಾರಣದಿಂದಲೂ, ೮೦೦ ವರ್ಷಗಳ ಹಿಂದೆ ಮಧ್ವಾಚಾರ್ಯರು ಹೇಳಿರುವಂತೆ 'ನಾರಾಯಣಂ ಸುರಗುರುಂ' ಎಂಬ ಮಂಗಳ-ಶ್ಲೋಕದಿಂದಲೇ ತಾಳೆಗರಿಗಳ ಪಾಠವು ಪ್ರಾರಂಭವಾಗು- ವುದರಿಂದಲೂ ಕೂಡ ದಕ್ಷಿಣದೇಶದ ಪಾಠವು ಪರಿಶುದ್ಧವೆಂದು ತಿಳಿಯಬಹುದು.

ಇಷ್ಟೆಲ್ಲಾ ಮುದ್ರಿತವಾದ ಪುಸ್ತಕಗಳ ಮಧ್ಯದಲ್ಲಿ ಮದ್ರಾಸಿನ ವಾವಿಳ್ಳ ರಾಮಸ್ವಾಮಿಯವರ ಪಾಠವು ಹೆಚ್ಚಿನ ಪರಿಶುದ್ಧತೆಯನ್ನು ಪಡೆದಿದೆಯೆಂದು ಹೇಳಬಹುದು. ಪೂನಾ ಭಂಡಾರ್ಕರ್ ಸಂಸ್ಥೆಯು ನೂರಾರು ವಿದ್ವಾಂಸರುಗಳ ಸಹಕಾರದಲ್ಲಿ ೫೦ ವರ್ಷಕ್ಕಿಂತಲೂ ಹೆಚ್ಚಿನ ಸಂಶೋಧನೆಯ ಕಾರ್ಯವನ್ನು ಮಾಡಿದ್ದರೂ ಕೂಡ ಅವರ ಅಭಿಪ್ರಾಯ ಮಹಾಭಾರತದಲ್ಲಿರುವುದು ೨೪೦೦೦ ಶ್ಲೋಕಗಳು. ಉಳಿದ ಶ್ಲೋಕಗಳು ಅನಂತರ ಬೆಳೆದುಬಂದವು. ಈ ದೃಷ್ಟಿಕೋನವನ್ನು ಪಡೆದಿದ್ದಾರೆ. ಮತ್ತು ಶುದ್ಧವಾದ ಪಾಠಗಳನ್ನು ಕ್ರಿಟಿಕಲ್ ಎಡಿಷನ್‌ನಲ್ಲಿ ಪಾಠಾಂತರವನ್ನಾಗಿ ಕೆಳಗಡೆ ನೀಡಿ ಔತ್ತರೇಯಪಾಠವನ್ನೇ ಮುಖ್ಯವನ್ನಾಗಿ ಪರಿಗಣಿಸಿ ಪುಸ್ತಕದ ಮೇಲಗಡೆ ಮುದ್ರಿಸಿರುತ್ತಾರೆ. ಆದ್ದರಿಂದ ಪೂನಾ ಭಂಡಾರ್ಕರ್ ಸಂಸ್ಥೆಯು ಮಾಡಿರುವ ಕಾರ್ಯ ಅತ್ಯಂತ ಪ್ರಶಂಸನೀಯವಾಗಿರುವುದಾದರೂ ಕೂಡ ಯಥಾವತ್ತಾಗಿ ಸ್ವೀಕರಿಸಲು ಕಷ್ಟವಾಗುತ್ತದೆ.

ಟಿ.ಆರ್. ಕೃಷ್ಣಾಚಾರ್ಯರು ಸ್ವತಃ ಮಧ್ವಾಚಾರ್ಯರ ಶಿಷ್ಯಂದಿರ ಪರಂಪರೆಯಲ್ಲಿ ಬಂದಿರುವವರಾಗಿದ್ದರೂ ಕೂಡ ಹೆಚ್ಚಿನ ವಿಮರ್ಶೆಯನ್ನು ಮಾಡಿದಂತೆ ಕಾಣಿಸುವುದಿಲ್ಲ. ಏಕೆಂದರೆ ಅವರ ಪುಸ್ತಕಗಳಲ್ಲಿ ಹತ್ತಾರು ಸಾವಿರ ಶ್ಲೋಕಗಳು ಹೆಚ್ಚು ಮುದ್ರಿತವಾಗಿವೆ. ವಾವಿಳ್ಳ ಅವರ ಪುಸ್ತಕಗಳಲ್ಲಿ ಈ ಯಾವ ಸಮಸ್ಯೆಗಳೂ ಕೂಡ ಇರುವುದಿಲ್ಲ. ಈ ಪಾಠವು ನಮಗೆ ಅತ್ಯಂತ ಹತ್ತಿರವಾಗುತ್ತದೆಂಬ ದೃಷ್ಟಿಯಿಂದ ನಾವು ಮಾಡುತ್ತಿರುವ ಸಂಶೋಧನೆಗೆ ವಾವಿಳ್ಳ ರಾಮಸ್ವಾಮಿಶಾಸ್ತ್ರಿಯವರ ಪ್ರತಿಗಳ ಮೇಲೆ ಸಂಶೋಧನೆಯನ್ನು ನಡೆಸುತ್ತಿದ್ದೇವೆ.

ನಮಗೆ ದೊರೆತಿರುವ ತಾಳೆಗರಿಗಳು ಅತ್ಯಂತ ಪ್ರಾಚೀನವಾಗಿದ್ದರೂ ವಾವಿಳ್ಳ ರಾಮಸ್ವಾಮಿಶಾಸ್ತ್ರಿಯವರ ಪುಸ್ತಕದ ಪಾಠಕ್ಕೆ ಹತ್ತಿರವಾಗಿವೆ. ಆದರೂ ಕೂಡ ರಾಮಸ್ವಾಮಿಯವರು ಮುದ್ರಣ ಮಾಡಿರುವ ಪ್ರತಿಶ್ಲೋಕಗಳಲ್ಲಿಯೂ ಮೂರು ಅಥವಾ ನಾಲ್ಕು ಪದಗಳ ವ್ಯತ್ಯಾಸ ಅಥವಾ ಜೋಡಣೆಗಳು ಇರುತ್ತವೆ.

ಅನೇಕ ವರ್ಷಗಳ ಸಂಶೋಧನೆಯಲ್ಲಿ ಪರಿಣತರಾದ ವಿದ್ವಾನ್ ಬನ್ನಂಜೆಗೋವಿಂದಾಚಾರ್ಯರು ಪೂನಾ ಭಂಡಾರ್ಕರ್ ಸಂಸ್ಥೆಯ ಕಾರ್ಯವನ್ನು ಅತ್ಯಂತ ಪ್ರಶಂಸಿಸುತ್ತಾರೆ. ಆದರೂ ಕೂಡ ವಾವಿಳ್ಳ ರಾಮಸ್ವಾಮಿಯವರ ಪುಸ್ತಕವು ಹೆಚ್ಚು ಗ್ರಾಹ್ಯವೆಂದೂ ಕೂಡ ಉಲ್ಲೇಖಿಸುತ್ತಾರೆ. ಅವರ ಮಾರ್ಗದರ್ಶನದಂತೆ ವಾವಿಳ್ಳ ರಾಮಸ್ವಾಮಿಶಾಸ್ತ್ರಿಯವರ ಪುಸ್ತಕವನ್ನು ಅವಲಂಬಿಸಿ, ತಾಳೆಗರಿಗಳಿಂದ ಪಾಠಾಂತರವನ್ನು ಗಮನಿಸಿ ಪುಸ್ತಕವನ್ನು ಮುದ್ರಣ ಮಾಡುತ್ತಿದ್ದೇವೆ.

ಒಟ್ಟಾರೆ ಹೇಳಬೇಕೆಂದರೆ ವೇದವ್ಯಾಸದೇವರು ಬರೆದಿರುವ ರೀತಿಯಲ್ಲಿಯೇ ಯಥಾವತ್ತಾಗಿ ಮಹಾಭಾರತದ ಶುದ್ಧಪಾಠವನ್ನು ನಾವು ಜಗತ್ತಿಗೆ ನೀಡುತ್ತಿದ್ದೇವೆ ಎಂದು ಹೇಳಲಾರೆವು ಆದರೆ ಇದುವರೆಗೂ ಮುದ್ರಿತವಾದ ಅನೇಕ ಪುಸ್ತಕಗಳ ನಡುವೆ ನಮ್ಮ ಪುಸ್ತಕವು ಹೆಚ್ಚು ಸಂಶೋಧಿತವಾಗಿದೆಯೆಂದು ಎದೆಗಾರಿಕೆಯಲ್ಲಿ ಹೇಳುತ್ತೇವೆ. ಏಕೆಂದರೆ ಮುದ್ರಿತವಾದ ಎಲ್ಲ ಪುಸ್ತಕಗಳಿಗಿಂತಲೂ ಅತ್ಯಂತ ಸ್ವಾರಸ್ಯಪೂರ್ಣವಾದ ಪಾಠಗಳು ನಮ್ಮ ಪುಸ್ತಕಗಳಲ್ಲಿ ಕಾಣಿಸುತ್ತವೆ. ಮತ್ತು ಶ್ರೀವಾದಿರಾಜ ತೀರ್ಥರ ಲಕ್ಷಾಲಂಕಾರ ಎಂಬ ವ್ಯಾಖ್ಯಾನದೊಂದಿಗೆ ಇದುವರೆಗೂ ಯಾರೂ ಕೂಡ ಮೂಲ ಮಹಾಭಾರತವನ್ನು ಸರಿಪಡಿಸಿಲ್ಲ. ಮತ್ತು ತಾತ್ಪರ್ಯನಿರ್ಣಯ ಎಂಬ ಶ್ರೀಮದಾಚಾರ್ಯರ ಗ್ರಂಥದ ಮಾರ್ಗದರ್ಶನವನ್ನು ಯಾರೂ ಕೂಡ ಸ್ವೀಕರಿಸಿಲ್ಲ. ಮೊಟ್ಟಮೊದಲಿಗೆ ಶ್ರೀಪಾದರು ಈ ಮಹಾಸಾಹಸವನ್ನು ಮಾಡಿ ಜಯಶಾಲಿಗಳಾಗುತ್ತಿದ್ದಾರೆ.

ಸಂಶೋಧಿತ ಹಸ್ತಪ್ರತಿಗಳ ವಿವರಣೆ

ಭಂಡಾರ್ಕರ್ ಓರಿಯೆಂಟಲ್ ರಿಸರ್ಚ್ ಇನ್‌ಸ್ಟಿಟ್ಯೂಟ್ ಇವರು ಕಾಶ್ಮೀರದೇಶದ ಶಾರದಾಪ್ರತಿಯನ್ನು ಆವಲಂಬಿಸಿ ಸಂಶೋಧನೆ ಮಾಡಿದ್ದಾರೆ. ಕಲ್ಕತ್ತಾ ನಗರದಲ್ಲಿ ಪ್ರಕಟಣೆಯಾದ ಪುಸ್ತಕದಲ್ಲಿ ಆದಿಪರ್ವವು ೮೪೦೦ ಶ್ಲೋಕದಿಂದ ಕೂಡಿದೆ. ಮುಂಬೈ ಪ್ರಕಟಣೆಯಲ್ಲಿ ೮೬೨೦ ಶ್ಲೋಕಗಳಿವೆ. ಮದ್ರಾಸ್ ವಾವಿಳ್ಳ ಪ್ರಕಟಣೆಯಲ್ಲಿ ೯೯೮೪ ಶ್ಲೋಕಗಳಿವೆ. ಆದರೆ ಕಾಶ್ಮೀರದ ಶಾರದಾ ಪ್ರತಿಯಲ್ಲಿ ೭೯೮೪ ಶ್ಲೋಕಗಳು ಮಾತ್ರ ಅತ್ಯಂತ ಕಡಿಮೆಯಾಗಿ ಇರುತ್ತವೆ. ಆದರೂ ಬೋರಿಯವರು ಶಾರದಾ ಪ್ರಕಟಣೆಯೇ ಸರಿ ಎಂದು ನಿರ್ಣಯಿಸುತ್ತಾರೆ. ಮತ್ತು ಆದಿಪರ್ವದ ದೇವನಾಗರಿ ಲಿಪಿಯ ಒಂದು ಪೂರ್ಣಪ್ರತಿಯನ್ನೂ ಕೂಡ ಇವರು ಆಧಾರವನ್ನಾಗಿ ಬಳಸಿದ್ದಾರೆ.

ಕಾಶ್ಮೀರದ ಶಾರದಾಪ್ರತಿಯಲ್ಲಿ ಕೆಲವು ಪ್ರಸಿದ್ಧವಾದ ಮಹಾಭಾರತದ ಭಾಗಗಳೇ ಕಾಣಿಸುವುದಿಲ್ಲ.

೧. ದುಶ್ಶಲೆಯ ಜನನ, ೨. ಅಶ್ವತ್ಥಾಮನಿಗೆ ಹಿಟ್ಟಿನ ನೀರನ್ನು ಕುಡಿಸುವ ಪ್ರಕರಣ, ೩. ಗಣೇಶನು ಮಹಾಭಾರತವನ್ನು ಬರೆದನು ಎಂಬ ಪ್ರಕರಣ ಮೊದಲಾದವು.

ವಾವಿಳ್ಳ ರಾಮಸ್ವಾಮಿಯವರು ತಂಜಾವೂರು ಜಿಲ್ಲೆಯ ಪ್ರತಿಯನ್ನು ಆಧಾರವನ್ನಾಗಿಟ್ಟುಕೊಂಡಿದ್ದಾರೆ. ಟಿ.ಆರ್. ಕೃಷ್ಣಾಚಾರ್ಯರು ದಕ್ಷಿಣದೇಶದ ಹಸ್ತಪ್ರತಿಯನ್ನಷ್ಟೇ ಉಲ್ಲೇಖಿಸುತ್ತಾರೆ.

ವ್ಯಾಖ್ಯಾನಗಳು

ಬೆಂಗಾಲಿ ಮೂಲದ ಅರ್ಜುನ ಮಿಶ್ರನ ವ್ಯಾಖ್ಯಾನವಿದೆ. ರತ್ನಗರ್ಭವ್ಯಾಖ್ಯಾನವು ದಕ್ಷಿಣಭಾರತದ ಪ್ರತಿಯನ್ನು ಅನುಸರಿಸಿದೆ. ನೀಲಕಂಠೀಯ ವ್ಯಾಖ್ಯಾನವು ಪಶ್ಚಿಮಭಾರತದ ಪ್ರತಿಗಳನ್ನು ಅವಲಂಬಿಸಿದೆ. ದೇವಬೋಧವು ಔತ್ತರೇಯಪಾಠವನ್ನು, ಕಾಶ್ಮೀರ ಮೂಲದ ಹಸ್ತಪ್ರತಿಯನ್ನು ಅನುಸರಿಸಿದೆ. ಅರ್ಜುನಮಿಶ್ರನು ಹರಿವಂಶಕ್ಕೂ ಕೂಡ ವ್ಯಾಖ್ಯಾನ ಮಾಡಿದ್ದಾನೆ. ಅಷ್ಟೇ ಅಲ್ಲದೇ ಪುರುಷಸೂಕ್ತಕ್ಕೂ ಕೂಡ ವ್ಯಾಖ್ಯಾನಿಸಿದ್ದಾನೆ. ಈತನು ಶಂಕರಾಚಾರ್ಯರ ಅನಂತರ ಬಂದವನೆಂದು ಪ್ರತೀತಿಯಿದೆ. ನೀಲಕಂಠನು ಮಹಾರಾಷ್ಟ್ರದ ಬ್ರಾಹ್ಮಣಪಂಡಿತನು. ನೀಲಕಂಠನ ತಂದೆ ಗೋವಿಂದಸೂರಿ, ತಾಯಿ ಪುಲ್ಲಾಂಬಿಕಾ, ಊರು ಕೂರ್ಪಕ ಗ್ರಾಮ, ಗೋದಾವರಿ ತೀರದಲ್ಲಿ ಇವನು ಜನಿಸಿದ್ದಾನೆ. ನೀಲಕಂಠನು ಕಾಶಿಯಲ್ಲಿಯೇ ಬರೆದಿದ್ದಾನೆಂಬ ಪ್ರತೀತಿಯಿದೆ. ಇವನು 'ಮಂತ್ರರಹಸ್ಯಪ್ರಕಾಶಕ' ಎಂಬ ಗ್ರಂಥವನ್ನೂ ಕೂಡ ಬರೆದಿದ್ದಾನೆ. ಅವನು ಮಹಾಭಾರತವನ್ನು ವ್ಯಾಖ್ಯಾನ ಮಾಡುವ ಮೊದಲು ಹಲವಾರು ಪ್ರತಿಗಳನ್ನು ಪರಿಶೀಲಿಸಿದ್ದೇನೆಂದು ಹೇಳಿಕೊಳ್ಳುತ್ತಾನೆ.

ಬಹೂನ್ ಸಮಾಹೃತ್ಯ ವಿಭಿನ್ನದೇಶಾನ್ ಕೋಶಾನ್ ವಿನಿಶ್ಚಿತ್ಯ ಚ ಪಾಠಮಗ್ರ್ಯಂ ।
ಪ್ರಾಚಾಂ ಗುರೂಣಾಮನಸೃತ್ಯ ವಾಚಮಾರಭ್ಯತೇ ಭಾರತಭಾವದೀಪಃ ॥ ಎಂದು. ಭಂಡಾರ್ಕರ್ ಅವರು ದೇವಬೋಧನಿಗೆ ಹೆಚ್ಚು ಬೆಲೆ ಕೊಟ್ಟು ನೀಲಕಂಠನ ಪಾಠವನ್ನು ಉದಾಸೀನ ಮಾಡಿದ್ದಾರೆ. ಭಂಡಾರ್ಕರ್ ಅವರು ಕುಂಭಕೋಣದ ಪ್ರತಿಯಾಗಲೀ, ವಾವಿಳ್ಳ ರಾಮಸ್ವಾಮಿಯವರ ಪ್ರತಿಯಾಗಲೀ ಹೆಚ್ಚು ಸ್ವರಸವಲ್ಲವೆಂದು ಅಭಿಪ್ರಾಯಪಡುತ್ತಾರೆ. ದೇವಬೋಧನು ವಿಮಲಬೋಧನಿಗಿಂತ ಪ್ರಾಚೀನನು. ಅರ್ಜುನಮಿಶ್ರ, ನೀಲಕಂಠ, ಸರ್ವಜ್ಞನಾರಾಯಣ ಮತ್ತು ಶ್ರೀವಾದಿರಾಜತೀರ್ಥರಿಗಿಂತಲೂ ಪ್ರಾಚೀನನು. ಈ ದೇವಬೋಧನ ಪಾಠವೇ ಹೆಚ್ಚು ಸ್ವರಸವೆಂಬುದು ಭಂಡಾರ್ಕರ್ ಅವರ ಅಭಿಪ್ರಾಯ.

ಔತ್ತರೇಯಪಾಠದ ಸಮಸ್ಯೆಗಳು

ದಕ್ಷಿಣಭಾರತದಲ್ಲಿ ವಿಶೇಷತಃ ಕರ್ನಾಟಕದಲ್ಲಿ ಕೇವಲ ಮಹಾಭಾರತದ ಹಳೆಯತಾಡವಾಲೆಗಳಷ್ಟೇ ಇಲ್ಲ. ಶುದ್ಧಪಾಠವನ್ನು, ಪ್ರಕ್ಷೇಪಾಪಕ್ಷೇಪಗಳನ್ನು ತೀರ್ಮಾನ ಮಾಡಲು ಬರುವ ಯುಕ್ತಿಗಳನ್ನು ಹೇಳುವ ಗ್ರಂಥಗಳೂ ಇವೆ. ಆ ಎಲ್ಲ ಮಾನದಂಡಗಳನ್ನು ಬಳಸಿಕೊಂಡು ಮಹಾಭಾರತದ ಶುದ್ಧಪಾಠವನ್ನು ಪಡೆಯುವ ದೆಸೆಯಲ್ಲಿ ಸಾಗಬಹುದು.

ಉತ್ತರದ 'ಗೀತಾಪ್ರೆಸ್'ನವರು ಮುದ್ರಿಸಿದ ಭಾರತಪ್ರತಿಯು ಪಾರಾಯಣಮಾತ್ರ ಪ್ರಿಯರಿಗೆ ಸೀಮಿತವಾಗಿದೆ. ಪುಣೆಯ 'ಭಂಡಾರ್ಕರ್ ಓರಿಯೆಂಟಲ್ ರಿಸರ್ಚ್ ಇನ್ಸ್ಟ್ಯೂಟ್' ಅವರು ಸಂಶೋಧಿಸಿದ ಮಹಾಭಾರತಪಾಠವು, ಸಾಕಷ್ಟು ವಿರೋಧಗಳಿಂದ ಕೂಡಿದ್ದು, ಶುದ್ಧಪಾಠದಿಂದ ಕೂಡಿಲ್ಲ. ಒಂದು ಪಕ್ಷದಲ್ಲಿ ಪ್ರಕ್ಷಿಪ್ತವೆಂದು ತೀರ್ಮಾನಿಸಿ ಬಿಟ್ಟ ಸಂಗತಿಗಳು ಮುಂದಿನ ಪರ್ವದಲ್ಲಿ ಸಂಕ್ಷಿಪ್ತವಾಗಿ ಕಾಣಿಸಿಕೊಳ್ಳುತ್ತದೆ. ಅದೇ ಪರ್ವದಲ್ಲಿಯೂ ಕಾಣಿಸಿಕೊಳ್ಳುವುದುಂಟು. ಭಾರತದ ಪ್ರಾಚೀನ ಟೀಕಾಕಾರರನ್ನೇ ಬದಿಗೊತ್ತಿ ನಡೆಸಿದ ಸಂಶೋಧನೆಯ ವೈಫಲ್ಯವನ್ನು ಸ್ವಯಂ ಡಾ॥ ವಿ. ಎಸ್. ಸೂಕ್ತಂಕರ್ (ಕ್ರಿಟಿಕಲ್ ಎಡಿಷ್ನ್‌ನ ಸಂಪಾದಕರು) ಅವರೇ ಒಪ್ಪಿಕೊಂಡಿದ್ದಾರೆ. "on the meaning of Mahabharatha" ಎಂಬ ವಿಷಯದ ಮೇಲೆ ಐದು ಉಪನ್ಯಾಸಗಳನ್ನು ಕೊಡಲಿದ್ದು, ನಾಲ್ಕು ಉಪನ್ಯಾಸಗಳನ್ನು ಕೊಟ್ಟ ಮೇಲೆ ತೀರಿಕೊಂಡರು. ಐದನೇ ಉಪನ್ಯಾಸವನ್ನು ಕೊಡಲಿಲ್ಲ, ಆದರೆ ಐದೂ ಉಪನ್ಯಾಸಗಳೂ ಮುದ್ರಿತವಾಗಿವೆ. ಅದರಲ್ಲಿ ತಮ್ಮ ಸಂಪಾದನೆಯ ವಿಮರ್ಶಾತ್ಮಕ ಆವೃತ್ತಿಯನ್ನು ಅವರು ವಿಫಲ ಎಂದು ಕರೆದುಕೊಂಡಿದ್ದಾರೆ.

"Higer criticism would have us search for the 'epicnucleus', which is apperently something immensely worth possessing. With that end in view, it proceeds by the method of athetysing certain lines, passages, chapters, or even whole books.

These are spurious, and all the rest is the work of one poet... very little reflection is needed to convince one that a mere process of stripping off what we regard as spurious will not automatically leave us with the pure and unalloyed 'original'. (not one source, but many). - V.S. Sukthankar, in his The meaning of Mahabharatha.

ಪ್ರಕ್ಷೇಪಾಕ್ಷೇಪಗಳನ್ನು ಬಿಟ್ಟರೂ ಪೂರ್ವೋತ್ತರ ವಿರೋಧಗಳನ್ನು ಗಣನೆಗೆ ತೆಗೆದುಕೊಂಡರೂ ಅವುಗಳು ಹೇರಳವಾಗಿ ಪುಣೆಯ ಪಾಠಗಳಲ್ಲಿ ಇವೆ. ಉದಾಹರಣೆಗೆ ನೀಲ ಎಂಬುವವನು ಎರಡುಸರ್ತಿ ಸಾಯುತ್ತಾನೆ. ಯಾವ ಪಕ್ಷದವನೆನ್ನಲೂ ಎರಡುಪರ್ವಗಳ ಪುರಾವೆ ಇದೆ.

ತಥಾ ಮಾಹಿಷ್ಮತೀವಾಸೀ ನೀಲೋ ನೀಲಾಯುಧೈಃ ಸಹ ।
ಮಹೀಪಾಲೋ ಮಹಾವೀರ್ಯೈರ್ದಕ್ಷಿಣಾಪಥವಾಸಿಭಿಃ ॥

– ಉ.ಪ. ೧೯. ೨೪

ಎಂದು ಕೌರವಸೇನಾಪರಿಗಣನ ಸಮಯದಲ್ಲಿ ಬರುವ ಮಾತು ಇದು. ದ್ರೋಣಪರ್ವದಲ್ಲಿ ಅಶ್ವತ್ಥಾಮನಿಂದ ಹತರಾದವರ ಯಾದಿಯಲ್ಲಿ ನೀಲ ಇದ್ದಾನೆ.

ತತಃ ಪ್ರವಿವ್ಯಥೇ ಸೇನಾ ಪಾಂಡವೀ ಭೃಶಮಾಕುಲಾ ।
ಆಚಾರ್ಯಪುತ್ರೇಣ ಹತೇ ನೀಲೇ ಜ್ವಲಿತತೇಜಸಿ ॥ – ದ್ರೋ.ಪ.– 31–27

ಹಾಗೆಯೇ ಜಯತ್ಸೇನನೆಂಬ ಮಗಧದೇಶದವನ ವಿಚಾರದಲ್ಲಿಯೂ ಇದೇ ರೀತಿಯ ಗೊಂದಲ ಕಂಡುಬರುತ್ತದೆ. ಭೀಷ್ಮಪರ್ವದಲ್ಲಿ ಕೌರವರ ಪಾಳೆಯಲ್ಲಿದ್ದ ಜಯತ್ಸೇನ ದ್ರೋಣಪರ್ವದಲ್ಲಿ ಪಾಂಡವರ ಪಾಳೆಯದಲ್ಲಿರುತ್ತಾನೆ. ಮೊದಲಿದ್ದ ಭಾರತಪಾಠಗಳಲ್ಲಿ ತಪ್ಪುಗಳಿದ್ದವು. ಆದರೆ ವಿಮರ್ಶಾತ್ಮಕ ತಪ್ಪುಗಳಿಂದ ಮುದ್ರಿತವಾಗಿರಲಿಲ್ಲ. ಹೀಗೆಯೇ ಬೇಕಾದಷ್ಟು ತಪ್ಪುಗಳು ಕಂಡುಬರುತ್ತವೆ.

ಅದ್ದರಿಂದ ಶುದ್ಧಪಾಠದ ಬೆನ್ನು ಹತ್ತಲು ಬೇರೆಯದೇ ಆದ ಮಾರ್ಗಗಳಿವೆ. ವಾದಿರಾಜರ ಲಕ್ಷಾಲಂಕಾರ ಹೀಗೆ ಪ್ರಾಚೀನತಾಡವಾಲೆಗಳೆಂಬ ಮೊಸರೂ ಇದೆ. ಹಳೆಯ ವಿಮರ್ಶಾಗ್ರಂಥಗಳೆಂಬ ಕಡಗೋಲೂ ಇದೆ. ಇವೆರಡರ ಸೇರುವಿಕೆಯಿಂದ ಶುದ್ಧಪಾಠದ ಬೆಣ್ಣೆಯೂ ಹೊರಬರುತ್ತದೆ ಎಂಬ ಆಶಯವಿದೆ.

ಸಂಸ್ಕೃತಕ್ಕೆ ಹೊಸ ಕೊಡುಗೆಗಳು

ಸಂಸ್ಕೃತಕ್ಕೆ ಹೊಸರೀತಿಯ ಪದಗಳನ್ನು ಈ ತಾಡವಾಲೆಗಳ ಓದಿನಿಂದ ನಾವು ರೂಪಿಸಬಹುದು. ಆಧುನಿಕಕಾಲದಲ್ಲಿನ ಭಾವನೆಗಳಿಗೂ ಸೂಕ್ತವಾದ ಪದಗಳನ್ನು ಈ ಶೋಧನೆಗಳಿಂದ ಪಡೆಯಬಹುದು. ಭಾಷಾಶಾಸ್ತ್ರದ ವಿಚಿತ್ರ ಹಾಸುಬೀಸುಗಳನ್ನು ಗುರುತಿಸಬಹುದು. ತನ್ಮೂಲಕವಾಗಿ ಮಹಾಭಾರತ ಕಾಲದಿಂದಾದ ಭಾಷೆಯ ಬೇರೆ ಬೇರೆ ಮಜಲುಗಳ ಬೆಳವಣಿಗೆಯ ಬಗೆಗಿನ ಸಂಶೋಧನೆಗೆ ಅತ್ಯಂತ ವೇಗವಾದ ಹೆಜ್ಜೆಗಳನ್ನಿಡಬಹುದು. ಅರ್ಥಶಾಸ್ತ್ರ ಮೊದಲಾದವುಗಳನ್ನೂ ವಿಶೇಷವಾಗಿ ಶೋಧ ಮಾಡಬಹುದು.

ಮಹಾಭಾರತ ಹಿನ್ನೆಲೆಯಲ್ಲಿ ವೇದಗಳನ್ನು ನೋಡಬಹುದು. ಅರ್ಥನಿರ್ಣಯ ಮಾಡಬಹುದು. ಶುದ್ಧವಾದ ಪಾಠವು ಸಿಕ್ಕಾಗ ವೈದಿಕ – ಮಹಾಭಾರತ ರೂಪವಾದ ಐತಿಹಾಸಿಕ ವ್ಯಕ್ತಿಗತ ಚಿಂತನೆಗಳು ಜಾಡು ಮೊದಲಾದವುಗಳ ಗುರುತು ಹತ್ತುತ್ತದೆ. ಆಗ

ಮಹಾಭಾರತದ ನೇತೃತ್ವದಲ್ಲಿ ಸಮಗ್ರ ಭಾರತದ ವೇದಾಂತ ಸಿದ್ಧಾಂತಗಳ ಸ್ವರೂಪವೇ ಬೇರೆ ಆಯಾಮದಲ್ಲಿ ತೋರುತ್ತದೆ. ಮಹಾಭಾರತದ ಶುದ್ಧಪಾಠದ ಸಂಪಾದನೆಯಿಂದ ಲಬ್ಧವಾದ ಕಥಾಭಾಗಗಳ ಆಧಾರದಲ್ಲಿ ಬೇರೆ ಬೇರೆ ಕಾವ್ಯಗಳ ಉಗಮ ಹಾಗೂ ಸಂಸ್ಕೃತ ಕಾವ್ಯಲಕ್ಷಣಗಳ ಪರಿಷ್ಕಾರವೂ ಆಗುತ್ತವೆ. ಶಾಂತರಸಪೋಷಕವಾದ ನಾಟಕಾದಿಗಳನ್ನು ರಚಿಸಬಹುದು. ಸಂಸ್ಕೃತನಾಟಕ ರಂಗಗಳನ್ನು ಹೊಸ ರೂಪಕ ನೃತ್ಯಕಲೆಗಳನ್ನು ಭಾರತಕ್ಕೆ ಪರಿಚಯಿಸಬಹುದು.

ಮಹಾಭಾರತ ಸಂಶೋಧನೆಯ ಆವಶ್ಯಕತೆ

ಮಹಾಭಾರತವು ಭಾರತೀಯ ತತ್ವಶಾಸ್ತ್ರಕ್ಕೆ ಸಂಬಂಧಿಸಿದ ಶ್ರೇಷ್ಠವಾದ ಇತಿಹಾಸ ಗ್ರಂಥ. ಇದರ ಹಿರಿಮೆ ವೇದಪುರಾಣಗಳಲ್ಲಿ ವರ್ಣಿತವಾಗಿದೆ. ಆದ್ದರಿಂದ ಇದರ ಅಧ್ಯಯನವು ಅತ್ಯಗತ್ಯ. ಇದರ ವಿಮರ್ಶೆ ಮತ್ತು ಅಧ್ಯಯನಕ್ಕೆ ಪ್ರಯತ್ನ ಪಟ್ಟವರು ಶ್ರೀಮಧ್ವಾಚಾರ್ಯರು ಒಬ್ಬರೇ. ಅವರು ಭಗವದನುಗ್ರಹಪ್ರಾಪ್ತವಾದ ತಮ್ಮ ಪ್ರತಿಭೆಯಿಂದಲೇ ಅಲ್ಲದೆ ಒಬ್ಬ ಪ್ರಾಮಾಣಿಕ ಸಂಶೋಧಕನಂತೆ ದೇಶದೇಶಗಳಲ್ಲಿ ತಿರುಗಿ ಪುಸ್ತಕಗಳನ್ನು ಸಂಗ್ರಹಿಸಿ, ಶುದ್ಧಪಾಠವನ್ನಾಧರಿಸಿ ಮಹಾಭಾರತದ ಅಧ್ಯಯನಕ್ಕೆ ಅನುಕೂಲವಾಗುವಂತೆ ಒಂದು ವಿಮರ್ಶೆಯ ಗ್ರಂಥವನ್ನು ರಚಿಸಿದ್ದಾರೆ.

ಸಂಪಾದನೆಯ ಸಮಸ್ಯೆಗಳನ್ನು ನಿರೂಪಿಸುತ್ತಾ ಕೆಲವೊಮ್ಮೆ ಲೇಖಕರು (ಪ್ರತಿಕಾರರು) ಉದ್ದೇಶಪೂರ್ವಕವಾಗಿ ಗ್ರಂಥದ ಕೆಲವು ಭಾಗಗಳನ್ನು ತೆಗೆದಿರುತ್ತಾರೆ. ಕೆಲವೊಮ್ಮೆ ಕೆಲವು ಭಾಗಗಳನ್ನು ಸೇರಿಸುತ್ತಾರೆ, ಕೆಲವೊಮ್ಮೆ ಗ್ರಂಥದಲ್ಲಿನ ವಿಷಯಗಳನ್ನು ವ್ಯತ್ಯಾಸಮಾಡಿರುತ್ತಾರೆ. ಮತ್ತು ಕೆಲವೊಮ್ಮೆ ಪ್ರಮಾದದಿಂದಲೂ ಲೇಖನದಲ್ಲಿ ತಪ್ಪುಗಳು ಬರುತ್ತವೆ.

ಹೀಗಾಗಿ ಶುದ್ಧಪಾಠವನ್ನು ನಿರ್ಣಯಿಸುವುದು ಕಷ್ಟಸಾಧ್ಯ. ಗ್ರಂಥವನ್ನೇ ಹೀಗೆ ವ್ಯತ್ಯಾಸ ಮಾಡಿರುವಾಗ ಗ್ರಂಥದ ಅರ್ಥವನ್ನು ನಿರ್ಣಯಿಸುವುದು ಇನ್ನೂ ಕಷ್ಟವಾಗುತ್ತದೆ ಎಂದು ತಿಳಿಸಿದ್ದಾರೆ.

ಈ ಹಿನ್ನೆಲೆಯಲ್ಲಿ ಆಚಾರ್ಯರು ಮಹಾಭಾರತ ತಾತ್ಪರ್ಯನಿರ್ಣಯ ಎಂಬ ಗ್ರಂಥವನ್ನು ರಚಿಸಿದರೂ ಅದು ಶ್ಲೋಕಶ್ಲೋಕಕ್ಕೆ ವ್ಯಾಖ್ಯಾನರೂಪವಾಗಿಲ್ಲ. ಮೂಲಗ್ರಂಥಕ್ಕೆ ಅನುಗುಣವಾಗಿ ಕಥೆಯನ್ನು ನಿರೂಪಿಸುತ್ತಾ, ಅಲ್ಲಿಬರುವ ಪ್ರಶ್ನೆಗಳಿಗೆ ಮತ್ತು ಸಂಶಯಗಳಿಗೆ ಉತ್ತರವನ್ನು ನೀಡುತ್ತಾ ಹೋಗಿದ್ದಾರೆ. ಮಹಾಭಾರತದ ಮೂಲಪಾಠವನ್ನು ನಿರ್ಣಯಿಸುವುದರಲ್ಲಿ ಇದರಿಂದ ಸಹಾಯ ದೊರೆಯುವುದಿಲ್ಲ.

ಆದರೆ ಆಚಾರ್ಯರೇ ತಮ್ಮ ಪ್ರಮೇಯಗಳನ್ನು ಸಮರ್ಥಿಸಲು ಮಹಾಭಾರತದಿಂದ ನೂರಾರು ಶ್ಲೋಕಗಳನ್ನು ಉದಾಹರಿಸಿದ್ದಾರೆ. ಈಗ ಮುದ್ರಿತವಾಗಿರುವ ಎಲ್ಲ ಮಹಾಭಾರತದ ಪ್ರತಿಗಳಲ್ಲೂ ಈ ಶ್ಲೋಕಗಳಲ್ಲಿ ಸಾಕಷ್ಟು ವ್ಯತ್ಯಾಸವಿರುವುದು ಕಂಡುಬರುತ್ತದೆ. ಇದೊಂದು ಗಮನಿಸಬೇಕಾದ ಸಂಗತಿ.

ಇದಾದ ನಂತರ ಸುಮಾರು ಕ್ರಿ.ಶ. ೧೫೫೦ರಲ್ಲಿ ಶ್ರೀವಾದಿರಾಜರು ''ಮಹಾಭಾರತ ಲಕ್ಷಾಲಂಕಾರ''ವೆಂಬ ಗ್ರಂಥವನ್ನು ರಚಿಸಿದ್ದಾರೆ. ಇಲ್ಲಿಯೂ ಶ್ಲೋಕಶ್ಲೋಕಗಳ ವ್ಯಾಖ್ಯಾನವಿಲ್ಲ. ಕ್ಲಿಷ್ಟವಾದ ಸುಮಾರು ಒಂದುಲಕ್ಷ ಸ್ಥಾನಗಳಲ್ಲಿ ಅವರು ಅರ್ಥವನ್ನು ನಿರೂಪಿಸಿ ಮಹೋಪಕಾರವನ್ನು ಮಾಡಿದ್ದಾರೆ. ಕೆಲವು ಸಲ ಅರ್ಧಶ್ಲೋಕವನ್ನು, ಕೆಲವು ಸಲ ಒಂದು ಪದವನ್ನು , ಕೆಲವು ಸಲ ಸಮಗ್ರಶ್ಲೋಕವನ್ನು ಹಿಡಿದು ವ್ಯಾಖ್ಯಾನ ಮಾಡಿದ್ದಾರೆ.

ಅಲ್ಲಿಂದೀಚೆಗೆ ನೀಲಕಂಠಶಾಸ್ತ್ರಿಗಳು ಮಹಾಭಾರತಕ್ಕೆ ಒಂದು ವ್ಯಾಖ್ಯಾನವನ್ನು ರಚಿಸಿದ್ದಾರೆ. ಅದೂ ಸಹ ಕಷ್ಟವಾದ ಕಡೆಗಳಲ್ಲಿ ಸಂಕ್ಷಿಪ್ತವಾಗಿರುವ ವ್ಯಾಖ್ಯಾನ. ಇವರು ಹಿಡಿದಿರುವ ಪಾಠಕ್ಕೂ ಹಿಂದಿನ ಪಾಠಕ್ಕೂ ಸಾಕಷ್ಟು ವ್ಯತ್ಯಾಸಗಳು ತೋರುತ್ತವೆ. ವಾದಿರಾಜರ ವ್ಯಾಖ್ಯಾನಕ್ಕೂ ಮತ್ತು ನೀಲಕಂಠೀಯಕ್ಕೂ ವ್ಯಾಖ್ಯಾನಪ್ರಕಾರದಲ್ಲಿ ಸಾಕಷ್ಟು ವ್ಯತ್ಯಾಸಗಳಿವೆ.

ಈ ನಾಲ್ಕುಪಾಠಗಳಲ್ಲಿ ಯಾವುದೂ ಸಹ ಲಕ್ಷಾಲಂಕಾರದಲ್ಲಿ ಹೇಳಿರುವ ಅಧ್ಯಾಯ ಕ್ರಮ, ಶ್ಲೋಕಕ್ರಮ, ಮತ್ತು ಪಾಠಗಳಿಗೆ ಸರಿ ಹೊಂದುವುದಿಲ್ಲ. ಉಡುಪಿಯ ತಾಳೆಗರಿಗಳಲ್ಲಿರುವ ಪ್ರತಿಗಳು ಮಾತ್ರ ತುಂಬಾ ಹೆಚ್ಚಾಗಿ ಎಲ್ಲವೂ ಲಕ್ಷಾಲಂಕಾರಕ್ಕೆ ಅನುಗುಣವಾಗಿವೆ. ಪುಣೆಯವರು ಭಾರತದ ಎಲ್ಲಾ ಕಡೆಗಳಿಂದಲೂ ಹಸ್ತಪ್ರತಿಗಳನ್ನು ಸಂಗ್ರಹಿಸಿದರೂ, ಯಾವ ಕಾರಣದಿಂದಲೋ ಉಡುಪಿಯ ತಾಳೆಗರಿಗಳ ಸಂಗ್ರಹವನ್ನು ಮಾಡಲಿಲ್ಲ. ಅವರು ಮಾಡಿದ್ದರೆ ನಮಗೆ ಬೇಕಾದ ಪಾಠಗಳೆಲ್ಲಾ ಅಲ್ಲಿ ಮೂಲದಲ್ಲಿಲ್ಲದಿದ್ದರೂ ಅಡಿಟಿಪ್ಪಣಿಗಳಲ್ಲಿ ದೊರಕುತ್ತಿದ್ದವು. ಆದರೆ ಅವರು ಹಾಗೆ ಮಾಡಲಿಲ್ಲವಾದ್ದರಿಂದ ಆ ತಾಳೆಗರಿಯ ಪ್ರತಿಗಳನ್ನು ನೋಡಿ ಪಾಠಾಂತರಗಳನ್ನು ಸಂಗ್ರಹಿಸಿ ಗ್ರಂಥಸಂಪಾದನೆ ಮಾಡುವ ಕಾರ್ಯ ಹಾಗೆಯೇ ಉಳಿಯಿತು ಎಂಬುದರಲ್ಲಿ ಸಂದೇಹವಿಲ್ಲ. ಅವುಗಳಿಂದ ಸಂಪಾದಿಸಿದ ಗ್ರಂಥವು ಲಕ್ಷಾಲಂಕಾರಕ್ಕೆ ಅದಷ್ಟು ಸಮೀಪವಾಗಿರುತ್ತದೆ ಎಂಬುದರಲ್ಲೂ ಸಂದೇಹವಿಲ್ಲ. ಲಕ್ಷಾಲಂಕಾರವೇ ನಮಗೆ ದೊರೆತಿರುವ ವ್ಯಾಖ್ಯಾನಗಳಲ್ಲಿ ಪ್ರಾಚೀನವಾದ್ದರಿಂದ ಅದಕ್ಕೆ ಅನುಗುಣವಾದದ್ದನ್ನು ನಾವು ಇದ್ದುದ್ದರಲ್ಲಿ ಶುದ್ಧಪಾಠವೆಂದು ಅಂಗೀಕರಿಸಬೇಕಾಗುತ್ತದೆ.

ಮಹಾಭಾರತದಲ್ಲಿ ಸುಮಾರು ೧ಲಕ್ಷಶ್ಲೋಕಗಳಿವೆ. ಇವುಗಳಲ್ಲಿ ೮೮೦೦ ಶ್ಲೋಕಗಳು ಒಗಟಿನಂತಿದ್ದು ತುಂಬಾ ಕಠಿಣವಾಗಿವೆ. ಈ ಶ್ಲೋಕಗಳ ಅರ್ಥವನ್ನು ವ್ಯಾಸರು ತಿಳಿದಿದ್ದಾರೆ, ಶುಕಾಚಾರ್ಯರು ತಿಳಿದಿದ್ದಾರೆ, ಆದರೆ ಸಂಜಯನು ತಿಳಿದಿದ್ದಾನೋ ಇಲ್ಲವೋ? ಎಂದು ಸಂಶಯವಿದೆ ಎಂಬ ಮಾತು ಪುರಾಣಗಳಲ್ಲಿ ಕಂಡು ಬರುತ್ತದೆ. ಮಹಾಭಾರತದ ಕೆಲವು ಪ್ರತಿಗಳಲ್ಲೂ ಈ ವಿಷಯವಿದೆ. ಇವುಗಳನ್ನು ಆಯಾ ಸಂದರ್ಭದಲ್ಲಿ ಶ್ರೀವಾದಿರಾಜರು ಚೆನ್ನಾಗಿ ಬಿಡಿಸಿ ಅರ್ಥವನ್ನು ನಿರೂಪಿಸಿದ್ದಾರೆ. ಆದರೆ ಲಕ್ಷಾಲಂಕಾರವನ್ನು ನೋಡದೆ ಮಹಾಭಾರತವನ್ನು ಅರ್ಥಮಾಡಿಕೊಳ್ಳಲು ಹೊರಟವರಿಗೆ ಇಂತಹ ಶ್ಲೋಕಗಳಲ್ಲಿ ಅನ್ವಯವು ತಿಳಿಯದೆ ಶ್ಲೋಕಗಳನ್ನೇ ಬದಲಾಯಿಸಿ ಒಂದು ಅನ್ವಯಾರ್ಥವು ದೊರಕುವಂತೆ ಮಾಡಿದ್ದಾರೆ. ಇದು ಮೂಲಕಾರರಾದ ವ್ಯಾಸರಿಗೆ ಎಷ್ಟು ಮಾತ್ರಕ್ಕೂ ಸಮ್ಮತವಿಲ್ಲ. ಹೀಗೆಯೇ ಅನೇಕ ಕಡೆ ಎಷ್ಟೋ ಶ್ಲೋಕಗಳನ್ನೇ ಬಿಟ್ಟು ಬಿಟ್ಟಿದ್ದಾರೆ. ಒಂದೆರಡು ಕಡೆ ಸಮಗ್ರವಾದ ಅಧ್ಯಾಯವೇ ಲೋಪವಾಗಿದೆ. ಇನ್ನು ಕೆಲವುಕಡೆ ಶ್ಲೋಕದಲ್ಲಿರುವ ಪದಗಳನ್ನು ವ್ಯತ್ಯಾಸ ಮಾಡಿದ್ದಾರೆ. ಈ ಎಲ್ಲಾ ಕಾರಣಗಳಿಂದ ಲಕ್ಷಾಲಂಕಾರದಲ್ಲಿ ಇರುವ ಪಾಠಕ್ಕೆ ವಿರೋಧವಿಲ್ಲದ ಒಂದು ಪಾಠವನ್ನು ಸಂಪಾದಿಸಬೇಕಾದ ಅವಶ್ಯಕತೆ ಇದೆ. ಇವುಗಳಿಗೆಲ್ಲಾ ಅನೇಕ ಉದಾಹರಣೆಗಳನ್ನು ಕೊಡಬಹುದು. ಆದರೆ ಆ ವಿವರಗಳು ಎಲ್ಲರಿಗೂ ಹಿಡಿಸಲಾರದು ಎಂಬ ದೃಷ್ಟಿಯಿಂದ ಅದನ್ನು ಇಲ್ಲಿ ಕೈಬಿಡಲಾಗಿದೆ.

- ವಿದ್ವಾನ್ ಬೆಮ್ಮತ್ತಿ ವೇಂಕಟೇಶಾಚಾರ್ಯ

—0—

ವಿಷಯಾನುಕ್ರಮಣಿಕೆ

ಮಹಾಭಾರತ

ಆದಿಪರ್ವ ಭಾಗ-೧

ಪುಟ ಸಂ.

1. ಅನುಕ್ರಮಣಿಕಾ ಪರ್ವ ಪ್ರಾರಂಭ 1

2. ಭಾರತಯುದ್ಧ ಸ್ಥಳದ ಕಥನ ಸಂದರ್ಭದಲ್ಲಿ ಪರಶುರಾಮನ ಚರಿತ್ರೆ. ಸಮಂತಪಂಚಕ ನಿರ್ಮಾಣ. ಸೇನಾಪರಿಮಾಣ, ಪರ್ವಾನುಕ್ರಮಣಿಕೆ ಮತ್ತು ಉಪಪರ್ವಗಳ ವಿಷಯಾನುಕ್ರಮಣಿಕೆ 64

3. ಜನಮೇಜಯನಿಗೆ ದೇವಶುನಿಯಾದ ಸರಮೆಯಿಂದ ಶಾಪ, ಶಾಪಫಲನಿವಾರಣೆಗಾಗಿ ಅವನಿಂದ ಸೋಮಶ್ರವ ಎಂಬ ಪುರೋಹಿತನ ವರಣ, ಸರ್ಪಯಾಗಕ್ಕೆ ಕಾರಣವನ್ನು ಹೇಳುತ್ತಾ ಪ್ರಸಂಗದಿಂದ ಧೌಮ್ಯಶಿಷ್ಯರಾದ ಆರುಣಿ, ಉಪಮನ್ಯು ಮತ್ತು ಬೈದರ ಚರಿತ್ರೆ, ಬೈದರ ಶಿಷ್ಯರಾದ ಉದಂಕರ ಚರಿತ್ರೆ, ಉದಂಕರಿಗೆ ಸರ್ಪಗಳ ಮೇಲೆ ದ್ವೇಷ ಮತ್ತು ಅವರಿಂದ ಸರ್ಪಯಾಗವನ್ನು ಮಾಡುವಂತೆ ಜನಮೇಜಯನಿಗೆ ಒತ್ತಾಯ 116

4. ಸತ್ರಯಾಗದಲ್ಲಿದ್ದ ಋಷಿಗಳಿಂದ ಶೌನಾಕಾಗಮನದನಂತರ ಕಥೆಯನ್ನು ಹೇಳುವಂತೆ ಸೂತರಿಗೆ ಪ್ರಾರ್ಥನೆ ಮತ್ತು ಶೌನಕರ ಆಗಮನ 164

5. ಭಾರತ ವಕ್ತೃಗಳಾದ ಉಗ್ರಶ್ರವರ ಪಿತೃಗಳ ಕಥನ ಮತ್ತು ಶೌನಕರ ವಂಶವೃತ್ತಾಂತಕಥನ, ಭೃಗುಭಾರ್ಯೆಯನ್ನು ಅಪಹರಿಸಲು ಪುಲೋಮ ರಾಕ್ಷಸನಿಂದ ಅಗ್ನಿಯನ್ನು ಕುರಿತು ಪ್ರಶ್ನೆ ಮತ್ತು ಅಗ್ನಿಯ ಉತ್ತರ 167

6. ರಾಕ್ಷಸನಾದ ಪುಲೋಮನಿಂದ ಭೃಗುಭಾರ್ಯೆಯಾದ ಪುಲೋಮೆಯ ಅಪಹರಣ. ಗರ್ಭಿಣಿಯಾದ ಅವಳ ಉದರದಿಂದ ಪುತ್ರನ ನಿಷ್ಕ್ರಮಣ. ರಾಕ್ಷಸನ ಮರಣ, ವಧೂಸರನದಿಯ ಉತ್ಪತ್ತಿ, ಭೃಗುವಿನಿಂದ ಅಗ್ನಿಗೆ ಶಾಪದಾನ 173

7. ಶಾಪಗ್ರಸ್ತನಾದ ಅಗ್ನಿಯಿಂದ ತನ್ನ ಮಹಿಮಾ ಕಥನಪೂರ್ವಕವಾಗಿ ಅಗ್ನಿಕುಂಡಗಳಿಂದ ತಿರೋಧಾನ. ಋಷಿಗಳಿಂದ ಪ್ರಾರ್ಥಿಸಲ್ಪಟ್ಟ ಬ್ರಹ್ಮದೇವರಿಂದ ಶಾಪ ವಿಮುಕ್ತನಾಗಿ ಪುನಃ ಸ್ವಾತ್ಮಪ್ರಕಾಶ 176

8. ಭೃಗುಪುತ್ರರಾದ ಚ್ಯವನರಿಂದ ಪ್ರಮತಿಯ ಪಿತಾಮಹನ ಪಿತನಾದ ಶೌನಕರ ಜನನ, ಪ್ರಮತಿಯ ಸುತನಾದ ರುರು ಮತ್ತು ಪ್ರಮದ್ವರೆಯ ವಿವಾಹ ನಿಶ್ಚಯ, ಪ್ರಮದ್ವರೆಯ ಮರಣ 183

9. ರುರು ಶೋಕ, ದೇವದೂತನ ಪ್ರೇರಣೆಯಂತೆ ಪ್ರಮದ್ವರೆಗೆ ತನ್ನ ಅರ್ಧಾಯುಷ್ಯದದಾನ, ವಿವಾಹ, ರುರುವಿನ ಸರ್ಪದ್ವೇಷ ಮತ್ತು ಡುಂಡುಭ ವಧ ಪ್ರಯತ್ನ 188

10. ಸಹಸ್ರಪಾತ್ ಋಷಿಗೆ ಶಾಪದಿಂದ ಸರ್ಪಶರೀರಪ್ರಾಪ್ತಿ 193

11. ಡುಂಡುಭನಿಂದ ತನಗೆ ಬಂದ ಶಾಪದ ಕಥನ. ರುರುವಿಗೆ ಶಾಂತಿಯಿಂದಿರಲು ಉಪದೇಶ. ಪ್ರಸಂಗದಿಂದ ಜನಮೇಜಯನ ಸರ್ಪಯಾಗದ ಉಲ್ಲೇಖ 195

12. ರುರುವಿಗೆ ವಿಸ್ತಾರವಾಗಿ ಸರ್ಪಯಾಗವನ್ನು ಕೇಳುವ ಇಚ್ಛೆ. ಮುಂದೆ ಕೇಳುವಿ ಎಂದು ಹೇಳಿ ಸಹಸ್ರಪದನ ಅಂತರ್ಧಾನ. ತಂದೆಯಲ್ಲಿ ಪುನಃ ಸರ್ಪಯಾಗದ ಪ್ರಶ್ನೆ 199

13. ಆಸ್ತೀಕನು ಸರ್ಪಗಳನ್ನು ರಕ್ಷಿಸಿದ ಬಗ್ಗೆ ತಿಳಿಯಲು ಶೌನಕನ ಪ್ರಶ್ನೆ. ಜರತ್ಕಾರುವಿನ ವಿವಾಹ ಪ್ರಯತ್ನ. ವಾಸುಕಿಯ ತಂಗಿಯ ಜೊತೆಯಲ್ಲಿ ವಿವಾಹ. ಕದ್ರುವಿನಿಂದ ತನ್ನ ಮಕ್ಕಳಾದ ಸರ್ಪಗಳಿಗೆ ಶಾಪ. ಶಾಪವಿಮೋಚನೆಗಾಗಿ ಆಸ್ತೀಕನ ಜನನ 202

14. ಇನ್ನೂ ವಿಸ್ತಾರವಾಗಿ ಆಸ್ತೀಕಚರಿತ್ರೆಯ ಕಥನದ ಉಪಕ್ರಮ. ಕದ್ರುವಿನತೆಯರ ಸ್ಪರ್ಧೆ. ಕದ್ರುವಿನಿಂದ ಸರ್ಪಗಳ ಜನನ. ವಿನತೆಗೆ ಮಗನಾದ ಅರುಣನಿಂದ ಶಾಪಪ್ರಾಪ್ತಿ. ಅರುಣನ ಸೂರ್ಯಸಾರಥ್ಯ ಮತ್ತು ಗರುಡನ ಜನ್ಮ 212

15. ಕದ್ರುವಿನತೆಯರ ಪಣ. ಅಮೃತವನ್ನು ಪಡೆಯಲು ಕ್ಷೀರಸಮುದ್ರವನ್ನು ಮಥಿಸಲು ದೇವಾಸುರರ ನಿರ್ಧಾರ 218

16. ಮಂದರವನ್ನು ಕಡೆಗೋಲನ್ನಾಗಿ ಮಾಡಿ, ವಾಸುಕಿಯನ್ನು ಹಗ್ಗವನ್ನು ಮಾಡಿ, ಸರ್ವೌಷಧಿಗಳನ್ನು ಹಾಕಿ ಸಮುದ್ರಮಥನ, ಪಾರಿಜಾತಾದಿ ಉತ್ಪತ್ತಿ, ಧನ್ವಂತರಿಯ ಪ್ರಾದುರ್ಭಾವ, ದೈತ್ಯರಿಗೆ ವಂಚನೆ 231

17. ದೇವತೆಗಳಿಂದ ಅಮೃತಪಾನ, ದೇವಾಸುರ ಸಂಗ್ರಾಮ, ಅಸುರರ ಪರಾಭವ, ಮಂದರಪರ್ವತದ ಯಥಾಸ್ಥಾನಗಮನ ಮತ್ತು ಅಮೃತದ ರಕ್ಷಣೆ 243

ವಿಷಯಾನುಕ್ರಮಣಿಕೆ

ಮಹಾಭಾರತ

ಆದಿಪರ್ವ ಭಾಗ-೧

ಪುಟ ಸಂ.

1. ಅನುಕ್ರಮಣಿಕಾ ಪರ್ವ ಪ್ರಾರಂಭ 1

2. ಭಾರತಯುದ್ಧ ಸ್ಥಳದ ಕಥನ ಸಂದರ್ಭದಲ್ಲಿ ಪರಶುರಾಮನ ಚರಿತ್ರೆ. ಸಮಂತಪಂಚಕ ನಿರ್ಮಾಣ. ಸೇನಾಪರಿಮಾಣ, ಪರ್ವಾನುಕ್ರಮಣಿಕೆ ಮತ್ತು ಉಪಪರ್ವಗಳ ವಿಷಯಾನುಕ್ರಮಣಿಕೆ 64

3. ಜನಮೇಜಯನಿಗೆ ದೇವಶುನಿಯಾದ ಸರಮೆಯಿಂದ ಶಾಪ, ಶಾಪಫಲನಿವಾರಣೆಗಾಗಿ ಅವನಿಂದ ಸೋಮಶ್ರವ ಎಂಬ ಪುರೋಹಿತನ ವರಣ, ಸರ್ಪಯಾಗಕ್ಕೆ ಕಾರಣವನ್ನು ಹೇಳುತ್ತಾ ಪ್ರಸಂಗದಿಂದ ಧೌಮ್ಯಶಿಷ್ಯರಾದ ಆರುಣಿ, ಉಪಮನ್ಯು ಮತ್ತು ಬೈದರ ಚರಿತ್ರೆ, ಬೈದರ ಶಿಷ್ಯರಾದ ಉದಂಕರ ಚರಿತ್ರೆ, ಉದಂಕರಿಗೆ ಸರ್ಪಗಳ ಮೇಲೆ ದ್ವೇಷ ಮತ್ತು ಅವರಿಂದ ಸರ್ಪಯಾಗವನ್ನು ಮಾಡುವಂತೆ ಜನಮೇಜಯನಿಗೆ ಒತ್ತಾಯ 116

4. ಸತ್ರಯಾಗದಲ್ಲಿದ್ದ ಋಷಿಗಳಿಂದ ಶೌನಾಕಾಗಮನದನಂತರ ಕಥೆಯನ್ನು ಹೇಳುವಂತೆ ಸೂತರಿಗೆ ಪ್ರಾರ್ಥನೆ ಮತ್ತು ಶೌನಕರ ಆಗಮನ 164

5. ಭಾರತ ವಕ್ತೃಗಳಾದ ಉಗ್ರಶ್ರವರ ಪಿತೃಗಳ ಕಥನ ಮತ್ತು ಶೌನಕರ ವಂಶವೃತ್ತಾಂತಕಥನ, ಭೃಗುಭಾರ್ಯೆಯನ್ನು ಅಪಹರಿಸಲು ಪುಲೋಮ ರಾಕ್ಷಸನಿಂದ ಅಗ್ನಿಯನ್ನು ಕುರಿತು ಪ್ರಶ್ನೆ ಮತ್ತು ಅಗ್ನಿಯ ಉತ್ತರ 167

6. ರಾಕ್ಷಸನಾದ ಪುಲೋಮನಿಂದ ಭೃಗುಭಾರ್ಯೆಯಾದ ಪುಲೋಮೆಯ ಅಪಹರಣ. ಗರ್ಭಿಣಿಯಾದ ಅವಳ ಉದರದಿಂದ ಪುತ್ರನ ನಿಷ್ಕ್ರಮಣ. ರಾಕ್ಷಸನ ಮರಣ, ವಧೂಸರನದಿಯ ಉತ್ಪತ್ತಿ, ಭೃಗುವಿನಿಂದ ಅಗ್ನಿಗೆ ಶಾಪದಾನ 173

7. ಶಾಪಗ್ರಸ್ತನಾದ ಅಗ್ನಿಯಿಂದ ತನ್ನ ಮಹಿಮಾ ಕಥನಪೂರ್ವಕವಾಗಿ ಅಗ್ನಿಕುಂಡಗಳಿಂದ ತಿರೋಧಾನ. ಋಷಿಗಳಿಂದ ಪ್ರಾರ್ಥಿಸಲ್ಪಟ್ಟ ಬ್ರಹ್ಮದೇವರಿಂದ ಶಾಪ ವಿಮುಕ್ತನಾಗಿ ಪುನಃ ಸ್ವಾತ್ಮಪ್ರಕಾಶ 176

8. ಭೃಗುಪುತ್ರರಾದ ಚ್ಯವನರಿಂದ ಪ್ರಮತಿಯ ಪಿತಾಮಹನ ಪಿತನಾದ ಶೌನಕರ ಜನನ, ಪ್ರಮತಿಯ ಸುತನಾದ ರುರು ಮತ್ತು ಪ್ರಮದ್ವರೆಯ ವಿವಾಹ ನಿಶ್ಚಯ, ಪ್ರಮದ್ವರೆಯ ಮರಣ 183

9. ರುರು ಶೋಕ, ದೇವದೂತನ ಪ್ರೇರಣೆಯಂತೆ ಪ್ರಮದ್ವರೆಗೆ ತನ್ನ ಅರ್ಧಾಯುಷ್ಯದದಾನ, ವಿವಾಹ, ರುರುವಿನ ಸರ್ಪದ್ವೇಷ ಮತ್ತು ಡುಂಡುಭ ವಧ ಪ್ರಯತ್ನ 188

10. ಸಹಸ್ರಪಾತ್ ಋಷಿಗೆ ಶಾಪದಿಂದ ಸರ್ಪಶರೀರಪ್ರಾಪ್ತಿ 193

11. ಡುಂಡುಭನಿಂದ ತನಗೆ ಬಂದ ಶಾಪದ ಕಥನ. ರುರುವಿಗೆ ಶಾಂತಿಯಿಂದಿರಲು ಉಪದೇಶ. ಪ್ರಸಂಗದಿಂದ ಜನಮೇಜಯನ ಸರ್ಪಯಾಗದ ಉಲ್ಲೇಖ 195

12. ರುರುವಿಗೆ ವಿಸ್ತಾರವಾಗಿ ಸರ್ಪಯಾಗವನ್ನು ಕೇಳುವ ಇಚ್ಛೆ. ಮುಂದೆ ಕೇಳುವಿ ಎಂದು ಹೇಳಿ ಸಹಸ್ರಪದನ ಅಂತರ್ಧಾನ. ತಂದೆಯಲ್ಲಿ ಪುನಃ ಸರ್ಪಯಾಗದ ಪ್ರಶ್ನೆ 199

13. ಆಸ್ತೀಕನು ಸರ್ಪಗಳನ್ನು ರಕ್ಷಿಸಿದ ಬಗ್ಗೆ ತಿಳಿಯಲು ಶೌನಕನ ಪ್ರಶ್ನೆ. ಜರತ್ಕಾರುವಿನ ವಿವಾಹ ಪ್ರಯತ್ನ. ವಾಸುಕಿಯ ತಂಗಿಯ ಜೊತೆಯಲ್ಲಿ ವಿವಾಹ. ಕದ್ರುವಿನಿಂದ ತನ್ನ ಮಕ್ಕಳಾದ ಸರ್ಪಗಳಿಗೆ ಶಾಪ. ಶಾಪವಿಮೋಚನೆಗಾಗಿ ಆಸ್ತೀಕನ ಜನನ 202

14. ಇನ್ನೂ ವಿಸ್ತಾರವಾಗಿ ಆಸ್ತೀಕಚರಿತ್ರೆಯ ಕಥನದ ಉಪಕ್ರಮ. ಕದ್ರುವಿನತೆಯರ ಸ್ಪರ್ಧೆ. ಕದ್ರುವಿನಿಂದ ಸರ್ಪಗಳ ಜನನ. ವಿನತೆಗೆ ಮಗನಾದ ಅರುಣನಿಂದ ಶಾಪಪ್ರಾಪ್ತಿ. ಅರುಣನ ಸೂರ್ಯಸಾರಥ್ಯ ಮತ್ತು ಗರುಡನ ಜನ್ಮ 212

15. ಕದ್ರುವಿನತೆಯರ ಪಣ. ಅಮೃತವನ್ನು ಪಡೆಯಲು ಕ್ಷೀರಸಮುದ್ರವನ್ನು ಮಥಿಸಲು ದೇವಾಸುರರ ನಿರ್ಧಾರ 218

16. ಮಂದರವನ್ನು ಕಡೆಗೋಲನ್ನಾಗಿ ಮಾಡಿ, ವಾಸುಕಿಯನ್ನು ಹಗ್ಗವನ್ನು ಮಾಡಿ, ಸರ್ವೌಷಧಿಗಳನ್ನು ಹಾಕಿ ಸಮುದ್ರಮಥನ, ಪಾರಿಜಾತಾದಿ ಉತ್ಪತ್ತಿ, ಧನ್ವಂತರಿಯ ಪ್ರಾದುರ್ಭಾವ, ದೈತ್ಯರಿಗೆ ವಂಚನೆ 231

17. ದೇವತೆಗಳಿಂದ ಅಮೃತಪಾನ, ದೇವಾಸುರ ಸಂಗ್ರಾಮ, ಅಸುರರ ಪರಾಭವ, ಮಂದರಪರ್ವತದ ಯಥಾಸ್ಥಾನಗಮನ ಮತ್ತು ಅಮೃತದ ರಕ್ಷಣೆ 243

18. ಉಚ್ಚೈಃಶ್ರವಸ್ಸಿನ ಬಾಲದ ಬಣ್ಣದ ವಿಷಯದಲ್ಲಿ ಕದ್ರುವಿನತೆಯರ ಪಣ, ಕದ್ರುವಿನಿಂದ ತನ್ನ ಮಕ್ಕಳಿಗೆ ಶಾಪ, ಬ್ರಹ್ಮದೇವರ ಅನುಮೋದನೆ. ಕಾಶ್ಯಪರಿಗೆ ಬ್ರಹ್ಮದೇವರ ಸಮಾಧಾನವಚನ, ಕಾರ್ಕೋಟಕನಿಂದ ತಾಯಿಗೆ ಆಶ್ವಾಸನೆ 251

19. ಕದ್ರುವಿನತೆಯರಿಂದ ಸಮುದ್ರಗಮನ ಮತ್ತು ಸಮುದ್ರದ ವರ್ಣನೆ 255

20. ಪಣದಲ್ಲಿ ಕುಟಿಲೋಪಾಯದಿಂದ ಕದ್ರುವಿನ ಜಯ, ವಿನತೆಯ ದಾಸ್ಯ, ಗರುಡನ ಉತ್ಪತ್ತಿ. ಗರುಡನಿಗೆ ಹೆದರಿ ದೇವತೆಗಳಿಂದ ಅವನ ಸ್ತುತಿ. ಗರುಡನಿಂದ ತನ್ನ ದೇಹದ ಮತ್ತು ತೇಜಸ್ಸಿನ ಉಪಸಂಹಾರ 258

21. ವಿನತೆಯಿಂದ ಕದ್ರುವಿನ ವಹನ ಮತ್ತು ಗರುಡನಿಂದ ಸರ್ಪಗಳ ವಹನ. ಸೂರ್ಯತಾಪಕ್ಕೆ ಒಳಗಾದ ಸರ್ಪಗಳ ಶಾಂತಿಗಾಗಿ ಕದ್ರುವಿನಿಂದ ಇಂದ್ರಸ್ತುತಿ 264

22. ಇಂದ್ರನು ಸುರಿಸಿದ ಮಳೆಯಿಂದ ಸರ್ಪಗಳ ತಾಪ ಪರಿಹಾರ 269

23. ಸರ್ಪಗಳ ಮಾತಿನಂತೆ ತಾಯಿಯನ್ನು ದಾಸ್ಯದಿಂದ ಬಿಡಿಸಲು ಅಮೃತವನ್ನು ತರಲು ಗರುಡನ ಪ್ರಯತ್ನ. ತಾಯಿಯನ್ನು ಕುರಿತು ಆಹಾರ ಪ್ರಾರ್ಥನೆ. ತಾಯಿಯ ಮಾತಿನಂತೆ ಸಮುದ್ರಮಧ್ಯದಲ್ಲಿದ್ದ ನಿಷಾದರ ಭಕ್ಷಣ 270

24. ನಿಷಾದರ ಮಧ್ಯದಲ್ಲಿದ್ದ ಬ್ರಾಹ್ಮಣನೊಬ್ಬನನ್ನು ಬಿಟ್ಟು ಗರುಡನಿಂದ ಎಲ್ಲಾ ನಿಷಾದರ ಭಕ್ಷಣ. ಆಹಾರಕ್ಕಾಗಿ ಪುನಃ ತಂದೆಯನ್ನು ಕುರಿತು ಪ್ರಾರ್ಥನೆ. ತಂದೆಯ ಆಜ್ಞೆಯಂತೆ ಗಜ ಮತ್ತು ಕೂರ್ಮಗಳ ಭಕ್ಷಣ. ವಟವೃಕ್ಷದ ಆಹ್ವಾನದಂತೆ ವಟವೃಕ್ಷದ ಮೇಲೆ ಉಪವೇಶನ. ವೃಕ್ಷದ ಶಾಖಾಭಂಗ 277

25. ಕಾಶ್ಯಪರಿಂದ ವಾಲಖಿಲ್ಯರ ಸಾಂತ್ವನ. ಕಾಶ್ಯಪರ ವಚನದಂತೆ ಹಿಮಾಲಯದಲ್ಲಿ ಗರುಡನಿಂದ ಶಾಖೆಯ ಮೋಚನ. ವಾಲಖಿಲ್ಯರಿಗೆ ಇಂದ್ರನು ಮಾಡಿದ ಅಪರಾಧ. ಅಮೃತ ರಕ್ಷಣೆಗಾಗಿ ದೇವತೆಗಳ ಪ್ರಯತ್ನ 285

26. ಗರುಡನ ಉತ್ಪತ್ತಿಗೆ ಕಾರಣವನ್ನು ಕುರಿತು ಶೌನಕರ ಪ್ರಶ್ನೆ ಮತ್ತು ಸೂತರ ಉತ್ತರ 296

27. ಗರುಡನ ಜೊತೆಯಲ್ಲಿ ಯುದ್ಧಮಾಡಿದ ದೇವತೆಗಳ ಮತ್ತು ಅಮೃತರಕ್ಷಕರ ಪರಾಭವ 303

28. ಯಂತ್ರವನ್ನು ಭೇದಿಸಿ ಗರುಡನಿಂದ ಅಮೃತಹರಣ. ವಿಷ್ಣು ಗರುಡರ ಸಂವಾದ, ಗರುಡನಲ್ಲಿ ವಜ್ರದ ವೈಫಲ್ಯ 308

29. ಇಂದ್ರಗರುಡಸಂವಾದ, ಅವರ ಸ್ನೇಹ, ಇಂದ್ರನಿಗೆ ವರದಾನ, ಗರುಡಕಥಾ ಸಮಾಪ್ತಿ 314

30. ಸರ್ಪಗಳ ವಂಶವಿಸ್ತಾರ 319

31. ಸರ್ಪಗಳ ದುರ್ನಡತೆಯಿಂದ ತಪ್ತರಾದ ಶೇಷದೇವರ ತಪಸ್ಸು. ಬ್ರಹ್ಮದೇವರ ವರದಿಂದ ಗರುಡನ ಜೊತೆಯಲ್ಲಿ ಸಖ್ಯ. ಭೂಮಿಯ ವಿವರದಲ್ಲಿಳಿದು ಭೂಮಿಯ ಧಾರಣೆ 323

32. ತಾಯಿಯ ಶಾಪದ ಪರಿಹಾರಕ್ಕಾಗಿ ಸರ್ಪಗಳ ಜೊತೆಯಲ್ಲಿ ವಾಸುಕಿಯ ಮಂತ್ರಾಲೋಚನೆ. ಸರ್ಪಯಾಗವನ್ನು ನಿವಾರಿಸಲು ಸರ್ಪಗಳಿಂದ ಬೇರೆಬೇರೆ ಉಪಾಯಗಳ ಸೂಚನೆ 329

33. ಏಲಾಪತ್ರನೆಂಬ ನಾಗನಿಂದ ಶಾಪಮೋಕ್ಷೋಪಾಯ ಸೂಚನೆ 336

34. ಏಲಾಪತ್ರನ ವಚನದಂತೆ ವಾಸುಕಿಯಿಂದ ತಂಗಿಯ ರಕ್ಷಣೆ. ದೇವತೆಗಳಿಗೆ ಬ್ರಹ್ಮದೇವರ ಹಿತವಚನ 340

35. ಪರೀಕ್ಷಿತನ ಕಥೆ. ಶಮೀಕರ ಕುತ್ತಿಗೆಯಲ್ಲಿ ಮೃತಸರ್ಪದ ಪ್ರಕ್ಷೇಪ 343

36. ಪುತ್ರನ ಶಾಪಪ್ರದಾನವನ್ನು ಕೇಳಿದ ತಂದೆಯಾದ ಶಮೀಕರ ಅಸಂತೋಷ ಮತ್ತು ಶೃಂಗಿಯನ್ನು ಕುರಿತು ಉಪದೇಶ 349

37. ತಂದೆಯಿಂದ ಶೃಂಗಿಗೆ ಮುಂದುವರೆದ ಉಪದೇಶ. ಶಿಷ್ಯನಿಂದ ರಾಜನಿಗೆ ವಾರ್ತಾಹರಣ. ತಕ್ಷಕ ಮತ್ತು ಕಾಶ್ಯಪಬ್ರಾಹ್ಮಣರ ಸಂವಾದ 355

38. ತಕ್ಷಕನಿಂದ ಕಾಶ್ಯಪ ಪರೀಕ್ಷೆ. ಧನವನ್ನು ಕೊಟ್ಟು ಅವನ ನಿವರ್ತನೆ. ಫಲದಲ್ಲಿ ಕ್ರಿಮಿರೂಪದಿಂದ ಪ್ರವೇಶಿಸಿ ರಾಜನ ಕಂಠವೇಷ್ಟನೆ 364

39. ಪರೀಕ್ಷಿತನ ಮರಣ. ಜನಮೇಜಯನ ರಾಜ್ಯಾಭಿಷೇಕ. ವಪುಷ್ಟಮೆಯ ಜೊತೆಯಲ್ಲಿ ವಿವಾಹ 371

40. ಜರತ್ಕಾರುವಿನ ಕಥೆ. ಪಿತೃಗಳ ಜೊತೆಯಲ್ಲಿ ಅವನ ಸಂವಾದ 374

41. ಪಿತೃಗಳ ಮಾತಿನಂತೆ ಜರತ್ಕಾರುವಿನ ಕನ್ಯಾನ್ವೇಷಣೆ. ವಿವಾಹದಲ್ಲಿ ಸಮಯಬಂಧ 381

42. ಜರತ್ಕಾರುವಿನ ವಿವಾಹ, ಪತ್ನಿಯ ಗರ್ಭೋತ್ಪತ್ತಿ ಮತ್ತು ವ್ಯಾಜದಿಂದ ಪತ್ನಿಯ ಪರಿತ್ಯಾಗ 386

43. ತಂಗಿಯಿಂದ ವಾಸುಕಿಗೆ ವೃತ್ತಾಂತ ಕಥನ. ಗರ್ಭೋತ್ಪತ್ತಿ ಶ್ರವಣದಿಂದ ವಾಸುಕಿಯ ಹರ್ಷ. ಆಸ್ತೀಕನ ಉತ್ಪತ್ತಿ 396

44. ಪರೀಕ್ಷಿದ್ರಾಜನ ಮರಣವಿಷಯದಲ್ಲಿ ಮಂತ್ರಿಗಳನ್ನು ಕುರಿತು ಜನಮೇಜಯನ ಪ್ರಶ್ನೆ. ಮಂತ್ರಿಗಳ ಉತ್ತರ 401

45. ಮಂತ್ರಿಗಳ ವಚನವನ್ನು ಕೇಳಿ ತಕ್ಷಕನ ಮೇಲೆ ರಾಜನ ಕೋಪ ಮತ್ತು ಸರ್ಪಯಾಗ ಸಂಕಲ್ಪ 408

46. ಜನಮೇಜಯನಿಂದ ಋತ್ವಿಜರ ಮೂಲಕ ಸರ್ಪಯಾಗ ಪ್ರಾರಂಭ. ಅನೇಕ ಸರ್ಪಗಳ ಹೋಮ 416

47. ಸರ್ಪಸತ್ರದಲ್ಲಿ ಭಾಗವಹಿಸಿದ ಋತ್ವಿಜರ ನಾಮಕೀರ್ತನೆ. ವಾಸುಕಿಯಿಂದ ತನ್ನ ತಂಗಿಯನ್ನು ಕುರಿತು ಆಸ್ತೀಕನನ್ನು ಕಳುಹಿಸಿ ಸರ್ಪಯಾಗವನ್ನು ನಿಲ್ಲಿಸುವಂತೆ ಸೂಚನೆ 422

48. ಸರ್ಪಗಳನ್ನು ರಕ್ಷಿಸಲು ತಾಯಿಯಿಂದ ಆಸ್ತೀಕನಿಗೆ ಚೋದನೆ. ಆಸ್ತೀಕನಿಂದ ಸರ್ಪವೃತ್ತಾಂತವೇದನೆ 427

49. ಆಸ್ತೀಕನಿಂದ ಜನಮೇಜಯನ ಯಾಗದ ಪ್ರಶಂಸೆ 434

50. ಜನಮೇಜಯನ ಹರ್ಷ. ಬ್ರಾಹ್ಮಣವಚನದಂತೆ ಆಸ್ತೀಕನಿಗೆ ಸರ್ಪಯಾಗವಿರಾಮ ವರದಾನ 440

51. ಸರ್ಪಸತ್ರದಲ್ಲಿ ದಗ್ಧರಾದ ಸರ್ಪಗಳ ನಾಮಕೀರ್ತನೆ 448

52. ಸರ್ಪಸತ್ರ ಸಮಾಪ್ತಿ. ಆಸ್ತೀಕನಿಂದ ಸರ್ಪಗಳಿಗೆ ವರದಾನ 452

53. ಭಾರತ ಕಥೆಯನ್ನು ಹೇಳಲು ಸೂತರ ಪ್ರತಿಜ್ಞೆ, ವ್ಯಾಸರಿಂದ ವೈಶಂಪಾಯನರಿಗೆ ಭಾರತಕಥೆಯನ್ನು ಹೇಳಲು ಪ್ರೇರಣೆ 459

54. ವೈಶಂಪಾಯನರಿಂದ ಸಂಕ್ಷೇಪವಾಗಿ ಭಾರತಕಥಾ ನಿರೂಪಣೆ 466

55. ಭಾರತಪ್ರಶಂಸೆ ಮತ್ತು ಭಾರತಶ್ರವಣದ ಫಲನಿರೂಪಣೆ 477

56. ಪುರುವಂಶ ನಿರೂಪಣೆ 488
57. ಉಪರಿಚರೋಪಾಖ್ಯಾನ ಮತ್ತು ವೇದವ್ಯಾಸದೇವರ ಪ್ರಾದುರ್ಭಾವ 518
58. ಸಂಕ್ಷೇಪವಾಗಿ ಭೀಷ್ಮರ ಮತ್ತು ಪಾಂಡವರ ಜನ್ಮಕಥನ 557
59. ಭೂಭಾರ ಹರಣವನ್ನು ಮಾಡಲು ಅವತಾರ ಮಾಡುವಂತೆ ನಾರಾಯಣನಲ್ಲಿ ಇಂದ್ರನ ಪ್ರಾರ್ಥನೆ 565
60. ಅದಿತಿ ಮೊದಲಾದ ದಕ್ಷಕನ್ಯೆಯರ ವಂಶದ ಕಥನ 576
61. ಋಷ್ಯಾದಿ ವಂಶಕಥನ 586
62. ಭೂಮಿಯಲ್ಲಿ ದೇವತೆಗಳ ಮತ್ತು ದಾನವರ ಅಂಶಾವತರಣ ಕಥನ 601
63. ಸಿಂಹಾವಲೋಕನ ನ್ಯಾಯದಿಂದ ಪುನಃ ಪೂರುವಂಶ ಕಥನ 623

—0—

ಮಹಾಭಾರತ

ಆದಿಪರ್ವ

೧. ಅನುಕ್ರಮಣಿಕಾಪರ್ವ

ಒಂದನೆಯ ಅಧ್ಯಾಯ

ನಾರಾಯಣಂ ಸುರುಗುರುಂ ಜಗದೇಕನಾಥಂ
ಭಕ್ತಪ್ರಿಯಂ ಸಕಲಲೋಕನಮಸ್ಕೃತಂ ಚ ।
ತ್ರೈಗುಣ್ಯವರ್ಜಿತಮಜಂ ವಿಭುಮಾದ್ಯಮೀಶಂ
ವಂದೇ ಭವಘ್ನಮಮರಾಸುರಸಿದ್ಧವಂದ್ಯಮ್ ॥೧॥

ದೇವತೆಗಳಿಗೆ ಗುರುವಾದ ಜಗತ್ತಿಗೆ ಮುಖ್ಯನಾದ ನಾಥನಾದ ಭಕ್ತಪ್ರಿಯನಾದ, ಎಲ್ಲ ಲೋಕಗಳಿಂದಲೂ ನಮಸ್ಕರಿಸಲ್ಪಡುವ, ಸತ್ವರಜಸ್ತಮೋಗುಣರಹಿತನಾದ, ಜನನ ರಹಿತನಾದ, ವ್ಯಾಪ್ತನಾದ, ಅನಾದಿಯಾದ, ಸಮರ್ಥನಾದ. ಸಂಸಾರವನ್ನು ಪರಿಹಾರ ಮಾಡುವಂತಹ ಉತ್ತಮನಾದ, ದೇವತೆಗಳಿಂದಲೂ, ಅಸುರರಿಂದಲೂ, ಸಿದ್ಧರಿಂದಲೂ ವಂದ್ಯನಾದ ನಾರಾಯಣನಿಗೆ ನಮಸ್ಕಾರವನ್ನು ಮಾಡುತ್ತೇನೆ.

ಈ ಶ್ಲೋಕವು ಪ್ರಾಚೀನ ಹಸ್ತಪ್ರತಿಗಳಲ್ಲಿ ಮಂಗಳ ಪದ್ಯವಾಗಿದೆ. 'ನ ಪೃಥಕ್ ಮಂಗಳಾಚರಣಂ ಚ' ಎಂಬ ಲಕ್ಷಾಲಂಕಾರ ವಾಕ್ಯವು ತಾತ್ಪರ್ಯ ನಿರ್ಣಯದ ಭಾವಪ್ರಕಾಶಿಕಾ ವ್ಯಾಖ್ಯಾನಕ್ಕೆ ವಿರುದ್ಧವಾಗಿರುವುದರಿಂದ ಪ್ರಕ್ಷಿಪ್ತವೆನ್ನಬಹುದು.

ಕೃಷ್ಣೋ ಯಜ್ಞೈರಿಜ್ಯತೇ ಸೋಮಪೂತೈಃ ।
ಕೃಷ್ಣೋ ವೀರೈರಿಜ್ಯತೇ ವಿಕ್ರಮದ್ಭಿಃ ।
ಕೃಷ್ಣೋ ವನ್ಯೈರಿಜ್ಯತೇ ಸಮ್ಮ್ರಶಾನೈಃ
ಕೃಷ್ಣೋ ಮುಕ್ತೈರಿಜ್ಯತೇ ವೀತಮೋಹೈಃ ॥೨॥

ಸೋಮರಸದಿಂದ ಪವಿತ್ರವಾದ ಯಜ್ಞಗಳಲ್ಲಿ ಕೃಷ್ಣನೇ ಪೂಜಿಸಲ್ಪಡುತ್ತಾನೆ. ಪರಾಕ್ರಮಶಾಲಿಗಳಾದ ವೀರರಿಂದ ಕೃಷ್ಣನೇ (ಧರ್ಮ ಯುದ್ಧಾದಿಗಳಲ್ಲಿ) ಪೂಜಿಸಲ್ಪಡುತ್ತಾನೆ. ಕೃಷ್ಣನೇ ವಿಮರ್ಶೆಮಾಡುವ ವಾನಪ್ರಸ್ಥರಿಂದ ಪೂಜಿಸಲ್ಪಡುತ್ತಾನೆ. ಕೃಷ್ಣನೇ ಮೋಹಾದಿದೋಷ ದೂರರಾದ ಮುಕ್ತರಿಂದಲೂ ಪೂಜಿಸಲ್ಪಡುತ್ತಾನೆ.

ಸೃಷ್ಟಾ ಬ್ರಹ್ಮಾದಯೋ ದೇವಾ ನಿಹತಾ ಯೇನ ದಾನವಾಃ ।
ತಸ್ಮೈ ದೇವಾದಿದೇವಾಯ ನಮಸ್ತೇ ಶಾರ್ಙ್ಗಧಾರಿಣೇ ॥೩॥

ಯಾವನಿಂದ ಬ್ರಹ್ಮಾದಿದೇವತೆಗಳು ಸೃಷ್ಟರಾದರೋ ಮತ್ತು ದಾನವರು ನಿಹತರಾದರೋ ಅಂತಹ ದೇವಾದಿದೇವನಾದ ಶಾರ್ಙ್ಗಧಾರಿಯಾದ ವಿಷ್ಣುವಿಗೆ ನಮಸ್ಕಾರ.

ಬ್ರಹ್ಮಾದಿದೇವತೆಗಳ ಸೃಷ್ಟಿಎಂದರೆ ಆವರಿಗೆ ಮೋಕ್ಷವನ್ನು ಕೊಟ್ಟುಶಾಶ್ವತವಾದ ಸುಖದಲ್ಲಿಡುವುದು. ದಾನವರ ಸಂಹಾರವೆಂದರೆ ಅವರನ್ನು ತಮಸ್ಸೆಂಬ ನಿತ್ಯನರಕದಲ್ಲಿಟ್ಟುಶಾಶ್ವತವಾದ ದುಃಖವನ್ನು ಕೊಡುವುದು.

ನಾರಾಯಣಂ ನಮಸ್ಕೃತ್ಯ ನರಂ ಚೈವ ನರೋತ್ತಮಮ್ ।
ದೇವೀಂ ಸರಸ್ವತೀಂ ವ್ಯಾಸಂ ತತೋ ಜಯಮುದೀರಯೇ ॥೪॥

ನಾರಾಯಣನನ್ನು ನರನನ್ನು ನರೋತ್ತಮನಾದ ವಾಯುವನ್ನು ಲಕ್ಷ್ಮಿಯನ್ನು ಸರಸ್ವತಿಯನ್ನು ನಮಸ್ಕರಿಸಿ ಜಯ ಎಂಬ ಹೆಸರಿನ ಶ್ರೀಮಹಾಭಾರತವನ್ನು ಹೇಳುತ್ತೇನೆ.

ನಾರಾಯಣನು ಈ ಗ್ರಂಥ ಪ್ರತಿಪಾದ್ಯನಾದವನು. ನರ ಎಂದರೆ ಶೇಷ, ಎಲ್ಲ ಪೌರುಷೇಯಗ್ರಂಥಗಳಿಗೆ ಆವನು ಅಭಿಮಾನಿಯಾದ್ದರಿಂದ ಮತ್ತು ಉಪಸಾಧಕನಾದುದರಿಂದ ಆವನಿಗೆ ನಮಸ್ಕಾರ. ನರೋತ್ತಮ ಎಂದರೆ ವಾಯುದೇವರು. ಸಾಧಕೋತ್ತಮರಾದ್ದರಿಂದ ಅವರಿಗೆ ನಮಸ್ಕಾರ. ದೇವಿ ಎಂದರೆ

ಭಾಗ್ಯದೇವತೆಯಾದ ಲಕ್ಷ್ಮಿ, ಆವಳಿಗೆ ನಮಸ್ಕಾರ. ಸರಸ್ವತಿಯು ವಾಗಭಿಮಾನಿ, ಆವಳಿಗೆ ನಮಸ್ಕಾರ. ವ್ಯಾಸರು ಗ್ರಂಥಕರ್ತೃಗಳು ಆವರಿಗೂ ನಮಸ್ಕಾರ.

ರೋಮಹರ್ಷಣಪುತ್ರ ಉಗ್ರಶ್ರವಾಃ ಸೂತಃ ಪೌರಾಣಿಕೋ
ನೈಮಿಶಾರಣ್ಯೇ ।
ಶೌನಕಸ್ಯ ಕುಲಪತೇರ್ದ್ವಾದಶವಾರ್ಷಿಕೇ ಸತ್ರೇ ।
ಸಮಾಸೀನಾನಭ್ಯಗಚ್ಛದ್ ಬ್ರಹ್ಮರ್ಷೀನ್ ಸಂಶಿತವ್ರತಾನ್ ॥೫॥

ರೋಮಹರ್ಷಣರ ಪುತ್ರರಾದ ಪುರಾಣವಕ್ತೃಗಳಾದ ಉಗ್ರಶ್ರವ ಎಂಬ ಹೆಸರಿನ ಸೂತರು ನೈಮಿಶಾರಣ್ಯದಲ್ಲಿ ಕುಲಪತಿಗಳಾದ ಶೌನಕರ ಹನ್ನೆರಡುವರ್ಷ ಪರ್ಯಂತದ ಸತ್ರಯಾಗದಲ್ಲಿ ಆಸೀನರಾದಂತಹ ಮಹಾವ್ರತಶೀಲರಾದಂತಹ ಬ್ರಹ್ಮರ್ಷಿಗಳ ಸಮೀಪಕ್ಕೆ ಬಂದರು.

ವಿನಯಾವನತೋ ಭೂತ್ವಾ ಕದಾಚಿತ್ ಸೂತನಂದನಃ ।
ತಮಾಶ್ರಮಮನುಪ್ರಾಪ್ಯ ನೈಮಿಶಾರಣ್ಯವಾಸಿನಃ ।
ಉವಾಚ ತಾನೃಷೀನ್ ಸರ್ವಾನ್ ಧನ್ಯೋ ವೋಽಸ್ಮ್ಯದ್ಯ ದರ್ಶನಾತ್ ॥೬॥

ಸೂತ ಪುತ್ರರಾದ ಆವರು ವಿನಯದಿಂದ ಬಾಗಿದವರಾಗಿ ಆವರನ್ನು ನೋಡಿದರು. ಹೀಗೊಮ್ಮೆ ಆವರು ನೈಮಿಶಾರಣ್ಯಕ್ಕೆ ಬಂದು ನೈಮಿಶಾರಣ್ಯವಾಸಿಗಳಾದ ಆ ಎಲ್ಲ ಋಷಿಗಳನ್ನು ಕುರಿತು ನಿಮ್ಮ ದರ್ಶನದಿಂದ ನಾನು ಧನ್ಯನಾಗಿದ್ದೇನೆ ಎಂದು ಹೇಳಿದರು.

ವೇದ ವೈಯಾಸಿಕೀಃ ಸರ್ವಾಃ ಕಥಾ ಧರ್ಮಾರ್ಥಸಂಹಿತಾಃ ।
ವಕ್ಷ್ಯಾಮಿ ವೋ ದ್ವಿಜಶ್ರೇಷ್ಠಾಃ ಶೃಣ್ವಂತ್ವದ್ಯ ತಪೋಧನಾಃ ॥೭॥

ನಾನು ವೇದವ್ಯಾಸದೇವರು ಹೇಳಿದಂತಹ ಧರ್ಮಾರ್ಥಯುಕ್ತವಾದ ಎಲ್ಲಾ ಕಥೆಗಳನ್ನು ತಿಳಿದಿದ್ದೇನೆ. ಮುನಿಶ್ರೇಷ್ಠರೇ ಮತ್ತು ತಪೋಧನರೇ ಆದನ್ನು ಕೇಳಿ. ನಾನು ಈದಿನ ನಿಮಗೆ ಆದನ್ನು ಹೇಳುತ್ತೇನೆ.

ತಸ್ಯ ತದ್ವಚನಂ ಶ್ರುತ್ವಾ ನೈಮಿಶಾರಣ್ಯವಾಸಿನಃ ।
ಚಿತ್ರಾಃ ಶ್ರೋತುಂ ಕಥಾಸ್ತತ್ರ ಪರಿವವ್ರುಃ ಸಮಂತತಃ ॥೮॥

ಆವರ ಆ ಮಾತನ್ನು ಕೇಳಿ ನೈಮಿಷಾರಣ್ಯವಾಸಿಗಳಾದ ಎಲ್ಲರೂ ವಿಚಿತ್ರವಾದ ಕಥೆಗಳನ್ನು ಕೇಳಲು ಆವರ ಸುತ್ತಲೂ ನೆರೆದರು.

ಅಭಿವಾದ್ಯ ಮುನೀಂಸ್ತಾಂಸ್ತು ಸರ್ವಾನೇವ ಕೃತಾಂಜಲಿಃ ।
ಅಪೃಚ್ಛತ್ ಸ ತಪೋವೃದ್ಧಿಂ ಸದ್ಭಿಶ್ಚೈವಾಭಿನಂದಿತಃ ॥೯॥

ಉಗ್ರಶ್ರವಸ್ಸರಾದರೋ ಆವರೆಲ್ಲರಿಗೂ ಕೈಗಳನ್ನು ಮುಗಿದು ಎಲ್ಲರಿಗೂ ನಮಸ್ಕಾರವನ್ನು ಮಾಡಿ ಆ ಸಜ್ಜನರೆಲ್ಲರಿಂದಲೂ ಅಭಿನಂದಿತರಾಗಿ ಅವರ ತಪಸ್ಸಿನ ವೃದ್ಧಿಯನ್ನು ವಿಚಾರಿಸಿದರು.

ಅಥ ತೇಷೂಪವಿಷ್ಟೇಷು ಸರ್ವೇಷ್ವೇವ ತಪಸ್ವಿಷು ।
ನಿರ್ದಿಷ್ಟಮಾಸನಂ ಭೇಜೇ ವಿನಯಾದ್ರೋಮಹರ್ಷಣಿಃ ॥೧೦॥

ಆ ಎಲ್ಲ ತಪಸ್ವಿಗಳು ಕುಳಿತುಕೊಂಡ ಮೇಲೆ ರೋಮಹರ್ಷಣರ ಪುತ್ರರಾದ ಉಗ್ರಶ್ರವರು ವಿನಯದಿಂದ ತಮಗೆ ನಿರ್ದಿಷ್ಟವಾದ ಆಸನವನ್ನು ಸ್ವೀಕರಿಸಿದರು.

ಸುಖಾಸೀನಂ ತತಸ್ತಂ ತು ವಿಶ್ರಾಂತಮುಪಲಕ್ಷ್ಯ ಚ ।
ಅಥಾಪಚ್ಛದೃಷಿಸ್ತತ್ರ ಕಶ್ಚಿತ್ ಪ್ರಸ್ತಾವಯನ್ ಕಥಾಃ ॥೧೧॥

ವಿಶ್ರಾಂತಿಯನ್ನು ಪಡೆದು ತಮ್ಮ ಆಸನದಲ್ಲಿ ಸುಖವಾಗಿ ಕುಳಿತಿದ್ದ ಸೂತರನ್ನು ಗಮನಿಸಿ ಆ ಋಷಿಗಳ ಮಧ್ಯೆ ಒಬ್ಬರು ಕಥೆಗಳನ್ನು ಪ್ರಸ್ತಾವ ಮಾಡುವುದಕ್ಕಾಗಿ ಸೂತರನ್ನು ಪ್ರಶ್ನಿಸಿದರು.

ಕುತ ಆಗಮ್ಯತೇ ಸೌತೇ ಕ್ವ ವಾऽಯಂ ವಿಹೃತಸ್ತ್ವಯಾ ।
ಕಾಲಃ ಕಮಲಪತ್ರಾಕ್ಷ ಶಂಸೈತತ್ ಪೃಚ್ಛತೋ ಮಮ ॥೧೨॥

ಸೂತಪುತ್ರರೇ ನೀವು ಎಲ್ಲಿಂದ ಬರುತ್ತಿದ್ದೀರಿ? ಕಮಲನಯನರೇ! ಇಲ್ಲಿಯವರೆಗೆ ಎಲ್ಲಿ ವಿಹರಿಸಿದಿರಿ? ಈ ಪ್ರಶ್ನೆಯನ್ನು ಕೇಳುವ ನನಗೆ ಉತ್ತರಿಸಿರಿ.

ಸೂತಃ

ಜನಮೇಜಯಸ್ಯ ರಾಜರ್ಷೇಃ ಸರ್ಪಸತ್ರೇ ಮಹಾತ್ಮನಃ ।
ಸಮೀಪೇ ಪಾರ್ಥಿವೇಂದ್ರಸ್ಯ ಸಮ್ಯಕ್ ಪಾರಿಕ್ಷಿತಸ್ಯ ಚ ॥೧೩॥

ಕೃಷ್ಣದ್ವೈಪಾಯನಪ್ರೋಕ್ತಾಃ ಸುಪುಣ್ಯಾ ವಿವಿಧಾಃ ಕಥಾಃ ।
ಕಥಿತಾಶ್ಚಾಪಿ ವಿಧಿವದ್ ಯಾ ವೈಶಂಪಾಯನೇನ ವೈ ॥೧೪॥

ನಾನು ಪರೀಕ್ಷಿತನ ಮಗನಾದ ರಾಜರ್ಷಿಯಾದ ಮಹಾತ್ಮನಾದ ರಾಜಶ್ರೇಷ್ಠನಾದ ಜನಮೇಜಯನ ಸರ್ಪಯಾಗದಲ್ಲಿ ಕೃಷ್ಣದ್ವೈಪಾಯನರಾದ ವ್ಯಾಸರು ಹೇಳಿದ ವಿವಿಧವಾದ ಪುಣ್ಯಕಥೆಗಳನ್ನೂ ಹಾಗೆಯೇ ವೈಶಂಪಾಯನರು ಹೇಳಿದ ಪುಣ್ಯ ಕಥೆಗಳನ್ನೂ ಚೆನ್ನಾಗಿ ವಿಧಿವತ್ತಾಗಿ ಕೇಳಿದೆ.

ಶ್ರುತ್ವಾಽಹಂ ತಾ ವಿಚಿತ್ರಾರ್ಥಾ ಮಹಾಭಾರತಸಂಶ್ರಿತಾಃ ।
ಬಹೂನಿ ಸಂಪರಿಕ್ರಮ್ಯ ತೀರ್ಥಾನ್ಯಾಯತನಾನಿ ಚ ॥೧೫॥

ನಾನು ಮಹಾಭಾರತವನ್ನು ಆಧರಿಸಿದ ಆ ವಿಚಿತ್ರವಾದ ಕಥೆಗಳನ್ನು ಕೇಳಿ ಅನೇಕ ತೀರ್ಥಗಳನ್ನು ಕ್ಷೇತ್ರಗಳನ್ನು ಸಂಚರಿಸಿದೆ.

ಸಮಂತಪಂಚಕಂ ನಾಮ ಪುಣ್ಯಂ ದ್ವಿಜನಿಷೇವಿತಮ್ ।
ಗತವಾನಸ್ಮಿ ತಂ ದೇಶಂ ಯುದ್ಧಂ ಯತ್ರಾಭವತ್ ಪುರಾ ॥೧೬॥

ಕುರೂಣಾಂ ಪಾಂಡವಾನಾಂ ಚ ಸರ್ವೇಷಾಂ ಚ ಮಹೀಕ್ಷಿತಾಮ್ ।
ದಿದೃಕ್ಷುರಾಗತಸ್ತಸ್ಮಾತ್ ಸಮೀಪಂ ಭವತಾಮಿಹ ॥೧೭॥

ನಾನು ಬ್ರಾಹ್ಮಣರಿಂದ ಸೇವಿತವಾದ ಸಮಂತಪಂಚಕ ಎಂಬ ಪುಣ್ಯಕ್ಷೇತ್ರಕ್ಕೆ ಹೋದೆನು. ಆ ಸ್ಥಳದಲ್ಲಿ ಹಿಂದೆ ಮಹಾಭಾರತಯುದ್ಧವು ನಡೆದಿತ್ತಷ್ಟೆ? ಕೌರವರಿಗೂ ಪಾಂಡವರಿಗೂ ಮತ್ತು ಉಳಿದ ರಾಜರಿಗೂ ಯುದ್ಧನಡೆದ ಆ ಸ್ಥಳವನ್ನು ನೋಡಿ ನಿಮ್ಮನ್ನು ನೋಡುವ ಆಸೆಯಿಂದ ಅಲ್ಲಿಂದ ನಿಮ್ಮ ಸಮೀಪಕ್ಕೆ ಬಂದಿದ್ದೇನೆ.

ಆಯುಷ್ಮಂತಃ ಸರ್ವ ಏವ ಬ್ರಹ್ಮಭೂತಾ ಹಿ ಮೇ ಮತಾಃ ।
ಅಸ್ಮಿನ್ ಯಜ್ಞೇಮಹಾಭಾಗಾಃ ಸೂರ್ಯಪಾವಕವರ್ಚಸಃ ॥೧೮॥

ಪೂಜ್ಯರಾದ ನೀವೆಲ್ಲರೂ ಯಾವಾಗಲೂ ಮನಸ್ಸನ್ನು ದೇವರಲ್ಲಿಯೇ ಇಟ್ಟಿರುವವರು ಎಂದು ನಂಬಿದ್ದೇನೆ. ಸೂರ್ಯ ಮತ್ತು ಅಗ್ನಿಗೆ ಸಮಾನವಾದ ಕಾಂತಿಯುಳ್ಳ ಮಹಾನುಭಾವರಾದ ನೀವೆಲ್ಲರೂ ಈ ಯಜ್ಞದಲ್ಲಿ ಭಾಗವಹಿಸುತ್ತಿದ್ದೀರಿ.

ಕೃತಾಭಿಷೇಕಾಃ ಶುಚಯಃ ಕೃತಜಪ್ಯಾ ಹುತಾಗ್ನಯಃ ।
ಭವಂತ ಆಸತೇ ಸ್ವಸ್ಥಾ ಬ್ರವೀಮಿ ಕಿಮಹಂ ದ್ವಿಜಾಃ ॥೧೯॥

ನೀವೆಲ್ಲರೂ ಸ್ನಾನವನ್ನು ಮಾಡಿ, ಜಪವನ್ನು ಮಾಡಿ ಅಗ್ನಿಹೋತ್ರವನ್ನು ಮುಗಿಸಿ ಶುದ್ಧರಾಗಿ ಸ್ವಸ್ಥವಾದ ಮನಸ್ಸಿನಿಂದ ಕುಳಿತಿದ್ದೀರಿ. ಬ್ರಾಹ್ಮಣರೇ! ನಾನು ನಿಮಗೆ ಏನನ್ನು ಹೇಳಲಿ?

ಪುರಾಣಸಂಶ್ರಿತಾಃ ಪುಣ್ಯಾ ಕಥಾ ವಾ ಧರ್ಮಸಂಶ್ರಿತಾಃ ।
ಇತಿವೃತ್ತಂ ನರೇಂದ್ರಾಣಾಮೃಷೀಣಾಂ ಚ ಮಹಾತ್ಮನಾಮ್ ॥೨೦॥

ಪುರಾಣವನ್ನು ಆಧರಿಸಿದ ಪುಣ್ಯಕಥೆಗಳನ್ನು ಹೇಳಲೋ ಅಥವಾ ಧರ್ಮವನ್ನು ಆಧರಿಸಿದ ಕಥೆಗಳನ್ನು ಹೇಳಲೋ ಅಥವಾ ಮಹಾತ್ಮರಾದ ನರೇಂದ್ರರ ಮತ್ತು ಋಷಿಗಳ ಕಥೆಗಳನ್ನು ಹೇಳಲೋ?

ಋಷಯಃ

ದ್ವೈಪಾಯನೇನ ಯತ್ ಪ್ರೋಕ್ತಂ ಪುರಾಣಂ ಪರಮರ್ಷಿಣಾ ।
ಸುರೈರ್ಬ್ರಹ್ಮರ್ಷಿಭಿಶ್ಚೈವ ಶ್ರುತ್ವಾ ಯದಭಿಪೂಜಿತಮ್ ॥೨೧॥

ತಸ್ಯಾಖ್ಯಾನವರಿಷ್ಠಸ್ಯ ವಿಚಿತ್ರಪದಪರ್ವಣಃ ।
ಸೂಕ್ಷ್ಮಾರ್ಥನ್ಯಾಯಯುಕ್ತಸ್ಯ ವೇದಾರ್ಥೈರ್ಭೂಷಿತಸ್ಯ ಚ ॥೨೨॥

ಭಾರತಸ್ಯೇತಿಹಾಸಸ್ಯ ಪುಣ್ಯಾಂ ಗೂಢಾರ್ಥಸಂಯುತಾಮ್ ।
ಸಂಸ್ಕಾರೋಪಗತಾಂ ಬ್ರಾಹ್ಮೀಂ ನಾನಾಶಾಸ್ತ್ರೋಪಬೃಂಹಿತಾಮ್ ॥೨೩॥

ಜನಮೇಜಯಸ್ಯ ಯಾಂ ರಾಜ್ಞೋ ವೈಶಂಪಾಯನ ಉಕ್ತವಾನ್ ।
ಯಥಾವತ್ ತಾಂ ಮುನಿಸ್ತುಷ್ಟ್ಯಾ ಸತ್ರೇ ದ್ವೈಪಾಯನಾಜ್ಞಯಾ ॥೨೪॥

ವೇದೈಶ್ಚತುರ್ಭಿಃ ಸಮಿತಾಂ ವ್ಯಾಸಸ್ಯಾದ್ಭುತಕರ್ಮಣಃ ।
ಸಂಹಿತಾಂ ಶ್ರೋತುಮಿಚ್ಛಾಮೋ ಧರ್ಮ್ಯಾಂ ಪಾಪಭಯಾಪಹಾಮ್ ॥

ಪರಮ ಋಷಿಗಳಾದ ವೇದವ್ಯಾಸರು ಹೇಳಿದ ಪುರಾಣವನ್ನು ದೇವತೆಗಳೂ ಬ್ರಹ್ಮಋಷಿಗಳೂ ಕೇಳಿ ಸನ್ಮಾನಿಸಿದ್ದಾರಷ್ಟೆ. ಆ ಆಖ್ಯಾನವು ಬಹಳ ಶ್ರೇಷ್ಠವಾದುದು. ವಿಚಿತ್ರವಾದ ಪದಪರ್ವಗಳಿಂದ ಕೂಡಿದುದು. ಸೂಕ್ಷ್ಮವಾದ ಅರ್ಥಗಳನ್ನು ಮತ್ತು ನ್ಯಾಯಗಳನ್ನು ಒಳಗೊಂಡುದುದು ಮತ್ತು ವೇದಾರ್ಥಗಳಿಂದ ಭೂಷಿತವಾದುದು. ಅಂತಹ ಮಹಾಭಾರತ ಇತಿಹಾಸವು ಪವಿತ್ರವಾದುದು ರಹಸ್ಯವಾದ ಅರ್ಥಗಳಿಂದ ಕೂಡಿದುದು. ಅನೇಕ ಶಾಸ್ತ್ರಗಳ ಪ್ರಮೇಯಗಳಿಂದ ಬೃಂಹಿತವಾದುದು. ವೇದಕ್ಕೆ ಸಮಾನವಾದುದು ಮತ್ತು ಅನೇಕ ಸಂಸ್ಕಾರಗಳಿಂದ ಕೂಡಿದುದು. ಆ ಕಥೆಯನ್ನು ವೈಶಂಪಾಯನರು ರಾಜನಾದ ಜನಮೇಜಯನಿಗೆ ಸತ್ರಯಾಗದಲ್ಲಿ ವೇದವ್ಯಾಸರ ಅಪ್ಪಣೆಯಂತೆ ಸಂತೋಷದಿಂದ ಯಥಾವತ್ತಾಗಿ ತಿಳಿಸಿದರಷ್ಟೆ? ನಾಲ್ಕುವೇದಗಳಿಗೂ

ಸಮಾನವಾದ ಎಲ್ಲ ಪಾಪಗಳನ್ನೂ ಭಯವನ್ನೂ ಪರಿಹರಿಸುವ ಧರ್ಮವನ್ನು ಅಭಿವೃದ್ಧಿಪಡಿಸುವ ಅದ್ಭುತ ಕರ್ಮವುಳ್ಳ ವ್ಯಾಸರು ರಚಿಸಿದ ಆ ಸಂಹಿತೆಯನ್ನು ನಾವು ಕೇಳಲು ಇಷ್ಟಪಡುತ್ತೇವೆ.

ಸೂತಃ

ಆದ್ಯಂ ಪುರುಷಮೀಶಾನಂ ಪುರುಹೂತಂ ಪುರುಷ್ಟುತಮ್ ।
ಋತಮೇಕಾಕ್ಷರಂ ಬ್ರಹ್ಮ ವ್ಯಕ್ತಾವ್ಯಕ್ತಂ ಸನಾತನಮ್ ॥೨೬॥

ಅಸಚ್ಚ ಸಚ್ಚೈವ ಚ ಯದ್ ವಿಶ್ವಂ ಸದಸತಃ ಪರಮ್ ।
ಪರಾವರಾಣಾಂ ಸ್ರಷ್ಟಾರಂ ಪುರಾಣಂ ಪರಮವ್ಯಯಮ್ ॥೨೭॥

ಮಂಗಲ್ಯಂ ಮಂಗಲಂ ವಿಷ್ಣುಂ ವರೇಣ್ಯಮನಘಂ ಶುಚಿಮ್ ।
ನಮಸ್ಕೃತ್ಯ ಹೃಷೀಕೇಶಂ ಚರಾಚರಗುರುಂ ಹರಿಮ್ ॥೨೮॥

ಮಹರ್ಷೇಃ ಸರ್ವಲೋಕೇಶಪೂಜಿತಸ್ಯ ಮಹಾತ್ಮನಃ ।
ಪ್ರವಕ್ಷ್ಯಾಮಿ ಮತಂ ಕೃತ್ಸ್ನಂ ವ್ಯಾಸಸ್ಯಾಮಿತತೇಜಸಃ ॥೨೯॥

ಜಗದಾದಿಯಲ್ಲಿ ಇರುವವನು, ಪುರುಷ ಶಬ್ದವಾಚ್ಯನು, ಸರ್ವಸಮರ್ಥನು, ಬಹಳವಾಗಿ ಸ್ತುತಿಸಲ್ಪಡುವವನು, ಅನೇಕ ಯಜ್ಞಗಳಲ್ಲಿ ಅರ್ಚಿಸಲ್ಪಡುವವನು. ಯಾವಾಗಲೂ ಏಕಪ್ರಕಾರನು. ಪ್ರಣವಪ್ರತಿಪಾದ್ಯನು, ಮೂಲರೂಪದಲ್ಲಿ ಅವ್ಯಕ್ತನಾದವನು ಅವತಾರರೂಪಗಳಲ್ಲಿ ವ್ಯಕ್ತನಾದವನು, ಅಥವಾ ಕೆಲವರಿಗೆ ವ್ಯಕ್ತ, ಕೆಲವರಿಗೆ ಅವ್ಯಕ್ತ, ವೇದಪ್ರತಿಪಾದ್ಯನು, ಕಾರ್ಯಕಾರಣಾತ್ಮಕವಾದ ಪ್ರಪಂಚಕ್ಕಿಂತ ಭಿನ್ನನಾದವನು, ದುರ್ಜನ ಮತ್ತು ಸಜ್ಜನರಿಗಿಂತಲೂ ಅತ್ಯಂತ ಭಿನ್ನನಾದವನು, ಪೂರ್ಣನಾದವನು, ಶ್ರೇಷ್ಠರಾದ ಬ್ರಹ್ಮಾದಿದೇವತೆಗಳನ್ನೂ ಕನಿಷ್ಠರಾದ ಮನುಷ್ಯಾದಿಗಳನ್ನೂ ಸೃಷ್ಟಿಮಾಡುವವನು, ಸರ್ವಾಂತರ್ಯಾಮಿಯು, ಸರ್ವೋತ್ತಮನು, ನಾಶರಹಿತನು, ಭಜಿಸುವವರಿಗೆ ಮಂಗಳವನ್ನು ಕೊಡುವವನು, ಸ್ವತಃ ಮಂಗಳರೂಪಿಯು, ಬಯಸಲ್ಪಡುವವರಲ್ಲಿ ಶ್ರೇಷ್ಠನಾದವನು, ದೋಷದೂರನು, ಶುಚಿಯು, ಸರ್ವೇಂದ್ರಿಯಗಳ ನಿಯಾಮಕನು, ಚರಾಚರವಾದ ಸಮಸ್ತಪ್ರಪಂಚಕ್ಕೆ ಗುರುವಾದವನು, ಮತ್ತು ಪಾಪ ಪರಿಹಾರಕನಾದ ವಿಷ್ಣುವನ್ನು ನಮಸ್ಕರಿಸಿ ಮಹಾ ತೇಜಸ್ಸುಳ್ಳ ಮಹಾತ್ಮರಾದ ಸರ್ವಲೋಕೇಶರಿಂದ ಪೂಜಿತರಾದ ಮಹರ್ಷಿಗಳಾದ ವೇದವ್ಯಾಸದೇವರ ಸಮಗ್ರವಾದ ಅಭಿಪ್ರಾಯವನ್ನು ತಿಳಿದು ನಾನು ಕಥೆಯನ್ನು ಹೇಳುತ್ತೇನೆ.

ನಮೋ ಭಗವತೇ ತಸ್ಮೈ ವ್ಯಾಸಾಯಾಮಿತತೇಜಸೇ ।
ಯಸ್ಯ ಪ್ರಸಾದಾದ್ ವಕ್ಷ್ಯಾಮಿ ನಾರಾಯಣಕಥಾಮಿಮಾಮ್ ॥೫೦॥

ಅಮಿತ ತೇಜಸ್ಸುಳ್ಳ, ಪೂರ್ಣಷಡ್ಗುಣೈಶ್ವರ್ಯಸಂಪನ್ನರಾದ, ವೇದವ್ಯಾಸದೇವರಿಗೆ ನಮಸ್ಕಾರ, ಅವರ ಅನುಗ್ರಹದಿಂದಲೇ ನಾನು ಈ ನಾರಾಯಣನ ಕಥೆಯನ್ನು ಹೇಳುವೆನು.

ಸರ್ವಾಶ್ರಮಾಭಿಗಮನಂ ಸರ್ವತೀರ್ಥಾವಗಾಹನಮ್ ।
ನ ತಥಾ ಫಲದಂ ಸೂತೇ[೧] ನಾರಾಯಣಕಥಾ ಯಥಾ ॥೫೧॥

ಎಲ್ಲಾ ಆಶ್ರಮಗಳಿಗೆ ಯಾತ್ರೆಯನ್ನು ಮಾಡಿದರೂ, ಎಲ್ಲಾ ತೀರ್ಥಗಳಲ್ಲಿ ಸ್ನಾನಮಾಡಿದರೂ ಸಹ ನಾರಾಯಣನ ಕಥೆಯನ್ನು ಕೇಳುವುದರಿಂದ ಉಂಟಾಗುವ ಫಲವು ಆವುಗಳಿಂದ ಎಂದೂ ದೊರೆಯುವುದಿಲ್ಲ.

[೧] ಸೂತೇ = ಫಲಂ ಪ್ರಸೂತೇ

ನಾಸ್ತಿ ನಾರಾಯಣಸಮಂ ನ ಭೂತಂ ನ ಭವಿಷ್ಯತಿ ।
ಏತೇನ ಸತ್ಯವಾಕ್ಯೇನ ಸರ್ವಾರ್ಥಾನ್ ಸಾಧಯಾಮ್ಯಹಮ್ ॥೫೨॥

ನಾರಾಯಣನಿಗೆ ಸಮನಾದ ವಸ್ತುವು ವರ್ತಮಾನ ಕಾಲದಲ್ಲಿ ಇಲ್ಲ. ಭೂತಕಾಲದಲ್ಲಿ ಇರಲಿಲ್ಲ ಮತ್ತು ಭವಿಷ್ಯತ್‌ಕಾಲದಲ್ಲಿ ಇರುವುದಿಲ್ಲ. ಈ ಒಂದು ಸತ್ಯವಾಕ್ಯವನ್ನು ಆಧರಿಸಿ ನಾನು ಎಲ್ಲಾ ಪ್ರಮೇಯಗಳನ್ನೂ ಸಾಧಿಸುತ್ತೇನೆ.

ಆಚಖ್ಯುಃ ಕವಯಃ ಕೇಚಿತ್ ಸಂಪ್ರತ್ಯಾಚಕ್ಷತೇ ಪರೇ ।
ಆಖ್ಯಾಸ್ಯಂತಿ ತಥೈವಾನ್ಯೇ ಇತಿಹಾಸಮಿಮಂ ಭುವಿ ॥೫೩॥

ಈ ಮಹಾಭಾರತ ಇತಿಹಾಸವನ್ನು ಹಿಂದಿನ ಜ್ಞಾನಿಗಳು ವ್ಯಾಖ್ಯಾನ ಮಾಡಿದರು. ಈಗಲೂ ಕೂಡ ವ್ಯಾಖ್ಯಾನ ಮಾಡುತ್ತಾರೆ, ಮುಂದೆಯೂ ಕೂಡ ಇನ್ನೂ ಅನೇಕರು ಭೂಮಿಯಲ್ಲಿ ವ್ಯಾಖ್ಯಾನ ಮಾಡುವರು.

ಇದಂ ತು ತ್ರಿಷು ಲೋಕೇಷು ಮಹಾಜ್ಞಾನಂ ಪ್ರತಿಷ್ಠಿತಮ್ ।
ವಿಸ್ತರೈಶ್ಚ ಸಮಾಸೈಶ್ಚ ಸಾಧ್ಯತೇಯದ್ ದ್ವಿಜಾತಿಭಿಃ ॥೫೪॥

ಇದು ಎಂದರೆ ಈ ಮಹಾಭಾರತವು ಮೂರುಲೋಕಗಳಲ್ಲಿಯೂ ಇರತಕ್ಕ ದೊಡ್ಡ ಜ್ಞಾನಸಾಧನವಾಗಿದೆ. ದ್ವಿಜರು ಇದನ್ನು ಸಂಕ್ಷೇಪವಾಗಿಯೂ ಮತ್ತು ವಿಸ್ತಾರವಾಗಿಯೂ ನಿರೂಪಿಸುತ್ತಾರೆ.

ಅಲಂಕೃತಂ ಶುಭೈ ಶಬ್ದೈಃ ಸಮಯೈ ರ್ದಿವ್ಯಮಾನುಷೈಃ ।
ಛಂದೋವೃತ್ತೈಶ್ಚ ವಿವಿಧೈರನ್ವಿತಂ ವಿದುಷಾಂ ಪ್ರಿಯಮ್ ॥೩೫॥

ಇದು ಪವಿತ್ರವಾದ ಶಬ್ದಗಳಿಂದಲೂ ದೇವತೆಗಳ ಹಾಗೂ ಮನುಷ್ಯರ ಅನೇಕ ಶಬ್ದನಿಯಮಗಳಿಂದಲೂ, ಅನೇಕವಿಧವಾದ ಛಂದೋಬದ್ಧ ವೃತ್ತಗಳಿಂದಲೂ ಅಲಂಕೃತವಾಗಿ ಜ್ಞಾನಿಗಳಿಗೆ ಅತಿಪ್ರಿಯವಾಗಿದೆ.

ತಪಸಾ ಬ್ರಹ್ಮಚರ್ಯೇಣ ವ್ಯಸ್ಯ ವೇದಂ ಸನಾತನಮ್ ।
ಇತಿಹಾಸಮಿಮಂ ಚಕ್ರೇ ಪುಣ್ಯಂ ಸತ್ಯವತೀಸುತಃ ॥೩೬॥

ಸತ್ಯವತಿಯ ಸುತರಾದ ವೇದವ್ಯಾಸರು ತಮ್ಮ ತಪಸ್ಸಿನ ಶಕ್ತಿಯಿಂದಲೂ ಮತ್ತು ಬ್ರಹ್ಮಚರ್ಯದಿಂದಲೂ ಸನಾತನವೇದವನ್ನು ವಿಭಾಗ ಮಾಡಿ ಅನಂತ ಪುಣ್ಯದಾಯಕವಾದ ಈ ಇತಿಹಾಸವನ್ನು ರಚಿಸಿದರು.

ಪುಣ್ಯೇಹಿಮವತಃ ಪಾದೇ ಮಧ್ಯೇ ಗಿರಿಗುಹಾಲಯೇ ।
ವಿಶೋಧ್ಯ ದೇಹಂ ಧರ್ಮಾತ್ಮಾ ದರ್ಭಸಂಸ್ತರಮಾಶ್ರಿತಃ ॥೩೭॥

ಶುಚಿಃ ಸನಿಯಮೋ ವ್ಯಾಸಃ ಶಾಂತಾತ್ಮಾ ತಪಸಿ ಸ್ಥಿತಃ ।
ಭಾರತಸ್ಯೇತಿಹಾಸಸ್ಯ ಧರ್ಮೇಣಾನ್ವೀಕ್ಷ್ಯ ತಾಂ ಗತಿಮ್ ।
ಪ್ರವಿಶ್ಯ ಯೋಗಂ ಜ್ಞಾನೇನ ಸೋಽಪಶ್ಯತ್ ಸರ್ವಮಂತತಃ ॥೩೮॥

ವೇದವ್ಯಾಸರು ಪವಿತ್ರವಾದ ಹಿಮಾಲಯದ ತಪ್ಪಲಲ್ಲಿ ತಮ್ಮ ಗುಹೆಯ ಮಧ್ಯದಲ್ಲಿ ದೇಹವನ್ನು ಶೋಧಿಸಿ ದರ್ಭಾಸನದ ಮೇಲೆ ಕುಳಿತು ಶುಚಿಯಾಗಿ, ನಿಯಮಬದ್ಧರಾಗಿ, ಸ್ವಸ್ಥಚಿತ್ತರಾಗಿ ಜ್ಞಾನದೃಷ್ಟಿಯಿಂದ ಈ ಭಾರತ ಇತಿಹಾಸದ ಸಮಗ್ರಗತಿಯನ್ನು ಧರ್ಮಶಕ್ತಿಯಿಂದ ಮತ್ತು ತಮ್ಮ ಯೋಗಶಕ್ತಿಯಿಂದ ಪೂರ್ಣವಾಗಿ ನೋಡಿದರು.

ನಿಷ್ಪ್ರಭೇಽಸ್ಮಿನ್ನಿರಾಲೋಕೇ ಸರ್ವತಸ್ತಮಸಾವೃತೇ ।
ಬೃಹದಂಡಮಭೂದೇಕಂ ಪ್ರಜಾನಾಂ ಬೀಜಮಕ್ಷಯಮ್ ॥೩೯॥

ಸೃಷ್ಟಿಗಿಂತ ಮುಂಚೆ ತಮಸ್ಸಿನಿಂದ ಆವೃತವಾಗಿದ್ದ ಪ್ರಕಾಶ ಶೂನ್ಯವಾಗಿದ್ದ ಈ ಆಕಾಶದಲ್ಲಿ ಎಲ್ಲ ಪ್ರಜೆಗಳ ಸೃಷ್ಟಿಗೆ ಕಾರಣವಾದ ಪ್ರವಾಹತಃ ನಿತ್ಯವಾದ ಬ್ರಹ್ಮಾಂಡವು ಉದಯಿಸಿತು.

ಯುಗಸ್ಯಾದಿನಿಮಿತ್ತಂ ತನ್ಮಹಾದಿವ್ಯಂ ಪ್ರಚಕ್ಷತೇ ।
ಯಸ್ಮಿಂಸ್ತು ಶ್ರೂಯತೇ ನಿತ್ಯಂ ಸೌತಿ ಬ್ರಹ್ಮ ಸನಾತನಮ್ ॥೪೦॥

ಇದನ್ನು ಕೃತ ಮೊದಲಾದ ಯುಗಗಳ ನಿಮಿತ್ತವೆಂದು ಹೇಳುತ್ತಾರೆ. ಇದು ತುಂಬಾ ದೊಡ್ಡದಾದುದು ಮತ್ತು ದಿವ್ಯವಾದುದು ಇದರೊಳಗೆ ಜಗತ್ ಸೃಷ್ಟಿಕರ್ತನಾದ ವೇದಪ್ರತಿಪಾದ್ಯನಾದ ನಾರಾಯಣನು (ವಿರಾಟ್‌ರೂಪದಿಂದ) ಇರುವನೆಂದು ಹೇಳಲ್ಪಡುತ್ತದೆ.

ಅಸಚ್ಚಾಪ್ಯನುಜಾತಂ ಚ ಸರ್ವತ್ರ ಸಮತಾಂ ಗತಮ್ ।
ಅವ್ಯಕ್ತಂ ಕಾರಣಂ ಸೂಕ್ಷ್ಮಂ ಯತ್ತತ್ ಸದಸದಾತ್ಮಕಮ್ ।
ಯಸ್ಮಿನ್ ಪಿತಾಮಹೋ ಜಜ್ಞೇ ಪ್ರಭುರೇಕಃ ಪ್ರಜಾಪತಿಃ ॥೪೧॥

ಆ ಪರಮಾತ್ಮನು ಪ್ರಳಯಕಾಲದಲ್ಲಿ ಇಲ್ಲದಿದ್ದ ಜಗತ್ತನ್ನು ಅನಂತರ ಸೃಷ್ಟಿಮಾಡಿದವನು. ಸರ್ವತ್ರಸಮನಾದವನು ಅವನು ಅವ್ಯಕ್ತನಾಗಿ ಜಗತ್ತಿಗೆ ಕಾರಣನಾಗಿದ್ದಾನೆ. ಅವನು ಸರ್ವ ಜೀವರ ಅಂತರ್ಯಾಮಿಯಾಗಿದ್ದಾನೆ. ಎಲ್ಲ ಪ್ರಜೆಗಳಿಗೂ ಒಡೆಯನಾದ ಚತುರ್ಮುಖಬ್ರಹ್ಮನು ಅವನಿಂದ ಜನಿಸಿದನು.

ಬ್ರಹ್ಮಾ ಸುರಗುರುಃ ಸ್ಥಾಣುರ್ಮನುಶ್ಚ ಪರಮೇಷ್ಠಿಜಃ ।
ಪ್ರಚೇತಸಸ್ತಥಾ ದಕ್ಷೋ ದಕ್ಷಪುತ್ರಾಶ್ಚ ಸಪ್ತ ಯೇ ॥೪೨॥

ತತಃ ಪ್ರಜಾನಾಂ ಪತಯಃ ಪ್ರಾಭವನ್ನೇಕವಿಂಶತಿಃ ।
ಪುರುಷಶ್ಚಾಪ್ರಮೇಯಾತ್ಮಾ ಯಂ ಸರ್ವಂ ಋಷಯೋ ವಿದುಃ ॥೪೩॥

ದೇವತೆಗಳ ಗುರುವಾದ ಬ್ರಹ್ಮದೇವರು, ರುದ್ರ, ಬ್ರಹ್ಮದೇವರ ಮಗನಾದ ಸ್ವಾಯಂಭುವ ಮನು, ಪ್ರಚೇತಸರ ಮಗನಾದ ದಕ್ಷ ಮತ್ತು ದಕ್ಷಪುತ್ರರು ಏಳುಮಂದಿ ಇವರಲ್ಲದೆ ಪ್ರಜೆಗಳಲ್ಲಿ ಶ್ರೇಷ್ಠರಾದ ಇಪ್ಪತ್ತೊಂದು ಮಂದಿ ಪ್ರಜಾಪತಿಗಳು ಅವನಿಂದಲೇ ಜನಿಸಿದರು.

ಉಳಿದ ಮನುಗಳು ಹನ್ನೆರಡುಮಂದಿ. ಲೋಕಪಾಲಕರಾದ ಇಂದ್ರಾದಿ ವಾಯು ಪರ್ಯಂತ ಆರುಮಂದಿ, ಉತ್ತರಾದಿಗಭಿಮಾನಿಯಾದ ಸೋಮ ಮತ್ತು ಕುಬೇರ ಎರಡುಮಂದಿ. ಅಧೋಲೋಕಾಭಿಮಾನಿಯಾದ ಶೇಷ ಒಬ್ಬ. ಹೀಗೆ ಒಟ್ಟು ಇಪ್ಪತ್ತೊಂದು ಮಂದಿ ಪ್ರಜಾಪತಿಗಳು.

ಅಪ್ರಮೇಯನಾದ ಸರ್ವವ್ಯಾಪ್ತನಾದ ಪುರುಷನಾಮಕಹರಿಯೂ ಸಹ ಅವನಿಂದಲೇ ಜನಿಸಿದನೆಂದು ಋಷಿಗಳು ಹೇಳುತ್ತಾರೆ.

ವಿಶ್ವೇದೇವಾಸ್ತಥಾದಿತ್ಯಾ ವಸವೋಽಥಾಶ್ವಿನಾವಪಿ ।
ಯಕ್ಷಾಃ ಸಾಧ್ಯಾಃ ಪಿಶಾಚಾಶ್ಚ ಗುಹ್ಯಕಾಃ ಪಿತರಸ್ತಥಾ ॥೪೪॥

ಸಪ್ತರ್ಷಯಶ್ಚ ವಿದ್ವಾಂಸಃ ಶಿಷ್ಟಾ ಬ್ರಹ್ಮರ್ಷಯಸ್ತಥಾ ।
ರಾಜರ್ಷಯಶ್ಚ ಬಹವಃ ಸಂಭೂತಾ ಭೂರಿತೇಜಸಃ ॥೪೫॥

ಹಾಗೆಯೇ ವಿಶ್ವೇದೇವತೆಗಳು, ಆದಿತ್ಯರು, ವಸುಗಳು, ಅಶ್ವಿನಿಗಳು, ಯಕ್ಷರು, ಸಾಧ್ಯರು, ಪಿಶಾಚಗಳು, ಗುಹ್ಯಕರು, ಪಿತೃಗಳು, ವಿದ್ವಾಂಸರಾದ ಸಪ್ತರ್ಷಿಗಳು, ಉಳಿದ ಬ್ರಹ್ಮರ್ಷಿಗಳು, ಮಹಾಪರಾಕ್ರಮಶಾಲಿಗಳಾದ ರಾಜರ್ಷಿಗಳು ಈ ಎಲ್ಲರೂ ಅವನಿಂದಲೇ ಜನಿಸಿದರು.

ಸಂವತ್ಸರರ್ತವೋ ಮಾಸಾಃ ಪಕ್ಷಾಹೋರಾತ್ರಯಃ ಕ್ರಮಾತ್ ।
ಯಚ್ಚಾನ್ಯದಪಿ ತತ್ಸರ್ವಂ ಸಂಭೂತಂ ಲೋಕಸಂಜ್ಞಿತಮ್ ॥೪೬॥

ಸಂವತ್ಸರ, ಋತುಗಳು, ಮಾಸಗಳು, ಪಕ್ಷಗಳು, ಅಹೋರಾತ್ರಿಗಳು ಮತ್ತು ಉಳಿದ ಜಗತ್ತೆಂದು ಕರೆಸಿಕೊಳ್ಳಲ್ಪಡುವ ಎಲ್ಲವೂ ಅವನಿಂದಲೇ ಜನಿಸಿದವು.

ಯದಿದಂ ದೃಶ್ಯತೇ ಕಿಂಚಿದ್ ಭೂತಂ ಸ್ಥಾವರಜಂಗಮಮ್ ।
ಪುನಃ ಸಂಕ್ಷಿಪ್ಯತೇ ಸರ್ವಂ ಜಗತ್ ಪ್ರಾಪ್ತೇ ಯುಗಕ್ಷಯೇ ॥೪೭॥

ನಮ್ಮ ಕಣ್ಣಿಗೆ ಕಾಣುತ್ತಿರುವ ಉತ್ಪನ್ನವಾದ ಈ ಚರಾಚರಾತ್ಮಕವಾದ ಜಗತ್ತು ಯುಗಾಂತಕಾಲವು ಸಮೀಪಿಸಿದಾಗ ಅವನಿಂದಲೇ ಪುನಃ ಸಂಹರಿಸಲ್ಪಡುತ್ತದೆ.

ಯಥರ್ತುಷ್ವೃತುಲಿಂಗಾನಿ ನಾನಾರೂಪಾಣಿ ಪರ್ಯಯೇ ।
ದೃಶ್ಯಂತೇ ತಾನಿತಾನ್ಯೇವ ತಥಾ ಭಾವಾ ಯುಗಾದಿಷು ॥೪೮॥

ಹೇಗೆ ಬೇರೆ ಬೇರೆ ಋತುಗಳಲ್ಲಿ ಆಯಾ ಋತುಗಳ ಚಿಹ್ನೆಗಳು ಪರ್ಯಾಯಕ್ರಮದಿಂದ ಸತತವಾಗಿ ಕಂಡುಬರುತ್ತವೆಯೋ ಹಾಗೆಯೇ ಕೃತಾದಿಯುಗಗಳಲ್ಲಿ ಎಲ್ಲ ಧರ್ಮಗಳೂ ಪರ್ಯಾಯವಾಗಿ ಹಾಗೆಯೇ ಬರುತ್ತವೆ.

ಏವಮೇತದನಾದ್ಯಂತಂ ಭೂತಸಂಘಾತಕಾರಕಮ್ ।
ಅನಾದಿನಿಧನಂ ಲೋಕೇ ಚಕ್ರಂ ಸಂಪರಿವರ್ತತೇ ॥೪೯॥

ಈ ಪ್ರಜೆಗಳ ಸಮೂಹಕ್ಕೆ ಕಾರಣವಾದ ಈ ಜಗಚ್ಚಕ್ರವು ಪ್ರವಾಹದ ರೀತಿಯಲ್ಲಿ ಆದಿ ಮತ್ತು ಅಂತ್ಯ ಶೂನ್ಯವಾಗಿದೆ. ಈ ಚಕ್ರವು ಯಾವಾಗಲೂ ತಿರುಗುತ್ತಿರುತ್ತದೆ.

ತ್ರಯಸ್ತ್ರಿಂಶತ್ ಸಹಸ್ರಾಣಿ ತ್ರಯಸ್ತ್ರಿಂಶಚ್ಛತಾನಿ ಚ ।
ತ್ರಯಸ್ತ್ರಿಂಶಚ್ಚ ದೇವಾನಾಂ ಸೃಷ್ಟಿಃ ಸಂಕ್ಷೇಪಲಕ್ಷಣಾ ॥೫೦॥

ದೇವತೆಗಳ ಸೃಷ್ಟಿಯನ್ನು ಸಂಕ್ಷೇಪವಾಗಿ ಹೇಳುವುದಾದರೆ ಮೂವತ್ತುಮೂರು ದೇವತೆಗಳು, ಮೂರುಸಾವಿರದ ಮುನ್ನೂರು ದೇವತೆಗಳು, ಮೂವತ್ತು ಮೂರು ಸಾವಿರ ದೇವತೆಗಳು ಮತ್ತು ಮೂವತ್ತುಮೂರು ಕೋಟಿ ದೇವತೆಗಳು ಎಂದು ಹೇಳಬೇಕು.

ಮೂವತ್ತಮೂರು ದೇವತೆಗಳು ಎಂದು ಹೇಳಿವಾಗ ಬ್ರಹ್ಮ, ವಿಷ್ಣು, ಮಹೇಶ್ವರರು, ದಶ ರುದ್ರರು, ಗರುಡ, ಏಕಾದಶ ಆದಿತ್ಯರು, ಅಷ್ಟ ವಸುಗಳು, ಹೀಗೆ ಒಟ್ಟು ಮೂವತ್ತಮೂರು. ಇದು ಅತಿ ಸಂಕ್ಷಿಪ್ತವಾದ ದೇವತೆಗಳ ಗಣನೆ ಅಥವಾ ದೇವರನ್ನು ಬಿಟ್ಟು ಬ್ರಹ್ಮ, ಗರುಡ ಮತ್ತು ಇಂದ್ರ ಈ ಮೂವರು, ಏಕಾದಶ ರುದ್ರರು, ದ್ವಾದಶ ಆದಿತ್ಯರು ಮತ್ತು ಅಷ್ಟವಸುಗಳು ಒಟ್ಟು ಮೂವತ್ತಮೂರು ಎಂದು ತಿಳಿಯಬೇಕು. ದೇವತೆಗಳ ಸೃಷ್ಟಿಯನ್ನು ಅತಿ ಸಂಕ್ಷೇಪವಾಗಿ ಹೇಳುವುದಾದರೆ ಮೂವತ್ತಮೂರು ಎಂದು. ಅತಿ ವಿಸ್ತಾರವಾಗಿ ಹೇಳುವುದಾದರೆ ಮೂವತ್ತಮೂರು ಕೋಟಿ ಎಂದು ತಿಳಿಯಬೇಕು.

ದಿವಸ್ಪುತ್ರೋಬೃಹದ್ಭಾನುಶ್ಚಕ್ಷುರಾತ್ಮಾ ವಿಭಾವಸುಃ ।
ಸವಿತಾ ಚ ಋಚೀಕೋऽರ್ಕೋ ಭಾನುರಾವಾಹಕೋ ರವಿಃ ।
ಪುತ್ರಾ ವಿವಸ್ವತಃ ಸರ್ವೇ ಮನುಸ್ತೇಷಾಮಥಾऽವರಃ ॥೫೧॥

ದಿವಸುತ್ರ , ಬೃಹದ್ಭಾನು, ಚಕ್ಷು, ಆತ್ಮ, ವಿಭಾವಸು, ಸವಿತೃ , ಋಚೀಕ, ಅರ್ಕ, ಭಾನು, ಆವಾಹಕ, ರವಿ ಈ ಹನ್ನೊಂದು ವಿವಸ್ವಂತನಾದ ಸೂರ್ಯನ ಮೂರ್ತಿಗಳು ಒಂದು ವಿವಕ್ಷೆಯಿಂದ ಸೂರ್ಯನ ಪುತ್ರರೂ ಸಹ. ವೈವಸ್ವತಮನುವು ಅವರೆಲ್ಲರಿಗಿಂತಲೂ ಚಿಕ್ಕವನು.

ದೇವಭ್ರಾಟ್ ತನಯಸ್ತಸ್ಯ ತಸ್ಮಾತ್ ಸುಭ್ರಾಡಿತಿ ಸ್ಮೃತಃ ।
ಸುಭ್ರಾಜಸ್ತು ತ್ರಯಃ ಪುತ್ರಾಃ ಪ್ರಜಾವಂತೋ ಬಹುಶ್ರುತಾಃ ।
ದಶಜ್ಯೋತಿಃ ಶತಜ್ಯೋತಿಃ ಸಹಸ್ರಜ್ಯೋತಿರಾತ್ಮವಾನ್ ॥೫೨॥

ದೇವಭ್ರಾಟ್ ಎಂಬುವನು ವೈವಸ್ವತಮನುವಿನ ಮಗ, ಆವನ ಮಗ ಸುಭ್ರಾಟ್, ಸುಭ್ರಾಜನಿಗೆ ಬಹುಶ್ರುತರಾದ ಅನೇಕಪ್ರಜೆಗಳನ್ನು ಹೊಂದಿದಂತಹ ಮೂರು ಜನ ಮಕ್ಕಳು. ಅವರ ಹೆಸರು ದಶಜ್ಯೋತಿ, ಶತಜ್ಯೋತಿ, ಮತ್ತು ಸಹಸ್ರಜ್ಯೋತಿ ಎಂದು. ಅವರೆಲ್ಲರೂ ಭಗವನ್ನಿಷ್ಠರಾದವರು.

ದಶಪುತ್ರಸಹಸ್ರಾಣಿ ದಶಜ್ಯೋತೇರ್ಮಹಾತ್ಮನಃ ।
ತತೋ ದಶಗುಣಾಶ್ಚಾನ್ಯೇ ಶತಜ್ಯೋತೇರಿಹಾತ್ಮಜಾಃ ॥೫೩॥

ಮಹಾತ್ಮ ನಾದ ದಶಜ್ಯೋತಿಗೆ ಹತ್ತುಸಾವಿರ ಮಕ್ಕಳು. ಶತಜ್ಯೋತಿಗೆ ಅದರ ಹತ್ತರಷ್ಟು ಮಕ್ಕಳು.

ಭೂಯಸ್ತತೋ ದಶಗುಣಾಃ ಸಹಸ್ರಜ್ಯೋತಿಷಃ ಸುತಾಃ ।
ತೇಭ್ಯೋಽಯಂ ಕುರುವಂಶಶ್ಚ ಯದೂನಾಂ ಭರತಸ್ಯ ಚ ॥೫೪॥

ಯಯಾತೀಕ್ಷ್ವಾ ಕುವಂಶಶ್ಚ ರಾಜರ್ಷೀಣಾಂ ಚ ಸರ್ವಶಃ ।
ಸಂಭೂತಾ ಬಹವೋ ವಂಶಾ ಭೂತಸಂಘಾಃ ಸುವಿಸ್ತರಾಃ ॥೫೫॥

ಸಹಸ್ರಜ್ಯೋತಿಯ ಗಂಡು ಮಕ್ಕಳು ಅದಕ್ಕಿಂತ ಹತ್ತುಪಟ್ಟು ಹೆಚ್ಚಾದವರು. ಅವರಿಂದಲೇ ಕುರುವಂಶ, ಯದುವಂಶ, ಭರತವಂಶ, ಯಯಾತಿವಂಶ, ಇಕ್ಷ್ವಾಕುವಂಶ ಅಲ್ಲದೆ ಇನ್ನೂ ಅನೇಕ ರಾಜರ್ಷಿವಂಶಗಳು, ಅಷ್ಟೇಅಲ್ಲದೆ ಇನ್ನೂ ಅನೇಕ ವಿಸ್ತಾರವಾದ ಜೀವಸಮುದಾಯವೂ ಉಂಟಾದವು.

ಭೂತಸ್ಥಾನಾನಿ ಸರ್ವಾಣಿ ರಹಸ್ಯಂ ತ್ರಿವಿಧಂ ಚಂವಿಕ್ ।
ವೇದಾ ಯೋಗಃ ಸವಿಜ್ಞಾನೋ ಧರ್ಮೋಽರ್ಥಃ ಕಾಮ ಏವ ಚ ಯತ್ ।

ಧರ್ಮಾರ್ಥಕಾಮಶಾಸ್ತ್ರೇ ಶಾಸ್ತ್ರೇ ವಿವಿಧಾನಿ ಚ ।
ಲೋಕಯಾತ್ರಾವಿಧಾನಂ ಚ ಸಂಭೂತಂ ದೃಷ್ಟವಾನೃಷಿಃ ॥೫೬॥

ಎಲ್ಲ ಜೀವರ ಆಶ್ರಯಸ್ಥಾನಗಳು, ಮೂರುವಿಧವಾದ ರಹಸ್ಯಗಳು, ಎಲ್ಲಾವೇದಗಳು, ವಿದ್ಯಾಹೇತುವಾದ ಯೋಗ, ಧರ್ಮ, ಅರ್ಥ ಕಾಮಗಳು, ಧರ್ಮಶಾಸ್ತ್ರ, ಅರ್ಥಶಾಸ್ತ್ರ, ಕಾಮಶಾಸ್ತ್ರ, ಮತ್ತು ಉಳಿದೆಲ್ಲಾ ಶಾಸ್ತ್ರಗಳು, ಲೋಕಯಾತ್ರೆಯ ರೀತಿಗಳು. ಎಲ್ಲವನ್ನೂ ವ್ಯಾಸರು ತಮ್ಮ ದಿವ್ಯ ದೃಷ್ಟಿಯಲ್ಲಿ ನೋಡಿದರು.

ವಾಯುದೇವರೇ ಬ್ರಹ್ಮಪದವಿಗೆ ಬರುವವರು. ರುದ್ರನೇ ಶೇಷಪದವಿಗೆ ಬರುವವನು, ದೇವಪದಕ್ಕೆ ಯೋಗ್ಯರಾದವರಿಗೆ ದೇವತ್ವಪ್ರಾಪ್ತಿ ಮೊದಲಾದವುಗಳು ದೇವರಹಸ್ಯ. ಬ್ರಹ್ಮ, ರುದ್ರ ಎಲ್ಲಾನಾಮಗಳು ಪರಮಮುಖ್ಯವೃತ್ತಿಯಿಂದ ವಿಷ್ಣುವನ್ನೇ ಹೇಳುತ್ತವೆ ಎಂಬುದು ವೇದ ರಹಸ್ಯ. ಸಜ್ಜನರಿಗೆ ಹಿತವಾಗುವಂತೆ ನುಡಿಯುವುದು ಮತ್ತು ನಡೆಯುವುದೇ ಸತ್ಯ ಎಂಬುದು ಧರ್ಮರಹಸ್ಯ. ಇವು ಮೂರು ನಿಜವಾದ ರಹಸ್ಯಗಳು. ದ್ರೌಪದಿಯ ದೇಹದಲ್ಲಿ ಪಂಚದೇವಿಯರು ಇದ್ದಾರೆಂಬುದು ದೇವ ರಹಸ್ಯ. ಕುಂತಿಗೆ ದೂರ್ವಾಸರು ಕೊಟ್ಟ ಅಥರ್ವಣಮಂತ್ರೋಪದೇಶವು ವೇದರಹಸ್ಯ. ಸಂತಾನಾರ್ಥವಾಗಿ ಪಾಂಡುವು ಮಾಡಿದಂತೆ ತನ್ನ ಪತ್ನಿಗೆ ತನಗಿಂತ ಉತ್ತಮಪುರುಷನ ಸಂಯೋಜನೆಯು ಧರ್ಮರಹಸ್ಯ. ಈ ಮೂರುವಿಧವಾದ ರಹಸ್ಯಗಳು ಮತ್ತು ಉಳಿದೆಲ್ಲಾ ವೇದ ಶಾಸ್ತ್ರಾದಿವಿಷಯಗಳು ಭಾರತದ ಕಥೆಯಲ್ಲಿ ಸೇರಿಕೊಂಡಿರುವುದನ್ನು ವೇದವ್ಯಾಸರು ತಮ್ಮ ದಿವ್ಯದೃಷ್ಟಿಯಿಂದ ನೋಡಿದರು ಎಂದು ತಾತ್ಪರ್ಯ.

ನೀತಿರ್ಭರತವಂಶಸ್ಯ ವಿಸ್ತಾರಶ್ಚೈವ ಸರ್ವಶಃ ।
ಇತಿಹಾಸಾಃ ಸಹವ್ಯಾಖ್ಯಾ ವಿವಿಧಾಃ ಶ್ರುತಯೋಽಪಿ ಚ ॥೫೭॥

ಇಹ ಸರ್ವಮನುಕ್ರಾಂತಮುಕ್ತಂ ಗ್ರಂಥಸ್ಯ ಕಾರಣಮ್ ।
ಸಂಕ್ಷೇಪೇಣೇತಿಹಾಸಸ್ಯ ತತೋ ವಕ್ಷ್ಯತಿ ವಿಸ್ತರಮ್ ॥೫೮॥

ರಾಜನೀತಿ, ಭರತವಂಶದ ವಿಸ್ತಾರ, ಪುರಾಣಗಳಲ್ಲಿ ಹೇಳಿದ ನೀತಿ, ವ್ಯಾಖ್ಯಾನಸಹಿವಾದ ಇತಿಹಾಸಗಳು, ಅನೇಕ ಶ್ರುತಿಗಳು ಹೀಗೆ ಒಂದು ಗ್ರಂಥದ ರಚನೆಗೆ ಕಾರಣವಾದ ಎಲ್ಲ ವಿಷಯಗಳನ್ನೂ ವಿಮರ್ಶೆಮಾಡಿ ವ್ಯಾಸರು ಅದನ್ನು

ಸಂಕ್ಷೇಪವಾಗಿ ಮಹಾಭಾರತದಲ್ಲಿ ಅಳವಡಿಸಿದ್ದಾರೆ. (ಆದ್ದರಿಂದ ಮಹಾಭಾರತಕ್ಕೆ ಸಂಕ್ಷೇಪಶಾಸ್ತ್ರ ಎಂತಲೂ ಹೆಸರು) ಪುನಃ ಅದನ್ನು ವಿಸ್ತಾರ ಮಾಡಿಯೂ ಹೇಳುತ್ತಾರೆ.

ವಿಸ್ತೀರ್ಯೈತಂ ಮಹಾತ್ಮಾऽಯಂ ಋಷಿಃ ಸಂಕ್ಷೇಪಮಬ್ರವೀತ್ ।
ಇಷ್ಟಂ ಹಿ ವಿದುಷಾಂ ಲೋಕೇ ಸಮಾಸವ್ಯಾಸಧಾರಣಮ್ ॥೫೯॥

ಋಷಿಗಳು ಮತ್ತು ಮಹಾತ್ಮರಾದ ಈ ವೇದವ್ಯಾಸರು ಎಲ್ಲಾ ಶಾಸ್ತ್ರವನ್ನು ಹೀಗೆ ವಿಸ್ತಾರ ಮಾಡಿ ಅನಂತರ ಸಂಕ್ಷಿಪ್ತವಾಗಿ ಹೇಳಿದರು. ಜ್ಞಾನಿಗಳಿಗೆ ಒಂದೇ ವಿಷಯವನ್ನು ಸಂಕ್ಷೇಪ ಮತ್ತು ವಿಸ್ತಾರವಾಗಿ ಹೇಳುವುದು ಬಹಳ ಪ್ರಿಯವಾದುದು.

ಮನ್ವಾದಿ ಭಾರತಂ ಕೇಚಿದಾಸ್ತೀಕಾದಿ ತಥಾಪರೇ ।
ತಥೋಪರಿಚರಾದ್ಯನ್ಯೇ ವಿಪ್ರಾಃ ಸಮ್ಯಗಧೀಯಿರೇ ॥೬೦॥

ಈ ಭಾರತವು ಮನ್ವಾದಿಗಳನ್ನು ಹೇಳುತ್ತದೆ ಎಂದು ಕೆಲವು ವಿಪ್ರರು ಅಧ್ಯಯನ ಮಾಡುತ್ತಾರೆ. ಆಸ್ತೀಕಾದಿಗಳನ್ನು ಹೇಳುತ್ತದೆ ಎಂದು ಇನ್ನು ಕೆಲವರು, ಉಪರಿಚರ ಮೊದಲಾದುವುಗಳನ್ನು ಹೇಳುತ್ತದೆ ಎಂದು ಮತ್ತು ಕೆಲವರು ಅಧ್ಯಯನ ಮಾಡುತ್ತಾರೆ.

ಮನು ಎಂದರೆ ಮಂತ್ರಗಳು, ಗಾಯತ್ರಿ , ಸಹಸ್ರನಾಮ ಮೊದಲಾದ ಮಂತ್ರಗಳು ಅವುಗಳಿಗೆ ಅಭಿಮಾನಿ ಭೀಮಸೇನ. ಆದ್ದರಿಂದ ಭೀಮಸೇನನ ಮಹಿಮೆಯನ್ನು ಹೇಳುತ್ತದೆ ಎಂದು ಕೆಲವರು ಹೇಳುತ್ತಾರೆ. ದೇವರು, ಧರ್ಮ, ಮೋಕ್ಷ ಎಲ್ಲವೂ ಇದೆ ಎಂದು ತಿಳಿಯುವವರು ಆಸ್ತಿಕರು. ಪಂಚ ಪಾಂಡವರು ಮತ್ತು ದ್ರೌಪದಿಯು ಅಂತಹ ಆಸ್ತಿಕರಲ್ಲಿ ಅಗ್ರಗಣ್ಯರು. ಮಹಾಭಾರತವು ಅವರ ಕಥೆಯನ್ನು ಹೇಳುತ್ತದೆ ಎಂದು ಇನ್ನು ಕೆಲವರು ಅಧ್ಯಯನ ಮಾಡುತ್ತಾರೆ. ಉಪರಿಚರ ಎಂದರೆ ಎಲ್ಲರ ಮೇಲೆ ಇರುವವನು. ಸರ್ವೋತ್ತಮ ಎಂದರ್ಥ. ಅಂತಹ ಸರ್ವೋತ್ತಮನು ನಾರಾಯಣ. ಮಹಾಭಾರತವು ಸರ್ವೋತ್ತಮನಾದ ನಾರಾಯಣನ ಮಹಿಮೆಯನ್ನು ನಿರೂಪಿಸುತ್ತದೆ ಎಂದು ಇನ್ನೂ ಕೆಲವರು ಅಧ್ಯಯನ ಮಾಡುತ್ತಾರೆ. ಯಥಾಶ್ರುತ ಅರ್ಥಗ್ರಾಹಿಗಳಾದ ವಿಪ್ರರು ಮಹಾಭಾರತವು ಅರ್ಜುನ ದ್ರೌಪದಿ ಮೊದಲಾದವರ ಕಥೆ ಎಂದು ತಿಳಿಯುತ್ತಾರೆ. ಇನ್ನೂ ವಿಶೇಷವಾಗಿ ತಿಳಿದ ಜ್ಞಾನಿಗಳು ಅವರೆಲ್ಲರಲ್ಲಿಯೂ ವಾಯುದೇವರು ಸನ್ನಿಹಿತರಾಗಿರುವುದರಿಂದ ಮಹಾಭಾರತಕಥೆಯು ವಾಯುದೇವರ ಮಹಿಮೆಯನ್ನು ಪ್ರತಿಪಾದಿಸುತ್ತದೆ ಎಂದು ತಿಳಿಯುತ್ತಾರೆ. ಇನ್ನೂ ಕೆಲವು ಜ್ಞಾನಿಗಳು ಪಂಚಪಾಂಡವರಲ್ಲಿಯೂ ವಾಯುವಿನ ಅವತಾರನಾದ ಭೀಮನಲ್ಲಿಯೂ

ಅಂತರ್ಯಾಮಿಯಾಗಿರುವ ಹರಿಯೇ ಸರ್ವೋತ್ತಮನಾದವನು, ಸಮಗ್ರವಾದ ಮಹಾಭಾರತವು ಅವನ ಮಹಿಮೆಯನ್ನೇ ತಿಳಿಸುತ್ತದೆ ಎಂದು ತಿಳಿಯುತ್ತಾರೆ. ಆದ್ದರಿಂದ ಈ ಮೂರು ಪಕ್ಷಗಳೂ ಸೂಕ್ತವಾಗಿಯೇ ಇವೆ.

ವಿವಿಧಂ ಸಂಹಿತಾಜ್ಞಾನಂ ದೀಪಯಂತಿ ಮನೀಷಿಣಃ ।
ವ್ಯಾಖ್ಯಾನೇ ಯತತೇ ಕೇಚಿತ್ ಕೇಚಿತ್ ಗ್ರಂಥಸ್ಯ ಧಾರಣೇ ॥೬೧॥

ಕೆಲವರು ಇಂತಹ ಮಹಾಭಾರತಗ್ರಂಥಕ್ಕೆ ವ್ಯಾಖ್ಯಾನವನ್ನು ರಚಿಸಿ ಹಿಂದೆ ಹೇಳಿದ ಭಾಷಾತ್ರೈವಿಧ್ಯದಿಂದ ಕೂಡಿದ ಭಾರತಸಂಹಿತೆಯ ಅರ್ಥವನ್ನು ಪ್ರಕಾಶಗೊಳಿಸುತ್ತಾರೆ. ಇನ್ನು ಕೆಲವರು ಮಹಾಭಾರತಗ್ರಂಥದ ಧಾರಣೆಯಲ್ಲಿ ತೊಡಗುತ್ತಾರೆ.

ತಪಸಾ ಬ್ರಹ್ಮಚರ್ಯೇಣ ವ್ಯಸ್ಯ ವೇದಂ ಸನಾತನಮ್ ।
ಇತಿಹಾಸಮಿಮಂ ಚಕ್ರೇ ಪುಣ್ಯಂ ಸತ್ಯವತೀಸುತಃ ॥೬೨॥

ಸತ್ಯವತೀಸುತರಾದ ವ್ಯಾಸರು ತಮ್ಮ ತಪಸ್ಸು ಮತ್ತು ಬ್ರಹ್ಮಚರ್ಯಶಕ್ತಿಯಿಂದ ಸನಾತನವಾದ ವೇದವನ್ನು ವಿಭಾಗಿಸಿ ಅನಂತರ ಪವಿತ್ರವಾದ ಈ ಮಹಾಭಾರತಗ್ರಂಥವನ್ನು ರಚಿಸಿದರು.

ಕೃಷ್ಣದ್ವೈಪಾಯನಂ ವ್ಯಾಸಂ ವಿದ್ಧಿ ನಾರಾಯಣಂ ಪ್ರಭುಮ್ ।
ಕೋ ಹ್ಯನ್ಯಃ ಪುಂಡರೀಕಾಕ್ಷಾತ್ ಮಹಾಭಾರತಕೃದ್ ಭವೇತ್ ॥೬೩॥

ಕೃಷ್ಣದ್ವೈಪಾಯನರಾದ ವೇದವ್ಯಾಸರನ್ನು ಸಾಕ್ಷಾತ್ ನಾರಾಯಣನೆಂದೇ ತಿಳಿ. ಪುಂಡರೀಕಾಕ್ಷನಾದ ನಾರಾಯಣನಲ್ಲದೆ ಬೇರೆ ಯಾರು ಮಹಾಭಾರತವನ್ನು ರಚಿಸಲು ಸಾಧ್ಯ ?

ಪರಾಶರಾತ್ಮಜಃ ಶ್ರೀಮಾನ್ ಬ್ರಹ್ಮರ್ಷಿಃ ಸಂಶಿತವ್ರತಃ ।
ಮಾತುರ್ನಿಯೋಗಾದ್ ಧರ್ಮಾತ್ಮಾ ಗಾಂಗೇಯಸ್ಯ ಚ ಧೀಮತಃ॥೬೪॥

ಕ್ಷೇತ್ರೇ ವಿಚಿತ್ರವೀರ್ಯಸ್ಯ ಕೃಷ್ಣದ್ವೈಪಾಯನಃ ಪುರಾ ।
ತ್ರೀನಗ್ನೀನಿವ ಕೌರವ್ಯಾನ್ ಜನಯಾಮಾಸ ವೀರ್ಯವಾನ್ ॥೬೫॥

ಶ್ರೇಷ್ಠವ್ರತಧಾರಿಗಳೂ, ಬ್ರಹ್ಮರ್ಷಿಗಳೂ, ಧರ್ಮಾತ್ಮರೂ, ಕಾಂತಿಯುಕ್ತರೂ ಆದ ಪರಾಶರರ ಮಕ್ಕಳಾದ ವೇದವ್ಯಾಸರು ತಾಯಿಯ ಮತ್ತು ಮೇಧಾವಿಯಾದ ಭೀಷ್ಮರ

ಆದೇಶದಂತೆ ವಿಚಿತ್ರವೀರ್ಯನ ಪತ್ನಿಯರಲ್ಲಿ ಮೂರು ಅಗ್ನಿಗಳಂತಿರುವ ಮೂರು ಕೌರವಶ್ರೇಷ್ಠರನ್ನು ಪಡೆದರು.

ಉತ್ಪಾದ್ಯ ಧೃತರಾಷ್ಟ್ರಂ ಚ ಪಾಂಡುಂ ವಿದುರಮೇವ ಚ ।
ಜಗಾಮ ತಪಸೇ ಧೀಮಾನ್ ಪುನರೇವಾಶ್ರಮಂ ಪ್ರತಿ ॥೬೬॥

ಧೀಮಂತರಾದ ವ್ಯಾಸರು, ಧೃತರಾಷ್ಟ್ರ, ಪಾಂಡು, ವಿದುರರನ್ನು ಉತ್ಪಾದಿಸಿ ಪುನಃ ತಪಸ್ಸು ಮಾಡಲು ಉದ್ದೇಶಿಸಿ ತಮ್ಮ ಆಶ್ರಮಕ್ಕೆ ನಡೆದರು.

ತೇಷು ಜಾತೇಷು ವೃದ್ಧೇಷು ಗತೇಷು ಚ ಪರಾಂ ಗತಿಮ್ ।
ಅಬ್ರವೀದ್ ಭಾರತಂ ಲೋಕೇ ಮಾನುಷೇಽಸ್ಮಿನ್ ಮಹಾನೃಷಿಃ ॥೬೭॥

ಶಂತನುವಿನಿಂದ ಆರಂಭಿಸಿ ಪರೀಕ್ಷಿತ್ ರಾಜನವರೆಗೆ ಕುರುವಂಶದ ರಾಜರುಗಳು ಜನಿಸಿ ಪರಗತಿಯನ್ನು ಹೊಂದಿದ ಮೇಲೆ ಮಹರ್ಷಿಗಳಾದ ವ್ಯಾಸರು ಮನುಷ್ಯಲೋಕದಲ್ಲಿ ಮಹಾಭಾರತವನ್ನು ಪ್ರವರ್ತನಗೊಳಿಸಿದರು.

ಜನಮೇಜಯೇನ ಪೃಷ್ಟಃ ಸನ್ ಬ್ರಾಹ್ಮಣೈಶ್ಚ ಸಹಸ್ರಶಃ ।
ಶಶಾಸ ಶಿಷ್ಯಮಾಸೀನಂ ವೈಶಂಪಾಯನಮಂತಿಕೇ ॥೬೮॥

ಸಹಸ್ರಾರು ಬ್ರಾಹ್ಮಣರಿಂದಲೂ ಜನಮೇಜಯನಿಂದಲೂ ಪ್ರಾರ್ಥಿಸಲ್ಪಟ್ಟ ವ್ಯಾಸರು ಸಮೀಪದಲ್ಲಿ ಕುಳಿತಿದ್ದ ಶಿಷ್ಯರಾದ ವೈಶಂಪಾಯನರಿಗೆ ಭಾರತವನ್ನು ಹೇಳುವಂತೆ ಆದೇಶ ನೀಡಿದರು. ಭಾರತ ರಚನೆಯು ವ್ಯಾಸಾವತಾರವಾಗಿ ೩ನೇ ವರ್ಷದಲ್ಲಿ ಆಗಿದೆ. ಭೂಮಿಯಲ್ಲಿ ಇದರ ಪ್ರಚಾರ ಜನಮೇಜಯನ ಕಾಲದಲ್ಲಿ ನಡೆದಿದೆ.

ಸ ಸದಸ್ಯೈಃ ಸಮಾಸೀನಂ ಶ್ರಾವಯಾಮಾಸ ಭಾರತಮ್ ।
ಕರ್ಮಾಂತರೇಷು ಯಜ್ಞಸ್ಯ ಚೋದ್ಯಮಾನಃ ಪುನಃಪುನಃ ॥೬೯॥

ಮತ್ತೆಮತ್ತೆ ಜನಮೇಜಯನಿಂದ ಪ್ರಾರ್ಥಿಸಲ್ಪಟ್ಟ ವೈಶಂಪಾಯನರು ಅವನ ಯಜ್ಞದ ಮಧ್ಯದಲ್ಲಿ ಸಮಯ ದೊರೆತಂತೆ ಸದಸ್ಯರ ಸಮ್ಮುಖದಲ್ಲಿ ಅವನಿಗೆ ಮಹಾಭಾರತವನ್ನು ನಿರೂಪಿಸಿದರು.

ವಿಸ್ತಾರಂ ಕುರುವಂಶಸ್ಯ ಗಾಂಧಾರ್ಯಾಃ ಧರ್ಮಶೀಲತಾಮ್ ।
ಕ್ಷತ್ತುಃ ಪ್ರಜ್ಞಾಂ ಧೃತಿಂ ಕುಂತ್ಯಾಃ ಸಾಹ್ಯಂ ದ್ವೈಪಾಯನೋಽಬ್ರವೀತ್ ॥೭೦॥

ಈ ಮಹಾಭಾರತದಲ್ಲಿ ದ್ವೈಪಾಯನರು ಕುರುವಂಶದ ವಿಸ್ತಾರವನ್ನೂ, ಗಾಂಧಾರಿಯ ಧರ್ಮಶೀಲತೆಯನ್ನೂ, ವಿದುರನ ಮೇಧಾವಿತನವನ್ನೂ, ಕುಂತಿಯ ಧೈರ್ಯವನ್ನೂ, ಸಹನೆಯನ್ನೂ ವರ್ಣಿಸಿದ್ದಾರೆ.

ವಾಸುದೇವಸ್ಯ ಮಾಹಾತ್ಮ್ಯಂ ಪಾಂಡವಾನಾಂ ಚ ಸತ್ಯತಾಮ್ ।
ದುರ್ವೃತ್ತಂ ಧಾರ್ತರಾಷ್ಟ್ರಾಣಾಂ ಉಕ್ತವಾನ್ ಭಗವಾನೃಷಿಃ ॥೭೧॥

ಪೂಜ್ಯರಾದ ವ್ಯಾಸರು ಈ ಗ್ರಂಥದಲ್ಲಿ ವಸುದೇವಸುತನಾದ ಕೃಷ್ಣನ ಮಹಿಮೆಯನ್ನೂ ಪಾಂಡವರ ಸತ್ಯಶೀಲತೆಯನ್ನೂ, ಧೃತರಾಷ್ಟ್ರಪುತ್ರರ ದುರ್ನಡತೆಯನ್ನೂ ನಿರೂಪಿಸಿದ್ದಾರೆ.

ಇದಂ ಶತಸಹಸ್ರಾಣಾಂ ಶ್ಲೋಕಾನಾಂ ಪುಣ್ಯಕರ್ಮಣಾಮ್ ।
ಉಪಾಖ್ಯಾನೈಃ ಸಹಜ್ಞೇಯಂ ಶ್ರಾವ್ಯಂ ಭಾರತಮುತ್ತಮಮ್ ॥೭೨॥

ಈ ಮಹಾಭಾರತಗ್ರಂಥದಲ್ಲಿ ಪುಣ್ಯಕೀರ್ತಿಗಳಾದ ಪುರುಷರಿಗೆ ಸಂಬಂಧಿಸಿದ ಒಂದು ಲಕ್ಷಶ್ಲೋಕಗಳು ಇವೆ. ಇದರಲ್ಲಿ ಅನೇಕ ಉಪಾಖ್ಯಾನಗಳು ಸೇರಿವೆ ಇಂತಹ ಶ್ರೇಷ್ಠವಾದ ಭಾರತವನ್ನು ಕೇಳಬೇಕು ಮತ್ತು ತಿಳಿದುಕೊಳ್ಳಬೇಕು. (ಭಾರತದಲ್ಲಿ ಒಟ್ಟು ೧,೦೩,೦೩೪. ಒಂದು ಲಕ್ಷದ ಮೂರುಸಾವಿರದ ಮೂವತ್ತನಾಲ್ಕು ಶ್ಲೋಕಗಳು ಇವೆಯೆಂದು ಶ್ರೀವಾದಿರಾಜರು ಲಕ್ಷಾಲಂಕಾರದಲ್ಲಿ ತಿಳಿಸಿದ್ದಾರೆ.)

ಚತುರ್ವಿಂಶತಿಸಾಹಸ್ರೀಂ ಚಕ್ರೇ ಭಾರತಸಂಹಿತಾಮ್ ।
ಉಪಾಖ್ಯಾನೈರ್ವಿನೈತಾವತ್ ಭಾರತಂ ಪ್ರೋಚ್ಯತೇ ಬುಧೈಃ ॥೭೩॥

ಅನಂತರ ವ್ಯಾಸರು ಇಪ್ಪತ್ತನಾಲ್ಕುಸಾವಿರ ಶ್ಲೋಕಗಳಿರುವ ಮಹಾಭಾರತದ ಖಿಲವೆಂದು ಕರೆಸಿಕೊಳ್ಳುವ ಹರಿವಂಶವನ್ನು ರಚನೆ ಮಾಡಿದರು. ಅದರಲ್ಲಿ ಇನ್ನು ಒಂದು ಸಾವಿರ ಶ್ಲೋಕಗಳಲ್ಲಿ ಬೇರೆ ಬೇರೆ ಉಪಖ್ಯಾನಗಳಿವೆ. (ಹರಿವಂಶದ ಒಟ್ಟು ವಿಸ್ತಾರ ಇಪ್ಪತ್ತೈದುಸಾವಿರ ಶ್ಲೋಕಗಳು)

ತತೋಽಧ್ಯರ್ಧಶತಂ ಭೂಯಃ ಸಂಕ್ಷೇಪಂ ಕೃತವಾನ್ ಋಷಿಃ ।
ಅನುಕ್ರಮಣಿಮಧ್ಯಾಯಂ ವೃತ್ತಾಂತಾನಾಂ ಸಪರ್ವಣಾಮ್ ॥೭೪॥

ಪೂಜ್ಯರಾದ ವ್ಯಾಸರು ಮಹಾಭಾರತದ ಮೊದಲನೆಯ ಅಧ್ಯಾಯದಲ್ಲಿಯೇ ನೂರೈವತ್ತು ಶ್ಲೋಕಗಳನ್ನು ರಚಿಸಿ ಎಲ್ಲ ಪರ್ವಗಳ ವೃತ್ತಾಂತವನ್ನು ಸಂಗ್ರಹಿಸಿ ಅನುಕ್ರಮಣಿಕಾ ಅಧ್ಯಾಯವನ್ನು ಅಳವಡಿಸಿದ್ದಾರೆ.

''ದುರ್ಯೋಧನೋ ಮನ್ಯುಮಯೋ ಮಹಾದ್ರುಮಃ'' ಎಂದು ಆರಂಭಿಸಿ ''ತತ್ರೋಪನಿಷದಂ ಪುಣ್ಯಾಂ ಕೃಷ್ಣದ್ವೈಪಾಯನೋಬ್ರವೀತ್'' ಎಂಬ ಶ್ಲೋಕದವರೆಗೆ ಮೊದಲನೆಯ ಅಧ್ಯಾಯದಲ್ಲಿ ಅಳವಡಿಸಿರುವ ಭಾಗವನ್ನು ಅನುಕ್ರಮಣಿಕಾಧ್ಯಾಯವೆಂದು ಹೇಳುತ್ತಾರೆ. ಇಲ್ಲಿ ಯದ್ಯಪಿ ನೂರಿಪ್ಪತ್ತೇಳು ಶ್ಲೋಕಗಳಿವೆ. ಆದರೆ ಅಕ್ಷರಗಳ ಪರಿಗಣನೆಯ ಕ್ರಮದಲ್ಲಿ ಇದನ್ನು ನೂರೈವತ್ತು ಶ್ಲೋಕಗಳಾಗಿ ಎಣಿಸುವ ರೀತಿಯನ್ನು ವಾದಿರಾಜರು ಲಕ್ಷಾಲಂಕಾರದಲ್ಲಿ ತಿಳಿಸಿದ್ದಾರೆ.

ತದಾಖ್ಯಾನವರಿಷ್ಠಂ ಸ ಕೃತ್ವಾ ದ್ವೈಪಾಯನಃ ಪ್ರಭುಃ ।
ಕಥಮಧ್ಯಾಪಯಾಮೀದಂ ಶಿಷ್ಯಂ ನಿತ್ಯಮಚಿಂತಯತ್ ॥೭೫॥

ಪ್ರಭುಗಳಾದ ದ್ವೈಪಾಯನರು ಇಂತಹ ಶ್ರೇಷ್ಠವಾದ ಭಾರತವನ್ನು ರಚಿಸಿ ಈ ಗ್ರಂಥವನ್ನು ಶಿಷ್ಯರನ್ನು ಕುರಿತು ಹೇಗೆ ನಿತ್ಯವೂ ಬೋಧಿಸಲು ಸಾಧ್ಯವಾಗುತ್ತದೆ ಎಂದು ಚಿಂತಿಸಿದರು.

ತಸ್ಯ ಚಿಂತಯತಶ್ಚಾಪಿ ಋಷೇರ್ದ್ವೈಪಾಯನಸ್ಯ ಚ ।
ಸ್ಮೃತ್ಯಾऽऽಜಗಾಮ ಭಗವಾನ್ ಬ್ರಹ್ಮಾ ಲೋಕಗುರುಃ ಸ್ವಯಮ್ ॥೭೬॥

ಋಷಿಗಳಾದ ದ್ವೈಪಾಯನರು ಹೀಗೆ ಚಿಂತಿಸುತ್ತಿರಲು ಲೋಕಗುರುಗಳಾದ ಪೂಜ್ಯರಾದ ಬ್ರಹ್ಮದೇವರು ತಾವಾಗಿಯೇ ವೇದವ್ಯಾಸರನ್ನು ಸ್ಮರಿಸಿಕೊಂಡು ಅವರ ಆಶ್ರಮಕ್ಕೆ ಬಂದರು.

ಮಹರ್ಷೇಶ್ಚಾಪಿ ಲೋಕಾನಾಂ ಪ್ರೀತ್ಯರ್ಥಂ ಹಿತಕಾಮ್ಯಯಾ ।
ತಂ ದೃಷ್ಟ್ವಾ ವಿಸ್ಮಿತೋಭೂತ್ವಾ ಪ್ರಾಂಜಲಿಃ ಪ್ರಣತಃ ಸ್ಥಿತಃ ॥೭೭॥

ಲೋಕಪ್ರೀತ್ಯರ್ಥವಾಗಿ ಮತ್ತು ಲೋಕಹಿತಕ್ಕಾಗಿ ಮಹರ್ಷಿಗಳಾದ ವ್ಯಾಸರನ್ನು ನೋಡಿ ಆಶ್ಚರ್ಯಚಕಿತರಾಗಿ ಬ್ರಹ್ಮದೇವರು ಅವರಿಗೆ ಕೈಗಳನ್ನು ಜೋಡಿಸಿ ನಮಸ್ಕಾರಮಾಡಿ ವಿನಯದಿಂದ ನಿಂತರು.

ಆಸನಂ ಕಲ್ಪಯಾಮಾಸ ಸರ್ವದೇವಗಣೈರ್ಯುತಮ್ ।
ಹಿರಣ್ಯಗರ್ಭಮಾಸೀನಂ ತಸ್ಮಿಂಸ್ತು ಪರಮಾಸನೇ ॥೭೮॥

ವ್ಯಾಸರು ಎಲ್ಲ ದೇವತೆಗಳ ಜೊತೆಯಲ್ಲಿ ಬಂದ ಬ್ರಹ್ಮದೇವರಿಗೆ ಒಂದು ಆಸನವನ್ನು ಕಲ್ಪಿಸಿ ಬ್ರಹ್ಮದೇವರು ಆ ಶ್ರೇಷ್ಠವಾದ ಆಸನದಲ್ಲಿ ಕುಳಿತುಕೊಳ್ಳುವಂತೆ ಮಾಡಿದರು.

ಪರಿವೃತ್ಯಾಸನಾಭ್ಯಾಶೇ ವ್ಯಾಸಃ ಸ್ವಯಮುಪಾವಿಶತ್ ।
ಅನುಜ್ಞಾತೋಽಥ ಕೃತಿನಾ ಬ್ರಹ್ಮಣಾ ಪರಮೇಷ್ಠಿನಾ ॥೭೯॥

ಅನಂತರ ಪುಣ್ಯಶಾಲಿಗಳಾದ ಬ್ರಹ್ಮದೇವರಿಂದ ಪ್ರಾರ್ಥಿಸಲ್ಪಟ್ಟವರಾಗಿ ತಮ್ಮ ಆಸನದ ಬಳಿಗೆ ಬಂದು ತಾವೇ ಕುಳಿತುಕೊಂಡರು.

ನಿಷಸಾದಾಸನಾಭ್ಯಾಶೇ ಪ್ರೀಯಮಾಣಃ ಸುವಿಸ್ಮಿತಃ ।
ಉವಾಚ ಚ ಮಹಾತೇಜಾ ಬ್ರಹ್ಮಾಣಂ ಪರಮೇಷ್ಠಿನಮ್ ॥೮೦॥

ಬ್ರಹ್ಮದೇವರ ಸಮೀಪದ ಆಸನದಲ್ಲಿ ಕುಳಿತ ಮಹಾತೇಜಸ್ವಿಗಳಾದ ವಿಸ್ಮಯ ಮತ್ತು ಸಂತೋಷದಿಂದ ಕೂಡಿದ ವ್ಯಾಸರು ಬ್ರಹ್ಮದೇವರನ್ನು ಕುರಿತು ಹೇಳಿದರು.

ಕೃತಂ ಮಯೈತದ್ ಭಗವನ್ ಕಾವ್ಯಂ ಪರಮಪೂಜನಮ್ ।
ಬ್ರಹ್ಮನ್‌ವೇದರಹಸ್ಯಂ ಚ ಯಚ್ಚಾನ್ಯತ್ ಖ್ಯಾಪಿತಂ ತ್ವಯಾ ॥೮೧॥

ಪೂಜ್ಯರೇ ಎಲ್ಲ ಜನರಿಂದಲೂ ಪೂಜ್ಯವಾದಂತಹ ವೇದದ ರಹಸ್ಯವನ್ನೂ ವೇದವಿಷಯಗಳನ್ನೂ ಒಳಗೊಂಡಂತಹ ಈ ಮಹಾಭಾರತ ಇತಿಹಾಸವನ್ನು ನಾನು ರಚಿಸಿದ್ದೇನೆ.

ಸಾಂಗೋಪನಿಷದಾನಾಂ ಚ ವೇದಾನಾಂ ವಿಸ್ತರಕ್ರಿಯಾ ।
ಇತಿಹಾಸಪುರಾಣಾನಾಮುನ್ಮಿಷನ್ನಿಮಿಷಚ್ಚ ಯತ್ ॥೮೨॥

ಈ ಭಾರತದಲ್ಲಿ ನಾನು ವಿಸ್ತಾರಮಾಡಿದ ವೇದ ಉಪನಿಷತ್ತುಗಳು ಮತ್ತು ಅವುಗಳ ಅಂಗಗಳ ಎಲ್ಲಾ ಅರ್ಥಗಳೂ ಸೇರಿಕೊಂಡಿವೆ. ಇತಿಹಾಸ ಪುರಾಣಗಳ ಅರ್ಥಗಳೂ ದಿವಾಚರ ಮತ್ತು ನಕ್ತಂಚರರ ಎಲ್ಲ ವಿಷಯಗಳೂ ನಿರೂಪಿಸಲ್ಪಟ್ಟಿವೆ.

ಭೂತಂ ಭವ್ಯಂ ಭವಿಷ್ಯಚ್ಚ ತ್ರಿವಿಧಂ ಕಾಲಸಂಜ್ಞಿತಮ್ ।
ಜರಾಮೃತ್ಯುಭಯವ್ಯಾದಿಭಾವಾಭಾವವಿನಿಶ್ಚಯಮ್ ॥೮೩॥

ತ್ರಿವಿಧವಾದ ಭೂತಕಾಲ,ವರ್ತಮಾನಕಾಲ ಮತ್ತು ಭವಿಷ್ಯತ್ಕಾಲಕ್ಕೆ ಸಂಬಂಧಿಸಿದ ವಿಷಯಗಳು, ಜರಾ, ಮೃತ್ಯು, ಭಯ, ರೋಗ ಇವುಗಳಿಗೆ ಕಾರಣಗಳು, ಇವುಗಳನ್ನು ಪರಿಹಾರ ಮಾಡಿಕೊಳ್ಳುವ ಉಪಾಯಗಳು ಎಲ್ಲವೂ ಇಲ್ಲಿ ಹೇಳಲ್ಪಟ್ಟಿವೆ.

ವಿವಿಧಸ್ಯ ಚ ಧರ್ಮಸ್ಯ ಹ್ಯಾಶ್ರಮಾಣಾಂ ಚ ಲಕ್ಷಣಮ್ ।
ಚಾತುರ್ವರ್ಣ್ಯವಿಧಾನಂ ಚ ಪುರುಷಾಣಾಂ ಚ ಕೃತ್ಸ್ನಶಃ ॥೮೪॥

ಇಲ್ಲಿ ಅನೇಕ ಆಶ್ರಮಗಳ ಮತ್ತು ಅನೇಕವಿಧವಾದ ಧರ್ಮಗಳ ಲಕ್ಷಣಗಳು ಹೇಳಲ್ಪಟ್ಟಿವೆ. ಪುರುಷರು ಅನುಸರಿಸಬೇಕಾದ ಚಾತುರ್ವರ್ಣ್ಯದ ಪ್ರಕಾರವು ಸಮಗ್ರವಾಗಿ ಹೇಳಲ್ಪಟ್ಟಿದೆ.

ತಪಸೋ ಬ್ರಹ್ಮಚರ್ಯಸ್ಯ ಪೃಥಿವ್ಯಾಶ್ಚಂದ್ರಸೂರ್ಯಯೋಃ ।
ಗ್ರಹನಕ್ಷತ್ರತಾರಾಣಾಂ ಪ್ರಮಾಣಂ ಚ ಯುಗೈಃ ಸಹ ॥೮೫॥

ತಪಸ್ಸು ಮತು ಬ್ರಹ್ಮಚರ್ಯಗಳು ಹಾಗೂ ಪೃಥಿವಿ, ಚಂದ್ರ , ಸೂರ್ಯ, ಗ್ರಹ, ನಕ್ಷತ್ರ , ತಾರೆಗಳು, ಯುಗಗಳು ಇವುಗಳ ಪ್ರಮಾಣಗಳು ಸಹ ಹೇಳಲ್ಪಟ್ಟಿವೆ.

ಋಚೋ ಯಜೂಂಷಿ ಸಾಮಾನಿ ವೇದಾಧ್ಯಾತ್ಮಂ ತಥೈವ ಚ ।
ನ್ಯಾಯಃ ಶಿಕ್ಷಾ ಚಿಕಿತ್ಸಾ ಚ ಜ್ಞಾನಂ ಪಾಶುಪತಂ ತಥಾ ॥೮೬॥

ಋಗ್ವೇದ, ಯಜುರ್ವೇದ, ಸಾಮವೇದಗಳಲ್ಲಿ ನಿರೂಪಿಸಲ್ಪಟ್ಟ ಆಧ್ಯಾತ್ಮ, ನ್ಯಾಯಶಾಸ್ತ್ರ, ಶಿಕ್ಷಾಶಾಸ್ತ್ರ, ವೈದ್ಯಶಾಸ್ತ್ರ, ಪಾಶುಪತಶಾಸ್ತ್ರ ಎಲ್ಲವೂ ಇದರಲ್ಲಿ ಸೇರಿಕೊಂಡಿವೆ.

ಇತಿ ನೈಕಾಶ್ರಯಂ ಜನ್ಮ ದಿವ್ಯಮಾನುಷಸಂಜ್ಞಿತಮ್ ।
ತೀರ್ಥಾನಾಂ ಚೈವ ಪುಣ್ಯಾನಾಂ ದೇಶಾನಾಂ ಚೈವ ಕೀರ್ತನಮ್॥೮೭॥

ಇಲ್ಲಿ ದೇವ ಮತ್ತು ಮನುಷ್ಯರಿಗೆ ಸಂಬಂಧಿಸಿದ ಅನೇಕ ವಿಧವಾದ ಜನ್ಮಗಳು ಹೇಳಲ್ಪಟ್ಟಿವೆ. ಪುಣ್ಯ ಕ್ಷೇತ್ರಗಳ ವರ್ಣನೆಯು ಇದರಲ್ಲಿಸೇರಿದೆ.

ನದೀನಾಂ ಪರ್ವತಾನಾಂ ಚ ವನಾನಾಂ ಸಾಗರಸ್ಯ ಚ ।
ಪುರಾಣಾಂ ಚೈವ ದಿವ್ಯಾನಾಂ ಕಲ್ಪಾನಾಂ ಯುದ್ಧಕೌಶಲಮ್ ॥೮೮॥

ಇದರಲ್ಲಿ ನದಿಗಳ, ಪರ್ವತಗಳ, ಸಾಗರಗಳ, ಅರಣ್ಯಗಳ ಮತ್ತು ದಿವ್ಯವಾದ ಅನೇಕ ನಗರಗಳ ವರ್ಣನೆಯೂ ಮತ್ತು ಸಮರ್ಥರಾದವರ ಯುದ್ಧ ಕೌಶಲವೂ ನಿರೂಪಿಸಲ್ಪಟ್ಟಿವೆ.

ವಾಕ್ಯ ಜಾತಿವಿಶೇಷಾಶ್ಚ ಲೋಕಯಾತ್ರಾಕ್ರಮಶ್ಚ ಯಃ ।
ಯಚ್ಚ ಸರ್ವಗತಂ ವಸ್ತು ತತ್ ಸರ್ವಂ ಕ್ಷಂತುಮರ್ಹಸಿ ॥೮೯॥

ಇದರಲ್ಲಿ ಅನೇಕ ವಾಕ್ಯಜಾತಿಗಳು ಸೇರಿವೆ. ಲೋಕಯಾತ್ರೆಯ ಪ್ರಕಾರವು ನಿರೂಪಿಸಲ್ಪಟ್ಟಿದೆ. ಎಲ್ಲದಕ್ಕಿಂತಲೂ ಹೆಚ್ಚಾಗಿ ಸರ್ವಾಂತರ್ಯಾಮಿಯಾದ ಭಗವಂತನು ನಿರೂಪಿಸಲ್ಪಟ್ಟಿದ್ದಾನೆ. ನೀವು ಇದೆಲ್ಲವನ್ನೂ ಅನುಮೋದಿಸಬೇಕು.

ಬ್ರಹ್ಮಾ

ತಪೋವಿಶಿಷ್ಟಾದಪಿ ಚ ವಸಿಷ್ಠಾನ್ಮುನಿಪುಂಗವಾತ್ ।
ಮನ್ಯೇ ಶ್ರೇಷ್ಠತಮಂ ತ್ವಾಂ ವೈ ರಹಸ್ಯಜ್ಞಾನವೇದನಾತ್ ॥೯೦॥

ತಪಸ್ವಿಗಳಾದ ವಸಿಷ್ಠರಿಗಿಂತಲೂ ಕ್ಲಿಷ್ಟವಾದ ತಪಸ್ಸನ್ನು ತಾವು ಆಚರಿಸಿದ್ದೀರಿ. ರಹಸ್ಯ ವಿಷಯಗಳ ಜ್ಞಾನದಲ್ಲಿ ನೀವು ವಸಿಷ್ಠರಿಗಿಂತಲೂ ಶ್ರೇಷ್ಠರೆಂದು ನಾನು ತಿಳಿದಿದ್ದೇನೆ.

ಜನ್ಮಪ್ರಭೃತಿ ಸತ್ಯಾಂ ತೇ ವಿದ್ಮ ಗಾಂ ಬ್ರಹ್ಮಗಾಮಿನೀಮ್ ।
ತ್ವಯಾ ಚ ಕಾವ್ಯಮಿತ್ಯುಕ್ತಂ ತಸ್ಮಾತ್ ಕಾವ್ಯಂ ಭವಿಷ್ಯತಿ ॥೯೧॥

ತಾವು ಅವತಾರ ಮಾಡಿದಾಗಿನಿಂದಲೂ ತಮ್ಮ ಎಲ್ಲಾ ವಚನಗಳೂ ಸತ್ಯವಾದುವು ಮತ್ತು ಭಗವಂತನನ್ನು ಸ್ಪರ್ಶಿಸುವಂತಹುದು ಎಂದು ತಿಳಿದಿದ್ದೇನೆ. ತಾವು ಇದನ್ನು ಕಾವ್ಯ ಎಂದು ಕರೆದಿದ್ದೀರಿ ಆದ್ದರಿಂದ ಇದು ಕಾವ್ಯವೇ ಆಗಲಿ.

ಅಸ್ಯ ಕಾವ್ಯಸ್ಯ ಕವಯೋ ನ ಸಮರ್ಥಾ ವಿಶೇಷಣೇ ।
ವಿಶೇಷಣೇ ಗೃಹಸ್ಥಸ್ಯ ಶೇಷಾಸ್ತ್ರಯ ಇವಾಶ್ರಮಾಃ ॥
ಜಡಾಂಧಬಧಿರೋನ್ಮತ್ತಂ ತಮೋಭೂತಂ ಜಗದ್ ಭವೇತ್ ।
ಯದಿ ಜ್ಞಾನಹುತಾಶೇನ ತ್ವಯಾ ನೋಜ್ಜ್ವಲಿತಂ ಭವೇತ್ ॥೯೨॥

ಈ ಕಾವ್ಯವನ್ನು ಮೀರಿದ ಕಾವ್ಯವನ್ನು ರಚಿಸಲು ಯಾವ ಕವಿಗಳೂ ಸಮರ್ಥರಾಗುವುದಿಲ್ಲ. ತಾವು ಜ್ಞಾನಾಗ್ನಿಯಿಂದ ಈ ಜ್ಞಾನದೀಪವನ್ನು ಬೆಳಗಿಸದೆ ಇದ್ದರೆ ಗೃಹಸ್ಥಾಶ್ರಮಕ್ಕೂ ಮಿಗಿಲಾದ ಬ್ರಹ್ಮಚರ್ಯ, ವಾನಪ್ರಸ್ಥ ಮತ್ತು ಸಂನ್ಯಾಸ ಈ ಮೂರೂ ಆಶ್ರಮಗಳನ್ನು ಹೊಂದಿದ ಪುರುಷರು ವಿಶೇಷವಾಗಿ ಜಡರೂ, ಅಂಧರೂ, ಮೂಕರೂ, ಉನ್ಮತ್ತರೂ ಆಗಿ ಈ ಜಗತ್ತು ಅಜ್ಞಾನದಿಂದ ತುಂಬುತ್ತಿತ್ತು.

ಗೃಹಸ್ತರಿಗಿಂತ ಬ್ರಹ್ಮಚಾರಿ ಮೊದಲಾದವರು ಜ್ಞಾನದಲ್ಲಿ ಹೆಚ್ಚು ಆಸಕ್ತರಾದವರು. ಮಹಾಭಾರತವಿಲ್ಲದಿದ್ದರೆ ಅವರಿಗೆ ಜ್ಞಾನವೇ ಇಲ್ಲದಂತಾಗಿ ಜಗತ್ತು ಅಜ್ಞಾನದಿಂದ ತುಂಬಿರುತ್ತಿತ್ತು ಎಂದು ತಾತ್ಪರ್ಯ.

ತಮಸಾಂऽಧಸ್ಯ ಲೋಕಸ್ಯ ವೇಷ್ಟಿತಸ್ಯ ಸ್ವಕರ್ಮಭಿಃ ।
ಜ್ಞಾನಾಂಜನಶಲಾಕಾಭಿರ್ಬುದ್ಧಿನೇತ್ರೋತ್ಸವಃ ಕೃತಃ ॥೯೩॥

ತಾವು ತಮ್ಮ ತಮ್ಮ ಕರ್ಮಗಳಿಂದ ಬದ್ಧರಾಗಿ ಅಜ್ಞಾನದಿಂದ ಕುರುಡರಾದ ಜೀವರಿಗೆ ಜ್ಞಾನವೆಂಬ ಅಂಜನಶಲಾಕೆಯಿಂದ ಬುದ್ಧಿಗೂ ಮತ್ತು ನೇತ್ರಗಳಿಗೂ ಉತ್ಸವವನ್ನುಂಟು ಮಾಡಿದ್ದೀರಿ.

ಧರ್ಮಾರ್ಥಕಾಮಮೋಕ್ಷಾರ್ಥೈಃ ಸಮಾಸವ್ಯಾಸಕೀರ್ತನೈಃ ।
ತ್ವಯಾ ಭಾರತಸೂರ್ಯೇಣ ನೃಣಾಂ ವಿನಿಹತಂ ತಮಃ ॥೯೪॥

ಧರ್ಮ, ಅರ್ಥ, ಕಾಮ, ಮೋಕ್ಷ ಈ ನಾಲ್ಕು ಪುರುಷಾರ್ಥಗಳನ್ನು ಸಂಕ್ಷಿಪ್ತವಾಗಿ ಹಾಗೂ ವಿಸ್ತಾರವಾಗಿ ನಿರೂಪಿಸುವ ಈ ಭಾರತವೆಂಬ ಸೂರ್ಯನನ್ನು ರಚಿಸಿ ತಾವು ಜೀವರ ಅಜ್ಞಾನವೆಂಬ ಕತ್ತಲೆಯನ್ನು ನಾಶಮಾಡಿದ್ದೀರಿ.

ಪುರಾಣಪೂರ್ಣಚಂದ್ರೇಣ ಶ್ರುತಿಜ್ಯೋತ್ಸ್ನಾ ಪ್ರಕಾಶಿನಾ ।
ನೃಣಾಂ ಕುಮುದಸಾಮ್ಯಾನಾಂ ಕೃತಂ ಬುದ್ಧಿಪ್ರಬೋಧನಮ್ ॥೯೫॥

ಶ್ರುತಿಗಳ ಅರ್ಥವೆಂಬ ಬೆಳದಿಂಗಳ ಪ್ರಕಾಶವುಳ್ಳ ಮಹಾಭಾರತವೆಂಬ ಪೂರ್ಣಚಂದ್ರನಿಂದ ಮತ್ತು ಪುರಾಣಗಳಿಂದ ಕುಮುದದಂತಿರುವ ಸಜ್ಜನರ ಮನಸ್ಸನ್ನು ಉದ್ಬೋಧನಗೊಳಿಸಿದ್ದೀರಿ.

ಇತಿಹಾಸಪ್ರದೀಪೇನ ಮೋಹಾವರಣಘಾತಿನಾ ।
ಲೋಕಗರ್ಭಗೃಹಂ ಕೃತ್ಸ್ನಂ ಯಥಾವತ್ ಸಂಪ್ರಕಾಶಿತಮ್ ॥೯೬॥

ಈ ಮಹಾಭಾರತವೆಂಬ ಪ್ರದೀಪವು ಮೋಹವೆಂಬ ಆವರಣವನ್ನು ನಾಶಮಾಡುವಂತಹದು. ಇದರಿಂದ ತಾವು ಎಲ್ಲಾ ಸುಜೀವರ ಅಂತರ ಹೃದಯದ ಅಂಧಕಾರವನ್ನು ಹೋಗಲಾಡಿಸಿ ಅಲ್ಲಿ ಪ್ರಕಾಶವನ್ನು ತುಂಬಿದ್ದೀರಿ.

ಸಂಗ್ರಹಾಧ್ಯಾಯಬೀಜೋ ವೈ ಪೌಲೋಮಾಸ್ತಿಕಮೂಲವಾನ್ ।
ಸಂಭವಸ್ಕಂಧವಿಸ್ತಾರಃ ಸಭಾರಣ್ಯವಿಟಂಕವಾನ್ ॥೯೭॥

ಈ ಮಹಾಭಾರತವು ಮಹಾವೃಕ್ಷಕ್ಕೆ ಸದೃಶವಾದದ್ದು. ಈ ವೃಕ್ಷಕ್ಕೆ ಮೊದಲನೆಯ ಅಧ್ಯಾಯವಾದ ಈ ಸಂಗ್ರಹಾಧ್ಯಾಯವೇ ಬೀಜ. ಪೌಲೋಮ ಮತ್ತು ಆಸ್ತೀಕಪರ್ವಗಳೇ ಬುಡ. ಸಂಭವಪರ್ವವು ಬುಡದಿಂದ ಮೇಲೆ ಬರುವ ವಿಸ್ತಾರ. ಸಭಾ ಮತ್ತು ಆರಣ್ಯಪರ್ವಗಳು ಅದರ ಕವಲುಗಳು.

ಆರಣ್ಯಪರ್ವರೂಪಾಢ್ಯೋ ವಿರಾಟೋದ್ಯೋಗಸಾರವಾನ್ ।
ಭೀಷ್ಮಪರ್ವಮಹಾಶಾಖೋ ದ್ರೋಣಪರ್ವಪಲಾಶವಾನ್ ॥೯೮॥

ಆರಣ್ಯಪರ್ವವು ಅದರ ರೂಪ. ವಿರಾಟ ಮತ್ತು ಉದ್ಯೋಗಪರ್ವಗಳು ಆ ವೃಕ್ಷದ ಸಾರ. ಭೀಷ್ಮಪರ್ವವು ಒಂದು ಮಹಾಶಾಖೆ. ದ್ರೋಣಪರ್ವವು ಸಣ್ಣರೆಂಬೆಗಳಂತೆ.

ಕರ್ಣಪರ್ವಚಿತ್ರೈಃ ಪುಷ್ಪೈಃ ಶಲ್ಯ ಪರ್ವಸುಗಂಧಿಭಿಃ ।
ಸ್ತ್ರೀಪರ್ವೈಷೀಕವಿಶ್ರಾಮಃ ಶಾಂತಿಪರ್ವಮಹಾಫಲಃ ॥೯೯॥

ಕರ್ಣಪರ್ವ ಎಂಬುದು ಆರಿಸಿದ ಪುಷ್ಪ ಇದ್ದಂತೆ. ಅದು ಶಲ್ಯಪರ್ವ ಎಂಬ ಸುಗಂಧದಿಂದ ಯುಕ್ತವಾಗಿದೆ. ಸ್ತ್ರೀಪರ್ವ ಮತ್ತು ಇಷೀಕಪರ್ವಗಳು ಆ ಮರದಲ್ಲಿರುವ ವಿಶ್ರಾಮಸ್ಥಾನ. ಶಾಂತಿಪರ್ವವು ವೃಕ್ಷದ ಶ್ರೇಷ್ಠಫಲ.

ಆಶ್ವಮೇಧಾಮೃತರಸಃ ಸಾಶ್ರಮಸ್ಥಾನಸಂಶ್ರಯಃ ।
ಮೌಸಲಶ್ರುತಿಸಂಕ್ಷೇಪಃ ಶಿಷ್ಟದ್ವಿಜನಿಷೇವಿತಃ ॥೧೦೦॥

ಅಶ್ವಮೇಧಪರ್ವವು ಆ ಫಲದ ಶ್ರೇಷ್ಠವಾದರಸ. ಸ್ವರ್ಗಾರೋಹಣಪರ್ವವು ಆ ವೃಕ್ಷದ ಮೇಲ್ಭಾಗದ ವಿಸ್ತಾರವಾದ ಸ್ಥಳ. ಮೌಸಲಪರ್ವವು ವೃಕ್ಷದ ಅವಸಾನ. ಇದರಲ್ಲಿ ಸಜ್ಜನರು ಎಂಬ ಪಕ್ಷಿಗಳು ವಾಸಿಸುತ್ತಾರೆ.

ಸರ್ವೇಷಾಂ ಕವಿಮುಖ್ಯಾನಾಂ ಉಪಜೀವ್ಯೋ ಭವಿಷ್ಯತಿ ।
ಪರ್ಜನ್ಯ ಇವ ಭೂತಾನಾಮಾಶ್ರಯೋ ಭಾರತದ್ರುಮಃ ॥೧೦೧॥

ಮಳೆಯನ್ನು ಎಲ್ಲಾ ಪ್ರಾಣಿಗಳೂ ಸಸ್ಯಗಳೂ ಆಶ್ರಯಿಸಿದಂತೆ ಎಲ್ಲಾ ಶ್ರೇಷ್ಠರಾದ ಕವಿಗಳು ಈ ಮಹಾಭಾರತವನ್ನು ಆಶ್ರಯಿಸುತ್ತಾರೆ. ಇದು ಅಂತಹ ಶ್ರೇಷ್ಠವಾದ ವೃಕ್ಷ.

ಸೂತಃ

ಏವಮಾಭಾಷ್ಯ ತಂ ಬ್ರಹ್ಮಾ ಜಗಾಮ ಸ್ವಂ ನಿವೇಶನಮ್ ।
ಭಗವಾನ್ ಸ ಜಗತ್ಸ್ರಷ್ಟಾ ಋಷಿರ್ದೇವಗಣೈಃ ಸಹ ॥೧೦೨॥

ಪೂಜ್ಯರಾದ ಸೃಷ್ಟಿಕರ್ತರಾದ ಜ್ಞಾನಿಗಳಾದ ಚತುರ್ಮುಖಬ್ರಹ್ಮರು ವ್ಯಾಸರನ್ನು ಕುರಿತು ಹೀಗೆ ಮಾತನಾಡಿ ಮತ್ತು ದೇವತೆಗಳಿಂದ ಸಹಿತರಾಗಿ ತಮ್ಮ ಲೋಕಕ್ಕೆ ಹಿಂದಿರುಗಿದರು.

ತಸ್ಯ ವೃಕ್ಷಸ್ಯ ವಕ್ಷ್ಯಾಮಿ ಶಾಖಾಪುಷ್ಪಫಲೋದಯಮ್ ।
ಸ್ವಾದುಮೇಧ್ಯರಸೋಪೇತಮಚ್ಛೇದ್ಯಮಮರೈರಪಿ ॥೧೦೩॥

ನಾನು ನಿಮಗೆ ಆ ವೃಕ್ಷದ ಶಾಖೆಗಳ, ಪುಷ್ಪಗಳ ಮತ್ತು ಫಲಗಳ ಉತ್ಪತ್ತಿಯನ್ನು ನಿರೂಪಿಸುತ್ತೇನೆ. ಅದರಲ್ಲಿರುವ ರಸವು ಸಿಹಿಯಾಗಿದೆ ಮತ್ತು ಸ್ವೀಕಾರಾರ್ಹವಾದುದು. ಅಂತಹ ವೃಕ್ಷವನ್ನು ದೇವತೆಗಳೂ ನಾಶಮಾಡಲಾರರು.

ಅನುಕ್ರಮಣಮಧ್ಯಾಯಂ ವೃತ್ತಾಂತಂ ಸರ್ವಪರ್ವಣಾಮ್ ।
ಇದಂ ದ್ವೈಪಾಯನಃ ಪೂರ್ವಂ ಪುತ್ರಮಧ್ಯಾಪಯಚ್ಛುಕಮ್ ॥೧೦೪॥

ಎಲ್ಲ ಪರ್ವಗಳ ವೃತ್ತಾಂತವನ್ನು ಸಂಕ್ಷೇಪವಾಗಿ ಸೂಚಿಸುವ ಅನುಕ್ರಮಣಿಕಾ ಅಧ್ಯಾಯವನ್ನು ವೇದವ್ಯಾಸರು ಮೊದಲು ರಚಿಸಿ ತಮ್ಮ ಮಕ್ಕಳಾದ ಶುಕಾಚಾರ್ಯರಿಗೆ ಪಾಠವನ್ನು ಹೇಳಿದರು.

ತತೋಽನ್ಯೇಭ್ಯೋಽಭಿರೂಪೇಭ್ಯಃ ಶಿಷ್ಯೇಭ್ಯಃ ಪ್ರದದೌ ಪ್ರಭುಃ ।
ನಾರದೋಽಧ್ಯಾಪಯದ್ ದೇವಾನಸಿತೋ ದೇವಲಃ ಪಿತ್ರ್ಯಾನ್ ॥೧೦೫॥

ಅನಂತರ ಪ್ರಭುಗಳಾದ ವೇದವ್ಯಾಸರು ತಮಗೆ ಅನುರೂಪರಾದ ಬೇರೆ ಬೇರೆ ಶಿಷ್ಯರಿಗೆ ಅದನ್ನು ಬೋಧಿಸಿದರು. ನಾರದರು ದೇವತೆಗಳಿಗೂ, ಅಸಿತರು ಮತ್ತು ದೇವಲರು ಪಿತೃಗಳಿಗೂ ಈ ಮಹಾಭಾರತವನ್ನು ಉಪದೇಶಿಸಿದರು.

ಗಂಧರ್ವಯಕ್ಷರಕ್ಷಾಂಸಿ ಶ್ರಾವಯಾಮಾಸ ವೈ ಶುಕಃ ।
ವೈಶಂಪಾಯನವಿಪ್ರರ್ಷಿಃ ಶ್ರಾವಯಾಮಾಸ ಪಾರ್ಥಿವಮ್ ।
ಪಾರೀಕ್ಷಿತಂ ಮಹಾತ್ಮಾನಂ ನಾಮ್ನಾ ತು ಜನಮೇಜಯಮ್ ॥೧೦೬॥

ಶುಕಾಚಾರ್ಯರು ಗಂಧರ್ವರಿಗೆ, ಯಕ್ಷರಿಗೆ ಮತ್ತು ರಾಕ್ಷಸರಿಗೆ ಈ ಮಹಾಭಾರತವನ್ನು ಉಪದೇಶಿಸಿದರು. ವೈಶಂಪಾಯನರು ಪರೀಕ್ಷಿತನ ಮಗನಾದ ಮಹಾತ್ಮನಾದ ಜನಮೇಜಯರಾಜನಿಗೆ ಇದನ್ನು ಶ್ರವಣ ಮಾಡಿಸಿದರು.

ದುರ್ಯೋಧನೋ ಮನ್ಯು ಮಯೋ ಮಹಾದ್ರುಮಃ
ಸ್ಕಂಧಃ ಕರ್ಣಃ ಶಕುನಿಸ್ತಸ್ಯ ಶಾಖಾ ।
ದುಃಶಾಸನಃ ಪುಷ್ಪಫಲೇ ಸಮೃದ್ಧೇ
ಮೂಲಂ ರಾಜಾ ಧೃತರಾಷ್ಟ್ರೋಽಂಬಿಕೇಯಃ ॥೧೦೭॥

ಕ್ರೋಧಶೀಲನಾದ ದುರ್ಯೋಧನನೇ ಒಂದು ವೃಕ್ಷ, ಕರ್ಣನು ಅದರ ಹೆಗಲು ಶಕುನಿಯು ಅದರ ಶಾಖೆ (ಕೊಂಬೆ), ದುಃಶಾಸನನು ಸಮೃದ್ಧವಾದ ಪುಷ್ಪ ಮತ್ತು ಫಲ. ಆ ವೃಕ್ಷದ ಬುಡವೆಂದರೆ ಅಂಬಿಕಾಸುತನಾದ ಧೃತರಾಷ್ಟ್ರರಾಜ.

ಯುಧಿಷ್ಠಿರೋ ಧರ್ಮಮಯೋ ಮಹಾದ್ರುಮಃ
ಸ್ಕಂಧೋಽರ್ಜುನೋ ಭೀಮಸೇನೋಽಸ್ಯ ಶಾಖಾ ।
ಮಾದ್ರೀಸುತೌ ಪುಷ್ಪಫಲೇ ಸಮೃದ್ಧೇ
ಮೂಲಂ ಕೃಷ್ಣೋ ಬ್ರಹ್ಮ ಚ ಬ್ರಾಹ್ಮಣಾಶ್ಚ ॥೧೦೮॥

ಧರ್ಮಾತ್ಮನಾದ ಯುಧಿಷ್ಠಿರನು ಇನ್ನೊಂದು ಮಹಾವೃಕ್ಷ. ಅರ್ಜುನನು ಅದರ ಸ್ಕಂಧ. ಭೀಮಸೇನನು ಅದರ ಶಾಖೆ, ಮಾದ್ರಿಯಮಕ್ಕಳಾದ ನಕುಲಸಹದೇವರು ಅದರ ಸಮೃದ್ಧವಾದ ಪುಷ್ಪ ಫಲಗಳು. ಆ ಮರದ ಮೂಲವೆಂದರೆ ಶ್ರೀಕೃಷ್ಣ, ಬ್ರಾಹ್ಮಣರು ಮತ್ತು ವೇದಗಳು.

ಪಾಂಡುರ್ಜಿತ್ವಾ ಬಹೂನ್ ದೇಶಾನ್ ಯುಧಾ ವಿಕ್ರಮಣೇನ ಚ ।
ಅರಣ್ಯೇ ಮೃಗಯಾಶೀಲೋ ನ್ಯವಸತ್ ಸಜನಸ್ತದಾ ।
ಮೃಗವ್ಯಾಜರ್ಷಿನಿಧನೇ ಕೃಚ್ಛ್ರಾಂ ಪ್ರಾಪ ಸ ಆಪದಮ್ ॥೧೦೯॥

ಪಾಂಡುವು ತನ್ನ ಪರಾಕ್ರಮದಿಂದ ಯುದ್ಧದಲ್ಲಿ ಅನೇಕದೇಶಗಳನ್ನು ಗೆದ್ದು, ಅರಣ್ಯದಲ್ಲಿ ತನ್ನ ಪತ್ನಿಯರೊಡನೆ ಬೇಟೆಯನ್ನು ಆಡುತ್ತಾ ವಾಸಿಸಿದನು. ಜಿಂಕೆಯ ರೂಪವನ್ನು ಧರಿಸಿದ್ದ ಋಷಿಯಶಾಪದ ನಿಮಿತ್ತವಾಗಿ ಅವನು ಕಷ್ಟಕ್ಕೆ ಸಿಲುಕಿದನು.

ಜನ್ಮಪ್ರಭೃತಿ ಪಾರ್ಥಾನಾಂ ತತ್ಸಾಚಾರವಿಧಿಕ್ರಮಃ ।
ಮಾತುರಭ್ಯುಪಪತ್ತಿಶ್ಚ ಧರ್ಮೋಪನಿಷದಂ ಪ್ರತಿ ।
ಧರ್ಮಸ್ಯ ವಾಯೋಃ ಶಕ್ರಸ್ಯ ದೇವಯೋಶ್ಚ ತಥಾऽಶ್ವಿನೋಃ ॥೧೧೦॥

ಪಾಂಡವರು ಹುಟ್ಟಿದಾಗಿನಿಂದಲೂ ಅವರು ಸದಾಚಾರಗಳನ್ನು ಮತ್ತು ಧರ್ಮಶಿಕ್ಷಣವನ್ನು ಅವರ ತಾಯಿಯಾದ ಕುಂತಿಯಿಂದಲೂ ಮತ್ತು ಜನಕರಾದ ಧರ್ಮ, ವಾಯು, ಇಂದ್ರ ಮತ್ತು ಅಶ್ವಿನಿದೇವತೆಗಳಿಂದಲೂ ಪಡೆದರು.

ತತೋ ಧರ್ಮೋಪನಿಷದಃ ಶ್ರುತ್ವಾ ಭರ್ತುಃ ಪ್ರಿಯಾ ಪೃಥಾ ।
ಧರ್ಮಾನಿಲೇಂದ್ರಾಂಸ್ತಾಭಿಃ ಸಾऽऽಜುಹಾವ ಸುತವಾಂಛಯಾ ॥೧೧೧॥

ಕುಂತಿಯು ದೂರ್ವಾಸರಿಂದ ಮಂತ್ರೋಪದೇಶವನ್ನು ಪಡೆದು, ತನ್ನ ಪತಿಯ ಪ್ರೇರಣೆಯಂತೆ ಯಮ, ವಾಯು ಮತ್ತು ಇಂದ್ರರನ್ನು ಕರೆದು, ಅವರಿಂದ ಮಕ್ಕಳನ್ನು ಪಡೆದಳು.

ತದ್ದತ್ತೋಪನಿಷನ್ಮಾದ್ರೀ ಚಾಶ್ವಿನಾವಾಜುಹಾವ ಚ ।
ಜಾತಾಃ ಪಾರ್ಥಾಸ್ತತಃ ಕಾಮೀ ಪಾಂಡುರ್ಮಾದ್ರ್ಯಾ ದಿವಂ ಗತಃ ॥೧೧೨॥

ಮಾದ್ರಿಯು ಕುಂತಿಯಿಂದ ಮಂತ್ರೋಪದೇಶವನ್ನು ಪಡೆದು ಅಶ್ವಿನಿದೇವತೆಗಳನ್ನು ಆಹ್ವಾನಿಸಿ ಅವರಿಂದ ಮಕ್ಕಳನ್ನು ಪಡೆದಳು. ಹೀಗೆ ಮಕ್ಕಳನ್ನು ಪಡೆದಮೇಲೆ ಪಾಂಡುವು ಮಾದ್ರಿಯನಿಮಿತ್ತವಾಗಿ ಕಾಮವನ್ನು ಹೊಂದಿ ಸ್ವರ್ಗಸ್ಥನಾದನು.

ತಾಪಸೈಃ ಸಹ ಸಂವೃದ್ಧಾ ಮಾತ್ರಾ ಚ ಪರಿರಕ್ಷಿತಾಃ ।
ಮಧ್ಯೇऽರಣ್ಯೇಷು ಪುಣ್ಯೇಷು ಮಹತಾಮಾಶ್ರಮೇಷು ಚ ॥೧೧೩॥

ಪಾಂಡವರು ಋಷಿಗಳಿಂದ ರಕ್ಷಿಸಲ್ಪಟ್ಟು, ಋಷಿಕುಮಾರರ ಜೊತೆಯಲ್ಲಿ ಕಾಡಿನ ಮಧ್ಯದಲ್ಲಿ ಪವಿತ್ರವಾದ ಆಶ್ರಮಗಳಲ್ಲಿ ಬೆಳೆದರು.

ಋಷಿಭಿಶ್ಚ ಸಹಾಸೀನಾನ್ ಧಾರ್ತರಾಷ್ಟ್ರಾನ್ ಪ್ರತಿ ಸ್ವಯಮ್ ।
ಶಿಶವಶ್ಚಾಭಿರೂಪಾಶ್ಚ ಜಟಿಲಾ ಬ್ರಹ್ಮಚಾರಿಣಃ ॥೧೧೪॥

ಪುತ್ರಾಶ್ಚ ಭ್ರಾತರಶ್ಚೇಮೇ ಶಿಷ್ಯಾಶ್ಚ ಸುಹೃದಶ್ಚ ವಃ ।
ಪಾಂಡವಾ ಏತ ಇತ್ಯುಕ್ತ್ವಾ ಮುನಯೋಂಽತರ್ಹಿತಾಸ್ತತಃ ॥೧೧೫॥

ಆ ಆಶ್ರಮದ ಋಷಿಗಳು ತಮ್ಮೊಟ್ಟಿಗೆ ಇರುವ ಪಾಂಡವರನ್ನು ಧೃತರಾಷ್ಟ್ರನ ಆಸ್ಥಾನಕ್ಕೆ ಕರೆದುಕೊಂಡು ಬಂದರು. ಆಸೀನನಾದ ಧೃತರಾಷ್ಟ್ರನನ್ನು ಮತ್ತು ಅವನ ಸಂಬಂಧಿಕರನ್ನು ಕುರಿತು, ಇವರು ನಿಮ್ಮ ಮಕ್ಕಳು, ನಿಮ್ಮವಂಶಕ್ಕೆ ಅನುರೂಪರಾಗಿದ್ದಾರೆ, ಎಲ್ಲರೂ ವ್ರತಸ್ಥರಾದ ಬ್ರಹ್ಮಚಾರಿಗಳು. ಇವರು ನಿನಗೆ ಮಕ್ಕಳು ಮತ್ತು ನಿನ್ನ ಮಕ್ಕಳಿಗೆ ಸಹೋದರರು. ಇವರು ನಿನ್ನ ಶಿಷ್ಯರು, ಬಂಧುಗಳೂ ಆಗಿದ್ದಾರೆ ಎಂದು ಹೇಳಿ ಪಾಂಡವರನ್ನು ಒಪ್ಪಿಸಿ ಎಲ್ಲರೂ ಅಂತರ್ಧಾನವನ್ನು ಹೊಂದಿದರು.

ತೈಸ್ತಾನ್ ನಿವೇದಿತಾನ್ ಶ್ರುತ್ವಾ ಪಾಂಡವಾನ್ ಕೌರವಾಸ್ತದಾ ।
ಶಿಷ್ಟಾಶ್ಚ ವರ್ಣಾಃ ಪೌರಾ ಯೇ ತೇ ಹರ್ಷಾಚ್ಚುಕ್ರುಶುರ್ಭೃಶಮ್ ॥೧೧೬॥

ಋಷಿಗಳಿಂದ ನಿವೇದಿಸಲ್ಪಟ್ಟ ಪಾಂಡವರನ್ನು ನೋಡಿದ ಕುರುವಂಶ ಮುಖ್ಯಸ್ಥರು ಮತ್ತು ಅಲ್ಲಿದ್ದ ಎಲ್ಲಾ ವರ್ಣಗಳಿಗೆ ಸೇರಿದ ಶಿಷ್ಯರಾದ ಪೌರರೆಲ್ಲರೂ ಸಂತೋಷದಿಂದ ಅಟ್ಟಹಾಸವನ್ನು ಮಾಡಿ ಕೇಕೆಹಾಕಿದರು.

ಆಹುಃ ಕೇಚಿನ್ನ ತಸ್ಯೈತೇ ತಸ್ಯೈತ ಇತಿ ಚಾಪರೇ ।
ಯದಾ ಚಿರಂ ಮೃತಃ ಪಾಂಡುಃ ಕಥಂ ತಸ್ಯೇತಿ ಚಾಪರೇ ॥೧೧೭॥

ಅಲ್ಲಿ ಕೆಲವರು ಸಜ್ಜನರು ಇಂತಹ ಮಕ್ಕಳು ಯಾರಿಗೆ ತಾನೇ ಬೇಡ ಎಂದು ಹೇಳಿದರು. ಇನ್ನು ಕೆಲವರು ಮಿಶ್ರಜೀವರು 'ಇವರು ಯಾವ ಪುಣ್ಯಾತ್ಮನ ಮಕ್ಕಳು?' ಎಂದು ಸಂಶಯ ತಾಳಿದರು. ಇನ್ನು ಕೆಲವರು ಅಧಮ ಜೀವರು ಪಾಂಡುವು ಮೃತನಾಗಿ ಬಹಳ ಕಾಲ ಕಳೆದಿರುವಾಗ ಇವರು ಹೇಗೆ ಪಾಂಡುವಿನ ಮಕ್ಕಳು ಎಂದು ಆಕ್ಷೇಪಿಸಿದರು.

ಸ್ವಾಗತಂ ಸರ್ವಥಾ ದಿಷ್ಟ್ಯಾ ಪಾಂಡೋಃ ಪಶ್ಯಾಮ ಸಂತತಿಮ್ ।
ಉಚ್ಯತಾಂ ಸ್ವಾಗತಮಿತಿ ವಾಚೋಽಶ್ರೂಯಂತ ಸರ್ವಶಃ ॥೧೧೮॥

ಶಿಷ್ಟರೆಲ್ಲರೂ ಸಂತೋಷಪಟ್ಟರು, ಅವರಿಗೆ ಸ್ವಾಗತವನ್ನು ಕೋರಿದರು, ದೇವರ ದಯೆಯಿಂದ ನಾವು ಪಾಂಡುವಿನ ಸಂತತಿಯನ್ನು ನೋಡುತ್ತಿದ್ದೇವೆ. ಅವರಿಗೆ ಎಲ್ಲರೂ ಸ್ವಾಗತವನ್ನು ಹೇಳಿ ಎಂಬ ಮಾತು ಎಲ್ಲಾ ಕಡೆಗಳಿಂದಲೂ ಕೇಳಿಬಂದವು.

ತಸ್ಮಿನ್ನುಪರತೇ ಶಬ್ದೇ ದಿಶಃ ಸರ್ವಾ ವಿನಾದಯನ್ ।
ಅಂತರ್ಹಿತಾನಾಂ ಭೂತಾನಾಂ ನಿಸ್ವನಸ್ತುಮುಲೋಽಭವತ್ ॥೧೧೯॥

ಆ ಮಾತುಗಳು ಮುಗಿಯುತ್ತಿದಂತೆಯೇ ಎಲ್ಲ ದಿಕ್ಕುಗಳಲ್ಲಿಯೂ ಅದೃಶ್ಯವಾದ ದೇವಾದಿಗಳಿಂದ ದೊಡ್ಡ ಧ್ವನಿಯು ಉಂಟಾಯಿತು.

ಪುಷ್ಪವೃಷ್ಟಿಃ ಶುಭಾ ಗಂಧಾಃ ಶಂಖದುಂದುಭಿನಿಸ್ವನಾಃ ।
ಆಸನ್ ಪ್ರವೇಶೇ ಪಾರ್ಥಾನಾಂ ತದದ್ಭುತಮಿವಾಭವತ್ ॥೧೨೦॥

ಅಂತರಿಕ್ಷದಿಂದ ಪುಷ್ಪವೃಷ್ಟಿಯಾಯಿತು. ಎಲ್ಲ ಕಡೆಯೂ ಸುಗಂಧಯುಕ್ತವಾದ ಗಾಳಿಯು ಬೀಸಿತು. ಶಂಖದುಂದುಭಿನಾದವು ಕೇಳಿಬಂದವು. ಪಾಂಡವರು ಧೃತರಾಷ್ಟ್ರನ ಸಭೆಗೆ ಪ್ರವೇಶಿಸಿದಾಗ ಇಂತಹ ಅದ್ಭುತವು ಜರುಗಿತು.

ತತ್ಪ್ರೀತ್ಯಾ ಚೈವ ಸರ್ವೇಷಾಂ ಪೌರಾಣಾಂ ಹರ್ಷಸಂಭವಃ ।
ಶಬ್ದಶ್ಚಾಸೀನ್ಮಹಾಂಸ್ತತ್ರ ದಿವಿಸ್ಪೃಕ್ ಕೀರ್ತಿವರ್ಧನಃ ॥೧೨೧॥

ಆ ಪಾಂಡವರಮೇಲಿನ ಪ್ರೀತಿಯಿಂದ ಪೌರರು ಸಂತೋಷದಿಂದ ಕೇಕೆಹಾಕಿದ ಮಹಾಶಬ್ದವು ಆಕಾಶವನ್ನು ವ್ಯಾಪಿಸಿ ಅವರಿಗೆ ಕೀರ್ತಿಯನ್ನು ಉಂಟುಮಾಡುವುದಾಯಿತು.

ತೇಽಧೀತ್ಯ ಸಕಲಾನ್ ವೇದಾನ್ ಶಾಸ್ತ್ರಾಣಿ ವಿವಿಧಾನಿ ಚ ।
ನ್ಯವಸನ್ ಪಾಂಡವಾಸ್ತತ್ರ ಪೂಜಿತಾ ಅಕುತೋಭಯಾಃ ॥೧೨೨॥

ಆ ಪಾಂಡವರು ಎಲ್ಲಾ ವೇದಗಳನ್ನೂ ವಿವಿಧಶಾಸ್ತ್ರಗಳನ್ನೂ ಅಧ್ಯಯನ ಮಾಡಿ ಎಲ್ಲರಿಂದ ಸತ್ಕರಿಸಲ್ಪಟ್ಟು ಯಾವ ಭಯವೂ ಇಲ್ಲದೆ, ಕೆಲವು ಕಾಲ ವಾಸಮಾಡಿದರು.

ಯುಧಿಷ್ಠಿರಸ್ಯ ಶೌಚೇನ ಪ್ರೀತಾಃ ಪ್ರಕೃತಯೋಽಭವನ್ ।
ಧೃತ್ಯಾ ಚ ಭೀಮಸೇನಸ್ಯ ವಿಕ್ರಮೇಣಾರ್ಜುನಸ್ಯ ಚ ॥೧೨೩॥

ಪ್ರಜೆಗಳಿಗೆ ಯುಧಿಷ್ಠಿರನ ಸತ್ಯಸಂಧತೆಯಿಂದಲೂ, ಭೀಮಸೇನನ ಬಲದಿಂದಲೂ, ಅರ್ಜುನನ ವಿಕ್ರಮದಿಂದಲೂ, ಬಹಳ ಸಂತೋಷವಾಯಿತು.

ಗುರುಶುಶ್ರೂಷಯಾ ಕುಂತ್ಯಾ ಯಮಯೋರ್ವಿನಯೇನ ಚ ।
ತುತೋಷ ಲೋಕಃ ಸಕಲಸ್ತೇಷಾಂ ಶೌರ್ಯಗುಣೇನ ಚ ॥೧೨೪॥

ಕುಂತಿಯ ಗುರುಶುಶ್ರೂಷೆಯಿಂದಲೂ, ನಕುಲಸಹದೇವರ ವಿನಯದಿಂದಲೂ ಮತ್ತು ಐದೂ ಜನರಲ್ಲಿರುವ ಶೌರ್ಯಗುಣದಿಂದಲೂ ಎಲ್ಲಾ ಜನರೂ ಸಂತೋಷಪಟ್ಟರು.

ಸಮವಾಯೇ ತದಾ ರಾಜ್ಞಾಂ ಕನ್ಯಾಂ ಭರ್ತೃಸ್ವಯಂವರಾಮ್ ।
ಪ್ರಾಪ್ತವಾನರ್ಜುನಃ ಕೃಷ್ಣಾಂ ಕೃತ್ವಾ ಕರ್ಮ ಸುದುಷ್ಕರಮ್ ॥೧೨೫॥

ರಾಜರ ಸಮುದಾಯದಲ್ಲಿ ಅರ್ಜುನನು ಸ್ವಯಂವರಸ್ಥಳಾದ ದ್ರೌಪದಿಯನ್ನು ಅತ್ಯಂತ ದುಷ್ಕರವಾದ ಮತ್ಸ್ಯಯಂತ್ರವನ್ನು ಭೇದಿಸಿ ಪಡೆದನು.

ತದಾಪ್ರಭೃತಿ ಲೋಕೇಽಸ್ಮಿನ್ಪೂಜ್ಯಃ ಸರ್ವಧನುಷ್ಮತಾಮ್ ।
ಆದಿತ್ಯ ಇವ ದುಷ್ಪ್ರೇಕ್ಷ್ಯಃ ಸಮರೇಷ್ವಪಿ ಚಾಭವತ್ ॥೧೨೬॥

ಅಂದಿನಿಂದ ಆರಂಭಿಸಿ ಅರ್ಜುನನು ಎಲ್ಲಾ ಧನುರ್ಧಾರಿಗಳಿಗೂ ಪರಮಪೂಜ್ಯನಾದನು. ಯುದ್ಧಗಳಲ್ಲಿ ನೋಡಲು ಅಸಾಧ್ಯವಾದ ತೇಜಸ್ಸುಳ್ಳ ಸೂರ್ಯನಂತೆ ಬೆಳಗಿದನು.

ಸ ಸರ್ವಾನ್ ಪಾರ್ಥಿವಾನ್ ಜಿತ್ವಾ ಸರ್ವಾಂಶ್ಚ ಮಹತೋ ಗಣಾನ್ ।
ಆಜಹಾರಾರ್ಜುನೋ ರಾಜ್ಞೋ ರಾಜಸೂಯಂ ಮಹಾಕ್ರತುಮ್ ॥೧೨೭॥

ಆ ಅರ್ಜುನನು ಎಲ್ಲಾ ರಾಜರನ್ನೂ ಎಲ್ಲಾ ದೊಡ್ಡಸೈನ್ಯಗಳನ್ನೂ ಗೆದ್ದು ಅಣ್ಣನಾದ ಧರ್ಮರಾಜನಿಂದ ರಾಜಸೂಯಮಹಾಯಾಗವನ್ನು ಮಾಡಿಸಿದನು.

ಅನ್ನವಾನ್ ದಕ್ಷಿಣಾವಾಂಶ್ಚ ಸರ್ವೈಃ ಸಮುದಿತೋ ಗುಣೈಃ ।
ಯುಧಿಷ್ಠಿರೇಣ ಸಂಪ್ರಾಪ್ತೋ ರಾಜಸೂಯೋ ಮಹಾಕ್ರತುಃ ॥೧೨೮॥

ಯುಧಿಷ್ಠರನು ಬಹಳ ಅನ್ನದಾನದಿಂದಲೂ, ಬಹಳ ದಕ್ಷಿಣಾದಾನದಿಂದಲೂ ಮತ್ತು ಎಲ್ಲಾಶ್ರೇಷ್ಠವಾದ ಗುಣಗಳಿಂದಲೂ ಕೂಡಿದ ರಾಜಸೂಯ ಮಹಾಯಾಗವನ್ನು ನೆರವೇರಿಸಿದನು.

ಸುನಯಾದ್ ವಾಸುದೇವಸ್ಯ ಭೀಮಾರ್ಜುನಬಲೇನ ಚ ।
ಘಾತಯಿತ್ವಾ ಜರಾಸಂಧಂ ಚೈದ್ಯಂಚ ಬಲದರ್ಪಿತಮ್ ॥೧೨೯॥

ಕೃಷ್ಣನ ನೀತಿಯಿಂದಲೂ ಮತ್ತು ಭೀಮಾರ್ಜುನರ ಬಲದಿಂದಲೂ ಜರಾಸಂಧನನ್ನು ಕೊಲ್ಲಿಸಿ ಮತ್ತು ಗರ್ವಿಷ್ಟನಾದ ಶಿಶುಪಾಲನನ್ನು ಸಂಹರಿಸಿ ರಾಜಸೂಯಯಾಗವನ್ನು ನೆರವೇರಿಸಿದನು.

ದುರ್ಯೋಧನಮುಪಾಗಚ್ಛನ್ನರ್ಹಣಾನಿ ತತಸ್ತತಃ ।
ಮಣಿಕಾಂಚನರತ್ನಾನಿ ಗೋಹಸ್ತ್ಯಶ್ವರಥಾದಿಕಮ್ ॥೧೩೦॥

ಆ ರಾಜಸೂಯಯಾಗಕ್ಕೆ ಬಂದ ರತ್ನ, ಸುವರ್ಣ ಮೊದಲಾದ ಎಲ್ಲವಸ್ತುಗಳೂ ಅಶ್ವ, ಗಜ, ರಥ ಮೊದಲಾದ ಎಲ್ಲ ವಸ್ತುಗಳೂ ರಾಜಸೂಯಯಾಗದಲ್ಲಿ ಧನಾಧ್ಯಕ್ಷನಾಗಿದ್ದ ದುರ್ಯೋಧನನ ಹಸ್ತವನ್ನು ಸೇರಿದವು.

ಸಮೃದ್ಧಾಂ ತಾಂ ತತೋ ದೃಷ್ಟ್ವಾ ಪಾಂಡವಾನಾಂ ತದಾಶ್ರಿಯಮ್ ।
ಈರ್ಷ್ಯಾಸಮುತ್ಥಃ ಸುಮಹಾಂಸ್ತಸ್ಯ ಮನ್ಯುರಜಾಯುತ ॥೧೩೧॥

ಪಾಂಡವರ ಆ ಅದ್ಭುತವಾದ ಸಮೃದ್ಧವಾದ ಐಶ್ವರ್ಯವನ್ನು ನೋಡಿದ ದುರ್ಯೋಧನನಿಗೆ ಹೊಟ್ಟೆಕಿಚ್ಚಿನಿಂದಾಗಿ ಪಾಂಡವರ ಮೇಲೆ ಮಹಾಕೋಪ ಉಂಟಾಯಿತು.

ವಿಮಾನಪ್ರತಿಮಾಂ ಚಾಪಿ ಮಯೇನ ಸುಕೃತಾಂ ಸಭಾಮ್ ।
ಪಾಂಡವಾನಾಮುಪಹ್ಯತಾಂ ಸ ದೃಷ್ಟ್ವಾ ಪರ್ಯತಪ್ಯತ ॥೧೩೨॥

ಮಯನು ನಿರ್ಮಿಸಿದ ದೇವತೆಗಳ ವಿಮಾನದಂತಿರುವ ಪಾಂಡವರ ಅದ್ಭುತವಾದ ಸಭೆಯನ್ನು ನೋಡಿ ದುರ್ಯೋಧನನು ಬಹಳ ಸಂತಾಪವನ್ನು ಪಟ್ಟನು

ಯತ್ರಾಪಹಸಿತಶ್ಚಾಸೀತ್ ಪ್ರಸ್ಖಂದನ್ನಿವ ಸಂಭ್ರಮಾತ್ ।
ಪ್ರತ್ಯಕ್ಷಂ ವಾಸುದೇವಸ್ಯ ಭೀಮೇನಾನಭಿಜಾತವತ್ ॥೧೩೩॥

ಆ ಸಭೆಯಲ್ಲಿ ಅವಿವೇಕಿಯಾದ ಸಾಮಾನ್ಯಜನದಂತೆ ಭ್ರಾಂತಿಯಿಂದ ಜಾರಿಬಿದ್ದ ತನ್ನನ್ನು ಕುರಿತು ಭೀಮಸೇನ ಮತ್ತು ಕೃಷ್ಣನು ಮಾಡಿದ ಅಟ್ಟಹಾಸದ ನಗುವಿನ ಅಪಹಾಸಕ್ಕೆ ಅವನು ಪಾತ್ರನಾದನು.

ಸ ಭೋಗಾನ್ ವಿವಿಧಾನ್ ಭುಂಜನ್ ರತ್ನಾನಿ ವಿವಿಧಾನಿ ಚ ।
ಕಥಿತೇ ಧೃತರಾಷ್ಟ್ರಸ್ಯ ವಿವರ್ಣೋ ಮಲಿನಃ ಕೃಶಃ ॥೧೩೪॥

ಅವನು ಎಲ್ಲ ರತ್ನಗಳನ್ನೂ ಭೋಗವನ್ನೂ ಅನುಭವಿಸುತ್ತಿದ್ದರೂ ಧೃತರಾಷ್ಟ್ರನ ಸಮೀಪದಲ್ಲಿ ಅವನು ಚಿಂತೆಯಿಂದ ಕಾಂತಿಹೀನನಾಗಿ ಮಲಿನನೂ ಕೃಶನೂ ಆಗಿದ್ದಾನೆ ಎಂದು ಹೇಳಲ್ಪಟ್ಟಾಗ...

ಅನ್ವಜಾನಾತ್ ತತೋ ದ್ಯೂತಂ ಧೃತರಾಷ್ಟ್ರಃ ಸುತಪ್ರಿಯಃ ।
ತಚ್ಛ್ರುತ್ವಾ ವಾಸುದೇವಸ್ಯ ಕೋಪಃ ಸಮಭವನ್ಮಹಾನ್ ॥೧೩೫॥

ಆ ಕಾರಣದಿಂದಾಗಿ ಸುತಪ್ರಿಯನಾದ ಧೃತರಾಷ್ಟ್ರನು ದ್ಯೂತಕ್ಕೆ ಅನುಮತಿಯನ್ನು ನೀಡಿದನು. ಈ ವಿಷಯವನ್ನು ಕೇಳಿದ ಕೃಷ್ಣನಿಗೆ ಬಹಳ ಕೋಪ ಉಂಟಾಯಿತು.

ನಾತಿಪ್ರೀತಮನಾಶ್ಚಾಸೀದ್ ವಿವಾದಂ ಚಾಪ್ಯುಪೈಕ್ಷತ ।
ದ್ಯೂತಾದೀನನಯಾನ್ ಘೋರಾನ್ ಪ್ರವೃದ್ಧಾಂಶ್ಚಾಪ್ಯುಪೈಕ್ಷತ ॥೧೩೬॥

ಧೃತರಾಷ್ಟ್ರನು ದ್ಯೂತ ಮೊದಲಾದವುಗಳು ಘೋರವಾದ ಅನರ್ಥಕ್ಕೆ ಕಾರಣವೆಂದು ತಿಳಿದಿದ್ದರೂ ಕೂಡ ಬಹಳ ಸಂತೋಷದಿಂದ ಕೂಡಿದ ಮನಸ್ಸು ಇಲ್ಲದಿದ್ದರೂ ಸಹ ಮಗನ ಮೇಲಿನ ಪ್ರೀತಿಯಿಂದ ದ್ಯೂತಕ್ಕೆ ಅನುಮತಿಯನ್ನು ನೀಡಿದನು.

ನಿರಸ್ಯ ವಿದುರಂ ದ್ರೋಣಂ ಭೀಷ್ಮಂ ಶಾರದ್ವತಂ ಕೃಪಮ್ ।
ವಿಗ್ರಹೇ ತುಮುಲೇ ತಸ್ಮಿನ್ನಹನ್ ಕ್ಷತ್ರಂ ಪರಸ್ಪರಮ್ ॥೧೩೭॥

ವಿದುರನನ್ನು ದೂರಕಳುಹಿಸಿದ ಮೇಲೆ ದ್ರೋಣ, ಕೃಪ, ಭೀಷ್ಮರ ಮಾತನ್ನು ಕೇಳದೆ ಘೋರವಾದ ಯುದ್ಧವು ಉಂಟಾದಾಗ ಕ್ಷತ್ರಿಯಜಾತಿಯು ಪರಸ್ಪರವಾಗಿ ಹೊಡೆದಾಡಿಕೊಂಡು ಮರಣವನ್ನು ಅಪ್ಪಿತು.

ಜಯತ್ಸು ಪಾಂಡುಪುತ್ರೇಷು ಶ್ರುತ್ವಾ ಸುಮಹದಪ್ರಿಯಮ್ ।
ದುರ್ಯೋಧನವಧಂ ಶ್ರುತ್ವಾ ಕರ್ಣಸ್ಯ ಶಕುನೇಸ್ತಥಾ ।
ಧೃತರಾಷ್ಟ್ರಶ್ಚಿರಂ ಧ್ಯಾತ್ವಾ ಸಂಜಯಂ ವಾಕ್ಯಮಬ್ರವೀತ್ ॥೧೩೮॥

ಪಾಂಡುಪುತ್ರರು ಜಯಶೀಲರಾಗುತ್ತಿರಲು ಅತ್ಯಂತ ಅಪ್ರಿಯವಾದ ದುರ್ಯೋಧನನವಧೆಯನ್ನೂ, ಶಕುನಿ ಕರ್ಣರ ವಧೆಯನ್ನೂ ಕೇಳಿದ ಧೃತರಾಷ್ಟ್ರನು ಬಹಳಹೊತ್ತು ಚಿಂತಿಸಿ ಸಂಜಯನನ್ನು ಕುರಿತು ಮಾತನಾಡಿದನು.

ಶೃಣು ಸಂಜಯ ಮೇ ಸರ್ವಂ ನ ಮೇಽಸೂಯಿತುಮರ್ಹಸಿ ।
ಶ್ರುತವಾನಸಿ ಮೇಧಾವೀ ಬುದ್ಧಿಮಾನ್ ಪ್ರಾಜ್ಞಸತ್ತಮಃ ॥೧೩೯॥

ಸಂಜಯನೇ ನೀನು ಮೇಧಾವಿಯು, ಪ್ರಾಜ್ಞನು, ಬುದ್ಧಿವಂತನು ಮತ್ತು ಅಧ್ಯಯನಮಾಡಿದವನು ಆಗಿರುವಿ. ನನ್ನ ಮಾತನ್ನು ಕೇಳು ಅಸೂಯೆಪಡಬೇಡ.

ವಿಗ್ರಹೇ ಮಮ ಪುತ್ರಾಣಾಂ ಪಾಂಡೂನಾಂ ಚ ತಥಾ ಸತಿ ।
ನ ಮೇ ವಿಶೇಷಃ ಪುತ್ರೇಷು ಸ್ವೇಷು ಪಾಂಡುಸುತೇಷು ವಾ ॥೧೪೦॥

ನನ್ನ ಮಕ್ಕಳಿಗೂ ಮತ್ತು ಪಾಂಡುವಿನ ಮಕ್ಕಳಿಗೂ ವಿರೋಧ ಉಂಟಾದಾಗ ಅವರಿಬ್ಬರ ಮಧ್ಯ ನನ್ನ ದೃಷ್ಟಿಯಲ್ಲಿ ಯಾವ ವ್ಯತ್ಯಾಸವೂ ಕಾಣುವುದಿಲ್ಲ.

ವೃದ್ಧಂ ಮಾಮಭ್ಯಸೂಯಂತೇ ಪುತ್ರಾ ಮನ್ಯುಪರಾಯಣಾಃ ।
ಅಹಂ ತ್ವಚಕ್ಷುಃ ಕಾರ್ಪಣ್ಯಾತ್ ಪುತ್ರಪ್ರೀತ್ಯಾ ಸಹಾಮಿ ತತ್ ।
ಮುಹ್ಯಂತಂ ಚಾನುಮುಹ್ಯಾಮಿ ದುರ್ಯೋಧನಮಚೇತಸಮ್॥೧೪೧॥

ಕ್ರೋಧಶೀಲರಾದ ನನ್ನ ಮಕ್ಕಳು ವೃದ್ಧನಾದ ನನ್ನನ್ನು ನೋಡಿ ಅಸೂಯೆ ಪಡುತ್ತಾರೆ. ಕಣ್ಣುಗಳನ್ನು ಕಳೆದುಕೊಂಡು ಕಾರ್ಪಣ್ಯದಿಂದ ಜೀವಿಸುವ ನಾನು ನನ್ನ ಪುತ್ರರ ಮೇಲಿನ ವ್ಯಾಮೋಹದಿಂದ ಎಲ್ಲವನ್ನೂ ಸಹಿಸುತ್ತಿದ್ದೇನೆ. ನಾನು ದುರ್ಯೋಧನನ ಮೋಹಕ್ಕೆ ಒಳಗಾಗಿ ಅವನು ದುಃಖಿತನಾದರೆ ನಾನೂ ದುಃಖಿತನಾಗುತ್ತಿದ್ದೇನೆ.

ರಾಜಸೂಯೇ ಶ್ರಿಯಂ ದೃಷ್ಟ್ವಾ ಪಾಂಡವಸ್ಯ ಮಹೌಜಸಃ ।
ತಚ್ಚಾಪಹಸನಂ ಪ್ರಾಪ್ಯ ಸಭಾರೋಹಣದರ್ಶನೇ ॥೧೪೨॥

ಅಮರ್ಷಿತಃ ಸ್ವಯಂ ಜೇತುಮಶಕ್ತಃ ಪಾಂಡವಾನ್ ರಣೇ ।
ನಿರುತ್ಸಾಹಶ್ಚ ಸಂಪ್ರಾಪ್ತುಂ ಶ್ರಿಯಂ ನಕ್ಷತ್ರಿಯೋ ಯಥಾ ।
ಗಾಂಧಾರರಾಜಸಹಿತಶ್ಚದ್ಮದ್ಯೂತಮಮಂತ್ರಯತ್ ॥೧೪೩॥

ರಾಜಸೂಯಯಾಗದಲ್ಲಿ ಮಹಾಪರಾಕ್ರಮಶಾಲಿಯಾದ ಧರ್ಮರಾಜನ ಸಂಪತ್ತನ್ನು ನೋಡಿ, ಮಯನ ಸಭೆಯಲ್ಲಿ ನಡೆದಾಡುವಾಗ ಉಂಟಾದ ಅಪಹಾಸ್ಯವನ್ನು

ಹೊಂದಿ, ಸಿಟ್ಟನ್ನು ಹೊಂದಿದ ನನ್ನ ಮಗನು ಪಾಂಡವರನ್ನು ಯುದ್ಧದಲ್ಲಿ ಗೆಲ್ಲಲು ಸಮರ್ಥನಾಗದೆ ಯುದ್ಧದ ಉತ್ಸಾಹವನ್ನು ಬಿಟ್ಟು ಗಾಂಧಾರರಾಜನಾದ ಶಕುನಿಯ ಮೋಸದ ದ್ಯೂತವನ್ನು ಮಂತ್ರಾಲೋಚನೆ ಮಾಡಿ, ಆ ದ್ಯೂತದ ಸಹಾಯದಿಂದ ಕ್ಷತ್ರಿಯನಿಗೆ ಯೋಗ್ಯವಲ್ಲದ ರೀತಿಯಲ್ಲಿ ಪಾಂಡವರ ಸಂಪತ್ತನ್ನು ಸಂಪಾದಿಸಲು ಪ್ರಯತ್ನಪಟ್ಟನು.

ತತ್ರ ಯದ್ಯದ್ಯಥಾ ಜ್ಞಾತಂ ಮಯಾ ಸಂಜಯ ತಚ್ಛೃಣು ।
ಶ್ರುತ್ವಾ ತು ಮಮ ವಾಕ್ಯಾನಿ ಬುದ್ಧ್ಯಾ ಯುಕ್ತಾನಿ ತತ್ತ್ವತಃ ।
ತತೋ ಜ್ಞಾಸ್ಯಸಿ ಮಾಂ ಸೌತೇ ಪ್ರಜ್ಞಾಚಕ್ಷುಷಮಿತ್ಯುತ ॥೧೪೪॥

ಈ ಸಂದರ್ಭದಲ್ಲಿ ಯಾವ ಯಾವ ಘಟನೆಗಳು ಹೇಗೆ ಸಂಭವಿಸಿದವು ಎಂಬ ವಿಷಯದಲ್ಲಿ ನಾನು ತಿಳಿದಂತೆ ಹೇಳುತ್ತೇನೆ. ನನ್ನ ಮಾತನ್ನು ಕೇಳು. ನನ್ನ ಮಾತುಗಳು ಬುದ್ಧಿಯುಕ್ತವಾದವು ಮತ್ತು ತಾತ್ವಿಕವಾದುವು. ಸಂಜಯನೇ ! ಸೂತಪುತ್ರನೇ ! ನನ್ನ ಮಾತುಗಳನ್ನು ಕೇಳಿ ಅನಂತರ ನನಗೆ ಪ್ರಜ್ಞಾಚಕ್ಷುಸ್ಸು ಇದೆಯೇ ಇಲ್ಲವೇ ? ಎಂದು ನಿರ್ಧರಿಸು.

ಯದಾऽಶ್ರೌಷಂ ಧನುರಾಯಮ್ಯ ಚಿತ್ರಂ
ವಿದ್ಧಂ ಲಕ್ಷ್ಯಂ ಪಾತಿತಂ ವೈ ಪೃಥಿವ್ಯಾಮ್ ।
ಕೃಷ್ಣಾಂ ಹೃತಾಂ ಪಶ್ಯತಾಂ ಸರ್ವರಾಜ್ಞಾಂ
ತದಾ ನಾಶಂಸೇ ವಿಜಯಾಯ ಸಂಜಯ ॥೧೪೫॥

ಸಂಜಯನೇ ! ಅರ್ಜುನನು ಧನುಸ್ಸನ್ನು ಎತ್ತಿ ವಿಚಿತ್ರವಾದ ಲಕ್ಷ್ಯವನ್ನು ಭೇದಿಸಿ, ನೆಲಕ್ಕೆ ಉರುಳಿಸಿ ಭೂಮಿಯ ಎಲ್ಲಾ ರಾಜರ ಸಮ್ಮುಖದಲ್ಲಿ ದ್ರೌಪದಿಯನ್ನು ಪಡೆದನೆಂದು ಕೇಳಿದ ಮೇಲೆ ನಾನು ವಿಜಯವನ್ನು ಆಶಿಸಲಿಲ್ಲ.

ಯದಾऽಶ್ರೌಷಂ ದ್ವಾರಕಾಯಾಂ ಸುಭದ್ರಾಂ
ಪ್ರಸಹ್ಯೋಢಾಂ ಮಾಧವೀಮರ್ಜುನೇನ ।
ಇಂದ್ರಪ್ರಸ್ಥಂ ವೃಷ್ಣಿವೀರೌ ಚ ಯಾತೌ
ತದಾ ನಾಶಂಸೇ ವಿಜಯಾಯ ಸಂಜಯ ॥೧೪೬॥

ಸಂಜಯನೇ ! ಅರ್ಜುನನು ದ್ವಾರಕಾಪಟ್ಟಣದಲ್ಲಿ ಮಧುಕುಲದಲ್ಲಿ ಜನಿಸಿದ ಸುಭದ್ರೆಯನ್ನು ತನ್ನ ಶಕ್ತಿಯಿಂದ ಕರೆದುಕೊಂಡು ಹೋದನೆಂದು ಅನಂತರ ವೃಷ್ಣಿ

ವೀರರಾದ ಕೃಷ್ಣ ಬಲರಾಮರು ಇಂದ್ರಪ್ರಸ್ಥಕ್ಕೆ ಹೋದರೆಂದು ಕೇಳಿದಮೇಲೆ ನಾನು ವಿಜಯವನ್ನು ಆಶಿಸಲಿಲ್ಲ.

ಯದಾऽಶ್ರೌಷಂ ದೇವರಾಜಪ್ರವೃಷ್ಟಂ
ಶರೈರ್ದಿವ್ಯೈರ್ವಾರಿತಮರ್ಜುನೇನ ।
ಅಗ್ನಿಂ ತದಾ ತರ್ಪಿತಂ ಖಾಂಡವೇ ತು
ತದಾ ನಾಶಂಸೇ ವಿಜಯಾಯ ಸಂಜಯ ॥೧೪೭॥

ಸಂಜಯನೇ ! ಅರ್ಜುನನು ದೇವೇಂದ್ರನು ಸುರಿಸಿದ ಪ್ರಭೂತವಾದ ಮಳೆಯನ್ನು ತನ್ನ ದಿವ್ಯವಾದ ಬಾಣಗಳಿಂದ ತಡೆದು ಖಾಂಡವವನದಲ್ಲಿ ಅಗ್ನಿಯನ್ನು ತೃಪ್ತಿಪಡಿಸಿದನೆಂದು ಕೇಳಿದ ಮೇಲೆ, ನಾನು ವಿಜಯವನ್ನು ಆಶಿಸಲಿಲ್ಲ.

ಯದಾऽಶ್ರೌಷಂ ಹೃತರಾಜ್ಯಂ ಯುಧಿಷ್ಠಿರಂ
ಪರಾಜಿತಂ ಸೌಬಲೇನಾಕ್ಷವತ್ಯಾಮ್ ।
ಅನ್ವಾಗತಂ ಭ್ರಾತೃಭಿರಪ್ರಮೇಯೈ-
ಸ್ತದಾ ನಾಶಂಸೇ ವಿಜಯಾಯ ಸಂಜಯ ॥೧೪೮॥

ಸಂಜಯನೇ ! ಯುಧಿಷ್ಠಿರನು ಅಕ್ಷದ್ಯೂತದಲ್ಲಿ ಶಕುನಿಯಿಂದ ಪರಾಜಿತನಾಗಿ ತನ್ನ ರಾಜ್ಯವನ್ನು ಕಳೆದುಕೊಂಡು ಅಪ್ರಮೇಯರಾದ ತನ್ನ ತಮ್ಮಂದಿರಿಂದ ಹಿಂಬಾಲಿಸಲ್ಪಟ್ಟು ಹೋದನೆಂಬ ವಾರ್ತೆಯನ್ನು ಕೇಳಿದಮೇಲೆ ನಾನು ವಿಜಯವನ್ನು ಬಯಸಲಿಲ್ಲ.

ಯದಾऽಶ್ರೌಷಂ ದ್ರೌಪದೀಮಶ್ರುಕಂಠೀಂ
ಸಭಾಂ ನೀತಾಂ ದುಃಖಿತಾಮೇಕವಸ್ತ್ರಾಮ್ ।
ರಜಸ್ವಲಾಂ ನಾಥವತೀಮನಾಥವತ್
ತದಾ ನಾಶಂಸೇ ವಿಜಯಾಯ ಸಂಜಯ ॥೧೪೯॥

ಸಂಜಯನೇ ! ರಜಸ್ವಲೆಯೂ, ಏಕವಸ್ತ್ರಳೂ ಆದ, ರೋದಿಸುತ್ತಿರುವ ದ್ರೌಪದಿಯನ್ನು ಗಂಡಂದಿರಿದ್ದರೂ ಅನಾಥಳಂತೆ ಸಭೆಗೆ ಎಳೆದುಕೊಂಡು ಬಂದ ವಾರ್ತೆಯನ್ನು ಕೇಳಿದ ಮೇಲೆ ನಾನು ವಿಜಯವನ್ನು ಬಯಸಲಿಲ್ಲ.

ಯದಾಽಶ್ರೌಷಂ ಸ್ನಾತಕಾನಾಂ ಸಹಸ್ರೈ-
ರನ್ವಾಗತಂ ಧರ್ಮರಾಜಂ ವನಸ್ಥಮ್ ।
ಭಿಕ್ಷಾಭುಜಾಂ ಬ್ರಹ್ಮಣಾನಾಂ ಮಹಾತ್ಮನಾಂ
ತದಾ ನಾಶಂಸೇ ವಿಜಯಾಯ ಸಂಜಯ ॥೧೫೦॥

ಸಂಜಯನೇ ! ವನಗತನಾದ ಧರ್ಮರಾಜನನ್ನು ಸಹಸ್ರ ಸಂಖ್ಯೆಯಲ್ಲಿ ಸ್ನಾತಕರು ಮತ್ತು ಭಿಕ್ಷುಗಳಾದ ಮಹಾತ್ಮರಾದ ಬ್ರಾಹ್ಮಣರು ಹಿಂಬಾಲಿಸಿದರು ಎಂಬ ವಾರ್ತೆಯನ್ನು ಕೇಳಿದ ಮೇಲೆ ನಾನು ವಿಜಯವನ್ನು ಬಯಸಲಿಲ್ಲ.

ಯದಾಽಶ್ರೌಷಂ ವನವಾಸೇಷು ಪಾರ್ಥಾನ್
ಸಮಾಗತಾನ್ ಋಷಿಮುಖ್ಯೈಃ ಪುರಾಣೈಃ ।
ಉಪಾಸ್ಯಮಾನಾನ್ ಸಕಲೈರ್ಜಾತಸಖ್ಯಾನ್
ತದಾ ನಾಶಂಸೇ ವಿಜಯಾಯ ಸಂಜಯ ॥೧೫೧॥

ಸಂಜಯನೇ ! ವನವಾಸದಲ್ಲಿದ್ದ ಪಾಂಡವರು ಪ್ರಾಚೀನರಾದ ಶ್ರೇಷ್ಠ ಋಷಿಗಳಿಂದ ಸಮಾಗಮವನ್ನು ಹೊಂದಿ ಅವರ ಜೊತೆಯಲ್ಲಿ ಸಖ್ಯವನ್ನು ಹೊಂದಿ ಅವರಿಂದ ಪೂಜಿತರಾದರು ಎಂಬ ವಾರ್ತೆಯನ್ನು ಕೇಳಿದ ಮೇಲೆ ನಾನು ವಿಜಯವನ್ನು ಬಯಸುತ್ತಿಲ್ಲ.

ಯದಾಽಶ್ರೌಷಂ ಚಾರ್ಜುನಂ ದೇವದೇವಂ
ಕಿರಾತವೇಷಂ ತ್ರ್ಯಂಬಕಂ ತೋಷ್ಯ ಯುದ್ಧೇ ।
ಅವಾಪ್ತವಂತಂ ಪಾಶುಪತಂ ಮಹಾಸ್ತ್ರಂ
ತದಾ ನಾಶಂಸೇ ವಿಜಯಾಯ ಸಂಜಯ ॥೧೫೨॥

ಸಂಜಯನೇ ! ಅರ್ಜುನನು ಕಿರಾತವೇಷಧಾರಿಯಾದ ದೇವದೇವನಾದ ರುದ್ರನನ್ನು ಯುದ್ಧದಲ್ಲಿ ಸಂತೋಷಪಡಿಸಿ ಅವನಿಂದ ಪಾಶುಪತ ಮಹಾಸ್ತ್ರವನ್ನು ಪಡೆದನೆಂದು ತಿಳಿದ ಮೇಲೆ ನಾನು ವಿಜಯವನ್ನು ಬಯಸುವುದಿಲ್ಲ.

ಯದಾಽಶ್ರೌಷಂ ತ್ರಿದಿವಸ್ಥಂ ಧನಂಜಯಂ
ಶಕ್ರಾತ್ ಸಾಕ್ಷಾತ್ ದಿವ್ಯಮಸ್ತ್ರಂ ಯಥಾವತ್ ।
ಅಧೀಯಾನಂ ಸಂಶಿತಂ ಸತ್ಯಸಂಧಂ
ತದಾ ನಾಶಂಸೇ ವಿಜಯಾಯ ಸಂಜಯ ॥೧೫೩॥

ಸತ್ಯಸಂಧನೂ ವ್ರತನಿಷ್ಠನೂ ಆದ ಅರ್ಜುನನು ಸ್ವರ್ಗಲೋಕದಲ್ಲಿ ಇಂದ್ರನಿಂದ ಎಲ್ಲಾ ದಿವ್ಯಾಸ್ತ್ರಗಳ ಉಪದೇಶವನ್ನು ವಿಧಿವತ್ತಾಗಿ ಪಡೆಯುತ್ತಿದ್ದಾನೆ ಎಂಬ ವಾರ್ತೆಯನ್ನು ಕೇಳಿದ ಮೇಲೆ ನಾನು ವಿಜಯವನ್ನು ಬಯಸಲಿಲ್ಲ.

ಯದಾऽಶ್ರೌಷಂ ತೀರ್ಥಯಾತ್ರಾಪ್ರವೃತ್ತಂ
ಪಾಂಡೋಃ ಸುತಂ ಸಹಿತಂ ಲೋಮಶೇನ ।
ತಸ್ಮಾದಶ್ರೌಷೀದರ್ಜುನಸ್ಯಾರ್ಥಲಾಭಂ
ತದಾ ನಾಶಂಸೇ ವಿಜಯಾಯ ಸಂಜಯ ॥೧೫೪॥

ತೀರ್ಥಯಾತ್ರೆಗೆ ಹೊರಟ ಅರ್ಜುನನು ಮಾರ್ಗದಲ್ಲಿ ಲೋಮಶರ ಸಮಾಗಮವನ್ನು ಹೊಂದಿ ತನ್ನ ಅರ್ಥಲಾಭವನ್ನು ಕೇಳಿದನೆಂಬ ವಾರ್ತೆಯನ್ನು ಕೇಳಿದ ಮೇಲೆ ನಾನು ವಿಜಯವನ್ನು ಬಯಸಲಿಲ್ಲ.

ಯದಾऽಶ್ರೌಷಂ ವೈಶ್ರವಣೇನ ಸಾರ್ಧಂ
ಸಮಾಗತಂ ಭೀಮಮನ್ಯಾಂಶ್ಚ ಪಾರ್ಥಾನ್ ।
ತಸ್ಮಿನ್ ದೇಶೇ ಮಾನುಷಾಣಾಮಗಮ್ಯೇ
ತದಾ ನಾಶಂಸೇ ವಿಜಯಾಯ ಸಂಜಯ ॥೧೫೫॥

ಸಂಜಯನೇ ! ಭೀಮನು ಉಳಿದ ಸಹೋದರರ ಜೊತೆಯಲ್ಲಿ ಮನುಷ್ಯರಿಗೆ ಅಗಮ್ಯವಾದ ಕುಬೇರನ ಸ್ಥಾನವಾದ ಸೌಗಂಧಿಕಾ ಪುಷ್ಪ ಪ್ರದೇಶದಲ್ಲಿ ಅವನಿಂದ ಸಮಾಗಮವನ್ನು ಹೊಂದಿದನು ಎಂಬ ವಾರ್ತೆಯನ್ನು ಕೇಳಿದ ಮೇಲೆ ನಾನು ವಿಜಯವನ್ನು ಬಯಸಲಿಲ್ಲ.

ಯದಾऽಶ್ರೌಷಂ ಘೋಷಯಾತ್ರಾಗತಾನಾಂ
ಬಂಧಂ ಗಂಧರ್ವೈರ್ಮೋಕ್ಷಣಂ ಚಾರ್ಜುನೇನ ।
ಸ್ವೇಷಾಂ ಸುತಾನಾಂ ಕರ್ಣಬುದ್ಧೌ ರತಾನಾಂ
ತದಾ ನಾಶಂಸೇ ವಿಜಯಾಯ ಸಂಜಯ ॥೧೫೬॥

ಸಂಜಯನೇ ! ಕರ್ಣನ ಪ್ರಚೋದನೆಗೆ ಒಳಗಾಗಿ ಘೋಷಯಾತ್ರೆಗೆ ಹೊರಟ ನನ್ನ ಮಕ್ಕಳು ಗಂಧರ್ವರಿಂದ ಬಂಧಿಸಲ್ಪಟ್ಟು ಅರ್ಜುನ ಮೂಲಕ ಗಂಧರ್ವರಿಂದ ಬಿಡುಗಡೆಯನ್ನು ಹೊಂದಿದರೆಂಬ ವಾರ್ತೆಯನ್ನು ಕೇಳಿದ ಮೇಲೆ ನಾನು ವಿಜಯವನ್ನು ಬಯಸಲಿಲ್ಲ.

ಯದಾಽಶ್ರೌಷಂ ಯಕ್ಷರೂಪೇಣ ಧರ್ಮಂ
ಸಮಾಗತಂ ಧರ್ಮರಾಜೇನ ಸೂತ ।
ಪ್ರಶ್ನಾನುಕ್ತ್ವಾ ವಿಬ್ರುವಂತಂ ಚ ಸಮ್ಯಕ್
ತದಾ ನಾಶಂಸೇ ವಿಜಯಾಯ ಸಂಜಯ ॥೧೫೭॥

ಸಂಜಯನೇ ! ಯಕ್ಷರೂಪದಿಂದ ಬಂದ ಯಮನನ್ನು ಕುರಿತು ಅವನು ಕೇಳಿದ ಪ್ರಶ್ನೆಗಳಿಗೆ ಧರ್ಮರಾಜನು ಸಮರ್ಪಕವಾಗಿ ಉತ್ತರವನ್ನು ಕೊಟ್ಟನೆಂಬ ವಾರ್ತೆಯನ್ನು ಕೇಳಿದ ಮೇಲೆ ನಾನು ವಿಜಯವನ್ನು ಬಯಸಲಿಲ್ಲ.

ಯದಾಽಶ್ರೌಷಂ ನ ವಿದುರ್ಮಾಮಕಾಸ್ತಾನ್
ವಿರಾಟನಗರೇ ವಸತಃ ಪಾಂಡುಪುತ್ರಾನ್ ।
ಪ್ರಚ್ಛನ್ನರೂಪಾನ್ ಸಹ ಕೃಷ್ಣಯಾ ಸದಾ
ತದಾ ನಾಶಂಸೇ ವಿಜಯಾಯ ಸಂಜಯ ॥೧೫೮॥

ಸಂಜಯನೇ ! ವಿರಾಟನಗರದಲ್ಲಿ ಪ್ರಚ್ಛನ್ನವೇಷದಿಂದ ವಿರಾಟನಿಗೇ ಗೊತ್ತಾಗದಂತೆ ದ್ರೌಪದಿಯ ಜೊತೆಯಲ್ಲಿ ವಾಸಮಾಡುತ್ತಿದ್ದ ಪಾಂಡವರನ್ನು ನನ್ನ ಮಕ್ಕಳು ಗುರುತಿಸಲು ಸಾಧ್ಯವಾಗಲಿಲ್ಲ ಎಂಬ ವಾರ್ತೆಯನ್ನು ಕೇಳಿದ ಮೇಲೆ ನಾನು ವಿಜಯವನ್ನು ಬಯಸಲಿಲ್ಲ.

ಯದಾಽಶ್ರೌಷಂ ಕೀಚಕಾನಾಂ ವರಿಷ್ಠಂ
ನಿಷೂದಿತಂ ಭ್ರಾತೃಶತೇನ ಸಾರ್ಧಮ್ ।
ದ್ರೌಪದ್ಯರ್ಥಂ ಭೀಮಸೇನೇನ ಸಂಖ್ಯೇ
ತದಾ ನಾಶಂಸೇ ವಿಜಯಾಯ ಸಂಜಯ ॥೧೫೯॥

ಸಂಜಯನೇ ! ಕೀಚಕನು ತನ್ನ ನೂರುಜನ ತಮ್ಮಂದಿರ ಜೊತೆಯಲ್ಲಿ ದ್ರೌಪದಿಯ ಸಲುವಾಗಿ ಭೀಮಸೇನನಿಂದ ಹತನಾದ ವಾರ್ತೆಯನ್ನು ಕೇಳಿದ ಮೇಲೆ ನಾನು ವಿಜಯವನ್ನು ಬಯಸಲಿಲ್ಲ.

ಯದಾಽಶ್ರೌಷಂ ಮಾಮಕಾನಾಂ ವರಿಷ್ಠಾನ್
ಧನಂಜಯೇನೈಕರಥೇನ ಭಗ್ನಾನ್ ।
ವಿರಾಟರಾಜ್ಯೇ ವಸತಾಂ ಮಹಾತ್ಮನಾಂ
ತದಾ ನಾಶಂಸೇ ವಿಜಯಾಯ ಸಂಜಯ ॥೧೬೦॥

ಸಂಜಯನೇ ! ವಿರಾಟನಗರದಲ್ಲಿ ಮಹಾತ್ಮರಾದ ಪಾಂಡವರು ವಾಸಮಾಡುತ್ತಿದ್ದಾಗ ಅರ್ಜುನನು ಒಂದೇ ರಥದಲ್ಲಿ ಕುಳಿತು ಶ್ರೇಷ್ಠರಾದ ನನ್ನವರನ್ನೆಲ್ಲಾ ಸೋಲಿಸಿದನೆಂಬ ವಾರ್ತೆಯನ್ನು ಕೇಳಿದ ಮೇಲೆ ನಾನು ವಿಜಯವನ್ನು ಬಯಸಲಿಲ್ಲ.

ಯದಾಽಶ್ರೌಷಂ ಸತೃತಾಂ ಮತ್ಸ್ಯರಾಜ್ಞಾ
ಸುತಾಂ ದತ್ತಾಮುತ್ತರಾಮರ್ಜುನಾಯ ।
ತಾಂ ತ್ವರ್ಜುನಃ ಪ್ರತ್ಯಗೃಹ್ಣಾತ್ ಸುತಾರ್ಥೇ
ತದಾ ನಾಶಂಸೇ ವಿಜಯಾಯ ಸಂಜಯ ॥೧೬೧॥

ಸಂಜಯನೇ ! ಮತ್ಸ್ಯರಾಜನಾದ ವಿರಾಟನು ಅರ್ಜುನನನ್ನು ಸತ್ಕರಿಸಿ ತನ್ನ ಮಗಳಾದ ಉತ್ತರೆಯನ್ನು ಅರ್ಜುನನಿಗೆ ಕೊಟ್ಟಾಗ ಅರ್ಜುನನು ತನ್ನ ಮಗನಾದ ಅಭಿಮನ್ಯುವಿನ ಸಲುವಾಗಿ ಅವಳನ್ನು ಸ್ವೀಕರಿಸಿದನು. ಎಂಬ ವಾರ್ತೆಯನ್ನು ಕೇಳಿದಮೇಲೆ ನಾನು ವಿಜಯವನ್ನು ಬಯಸಲಿಲ್ಲ.

ಯದಾಽಶ್ರೌಷಂ ನಿರ್ಜಿತಸ್ಯಾಧನಸ್ಯ
ಪ್ರವ್ರಾಜಿತಸ್ಯ ಸ್ವಜನಾತ್ ಪ್ರಚ್ಯುತಸ್ಯ ।
ಅಕ್ಷೌಹಿಣೀಃ ಸಪ್ತ ಯುಧಿಷ್ಠಿರಸ್ಯ
ತದಾ ನಾಶಂಸೇ ವಿಜಯಾಯ ಸಂಜಯ ॥೧೬೨॥

ಸಂಜಯನೇ ! ದ್ಯೂತದಲ್ಲಿ ನಿರ್ಜಿತನಾಗಿ ಧನರಹಿನಾಗಿ, ವನವಾಸವನ್ನು ಮಾಡಿ ತನ್ನ ಸ್ವಜನರಿಂದ ರಹಿತನಾದ ಧರ್ಮರಾಜನು ಏಳು ಅಕ್ಷೌಹಿಣಿ ಸೈನ್ಯವನ್ನು ಕೂಡಿಸಿದನೆಂಬ ವಾರ್ತೆಯನ್ನು ಕೇಳಿದ ಮೇಲೆ ನಾನು ವಿಜಯವನ್ನು ಬಯಸಲಿಲ್ಲ.

ಯದಾಽಶ್ರೌಷಂ ನರನಾರಾಯಣೌ ತೌ
ಕೃಷ್ಣಾರ್ಜುನೌ ವದತೋ ನಾರದಸ್ಯ ।
ಅಹಂ ದೃಷ್ಟ್ವಾ ಬ್ರಹ್ಮಲೋಕೇ ಸದೇತಿ
ತದಾ ನಾಶಂಸೇ ವಿಜಯಾಯ ಸಂಜಯ ॥೧೬೩॥

ಸಂಜಯನೇ ! ನಾರದರು ನಾನು ಬ್ರಹ್ಮಲೋಕದಲ್ಲಿ ಯಾವಾಗಲೂ ನೋಡುವ ನರನಾರಾಯಣರೇ ಅರ್ಜುನ ಮತ್ತು ಕೃಷ್ಣರು ಎಂದು ಹೇಳಿದ ಮೇಲೆ ನಾನು ವಿಜಯವನ್ನು ಬಯಸುವುದಿಲ್ಲ.

ಯದಾऽಶ್ರೌಷಂ ಮಾಧವಂ ವಾಸುದೇವಂ
ಸರ್ವಾತ್ಮನಾ ಪಾಂಡವಾರ್ಥೇ ನಿವಿಷ್ಟಮ್ ।
ಯಸ್ಯೇಮಾಂ ಗಾಂ ವಿಕ್ರಮಮೇಕಮಾಹು-
ಸ್ತದಾ ನಾಶಂಸೇ ವಿಜಯಾಯ ಸಂಜಯ ॥೧೬೪॥

ಸಂಜಯನೇ ! ಯಾವ ಕೃಷ್ಣನಿಗೆ ಸಮಗ್ರವಾದ ಈ ಭೂಮಿಯು ತ್ರಿವಿಕ್ರಮ ಅವತಾರದಲ್ಲಿ ಒಂದು ಪಾದವೆಂದು ಪರಿಗಣಿಸಲ್ಪಡುತ್ತದೆಯೋ, ಅಂತಹ ಕೃಷ್ಣನು ಪಾಂಡವರ ಹಿತಕ್ಕಾಗಿ ಬದ್ಧಕಂಕಣನಾಗಿದ್ದಾನೆ ಎಂಬ ವಾರ್ತೆಯನ್ನು ಕೇಳಿದ ಮೇಲೆ ನಾನು ವಿಜಯವನ್ನು ಬಯಸಲಿಲ್ಲ.

ಯದಾऽಶ್ರೌಷಂ ಕರ್ಣದುಃಶಾಸನಾಭ್ಯಾಂ
ಬುದ್ಧಿಂ ಕೃತ್ವಾ ನಿಶ್ಚಲೇ ಕೇಶವಸ್ಯ ।
ತಂ ಚಾತ್ಮಾನಂ ಬಹುಧಾ ದರ್ಶಯಾನಂ
ತದಾ ನಾಶಂಸೇ ವಿಜಯಾಯ ಸಂಜಯ ॥೧೬೫॥

ಸಂಜಯನೇ ! ಕರ್ಣದುಃಶಾಸನರು ದುರ್ಮಂತ್ರಾ- ಲೋಚನೆಯನ್ನು ನಡೆಸಿ ಸಂಧಾನಕ್ಕೆ ಬಂದ ಕೃಷ್ಣನನ್ನು ಬಂಧಿಸಲು ಪ್ರಯತ್ನಿಸಿದಾಗ ಕೃಷ್ಣನು ವಿಶ್ವರೂಪವನ್ನು ತೋರಿಸಿದನೆಂಬ ವಾರ್ತೆಯನ್ನು ಕೇಳಿದ ಮೇಲೆ ನಾನು ವಿಜಯವನ್ನು ಬಯಸಲಿಲ್ಲ.

ಯದಾऽಶ್ರೌಷಂ ವಾಸುದೇವೇ ಪ್ರಯಾತೇ
ರಥಸ್ಯೈಕಾಮಗ್ರತಸ್ತಿಷ್ಠಮಾನಾಮ್ ।
ತಪ್ತಾಂ ಪೃಥಾಂ ಸಾಂತ್ವಿತಾಂ ಕೇಶವೇನ
ತದಾ ನಾಶಂಸೇ ವಿಜಯಾಯ ಸಂಜಯ ॥೧೬೬॥

ಸಂಜಯನೇ ! ಕೃಷ್ಣನು ಹಸ್ತಿನಪುರದಿಂದ ಹಿಂದಿರುಗುವಾಗ ಕುಂತಿಯು ದುಃಖಿತಪ್ತಳಾಗಿ ಒಬ್ಬಳೇ ಅವನ ರಥದ ಮುಂದೆ ನಿಂತಳು ಮತ್ತು ಕೃಷ್ಣನು ಅವಳನ್ನು ಸಮಾಧಾನಪಡಿಸಿದನು ಎಂಬ ವಾರ್ತೆಯನ್ನು ಕೇಳಿದ ಮೇಲೆ ನಾನು ವಿಜಯವನ್ನು ಬಯಸಲಿಲ್ಲ

ಯದಾऽಶ್ರೌಷಂ ವಾಸುದೇವೇऽಪ್ರಯತ್ನಾ
ರಥಾಂಗಹಸ್ತೇ ಫಲ್ಗುನೇನಾನ್ವಿತೇऽಪಿ ।

ಗ್ರಹೀತುಕಾಮಾ ಮಮ ಪುತ್ರಾವಜಾನನ್
ತದಾ ನಾಶಂಸೇ ವಿಜಯಾಯ ಸಂಜಯ ॥೧೬೭॥

ಸಂಜಯನೇ ! ಶುಭಪ್ರಯತ್ನರಹಿತರಾದ ನನ್ನ ಮಕ್ಕಳು ರಥಾಂಗಪಾಣಿಯಾದ ಕೃಷ್ಣನು ಅರ್ಜುನನ ಸಹಿತವಾಗಿ ಸಂಧಾನಕ್ಕಾಗಿ ಸಭೆಗೆ ಬಂದಿದ್ದಾಗ ನನ್ನ ಮಕ್ಕಳು ಅವನನ್ನು ಸೆರೆಹಿಡಿಯುವ ಆಸೆಯಿಂದ ಅವನಿಗೆ ಅವಮಾನ ಮಾಡಿದರು ಎಂಬ ವಾರ್ತೆಯನ್ನು ಕೇಳಿದಮೇಲೆ ನಾನು ವಿಜಯವನ್ನು ಬಯಸಲಿಲ್ಲ.

ಯದಾऽಶ್ರೌಷಂ ಮಂತ್ರಿಣಂ ವಾಸುದೇವಂ
ತಥಾ ಭೀಷ್ಮಂ ಶಾಂತನವಂ ಚ ತೇಷಾಮ್ ।
ಭಾರದ್ವಾಜಂ ಚಾರ್ಷತೋऽನುಬ್ರುವಾಣಂ
ತದಾ ನಾಶಂಸೇ ವಿಜಯಾಯ ಸಂಜಯ ॥೧೬೮॥

ಸಂಜಯನೇ ! ವಾಸುದೇವನು ಪಾಂಡವರಿಗೆ ಮಂತ್ರಿಯೆಂದು ಮತ್ತು ಶಂತನುವಿನ ಮಗನಾದ ಭೀಷ್ಮನು ಹಾಗೆಯೇ ಭರದ್ವಾಜರ ಪುತ್ರರಾದ ದ್ರೋಣರು ಪಾಂಡವರಿಗೆ ವೇದೋಕ್ತವಾದ ಆಶೀರ್ವಾದಗಳನ್ನು ಮಾಡಿದರೆಂದು ಕೇಳಿದ ಮೇಲೆ ನಾನು ವಿಜಯವನ್ನು ಬಯಸಲಿಲ್ಲ.

ಯದಾऽಶ್ರೌಷಂ ವಾಸುದೇವಾರ್ಜುನೌ ತೌ
ತಥಾ ಧನುರ್ಗಾಂಡಿವಮಪ್ರಮೇಯಮ್ ।
ತ್ರೀಣ್ಯು ಗ್ರವೀರ್ಯಾಣಿ ಸಮಾಗತಾನಿ
ತದಾ ನಾಶಂಸೇ ವಿಜಯಾಯ ಸಂಜಯ ॥೧೬೯॥

ಸಂಜಯನೇ ! ಕೃಷ್ಣ ಅರ್ಜುನ ಮತ್ತು ಗಾಂಡೀವಧನುಸ್ಸು, ಉಗ್ರಪರಾಕ್ರಮವುಳ್ಳ ಈ ಮೂರುವಸ್ತುಗಳು ಯುದ್ಧಕ್ಕಾಗಿ ಸೇರಿದವು ಎಂಬ ವಾರ್ತೆಯನ್ನು ಕೇಳಿದ ಮೇಲೆ ನಾನು ವಿಜಯವನ್ನು ಬಯಸುವುದಿಲ್ಲ.

ಯದಾऽಶ್ರೌಷಂ ಕಶ್ಮಲೇನಾಭಿಪನ್ನೇ
ರಥೋಪಸ್ಥೇ ಸೀದಮಾನೇऽರ್ಜುನೇ ಚ ।
ಕೃತ್ತಾ ನ್ ಲೋಕಾನ್ ದರ್ಶಯಾನಂ ಶರೀರೇ
ತದಾ ನಾಶಂಸೇ ವಿಜಯಾಯ ಸಂಜಯ ॥೧೭೦॥

ಸಂಜಯನೇ ! ಸೇನಾಮುಖದಲ್ಲಿ ಅರ್ಜುನನು ತತ್ತ್ವನಿಶ್ಚಯವಿಲ್ಲದೆ ರಥದಲ್ಲಿ ಕುಳಿತು ವಿಷಾದಪಡುತ್ತಿರಲು, ಕೃಷ್ಣನು ಅವನಿಗೆ ತನ್ನ ವಿಶ್ವರೂಪವನ್ನು ತೋರಿಸಿದನೆಂಬ ವಾರ್ತೆಯನ್ನು ಕೇಳಿದ ಮೇಲೆ ನಾನು ವಿಜಯವನ್ನು ಬಯಸಲಿಲ್ಲ.

ಯದಾಽಶ್ರೌಷಂ ಭೀಷ್ಮಮಮಿತ್ರಕರ್ಶನಂ
ನಿಘ್ನಂತಮಾಜಾವಯುತಂ ರಥಾನಾಮ್ ।
ನ ಚೈಷಾಂ ಕಶ್ಚಿದ್ ದೃಶ್ಯತೇ ವಧ್ಯರೂಪ-
ಸ್ತದಾ ನಾಶಂಸೇ ವಿಜಯಾಯ ಸಂಜಯ ॥೧೭೧॥

ಸಂಜಯನೇ ! ಶತ್ರುಕರ್ಶನನಾದ, ಯುದ್ಧದಲ್ಲಿ ಪ್ರತಿನಿತ್ಯವೂ ಹತ್ತುಸಾವಿರ ರಥಗಳನ್ನು ನಾಶಮಾಡುವ ಭೀಷ್ಮನು ಯುದ್ಧಮಾಡುತ್ತಿರುವಾಗ ಪಾಂಡವರಲ್ಲಿ ಪಬ್ಬನೂ ಸಹ ಅವನ ಬಾಣಕ್ಕೆ ಗುರಿಯಾಗಲಿಲ್ಲವೆಂಬ ವಾರ್ತೆಯನ್ನು ಕೇಳಿದ ಮೇಲೆ ನಾನು ವಿಜಯವನ್ನು ಬಯಸಲಿಲ್ಲ.

ಯದಾಽಶ್ರೌಷಂ ಭೀಷ್ಮಮತ್ಯಂತಶೂರಂ
ಹತಂ ಪಾರ್ಥೇನಾಹವೇಷ್ವಪ್ರಮತ್ತಮ್ ।
ಶಿಖಂಡಿನಂ ಪುರತಃ ಸ್ಥಾಪಯಿತ್ವಾ
ತದಾ ನಾಶಂಸೇ ವಿಜಯಾಯ ಸಂಜಯ ॥೧೭೨॥

ಸಂಜಯನೇ ! ಯುದ್ಧದಲ್ಲಿ ಯಾವಾಗಲೂ ಜಾಗ್ರತನಾದ ಅತ್ಯಂತ ಶೂರನಾದ ಭೀಷ್ಮರನ್ನು ಅರ್ಜುನನು ಶಿಖಂಡಿಯನ್ನು ಮುಂದೆ ಮಾಡಿಕೊಂಡು ರಥದಿಂದ ಕೆಳಗೆ ಉರುಳಿಸಿದನು ಎಂಬ ವಾರ್ತೆಯನ್ನು ಕೇಳಿದ ಮೇಲೆ ನಾನು ವಿಜಯವನ್ನು ಬಯಸಲಿಲ್ಲ.

ಯದಾಽಶ್ರೌಷಂ ಶರತಲ್ಪೇ ಶಯಾನಂ
ವೃದ್ಧಂ ಶೂರಂ ಸೂದಿತಂ ಚಿತ್ರಪುಂಖೈಃ ।
ಭೀಷ್ಮಂ ಕೃತ್ವಾ ಸೋಮಕಾನಲ್ಪ ಶೇಷಾಂ-
ಸ್ತದಾ ನಾಶಂಸೇ ವಿಜಯಾಯ ಸಂಜಯ ॥೧೭೩॥

ಸಂಜಯನೇ ! ಯುದ್ಧದಲ್ಲಿ ಶೂರರಾದ ವೃದ್ಧರಾದ ಭೀಷ್ಮರು ಸೋಮಕಸೈನ್ಯವನ್ನು ಹತಶೇಷವನ್ನಾಗಿ ಮಾಡಿ ವಿಚಿತ್ರವಾದ ಬಾಣಗಳಿಂದ ಹೊಡೆಯಲ್ಪಟ್ಟು

ಶರಪಂಜರದಲ್ಲಿ ಮಲಗಿದರು ಎಂಬ ವಾರ್ತೆಯನ್ನು ಕೇಳಿದ ಮೇಲೆ ನಾನು ವಿಜಯವನ್ನು ಬಯಸಲಿಲ್ಲ.

ಯದಾऽಶ್ರೌಷಂ ಶಾಂತನವೇ ಶಯಾನೇ
ಪಾನೀಯಾರ್ಥಂ ಚೋದಿತೇನಾರ್ಜುನೇನ ।
ಭೂಮಿಂ ಭಿತ್ತ್ವಾ ತರ್ಪಿತಂ ತತ್ರ ಭೀಷ್ಮಂ
ತದಾ ನಾಶಂಸೇ ವಿಜಯಾಯ ಸಂಜಯ ॥೧೭೪॥

ಸಂಜಯನೇ ! ಶರತಲ್ಪದಲ್ಲಿ ಮಲಗಿದ ಭೀಷ್ಮರು ನೀರನ್ನು ಕೇಳಿದಾಗ ಅರ್ಜುನನು ಭೂಮಿಗೆ ಬಾಣವನ್ನು ಬಿಟ್ಟು ನೀರನ್ನು ಚಿಮ್ಮಿಸಿ ಅವರನ್ನು ತೃಪ್ತಪಡಿಸಿದನೆಂಬ ವಾರ್ತೆಯನ್ನು ಕೇಳಿದ ಮೇಲೆ ನಾನು ವಿಜಯವನ್ನು ಬಯಸಲಿಲ್ಲ

ಯದಾऽಶ್ರೌಷಂ ಶುಕ್ರಸೂರ್ಯೌ ಚ ಯುಕ್ತೌ
ಕೌಂತೇಯಾನಾಮನುಲೋಮೌ ಜಯಾಯ ।
ನಿತ್ಯಂ ಚಾಸ್ಮಾನ್ ಶ್ವಾಪದಾನ್ ವ್ಯಾಭಷಂತೌ
ತದಾ ನಾಶಂಸೇ ವಿಜಯಾಯ ಸಂಜಯ ॥೧೭೫॥

ಸಂಜಯನೇ ! ಶುಕ್ರ ಸೂರ್ಯರು ಪಾಂಡವರ ಜಯಕ್ಕೆ ಅನುಕೂವಾಗಿ ಅನುಕೂಲವಾದ ರಾಶಿಯಲ್ಲಿ ಇರುವರೆಂದು ತಿಳಿದು ನಮ್ಮನ್ನು ಕುರಿತು ನಾಯಿಗಳು ಮತ್ತು ಕ್ರೂರಪ್ರಾಣಿಗಳು ಬೊಗಳುತ್ತಿವೆ ಎಂಬುದನ್ನು ತಿಳಿದು ನಾನು ವಿಜಯದ ಆಸೆಯನ್ನು ಮಾಡುವುದಿಲ್ಲ.

ಯದಾ ದ್ರೋಣೋ ವಿವಿಧಾನಸ್ತ್ರ ಮಾರ್ಗಾನ್
ವ್ಯದರ್ಶಯತ್ ಸಮರೇ ಚಿತ್ರಯೋಧೀ ।
ತಾನ್ ಪಾಂಡವಾನ್ ಶ್ರೇಷ್ಠತಮಾನ್ ವದಂತಿ
ತದಾ ನಾಶಂಸೇ ವಿಜಯಾಯ ಸಂಜಯ ॥೧೭೬॥

ಸಂಜಯನೇ ! ದ್ರೋಣರು ಯುದ್ಧದಲ್ಲಿ ವಿಚಿತ್ರವಾಗಿ ಯುದ್ಧವನ್ನು ಮಾಡಿ ಅನೇಕ ಅಸ್ತ್ರಮಾರ್ಗಗಳನ್ನು ಪ್ರದರ್ಶಿಸಿದರೂ ಸಹ ಅಲ್ಲಿದ್ದವರು ಅವರಿಗಿಂತಲೂ ಪಾಂಡವರೇ ಶ್ರೇಷ್ಠರು ಎಂದು ಹೇಳುತ್ತಾರೆ ಎಂಬ ವಾರ್ತೆಯನ್ನು ಕೇಳಿದಮೇಲೆ ನಾನು ವಿಜಯವನ್ನು ಬಯಸುವುದಿಲ್ಲ.

ಯದಾऽಶ್ರೌಷಮಸ್ಮದೀಯಾನ್ ಮಹಾರಥಾನ್
ವ್ಯವಸ್ಥಿತಾನರ್ಜುನಸ್ಯಾಂತಕಾಯ ।
ಸಂಶಪ್ತಕಾನ್ ನಿಹತಾನರ್ಜುನೇನ
ತದಾ ನಾಶಂಸೇ ವಿಜಯಾಯ ಸಂಜಯ ॥೧೭೭॥

ಸಂಜಯನೇ ! ಅರ್ಜುನನ ವಧೆಗಾಗಿಯೇ ಮೀಸಲಾದ ಮಹಾರಥರಾದ ಸಂಶಪ್ತಕರೆಲ್ಲರೂ ಅರ್ಜುನನಿಂದ ಕೊಲ್ಲಲ್ಪಟ್ಟರು ಎಂಬ ವಾರ್ತೆಯನ್ನು ಕೇಳಿದ ಮೇಲೆ ನಾನು ವಿಜಯವನ್ನು ಬಯಸುವುದಿಲ್ಲ.

ಯದಾऽಶ್ರೌಷಂ ವ್ಯೂಹಮಭೇದ್ಯಮನ್ಯೈ-
ರ್ಭಾರದ್ವಾಜೇನಾತ್ತಶಸ್ತ್ರೇಣ ಗುಪ್ತಮ್ ।
ಭಿತ್ತ್ವಾ ಸೌಭದ್ರಂ ವೀರಮೇಕಂ ಪ್ರವಿಷ್ಟಂ
ತದಾ ನಾಶಂಸೇ ವಿಜಯಾಯ ಸಂಜಯ ॥೧೭೮॥

ಸಂಜಯನೇ ! ದ್ರೋಣರು ಅಭೇದ್ಯವಾದ ವ್ಯೂಹವನ್ನು ರಚಿಸಿ ಅದರ ಮುಂಭಾಗದಲ್ಲಿ ಶಸ್ತ್ರವನ್ನು ಹಿಡಿದು ರಕ್ಷಣೆ ಮಾಡುತ್ತಾ ನಿಂತಿದ್ದರೂ ಅಭಿಮನ್ಯುವು ಏಕಾಂಗಿಯಾಗಿ ಆ ವ್ಯೂಹವನ್ನು ಭೇದಿಸಿ ಒಳಗೆ ಪ್ರವೇಶಿಸಿದನೆಂಬ ವಾರ್ತೆಯನ್ನು ಕೇಳಿದ ಮೇಲೆ ನಾನು ವಿಜಯವನ್ನು ಬಯಸುವುದಿಲ್ಲ.

ಯದಾऽಭಿಮನ್ಯುಂ ಪರಿವಾರ್ಯ ಬಾಲಂ
ಸರ್ವೇ ಹತ್ವಾ ಹೃಷ್ಟರೂಪಾ ಬಭೂವುಃ ।
ಮಹಾರಥಾಃ ಪಾರ್ಥಮಶಕ್ನುವಂತ-
ಸ್ತದಾ ನಾಶಂಸೇ ವಿಜಯಾಯ ಸಂಜಯ ॥೧೭೯॥

ಸಂಜಯನೇ ! ಅರ್ಜುನನನ್ನು ಎದುರಿಸಲಾಗದ ನನ್ನ ಕಡೆಯ ಮಹಾರಥರೆಲ್ಲಾ ಸೇರಿ ಸುತ್ತುವರೆದು ಬಾಲಕನಾದ ಅಭಿಮನ್ಯುವನ್ನು ಸಂಹಾರಮಾಡಿ ಸಂತೋಷಪಟ್ಟರೆಂಬ ವಾರ್ತೆಯನ್ನು ಕೇಳಿದ ಮೇಲೆ ನಾನು ವಿಜಯವನ್ನು ಬಯಸುವುದಿಲ್ಲ.

ಯದಾऽಶ್ರೌಷಮಭಿಮನ್ಯುಂ ನಿಹತ್ಯ
ಹರ್ಷಾನ್ಮೂಢಾನ್ ಕ್ರೋಶತೋ ಧಾರ್ತರಾಷ್ಟ್ರಾನ್ ।

ಕ್ರೋಧಂ ಯುಕ್ತಂ ಸೈಂಧವೇ ಚಾರ್ಜುನೇನ
ತದಾ ನಾಶಂಸೇ ವಿಜಯಾಯ ಸಂಜಯ ॥೧೮೦॥

ಸಂಜಯನೇ ! ಅಭಿಮನ್ಯುವನ್ನು ಸಂಹಾರ ಮಾಡಿ ಮೂಢರಾದ ನನ್ನ ಮಕ್ಕಳು ಸಂತೋಷದಿಂದ ಕೇಕೆ ಹಾಕುತ್ತಿದ್ದಾರೆ ಎಂದೂ ಮತ್ತು ಅರ್ಜುನನು ತನ್ನ ಕ್ರೋಧವೆಲ್ಲವನ್ನೂ ಸೈಂಧವನ ಮೇಲೆ ತಿರುಗಿಸಿದ್ದಾನೆಂದೂ ಕೇಳಿದ ಮೇಲೆ ನಾನು ವಿಜಯವನ್ನು ಬಯಸಲಿಲ್ಲ.

ಯದಾಽಶ್ರೌಷಂ ಸೈಂಧವಾರ್ಥೇ ಪ್ರತಿಜ್ಞಾಂ
ಕೃತಾಂ ತದಾ ತದ್ವಧಾಯಾರ್ಜುನೇನ ।
ಸತ್ಯಾಂ ನಿಸ್ತೀರ್ಣಾಂ ಶತ್ರುಮಧ್ಯೇ ಚ ತೇನ
ತದಾ ನಾಶಂಸೇ ವಿಜಯಾಯ ಸಂಜಯ ॥೧೮೧॥

ಸಂಜಯನೇ ! ಅರ್ಜುನನು ಶತ್ರುಗಳ ಮಧ್ಯದಲ್ಲಿ ನಿಂತು ಸೈಂಧವನ ವಧೆಯನ್ನು ಪ್ರತಿಜ್ಞೆಮಾಡಿ ಆ ಪ್ರತಿಜ್ಞೆಯನ್ನು ನೆರವೇರಿಸಿ ತನ್ನ ಮಾತನ್ನು ಸತ್ಯವನ್ನಾಗಿ ಮಾಡಿದನು ಎಂಬ ವಾರ್ತೆಯನ್ನು ಕೇಳಿದ ಮೇಲೆ ನಾನು ವಿಜಯವನ್ನು ಬಯಸಲಿಲ್ಲ.

ಯದಾಽಶ್ರೌಷಂ ಶ್ರಾಂತಹಯೇ ಧನಂಜಯೇ
ಮುಕ್ತ್ವಾ ಹಯಾನ್ ಪಾಯಯಿತ್ವೋಪವೃತ್ತಾನ್ ।
ಪುನರ್ಯುಕ್ತ್ವಾ ವಾಸುದೇವಂ ಪ್ರಯಾತಂ
ತದಾ ನಾಶಂಸೇ ವಿಜಯಾಯ ಸಂಜಯ ॥೧೮೨॥

ಸಂಜಯನೇ ! ಯುದ್ಧದಲ್ಲಿ ದಣಿದ ಧನಂಜಯನ ಕುದುರೆಗಳನ್ನು ರಥದಿಂದ ಬಿಚ್ಚಿ ನೀರನ್ನು ಕುಡಿಸಿ ಅವುಗಳನ್ನು ಸಮಾಧಾನ ಪಡಿಸಿ ಪುನಃ ರಥದಲ್ಲಿ ಹೂಡಿ ಕೃಷ್ಣನು ಮುಂದಕ್ಕೆ ನಡೆದನು ಎಂಬುದನ್ನು ಕೇಳಿದ ಮೇಲೆ ನಾನು ವಿಜಯವನ್ನು ಬಯಸಲಿಲ್ಲ.

ಯದಾಽಶ್ರೌಷಂ ವಾಹನೇಷ್ವಾಶ್ವಸತ್ಸು
ರಥೋಪಸ್ಥೇ ತಿಷ್ಠತಾ ಚಾರ್ಜುನೇನ ।
ಸರ್ವಾನ್ ಯೋಧಾನ್ ವಾರಿತಾನ್ ಪಾಂಡವೇನ
ತದಾ ನಾಶಂಸೇ ವಿಜಯಾಯ ಸಂಜಯ ॥೧೮೩॥

ಸಂಜಯನೇ ! ಕುದುರೆಗಳು ವಿಶ್ರಾಂತಿ ಪಡೆಯುವಾಗ ರಥದಲ್ಲಿ ಕುಳಿತ ಅರ್ಜುನನೊಬ್ಬನೇ ಶತ್ರುಪಕ್ಷದ ಎಲ್ಲ ಯೋಧರನ್ನೂ ಎದುರಿಸಿ ಅವರನ್ನು ನಿವಾರಿಸಿದನು ಎಂಬ ವಾರ್ತೆಯನ್ನು ಕೇಳಿದ ಮೇಲೆ ನಾನು ವಿಜಯವನ್ನು ಬಯಸಲಿಲ್ಲ.

ಯದಾऽಶ್ರೌಷಂ ನಾಗಬಲಂ ಸುದುಸ್ಸಹಂ
ದ್ರೋಣಂ ಚಾಸ್ತ್ರ್ಯುರ್ಯುಧಾನಂ ಪ್ರಯುಧ್ಯ ।
ಯಾಂತೌ ಪಾರ್ಥೌ ಯತ್ರ ತೌ ಕೃಷ್ಣೋಪಾರ್ಥೌ
ತದಾ ನಾಶಂಸೇ ವಿಜಯಾಯ ಸಂಜಯ ॥೧೮೪॥

ಸಂಜಯನೇ ! ಆನೆಯ ಬಲವುಳ್ಳ ದುಸ್ಸಹರಾದ ಅಸ್ತ್ರಯುದ್ಧವನ್ನು ಮಾಡುವ ದ್ರೋಣರ ಜೊತೆಯಲ್ಲಿ ಯುದ್ಧವನ್ನು ಮಾಡಿ ಯುಧಿಷ್ಠಿರ ಮತ್ತು ಭೀಮಸೇನರು ಯುದ್ಧಭೂಮಿಯಲ್ಲಿ ಲೀಲಾಜಾಲವಾಗಿ ಕೃಷ್ಣ ಅರ್ಜುನರಿದ್ದ ಸ್ಥಳಕ್ಕೆ ಹೋದರು ಎಂಬ ವಾರ್ತೆಯನ್ನು ಕೇಳಿದ ಮೇಲೆ ನಾನು ಯುದ್ಧದಲ್ಲಿ ವಿಜಯವನ್ನು ಬಯಸಲಿಲ್ಲ.

ನಮ್ಮ ಯುದ್ಧಭೂಮಿಯು ಅವರಿಗೆ ವಿಹಾರ ಭೂಮಿಯಾಯಿತು ಎಂಬ ಕಾರಣದಿಂದ ನಾನು ವಿಜಯವನ್ನು ಬಯಸುವುದಿಲ್ಲ.

ಯದಾऽಶ್ರೌಷಂ ಕರ್ಣಮಾಸಾದ್ಯ ಮುಕ್ತಂ
ವಧಾದ್ ಭೀಮಂ ಗರ್ಹಯಿತ್ವಾ ವಚೋಭಿಃ ।
ಧನುಷ್ಕೋಟ್ಯಾऽऽತುದ್ಯ ಕರ್ಣೇನ ವೀರಂ
ತದಾ ನಾಶಂಸೇ ವಿಜಯಾಯ ಸಂಜಯ ॥೧೮೫॥

ಸಂಜಯನೇ ! ಕರ್ಣನು ಭೀಮಸೇನನನ್ನು ಸಮೀಪಿಸಿ ತನ್ನ ಧನುಷ್ಕೋಟಿಯಿಂದ ಅವನನ್ನು ಚುಚ್ಚಿ ಉಗ್ರವಾದ ಮಾತುಗಳನ್ನು ಆಡಿದರೂ ಭೀಮಸೇನನನ್ನು ಅಲುಗಾಡಿಸಲು ಸಾಧ್ಯವಾಗಲಿಲ್ಲ ಎಂಬ ವಾರ್ತೆಯನ್ನು ಕೇಳಿದ ಮೇಲೆ ನಾನು ವಿಜಯವನ್ನು ಬಯಸಲಿಲ್ಲ.

ಭೀಮನು ಸಮೀಪದಲ್ಲಿ ಕೈಗೆ ಸಿಕ್ಕಿದರೂ ಸಹ ಕರ್ಣನು ಅವನಿಗೆ ಏನೂ ಮಾಡಲಾಗಲಿಲ್ಲ ಎಂಬ ಕಾರಣ ಧೃತರಾಷ್ಟ್ರನಿಗೆ ಆಶಾನಿವೃತ್ತಿಯಿದೆ.

ಯದಾऽಶ್ರೌಷಂ ಕೃತವರ್ಮಾ ಕೃಪಶ್ಚ
ಕರ್ಣೋ ದ್ರೌಣಿರ್ಮದ್ರರಾಜಶ್ಚ ಸಂಖೇ ।

ನಾರಕ್ಷನ್ ಯತ್ ಸೈಂಧವಂ ವಧ್ಯಮಾನಂ
ತದಾ ನಾಶಂಸೇ ವಿಜಯಾಯ ಸಂಜಯ ॥೧೮೬॥

ಸಂಜಯನೇ ! ಕೃತವರ್ಮ, ಕೃಪ, ಕರ್ಣ, ಅಶ್ವತ್ಥಾಮ, ಶಲ್ಯ ಎಲ್ಲರೂ ಸೇರಿ ಯುದ್ಧದಲ್ಲಿ ಅರ್ಜುನನಿಂದ ಕೊಲ್ಲಲ್ಪಡುವ ಸೈಂಧವನನ್ನು ರಕ್ಷಿಸಲು ಸಾಧ್ಯವಾಗಲಿಲ್ಲ ಎಂಬ ವಾರ್ತೆಯನ್ನು ಕೇಳಿದ ಮೇಲೆ ನಾನು ವಿಜಯವನ್ನು ಬಯಸಲಿಲ್ಲ.

ಯದಾಽಶ್ರೌಷಂ ದೇವರಾಜೇನ ದತ್ತಾಂ
ಶಕ್ತಿಂ ಮುಕ್ತಾಂ ವ್ಯಂಸಿತಾಂ ಮಾಧವೇನ ।
ಘಟೋತ್ಕಚೇ ರಾಕ್ಷಸೇ ಘೋರರೂಪೇ
ತದಾ ನಾಶಂಸೇ ವಿಜಯಾಯ ಸಂಜಯ ॥೧೮೭॥

ಸಂಜಯನೇ ! ದೇವೇಂದ್ರನು ಕರ್ಣನಿಗೆ ಕೊಟ್ಟ ಶಕ್ತ್ಯಾಯುಧವನ್ನು ಕೃಷ್ಣನು ವ್ಯರ್ಥಗೊಳಿಸಿ ಘೋರನಾದ ಘಟೋತ್ಕಚರಾಕ್ಷಸನಲ್ಲಿ ಪ್ರಯೋಗಿಸುವಂತೆ ಮಾಡಿದನೆಂಬ ವಾರ್ತೆಯನ್ನು ಕೇಳಿದ ಮೇಲೆ ನಾನು ವಿಜಯವನ್ನು ಬಯಸಲಿಲ್ಲ.

ಯದಾಽಶ್ರೌಷಂ ಕರ್ಣಘಟೋತ್ಕಚಾಭ್ಯಾಂ
ಯುದ್ಧೇ ಮುಕ್ತಾಂ ಸೂತಪುತ್ರೇಣ ಶಕ್ತಿಮ್ ।
ಯಯಾ ವಧ್ಯಃ ಸಮರೇ ಸವ್ಯಸಾಚೀ
ತದಾ ನಾಶಂಸೇ ವಿಜಯಾಯ ಸಂಜಯ ॥೧೮೮॥

ಸಂಜಯನೇ ! ಕರ್ಣಘಟೋತ್ಕಚರ ಯುದ್ಧದಲ್ಲಿ ಅರ್ಜುನನಿಗಾಗಿ ಕಾದಿರಿಸಿಕೊಂಡಿದ್ದ ಶಕ್ತ್ಯಾಯುಧವನ್ನು ಸೂತಪುತ್ರನಾದ ಕರ್ಣನು ಘಟೋತ್ಕಚನ ಮೇಲೆ ಪ್ರಯೋಗಿಸಿದನೆಂಬ ವಾರ್ತೆಯನ್ನು ಕೇಳಿದ ಮೇಲೆ ನಾನು ಯುದ್ಧದಲ್ಲಿ ವಿಜಯವನ್ನು ಬಯಸಲಿಲ್ಲ.

ಯದಾಽಶ್ರೌಷಂ ದ್ರೋಣಮಾಚಾರ್ಯಮೇಕಂ
ಧೃಷ್ಟದ್ಯುಮ್ನೇನಾಽತಿಕ್ರಮ್ಯ ಧರ್ಮಮ್ ।
ರಥೋಪಸ್ಥೇ ಪ್ರಾಯಗತಂ ವಿಶಸ್ತಂ
ತದಾ ನಾಶಂಸೇ ವಿಜಯಾಯ ಸಂಜಯ ॥೧೮೯॥

ಸಂಜಯನೇ ! ರಥದಲ್ಲಿ ಪ್ರಾಯೋಪವೇಶಕ್ಕೆ ಕುಳಿತಿದ್ದ ದ್ರೋಣಾಚಾರ್ಯರನ್ನು ಧೃಷ್ಟದ್ಯುಮ್ನನು ಧರ್ಮವನ್ನು ಅತಿಕ್ರಮಿಸಿ ಕತ್ತರಿಸಿದನು ಎಂಬ ವಾರ್ತೆಯನ್ನು ಕೇಳಿದ

ಮೇಲೆ ನಾನು ವಿಜಯವನ್ನು ಬಯಸಲಿಲ್ಲ. ಅತ್ಯಂತ ಬಲಿಷ್ಠನಾದ ದ್ರೋಣನನ್ನು ದುರ್ಬಲನಾದ ಧೃಷ್ಟದ್ಯುಮ್ನನು ಸಂಹರಿಸಿದನು ಎಂಬ ವಾರ್ತೆಯನ್ನು ಕೇಳಿದಾಗ ನನಗೆ ವಿಜಯದ ಆಸೆಯು ಹೋಯಿತು.

ಯದಾऽಶ್ರೌಷಂ ದ್ರೌಣಿನಾ ದ್ವೈರಥಸ್ಥಂ
ಮಾದ್ರೀಪುತ್ರಂ ನಕುಲಂ ಯೋಧಮಧ್ಯೇ ।
ಸಮಂ ಯುದ್ಧೇ ಪಾಂಡವಂ ಯುಧ್ಯಮಾನಂ
ತದಾ ನಾಶಂಸೇ ವಿಜಯಾಯ ಸಂಜಯ ॥೧೯೦॥

ಸಂಜಯನೇ ! ಯುದ್ಧಭೂಮಿಯಲ್ಲಿ ಯೋಧರ ಮಧ್ಯದಲ್ಲಿ ಅಶ್ವತ್ಥಾಮರ ಜೊತೆಯಲ್ಲಿ ದ್ವಂದ್ವಯುದ್ಧದಲ್ಲಿ ನಿರತನಾದ ನಕುಲನು ಅಶ್ವತ್ಥಾಮರಿಗೆ ಸಮನಾಗಿ ಯುದ್ಧವನ್ನು ಮಾಡಿದನು ಎಂಬ ವಾರ್ತೆಯನ್ನು ಕೇಳಿದ ಮೇಲೆ ನಾನು ವಿಜಯವನ್ನು ಬಯಸಲಿಲ್ಲ.

ಯದಾऽಶ್ರೌಷಂ ಭೀಮಸೇನೇನ ಪೀತಂ
ರಕ್ತಂ ಭ್ರಾತುರ್ಯುಧಿ ದುಃಶಾಸನಸ್ಯ ।
ನಿವಾರಿತಂ ನಾನ್ಯತಮೇನ ಭೀಮಂ
ತದಾ ನಾಶಂಸೇ ವಿಜಯಾಯ ಸಂಜಯ ॥೧೯೧॥

ಸಂಜಯನೇ ! ಯುದ್ಧದಲ್ಲಿ ಭೀಮನು ದುಶ್ಶಾಸನನ ರಕ್ತವನ್ನು ಕುಡಿದಾಗ ಯಾರೂ ಭೀಮನನ್ನು ನಿವಾರಿಸಲು ಸಾಧ್ಯವಾಗಲಿಲ್ಲ ಎಂಬ ವಾರ್ತೆಯನ್ನು ಕೇಳಿದ ಮೇಲೆ ನಾನು ವಿಜಯವನ್ನು ಬಯಸಲಿಲ್ಲ.

ಯದಾ ದ್ರೋಣೇ ನಿಹತೇ ದ್ರೋಣಪುತ್ರೋ
ನಾರಾಯಣಂ ದಿವ್ಯಮಸ್ತ್ರಂ ವಿಕುರ್ವನ್ ।
ನೈಷಾಮಂತಂ ಗತವಾನ್ ಪಾಂಡವಾನಾಂ
ತದಾ ನಾಶಂಸೇ ವಿಜಯಾಯ ಸಂಜಯ ॥೧೯೨॥

ಸಂಜಯನೇ ! ದ್ರೋಣರು ಹತರಾದ ಮೇಲೆ ಅಶ್ವತ್ಥಾಮಾಚಾರ್ಯರು ಪಾಂಡವರಿಗೆ ವಿರೋಧವನ್ನು ಮಾಡಲು ನಾರಾಯಣಾಸ್ತ್ರವನ್ನು ಪ್ರಯೋಗ ಮಾಡಿದರೂ ಪಾಂಡವರ ವಿನಾಶ ಉಂಟಾಗಲಿಲ್ಲ ಎಂಬ ವಾರ್ತೆಯನ್ನು ಕೇಳಿದ ಮೇಲೆ ನಾನು ವಿಜಯವನ್ನು ಬಯಸಲಿಲ್ಲ.

ಯದಾಽಶ್ರೌಷಂ ಕರ್ಣಮತ್ಯಂತಶೂರಂ ।
ಹತಂ ಪಾರ್ಥೇನಾಹವೇಷ್ವಪ್ರಧೃಷ್ಯಮ್
ತಸ್ಮಿನ್ ಭ್ರಾತೄಣಾಂ ವಿಗ್ರಹೇ ದೇವಮಧ್ಯೇ
ತದಾ ನಾಶಂಸೇ ವಿಜಯಾಯ ಸಂಜಯ ॥೧೯೩॥

ಸಂಜಯನೇ ! ಅಣ್ಣತಮ್ಮಂದಿರ ನಡುವೆ ನಡೆದ ಆ ಯುದ್ಧದಲ್ಲಿ ಎಂದೂ ಸೋಲದಿರುವ ಅತ್ಯಂತ ಶೂರನಾದ ಕರ್ಣನು ಅರ್ಜುನನಿಂದ ಹತನಾದನೆಂಬ ವಾರ್ತೆಯನ್ನು ಕೇಳಿದ ಮೇಲೆ ನಾನು ಯುದ್ಧದಲ್ಲಿ ವಿಜಯವನ್ನು ಬಯಸಲಿಲ್ಲ.

ಯದಾಽಶ್ರೌಷಂ ದ್ರೋಣಪುತ್ರಂ ಕೃಪಂ ಚ
ದುಃಶಾಸನಂ ಕೃತವರ್ಮಾಣಮುಗ್ರಮ್ ।
ಯುಧಿಷ್ಠಿರಂ ಶೂನ್ಯಮಧರ್ಷಯಂತಂ ।
ತದಾ ನಾಶಂಸೇ ವಿಜಯಾಯ ಸಂಜಯ ॥೧೯೪॥

ಸಂಜಯನೇ ! ಅಶ್ವತ್ಥಾಮಾಚಾರ್ಯರು ಕೃಪ, ದುಶ್ಶಾಸನ, ಪರಾಕ್ರಮಿಯಾದ ಕೃತವರ್ಮ ಇವರೆಲ್ಲರೂ ಸೇರಿ ಭೀಮಾರ್ಜುನರಿಂದ ದೂರನಾಗಿದ್ದಂತಹ ಧರ್ಮರಾಜನನ್ನು ಸೋಲಿಸಲು ಸಾಧ್ಯವಾಗಲಿಲ್ಲ ಎಂಬ ವಾರ್ತೆಯನ್ನು ಕೇಳಿದ ಮೇಲೆ ನಾನು ವಿಜಯವನ್ನು ಬಯಸಲಿಲ್ಲ.

ಭೀಮಾರ್ಜುನರಿಗಿಂತ ದುರ್ಬಲನಾದ ಏಕಾಂಗಿಯಾದ ಧರ್ಮರಾಜನನ್ನೂ ನನ್ನವರು ಸೋಲಿಸಲು ಸಾಧ್ಯವಾಗಲಿಲ್ಲ ಅದ್ದರಿಂದ ಜಯದ ಆಸೆ ಇಲ್ಲ.

ಯದಾಽಶ್ರೌಷಂ ನಿಹತಂ ಮದ್ರರಾಜಂ
ರಣೇ ಶೂರಂ ಧರ್ಮರಾಜೇನ ಸೂತ ।
ಸದಾ ಸಂಗ್ರಾಮೇ ಸ್ಪರ್ಧತೇ ಯಸ್ತು ಕೃಷ್ಣಂ
ತದಾ ನಾಶಂಸೇ ವಿಜಯಾಯ ಸಂಜಯ ॥೧೯೫॥

ಸಂಜಯನೇ ! ಕೃಷ್ಣನ ಜೊತೆಯಲ್ಲಿ ಯಾವಾಗಲೂ ಯುದ್ಧದಲ್ಲಿ ಸ್ಪರ್ಧಿಸುವ ಮದ್ರರಾಜನಾದ ಶೂರನಾದ ಶಲ್ಯನು ಧರ್ಮರಾಜನಿಂದ ನಿಹತನಾದನೆಂದು ಕೇಳಿದ ಮೇಲೆ ನಾನು ಜಯವನ್ನು ಬಯಸಲಿಲ್ಲ

ಯದಾऽಶ್ರೌಷಂ ಕಲಹದ್ಯೂತಮೂಲಂ
ಮಾಯಾಬಲಂ ಸೌಬಲಂ ಪಾಂಡವೇನ ।
ನಿಹತಂ ಸಂಗ್ರಾಮೇ ಸಹದೇವೇನ ಪಾಪಂ
ತದಾ ನಾಶಂಸೇ ವಿಜಯಾಯ ಸಂಜಯ ॥೧೯೬॥

ಸಂಜಯನೇ ! ಯುದ್ಧಕ್ಕೆ ಕಾರಣವಾದ ದ್ಯೂತಕ್ಕೆ ಕಾರಣವಾದ ಮಾಯಾವಿಯಾದ ಪಾಪಿಯಾದ ಶಕುನಿಯು ಯುದ್ಧದಲ್ಲಿ ಸಹದೇವನಿಂದ ಹತನಾದನೆಂದು ಕೇಳಿದ ಮೇಲೆ ನಾನು ಜಯವನ್ನು ಬಯಸಲಿಲ್ಲ

ಯದಾऽಶ್ರೌಷಂ ಶಾಂತಮೇಕಂ ಶಯಾನಂ
ಹ್ರದಂ ಗತ್ವಾ ಸ್ತಂಭಯಿತ್ವಾ ತದಂಭಃ ।
ದುರ್ಯೋಧನಂ ವಿರಥಂ ಭಗ್ನಯಜ್ಞಂ
ತದಾ ನಾಶಂಸೇ ವಿಜಯಾಯ ಸಂಜಯ ॥೧೯೭॥

ಸಂಜಯನೇ ! ಯುದ್ಧದಿಂದ ನಿವೃತ್ತನಾದ ವಿರಥನಾದ ದುರ್ಯೋಧನನು ವೈಶಂಪಾಯನಸರೋವರದಲ್ಲಿ ಜಲಸ್ತಂಭನವನ್ನು ಮಾಡಿ ಮಂತ್ರವನ್ನು ಜಪಿಸುತ್ತಿರಲು, ಆ ಜಪಕ್ಕೆ ಭಂಗಬಂದಿತೆಂಬ ವಾರ್ತೆಯನ್ನು ಕೇಳಿದ ಮೇಲೆ ನಾನು ವಿಜಯವನ್ನು ಬಯಸಲಿಲ್ಲ.

ಯದಾऽಶ್ರೌಷಂ ಪಾಂಡವಾಂಸ್ತಿಷ್ಠಮಾನಾನ್
ಗತ್ವಾ ಹ್ರದೇ ವಾಸುದೇವೇನ ಸಾರ್ಧಮ್ ।
ಅಧರ್ಷಿತಂ ಧರ್ಷಯಂತಂ ಸುತಂ ಮೇ
ತದಾ ನಾಶಂಸೇ ವಿಜಯಾಯ ಸಂಜಯ ॥೧೯೮॥

ಸಂಜಯನೇ ! ಕೃಷ್ಣ ಮತ್ತು ಪಾಂಡವರು ವೈಶಂಪಾಯನ ಸರೋವರದ ಬಳಿಗೆಹೋಗಿ ನನ್ನ ಮಗನನ್ನು ನಿಂದಿಸದಿದ್ದರೂ, ನನ್ನ ಮಗನು ಪಾಂಡವರನ್ನೂ ಮತ್ತು ಕೃಷ್ಣನನ್ನೂ ನಿಂದಿಸಿದನೆಂಬ ವಾರ್ತೆಯನ್ನು ಕೇಳಿದ ಮೇಲೆ ನಾನು ವಿಜಯವನ್ನು ಬಯಸಲಿಲ್ಲ.

ಮರಣಕಾಲದಲ್ಲಿಯೂ ವಿಷ್ಣುವೈಷ್ಣವನಿಂದೆಯನ್ನು ಮಾಡಿದ 'ಕಾರಣಕ್ಕಾಗಿ ವಿಜಯದ ಆಸೆಯನ್ನು ತೊರೆದಿದ್ದೇನೆ.

ಯದಾऽಶ್ರೌಷಂ ವಿವಿಧಾಂಸ್ತಾತ ಮಾರ್ಗಾನ್
ಗದಾಯುದ್ಧೇ ಮಂಡಲಶಶ್ಚರಂತಮ್ ।
ಮಿಥ್ಯಾಹತಂ ವಾಸುದೇವಸ್ಯ ಬುದ್ಧ್ಯಾ
ತದಾ ನಾಶಂಸೇ ವಿಜಯಾಯ ಸಂಜಯ ॥೧೯೯॥

ಸಂಜಯನೇ ! ಅಲ್ಲಿ ಗಧಾಯುದ್ಧದಲ್ಲಿ ಭೀಮ ಮತ್ತು ದುರ್ಯೋಧನನು ಅನೇಕ ಮಾರ್ಗಗಳಲ್ಲಿ ತಿರುಗಿ ಅನೇಕ ಮಂಡಲಗಳಲ್ಲಿ ಯುದ್ಧವನ್ನು ಮಾಡುತ್ತಿರುವಾಗ ಕೃಷ್ಣನ ಪ್ರಚೋದನೆಯಂತೆ ದುರ್ಯೋಧನನು ಮೋಸದಿಂದ ಹೊಡೆಯಲ್ಪಟ್ಟನು ಎಂಬ ವಾರ್ತೆಯನ್ನು ಕೇಳಿದ ಮೇಲೆ ನಾನು ವಿಜಯವನ್ನು ಬಯಸಲಿಲ್ಲ. ಮುಳ್ಳನ್ನು ಮುಳ್ಳಿನಿಂದಲೇ ತೆಗೆಯಬೇಕು ಎಂಬಂತೆ ಅಧಾರ್ಮಿಕನಾದ ದುರ್ಯೋಧನನನ್ನು ಅಧರ್ಮದಿಂದ ಕೊಂದರೂ ಅದು ಧರ್ಮವೇ ಆಗಿದೆ.

ಯದಾऽಶ್ರೌಷಂ ದ್ರೋಣಪುತ್ರಾದಿಭಿಸ್ತೈ-
ರ್ಹತಾನ್ ಪಾಂಚಾಲಾನ್ ದ್ರೌಪದೇಯಾಂಶ್ಚ ಸುಪ್ತಾನ್ ।
ಕೃತಂ ಬೀಭತ್ಸಮಯಶಸ್ಯಂ ಚ ಕರ್ಮ
ತದಾ ನಾಶಂಸೇ ವಿಜಯಾಯ ಸಂಜಯ ॥೨೦೦॥

ಸಂಜಯನೇ ! ಅಶ್ವತ್ಥಾಮ ಮೊದಲಾದವರು ರಾತ್ರಿಯ ವೇಳೆಯಲ್ಲಿ ಮಲಗಿ ನಿದ್ರಿಸುತ್ತಿದ್ದ ದ್ರೌಪದಿಯ ಮಕ್ಕಳನ್ನು ಕೊಂದು ಅಕೀರ್ತಿಕರವಾದ ಬೀಭತ್ಸವಾದ ಕರ್ಮವನ್ನು ಮಾಡಿದರೆಂದು ಕೇಳಿದ ಮೇಲೆ ನಾನು ನನ್ನ ಮಕ್ಕಳಿಗೆ ಪರಲೋಕದ ಗತಿಯ ಆಸೆಯನ್ನು ಬಿಟ್ಟಿದ್ದೇನೆ.

ನಿದ್ರಿಸಿದ್ದವರನ್ನು ಕೊಂದದ್ದರಿಂದ ಪರಲೋಕದಲ್ಲಿ ಗತಿಯಿಲ್ಲ.

ಯದಾऽಶ್ರೌಷಂ ಭೀಮಸೇನಾನುಯಾತೇ-
ರಾಶ್ವತ್ಥಾಮ್ನಾ ಪರಮಾಸ್ತ್ರಂ ಪ್ರಯುಕ್ತಮ್ ।
ಕ್ರುದ್ಧೇನೈಷೀಕಂ ಚಾವಧೀದ್ಯನ್ನ ಗರ್ಭಂ
ತದಾ ನಾಶಂಸೇ ವಿಜಯಾಯ ಸಂಜಯ ॥೨೦೧॥

ಸಂಜಯನೇ ! ಭೀಮಸೇನನನ್ನು ಹಿಂಬಾಲಿಸಿದ ಅಶ್ವತ್ಥಾಮನು ಕ್ರುದ್ಧನಾಗಿ ಒಂದು ಹುಲ್ಲುಕಡ್ಡಿಯನ್ನು ತೆಗೆದುಕೊಂಡು ಅದನ್ನು ಬ್ರಹ್ಮಾಸ್ತ್ರವಾಗಿ ಅಭಿಮಂತ್ರಿಸಿ ಉತ್ತರೆಯ

ಗರ್ಭದ ಮೇಲೆ ಪ್ರಯೋಗಿಸಿದರೂ ಗರ್ಭವು ನಾಶವಾಗಲಿಲ್ಲ ಎಂಬ ವಾರ್ತೆಯನ್ನು ಕೇಳಿದ ಮೇಲೆ ನಾನು ನನ್ನ ಮಕ್ಕಳಿಗೆ ಪರಲೋಕದ ಗತಿಯನ್ನು ಬಯಸಲಿಲ್ಲ.

ಭ್ರೂಣಹತ್ಯಾಪ್ರಯತ್ನದ ಕಾರಣದಿಂದ ಪರಲೋಕದಲ್ಲಿ ಗತಿಯಿಲ್ಲ.

ಯದಾऽಶ್ರೌಷಂ ಬ್ರಹ್ಮಶಿರೋऽರ್ಜುನೇನ
ಮುಕ್ತಂ ಸ್ಪಷ್ಟೀತ್ಯಸ್ತ್ರಮಸ್ತ್ರೇಣ ಶಾಂತಮ್ ।
ಅಶ್ವತ್ಥಾಮ್ನಾ ಮಣಿರತ್ನಂ ಚ ಮುಕ್ತಂ
ತದಾ ನಾಶಂಸೇ ವಿಜಯಾಯ ಸಂಜಯ ॥೨೦೨॥

ಸಂಜಯನೇ ! ಅಶ್ವತ್ಥಾಮರು ಪ್ರಯೋಗಿಸಿದ ಬ್ರಹ್ಮಶಿರೋಸ್ತ್ರವನ್ನು ಕುರಿತು ಅರ್ಜುನನು ತಾನೂ ಬ್ರಹ್ಮಾಸ್ತ್ರವನ್ನು ಪ್ರಯೋಗ ಮಾಡಿ ಶಾಂತಗೊಳಿಸಿ ಅಶ್ವತ್ಥಾಮರ ಶಿರೋರತ್ನವನ್ನು ತೆಗೆದುಕೊಂಡು ಹೋದನೆಂಬ ವಾರ್ತೆಯನ್ನು ಕೇಳಿದ ಮೇಲೆ ನನ್ನ ಮಕ್ಕಳಿಗೆ ಪರಲೋಕಗತಿಯನ್ನು ಬಯಸಲಿಲ್ಲ.

ಅಶ್ವತ್ಥಾಮರ ಶ್ರೇಷ್ಠವಾದ ಬ್ರಹ್ಮಚರ್ಯವ್ರತವನ್ನು ನಾಶಮಾಡಿದುದರಿಂದ ಪರಲೋಕಗತಿಯಿಲ್ಲ.

ಯದಾऽಶ್ರೌಷಂ ದ್ರೋಣಪುತ್ರೇಣ ಗರ್ಭೇ
ವೈರಾಟ್ಯಾ ವೈ ಪಾತ್ಯಮಾನೇ ಮಹಾಸ್ತ್ರೇ ।
ಸಂಜೀವಯಾಮೀತಿ ಹರೇಃ ಪ್ರತಿಜ್ಞಾಂ
ತದಾ ನಾಶಂಸೇ ವಿಜಯಾಯ ಸಂಜಯ ॥೨೦೩॥

ಸಂಜಯನೇ ! ಅಶ್ವತ್ಥಾಮರು ಉತ್ತರೆಯ ಗರ್ಭದ ಮೇಲೆ ಮಹಾಸ್ತ್ರವನ್ನು ಪ್ರಯೋಗಿಸಿದಾಗ ಕೃಷ್ಣನು ನಾನು ಗರ್ಭವನ್ನು ಬದುಕಿಸುತ್ತೇನೆ ಎಂದು ಪ್ರತಿಜ್ಞೆಯನ್ನು ಮಾಡಿದನೆಂಬ ವಾರ್ತೆಯನ್ನು ಕೇಳಿದ ಮೇಲೆ ನಾನು ನನ್ನ ಮಕ್ಕಳಿಗೆ ಪರಲೋಕಗತಿಯನ್ನು ಬಯಸಲಿಲ್ಲ.

ದುರ್ಯೋಧನನ ಸಲುವಾಗಿ ಅಶ್ವತ್ಥಾಮರು, ಕೃಷ್ಣ ಮತ್ತು ವ್ಯಾಸರಿಗೆ ಅಪ್ರಿಯವಾದ ಕಾರ್ಯವನ್ನು ಮಾಡಿದುದರಿಂದ ಪರಲೋಕದ ಗತಿಯ ಆಸೆಯಿಲ್ಲ.

ಶೋಚ್ಯಾ ಗಾಂಧಾರೀ ಪುತ್ರಪೌತ್ರೈರ್ವಿಹೀನಾ
ತಥಾ ವಧ್ವಾ ಪಿತೃಭಿರ್ಭ್ರಾತೃಭಿಶ್ಚ ।

ಕೃತಂ ಕಾರ್ಯಂ ದುಷ್ಕರಂ ಪಾಂಡವೇಯೈಃ
ಪ್ರಾಪ್ತಂ ರಾಜ್ಯಂ ನಿಸ್ಸಪತ್ನಂ ಪುನಸ್ತೈಃ ॥೨೦೪॥

ಮಕ್ಕಳನ್ನೂ ಮೊಮ್ಮಕ್ಕಳನ್ನೂ ಸೊಸೆಯರನ್ನೂ ತಂದೆಯನ್ನೂ ಮತ್ತು ಅಣ್ಣತಮ್ಮಂದಿರನ್ನೂ ಕಳೆದುಕೊಂಡ ಗಾಂಧಾರಿಯು ಶೋಚನೀಯಳು. ಪಾಂಡವರು ದುಷ್ಕರವಾದ ಕಾರ್ಯವನ್ನು ಎಸಗಿದರು. ಅವರು ಪುನಃ ಶತ್ರುರಹಿತವಾದ ರಾಜ್ಯವನ್ನು ಹೊಂದಿದರು.

ಕಷ್ಟಂ ಯುದ್ಧೇ ದಶ ಶೇಷಾಃ ಶ್ರುತಾ ಮೇ
ತ್ರಯೋಽಸ್ಮಾಕಂ ಪಾಂಡವಾನಾಂ ಚ ಸಪ್ತ ।
ದ್ವ್ಯೂನಾ ವಿಂಶತ್ಯಾದಿತಾಽಕ್ಷೌಹಿಣೀನಾಂ
ತಸ್ಮಿನ್ ಸಂಗ್ರಾಮೇ ತುಮುಲೇ ಕ್ಷತ್ರಿಯಾಣಾಮ್ ॥೨೦೫॥

ಎಂತಹ ಕಷ್ಟ ಒದಗಿತು ! ಯುದ್ಧದಲ್ಲಿ ನಮ್ಮವರು ಮೂರುಜನ ಪಾಂಡವರಕಡೆ ಏಳುಜನ ಉಳಿದರೆಂದು ಕೇಳಿದೆನು. ಹದಿನೆಂಟು ಅಕ್ಷೌಹಿಣಿ ಸೈನ್ಯದಲ್ಲಿ ಉಳಿದೆಲ್ಲ ಕ್ಷತ್ರಿಯರು ಘೋರವಾದ ಯುದ್ಧದಲ್ಲಿ ನಾಶವನ್ನು ಹೊಂದಿದರು. (ಕೌರವರ ಕಡೆ ಕೃಪ, ಅಶ್ವತ್ಥಾಮ, ಯುಯುತ್ಸು ಮತ್ತು ಪಾಂಡವರ ಕಡೆ ಕೃಷ್ಣ, ಸಾತ್ಯಕಿ ಮತ್ತು ಪಂಚಪಾಂಡವರು)

ತಮಸಾ ತ್ವಸ್ಯ ವಿಸ್ತೀರ್ಣಂ ಮೋಹ ಆವಿಶತೇ ಚ ಮಾಮ್ ।
ಸಂಜ್ಞಾಂ ನೈವ ಲಭೇ ಸೂತ ಮನೋ ವಿಹ್ವಲತೀವ ಮೇ ॥೨೦೬॥

ನನ್ನ ಮನಸ್ಸು ಅಜ್ಞಾನದಿಂದ ಆವರಿಸಲ್ಪಡುತ್ತಿದೆ. ಯಾವ ಜ್ಞಾನವೂ ಉಂಟಾಗುತ್ತಿಲ್ಲ. ಸಂಜಯನೇ ! ನನ್ನ ಮನಸ್ಸು ತುಂಬಾ ವಿಹ್ವಲವಾಗುತ್ತಿದೆ. ಅಥವಾ ನನ್ನ ಹೆಂಡತಿ, ನನ್ನ ಮಕ್ಕಳು ಎಂಬ ಅಜ್ಞಾನದಿಂದ ಮೋಹವು ಉಂಟಾಗುತ್ತಿದೆ.

ಇತ್ಯುಕ್ತ್ವಾ ಧೃತರಾಷ್ಟ್ರೋಽಥ ವಿಲಪ್ಯ ಚ ಸುದುಃಖಿತಃ ।
ಮೂರ್ಚ್ಛಿತಃ ಪುನರಾಶ್ವಸ್ತಃ ಸಂಜಯಂ ವಾಕ್ಯ ಮಬ್ರವೀತ್ ॥೨೦೭॥

ಧೃತರಾಷ್ಟ್ರನು ಹೀಗೆ ಹೇಳಿ ದುಃಖದಿಂದ ಬಹಳ ವಿಲಾಪಮಾಡಿ ಮೂರ್ಛೆಯನ್ನು ಹೊಂದಿ ಪುನಃ ಎಚ್ಚರವನ್ನು ಪಡೆದು ಸಂಜಯನನ್ನು ಕುರಿತು ಮಾತನಾಡಿದನು.

ಸಂಜಯೈವಂಗತೇ ಪ್ರಾಣಾಂಸ್ಯಕ್ತುಮಿಚ್ಛಾಮಿ ಮಾಚಿರಮ್ ।
ಸ್ತೋಕಂ ಹ್ಯಪಿ ನ ಪಶ್ಯಾಮಿ ಫಲಂ ಜೀವಿತಧಾರಣೇ ॥೨೦೮॥

ಸಂಜಯನೇ ! ಪರಿಸ್ಥಿತಿಯು ಹೀಗೆ ಇರುವಾಗ ನಾನು ಪ್ರಾಣವನ್ನು ಬಿಡಲು ಬಯಸುತ್ತೇನೆ. ಬದುಕಿರುವುದರಲ್ಲಿ ಅಲ್ಪವಾದ ಪ್ರಯೋಜನವೂ ಕಾಣುತ್ತಿಲ್ಲ.

ಸೂತಃ

ತಮೇವಂವಾದಿನಂ ದೀನಂ ವಿಲಪಂತಂ ಮಹೀಪತಿಮ್ ।
ಗಾವದ್ಗಣಿರಿದಂ ಧೀಮಾನ್ ಮಹಾರ್ಥಂ ವಾಕ್ಯ ಮಬ್ರವೀತ್ ॥೨೦೯॥

ಹೀಗೆ ವಿಲಾಪವನ್ನು ಮಾಡುತ್ತಾ ದೈನ್ಯದಿಂದ ಮಾತುಗಳನ್ನು ಆಡುತ್ತಿದ್ದ ಧೃತರಾಷ್ಟ್ರನನ್ನು ಕುರಿತು ಮೇಧಾವಿಯಾದ ಸಂಜಯನು ಅರ್ಥಪೂರ್ಣವಾದ ಮಾತುಗಳನ್ನು ಆಡಿದನು.

ಸಂಜಯಃ

ಶ್ರುತವಾನಸಿ ವೈ ರಾಜನ್ ಮಹೋತ್ಸಾಹಾನ್ ಮಹಾಬಲಾನ್ ।
ದ್ವೈಪಾಯನಸ್ಯ ವಚನಾನ್ನಾರದಸ್ಯ ಚ ಧೀಮತಃ ॥೨೧೦॥

ರಾಜನೇ ! ನೀನು ದ್ವೈಪಾಯನರ ಮುಖದಿಂದಲೂ ನಾರದರ ಮುಖದಿಂದಲೂ ಮಹೋತ್ಸಾಹ ಉಳ್ಳವರೂ, ಮಹಾಬಲ ಉಳ್ಳವರೂ ಮೇಧಾವಿಗಳೂ ಆದ ರಾಜರ ಕಥೆಗಳನ್ನು ಕೇಳಿದ್ದೀಯೆ.

ಮಹತ್ಸು ರಾಜವಂಶೇಷು ಗುಣೈಃ ಸಮುದಿತೇಷು ಚ ।
ಜಾತಾನ್ ದಿವ್ಯಾಸ್ತ್ರವಿದುಷಃ ಶಕ್ರಪ್ರತಿಮತೇಜಸಃ ॥೨೧೧॥

ಅವರೆಲ್ಲರೂ ದೊಡ್ಡ ದೊಡ್ಡ ರಾಜವಂಶದಲ್ಲಿ ಜನಿಸಿದವರು. ಬಹಳ ಸದ್ಗುಣಗಳಿಂದ ತುಂಬಿದವರು ಇಂದ್ರನಿಗೆ ಸಮಾನವಾದ ಪರಾಕ್ರಮ ಉಳ್ಳವರು ದಿವ್ಯಾಸ್ತ್ರಗಳನ್ನು ತಿಳಿದವರು.

ಧರ್ಮೇಣ ಪೃಥಿವೀಂ ಜಿತ್ವಾ ಯಜ್ಞೈರಿಷ್ಟ್ವಾऽऽಪ್ತದಕ್ಷಿಣೈಃ ।
ಅಸ್ಮಿಂಲ್ಲೋಕೇ ಯಶಃ ಪ್ರಾಪ್ಯ ತತಃ ಕಾಲವಶಂ ಗತಾನ್ ॥೨೧೨॥

ಅವರು ಧರ್ಮದಿಂದ ಪೃಥಿವಿಯನ್ನು ಜಯಿಸಿ ಬಹಳ ದಕ್ಷಿಣೆಗಳುಳ್ಳ ಯಾಗಗಳನ್ನು ಆಚರಿಸಿ ಈ ಲೋಕದಲ್ಲಿ ಕೀರ್ತಿಯನ್ನು ಪಡೆದು ಪರಲೋಕಕ್ಕೆ ಹೋಗಿದ್ದಾರೆ.

ವೈನ್ಯಂ ಮಹಾರಥಂ ವೀರಂ ಸೃಂಜಯಂ ಜಯತಾಂ ವರಮ್ ।
ಸುಹೋತ್ರಂ ರಂತಿದೇವಂ ಚ ಕಕ್ಷೀವಂತಮಥೌಶಿಜಮ್ ॥೨೧೩॥

ಅವರುಗಳು ಮಹಾರಥನಾದ ಪೃಥು, ವೀರನಾದ ಸೃಂಜಯ, ಜಯಶಾಲಿಯಾದ ಸುಹೋತ್ರ, ರಂತಿದೇವ, ಉಶಿಜಕುಲದಲ್ಲಿ ಹುಟ್ಟಿದ ಕಕ್ಷೀವಾನ್.

ಬಾಹ್ಲೀಕಂ ದಮನಂ ಶೈಬ್ಯಂ ಶರ್ಯಾತಿಂ ಚ ಶಿಬಿಂ ನಲಮ್ ।
ವಿಶ್ವಾಮಿತ್ರಮಮಿತ್ರಘ್ನ ಮಂಬರೀಷಂ ಮಹಾಬಲಮ್ ॥೨೧೪॥

ಬಾಹ್ಲೀಕ, ದಮನ, ಶೈಬ್ಯ, ಶರ್ಯಾತಿ, ಶಿಬಿ, ನಳ, ವಿಶ್ವಾಮಿತ್ರ, ಅಮಿತ್ರಘ್ನ, ಮಹಾಬಲನಾದ ಅಂಬರೀಷ.

ಮರುತ್ತಂ ಮನುಮಿಕ್ಷ್ವಾಕುಂ ಗಯಂ ಭರತಮೇವ ಚ ।
ರಾಮಂ ದಾಶರಥಿಂ ಚೈವ ಶಶಬಿಂದುಂ ಭಗೀರಥಮ್ ॥೨೧೫॥

ಮರುತ್ತ, ಮನು, ಇಕ್ಷ್ವಾಕು, ಗಯ, ಭರತ, ದಾಶರಥಿಯಾದ ರಾಮ, ಶಶಬಿಂದು, ಭಗೀರಥ

ಯಯಾತಿಂ ಶುಭಕರ್ಮಾಣಂ ದೇವೈರ್ಯೋ ಯಾಜಿತಃ ಸ್ವಯಮ್ ।
ಚೈತ್ಯಯೂಪಾಂಕಿತಾ ಭೂಮಿರ್ಯಸ್ಯೇಯಂ ಸವನಾರ್ಣವಾ ॥೨೧೬॥

ಶುಭಕರ್ಮಗಳನ್ನು ಮಾಡಿದ ಯಯಾತಿ. ದೇವತೆಗಳೇ ನಿಂತು ಅವನಿಂದ ಯಜ್ಞವನ್ನು ಮಾಡಿಸಿದರು. ಅವನ ಯಜ್ಞಗಳಿಂದ ಸಮಗ್ರವಾದ ಈ ಭೂಮಿಯು ಚೈತ್ಯಯೂಪಗಳಿಂದ ತುಂಬಿಹೋಯಿತು.

ಇತಿ ರಾಜ್ಞಾಂ ಚತುರ್ವಿಂಶನ್ನಾರದೇನ ಮಹಾತ್ಮನಾ ।
ಪುತ್ರಶೋಕಾಭಿತಪ್ತಾಯ ಪುರಾ ಶೈವ್ಯಾಯ ಕೀರ್ತಿತಾಃ ॥೨೧೭॥

ಮಹಾತ್ಮರಾದ ನಾರದರು ಪುತ್ರಶೋಕಾಭಿತಪ್ತನಾದ ಶಿಬಿಗೆ ಹಿಂದೆ ಈ ಇಪ್ಪತ್ತನಾಲ್ಕುಜನ ಮಹಾರಾಜರ ಕಥೆಗಳನ್ನು ಹೇಳಿದರು.

ತೇಭ್ಯಶ್ಚಾನ್ಯೇ ಗತಾಃ ಪೂರ್ವಂ ರಾಜಾನೋ ಬಲವತ್ತರಾಃ ।
ಮಹಾರಥಾ ಮಹಾತ್ಮಾನಃ ಸರ್ವೈಃ ಸಮುದಿತಾ ಗುಣೈಃ ॥೨೧೮॥

ಅವರಿಗಿಂತಲೂ ಮೊದಲು ಬೇರೆಯಾದ ಇನ್ನೂ ಬಲಿಷ್ಠರಾದ ಮಹಾರಥರೂ ಮಹಾನುಭಾವರಾದ, ಗುಣಪೂರ್ಣರೂ ಆದ ಅನೇಕ ರಾಜರುಗಳು ಕಾಲವಾಗಿ ಹೋಗಿದ್ದಾರೆ.

ಪೂರುಃ ಕುರುರ್ಯದುಃ ಶೂರೋ ವಿಶ್ವಗಶ್ವೋ ಮಹಾಧೃತಿಃ ।
ಅಣುಹೋ ಯುವನಾಶ್ವಶ್ಚ ಕಕುತ್ಸ್ಥೋ ವಿಕ್ರಮೋ ರಘುಃ ॥೨೧೯॥

ಪೂರು, ಕುರು, ಯದು, ಶೂರ, ವಿಶ್ವಗಶ್ವ, ಮಹಾಧೃತಿ, ಅಣುಹ, ಯುವನಾಶ್ವ, ಕಖೂಸ್ಥ, ವಿಕ್ರಮ, ರಘು

ವಿಜಿತಿರ್ವೀತಿಹೋತ್ರೋಂಗೋ ಹಯಶ್ಚೈತೋ ಬೃಹದ್ಗುರುಃ ।
ಮಹೋತ್ಸಾಹೋ ವಿನೀತಾತ್ಮಾ ಸುಕ್ರತುರ್ನೈಷಧೋನಲಃ ॥೨೨೦॥

ವಿಜಿತಿ, ವೀತಿಹೋತ್ರ, ಅಂಗ, ಹಯ, ಶ್ವೈತ, ಬೃಹದ್ಗುರು, ಮಹೋತ್ಸಾಹ, ವಿನೀತಾತ್ಮಾ, ಸುಕ್ರತು, ನಿಷಧಾಧಿಪತಿಯಾದ ನಳ.

ಸತ್ಯವ್ರತಃ ಶಾಂತಭಯಃ ಸುಮಿತ್ರಃ ಸುಬಲಃ ಪ್ರಭುಃ ।
ಜಾನುಜಂಘೋऽನರಣ್ಯಶ್ಚ ಪ್ರಿಯಭೃತ್ಯಃ ಶುಚಿವ್ರತಃ ॥೨೨೧॥

ಸತ್ಯವ್ರತ, ಶಾಂತಭಯ, ಸುಮಿತ್ರ, ಸುಬಲ, ಜಾನುಜಂಘ, ಅನರಣ್ಯ, ಪ್ರಿಯಭೃತ್ಯ, ಶುಚಿವ್ರತ.

ಬಲಬಂಧುರ್ನಿರಾಮರ್ದಃ ಕೇತುಶೃಂಗೋ ಬೃಹದ್ಬಲಃ ।
ಧೃಷ್ಟಕೇತುರ್ಬೃಹತ್ಕೇತುರ್ದೀಪ್ತಕೇತುರ್ನಿರಾಮಯಃ ॥೨೨೨॥

ಬಲಬಂಧು, ನಿರಾಮರ್ದ, ಕೇತುಶೃಂಗ, ಬೃಹದ್ಬಲ, ಧೃಷ್ಟಕೇತು, ಬೃಹತ್ಕೇತು, ದೀಪ್ತಕೇತು, ನಿರಾಮಯ.

ಅಧಿಕ್ಷುರ್ವಲಲೋ ಧೂರ್ತೋ ದೃಢಬಂಧುರ್ದೃಢಾಯುಧಃ ।
ಮಹಾಪುರಾಣಸಂಭಾವ್ಯಾಃ ಪ್ರತ್ಯಂಗಃ ಪುರಹಾ ಶ್ರುತಿಃ ॥೨೨೩॥

ಅಧಿಕ್ಷು, ವಲಲ, ಧೂರ್ತ, ದೃಢಬಂಧು, ದೃಢಾಯುಧ, ಮಹಾಪುರಾಣಗಳಲ್ಲಿ ಪೂಜಿತನಾದ ಪ್ರತ್ಯಂಗ, ಪುರಹಾ ಮತ್ತು ಶ್ರುತಿ

ಏತೇಚಾನ್ಯೇ ಚ ಬಹವಃ ಶತಶೋಽಥ ಸಹಸ್ರಶಃ ।
ಶ್ರೂಯಂತೇ ಶತಶಶ್ಚಾನ್ಯೇ ಸಂಖ್ಯಾತಾಶ್ಚಾಪಿ ಸರ್ವಶಃ ॥೨೨೪॥

ಇವರು ಮತ್ತು ಅನೇಕ ನೂರಾರು ಮತ್ತು ಸಹಸ್ರಾರು ಸಂಖ್ಯೆಯುಳ್ಳ ರಾಜರುಗಳ ಹೆಸರುಗಳು ಕೇಳಿಬರುತ್ತವೆ.

ಹಿತ್ವಾ ತು ವಿಪುಲಾನ್ ಭೋಗಾನ್ ಋದ್ಧಿಮಂತೋ ಮಹಾಬಲಾಃ ।
ರಾಜಾನೋ ನಿಧನಂ ಪ್ರಾಪ್ತಾಸ್ತವ ಪುತ್ರೈರ್ಮಹತ್ತಮಾಃ ॥೨೨೫॥

ಮಹಾಬಲಿಷ್ಠರಾದ ಅವರೆಲ್ಲರೂ ನಿನ್ನ ಮಕ್ಕಳಿಗಿಂತಲೂ ಶ್ರೇಷ್ಠರಾದವರು. ಅವರೆಲ್ಲರೂ ವಿಪುಲವಾದ ಭೋಗವನ್ನೂ ಐಶ್ವರ್ಯವನ್ನೂ ಬಿಟ್ಟು ಕಾಲವಾಗಿದ್ದಾರೆ.

ಯೇಷಾಂ ದಿವ್ಯಾನಿ ಕರ್ಮಾಣಿ ವಿಕ್ರಮಸ್ತ್ಯಾಗ ಏವ ಚ ।
ಮಾಹಾತ್ಮ್ಯಮಪಿ ಚಾಸ್ತಿಕ್ಯಂ ಸತ್ಯಂ ಶೌಚಂ ದಮಾರ್ಜವಮ್ ॥೨೨೫॥

ವಿದ್ವದ್ಭಿಃ ಕಥ್ಯತೇ ಲೋಕೇ ಪುರಾಣೈ ಕವಿಸತ್ತಮೈಃ ।
ಸುಬುದ್ಧಿಗುಣಸಂಪನ್ನಾಸ್ತೇ ಚಾಪಿ ನಿಧನಂ ಗತಾಃ ॥೨೨೬॥

ಅವರ ದಿವ್ಯವಾದ ಕರ್ಮಗಳು, ಪರಾಕ್ರಮ, ತ್ಯಾಗ, ಮಹಾತ್ಮೈ, ಶ್ರದ್ಧೆ, ಸತ್ಯ, ಶೌಚ, ದಮ, ಆರ್ಜವ, ಈ ಗುಣಗಳನ್ನು ಲೋಕದಲ್ಲಿ ವಿದ್ವಾಂಸರು ಇಂದೂ ಹೊಗಳುತ್ತಾರೆ. ಶ್ರೇಷ್ಠವಾದ ಕವಿಗಳು ಪುರಾಣಗಳಲ್ಲಿಯೂ ಅವರನ್ನು ಹೊಗಳಿದ್ದಾರೆ. ಸದ್ಬುದ್ಧಿಯಿಂದಲೂ ಸದ್ಗುಣಗಳಿಂದಲೂ ಕೂಡಿದವರೆಲ್ಲರೂ ನಿಧನರಾದರು.

ತವ ಪುತ್ರಾ ದುರಾತ್ಮಾನಃ ಪ್ರತಪ್ತಾಶ್ಚೈವ ಮನ್ಯುನಾ ।
ಲುಬ್ಧಾ ದುರ್ವೃತ್ತಭೂಯಿಷ್ಠಾ ನ ತಾನ್‌ಶೋಚಿತುಮರ್ಹಸಿ ॥೨೨೭॥

ನಿನ್ನ ಮಕ್ಕಳಾದರೋ ದುಷ್ಟರಾದವರು ಯಾವಾಗಲೂ ಕ್ರೋಧದಿಂದ ಉರಿಯುತ್ತಿದ್ದರು. ದುರಾಶೆವುಳ್ಳವರು, ದುರ್ನಡತೆವುಳ್ಳವರು, ಅವರನ್ನು ಕುರಿತು ಶೋಕಿಸುವ ಅಗತ್ಯವಿಲ್ಲ.

ದೈವಂ ಪುರುಷಕಾರೇಣ ಕೋ ನಿವರ್ತಿತುಮರ್ಹತಿ ।
ವಿಧಾತೃವಿಹಿತಂ ಮಾರ್ಗಂ ನ ಕಶ್ಚಿದತಿವರ್ತತೇ ॥೨೨೮॥

ದೈವಸಂಕಲ್ಪವನ್ನು ಪುರುಷ ಪ್ರಯತ್ನವು ಎಂದೂ ಮೀರಲು ಸಾಧ್ಯವಿಲ್ಲ. ಎಲ್ಲರೂ ವಿಧಿಯು ಬರೆದ ಮಾರ್ಗದಲ್ಲಿಯೇ ನಡೆಯಬೇಕು.

ಕಾಲಃ ಸೃಜತಿ ತತ್ಸರ್ವಂ ಭಾವಾಭಾವೌ ಸುಖಾಸುಖೇ ।
ಕಾಲಃ ಪಚತಿ ಭೂತಾನಿ ಕಾಲಃ ಸಂಹರತಿ ಪ್ರಜಾಃ ॥೨೨೯॥

ಕಾಲನಾಮಕನಾದ ವಿಷ್ಣುವೇ ಎಲ್ಲವನ್ನೂ ಸೃಷ್ಟಿಸುತ್ತಾನೆ, ಉತ್ಪತ್ತಿನಾಶಗಳಿಗೂ, ಸುಖಃ, ದುಃಖಗಳಿಗೂ ಅವನೇ ಕಾರಣ. ಅವನು ಜೀವರನ್ನು ದುಃಖಗಳಿಗೆ ಒಳಪಡಿಸುತ್ತಾನೆ ಮತ್ತು ಸಂಹರಿಸುತ್ತಾನೆ.

ನಿರ್ದಹನ್ ವೈ ಪ್ರಜಾಃ ಕಾಲಃ ಕಾಲಃ ಶಮಯತೇ ಪುನಃ ।
ಕಾಲೋಽಪಿ ಕುರುತೇ ಭಾವಾನ್ ಸರ್ವಲೋಕಶುಭಾಶುಭಾನ್॥೨೩೦॥

ಜೀವರಿಗೆ ತಾಪವನ್ನು ಕೊಡುತ್ತಾನೆ, ಪುನಃ ಉಪಶಮನ ಮಾಡುತ್ತಾನೆ. ಎಲ್ಲವನ್ನೂ ವಿಪರಿಣಾಮ ಮಾಡುತ್ತಾನೆ. ಎಲ್ಲ ಲೋಕಗಳಿಗೆ ಶುಭಾಶುಭಗಳನ್ನು ಉಂಟುಮಾಡುತ್ತಾನೆ.

ಕಾಲಃ ಸಂಕ್ಷಿಪ್ಯ ಸರ್ವಾಸ್ತು ಪ್ರಜಾ ವಿಸೃಜತೇ ಪುನಃ ।
ಕಾಲಃ ಸರ್ವೇಷು ಭೂತೇಷು ಚರತ್ಯವಿರತಃ ಸಮಃ ॥೨೩೧॥

ಅವನು ಎಲ್ಲವಸ್ತುಗಳನ್ನು ವಿಲೀನಗೊಳಿಸಿ ಪ್ರಜೆಗಳನ್ನೂ ಮತ್ತು ಜಗತ್ತನ್ನು ಪುನಃ ಸೃಷ್ಟಿಸುತ್ತಾನೆ. ಅವನು ಅವಿಶ್ರಾಂತನಾಗಿ ಲೀಲೆಯಿಂದ ಎಲ್ಲ ಜೀವರಲ್ಲಿಯೂ ಪಕ್ಷಪಾತವಿಲ್ಲದೆ ಸಂಚರಿಸುತ್ತಾನೆ.

ಅತೀತಾನಾಗತಾ ಭಾವಾ ಯೇ ವರ್ತಂತೇ ಚ ಸಾಂಪ್ರತಮ್ ।
ತಾನ್ ಕಾಲನಿರ್ಮಿತಾನ್ ಬುದ್ಧ್ಯಾ ನ ಸಂಜ್ಞಾಂ ಹಾತುಮರ್ಹಸಿ॥೨೩೨॥

ಈಗಿರುವ ಎಲ್ಲ ವಸ್ತುಗಳು ಹಿಂದಿದ್ದ ಮತ್ತು ಮುಂದೆ ಬರುವ ಎಲ್ಲ ಜಡಚೇತನಗಳು ಜ್ಞಾನರೂಪನಾದ ಕಾಲನಾಮಕನಾದ ವಿಷ್ಣುವಿನ ಅಧೀನವೆಂದು ತಿಳಿದು ನೀನು ಸಮಾಧಾನವನ್ನು ತಂದುಕೊಳ್ಳಬೇಕು.

ಸೂತಃ

ಏವಮುಕ್ತ್ವಾ ತು ರಾಜಾನಂ ಸಂಜಯೋ ವಿರರಾಮ ಚ ।
ಧೃತರಾಷ್ಟ್ರೋಽಥ ರಾಜಾ ಚ ಧೃತಿಮೇವ ಸಮಾಶ್ರಯತ್ ॥೨೩೩॥

ಸಂಜಯನು ರಾಜನನ್ನು ಕುರಿತು ಹೀಗೆ ಮಾತನಾಡಿ ತನ್ನ ಮಾತನ್ನು ನಿಲ್ಲಿಸಿದನು. ಧೃತರಾಷ್ಟ್ರರಾಜನೂ ಸಹ ಧೈರ್ಯವನ್ನು ಹೊಂದಿದನು.

ಅತ್ರೋಪನಿಷದಂ ಪುಣ್ಯಾಂ ಕೃಷ್ಣದ್ವೈಪಾಯನೋಽಬ್ರವೀತ್ ।
ಭಾರತಾಧ್ಯಯನಾತ್ ಪುಣ್ಯಾದಪಿ ಪಾದಮಧೀಯತಃ ।
ಶ್ರದ್ದಧಾನಸ್ಯ ಪೂಯಂತೇ ಸರ್ವಪಾಪಾನ್ಯ ಶೇಷತಃ ॥೨೩೪॥

ವೇದವ್ಯಾಸರು ಈ ಆದಿಪರ್ವದಲ್ಲಿ ಉಪನಿಷತ್ ರೂಪವಾದ ಈ ಅನುಕ್ರಮಣಿಕಾ ಅಧ್ಯಾಯವನ್ನು ಹೇಳಿದ್ದಾರೆ. ಭಾರತದ ಅಧ್ಯಯನದಿಂದ ಉಂಟಾದ ಪುಣ್ಯದಿಂದಲೂ, ಭಾರತದ ಒಂದು ಪಾದವನ್ನು ಅಧ್ಯಯನಮಾಡುವ ಪುಣ್ಯದಿಂದಲೂ, ಶ್ರದ್ಧೆಯುಳ್ಳ ಪುರುಷರಿಗೆ ಎಲ್ಲ ಪಾಪಗಳೂ ನಿಶ್ಶೇಷವಾಗಿ ಪರಿಹಾರವಾಗುತ್ತವೆ

ದೇವರ್ಷಯೋ ಹ್ಯತ್ರ ಪುಣ್ಯಾ ಬ್ರಹ್ಮರಾಜರ್ಷಯಸ್ತಥಾ ।
ಕೀರ್ತ್ಯಂತೇ ಶುಭಕರ್ಮಾಣಸ್ತಥಾ ಯಕ್ಷಮಹೋರಗಾಃ ॥೨೩೫॥

ಇಲ್ಲಿ ಪವಿತ್ರರಾದ ದೇವರ್ಷಿಗಳೂ, ರಾಜರ್ಷಿಗಳೂ, ಅವರು ಮಾಡಿದ ಶುಭಕರ್ಮಗಳೂ, ಯಕ್ಷರೂ ಮತ್ತು ಮಹೋರಗಗಳೂ ಕೀರ್ತಿಸಲ್ಪಡುತ್ತಾರೆ.

ಭಗವಾನ್ ವಾಸುದೇವಶ್ಚ ಕೀರ್ತ್ಯತೇಽತ್ರ ಸನಾತನಃ ।
ಸಹಿ ಸತ್ಯಮೃತಂ ಚೈವ ಪವಿತ್ರಂ ಪುಣ್ಯಮೇವ ಚ ।
ಶಾಶ್ವತಂ ಪರಮಂ ಬ್ರಹ್ಮ ಪರಂ ಜ್ಯೋತಿಃ ಸನಾತನಮ್ ॥೨೩೬॥

ಪೂಜ್ಯನಾದ ಸನಾತನನಾದ ವಸುದೇವನ ಸುತನಾದ ಶ್ರೀಕೃಷ್ಣನು ಇಲ್ಲಿ ಎಲ್ಲಾ ಕಡೆಯೂ ಕೀರ್ತಿಸಲ್ಪಡುತ್ತಾನೆ. ಅವನೇ ಸತ್ಯ , ಋತ, ಪವಿತ್ರ , ಪುಣ್ಯಪ್ರದ, ಶಾಶ್ವತ, ಪರಬ್ರಹ್ಮ, ಪರಜ್ಯೋತಿ ಮತ್ತು ಸನಾತನನಾದವನು.

ಯಸ್ಯ ದಿವ್ಯಾನಿ ಕರ್ಮಾಣಿ ಕಥಯಂತಿ ಮನೀಷಿಣಃ ।
ಅಸತ್ ಸತ್ ಸದಸಚ್ಚೈವ ಯಸ್ಮಾದೇವ ಪ್ರವರ್ತತೇ ॥೨೩೭॥

ಜ್ಞಾನಿಗಳಾದವರು ಅವನ ದಿವ್ಯವಾದ ಕರ್ಮಗಳನ್ನು ಪ್ರಶಂಶಿಸುತ್ತಾರೆ. ಸೃಷ್ಟಿ, ಸ್ಥಿತಿ, ಸಂಹಾರಗಳು ಅವನಿಂದಲೇ ಉಂಟಾಗುತ್ತವೆ. ಅಸತ್ ಎಂದರೆ ದುರ್ಜನರು. ಸತ್ ಎಂದರೆ ಸಜ್ಜನರು. ಸದಸತ್ ಎಂದರೆ ಉಭಯವಿಧದ ಜನರು, ಅಥವಾ ಅಸತ್ ಎಂದರೆ ಅನಿತ್ಯವಾದ, ಸತ್ ಎಂದರೆ ನಿತ್ಯವಾದ, ಸದಸತ್ ಎಂದರೆ ನಿತ್ಯಾನಿತ್ಯವಾದ ಪ್ರಪಂಚವೂ ಅವನಿಂದಲೇ ಹುಟ್ಟಿತು.

ಸಂತತಿಶ್ಚ ಪ್ರವೃತ್ತಿಶ್ಚ ಜನ್ಮಮೃತ್ಯೂ ಪುನರ್ಭವಃ ।
ಅಧ್ಯಾತ್ಮಂ ಶ್ರೂಯತೇ ಯತ್ರ ಪಂಚಭೂತಗುಣಾತ್ಮಕಮ್ ॥೨೩೮॥

ರಾಜರ ಸಂತತಿಗಳು ಪ್ರವೃತ್ತಿಗಳು ಜನನ ಮರಣಗಳು ಪುನರ್ಜನ್ಮ ಪಂಚಭೂತಗುಣಗಳಿಂದ ಕೂಡಿದ ಶರೀರದಲ್ಲಿ ನಡೆಯುವ ಎಲ್ಲ ವ್ಯಾಪಾರಗಳು ಎಲ್ಲವೂ ಅವನಿಂದಲೇ ಉಂಟಾಗುತ್ತವೆ ಎಂದು ಇಲ್ಲಿ ಹೇಳಲ್ಪಡುತ್ತದೆ.

ಅವ್ಯಕ್ತಾದಿ ಪರಂ ತಚ್ಚ ಸ ದೇವಃ ಪರಿಗೀಯತೇ ।
ಯತ್ ಸ್ಥಂ ಯತಿವರಾ ಮುಕ್ತಾ ಧ್ಯಾನಯೋಗಬಲಾನ್ವಿತಾಃ ।
ಪ್ರತಿಬಿಂಬಮಿವಾದರ್ಶೇ ಪಶ್ಯಂತ್ಯಾತ್ಮನ್ಯವಸ್ಥಿತಮ್ ॥೨೩೯॥

ಧ್ಯಾನಯೋಗಬಲದಿಂದ ಕೂಡಿದ ಮುಕ್ತರಾದ ಯತಿಶ್ರೇಷ್ಠರು ಕನ್ನಡಿಯಲ್ಲಿ ಪ್ರತಿಬಿಂಬವನ್ನು ನೋಡಿದಂತೆ ತಮ್ಮ ಹೃದಯದಲ್ಲಿ ಯಾರ ಸ್ವರೂಪವನ್ನು ನೋಡುತ್ತಾರೆಯೋ ಅಂತಹ ಅವ್ಯಕ್ತಾದಿತತ್ತ್ವಗಳಿಗಿಂತಲೂ ಶ್ರೇಷ್ಠನಾದ ದೇವನು ಈ ಭಾರತದಲ್ಲಿ ಕೊಂಡಾಡಲ್ಪಡುತ್ತಾನೆ.

ಶ್ರದ್ದಧಾನಃ ಸತ್ಯಯುಕ್ತಃ ಸತ್ಯಧರ್ಮಪರಾಯಣಃ ।
ಕಥಯನ್ನಿಮಮಧ್ಯಾಯಂ ನರಃ ಪಾಪಾತ್ ಪ್ರಮುಚ್ಯತೇ ॥೨೪೦॥

ಯಾವ ಮನುಷ್ಯನು ಶ್ರದ್ಧೆಯಿಂದಲೂ, ಸತ್ಯದಿಂದಲೂ ಕೂಡಿದವನಾಗಿ ಧರ್ಮಪರಾಯಣನಾಗಿ ಈ ಅನುಕ್ರಮಣಿಕಾಧ್ಯಾಯವನ್ನು ವ್ಯಾಖ್ಯಾನ ಮಾಡುತ್ತಾನೆಯೋ ಅವನು ಪಾಪಗಳಿಂದ ಮುಕ್ತನಾಗುತ್ತಾನೆ.

ಅನುಕ್ರಾಮಣಿಮಧ್ಯಾಯಂ ಭಾರತಸ್ಯೈವಮಾದಿತಃ ।
ಆಸ್ತಿಕಃ ಸತತಂ ಶೃಣ್ವನ್ನ ಕೃಚ್ಛ್ರೇಷ್ವವಸೀದತಿ ।
ಸಭಾಮಧ್ಯೇಜಪನ್ ಕಶ್ಚಿತ್ ಸದ್ಯೋ ಮುಚ್ಯೇತ ಕಿಲ್ಬಿಷಾತ್ ॥೨೪೧॥

ಮಹಾಭಾರತದ ಆದಿಯಲ್ಲಿರುವ ಈ ಅನುಕ್ರಮಣಿಕಾಧ್ಯಾಯವನ್ನು ಶ್ರವಣ ಮಾಡುವ ಆಸ್ತಿಕನು ಕಷ್ಟಗಳಿಗೆ ಸಿಲುಕುವುದಿಲ್ಲ, ಸಭೆಯ ಮಧ್ಯದಲ್ಲಿ ಇದನ್ನು ಜಪಿಸುವ ಮನುಷ್ಯನು ತಕ್ಷಣದಲ್ಲಿಯೇ ಪಾಪಗಳಿಂದ ನಿರ್ಮುಕ್ತನಾಗುತ್ತಾನೆ.

ಅನುಕ್ರಾಮಣಮಧ್ಯಾಯಮಹೋರಾತ್ರಾ ಯ ಚ ಸಂಚಿತಮ್ ।
ಭಾರತಶ್ರಾವಪುಣ್ಯೇನ ಸತ್ಯಂ ಚಾನೃತಮೇವ ಚ ॥೨೪೨॥

ದೇವತೆಗಳಿಗೆ ಸಂಬಂಧಿಸಿದ ಹಗಲು ಮತ್ತು ಪಿಶಾಚಿಗಳಿಗೆ ಸಂಬಂಧಿಸಿದ ರಾತ್ರಿಗಳು ಹೇಗೆ ಸತ್ಯ ಮತ್ತು ಸುಳ್ಳಿನಿಂದ ಸಂಬದ್ಧವಾಗಿವೆಯೋ ಹಾಗೆ ಅನುಕ್ರಮಣಿಕಾಧ್ಯಾಯವು ಸಮಗ್ರ ಭಾರತವನ್ನು ಶ್ರವಣ ಮಾಡಿದುದರಿಂದ ಉಂಟಾದ ಪುಣ್ಯದಿಂದ ಸಂಬದ್ಧವಾಗಿದೆ.

ಅನುಕ್ರಮಣಿಕಾ ಅಧ್ಯಾಯದ ಶ್ರವಣದಿಂದ ಉಂಟಾಗುವ ಪುಣ್ಯವು ಸಮಗ್ರ ಭಾರತದ ಶ್ರವಣದಿಂದ ಉಂಟಾಗುವ ಪುಣ್ಯಕ್ಕೆ ಸಮವಾಗಿದೆ.

ನವನೀತಂ ಯಥಾ ದಧ್ನೋ ದ್ವಿಪದಾಂ ಬ್ರಹ್ಮಣೋ ಯಥಾ ।
ಆರಣಂ ಚಾಪಿ ವೇದೇಭ್ಯ ಓಷಧೀಭ್ಯೋ ಯಥಾಽಮೃತಮ್ ॥೨೪೩॥

ಹೇಗೆ ನವನೀತವು ದಧಿಯ ಸಾರಭೂತವೋ, ಹೇಗೆ ಬ್ರಾಹ್ಮಣನು ದ್ವಿಪದಪ್ರಾಣಿಗಳಲ್ಲಿ ಶ್ರೇಷ್ಠನೋ, ಹೇಗೆ ಆರಣ್ಯಕ ಮತ್ತು ಉಪನಿಷತ್ತುಗಳು ವೇದಗಳಲ್ಲಿ ಶ್ರೇಷ್ಠವಾದುವೋ, ಹೇಗೆ ಅಮೃತವು ಓಷಧಿಗಳ ಸಾರವಾಗಿದೆಯೋ ಹಾಗೆ ಅನುಕ್ರಮಣಿಕಾಧ್ಯಾಯವು ಭಾರತದ ಸಾರವಾಗಿದೆ.

ಹ್ರದಾನಾಮುದಧಿಃ ಶ್ರೇಷ್ಠೋ ಗೌರ್ವರಿಷ್ಠಾ ಚತುಷ್ಪದಾಮ್ ।
ಯಥೈತಾನಿ ವಿಶಿಷ್ಟಾನಿ ತಥಾ ಭಾರತಮುಚ್ಯತೇ ॥೨೪೪॥

ಎಲ್ಲ ಸರೋವರಗಳಿಗಿಂತಲೂ ಸಮುದ್ರವು ಶ್ರೇಷ್ಠವಾದುದು. ಎಲ್ಲ ಚತುಷ್ಪಾದ ಪ್ರಾಣಿಗಳಿಗಿಂತಲೂ ಗೋವು ಶೇಷ್ಠವಾದುದು ಹೇಗೆಯೋ ಹಾಗೆ ಪ್ರಮೇಯವನ್ನು ನಿರೂಪಿಸುವ ಎಲ್ಲ ಗ್ರಂಥಗಳಲ್ಲಿ ಭಾರತವು ಶ್ರೇಷ್ಠವಾದುದು.

ಯಶ್ಚೇದಂ ಶ್ರಾವಯೇಚ್ಛ್ರಾದ್ಧೇ ಬ್ರಾಹ್ಮಣಾನ್ ಪಾದಮಂತತಃ ।
ಅಕ್ಷಯ್ಯಮನ್ನದಾನಂ ತತ್ ಪಿತೄಂಸ್ತಸ್ಯೋಪತಿಷ್ಠತಿ ॥೨೪೫॥

ಶ್ರಾದ್ಧಕಾಲದಲ್ಲಿ ಬ್ರಾಹ್ಮಣರಿಗೆ ಯಾವನು ಕೊನೆಯಪಕ್ಷ ಈ ಭಾರತದ ಒಂದು ಪಾದವನ್ನಾದರೂ ಶ್ರವಣ ಮಾಡಿಸುತ್ತಾನೆಯೋ ಅವನು ಪಿತೃಗಳಿಗೆ ಮಾಡಿದ ಅನ್ನದಾನವು ಅಕ್ಷಯವಾಗಿ ಅದು ಪಿತೃಗಳನ್ನು ತಲಪುತ್ತದೆ.

ಇತಿಹಾಸಪುರಾಣಾಭ್ಯಾಂ ವೇದಂ ಸಮುಪಬೃಂಹಯೇತ್ ।
ಬಿಭೇತ್ಯಲ್ಪ ಶ್ರುತಾದ್ ವೇದೋ ಮಾಮಯಂ ಪ್ರಚಲಿಷ್ಯತಿ ॥೨೪೬॥

ಇತಿಹಾಸ ಪುರಾಣಗಳಿಂದ ವೇದದ ಅರ್ಥವನ್ನು ವಿಸ್ತಾರಮಾಡಿ ತಿಳಿಯಬೇಕು. ಅಲ್ಪವಿದ್ಯೆಯುಳ್ಳ ಮನುಷ್ಯನು ವೇದದ ವ್ಯಾಖ್ಯಾನವನ್ನು ಮಾಡಲು ಹೊರಟರೆ ನನಗೆ ಇವನು ಅಪಾರ್ಥವನ್ನು ಮಾಡುತ್ತಾನೆ ಎಂದು ವೇದವು ಹೆದರುತ್ತದೆ.

ಕಾರ್ಷ್ಣಂ ವೇದಮಿಮಂ ವಿದ್ವಾನ್ ಶ್ರಾವಯಿತ್ವಾऽರ್ಥಮಶ್ನುತೇ ।
ಭ್ರೂಣಹತ್ಯಾಕೃತಂ ಚಾಪಿ ಪಾಪಂ ದಹ್ಯಾನ್ನ ಸಂಶಯಃ ॥೨೪೭॥

ಈ ಮಹಾಭಾರತವು ವೇದವ್ಯಾಸರು ರಚಿಸಿದ ಪಂಚಮವೇದ. ಇದರ ವ್ಯಾಖ್ಯಾನವನ್ನು ಮಾಡಿದರೆ ಎಲ್ಲಾ ಪುರುಷಾರ್ಥಗಳ ಪ್ರಾಪ್ತಿಯಾಗುತ್ತದೆ. ಭ್ರೂಣಹತ್ಯೆಯನ್ನು ಮಾಡಿದ ಪಾಪವೂ ಕೂಡ ಇದರಿಂದ ಪರಿಹಾರವಾಗುತ್ತದೆ ಎಂಬ ವಿಷಯದಲ್ಲಿ ಸಂಶಯವಿಲ್ಲ.

ಯ ಇಮಂ ಸಂಗ್ರಹಾಧ್ಯಾಯಂ ಪಠನ್ ಪರ್ವಣಿ ಪರ್ವಣಿ ।
ಅಧೀತಂ ಭಾರತಂ ತೇನ ಕೃತ್ಸ್ನಂ ಸ್ಯಾದಿತಿ ಮೇ ಮತಿಃ ॥೨೪೮॥

ಯಾರು ಪ್ರತಿ ಪರ್ವಕಾಲಗಳಲ್ಲಿ ಈ ಸಂಗ್ರಹಾಧ್ಯಾಯವನ್ನು ಪಠಿಸುತ್ತಾರೋ ಅವರು ಸಮಗ್ರವಾದ ಭಾರತವನ್ನು ಪಠಿಸಿದ ಪುಣ್ಯವನ್ನು ಹೊಂದುತ್ತಾರೆ ಎಂದು ನನ್ನ ಅಭಿಪ್ರಾಯ.

ಯಶ್ಚೇದಂ ಶೃಣುಯಾನ್ನಿತ್ಯಮಾರ್ಷಂ ಶ್ರದ್ಧಾಸಮನ್ವಿತಃ ।
ಸ ದೀರ್ಘಮಾಯುಧೀರ್ಘಾಂಚ ಸ್ವರ್ಗತಿಂ ಚಾಪ್ನುಯಾನ್ನರಃ ॥೨೪೯॥

ಋಷಿಗಳಿಗೆ ಯೋಗ್ಯವಾದ ಈ ಭಾರತವನ್ನು ಯಾವನು ಶ್ರದ್ಧೆಯಿಂದ ಕೇಳುತ್ತಾನೆಯೋ ಅವನು ದೀರ್ಘವಾದ ಆಯುಷ್ಯವನ್ನೂ ಮತ್ತು ದೀರ್ಘಕಾಲದ ಸ್ವರ್ಗವಾಸವನ್ನೂ ಹೊಂದುತ್ತಾನೆ.

ಚತ್ವಾರ ಏಕತೋ ವೇದಾ ಭಾರತಂ ಚೈಕಮೇಕತಃ ।
ಸಮಾಗತೈಃ ಸುರರ್ಷಿಭಿಸ್ತುಲಾಮಾರೋಪಿತಂ ಪುರಾ ॥೨೫೦॥

ದೇವತೆಗಳು ಮತ್ತು ಋಷಿಗಳೆಲ್ಲರೂ ಒಂದು ಕಡೆ ಸೇರಿ ಒಂದು ತಕ್ಕಡಿಯಲ್ಲಿ ಒಂದು ಕಡೆ ನಾಲ್ಕುವೇದಗಳನ್ನೂ ಇನ್ನೊಂದು ಕಡೆ ಭಾರತವನ್ನೂ ಇಟ್ಟುತೂಗಿದರು.

ಮಹತ್ತ್ವೇಚ ಗುರುತ್ವೇಚ ಧ್ರಿಯಮಾಣಂ ತತೋऽಧಿಕಮ್ ।
ಮಹತ್ತಾ ದ್ ಭಾರವತ್ತಾ ಚ್ಚ ಮಹಾಭಾರತಮುಚ್ಯತೇ ।
ನಿರುಕ್ತಮಸ್ಯ ಯೋ ವೇದ ಸರ್ವಪಾಪೈಃಪ್ರಮುಚ್ಯತೇ ॥೨೫೧॥

ಮಹಾಭಾರತವಿದ್ದ ತಕ್ಕಡಿಯ ತಟ್ಟೆಯು ಗಾತ್ರದಿಂದ ಮತ್ತು ಭಾರದಿಂದ ಕೆಳಗೆ ಹೋಯಿತು. ಗಾತ್ರದಲ್ಲಿ ಮಹತ್ತಾಗಿರುವುದರಿಂದ ಮತ್ತು ಅರ್ಥದಿಂದ ಭಾರವಾಗಿರುವುದರಿಂದ ಇದನ್ನು ಮಹಾಭಾರತ ಎಂದು ಕರೆಯುತ್ತಾರೆ. ಮಹಾಭಾರತ ಶಬ್ದದ ಅರ್ಥವನ್ನು ಯಾವನು ತಿಳಿಯುತ್ತಾನೋ ಅವನು ಎಲ್ಲಾ ಪಾಪಗಳಿಂದಲೂ ಮುಕ್ತನಾಗುತ್ತಾನೆ.

ತಪೋನ ಕಲ್ಯೋऽಧ್ಯಯನಂ ನ ಕಲ್ಯಃ
ಸ್ವಾಭಾವಿಕೋ ವೇದವಿಧಿರ್ನ ಕಲ್ಯಃ ।
ಪ್ರಸಹ್ಯ ವಿತ್ತಾಹರಣಂ ನ ಕಲ್ಯ-
ಸ್ತಾನ್ಯೇವ ಭಾವೋಪಹತಾನಿ ಕಲ್ಯಃ ॥೨೫೨॥

ತಪಸ್ಸು ಕೆಟ್ಟದ್ದಲ್ಲ, ಅಧ್ಯಯನವು ಕೆಟ್ಟದ್ದಲ್ಲ, ಸ್ವಭಾವವನ್ನು ಅನುಸರಿಸಿದ ವೇದವಿಧಿಗಳು ಕೆಟ್ಟದ್ದಲ್ಲ, ರಾಜರು ಪ್ರಜೆಗಳಿಂದ ಬಲಾತ್ಕಾರಮಾಡಿ ಯೋಗ್ಯವಾದ ಧನವನ್ನು ಸ್ವೀಕರಿಸುವುದು ಕೆಟ್ಟದ್ದಲ್ಲ, ಆದರೆ ಉದ್ದೇಶವು ದುಷ್ಟವಾದರೆ ಮಾತ್ರ ಇದೆಲ್ಲವೂ ಕೆಟ್ಟದ್ದಾಗುತ್ತದೆ. ಸಂಸಾರಬಂಧನಕ್ಕೆ ಕಾರಣವಾಗುತ್ತದೆ.

॥ ಇತಿ ಶ್ರೀಮನ್ಮಹಾಭಾರತೇ ಶತಸಹಸ್ರಿಕಾಯಾಂ
ಸಂಹಿತಾಯಾಮಾದಿಪರ್ವಣಿ ಪ್ರಥಮೋऽಧ್ಯಾಯಃ ॥

॥ ಅನುಕ್ರಮಣಿಕಾಪರ್ವ ಸಮಾಪ್ತಮ್ ॥

ಇಲ್ಲಿಗೆ ಅನುಕ್ರಮಣಿಕಾಪರ್ವವು ಮುಗಿಯಿತು.

೨. ಪರ್ವಸಂಗ್ರಹಪರ್ವ

ಎರಡನೆಯ ಅಧ್ಯಾಯ

(ಭಾರತಯುದ್ಧ ಸ್ಥಳದ ಕಥನ ಸಂದರ್ಭದಲ್ಲಿ ಪರಶುರಾಮನ ಚರಿತ್ರೆ. ಸಮಂತಪಂಚಕ ನಿರ್ಮಾಣ. ಸೇನಾಪರಿಮಾಣ, ಪರ್ವಾನುಕ್ರಮಣಿಕೆ ಮತ್ತು ಉಪಪರ್ವಗಳ ವಿಷಯಾನುಕ್ರಮಣಿಕೆ)

ಋಷಯಃ

ಸಮಂತಪಂಚಕಮಿತಿ ಯದುಕ್ತಂ ಸೂತನಂದನ ।
ಏತತ್ಸರ್ವಂ ಯಥಾನ್ಯಾಯಂ ಶ್ರೋತುಮಿಚ್ಛಾಮಹೇ ವಯಮ್ ॥೧॥

ಎಲೈ ಸೂತಪುತ್ರರೇ ನೀವು ಸಮಂತಪಂಚಕವೆಂದು ಹೇಳಿದಿರಷ್ಟೆ, ಆ ವಿಷಯವನ್ನು ನಾವು ವಿಸ್ತಾರವಾಗಿ ಯಥಾರ್ಥವಾಗಿ ಕೇಳಲು ಬಯಸುತ್ತೇವೆ.

ಸೂತಃ

ಶುಶ್ರೂಷಾ ಯದಿ ವೋ ವಿಪ್ರಾ ಬ್ರುವತಶ್ಚ ಕಥಾಃ ಶುಭಾಃ ।
ಸಮಂತಪಂಚಕಾಖ್ಯಾನಂ ಶ್ರೋತುಮರ್ಹಥ ಸತ್ತಮಾಃ ॥೨॥

ಎಲೈ ಬ್ರಾಹ್ಮಣರೇ, ಎಲೈ ಶ್ರೇಷ್ಠರೇ, ನಾನು ಹೇಳುವ ಪುಣ್ಯಕಥೆಗಳನ್ನು ನೀವು ಕೇಳುವ ಇಚ್ಛೆಯುಳ್ಳವರಾದರೆ ಸಮಂತಪಂಚಕದ ಕಥೆಯನ್ನು ಹೇಳುತ್ತೇನೆ. ಅದನ್ನು ಕೇಳಿ.

ತ್ರೇತಾದ್ವಾಪರಯೋಃ ಸಂಧೌ ರಾಮಃ ಶಸ್ತ್ರಭೃತಾಂ ವರಃ ।
ಅಸಕೃತ್ಪಾರ್ಥಿವಂ ಕ್ಷತ್ರಂ ಜಘಾನಾಮರ್ಷಚೋದಿತಃ ॥೩॥

ತ್ರೇತಾ ಮತ್ತು ದ್ವಾಪರಯುಗದ ಸಂಧಿಯಲ್ಲಿ ಶಸ್ತ್ರಧಾರಿಗಳಲ್ಲಿ ಶ್ರೇಷ್ಠರಾದ ಪರಶುರಾಮನು ಕ್ರೋಧಕ್ಕೆ ಒಳಗಾದವನಾಗಿ ಅನೇಕ ಬಾರಿ ಸಂಚರಿಸಿ ಭೂಮಿಯಲ್ಲಿದ್ದ ಕ್ಷತ್ರಿಯರನ್ನೆಲ್ಲಾ ಸಂಹರಿಸಿದನು.

ಸ ಸರ್ವಂ ಕ್ಷತ್ರಮುತ್ಸಾದ್ಯ ಸ್ವವೀರ್ಯೇಣಾನಲದ್ಯುತಿಃ ।
ಸಮಂತಪಂಚಕೇ ಪಂಚ ಚಕಾರ ರುಧಿರಹ್ರದಾನ್ ॥೪॥

ಅಗ್ನಿಯ ತೇಜಸ್ಸುಳ್ಳ ಪರಶುರಾಮನು ತನ್ನ ಪರಾಕ್ರಮದಿಂದ ಎಲ್ಲ ಕ್ಷತ್ರಿಯರನ್ನು ಸಂಹಾರ ಮಾಡಿ, ಸಮಂತಪಂಚಕದಲ್ಲಿ ಐದು ರಕ್ತಸರೋವರಗಳನ್ನು ಮಾಡಿದನು.

ಸ ತೇಷು ರುಧಿರಾಂಭಸ್ಸು ಹ್ರದೇಷು ಕ್ರೋಧಮೂರ್ಚ್ಛಿತಃ ।
ಪಿತೄನ್ ಸಂತರ್ಪಯಾಮಾಸ ರುಧಿರೇಣೇತಿ ನಃ ಶ್ರುತಮ್ ॥೫॥

ಮಹಾಕ್ರೋಧಕ್ಕೆ ಒಳಗಾದ ಪರಶುರಾಮನು ಆ ಸರೋವರಗಳ ರಕ್ತಜಲದಿಂದ ತನ್ನ ಪಿತೃಗಳಿಗೆ ತರ್ಪಣವನ್ನು ಕೊಟ್ಟನು ಎಂದು ನಾವು ಕೇಳಿದ್ದೇವೆ.

ಅಥರ್ಚೀಕಾದಯೋಽಭ್ಯೇತ್ಯ ಪಿತರೋ ಬ್ರಾಹ್ಮಣರ್ಷಭಮ್ ।
ತಂ ಕ್ಷಮಸ್ವೇತಿ ಜಗದುಃ ತತಃ ಸ ವಿರರಾಮ ಹ ॥೬॥

ಆಗ ಋಚೀಕ ಮೊದಲಾದ ಅವನ ಪಿತೃಗಳು ಬಂದು ಬ್ರಾಹ್ಮಣಶ್ರೇಷ್ಠನಾದ ಅವನನ್ನು ಕುರಿತು ಶಾಂತನಾಗು ಎಂದು ಹೇಳಿದನು. ಆಗ ಅವನು ಶಾಂತನಾದನು.

ತೇಷಾಂ ಸಮೀಪೇ ಯೋ ದೇಶೋ ಹ್ರದಾನಾಂ ರುಧಿರಾಂಭಸಾಮ್ ।
ಸಮಂತಪಂಚಕಮಿತಿ ತತ್ ಪುಣ್ಯಂ ಪರಿಕೀರ್ತ್ಯತೇ ॥೭॥

ಆ ರಕ್ತಸರೋವರಗಳ ಸಮೀಪದಲ್ಲಿರುವ ದೇಶಕ್ಕೆ ಸಮಂತಪಂಚಕವೆಂದು ಹೆಸರು. ಅದು ಪವಿತ್ರವಾದ ಕ್ಷೇತ್ರವೆಂದು ಹೇಳಲ್ಪಡುತ್ತದೆ.

ಯೇನ ಲಿಂಗೇನ ಯೋ ದೇಶೋ ಯುಕ್ತಃ ಸಮುಪಲಕ್ಷ್ಯತೇ ।
ತೇನೈವ ನಾಮ್ನಾ ತಂ ದೇಶಂ ಯುಕ್ತಮಾಹುರ್ಮನೀಷಿಣಃ ॥೮॥

ಯಾವ ದೇಶದಲ್ಲಿ ಯಾವೊಂದು ವಸ್ತುವು ವಿಶೇಷವಾಗಿ ಕಾಣುತ್ತದೆಯೋ, ಆ ವಸ್ತುವಿನ ಹೆಸರೇ ಆ ದೇಶಕ್ಕೆ ಇರುವುದೆಂದು ವಿವೇಕಿಗಳು ಹೇಳುತ್ತಾರೆ.

ಅಂತರೇ ಚೈವ ಸಂಪ್ರಾಪ್ತೇ ಕಲಿದ್ವಾಪರಯೋರಭೂತ್ ।
ಸಮಂತಪಂಚಕೇ ಯುದ್ಧಂ ಕುರುಪಾಂಡವಸೇನಯೋಃ ॥೯॥

ಕಲಿಯುಗ ಮತ್ತು ದ್ವಾಪರಯುಗದ ಸಂಧಿಯಲ್ಲಿ ಸಮಂತಪಂಚಕದಲ್ಲಿ ಕುರುಪಾಂಡವ ಸೈನ್ಯಗಳಿಗೆ ಯುದ್ಧವು ನಡೆಯಿತು.

ತಸ್ಮಿನ್ ಪರಮಧರ್ಮಿಷ್ಠೇ ದೇಶೇ ಭೂದೋಷವರ್ಜಿತೇ ।
ಅಷ್ಟಾದಶ ಸಮಾಜಗ್ಮುರಕ್ಷೌಹಿಣ್ಯೋ ಯುಯುತ್ಸಯಾ ॥೧೦॥

ಭೂದೋಷವರ್ಜಿತವಾದ ಪರಮಧರ್ಮಿಷ್ಠವಾದ ಆ ಕ್ಷೇತ್ರದಲ್ಲಿ ಯುದ್ಧಮಾಡುವ ಇಚ್ಛೆಯಿಂದ ಹದಿನೆಂಟು ಅಕ್ಷೌಹಿಣಿ ಸೈನ್ಯವು ಬಂದು ಸೇರಿತು.

ಏವಂ ನಾಮಾಭಿನಿರ್ವೃತ್ತಂ ತಸ್ಯ ದೇಶಸ್ಯ ವೈ ದ್ವಿಜಾಃ ।
ಪುಣ್ಯಶ್ಚ ರಮಣೀಯಶ್ಚ ಸ ದೇಶಃ ಸಂಪ್ರಕೀರ್ತಿತಃ ॥೧೧॥

ಎಲೈ ಬ್ರಾಹ್ಮಣರೇ, ಹೀಗೆ ಆ ದೇಶಕ್ಕೆ ಸಮಂತಪಂಚಕವೆಂಬ ಹೆಸರು ಬಂದಿತು. ಆ ಪ್ರದೇಶವು ಪುಣ್ಯವು ಮತ್ತು ಮನೋಹರವು ಎಂದು ಹೇಳಲ್ಪಡುತ್ತದೆ.

ತದೇತತ್ ಕಥಿತಂ ಸರ್ವಂ ಮಯಾ ವೋ ಮುನಿಸತ್ತಮಾಃ ।
ಯಥಾ ದೇಶಃ ಸ ವಿಖ್ಯಾತಸ್ತ್ರಿಷು ಲೋಕೇಷು ವಿಶ್ರುತಃ ॥೧೨॥

ಎಲೈ ಋಷಿಶ್ರೇಷ್ಠರೇ ಮೂರುಲೋಕಗಳಲ್ಲಿಯೂ ಆ ಪ್ರದೇಶಕ್ಕೆ ಸಮಂತಪಂಚಕವೆಂಬ ಹೆಸರು ಹೇಗೆ ವಿಖ್ಯಾತವಾಗಿದೆ ಎಂಬುದೆಲ್ಲವನ್ನೂ ನಾನು ನಿಮಗೆ ಹೇಳಿದ್ದೇನೆ.

ಋಷಯಃ

ಅಕ್ಷೌಹಿಣ್ಯ ಇತಿ ಪ್ರೋಕ್ತಂ ಯತ್ ತ್ವಯಾ ಸೂತನಂದನ ।
ಏತದಿಚ್ಛಾಮಹೇ ಶ್ರೋತುಂ ಸರ್ವ ಏವ ಯಥಾತಥಮ್ ॥೧೩॥

ಎಲೈ ಸೂತನಂದನನೇ ನೀನು ಅಕ್ಷೌಹಿಣಿ ಎಂದು ಹೇಳಿದೆಯಷ್ಟೇ. ಈ ಅಕ್ಷೌಹಿಣಿಯ ವಿವರವೆಲ್ಲವನ್ನೂ ನಾವು ಕೇಳಲು ಬಯಸುತ್ತೇವೆ.

ಅಕ್ಷೌಹಿಣ್ಯಾಃ ಪರೀಮಾಣಂ ರಥಾಶ್ವನರದಂತಿನಾಮ್ ।
ಯಥಾವಚ್ಚೈವ ನೋ ಬ್ರೂಹಿ ಸರ್ವಂ ಹಿ ವಿದಿತಂ ತವ ॥೧೪॥

ಅಕ್ಷೌಹಿಣಿಯ ಪರಿಮಾಣವನ್ನು ಮತ್ತು ರಥ, ಅಶ್ವ, ಪದಾತಿ, ಮತ್ತು ಗಜಗಳ ಪರಿಮಾಣವನ್ನು ನಮಗೆ ಯಥಾರ್ಥವಾಗಿ ತಿಳಿಸು. ನೀನು ಎಲ್ಲವನ್ನೂ ತಿಳಿದಿರುವಿಯಷ್ಟೆ.

ಸೂತಃ

ಏಕೋ ರಥೋ ಗಜಶ್ಚೈಕೋ ನರಾಃ ಪಂಚ ಪದಾತಯಃ ।
ತ್ರಯಶ್ಚ ತುರಗಾಸ್ತಜ್ಞೈಃ ಪತ್ತಿರಿತ್ಯಭಿಧೀಯತೇ ॥೧೫॥

ಒಂದು ರಥ, ಒಂದು ಗಜ, ಮೂರು ಅಶ್ವಗಳು, ಐದು ಪದಾತಿಗಳು ಸೇರಿ ಒಂದು ಪತ್ತಿ ಎನಿಸುತ್ತದೆ.

ಪತ್ತಿಂ ತು ತ್ರಿಗುಣಾಮೇತಾಮಾಹುಃ ಸೇನಾಮುಖಂ ಬುಧಾಃ ।
ತ್ರೀಣಿ ಸೇನಾಮುಖಾನ್ಯೇಕೋ ಗುಲ್ಮ ಇತ್ಯಭಿಧೀಯತೇ ॥೧೬॥

ಜ್ಞಾನಿಗಳಾದವರು ಮೂರು ಪತ್ತಿಗಳಿಗೆ ಒಂದು ಸೇನಾಮುಖವೆಂದು ಹೇಳುತ್ತಾರೆ. ಮೂರುಸೇನಾಮುಖಗಳು ಒಂದು ಗುಲ್ಮವೆಂದು ಕರೆಯಲ್ಪಡುತ್ತವೆ.

ತ್ರಯೋ ಗುಲ್ಮಾ ಗಣೋ ನಾಮ ವಾಹಿನೀ ತು ಗಣಾಸ್ತ್ರಯಃ ।
ಸ್ಮೃತಾಸ್ತಿಸ್ರಸ್ತು ವಾಹಿನ್ಯಃ ಪೃತನೇತಿ ವಿಚಕ್ಷಣೈಃ ॥೧೭॥

ಮೂರು ಗುಲ್ಮಗಳಿಗೆ ಗಣ ಎಂದು ಹೆಸರು. ಮೂರು ಗಣಗಳು ಒಂದು ವಾಹಿನಿಯಾಗುತ್ತವೆ. ಮೂರು ವಾಹಿನಿಗಳನ್ನು ಪೃತನಾ ಎಂದು ತಿಳಿದವರು ಹೇಳುತ್ತಾರೆ.

ಚಮೂಸ್ತು ಪೃತನಾಸ್ತಿಸ್ರಸ್ತಾಶ್ಚ ತಿಸ್ರಸ್ತ್ವನೀಕಿನೀ ।
ಅನೀಕಿನೀಂ ದಶಗುಣಾಮಾಹುರಕ್ಷೌಹಿಣೀಂ ಬುಧಾಃ ॥೧೮॥

ಮೂರು ಪೃತನಗಳಿಗೆ ಒಂದು ಚಮೂ ಆಗುತ್ತದೆ. ಮೂರು ಚಮೂಗಳಿಗೆ ಒಂದು ಅನೀಕಿನೀಯಾಗುತ್ತದೆ. ಹತ್ತು ಅನೀಕಿನೀಗಳನ್ನು ಬುಧರು ಒಂದು ಅಕ್ಷೌಹಿಣಿ ಎಂದು ಹೇಳುತ್ತಾರೆ.

ಅಕ್ಷೌಹಿಣ್ಯಾಃ ಪ್ರಸಂಖ್ಯಾನಂ ರಥಾನಾಂ ದ್ವಿಜಸತ್ತಮಾಃ ।
ಸಂಖ್ಯಾಗಣಿತತತ್ತ್ವಜ್ಞೈಃ ಸಹಸ್ರಾಣ್ಯೇಕವಿಂಶತಿಃ ॥೧೯॥

ಶತಾನ್ಯುಪರಿ ಚೈವಾಷ್ಟೌ ತಥಾ ಭೂಯಶ್ಚ ಸಪ್ತತಿಃ ।
ಗಜಾನಾಂ ತು ಪರೀಮಾಣಮೇವಮೇವ ವಿನಿರ್ದಿಶೇತ್ ॥೨೦॥

ಎಲೈ ಬ್ರಾಹ್ಮಣಶ್ರೇಷ್ಠರೇ ಸಂಖ್ಯಾಗಣಿತತತ್ತ್ವಜ್ಞರು ಒಂದು ಅಕ್ಷೌಹಿಣಿಯಲ್ಲಿ ಇಪ್ಪತ್ತೊಂದು ಸಾವಿರದ ಎಂಟುನೂರ ಎಪ್ಪತ್ತು ರಥಗಳು ಇರುತ್ತವೆಂದು ಹೇಳುತ್ತಾರೆ. ಗಜಗಳ ಸಂಖ್ಯೆಯೂ ಅಷ್ಟೇ ಇರುತ್ತದೆ.

ಜ್ಞೇಯಂ ಶತಸಹಸ್ರಂ ತು ಸಹಸ್ರಾಣಿ ತಥಾ ನವ ।
ನರಾಣಾಮಪಿ ಪಂಚಾಶಚ್ಚತಾನಿ ತ್ರೀಣಿ ಚಾನಘಾಃ ॥೨೧॥

ದೋಷದೂರರಾದ ಎಲೈ ಸಜ್ಜನರೇ, ಒಂದು ಅಕ್ಷೌಹಿಣಿಯಲ್ಲಿರುವ ಪದಾತಿಗಳ ಸಂಖ್ಯೆ ಒಂದುಲಕ್ಷದ ಒಂಭತ್ತುಸಾವಿರದ ಮುನ್ನೂರೈವತ್ತು ಎಂದು ತಿಳಿಯಬೇಕು.

ಪಂಚಷಷ್ಟಿಸಹಸ್ರಾಣಿ ತಥಾಶ್ವಾನಾಂ ಶತಾನಿ ಚ ।
ದಶೋತ್ತರಾಣಿ ಷಟ್ ಪ್ರಾಹುರ್ಯಥಾವದಭಿಸಂಖ್ಯಯಾ ॥೨೨॥

ಒಂದು ಅಕ್ಷೌಹಿಣಿಯಲ್ಲಿರುವ ಅಶ್ವಗಳ ಸಂಖ್ಯೆಯನ್ನು ತಿಳಿದವರು ಅರವತ್ತೈದುಸಾವಿರದ ಆರುನೂರ ಹತ್ತು ಎಂದು ಹೇಳುತ್ತಾರೆ.

ಏತಾಮಕ್ಷೌಹಿಣೀಂ ಪ್ರಾಹುಃ ಸಂಖ್ಯಾತತ್ತ್ವವಿದೋ ಜನಾಃ ।
ಯಾಂ ವಃ ಕಥಿತವಾನಸ್ಮಿ ವಿಸ್ತರೇಣ ದ್ವಿಜೋತ್ತಮಾಃ ॥೨೩॥

ಎಲೈ ದ್ವಿಜಶ್ರೇಷ್ಠರೇ ಸಂಖ್ಯಾತತ್ತ್ವವೇತ್ತರಾದ ಜನರು ಹೀಗೆ ಅಕ್ಷೌಹಿಣಿಯನ್ನು ನಿರೂಪಿಸುತ್ತಾರೆ. ನಾನು ನಿಮಗೆ ಅದನ್ನು ವಿಸ್ತಾರವಾಗಿ ಹೇಳಿದ್ದೇನೆ.

ಏತಯಾ ಸಂಖ್ಯಯಾ ಹ್ಯಾಸನ್ ಕುರುಪಾಂಡವಸೇನಯೋಃ ।
ಅಕ್ಷೌಹಿಣ್ಯೋ ದ್ವಿಜಶ್ರೇಷ್ಠಾಃ ಪಿಂಡೇನಾಷ್ಟಾದಶೈವ ತಾಃ ॥೨೪॥

ಎಲೈ ದ್ವಿಜಶ್ರೇಷ್ಠರೇ ಹೀಗೆ ಅಕ್ಷೌಹಿಣಿಯನ್ನು ಗಣನೆ ಮಾಡಿದರೆ ಕೌರವ ಮತ್ತು ಪಾಂಡವಸೇನೆಗಳು ಒಟ್ಟುಸೇರಿ ಹದಿನೆಂಟು ಅಕ್ಷೌಹಿಣಿಗಳಾದವು.

ಸಮೇತಾಸ್ತತ್ರ ವೈ ದೇಶೇ ತತ್ರೈವ ನಿಧನಂ ಗತಾಃ ।
ಕೌರವಾನ್ ಕಾರಣಂ ಕೃತ್ವಾ ಕಾಲೇನಾದ್ಭುತಕರ್ಮಣಾ ॥೨೫॥

ಆ ದೇಶದಲ್ಲಿ ಆ ಸೈನ್ಯವು ಸೇರಿ ಅಲ್ಲಿಯೇ ನಿಧನವನ್ನು ಹೊಂದಿತು. ಅದ್ಭುತಕರ್ಮನಾದ ಕಾಲನಾಮಕನಾದ ಪರಮಾತ್ಮನು ಕೌರವರನ್ನು ನಿಮಿತ್ತಮಾಡಿಕೊಂಡು ಎಲ್ಲರನ್ನೂ ಸಂಹರಿಸಿದನು.

ಅಹಾನಿ ಯುಯುಧೇ ಭೀಷ್ಮೋ ದಶೈವ ಪರಮಾಸ್ತ್ರವಿತ್ ।
ಅಹಾನಿ ಪಂಚ ದ್ರೋಣಸ್ತು ರರಕ್ಷ ಕುರುವಾಹಿನೀಮ್ ॥೨೬॥

ಪರಮಾಸ್ತ್ರವೇತ್ತರಾದ ಭೀಷ್ಮರು ಹದಿನೈದುದಿನಗಳ ಕಾಲ ಯುದ್ಧವನ್ನು ಮಾಡಿದರು. ಅನಂತರ ದ್ರೋಣರು ಐದು ದಿವಸಗಳಕಾಲ ಕುರುಸೇನೆಗೆ ಸೇನಾಪತಿಯಾಗಿ ಸೇನೆಯನ್ನು ರಕ್ಷಿಸಿದರು.

ಅಹನೀ ಯುಯುಧೇ ದ್ವೇ ತು ಕರ್ಣಃ ಪರಬಲಾರ್ದನಃ ।
ಶಲ್ಯೋಽರ್ಧದಿವಸಂ ಚಾಸೀದ್ ಗದಾಯುದ್ಧಂ ತತಃ ಪರಮ್ ॥೨೭॥

ಶತ್ರುಸೈನ್ಯನಿಷೂದನನಾದ ಕರ್ಣನು ಎರಡುದಿನಗಳ ಕಾಲ ಯುದ್ಧವನ್ನು ಮಾಡಿದನು. ಅನಂತರ ಶಲ್ಯನು ಅರ್ಧದಿವಸ ಯುದ್ಧವನ್ನು ಮಾಡಿದನು. ಅನಂತರ ಗದಾಯುದ್ಧವು ನಡೆಯಿತು.

ತಸ್ಯೈವ ತು ದಿನಸ್ಯಾಂತೇ ಹಾರ್ದಿಕ್ಯದ್ರೌಣಿಗೌತಮಾಃ ।
ಪ್ರಸುಪ್ತಂ ನಿಶಿ ವಿಶ್ವಸ್ತಂ ಜಘ್ನುರ್ಯೌಧಿಷ್ಠಿರಂ ಬಲಮ್ ॥೨೮॥

ಅದೇ ದಿನ (೧೮ನೇ ದಿನ) ರಾತ್ರಿಯಲ್ಲಿ ಕೃತವರ್ಮ, ಅಶ್ವತ್ಥಾಮರು ಮತ್ತು ಕೃಪಾಚಾರ್ಯರು ಸೇರಿ ರಾತ್ರಿಯ ವೇಳೆಯಲ್ಲಿ ಸುಖವಾಗಿ ನಿದ್ದೆಯನ್ನು ಮಾಡುತ್ತಿದ್ದ ಧರ್ಮರಾಜನ ಸೈನ್ಯವನ್ನು ಸಂಹರಿಸಿದರು.

ಏತತ್ ಶೌನಕ ಸತ್ರೇ ತೇ ಭಾರತಾಖ್ಯಾನವಿಸ್ತರಮ್ ।
ಆಖ್ಯಾಸ್ಯೇ ಪೌಷ್ಯಪೌಲೋಮಮಾಸ್ತೀಕಂ ಚ ತತಃ ಪರಮ್ ॥೨೯॥

ಎಲೈ ಶೌನಕರೇ ನಿಮ್ಮ ಸತ್ರದಲ್ಲಿ ನಾನು ಈ ಭಾರತಕಥೆಯನ್ನು ವಿಸ್ತಾರವಾಗಿ ಹೇಳುವೆನು. ಅದು ಪೌಷ್ಯ, ಪೌಲೋಮ, ಆಸ್ತೀಕ ಮೊದಲಾದ ಪರ್ವಗಳಿಂದ ಪ್ರಾರಂಭವಾಗುತ್ತದೆ.

ವಿಚಿತ್ರಾರ್ಥಪದಾಖ್ಯಾನಮನೇಕಸಮಯಾನ್ವಿತಮ್ ।
ಅಭಿಪನ್ನಂ ನರೈಃ ಪ್ರಾಜ್ಞೈರ್ವೈರಾಗ್ಯಮಿವ ಮೋಕ್ಷಿಭಿಃ ॥೫೦॥

ಈ ಭಾರತವು ವಿಚಿತ್ರಾರ್ಥಗಳನ್ನು ಹೊಂದಿದ ಪದಗಳಿಂದಲೂ ಮತ್ತು ಆಖ್ಯಾನಗಳಿಂದಲೂ ಕೂಡಿವೆ. ಮತ್ತು ಅನೇಕ ಸಿದ್ಧಾಂತಗಳ ತತ್ವಗಳು ಇಲ್ಲಿವೆ. ಮುಮುಕ್ಷುಗಳಾದವರು ವೈರಾಗ್ಯವನ್ನು ಬಯಸುವಂತೆ ಪ್ರಾಜ್ಞರಾದ ಮನುಷ್ಯರು ಮಹಾಭಾರತವನ್ನು ಉಪಸತ್ತಿ ಮಾಡುತ್ತಾರೆ.

ಆತ್ಮೇವ ವೇದಿತವ್ಯೇಷು ಪ್ರಿಯೇಷ್ವಿವ ಹಿ ಜೀವಿತಮ್ ।
ಇತಿಹಾಸಃ ಪ್ರಧಾನಾರ್ಥಃ ಶ್ರೇಷ್ಠಃ ಸರ್ವಾಗಮೇಷ್ವಪಿ ॥೫೧॥

ತಿಳಿಯಬೇಕಾದ ವಸ್ತುಗಳಲ್ಲಿ ಹೇಗೆ ಪರಮಾತ್ಮನೇ ಶ್ರೇಷ್ಠನೋ, ಪ್ರಿಯವಾದ ವಸ್ತುಗಳಲ್ಲಿ ಹೇಗೆ ತನ್ನ ಜೀವನವೇ ಶ್ರೇಷ್ಠವೋ ಹಾಗೆ ಸರ್ವಾಗಮಗಳಲ್ಲಿ ಪ್ರಧಾನವಾದ ಅರ್ಥವನ್ನು ಹೇಳುವ ಈ ಭಾರತಇತಿಹಾಸವೇ ಶ್ರೇಷ್ಠವಾದುದು.

ಇತಿಹಾಸೋತ್ತಮೇ ಹ್ಯಸ್ಮಿನ್ನರ್ಪಿತಾ ಬುದ್ಧಿರುತ್ತಮಾ ।
ಸ್ವರವ್ಯಂಜನಯೋಃ ಕೃತ್ಸ್ನಾ ಲೋಕಾನ್ ವೇದಾಶ್ರಯೇವ ವಾಕ್॥

ಈ ಶ್ರೇಷ್ಠವಾದ ಇತಿಹಾಸದಲ್ಲಿ ಸ್ವರವ್ಯಂಜನಗಳು ಪರಿಪೂರ್ಣವಾಗಿ ಉಚ್ಚರಿಸಲ್ಪಟ್ಟಿವೆ. ಇದರಲ್ಲಿ ಯಾರು ತಮ್ಮ ಶ್ರೇಷ್ಠವಾದ ಬುದ್ಧಿಯನ್ನು ಅರ್ಪಿಸುತ್ತಾರೋ, ಅಂತಹವರನ್ನು ವೇದವಾಣಿಯಂತೆ ಈ ಭಾರತವಾಣಿಯು ಪವಿತ್ರೀಕರಿಸುತ್ತದೆ.

ಅಸ್ಯ ಪ್ರಜ್ಞಾಭಿಪನ್ನಸ್ಯ ವಿಚಿತ್ರಪದಪರ್ವಣಃ ।
ಭಾರತಸ್ಯೇತಿಹಾಸಸ್ಯ ಶ್ರೂಯತಾಂ ಪರ್ವಸಂಗ್ರಹಃ ॥೫೩॥

ವೇದವ್ಯಾಸದೇವರ ಪ್ರಜ್ಞೆಯಿಂದ ರಚಿತವಾದ ವಿಚಿತ್ರವಾದ ಪದಗಳಿಂದ ಮತ್ತು ಪರ್ವಗಳಿಂದ ಕೂಡಿದ ಈ ಭಾರತಇತಿಹಾಸದ ಪರ್ವಸಂಗ್ರಹವನ್ನು ಕೇಳಿ.

ಪರ್ವಾನುಕ್ರಮಣಂ ಪೂರ್ವಂ ದ್ವಿತೀಯಂ ಪರ್ವಸಂಗ್ರಹಃ ।
ಪೌಷ್ಯಂ ಪೌಲೋಮಮಾಸ್ತೀಕಮಾದಿವಂಶಾವತಾರಣಮ್ ॥೫೪॥

ಮೊದಲನೆಯದು ಪರ್ವಾನುಕ್ರಮಣ ಪರ್ವ, ಎರಡನೆಯದು ಪರ್ವಸಂಗ್ರಹಪರ್ವ. ಅನಂತರ ಪೌಷ್ಯ, ಪೌಲೋಮ ಮತ್ತು ಆಸ್ತೀಕಪರ್ವಗಳು ಇವೆ.

ತತಃ ಸಂಭವಪರ್ವೋಕ್ತಮದ್ಭುತಂ ದೇವನಿರ್ಮಿತಮ್ ।
ದಾಹೋ ಜತುಗೃಹಸ್ಯಾತ್ರ ಹೈಡಿಂಬಂ ಪರ್ವ ಚೋಚ್ಯತೇ ॥೩೫॥

ಅನಂತರ ಆದಿವಂಶ ಮತ್ತು ಅಂಶಾವತರಣಗಳಿಂದ ಕೂಡಿದ ವೇದವ್ಯಾಸದೇವರಿಂದ ನಿರ್ಮಿತವಾದ ಅದ್ಭುತವಾದ ಸಂಭವಪರ್ವವಿದೆ. ಅನಂತರ ಜತುಗೃಹದಾಹಪರ್ವ, ಮತ್ತು ಅನಂತರ ಹೈಡಿಂಬಪರ್ವವು ಬರುತ್ತದೆ.

ಸಂಭವಪರ್ವದಲ್ಲಿ ವಂಶ ಮತ್ತು ಅಂಶಾವತರಣಗಳು ನಿರೂಪಿಸಿಲ್ಪಟ್ಟಿವೆ. ಆದ್ದರಿಂದ ಅಂಶವಾತರಣವು ಸಂಭವಪರ್ವದ ಒಂದು ಭಾಗ ಹೊರತಾಗಿ ಅಂಶಾವತರಣವೇ ಒಂದು ಪರ್ವವಲ್ಲ ಎಂದು ಇಲ್ಲಿ ವಾದಿರಾಜರು ಸ್ಪಷ್ಟಪಡಿಸುತ್ತಾರೆ. 'ತದಾ ನಿಃಕ್ಷತ್ರಿಯೇ ಲೋಕೇ.... ಗರ್ಭಾರ್ಥಿನ್ಯೋಽಭಿಚಕ್ರಮುಃ' ಮುಂತಾದ ಶ್ಲೋಕದಲ್ಲಿ ಹೇಳಿದ ಪರಶುರಾಮನಿಂದ ಕ್ಷತ್ರಿಯ ಸಂಹಾರವಾಗುತ್ತಿರಲು ಕ್ಷತ್ರಿಯಸ್ತ್ರೀಯರಲ್ಲಿ ಬ್ರಾಹ್ಮಣಪುರುಷರಿಂದ ಹುಟ್ಟಿದ ಕ್ಷತ್ರಿಯವಂಶವು ಒಂದು ಆದಿವಂಶ. 'ತತೋ ಬ್ರಹ್ಮರ್ಷಿ ವಂಶೇಷು .... ಯಥಾಕಾಮಂ ದಿವೌಕಸಃ' ಮುಂತಾದ ಶ್ಲೋಕಗಳಲ್ಲಿ ಹೇಳಿದ ದೇವತೆಗಳ ಅಂಶಾತವರಣವು. ಒಂದು ಅಂಶಾವತರಣ. 'ಹಂತ ತೇ ಕಥಯಿಷ್ಯಾಮಿ ಅತ್ರವಂಶಃ ಸಮಾಪ್ಯತೇ' ಎನ್ನುವವರೆಗೆ ಹೇಳಿದ ದೇವತೆಗಳ ಮತ್ತು ದಾನವರ ವಂಶವು ಇನ್ನೊಂದು ಆದಿವಂಶ. 'ಶ್ರೋತುಮಿಚ್ಛಾಮಿ ತತ್ತ್ವೇನ .... ಆನುಪೂರ್ವಶಃ' ಎಂಬ ಶ್ಲೋಕದಿಂದ ಆರಂಭಿಸಿ 'ಇತಿ ದೇವಾಸುರಾಣಾಂ ತೇ .... ಅಂಶಾವತರಣಂ ರಾಜನ್' ಎಂಬ ಶ್ಲೋಕದವರೆಗೆ ಹೇಳಿದ ಅದೇ ದೇವತೆ ಮತ್ತು ದಾನವರ ಭೂಮಿಯಲ್ಲಿ ಒಂದೊಂದು ಅಂಶದಿಂದ ಅವತರಣವು ಎರಡನೆಯ ಅಂಶಾವತರಣ. ಹೀಗೆ ಇಲ್ಲಿ ಎರಡು ಆದಿವಂಶಗಳು, ಮತ್ತು ಎರಡು ಅಂಶಾವತರಣಗಳು ಹೇಳಲ್ಪಟ್ಟಿವೆಯೆಂದು ವಾದಿರಾಜರು ಸ್ಪಷ್ಟಪಡಿಸುತ್ತಾರೆ.

ತತೋ ಬಕವಧಃ ಪರ್ವ ಪರ್ವ ಚೈತ್ರರಥಂ ತಥಾ ।
ತತಃ ಸ್ವಯಂವರೋ ದೇವ್ಯಾಃ ಪಾಂಚಾಲ್ಯಾಃ ಪರ್ವ ಚೋಚ್ಯತೇ ॥೩೬॥

ಅನಂತರ ಬಕವಧಪರ್ವ, ಅನಂತರ ಚೈತ್ರರಥಪರ್ವ, ಅನಂತರ ದ್ರೌಪದಿದೇವಿಯ ಸ್ವಯಂವರವನ್ನು ನಿರೂಪಿಸುವ ಸ್ವಯಂವರ ಪರ್ವವು ಹೇಳಲ್ಪಡುತ್ತದೆ.

ಕ್ಷತ್ರಧರ್ಮೇಣ ನಿರ್ಜಿತ್ಯ ತತೋ ವೈವಾಹಿಕಂ ಸ್ಮೃತಮ್ ।
ವಿದುರಾಗಮನಂ ಪರ್ವ ರಾಜ್ಯಲಂಭಸ್ತಥೈವ ಚ ॥೩೭॥

ಕ್ಷತ್ರಿಯಧರ್ಮದಂತೆ ಎಲ್ಲ ಶತ್ರುಗಳನ್ನೂ ಜಯಿಸಿ, ನಡೆದ ದ್ರೌಪದಿಯ ವಿವಾಹವು ವೈವಾಹಿಕಪರ್ವದಲ್ಲಿ ಹೇಳಲ್ಪಡುತ್ತದೆ. ಅನಂತರ ವಿದುರಾಗಮನ ಪರ್ವ, ಅನಂತರ ರಾಜ್ಯಲಾಭ ಪರ್ವವಿದೆ.

ಅರ್ಜುನಸ್ಯ ವನೇ ವಾಸಃ ಸುಭದ್ರಾಹರಣಂ ತಥಾ ।
ಸುಭದ್ರಾಹರಣಾದೂರ್ಧ್ವಂ ಜ್ಞೇಯಂ ಹರಣಹಾರಿತಮ್ ॥೩೮॥

ಅನಂತರ ಅರ್ಜುನ ವನವಾಸಪರ್ವ, ಅನಂತರ ಸುಭದ್ರಾಹರಣ ಪರ್ವ, ಅನಂತರ ಸುಭದ್ರೆಗೆ ಕೃಷ್ಣನ ಆಜ್ಞೆಯಂತೆ ಉಡುಗೊರೆಗಳನ್ನು ತೆಗೆದುಕೊಂಡು ಹೋಗಿ ಕೊಡುವ ಹರಣಹಾರಿ ಸುಭದ್ರಾಹರಣಕ್ಕೆ ಶ್ರೀಕೃಷ್ಣನ ಸಹಕಾರವು ಹರಣಹಾರಿತವೆನಿಸಿದೆ.

ತತಃ ಖಾಂಡವದಾಹಾಖ್ಯಂ ತತ್ರೈವ ಮಯದರ್ಶನಮ್ ।
ಸಭಾಪರ್ವ ತತಃ ಪ್ರೋಕ್ತಂ ಮಂತ್ರಪರ್ವ ತತಃ ಪರಮ್ ॥೩೯॥

ಅನಂತರ ಖಾಂಡವದಾಹಪರ್ವ ಮತ್ತು ಖಾಂಡವವನದಲ್ಲಿಯೇ ಮಯನದರ್ಶನವನ್ನು ನಿರೂಪಣೆ ಮಾಡುವ ಮಯದರ್ಶನ ಪರ್ವವಿದೆ. ಅನಂತರ ಸಭಾಪರ್ವವು ಪ್ರಾರಂಭವಾಗುತ್ತದೆ. ಅದರಲ್ಲಿ ಮೊದಲ ಪರ್ವವು ಮಂತ್ರಪರ್ವ. (ರಾಜಸೂಯಾದಿ ಆಲೋಚನ ಪರ್ವ)

ಜರಾಸಂಧವಧಃ ಪರ್ವ ಪರ್ವ ದಿಗ್ವಿಜಯಸ್ತಥಾ ।
ಪರ್ವ ದಿಗ್ವಿಜಯಾದೂರ್ಧ್ವಂ ರಾಜಸೂಯಿಕಮುಚ್ಯತೇ ॥೪೦॥

ಅನಂತರ ಜರಾಸಂಧವಧಃ ಪರ್ವ, ಅನಂತರ ದಿಗ್ವಿಜಯಪರ್ವವೂ ಇದೆ. ದಿಗ್ವಿಜಯಪರ್ವದ ಅನಂತರದಲ್ಲಿ ರಾಜಸೂಯಿಕಪರ್ವವು ಹೇಳಲ್ಪಡುತ್ತದೆ.

ತತೋಽರ್ಘ್ಯಾಹರಣಂ ಪರ್ವ ಶಿಶುಪಾಲವಧಸ್ತತಃ ।
ದ್ಯೂತಪರ್ವ ತತಃ ಪ್ರೋಕ್ತಮನುದ್ಯೂತಮತಃ ಪರಮ್ ॥೪೧॥

ಅನಂತರ ಅಗ್ರಪೂಜೆಯಲ್ಲಿ ಕೃಷ್ಣನಿಗೆ ಅರ್ಘ್ಯಾಹರಣ ನಡೆಸುವ ಪರ್ವ, ಅನಂತರ ಶಿಶುಪಾಲವಧಪರ್ವ, ಅನಂತರ ದ್ಯೂತಪರ್ವ, ಮತ್ತು ಅದರ ಅನಂತರ ಅನುದ್ಯೂತಪರ್ವವಿದೆ.

ತತ ಆರಣ್ಯಕಂ ಪರ್ವ ಕಿಮ್ಮೀರವಧ ಏವ ಚ ।
ಈಶ್ವರಾರ್ಜುನಯೋರ್ಯುದ್ಧಂ ಪರ್ವ ಕೈರಾತಮುಚ್ಯತೇ ॥೪೨॥

ಅನಂತರ ವನಪರ್ವವು ಪ್ರಾರಂಭವಾಗುತ್ತದೆ. ಅದರಲ್ಲಿ ಮೊದಲನೆಯದು ಆರಣ್ಯಕಪರ್ವ. ಅನಂತರ ಕಿಮ್ಮೀರವಧಪರ್ವ, ಅನಂತರ ರುದ್ರದೇವರಿಗೂ ಮತ್ತು ಅರ್ಜುನನಿಗೂ ನಡೆಯುವ ಯುದ್ಧವನ್ನು ವರ್ಣಿಸುವ ಕೈರಾತಪರ್ವವಿದೆ.

ಇಂದ್ರಲೋಕಾಭಿಗಮನಂ ಪರ್ವ ಜ್ಞೇಯಮತಃ ಪರಮ್ ।
ತೀರ್ಥಯಾತ್ರಾ ತತಃ ಪರ್ವ ಕುರುರಾಜಸ್ಯ ಧೀಮತಃ ॥೪೩॥

ಅನಂತರ ಇಂದ್ರಲೋಕಾಭಿಗಮನ ಎಂಬ ಪರ್ವವಿದೆ. ಅನಂತರ ಮೇಧಾವಿಯಾದ ಕುರುರಾಜನಾದ ಅರ್ಜುನನು ಮಾಡಿದ ತೀರ್ಥಯಾತ್ರೆಗಳನ್ನು ಹೇಳುವ ತೀರ್ಥಯಾತ್ರಾಪರ್ವವಿದೆ.

ಜಟಾಸುರವಧಃ ಪರ್ವ ಯಕ್ಷಯುದ್ಧಮತಃ ಪರಮ್ ।
ತಥೈವಾಜಗರಂ ಪರ್ವ ವಿಜ್ಞೇಯಂ ತದನಂತರಮ್ ॥೪೪॥

ಅನಂತರ ಜಟಾಸುರವಧ ಪರ್ವ, ಅನಂತರ ಯಕ್ಷನ ಜೊತೆ ಧರ್ಮನ ವಾಗ್ ಯುದ್ಧಪರ್ವ, ಅನಂತರಆಜಗರ ಪರ್ವವೆಂದು ತಿಳಿಯಬೇಕು.

ಮಾರ್ಕಂಡೇಯಸಮಾಖ್ಯಾ ಚ ಪರ್ವೋಕ್ತಂ ತದನಂತರಮ್ ।
ಸಂವಾದಶ್ಚ ತತಃ ಪರ್ವ ದ್ರೌಪದೀಸತ್ಯಭಾಮಯೋಃ ॥೪೫॥

ಅನಂತರ ಮಾರ್ಕಂಡೇಯಸಮಾಖ್ಯಾ (ಸ್ಯಾ) ಎಂಬ ಪರ್ವವು, ಅದರ ಅನಂತರ ದ್ರೌಪದಿ ಮತ್ತು ಸತ್ಯಭಾಮೆಯರ ಸಂವಾದವಿರುವ ದ್ರೌಪದೀ ಸತ್ಯಭಾಮಾ ಸಂವಾದಪರ್ವವೂ ಇದೆ.

ಘೋಷಯಾತ್ರಾ ತತಃ ಪರ್ವ ಪರ್ವ ಪ್ರಾಯೋಪವೇಶನಮ್ ।
ವ್ರೀಹಿದ್ರೌಣಕಮಾಖ್ಯಾನಂ ತತೋऽನಂತರಮುಚ್ಯತೇ ॥೪೬॥

ಅನಂತರ ಘೋಷಯಾತ್ರಾಪರ್ವ, ಅದರ ಅನಂತರ ದುರ್ಯೋಧನನ ಪ್ರಾಯೋಪವೇಶ ಪರ್ವ, ಮತ್ತು ಅದರ ಅನಂತರ ಮುದ್ಗಲ ಋಷಿಗಳು ದುರ್ವಾಸರಿಗೆ ಆತಿಥ್ಯ ಮಾಡುವ ವ್ರೀಹಿದ್ರೌಣಕಪರ್ವವೂ ಇದೆ.

ದ್ರೌಪದೀಹರಣಂ ಪರ್ವ ಸೈಂಧವೇನ ವನಾತ್ ತತಃ ।
ಕುಂಡಲಾಹರಣಾತ್ ತತ್ರ ತತಃ ಪರಮಿಹೋಚ್ಯತೇ ॥೪೭॥

ಅನಂತರ ಆ ಕಾಡಿನಲ್ಲಿ ಸೈಂಧವನು ದ್ರೌಪದಿಯನ್ನು ಅಪಹರಿಸಲು ಮಾಡಿದ ಪ್ರಯತ್ನದ ವಿಷಯವನ್ನು ಹೇಳುವ ದ್ರೌಪದೀಹರಣಪರ್ವವು, ಅನಂತರ ಇಂದ್ರನಿಂದ ಕರ್ಣನ ಕುಂಡಲಾಹರಣಪರ್ವವೂ ಇದೆ.

ಆರಣೇಯಂ ತತಃ ಪರ್ವ ವೈರಾಟಂ ತದನಂತರಮ್ ।
ಕೀಚಕಾನಾಂ ವಧಂ ಪರ್ವ ಪರ್ವ ಗೋಗ್ರಹಣಂ ತಥಾ ॥೪೮॥

ಅನಂತರ ಯಮನಿಂದ ಬ್ರಾಹ್ಮಣನ ಅರಣಿ ಅಪಹರಿಸುವ ಆರಣೇಯಪರ್ವವಿದೆ. ಅನಂತರ ವಿರಾಟಪರ್ವವು ಪ್ರಾರಂಭವಾಗುತ್ತದೆ. ಅದರಲ್ಲಿ ಕೀಚಕವಧಪರ್ವ, ಮತ್ತು ಅನಂತರ ಗೋಗ್ರಹಣಪರ್ವವೂ ಇದೆ.

ಅಭಿಮನ್ಯೋಶ್ಚ ವೈರಾಟ್ಯಾಃ ಪರ್ವ ವೈವಾಹಿಕಂ ಸ್ಮೃತಮ್ ।
ಉದ್ಯೋಗಪರ್ವ ವಿಜ್ಞೇಯಮತ ಊರ್ಧ್ವಂ ಮಹಾದ್ಭುತಮ್ ॥೪೯॥

ಅಭಿಮನ್ಯು ಮತ್ತು ಉತ್ತರೆಯ ವಿವಾಹವನ್ನು ಹೇಳುವ ವೈವಾಹಿಕಪರ್ವವು ಅನಂತರ ಇದೆ. ಅದರ ನಂತರ ಮಹಾದ್ಭುತವಾದ ಉದ್ಯೋಗಪರ್ವದ ಪ್ರಾರಂಭ ಎಂದು ತಿಳಿಯಬೇಕು.

ತತಃ ಸಂಜಯಯಾನಾಖ್ಯಂ ಪರ್ವ ಜ್ಞೇಯಮನಂತರಮ್ ।
ಪ್ರಜಾಗರಂ ತತಃ ಪರ್ವ ಧೃತರಾಷ್ಟ್ರಸ್ಯ ಚಿಂತಯಾ ॥೫೦॥

ಅದರಲ್ಲಿ ಸಂಜಯಯಾನ ಪರ್ವ, ಅನಂತರ ಧೃತರಾಷ್ಟ್ರನು ಚಿಂತೆಯಿಂದ ನಿದ್ರೆಯನ್ನು ಕಳೆದುಕೊಂಡು ಪರಿತಪಿಸುವ ಪ್ರಜಾಗರಪರ್ವವೂ ಇದೆ.

ಪರ್ವ ಸಾನತ್ಸುಜಾತಂ ಚ ಗುಹ್ಯಮಧ್ಯಾತ್ಮದರ್ಶನಮ್ ।
ಯಾನಸಂಧಿಸ್ತತಃ ಪರ್ವ ಭಗವದ್ ದ್ಯಾನಮೇವ ಚ ॥೫೧॥

ರಹಸ್ಯವಾದ ಅಧ್ಯಾತ್ಮವಿಷಯಗಳನ್ನು ಒಳಗೊಂಡ ಸಾನತ್ಸುಜಾತಪರ್ವ, ಅನಂತರ ದ್ರುಪದ ಪುರೋಹಿತರನ್ನು ಸಂಧಿಸುವ ಯಾನಸಂಧಿಪರ್ವ, ಅನಂತರ ಭಗವದ್ ಧ್ಯಾನಪರ್ವ.

ಜ್ಞೇಯಂ ವಿವಾದಪರ್ವಾತ್ರ ಕರ್ಣಸ್ಯಾಪಿ ಮಹಾತ್ಮನಃ ।
ಮಂತ್ರಸ್ಯ ನಿಶ್ಚಯಂ ಕೃತ್ವಾ ಕಾರ್ಯಸ್ಯ ಸಮಚಿಂತನಮ್ ॥೫೨॥

ಅನಂತರ ಮಹಾತ್ಮನಾದ ಕರ್ಣನು ಮಾಡುವ ವಿವಾದವನ್ನು ಹೇಳುವ ವಿವಾದಪರ್ವ, ಮತ್ತು ಮಂತ್ರಾಲೋಚನೆಯನ್ನು ಮಾಡಿ ಮುಂದಿನ ಕಾರ್ಯವನ್ನು ನಿಶ್ಚಯಿಸುವ ಮಂತ್ರನಿಶ್ಚಯಪರ್ವವೂ ಇದೆ.

ಕೀರ್ತ್ಯತೇ ಚಾಪತ್ರೋಪಾಖ್ಯಾನಂ ಸೇನಾಪತ್ಯೇಽಭಿಷೇಚನಮ್ ।
ಶ್ವೇತಸ್ಯ ವಾಸುದೇವಸ್ಯ ಚಿತ್ರಂ ಬಹುಕಥಾಶ್ರಯಮ್ ॥೫೩॥

ಸೇನಾಪತಿಯಿಲ್ಲದ ಬ್ರಾಹ್ಮಣ, ವೈಶ್ಯಾದಿ ಸೈನ್ಯಕ್ಕೆ ಅಪಜಯವುಂಟಾಯಿತೆಂದು ಹೇಳುವ ಅಪತ್ರೋಪಾಖ್ಯಾನಪರ್ವ, ಅನಂತರ ಬಹುಕಥೆಗಳನ್ನು ಒಳಗೊಂಡ ಶ್ವೇತರಾಜನ ಮತ್ತು ವಾಸುದೇವನ ಮಹಿಮೆಯನ್ನು ಹೇಳುವ ಪರ್ವ. (ಅಥವಾ) ಬಲರಾಮ ಮತ್ತು ಕೃಷ್ಣರ ಮಹಿಮೆಯನ್ನು ಹೇಳುವ ಪರ್ವವೂ ಇದೆ.

ಭೀಷ್ಮಾಭಿಷೇಚನಂ ಪರ್ವ ತತಶ್ಚಾದ್ಭುತಮಿಷ್ಯತೇ ।
ನಿರ್ಯಾಣಂ ಚ ತತಃ ಪರ್ವ ಕುರುಪಾಂಡವಸೇನಯೋಃ ॥೫೪॥

ಅನಂತರ ಅದ್ಭುತವಾದ ಭೀಷ್ಮಾಭಿಷೇಚನಪರ್ವವಿದೆ. ಅನಂತರ ಯುದ್ಧಕ್ಕಾಗಿ ಕುರುಪಾಂಡವಸೈನ್ಯಗಳು ಹೊರಟ ವಿಷಯವನ್ನು ಹೇಳುವ ನಿರ್ಯಾಣಪರ್ವ.

ರಥಾತಿರಥಸಂಖ್ಯಾ ಚ ಪರ್ವೋಕ್ತಂ ತದನಂತರಮ್ ।
ಉಲೂಕದೂತಾಗಮನಂ ಪರ್ವಾಮರ್ಷವಿವರ್ಧನಮ್ ॥೫೫॥

ಅನಂತರ ರಥ ಮತ್ತು ಅತಿರಥರ ಸಂಖ್ಯೆಯನ್ನು ಹೇಳುವ ರಥಾತಿರಥಸಂಖ್ಯಾಪರ್ವವಿದೆ. ಅನಂತರ ಕ್ರೋಧವನ್ನು ಹೆಚ್ಚಿಸುವ ಉಲೂಕದೂತಾಗಮನಪರ್ವ.

ಅಂಬೋಪಾಖ್ಯಾನಮಥ ಚ ಪರ್ವ ಜ್ಞೇಯಮತಃ ಪರಮ್ ।
ಜಂಬೂಷಂಡವಿನಿರ್ಮಾಣಂ ಪರ್ವೋಕ್ತಂ ತದನಂತರಮ್ ॥೫೬॥

ಅನಂತರ ಅಂಬೋಪಾಖ್ಯಾನಪರ್ವವು ಇದೆಯೆಂದು ತಿಳಿಯಬೇಕು. ಅದರ ನಂತರ ಜಂಬೂದ್ವೀಪ ನಿರ್ಮಾಣ ದರ್ಪಣನೆಯ ಪರ್ವವಿದೆ.

ಭೂಮಿಪರ್ವ ತತೋ ಜ್ಞೇಯಂ ದ್ವೀಪವಿಸ್ತಾರಕೀರ್ತನಮ್ ।
ದಿವ್ಯಂ ಚಕ್ಷುರ್ದದೌ ಯತ್ರ ಸಂಜಯಾಯ ಮಹಾನೃಷಿಃ ॥೫೭॥

ದ್ವೀಪಗಳ ವಿಸ್ತಾರವನ್ನು ಹೇಳುವ ಭೂಮಿಪರ್ವವು ಅನಂತರ ಇದೆಯೆಂದು ತಿಳಿಯಬೇಕು. ಅನಂತರ ಮಹರ್ಷಿಗಳಾದ ವೇದವ್ಯಾಸರು ಸಂಜಯನಿಗೆ ದಿವ್ಯ ಚಕ್ಷುಸ್ಸನ್ನು ಕೊಟ್ಟ ಚಕ್ಷುರ್ದಾನಪರ್ವವಿದೆ.

ಪರ್ವೋಕ್ತಂ ಭಗವದ್ಗೀತಾ ಪರ್ವ ಭೀಷ್ಮವಧಸ್ತತಃ ।
ದ್ರೋಣಾಭಿಷೇಕಃ ಪರ್ವೋಕ್ತಂ ಸಂಶಪ್ತಕವಧಸ್ತತಃ ॥೫೮॥

ಅನಂತರ ಭಗವದ್ಗೀತಾಪರ್ವ, ಭೀಷ್ಮವಧಪರ್ವ, ದ್ರೋಣಾಭಿಷೇಕ ಪರ್ವ ಮತ್ತು ಸಂಶಪ್ತಕವಧಪರ್ವವಿದೆ.

ಅಭಿಮನ್ಯುವಧಃ ಪರ್ವ ಪ್ರತಿಜ್ಞಾ ಪರ್ವ ಚೋಚ್ಯತೇ ।
ಜಯದ್ರಥವಧಃ ಪರ್ವ ಘಟೋತ್ಕಚವಧಸ್ತಥಾ ॥೫೯॥

ಅನಂತರ ಅಭಿಮನ್ಯುವಧಪರ್ವ, ಮತ್ತು ಪ್ರತಿಜ್ಞಾಪರ್ವಗಳು ಹೇಳಲ್ಪಡುತ್ತವೆ. ಅನಂತರ ಜಯದ್ರಥವಧಪರ್ವ, ಮತ್ತು ಘಟೋತ್ಕಚವಧಪರ್ವಗಳೂ ಇವೆ.

ತತೋ ದ್ರೋಣವಧಃ ಪರ್ವ ವಿಜ್ಞೇಯಂ ಲೋಮಹರ್ಷಣಮ್।
ಮೋಕ್ಷೋ ನಾರಾಯಣಾಸ್ತ್ರಸ್ಯ ಪರ್ವಾನಂತರಮುಚ್ಯತೇ ॥೬೦॥

ಅನಂತರ ರೋಮಾಂಚಕಾರಿಯಾದ ದ್ರೋಣವಧಪರ್ವವು ಇದೆಯೆಂದು ತಿಳಿಯಬೇಕು. ಅನಂತರ ನಾರಾಯಣಾಸ್ತ್ರಮೋಚನಪರ್ವವು ಇದೆ.

ಕರ್ಣಪರ್ವ ತತೋ ಜ್ಞೇಯಂ ಶಲ್ಯಪರ್ವ ತತಃ ಪರಮ್ ।
ಹ್ರದಪ್ರವೇಶನಂ ಪರ್ವ ಗದಾಯುದ್ಧಮತಃ ಪರಮ್ ॥೬೧॥

ಅನಂತರ ಕರ್ಣಪರ್ವ, ಅನಂತರ ಶಲ್ಯಪರ್ವ, ಅನಂತರ ಹ್ರದಪ್ರವೇಶನಪರ್ವ, ಮತ್ತು ಅದರ ಅನಂತರ ಗದಾಯುದ್ಧಪರ್ವವಿದೆ.

ಸಾರಸ್ವತಂ ತತಃ ಪರ್ವ ತೀರ್ಥವಂಶಗುಣಾನ್ವಿತಮ್ ।
ಅತ ಊರ್ಧ್ವಂ ತು ಬೀಭತ್ಸಂ ಪರ್ವ ಸೌಪ್ತಿಕಮುಚ್ಯತೇ ॥೬೨॥

ಪ್ರತ್ಯಕ್‌ಸರಸ್ವತೀ ನದಿಗೆ ಸಂಬಂಧಿಸಿದ ತೀರ್ಥಗಳನ್ನು ಮತ್ತು ವಂಶಗಳನ್ನು ಹೇಳುವ ಸಾರಸ್ವತಪರ್ವವಿದೆ. ಅನಂತರ ಅತಿಭಯಂಕರವಾದ ಸೌಪ್ತಿಕಪರ್ವವಿದೆ.

ಐಷೀಕಂ ಪರ್ವ ನಿರ್ದಿಷ್ಟಮತ ಊರ್ಧ್ವಂ ಸುದಾರುಣಮ್ ।
ಜಲಪ್ರದಾನಿಕಂ ಪರ್ವ ಸ್ತ್ರೀಪರ್ವ ಚ ತತಃ ಪರಮ್ ॥೬೩॥

ಅನಂತರ ಅತ್ಯಂತ ದಾರುಣವಾದ ಐಷೀಕಪರ್ವ, ಅನಂತರ ಜಲಪ್ರದಾನಿಕಪರ್ವ ಮತ್ತು ಸ್ತ್ರೀಪರ್ವಗಳೂ ಇವೆ.

ಶ್ರಾದ್ಧಪರ್ವ ತತೋ ಜ್ಞೇಯಂ ಕುರೂಣಾಮೌರ್ಧ್ವದೈಹಿಕಮ್ ।
ಆಭಿಷೇಚನಿಕಂ ಪರ್ವ ಕುರುರಾಜಸ್ಯ ಧೀಮತಃ ॥೬೪॥

ಅನಂತರ ಕುರುಗಳಿಗೆ ಔರ್ಧ್ವದೈಹಿಕಕ್ರಿಯೆಗಳನ್ನು ಮಾಡಿದ ರೀತಿಯನ್ನು ಹೇಳುವ ಶ್ರಾದ್ಧಪರ್ವ, ಅನಂತರ ಕುರುರಾಜನನಾದ ಧರ್ಮರಾಜನ ಅಭಿಷೇಕವನ್ನು ಹೇಳುವ ಆಭಿಷೇಚನಿಕಪರ್ವವೂ ಇದೆ.

ಚಾರ್ವಾಕನಿಗ್ರಹಃ ಪರ್ವ ರಕ್ಷಸೋ ಬ್ರಹ್ಮರೂಪಿಣಃ ।
ಪ್ರವಿಭಾಗೋ ಗೃಹಾಣಾಂ ಚ ಪರ್ವೋಕ್ತಂ ತದನಂತರಮ್ ॥೬೫॥

ವಿಪ್ರದೇಹವನ್ನು ಧರಿಸಿದ ಅಸುರನಾದ ಚಾರ್ವಾಕನ ನಿಗ್ರಹವನ್ನು ಹೇಳುವ ಚಾರ್ವಾಕನಿಗ್ರಹಪರ್ವ. ಅನಂತರ ಗೃಹಗಳನ್ನು ವಿಭಾಗಮಾಡಿಕೊಳ್ಳುವ ಗೃಹವಿಭಾಗಪರ್ವವೂ ಇದೆ.

ಶಾಂತಿಪರ್ವ ತತೋ ಯತ್ರ ರಾಜಧರ್ಮಾನುಕೀರ್ತನಮ್ ।
ಆಪದ್ಧರ್ಮಶ್ಚ ಪರ್ವೋಕ್ತಂ ಮೋಕ್ಷಧರ್ಮಸ್ತತಃ ಪರಮ್ ॥೬೬॥

ಅನಂತರ ಶಾಂತಿಪರ್ವವಿದೆ. ಅದರಲ್ಲಿ ರಾಜಧರ್ಮಗಳನ್ನು ತಿಳಿಸುವ ರಾಜಧರ್ಮಪರ್ವ, ಆಪದ್ಧರ್ಮಪರ್ವ, ಮತ್ತು ಅನಂತರ ಮೋಕ್ಷಧರ್ಮಪರ್ವಗಳಿವೆ.

ತತಃ ಪರ್ವ ಪರಿಜ್ಞೇಯಮಾನುಶಾಸನಿಕಂ ಪರಮ್ ।
ಸ್ವರ್ಗಾರೋಹಣಿಕಂ ಪರ್ವ ತತೋ ಭೀಷ್ಮಸ್ಯ ಧೀಮತಃ ॥೬೭॥

ಭೂಮಿಪರ್ವ ತತೋ ಜ್ಞೇಯಂ ದ್ವೀಪವಿಸ್ತಾರಕೀರ್ತನಮ್ ।
ದಿವ್ಯಂ ಚಕ್ಷುರ್ದದೌ ಯತ್ರ ಸಂಜಯಾಯ ಮಹಾನೃಷಿಃ ॥೫೭॥

ದ್ವೀಪಗಳ ವಿಸ್ತಾರವನ್ನು ಹೇಳುವ ಭೂಮಿಪರ್ವವು ಅನಂತರ ಇದೆಯೆಂದು ತಿಳಿಯಬೇಕು. ಅನಂತರ ಮಹರ್ಷಿಗಳಾದ ವೇದವ್ಯಾಸರು ಸಂಜಯನಿಗೆ ದಿವ್ಯ ಚಕ್ಷುಸ್ಸನ್ನು ಕೊಟ್ಟ ಚಕ್ಷುರ್ದಾನಪರ್ವವಿದೆ.

ಪರ್ವೋಕ್ತಂ ಭಗವದ್ಗೀತಾ ಪರ್ವ ಭೀಷ್ಮವಧಸ್ತತಃ ।
ದ್ರೋಣಾಭಿಷೇಕಃ ಪರ್ವೋಕ್ತಂ ಸಂಶಪ್ತಕವಧಸ್ತತಃ ॥೫೮॥

ಅನಂತರ ಭಗವದ್ಗೀತಾಪರ್ವ, ಭೀಷ್ಮವಧಪರ್ವ, ದ್ರೋಣಾಭಿಷೇಕ ಪರ್ವ ಮತ್ತು ಸಂಶಪ್ತಕವಧಪರ್ವವಿದೆ.

ಅಭಿಮನ್ಯುವಧಃ ಪರ್ವ ಪ್ರತಿಜ್ಞಾ ಪರ್ವ ಚೋಚ್ಯತೇ ।
ಜಯದ್ರಥವಧಃ ಪರ್ವ ಘಟೋತ್ಕಚವಧಸ್ತಥಾ ॥೫೯॥

ಅನಂತರ ಅಭಿಮನ್ಯುವಧಪರ್ವ, ಮತ್ತು ಪ್ರತಿಜ್ಞಾಪರ್ವಗಳು ಹೇಳಲ್ಪಡುತ್ತವೆ. ಅನಂತರ ಜಯದ್ರಥವಧಪರ್ವ, ಮತ್ತು ಘಟೋತ್ಕಚವಧಪರ್ವಗಳೂ ಇವೆ.

ತತೋ ದ್ರೋಣವಧಃ ಪರ್ವ ವಿಜ್ಞೇಯಂ ಲೋಮಹರ್ಷಣಮ್।
ಮೋಕ್ಷೋ ನಾರಾಯಣಾಸ್ತ್ರಸ್ಯ ಪರ್ವಾನಂತರಮುಚ್ಯತೇ ॥೬೦॥

ಅನಂತರ ರೋಮಾಂಚಕಾರಿಯಾದ ದ್ರೋಣವಧಪರ್ವವು ಇದೆಯೆಂದು ತಿಳಿಯಬೇಕು. ಅನಂತರ ನಾರಾಯಣಾಸ್ತ್ರಮೋಚನಪರ್ವವು ಇದೆ.

ಕರ್ಣಪರ್ವ ತತೋ ಜ್ಞೇಯಂ ಶಲ್ಯಪರ್ವ ತತಃ ಪರಮ್ ।
ಹ್ರದಪ್ರವೇಶನಂ ಪರ್ವ ಗದಾಯುದ್ಧಮತಃ ಪರಮ್ ॥೬೧॥

ಅನಂತರ ಕರ್ಣಪರ್ವ, ಅನಂತರ ಶಲ್ಯಪರ್ವ, ಅನಂತರ ಹ್ರದಪ್ರವೇಶನಪರ್ವ, ಮತ್ತು ಅದರ ಅನಂತರ ಗದಾಯುದ್ಧಪರ್ವವಿದೆ.

ಸಾರಸ್ವತಂ ತತಃ ಪರ್ವ ತೀರ್ಥವಂಶಗುಣಾನ್ವಿತಮ್ ।
ಅತ ಊರ್ಧ್ವಂ ತು ಬೀಭತ್ಸಂ ಪರ್ವ ಸೌಪ್ತಿಕಮುಚ್ಯತೇ ॥೬೨॥

ಪ್ರತ್ಯಕ್‌ಸರಸ್ವತೀ ನದಿಗೆ ಸಂಬಂಧಿಸಿದ ತೀರ್ಥಗಳನ್ನು ಮತ್ತು ವಂಶಗಳನ್ನು ಹೇಳುವ ಸಾರಸ್ವತಪರ್ವವಿದೆ. ಅನಂತರ ಅತಿಭಯಂಕರವಾದ ಸೌಪ್ತಿಕಪರ್ವವಿದೆ.

ಐಷೀಕಂ ಪರ್ವ ನಿರ್ದಿಷ್ಟಮತ ಊರ್ಧ್ವಂ ಸುದಾರುಣಮ್ ।
ಜಲಪ್ರದಾನಿಕಂ ಪರ್ವ ಸ್ತ್ರೀಪರ್ವ ಚ ತತಃ ಪರಮ್ ॥೬೩॥

ಅನಂತರ ಅತ್ಯಂತ ದಾರುಣವಾದ ಐಷೀಕಪರ್ವ, ಅನಂತರ ಜಲಪ್ರದಾನಿಕಪರ್ವ ಮತ್ತು ಸ್ತ್ರೀಪರ್ವಗಳೂ ಇವೆ.

ಶ್ರಾದ್ಧಪರ್ವ ತತೋ ಜ್ಞೇಯಂ ಕುರೂಣಾಮೌರ್ಧ್ವದೈಹಿಕಮ್ ।
ಆಭಿಷೇಚನಿಕಂ ಪರ್ವ ಕುರುರಾಜಸ್ಯ ಧೀಮತಃ ॥೬೪॥

ಅನಂತರ ಕುರುಗಳಿಗೆ ಔರ್ಧ್ವದೈಹಿಕಕ್ರಿಯೆಗಳನ್ನು ಮಾಡಿದ ರೀತಿಯನ್ನು ಹೇಳುವ ಶ್ರಾದ್ಧಪರ್ವ, ಅನಂತರ ಕುರುರಾಜನನಾದ ಧರ್ಮರಾಜನ ಅಭಿಷೇಕವನ್ನು ಹೇಳುವ ಆಭಿಷೇಚನಿಕಪರ್ವವೂ ಇದೆ.

ಚಾರ್ವಾಕನಿಗ್ರಹಃ ಪರ್ವ ರಕ್ಷಸೋ ಬ್ರಹ್ಮರೂಪಿಣಃ ।
ಪ್ರವಿಭಾಗೋ ಗೃಹಾಣಾಂ ಚ ಪರ್ವೋಕ್ತಂ ತದನಂತರಮ್ ॥೬೫॥

ವಿಪ್ರದೇಹವನ್ನು ಧರಿಸಿದ ಅಸುರನಾದ ಚಾರ್ವಾಕನ ನಿಗ್ರಹವನ್ನು ಹೇಳುವ ಚಾರ್ವಾಕನಿಗ್ರಹಪರ್ವ. ಅನಂತರ ಗೃಹಗಳನ್ನು ವಿಭಾಗಮಾಡಿಕೊಳ್ಳುವ ಗೃಹವಿಭಾಗಪರ್ವವೂ ಇದೆ.

ಶಾಂತಿಪರ್ವ ತತೋ ಯತ್ರ ರಾಜಧರ್ಮಾನುಕೀರ್ತನಮ್ ।
ಆಪದ್ಧರ್ಮಶ್ಚ ಪರ್ವೋಕ್ತಂ ಮೋಕ್ಷಧರ್ಮಸ್ತತಃ ಪರಮ್ ॥೬೬॥

ಅನಂತರ ಶಾಂತಿಪರ್ವವಿದೆ. ಅದರಲ್ಲಿ ರಾಜಧರ್ಮಗಳನ್ನು ತಿಳಿಸುವ ರಾಜಧರ್ಮಪರ್ವ, ಆಪದ್ಧರ್ಮಪರ್ವ, ಮತ್ತು ಅನಂತರ ಮೋಕ್ಷಧರ್ಮಪರ್ವಗಳಿವೆ.

ತತಃ ಪರ್ವ ಪರಿಜ್ಞೇಯಮಾನುಶಾಸನಿಕಂ ಪರಮ್ ।
ಸ್ವರ್ಗಾರೋಹಣಿಕಂ ಪರ್ವ ತತೋ ಭೀಷ್ಮಸ್ಯ ಧೀಮತಃ ॥೬೭॥

ಅನಂತರ ಆನುಶಾಸನಿಕಪರ್ವವಿದೆಯೆಂದು ತಿಳಿಯಬೇಕು. ಅನಂತರ ಮೇಧಾವಿಯಾದ ಭೀಷ್ಮರು ಸ್ವರ್ಗಕ್ಕೆ ಹೋಗುವ ಸ್ವರ್ಗಾರೋಹಣಿಕ ಪರ್ವವಿದೆ.

ತತೋಽಶ್ವಮೇಧಿಕಂ ಪರ್ವ ಸರ್ವಪಾಪಪ್ರಣಾಶನಮ್ ।
ಅನುಗೀತಾ ತತಃ ಪರ್ವ ಜ್ಞೇಯಮಧ್ಯಾತ್ಮವಾಚಕಮ್ ॥೬೮॥

ಅನಂತರ ಸರ್ವಪಾಪಪರಿಹಾರಕವಾದ ಆಶ್ವಮೇಧಿಕಪರ್ವ, ಅನಂತರ ಅಧ್ಯಾತ್ಮವಿಷಯಗಳನ್ನು ನಿರೂಪಿಸುವ ಅನುಗೀತಾಪರ್ವವು ಇದೆಯೆಂದು ತಿಳಿಯಬೇಕು.

ಪರ್ವ ಚಾಶ್ರಮವಾಸಾಖ್ಯಂ ಪುತ್ರದರ್ಶನಮೇವ ಚ ।
ನಾರದಾಗಮನಂ ಪರ್ವ ತತಃ ಪರಮಿಹೋಚ್ಯತೇ ॥೬೯॥

ಅನಂತರ ಆಶ್ರಮವಾಸ ಪರ್ವ, ಧೃತರಾಷ್ಟ್ರನು ಮಾಡುವ ಪುತ್ರದರ್ಶನಪರ್ವ ಮತ್ತು ಅದರ ಅನಂತರ ನಾರದಾಗಮನಪರ್ವವು ಎಂದು ಹೇಳಲ್ಪಡುತ್ತದೆ.

ಮೌಸಲಂ ಪರ್ವ ಚ ತತೋ ಘೋರಂ ಸಮನುವರ್ಣ್ಯತೇ ।
ಮಹಾಪ್ರಸ್ಥಾನಿಕಂ ಪರ್ವ ಸ್ವರ್ಗಾರೋಹಣಿಕಂ ತತಃ ॥೭೦॥

ಅನಂತರ ಘೋರವಾದ ಮೌಸಲಪರ್ವವು ವರ್ಣಿಸಲ್ಪಡುತ್ತದೆ. ಅನಂತರ ಮಹಾಪ್ರಸ್ಥಾನಿಕಪರ್ವ ಮತ್ತು ಅದರ ಅನಂತರ ಸ್ವರ್ಗಾರೋಹಣ ಪರ್ವವಿದೆ.

ಹರಿವಂಶಸ್ತತಃ ಪರ್ವ ಪುರಾಣಂ ಖಿಲಸಂಜ್ಞಿತಮ್ ।
ಭವಿಷ್ಯತ್ಪರ್ವ ಚಾಪ್ಯುಕ್ತಂ ಖಿಲೇಷ್ವೇವಾದ್ಭುತಂ ಮಹತ್ ॥೭೧॥

ಅನಂತರ ಮಹಾಭಾರತದ ಖಿಲವೆಂದು ಕರೆಯಲ್ಪಡುವ, ಪುರಾಣವೆಂದೂ ಕರೆಯಲ್ಪಡುವ ಹರಿವಂಶಪರ್ವವಿದೆ. ಅದ್ಭುತವಾದ ಮತ್ತು ವಿಸ್ತಾರವಾದ ಭವಿಷ್ಯತ್‌ಪರ್ವವೂ ಸಹ ಖಿಲಗಳಲ್ಲಿಯೇ ಸೇರಿದೆ

ಏತತ್ ಪರ್ವಶತಂ ಪೂರ್ಣಂ ವ್ಯಾಸೇನೋಕ್ತಂ ಮಹಾತ್ಮನಾ ।
ಯಥಾವತ್ ಸೂತಪುತ್ರೇಣ ಲೋಮಹರ್ಷಣೇನಾ ಪುನಃ ॥೭೨॥

ಕಥಿತಂ ನೈಮಿಶಾರಣ್ಯೇ ಪರ್ವಾಣ್ಯಷ್ಟಾದಶೈವ ತು ।
ಸಮಾಸೋ ಭಾರತಸ್ಯಾಯಂ ತತ್ರೋಕ್ತಃ ಪರ್ವಸಂಗ್ರಹಃ ॥೭೩॥

ಇಲ್ಲಿಗೆ ಮಹಾತ್ಮರಾದ ವ್ಯಾಸರು ಹೇಳಿದ ನೂರುಪರ್ವಗಳು ಸಮಾಪ್ತವಾದವು. ಸೂತರಾದ ಲೋಮಹರ್ಷಣರ ಪುತ್ರರಾದ ಲೋಮಹರ್ಷಣಗಳಿಂದಲೂ ನೈಮಿಶಾರಣ್ಯದಲ್ಲಿ ಅಷ್ಟಾದಶ- ಪರ್ವಾತ್ಮಕವಾದ ಈ ಮಹಾಭಾರತವು ಗುರುಗಳ ಉಪದೇಶಕ್ಕನುಸಾರವಾಗಿ ಹೇಳಲ್ಪಟ್ಟಿತು. ಇದು ಮಹಾಭಾರತ ಗ್ರಂಥದ ಸಂಕ್ಷೇಪ. ಅದರಲ್ಲಿ ಈ ಅಧ್ಯಾಯದಲ್ಲಿ ಪರ್ವಗಳ ಸಂಗ್ರಹವಿದೆ. (ಆದ್ದರಿಂದ ಇದನ್ನು ಪರ್ವಸಂಗ್ರಹಪರ್ವ ಎಂದು ಕರೆಯುತ್ತಾರೆ.)

ಪೌಷ್ಯೇ ಪರ್ವಣಿ ಮಾಹಾತ್ಮ್ಯಂ ಉದಂಕಸ್ಯೋಪವರ್ಣಿತಮ್ ।
ಪೌಲೋಮೇ ಭೃಗುವಂಶಸ್ಯ ವಿಸ್ತಾರಃ ಪರಿಕೀರ್ತಿತಃ ॥೭೪॥

ಪೌಷ್ಯಪರ್ವದಲ್ಲಿ ಉದಂಕನ ಮಹಿಮೆಯು ಹೇಳಲ್ಪಡುತ್ತದೆ. ಪೌಲೋಮಪರ್ವದಲ್ಲಿ ಭೃಗುವಂಶದ ವಿಸ್ತಾರವು ಕೀರ್ತಿತವಾಗಿದೆ.

ಶ್ಲೋಕಾಗ್ರಂ ಚ ಸಹಸ್ರಸ್ಯ ಪಂಚಾಶಚ್ಛತಮೇವ ಚ ।
ಅಧ್ಯಾಯಾನಾಂ ತಥಾಷ್ಟೌ ಚ ಪರ್ವಣ್ಯಸ್ಮಿನ್ ಪ್ರಕೀರ್ತಿತಾಃ ॥೭೫॥

ಪೌಲೋಮಪರ್ವದಲ್ಲಿ ಇರುವ ಅಧ್ಯಾಯಗಳ ಸಂಖ್ಯೆ ಎಂಟು. ಮತ್ತು ಶ್ಲೋಕಗಳ ಸಂಖ್ಯೆ ಒಂದು ಸಾವಿರದ ಐದುನೂರು ಎಂದು ಹೇಳಲ್ಪಡುತ್ತದೆ.

ಆಸ್ತೀಕೇ ಸರ್ವನಾಗಾನಾಂ ಗರುಡಸ್ಯ ಚ ಸಂಭವಃ ।
ಕ್ಷೀರೋದಮಥನಂ ಚೈವ ಜನ್ಮೋಚ್ಚೈಃಶ್ರವಸಸ್ತಥಾ ॥೭೬॥

ಆಸ್ತೀಕಪರ್ವದಲ್ಲಿ ಎಲ್ಲ ನಾಗಗಳ ಮತ್ತು ಗರುಡನ ಉತ್ಪತ್ತಿಯೂ, ಕ್ಷೀರಸಮುದ್ರದ ಮಥನವೂ, ಮತ್ತು ಉಚ್ಚೈಃಶ್ರವಸ್ಸಿನ ಜನ್ಮವೂ ಹೇಳಲ್ಪಡುತ್ತದೆ.

ಯಜತಃ ಸರ್ಪಸತ್ರೇಣ ರಾಜ್ಞಃ ಪಾರೀಕ್ಷಿತಸ್ಯ ಹ ।
ಕಥೇಯಮಭಿನಿರ್ವೃತ್ತಾ ಭಾರತಾನಾಂ ಮಹಾತ್ಮನಾಮ್ ॥೭೭॥

ಪರೀಕ್ಷಿತನ ಮಗನಾದ ಜನಮೇಜಯನು ಸರ್ಪಸತ್ರವನ್ನು ಮಾಡುವ ಸಂದರ್ಭದಲ್ಲಿ ಮಹಾನುಭಾವರಾದ ಭರತವಂಶದಲ್ಲಿ ಉತ್ಪನ್ನರಾದ ಈ ಪಾಂಡವರ ಕಥೆಯು ಹೇಳಲ್ಪಟ್ಟಿತು.

ಶ್ಲೋಕಾಗ್ರಂ ಚ ಸಹಸ್ರಸ್ಯ ಚ ತ್ರಿಶತಂ ಚೋತ್ತರಂ ತಥಾ ।
ಶ್ಲೋಕಾಶ್ಚ ಚತುರಾಶೀತಿಃ ಪರ್ವಣ್ಯಸ್ಮಿಂಸ್ತಥೈವ ಚ ।
ಅಧ್ಯಾಯಾನಾಂ ತತಃ ಪ್ರೋಕ್ತಂ ಚತ್ವಾರಿಂಶನ್ಮಹರ್ಷಿಣಾ ॥೭೮॥

ಈ ಆಸ್ತಿಕಪರ್ವದಲ್ಲಿ ಮಹರ್ಷಿಗಳಾದ ವೇದವ್ಯಾಸರು ನಲವತ್ತು ಅಧ್ಯಾಯಗಳಲ್ಲಿ ಒಂದು ಸಾವಿರದ ಮುನ್ನೂರ ಎಂಬತ್ತನಾಲ್ಕು ಶ್ಲೋಕಗಳಲ್ಲಿ ಈ ಕಥೆಯನ್ನು ನಿರೂಪಿಸಿದ್ದಾರೆ.

ವಿವಿಧಾಃ ಸಂಭವಾ ರಾಜ್ಞಾಮುಕ್ತಾಃ ಸಂಭವಪರ್ವಣಿ ।
ಅನ್ಯೇಷಾಂ ಚೈವ ವಿಪ್ರಾಣಾಮೃಷೇರ್ದ್ವೈಪಾಯನಸ್ಯ ಚ ।
ಅಂಶಾವತರಣಂ ಚಾತ್ರ ದೇವಾನಾಂ ಪರಿಕೀರ್ತಿತಮ್ ॥೭೯॥

ಸಂಭವಪರ್ವದಲ್ಲಿ ಅನೇಕರಾಜರುಗಳ ಉತ್ಪತ್ತಿ, ಬ್ರಾಹ್ಮಣರ ಉತ್ಪತ್ತಿ ವೇದವ್ಯಾಸದೇವರ ಉತ್ಪತ್ತಿ, ಮತ್ತು ದೇವತೆಗಳ ಅಂಶಾವತರಣವು ಹೇಳಲ್ಪಡುತ್ತದೆ.

ದೈತ್ಯಾನಾಂ ದಾನವಾನಾಂ ಚ ಯಕ್ಷಾಣಾಂ ಚ ಮಹೌಜಸಾಮ್ ।
ನಾಗಾನಾಮಥ ಸರ್ಪಾಣಾಂ ಗಂಧರ್ವಾಣಾಂ ಪತತ್ರಿಣಾಮ್ ।
ಅನ್ಯೇಷಾಂ ಚೈವ ಭೂತಾನಾಂ ವಿವಿಧಾನಾಂ ಸಮುದ್ಭವಃ ॥೮೦॥

ಹಾಗೆಯೇ ಮಹಾಸಾಮರ್ಥ್ಯಶಾಲಿಗಳಾದ ದೈತ್ಯರು, ದಾನವರು, ಯಕ್ಷರು, ನಾಗಗಳು, ಸರ್ಪಗಳು, ಗಂಧರ್ವರು, ಪಕ್ಷಿಗಳು ಮತ್ತು ಇನ್ನೂ ಅನೇಕ ಪ್ರಾಣಿಗಳು ಇವರ ಉತ್ಪತ್ತಿಯನ್ನು ಹೇಳಲಾಗುತ್ತದೆ.

ವಸೂನಾಂ ಪುನರುತ್ಪತ್ತಿರ್ಗಾಙ್ಗೇಯಸ್ಯ ಮಹಾತ್ಮನಾಮ್ ।
ಶಂತನೋರ್ವೇಶ್ಮನಿ ಪುನಸ್ತೇಷಾಂ ಚಾರೋಹಣಂ ದಿವಿ ।
ತೇಜೋಂಶಾನಾಂ ಚ ಸಂಯೋಗಾದ್ಭೀಷ್ಮಸ್ಯಾಪ್ಯತ್ರ ಸಂಭವಃ ॥೮೧॥

ಮಹಾತ್ಮರಾದ ವಸುಗಳು ಶಂತನುವಿನ ಮನೆಯಲ್ಲಿ ಗಂಗೆಯಲ್ಲಿ ಜನ್ಮವನ್ನು ಪಡೆದು ಪುನಃ ಸ್ವರ್ಗಾರೋಹಣವನ್ನು ಮಾಡುವುದೂ, ಉಳಿದೆಲ್ಲ ವಸುಗಳ ಸಾಮರ್ಥ್ಯದ ಅಂಶಗಳನ್ನು ತೆಗೆದುಕೊಂಡ ಭೀಷ್ಮನ ಉತ್ಪತ್ತಿಯೂ ಸಹ ಹೇಳಲ್ಪಡುತ್ತದೆ.

ರಾಜ್ಯಾನ್ನಿವರ್ತನಂ ಚೈವ ಬ್ರಹ್ಮಚರ್ಯವ್ರತೇ ಸ್ಥಿತಿಃ ।
ಪ್ರತಿಜ್ಞಾಪಾಲನಂ ಚೈವ ರಕ್ಷಾ ಚಿತ್ರಾಂಗದಸ್ಯ ಚ ॥೮೨॥

ಅನಂತರ ಭೀಷ್ಮರಿಂದ ರಾಜ್ಯದನಿರಾಕರಣೆ, ಬ್ರಹ್ಮಚರ್ಯವ್ರತ ಸ್ವೀಕಾರ, ಪ್ರತಿಜ್ಞಾಪಾಲನೆ, ಮತ್ತು ಚಿತ್ರಾಂಗದನ ರಕ್ಷಣೆಗಳು ಹೇಳಲ್ಪಡುತ್ತದೆ.

ಹತೇ ಚಿತ್ರಾಂಗದೇ ಚೈವ ರಕ್ಷಾ ಭ್ರಾತುರ್ಯವೀಯಸಃ ।
ವಿಚಿತ್ರವೀರ್ಯಸ್ಯ ತಥಾ ರಾಜ್ಯೇ ಸಂಪ್ರತಿಪಾದನಮ್ ॥೮೩॥

ಚಿತ್ರಾಂಗದನು ಹತನಾಗುತ್ತಿರಲು ಅವನ ತಮ್ಮನಾದ ವಿಚಿತ್ರವೀರ್ಯನ ರಕ್ಷಣೆ ಮತ್ತು ವಿಚಿತ್ರವೀರ್ಯನಿಗೆ ರಾಜ್ಯಪ್ರತಿಪಾದನವು ಹೇಳಲ್ಪಡುತ್ತದೆ.

ಧರ್ಮಸ್ಯ ನೃಷು ಸಂಭೂತಿರಾಣಿಮಾಂಡವ್ಯಶಾಪಜಾ ।
ಕೃಷ್ಣದ್ವೈಪಾಯನಾಚ್ಚೈವ ಪ್ರಸೂತಿರ್ವರದಾನಜಾ ।
ಧೃತರಾಷ್ಟ್ರಸ್ಯ ಪಾಂಡೋಶ್ಚ ಪಾಂಡವಾನಾಂ ಚ ಸಂಭವಃ ॥೮೪॥

ಆಣಿಮಾಂಡವ್ಯ ಋಷಿಗಳ ಶಾಪದಿಂದ ಯಮನು ಕೃಷ್ಣದ್ವೈಪಾಯನರಿಂದ ಭೂಮಿಯಲ್ಲಿ ಜನ್ಮವನ್ನು ಪಡೆಯುವುದು ದುರ್ವಾಸರು ಕುಂತಿಗೆ ಕೊಟ್ಟ ವರದಿಂದ ಕೃಷ್ಣದ್ವೈಪಾಯನರಿಂದಲೇ ಧೃತರಾಷ್ಟ್ರ ಮತ್ತು ಪಾಂಡವರನ್ನು ಪಡೆಯುವುದು ಇಲ್ಲಿ ಹೇಳಲ್ಪಟ್ಟಿದೆ.

ವಾರಣಾವತಯಾತ್ರಾ ಚ ಮಂತ್ರೋ ದುರ್ಯೋಧನಸ್ಯ ಚ ।
ವಿದುರಸ್ಯ ಚ ವಾಕ್ಯೇನ ಸುರಂಗೋಪಕ್ರಮಕ್ರಿಯಾ ।
ಪಾಂಡವಾನಾಂ ವನೇ ಘೋರೇ ಹಿಡಿಂಬಾಯಾಶ್ಚ ದರ್ಶನಮ್ ॥೮೫॥

ವಾರಣಾವತಯಾತ್ರೆ, ದುರ್ಯೋಧನನ ಮಂತ್ರಾಲೋಚನೆ, ವಿದುರನವಾಕ್ಯದಿಂದ ಗುಪ್ತವಾಗಿ ಸುರಂಗನಿರ್ಮಾಣ. ಜತುಗೃಹದಿಂದ ಓಡಿಹೋದ ಪಾಂಡವರ ಅರಣ್ಯಪ್ರವೇಶ. ಘೋರವಾದ ಅರಣ್ಯದಲ್ಲಿ ಹಿಡಿಂಬೆಯ ದರ್ಶನ ಇವು ಹೇಳಲ್ಪಡುತ್ತದೆ.

ಘಟೋತ್ಕಚಸ್ಯ ಚೋತ್ಪತ್ತಿರತ್ರೈವ ಪರಿಕೀರ್ತಿತಾ ।
ಅಜ್ಞಾತಚರ್ಯಾ ಪಾಂಡೂನಾಂ ವಾಸೋ ಬ್ರಾಹ್ಮಣವೇಶ್ಮನಿ ॥೮೬॥

ಅಲ್ಲಿಯೇ ಘಟೋತ್ಕಚನ ಉತ್ಪತ್ತಿಯೂ ಹೇಳಲ್ಪಡುತ್ತದೆ. ಪಾಂಡವರು ಬ್ರಾಹ್ಮಣನ ಮನೆಯಲ್ಲಿ ಯಾರಿಗೂ ತಿಳಿಯದಂತೆ ವಾಸಮಾಡುವುದೂ ಇಲ್ಲಿಯೇ ನಿರೂಪಿತವಾಗಿದೆ.

ಬಕಸ್ಯ ನಿಧನಂ ಚೈವ ನಾಗರಾಣಾಂ ಚ ವಿಸ್ಮಯಃ ।
ಅಂಗಾರಪರ್ಣಂ ನಿರ್ಜಿತ್ಯ ಗಂಗಾಕೂಲೇऽರ್ಜುನಸ್ತದಾ ॥೮೭॥

ಭ್ರಾತೃಭಿಃ ಸಹಿತಃ ಸರ್ವೈಃ ಪಾಂಚಾಲಾನಭಿತೋ ಯಯೌ ।
ತಾಪತ್ಯಮಥ ವಾಸಿಷ್ಠಮೌರ್ವೋಪಾಖ್ಯಾನಮುತ್ತಮಮ್ ॥೮೮॥

ಬಕನ ವಧೆ, ಪೌರಜನರ ವಿಸ್ಮಯಗಳು ನಿರೂಪಿತವಾಗಿವೆ. ಗಂಗಾತೀರದಲ್ಲಿ ಅರ್ಜುನನು ಅಂಗಾರಪರ್ಣನೆಂಬ ಗಂಧರ್ವನನ್ನು ಜಯಿಸುವುದು, ಎಲ್ಲಾ ಸಹೋದರರು ಸೇರಿ ಪಾಂಚಾಲನಗರಕ್ಕೆ ಪ್ರಯಾಣಮಾಡುವುದು, ಅನಂತರ ತಾಪತ್ಯೋಪಾಖ್ಯಾನ, ವಾಸಿಷ್ಠೋಪಾಖ್ಯಾನ ಮತ್ತು ಶ್ರೇಷ್ಠವಾದ ಔರ್ವೋಪಾಖ್ಯಾನಗಳು ಇಲ್ಲಿ ಹೇಳಲ್ಪಟ್ಟಿದೆ.

ಪಂಚೇಂದ್ರಾಣಾಮುಪಾಖ್ಯಾನಮತ್ಯೈವಾದ್ಭುತಮುಚ್ಯತೇ ।
ಪಂಚಾನಾಮೇಕಪತ್ನೀತ್ವೇ ವಿಮರ್ಶೋ ದ್ರುಪದಸ್ಯ ಚ ॥೮೯॥

ಇಲ್ಲಿಯೇ ಅದ್ಭುತವಾದ ಪಂಚೇಂದ್ರೋಪಾಖ್ಯಾನವೂ ಮತ್ತು ದ್ರೌಪದಿಯು ಐದು ಜನರನ್ನು ಮದುವೆ ಮಾಡಿಕೊಳ್ಳುವ ವಿಷಯದಲ್ಲಿ ದ್ರುಪದನ ಚಿಂತನೆಯೂ ನಿರೂಪಿತವಾಗಿದೆ.

ದ್ರೌಪದ್ಯಾ ದೇವವಿಹಿತೋ ವಿವಾಹಶ್ಚಾಪ್ಯಮಾನುಷಃ ।
ವಿದುರಸ್ಯ ಚ ಸಂಪ್ರಾಪ್ತಿರ್ದರ್ಶನಂ ಕೇಶವಸ್ಯ ಚ ॥೯೦॥

ಮನುಷ್ಯರ ಕಣ್ಣಿಗೆ ಕಾಣದಂತೆ ದೇವತೆಗಳು ಮಾಡುವ ದ್ರೌಪದಿಯ ವಿವಾಹವೂ, ವಿದುರನ ಸಂಪ್ರಾಪ್ತಿಯೂ, ಕೃಷ್ಣನದರ್ಶನವೂ ಇಲ್ಲಿ ನಿರೂಪಿತವಾಗಿದೆ.

ದ್ರೌಪದಿಯ ವಿವಾಹ ಎರಡುರೀತಿಯಾದುದು. ಮನುಷ್ಯರ ಕಣ್ಣೆದುರಿಗೆ ನಡೆದ ಒಂದು ವಿವಾಹ. ಇದೂ ಸಹ ದೇವತೆಗಳು ತಮ್ಮ ದಿವ್ಯದೃಷ್ಟಿಯಿಂದ ದ್ರೌಪದಿಯ ಶರೀರದಲ್ಲಿ ಪಂಚಕನ್ಯೆಯರನ್ನು ನೋಡಿ ಮಾಡಿದ ವಿವಾಹವಾದ್ದರಿಂದ ಇದು ದೈವವಿಹಿತ ವಿವಾಹವೇ. ಇದಲ್ಲದೆ ಪ್ರತಿದಿನವೂ ಮನುಷ್ಯರಿಗೆ ಕಾಣದಂತೆ ದೇವತೆಗಳು ಆಗಮಿಸಿ ದ್ರೌಪದಿಗೆ ವಿವಾಹವನ್ನು ಮಾಡುತ್ತಿದ್ದುದು ಇನ್ನೊಂದು ದೈವವಿಹಿತವಿವಾಹ. ಈ ಎರಡು ವಿವಾಹಗಳನ್ನು ವಾದಿರಾಜರು ಸ್ಪಷ್ಟಪಡಿಸುತ್ತಾರೆ.

ಖಾಂಡವಪ್ರಸ್ಥವಾಸಶ್ಚ ತಥಾ ರಾಜ್ಯಾರ್ಧಶಾಸನಮ್ ।
ನಾರದಸ್ಯ ಚ ವಾಕ್ಯೇನ ದ್ರೌಪದ್ಯಾಃ ಸಮಯಕ್ರಿಯಾ ॥೯೦॥

ಅನಂತರ ಖಾಂಡವಪ್ರಸ್ಥದಲ್ಲಿ ವಾಸ. ಅರ್ಧರಾಜ್ಯಪರಿಪಾಲನೆ. ನಾರದರ ವಾಕ್ಯದಂತೆ ದ್ರೌಪದಿಯನ್ನು ಪರ್ಯಾಯ ವ್ಯವಸ್ಥೆಯಿಂದ ಸ್ವೀಕಾರ ಮಾಡುವ ರೀತಿ ಇವು ಹೇಳಲ್ಪಟ್ಟಿವೆ.

ಸುಂದೋಪಸುಂದಯೋಸ್ತತ್ರ ಹ್ಯುಪಾಖ್ಯಾನಂ ಪ್ರಕೀರ್ತಿತಮ್ ।
ಪಾರ್ಥಸ್ಯ ವನವಾಸಶ್ಚ ಉಲೂಪ್ಯಾ ಸಹ ಸಂಗಮಃ ॥೯೨॥

ಅನಂತರ ಸುಂದೋಪಸುಂದರ ಉಪಾಖ್ಯಾನವು ಹೇಳಲ್ಪಡುತ್ತದೆ. ಅರ್ಜುನನ ವನವಾಸ. ಮತ್ತು ನಾಗಕನ್ಯೆಯಾದ ಉಲೂಪಿಯ ಜೊತೆಯಲ್ಲಿ ಸಂಗಮವು ನಿರೂಪಿತವಾಗಿದೆ.

ಪುಣ್ಯತೀರ್ಥಾನುಸಂಯಾನಂ ಬಭ್ರುವಾಹನಜನ್ಮ ಚ ।
ದ್ವಾರಕಾಯಾಂ ಸುಭದ್ರಾ ಚ ಕಾಮಯಾನೇನ ಕಾಮಿನೀ ।
ವಾಸುದೇವಸ್ಯಾನುಮತೇ ಪ್ರಾಪ್ತಾ ಚೈವ ಕಿರೀಟಿನಾ ॥೯೩॥

ಅರ್ಜುನನ ತೀರ್ಥಯಾತ್ರಾ ಸಂಚಾರ, ಬಭ್ರುವಾಹನನ ಜನ್ಮ, ದ್ವಾರಕೆಯಲ್ಲಿ ಕಾಮಿನಿಯಾದ ಸುಭದ್ರೆಯನ್ನು ಕಾಮಿಸುವ ಅರ್ಜುನನಿಂದ ಕೃಷ್ಣನ ಸಮ್ಮತಿಯಂತೆ ಸುಭದ್ರೆಯ ಪ್ರಾಪ್ತಿ. ಇವು ನಿರೂಪಿತವಾಗಿವೆ.

ಹರಣಂ ಗೃಹ್ಯ ಸಂಪ್ರಾಪ್ತೇ ಕೃಷ್ಣೇ ದೇವಕಿನಂದನೇ ।
ಸಂಪ್ರಾಪ್ತಿಃ ಶಕ್ರಧನುಷಃ ಖಾಂಡವಸ್ಯ ಚ ದಾಹನಮ್ ।
ಅಭಿಮನ್ಯೋಃ ಸುಭದ್ರಾಯಾಂ ಜನ್ಮ ಚೋತ್ತಮತೇಜಸಃ ॥೯೪॥

ಕೃಷ್ಣನು ಉಡುಗೊರೆಗಳನ್ನು ತೆಗೆದುಕೊಂಡು ಖಾಂಡವಪ್ರಸ್ಥಕ್ಕೆ ಹೋಗುತ್ತಿರಲು, ಅಗ್ನಿಯ ಆಗಮನ. ಖಾಂಡವವನದ ದಹನ ಮತ್ತು ಪರಾಕ್ರಮಶಾಲಿಯಾದ ಅಭಿಮನ್ಯುವಿನ ಸುಭದ್ರೆಯಲ್ಲಿ ಉತ್ಪತ್ತಿಗಳು ಹೇಳಲ್ಪಡುತ್ತವೆ.

ಮಯಸ್ಯ ಮೋಕ್ಷೋ ಜ್ವಲನಾದ್ಭುಜಂಗಸ್ಯ ಚ ಮೋಕ್ಷಣಮ್ ।
ಮಹರ್ಷೇರ್ಮಂದಪಾಲಸ್ಯ ಶಾರ್ಙ್ಗ್ಯಾಂ ತನಯಸಂಭವಃ ॥೯೫॥

ಅಗ್ನಿಯಿಂದ ಮಯಾಸುರನ ಮೋಚನೆ, ತಕ್ಷಕನ ಮೋಚನೆ ಮತ್ತು ಮಂದಪಾಲ ಮಹರ್ಷಿಗಳಿಗೆ ಶಾಂಗಿ೯ಪಕ್ಷಿಯಲ್ಲಿ ಪುತ್ರರ ಉತ್ಪತ್ತಿಯು ಇಲ್ಲಿ ಹೇಳಲ್ಪಡುತ್ತದೆ.

ಇತ್ಯೇತದಾದಿಪರ್ವೋಕ್ತಂ ಪ್ರಥಮಂ ಬಹುವಿಸ್ತರಮ್ ॥೯೬॥

ಇದು ಮೊದಲನೆಯ ಆದಿಪರ್ವದಲ್ಲಿ ಬಹಳ ವಿಸ್ತಾರವಾಗಿ ಹೇಳಿದ ಕಥೆ.

ಅಧ್ಯಾಯಾನಾಂ ಶತೇ ದ್ವೇ ತು ಸಂಖ್ಯಾತೇ ಪರಮರ್ಷಿಣಾ ।
ಅಷ್ಟಾದಶೈವ ಚಾಧ್ಯಾಯಾ ವ್ಯಾಸೇನೋತ್ತಮತೇಜಸಾ ॥೯೭॥

ನವತ್ಯೋಕಸಹಸ್ರಾಣಿ ಶತಾನ್ಯಷ್ಟೌ ತಥೈವ ಚ ।
ಶ್ಲೋಕಾಶ್ಚ ಚತುರಾಶೀತಿರ್ದ್ಯಷ್ಟೌ ಗ್ರಂಥೋ ಮಹಾತ್ಮನಾ ॥೯೮॥

ಈ ಪರ್ವದಲ್ಲಿ ಪರಮರ್ಷಿಗಳಾದ ವ್ಯಾಸರು ಇನ್ನೂರ ಹದಿನೆಂಟು ಅಧ್ಯಾಯಗಳನ್ನೂ, ಒಂಭತ್ತುಸಾವಿರದ ಎಂಟುನೂರ ಎಂಬತ್ತಾ ನಲ್ಕು ಶ್ಲೋಕಗಳನ್ನೂ ರಚಿಸಿದ್ದಾರೆ.

ದ್ವಿತೀಯಂ ತು ಸಭಾಪರ್ವ ಸಮಾಖ್ಯಾತಂ ಮಹಾತ್ಮನಾ ।
ಸಭಾಕ್ರಿಯಾ ಪಾಂಡವಾನಾಂ ಕಿಂಕರಾಣಾಂ ಚ ದರ್ಶನಮ್ ।
ಲೋಕಪಾಲಸಭಾಖ್ಯಾನಂ ನಾರದಾದ್ದೇವದರ್ಶನಾತ್ ॥೯೯॥

ಮಹಾತ್ಮರಾದ ವೇದವ್ಯಾಸರು ಎರಡನೆಯದ್ದಾದ ಸಭಾಪರ್ವವನ್ನು ರಚಿಸಿದ್ದಾರೆ. ಅದರಲ್ಲಿ ಪಾಂಡವರ ಸಭಾನಿರ್ಮಾಣ. ಕಿಂಕರರ ದರ್ಶನ, ದೇವತೆಗಳನ್ನು ನೋಡುವ ನಾರದರಿಂದ ಲೋಕಪಾಲರ ಸಭೆಗಳ ವರ್ಣನೆಗಳು ಇವೆ.

(ಕಿಂಕರರ ದರ್ಶನವೆಂದರೆ ಸಭೆಯಲ್ಲಿರುವ ಧರ್ಮರಾಜನ ಸೇವೆಗೋಸ್ಕರ ನಾನಾ ದೇಶಗಳಿಂದ ಬಂದಂತಹ ಮುನಿಗಳು ರಾಜರುಗಳು ಹಾಗೂ ದೇವಲೋಕದಿಂದ ಬಂದಂತಹ ಗಂಧರ್ವರು, ಕಿನ್ನರರು ಅಪ್ಸರೆಯರು ಇವರೆಲ್ಲರೂ ಸಭೆಯಲ್ಲಿ ಶೋಭಿಸುತ್ತಿದ್ದರು. ಇಂತಹ ಕಿಂಕರರ ವರ್ಣನೆ. ಇಲ್ಲಿ ಮೂಲರೂಪವನ್ನು ಪರಿವರ್ತಿಸಿದ್ದರಿಂದ ಋಷಿಗಳನ್ನೂ ಕೂಡ ಕಿಂಕರರು ಎಂದು ಹೇಳಿರುವುದು).

ರಾಜಸೂಯಸ್ಯ ಚಾರಂಭೋ ಜರಾಸಂಧವಧಸ್ತಥಾ ।
ಗಿರಿವ್ರಜೇ ನಿರುದ್ಧಾನಾಂ ರಾಜ್ಞಾಂ ಕೃಷ್ಣೇನ ಮೋಕ್ಷಣಮ್ ॥೧೦೦॥

ರಾಜಸೂಯಯಾಗದ ಪ್ರಾರಂಭ, ಜರಾಸಂಧವಧೆ, ಮಗಧದ ರಾಜಧಾನಿಯಾದ ಗಿರಿವ್ರಜದಲ್ಲಿ ಜರಾಸಂಧನಿಂದ ಬಂಧನದಲ್ಲಿಡಲ್ಪಟ್ಟ ರಾಜರುಗಳನ್ನು ಕೃಷ್ಣನು ವಿಮೋಚನಗೊಳಿಸುವುದು.

ರಾಜಸೂಯೇऽರ್ಘಸಂವಾದೇ ಶಿಶುಪಾಲವಧಸ್ತಥಾ ।
ಯಜ್ಞೇ ವಿಭೂತಿಂ ದೃಷ್ಟ್ವಾ ತಾಂ ದುಃಖಾಮರ್ಷಾನ್ವಿತಸ್ಯ ಚ ॥೧೦೧॥

ದುರ್ಯೋಧನಸ್ಯಾಪಹಾಸೋ ಭೀಮೇನ ಚ ಸಭಾತಳೇ ।
ಯತ್ರಾಸ್ಯ ಮನ್ಯುರಭವದ್ ಯೇನ ದ್ಯೂತಮಕಲ್ಪಯನ್ ॥೧೦೨॥

ಅಗ್ರಪೂಜೆಯ ಸಂದರ್ಭದಲ್ಲಿ ಶಿಶುಪಾಲನ ವಧೆ, ರಾಜಸೂಯಯಾಗದಲ್ಲಿ ಪಾಂಡವರ ಸಂಪತ್ತನ್ನು ನೋಡಿ ದುಃಖದಿಂದಲೂ ಮತ್ತು ಕ್ರೋಧದಿಂದಲೂ ಕೂಡಿದ ದುರ್ಯೋಧನನ್ನು ಕುರಿತು ಸಭಾತಳದಲ್ಲಿ ಭೀಮನ ಅಪಹಾಸ, ಆ ಸಿಟ್ಟಿಗೆ ಒಳಗಾದ ದುರ್ಯೋಧನನಿಂದ ದ್ಯೂತದ ವ್ಯವಸ್ಥೆಯು ಹೇಳಲ್ಪಟ್ಟಿದೆ.

ಯತ್ರ ಧರ್ಮಸುತಂ ದ್ಯೂತೇ ಶಕುನಿಃ ಕಿತವೋऽಜಯತ್ ।
ಯತ್ರ ದ್ಯೂತಾಸ್ರವೇ ಮಗ್ನಾನ್ ದ್ರೌಪದೀ ನೌರಿವಾರ್ಣವೇ ॥೧೦೩॥

ಆ ದ್ಯೂತದಲ್ಲಿ ಧರ್ಮರಾಜನನ್ನು ಶಕುನಿಯು ಮೋಸದಿಂದ ಜಯಿಸಿದನು. ಆ ದ್ಯೂತವೆಂಬ ಜಲದಲ್ಲಿ ಮುಳುಗಿದ ಪಾಂಡವರಿಗೆ ದ್ರೌಪದಿಯು ನಾವೆಯಾದಳು.

ಗಚ್ಛತಶ್ಚಾತಿಸೃಷ್ಟಾಂಸ್ತಾನ್ ಜ್ಞಾತ್ವಾ ದುರ್ಯೋಧನೋ ನೃಪಃ ।
ಪುನರೇವ ತತೋ ದ್ಯೂತೇ ಸಮಾಹ್ವಯತ ಪಾಂಡವಾನ್ ॥೧೦೪॥

ಧೃತರಾಷ್ಟ್ರನಿಂದ ಬಿಡುಗಡೆಮಾಡಲ್ಪಟ್ಟು ಹೊರಟುಹೋಗುತ್ತಿದ್ದ ಪಾಂಡವರನ್ನು ನೋಡಿ ದುರ್ಯೋಧನನು ಪುನಃ ಅವರನ್ನು ದ್ಯೂತಕ್ಕೆ ಕರೆದನು.

ಏತತ್ಸರ್ವಂ ಸಭಾಪರ್ವ ಣ್ಯಾಖ್ಯಾತಂ ಪರಮರ್ಷಿಣಾ ।
ಅಧ್ಯಾಯಾಃ ಸಪ್ತತಿಜ್ಞೇಯಾ ದ್ವೌ ಚಾತ್ರ ಪರಿಸಂಖ್ಯಯಾ ॥೧೦೫॥

ಚತುಃಶ್ಲೋಕಸಹಸ್ರಾಣಿ ಪಂಚ ಶ್ಲೋಕಶತಾನಿ ಚ ।
ಶ್ಲೋಕಾಶ್ಚೈಕಾದಶ ಜ್ಞೇಯಾಃ ಪರ್ವಣ್ಯಸ್ಮಿನ್ಪ್ರಕೀರ್ತಿತಾಃ ॥೧೦೬॥

ಈ ಎಲ್ಲ ವಿಷಯವು ಪರಮರ್ಷಿಗಳಾದ ವ್ಯಾಸರಿಂದ ಸಭಾಪರ್ವದಲ್ಲಿ ಹೇಳಲ್ಪಟ್ಟಿದೆ. ಈ ಪರ್ವದಲ್ಲಿ ಎಪ್ಪತ್ತೆರಡು ಅಧ್ಯಾಯಗಳು ನಾಲ್ಕುಸಾವಿರದ ಐದುನೂರ ಹನ್ನೊಂದು ಶ್ಲೋಕಗಳು ಇವೆ.

ಅತಃ ಪರಂ ತೃತೀಯಂ ತು ಜ್ಞೇಯಮಾರಣ್ಯಕಂ ಪರಮ್ ।
ವನವಾಸಂ ಪ್ರಯಾತೇಷು ಪಾಂಡವೇಷು ಮಹಾತ್ಮಸು ।
ಪೌರಾನುಕಂಪಾ ನಿರ್ವೇದೋ ಧರ್ಮರಾಜಸ್ಯ ಧೀಮತಃ ॥೧೦೭॥

ಇಲ್ಲಿಂದ ಮುಂದಕ್ಕೆ ಮೂರನೆಯ ವನಪರ್ವ. ಮಹಾತ್ಮರಾದ ಪಾಂಡವರು ವನವಾಸಕ್ಕೆ ಹೋಗುತ್ತಿರಲು ಪೌರರ ಅನುಕಂಪ, ಮತ್ತು ಮೇಧಾವಿಯಾದ ಧರ್ಮರಾಜನ ನಿರ್ವೇದ.

ಅನ್ನೌಷಧೀನಾಂ ಚ ಕೃತೇ ಪಾಂಡವೇನ ಮಹಾತ್ಮನಾ ।
ದ್ವಿಜಾನಾಂ ಭರಣಾರ್ಥಂ ಚ ಕೃತಮಾರಾಧನಂ ರವೇಃ ।
ಧೌಮ್ಯೋಪದೇಶಾತ್ ತಿಗ್ಮಾಂಶುಪ್ರಸಾದಾದನ್ನಸಂಭವಃ ॥೧೦೮॥

ಜೊತೆಯಲ್ಲಿದ್ದ ಬ್ರಾಹ್ಮಣರ ಮತ್ತು ತಮ್ಮ ಪೋಷಣೆಗಾಗಿ ಧೌಮ್ಯರ ಮಾತಿನಂತೆ ಮಹಾತ್ಮನಾದ ಧರ್ಮರಾಜನಿಂದ ಸೂರ್ಯನ ಆರಾಧನೆ. ಮತ್ತು ಸೂರ್ಯನ ಅನುಗ್ರಹದಿಂದ ಅನ್ನಪ್ರಾಪ್ತಿ.

ಮೈತ್ರೇಯಶಾಪೋತ್ಸರ್ಗಶ್ಚ ವಿದುರಸ್ಯ ಪ್ರವಾಸನಮ್ ।
ಶ್ರುತ್ವಾ ಶಕುನಿನಾ ದ್ಯೂತೇ ನಿಕೃತ್ಯಾ ನಿರ್ಜಿತಾಂಶ್ಚ ತಾನ್ ॥೧೦೯॥

ಮೈತ್ರೇಯರಿಂದ ದುರ್ಯೋಧನನಿಗೆ ಶಾಪದಾನ. ಪಾಂಡವರನ್ನು ಶಕುನಿಯು ದ್ಯೂತದಲ್ಲಿ ಮೋಸದಿಂದ ಸೋಲಿಸಿದ ಕಾರಣ. ಹಸ್ತಿನಾವತಿಯಿಂದ ವಿದುರನ ಪ್ರಯಾಣ.

ತತ್ಕಿರ್ಮೀರಕವಧಾಖ್ಯಾನಂ ವೃಷ್ಣೀನಾಮಾಗಮಸ್ತಥಾ ।
ಪಾಂಚಾಲಾನಾಂ ಚ ಸರ್ವೇಷಾಂ ಸೌಭಾಖ್ಯಾನಂ ತಥೈವ ಚ ॥೧೧೦॥

ಅನಂತರ ಕಾಮ್ಯಕವನದಲ್ಲಿ ಕಿರ್ಮೀರವಧಾ ನಿರೂಪಣ, ವೃಷ್ಣಿಗಳ ಆಗಮನ. ಮತ್ತು ಎಲ್ಲಾ ಪಾಂಚಾಲರ ಆಗಮನ. ಅನಂತರ ಸೌಭಾಖ್ಯಾನ.

ಪಾಂಚಾಲಾಗಮನಂ ಚೈವ ದ್ರೌಪದ್ಯಾಶ್ಚಾಶ್ರುಮೋಕ್ಷಣಮ್ ।
ಅಸ್ತ್ರಹೇತೋರ್ವಿವಾಸಶ್ಚ ಪಾರ್ಥಸ್ಯಾಮಿತತೇಜಸಃ ॥೧೧೧॥

ದ್ರುಪದನ ಆಗಮನ. ದ್ರೌಪದಿಯ ಅಶ್ರುಪಾತ. ಪಾಶುಪತಾಸ್ತ್ರವನ್ನು ಪಡೆಯುವ ಸಲುವಾಗಿ ಅಮಿತಪರಾಕ್ರಮಿಯಾದ ಅರ್ಜುನನ ಪ್ರಯಾಣ.

ಮಹಾದೇವೇನ ಯುದ್ಧಂ ಚ ಕಿರಾತವಪುಷಾ ಸಹ ।
ದರ್ಶನಂ ಲೋಕಪಾಲಾನಾಂ ಸ್ವರ್ಗಾರೋಹಣಮೇವ ಚ ॥೧೧೨॥

ಕಿರಾತರೂಪಿಯಾದ ರುದ್ರದೇವರ ಜೊತೆಯಲ್ಲಿ ಯುದ್ಧ ಲೋಕಪಾಲಕರ ದರ್ಶನ. ಮತ್ತು ಸ್ವರ್ಗಾರೋಹಣ.

ದರ್ಶನಂ ಬೃಹದಶ್ವಸ್ಯ ಮಹರ್ಷೇರ್ಭಾವಿತಾತ್ಮನಃ ।
ಯುಧಿಷ್ಠಿರಸ್ಯ ಚಾರ್ತಸ್ಯ ವ್ಯಸನೇ ಪರಿದೇವನಮ್ ॥೧೧೩॥

ಮಹರ್ಷಿಯಾದ ಉದಾರಮನಸ್ಕನಾದ ಬೃಹದಶ್ವನ ದರ್ಶನ. ಸರ್ವವನ್ನು ಕಳೆದುಕೊಂಡು ಆರ್ತನಾದ ಯುಧಿಷ್ಠಿರನ ವಿಲಾಪ.

ನಲೋಪಾಖ್ಯಾನಮತ್ರೈವ ಧರ್ಮಿಷ್ಠಂ ಕರುಣೋದಯಮ್ ।
ದಮಯಂತ್ಯಾಃ ಸ್ಥಿತಿರ್ಯತ್ರ ನಲಸ್ಯ ವ್ಯಸನಾಗಮೇ ॥೧೧೪॥

ಇಲ್ಲಿಯೇ ಕುರುಣಾಜನಕವಾದ ಧರ್ಮಿಷ್ಠವಾದ ನಲೋಪಾಖ್ಯಾನವು ನಲನು ವ್ಯಸನದಲ್ಲಿ ಮಗ್ನನಾದಾಗ, ದಮಯಂತಿಯ ಪಾತಿವ್ರತ್ಯವು ಹೇಳಲ್ಪಟ್ಟಿದೆ.

ವನವಾಸಗತಾನಾಂ ಚ ಪಾಂಡವಾನಾಂ ಮಹಾತ್ಮನಾಮ್ ।
ಸ್ವರ್ಗೇ ಪ್ರವೃತ್ತಿರಾಖ್ಯಾತಾ ಲೋಮಶೇನಾರ್ಜುನಸ್ಯ ಚ ॥೧೧೫॥

ವನವಾಸದಲ್ಲಿದ್ದ ಮಹಾತ್ಮರಾದ ಪಾಂಡವರಿಗೆ ಲೋಮಶರಿಂದ ಅರ್ಜುನನಿಂದ ಸ್ವರ್ಗದಲ್ಲಿ ನಡೆದ ವೃತ್ತಾಂತಗಳ ಕಥನ.

ತೀರ್ಥಯಾತ್ರಾ ತಥೈವಾತ್ರ ಪಾಂಡವಾನಾಂ ಮಹಾತ್ಮನಾಮ್ ।
ಆಗಸ್ತ್ಯಮಪಿ ಚಾಖ್ಯಾನಂ ಯತ್ರ ವಾತಾಪಿಭಕ್ಷಣಮ್ ॥೧೧೬॥

ಮಹಾತ್ಮರಾದ ಪಾಂಡವರ ತೀರ್ಥಯಾತ್ರೆ. ಅಗಸ್ತ್ಯೋಪಖ್ಯಾನ, ಮತ್ತು ವಾತಾಪಿಯ ಭಕ್ಷಣ.

ಲೋಪಾಮುದ್ರಾಭಿಗಮನಂ ಅಪತ್ಯಾರ್ಥಮೃಷೇರಪಿ ।
ತತಃ ಶ್ಯೇನಕಪೋತೀಯಮುಪಾಖ್ಯಾನಮನಂತರಮ್ ॥೧೧೭॥

ಇಂದ್ರಾಗ್ನೀ ಯತ್ರ ಧರ್ಮಶ್ಚ ಜಿಜ್ಞಾಸಂತೌ ಶಿಬಿಂ ನೃಪಮ್ ।
ಋಷ್ಯಶೃಂಗಸ್ಯ ಚರಿತಂ ಕೌಮಾರಬ್ರಹ್ಮಚಾರಿಣಃ ॥೧೧೮॥

ಮಕ್ಕಳನ್ನು ಪಡೆಯುವ ಸಲುವಾಗಿ ಅಗಸ್ತ್ಯರಿಂದ ಲೋಪಾಮುದ್ರೆಯ ಸಮಾಗಮ. ಮತ್ತು ಶ್ಯೇನಕಪೋತ ಉಪಾಖ್ಯಾನ. ಆ ಉಪಾಖ್ಯಾನದಲ್ಲಿ ಇಂದ್ರ ಮತ್ತು ಅಗ್ನಿಯು ಶಿಬಿಯ ಧರ್ಮವನ್ನು ಪರೀಕ್ಷಿಸಲು ಶ್ಯೇನ ಮತ್ತು ಕಪೋತ ರೂಪದಲ್ಲಿ ಪ್ರಾಪ್ತವಾದದ್ದು ಮತ್ತು ಶಿಬಿಯ ಧರ್ಮವು ಹೇಳಲ್ಪಡುತ್ತದೆ. ಕೌಮಾರಬ್ರಹ್ಮಚಾರಿಯಾದ ಋಷ್ಯಶೃಂಗರ ಚರಿತ್ರೆಯು ಇಲ್ಲಿಯೇ ಇದೆ.

ಜಾಮದಗ್ನ್ಯಸ್ಯ ರಾಮಸ್ಯ ಚರಿತಂ ಭೂರಿತೇಜಸಃ ।
ಕಾರ್ತವೀರ್ಯವಧೋ ಯತ್ರ ಹೇಹಯಾನಾಂ ಚ ವರ್ಣ್ಯತೇ ॥೧೧೯॥

ಅನಂತರ ಮಹಾಪರಾಕ್ರಮಶಾಲಿಗಳಾದ ಪರಶುರಾಮರ ಚರಿತ್ರೆ, ಕಾರ್ತವೀರ್ಯ ಮತ್ತು ಹೇಹಯಕುಲದ ರಾಜರ ವಧೆಯು ಇಲ್ಲಿ ಹೇಳಲ್ಪಡುತ್ತದೆ.

ಕರ್ಣಸ್ಯ ಪರಿಮೋಕ್ಷೋಽತ್ರ ಕುಂಡಲಾಭ್ಯಾಂ ಪುರಂದರಾತ್ ।
ನಿಯುಕ್ತೋ ಭೀಮಸೇನಶ್ಚ ದ್ರೌಪದ್ಯಾ ಗಂಧಮಾದನೇ ॥೧೨೦॥

ಯತ್ರ ಮಂದಾರಪುಷ್ಪಾರ್ಥಂ ನಲಿನೀಂ ತಾಮಧರ್ಷಯತ್ ।
ಯತ್ರಾಸ್ಯ ಸುಮಹದ್ಯುದ್ಧಂ ಅಭವದ್ರಾಕ್ಷಸೈಃ ಸಹ ॥೧೨೧॥

ಇಂದ್ರನಿಂದ ಕರ್ಣನ ಕುಂಡಲಗಳ ಸ್ವೀಕಾರ. ದ್ರೌಪದಿಯಿಂದ ಪ್ರಾರ್ಥಿತನಾದ ಭೀಮಸೇನನಿಂದ ಗಂಧಮಾದನಪರ್ವತದಲ್ಲಿ ಸರೋವರದ ಬಳಿ ಹೋಗಿ ರಾಕ್ಷಸರ ಜೊತೆಯಲ್ಲಿ ನಡೆದ ದೊಡ್ಡ ಯುದ್ಧವು ಇಲ್ಲಿ ಹೇಳಲ್ಪಡುತ್ತದೆ.

ಯಕ್ಷೈಶ್ಚಾಪಿ ಮಹಾವೀರ್ಯೈರ್ಮಣಿಮತ್ಪ್ರಮುಖೈಸ್ತಥಾ ॥೧೨೨॥

ಅನಂತರ ಮಣಿಮಂತನೇ ಪ್ರಮುಖನಾದ ಮಹಾಪರಾಕ್ರಮ- ಶಾಲಿಗಳಾದ ಯಕ್ಷರ ಜೊತೆಯಲ್ಲಿ ಭೀಮಸೇನನು ಮಾಡಿದ ಯುದ್ಧವು ಇಲ್ಲಿ ಹೇಳಲ್ಪಡುತ್ತದೆ.

ಸೌಕನ್ಯಕಮುಪಾಖ್ಯಾನಂ ಚ್ಯವನೋ ಯತ್ರ ಭಾರ್ಗವಃ ।
ಶರ್ಯಾತಿಯಜ್ಞೇ ನಾಸತ್ಯೌ ಕೃತವಾನ್‌ಸೋಮಪೀಥಿನೌ ।
ತಾಭ್ಯಾಂ ಚ ಯತ್ರ ಸ ಮುನಿರ್ಯೌವನಂ ಪ್ರತಿಪಾದಿತಃ ॥೧೨೩॥

ಅನಂತರ ಕರ್ಮಾತಿ ರಾಜನ ಮಗಳಾದ ಸುಕನ್ಯೆಯ ಉಪಾಖ್ಯಾನ. ಅದರಲ್ಲಿ ಭೃಗುಕುಲೋತ್ಪನ್ನರಾದ ಚ್ಯವನ್ಯಷಿಗಳು, ಶರ್ಯಾತಿಯಜ್ಞದಲ್ಲಿ ಅಶ್ವಿನೀದೇವತೆಗಳನ್ನು ಯಜ್ಞಭಾಗಾರ್ಹರನ್ನಾಗಿ ಮಾಡಿ ಅವರಿಬ್ಬರಿಂದ ಯೌವನವನ್ನು ಪಡೆದ ಬಗೆಯನ್ನು ನಿರೂಪಿಸಲಾಗಿದೆ.

ಜಂತೂಪಾಖ್ಯಾನಮತ್ರೈವ ಯತ್ರ ಪುತ್ರೇಣ ಸೋಮಕಃ ।
ಪುತ್ರಾರ್ಥಮಯಜದ್ ರಾಜಾ ಲೇಭೇ ಪುತ್ರಶತಂ ಚ ಸಃ ॥೧೨೪॥

ಅನಂತರ ಅರಣ್ಯ ಪರ್ವದಲ್ಲಿ ಜಂತೂಪಾಖ್ಯಾನ. ಸೋಮಕರಾಜನ ಮಗನಾದ ಜಂತುವನ್ನು ಪಶುವನ್ನಾಗಿ ಮಾಡಿ. ಸೋಮಕನು ಹೆಚ್ಚು ಮಕ್ಕಳನ್ನು ಪಡೆಯುವ ಉದ್ದೇಶದಿಂದ ಯಾಗವನ್ನು ಮಾಡಿ ಜಂತುವಿನ ವಪೆಯನ್ನು ಆಹುತಿಯಾಗಿ ಅರ್ಪಿಸಿದಾಗ, ಆ ಹೋಮಗಂಧವನ್ನು ಆಘ್ರಾಣಿಸಿದ ಅವನ ಪತ್ನಿಯರೆಲ್ಲರೂ ಗರ್ಭಿಣಿಯರಾಗಿ ಪುನಃ ಜಂತುವನ್ನು ಸೇರಿದಂತೆ ನೂರುಮಕ್ಕಳನ್ನು ಪಡೆದರು ಎಂಬ ಕಥೆಯು ಇಲ್ಲಿ ಹೇಳಲ್ಪಡುತ್ತದೆ. ದೇಹದಲ್ಲಿ, ಎದೆ ಮತ್ತು ಕರುಳಿನ ಮಧ್ಯಭಾಗದಲ್ಲಿರುವ 'ಪರದೆ'ಯನ್ನು 'ವಪೆ' ಎಂದು ಕರೆಯುತ್ತಾರೆ.

ಅಷ್ಟಾವಕ್ರೀಯಮತ್ರೈವ ವಿವಾದೇ ಯತ್ರ ವಂದಿನಃ ।
ವಿಜಿತ್ಯ ಸಾಗರಂ ಪ್ರಾಪ್ತಂ ಪಿತರಂ ಲಬ್ಧವಾನೃಷಿಃ ॥೧೨೫॥

ಇಲ್ಲಿ ಅಷ್ಟಾವಕ್ರನ ಉಪಾಖ್ಯಾನವೂ ಇದೆ. ವರುಣನ ಪುತ್ರನೊಬ್ಬನು ಭೂಮಿಗೆ ಬಂದು ಜನಕರಾಜನ ವಂದಿಯಾಗಿ ಕೆಲಸ ಮಾಡುತ್ತಿದ್ದು. ಬಂದ ಬ್ರಾಹ್ಮಣರಿಗೆಲ್ಲಾ ಪ್ರಶ್ನೆಯನ್ನು ಕೇಳಿ, ನಿರುತ್ತರರನ್ನಾಗಿ ಮಾಡಿ ಅವರು ಉತ್ತರವನ್ನು ಕೊಡದಿದ್ದಾಗ ಸಮುದ್ರದ ಜಲದಲ್ಲಿ ಎಸೆಯುತ್ತಿದ್ದನು. ಆಗ ಅಷ್ಟಾವಕ್ರರು ಸಭೆಗೆ ಹೋಗಿ, ಅವನನ್ನು ಸೋಲಿಸಿ ಸಮುದ್ರದಿಂದ ತನ್ನ ತಂದೆಯನ್ನು ಮತ್ತು ಉಳಿದ ಬ್ರಾಹ್ಮಣರನ್ನು ಕರೆದುಕೊಂಡು ಬಂದರು. ತನ್ನ ಮಗನ ಮೇಲೆ ಪ್ರೀತಿಯಿಂದ ವರುಣನು ತನ್ನ ಜಲದಲ್ಲಿ ಹಾಕಿದ ಯಾವ ಬ್ರಾಹ್ಮಣರನ್ನೂ ಸಂಹಾರ ಮಾಡಿರಲಿಲ್ಲ ಎಂಬ ಈ ಕಥೆಯು ಇಲ್ಲಿ ಹೇಳಲ್ಪಡುತ್ತದೆ.

ಅಜಾಸುರಸ್ಯ ಚಾತ್ಮೈವ ವಧಃ ಸಮುಪವರ್ಣ್ಯತೇ ।
ಅವಾಪ್ಯ ದಿವ್ಯಾನ್ಯಸ್ತ್ರಾಣಿ ಗುರ್ವರ್ಥೇ ಸವ್ಯಸಾಚಿನಾ ॥೧೨೬॥

ನಿವಾತಕವಚೈರ್ಯುದ್ಧಂ ಹಿರಣ್ಯಪುರವಾಸಿಭಿಃ ।
ಸಮಾಗಮಶ್ಚ ಪಾರ್ಥಸ್ಯ ಭ್ರಾತೃಭಿರ್ಗಂಧಮಾದನೇ ॥೧೨೭॥

ಇಲ್ಲಿಯೇ ಅಜಾಸುರನ ವಧೆಯು ಹೇಳಲ್ಪಡುತ್ತದೆ. ಇಂದ್ರನ ಸಲುವಾಗಿ ಅರ್ಜುನನು ದಿವ್ಯಾಸ್ತ್ರಗಳನ್ನು ಸಂಪಾದಿಸಿ ಹಿರಣ್ಯಪುರವಾಸಿಗಳಾದ ನಿವಾತಕವಚರ ಜೊತೆಯಲ್ಲಿ ಮಾಡಿದ ಯುದ್ಧವು ಮತ್ತು ಗಂಧಮಾದನ ಪರ್ವತದಲ್ಲಿ ಅರ್ಜುನನಿಗೆ ಸಹೋದರರ ಸಮಾಗಮವು ಹೇಳಲ್ಪಡುತ್ತದೆ.

ಘೋಷಯಾತ್ರಾ ಚ ಗಂಧರ್ವೈರ್ಯತ್ರ ಯುದ್ಧಂ ಕಿರೀಟಿನಃ ।
ಜಯದ್ರಥೇನಾಪಹಾರೋ ದ್ರೌಪದ್ಯಾಶ್ಚಾಶ್ರಮಾಂತರಾತ್ ।
ಯತ್ರೈನಮನ್ವಗಾದ್ ಭೀಮೋ ವಾಯುವೇಗಸಮೋ ಜವೇ ॥೧೨೮॥

ಅನಂತರ ಘೋಷಯಾತ್ರೆಗೆ ಹೋಗುತ್ತಾ ಅರ್ಜುನನು ಗಂಧರ್ವರ ಜೊತೆಯಲ್ಲಿ ಮಾಡಿದ ಯುದ್ಧ ಮತ್ತು ಆಶ್ರಮದಲ್ಲಿ ವಾಸಿಸುತ್ತಿದ್ದ ದ್ರೌಪದಿಯನ್ನು ಸೈಂಧವನು ಅಪಹಾರ ಮಾಡಿದ ಕಥೆಯೂ ಇದೆ. ಆಗ ವಾಯುವೇಗ ಸಮಾನವುಳ್ಳ ಭೀಮಸೇನನು ಸೈಂಧವನನ್ನು ಹಿಂಬಾಲಿಸಿದುದೂ ಸಹ ಇಲ್ಲಿ ಎಂದು ಹೇಳಲ್ಪಟ್ಟಿದೆ.

ಮಾರ್ಕಂಡೇಯಸಮಾಸ್ಯಾಯಾಮುಪಾಖ್ಯಾನಾನಿ ಸರ್ವಶಃ ।
ಸಂದರ್ಶನಂ ಚ ಕೃಷ್ಣಸ್ಯ ಸಂವಾದಶ್ಚೈವ ಸತ್ಯಯಾ ।
ವ್ರೀಹಿದ್ರೋಣಕಮಾಖ್ಯಾನಮೈಂದ್ರದ್ಯುಮ್ನಂ ತಥೈವ ಚ ॥೧೨೯॥

ಅನಂತರ ಮಾರ್ಕಂಡೇಯಸಮಾಸ್ಯಾಯಲ್ಲಿ ಅನೇಕ ಉಪಾಖ್ಯಾನಗಳು ಹೇಳಲ್ಪಟ್ಟಿವೆ. ಕೃಷ್ಣನ ಸಂದರ್ಶನ ಸತ್ಯಭಾಮೆಯ ಜೊತೆಯಲ್ಲಿ ದ್ರೌಪದಿಯ ಸಂವಾದ. ವ್ರೀಹಿದ್ರೋಣಾಖ್ಯಾನ ಮತ್ತು ಐಂದ್ರದ್ಯುಮ್ನಾಖ್ಯಾನಗಳು ಹೇಳಲ್ಪಟ್ಟಿವೆ.

ಸಾವಿತ್ರ್ಯೌದ್ದಾಲಕೀಯೇ ಚ ವೈನ್ಯೋಪಾಖ್ಯಾನಮೇವ ಚ ।
ರಾಮಾಯಣಮುಪಾಖ್ಯಾನಮತ್ಯರ್ಥಂ ಬಹುವಿಸ್ತರಮ್ ॥೧೩೦॥

ಅನಂತರ ಸಾವಿತ್ರಿಯ ಉಪಾಖ್ಯಾನ, ಉದ್ದಾಲಕರ ಉಪಾಖ್ಯಾನ, ವೈನ್ಯೋಪಾಖ್ಯಾನಗಳು ಇವೆ. ಇಲ್ಲಿಯೇ ಬಹುವಿಸ್ತಾರವಾದ ರಾಮಾಯಣದ ಉಪಾಖ್ಯಾನವೂ ಇದೆ.

ಪುನರಾಗಮನಂ ಚೈವ ತೇಷಾಂ ದ್ವೈತವನೇ ಸರಃ ।
ಆರಣೇಯಮುಪಾಖ್ಯಾನಂ ಯತ್ರ ಧರ್ಮೋऽನ್ವಗಾತ್ ಸುತಮ್ ॥

ಪಾಂಡವರಿಂದ ಪುನಃ ದ್ವೈತವನದ ಸರೋವರಕ್ಕೆ ಆಗಮನ. ಮತ್ತು ಅರಣಿಪ್ರಾಪ್ತಿಗಾಗಿ ಯಮನನ್ನು ಹಿಂಬಾಲಿಸಿದ ಯುಧಿಷ್ಠಿರನ ಕಥೆಯನ್ನೊಳಗೊಂಡ ಆರಣೇಯ ಉಪಾಖ್ಯಾನವೂ ಇದೆ.

ಜಗ್ಮುರ್ಲಬ್ಧವರಾ ಯತ್ರ ಪಾಂಡವಾಃ ಪಶ್ಚಿಮಾಂ ದಿಶಮ್ ।
ಏತದಾರಣ್ಯಕಂ ಪರ್ವ ತೃತೀಯಂ ಪರಿಕೀರ್ತಿತಮ್ ॥೧೩೨॥

ಯಮನಿಂದ ವರವನ್ನು ಪಡೆದ ಪಾಂಡವರ ಪಶ್ಚಿಮದಿಕ್ಕಿಗೆ ಪ್ರಯಾಣ. ಇಷ್ಟು ವಿಷಯಗಳು ಮೂರನೆಯ ಪರ್ವವಾದ ಆರಣ್ಯಕಪರ್ವದಲ್ಲಿ ಹೇಳಲ್ಪಟ್ಟಿವೆ.

ಅತ್ರಾಧ್ಯಾಯಶತೇ ದ್ವೇ ತು ಸಂಖ್ಯಾತೇ ಪರಮರ್ಷಿಣಾ ।
ಏಕೋನಸಪ್ತತಿಶ್ಚೈವ ತಥಾಧ್ಯಾಯಾಃ ಪ್ರಕೀರ್ತಿತಾಃ ॥೧೩೩॥

ಈ ಆರಣ್ಯಪರ್ವದಲ್ಲಿ ವೇದವ್ಯಾಸ್ಯರು ಇನ್ನೂರ ಅರವತ್ತೊಂಬತ್ತು ಅಧ್ಯಾಯಗಳಲ್ಲಿ ಕಥೆಯನ್ನು ನಿರೂಪಿಸಿದ್ದಾರೆ.

ಏಕಾದಶಸಹಸ್ರಾಣಿ ಶ್ಲೋಕಾನಾಂ ಷಟ್‌ಶತಾನಿ ಚ ।
ಚತುಃಷಷ್ಟಿಸ್ತಥಾ ಶ್ಲೋಕಾಃ ಪರ್ವಣ್ಯಸ್ಮಿನ್ ಪ್ರಕೀರ್ತಿತಾಃ ॥೧೩೪॥

ಈ ಪರ್ವದಲ್ಲಿ ಹನ್ನೊಂದು ಸಾವಿರದ ಆರುನೂರ ಅರವತ್ತ್ನಾಲ್ಕು ಶ್ಲೋಕಗಳಿವೆ.

ಅತಃ ಪರಂ ನಿಬೋಧೇದಂ ವೈರಾಟಂ ಪರ್ವ ವಿಸ್ತರಮ್ ।
ವಿರಾಟನಗರಂ ಗತ್ವಾ ಶ್ಮಶಾನೇ ವಿಪುಲಾಂ ಶಮೀಮ್ ॥೧೩೫॥
ದೃಷ್ಟ್ವಾ ಸನ್ನ್ಯದಧುಸ್ತತ್ರ ಪಾಂಡವಾ ಆಯುಧಾನ್ಯುತ ।
ಯತ್ರ ಪ್ರವಿಶ್ಯ ನಗರಂ ಛದ್ಮಭಿರ್ನ್ಯವಸಂಸ್ತದಾ ॥೧೩೬॥

ಅನಂತರ ವಿಸ್ತಾರವಾದ ವಿರಾಟಪರ್ವವೆಂದು ತಿಳಿ. ಪಾಂಡವರ ವಿರಾಟನಗರ ಗಮನ. ದಾರಿಯಲ್ಲಿ ಸ್ಮಶಾನದಲ್ಲಿ ದೊಡ್ಡ ಶಮೀವೃಕ್ಷದಲ್ಲಿ ಪಾಂಡವರ ಆಯುಧಗಳ ಸ್ಥಾಪನೆ. ಮತ್ತು ನಗರವನ್ನು ಪ್ರವೇಶಿಸಿ ಛದ್ಮವೇಷದಲ್ಲಿ ವಾಸ.

ದುರಾತ್ಮನೋ ವಧೋ ಯತ್ರ ಕೀಚಕಸ್ಯ ವೃಕೋದರಾತ್ ।
ಗೋಗ್ರಹೇ ಯತ್ರ ಪಾರ್ಥೇನ ನಿರ್ಜಿತಾಃ ಕುರವೋ ಯುಧಿ ॥೧೩೭॥

ಭೀಮಸೇನನಿಂದ ದುರಾತ್ಮನಾದ ಕೀಚಕನ ವಧೆ. ಗೋಗ್ರಹಣದಲ್ಲಿ ಅರ್ಜುನನಿಂದ ಯುದ್ಧದಲ್ಲಿ ಎಲ್ಲಾ ಕೌರವರ ಅಪಜಯ. ಇಲ್ಲಿ ಹೇಳಲ್ಪಟ್ಟಿದೆ.

ಗೋಧನಂ ಚ ವಿರಾಟಸ್ಯ ಮೋಕ್ಷಿತಂ ಯತ್ರ ಪಾಂಡವೈಃ ।
ವಿರಾಟೇನೋತ್ತರಾ ದತ್ತಾ ಸ್ನುಷಾ ಯತ್ರ ಕಿರೀಟಿನಃ ॥೧೩೮॥

ಅಭಿಮನ್ಯುಂ ಸಮುದ್ದಿಶ್ಯ ಸೌಭದ್ರಮರಿಘಾತಿನಮ್ ।
ಚತುರ್ಥಮೇತದ್ವಿಪುಲಂ ವೈರಾಟಂ ಪರ್ವ ವರ್ಣಿತಮ್ ॥೧೩೯॥

ವಿರಾಟನ ಗೋಧನವನ್ನು ಪಾಂಡವರು ವಿಮೋಚನೆಗೊಳಿಸಿದುದು, ಅರ್ಜುನನಿಗೆ ವಿರಾಟನು ಉತ್ತರೆಯನ್ನು ಕೊಡುವೆನೆಂದು ಹೇಳಿದುದು, ಅರ್ಜುನನು ಶತ್ರುಘಾತಿಯಾದ ಸುಭದ್ರೆಯ ಮಗನಾದ ಅಭಿಮನ್ಯುವಿನ ಸಲುವಾಗಿ ಸೊಸೆಯಾಗಿ ಸ್ವೀಕಾರ ಮಾಡಿದುದು ಹೇಳಲ್ಪಟ್ಟಿದೆ. ಇವೆಲ್ಲವೂ ವಿಸ್ತಾರವಾದ ನಾಲ್ಕನೆಯ ಪರ್ವವಾದ ವಿರಾಟಪರ್ವದಲ್ಲಿ ವರ್ಣಿತವಾಗಿವೆ.

ಅತ್ರ ಚೋಪರಿ ಸಂಖ್ಯಾನಂ ಅಧ್ಯಾಯಾನಾಂ ಮಹಾತ್ಮನಾ ।
ಸಪ್ತಷಷ್ಟಿರಥೋ ಪೂರ್ಣಾ ಶ್ಲೋಕಾಗ್ರಮಪಿ ಮೇ ಶೃಣು ॥೧೪೦॥

ಈ ಪರ್ವದಲ್ಲಿ ಮಹಾತ್ಮರಾದ ವ್ಯಾಸರು ಅರವತ್ತೇಳು ಅಧ್ಯಾಯಗಳನ್ನು ರಚಿಸಿದ್ದಾರೆ. ಈ ಪರ್ವದಲ್ಲಿರುವ ಶ್ಲೋಕಸಂಖ್ಯೆಯನ್ನು ಹೇಳುತ್ತೇನೆ ಕೇಳು.

ತ್ರೀಣಿ ಶ್ಲೋಕಸಹಸ್ರಾಣಿ ಪಂಚಶ್ಲೋಕಶತಾನಿ ಚ ।
ಪರ್ವಣ್ಯಸ್ಮಿನ್ ಸಮಾಖ್ಯಾತಂ ಸಂಖ್ಯಯಾ ಪರಮರ್ಷಿಣಾ ॥೧೪೧॥

ಮಹರ್ಷಿಗಳಾದ ವ್ಯಾಸರು ಈ ಪರ್ವದಲ್ಲಿ ಮೂರುಸಾವಿರ ಮತ್ತು ಮೂರು ಐದುನೂರು ಎಂದರೆ ಒಟ್ಟು ನಾಲ್ಕುಸಾವಿರದ ಐದುನೂರು ಶ್ಲೋಕಗಳನ್ನು ರಚಿಸಿದ್ದಾರೆ.

ಉದ್ಯೋಗಪರ್ವ ವಿಜ್ಞೇಯಂ ಪಂಚಮಂ ಶೃಣ್ವತಃ ಪರಮ್ ।
ಉಪಪ್ಲಾವ್ಯೇ ನಿವಿಷ್ಟೇಷು ಪಾಂಡವೇಷು ಜಿಗೀಷಯಾ ॥೧೪೨॥

ದುರ್ಯೋಧನೋಽರ್ಜುನಶ್ಚೈವ ವಾಸುದೇವಮುಪಸ್ಥಿತೌ ।
ಸಾಹಾಯ್ಯಮಸ್ಮಿನ್ ಸಮರೇ ಭವಾನ್ ನೋ ದಾತುಮರ್ಹತಿ ॥

ಮುಂದಿನ ಪರ್ವವು ಐದನೆಯದಾದ ಕೇಳುಗರಿಗೆ ಒಳ್ಳೆಯ ಫಲವನ್ನು ಕೊಡುವ ಉದ್ಯೋಗಪರ್ವವೆಂದು ತಿಳಿಯಬೇಕು. ಪಾಂಡವರು ಯುದ್ಧದಲ್ಲಿ ಜಯವನ್ನು ಗಳಿಸಿ ಉಪಪ್ಲಾವ್ಯನಗರದಲ್ಲಿ ಇರುತ್ತಿರಲು ದುರ್ಯೋಧನ ಮತ್ತು ಅರ್ಜುನರಿಂದ ಶ್ರೀಕೃಷ್ಣನ ಸಮೀಪಗಮನ ಮತ್ತು ಯುದ್ಧದಲ್ಲಿ ನಮಗೆ ಸಹಾಯ ಮಾಡಬೇಕೆಂದು ಇಬ್ಬರ ಪ್ರಾರ್ಥನೆ.

ಇತ್ಯುಕ್ತೇ ವಚನೇ ಕೃಷ್ಣೋ ಯತ್ರೋವಾಚ ಮಹಾಮನಾಃ ।
ಅಯುಧ್ಯಮಾನಮಾತ್ಮಾನಂ ಮಂತ್ರಿಣಂ ಪುರುಷರ್ಷಭೌ ॥೧೪೪॥

ಅಕ್ಷೌಹಿಣೀಂ ಚ ಸೈನ್ಯಸ್ಯ ಕಸ್ಯ ವಾ ಕಿಂ ದದಾಮ್ಯಹಮ್ ।
ವವ್ರೇ ದುರ್ಯೋಧನಃ ಸೈನ್ಯಂ ಮಂದಾತ್ಮಾ ಯತ್ರ ದುರ್ಮತಿಃ॥೧೪೫॥

ಹೀಗೆ ಕೇಳಿದಾಗ ಮಹಾಮನನಾದ ಕೃಷ್ಣನು ಆ ಪುರುಷಶ್ರೇಷ್ಠರನ್ನು ಕುರಿತು ಹೀಗೆ ಹೇಳಿದನು - 'ಯುದ್ಧಮಾಡದಿರುವ ಮಂತ್ರಿಯಾದ ನಾನು ಮತ್ತು ನನ್ನ ಇಬ್ಬರು ಮಂತ್ರಿಗಳು ಒಂದು ಕಡೆ. ನನ್ನ ಅಕ್ಷೌಹಿಣಿಸೈನ್ಯವು ಇನ್ನೊಂದು ಕಡೆ. ಯಾರಿಗೆ ಯಾವುದನ್ನು ಕೊಡಲಿ' ಎಂದು ಆಗ ದುರ್ಮತಿಯೂ ಮಂದಮತಿಯೂ ಆದ ದುರ್ಯೋಧನನು ಸೈನ್ಯವನ್ನೇ ಬೇಡಿದನು.

ಅಯುಧ್ಯಮಾನಂ ಸಚಿವಂ ವವ್ರೇ ಕೃಷ್ಣಂ ಧನಂಜಯಃ ॥೧೪೬॥

ಅರ್ಜುನನಾದರೋ ಯುದ್ಧವನ್ನು ಮಾಡದಿರುವ ಕೃಷ್ಣನನ್ನೇ ಮಂತ್ರಿಯನ್ನಾಗಿ ವರಿಸಿದನು.

ಸಂಜಯಂ ಪ್ರೇಷಯಾಮಾಸ ಶಮಾರ್ಥಂ ಪಾಂಡವಾನ್ ಪ್ರತಿ ।
ಯತ್ರ ದೂತಂ ಮಹಾರಾಜೋ ಧೃತರಾಷ್ಟ್ರಃ ಪ್ರತಾಪವಾನ್ ॥೧೪೭॥

ಪ್ರತಾಪಶಾಲಿಯಾದ ಧೃತರಾಷ್ಟ್ರ ಮಹಾರಾಜನು ಶಾಂತಿಯ ಸಲುವಾಗಿ ಪಾಂಡವರ ಬಳಿಗೆ ಸಂಜಯನನ್ನು ದೂತನನ್ನಾಗಿ ಕಳುಹಿಸಿದ ಕಥೆಯು ಇಲ್ಲಿದೆ.

ಶ್ರುತ್ವಾ ಚ ಪಾಂಡವಾನ್ ಯಾತಾನ್ ವಾಸುದೇವಪುರೋಗಮಾನ್।
ಪ್ರಜಾಗರಃ ಸಂಪ್ರಜಜ್ಞೇ ಧೃತರಾಷ್ಟ್ರಸ್ಯ ಚಿಂತಯಾ ।
ವಿದುರೋ ಯತ್ರ ವಾಕ್ಯಾನಿ ಚಿತ್ರಾಣಿ ವಿವಿಧಾನಿ ಚ ॥೧೪೮॥

ಕೃಷ್ಣನೇ ಮೊದಲಾದ ಪಾಂಡವರು ಹೊರಟುಹೋದುದನ್ನು ಕೇಳಿ ಚಿಂತೆಯಿಂದ ಧೃತರಾಷ್ಟ್ರನ ಜಾಗರಣೆ, ಚಿತ್ರವಿಚಿತ್ರವಾಕ್ಯಗಳಿಂದ ವಿದುರನಿಂದ ಅವನಿಗೆ ಉಪದೇಶ.

ಶ್ರಾವಯಾಮಾಸ ರಾಜಾನಂ ಧೃತರಾಷ್ಟ್ರಂ ಮನೀಷಿಣಮ್ ।
ತಥಾ ಸನತ್ಸುಜಾತೇನ ಯತ್ರಾಧ್ಯಾತ್ಮಮನುತ್ತಮಮ್ ।
ಮನಸ್ತಾಪಾನ್ವಿತೋ ರಾಜಾ ಶ್ರಾವಿತಃ ಶೋಕಲಾಲಸಃ ॥೧೪೯॥

ಮೇಧಾವಿಯಾದ ಧೃತರಾಷ್ಟ್ರನಿಗೆ ವಿದುರನು ಮಾಡಿದ ಉಪದೇಶ. ಮತ್ತು ಶ್ರೇಷ್ಠವಾದ ಅಧ್ಯಾತ್ಮರಸವನ್ನು ಹೊಂದಿರುವ ಸನತ್ಸುಜಾತ ಉಪಾಖ್ಯಾನವು ಇಲ್ಲಿದೆ. ಹಾಗೆಯೇ ಸನತ್ಸುಜಾತರಿಂದ ಶ್ರೇಷ್ಠವಾದ ಅಧ್ಯಾತ್ಮತತ್ವವನ್ನೊಳಗೊಂಡ ಉಪದೇಶವು ಶೋಕಲಾಲಸನಾದ ಮನಸ್ತಾಪದಿಂದ ಕೂಡಿದ ಧೃತರಾಷ್ಟ್ರನಿಗೆ ಹೇಳಲ್ಪಟ್ಟದ್ದನ್ನು ಇಲ್ಲಿಯೇ ಹೇಳಲಾಗಿದೆ.

ಪ್ರಭಾತೇ ರಾಜಸಮಿತೌ ಸಂಜಯೋ ಯತ್ರ ಚ ಪ್ರಭುಃ ।
ಏಕಾತ್ಮ್ಯಂ ವಾಸುದೇವಸ್ಯ ಪ್ರೋಕ್ತವಾನರ್ಜುನಸ್ಯ ಚ ॥೧೫೦॥

ಮರುದಿನ ಪ್ರಾತಃಕಾಲದಲ್ಲಿ ಪ್ರಭುವಾದ ಸಂಜಯನು ರಾಜಸಭೆಯಲ್ಲಿ ಕೃಷ್ಣಾರ್ಜುನರ ಸ್ನೇಹಭಾವವನ್ನು ನಿರೂಪಣೆ ಮಾಡಿದನು.

ಯತ್ರ ಕೃಷ್ಣೋ ದಯಾಪನ್ನಃ ಸಂಧಿಮಿಚ್ಛನ್ ಮಹಾಯಶಾಃ ।
ಸ್ವಯಮಾಗಾಚ್ಛಮಂ ಕರ್ತುಂ ನಗರಂ ನಾಗಸಾಹ್ವಯಮ್ ॥೧೫೧॥

ಪ್ರತ್ಯಾಖ್ಯಾನಂ ಚ ಕೃಷ್ಣಸ್ಯ ರಾಜ್ಞಾ ದುರ್ಯೋಧನೇನ ವೈ
ಶಮಾರ್ಥಂ ಯಾಚಮಾನಸ್ಯ ಪಕ್ಷಯೋರುಭಯೋರ್ಹಿತಮ್ ॥೧೫೨॥

ಮಹಾಕೀರ್ತಿವಂತನಾದ ಕೃಷ್ಣನು ದಯೆಯಿಂದ ಕೂಡಿದವನಾಗಿ, ಸಂಧಿಯನ್ನು ಬಯಸಿ, ತಾನೇ ಹಸ್ತಿನಾವತಿಗೆ ವಿರೋಧವನ್ನು ಪರಿಹಾರ ಮಾಡಲು ಬಂದ ಕಥೆಯೂ ಇಲ್ಲಿ ನಿರೂಪಿಸಲ್ಪಟ್ಟಿದೆ. ಅನಂತರ ಎರಡೂ ಪಕ್ಷದ ಹಿತದೃಷ್ಟಿಯಿಂದ ಸಂಧಿಯನ್ನು ಬೇಡುತ್ತಿರುವ ಕೃಷ್ಣನಿಗೆ ದುರ್ಯೋಧನನಿಂದ ನಿರಾಕರಣೆ.

ಕರ್ಣದುರ್ಯೋಧನಾದೀನಾಂ ದುಷ್ಟಂ ವಿಜ್ಞಾಯ ಮಂತ್ರಿತಮ್ ।
ಯೋಗೇಶ್ವರತ್ವಂ ಕೃಷ್ಣೇನ ಯತ್ರ ರಾಜಸು ದರ್ಶಿತಮ್ ॥೧೫೩॥

ಕರ್ಣದುರ್ಯೋಧನಾದಿಗಳ ದುಷ್ಟಮಂತ್ರಾಲೋಚನೆಯನ್ನು ತಿಳಿದು ನೆರೆದಿದ್ದ ರಾಜರ ಮಧ್ಯೆ ಕೃಷ್ಣನಿಂದ ವಿಶ್ವರೂಪದರ್ಶನ.

ರಥಮಾರೋಪ್ಯ ಕೃಷ್ಣೇನ ಯತ್ರ ಕರ್ಣೋ೯ಽನುಮಂತ್ರಿತಃ ।
ಉಪಾಯಪೂರ್ವಂ ಶೌಂಡಃ ಸ್ಯಾತ್ ಪ್ರತ್ಯಾಖ್ಯಾತಶ್ಚ ತೇನ ಸಃ ॥

ಸಾಮಾದಿ ಉಪಾಯಗಳಿಂದ ಮನುಷ್ಯನು ಕುಶಲನಾಗುತ್ತಾನೆ ಎಂದು ಲೋಕಶಿಕ್ಷಣವನ್ನು ಮಾಡಲು, ಕೃಷ್ಣನಿಂದ ಕರ್ಣನನ್ನು ರಥದಲ್ಲಿ ಕೂಡಿಸಿಕೊಂಡು ಮಂತ್ರಾಲೋಚನೆ ಮತ್ತು ಕರ್ಣನಿಂದ ನಿರಾಕರಣೆ.

ಶ್ವೇತಾಭಿಷೇಕಃ ಕೃಷ್ಣೋಕ್ತೋ ವಿಚಿತ್ರೋ ಬಹುವಿಸ್ತರಃ ।
ತತಶ್ಚಾತ್ರಾಭಿನಿರ್ಯಾಣಂ ನರಾಶ್ವರಥದಂತಿನಾಮ್ ।
ನಗರಾದ್ಧಸ್ತಿನಪುರಾದ್ ಬಲಸಂಖ್ಯಾನಮೇವ ಚ ॥೧೫೫॥

ಕೃಷ್ಣನಿಂದ ಬಹುವಿಸ್ತಾರವಾದ ಮತ್ತು ವಿಚಿತ್ರವಾದ ಶ್ವೇತರಾಜನ ಅಭಿಷೇಕದ ನಿರೂಪಣೆ. ಅನಂತರ ಗಜಾಶ್ವರಥಪದಾತಿಗಳು ಹಸ್ತಿನಾವತಿಯಿಂದ ಹೊರಟು, ಯುದ್ಧಭೂಮಿಯ ಕಡೆಗೆ ಪ್ರಯಾಣ ಮಾಡುವುದು ಮತ್ತು ಸೈನ್ಯದ ಗಣನೆಯು ಹೇಳಲ್ಪಟ್ಟಿದೆ.

ಯತ್ರ ರಾಜ್ಞಾ ಉಲೂಕಶ್ಚ ಪ್ರೇಷಿತಃ ಪಾಂಡವಾನ್ ಪ್ರತಿ ।
ಶ್ವೋಭಾವಿನಿ ಮಹಾಯುದ್ಧೇ ದೂತಸ್ತು ಕ್ರೂರವಾದಿನಾ ॥೧೫೬॥

ಮರುದಿವಸ ಯುದ್ಧವು ನಡೆಯಬೇಕಾಗಿರಲು ದುರ್ಯೋಧನನಿಂದ ಪಾಂಡವರನ್ನು ಕುರಿತು ಉಲೂಕನನ್ನು ದೂತನನ್ನಾಗಿ ಕಳುಹಿಸಿ, ಕ್ರೂರವಾದ ಮಾತನ್ನು ಆಡುವಂತೆ ಪ್ರಚೋದನೆ.

ರಥಾತಿರಥಸಂಖ್ಯಾನಂ ಅಂಬೋಪಾಖ್ಯಾನಮೇವ ಚ ।
ಏತತ್ಸಬಹುವೃತ್ತಾಂತಂ ಪಂಚಮಂ ಪರ್ವ ಚೋಚ್ಯತೇ ॥೧೫೭॥

ರಥ ಮತ್ತು ಅತಿರಥರ ಪರಿಗಣನೆ. ಮತ್ತು ಅಂಬೋಪಾಖ್ಯಾನ. ಇದೆಲ್ಲವೂ ಈ ಐದನೆಯ ಉದ್ಯೋಗಪರ್ವದಲ್ಲಿ ಹೇಳಲ್ಪಡುತ್ತದೆ.

ಉದ್ಯೋಗಪರ್ವ ನಿರ್ದಿಷ್ಟಂ ಸಂಧಿವಿಗ್ರಹಸಂಜ್ಞಿತಮ್ ।
ಅಧ್ಯಾಯಾಃ ಸಂಖ್ಯಯಾ ತತ್ರ ಷಡಶೀತಿಶತಂ ಸ್ಮೃತಮ್ ॥೧೫೮॥

ಈ ಉದ್ಯೋಗಪರ್ವಕ್ಕೆ ಸಂಧಿವಿಗ್ರಹಪರ್ವ ಎಂದೂ ಹೆಸರಿದೆ. ಇದರಲ್ಲಿ ಇರುವ ಅಧ್ಯಾಯಗಳು ನೂರೆಂಭತ್ತಾರು ಎಂದು ಹೇಳುತ್ತಾರೆ.

ಶ್ಲೋಕಾಃ ಸಪ್ತಸಹಸ್ರಾಣಿ ನವಶ್ಲೋಕಶತಾನಿ ಚ ।
ಶ್ಲೋಕಾಶ್ಚ ನವತಿಃ ಪ್ರೋಕ್ತಾಸ್ತಥೈವಾಷ್ಟೌ ಮಹಾತ್ಮನಾ ।
ವ್ಯಾಸೇನೋದಾರಮತಿನಾ ಪರ್ವಣ್ಯಸ್ಮಿಂಸ್ತಪೋಧನಾಃ ॥೧೫೯॥

ಎಲೈ ತಪೋಧನರೇ, ಮಹಾತ್ಮರೂ, ಉದಾರಬುದ್ಧಿಯುಳ್ಳವರೂ, ಆದ ವ್ಯಾಸರು. ಈ ಪರ್ವದಲ್ಲಿ ಏಳುಸಾವಿರದ ಒಂಭೈನೂರ ತೊಂಭತ್ತೆಂಟು ಶ್ಲೋಕಗಳನ್ನು ರಚಿಸಿದ್ದಾರೆ.

ಅತ ಊರ್ಧ್ವಂ ವಿಚಿತ್ರಾರ್ಥಂ ಭೀಷ್ಮಪರ್ವ ಪ್ರಚಕ್ಷತೇ ।
ಜಂಬೂಷಂಡವಿನಿರ್ಮಾಣಂ ಯತ್ರೋಕ್ತಂ ಸಂಜಯೇನ ಹ ॥೧೬೦॥

ಅದರಿಂದ ಮುಂದಕ್ಕೆ ವಿಚಿತ್ರವಾದ ಭೀಷ್ಮಪರ್ವವು ಇದೆ. ಅದರಲ್ಲಿ ಸಂಜಯನಿಂದ ಜಂಬೂದ್ವೀಪದ ನಿರ್ಮಾಣವು ಹೇಳಲ್ಪಡುತ್ತದೆ.

ಯತ್ರ ಯುದ್ಧಮಭೂದ್ಘೋರಂ ದಶಾಹಾನ್ಯತಿದಾರುಣಮ್ ।
ಯತ್ರ ಯೌಧಿಷ್ಠಿರಂ ಸೈನ್ಯಂ ವಿಷಾದಮಗಮತ್ಪರಮ್ ॥೧೬೧॥

ಹತ್ತುದಿನಗಳ ಕಾಲ ಅತಿದಾರುಣವಾದ ಯುದ್ಧವು ನಡೆದು ಯುಧಿಷ್ಠಿರನ ಸೈನ್ಯವು ವಿಷಾದವನ್ನು ಹೊಂದಿದ ವಿಷಯವು ಹೇಳಲ್ಪಡುತ್ತದೆ.

ಕಶ್ಮಲಂ ಯತ್ರ ಪಾರ್ಥಸ್ಯ ವಾಸುದೇವೋ ಮಹಾದ್ಯುತಿಃ ।
ಮೋಹಜಂ ನಾಶಯಾಮಾಸ ಹೇತುಭಿರ್ಮೋಕ್ಷದರ್ಶಕೈಃ ॥೧೬೨॥

ಯುದ್ಧದ ಪ್ರಾರಂಭದಲ್ಲಿ ಮೋಹಕ್ಕೆ ಒಳಗಾದ ಅರ್ಜುನನಿಗೆ ಮಹಾದ್ಯುತಿಯಾದ ಕೃಷ್ಣನು ಮೋಕ್ಷಪ್ರಾಪಕವಾದ ಹೇತುಗಳಿಂದ ಮೋಹವನ್ನು ನಾಶಮಾಡಿದ ವಿಷಯವು ಇಲ್ಲಿ ಹೇಳಲ್ಪಡುತ್ತದೆ.

ಶಿಖಂಡಿನಂ ಪುರಸ್ಕೃತ್ಯ ಯದಾ ಪಾರ್ಥೋ ಮಹಾರಥಃ ।
ವಿನಿಘ್ನನ್ ನಿಶಿತೈರ್ಬಾಣೈ ರಥಾದ್ ಭೀಷ್ಮಮಪಾತಯತ್ ।
ಷಷ್ಠಮೇತನ್ಮಹಾಪರ್ವ ಭಾರತೇ ಪರಿಕೀರ್ತಿತಮ್ ॥೧೬೩॥

ಮಹಾರಥನಾದ ಅರ್ಜುನನು ಶಿಖಂಡಿಯನ್ನು ಮುಂದೆ ಮಾಡಿಕೊಂಡು ನಿಶಿತವಾದ ಬಾಣಗಳಿಂದ ರಥದಿಂದ ಭೀಷ್ಮರನ್ನು ಬೀಳಿಸುತ್ತಾನೆ. ಮಹಾಭಾರತದಲ್ಲಿ ಇದನ್ನು ಆರನೆಯ ಪರ್ವವೆಂದು ಕರೆಯುತ್ತಾರೆ.

ಅಧ್ಯಾಯಾನಾಂ ಶತಂ ಪ್ರೋಕ್ತಂ ಅಷ್ಟಾದಶ ತಥಾಪರೇ ।
ಪಂಚ ಶ್ಲೋಕಸಹಸ್ರಾಣಿ ಸಂಖ್ಯಯಾಷ್ಟೌ ಶತಾನಿ ಚ ॥೧೬೪॥

ಶ್ಲೋಕಾಶ್ಚ ಚತುರಾಶೀತಿರಸ್ಮಿನ್ ಪರ್ವಣಿ ಕೀರ್ತಿತಾಃ ।
ವ್ಯಾಸೇನ ವೇದವಿದುಷಾ ಸಂಖ್ಯಯಾ ಭೀಷ್ಮಪರ್ವಣಿ ॥೧೬೫॥

ವೇದಜ್ಞರಾದ ವ್ಯಾಸರು ಈ ಭೀಷ್ಮಪರ್ವದಲ್ಲಿ ನೂರಹದಿನೆಂಟು ಅಧ್ಯಾಯವನ್ನು ಮತ್ತು ಐದುಸಾವಿರದ ಎಂಟುನೂರ ಎಂಭತ್ತಾ ನಲ್ಕು ಶ್ಲೋಕಗಳನ್ನು ರಚಿಸಿದ್ದಾರೆ.

ದ್ರೋಣಪರ್ವ ತತಶ್ಚಿತ್ರಂ ಬಹುವೃತ್ತಾಂತಮುಚ್ಯತೇ ।
ಯತ್ರ ಸಂಶಪ್ತಕಾಃ ಪಾರ್ಥಂ ಅಭಿಜಗ್ಮೂ ರಣಾಜಿರೇ ॥೧೬೬॥

ಅನಂತರ ಬಹುವಿಷಯವನ್ನು ಒಳಗೊಂಡ ವಿಚಿತ್ರಾರ್ಥವನ್ನು ಹೊಂದಿರುವ ದ್ರೋಣಪರ್ವವಿದೆ. ಅದರಲ್ಲಿ ಯುದ್ಧಭೂಮಿಯಲ್ಲಿ ಸಂಶಪ್ತಕರು ಅರ್ಜುನನ ಎದುರಾಗಿ ಹೋಗುತ್ತಾರೆ.

ಭಗದತ್ತೋ ಮಹಾರಾಜೋ ಯತ್ರ ಶಕ್ರಸಮೋ ಯುಧಿ ।
ಸುಪ್ರತೀಕೇನ ನಾಗೇನ ಸಹ ಶಸ್ತಃ ಕಿರೀಟಿನಾ ॥೧೬೭॥

ಅಲ್ಲಿಯೇ ಇಂದ್ರನ ಸಮಾನವಾದ ಪರಾಕ್ರಮವುಳ್ಳ ಭಗದತ್ತ ಮಹಾರಾಜನು ಯುದ್ಧದಲ್ಲಿ ಅರ್ಜುನನಿಂದ ಸುಪ್ರತೀಕಗಜದ ಜೊತೆಯಲ್ಲಿಯೇ ಸಂಹರಿಸಲ್ಪಡುತ್ತಾನೆ.

ಯತ್ರಾಭಿಮನ್ಯುಂ ಬಹವೋ ಜಘ್ನುರ್ಲೋಕಮಹಾರಥಾಃ ।
ಜಯದ್ರಥಮುಖಾ ಬಾಲಂ ಶೂರಮಪ್ರಾಪ್ತಯೌವನಮ್ ॥೧೬೮॥

ಅದರಲ್ಲಿಯೇ ಬಾಲಕನೂ ಇನ್ನೂ ಯೌವನವನ್ನು ಪಡೆಯದಿರುವವನೂ ಆದ ಅಭಿಮನ್ಯುವನ್ನು ಜಯದ್ರಥನೇ ಮೊದಲಾದ ಅನೇಕ ಮಹಾರಥರು ಒಟ್ಟಿಗೆ ಸೇರಿ ಸಂಹರಿಸುತ್ತಾರೆ.

ಹತೇऽಭಿಮನ್ಯೌ ಕ್ರುದ್ಧೇನ ಯತ್ರ ಪಾರ್ಥೇನ ಸಂಯುಗೇ ।
ಅಕ್ಷೌಹಿಣೀಃ ಸಪ್ತ ಹತ್ವಾ ಹತೋ ರಾಜಾ ಜಯದ್ರಥಃ ॥೧೬೯॥

ಅಭಿಮನ್ಯುವು ಹತನಾಗುತ್ತಿರಲು ಅರ್ಜುನನು ಕ್ರೋಧದಿಂದ ಏಳು ಅಕ್ಷೌಹಿಣಿ ಸೈನ್ಯವನ್ನು ಕೊಂದು, ಜಯದ್ರಥನನ್ನೂ ಕೊಲುತ್ತಾನೆ.

ಸಂಶಪ್ತಕಾವಶೇಷಂ ಚ ಕೃತ್ವಾ ನಿಃಶೇಷಮಾಹವೇ ।
ಅಲಂಬುಸಃ ಶ್ರುತಾಯುಶ್ಚ ಜಲಸಂಧಿಶ್ಚ ವೀರ್ಯವಾನ್ ॥೧೭೦॥

ಸೌಮದತ್ತಿರ್ವಿರಾಟಶ್ಚ ದ್ರುಪದಶ್ಚ ಮಹಾರಥಃ ।
ಘಟೋತ್ಕಚಾದಯಶ್ಚಾನ್ಯೇ ನಿಹತಾ ದ್ರೋಣಪರ್ವಣಿ ॥೧೭೧॥

ಉಳಿದುಳಿದ ಸಂಶಪ್ತಕಗಳನ್ನು ನಿಃಶೇಷವಾಗಿ ಕೊಂದು ಅರ್ಜುನನು ಅಲಂಬುಸ, ಶ್ರುತಾಯು, ಪರಾಕ್ರಮಶಾಲಿಯಾದ ಜಲಸಂಧಿ ಸೋಮದತ್ತನ ಪುತ್ರ ಭೂರಿಶ್ರವ, ಮಹಾರಥರಾದ ವಿರಾಟದ್ರುಪದರು, ಘಟೋತ್ಕಚ ಮೊದಲಾದ ಎಲ್ಲರನ್ನೂ ಸಂಹರಿಸುವ ಕಥೆಯು ಈ ದ್ರೋಣಪರ್ವದಲ್ಲಿದೆ.

ಅತ್ರ ತೇ ಪೃಥಿವೀಪಾಲಾಃ ಪ್ರಾಯಶೋ ನಿಧನಂ ಗತಾಃ ।
ದ್ರೋಣಪರ್ವಣಿ ಯೇ ಶೂರಾ ನಿರ್ದಿಷ್ಟಾಃ ಪುರುಷರ್ಷಭಾಃ ॥೧೭೨॥

ಶೂರರಾದ, ಪುರುಷಶ್ರೇಷ್ಠರಾದ ದೊಡ್ಡ ದೊಡ್ಡ ರಾಜರೆಲ್ಲರೂ ಪ್ರಾಯಶಃ ದ್ರೋಣಪರ್ವದಲ್ಲಿಯೇ ನಿಧನರಾಗುತ್ತಾರೆ.

ಅಶ್ವತ್ಥಾಮಾ ಪಿತರಿ ವೈ ದ್ರೋಣೇ ಯುದ್ಧೇ ನಿಪಾತಿತೇ ।
ಅಸ್ತ್ರಂ ಪ್ರಾದುಶ್ಚಕಾರೋಗ್ರಂ ನಾರಾಯಣಮನುತ್ತಮಮ್ ॥೧೭೩॥

ತನ್ನ ತಂದೆಯು ಯುದ್ಧದಲ್ಲಿ ಬೀಳಿಸಲ್ಪಡುತ್ತಿರಲು ಅಶ್ವತ್ಥಾಮಾಚಾರ್ಯರು ಉಗ್ರವಾದ ಮತ್ತು ಶ್ರೇಷ್ಠವಾದ ನಾರಾಯಣಾಸ್ತ್ರವನ್ನು ಪ್ರಯೋಗಿಸುತ್ತಾರೆ.

ಸಪ್ತಮಂ ಭಾರತಂ ಪರ್ವ ಮಹದೇತದುದಾಹೃತಮ್ ।
ಅಧ್ಯಾಯಾನಾಂ ಶತಂ ಪ್ರೋಕ್ತಮಧ್ಯಾಯಾಃ ಸಪ್ತತಿಃ ಸ್ಮೃತಾಃ ॥೧೭೪॥

ಈ ದೊಡ್ಡ ಪರ್ವವನ್ನು ಮಹಾಭಾರತದ ಏಳನೆಯ ಪರ್ವವೆಂದು ಕರೆಯುತ್ತಾರೆ. ಈ ದ್ರೋಣಪರ್ವದಲ್ಲಿ ನೂರಎಪ್ಪತ್ತು ಅಧ್ಯಾಯಗಳಿವೆ.

ಅಷ್ಟೌ ಶ್ಲೋಕಸಹಸ್ರಾಣಿ ತಥಾ ನವ ಶತಾನಿ ಚ ।
ಶ್ಲೋಕಾ ನವ ತಥೈವಾತ್ರ ಸಂಖ್ಯಾತಾಸ್ತತ್ತ್ವದರ್ಶಿನಾ ।
ಪಾರಾಶರ್ಯೇಣ ಮುನಿನಾ ಸಂಚಿಂತ್ಯ ದ್ರೋಣಪರ್ವಣಿ ॥೧೭೫॥

ಹಾಗೆಯೇ ಪರಾಶರರ ಪುತ್ರರಾದ ವ್ಯಾಸಮಹರ್ಷಿಗಳು ಚೆನ್ನಾಗಿ ಆಲೋಚಿಸಿ ದ್ರೋಣಪರ್ವದಲ್ಲಿ ಎಂಟುಸಾವಿರದ ಒಂಭೈನೂರ ಒಂಭತ್ತು ಶ್ಲೋಕಗಳನ್ನು ರಚಿಸಿದ್ದಾರೆ.

ಅತಃ ಪರಂ ಕರ್ಣಪರ್ವ ಪ್ರೋಚ್ಯತೇ ಪರಮಾದ್ಭುತಮ್ ।
ಸಾರಥ್ಯೇ ವಿನಿಯೋಗಶ್ಚ ಮದ್ರರಾಜಸ್ಯ ಧೀಮತಃ ।
ಆಖ್ಯಾನಂ ಯತ್ರ ಪೌರಾಣಂ ತ್ರಿಪುರಸ್ಯ ನಿಪಾತನಮ್ ॥೧೭೬॥

ಅನಂತರ ಪರಮಾದ್ಭುತವಾದ ಕರ್ಣಪರ್ವವು ನಿರೂಪಿಸಲ್ಪಡುತ್ತದೆ. ಕರ್ಣನ ಸಾರಥ್ಯದಲ್ಲಿ ಮೇಧಾವಿಯಾದ ಶಲ್ಯನ ವಿನಿಯೋಗ. ಮತ್ತು ಪುರಾಣಪ್ರಸಿದ್ಧವಾದ ತ್ರಿಪುರಸಂಹಾರರೂಪದ ಆಖ್ಯಾನವು ಇಲ್ಲಿ ಹೇಳಲ್ಪಡುತ್ತದೆ.

ಪ್ರಾಯೇಣ ಪರುಷಶ್ಚಾತ್ರ ಸಂವಾದಃ ಕರ್ಣಶಲ್ಯಯೋಃ ।
ಹಂಸಕಾಕೀಯಮಾಖ್ಯಾನಮತ್ರೈವಾಕ್ಷೇಪಸಂಯುತಮ್ ॥೧೭೭॥

ಇಲ್ಲಿ ಪ್ರಾಯಶಃ ಕ್ರೂರವಾದ ಕರ್ಣ-ಶಲ್ಯರ ಸಂವಾದವು ಆಕ್ಷೇಪಸಂಯುತವಾದ ಹಂಸಕಾಕೀಯ ಉಪಾಖ್ಯಾನವೂ ಹೇಳಲ್ಪಡುತ್ತದೆ.

ಒಂದು ಹಂಸ ಮತ್ತು ಕಾಗೆಯು ದೂರ ಹಾರುವ ಸ್ಪರ್ಧೆಯನ್ನು ಮಾಡಿ, ಹಾರಲು ಪ್ರಾರಂಭಿಸಿದವು. ಕಾಗೆಯು ಬಹಳ ಬೇಗ ಹಾರಿ ದಣಿದು ಒಂದು ಮರದ ಮೇಲೆ ಕುಳಿತುಕೊಂಡಿತು. ಹಂಸವು ಮೊದಲಿನಿಂದಲೂ ನಿಧಾನವಾಗಿ ಹೋಗುತ್ತಾ ಆಯಾಸವಿಲ್ಲದೆ ಮಾನಸಸರೋವರವನ್ನು ತಲುಪಿತು. ಹಾಗೇ ಗರ್ವಿಷ್ಠನಾದ ನೀನು ಯುದ್ಧದ ಅಂತವನ್ನು ತಲುಪುವುದಿಲ್ಲ. ವಿನಯಶೀಲನಾದ ಅರ್ಜುನನು ಯುದ್ಧದ ಅಂತವನ್ನು ತಲುಪುತ್ತಾನೆ ಎಂಬ ಆಕ್ಷೇಪದಿಂದ ಕೂಡಿದ ಹಂಸಕಾಕೋಪಾಖ್ಯಾನವನ್ನು ಶಲ್ಯನು ಕರ್ಣನಿಗೆ ಹೇಳಿದನು.

ಅನ್ಯೋನ್ಯಂ ಪ್ರತಿ ಚ ಕ್ರೋಧೋ ಯುಧಿಷ್ಠಿರಕಿರೀಟಿನೋಃ ।
ದ್ವೈರಥೇ ಯತ್ರ ಪಾರ್ಥೇನ ಹತಃ ಕರ್ಣೋ ಮಹಾರಥಃ ॥೧೭೮॥

ಅರ್ಜುನ ಮತ್ತು ಧರ್ಮರಾಜರ ಪರಸ್ಪರ ಕ್ರೋಧವೂ ಅರ್ಜುನನಿಂದ ದ್ವಂದ್ವಯುದ್ಧದಲ್ಲಿ ಮಹಾರಥನಾದ ಕರ್ಣನ ವಧೆಯೂ ಇಲ್ಲಿ ಹೇಳಲ್ಪಡುತ್ತದೆ.

ಅಷ್ಟಮಂ ಪರ್ವ ನಿರ್ದಿಷ್ಟಮೇತದ್ಭಾರತಚಿಂತಕೈಃ ।
ಏಕೋನಸಪ್ತತಿಃ ಪ್ರೋಕ್ತಾ ಅಧ್ಯಾಯಾಃ ಕರ್ಣಪರ್ವಣಿ ॥೧೭೯॥

ಭಾರತದ ಚಿಂತನೆಯನ್ನು ಮಾಡುವವರು ಈ ಎಂಟನೆಯ ಕರ್ಣಪರ್ವದಲ್ಲಿ ಅರವತ್ತೊಂಭತ್ತು ಅಧ್ಯಾಯಗಳು ಇವೆಯೆಂದು ಹೇಳುತ್ತಾರೆ.

ಚತ್ವಾರ್ಯೇವ ಸಹಸ್ರಾಣಿ ನವ ಶ್ಲೋಕಶತಾನಿ ಚ ।
ಚತುಷ್ಪಷ್ಟಿಸ್ತಥಾ ಶ್ಲೋಕಾಃ ಪರ್ವಣ್ಯಸ್ಮಿನ್ ಪ್ರಕೀರ್ತಿತಾಃ ॥೧೮೦॥

ಹಾಗೆಯೇ ಈ ಪರ್ವದಲ್ಲಿ ನಾಲ್ಕು ಸಾವಿರದ ಒಂಭೈನೂರ ಅರವತ್ತಾ ನ್ಕಲ್ಕು ಶ್ಲೋಕಗಳು ಇವೆಯೆಂದು ಹೇಳಲ್ಪಡುತ್ತದೆ.

ಅತಃ ಪರಂ ವಿಚಿತ್ರಾರ್ಥಂ ಶಲ್ಯಪರ್ವ ಪ್ರಕೀರ್ತಿತಮ್ ।
ಹತಪ್ರವೀರೇ ಸೈನ್ಯೇ ತು ನೇತಾ ಮದ್ರೇಶ್ವರೋಽಭವತ್ ॥೧೮೧॥

ಅನಂತರ ವಿಚಿತ್ರಾರ್ಥವುಳ್ಳ ಶಲ್ಯಪರ್ವವಿದೆ. ಪ್ರಮುಖರನ್ನು ಕಳೆದುಕೊಂಡ ಕೌರವ ಸೈನ್ಯಕ್ಕೆ ಮದ್ರೇಶ್ವರನಾದ ಶಲ್ಯನು ನಾಯಕನಾದನು.

ವೃತ್ತಾನಿ ರಥಯುದ್ಧಾನಿ ಕೀರ್ತ್ಯಂತೇ ಯತ್ರ ಭಾಗಶಃ ।
ವಿನಾಶಃ ಕುರುಮುಖ್ಯಾನಾಂ ಶಲ್ಯಪರ್ವಣಿ ಕೀರ್ತಿತಃ ॥೧೮೨॥

ಆಗ ನಡೆದ ರಥಯುದ್ಧಗಳು ಇಲ್ಲಿ ಭಾಗಶಃ ಹೇಳಲ್ಪಡುತ್ತವೆ. ಕುರುಮುಖ್ಯರನಾಶವು ಈ ಶಲ್ಯಪರ್ವದಲ್ಲಿ ಕೀರ್ತಿತವಾಗಿದೆ.

ಶಲ್ಯಸ್ಯ ನಿಧನಂ ಚಾತ್ರ ಧರ್ಮರಾಜಾನ್ಮಹಾರಥಾತ್ ।
ಗದಾಯುದ್ಧಂ ತು ತುಮುಲಮತ್ರೈವ ಪರಿಕೀರ್ತಿತಮ್ ॥೧೮೩॥

ಮಹಾರಥನಾದ ಧರ್ಮರಾಜನಿಂದ ಶಲ್ಯನ ನಿಧನವೂ ತೀವ್ರವಾದ ಗದಾಯುದ್ಧವೂ ಇಲ್ಲಿಯೇ ಹೇಳಲ್ಪಟ್ಟಿದೆ.

ಸಮವಾಯೇ ತು ಯದ್ದಸ್ಯ ರಾಮಸ್ಯಾಗಮನಂ ಸ್ಮೃತಮ್ ।
ಸರಸ್ವತ್ಯಾಶ್ಚ ತೀರ್ಥಾನಾಂ ಪುಣ್ಯತಾ ಪರಿಕೀರ್ತಿತಾ ॥೧೮೪॥

ಯುದ್ಧವು ಇಷ್ಟು ತೀವ್ರವಾಗಿರುವಾಗ ಬಲರಾಮನ ಆಗಮನ ಮತ್ತು ಪ್ರತ್ಯಕ್ ಸರಸ್ವತೀನದಿಯ ಸಮೀಪದಲ್ಲಿರುವ ಪುಣ್ಯಕ್ಷೇತ್ರ ಮತ್ತು ತೀರ್ಥಗಳ ನಿರೂಪಣೆಯೂ ಇಲ್ಲಿದೆ.

ನವಮಂ ಪರ್ವ ನಿರ್ದಿಷ್ಟಂ ಏತದದ್ಭುತಮರ್ಥವತ್ ।
ಏಕೋನಷಷ್ಟಿರಧ್ಯಾಯಾಸ್ತತ್ರ ಸಂಖ್ಯಾವಿಶಾರದೈಃ ॥೧೮೫॥

ಸಂಖ್ಯಾತಾ ಬಹುವೃತ್ತಾಂತಾಃ ಶ್ಲೋಕಾಗ್ರಂ ಯತ್ರ ಶಸ್ಯತೇ ।
ತ್ರೀಣಿ ಶ್ಲೋಕಸಹಸ್ರಾಣಿ ದ್ವೇ ಶತೇ ವಿಂಶತಿಸ್ತಥಾ ।
ಮುನಿನಾ ಸಂಪ್ರಣೀತಾನಿ ಕೌರವಾಣಾಂ ಯಶೋಭೃತಾ ॥೧೮೬॥

ಅದ್ಭುತಾರ್ಥವುಳ್ಳ ಈ ಶಲ್ಯಪರ್ವವನ್ನು ಒಂಭತ್ತನೆಯ ಪರ್ವವೆಂದು ಹೇಳುತ್ತಾರೆ. ಸಂಖ್ಯಾವಿಶಾರದರು ಈ ಪರ್ವದಲ್ಲಿ ಐವತ್ತೊಂಭತ್ತು ಅಧ್ಯಾಯಗಳನ್ನು ಪರಿಗಣಿಸುತ್ತಾರೆ. ಇಲ್ಲಿ ಅನೇಕ ವೃತ್ತಾಂತಗಳು ಹೇಳಲ್ಪಟ್ಟಿವೆ. ಇದರಲ್ಲಿ ಕೌರವವಂಶದಲ್ಲಿ ಬಂದ ಪಾಂಡವರ ಕೀರ್ತಿವರ್ಧನರಾದ ವೇದವ್ಯಾಸರಿಂದ ಮೂರುಸಾವಿರದ ಇನ್ನೂರ ಇಪ್ಪತ್ತು ಶ್ಲೋಕಗಳು ರಚಿಸಲ್ಪಟ್ಟಿವೆ.

ಅತಃ ಪರಂ ಪ್ರವಕ್ಷ್ಯಾಮಿ ಸೌಪ್ತಿಕಂ ಪರ್ವ ದಾರುಣಮ್।
ಭಗ್ನೋರುಂ ಯತ್ರ ರಾಜಾನಂ ದುರ್ಯೋಧನಮಮರ್ಷಿಣಮ್॥

ವ್ಯಪಯಾತೇಷು ಪಾರ್ಥೇಷು ತ್ರಯಸ್ತೇ ಹ್ಯಾಯಯೂ ರಥಾಃ ।
ಕೃತವರ್ಮಾ ಕೃಪೋ ದ್ರೌಣಿಃ ಸಾಯಾಹ್ನೇ ರುಧಿರೋಕ್ಷಿತಾಃ ॥೧೮೮॥

ಅಲ್ಲಿಂದ ಮುಂದಕ್ಕೆ ದಾರುಣವಾದ ಸೌಪ್ತಿಕ ಪರ್ವವನ್ನು ಹೇಳುವೆನು. ತೊಡೆಯನ್ನು ಮುರಿದುಕೊಂಡು ಕ್ರೋಧದಿಂದ ದುರ್ಯೋಧನನು ರಣರಂಗದಲ್ಲಿ ಬಿದ್ದಿರಲು, ಪಾರ್ಥರೆಲ್ಲರೂ ಹೊರಟುಹೋಗುತ್ತಿರಲು ರಕ್ತಸಿಕ್ತರಾದ ಮಹಾರಥರಾದ ಕೃತವರ್ಮ, ಕೃಪ ಮತ್ತು ಅಶ್ವತ್ಥಾಮಾಚಾರ್ಯರು ಸಾಯಂಕಾಲದ ವೇಳೆಗೆ ಅಲ್ಲಿಗೆ ಬರುತ್ತಾರೆ.

ಪ್ರತಿಜಜ್ಞೇ ಧೃತಕ್ರೋಧೋ ದ್ರೌಣಿರ್ಯತ್ರ ಮಹಾರಥಃ ।
ಅಹತ್ವಾ ಸರ್ವಪಾಂಚಾಲಾನ್ ಧೃಷ್ಟದ್ಯುಮ್ನಪುರೋಗಮಾನ್ ।
ಪಾಂಡವಾಂಶ್ಚ ತಥಾಮಾತ್ಯಾನ್ನವಿಮೋಕ್ಷ್ಯಾಮಿ ದಂಸನಮ್ ॥೧೮೯॥

ಅಲ್ಲಿ ಮಹಾರಥರಾದ ಅಶ್ವತ್ಥಾಮಾಚಾರ್ಯರು ಕ್ರೋಧದಿಂದ ಧೃಷ್ಟದ್ಯುಮ್ನನೇ ಮೊದಲಾದ ಎಲ್ಲಾ ಪಾಂಚಾಲರನ್ನೂ, ಮತ್ತು ಎಲ್ಲಾ ಪಾಂಡವರನ್ನೂ ಮತ್ತು ಅವರ ಎಲ್ಲಾ ಮಂತ್ರಿಗಳನ್ನೂ ಕೊಲ್ಲುವವರೆಗೆ ನಾನು ಕವಚವನ್ನು ತೆಗೆಯುವುದಿಲ್ಲ ಎಂದು ಪ್ರತಿಜ್ಞೆಯನ್ನು ಮಾಡುತ್ತಾರೆ.

ಪ್ರಸುಪ್ತಾನ್ ನಿಶಿ ವಿಸ್ರಬ್ಧಾನ್ ಯತ್ರ ತೇ ಪುರುಷರ್ಷಭಾಃ ।
ಪಾಂಚಾಲಾನ್ ಸಪರೀವಾರಾನ್ ಜಘ್ನು ರ್ದ್ರೌಣಿಪುರೋಗಮಾಃ ॥

ಆ ಪುರುಷಶ್ರೇಷ್ಠರಾದ ಅಶ್ವತ್ಥಾಮಾಚಾರ್ಯರೇ ಮೊದಲಾದವರು ರಾತ್ರಿಯ ವೇಳೆಯಲ್ಲಿ ಸುಖನಿದ್ರೆಯಲ್ಲಿದ್ದ ಪಾಂಚಾಲರನ್ನೂ ಅವರ ಪರಿವಾರವನ್ನೂ ಕೊಲ್ಲುತ್ತಾರೆ.

ಯತ್ರಾಮುಚ್ಯಂತ ಪಾರ್ಥಾಸ್ತೇ ಪಂಚ ಕೃಷ್ಣಬಲಾಶ್ರಯಾತ್ ।
ಸಾತ್ಯಕಿಶ್ಚ ಮಹೇಷ್ವಾಸಃ ಶೇಷಾಸ್ತೇ ನಿಧನಂ ಗತಾಃ ॥೧೯೧॥

ಕೃಷ್ಣನ ಅನುಗ್ರಹದಿಂದ ಆ ವಧೆಯ ಸಂದರ್ಭದಲ್ಲಿ ಪಂಚಪಾಂಡವರು ಮತ್ತು ಮಹೇಷ್ವಾಸನಾದ ಸಾತ್ಯಕಿಯು ಮಾತ್ರ ಉಳಿಯುತ್ತಾರೆ. ಉಳಿದವರೆಲ್ಲರೂ ನಿಧನವನ್ನು ಹೊಂದುತ್ತಾರೆ.

ದ್ರೌಪದೀ ಪುತ್ರಶೋಕಾರ್ತಾ ಪುತ್ರಭ್ರಾತೃವಧಾರ್ದಿತಾ ।
ಕೃತಾನಶನಸಂಕಲ್ಪಾ ಯತ್ರ ಭರ್ತ್ರಾನುಪಾವಿಶತ್ ॥೧೯೨॥

ಪುತ್ರವಧೆಯಿಂದ ದುಃಖಕ್ಕೆ ಒಳಗಾದ ದ್ರೌಪದಿಯು ಶೋಕದಿಂದ ತನ್ನ ಪತಿಯರ ಮುಂದೆ ನಿರಶನವ್ರತವನ್ನು ಸಂಕಲ್ಪಿಸಿ ಕುಳಿತುಕೊಳ್ಳುತ್ತಾಳೆ.

ದ್ರೌಪದೀವಚನಾದ್ ಯತ್ರ ಭೀಮೋ ಭೀಮಪರಾಕ್ರಮಃ ।
ಅನ್ವಧಾವತ ಸಂಕ್ರುದ್ಧೋ ಭಾರದ್ವಾಜಂ ಗುರೋಃ ಸುತಮ್॥೧೯೩॥

ದ್ರೌಪದಿಯ ವಚನದಂತೆ ಭೀಮಪರಾಕ್ರಮನಾದ ಭೀಮನು ಸಂಕ್ರುದ್ಧನಾಗಿ ದ್ರೋಣಾಚಾರ್ಯರ ಮಕ್ಕಳಾದ ಅಶ್ವತ್ಥಾಮಾಚಾರ್ಯರನ್ನು ಹಿಡಿಯಲು ಓಡಿಹೋಗುತ್ತಾನೆ.

ಭೀಮಸೇನಭಯಾದ್ಯತ್ರ ದೈವೇನ ಪ್ರತಿಚೋದಿತಃ ।
ಅಪಾಂಡವಾಯ ಚ ರುಷಾ ದ್ರೌಣಿರಸ್ತ್ರಮವಾಸೃಜತ್ ॥೧೯೪॥

ಭೀಮಸೇನನ ಭಯದಿಂದಲೂ, ದೈವಪ್ರೇರಣೆಯಿಂದಲೂ ಅಶ್ವತ್ಥಾಮರು ಪಾಂಡವರನ್ನು ವಿನಾಶಮಾಡಲು ರೋಷದಿಂದ ಬ್ರಹ್ಮಾಸ್ತ್ರವನ್ನು ಪ್ರಯೋಗಿಸುತ್ತಾರೆ.

ಮೈವಮಿತ್ಯಬ್ರವೀತ್ ಕೃಷ್ಣಃ ಶಮಯಂಸ್ತಸ್ಯ ತದ್ವಚಃ ।
ಯತ್ತಾಸ್ತ್ರಮಸ್ತ್ರೇಣ ಚ ತಚ್ಛಮಯಾಮಾಸ ಫಲ್ಗುನಃ ।
ಕೃಷ್ಣದ್ವೈಪಾಯನಾದೀನಾಂ ಶಾಪಾಚ್ಚಾನ್ಯೋನ್ಯಕಾರಿತಾಃ ॥೧೯೫॥

ಅಶ್ವತ್ಥಾಮಾಚಾರ್ಯರು ಆಡಿದ ಕೆಟ್ಟಮಾತುಗಳನ್ನು ಹಿಂದಕ್ಕೆ ತೆಗೆದುಕೊಳ್ಳಿ ಎಂದು ಹೇಳಿ, ಕೃಷ್ಣನು ಅರ್ಜುನನ ಅಸ್ತ್ರದಿಂದ ಅಶ್ವತ್ಥಾಮಾಚಾರ್ಯರ ಅಸ್ತ್ರವನ್ನು ಉಪಶಮನಗೊಳಿಸುತ್ತಾನೆ. ಕೃಷ್ಣನು ರಕ್ತ ಮತ್ತು ಕೀವುಗಳ ವಾಸನೆಯುಳ್ಳ ದೇಹವುಳ್ಳವನಾಗು ಎಂದು ಅಶ್ವತ್ಥಾಮರಿಗೆ ಕೊಟ್ಟ ಶಾಪವನ್ನು ವೇದವ್ಯಾಸರು ಅನುಮೋದಿಸುತ್ತಾರೆ. (ಅಶ್ವತ್ಥಾಮರ ಪ್ರತಿಜ್ಞೆಯನ್ನು ಕೃಷ್ಣ ತನ್ನ ಸಾಮರ್ಥ್ಯದಿಂದ ವ್ಯರ್ಥ ಮಾಡಿದ. ಒಟ್ಟಿನಲ್ಲಿ ಸತ್ಯಸಂಧನಾದ ಕೃಷ್ಣನ ಪ್ರತಿಜ್ಞೆಯ ಮುಂದೆ ಅಶ್ವತ್ಥಾಮರ ಪ್ರತಿಜ್ಞೆಯು ಸುಳ್ಳಾಯಿತು ಎಂದು ಭಾವ).

ತೋಯಕರ್ಮಣಿ ಸರ್ವೇಷಾಂ ರಾಜ್ಞಾಮುದಕದಾನಿಕೇ ।
ಗೂಢೋತ್ಪನ್ನಸ್ಯ ಚಾಖ್ಯಾನಂ ಕರ್ಣಸ್ಯ ಪೃಥಯಾತ್ಮನಃ ।
ಸುತಸ್ಯೈತದಿಹ ಪ್ರೋಕ್ತಂ ದಶಮಂ ಪರ್ವ ಸೌಪ್ತಿಕಮ್ ॥೧೯೬॥

ಮೃತರಾದ ಎಲ್ಲ ರಾಜರುಗಳಿಗೆ ಉದಕಕ್ರಿಯೆಯನ್ನು ಮಾಡುವಾಗ ಕುಂತಿಯು ರಹಸ್ಯವಾದ ಕರ್ಣನ ಜನ್ಮವೃತ್ತಾಂತವನ್ನು ಹೇಳುತ್ತಾಳೆ. ಈ ಹತ್ತನೆಯ ಪರ್ವವು ಸೌಪ್ತಿಕಪರ್ವವೆಂದು ಕರೆಯಲ್ಪಡುತ್ತದೆ.

ಅಷ್ಟಾದಶಾಸ್ಮಿನ್ನಧ್ಯಾಯಾಃ ಪರ್ವಣ್ಯುಕ್ತಾ ಮಹಾತ್ಮನಾ ।
ಶ್ಲೋಕಾಗ್ರಂ ಚಾತ್ರ ಕಥಿತಂ ಶತಾನ್ಯಷ್ಟೌ ತಥೈವ ಚ ॥೧೯೭॥

ಶ್ಲೋಕಾಶ್ಚ ಸಪ್ತತಿಃ ಪ್ರೋಕ್ತಾ ಯಥಾವದನುಸಂಖ್ಯಯಾ ।
ಸೌಪ್ತಿಕೈಷೀಕಸಂಬಂಧೇ ಪರ್ವಣ್ಯುತ್ತಮತೇಜಸೀ ॥೧೯೮॥

ಮಹಾತ್ಮರಾದ ವ್ಯಾಸರು ಈ ಸೌಪ್ತಿಕ ಪರ್ವದಲ್ಲಿ ಹದಿನೆಂಟು ಅಧ್ಯಾಯಗಳನ್ನು ಮತ್ತು ಎಂಟನೂರ ಎಪ್ಪತ್ತು ಶ್ಲೋಕಗಳನ್ನು ರಚಿಸಿದ್ದಾರೆ. ಈ ಪರ್ವದಲ್ಲಿ ಶಿಬಿರದಲ್ಲಿ ಪಾಂಡವ ಸೈನ್ಯವು ಮಲಗಿದ್ದಾಗ ಧೃಷ್ಟದ್ಯುಮ್ನಾದಿಗಳ ಹನನ ಮುಂತಾದ ಘಟನೆಗಳು,

ಮತ್ತು ಹುಲ್ಲು ಕಡ್ಡಿಯಿಂದ ಬ್ರಹ್ಮಾಸ್ತ್ರದ ಪ್ರಯೋಗವನ್ನು ತಿಳಿಸುವ ಐಷೀಕೋಪಾಖ್ಯಾನವು ಹೇಳಲ್ಪಟ್ಟಿದೆ.

ಅತ ಊರ್ಧ್ವಮಿದಂ ಪ್ರೋಕ್ತಂ ಸ್ತ್ರೀಪರ್ವ ಕರುಣೋದಯಮ್ ।
ವಿಲಾಪೋ ವೀರಪತ್ನೀನಾಂ ಯತ್ರಾತಿಕರುಣಂ ಸ್ಮೃತಮ್ ॥೧೯೯॥

ಅನಂತರ ಮುಂದಿನದು ಕರುಣಾಜನಕವಾದ ಸ್ತ್ರೀಪರ್ವ ಎಂದು ಹೇಳಲ್ಪಡುತ್ತದೆ. ಅಲ್ಲಿ ವೀರಪತ್ನಿಯರ ಕರುಣಾಜನಕವಾದ ವಿಲಾಪವು ಇದೆ.

ಕ್ರೋಧವೇಗಃ ಪ್ರಸಾದಶ್ಚ ಗಾಂಧಾರೀಧೃತರಾಷ್ಟ್ರಯೋಃ ।
ಯತ್ರ ತಾನ್ ಕುರವಃ ಶ್ರುತ್ವಾ ವಿನಷ್ಟಾನತಿವರ್ತಿನಃ ।
ಪುತ್ರಾನ್ ಭ್ರಾತೄನ್ ಪಿತೄಂಶ್ಚೈವ ನಿಹತಾನ್ ದದೃಶೂ ರಣೇ ॥೨೦೦॥

ಗಾಂಧಾರಿ ಮತ್ತು ಧೃತರಾಷ್ಟ್ರರ ಕ್ರೋಧವೇಗವೂ ಮತ್ತು ಸಮಾಧಾನವೂ ಅಲ್ಲಿದೆ. ಧರ್ಮವನ್ನು ಮೀರಿ ನಡೆದ ಮಕ್ಕಳು, ಸಹೋದರರು, ತಂದೆಗಳು ಮುಂತಾದವರು ಯುದ್ಧದಲ್ಲಿ ಹತರಾದುದನ್ನು ಕುರುಗಳು ನೋಡುತ್ತಾರೆ.

ಯತ್ರ ರಾಜಾ ಮಹಾಪ್ರಾಜ್ಞಃ ಸರ್ವಧರ್ಮವಿದಾಂ ವರಃ ।
ರಾಜ್ಞಾಂ ತಾನಿ ಶರೀರಾಣಿ ದಾಹಯಾಮಾಸ ಶಾಸ್ತ್ರತಃ ।
ಏತದೇಕಾದಶಂ ಪ್ರೋಕ್ತಂ ಪರ್ವಾತಿಕರುಣಂ ಮಹತ್ ॥೨೦೧॥

ಅಲ್ಲಿಯೇ ಮಹಾಪ್ರಾಜ್ಞನೂ, ಸರ್ವಧರ್ಮಜ್ಞರಲ್ಲಿ ಶ್ರೇಷ್ಠನೂ ಆದ ಧರ್ಮರಾಜನು ಮೃತಶರೀರಗಳಿಗೆ ಶಾಸ್ತ್ರೀತಿಯಿಂದ ಮಾಡಿಸಿದ ಸಂಸ್ಕಾರವು ಹೇಳಲ್ಪಟ್ಟಿದೆ. ಇದು ಅತಿ ಕರುಣವಾದ ವಿಸ್ತಾರವಾದ ಹನ್ನೊಂದನೆಯ ಪರ್ವ.

ಸಪ್ತವಿಂಶತಿರಧ್ಯಾಯಾಃ ಪರ್ವಣ್ಯಸ್ಮಿನ್ನುದಾಹೃತಾ ಃ ।
ಶ್ಲೋಕಾಃ ಸಪ್ತಶತಂ ಚಾಪಿ ಪಂಚಸಪ್ತತಿರುಚ್ಯತೇ ॥೨೦೨॥

ಸಂಖ್ಯಯಾ ಭಾರತಾಖ್ಯಾನಂ ಕೃತಂ ಚಾತ್ರ ಮಹಾತ್ಮನಾ ।
ಪ್ರಣೇತಂ ಸಜ್ಜನಮನೋವೈಕ್ಲವ್ಯಾಶ್ರುಪ್ರವರ್ತನಮ್ ॥೨೦೩॥

ಈ ಪರ್ವದಲ್ಲಿ ಇಪ್ಪತ್ತೇಳು ಅಧ್ಯಾಯಗಳಿವೆ. ಮಹಾತ್ಮರಾದ ವ್ಯಾಸರು ಸಜ್ಜನರ ಮನಸ್ಸಿನ ವೈಫಲ್ಯಕ್ಕೂ ಮತ್ತು ಅಶ್ರುಧಾರೆಗೂ ಕಾರಣವಾದ ಏಳುನೂರು ಎಪ್ಪತ್ತೈದು ಶ್ಲೋಕಗಳನ್ನು ಇಲ್ಲೇ ರಚಿಸಿದ್ದಾರೆ.

ಅತಃ ಪರಂ ಶಾಂತಿಪರ್ವ ದ್ವಾದಶಂ ಬುದ್ಧಿವರ್ತನಮ್ ।
ಯತ್ರ ನಿರ್ವೇದಮಾಪೇದೇ ಧರ್ಮರಾಜೋ ಯುಧಿಷ್ಠಿರಃ ।
ಘಾತಯಿತ್ವಾ ಪಿತೄನ್ ಭ್ರಾತೄನ್ ಪುತ್ರಾನ್ ಸಂಬಂಧಿಬಾಂಧವಾನ್ ॥

ಅನಂತರ, ಸದ್ಬುದ್ಧಿಯನ್ನು ಪ್ರಚೋದಿಸುವ ಹನ್ನೆರಡನೆಯ ಶಾಂತಿ ಪರ್ವವಿದೆ. ತಂದೆಗಳನ್ನೂ, ಸಹೋದರರನ್ನೂ, ಮಕ್ಕಳನ್ನೂ, ಸಂಬಂಧಿಬಾಂಧವರನ್ನೂ, ಸಂಹಾರಮಾಡಿಸಿದ ಧರ್ಮರಾಜನಾದ ಯುಧಿಷ್ಠಿರನು ಅಲ್ಲಿ ವೈರಾಗ್ಯವನ್ನು ತಾಳುತ್ತಾನೆ.

ಶಾಂತಿಪರ್ವಣಿ ಧರ್ಮಾಶ್ಚ ವ್ಯಾಹೃತಾಃ ಶರತಲ್ಪಿಕಾಃ ।
ರಾಜಭಿರ್ವೇದಿತವ್ಯಾ ಯೇ ಸಮ್ಯಗರ್ಥಂ ಬುಭುತ್ಸುಭಿಃ ॥೨೦೫॥

ಶಾಂತಿಪರ್ವದಲ್ಲಿ ಶರತಲ್ಪದಲ್ಲಿ ಮಲಗಿದ ಭೀಷ್ಮರು ರಾಜರು ಅವಶ್ಯವಾಗಿ ತಿಳಿಯಬೇಕಾದ ಧರ್ಮಗಳನ್ನೂ, ಬುಭುತ್ಸುಗಳು ಅವಶ್ಯವಾಗಿ ತಿಳಿಯಬೇಕಾದ ವಿಷಯಗಳನ್ನು ನಿರೂಪಿಸಿದ್ದಾರೆ.

ಆಪದ್ಧರ್ಮಾಶ್ಚ ತತ್ರೈವ ಕಾಲಭೇದಪ್ರದರ್ಶಕಾಃ ।
ಯಾನ್ ಬುದ್ಧ್ವಾ ಪುರುಷಃ ಸಮ್ಯಕ್ ಸರ್ವಜ್ಞತ್ವಮವಾಪ್ನುಯಾತ್ ।
ಮೋಕ್ಷಧರ್ಮಾಶ್ಚ ವಿವಿಧಾ ವಿಚಿತ್ರಾ ಬಹುವಿಸ್ತರಾಃ ॥೨೦೬॥

ಕಾಲಭೇದದಿಂದ ಭಿನ್ನವಾದ ಆಪದ್ಧರ್ಮಗಳೂ, ಬಹುವಿಧವಾದ ವಿಚಿತ್ರವಾದ, ಬಹುವಿಸ್ತಾರವಾದ ಮೋಕ್ಷಧರ್ಮಗಳೂ ಸಹ ಅಲ್ಲಿ ಹೇಳಲ್ಪಟ್ಟಿದೆ. ಅವುಗಳನ್ನು ಕೇಳಿದ ಪುರುಷನು ಒಳ್ಳೆಯ ಸರ್ವಜ್ಞತ್ವವನ್ನು ಹೊಂದಬಹುದು.

ದ್ವಾದಶಂ ಪರ್ವ ನಿರ್ದಿಷ್ಟಮೇತತ್ ಪ್ರಾಜ್ಞಜನಪ್ರಿಯಮ್ ।
ಪರ್ವಣ್ಯತ್ರ ಪರಿಜ್ಞೇಯಮಧ್ಯಾಯಾನಾಂ ಶತತ್ರಯಮ್ ।
ತ್ರಿಂಶಚ್ಚೈವ ತಥಾಧ್ಯಾಯಾ ನವ ಚೈವ ತಪೋಧನಾಃ ॥೨೦೭॥

ಇದು ಪ್ರಾಜ್ಞಜನಪ್ರಿಯವಾದ ಹನ್ನೆರಡನೆಯ ಪರ್ವವೆಂದು ಹೇಳಲ್ಪಡುತ್ತದೆ. ಎಲೈ ತಪೋಧನರೇ, ಈ ಪರ್ವದಲ್ಲಿ ಮುನ್ನೂರಮೂವತ್ತೊಂಬತ್ತು ಅಧ್ಯಾಯಗಳಿವೆ.

ಶ್ಲೋಕಾನಾಂ ಚ ಸಹಸ್ರಾಣಿ ಕೀರ್ತಿತಾನಿ ಚತುರ್ದಶ ।
ಪಂಚ ಚೈವ ಶತಾನ್ಯಾಹುಃ ಪಂಚವಿಂಶತಿಸಂಖ್ಯಯಾ ॥೨೦೮॥

ಈ ಪರ್ವದಲ್ಲಿ ಗಣನೆ ಮಾಡಿದರೆ ಹದಿನಾಲ್ಕುಸಾವಿರದ ಐನೂರ ಇಪ್ಪತ್ತೈದು ಶ್ಲೋಕಗಳಿವೆ.

ಅತ ಊರ್ಧ್ವಂ ತು ವಿಜ್ಞೇಯಮಾನುಶಾಸನಿಕಂ ಪರಮ್ ।
ಯತ್ರ ಪ್ರಕೃತಿಮಾಪನ್ನಃ ಶ್ರುತ್ವಾ ಧರ್ಮವಿನಿಶ್ಚಯಾನ್ ।
ಭೀಷ್ಮಾದ್ ಭಾಗೀರಥೀಪುತ್ರಾತ್ ಕುರುರಾಜೋ ಯುಧಿಷ್ಠಿರಃ ॥೨೦೯॥

ಅಲ್ಲಿಂದ ಮುಂದಕ್ಕೆ ಆನುಶಾಸನಿಕಪರ್ವವೆಂದು ತಿಳಿಯಬೇಕು. ಎಲ್ಲಿ ಕುರುರಾಜನಾದ ಯುಧಿಷ್ಠಿರನು ಗಂಗಾಪುತ್ರರಾದ ಭೀಷ್ಮರಿಂದ ಧರ್ಮನಿಶ್ಚಯವನ್ನು ಕೇಳಿ ಸಮಾಧಾನವನ್ನು ಹೊಂದುತ್ತಾನೋ ಅದು ಅಂತಹ ಪರ್ವ.

ವ್ಯವಹಾರೋಽತ್ರ ಕಾರ್ತ್ಸ್ನ್ಯೇನ ಧರ್ಮಾರ್ಥೌ ಯೌ ನಿದರ್ಶಿತಃ ।
ವಿವಿಧಾನಾಂ ಚ ದಾನಾನಾಂ ಫಲಯೋಗಾಃ ಪೃಥಗ್ವಿಧಾಃ ॥೨೧೦॥

ಇಲ್ಲಿ ಎಲ್ಲರೀತಿಯ ವ್ಯವಹಾರಗಳೂ, ಧರ್ಮ ಮತ್ತು ಅರ್ಥಗಳೂ ಸಂಪೂರ್ಣವಾಗಿ ನಿರೂಪಿಸಲ್ಪಟ್ಟಿವೆ. ವಿವಿಧವಾದ ದಾನಗಳಿಗೆ ಉಂಟಾಗುವ ವಿವಿಧ ಫಲಗಳೂ ಸಹ ನಿರೂಪಿಸಲ್ಪಟ್ಟಿವೆ.

ತಥಾ ಪಾತ್ರವಿಶೇಷಾಶ್ಚ ದಾನಾನಾಂ ಚ ಪರೋ ವಿಧಿಃ ।
ಆಚಾರವಿಧಿಯೋಗಶ್ಚ ಸತ್ಯಸ್ಯ ಚ ಪರಾ ಗತಿಃ ।
ಏತತ್ ಸುಬಹುವೃತ್ತಾಂತಂ ಉತ್ತಮಂ ಧರ್ಮಶಾಸನಮ್ ॥೨೧೧॥

ಇಲ್ಲಿ ದಾನಕ್ಕೆ ಅರ್ಹರಾದ ವಿಶೇಷಪಾತ್ರರನ್ನೂ, ದಾನಗಳನ್ನು ಮಾಡುವ ಉತ್ತಮ ರೀತಿಯನ್ನೂ, ಆಚಾರವಿಧಿಗಳನ್ನೂ, ಸತ್ಯದ ಸ್ವರೂಪವನ್ನೂ ಹೇಳಲಾಗಿದೆ. ಈ ಪರ್ವವು ಬಹುವೃತ್ತಾಂತಗಳಿಂದ ಕೂಡಿದ್ದು ಉತ್ತಮವಾದ ಧರ್ಮಶಾಸನವಾಗಿದೆ.

ಭೀಷ್ಮಸ್ಯಾತ್ರೈವ ಸಂಪ್ರಾಪ್ತಿಃ ಸ್ವರ್ಗಸ್ಯ ಪರಿಕೀರ್ತಿತಾ ॥೨೧೨॥

ಭೀಷ್ಮರ ಸ್ವರ್ಗಪ್ರಾಪ್ತಿಯೂ ಸಹ ಇಲ್ಲಿಯೇ ಹೇಳಲ್ಪಟ್ಟಿದೆ.

ಏತತ್ ತ್ರಯೋದಶಂ ಪರ್ವ ಧರ್ಮನಿಶ್ಚಯಕಾರಣಮ್ ।
ಅಧ್ಯಾಯಾನಾಂ ಶತಂ ತ್ವತ್ರ, ಷಟ್‌ಪಂಚಾಶಚ್ಚತೋತ್ತರಮ್ ।
ಶ್ಲೋಕಾನಾಂ ಚ ಸಹಸ್ರಾಣಿ ದ್ವಾದಶೌಚೇತಿ ಕೀರ್ತ್ಯತೇ ॥೨೧೩॥

ಇದು ಧರ್ಮನಿಶ್ಚಯಕಾರಣವಾದ ಹದಿಮೂರನೆಯ ಪರ್ವ. ಇದರಲ್ಲಿ ನೂರೈವತ್ತಾರು ಅಧ್ಯಾಯಗಳು ಮತ್ತು ಹನ್ನೆರಡುಸಾವಿರ ಶ್ಲೋಕಗಳೂ ಇವೆ.

ಅತೋಽಶ್ವಮೇಧಿಕಂ ನಾಮ ಪರ್ವ ಪ್ರೋಕ್ತಂ ಚತುರ್ದಶಮ್ ।
ತತ್ಸಂವರ್ತಮರುತ್ತೀಯಂ ಅತ್ಯಾಖ್ಯಾನಮನುತ್ತಮಮ್ ॥೨೧೪॥

ಅನಂತರ, ಅಶ್ವಮೇಧಿಕ ಪರ್ವವೆಂಬ ಹದಿನಾಲ್ಕನೆಯ ಪರ್ವವು ಇದೆ. ಅಲ್ಲಿ ಸಂವರ್ತೋಪಾಖ್ಯಾನವೂ, ಶ್ರೇಷ್ಠವಾದ ಮರುತ್ತರ ಉಪಾಖ್ಯಾನವೂ ಇದೆ.

ಸುವರ್ಣಕೋಶಸಂಪ್ರಾಪ್ತಿರ್ಜನ್ಮ ಚೋಕ್ತಂ ಪರೀಕ್ಷಿತಃ ।
ದಗ್ಧಸ್ಯಾಸ್ತ್ರಾಗ್ನಿನಾ ಪೂರ್ವಂ ಕೃಷ್ಣಾತ್ ಸಂಜೀವನಂ ಪುನಃ ॥೨೧೫॥

ಸುವರ್ಣಕೋಶದ ಸಂಪ್ರಾಪ್ತಿಯೂ , ಪರೀಕ್ಷಿತನ ಜನ್ಮವೂ ಹೇಳಲ್ಪಟ್ಟಿದೆ ಅಶ್ವತ್ಥಾಮಾಸ್ತ್ರದಿಂದ ದಗ್ಧನಾದ ಪರೀಕ್ಷಿತನಿಗೆ ಕೃಷ್ಣನಿಂದ ಪುನಃ ಜೀವನಪ್ರದಾನವು ಹೇಳಲ್ಪಟ್ಟಿದೆ.

ಚರ್ಯಾಯಾಂ ಹಯಮುತ್ಸೃಜ್ಯ ಪಾಂಡವಸ್ಯಾನುಗಚ್ಛತಃ ।
ತತ್ರ ತತ್ರ ಚ ಯುದ್ಧಾನಿ ರಾಜಪುತ್ರೈರಮರ್ಷಣೈಃ ॥೨೧೬॥

ಅಶ್ವಮೇಧದಲ್ಲಿ ಉತ್ಸೃಷ್ಟವಾದ ಕುದುರೆಯ ಹಿಂದೆ ಹೋಗುವ ಅರ್ಜುನನಿಗೆ ಕ್ರೋಧಯುಕ್ತರಾದ ರಾಜಪುತ್ರರಿಂದ ಅಲ್ಲಲ್ಲಿ ನಡೆದ ಯುದ್ಧಗಳು ಹೇಳಲ್ಪಟ್ಟಿವೆ.

ಚಿತ್ರಾಂಗದಾಯಾಃ ಪುತ್ರೇಣ ಪುತ್ರೈಣೈವ ಧನಂಜಯಃ ।
ಸಂಗ್ರಾಮೇ ಬಭ್ರುವಾಹೇನ ಸಂಶಯಂ ಚಾತ್ರ ಜಗ್ಮಿವಾನ್ ।
ಮಣಿದರ್ಶನಂ ತಥಾ ಚೈವ ವೈಷ್ಣವಂ ಧರ್ಮಮೇವ ಚ ॥೨೧೭॥

ಅರ್ಜುನನು ಚಿತ್ರಾಂಗದೆಯ ಮಗನಾದ ಬಭ್ರುವಾಹನನಿಂದ ಪ್ರಾಣಸಂಶಯವನ್ನು ಹೊಂದಿದುದು ಮತ್ತು ಪಾತಾಳಲೋಕದಿಂದ ತಂದ ಮೃತಸಂಜೀವಿನಿಮಣಿಯ ದರ್ಶನ, ಯುದ್ಧಮಾಡದಿರುವ ಪಿತಾಮಹರಾದ ಭೀಷ್ಮರನ್ನು ಕೊಂದ ಪಾಪಕ್ಕೆ ಪ್ರಾಯಶ್ಚಿತ್ತರೂಪವಾಗಿ ತನ್ನ ಪುತ್ರರಿಂದಲೇ ವಧ ಎಂಬ ವಿಷ್ಣುಪ್ರೀತಿಕರವಾದ ಧರ್ಮ ಎಲ್ಲವೂ ಇಲ್ಲಿ ಹೇಳಲ್ಪಟ್ಟಿದೆ.

ಅಶ್ವಮೇಧೇ ಮಹಾಯಜ್ಞೇ ನಕುಲಾಖ್ಯಾನಮೇವ ಚ ।
ಮರುದ್ದರ್ಶನಮೇವಾತ್ರ ವೈಷ್ಣವಂ ಧರ್ಮಮೇವ ಚ ॥೨೧೮॥

ಅಶ್ವಮೇಧ ಮಹಾಯಾಗದಲ್ಲಿ ನಕುಲ ಪ್ರಸಂಗವೂ, ದೇವತೆಗಳ ದರ್ಶನವೂ ಮತ್ತು ಪರ್ವದ ಕೊನೆಯವರೆಗೆ ವೈಷ್ಣವ ಧರ್ಮಗಳೂ ಹೇಳಲ್ಪಟ್ಟಿವೆ.

ಇತ್ಯಾಶ್ವಮೇಧಿಕಂ ಪರ್ವ ಪ್ರೋಕ್ತಮೇತನ್ಮಹಾದ್ಭುತಮ್ ।
ಅತ್ರಾಧ್ಯಾಯಶತಂ ತ್ರಿಂಶತ್ ತ್ರಯೋऽಧ್ಯಾಯಾಶ್ಚ ಶಬ್ದಿತಾಃ ॥೨೧೯॥

ಮಹಾದ್ಭುತವಾದ ಇದನ್ನು ಆಶ್ವಮೇಧಿಕ ಪರ್ವವೆಂದು ಕರೆಯುತ್ತಾರೆ. ಇದರಲ್ಲಿ ನೂರಮೂವತ್ಮೂರು ಅಧ್ಯಾಯಗಳು ಇವೆ.

ಚತ್ವಾರ್ಯೇವ ಸಹಸ್ರಾಣಿ ತಾವಂತ್ಯೇವ ಶತಾನಿ ಚ ।
ವಿಂಶತಿಶ್ಚ ತಥಾ ಶ್ಲೋಕಾಃ ಸಂಖ್ಯಾತಾಸ್ತದ್ದರ್ಶಿನಾ ॥೨೨೦॥

ತತ್ತದರ್ಶಿಗಳಾದ ವೇದವ್ಯಾಸರು ಇದರಲ್ಲಿ ನಾಲ್ಕುಸಾವಿರದ ನಾನ್ನೂರ ಇಪ್ಪತ್ತು ಶ್ಲೋಕಗಳನ್ನು ರಚಿಸಿದ್ದಾರೆ.

ತತಶ್ಚಾಶ್ರಮವಾಸಾಖ್ಯಂ ಪರ್ವ ಪಂಚದಶಂ ಸ್ಮೃತಮ್ ।
ಯತ್ರ ರಾಜ್ಯಂ ಪರಿತ್ಯಜ್ಯ ಗಾಂಧಾರೀಸಹಿತೋ ನೃಪಃ ।
ಧೃತರಾಷ್ಟ್ರಾಶ್ರಮಪದಂ ವಿದುರಶ್ಚ ಜಗಾಮ ಹ ॥೨೨೧॥

ಅನಂತರ, ಆಶ್ರಮವಾಸ ಪರ್ವವೆಂಬ ಹದಿನೈದನೆಯ ಪರ್ವವಿದೆ. ಅಲ್ಲಿ ಗಾಂಧಾರಿಸಹಿತನಾದ ಧೃತರಾಷ್ಟ್ರನು ರಾಜ್ಯವನ್ನು ಪರಿತ್ಯಾಗ ಮಾಡಿ ಆಶ್ರಮಕ್ಕೆ ಹೋಗುತ್ತಾನೆ. ವಿದುರನೂ ಆಶ್ರಮಕ್ಕೆ ಹೋಗುತ್ತಾನೆ.

ಯಂ ದೃಷ್ಟ್ವಾ ಪ್ರಸ್ಥಿತಂ ಸಾಧ್ವೀ ಪೃಥಾಪ್ಯನುಯಯೌ ತದಾ ।
ಪುತ್ರರಾಜ್ಯಂ ಪರಿತ್ಯಜ್ಯ ಗುರುಶುಶ್ರೂಷಣೇ ರತಾ ॥೨೨೨॥

ಅವನನ್ನು ನೋಡಿದ ಗುರುಶುಶ್ರೂಷೆಯಲ್ಲಿ ಆಸಕ್ತಳಾದ ಸಾಧ್ವಿಯಾದ ಕುಂತಿಯು ಪುತ್ರರನ್ನೂ ಮತ್ತು ರಾಜ್ಯವನ್ನೂ ತೊರೆದು ತಾನೂ ಆಶ್ರಮಕ್ಕೆ ಹೋಗುತ್ತಾಳೆ.

ಯತ್ರ ರಾಜಾ ಹತಾನ್ ಪುತ್ರಾನ್ ಪಿತೄನನ್ಯಾಂಶ್ಚ ಪಾರ್ಥಿವಾನ್।
ಲೋಕಾಂತರಗತಾನ್ ವೀರಾನಪಶ್ಯತ್ ಪುನರಾಗತಾನ್ ।
ಋಷೇಃ ಪ್ರಸಾದಾತ್ ಕೃಷ್ಣಸ್ಯ ದೃಷ್ಟ್ವಾSSಶ್ಚರ್ಯಮನುತ್ತಮಮ್ ॥

ಅಲ್ಲಿ ರಾಜನು ಯುದ್ಧದಲ್ಲಿ ಹತರಾಗಿ ಲೋಕಾಂತರಕ್ಕೆ ಹೋದ, ವೇದವ್ಯಾಸದೇವರ ಅನುಗ್ರಹದಿಂದ ಪುನಃ ಹಿಂದಿರುಗಿ ಬಂದ ಪುತ್ರರನ್ನೂ, ಪಿತೃಗಳನ್ನೂ, ಬೇರೆರಾಜರನ್ನೂ, ಶ್ರೇಷ್ಠವಾದ ಆಶ್ಚರ್ಯಕರವಾದ ಘಟನೆಯ ನಿರೂಪಣೆಯಿದೆ.

ತ್ಯಕ್ತಶೋಕಃ ಸದಾರಶ್ಚ ಸಿದ್ಧಿಂ ಪರಮಿಕಾಂ ಗತಃ ।
ಯತ್ರ ಧರ್ಮಂ ಸಮಾಶ್ರಿತ್ಯ ವಿದುರಃ ಸುಗತಿಂ ಗತಃ ।
ಸಂಜಯಶ್ಚ ಮಹಾಮಾತ್ರೋ ವಿದ್ವಾನ್ ಗಾವದ್ಗಣೇರ್ವಶೀ ॥೨೨೪॥

ಅಲ್ಲಿ ಶೋಕವನ್ನು ತೊರೆದು ಪತ್ನೀಸಹಿತನಾಗಿ ಧೃತರಾಷ್ಟ್ರನು ಪರಮಗತಿಯನ್ನು ಪಡೆಯುತ್ತಾನೆ. ವಿದುರನು ಧರ್ಮವನ್ನು ಅವಲಂಬಿಸಿ ಸದ್ಗತಿಯನ್ನು ಪಡೆಯುತ್ತಾನೆ. ಮಹಾಮಾತ್ರನೂ, ವಿದ್ವಾಂಸನೂ ಆದ ಸಂಜಯನೂ ಮತ್ತು ಅಕ್ರೂರನೂ ಸದ್ಗತಿಯನ್ನು ಪಡೆಯುತ್ತಾರೆ.

ದದರ್ಶ ನಾರದಂ ಯತ್ರ ಧರ್ಮರಾಜೋ ಯುಧಿಷ್ಠಿರಃ ।
ನಾರದಾಚ್ಚೈವ ಶುಶ್ರಾವ ವೃಷ್ಣೀನಾಂ ಕದನಂ ಮಹತ್ ॥೨೨೫॥

ಅಲ್ಲಿ ಧರ್ಮರಾಜನಾದ ಯುಧಿಷ್ಠಿರನು ನಾರದರನ್ನು ದರ್ಶನಮಾಡಿ ನಾರದರಿಂದ ವೃಷ್ಣಿಗಳಲ್ಲಿ ನಡೆದ ದೊಡ್ಡ ಕದನವನ್ನು ಹೇಳುತ್ತಾನೆ.

ಏತದಾಶ್ರಮವಾಸಾಖ್ಯಂ ಪರ್ವೋಕ್ತಂ ಸುಮಹಾದ್ಭುತಮ್।
ದ್ವಿಚತ್ವಾರಿಂಶದಧ್ಯಾಯಾಃ ಪರ್ವೈತದಭಿಸಂಖ್ಯಯಾ ॥೨೨೬॥

ಸಹಸ್ರಮೇಕಂ ಶ್ಲೋಕಾನಾಂ ನವಶ್ಲೋಕಶತಾನಿ ಚ ।
ಷಡೇವ ಚ ತಥಾ ಶ್ಲೋಕಾಃ ಸಂಖ್ಯಾತಾಸ್ತತ್ತ್ವದರ್ಶಿನಾ ॥೨೨೭॥

ಈ ಅದ್ಭುತವಾದ ಪರ್ವಕ್ಕೆ ಆಶ್ರಮವಾಸಪರ್ವವೆಂದು ಹೆಸರು. ಈ ಪರ್ವದಲ್ಲಿ ನಲವತ್ತೆರಡು ಅಧ್ಯಾಯಗಳಿವೆ. ತತ್ವದರ್ಶಿಗಳಾದ ವ್ಯಾಸರು ಇಲ್ಲಿ ಸಾವಿರದ ಒಂಬೈನೂರ ಆರು ಶ್ಲೋಕಗಳನ್ನು ರಚಿಸಿದ್ದಾರೆ.

ಅತಃ ಪರಂ ನಿಬೋಧೇದಂ ಮೌಸಲಂ ಭೃಶದಾರುಣಮ್ ।
ಯತ್ರ ತೇ ಪುರುಷವ್ಯಾಘ್ರಾಃ ಶಸ್ತ್ರಸ್ಪರ್ಶಹತಾ ಯುಧಿ ॥೨೨೮॥

ಬ್ರಹ್ಮದಂಡವಿನಿಷ್ಪಿಷ್ಟಾಃ ಸಮೀಪೇ ಲವಣಾಂಭಸಃ ।
ಆಪಾನೇ ಪಾನಗಲಿತಾ ದೈವೇನಾಭಿಪ್ರಚೋದಿತಾಃ ।
ಏರಕಾರೂಪಿಭಿಃ ಶಸ್ತ್ರೈರ್ನಿಜಘ್ನುರಿತರೇತರಮ್ ॥೨೨೯॥

ಅಲ್ಲಿಂದ ಮುಂದಕ್ಕೆ ದಾರುಣವಾದ ಮೌಸಲಪರ್ವವೆಂದು ತಿಳಿ. ಅಲ್ಲಿ ಪುರುಷವ್ಯಾಘ್ರರಾದ ಯಾದವರು ಲವಣಸಮುದ್ರದ ಸಮೀಪದಲ್ಲಿ ಬ್ರಾಹ್ಮಣಶಾಪಕ್ಕೆ ಒಳಗಾದವರಾಗಿ ಮದ್ಯಪಾನಮಾಡಿ ದುರ್ಬುದ್ಧಿಯನ್ನು ಹೊಂದಿದವರಾಗಿ ದೈವಪ್ರಚೋದಿತರಾಗಿ ಒಬ್ಬರನ್ನೊಬ್ಬರು ಶಸ್ತ್ರಗಳಂತಿದ್ದ (ಜೊಂಡಿನಿಂದ) ಕ್ರೂರವಾದ ತೃಣವಿಶೇಷದಿಂದ ಹೊಡೆದಾಡಿ ಕೊಂದರು.

ಯತ್ರ ಸರ್ವಕ್ಷಯಂ ಕೃತ್ವಾ ತಾವುಭೌ ರಾಮಕೇಶವೌ ।
ನಾತಿಚಕ್ರಾಮತುಃ ಕಾಲಂ ಪ್ರಾಪ್ತಂ ಸರ್ವಹರಂ ಪರಮ್ ॥೨೩೦॥

ಅಲ್ಲಿ ಸರ್ವಸಂಹಾರವನ್ನು ಮಾಡಿದ ರಾಮಕೃಷ್ಣರಿಬ್ಬರೂ ಸರ್ವಸಂಹಾರಕವಾದ, ಶ್ರೇಷ್ಠವಾದ ಕಾಲವನ್ನು ತಾವೂ ಮೀರಲಿಲ್ಲ.

ಯತ್ರಾರ್ಜುನೋ ದ್ವಾರವತೀಮೇತ್ಯ ಕೃಷ್ಣಾದ್ವಿನಾಕೃತಾಮ್ ।
ದೃಷ್ಟ್ವಾ ವಿಷಾದಮಗಮತ್ ಪರಾಂ ಚಾರ್ತಿಂ ನರರ್ಷಭಃ ॥೨೩೧॥

ನರಶ್ರೇಷ್ಠನಾದ ಅರ್ಜುನನು ಕೃಷ್ಣರಹಿತವಾದ ದ್ವಾರಕೆಗೆ ಬಂದು, ಅದನ್ನು ನೋಡಿ ಬಹಳ ದುಃಖವನ್ನೂ ಮತ್ತು ವಿಷಾದವನ್ನೂ ಹೊಂದಿದನು.

ಅಸತ್ಕೃತ್ಯ ಯದುಶ್ರೇಷ್ಠಂ ಮಾತುಲಂ ಶೌರಿಮಾತ್ಮನಃ ।
ದದರ್ಶ ಯದುವೀರಾಣಾಮಾಪಾನೇ ವೈಶಸಂ ಮಹತ್ ॥೨೩೨॥

ತನ್ನ ಸೋದರಮಾವನಾದ, ಯದುಶ್ರೇಷ್ಠನಾದ ವಸುದೇವನ ಮಾತನ್ನು ತಿರಸ್ಕರಿಸಿ ಮದ್ಯಪಾನವನ್ನು ಮಾಡಿ ಯದುವೀರರಿಗೆ ಉಂಟಾದ ದೊಡ್ಡ ಕದನವನ್ನು ನೋಡಿದನು.

ಶರೀರಂ ವಾಸುದೇವಸ್ಯ ರಾಮಸ್ಯ ಚ ಮಹಾತ್ಮನಃ ।
ಸಂಸ್ಕಾರಂ ಲಂಭಯಾಮಾಸ ವೃಷ್ಣೀನಾಂ ಚ ಪ್ರಧಾನತಃ ॥೨೩೩॥

ಅರ್ಜುನನು ಮಹಾತ್ಮರಾದ ಬಲರಾಮ ಮತ್ತು ಕೃಷ್ಣರ ಶರೀರಕ್ಕೂ ಮತ್ತು ಪ್ರಧಾನರಾದ ವೃಷ್ಣಿಗಳ ಶರೀರಕ್ಕೂ ಅಂತ್ಯಸಂಸ್ಕಾರವನ್ನು ನೆರವೇರಿಸಿದನು. (ದುಷ್ಪಜನರ ಮೋಹಕ್ಕೋಸ್ಕರ ಕೃಷ್ಣನು ಪ್ರಾಕೃತ ಶರೀರವನ್ನು ತೊರಿದ, ಅದನ್ನು ದಹಿಸಿದ್ದೇ ಹೊರತು ಭಗವಂತನ ವಿಶ್ವಂಭರ ರೂಪವನ್ನಲ್ಲ. ಒಂದು ವೇಳೆ ಭಗವಂತನ ವಿಶ್ವಂಭರ ರೂಪವನ್ನು ಸುಟ್ಟರೆ ಆಗ ಆ ದೇಹದಲ್ಲಿರುವ ವಿಶ್ವದ ನಾಶವೂ ಆಗಬೇಕಿತ್ತು).

ಸವೃದ್ಧಬಾಲಮಾದಾಯ ದ್ವಾರವತ್ಯಾಸ್ತತೋ ಜನಮ್ ।
ದದರ್ಶಾಪದಿ ಕಷ್ಟಾಯಾಂ ಗಾಂಡೀವಸ್ಯ ಪರಾಭವಮ್ ॥೨೩೪॥

ದ್ವಾರಕೆಯಲ್ಲಿದ್ದ ವೃದ್ಧರನ್ನೂ, ಬಾಲರನ್ನೂ ಕರೆದುಕೊಂಡು ಬರುತ್ತಾ ಮಾರ್ಗದಲ್ಲಿ ಕೆಟ್ಟ ಆಪತ್ತಿಗೆ ಒಳಗಾದವನಾಗಿ ಗಾಂಡೀವದ ಪರಾಭವವನ್ನು ನೋಡಿದನು.

ಸರ್ವೇಷಾಂ ಚೈವ ದಿವ್ಯಾನಾಮಸ್ತ್ರಾಣಾಮಪ್ರಸನ್ನತಾಮ್ ।
ನಾಶಂ ವೃಷ್ಣಿಕಳತ್ರಾಣಾಂ ಪ್ರಭಾವಾನಾಮನಿತ್ಯತಾಮ್ ॥೨೩೫॥

ಎಲ್ಲಾ ದಿವ್ಯಾಸ್ತ್ರಗಳ ಅಪ್ರಸನ್ನತೆಯನ್ನೂ, ವೃಷ್ಣಿಪತ್ನಿಯರ ನಾಶವನ್ನೂ, ಶಕ್ತಿಸಾಮರ್ಥ್ಯಗಳ ಅನಿತ್ಯತೆಯನ್ನೂ ನೋಡಿ ತಿಳಿದನು.

ದೃಷ್ಟ್ವಾ ನಿರ್ವೇದಮಾಪನ್ನೋ ವ್ಯಾಸವಾಕ್ಯಪ್ರಚೋದಿತಃ ।
ಧರ್ಮರಾಜಂ ಸಮಾಸಾದ್ಯ ಸಂನ್ಯಾಸಂ ಸಮಚೋದಯತ್ ॥೨೩೬॥

ಇತೀದಂ ಮೌಸಲಂ ಪರ್ವ ಷೋಡಶಂ ಪರಿಕೀರ್ತಿತಮ್ ।
ಅಷ್ಟಾಧ್ಯಾಯಾಃ ಪ್ರಸಂಖ್ಯಾತಾಃ ಶ್ಲೋಕಾಗ್ರಂ ಚ ಶತತ್ರಯಮ್ ॥೨೩೭॥

ನೋಡಿ ವೈರಾಗ್ಯವನ್ನು ಹೊಂದಿದ ಅರ್ಜುನನು ವೇದವ್ಯಾಸರ ವಾಕ್ಯದಿಂದ ಪ್ರೇರಿತನಾಗಿ ಧರ್ಮರಾಜನನ್ನು ಸಮೀಪಿಸಿ ಭೂಮಿಯನ್ನು ತ್ಯಾಗಮಾಡಲು ಒತ್ತಾಯಿಸಿದನು. ಇದು ಹದಿನಾರನೆಯ ಮೌಸಲಪರ್ವ. ಈ ಪರ್ವದಲ್ಲಿ ಎಂಟು ಅಧ್ಯಾಯಗಳೂ ಮತ್ತು ಮುನ್ನೂರು ಶ್ಲೋಕಗಳೂ ಇವೆ.

ಮಹಾಪ್ರಸ್ಥಾನಿಕಂ ತಸ್ಮಾದೂರ್ಧ್ವಂ ಸಪ್ತದಶಂ ಸ್ಮೃತಮ್ ।
ಯತ್ರ ರಾಜ್ಯಂ ಪರಿತ್ಯಜ್ಯ ಪಾಂಡವಾಃ ಪುರುಷರ್ಷಭಾಃ ।
ದ್ರೌಪದ್ಯಾ ಸಹಿತಾ ದೇವ್ಯಾ ಸಿದ್ಧಿಂ ಪರಮಿಕಾಂ ಗತಾಃ ॥೨೩೮॥

ಅಲ್ಲಿಂದ ಮುಂದಕ್ಕೆ ಇರುವ ಹದಿನೇಳನೆಯ ಪರ್ವವನ್ನು ಮಹಾಪ್ರಸ್ಥಾನಿಕ ಪರ್ವವೆಂದು ಹೇಳುತ್ತಾರೆ. ಅದರಲ್ಲಿ ಪುರುಷಶ್ರೇಷ್ಠರಾದ ಪಾಂಡವರು ರಾಜ್ಯವನ್ನು ಪರಿತ್ಯಾಗಮಾಡಿ ದ್ರೌಪದಿಯ ಜೊತೆಯಲ್ಲಿ ಪರಮಸಿದ್ಧಿಯನ್ನು ಪಡೆಯುತ್ತಾರೆ.

ಅಧ್ಯಾಯಾಶ್ಚ ತ್ರಯಃ ಪ್ರೋಕ್ತಾಃ ಶ್ಲೋಕಾನಾಂ ಚ ತಥಾ ಶತಮ್ ।
ವಿಂಶತಿಶ್ಚ ತಥಾ ಶ್ಲೋಕಾಃ ಸಂಖ್ಯಾತಾಸ್ತತ್ತ್ವದರ್ಶಿನಾ ॥೨೩೯॥

ಈ ಪರ್ವದಲ್ಲಿ ನೂರು ಅಧ್ಯಾಯಗಳು ಹಾಗೂ ಮುನ್ನೂರಿಪ್ಪತ್ತು ಶ್ಲೋಕಗಳು ತತ್ವದರ್ಶಿಗಳಾದ ವ್ಯಾಸರಿಂದ ರಚಿಸಲ್ಪಟ್ಟಿವೆ.

ಸ್ವರ್ಗಪರ್ವ ತತಃ ಪ್ರೋಕ್ತಂ ದಿವ್ಯಂ ಯತ್ತದಮಾನುಷಮ್ ।
ಅಧ್ಯಾಯಾಃ ಪಂಚ ಸಂಖ್ಯಾತಾಃ ಪರ್ವೈತದಭಿಸಂಖ್ಯಯಾ ।
ಶ್ಲೋಕಾನಾಂ ದ್ವೇ ಶತೇ ಚೈವ ಪ್ರಸಂಖ್ಯಾತೇ ತಪೋಧನಾಃ ॥೨೪೦॥

ಅನಂತರ, ದಿವ್ಯವಾದ ಅಮಾನುಷವಾದ ಸ್ವರ್ಗಪರ್ವವಿದೆ. ಎಲ್ಲೈ ತಪೋಧನರೇ, ಈ ಪರ್ವದಲ್ಲಿ ಐದು ಅಧ್ಯಾಯಗಳು ಮತ್ತು ಇನ್ನೂರು ಶ್ಲೋಕಗಳೂ ಇವೆ.

ಅಷ್ಟಾದಶೈವಮೇತಾನಿ ಪರ್ವಾಣ್ಯುಕ್ತಾನ್ಯಶೇಷತಃ ।
ಖಿಲೇಷು ಹರಿವಂಶಶ್ಚ ಭವಿಷ್ಯಚ್ಚೈವ ಕೀರ್ತಿತಮ್ ॥೨೪೧॥

ಹೀಗೆ ಹದಿನೆಂಟು ಪರ್ವಗಳನ್ನು ಸಮಗ್ರವಾಗಿ ಹೇಳಿದ್ದೇನೆ. ಖಿಲಗಳಲ್ಲಿ ಹರಿವಂಶವೂ ಮತ್ತು ಭವಿಷ್ಯತ್ಪರ್ವವೂ ಸೇರುತ್ತವೆ.

ಏತತ್ ಸಖಿಲಮಾಖ್ಯಾತಂ ಭಾರತಂ ಪರ್ವ ಸಂಗ್ರಹಾತ್ ।
ಅಷ್ಟಾದಶ ಸಮಾಜಗ್ಮುರಕ್ಷೌಹಿಣ್ಯೋ ಯುಯುತ್ಸಯಾ ।
ತನ್ಮಹದ್ ದಾರುಣಂ ಯುದ್ಧಮಹಾನ್ಯಷ್ಟಾದಶಾಭವತ್ ॥೨೪೨॥

ಹೀಗೆ ಖಿಲವನ್ನೂ ಸೇರಿಸಿ ಭಾರತದ ಪರ್ವಸಂಗ್ರಹವು ನನ್ನಿಂದ ಹೇಳಲ್ಪಟ್ಟಿದೆ. ಯುದ್ಧವನ್ನು ಮಾಡಲು ಹದಿನೆಂಟು ಅಕ್ಷೌಹಿಣೀ ಸೈನ್ಯವು ಒಂದುಗೂಡಿತು. ಆ ದಾರುಣವಾದ ಮಹಾಯುದ್ಧವು ಹದಿನೆಂಟು ದಿವಸಗಳ ಕಾಲ ನಡೆಯಿತು.

ಯೋ ವಿದ್ಯಾಚ್ಚತುರೋ ವೇದಾನ್ ಸಾಂಗೋಪನಿಷದೋ ದ್ವಿಜಃ ।
ನ ಚಾಖ್ಯಾನಮಿದಂ ವಿದ್ಯಾನ್ನೈವ ಸ ಸ್ಯಾದ್ ವಿಚಕ್ಷಣಃ ॥೨೪॥

ಯಾವ ಬ್ರಾಹ್ಮಣನು ನಾಲ್ಕು ವೇದಗಳನ್ನು, ವೇದಾಂಗಗಳು ಮತ್ತು ಉಪನಿಷತ್ತುಗಳ ಜೊತೆಯಲ್ಲಿ ತಿಳಿದಿದ್ದರೂ ಈ ಭಾರತಾಖ್ಯಾನವನ್ನು ತಿಳಿಯದಿದ್ದರೆ ಅವನು ವಿದ್ವಾಂಸನೇ ಆಗುವುದಿಲ್ಲ.

ಶ್ರುತ್ವಾ ತ್ವಿದಮುಪಾಖ್ಯಾನಂ ಶ್ರಾವ್ಯಮನ್ಯನ್ನ ರೋಚತೇ ।
ಪುಂಸ್ಕೋಕಿಲರುತಂ ಶ್ರುತ್ವಾ ರೂಕ್ಷಾ ಧ್ವಾಂಕ್ಷಸ್ಯ ವಾಗಿವ ॥೨೫॥

ಪುಂಸ್ಕೋಕಿಲಸ್ವರವನ್ನು ಕೇಳಿ ಕಾಗೆಯ ಒರಟಾದ ಧ್ವನಿಯು ಹೇಗೆ ರುಚಿಸುವುದಿಲ್ಲವೋ ಹಾಗೆ ಈ ಮಹಾಭಾರತ ಆಖ್ಯಾನವನ್ನು ಕೇಳಿದ ಮೇಲೆ ಬೇರೆ ಯಾವುದನ್ನೂ ಕೇಳಲು ರುಚಿಸುವುದಲ್ಲ.

ಇತಿಹಾಸೋತ್ತಮಾದಸ್ಮಾಜ್ಜಾಯಂತೇ ಕವಿಬುದ್ಧಯಃ ।
ಪಂಚಭ್ಯ ಇವ ಭೂತೇಭ್ಯೋ ಲೋಕಾಃ ಸಂವಿಧಯಸ್ತ್ರಯಃ ॥೨೬॥

ಪಂಚಭೂತಗಳಿಂದ ಎಲ್ಲ ಲೋಕಗಳ ನಿರ್ಮಾಣವಾದಂತೆ ಎಲ್ಲ ಕವಿಗಳ ಬುದ್ಧಿಗಳೂ ಈ ಶ್ರೇಷ್ಠವಾದ ಇತಿಹಾಸದಿಂದ ಉಂಟಾಗುತ್ತವೆ.

ಅಸ್ಯಾಖ್ಯಾನಸ್ಯ ವಿಷಯೇ ಪುರಾಣಂ ವರ್ತತೇ ದ್ವಿಜಾಃ ।
ಅಂತರಿಕ್ಷಸ್ಯ ವಿಷಯೇ ಪ್ರಜಾ ಇವ ಚತುರ್ವಿಧಾಃ ॥೨೭॥

ಎಲೈ ಬ್ರಾಹ್ಮಣರೇ, ಅಂತರಿಕ್ಷದಲ್ಲಿ ಚಲಿಸುವ ಸೂರ್ಯನ ವಿಷಯದಲ್ಲಿ ಬ್ರಾಹ್ಮಣ, ಕ್ಷತ್ರಿಯ, ವೈಶ್ಯ, ಶೂದ್ರರೆಂಬ ನಾಲ್ಕುವಿಧವಾದ ಪ್ರಜೆಗಳು ಗೌರವವನ್ನು ಹೊಂದಿರುವಂತೆ ಎಲ್ಲ ಪುರಾಣಗಳೂ ಈ ಭಾರತದ ಬಗ್ಗೆ ಗೌರವವನ್ನು ಸೂಚಿಸುತ್ತವೆ.

ಕ್ರಿಯಾಗುಣಾನಾಂ ಸರ್ವೇಷಾಮಿದಮಾಖ್ಯಾನಮಾಶ್ರಯಃ ।
ಇಂದ್ರಿಯಾಣಾಂ ಚ ಸರ್ವೇಷಾಂ ಚಿತ್ತೈವ ಮನಸಃ ಕ್ರಿಯಾಃ ॥೨೮॥

ಎಲ್ಲ ಇಂದ್ರಿಯಗಳ ವಿಚಿತ್ರಕ್ರಿಯೆಗಳಿಗೆ ಮನಸ್ಸು ಆಧಾರವಾದಂತೆ, ಗ್ರಂಥರಚನೆಯಲ್ಲಿರಬೇಕಾದ ಎಲ್ಲಾ ಗುಣಗಳಿಗೆ ಈ ಭಾರತದ ಆಖ್ಯಾನವು ಆಶ್ರಯವಾಗಿದೆ.

ಅನಾಶ್ರಿತ್ಯೈತದಾಖ್ಯಾನಂ ಕಥಾ ಭುವಿ ನ ವಿದ್ಯತೇ ।
ಆಹಾರಮನಪಾಶ್ರಿತ್ಯ ಶರೀರಸ್ಯೇವ ಧಾರಣಮ್ ॥೨೪೮॥

ಇದಂ ಸರ್ವೈಃ ಕವಿವರೈರಾಖ್ಯಾನಮುಪಜೀವ್ಯತೇ ।
ಉದಯಪ್ರೇಪ್ಸುಭಿರ್ಭೂತ್ಯೈರಭಿಜಾತ ಇವೇಶ್ವರಃ ॥೨೪೯॥

ಆಹಾರವನ್ನು ಆಶ್ರಯಿಸದೆ ಶರೀರವು ಹೇಗೆ ಉಳಿಯುವುದಿಲ್ಲವೋ ಹಾಗೆ ಈ ಭಾರತವನ್ನು ಉಪಜೀವಿಸದೆ ಭೂಮಿಯಲ್ಲಿ ಯಾವ ಕಥೆಯೂ ಇರುವುದಿಲ್ಲ. ಶ್ರೇಯಸ್ಕಾಮಿಗಳಾದ ಜನರು ಮತ್ಸ್ಯಕೂರ್ಮಾದಿ ಅವತಾರಗಳನ್ನು ಧರಿಸಿದ ನಾರಾಯಣನನ್ನು ಉಪಜೀವಿಸುವಂತೆ ಎಲ್ಲ ಶ್ರೇಷ್ಠ ಕವಿಗಳೂ ಈ ಭಾರತವನ್ನು ಉಪಜೀವಿಸುತ್ತಾರೆ.

ದ್ವೈಪಾಯನೌಷ್ಠಪುಟನಿಃಸೃತಮಪ್ರಮೇಯಂ
ಪುಣ್ಯಂ ಪವಿತ್ರಮಥ ಪಾಪಹರಂ ಶಿವಂ ಚ ।
ಯೋ ಭಾರತಂ ಸಮಾಧಿಗಚ್ಛತಿ ವಾಚ್ಯಮಾನಂ
ಕಿಂ ತಸ್ಯ ಪುಷ್ಕರಜಲೈರಭಿಷೇಚನೇನ ॥೨೫೦॥

ಯಾವನು ವೇದವ್ಯಾಸರ ಓಷ್ಠಪುಟಗಳಿಂದ ಹೊರಗೆ ಹರಿದುಬಂದ ಪುಣ್ಯಪ್ರದವೂ, ಪವಿತ್ರವೂ, ಪಾಪಹರವೂ, ಮಂಗಳಪ್ರದವೂ ಆದ ಈ ಭಾರತದ ಕಥೆಯನ್ನು ನಿರೂಪಿಸುವುದನ್ನು ಕೇಳುತ್ತಾನೆಯೋ ಅವನಿಗೆ ಪುಷ್ಕರತೀರ್ಥದಜಲದ ಸ್ನಾನದಿಂದ ಆಗಬೇಕಾದ ಪ್ರಯೋಜನವೇನು?

ಆಖ್ಯಾನಂ ತದಿದಮನುತ್ತಮಂ ಮಹಾರ್ಥಂ
ವಿನ್ಯಸ್ತಂ ಮಹದಿಹ ಪರ್ವಸಂಗ್ರಹೇಣ ।
ಶ್ರುತ್ವಾದೌ ಭವತಿ ನೃಣಾಂ ಸುಖಾವಗಾಹೋ
ವಿಸ್ತೀರ್ಣೇ ಲವಣಜಲೇ ಯಥಾ ಪ್ಲವೇನ ॥೨೫೧॥

ಅನೇಕ ಅರ್ಥಗಳಿಂದ ಕೂಡಿದ ಶ್ರೇಷ್ಠವಾದ ಈ ಪರ್ವಸಂಗ್ರಹಪರ್ವವು ಇಲ್ಲಿ ಅನುಕ್ರಮಣಿಕಾಪರ್ವದ ನಂತರ ವಿನ್ಯಸ್ತವಾಗಿದೆ. ಈ ಪರ್ವಸಂಗ್ರಹಪರ್ವವನ್ನು ಮೊದಲು ಕೇಳಿದ ಅಧಿಕಾರಿಗಳಿಗೆ ಲವಣಸಮುದ್ರದಲ್ಲಿ ನೌಕೆಯಿಂದ

ಪ್ರಯಾಣಮಾಡುವುದು ಎಷ್ಟು ಸುಲಭವಾಗುತ್ತದೆಯೋ ಹಾಗೆ ಮುಂದಿನ ಭಾರತದ ಕಥೆಯಲ್ಲಿ ಅವಗಾಹನೆ ಮಾಡುವುದು ಅಷ್ಟೇ ಸುಲಭವಾಗುತ್ತದೆ.

॥ ಇತಿ ಶ್ರೀಮನ್ಮಹಾಭಾರತೇ ಶತಸಹಸ್ರಿಕಾಯಾಂ ಸಂಹಿತಾಯಮಾದಿಪರ್ವಣಿ
ಪರ್ವಸಂಗ್ರಹೋ ನಾಮ ದ್ವಿತೀಯೋऽಧ್ಯಾಯಃ ॥

॥ ಪರ್ವಸಂಗ್ರಹಪರ್ವ ಸಮಾಪ್ತಮ್ ॥

ಇಲ್ಲಿಗೆ ಮಹಾಭಾರತದ ಆದಿಪರ್ವದಲ್ಲಿ ಎರಡನೆಯ ಅಧ್ಯಾಯ ಮುಗಿಯಿತು.

ಇಲ್ಲಿಗೆ ಪರ್ವಸಂಗ್ರಹಪರ್ವವು ಮುಗಿಯಿತು.

★★★★★

೩. ಪೌಷ್ಯಪರ್ವ

ಮೂರನೆಯ ಅಧ್ಯಾಯ

(ಜನಮೇಜಯನಿಗೆ ದೇವಶುನಿಯಾದ ಸರಮೆಯಿಂದ ಶಾಪ, ಶಾಪಫಲನಿವಾರಣೆಗಾಗಿ ಅವನಿಂದ ಸೋಮಶ್ರವ ಎಂಬ ಪುರೋಹಿತನ ವರಣ, ಸರ್ಪಯಾಗಕ್ಕೆ ಕಾರಣವನ್ನು ಹೇಳುತ್ತಾ ಪ್ರಸಂಗದಿಂದ ಧೌಮ್ಯಶಿಷ್ಯರಾದ ಆರುಣಿ, ಉಪಮನ್ಯು ಮತ್ತು ಬೈದರ ಚರಿತ್ರೆ, ಬೈದರ ಶಿಷ್ಯರಾದ ಉದಂಕರ ಚರಿತ್ರೆ, ಉದಂಕರಿಗೆ ಸರ್ಪಗಳ ಮೇಲೆ ದ್ವೇಷ ಮತ್ತು ಅವರಿಂದ ಸರ್ಪಯಾಗವನ್ನು ಮಾಡುವಂತೆ ಜನಮೇಜಯನಿಗೆ ಒತ್ತಾಯ)

ಸೂತಃ

ಜನಮೇಜಯಃ ಪಾರಿಕ್ಷಿತಃ ಸಹ ಭ್ರಾತೃಭಿಃ ಕುರುಕ್ಷೇತ್ರೇ
ದೀರ್ಘಸತ್ರಮಾಸ್ತೇ ಸ್ಮ । ತಸ್ಯ ಭ್ರಾತರಸ್ತ್ರಯಃ ಆಸನ್ ।
ಶ್ರುತಸೇನ ಉಗ್ರಸೇನೋ ಭೀಮಸೇನ ಇತಿ ॥
ತೇಷು ತತ್ಸತ್ರಮುಪಾಸೀನೇಷು ತತ್ರಾಭ್ಯಾಗಚ್ಛತ್ಸಾರಮೇಯಃ ॥೧॥

ಪರೀಕ್ಷಿತನ ಮಗನಾದ ಜನಮೇಜಯನು ತನ್ನ ತಮ್ಮಂದಿರಿಂದ ಸಹಿತನಾಗಿ ಕುರುಕ್ಷೇತ್ರದಲ್ಲಿ ದೀರ್ಘಸತ್ರವನ್ನು ಮಾಡಿದನು. ಅವನಿಗೆ ಮೂರು ಜನ ತಮ್ಮಂದಿರಿದ್ದರು. ಶ್ರುತಸೇನ, ಉಗ್ರಸೇನ, ಭೀಮಸೇನ ಎಂದು ಅವರ ಹೆಸರು. ಅವರು ಅಲ್ಲಿ ಕುಳಿತಿರಲು ದೇವಶುನಿಯಾದ ಸರಮೆಯ ಮಗನಾದ ಒಂದು ಶ್ವಾನವು ಅಲ್ಲಿಗೆ ಬಂದಿತು.

ಸ ಜನಮೇಜಯಸ್ಯ ಭ್ರಾತೃಭಿರ್ಹತೋ ರೋರೂಯಮಾಣೋ
ಮಾತುಃ ಸಮೀಪಮಗಮತ್ ॥೨॥

ಆ ಶ್ವಾನವು ಜನಮೇಜಯನ ತಮ್ಮಂದಿರಿಂದ ಹೊಡೆಯಲ್ಪಟ್ಟು ರೋದನವನ್ನು ಮಾಡುತ್ತಾ ತಾಯಿಯ ಸಮೀಪಕ್ಕೆ ಹೋಯಿತು.

ತಂ ಮಾತಾ ರೋರೂಯಮಾಣಮುವಾಚ । ಕಿಂ ರೋದಿಷಿ,
ಕೇನಾಸ್ಯಭಿಹತ ಇತಿ ॥೩॥

ಅತಿಶಯವಾಗಿ ಅಳುತ್ತಿದ್ದ ಆ ಶ್ವಾನವನ್ನು ಕುರಿತು ತಾಯಿಯು ಏತಕ್ಕೆ ಅಳುತ್ತಿದ್ದೀಯೆ ಯಾರು ನಿನಗೆ ಹೊಡೆದರು ಎಂದು ಕೇಳಿತು

ಸ ಏವಮುಕ್ತೋ ಮಾತರಂ ಪ್ರತ್ಯುವಾಚ ।
ಜನಮೇಜಯಸ್ಯ ಭ್ರಾತೃಭಿರ್ಹತೋಽಸ್ಮೀತಿ ॥೪॥

ಹೀಗೆ ಕೇಳಲ್ಪಟ್ಟ ಸಾರಮೇಯವು ಜನಮೇಜಯನ ತಮ್ಮಂದಿರು ಹೊಡೆದರು ಎಂದು ತಾಯಿಗೆ ಹೇಳಿತು.

ತಂ ಮಾತಾ ಪ್ರತ್ಯವೋಚತ್ ।
ವ್ಯಕ್ತಂ ತ್ವಯಾ ತತ್ರಾಪರಾದ್ಧಂ ಯೇನಾಸ್ಯಭಿಹತ ಇತಿ ॥೫॥

ಅದನ್ನು ಕುರಿತು ತಾಯಿಯು ನೀನು ಖಂಡಿತವಾಗಿ ಅಲ್ಲಿ ಏನೋ ಅಪರಾಧವನ್ನು ಮಾಡಿದ್ದೀಯೆ ಅದರಿಂದ ಹೊಡೆದಿದ್ದಾರೆ ಎಂದು ಹೇಳಿತು.

ಸ ತಾಂ ಪುನರುವಾಚ । ನಾಪರಾದ್ಧಮಿತಿ ಕಿಂಚಿತ್,
ನಾವೇಕ್ಷೇ ಹವೀಂಷಿ, ನಾವಲೀಢೇಽಕ್ಷಮಿತಿ ॥೬॥

ಸಾರಮೇಯವು ಪುನಃ ತಾಯಿಯನ್ನು ಕುರಿತು ನಾನು ಏನೂ ಅಪರಾಧವನ್ನು ಮಾಡಲಿಲ್ಲ, ಹವಿಸ್ಸನ್ನು ನೋಡಲಿಲ್ಲ, ಯಾವುದನ್ನೂ (ಅಕ್ಷವನ್ನು) ನೆಕ್ಕಲಿಲ್ಲ ಎಂದು ಹೇಳಿತು.

ತಸ್ಯ ಮಾತಾ ಸರಮಾ ಪುತ್ರದುಃಖಾರ್ತಾ ತತ್ಸತ್ರಮಗಚ್ಛತ್ ।
ಯತ್ರ ಜನಮೇಜಯಃ ಸಹ ಭ್ರಾತೃಭಿರ್ದೀರ್ಘಸತ್ರಮುಪಾಸ್ತೇ ಸ್ಮ ॥೭॥

ಅದರ ತಾಯಿಯಾದ ಸರಮೆಯು ಮಗನ ದುಃಖದಿಂದ ಆರ್ತಳಾಗಿ ಜನಮೇಜಯನು ತಮ್ಮಂದಿರ ಜೊತೆಯಲ್ಲಿ ದೀರ್ಘಸತ್ರವನ್ನು ಮಾಡುತ್ತಿದ್ದ ಸ್ಥಳಕ್ಕೆ ಬಂದಿತು.

ಸ ತಯಾ ಕ್ರುದ್ಧಯಾ ತತ್ರೋಕ್ತಃ ಅಯಂ ಮೇ ಪುತ್ರೋ ನ
ಕಿಂಚಿನ್ನಾಪರಾಧ್ಯತಿ ಕಿಮರ್ಥಮಭಿಹತ ಇತಿ ॥೮॥

ಅದು ಅಲ್ಲಿ ಕೋಪದಿಂದ ಜನಮೇಜಯನನ್ನು ಕುರಿತು ಈ ನನ್ನ ಮಗನು ಯಾವ ಅಪರಾಧವನ್ನೂ ಮಾಡಿಲ್ಲ. ಏತಕ್ಕಾಗಿ ಹೊಡೆದಿರಿ ಎಂದು ಕೇಳಿತು.

ನ ಕಿಂಚಿದುಕ್ತವಂತಸ್ತೇ । ಸಾ ತಾನ್ ಪುನರುವಾಚ ।
ಯಸ್ಮಾದಯಮಭಿಹತೋ ನಾಪರಾಧೀ,
ತಸ್ಮಾದದೃಷ್ಟಂ ತ್ವಾಂ ಭಯಮಾಗಮಿಷ್ಯತೀತಿ ॥೯॥

ಅವರು ಏನೂ ಮಾತನಾಡಲಿಲ್ಲ, ಸರಮೆಯು ಪುನಃ ಅವರನ್ನು ಕುರಿತು ನಿರಪರಾಧಿಯಾದ ನನ್ನ ಮಗನನ್ನು ಹೊಡೆದ ಕಾರಣದಿಂದ ನಿಮಗೆ ಅನಿರೀಕ್ಷಿತವಾದ ಭಯವು ಉಂಟಾಗುವುದು ಎಂದು ಹೇಳಿತು.

ಜನಮೇಜಯ ಏವಮುಕ್ತೋ ದೇವಶುನ್ಯಾ ಸರಮಯಾ
ದೃಢಂ ಸಂಭ್ರಾಂತೋ ವಿಷಣ್ಣಶ್ಚಾಸೀತ್ ॥೧೦॥

ದೇವಶುನಿಯಾದ ಸರಮೆಯಿಂದ ಹೀಗೆ ಹೇಳಲಟ್ಟ ಜನಮೇಜಯನು ದಿಗ್ಭ್ರಾಂತನಾಗಿ ವಿಷಾದವನ್ನು ಹೊಂದಿದನು.

ಸ ತಸ್ಮಿನ್ ಸತ್ರೇ ಸಮಾಪ್ತೇ ಹಸ್ತಿನಪುರಮಭ್ಯೇತ್ಯ ಪುರೋಹಿತ-
ಮನುರೂಪಮನ್ವಿಚ್ಛಮಾನಃ ಪರಂ ಯತ್ನಮಕರೋತ್,
ಯೋ ಮೇ ಪಾಪಕೃತ್ಯಾಂ ನಾಶಯೇದಿತಿ ॥೧೧॥

ಅವನು ಆ ಸತ್ರವು ಸಮಾಪ್ತವಾಗುತ್ತಿರಲು ಹಸ್ತಿನಪುರಕ್ಕೆ ಹಿಂದಿರುಗಿ ಯಾರು ನನ್ನ ಪಾಪಕೃತ್ಯವನ್ನು ಪರಿಹಾರ ಮಾಡುತ್ತಾರೆ ಎಂದು ಯೋಚಿಸುತ್ತಾ ಅನುರೂಪವಾದ ಪುರೋಹಿತನನ್ನು ಹುಡುಕುವಲ್ಲಿ ಬಹಳ ಪ್ರಯತ್ನ ಮಾಡಿದನು.

ಸ ಕದಾಚಿನ್ಮೃಗಯಾಂ ಗತಃ ಪಾರಿಕ್ಷಿತೋ ಜನಮೇಜಯಃ ಕಸ್ಮಿಂಶ್ಚ
ಸ್ವವಿಷಯೋದ್ದೇಶೇ ಆಶ್ರಮಮಪಶ್ಯತ್ ॥೧೨॥

ಒಮ್ಮೆ ಬೇಟೆಗೆ ಹೋದ ಪರೀಕ್ಷಿತನ ಮಗನಾದ ಜನಮೇಜಯನು ತನ್ನ ರಾಜ್ಯದ ಯಾವುದೋ ಒಂದು ಪ್ರದೇಶದಲ್ಲಿ ಒಂದು ಆಶ್ರಮವನ್ನು ನೋಡಿದನು.

ತತ್ರ ಕಶ್ಚಿದೃಷಿರಾಸಾಂಚಕಾರ ಶ್ರುತಶ್ರವಾ ನಾಮ । ತಸ್ಯಾಭಿಮತಃ ಪುತ್ರ
ಉಪಾಸ್ತೇ ಸೋಮಶ್ರವಾ ನಾಮ ತಪೋಭಿಃ ಸಂವೃತಃ ॥೧೩॥

ಅಲ್ಲಿ ಶ್ರುತಶ್ರವ ಎಂಬ ಋಷಿಯು ಕುಳಿತಿದ್ದರು. ಅವರಿಗೆ ಅವರ ಪ್ರೀತಿಪಾತ್ರನಾದ ಸೋಮಶ್ರವ ಎಂಬ ತಪೋಯುಕ್ತನಾದ ಪುತ್ರನಿದ್ದನು.

ತಸ್ಯ ತಂ ಪುತ್ರಮಭಿಗಮ್ಯ ಜನಮೇಜಯಃ
ಪಾರಿಕ್ಷಿತಃ ಪೌರೋಹಿತ್ಯಾಯ ವವ್ರೇ ॥೧೪॥

ಪರೀಕ್ಷಿತನ ಪುತ್ರನಾದ ಜನಮೇಜಯನು ಆ ಋಷಿಪುತ್ರನನ್ನು ಸಮೀಪಿಸಿ ತನಗೆ ಪುರೋಹಿತನಾಗಬೇಕೆಂದು ಬೇಡಿದನು.

ಸ ನಮಸೃತ್ಯ ತಮೃಷಿಮುವಾಚ ।
ಭಗವನ್ನಯಂ ತವ ಪುತ್ರೋ ಮಮ ಪುರೋಹಿತೋಽಸ್ತ್ವಿತಿ ॥೧೫॥

ಜನಮೇಜಯನು ಆ ಋಷಿಗೆ ನಮಸ್ಕರಿಸಿ ಪೂಜ್ಯರೇ, ತಮ್ಮ ಈ ಪುತ್ರನು ನನ್ನ ಪುರೋಹಿತನಾಗಲಿ ಎಂದು ಕೇಳಿದನು.

ಸ ಏವಮುಕ್ತಃ ಪ್ರತ್ಯುವಾಚ । ಭೋ ಜನಮೇಜಯ ಪುತ್ರೋ ಮಮ
ಸಪ್ರ್ಯಾಂ ಜಾತೋ ಮಹಾತಪಸ್ವೀ ಸ್ವಾಧ್ಯಾಯಸಂಪನ್ನೋ
ಮತ್ತಪೋವೀರ್ಯಸಂಭೃತೋ ಮಚ್ಚುಕ್ಲಂ ಪಿಬಂತ್ಯಾಃ ಸಪ್ರ್ಯಾಃ ಕುಕ್ಷೌ
ಸಂವೃದ್ಧಃ, ಸಮರ್ಥೋಽಯಂ ಭವತಃ ಸರ್ವಾಃ ಕೃತ್ಯಾಃ ಶಮಯಿತುಂ,
ಅಂತರೇಣ ಮಹಾದೇವಕೃತ್ಯಾಮ್ । ಅಸ್ಯ ವೈ ವಿದ್ಯತೇ
ತ್ವೇಕಮುಪಾಂಶುವ್ರತಮ್ ಯದೇನಂ ಕಂಚಿತ್ ಬ್ರಾಹ್ಮಣಃ
ಕಂಚಿದರ್ಥಮಭಿಯಾಚೇತ್ತಸ್ಮೈ ತದ್ ದದ್ಯಾದಯಮ್ ।
ತಂ ಯದೇನಂ ತಸ್ಮಾತ್ ಸಹಸಿ ತತೋ ನಯಸ್ವೈನಮಿತಿ ॥೧೬॥

ಹೀಗೆ ಕೇಳಲ್ಪಟ್ಟ ಋಷಿಗಳು ಹೇಳಿದರು, ಎಲೈ ಜನಮೇಜಯನೇ, ನನ್ನ ಪುತ್ರನು ನನಗೆ ಒಂದು ಸರ್ಪದಲ್ಲಿ ಹುಟ್ಟಿದವನು. ಮಹಾತಪಸ್ವಿಯೂ, ಸ್ವಾಧ್ಯಾಯಸಂಪನ್ನನೂ ನನ್ನ ತಪಸ್ಸು ಮತ್ತು ಸಾಮರ್ಥ್ಯಗಳಿಂದ ಕೂಡಿದವನೂ ಆಗಿದ್ದಾನೆ. ಒಂದು ಹೆಣ್ಣು ಸರ್ಪವು ನನ್ನ ವೀರ್ಯವನ್ನು ಕುಡಿದಾಗ ಇವನು ಅದರ ಹೊಟ್ಟೆಯಲ್ಲಿ ಬೆಳೆದನು. ನಾರಾಯಣ ದ್ರೋಹ ಒಂದು ಕೆಲಸವನ್ನು ಬಿಟ್ಟು ನಿನಗೆ ಬರಬಹುದಾದ ಎಲ್ಲಾ ಆಪತ್ತುಗಳನ್ನೂ ಪರಿಹಾರಮಾಡಲು ಇವನು ಸಮರ್ಥನಾದವನು. ಅವನಿಗೆ ಒಂದು ರಹಸ್ಯವಾದ ವ್ರತವಿದೆ. ಯಾವನಾದರೂ ಬ್ರಾಹ್ಮಣನು ಅವನನ್ನು ಏನಾದರೂ ಬೇಡಿದರೆ ಅವನು ಅದನ್ನು ಕೊಟ್ಟೇಕೊಡುತ್ತಾನೆ. ಈ ಬ್ರಾಹ್ಮಣನ ಅಭೀಷ್ಟದಾನವನ್ನು ನೀನು ಸಹಿಸುವುದಾದರೆ ಇವನನ್ನು ಕರೆದುಕೊಂಡು ಹೋಗು.

ತೇನೈವಮುಕ್ತೋ ಜನಮೇಜಯಸ್ತಂ ಪ್ರತ್ಯುವಾಚ
ಭಗವಂಸ್ತಥಾ ಭವಿಷ್ಯತೀತಿ ॥೧೭॥

ಋಷಿಗಳಿಂದ ಹೀಗೆ ಹೇಳಲ್ಪಟ್ಟ ಜನಮೇಜಯನು ಋಷಿಗಳನ್ನು ಕುರಿತು ಪೂಜ್ಯರೇ ಹಾಗೆಯೇ ಆಗಲಿ ಎಂದು ಹೇಳಿದನು.

ಸ ತಂ ಪುರೋಹಿತಮುಪಾದಾಯೋಪಾವೃತ್ತೋ ಭ್ರಾತೄನುವಾಚ ।
ಮಯಾಯಂ ವೃತ ಉಪಾಧ್ಯಾಯಃ ಯದಯಂ ಬ್ರೂಯಾತ್
ತತ್ತತ್ ಕಾರ್ಯಮವಿಚಾರಯದ್ಭಿರಿತಿ ॥೧೮॥

ಅವನು ಆ ಪುರೋಹಿತನನ್ನು ಕರೆದುಕೊಂಡು ಹಿಂದಿರುಗಿ ತನ್ನ ತಮ್ಮಂದಿರನ್ನು ಕುರಿತು, ನಾನು ಇವನನ್ನು ಪುರೋಹಿತನಾಗಿ ವರಣಮಾಡಿದ್ದೇನೆ. ಅವನು ಏನು ಹೇಳುತ್ತಾನೆಯೋ ಅದನ್ನು ವಿಚಾರಮಾಡದೆ ನೆರವೇರಿಸಬೇಕು ಎಂದು ಹೇಳಿದನು.

ತೇನೈವಮುಕ್ತಾ ಭ್ರಾತರಸ್ತ್ರಯಸ್ತಸ್ಯ ತಥಾ ಚಕ್ರುಃ ॥೧೯॥

ಅವನಿಂದ ಹೀಗೆ ಹೇಳಲ್ಪಟ್ಟ ಮೂರು ಜನ ತಮ್ಮಂದಿರು ಅವನ ವಿಷಯದಲ್ಲಿ ಹಾಗೆಯೇ ನಡೆದುಕೊಂಡರು.

ಸ ತಥಾ ಭ್ರಾತೄನ್ ಸಂದಿಶ್ಯ ತಕ್ಷಶಿಲಾಮಭಿಪ್ರತಸ್ಥೇ ।
ತಂ ಚ ದೇಶಂ ಸ್ವಾಂ ವಶೇ ಸ್ಥಾಪಯಾಮಾಸ ॥೨೦॥

ಜನಮೇಜಯನು ತನ್ನ ತಮ್ಮಂದಿರಿಗೆ ಈ ರೀತಿ ಆದೇಶವನ್ನು ನೀಡಿ ತಕ್ಷಶಿಲೆಯ ಮೇಲೆ ದಂಡೆತ್ತಿ ಹೋಗಿ, ಆ ದೇಶವನ್ನು ತನ್ನ ವಶವನ್ನಾಗಿ ಮಾಡಿಕೊಂಡನು.

ಏತಸ್ಮಿನ್ನಂತರೇ ಕಶ್ಚಿದೃಷಿರ್ಧೌಮ್ಯೋ ನಾಮಾಯೋದಃ ।
ತಸ್ಯ ಶಿಷ್ಯಾಸ್ತ್ರಯೋ ಬಭೂವುರುಪಮನ್ಯುರಾರುಣಿಪಾಂಚಾಲ್ಯೋ
ಬೈದ ಇತಿ ॥೨೧॥

ಈ ಮಧ್ಯದಲ್ಲಿ ಆಯೋದಧೌಮ್ಯ ಎಂಬ ಒಬ್ಬ ಋಷಿಗಳಿದ್ದರು. ಅವರಿಗೆ ಉಪಮನ್ಯು, ಆರುಣಿಪಾಂಚಾಲ್ಯ ಮತ್ತು ಬೈದ ಎಂಬ ಮೂವರು ಶಿಷ್ಯರಿದ್ದರು.

ಸ ಏಕಂ ಶಿಷ್ಯಮಾರುಣಿಪಾಂಚಾಲಂ ಪ್ರೇಷಯಾಮಾಸ ।
ಗಚ್ಛ ಕೇದಾರಖಿಂಡಂ ಬಧಾನೇತಿ ॥೨೨॥

ಅವರು ತಮ್ಮ ಶಿಷ್ಯರಲ್ಲಿ ಒಬ್ಬನಾದ ಆರುಣಿಪಾಂಚಾಲನನ್ನು ಕುರಿತು 'ಹೋಗಿ ಗದ್ದೆಗೆ ನೀರನ್ನು ಕಟ್ಟು' ಎಂದು ಕಳುಹಿಸಿದರು.

ಸ ಉಪಾಧ್ಯಾಯೇನ ಸಂದಿಷ್ಟ ಆರುಣಿಪಾಂಚಾಲಸ್ತತ್ರ
ಗತ್ವಾ ತತ್ಕೇದಾರಖಿಂಡಂ ಬದ್ಧುಂ ನಾಶಕ್ನೋತ್ ॥೨೩॥

ಉಪಾಧ್ಯಾಯರಿಂದ ಹೀಗೆ ಹೇಳಲ್ಪಟ್ಟ ಆರುಣಿಪಾಂಚಾಲನು ಗದ್ದೆಯ ಬಳಿಗೆ ಹೋದನು. ಆದರೆ ನೀರನ್ನು ಕಟ್ಟಲು ಸಮರ್ಥನಾಗಲಿಲ್ಲ.

ಸಂಕ್ಲಿಶ್ಯದುಪಾಯಮಪಶ್ಯತ್ । ಭವತ್ವೇವಂ ಕರಿಷ್ಯಾಮೀತಿ । ಸ ತತ್ರ
ಸಂವಿವೇಶ ಕೇದಾರಖಿಂಡೇ ಶಯಾನೇ ತಸ್ಮಿಂಸ್ತದುದಕಂ ತಸ್ಥೌ ॥೨೪॥

ಕ್ಲೇಶವನ್ನು ಪಡುತ್ತಾ ಒಂದು ಉಪಾಯವನ್ನು ಕಂಡು, ಆಗಲಿ ಹೀಗೆಯೇ ಗುರುಸೇವೆಯನ್ನು ಮಾಡುವೆನು ಎಂದು ಆಲೋಚಿಸಿದನು. ಅವನು ಗದ್ದೆಯಲ್ಲಿ ನೀರು ಹೋಗುವ ಕಡೆಯಲ್ಲಿ ಆ ನೀರಿನ ಮಧ್ಯದಲ್ಲಿ ಮಲಗಿಕೊಂಡನು. ಆಗ ನೀರು ನಿಂತಿತು.

ತತಃ ಕದಾಚಿದುಪಾಧ್ಯಾಯಸ್ತಸ್ಮಿನ್ನಾಗತೇ ಆಯೋದಧೌಮ್ಯಃ
ಶಿಷ್ಯಾವಪೃಚ್ಛತ್ । ಕ್ವಾರುಣಿಪಾಂಚಾಲೋ ಗತ ಇತಿ ॥೨೫॥

ಅನಂತರ, ಅವನು ಮನೆಗೆ ಹಿಂದಿರುಗಿ ಬರದಿರಲು ಉಪಾಧ್ಯಾಯರಾದ ಆಯೋದಧೌಮ್ಯರು ಉಳಿದ ಇಬ್ಬರು ಶಿಷ್ಯರನ್ನು ಕುರಿತು ಆರುಣಿಪಾಂಚಾಲನು ಎಲ್ಲಿಗೆ ಹೋಗಿದ್ದಾನೆ ಎಂದು ಕೇಳಿದರು.

ತೌ ಪ್ರತ್ಯೂಚತುಃ । ಭಗವತ್ಯೈವ ಪ್ರೇಷಿತಃ ಕೇದಾರಖಂಡಂ ಬಧಾನೇತಿ ॥

ಅವರಿಬ್ಬರೂ ಪೂಜ್ಯರೇ, ಗದ್ದೆಗೆ ನೀರನ್ನು ಕಟ್ಟು ಎಂದು ನೀವೇ ಕಳುಹಿಸಿದ್ದೀರಿ ಎಂದು ಉತ್ತರವನ್ನು ಕೊಟ್ಟರು.

ಏವಮುಕ್ತಸ್ತೌ ಶಿಷ್ಯೌ ಪ್ರತ್ಯುವಾಚ ।
ತಸ್ಮಾತ್ ಸರ್ವೇ ತತ್ರ ಗಚ್ಛಾಮೋ ಯತ್ರ ಸ ಇತಿ ॥೨೭॥

ಹೀಗೆ ಹೇಳಲ್ಪಟ್ಟ ಆಯೋದಧೌಮ್ಯರು ಆ ಇಬ್ಬರು ಶಿಷ್ಯರನ್ನು ಕುರಿತು ಹಾಗಾದರೆ ಎಲ್ಲರೂ ಅವನು ಇರುವ ಸ್ಥಳಕ್ಕೇ ಹೋಗೋಣ ಎಂದು ಹೇಳಿದರು.

ಸ ಗತ್ವಾ ತಸ್ಯಾಹ್ವಾನಾಯ ಶಬ್ದಂ ಚಕಾರ ।
ಭೋ ಆರುಣೇ ಪಾಂಚಾಲ ಕ್ವಾಸಿ ವತ್ಸೈಹೀತಿ ॥೨೮॥

ಅವರು ಹೋಗಿ ಅವನನ್ನು ಕರೆಯಲು ಗಟ್ಟಿಯಾಗಿ ವತ್ಸ ಆರುಣಿಪಾಂಚಾಲನೇ ಎಲ್ಲಿದ್ದೀಯೆ ! ಇಲ್ಲಿ ಬಾ, ಎಂದು ಕಿರುಚಿದರು.

ಸ ತಚ್ಛ್ರುತ್ವಾ ತಥಾರುಣಿಪಾಂಚಾಲ ಉಪಾಧ್ಯಾಯವಾಕ್ಯಂ ತಸ್ಮಾತ್
ಕೇದಾರಖಂಡಾತ್ ಸಹಸೋತ್ಥಾಯ ತಮುಪತಸ್ಥೇ ।
ಪ್ರೋವಾಚ ಚೈನಮ್ । ಅಹಮಸ್ಮಾತ್ ಕೇದಾರಖಂಡಾನ್ನಿಃಸರಮಾಣ-
ಮುದಕಮವಾರಣೇಯಂ ರೋದ್ಧುಂ ಸಂಪ್ರವಿಷ್ಟೋ
ಭಗವತೋ ವಚಃ ಶ್ರುತ್ವಾ ಸಹಸಾ ವಿದಾರ್ಯ ಕೇದಾರಖಂಡಂ
ಭಗವಂತಮುಪಸ್ಥಿತಃ । ತದಭಿವಾದಯೇ ಭಗವಂತಂ
ಆಜ್ಞಾಪಯತು ಭವಾನ್ ಕಿಂ ಕರವಾಣೇತಿ ॥೨೯॥

ಉಪಾಧ್ಯಾಯರ ವಾಕ್ಯವನ್ನು ಕೇಳಿದ ಆರುಣಿಪಾಂಚಾಲನು ಆಗ ಆ ಗದ್ದೆಯಿಂದ ಇದ್ದಕ್ಕಿದ್ದಂತೆ ಎದ್ದು ಗುರುಗಳ ಎದುರಿಗೆ ನಿಂತು ನಾನು ಈ ಗದ್ದೆಯಿಂದ ಹೊರಗೆ ಹೋಗುತ್ತಿದ್ದ ನೀರನ್ನು ಹೊರಗೆ ಹೋಗದಂತೆ ತಡೆಯಲು ಸಾಧ್ಯವಾಗದೆ ಇಲ್ಲಿಯೇ ಮಲಗಿದೆ, ಪೂಜ್ಯರಾದ ತಮ್ಮ ಮಾತನ್ನು ಕೇಳಿ ಆ ಗದ್ದೆಯ ಭಾಗವನ್ನು ಇದ್ದಕ್ಕಿದ್ದಂತೆಯೇ ಸೀಳಿಕೊಂಡು ತಮ್ಮ ಬಳಿಗೆ ಬಂದಿದ್ದೇನೆ. ಪೂಜ್ಯರಾದ ತಮಗೆ ನಮಸ್ಕರಿಸುತ್ತೇನೆ. ನಾನು ಏನು ಮಾಡಬೇಕೆಂದು ಆದೇಶವನ್ನು ನೀಡಿ ಎಂದು ಹೇಳಿದನು.

ತಮುಪಾಧ್ಯಾಯೋಽಬ್ರವೀತ್ । ಯಸ್ಮಾದ್ ಭವಾನಿದಂ ಕೇದಾರ
ಖಿಂಡಮವದಾಯೋತ್ಥಿತಸ್ತಸ್ಮಾದುದ್ದಾಲಕ ಏವ ನಾಮ್ನಾ ಭವತ್ವಿತಿ॥೩೦॥

ಅವನನ್ನು ಕುರಿತು ಉಪಾಧ್ಯಾಯರು ನೀನು ಈ ಗದ್ದೆಯನ್ನು (ಕೇದಾರಖಂಡವನ್ನು) ಸೀಳಿಕೊಂಡು ಮೇಲೆ ಬಂದುದರಿಂದ ನಿನಗೆ ಉದ್ದಾಲಕನೆಂದೇ ಹೆಸರಾಗಲಿ ಎಂದು ಹೇಳಿದರು.

ಸ ಉಪಾಧ್ಯಾಯೇನಾನುಗೃಹೀತಃ । ಯಸ್ಮಾತ್ತ್ವಯಾ
ಮದ್ವಚೋಽನುಷ್ಠಿತಂ ತಸ್ಮಾಚ್ಛ್ರೇಯೋಽವಾಪ್ಸ್ಯಸಿ, ಸರ್ವೇ ತೇ ವೇದಾಃ
ಪ್ರತಿಭಾಸ್ಯಂತಿ, ಸರ್ವಾಣಿ ಚ ಧರ್ಮಶಾಸ್ತ್ರಾಣೀತಿ ॥೩೧॥

ಆರುಣಿಪಾಂಚಾಲನು ಉಪಾಧ್ಯಾಯರ ಅನುಗ್ರಹಕ್ಕೆ ಪಾತ್ರನಾದನು. ಉಪಾಧ್ಯಾಯರು ಅವನನ್ನು ಕುರಿತು ನೀನು ನನ್ನ ಆದೇಶವನ್ನು ಅನುಷ್ಠಾನ ಮಾಡಿದ ಕಾರಣದಿಂದ ನಿನಗೆ ಮಂಗಳವಾಗುವುದು, ಎಲ್ಲವೇದಗಳೂ, ಎಲ್ಲಧರ್ಮಶಾಸ್ತ್ರಗಳೂ ನಿನಗೆ ಪ್ರತಿಭಾತವಾಗುವುವು ಎಂದು ಹೇಳಿದರು.

ಸ ಏವಮುಕ್ತ ಉಪಾಧ್ಯಾಯೇನೇಷ್ಟಂ ದೇಶಂ ಜಗಾಮ ॥೩೨॥

ಉಪಾಧ್ಯಾಯರಿಂದ ಹೀಗೆ ಹೇಳಲ್ಪಟ್ಟ ಆರುಣಿಪಾಂಚಾಲನು ತನಗೆ ಇಷ್ಟವಾದ ದೇಶಕ್ಕೆ ಹೊರಟು ಹೋದನು.

ಅಥಾಪರಸ್ತಸ್ಯಾಯೋದಧೌಮ್ಯಸ್ಯ ಶಿಷ್ಯ ಉಪಮನ್ಯುರ್ನಾಮ ।
ತಮುಪಾಧ್ಯಾಯಃ ಪ್ರೇಷಯಾಮಾಸ ವತ್ಸೋಪಮನ್ಯೋ ಗಾರಕ್ಷೇತಿ ॥

ಇನ್ನು ಆ ಆಯೋದಧೌಮ್ಯರಿಗೆ ಉಪಮನ್ಯು ಎಂಬ ಇನ್ನೊಬ್ಬ ಶಿಷ್ಯನಿದ್ದನಷ್ಟೆ. ಅವನನ್ನು ಕುರಿತು ಉಪಾಧ್ಯಾಯರು, ವತ್ಸ ಉಪಮನ್ಯು ಗೋವುಗಳ ರಕ್ಷಣೆಯನ್ನು ಮಾಡು ಎಂದು ಹೇಳಿ ಕಳುಹಿಸಿದರು.

ಸ ಉಪಾಧ್ಯಾಯವಚನಾದರಕ್ಷದ್ ಗಾಃ । ಸ ಚಾಹ್ನಿ ಗಾ ರಕ್ಷಿತ್ವಾ
ದಿವಸಕ್ಷಯೇಽಭ್ಯಾಗಮ್ಯೋಪಾಧ್ಯಾಯಸ್ಯಾಗ್ರತಃ ಸ್ಥಿತ್ವಾ ನಮಶ್ಚಕ್ರೇ ॥೩೪॥

ಅವನು ಉಪಾಧ್ಯಾಯರ ವಚನದಂತೆ ಗೋವುಗಳ ರಕ್ಷಣೆಯನ್ನು ಮಾಡುತ್ತಿದ್ದನು. ಅವನು ಹಗಲೆಲ್ಲಾ ಗೋವುಗಳನ್ನು ನೋಡಿಕೊಂಡು ಸಾಯಂಕಾಲದ ವೇಳೆಯಲ್ಲಿ ಹಿಂದಿರುಗಿ ಉಪಾಧ್ಯಾಯರ ಎದುರಿಗೆ ನಿಂತು ಅವರಿಗೆ ನಮಸ್ಕಾರವನ್ನು ಮಾಡಿದನು.

ತಮುಪಾಧ್ಯಾಯಃ ಪೀವಾನಮಪಶ್ಯತ್ । ಉವಾಚ ಚೈನಮ್ ।
ವತ್ಸೋಪಮನ್ಯೋ ಕೇನ ವೃತ್ತಿಂ ಕಲ್ಪಯಸಿ ಪೀವಾನಸಿ ದೃಢಮಿತಿ ॥೩೫॥

ಉಪಾಧ್ಯಾಯರು ಅವನು ಪುಷ್ಟನಾಗಿರುವುದನ್ನು ಗಮನಿಸಿದರು. ಅವರು ಅವನನ್ನು ಕುರಿತು ವತ್ಸ ಉಪಮನ್ಯು. ಯಾವ ಆಹಾರದಿಂದ ಜೀವನವನ್ನು ನಡೆಸುತ್ತಿದ್ದೀಯೆ? ಸ್ಪಷ್ಟವಾಗಿ ಪುಷ್ಟನಾಗಿದ್ದೀಯಷ್ಟೆ ಎಂದು ಕೇಳಿದರು.

ಸ ಉಪಾಧ್ಯಾಯಂ ಪ್ರತ್ಯುವಾಚ ಭೈಕ್ಷೇಣ ವೃತ್ತಿಂ ಕಲ್ಪಯಾಮೀತಿ ॥೩೬॥

ಅವನು ಉಪಾಧ್ಯಾಯರನ್ನು ಕುರಿತು ಭಿಕ್ಷಾನ್ನದಿಂದ ಶರೀರ ವೃತ್ತಿಯನ್ನು ನೆರವೇರಿಸುತ್ತಿದ್ದೇನೆ ಎಂದು ಹೇಳಿದನು.

ತಮುಪಾಧ್ಯಾಯಃ ಪ್ರತ್ಯುವಾಚ ।
ಮಮಾನಿವೇದ್ಯ ಭೈಕ್ಷಂ ನೋಪಯೋಕ್ತವ್ಯಮಿತಿ ॥೩೭॥

ಅವನನ್ನು ಕುರಿತು ಉಪಾಧ್ಯಾಯರು ನನಗೆ ನಿವೇದನೆಯನ್ನು ಮಾಡದೆ ಭಿಕ್ಷಾನ್ನವನ್ನು ಊಟಮಾಡಬಾರದು ಎಂದು ಹೇಳಿದರು.

ಸ ತಥೇತ್ಯುಕ್ತ್ವಾ ಪುನರರಕ್ಷದ್ ಗಾಃ ।
ರಕ್ಷಿತ್ವಾ ಚಾಗಮ್ಯ ತಥೈವೋಪಾಧ್ಯಾಯಸ್ಯಾಗ್ರತಃ ಸ್ಥಿತ್ವಾ ನಮಶ್ಚಕ್ರೇ ॥೩೮॥

ಅವನು ಹಾಗೆಯೇ ಆಗಲಿ ಎಂದು ಹೇಳಿ ಪುನಃ ಹಸುಗಳನ್ನು ಕಾಯುತ್ತಿದ್ದನು. ಹಾಗೆಯೇ ಹಸುಗಳನ್ನು ಪಾಲನೆ ಮಾಡಿ ಗುರುಗಳ ಎದುರಿಗೆ ಬಂದು ನಿಂತು ನಮಸ್ಕರಿದನು.

ತತಸ್ತಮುಪಾಧ್ಯಾಯಸ್ತಥಾ ಪೀವಾನಮೇವ ದೃಷ್ಟ್ವೋವಾಚ ।
ವತ್ಸೋಪಮನ್ಯೋ ಸರ್ವಮಶೇಷತಸ್ತೇ ಭೈಕ್ಷಂ ಗೃಹ್ಣಾಮಿ ।
ಕೇನಾದ್ಯ ವೃತ್ತಿಂ ಕಲ್ಪಯಸೀತಿ ॥೩೯॥

ಉಪಾಧ್ಯಾಯರು ಅವನು ಪುನಃ ಪುಷ್ಟನಾಗಿರುವದನ್ನೇ ಗಮನಿಸಿ ಅವನನ್ನು ಕುರಿತು ವತ್ಸ ಉಪಮನ್ಯು, ನೀನು ತಂದ ಭಿಕ್ಷಾನ್ನವೆಲ್ಲವನ್ನೂ ನಾನೇ ಭುಂಜಿಸುತ್ತಿದ್ದೇನೆ, ಯಾವುದರಿಂದ ಶರೀರಯಾತ್ರೆಯನ್ನು ನಿರ್ವಹಿಸುತ್ತೀದ್ದೀಯೆ ಎಂದು ಕೇಳಿದರು.

ಸ ಏವಮುಕ್ತ ಉಪಾಧ್ಯಾಯಂ ಪ್ರತ್ಯುವಾಚ ।
ಭೈಕ್ಷಂ ಸರ್ವಂ ಭಗವತೇ ನಿವೇದ್ಯ ಅಪರಂ ಗೃಹ್ಣಾಮಿ ತಂ ಚರಾಮಿ ।
ತೇನ ವೃತ್ತಿಂ ಕಲ್ಪಯಾಮೀತಿ ॥೪೦॥

ಹೀಗೆ ಕೇಳಲ್ಪಟ್ಟ ಉಪಮನ್ಯುವು ಉಪಾಧ್ಯಾಯರನ್ನು ಕುರಿತು, ಒಮ್ಮೆ ಭಿಕ್ಷೆಯನ್ನು ಬೇಡಿ ಬಂದ ಅನ್ನವನ್ನೆಲ್ಲಾ ಪೂಜ್ಯರಾದ ತಮಗೆ ಕೊಟ್ಟು ಇನ್ನೊಮ್ಮೆ ಭಿಕ್ಷವನ್ನು ಬೇಡುತ್ತೇನೆ, ಅದರಿಂದ ನಾನು ಶರೀರವನ್ನು ಪೋಷಿಸುತ್ತಿದ್ದೇನೆ ಎಂದು ಹೇಳಿದನು.

ತಮುಪಾಧ್ಯಾಯಃ ಪ್ರತ್ಯುವಾಚ । ನೈಷಾ ನ್ಯಾಯ್ಯಾ ಗುರುವೃತ್ತಿಃ ।
ಅನ್ಯೇಷಾಮಪಿ ಭೈಕ್ಷೋಪಜೀವಿನಾಂ ತ್ವಂ ವೃತ್ಯುಪರೋಧಂ
ಕರೋಷಿ । ಏವಂ ವರ್ತಮಾನೋ ಲುಬ್ಧೋऽಸೀತಿ ॥೪೧॥

ಅವನನ್ನು ಕುರಿತು ಉಪಾಧ್ಯಾಯರು, ಇದು ನ್ಯಾಯವಾದ ಗುರುವೃತ್ತಿಯಲ್ಲ, ಭಿಕ್ಷಾನ್ನವನ್ನು ಬೇಡುವ ಬೇರೆ ಬ್ರಹ್ಮಚಾರಿಗಳೂ ಇದ್ದಾರೆ. ನೀನು ಎರಡನೆಯ ಬಾರಿ ಭಿಕ್ಷೆಗೆ ಹೋಗುವುದರಿಂದ ಅವರ ಜೀವನಕ್ಕೆ ತೊಂದರೆಯನ್ನು ಮಾಡುತ್ತಿದ್ದೀಯೆ, ಹೀಗೆ ಮಾಡುತ್ತಿರುವ ನೀನು ಲೋಭಕ್ಕೆ ಒಳಗಾಗಿದ್ದೀಯೆ ಎಂದು ಹೇಳಿದರು.

ಸ ತಥೇತ್ಯುಕ್ತ್ವಾ ತಾ ಗಾ ಅರಕ್ಷತ್ ।
ರಕ್ಷಿತ್ವಾ ಪುನರಾಗಮ್ಯೋಪಾಧ್ಯಾಯಸ್ಯಾಗ್ರತಃ ಸ್ಥಿತ್ವಾ ನಮಶ್ಚಕ್ರೇ ॥೪೨॥

ಅವನು ಹಾಗೆಯೇ ಆಗಲಿ ಎಂದು ಹೇಳಿ ಪುನಃ ಗೋವುಗಳನ್ನು ಕಾಯುತ್ತಿದ್ದನು. ಗೋವುಗಳ ರಕ್ಷಣೆಯನ್ನು ಮಾಡಿ ಪುನಃ ಉಪಾಧ್ಯಾಯರ ಎದುರಿಗೆ ಬಂದು ನಿಂತು ನಮಸ್ಕಾರವನ್ನು ಮಾಡಿದನು.

ತಮುಪಾಧ್ಯಾಯಾಸ್ತಥಾ ಪೀವಾನಮೇವ ದೃಷ್ಟ್ವಾ ಪುನರುವಾಚ ।
ಅಹಂ ತೇ ಸರ್ವಂ ಭೈಕ್ಷಂ ಗೃಹ್ಣಾಮಿ ನ ಚಾನ್ಯಚ್ಚರಸಿ ।
ಪೀವಾನಸಿ । ಕೇನ ವೃತ್ತಿಂ ಕಲ್ಪಯಸೀತಿ ॥೪೩॥

ಉಪಾಧ್ಯಾಯರು ಅವನು ಮೊದಲಿನಂತೆಯೇ ಪುಷ್ಟನಾಗಿರುವುದನ್ನು ಗಮನಿಸಿ ಪುನಃ ಅವನನ್ನು ಕುರಿತು ನಿನ್ನ ಎಲ್ಲಾ ಭಿಕ್ಷಾನ್ನವನ್ನು ನಾನೇ ಭುಂಜಿಸುತ್ತಿದ್ದೇನೆ. ನೀನು ಎರಡನೆಯ ಬಾರಿ ಭೈಕ್ಷ್ಯಚರ್ಯೆಯನ್ನು ಮಾಡುತ್ತಿಲ್ಲ ಆದರೂ ಪುಷ್ಟನಾಗಿದ್ದೀಯೆ, ಯಾವುದರಿಂದ ಜೀವನಮಾಡುತ್ತಿದ್ದೀಯೆ ಎಂದು ಕೇಳಿದರು.

ಸ ಉಪಾಧ್ಯಾಯಂ ಪ್ರತ್ಯುವಾಚ ।
ಭೋ ಏತಾಸಾಂ ಗವಾಂ ಪಯಸಾ ವೃತ್ತಿಂ ಕಲ್ಪಯಾಮೀತಿ ॥೪೪॥

ಅವನು ಉಪಾಧ್ಯಾಯರನ್ನು ಕುರಿತು ಪೂಜ್ಯರೇ, ಈ ಗೋವುಗಳ ಹಾಲಿನಿಂದ ಜೀವಿಸುತ್ತಿದ್ದೇನೆ ಎಂದು ಹೇಳಿದನು.

ತಮುಪಾಧ್ಯಾಯಃ ಪ್ರತ್ಯುವಾಚ । ನೈತನ್ನ್ಯಾಯ್ಯಂ ಪಯ
ಉಪಯೋಕ್ತುಂ ಭವತೋ ಮಯಾ ನಾನುಜ್ಞಾತಮಿತಿ ॥೪೫॥

ಆಗ ಉಪಾಧ್ಯಾಯರು ಅವನನ್ನು ಕುರಿತು ನನ್ನ ಅನುಮತಿಯಿಲ್ಲದೆ ಈ ಹಸುಗಳ ಹಾಲನ್ನು ಉಪಯೋಗಿಸುವುದು ನಿನಗೆ ನ್ಯಾಯವಲ್ಲ ಎಂದು ಹೇಳಿದರು.

ಸ ತಥೇತಿ ಪ್ರತಿಜ್ಞಾಯ ಗಾ ರಕ್ಷಿತ್ವಾ ಪುನರುಪಾಧ್ಯಾಯಗೃಹ-
ಮಾಸಾದ್ಯಗುರೋರಗ್ರತಃ ಸ್ಥಿತ್ವಾ ನಮಶ್ಚಕ್ರೇ ॥೪೬॥

ಅವನು ಹಾಗೆಯೇ ಆಗಲಿ ಎಂದು ಪ್ರತಿಜ್ಞೆಯನ್ನು ಮಾಡಿ, ಗೋವುಗಳ ರಕ್ಷಣೆಯನ್ನು ಮಾಡಿ ಪುನಃ ಉಪಾಧ್ಯಾಯರ ಬಳಿಗೆ ಬಂದು ಅವರ ಎದುರಿಗೆ ನಿಂತು ನಮಸ್ಕಾರವನ್ನು ಮಾಡಿದನು.

ತಮುಪಾಧ್ಯಾಯಸ್ತಥಾ ಪೀವಾನಮೇವ ದೃಷ್ಟ್ವೋವಾಚ ।
ಭೈಕ್ಷಂ ನಾಶ್ನಾಸಿ ನ ಚಾನ್ಯಚ್ಚರಸಿ ನ ಪಯಃ ಪಿಬಸಿ
ಪೀವಾಸಿ ಕೇನ ವೃತ್ತಿಂ ಕಲ್ಪಯಸೀತಿ ॥೪೭॥

ಉಪಾಧ್ಯಾಯರು ಅವನು ಮೊದಲಿನಂತೆಯೇ ಪುಷ್ಟನಾಗಿರುವುದನ್ನು ಗಮನಿಸಿ ಅವನನ್ನು ಕುರಿತು, ಭಿಕ್ಷಾನ್ನವನ್ನು ತಿನ್ನುತ್ತಿಲ್ಲ, ಎರಡನೆಯ ಭಿಕ್ಷಾಚರ್ಯವನ್ನೂ ಮಾಡುತ್ತಿಲ್ಲ, ಹಾಲನ್ನೂ ಕುಡಿಯುತ್ತಿಲ್ಲ, ಆದರೂ ಸ್ಥೂಲನಾಗಿದ್ದೀಯೆ, ಯಾವುದರಿಂದ ಜೀವನವನ್ನು ಮಾಡುತ್ತಿದ್ದೀಯೆ ಎಂದು ಕೇಳಿದರು.

ಸ ಏವಮುಕ್ತ ಉಪಾಧ್ಯಾಯಂ ಪ್ರತ್ಯುವಾಚ ।
ವತ್ಸಾನಾಂ ವದನಾಚ್ಚ್ಯುತಂ ಫೇನಂ ಪಿಬಾಮಿ ।
ವತ್ಸಾ ಮಾತೄಣಾಂ ಸ್ತನಾನ್ ಪಿಬಂತ ಉದ್ಗಿರಂತೇ ಇತಿ ॥೪೮॥

ಹೀಗೆ ಕೇಳಲ್ಪಟ್ಟ ಅವನು ಉಪಾಧ್ಯಾಯರನ್ನು ಕುರಿತು, ಕರುಗಳು ತಾಯಿಯ ಹಾಲನ್ನು ಕುಡಿಯುತ್ತಾ ಬಾಯಿಂದ ಹಾಲನ್ನು ಸುರಿಸುತ್ತವೆ. ಕರುಗಳ ಬಾಯಿಂದ ಸುರಿಯುವ ನೊರೆಯನ್ನು ಕುಡಿಯುತ್ತಿದ್ದೇನೆ ಎಂದು ಹೇಳಿದನು.

ತಮುಪಾಧ್ಯಾಯಃ ಪ್ರತ್ಯುವಾಚ । ಏತೇ ತ್ವದನುಕಂಪಯಾ ಗುಣವಂತಃ
ಪ್ರಭೂತಂ ಫೇನಮುದ್ಗಿರಂತಿ । ತದೇವಮಪಿ ವತ್ಸಾನಾಂ
ವೃತ್ಯುಪರೋಧಂ ಕರೋಷ್ಯೇವಂ ವರ್ತಮಾನಃ ।
ಭವಾನ್ ಫೇನಂ ನೈವಂ ಪಾತುಮರ್ಹಸೀತಿ ॥೪೯॥

ಉಪಾಧ್ಯಾಯರು ಅವನನ್ನು ಕುರಿತು ಈ ಕರುಗಳೆಲ್ಲವೂ ಒಳ್ಳೆಯ ಗುಣಗಳಿಂದ ಕೂಡಿದವುಗಳಾಗಿ ನಿನ್ನ ಮೇಲಿನ ಅನುಕಂಪದಿಂದ ತುಂಬಾ ಹಾಲನ್ನು ನೊರೆಯಾಗಿ ಸುರಿಸುತ್ತವೆ. ನೀನು ಹೀಗೆ ಮಾಡಿದರೆ ಕರುಗಳ ಜೀವನಕ್ಕೂ ತೊಂದರೆಯಾಗುತ್ತದೆ. ನೀನು ನೊರೆಯನ್ನು ಕುಡಿಯಬಾರದು ಎಂದು ಹೇಳಿದರು.

ಸ ತಥೇತಿ ಪ್ರತಿಜ್ಞಾಯ ನಿರಾಹಾರೋ ಗಾ ಅರಕ್ಷತ್ ॥೫೦॥

ಅವನು ಹಾಗೆಯೇ ಆಗಲಿ ಎಂದು ಹೇಳಿ ನಿರಾಹಾರನಾಗಿ ಗೋವುಗಳನ್ನು ಕಾಯುತ್ತಿದ್ದನು.

ತಥಾ ಪ್ರತಿಷಿದ್ಧೋ ಭೈಕ್ಷಂ ನಾಶ್ನಾತಿ । ನ ಚಾನ್ಯಚ್ಚರತಿ ।
ನ ಪಯಃ ಪಿಬತಿ । ಫೇನಂ ನೋಪಯುಂಕ್ತೇ ॥೫೧॥

ಹಾಗೆ ಎಲ್ಲದರಿಂದಲೂ ನಿಷಿದ್ಧನಾದ ಅವನು ಭಿಕ್ಷಾನ್ನವನ್ನು ತಿನ್ನುವುದಿಲ್ಲ, ಎರಡನೆ ಭಿಕ್ಷವನ್ನು ಸೇವಿಸುವುದಿಲ್ಲ, ಹಾಲನ್ನೂ ಕುಡಿಯುವುದಿಲ್ಲ, ನೊರೆಯನ್ನೂ ಕುಡಿಯುವುದಿಲ್ಲ.

ಸ ಕದಾಚಿದರಣ್ಯೇಷು ಕ್ಷುಧಾರ್ತೋಽರ್ಕಪರ್ಣಾನ್ ಭಕ್ಷಯತ್ ॥೫೨॥

ಒಮ್ಮೆ ಅವನು ಕಾಡಿನಲ್ಲಿ ಹಸಿವೆಯಿಂದ ಬಳಲಿ ಎಕ್ಕದ ಗಿಡದ ಎಲೆಗಳನ್ನು ತಿಂದನು.

ಸ ತೈರರ್ಕಪರ್ಣೈರ್ಭಕ್ಷಿತೈಃ ಕ್ಷಾರಕಟುಕೋಷ್ಣಾವಿಪಾಕಾಚ್ಚಕ್ಷುಷ್ಯ-
ಪಹತೋಽಂಧೋಽಭವತ್ ॥೫೩॥

ತಿನ್ನಲ್ಪಟ್ಟ ಆ ಎಕ್ಕದ ಎಲೆಗಳ ಕ್ಷಾರ, ಕಟು ಮತ್ತು ಉಷ್ಣತೆಯ ಪ್ರಭಾವದಿಂದ ಅವನು ಕಣ್ಣಿನ ತೊಂದರೆಗೆ ಒಳಗಾಗಿ ಅಂಧನಾದನು.

ಸೋಽಂಧೋಽಪಿ ಚಂಕ್ರಮ್ಯಮಾಣಃ ಕೂಪೇಽಪತತ್ ॥೫೪॥

ಅಂಧನಾದ ಅವನು ತಿರುಗಾಡುತ್ತಾ ಒಂದು ಕೂಪದಲ್ಲಿ ಬಿದ್ದನು.

ಅಥ ತಸ್ಮಿಂಸ್ತು ನಾಗಚ್ಛತ್ಯುಪಾಧ್ಯಾಯಃ ಶಿಷ್ಯಾನವೋಚತ್ ।
ನಾಯಾತ್ಯುಪಮನ್ಯುಃ । ತ ಊಚುರ್ವನಂ ಗತೋ ಗಾ
ರಕ್ಷಿತುಮಿತಿ । ತಾನಾಹೋಪಾಧ್ಯಾಯೋಮಯೋಪಮನ್ಯುಃ ಸರ್ವತಃ
ಪ್ರತಿಷಿದ್ಧಃ ಸನ್ ಯತಃ ಕುಪಿತಸ್ತತೋನಾಗಚ್ಛತಿ ಚಿರಂ ಗತಸ್ತಿ ತಿ ॥೫೫॥

ಅವನು ಬರದಿರುತ್ತಿರಲು ಆಯೋದಧೌಮ್ಯರು ಶಿಷ್ಯರನ್ನು ಕುರಿತು ಉಪಮನ್ಯುವು ಬರುತ್ತಿಲ್ಲ ಎಂದು ಹೇಳಿದರು. ಆ ಶಿಷ್ಯರು ಹಸುಗಳನ್ನು ಕಾಯಲು ಕಾಡಿಗೆ ಹೋಗಿದ್ದಾನೆ ಎಂದು ಹೇಳಿದರು. ಆ ಶಿಷ್ಯರನ್ನು ಕುರಿತು ಉಪಾಧ್ಯಾಯರು ನಾನು ಉಪಮನ್ಯುವಿಗೆ ಸರ್ವರೀತಿಯಿಂದಲೂ ಆಹಾರವನ್ನು ನಿಷೇಧಮಾಡಿದ್ದೇನೆ, ಅದರಿಂದ ಕೋಪಗೊಂಡ ಅವನು ಹಿಂದಿರುಗಿ ಬರುತ್ತಿಲ್ಲ. ಅವನು ಹೋಗಿ ಬಹಳ ಸಮಯವಾಯಿತು ಎಂದು ಹೇಳಿದರು.

ಸ ಏವಮುಕ್ತ್ವ ಗತ್ವಾರಣ್ಯಮುಪಮನ್ಯೋರಾಹ್ವಾನಂ ಚಕ್ರೇ ।
ಭೋ ಉಪಮನ್ಯೋ ಕ್ವಾಸಿ ವತ್ಸೈಹೀತಿ ॥೫೬॥

ಅವರು ಹೀಗೆ ಹೇಳಿ ಕಾಡಿಗೆ ಹೋಗಿ ಎಲೈ ಉಪಮನ್ಯುವೇ ಎಲ್ಲಿದ್ದೀಯೆ, ವತ್ಸ ಇಲ್ಲಿ ಬಾ, ಎಂದು ಅವನನ್ನು ಆಹ್ವಾನಿಸಿದರು.

ಸ ತದಾಹ್ವಾನಮುಪಾಧ್ಯಾಯಾಚ್ಛ್ರುತ್ವಾ ಪ್ರತ್ಯುವಾಚೋಚ್ಚೈಃ ।
ಅಹಮಸ್ಮಿನ್ ಕೂಪೇ ಪತಿತ ಇತಿ ॥೫೭॥

ಉಪಮನ್ಯುವು ಗುರುಗಳ ಆಹ್ವಾನ ಶಬ್ದವನ್ನು ಕೇಳಿ ಪೂಜ್ಯರೇ, ನಾನು ಈ ಕೂಪದಲ್ಲಿ ಬಿದ್ದಿದ್ದೇನೆ ಎಂದು ಗಟ್ಟಿಯಾಗಿ ಹೇಳಿದನು.

ಸ ತಮುಪಾಧ್ಯಾಯಃ ಪ್ರತ್ಯುವಾಚ । ಕಥಮಸಿ ಕೂಪೇ ಪತಿತ ಇತಿ॥

ಆಗ ಉಪಾಧ್ಯಾಯರು ಅವನನ್ನು ಕುರಿತು ಕೂಪದಲ್ಲಿ ಹೇಗೆ ಬಿದ್ದೆ ಎಂದು ಕೇಳಿದರು.

ಸ ಚ ತಂ ಪ್ರತ್ಯುವಾಚ । ಅರ್ಕಪತ್ರಾಣಿ ಭಕ್ಷಯಿತ್ವಾಂಧೀಭೂತೋಽಸ್ಮಿ।
ಅತಃ ಕೂಪೇ ಪತಿತ ಇತಿ ॥೫೯॥

ಆಗ ಅವನು ಉಪಾಧ್ಯಾಯರನ್ನು ಕುರಿತು ಎಕ್ಕದ ಎಲೆಗಳನ್ನು ತಿಂದು ಕಣ್ಣುಗಳನ್ನು ಕಳೆದುಕೊಂಡೆ, ಆದ್ದರಿಂದ ಕೂಪದಲ್ಲಿ ಬಿದ್ದಿದ್ದೇನೆ ಎಂದು ಹೇಳಿದನು.

ತಮುಪಾಧ್ಯಾಯಃ ಪ್ರತ್ಯುವಾಚ । ಅಶ್ವಿನೌ ಸ್ತುಹಿ ತೌ ತ್ವಾ ದೇವಭಿಷಜೌ
ಚಕ್ಷುಷ್ಮಂತಂ ಕರಿಷ್ಯತ ಇತಿ ॥೬೦॥

ಅವನನ್ನು ಕುರಿತು ಉಪಾಧ್ಯಾಯರು, ಅಶ್ವಿನೀ ದೇವತೆಗಳನ್ನು ಸ್ತೋತ್ರಮಾಡು, ದೇವವೈದ್ಯರಾದ ಅವರು ನಿನಗೆ ದೃಷ್ಟಿಯನ್ನು ಕರುಣಿಸುವರು ಎಂದು ಹೇಳಿದರು.

ಸ ಏವಮುಕ್ತ ಉಪಾಧ್ಯಾಯೇನ ಸ್ತೋತುಮುಪಚಕ್ರಮೇ
ದೇವಾವಶ್ವಿನೌ ವಾಗ್ಭಿರ್ಯಗ್ಭಿಃ ॥೬೧॥

ಉಪಾಧ್ಯಾಯರಿಂದ ಹೀಗೆ ಹೇಳಲ್ಪಟ್ಟ ಉಪಮನ್ಯುವು ಅಶ್ವಿನೀ ದೇವತೆಗಳನ್ನು ಋಗ್ವೇದದ ಮಂತ್ರಗಳಿಂದ ಸ್ತೋತ್ರಮಾಡಲು ಪ್ರಾರಂಭಿಸಿದನು.

ಪ್ರ ಪೂರ್ವಗೌ ಪೂರ್ವಜೌ ಚಿತ್ರಭಾನೂ
ಗಿರಾ ಶಂಸಾಮಿ ತಪನಾವನಂತೌ ।
ದಿವ್ಯೌ ಸುಪರ್ಣಾವರಜೌ ವಿಮಾನಾ-
ವಧಿಕ್ಷಿಪಂತೌ ಭುವನಾನಿ ವಿಶ್ವಾ ॥೬೨॥

ಎಲ್ಲರಿಗಿಂತಲೂ ಮುಂದೆ ಸಂಚರಿಸುವ, ಜಗತ್ತಿನಲ್ಲಿ ಮೊದಲೇ ಜನ್ಮವನ್ನು ಪಡೆದ, ವಿಚಿತ್ರವಾದ ಪ್ರಕಾಶವನ್ನು ಹೊಂದಿದ, ಶತ್ರುಗಳಿಗೆ ಸಂತಾಪವನ್ನು ಉಂಟುಮಾಡುವ, ಅಮೃತಪಾನ ಮಾಡಿದ ಕಾರಣದಿಂದ ನಾಶರಹಿತರಾದ, ದೇವತಾಗಣದಲ್ಲಿ ಸೇರಿರುವ, ಒಳ್ಳೆಯ ರಥವನ್ನು ಹೊಂದಿರುವ, ರಜೋಗುಣರಹಿತರಾದ, ಇಚ್ಛಾಜ್ಞಾನಸಹಿತರಾದ, ಎಲ್ಲ ಲೋಕಗಳನ್ನು ತಮ್ಮ ಪ್ರಭೆಯಿಂದ ಧಿಕ್ಕರಿಸುವ, ಎಲೈ ಅಶ್ವಿನೀ ದೇವತೆಗಳೇ ಶ್ರುತಿರೂಪವಾಕ್ಯಗಳಿಂದ ನಿಮ್ಮನ್ನು ಪ್ರಶಂಸಿಸುತ್ತೇನೆ.

ಹಿರಣ್ಮಯೌ ಶಕುನೀ ಸಾಂಪರಾಯೌ
ನಾಸತ್ಯದಸ್ರೌ ಸುನಸೌ ವೈಜಯಂತೌ ।
ಶುಕ್ರಂ ವಯಂತೌ ತರಸಾ ಸುವೇಪಾ-
ಽಭಿವ್ಯಯಂತಾವಸಿತಂ ವಿವಸ್ವತ್ ॥೬೩॥

ಸುವರ್ಣಾಭರಣಗಳಿಂದ ಅಲಂಕೃತರಾದ, ಆರೋಗ್ಯವನ್ನು ದಯಪಾಲಿಸಿ ಶಕ್ತಿಯನ್ನು ಉಂಟುಮಾಡುವ, ಭಕ್ತರ ಆಪತ್ತಿನಲ್ಲಿ ಅವರನ್ನು ರಕ್ಷಣೆಮಾಡಲು ಬರುವ, ಸುಂದರವಾದ ನಾಸಿಕವನ್ನುಳ್ಳ, ವಿಶೇಷವಾಗಿ ಜಯಶೀಲರಾದ, ಶೋಕರಹಿತನಾದ ಪರಮಾತ್ಮನ ಜ್ಞಾನವನ್ನು ಹೊಂದಿರುವ, ವೇಗದಿಂದ ಶತ್ರುಗಳ ಭಯಕಂಪವನ್ನುಂಟುಮಾಡುವ, ಕೃಷ್ಣವರ್ಣದ ಸೂರ್ಯಮಂಡಲವನ್ನು ಪಿತೃಸೇವೆಗಾಗಿ ಸಮೀಪಿಸುವ, ನಾಸತ್ಯದಸ್ರರನ್ನು ಪ್ರಶಂಸಿಸುತ್ತೇನೆ.

ಗ್ರಸ್ತಾಂ ಸುಪರ್ಣಸ್ಯ ಬಲೇನ ವಾರ್ತಿಕಾ-
ಮಮುಂಚತಾವಶ್ವಿನೌ ಸೌಭಗಾಯ ।
ತಾವತ್ಸುವೃತ್ತಾವನಮತ್ತಮಾಯ ಯೌ
ಸತ್ತಮಾ ಗಾ ಅರುಣಾ ಉದಾವಹನ್ ॥೬೪॥

ಯಾವ ಅತ್ಯುತ್ತಮರಾದ ಋಷಿಗಳು ಅಪ್ರತಿರುದ್ಧವಾದ ವೇದವಾಕ್ಯಗಳನ್ನು ಅಧ್ಯಯನಾದಿಗಳಿಂದ ಶ್ರೇಷ್ಠವಾಗಿ ಎತ್ತಿಹಿಡಿದರೋ ಅವರ ಸೌಭಾಗ್ಯಕ್ಕೋಸ್ಕರವಾಗಿ ಮತ್ತು ಲೋಕದಲ್ಲಿ ಯಾರಿಗೂ ನಮಸ್ಕಾರ ಮಾಡದಿರುವ ಬ್ರಹ್ಮಾದಿ ದೇವತೆಗಳಲ್ಲಿ ಅಗ್ರಗಣ್ಯನಾದ ನಾರಾಯಣನ ಪ್ರೀತ್ಯರ್ಥವಾಗಿ ಒಳ್ಳೆಯ ಶೀಲವನ್ನು ಹೊಂದಿರುವ ಎಲೈ ಅಶ್ವಿನೀ ದೇವತೆಗಳೇ, ಪೂರ್ಣನಾದ ಪರಮಾತ್ಮನ ಸಂಕಲ್ಪಬಲದಿಂದ ಯಾಜ್ಞಿಕರು ತಡೆಹಿಡಿದಿದ್ದ ನಿಮ್ಮ ಯಜ್ಞಾಹುತಿಭಾಗವನ್ನು ಚ್ಯವನಋಷಿಗಳ ಕಾಲದವರೆಗೂ ನೀವು ಪರಿತ್ಯಾಗ ಮಾಡಿದಿರಿ, ಅಂತಹ ನಿಮ್ಮನ್ನು ಪ್ರಶಂಸಿಸುತ್ತೇನೆ.

ಷಷ್ಟಿಶ್ಚ ಗಾವಸ್ತ್ರಿಶತಂ ಚ ಧೇನವೋ
ಏಕಂ ವತ್ಸಂ ಸುವತೇ ತಂ ದುಹಂತಿ ।
ನಾನಾಗೋಷ್ಠಾ ವಿಹಿತಾ ಏಕದೋಹನಾ-
ಸ್ತಾವಶ್ವಿನೌ ದುಹತೋ ಘರ್ಮ್ಯಮುಕ್ಥ್ಯಮ್ ॥೬೫॥

ಜ್ಞಾನವೆಂಬ ಕ್ಷೀರದೋಹನಕ್ಕಾಗಿ ವಿಹಿತವಾದ ಮನುಷ್ಯಪಿತೃ ದೇವತಾ ಭೇದದಿಂದ ಬೇರೆ ಬೇರೆ ಫಳಿಗೆಗಳ ಪ್ರಮಾಣವುಳ್ಳ ಕಾರಣದಿಂದ ನಾನಾ ವಿಧವಾದ ಮುನ್ನೂರರವತ್ತು ದಿನಗಳು ಎಂಬ ಗೋವುಗಳು ಒಟ್ಟು ಸೇರಿ ಒಂದು ಕರುವನ್ನು ಪಡೆದವು. ಅನೇಕ ಗೋವುಗಳಿಂದ ಒಂದು ಕರುವಿನ ಪ್ರಸವವು ಆಶ್ಚರ್ಯಕರವಾದುದು. ಮೂರು ವಿಧವಾದ ಜೀವರು ಆ ಗೋವುಗಳಿಂದ ಬೇರೆಬೇರೆ ರೀತಿಯಾದ ಹಾಲನ್ನು ಕರೆಯುತ್ತಾರೆ. ಅಧಮ ಜೀವರು ತಮೋಗುಣ ಪ್ರಧಾನವಾದುದರಿಂದ ಎಲ್ಲ ದಿನಗಳಲ್ಲಿಯೂ ವಿಷಯಭೋಗವನ್ನೇ ಬಯಸಿ ಸಂಪಾದಿಸುತ್ತಾರೆ. ಮಧ್ಯಮಜೀವರು ರಜೋಗುಣೋದ್ರೇಕದ ಕಾರಣದಿಂದ ಈ ಲೋಕದ ಸ್ತ್ರೀಯರ ಮತ್ತು ಸ್ವರ್ಗಸ್ತ್ರೀಯರ ಭೋಗವನ್ನು ಸಂಕಲ್ಪಿಸಿ, ಯಜ್ಞಾದಿಗಳನ್ನು ಮಾಡಿ ಆ ಭೋಗವನ್ನು ಪಡೆಯುತ್ತಾರೆ. ಉತ್ತಮರಾದ ದೇವ, ಋಷಿ ಮೊದಲಾದ ಜೀವರು ಮಾತ್ರ ಸತ್ವಗುಣೋದ್ರೇಕದ ಕಾರಣದಿಂದ ಆಶ್ವಿನೀ ದೇವತೆಗಳ ಜೊತೆಯಲ್ಲಿ ಸರ್ವದೋಷಪರಿಹಾರಕವೂ ಮತ್ತು ವಾಯುದೇವರ ಉಪದೇಶದಿಂದ ಮಾತ್ರ ಲಭ್ಯವಾದುದೂ ಆದ ಜ್ಞಾನವನ್ನು ಸಂಪಾದಿಸುತ್ತಾರೆ. ಅಂತಹ ಆಶ್ವಿನೀದೇವತೆಗಳನ್ನು ಸ್ತೋತ್ರಮಾಡುತ್ತೇನೆ.

ಏಕಂ ನಾಭಿಂ ಸಪ್ತಶತಾ ಅರಾಃ ಶ್ರಿತಾಃ
ಪ್ರಥಿಷ್ವಸ್ಯಾಂ ವಿಂಶತಿರರ್ಪಿತಾ ಅರಾಃ ।
ಸುನೇಮಿ ಚಕ್ರಂ ಪರಿವರ್ತತೇಽಜರಂ
ಮಾಯಯಾಽಶ್ವಿನೌ ಸಮವರ್ತೀ ಚರ್ಷಣೇ ॥೬೬॥

ಕಾಲವೆಂಬ ಚಕ್ರದ ಸಂವತ್ಸರವೆಂಬ ಸ್ಥೂಲನಾಭಿಯನ್ನು ಏಳುನೂರು ಅರಗಳು ಆಶ್ರಯಿಸಿವೆ. ಈ ನಾಭಿಯ ವಿಸ್ತಾರವಾದ ಪ್ರದೇಶದಲ್ಲಿ ಇಪ್ಪತ್ತು ಅರಗಳು ಆಶ್ರಿತವಾಗಿವೆ. (ವಿಸ್ತಾರವಾದ ದಿನವುಳ್ಳ ಗ್ರೀಷ್ಮ ಋತುವಿನಲ್ಲಿ ಹತ್ತು ಅರಗಳು, ವಿಸ್ತಾರವಾದ ರಾತ್ರಿಯುಳ್ಳ ಹೇಮಂತ ಋತುವಿನಲ್ಲಿ ಹತ್ತು ಅರಗಳು ಆಶ್ರಿತವಾಗಿವೆ) ಈ ಚಕ್ರವು ನಾಶರಹಿತವಾದುದು ಮತ್ತು ಒಳ್ಳೆಯ ಧಾರೆಗಳಿಂದ ಕೂಡಿದುದು. ಇದು ಯಾವಾಗಲೂ ತಿರುಗುತ್ತಿರುತ್ತದೆ. ಎಲೈ ಅಶ್ವಿನೀದೇವತೆಗಳೇ, ಈ ಚಕ್ರದಿಂದ ಎಲ್ಲ ಮನುಷ್ಯರನ್ನೂ ಸ್ಪರ್ಶಿಸಿ ಘಾತಿಸುವ ಯಮನು ನಿಮ್ಮನ್ನು ಮಾತ್ರ ಸ್ಪರ್ಶಿಸುವುದಿಲ್ಲ. ಅಂತಹ ನಿಮ್ಮನ್ನು ಸ್ತೋತ್ರಮಾಡುತ್ತೇನೆ.

ಏಕಂ ಚಕ್ರಂ ವರ್ತತೇ ದ್ವಾದಶಾರಂ
ಷಣ್ಣಾಭಮೇಕಾಕ್ಷಮೃತಸ್ಯ ಧಾರಮ್ ।
ಯಸ್ಮಿನ್ ದೇವಾ ಅಧಿ ವಿಶ್ವೇ ವಿಷಕ್ತಾ-
ಸ್ತಾವಶ್ವಿನೌ ಮುಂಚತೋ ಮಾ ವಿಷೀದಥ ॥೬೭॥

ಇನ್ನೊಂದು ವಿವಕ್ಷೆಯಿಂದ ಹನ್ನೆರಡು ಮಾಸಗಳೆಂಬ ಹನ್ನೆರಡು ಅರಗಳಿಂದ ಕೂಡಿದ ಈ ಸಂವತ್ಸರವೆಂಬ ಚಕ್ರವು ಆರು ಋತುಗಳಿಂದಲೂ, ಆರು ನಾಭಿಗಳಿಂದಲೂ ಪರಮಾತ್ಮನೆಂಬ ಒಂದು ಅಕ್ಷದಿಂದಲೂ (ತೂಬಿನಿಂದಲೂ) ಸತ್ಯಭೂತವಾದ ಜಗತ್ತಿಗೆ ಧಾರಕವಾಗಿದೆ. ಆ ರಥದಲ್ಲಿ ಸೂರ್ಯಚಂದ್ರಾದಿ ದೇವತೆಗಳು ಮನುಷ್ಯರ ದೃಷ್ಟಿಗೆ ಗೋಚರವಾಗುವಂತೆ ಸಂಬದ್ಧರಾಗಿದ್ದಾರೆ. ಎಲೈ ಅಶ್ವಿನೀದೇವತೆಗಳೇ ನೀವು ಆ ಚಕ್ರವನ್ನು ನನ್ನ ಮೇಲೆ ಪ್ರಯೋಗಿಸಬೇಡಿ. ವಿಶೇಷವಾಗಿ ನನ್ನ ಮೇಲೆ ಪ್ರಸನ್ನರಾಗಿ.

ಅಶ್ವಿನಾವಿಂದ್ರಮಮೃತಂ ತಂ ಪ್ರವೃತ್ತಂ
ತಿರೋಧತ್ತಾಮಶ್ವಿನೌ ದಾಸಪತ್ನೀಃ ।
ಭಿತ್ವಾ ಗಿರೀನಾಶ್ವಿನೌ ಗಾ ಉಪಾಚರನ್
ಅದೃಷ್ಟಮಹ್ನಾ ಪ್ರಥಿತಾऽಬಲಸ್ಯ ॥೬೮॥

ಎಲೈ ಅಶ್ವಿನೀದೇವತೆಗಳೇ, ಅಶ್ವಿನೀದೇವತೆಗಳ ಅಂತರ್ಯಾಮಿಯಾದ ಭಗವದ್ರೂಪಗಳೇ, ಆ ಗೋರೂಪವಾದ ವೇದವಿದ್ಯೆಗಳಿಂದ ಸಜ್ಜನರನ್ನು ಸಂತೋಷಪಡಿಸುವ ಜ್ಞಾನಾಮೃತವು ಪರಮೈಶ್ವರ್ಯೋಪೇತನಾದ ನಾರಾಯಣನ ಉದ್ದೇಶಿಸಿ ಪ್ರವೃತ್ತವಾಯಿತು. ಎಲೈ ಅಶ್ವಿನೀದೇವತೆಗಳೇ ಈ ವೇದವಿದ್ಯೆಯು ಶೂದ್ರರಿಗೂ ಮತ್ತು ಮನುಷ್ಯಸ್ತ್ರೀಯರಿಗೂ ತಿರೋಹಿತವಾಯಿತು. (ಏಕೆಂದರೆ ಅವರಿಗೆ ವೇದದ ಅಧಿಕಾರವಿಲ್ಲ) ಎಲೈ ಅಶ್ವಿನೀದೇವತೆಗಳೇ, (ಭಗವದ್ರೂಪಗಳೇ) ನಿಮ್ಮ ಅಂತರ್ಯಾಮಿಯಾದ ಮತ್ಸ್ಯ, ಹಯಗ್ರೀವ , ವ್ಯಾಸಾದಿ ರೂಪಗಳು ವೇದದ ಮೇಲಿನ ದ್ವೇಷದಿಂದ ವೇದವನ್ನು ತಮ್ಮ ಮುಖಗಳಿಂದ ಬಹಿಷ್ಕರಿಸಿದ ಮಧುಕೈಟಭಾದಿ ದೈತ್ಯರನ್ನು ಸಂಹರಿಸಿ ಸಜ್ಜನರನ್ನು ರಕ್ಷಣೆ ಮಾಡಲು ಲೋಕದಲ್ಲಿ ಸಜ್ಜನರ ಸಮೀಪದಲ್ಲಿ ಸಂಚರಿಸಿದವು. ಎಲೈ ಅಶ್ವಿನೀದೇವತೆಗಳೇ (ಭಗವದ್ರೂಪಗಳೇ) ಬ್ರಹ್ಮದೇವರ ಪ್ರಳಯರೂಪವಾದ ರಾತ್ರಿಯಲ್ಲಿ ಯಾರಿಂದಲೂ ನೋಡಲ್ಪಡದ ಆ ವೇದರಾಶಿಯನ್ನು ದಿನರೂಪವಾದ ಸೃಷ್ಟಿಕಾಲದಲ್ಲಿ ಹಯಗ್ರೀವ ರೂಪಿಯಾದ ನಾರಾಯಣನು

ಅಸ್ವತಂತ್ರರಾದ ಬ್ರಹ್ಮಾದಿ ದೇವತೆಗಳಿಗೆ ಉಪದೇಶಮಾಡಿ ವಿಸ್ತಾರಮಾಡಿದನು. ಅಂತಹ ವೇದ ಪ್ರವರ್ತಕವಾದ ಭಗವಂತನ ಸನ್ನಿಧಾನ ವಿಶೇಷಪಾತ್ರರಾದ ಅಶ್ವಿನೀದೇವತೆಗಳೇ(ಅಂತಹ ಭಗವದ್ರೂಪಗಳೇ) ನಾನು ನಿಮ್ಮನ್ನು ಸ್ತೋತ್ರಮಾಡುತ್ತೇನೆ.

ಯುವಾಂ ದಿಶೋ ಜನಯಥೋ ದಶಾಗ್ರೇ
ಸಮಾನಮೂರ್ಧ್ನಿ ರಥತಾ ವಿಯಂತಿ ।
ತಾಸಾಂ ಯಾನಮೃಷಯೋಽನುಪ್ರಯಾಂತಿ
ದೇವಾ ಮನುಷ್ಯಾಃ ಕ್ಷಿತಿಮಾಚರಂತಿ ॥೬೯॥

ಎಲೈ ಅಶ್ವಿನೀದೇವತೆಗಳೇ, ಅಶ್ವಿನೀದೇವತೆಗಳ ಅಂತರ್ಗತವಾದ ಭಗವದ್ರೂಪಗಳೇ, ನೀವು ಮೊದಲು ಸೃಷ್ಟಿಕಾಲದಲ್ಲಿ ಹತ್ತು ದಿಕ್ಕುಗಳನ್ನೂ ಸೃಷ್ಟಿಸಿದಿರಿ. ಆ ಹತ್ತು ದಿಕ್ಕುಗಳ ತಲೆಯಮೇಲೆ ಸಂಚರಿಸುವ ಜ್ಯೋತಿಶ್ಚಕ್ರದಲ್ಲಿ ವಿಶಿಷ್ಟರಾದ ಸೂರ್ಯಚಂದ್ರಾದಿ ದೇವತೆಗಳು ಸಂಬದ್ಧರಾಗಿದ್ದಾರೆ. ಆ ಜ್ಯೋತಿಶ್ಚಕ್ರವು ಸಂಚರಿಸುತ್ತಿರಲು ಋಷಿಗಳು ಅದನ್ನು ಅನುಸರಿಸಿ ವಿಮಾನದಲ್ಲಿ ಸಂಚರಿಸುತ್ತಾರೆ. ಮನುಷ್ಯರೂ ಸಹ ಸತ್ಕರ್ಮಗಳಿಂದ, ತಮ್ಮ ಪುಣ್ಯಫಲದ ಭೋಗವಿರುವವರೆಗೆ ದೇವತೆಗಳಂತೆ ವಿಮಾನದಲ್ಲಿ ಸಂಚರಿಸುತ್ತಾರೆ. ದೇವತೆಗಳಾದರೊ ಯಾವಾಗಲೂ ಸಂಚರಿಸುತ್ತಾರೆ. ಮನುಷ್ಯರು ತಮ್ಮ ಪುಣ್ಯದ ಭೋಗವು ಮುಗಿದ ಮೇಲೆ ಭೂಮಿಯಲ್ಲಿ ವಾಸಿಸುತ್ತಾರೆ. ಅಂತಹ ಜ್ಯೋತಿಶ್ಚಕ್ರಪ್ರವರ್ತಕವಾದ ಅಶ್ವಿನೀದೇವತೆಗಳ ಅಂತರ್ಯಾಮಿಯಾದ ಭಗವದ್ರೂಪಗಳನ್ನು ಪ್ರಶಂಸಿಸುತ್ತೇನೆ.

ಯುವಾಂ ಪರ್ಣಾ ವೀರುಧೋ ವಿಶ್ವರೂಪಾ-
ಸ್ತೇ ವಿಕ್ಷಿಪಂತಾ ಭುವನಾನಿ ವಿಶ್ವಾ ।
ತೇ ಭಾನವೋಽಪ್ಯನುಸೃತಾಶ್ಚರಂತಿ
ದೇವಾ ಮನುಷ್ಯಾಃ ಕ್ಷಿತಿಮಾಚರಂತಿ ॥೭೦॥

ಎಲೈ ಅಶ್ವಿನೀದೇವತೆಗಳೇ, ನೀವು ಜಗತ್ತಿನಲ್ಲಿರುವ ರೋಗಾದಿಗಳನ್ನು ನಾಶಮಾಡುವರಾಗಿದ್ದೀರಿ. ನಿಮ್ಮ ಆಶ್ರಮದಲ್ಲಿ ನಾನಾ ವರ್ಣಗಳಿಂದ ಕೂಡಿದ ಮರದಿಂದ ಉದುರಿದ ಎಲೆಗಳು ಬಳ್ಳಿಗಳು ಮತ್ತು ಪೊದೆಗಳು ಇವೆ. ಅವು ಸಹ ನಿಮ್ಮ ಮಂತ್ರೌಷಧದ ಪ್ರಭಾವದಿಂದ ಮತ್ತು ನಿಮ್ಮ ಮೇಲೆ ಬೀಸಿದ ಗಾಳಿಯ

ಸಂಬಂಧದ ಪ್ರಭಾವದಿಂದ ರೋಗಗಳನ್ನು ನಾಶಮಾಡುತ್ತವೆ. ಸೂರ್ಯನ ಉಷ್ಣಕಿರಣಗಳೂ ಸಹ ನಿಮ್ಮನ್ನು ಅನುಸರಿಸಿ ನಿಮ್ಮ ಆಶ್ರಮದ ಲತಾವೃಕ್ಷಗಳನ್ನು ಒಣಗಿಸುವುದಿಲ್ಲ. ದೇವತೆಗಳು ಮತ್ತು ಮನುಷ್ಯರು ನಿಮ್ಮ ಆಶ್ರಮದಲ್ಲಿ ವಾಸಿಸುತ್ತಾರೆ. ಅಂತಹ ನಿಮ್ಮನ್ನು ಸ್ತೋತ್ರಮಾಡುತ್ತೇನೆ.

ಸಂತೌ ನಾಸತ್ಯಾವಶ್ವಿನಾ ವಾಹ್ವಯೇ ವಾಂ
ತತಃ ಸ್ರಜಂ ವಿಭೃಥಃ ಪುಷ್ಕರಸ್ಯ ।
ಯೌ ನಾಸತ್ಯಾವಮೃತಾವೃತಾವೃಧಾ-
ವೃತೇ ದೇವಾಸ್ತತ್ಪದೇನ ಸೂತೇ ॥೭೧॥

ಅಸಜ್ಜನರಿಗೆ ನಿಲುಕದ ಎಲೈ ಅಶ್ವಿನಿದೇವತೆಗಳೇ ಸತ್ಯವಾದ ನನ್ನ ಕಳೆದುಹೋದ ದೃಷ್ಟಿಯ ಪುನಃ ಪ್ರಾಪ್ತಿಯ ಸಲುವಾಗಿ ವಿಷ್ಣ್ವಾದಿ ದೇವತೆಗಳ ಜೊತೆಯಲ್ಲಿ ಅರವಿಂದಮಾಲೆಯನ್ನು ಧರಿಸಿದಂತಹ ಅಮೃತಪಾನವನ್ನು ಮಾಡುವುದರಿಂದ ಮರಣರಹಿತರಾದಂತಹ ಸತ್ಯದಿಂದ ಅಭಿವೃದ್ಧರಾದಂತಹ ನಿಮ್ಮನ್ನು ಸ್ಪರ್ಶಮಾತ್ರದಿಂದ ಗರ್ಭರಕ್ಷಣೆಯನ್ನು ಮಾಡಲು ಸಮರ್ಥವಾದ ಆ ನಿಮ್ಮ ಅರವಿಂದ ಮಾಲೆಯ ಜೊತೆಯಲ್ಲಿ ವಿಷ್ಣುವೀರ್ಯಂ ಕಲ್ಪಯತು ಎಂಬ ಮಂತ್ರದಿಂದ ಆಹ್ವಾನಿಸುತ್ತೇನೆ.

ಮುಖೇನ ಗರ್ಭಂ ಲಭತಾಂ ಯುವಾನೌ
ಗತಾಸುರಿಕ್ತಂ ಪ್ರಪದೇನ ಸೂತೇ ।
ಸದ್ಯೋಽಜಾತೋ ಮಾತರಮತ್ತಿ ಗರ್ಭ-
ಸ್ತಾವಶ್ವಿನೌ ಮುಂಚಥೋ ಬೀಜಸೇಕಮ್ ॥೭೨॥

ಎಲೈ ಅಶ್ವಿನಿದೇವತೆಗಳೇ ನಿಮ್ಮ ಅನುಗ್ರಹದಿಂದ ಯುವದಂಪತಿಗಳು ಗರ್ಭವನ್ನು ಹೊಂದಲಿ. ತಾಯಿಯು ಮೃತವಲ್ಲದ ಗರ್ಭವನ್ನು ಪಾದಗಳನ್ನು ಮುಂದೆ ಮಾಡಿಕೊಂಡು ಪ್ರಸವಿಸಲಿ. ಏಕೆಂದರೆ ಸುಖದಿಂದ ಹೊರಗೆ ಬರದ ಆ ಗರ್ಭವು ಕೆಲವು ಸಲ ತಾಯಿಯನ್ನೇ ಕೊಲ್ಲುತ್ತದೆ. ಮತ್ತು ತಾನೂ ಮೃತವಾಗುತ್ತದೆ. ಆದ್ದರಿಂದ ಅಶ್ವಿನಿದೇವತೆಗಳೇ ಆ ತಾಯಿ ಮತ್ತು ಗರ್ಭದ ಮೇಲೆ ಜೀವನಹೇತುಭೂತವಾದ ನಿಮ್ಮಿಂದ ಅಭಿಮಂತ್ರಿತವಾದ ಜಲವನ್ನು ಪ್ರೋಕ್ಷಣೆ ಮಾಡಿ. ಕಳೆದು ಹೋದ ನನ್ನ ಕಣ್ಣುಗಳಿಗೆ ಅಂತಹ ಅಮೃತಸೇಕವನ್ನು ಮಾಡಿ ನನಗೆ ದೃಷ್ಟಿಯನ್ನು ನೀಡಿ ಎಂದು ನಿಮ್ಮನ್ನು ಆಹ್ವಾನಿಸುತ್ತಿದ್ದೇನೆ.

ಸೂತಃ

ಏವಮ್ಯಗ್ಬಿಶ್ಚಾನ್ಯೈ ರಸ್ತುವತ್ ॥೭೩॥

ಹೀಗೆ ಬೇರೆ ಮಂತ್ರಗಳಿಂದಲೂ ಸ್ತೋತ್ರವನ್ನು ಮಾಡಿದನು.

ಏವಂ ತೇನಾಭಿಷ್ಟುತಾವಶ್ವಿನಾವಾಜಗ್ಮತುಃ ॥೭೪॥

ಹೀಗೆ ಉಪಮನ್ಯುವಿನಿಂದ ಸ್ತೋತ್ರ ಮಾಡಲ್ಪಟ್ಟ ಅಶ್ವಿನಿದೇವತೆಗಳು ಆಗಮಿಸಿದರು.

ಆಹತುಶ್ಚೈನಂ ಆವಾಂ ಪ್ರೀತೌ ಸ್ವಃ ಏಷ
ತೇಽಪೂಪಃ ಖಾದೈನಮಿತಿ ॥೭೫॥

ಅವರು ಅವನನ್ನು ಕುರಿತು ನಾವು ಪ್ರಸನ್ನರಾಗಿದ್ದೇವೆ. ಇದು ನಿನ್ನ ಸಲುವಾಗಿ ತಂದ ಅಪೂಪ. ಇದನ್ನು ತಿನ್ನು ಎಂದು ಹೇಳಿದರು.

ಸ ಏವಮುಕ್ತಸ್ತೌ ಪ್ರತ್ಯುವಾಚ । ನಾನೃತಮೂಚತುರ್ಭವಂತೌ ।
ನ ತ್ವಹಮೇನಮಪೂಪಮುಪಯೋಕ್ತುಮುತ್ಸಹೇ
ಅನಿವೇದ್ಯ ಗುರವ ಇತಿ ॥೭೬॥

ಹೀಗೆ ಹೇಳಲ್ಪಟ್ಟ ಉಪಮನ್ಯುವು ನೀವಿಬ್ಬರೂ ಸತ್ಯವನ್ನೇ ಹೇಳುತ್ತಿದ್ದೀರಿ. ಆದರೆ ನಾನು ಮಾತ್ರ ಗುರುಗಳಿಗೆ ನಿವೇದಿಸದೆ ಇದನ್ನು ತಿನ್ನಲು ಬಯಸುವುದಿಲ್ಲ ಎಂದು ಉತ್ತರವನ್ನು ಹೇಳಿದನು.

ತತಸ್ತಮಾಶ್ವಿನಾವೂಚತುಃ । ಆವಾಭ್ಯಾಂ ಭವತ
ಉಪಾಧ್ಯಾಯೇನೈವಮಭಿಷ್ಟುತಾಭ್ಯಾಂ ಪ್ರೀತಾಭ್ಯಾಮಪೂಪೋ
ದತ್ತಃ ಉಪಯುಕ್ತಶ್ಚ ತೇನಾನಿವೇದ್ಯ ಗುರವೇ । ಅದ್ಯ ತ್ವಮಪಿ
ತಥೈವ ಕುರುಷ್ವ ಯಥಾ ಕೃತಮುಪಾಧ್ಯಾಯೇನೇತಿ ॥೭೭॥

ಆಗ ಅವನನ್ನು ಕುರಿತ ಅಶ್ವಿನಿದೇವತೆಗಳು ನಾವಿಬ್ಬರೂ ನಿನ್ನ ಉಪಾಧ್ಯಾಯರು ಹೀಗೆಯೇ ಸ್ತೋತ್ರಮಾಡಿದಾಗ ಪ್ರಸನ್ನರಾಗಿ ಬಂದು ಅಪೂಪವನ್ನು ನೀಡಿದೆವು. ಅವರು ತಮ್ಮ ಗುರುಗಳಿಗೆ ನಿವೇದಿಸದೆಯೇ ಅದನ್ನು ಸ್ವೀಕರಿಸಿದರು. ಈ ದಿನ ನೀನೂ ಹಾಗೆಯೇ ಮಾಡು.. ಉಪಾಧ್ಯಾಯರ ಮಾತು ಹಾಗಿರಲಿ ಎಂದು ಹೇಳಿದರು.

ಸ ಏವಮುಕ್ತಃ ಪ್ರತ್ಯುವಾಚ । ಏತೇನ ಪ್ರೀತ್ಯಾऽನುನಯೇನ
ಭವಂತಾವಭಿಷ್ಟುತೌನೋತ್ಸಹೇऽಹಮನಿವೇದ್ಯೋಪಾಧ್ಯಾಯಾಯೋಪ-
ಭೋಕ್ತುಮಿತಿ ॥೭೮॥

ಹೀಗೆ ಹೇಳಲ್ಪಟ್ಟ ಉಪಮನ್ಯುವು ಅವರನ್ನು ಕುರಿತು ನನ್ನ ಗುರುಗಳು ನನ್ನ ಮೇಲಿನ ಪ್ರೀತಿಯಿಂದ ಅಶ್ವಿನಿದೇವತೆಗಳನ್ನು ಸ್ತೋತ್ರ ಮಾಡು ಎಂದು ಹೇಳಿದ ಕಾರಣ ನಾನು ನಿಮ್ಮನ್ನು ಸ್ತೋತ್ರ ಮಾಡಿದೆ. (ಗುರುಗಳು ಮಾತ್ರ ಯಾರಿಂದಲೂ ಪ್ರೇರಿತರಾಗದೇ ನಿಮ್ಮನ್ನು ತಾವೇ ಸ್ತೋತ್ರ ಮಾಡಿದ್ದರು) ಆದ್ದರಿಂದ ನಾನು ಗುರುಗಳಿಗೆ ನಿವೇದಿಸದೆ ಇದನ್ನು ತಿನ್ನಲಾರೆ ಎಂದು ಹೇಳಿದನು.

ತಮಶ್ವಿನಾವಾಹತುಃ । ಪ್ರೀತೌ ಸ್ಮ ತವಾನಯಾ ಗುರುವೃತ್ತ್ಯಾऽಪೂಪಂ
ಭಕ್ಷಯ । ಉಪಾಧ್ಯಾಯಸ್ಯ ತೇ ದೇಹಃ ಕಾರ್ಷ್ಣಾಯಸೋ ದತ್ತಃ ।
ಭವತೋ ಹಿರಣ್ಮಯೋ ಭವತಿ । ಚಕ್ಷುಷ್ಮಾಂಶ್ಚ ಭವಸಿ
ಶ್ರೇಯಶ್ಚಾವಾಪ್ಸ್ಯಸೀತಿ ॥೭೯॥

ಆಗ ಅಶ್ವಿನಿದೇವತೆಗಳು ಅವನನ್ನು ಕುರಿತು ನಿನ್ನ ಗುರುಭಕ್ತಿಯಿಂದ ನಾವು ಪ್ರಸನ್ನರಾಗಿದ್ದೇವೆ. ಈ ಅಪೂಪವನ್ನು ಭಕ್ಷಿಸು. ನಿನ್ನ ಉಪಾಧ್ಯಾಯರಿಗೆ ನಾವು ಕಬ್ಬಿಣದಂತಹ ದೇಹವನ್ನು ಕೊಟ್ಟಿದ್ದೇವೆ. ನಿನ್ನ ದೇಹವು ಸುವರ್ಣಮಯವಾಗುತ್ತದೆ. ನೀನು ನೇತ್ರಗಳನ್ನು ಹೊಂದುತ್ತೀಯೆ. ಶ್ರೇಯಸ್ಸನ್ನು ಪಡೆಯುವಿ ಎಂದು ಹೇಳಿದರು.

ಸ ಏವಮುಕ್ತೋऽಶ್ವಿಭ್ಯಾಂ ಲಬ್ಧಚಕ್ಷುರುಪಾಧ್ಯಾಯ-
ಸಮೀಪಮಾಗತ್ಯೋಪಾಧ್ಯಾಯಮಭಿವಾದ್ಯಾಚಚ ಕ್ಷೇ ಚ ॥೮೦॥

ಅಶ್ವಿನಿದೇವತೆಗಳಿಂದ ಹೀಗೆ ಹೇಳಲ್ಪಟ್ಟ ಆ ಉಪಮನ್ಯುವು ನೇತ್ರಗಳನ್ನು ಪಡೆದು, ಉಪಾಧ್ಯಾಯರ ಸಮೀಪಕ್ಕೆ ಬಂದು, ಉಪಾಧ್ಯಾಯರಿಗೆ ನಮಸ್ಕರಿಸಿ ಎಲ್ಲವನ್ನೂ ಹೇಳಿದನು.

ಸ ಚಾಸ್ಯ ಪ್ರೀತಿಮಾನಭೂತ್ । ಆಹ ಚೈನಂ ಯಥಾಶ್ವಿನಾವಾ-
ಹತುಸ್ತಥಾತ್ವಂ ಶ್ರೇಯೋऽವಾಪ್ಸ್ಯಸಿ ।
ಸರ್ವೇ ವೇದಾಃ ಪ್ರತಿಭಾಸ್ಯಂತೀತಿ ॥೮೧॥

ಉಪಾಧ್ಯಾಯರು ಅವನಿಗೆ ಪ್ರಸನ್ನರಾದರು. ಅವರು ಅವನನ್ನು ಕುರಿತು ಅಶ್ವಿನಿದೇವತೆಗಳು ಹೇಳಿದಂತೆ ನಿನಗೆ ಶ್ರೇಯಸ್ಸು ಉಂಟಾಗುವುದು. ಎಲ್ಲಾ ವೇದಗಳೂ ನಿನಗೆ ಪ್ರತಿಭಾತವಾಗುವವು ಎಂದು ಹೇಳಿದರು.

ಏಷಾ ಪರೀಕ್ಷಾ ತಸ್ಯೋಪನ್ಯೋಃ ॥೮೨॥

ಇದು ಆ ಉಪಮನ್ಯುವಿನ ಪರೀಕ್ಷೆ.

ಅಥಾಪರಃ ತಸ್ಯೈವಾಯೋಽಸ್ಯ ಧೌಮ್ಯಸ್ಯ ಬೈದೋ ನಾಮ ।
ತಮುಪಾಧ್ಯಾಯಃ ಸಂದಿದೇಶ । ವತ್ಸ ಬೈದ ಇಹಾಸ್ಯತಾಂ
ಭವತಾಽಸ್ಮದ್ಗೃಹೇ ಕಂಚಿತ್ಕಾಲಂ ಶುಶ್ರೂಷಣಪರೇಣ
ಭವಿತವ್ಯಂ ಶ್ರೇಯಸ್ತೇ ಭವಿಷ್ಯತೀತಿ ॥೮೩॥

ಅನಂತರ ಅದೇ ಆಯೋದ ಧೌಮ್ಯರ ಇನ್ನೊಬ್ಬ ಶಿಷ್ಯನಿದ್ದನಷ್ಟೆ. ಅವನನ್ನು ಕುರಿತು ಉಪಾಧ್ಯಾಯರು ವತ್ಸ ಬೈದ ನನ್ನ ಮನೆಯಲ್ಲೇ ಸ್ವಲ್ಪ ಸಮಯ ಸುಶ್ರೂಷೆಯನ್ನು ಮಾಡಿಕೊಂಡಿರು ನಿನಗೆ ಶ್ರೇಯಸ್ಸು ಉಂಟಾಗುವುದು ಎಂದು ಆದೇಶವನ್ನು ನೀಡಿದರು.

ಸ ತಥೇತ್ಯುಕ್ತ್ವಾ ದೀರ್ಘಕಾಲಂ ಗುರುಕುಲೇ ಗುರುಶುಶ್ರೂಷಾ-
ಪರೋಽಭವತ್ ॥೮೪॥

ಅವನು ಹಾಗೆಯೇ ಆಗಲಿ ಎಂದು ಗುರುಕುಲದಲ್ಲಿಯೇ ಬಹುಕಾಲ ಗುರುಶುಶ್ರೂಷಾರತನಾಗಿ ಇದ್ದನು.

ಸ ಗೌರಿವ ನಿತ್ಯಂ ಗುರುಧುರಿ ನಿಯುಜ್ಯಮಾನಃ ಶೀತೋಷ್ಣಕ್ಷುತ್ಪ್ರ-
ಷ್ಣಾದುಃಖಸಹಃ ಸರ್ವತ್ರಾಪ್ರತಿಕೂಲಃ । ತಸ್ಯ ಮಹತಾ ಕಾಲೇನ
ಗುರುಃ ಪರಿತೋಷಂ ಜಗಾಮ ॥೮೫॥

ಅವನು ಎತ್ತಿನಂತೆ ದೊಡ್ಡ ಭಾರವನ್ನು ಹೊತ್ತುಕೊಳ್ಳುವುದರಲ್ಲಿ ನಿಯೋಜಿಸಲ್ಪಟ್ಟನು. ಶೀತ, ಉಷ್ಣ, ಹಸಿವು, ನೀರಡಿಕೆ ಮೊದಲಾದ ದುಃಖಗಳನ್ನು ಸಹಿಸಿಕೊಂಡು ಯಾವಾಗಲೂ ಪ್ರತಿಕೂಲನಾಗದೆಯೇ ಇದ್ದನು. ಎಷ್ಟೋ ಸಮಯ ಕಳೆದ ಮೇಲೆ ಗುರುಗಳು ಅವನಿಗೆ ಸಂತುಷ್ಟರಾದರು.

ತತ್ಪರಿತೋಷಾಚ್ಚ ಶ್ರೇಯಃ ಸರ್ವಜ್ಞತ್ವಾಂ ಚಾಪ ।
ಏಷಾ ತಸ್ಯಾಪಿ ಪರೀಕ್ಷಾ ಬೈದಸ್ಯ ॥೮೬॥

ಗುರುಗಳ ಪರಿತೋಷದಿಂದ ಅವನಿಗೆ ಶ್ರೇಯಸ್ಸು ಮತ್ತು ಸರ್ವಜ್ಞತ್ವವು ಉಂಟಾದವು. ಇದು ಆ ಬೈದನ ಪರೀಕ್ಷೆ.

ಸ ಉಪಾಧ್ಯಾಯೇನಾನುಜ್ಞಾತಃ ಸಮಾವೃತ್ತಸ್ತಸ್ಮಾದ್
ಗುರುಕುಲನಿವಾಸಾದ್ ಗೃಹಾಶ್ರಮಂ ಪ್ರತ್ಯಪದ್ಯತ ॥೮೭॥

ಆ ಬೈದನು ಉಪಾಧ್ಯಾಯರ ಅನುಮತಿಯನ್ನು ಪಡೆದು ಆ ಗುರುಕುಲವಾಸದಿಂದ ಹಿಂದಿರುಗಿ ಬಂದು ಗೃಹಸ್ಥಾಶ್ರಮವನ್ನು ಸ್ವೀಕರಿಸಿದನು.

ತಸ್ಯಾಪಿ ಸ್ವಗೃಹೇ ವಸತಸ್ತ್ರಯಃ ಶಿಷ್ಯಾ ಬಭೂವುಃ । ಸ ಶಿಷ್ಯಾನ್ನ
ಕಿಂಚಿದುವಾಚ ಕರ್ಮ ವಾ ಕ್ರಿಯತಾಂ ಶುಶ್ರೂಷಾ ವೇತಿ ।
ದುಃಖಾಭಿಜ್ಞೋ ಗುರುಕುಲವಾಸಸ್ಯ ಶಿಷ್ಯಾನ್ ಪರಿಕ್ಲೇಶೇನ
ಯೋಜಯಿತುಂ ನೇಯೇಷ ॥೮೮॥

ತನ್ನ ಮನೆಯಲ್ಲಿ ವಾಸಿಸುವ ಅವನಿಗೂ ಸಹ ಮೂವರು ಶಿಷ್ಯರು ಇದ್ದರು. ಅವನು ಶಿಷ್ಯರನ್ನು ಕುರಿತು ಕೆಲಸವನ್ನು ಮಾಡಿ, ಅಥವಾ ಸೇವೆಯನ್ನು ಮಾಡಿ ಎಂಬ ಯಾವ ಮಾತನ್ನೂ ಆಡಲಿಲ್ಲ. ಗುರುಕುಲವಾಸದ ದುಃಖವನ್ನು ತಿಳಿದ ಅವನು ಶಿಷ್ಯರಿಗೆ ಕ್ಲೇಶವನ್ನುಂಟುಮಾಡಲು ಬಯಸಲಿಲ್ಲ.

ಅಥ ಕಸ್ಯಚಿತ್ಕಾಲಸ್ಯ ಬೈದಂ ಬ್ರಾಹ್ಮಣಂ ಜನಮೇಜಯಃ ಪೌಷ್ಯಶ್ಚ
ಕ್ಷತ್ರಿಯಾವುಭಾವುಪಾಧ್ಯಾಯಂ ವರಯಾಂಚಕ್ರತುಃ ॥೮೯॥

ಸ್ವಲ್ಪಸಮಯವು ಕಳೆದ ಮೇಲೆ ಕ್ಷತ್ರಿಯರಾದ ಜನಮೇಜಯ ಮತ್ತು ಪೌಷ್ಯ ಇಬ್ಬರೂ ಬ್ರಾಹ್ಮಣನಾದ ಬೈದನನ್ನು ಪುರೋಹಿತನನ್ನಾಗಿ ವರಿಸಿದರು. (ಸ್ವೀಕರಿಸಿದರು)

ಸ ಕದಾಚಿದ್ ಯಾಜ್ಯಕಾರ್ಯೇಣಾಭಿಪ್ರಸ್ಥಿತೋ ಹ್ಯುದಂಕಂ ನಾಮ
ಶಿಷ್ಯಂ ಯೋಜಯಾಮಾಸ । ಭೋ ಉದಂಕ ಯತ್ಕಿಂಚಿದ್ ಗೃಹೇ ಮಾಂ
ವಿನಾ ಪರಿಹೀಯತೇ ತದಿಚ್ಛಾಮಿ ಭವತಾऽ-
ಪರಿಹೀಯಮಾಣಂ ಕ್ರಿಯಮಾಣಮಿತಿ ॥೯೦॥

ಅವನು ಒಮ್ಮೆ ಯಜ್ಞಸಂಬಂಧಿ ಕಾರ್ಯದ ಸಲುವಾಗಿ ಮನೆಯಿಂದ ಹೊರಗೆ ಹೊರಡುತ್ತಾ ಉದಂಕ ಎಂಬ ಶಿಷ್ಯನನ್ನು ಕುರಿತು, ಎಲೈ ಉದಂಕನೇ ನಾನು ಮನೆಯಲ್ಲಿ ಇಲ್ಲದಿದ್ದಾಗ ಏನಾದರೂ ನ್ಯೂನತೆ ಉಂಟಾದರೆ ನೀನು ಅದನ್ನು ಪರಿಪೂರ್ಣಗೊಳಿಸಬೇಕೆಂದು ನಾನು ಬಯಸುತ್ತೇನೆ ಎಂದು ನಿಯೋಜಿಸಿದನು.

ಸ ಏವಂ ಪ್ರತಿಸಮಾದಿಶ್ಯೋದಂಕಂ ಬೈದಃ ಪ್ರವಾಸಂ ಜಗಾಮ ॥

ಹೀಗೆ ಆ ಬೈದನು ಉದಂಕನಿಗೆ ಆದೇಶವನ್ನು ಕೊಟ್ಟು ಪ್ರವಾಸಕ್ಕೆ ಹೊರಟನು.

ಅಥೋದಂಕಃ ಶುಶ್ರೂಷುರ್ಗುರುನಿಯೋಗಮನುತಿಷ್ಠಮಾನಸ್ತತ್ರ
ಗುರುಕುಲೇ ವಸತಿ ಸ್ಮ ॥೯೨॥

ಅನಂತರ ಉದಂಕನು ಗುರುಗಳ ಆಜ್ಞೆಯಂತೆ ಗುರುಗಳ ಮನೆಯಲ್ಲಿ ಶುಶ್ರೂಷೆಯನ್ನು ಮಾಡುತ್ತಾ ಅಲ್ಲಿಯೇ ವಾಸಮಾಡಿದನು.

ಸ ವಸಂಸ್ತತ್ರೋಪಾಧ್ಯಾಯಸ್ತ್ರೀಭಿಃ ಸಹಿತಾಭಿರಾಹೂಯೋಕ್ತಃ ।
ಉಪಾಧ್ಯಾಯಾನೀ ತೇ ಋತುಮತೀ । ಉಪಾಧ್ಯಾಯಶ್ಚ
ಪ್ರೋಷಿತಃ । ಅಸ್ಯಾ ಯಥಾಯಮೃತುರ್ವಂಧ್ಯೋ ನ ಭವಿಷ್ಯತಿ ತಥಾ
ಕ್ರಿಯತಾಮೇತದು ನಾವಸೀದತೀತಿ ॥೯೩॥

ಅವನು ಅಲ್ಲಿ ವಾಸಮಾಡುತ್ತಿರುವಾಗ ಉಪಾಧ್ಯಾಯರ ಸ್ತ್ರೀಯರೆಲ್ಲರೂ ಒಟ್ಟಿಗೆ ಬಂದು ಅವನನ್ನು ಕರೆದು ನಿನ್ನ ಉಪಾಧ್ಯಾಯರ ಪತ್ನಿಯು ಋತುಮತಿಯಾಗಿದ್ದಾಳೆ. ಉಪಾಧ್ಯಾಯರು ಪ್ರವಾಸಕ್ಕೆ ಹೋಗಿದ್ದಾರೆ. ಈ ಉಪಾಧ್ಯಾಯ ಪತ್ನಿಯ ಋತುವು ವ್ಯರ್ಥವಾಗಿ ನಾಶವಾಗಿ ಹೋಗದಂತೆ ನೀನು ಮಾಡಬೇಕು ಎಂದು ಹೇಳಿದರು.

ಸ ಏವಮುಕ್ತಃ ಸ್ತ್ರಿಯಃ ಪ್ರತ್ಯುವಾಚ । ನ ಮಯಾ ಸ್ತ್ರೀಣಾಂ
ವಚನಾದಿದಮಕಾರ್ಯಂ ಕರ್ತವ್ಯಂ । ನ ಹ್ಯಹಮುಪಾಧ್ಯಾಯೇನ
ಸಂದಿಷ್ಟಃ ಅಕಾರ್ಯಮಪಿ ತ್ವಯಾ ಕರ್ತವ್ಯಮಿತಿ ॥೯೪॥

ಹೀಗೆ ಹೇಳಲ್ಪಟ್ಟ ಉದಂಕನು ಆ ವನಿತೆಯರನ್ನು ಕುರಿತು, ನಾನು ಸ್ತ್ರೀಯರಾದ ನಿಮ್ಮ ಮಾತಿನಂತೆ ಈ ಅಕಾರ್ಯವನ್ನು ಮಾಡಲಾರೆ. ನನಗೆ ಉಪಾಧ್ಯಾಯರು ನೀನು ಅಕಾರ್ಯವನ್ನು ಮಾಡಬೇಕೆಂಬ ಆದೇಶವನ್ನು ನೀಡಿಲ್ಲ ಎಂದು ಹೇಳಿದನು.

ತಸ್ಯ ಪುನರುಪಾಧ್ಯಾಯಃ ಕಾಲಾಂತರೇ ಗೃಹಾನುಪಜಗಾಮ
ತಸ್ಮಾತ್ ಪ್ರವಾಸಾತ್ ॥೯೫॥

ಅವನ ಉಪಾಧ್ಯಾಯರು ಕಾಲಾಂತರದಲ್ಲಿ ಆ ಪ್ರವಾಸದಿಂದ ಮನೆಗೆ ಹಿಂದಿರುಗಿದರು.

ಸ ತಸ್ಯ ತದ್ ವೃತ್ತಾಂತಮಶೇಷತ ಉಪಲಭ್ಯ ಪ್ರೀತಿಮಾನಭೂತ್॥

ಅವರು ಉದಂಕನ ಎಲ್ಲಾ ವೃತ್ತಾಂತವನ್ನೂ ತಿಳಿದು ಅವನ ಮೇಲೆ ಸಂತುಷ್ಟರಾದರು.

ಉವಾಚ ಚೈನಂ ವತ್ಸೋದಂಕ ಕಿಂ ತೇ ಪ್ರಿಯಂ
ಕರವಾಣಿ ಧರ್ಮತಃ ಶುಶ್ರೂಷಿತೋಽಸ್ಮಿ ಭವತಾ ।
ತೇನ ಪ್ರೀತಿಃ ಪರಸ್ಪರೇಣ ನೌ ಸಂವೃದ್ಧಾ ।
ತದನುಜಾನೇ ಸರ್ವಾಮೇವ ಸಿದ್ಧಿಂ ಪ್ರಾಪ್ಸ್ಯಸಿ ಗಮ್ಯತಾಮಿತಿ ॥೯೭॥

ಅವನನ್ನು ಕುರಿತು ವತ್ಸ ಉದಂಕ, ನಾನು ನಿನಗೆ ಏನು ಪ್ರಿಯವನ್ನು ಮಾಡಲಿ? ನೀನು ಧರ್ಮದಿಂದ ನನ್ನ ಸೇವೆಯನ್ನು ಮಾಡಿದ್ದೀಯೆ. ಅದರಿಂದ ನಮ್ಮಿಬ್ಬರಿಗೂ ಪರಸ್ಪರ ಪ್ರೀತಿಯುಂಟಾಗಿದೆ. ಆದ್ದರಿಂದ ನಾನು ಅನುಮತಿಯನ್ನು ನೀಡುತ್ತಿದ್ದೇನೆ. ನೀನು ಎಲ್ಲಾ ಸಿದ್ಧಿಗಳನ್ನೂ ಹೊಂದುವಿ. ಹೋಗಿ ಬಾ ಎಂದು ಹೇಳಿದರು.

ಸ ಏವಮುಕ್ತಃ ಪ್ರತ್ಯುವಾಚ । ಕಿಂ ತೇ ಪ್ರಿಯಂ ಕರವಾಣೀತಿ ॥೯೮॥

ಹೀಗೆ ಹೇಳಲ್ಪಟ್ಟ ಉದಂಕನು ನಿಮಗೆ ನಾನು ಏನು ಪ್ರಿಯವನ್ನು ಮಾಡಲಿ ಎಂದು ಕೇಳಿದನು.

ಏವಮಪ್ಯಾಹ ಯಚ್ಚಾಧರ್ಮೇಣ ವಿಬ್ರೂತೇ ಯಚ್ಚಾಧರ್ಮೇಣ ಪೃಚ್ಛತಿ।
ತಯೋರನ್ಯತರಃ ಪ್ರೈಷೀ ವಿದ್ವೇಷಂ ವಾ ನಿಗಚ್ಛತಿ ॥೯೯॥

ಶಿಷ್ಯನು ಹೀಗೆ ಹೇಳಿದ ಮೇಲೆ ಗುರುಗಳು ಹೇಳಿದರು. ಯಾರು ಅಧರ್ಮದಿಂದ ಪ್ರಶ್ನೆಯನ್ನು ಮಾಡುತ್ತಾರೋ, ಮತ್ತು ಯಾರು ಅಧರ್ಮದಿಂದ ಉತ್ತರವನ್ನು ಹೇಳುತ್ತಾರೋ, ಅವರಲ್ಲಿ ಸೇವಕನಾಗಲೀ, ಸೇವ್ಯನಾಗಲೀ ದ್ವೇಷವನ್ನು ಹೊಂದುತ್ತಾರೆ ಎಂದು ಹೇಳಿದರು.

ನಾನು ಹೋಗಿ ಬಾ ಎಂದು ಅನುಮತಿಯನ್ನು ಕೊಟ್ಟಮೇಲೆ ನಿನ್ನ ಈ ಪ್ರಶ್ನೆಯು ಅಧರ್ಮವಾದುದು. ಅಧರ್ಮದ ಪ್ರಶ್ನೆಯನ್ನು ಕೇಳಿದರೆ, ಅಧರ್ಮದಿಂದ ಉತ್ತರವನ್ನು ಕೊಟ್ಟರೆ, ಶಿಷ್ಯನು ಅಧರ್ಮದ ಪ್ರಶ್ನೆಯನ್ನು ಕೇಳಿದನು ಎಂದು ಗುರುವಿಗಾಗಲೀ, ಗುರುವು ಅಸಾಧ್ಯವಾದ ಕಾರ್ಯವನ್ನು ಹೇಳಿದನೆಂದು ಶಿಷ್ಯನಿಗಾಗಲೀ ದ್ವೇಷವುಂಟಾಗುತ್ತದೆ ಎಂದು ಅಭಿಪ್ರಾಯ.

ಅಹಮನುಜ್ಞಾತೋ ಭವತಾ । ಇಷ್ಟಂ ತೇ ಗುರ್ವರ್ಥಮುಪಹರ್ತುಮಿತಿ ॥

ನಾನು ನಿಮ್ಮಿಂದ ಅನುಮತಿಯನ್ನು ಪಡೆದಿದ್ದೇನೆ. ನಿಮಗೆ ಇಷ್ಟವಾದ ಗುರುದಕ್ಷಿಣೆಯನ್ನು ತಂದುಕೊಡಲು ನಾನು ಬಯಸುತ್ತೇನೆ.

ತೇನೈವಮುಕ್ತ ಉಪಾಧ್ಯಾಯಃ ಪ್ರತ್ಯುವಾಚ ।
ವತ್ಸೋದಂಕ ಉಷ್ಯತಾಂ ತಾವದಿತಿ ॥೧೦೧॥

ಅವನಿಂದ ಹೀಗೆ ಹೇಳಲ್ಪಟ್ಟ ಉಪಾಧ್ಯಾಯರು ವತ್ಸ ಉದಂಕ ಸ್ವಲ್ಪ ಸಮಯ ಇಲ್ಲಿಯೇ ವಾಸಮಾಡು ಎಂದು ಹೇಳಿದರು.

ಸ ಕದಾಚಿತ್ ತಮುಪಾಧ್ಯಾಯಮಾಹೋದಂಕಃ ಆಜ್ಞಾಪಯತು
ಭವಾನ್ ಕಿಮುಪಹರಾಮಿ ಗುರ್ವರ್ಥಮಿತಿ ॥೧೦೨॥

ಆ ಉದಂಕನು ಒಮ್ಮೆ ಆ ಉಪಾಧ್ಯಾಯರನ್ನು ಕುರಿತು ನಿಮಗೆ ಏನು ಗುರುದಕ್ಷಿಣೆಯನ್ನು ಕೊಡಲಿ ಎಂದು ಆಜ್ಞೆಯನ್ನು ಮಾಡಿ ಎಂದು ಹೇಳಿದನು.

ತಮುಪಾಧ್ಯಾಯಃ ಪ್ರತ್ಯುವಾಚ । ವತ್ಸೋದಂಕ ಬಹುಶೋ ಮಾಂ
ಚೋದಯಸಿ ಗುರ್ವರ್ಥಮುಪಹರೇಯಮಿತಿ ।
ತಚ್ಚೈನಾಮುಪಾಧ್ಯಾಯಾನೀಂ ಗಚ್ಛ ಪೃಚ್ಛ ಕಿಮುಪಹರಾಮಿ
ಗುರ್ವರ್ಥಮಿತಿ । ಏಷಾ ಯದ್ ಬ್ರವೀತಿ ತದುಪಹರಸ್ವೇತಿ ॥೧೦೩॥

ಅವನನ್ನು ಕುರಿತು ಉಪಾಧ್ಯಾಯರು ವತ್ಸ ಉದಂಕ ನೀನು ಮತ್ತೆ ಮತ್ತೆ ಗುರುದಕ್ಷಿಣೆಯನ್ನು ತಂದುಕೊಡುತ್ತೇನೆಂದು ನನಗೆ ಒತ್ತಾಯವನ್ನು ಮಾಡುತ್ತಿದ್ದೀಯೆ, ನೀನು ಹೋಗಿ ನನ್ನ ಪತ್ನಿಯನ್ನು ಏನು ಗುರುದಕ್ಷಿಣೆಯನ್ನು ತಂದುಕೊಡಲಿ ಎಂದು ಕೇಳು. ಅವಳು ಏನು ಹೇಳುತ್ತಾಳೆಯೋ, ಅದನ್ನು ತೆಗೆದುಕೊಂಡು ಬಾ ಎಂದು ಉತ್ತರವನ್ನು ಕೊಟ್ಟರು.

ತಸ್ಯ ಪುನರುಪಾಧ್ಯಾಯಃ ಕಾಲಾಂತರೇ ಗೃಹಾನುಪಜಗಾಮ
ತಸ್ಮಾತ್ ಪ್ರವಾಸಾತ್ ॥೯೫॥

ಅವನ ಉಪಾಧ್ಯಾಯರು ಕಾಲಾಂತರದಲ್ಲಿ ಆ ಪ್ರವಾಸದಿಂದ ಮನೆಗೆ ಹಿಂದಿರುಗಿದರು.

ಸ ತಸ್ಯ ತದ್ ವೃತ್ತಾಂತಮಶೇಷತ ಉಪಲಭ್ಯ ಪ್ರೀತಿಮಾನಭೂತ್॥

ಅವರು ಉದಂಕನ ಎಲ್ಲಾ ವೃತ್ತಾಂತವನ್ನೂ ತಿಳಿದು ಅವನ ಮೇಲೆ ಸಂತುಷ್ಟರಾದರು.

ಉವಾಚ ಚೈನಂ ವತ್ಸೋದಂಕ ಕಿಂ ತೇ ಪ್ರಿಯಂ
ಕರವಾಣೆ ಧರ್ಮತಃ ಶುಶ್ರೂಷಿತೋಽಸ್ಮಿ ಭವತಾ ।
ತೇನ ಪ್ರೀತಿಃ ಪರಸ್ಪರೇಣ ನೌ ಸಂವೃದ್ಧಾ ।
ತದನುಜಾನೇ ಸರ್ವಾಮೇವ ಸಿದ್ಧಿಂ ಪ್ರಾಪ್ಸ್ಯಸಿ ಗಮ್ಯತಾಮಿತಿ ॥೯೭॥

ಅವನನ್ನು ಕುರಿತು ವತ್ಸ ಉದಂಕ, ನಾನು ನಿನಗೆ ಏನು ಪ್ರಿಯವನ್ನು ಮಾಡಲಿ? ನೀನು ಧರ್ಮದಿಂದ ನನ್ನ ಸೇವೆಯನ್ನು ಮಾಡಿದ್ದೀಯೆ. ಅದರಿಂದ ನಮ್ಮಿಬ್ಬರಿಗೂ ಪರಸ್ಪರ ಪ್ರೀತಿಯುಂಟಾಗಿದೆ. ಆದ್ದರಿಂದ ನಾನು ಅನುಮತಿಯನ್ನು ನೀಡುತ್ತಿದ್ದೇನೆ. ನೀನು ಎಲ್ಲಾ ಸಿದ್ಧಿಗಳನ್ನೂ ಹೊಂದುವಿ. ಹೋಗಿ ಬಾ ಎಂದು ಹೇಳಿದರು.

ಸ ಏವಮುಕ್ತಃ ಪ್ರತ್ಯುವಾಚ । ಕಿಂ ತೇ ಪ್ರಿಯಂ ಕರವಾಣೇತಿ ॥೯೮॥

ಹೀಗೆ ಹೇಳಲ್ಪಟ್ಟ ಉದಂಕನು ನಿಮಗೆ ನಾನು ಏನು ಪ್ರಿಯವನ್ನು ಮಾಡಲಿ ಎಂದು ಕೇಳಿದನು.

ಏವಮಪ್ಯಾಹ ಯಚ್ಚಾಧರ್ಮೇಣ ವಿಬ್ರೂತೇ ಯಚ್ಚಾಧರ್ಮೇಣ ಪೃಚ್ಛತಿ।
ತಯೋರನ್ಯತರಃ ಪ್ರೈಷೀ ವಿದ್ವೇಷಂ ವಾ ನಿಗಚ್ಛತಿ ॥೯೯॥

ಶಿಷ್ಯನು ಹೀಗೆ ಹೇಳಿದ ಮೇಲೆ ಗುರುಗಳು ಹೇಳಿದರು. ಯಾರು ಅಧರ್ಮದಿಂದ ಪ್ರಶ್ನೆಯನ್ನು ಮಾಡುತ್ತಾರೋ, ಮತ್ತು ಯಾರು ಅಧರ್ಮದಿಂದ ಉತ್ತರವನ್ನು ಹೇಳುತ್ತಾರೋ, ಅವರಲ್ಲಿ ಸೇವಕನಾಗಲೀ, ಸೇವ್ಯನಾಗಲೀ ದ್ವೇಷವನ್ನು ಹೊಂದುತ್ತಾರೆ ಎಂದು ಹೇಳಿದರು.

ನಾನು ಹೋಗಿ ಬಾ ಎಂದು ಅನುಮತಿಯನ್ನು ಕೊಟ್ಟಮೇಲೆ ನಿನ್ನ ಈ ಪ್ರಶ್ನೆಯು ಅಧರ್ಮವಾದುದು. ಅಧರ್ಮದ ಪ್ರಶ್ನೆಯನ್ನು ಕೇಳಿದರೆ, ಅಧರ್ಮದಿಂದ ಉತ್ತರವನ್ನು ಕೊಟ್ಟರೆ, ಶಿಷ್ಯನು ಅಧರ್ಮದ ಪ್ರಶ್ನೆಯನ್ನು ಕೇಳಿದನು ಎಂದು ಗುರುವಿಗಾಗಲೀ, ಗುರುವು ಅಸಾಧ್ಯವಾದ ಕಾರ್ಯವನ್ನು ಹೇಳಿದನೆಂದು ಶಿಷ್ಯನಿಗಾಗಲೀ ದ್ವೇಷವುಂಟಾಗುತ್ತದೆ ಎಂದು ಅಭಿಪ್ರಾಯ.

ಅಹಮನುಜ್ಞಾತೋ ಭವತಾ । ಇಷ್ಟಂ ತೇ ಗುರ್ವರ್ಥಮುಪಹರ್ತುಮಿತಿ ॥

ನಾನು ನಿಮ್ಮಿಂದ ಅನುಮತಿಯನ್ನು ಪಡೆದಿದ್ದೇನೆ. ನಿಮಗೆ ಇಷ್ಟವಾದ ಗುರುದಕ್ಷಿಣೆಯನ್ನು ತಂದುಕೊಡಲು ನಾನು ಬಯಸುತ್ತೇನೆ.

ತೇನೈವಮುಕ್ತ ಉಪಾಧ್ಯಾಯಃ ಪ್ರತ್ಯುವಾಚ ।
ವತ್ಸೋದಂಕ ಉಷ್ಯತಾಂ ತಾವದಿತಿ ॥೧೦೧॥

ಅವನಿಂದ ಹೀಗೆ ಹೇಳಲ್ಪಟ್ಟ ಉಪಾಧ್ಯಾಯರು ವತ್ಸ ಉದಂಕ ಸ್ವಲ್ಪ ಸಮಯ ಇಲ್ಲಿಯೇ ವಾಸಮಾಡು ಎಂದು ಹೇಳಿದರು.

ಸ ಕದಾಚಿತ್ ತಮುಪಾಧ್ಯಾಯಮಾಹೋದಂಕಃ ಆಜ್ಞಾಪಯತು
ಭವಾನ್ ಕಿಮುಪಹರಾಮಿ ಗುರ್ವರ್ಥಮಿತಿ ॥೧೦೨॥

ಆ ಉದಂಕನು ಒಮ್ಮೆ ಆ ಉಪಾಧ್ಯಾಯರನ್ನು ಕುರಿತು ನಿಮಗೆ ಏನು ಗುರುದಕ್ಷಿಣೆಯನ್ನು ಕೊಡಲಿ ಎಂದು ಆಜ್ಞೆಯನ್ನು ಮಾಡಿ ಎಂದು ಹೇಳಿದನು.

ತಮುಪಾಧ್ಯಾಯಃ ಪ್ರತ್ಯುವಾಚ । ವತ್ಸೋದಂಕ ಬಹುಶೋ ಮಾಂ
ಚೋದಯಸಿ ಗುರ್ವರ್ಥಮುಪಹರೇಯಮಿತಿ ।
ತಚ್ಚೈನಾಮುಪಾಧ್ಯಾಯಾನೀಂ ಗಚ್ಛ ಪೃಚ್ಛ ಕಿಮುಪಹರಾಮಿ
ಗುರ್ವರ್ಥಮಿತಿ । ಏಷಾ ಯದ್ ಬ್ರೂತೀತಿ ತದುಪಹರಸ್ವೇತಿ ॥೧೦೩॥

ಅವನನ್ನು ಕುರಿತು ಉಪಾಧ್ಯಾಯರು ವತ್ಸ ಉದಂಕ ನೀನು ಮತ್ತೆ ಮತ್ತೆ ಗುರುದಕ್ಷಿಣೆಯನ್ನು ತಂದುಕೊಡುತ್ತೇನೆಂದು ನನಗೆ ಒತ್ತಾಯವನ್ನು ಮಾಡುತ್ತಿದ್ದೀಯೆ, ನೀನು ಹೋಗಿ ನನ್ನ ಪತ್ನಿಯನ್ನು ಏನು ಗುರುದಕ್ಷಿಣೆಯನ್ನು ತಂದುಕೊಡಲಿ ಎಂದು ಕೇಳು. ಅವಳು ಏನು ಹೇಳುತ್ತಾಳೆಯೋ, ಅದನ್ನು ತೆಗೆದುಕೊಂಡು ಬಾ ಎಂದು ಉತ್ತರವನ್ನು ಕೊಟ್ಟರು.

ಏವಮುಕ್ತ ಉಪಾಧ್ಯಾಯೇನೋಪಾಧ್ಯಾಯಾನೀಮಪೃಚ್ಛತ್ ।
ಭಗವತಿ ಉಪಾಧ್ಯಾಯೇನಾಸ್ಮ್ಯನುಜ್ಞಾತೋ ಗಂತುಮ್।
ತದಿಚ್ಛಾಮೀಷ್ಟಂ ತೇ ಗುರ್ವರ್ಥಮುಪಹೃತ್ಯಾನೃಣೋ ಗಂತುಮ್ ।
ತದಾಜ್ಞಾಪಯತು ಭವತೀ ಕಿಮುಪಹರಾಮಿ ಗುರ್ವರ್ಥಮಿತಿ ॥

ಉಪಾಧ್ಯಾಯರಿಂದ ಹೀಗೆ ಹೇಳಲ್ಪಟ್ಟವನಾಗಿ ಉದಂಕನು ಅವರ ಪತ್ನಿಯನ್ನು ಸಮೀಪಿಸಿ, ಪೂಜ್ಯರೇ, ಉಪಾಧ್ಯಾಯರು ನನಗೆ ಮನೆಗೆ ಹಿಂದಿರುಗುವುದಕ್ಕೆ ಅನುಮತಿಯನ್ನು ನೀಡಿದ್ದಾರೆ. ನಾನು ನಿಮಗೆ ಇಷ್ಟವಾದ ಗುರುದಕ್ಷಿಣೆಯನ್ನು ಕೊಟ್ಟು ಋಣಮುಕ್ತನಾಗಿ ಹೋಗಲು ಬಯಸುತ್ತೇನೆ. ಪೂಜ್ಯರಾದ ನೀವು ಏನು ಗುರುದಕ್ಷಿಣೆಯನ್ನು ತರಬೇಕೆಂದು ಆಜ್ಞೆಯನ್ನು ಮಾಡಬೇಕು ಎಂದು ಕೇಳಿದನು.

ಸೈವಮುಕ್ತೋಪಾಧ್ಯಾಯಾನ್ಯುದಂಕಂ ಪ್ರತ್ಯುವಾಚ ।
ಗಚ್ಛ ಪೌಷ್ಯಂ ರಾಜಾನಮ್ ।
ತಸ್ಯ ಕ್ಷತ್ರಿಯಯಾ ಪಿನದ್ಧೇ ಕುಂಡಲೇ ಸ್ತಃ ।
ಕುಂಡಲೇ ಭಿಕ್ಷಿತ್ವಾ ಕ್ಷತ್ರಿಯಾಂ ತನ್ನಯಸ್ವ ।
ಇತಶ್ಚತುರ್ಥೇऽಹನಿ ಪುಣ್ಯಕರ್ಮ ಭವಿತಾ
ಪಿನದ್ಧಾಭ್ಯಾಂ ತಾಭ್ಯಾಂ ಕುಂಡಲಾಭ್ಯಾಂ ತತ್ರ
ಶೋಭಮಾನಾ ಬ್ರಾಹ್ಮಣಾನ್ ಪರಿವೇಷ್ಟುಮಿಚ್ಛಾಮಿ ।
ತಥಾ ತ್ವಂ ಸಂಪಾದಯಸ್ವ ಶ್ರೇಯೋ ಹಿ ತೇ ಭಿಕ್ಷಾಂ ಕುರ್ವತ ಇತಿ ॥

ಹೀಗೆ ಹೇಳಲ್ಪಟ್ಟ ಉಪಾಧ್ಯಾಯರ ಪತ್ನಿಯು ಉದಂಕನನ್ನು ಕುರಿತು ಪೌಷ್ಯರಾಜನ ಬಳಿಗೆ ಹೋಗು. ಅವನ ಹೆಂಡತಿಯು ಕಿವಿಯಲ್ಲಿ ಕುಂಡಲಗಳನ್ನು ಧರಿಸಿದ್ದಾಳೆ. ಅವಳ ಬಳಿ ಆ ಕುಂಡಲಗಳನ್ನು ಬೇಡಿ ತೆಗೆದುಕೊಂಡು ಬಾ. ಇವತ್ತಿಗೆ ನಾಲ್ಕನೆಯ ದಿವಸದಲ್ಲಿ ಇಲ್ಲಿ ಒಂದು ಪುಣ್ಯಕರ್ಮವಿದೆ. ನಾನು ಆ ಕುಂಡಲಗಳನ್ನು ಧರಿಸಿ ಕಂಗೊಳಿಸುತ್ತಾ ಬ್ರಾಹ್ಮಣರಿಗೆ ಭೋಜನವನ್ನು ಬಡಿಸಲು ಇಷ್ಟಪಡುತ್ತೇನೆ. ನೀನು ಹಾಗೆ ಆ ಕುಂಡಲಗಳನ್ನು ಸಂಪಾದಿಸು. ಅಂತಹ ಭಿಕ್ಷೆಯನ್ನು ತಂದುಕೊಟ್ಟರೆ ನಿನಗೆ ಶ್ರೇಯಸ್ಸಾಗುವುದು ಎಂದು ಹೇಳಿದಳು.

ಸ ಏವಮುಕ್ತ ಉಪಾಧ್ಯಾಯಾನ್ಯಾ ಪ್ರಾತಿಷ್ಠದುದಂಕಃ ॥೧೦೬॥

ಉಪಾಧ್ಯಾಯಪತ್ನಿಯಿಂದ ಹೀಗೆ ಹೇಳಲ್ಪಟ್ಟವನಾಗಿ ಉದಂಕನು ಹೊರಟನು.

ಪಥಿ ಗಚ್ಛನ್ ಅಪಶ್ಯದೃಷಭಮತಿಪ್ರಮಾಣಂ ತಮಧಿರೂಢಂ ಚ
ಪುರುಷ ಮತಿಪ್ರಮಾಣಮೇವ ॥೧೦೭॥

ದಾರಿಯಲ್ಲಿ ಹೋಗುತ್ತಾ ಒಂದು ದೊಡ್ಡಪ್ರಮಾಣದ ವೃಷಭವನ್ನೂ ಅದರ ಮೇಲೆ ಕುಳಿತಿದ್ದ ದೊಡ್ಡಪ್ರಮಾಣದ ಒಬ್ಬ ಪುರುಷನನ್ನೂ ನೋಡಿದನು.

ಪುರುಷ ಉದಂಕಮಭ್ಯಭಾಷತ । ಉದಂಕ ಏತಸ್ಯ
ಪುರೀಷಮೃಷಭಸ್ಯ ಭಕ್ಷಯಸ್ವೇತಿ ॥೧೦೮॥

ಆ ಪುರುಷನು ಉದಂಕನನ್ನು ಕುರಿತು ಉದಂಕ ಈ ವೃಷಭದ ಸಗಣಿಯನ್ನು ತಿನ್ನು ಎಂದು ಹೇಳಿದನು.

ಸ ಏವಮುಕ್ತೋ ನೈಚ್ಛತ್ ॥೧೦೯॥

ಹೀಗೆ ಹೇಳಲ್ಪಟ್ಟ ಉದಂಕನು ಅದನ್ನು ಬಯಸಲಿಲ್ಲ.

ತಮಾಹ ಪುರುಷೋ ಭೂಯಃ ಭಕ್ಷಯಸ್ವೋದಂಕ ಮಾ
ವಿಚಾರಯ ಉಪಾಧ್ಯಾಯೇನಾಪಿ ತೇ ಭಕ್ಷಿತಮಿತಿ ॥೧೧೦॥

ಆಗ ಆ ಪುರುಷನು ಅವನನ್ನು ಕುರಿತು ಮತ್ತೆ ಉದಂಕ ಇದನ್ನು ತಿನ್ನು, ವಿಚಾರ ಮಾಡಬೇಡ. ನಿನ್ನ ಗುರುಗಳೂ ಇದನ್ನು ಭಕ್ಷಿಸಿದ್ದಾರೆ ಎಂದು ಹೇಳಿದನು.

ಸ ಏವಮುಕ್ತೋ ಬಾಢಮಿತ್ಯುಕ್ತ್ವಾ ತತಸ್ತಸ್ಯ ವೃಷಭಸ್ಯ ಪುರೀಷಂ
ಮೂತ್ರಂ ಚ ಭಕ್ಷಯಿತ್ವೋದಂಕಃ ಪ್ರತಸ್ಥೇ ಯತ್ರ ಸ ಪೌಷ್ಯಃ ॥೧೧೧॥

ಹೀಗೆ ಹೇಳಲ್ಪಟ್ಟ ಉದಂಕನು ಹಾಗೆಯೇ ಆಗಲಿ ಎಂದು ಹೇಳಿ ಆ ವೃಷಭದ ಗೋಮಯವನ್ನು ಮತ್ತು ಗೋಮೂತ್ರವನ್ನು ಸ್ವೀಕರಿಸಿ, ಪೌಷ್ಯರಾಜನು ಇದ್ದ ಕಡೆಗೆ ಹೊರಟನು.

ತಮುಪೇತ್ಯಾಪಶ್ಯದುದಂಕ ಆಸೀನಮ್ ।
ಸ ತಮುಪೇತ್ಯಭಿನಂದ್ಯೋವಾಚ ।
ಅಥೀರ್ ಭಗವಂತಮಭಿಗತೋಽಸ್ಮೀತಿ ॥೧೧೨॥

ಉದಂಕನು ಅವನನ್ನು ಸಮೀಪಿಸಿ ಕುಳಿತಿರುವ ಅವನನ್ನು ನೋಡಿದನು. ಅವನು ಅವನ ಸಮೀಪಕ್ಕೆ ಹೋಗಿ ಅವನನ್ನು ಜಯಶಬ್ದದಿಂದ ಅಭಿನಂದಿಸಿ, ನಾನು ಒಂದು ಅಪೇಕ್ಷೆಯಿಂದ ಭಾಗ್ಯವಂತನಾದ ನಿನ್ನ ಬಳಿಗೆ ಬಂದಿದ್ದೇನೆ ಎಂದು ಹೇಳಿದನು.

ಸ ತಮಭಿವಾದ್ಯೋವಾಚ । ಭಗವನ್ ಪೌಷ್ಯಃ ಖಲ್ವಹಂ ಕಿಂ ತೇ
ಕರವಾಣಿ ತದಾಜ್ಞಾಪಯತು ಭವಾನಿತಿ ॥೧೧೩॥

ಪೌಷ್ಯನು ಉದಂಕನಿಗೆ ನಮಸ್ಕರಿಸಿ, ಪೂಜ್ಯರೇ ನಾನು ಪೌಷ್ಯ . ನಿಮಗೆ ಏನು ಮಾಡಲಿ? ಅದನ್ನು ನೀವು ಆಜ್ಞಾಪಿಸಿ ಎಂದು ಹೇಳಿದನು.

ತಮುವಾಚೋದಂಕೋ ಗುರ್ವರ್ಥೇ ಕುಂಡಲಾಭ್ಯಾಮರ್ಥ್ಯ-
ಗತೋಽಸ್ಮೀತಿ । ಕ್ಷತ್ರಿಯಯಾ ಪಿನದ್ಧೇ ಕುಂಡಲೇ ಭವಾನ್
ದಾತುಮರ್ಹತೀತಿ ॥೧೧೪॥

ಅವನನ್ನು ಕುರಿತು ಉದಂಕನು ಗುರುದಕ್ಷಿಣೆಯ ಸಲುವಾಗಿ ಕುಂಡಲಗಳನ್ನು ಅಪೇಕ್ಷಿಸಿ ನಾನು ಬಂದಿದ್ದೇನೆ. ನಿನ್ನ ಪತ್ನಿಯು ಧರಿಸಿರುವ ಕುಂಡಲಗಳನ್ನು ನೀನು ನನಗೆ ಕೊಡಬೇಕು ಎಂದು ಹೇಳಿದನು.

ತಂ ಪೌಷ್ಯಃ ಪ್ರತ್ಯುವಾಚ । ಪ್ರವಿಶ್ಯಾಂತರಂ ಕ್ಷತ್ರಿಯಾ
ಯಾಚ್ಯತಾಮಿತಿ ॥೧೧೫॥

ಅವನನ್ನು ಕುರಿತು ಪೌಷ್ಯನು ಒಳಗೆ ಹೋಗಿ ನನ್ನ ಪತ್ನಿಯನ್ನು ಯಾಚಿಸು ಎಂದು ಉತ್ತರವನ್ನು ನೀಡಿದನು.

ಸ ತೇನೈವಮುಕ್ತಃ ಪ್ರವಿಶ್ಯಾಂತಃಪುರಂ ಕ್ಷತ್ರಿಯಾಂ ತಾಂ ನಾಪಶ್ಯತ್ ॥

ಪೌಷ್ಯನಿಂದ ಹೀಗೆ ಹೇಳಲ್ಪಟ್ಟ ಉದಂಕನು ಅಂತಃಪುರವನ್ನು ಪ್ರವೇಶಿಸಿದಾಗ ಅಲ್ಲಿ ಪೌಷ್ಯಪತ್ನಿಯು ಕಾಣಲಿಲ್ಲ.

ಸ ಪೌಷ್ಯಂ ಪುನರುವಾಚ । ನ ಯುಕ್ತಂ ಭವತಾ
ವಯಮನೃತೇನಾಚರ್ತುಮ್ । ನ ಹಿ ಸಾ ಕ್ಷತ್ರಿಯಾಽಂತಃಪುರೇ
ಸನ್ನಿಹಿತಾ । ನೈನಾಂ ಪಶ್ಯಾಮೀತಿ ॥೧೧೭॥

ಅವನು ಪುನಃ ಪೌಷ್ಯನಿದ್ದೆಡೆಗೆ ಬಂದು ನೀನು ನನಗೆ ಸುಳ್ಳನ್ನು ಹೇಳುವುದು ಯುಕ್ತವಲ್ಲ. ನಿನ್ನ ಪತ್ನಿಯು ಅಂತಃಪುರದಲ್ಲಿ ಇಲ್ಲ. ಅವಳನ್ನು ನಾನು ಕಾಣುತ್ತಿಲ್ಲ ಎಂದು ಹೇಳಿದನು.

ಏವಮುಕ್ತಃ ಪೌಷ್ಯಸ್ತಂ ಪ್ರತ್ಯುವಾಚ । ತತ್ರ ಸನ್ನಿಹಿತೈವ ಸಾ ಸಂಪ್ರತಿ
ಉಚ್ಛಿಷ್ಟಃ ಸ್ಮರ ತಾವತ್ ನ ಹಿ ಸಾ ಕ್ಷತ್ರಿಯಾ ಉಚ್ಛಿಷ್ಟೇನಾಶುಚಿನಾ
ಶಕ್ಯಾ ದ್ರಷ್ಟುಂ ಪತಿವ್ರತಾತ್ವಾತ್ ಏಷಾ ನಾಶುಚಿನಾ ತ್ವಯಾ
ದ್ರಷ್ಟವ್ಯಾ ಭವಿಷ್ಯತೀತಿ ॥೧೧೮॥

ಹೀಗೆ ಹೇಳಲ್ಪಟ್ಟ ಪೌಷ್ಯನು ಉದಂಕನನ್ನು ಕುರಿತು, ಅವಳು ಅಲ್ಲಿಯೇ ಇದ್ದಾಳೆ. ನೀನು ಎಲ್ಲಿ ಅಶುಚಿಯಾಗಿದ್ದೀಯೆ, ಹೇಗೆ ಅಶುಚಿಯಾಗಿದ್ದೀಯೆಂದು ಸ್ಮರಿಸಿಕೋ. ಪತಿವ್ರತೆಯಾದ ಅವಳು ಅಶುಚಿಗಳಾದವರಿಂದ ನೋಡಲ್ಪಡುವುದಿಲ್ಲ. ನೀನೂ ಸಹ ಅವಳನ್ನು ಅಶುಚಿಯಾಗಿ ನೋಡಬಾರದು ಎಂದು ಉತ್ತರವನ್ನು ಕೊಟ್ಟನು.

ಅಥೈವಮುಕ್ತ ಉದಂಕಃ ಸ್ಮೃತ್ವೋವಾಚ । ಅಸ್ತಿ ಖಲು ಮಯಾ ತು
ಭಕ್ಷಿತಂ, ನೋಪಸ್ಪೃಷ್ಟಮಾಗಚ್ಛತೇತಿ ॥೧೧೯॥

ಹೀಗೆ ಹೇಳಲ್ಪಟ್ಟ ಉದಂಕನು ನೆನಪಿಗೆ ತಂದುಕೊಂಡು, ಹೌದು ನಾನು ದಾರಿಯಲ್ಲಿ ಬರುತ್ತಾ ಭಕ್ಷಣವನ್ನು ಮಾಡಿದ್ದೇನೆ. ಕೈಕಾಲುಗಳನ್ನು ತೊಳೆದಿಲ್ಲ ಎಂದು ಹೇಳಿದನು.

ಪೌಷ್ಯಃ ಪ್ರತ್ಯುವಾಚ । ತದೇವ ಹಿ ಗಚ್ಛತೋಪಸ್ಪೃಷ್ಟಮಿತಿ ॥೧೨೦॥

ಪೌಷ್ಯನು ಪುನಃ ಅವನನ್ನು ಕುರಿತು ನೀನು ಬರುವಾಗ ಅದೇ ಅಶುಚಿತ್ವವು ಉಂಟಾಗಿದೆಯೆಂದು ಹೇಳಿದನು.

ಅಥೋದಂಕಸ್ತಥೇತ್ಯುಕ್ತ್ವಾ ಪ್ರಾಙ್ಮುಖ ಉಪವಿಶ್ಯ
ಪ್ರಕ್ಷಾಲಿತಪಾಣಿಪಾದವದನಃ ಶುದ್ಧಾಭಿಃ ಹೃದಯಂಗಮಾಭಿರ-
ಫೇನಾಭಿರಮುಕ್ತಾಭಿರಶಬ್ದಾಭಿರದ್ಭಿರ್ದ್ವಿರುಪಸ್ಪೃಶ್ಯ ತ್ರಿಃ ಪೀತ್ವಾ ದ್ವಿಃ
ಪರಿಮೃಜ್ಯ ಖಾನ್ಯದ್ಭಿರುಪಸ್ಪೃಶ್ಯಾಂತಃಪುರಂ ಪ್ರವಿಶ್ಯ ತಾಂ
ಕ್ಷತ್ರಿಯಾಮಪಶ್ಯತ್ ॥೧೨೧॥

ಆಗ ಉದಂಕನು ಹೌದು ಎಂದು ಹೇಳಿ, ಪೂರ್ವಾಭಿಮುಖವಾಗಿ ಕುಳಿತು ಕೈಕಾಲುಗಳನ್ನು ಮತ್ತು ಮುಖವನ್ನು ತೊಳೆದು ಶುದ್ಧವಾದ ಹೃದಯಂಗಮವಾದ, ನೊರೆಯಿಲ್ಲದ, ಸುರಿಯದಿದ್ದಂತಹ ಶಬ್ದರಹಿತವಾದ ನೀರಿನಿಂದ ಎರಡುಬಾರಿ ಉಪಸ್ಪರ್ಶನೆ ಮಾಡಿ, ಮೂರುಬಾರಿ ಆಚಮನವನ್ನು ಮಾಡಿ, ಎರಡುಬಾರಿ ಇಂದ್ರಿಯಗಳನ್ನು ಪರಿಮಾರ್ಜನೆ ಮಾಡಿ, ಅಂತಃಪುರವನ್ನು ಪ್ರವೇಶಿಸಿ, ಆ ಪೌಷ್ಯಪತ್ನಿಯನ್ನು ನೋಡಿದನು.

ಸಾ ಚ ದೃಷ್ಟ್ವೋದಂಕಮಭ್ಯುತ್ಥಾಯಾಭಿವಾದ್ಯೋವಾಚ ।
ಸ್ವಾಗತಂ ತೇ ಭಗವನ್ ಆಜ್ಞಾಪಯ ಕಿಂ ಕರವಾಣೀತಿ ॥೧೨೨॥

ಅವಳಾದರೋ ಉದಂಕನನ್ನು ನೋಡಿ ಆಸನದಿಂದ ಮೇಲೆದ್ದು ಬಂದು ನಮಸ್ಕರಿಸಿ, ಪೂಜ್ಯನೇ ನಿನಗೆ ಸ್ವಾಗತ. ನಾನು ಏನು ಮಾಡಲಿ ಎಂದು ಆಜ್ಞಾಪಿಸು ಎಂದು ಹೇಳಿದಳು.

ಸ ತಾಮುವಾಚ । ಏತೇ ಕುಂಡಲೇ ಭಿಕ್ಷಿತೇ ಗುರ್ವರ್ಥಂ ಮೇ
ದಾತುಮರ್ಹಸೀತಿ ॥೧೨೩॥

ಉದಂಕನು ಅವಳನ್ನು ಕುರಿತು ಈ ನಿನ್ನ ಕುಂಡಲಗಳನ್ನು ಗುರುದಕ್ಷಿಣೆಯ ಸಲುವಾಗಿ ಬೇಡುತ್ತಿದ್ದೇನೆ. ಅವುಗಳನ್ನು ನನಗೆ ಕೊಡು ಎಂದು ಹೇಳಿದನು.

ಸಾ ಪ್ರೀತಾ ತೇನ ತಸ್ಯ ಸಂಭಾವನೇನಪಾತ್ರಮಯಮನತಿಕ್ರಮಣೀ-
ಯಶ್ಚೇತಿ ಮತ್ವಾ ಸ್ವೇ ಕುಂಡಲೇ ಅವಮುಚ್ಯಾಸ್ಮೈ ಪ್ರಾಯಚ್ಛತ್ ॥

ಅವಳು ಸಂತೋಷಗೊಂಡು ಅವನ ಮೇಲಿದ್ದ ಪೂಜ್ಯಭಾವನೆಯಿಂದ ಇಂತಹ ಪಾತ್ರವು ದೊರಕಿದಾಗ ಎಂದೂ ಅತಿಕ್ರಮಣಮಾಡಬಾರದೆಂದು ತಿಳಿದು ತನ್ನ ಕುಂಡಲಗಳನ್ನು ಕಳಚಿ, ಅವನಿಗೆ ನೀಡಿದಳು.

ಆಹ ಚೈನಮ್ । ಏತೇ ಕುಂಡಲೇ ತಕ್ಷಕೋ ನಾಗರಾಜಃ
ಪ್ರಾರ್ಥಯತಿ । ಅಪ್ರಮತ್ತೋ ನೇತುಮರ್ಹಸೀತಿ ॥೧೨೫॥

ಮತ್ತು ಅವನನ್ನು ಕುರಿತು ಈ ಕುಂಡಲಗಳನ್ನು ನಾಗರಾಜನಾದ ತಕ್ಷಕನು ಬೇಡುತ್ತಾನೆ. ಎಚ್ಚರಿಕೆಯಿಂದ ತೆಗೆದುಕೊಂಡು ಹೋಗಬೇಕು ಎಂದು ಹೇಳಿದಳು.

ಏವಮುಕ್ತಸ್ತಾಂ ಕ್ಷತ್ರಿಯಾಂಪ್ರತ್ಯುವಾಚ । ಭವತೀ ಸುನಿರ್ವೃತಾ ಭವತು
ಭವತ್ಯಾ ಯದುಕ್ತಂ ತದಹಂ ಕರೋಮಿ । ಮಾಮಶಕ್ತಸ್ತಕ್ಷಕೋ
ನಾಗರಾಜೋ ಧರ್ಷಯಿತುಮಿತಿ ॥೧೨೬॥

ಹೀಗೆ ಹೇಳಲ್ಪಟ್ಟ ಉದಂಕನು ಆ ಕ್ಷತ್ರಿಯಳನ್ನು ಕುರಿತು ನೀನು ಸಮಾಧಾನದಿಂದಿರು. ನೀನು ಹೇಳಿದಂತೆಯೇ ನಾನು ತೆಗೆದುಕೊಂಡು ಹೋಗುತ್ತೇನೆ. ನಾಗರಾಜನಾದ ತಕ್ಷಕನು ನನಗೆ ದರ್ಷಣವನ್ನು ಮಾಡಲು ಅಸಮರ್ಥನಾಗಿದ್ದಾನೆ ಎಂದು ಹೇಳಿದನು.

ಸ ಏವಮುಕ್ತ್ವಾ ಕ್ಷತ್ರಿಯಾಮಾಮಂತ್ರ್ಯ ಪೌಷ್ಯಸಕಾಶಮಾಗಚ್ಛತ್ ॥

ಅವನು ಆ ಕ್ಷತ್ರಿಯಳನ್ನು ಕುರಿತು ಹೀಗೆ ಹೇಳಿ ಅವಳ ಅನುಮತಿಯನ್ನು ಪಡೆದು, ಪೌಷ್ಯರಾಜನ ಸಮೀಪಕ್ಕೆ ಬಂದನು.

ಸ ತಂ ದೃಷ್ಟ್ವೋವಾಚ । ಭೋಃ ಪೌಷ್ಯ ಪ್ರೀತೋಽಸ್ಮೀತಿ ॥೧೨೮॥

ಉದಂಕನು ಅವನನ್ನು ನೋಡಿ ಎಲೈ ಪೌಷ್ಯರಾಜನೇ ನಾನು ಸಂತುಷ್ಟನಾಗಿದ್ದೇನೆ ಎಂದು ಹೇಳಿದನು.

ತಂ ಪೌಷ್ಯಃ ಪ್ರತ್ಯುವಾಚ । ಭಗವಂಶ್ಚಿರಮಾಸಾದ್ಯತೇ ಪಾತ್ರಮ್ ।
ಭವಾಂಶ್ಚ ಗುಣವಾನತಿಥಿಃ ಪ್ರಕರಿಷ್ಯೇಽಹಂ ಶ್ರಾದ್ಧಂ ಕ್ಷಣಃ
ಕ್ರಿಯತಾಮಿತಿ ॥೧೨೯॥

ಅವನನ್ನು ಕುರಿತು ಪೌಷ್ಯನು ಪೂಜ್ಯನೇ, ಬಹುಕಾಲದಲ್ಲಿ ಒಂದೊಂದು ಸತ್ಪಾತ್ರವು ದೊರೆಯುತ್ತದೆ. ನೀನು ಗುಣವುಳ್ಳ ಅತಿಥಿ. ಅದಕ್ಕಾಗಿ ಶ್ರಾದ್ಧವನ್ನು ಮಾಡುವೆನು. ಸ್ವಲ್ಪ ಅವಕಾಶವನ್ನು ಮಾಡಿಕೊಳ್ಳಬೇಕು ಎಂದು ಹೇಳಿದನು.

ತಮುದಂಕಃ ಪ್ರತ್ಯುವಾಚ । ಕೃತಕ್ಷಣ ಏವಾಸ್ಮಿ, ಶೀಘ್ರಮಿಚ್ಛಾಮಿ ।
ಯಥೋಪಪನ್ನಮನ್ನಮುಪಹೃತಂ ಭವತೇತಿ ॥೧೩೦॥

ಅವನನ್ನು ಕುರಿತು ಉದಂಕನು ಸ್ವಲ್ಪಸಮಯವನ್ನು ಇಟ್ಟುಕೊಂಡೇ ಬಂದಿದ್ದೇನೆ. ಹೇಗಾದರೂ ಸಿದ್ಧವಾಗಿರುವ ಅನ್ನವನ್ನು ಆದಷ್ಟು ಜಾಗ್ರತೆಯಾಗಿ ನೀನು ನನಗೆ ಕೊಡಬೇಕೆಂದು ನಾನು ಬಯಸುತ್ತೇನೆ ಎಂದು ಹೇಳಿದನು.

ಸ ತಥೇತ್ಯುಕ್ತ್ವಾ ಯಥೋಪಪನ್ನೇನೈವ ಸಂಯೋಜಯಾಮಾಸ ॥

ಪೌಷ್ಯನು ಹಾಗೆಯೇ ಆಗಲಿ ಎಂದು ಹೇಳಿ, ಸಿದ್ಧವಾದ ಅನ್ನದಿಂದಲೇ ಶ್ರಾದ್ಧವನ್ನು ಮಾಡಿ ಅವನಿಗೆ ಬಡಿಸಿದನು.

ಅಥೋದಂಕಃ ಶೀತಮನ್ನಂ ಸಕೇಶಂ ದೃಷ್ಟ್ವಾ ಅಶುಚ್ಯೇತದನ್ನಮಿತಿ
ಮತ್ವಾ ಪೌಷ್ಯಮುವಾಚ । ಯಸ್ಮಾನ್ಮೇಽಶುಚ್ಯನ್ನಂ ದದಾಸಿ
ತಸ್ಮಾದಂಧೋ ಭವಿಷ್ಯಸೀತಿ ॥೧೩೧॥

ಆಗ ಉದಂಕನು ತಣ್ಣಗಿದ್ದು, ಕೇಶದಿಂದ ಕೂಡಿದ ಆ ಅನ್ನವನ್ನು ನೋಡಿ ಇದು ಅಶುದ್ಧವೆಂದು ತಿಳಿದು ಪೌಷ್ಯನನ್ನು ಕುರಿತು ನನಗೆ ಅಶುದ್ಧವಾದ ಅನ್ನವನ್ನು ನೀಡಿದ ಕಾರಣದಿಂದ ನೀನು ಅಂಧನಾಗುವಿ ಎಂದು ಹೇಳಿದನು.

ತಂ ಪೌಷ್ಯಃ ಪ್ರತ್ಯುವಾಚ । ಯಸ್ಮಾತ್ ತ್ವಮದುಷ್ಟಮನ್ನಂ
ದೂಷಯಸಿ ತಸ್ಮಾದನಪತ್ಯೋ ಭವಿಷ್ಯಸೀತಿ ॥೧೩೨॥

ಪೌಷ್ಯನು ಅವನನ್ನು ಕುರಿತು ಅದುಷ್ಟವಾದ ಅನ್ನವನ್ನು ದೂಷಣೆ ಮಾಡುತ್ತಿರುವುದರಿಂದ ನೀನು ಪುತ್ರರನ್ನು ಪಡೆಯುವುದಿಲ್ಲ ಎಂದು ಹೇಳಿದನು.

ಸೋಽಥ ತಸ್ಯಾನ್ನಸ್ಯಾಪ್ಯಶುಚಿಭಾವಮವಗಮಯಾಮಾಸ ॥೧೩೩॥

ಉದಂಕನು ಆಗ ಆ ಅನ್ನವು ಅಶುಚಿಯಾಗಿರುವುದನ್ನು ರಾಜನಿಗೆ ತೋರಿಸಿದನು.

ಅಥ ತದನ್ನಂ ಮುಕ್ತಕೇಶ್ಯಾ ಸ್ತ್ರಿಯೋಪಹೃತಂ ಸಕೇಶಮಾಲೋಕ್ಯೋದಂಕಂ
ಪ್ರಸಾದಯಾಮಾಸ । ಭಗವನ್ನಜ್ಞಾನಾದೇತದನ್ನಂ ಸಕೇಶಮುಪಹೃತಂ
ಶೀತಂ ಚ । ತತ್ ಕ್ಷಮಯೇ ಭವಂತಂ ನ ಭವೇಯಮಂಧ ಇತಿ
॥೧೩೪॥

ಆಗ ರಾಜನು ಆ ಅನ್ನವನ್ನು ಕೂದಲುಗಳನ್ನು ಕೆದರಿಕೊಂಡಿದ್ದ ವನಿತೆಯು ತಂದ ಕಾರಣದಿಂದ ಕೂದಲುಗಳಿಂದ ಸಹಿತವಾದುದನ್ನು ನೋಡಿ ಉದಂಕನನ್ನು ಸಮಾಧಾನಗೊಳಿಸಲು ಪ್ರಯತ್ನಿಸಿದನು. ಪೂಜ್ಯನೇ ಅಜ್ಞಾನದಿಂದ ಈ ಆರಿಹೋದ ಮತ್ತು ಕೂದಲು ಸಹಿತವಾದ ಅನ್ನವನ್ನು ನಿನಗೆ ಬಡಿಸಿದ್ದಾಯಿತು. ನಿನ್ನ ಕ್ಷಮೆಯನ್ನು ಕೇಳುತ್ತಿದ್ದೇನೆ. ನಾನು ಅಂಧನಾಗುವುದು ಬೇಡ ಎಂದು ಪ್ರಾರ್ಥಿಸಿದನು.

ತಮುದಂಕಃ ಪ್ರತ್ಯುವಾಚ । ನ ಮೃಷಾ ಬ್ರವೀಮಿ ಭೂತ್ವಾಽಂಧೋ
ಅಚಿರಾದನಂಧೋ ಭವಿಷ್ಯಸೀತಿ । ಮಮಾಪಿ ಶಾಪೋ ನ ಭವೇದ್
ಭವದ್ದತ್ತ ಇತಿ ॥೧೩೫॥

ಅವನನ್ನು ಕುರಿತು ಉದಂಕನು ನನ್ನ ಮಾತು ಸುಳ್ಳಾಗುವುದಿಲ್ಲ ಸ್ವಲ್ಪ ಸಮಯ ಕುರುಡನಾಗಿ ನೀನು ಬೇಗ ದೃಷ್ಟಿಯನ್ನು ಹೊಂದುವಿ. ನನಗೂ ಸಹ ನೀನು ಕೊಟ್ಟ ಶಾಪವು ತಟ್ಟುವುದಿಲ್ಲ ಎಂದು ಹೇಳಿದನು.

ತಂ ಪೌಷ್ಯಃ ಪ್ರತ್ಯುವಾಚ । ನಾಹಂ ಶಕ್ತಃ ಶಾಪಂ ಪ್ರತ್ಯಾದಾತುಂ ನ ಹಿ ಮೇ ಮನ್ಯುರದ್ಯಾಪ್ಯುಪಶಮಂ ಗಚ್ಛತೀತಿ ॥೧೩೬॥

'ಪೌಷ್ಯನು ಅವನನ್ನು ಕುರಿತು ನನ್ನ ಶಾಪವನ್ನು ಹಿಂದೆ ತೆಗೆದುಕೊಳ್ಳಲು ನಾನು ಸಮರ್ಥನಲ್ಲ. ನನ್ನ ಕೋಪವು ಇನ್ನೂ ಉಪಶಮನವನ್ನು ಹೊಂದಿಲ್ಲ ಎಂದು ಹೇಳಿದನು.

ಕಿಮೇತದ್ ಭವತಾ ನ ಜ್ಞಾಯತೇ ಯಥಾ ॥೧೩೭॥

ನೀನು ಈ ವಿಷಯವನ್ನು ಕೇಳಿಲ್ಲವೇ? ಅದೇನೆಂದರೆ -

ನವನೀತಂ ಹೃದಯಂ ಬ್ರಾಹ್ಮಣಸ್ಯ
ವಾಚಿ ಕ್ಷುರೋ ನಿಹಿತಸ್ತೀಕ್ಷ್ಣಧಾರಃ ।
ವಿಪರೀತಮೇತದುಭಯಂ ಕ್ಷತ್ರಿಯಸ್ಯ
ವಾಙ್ ನವನೀತಂ ಹೃದಯಂ ತೀಕ್ಷ್ಣಧಾರಮ್ ॥೧೩೮॥

ಬ್ರಾಹ್ಮಣನ ಮನಸ್ಸು ನವನೀತದಂತಿರುವುದು. ಅವನ ಮಾತಿನಲ್ಲಿ ಹರಿತವಾದ ಅಲುಗುಳ್ಳ ಕತ್ತಿಯು ಇಡಲ್ಪಟ್ಟಿದೆ. ಕ್ಷತ್ರಿಯನಿಗೆ ಎರಡೂ ವಿಪರೀತವಾದುದು. ಮಾತು ಬೆಣ್ಣೆಯಂತಿರುವುದು, ಹೃದಯವು ಮಾತ್ರ ಕತ್ತಿಯಂತೆ ತೀಕ್ಷ್ಣವಾದುದು.

ತದೇವಂಗತೇ ನ ಶಕ್ತೋಽಹಂ ತೀಕ್ಷ್ಣಹೃದಯತ್ವಾತ್ ತಂ ಶಾಪಂ ಪ್ರತ್ಯಾಖ್ಯಾತುಂ ಗಮ್ಯತಾಮಿತಿ ॥೧೩೯॥

ಪರಿಸ್ಥಿತಿ ಹೀಗಿರುವಾಗ ಕ್ರೂರಹೃದಯನಾಗಿರುವ ಕಾರಣ ನಾನು ಆ ಶಾಪವನ್ನು ಹಿಂದಕ್ಕೆ ತೆಗೆದುಕೊಳ್ಳಲಾರೆ. ಹೋಗಿ ಬಾ ಎಂದು ಹೇಳಿದನು.

ತಮುದಂಕಃ ಪ್ರತ್ಯುವಾಚ । ಭವತಾಹಮನ್ನಸ್ಯಾಶುಚಿಭಾವಂ ಗಮಯಿತ್ವಾ ಪ್ರತ್ಯನುನೀತಃ । ಪ್ರಾಕ್ ತ್ವೇತದಭಿಹಿತಮ್ । ಯಸ್ಮಾದ್ದುಷ್ಟಮನ್ನಂ ದೂಷಯಸಿ ತಸ್ಮಾದನಪತ್ಯೋ ಭವಿಷ್ಯಸೀತಿ । ದುಷ್ಟೇ ಚಾನ್ನೇ ಮಮ ಶಾಪೋ ನ ಭವಿಷ್ಯತಿ । ಸಾಧಯಾಮಸ್ತಾವದಿತ್ಯುಕ್ತ್ವಾ ಪ್ರಾತಿಷ್ಠದುದಂಕಃ ತೇ ಕುಂಡಲೇ ಗೃಹೀತ್ವಾ। ಸೋಽಪಶ್ಯತ್ಪಥಿ ನಗ್ನಂ ಶ್ರಮಣಂ ಪೃಷ್ಠತ ಆಗಚ್ಛಂತಂ ಮುಹುರ್ಮುಹುರ್ದೃಶ್ಯಮಾನಂ ಮುಹುರ್ಮುಹುರದೃಶ್ಯಮಾನಂ ॥

ಅವನನ್ನು ಕುರಿತು ಉದಂಕನು ಹೀಗೆ ಹೇಳಿದನು. ನಾನು ನಿನಗೆ ಅನ್ನವು ಅಶುದ್ಧಿಯಾಗಿದೆ ಎಂದು ತೋರಿಸಿ ಅನುನಯವನ್ನು ಮಾಡಿದ್ದೇನೆ. ಅದಕ್ಕಿಂತ ಮೊದಲು ನೀನು ಹೇಳಿದ ಮಾತು ಅದುಷ್ಟವಾದ ಅನ್ನವನ್ನು ದೂಷಿಸುತ್ತಿರುವುದರಿಂದ ನಿನಗೆ ಮಕ್ಕಳಾಗದಿರಲಿ ಎಂದು. ಅನ್ನವು ದುಷ್ಟವಾಗಿರುವ ಕಾರಣ ನನಗೆ ನಿನ್ನ ಶಾಪವು ತಟ್ಟುವುದಿಲ್ಲ. ಈಗಂತೂ ಹೋಗಿಬರುತ್ತೇನೆ ಎಂದು ಹೇಳಿ ಆ ಕುಂಡಲಗಳನ್ನು ತೆಗೆದುಕೊಂಡು ಉದಂಕನು ಹೊರಟನು. ಅವನು ದಾರಿಯಲ್ಲಿ ಹೋಗುತ್ತಾ ತನ್ನನ್ನು ಹಿಂಬಾಲಿಸುತ್ತಿರುವ ಒಮ್ಮೊಮ್ಮೆ ಕಣ್ಣಿಗೆ ಕಾಣಿಸುವ, ಒಮ್ಮೊಮ್ಮೆ ಕಣ್ಣಿಗೆ ಕಾಣಿಸದಿರುವ ನಗ್ನವಾದ ಒಬ್ಬ ಸನ್ಯಾಸಿಯನ್ನು ನೋಡಿದನು.

ಅಥೋದಂಕಸ್ತೇ ಕುಂಡಲೇ ಭೂಮೌ ನಿಕ್ಷಿಪ್ಯೋದಕಾರ್ಥಂ
ಪ್ರತಸ್ಥೇ ॥೧೪೧॥

ಆಗ ಆ ಉದಂಕನು ಆ ಕುಂಡಲಗಳನ್ನು ನೆಲದ ಮೇಲಿಟ್ಟು ನೀರನ್ನು ಹುಡುಕಲು ಹೊರಟನು.

ತಸ್ಮಿನ್ನಂತರೇ ಶ್ರಮಣಉಪಸೃತ್ಯ ಕುಂಡಲೇ ಗೃಹೀತ್ವಾ ಪ್ರಾದ್ರವತ್ ॥

ಆ ಮಧ್ಯದಲ್ಲಿ ಆ ಸನ್ಯಾಸಿಯು ಸಮೀಪಕ್ಕೆ ಬಂದು ಕುಂಡಲಗಳನ್ನು ಎತ್ತಿಕೊಂಡು ಓಡಿಹೋದನು.

ತಮುದಂಕೋಭಿಸೃತ್ಯ ಜಗ್ರಾಹ । ಸ ತದ್ರೂಪಂ ವಿಹಾಯ ತಕ್ಷಕರೂಪಂ
ಗೃಹೀತ್ವಾ ಸಹಸಾ ಧರಣ್ಯಾಂ ವಿವೃತಂ ಮಹದ್ ಬಿಲಂ ಪ್ರವಿವೇಶ ।
ಪ್ರವಿಶ್ಯ ನಾಗಲೋಕೇ ಸ್ವಭವನಮಗಚ್ಛತ್ ॥೧೪೩॥

ಉದಂಕನು ಅವನ ಹಿಂದೆ ಓಡಿಹೋಗಿ ಅವನನ್ನು ಹಿಡಿದುಕೊಂಡನು. ಆ ಸನ್ಯಾಸಿಯು ಆ ಸನ್ಯಾಸಿಯ ರೂಪವನ್ನು ತ್ಯಜಿಸಿ ತಕ್ಷಕನ ರೂಪವನ್ನು ಧರಿಸಿ ಇದ್ದಕ್ಕಿದ್ದಂತೆಯೇ ಭೂಮಿಯಲ್ಲಿದ್ದ ದೊಡ್ಡ ಬಿಲದೊಳಗೆ ಪ್ರವೇಶ ಮಾಡಿದನು. ಪ್ರವೇಶವನ್ನು ಮಾಡಿ ನಾಗಲೋಕದಲ್ಲಿ ತನ್ನ ಮನೆಗೆ ಹೋದನು.

ತದ್ಬಿಲಂ ದಂಡಕಾಷ್ಠೇನ ಚ ಸ ಖನಿತುಂ ನಾಶಕತ್ । ತಂ ಕ್ಲಿಶ್ಯಮಾನ-
ಮಿಂದ್ರೋಽಪಶ್ಯತ್ । ವಜ್ರಂ ಪ್ರೇಷಯಾಮಾಸ । ಗತ್ವಾಸ್ಯ ಬ್ರಾಹ್ಮಣಸ್ಯ
ಸಾಹಾಯ್ಯಂ ಕುರುಷ್ವೇತಿ । ಅಥ ವಜ್ರಂ ದಂಡಕಾಷ್ಠಮಾವಿಶ್ಯ ತಂ ಬಿಲಂ

ವಿದಾರಯಾಮಾಸ । ತಮುದಂಕೋ೬ನ್ವವಿವೇಶ । ತೇನೈವ ಬಿಲೇನ ಚ ಪ್ರವಿಶ್ಯ ತಂ ನಾಗಲೋಕಮನೇಕಬಂಧಪ್ರಾಸಾದಹರ್ಮ್ಯವಲಭೀ-
ಭಿತ್ತಿಶತಸಂಕುಲಮುಚ್ಚಾವಚ ಸ್ಥಾನಾವಕೀರ್ಣಮಪಶ್ಯತ್ ॥೧೪೪॥

ಉದಂಕನಿಗೆ ತನ್ನ ದಂಡಕಾಷ್ಠದಿಂದ ಆ ಬಿಲವನ್ನು ಅಗೆಯಲು ಸಾಧ್ಯವಾಗಲಿಲ್ಲ. ಹೀಗೆ ಕಷ್ಟಪಡುತ್ತಿದ್ದ ಅವನನ್ನು ಇಂದ್ರನು ನೋಡಿದನು. ಅವನು ನೀನು ಹೋಗಿ ಈ ಬ್ರಾಹ್ಮಣನಿಗೆ ಸಹಾಯವನ್ನು ಮಾಡು ಎಂದು ಹೇಳಿ ತನ್ನ ವಜ್ರಾಯುಧವನ್ನು ಕಳುಹಿಸಿಕೊಟ್ಟನು. ಆಗ ವಜ್ರವು ದಂಡಕಾಷ್ಠದಲ್ಲಿ ಸನ್ನಿಹಿತವಾಗಿ ಆ ಬಿಲವನ್ನು ಸೀಳಿಹಾಕಿತು. ಉದಂಕನು ಆ ಬಿಲದೊಳಗೆ ನಡೆದನು. ಆ ಬಿಲದ ಮೂಲಕವೇ ಪ್ರವೇಶಿಸಿ ನಾಗಲೋಕವನ್ನು ತಲುಪಿ ಅಲ್ಲಿ ಅನೇಕ ಪ್ರಾಸಾದಗಳನ್ನೂ, ಹರ್ಮ್ಯಗಳನ್ನೂ, ವಲಭೀಗಳನ್ನೂ, ನೂರಾರು ಗೋಡೆಗಳಿರುವ ಉಚ್ಚಾವಚ ಸ್ಥಾನಗಳನ್ನೂ ಎಲ್ಲವನ್ನೂ ನೋಡಿದನು.

ತೇನೈವ ಬಿಲೇನ ಪ್ರವಿಶ್ಯ ಚ ನಾಗಾನಸ್ತೌಷೀದೇಭಿಃ ಶ್ಲೋಕೈಃ ॥

ಆ ಬಿಲದಿಂದಲೇ ಪ್ರವೇಶ ಮಾಡಿದ ಅವನು ಆ ನಾಗಗಳನ್ನು ಈ ಶ್ಲೋಕಗಳಿಂದ ಸ್ತೋತ್ರಮಾಡಿದನು.

ಯಾವಂತೋ ನಾಗರಾಜಾನಃ ಸರ್ಪಾಸ್ತ್ವಮಿತವಿಕ್ರಮಾಃ ।
ವರ್ಷಂತ ಇವ ಜೀಮೂತಾಃ ಸವಿದ್ಯುತ್ಪವನೇರಿತಾಃ ॥೧೪೬॥

ಮಿಂಚು ಮತ್ತು ಗಾಳಿಯಿಂದ ಪ್ರೇರಿತವಾದ ಮಳೆಯನ್ನು ಸುರಿಸುವ ಮೋಡದಂತಿರುವ ಅಮಿತವಿಕ್ರಮವನ್ನು ಹೊಂದಿದ ಎಷ್ಟು ಸರ್ಪಗಳು ಮತ್ತು ಶ್ರೇಷ್ಠವಾದ ನಾಗಗಳು ಇವೆಯೋ.

ಸುರೂಪಾ ಬಹುರೂಪಾಶ್ಚಾಪ್ಯಥ ಕಲ್ಯಾಣಕುಂಡಲಾಃ
ಆದಿತ್ಯವನ್ನಾಗಲೋಕೇ ರೇಜುರ್ಯೈರಾವತೋದ್ಭವಾಃ ॥೧೪೭॥

ಒಳ್ಳೆಯ ರೂಪವನ್ನು ಧರಿಸಿದ, ಅನೇಕ ರೂಪವನ್ನು ಧರಿಸಿದ ಕಲ್ಯಾಣಕುಂಡಲಗಳುಳ್ಳ ಐರಾವತವಂಶದಲ್ಲಿ ಹುಟ್ಟಿದ ಆ ಸರ್ಪಗಳೆಲ್ಲವೂ ನಾಗಲೋಕದಲ್ಲಿ ಸೂರ್ಯನಂತೆ ಬೆಳಗುತ್ತವೆ.

ಬಹೂನಿ ನಾಗವೇಶ್ಮಾನಿ ಗಂಗಾಯಾಸ್ತೀರ ಉತ್ತರೇ ।
ಇಚ್ಛಂತೋಽರ್ಕಾಂಶುಸೇವಾಯೈ ವಸ್ತುಮೈರಾವತಂ ವಿನಾ ॥೧೪೮॥

ಗಂಗೆಯ ಉತ್ತರತೀರದಲ್ಲಿ ಅನೇಕ ನಾಗವೇಶ್ಮಗಳಿವೆ. ಐರಾವತವನ್ನು ಬಿಟ್ಟು ಉಳಿದ ನಾಗಗಳು ಸೂರ್ಯನ ಕಿರಣಗಳನ್ನು ಸೇವಿಸಲು ಅಲ್ಲಿ ವಾಸಿಸಲು ಇಷ್ಟಪಡುತ್ತವೆ.

ಶತಾನ್ಯಶೀತಿರಷ್ಟೌ ಚ ಸಹಸ್ರಾಣಿ ಚ ವಿಂಶತಿಃ ।
ಸರ್ಪಾಣಾಂ ಪ್ರಗ್ರಹಾ ಯಾಂತಿ ಧೃತರಾಷ್ಟ್ರೋ ಜಯೇದಿತಿ ॥೧೪೯॥

ಎಂಭತ್ತೆಂಟು ಸಹಸ್ರ ಮತ್ತು ಇನ್ನು ಇಪ್ಪತ್ತು ಸಹಸ್ರಸಂಖ್ಯೆಯ ಪರಿವಾರರೂಪವಾದ ಸರ್ಪಗಳು ನಾಗರಾಜನಾದ ಧೃತರಾಷ್ಟ್ರನಿಗೆ ಜಯವಾಗಲಿ ಎಂದು ಹೇಳುತ್ತಾ ಅವನ ಮುಂದೆ ಹೋಗುತ್ತಾರೆ.

ಯೇ ಚೇದಮುಪಶೃಣ್ವಂತಿ ಯೇ ಚ ದೂರಂ ಪರಾಗತಾಃ ।
ಅಹಮೈರಾವತಜ್ಯೇಷ್ಠಭ್ರಾತೃಭ್ಯೋಽಕರವಂ ನಮಃ ॥೧೫೦॥

ಈ ನನ್ನ ವಚನವನ್ನು ಯಾರು ಕೇಳುತ್ತಿದ್ದಾರೋ, ಮತ್ತು ಯಾರು ದೂರದಲ್ಲಿದ್ದಾರೆಯೋ, ನಾನು ಐರಾವತಕುಲದಲ್ಲಿ ಹುಟ್ಟಿದ ಐರಾವತನನ್ನೇ ಜ್ಯೇಷ್ಠವಾಗಿವುಳ್ಳ ಆ ಎಲ್ಲಾ ಸರ್ಪಗಳನ್ನು ನಮಸ್ಕರಿಸುತ್ತಿದ್ದೇನೆ.

ಯಸ್ಯ ವಾಸಃ ಕುರುಕ್ಷೇತ್ರೇ ಖಾಂಡವೇ ಚಾಭವತ್ ಸದಾ ।
ತಂ ಕಾದ್ರವೇಯಮಸ್ತೌಷಂ ಕುಂಡಲಾರ್ಥಾಯ ತಕ್ಷಕಮ್ ॥೧೫೧॥

ಯಾವ ತಕ್ಷಕನು ಕುರುಕ್ಷೇತ್ರದಲ್ಲಿ ಖಾಂಡವವನದಲ್ಲಿ ವಾಸಮಾಡುತ್ತಾನೆಯೋ, ಅಂತಹ ಕದ್ರುದೇವಿಯ ಮಗನಾದ ತಕ್ಷಕನನ್ನು ಕುಂಡಲಗಳನ್ನು ಪಡೆಯುವ ಸಲುವಾಗಿ ನಾನು ಸ್ತೋತ್ರಮಾಡುತ್ತಿದ್ದೇನೆ.

ತಕ್ಷಕಶ್ಚಾಶ್ವಸೇನಶ್ಚ ನಿತ್ಯಂ ಸಹಚರಾವುಭೌ ।
ಕುರುಕ್ಷೇತ್ರೇ ನ್ಯವಸತಾಂ ನದೀಮಿಕ್ಷುಮತೀಮನು ॥೧೫೨॥

ತಕ್ಷಕ ಮತ್ತು ಅಶ್ವಸೇನ ಇವರಿಬ್ಬರೂ ಯಾವಾಗಲೂ ಸಹಚರರು. ಅವರು ಕುರುಕ್ಷೇತ್ರದಲ್ಲಿ ಇಕ್ಷುಮತೀ ನದಿಯ ದಡದಲ್ಲಿ ವಾಸಿಸುತ್ತಾರೆ.

ನದೀಂ ಮಂದಾಕಿನೀಂ ರಮ್ಯಾಂ ಪ್ರಸನ್ನಸಲಿಲಾಮನು ।
ಜಘ್ನ್ಯಕಸ್ತಕ್ಷಕಸ್ಯ ಶ್ರುತಸೇನೇತಿ ವಿಶ್ರುತಃ ॥೧೫೩॥

ಅವಸದ್ ಯೋ ಮಹಾನ್ ನಿಮ್ನೇ ಪ್ರಾರ್ಥಯನ್ನಾಗಮುಖ್ಯತಾಮ್ ।
ಕರವಾಣಿ ಸದಾ ಚಾಹಂ ನಮಸ್ತಸ್ಮೈ ಮಹಾತ್ಮನೇ ॥೧೫೪॥

ರಮ್ಯವಾದ ನಿರ್ಮಲವಾದ ನೀರನ್ನು ಹೊಂದಿದ ಮಂದಾಕಿನಿ ನದಿಯ ದಡದಲ್ಲಿ ತಕ್ಷನ ತಮ್ಮನಾದ ಶ್ರುತಸೇನನೆಂದು ಪ್ರಖ್ಯಾತನಾದ ಸರ್ಪರಾಜನು ನಾಗಾಧಿಪತಿಯನ್ನು ಪ್ರಾರ್ಥನೆ ಮಾಡುತ್ತಾ ದೊಡ್ಡಬಿಲದಲ್ಲಿ ವಾಸಿಸುತ್ತಿದ್ದಾನೆ. ಆ ಮಹಾತ್ಮನಿಗೂ ನಾನು ಸರ್ವದಾ ನಮಸ್ಕಾರವನ್ನು ಮಾಡುತ್ತೇನೆ.

ಏವಂ ಸ್ತುವನ್ನಪಿ ನಾಗಾನ್ ನಚಾಲಭತ ಕುಂಡಲೇ ।
ಅಥಾಪಶ್ಯತ್ ಸ್ತ್ರಿಯೋ ತಂತ್ರೇ ಅಧಿರೋಪ್ಯ ಪಟಂ ವಯಂತ್ಯೌ ॥೧೫೫॥

ಹೀಗೆ ನಾಗನನ್ನು ಸ್ತೋತ್ರ ಮಾಡುತ್ತಿದ್ದರೂ ಅವನು ಕುಂಡಲಗಳನ್ನು ಪಡೆಯಲಿಲ್ಲ. ಆಗ ಅವನು ರಾಟೆಯಲ್ಲಿ ಪಟವನ್ನು ಏರಿಸಿ ನೇಯುತ್ತಿದ್ದ ಇಬ್ಬರು ಸ್ತ್ರೀಯರನ್ನು ನೋಡಿದನು.

ತಸ್ಮಿಂಸ್ತಂತ್ರೇ ಕೃಷ್ಣಾಂಶ್ಚ ಸಿತಾಂಶ್ಚ ತಂತೂನ್ ಚಕ್ರಂ ಚಾಪಶ್ಯತ ।
ದ್ವಾದಶಾರಂ ಷಡ್ಭಿಃ ಕುಮಾರೈಃ ಪರಿವರ್ತ್ಯಮಾನಮಶ್ವಾರೂಢಂ ಪುರುಷಂ
ಚಾಪಶ್ಯತ್ ದುರ್ನಿರೀಕ್ಷ್ಯಮ್ ॥೧೫೬॥

ಆ ರಾಟೆಯಲ್ಲಿ ಬಿಳಿಯ ಮತ್ತು ಕರಿಯ ನೂಲುಗಳನ್ನು ಮತ್ತು ಚಕ್ರಗಳನ್ನು ನೋಡಿದನು. ಆರು ಕುಮಾರರಿಂದ ತಿರುಗಿಸಲ್ಪಡುತ್ತಿದ್ದ ಹನ್ನೆರಡು ಅರಗಳುಳ್ಳ ಆ ಚಕ್ರವನ್ನೂ ಮತ್ತು ಅಶ್ವಾರೂಢನಾದ ನೋಡಲು ಅಸಾಧ್ಯನಾದ ಒಬ್ಬ ಪುರುಷನನ್ನೂ ನೋಡಿದನು.

ಸ ತಾನ್ ಸರ್ವಾಂಸ್ತುಷ್ಟಾವ ಏಭಿರ್ಮಂತ್ರವಾದ್ಯೈಃ ಶ್ಲೋಕೈಃ ॥೧೫೭॥

ಅವನು ಅವರೆಲ್ಲರನ್ನೂ ಈ ಮಂತ್ರರೂಪವಾದ ಶ್ಲೋಕಗಳಿಂದ ಸ್ತೋತ್ರಮಾಡಿದನು.

ತ್ರೀಣ್ಯರ್ಪಿತಾನ್ಯತ್ರ ಶತಾನಿ ಮಧ್ಯೇ
ಷಷ್ಟಿಶ್ಚ ತಸ್ಮಿನ್ ಚರತಿ ಧ್ರುವೇಽಸ್ಮಿನ್ ।
ಚಕ್ರೇ ಚತುರ್ವಿಂಶತಿಪರ್ವಯೋಗೇ
ತಂ ಷಟ್ ಕುಮಾರಾಃ ಪರಿವರ್ತಯಂತಿ ॥೧೫೮॥

ಈ ಒಂದೇ ಕಡೆಯಲ್ಲಿ ತಿರುಗುತ್ತಿರುವ ಚಕ್ರದಲ್ಲಿ ಮೂನ್ನೂರರವತ್ತು ವಸ್ತುಗಳು ಮಧ್ಯದಲ್ಲಿ ಅರ್ಪಿಸಲ್ಪಟ್ಟಿವೆ. ಇಪ್ಪತ್ತನಾಲ್ಕು ಪರ್ವಗಳು ಇರುವ ಈ ಚಕ್ರವನ್ನು ಆರು ಜನ ಕುಮಾರರು ತಿರುಗಿಸುತ್ತಾರೆ.

ಚಕ್ರವು ಸಂವತ್ಸರ. ಅದರಲ್ಲಿ ಮೂನ್ನೂರರವತ್ತು ದಿವಸಗಳು. ಆರು ಋತುಗಳಿಗೆ ಅಭಿಮಾನಿಗಳಾದ ದೇವತೆಗಳು ಅದನ್ನು ತಿರುಗಿಸುತ್ತಾರೆ. ಒಂದು ಸಂವತ್ಸರದಲ್ಲಿ ಹನ್ನೆರಡು ಪೂರ್ಣಿಮೆ ಮತ್ತು ಹನ್ನೆರಡು ಅಮಾವಾಸ್ಯೆಗಳು ಸೇರಿ ಇಪ್ಪತ್ತಾ ನ್ನಲ್ಕು ಪರ್ವಗಳಾಗುತ್ತವೆ.

ತಂತ್ರಂ ಚೇದಂ ವಿಶ್ವರೂಪೇ ವಯಂತ್ಯೌ
ವಯತಸ್ತಂತೂನ್ ಸತತಂ ವರ್ತಯಂತ್ಯೌ ।
ಇದಂ ವಯಂತ್ಯೌ ಪುನರಾವಯಂತ್ಯೌ
ಭೂತಾನ್ಯಜಸ್ರಂ ಭುವನಾನಿ ಚೈವ ॥೧೫೯॥

ಈ ಇಬ್ಬರು ಸ್ತ್ರೀಯರು ಈ ರಾಟೆಯನ್ನು ವಿಶ್ವರೂಪದಲ್ಲಿ ನೇಯುತ್ತಾ ಸತತವಾಗಿ ನೂಲುಗಳನ್ನು ನೂಕುತ್ತಾರೆ. ಸತತವಾಗಿ ಎಲ್ಲ ಪ್ರಾಣಿಗಳನ್ನೂ, ಮತ್ತು ಎಲ್ಲ ಲೋಕಗಳನ್ನೂ ಮತ್ತೆ ಮತ್ತೆ ನೇಯುತ್ತಾರೆ.

ಕಪ್ಪು ಮತ್ತು ಬಿಳಿಯ ನೂಲುಗಳು ಹಗಲು, ರಾತ್ರಿಯ ಸಂಕೇತಗಳು. ಅದಕ್ಕೆ ಆ ಇಬ್ಬರು ಸ್ತ್ರೀಯರು ಧಾತೃ ಮತ್ತು ವಿಧಾತೃ ದೇವತೆಗಳು ಎಲ್ಲಾ ಲೋಕಗಳನ್ನೂ ಮತ್ತು ಎಲ್ಲಾ ಪ್ರಾಣಿಗಳನ್ನೂ ಪ್ರತಿಯೊಂದು ಬ್ರಹ್ಮಾಂಡವು ಸೃಷ್ಟಿಯಾದಾಗಲೂ ಪುನಃ ಪುನಃ ಅದರಲ್ಲಿ ತೊಡಗಿಸುತ್ತಾರೆ.

ವಜ್ರಸ್ಯ ಭರ್ತಾ ಭುವನಸ್ಯ ಗೋಪ್ತಾ
ವೃತ್ರಸ್ಯ ಹಂತಾ ನಮುಚೇರ್ಬಲಸ್ಯ ।
ಕೃಷ್ಣೇ ವಸಾನೋ ವಸನೇ ಮಹಾತ್ಮಾ
ಸತ್ಯಾನೃತೇ ಯೋ ವಿವಿನಕ್ತಿ ಲೋಕೇ ॥೧೬೦॥

ವಜ್ರವನ್ನು ಧರಿಸಿದವನು, ಭೂಮಿಯನ್ನು ರಕ್ಷಿಸುವವನು, ವೃತ್ರನನ್ನು ಸಂಹರಿಸಿದವನು, ಬಲನನ್ನು ಸಂಹರಿಸಿದವನು ಆದ ಮಹಾತ್ಮನಾದ ಇಂದ್ರನು ಕೃಷ್ಣವಸ್ತ್ರಗಳೆರಡನ್ನು ಧರಿಸಿ ಲೋಕದಲ್ಲಿ ಸತ್ಯ ಮತ್ತು ಅನೃತವನ್ನು ವಿವೇಚನೆ ಮಾಡುತ್ತಾನೆ.

ಯೋ ವಾಹನಂ ಗರ್ಭಮಪಾಂ ಪುರಾಣಂ
ವೈಶ್ವಾನರಂ ವಾಹನಮಭ್ಯುಪೈತಿ
ನಮೋಽಸ್ತು ತಸ್ಮೈ ಜಗದೀಶ್ವರಾಯ
ಲೋಕತ್ರಯೇಶಾಯ ಪುರಂದರಾಯ ಇತಿ ॥೧೬೧॥

ಯಾವನು ಸಮುದ್ರದ ಗರ್ಭದಲ್ಲಿರುವ ಪ್ರಾಚೀನನಾದ ವೈಶ್ವಾನರನನ್ನು ವಾಹನವನ್ನಾಗಿ ಸ್ವೀಕರಿಸುತ್ತಾನೆಯೋ, ಅಂತಹ ಜಗದೀಶ್ವರನಾದ ಲೋಕತ್ರಯಕ್ಕೆ ಒಡೆಯನಾದ ಪುರಂದರನಿಗೆ ನನ್ನ ನಮಸ್ಕಾರಗಳು. (ಎಂದು ಸ್ತೋತ್ರಮಾಡಿದನು)

ತತ ಏನಂ ಸ ಪುರುಷಃ ಪ್ರಾಹ । ಪ್ರೀತೋಽಸ್ಮ್ಯಹಮನೇನ
ಸ್ತೋತ್ರೇಣ ಪ್ರಿಯಂ ತೇ ಕಿಂ ಕರವಾಣೀತಿ ॥೧೬೨॥

ಆಗ ಈ ಉದಂಕನನ್ನು ಕುರಿತು ಆ ಪುರುಷನು ನಾನು ನಿನ್ನ ಸ್ತೋತ್ರಕ್ಕೆ ಮೆಚ್ಚಿದ್ದೇನೆ ನಿನಗೆ ಏನು ಪ್ರಿಯವನ್ನು ಮಾಡಲಿ ಎಂದು ಕೇಳಿದನು.

ಸ ತಮುವಾಚೋದಂಕಃ । ನಾಗಾ ಮೇ ವಶಮುಪೇಯುರಿತಿ ॥೧೬೩॥

ಆಗ ಉದಂಕನು ಅವನನ್ನು ಕುರಿತು ನಾಗಗಳು ನನ್ನ ವಶವಾಗಬೇಕು ಎಂದು ಕೇಳಿದನು.

ಸ ಏನಂ ಪುರುಷಃ ಪ್ರೋವಾಚ ಏತಮಶ್ವಮಪಾನೇ ಧಮೇತಿ ॥೧೬೪॥

ಆ ಪುರುಷನು ಅವನನ್ನು ಕುರಿತು ಈ ಅಶ್ವವನ್ನು ಗುದದ್ವಾರದಿಂದ ಊದು ಎಂದು ಹೇಳಿದನು.

ಸ ತಮಶ್ವಮಪಾನೇಽಧಮತ್ । ಅಥಾಸ್ಮಾದಶ್ವಾದ್
ಸರ್ವಸ್ರೋತೋಭ್ಯಃ ಸಧೂಮಾ ಅರ್ಚಿಷೋಽಗ್ನೇರ್ನಿಷ್ಪೇತುಃ ।
ಯಾಭಿರ್ನಾಗಲೋಕ ಉಪಧೂಪಿತಃ ॥೧೬೫॥

ಉದಂಕನು ಆ ಅಶ್ವವನ್ನು ಗುದದ್ವಾರದಲ್ಲಿ ಊದಿದನು. ಆಗ ಆ ಅಶ್ವದ ಎಲ್ಲಾ ನವದ್ವಾರಗಳಿಂದ ಧೂಮಸಹಿತವಾದ ಅಗ್ನಿಯ ಕಣಗಳು ಹೊರಹೊಮ್ಮಿದವು. ಆ ಅಗ್ನಿಯ ಕಣಗಳಿಂದ ನಾಗಲೋಕವೆಲ್ಲವೂ ಧೂಮದಿಂದ ಆವೃತವಾಯಿತು.

ಅಥ ಸಂಭ್ರಾಂತಸ್ತಕ್ಷಕೋऽಗ್ನಿತೇಜೋಭಯವಿಷಣ್ಣಶ್ಚಾಚಿಂತ್ ।
ತೇ ಕುಂಡಲೇ ಗೃಹೀತ್ವಾ ಸಹಸಾ ಸ್ವಭವನಾನ್ನಿಷ್ಕ್ರಮ್ಯೋದಂಕಮುವಾಚ ।
ಏತೇ ಮಣಿಕುಂಡಲೇ ಪ್ರತಿಗೃಹ್ಣಾತು ಭವಾನಿತಿ ॥೧೬೬॥

ಆಗ ತಕ್ಷಕನು ದಿಗ್ಭ್ರಾಂತನಾಗಿ ಅಗ್ನಿಯ ತೇಜಸ್ಸಿನ ಭಯದಿಂದ ವಿಷಾದವನ್ನು ಹೊಂದಿದನು. ಆ ಎರಡು ಕುಂಡಲಗಳನ್ನು ತೆಗೆದುಕೊಂಡು ತಕ್ಷಣ ತನ್ನ ಮನೆಯಿಂದ ಹೊರಗೆ ಬಂದು, ಉದಂಕನನ್ನು ಕುರಿತು ಇದೇ ಆ ಮಣಿಕುಂಡಲಗಳು. ನೀನು ಸ್ವೀಕರಿಸು ಎಂದು ಹೇಳಿದನು.

ಸ ತೇ ಪ್ರತಿಜಗ್ರಾಹೋದಂಕಃ । ಕುಂಡಲೇ ಪ್ರತಿಗೃಹ್ಯಾಚಿಂತಯತ್ ।
ಅದ್ಯ ತತ್ಪುಣ್ಯಕರ್ಮೋಪಾಧ್ಯಾಯಿನ್ಯಾಃ ದೂರಂ ಚಾಹಮ-
ಭ್ಯಾಗತಃ । ಕಥಂ ನು ಖಲು ಸಂಭಾವಯೇಯಮಿತಿ ॥೧೬೭॥

ಉದಂಕನು ಆ ಕುಂಡಲವನ್ನು ಸ್ವೀಕರಿಸಿದನು. ಆ ಕುಂಡಲವನ್ನು ತೆಗೆದುಕೊಂಡ ಅವನು ಇಂದು ನನ್ನ ಗುರುಪತ್ನಿಯು ಹೇಳಿದ ಆ ಪುಣ್ಯಕರ್ಮದ ದಿವಸ. ನಾನು ಬಹಳ ದೂರ ಬಂದಿದ್ದೇನೆ. ನಾನು ಹೇಗೆ ನಿಭಾಯಿಸಲಿ ಎಂದು ಚಿಂತಿಸಿದನು.

ತತ ಏನಂ ಚಿಂತಯಾನಮೇವಂ ಪುರುಷ ಉವಾಚ । ಉದಂಕ
ಏನಮಶ್ವಮಧಿರೋಹ ಏಷ ತ್ವಾಮೇತತ್ಕ್ಷಣಾ-
ದೇವೋಪಾಧ್ಯಾಯಕುಲಂ ಪ್ರಾಪಯಿಷ್ಯತೀತಿ ॥೧೬೮॥

ಹೀಗೆ ಚಿಂತಿಸುತ್ತಿದ್ದ ಉದಂಕನನ್ನು ಕುರಿತು, ಆ ಪುರುಷನು ಉದಂಕನೇ ಈ ಅಶ್ವವನ್ನು ಏರು. ಈ ಅಶ್ವವು ನಿನ್ನನ್ನು ಈ ಕ್ಷಣದಲ್ಲಿಯೇ ಉಪಾಧ್ಯಾಯರ ಮನೆಗೆ ತಲುಪಿಸುತ್ತದೆ ಎಂದು ಹೇಳಿದನು.

ಸ ತಥೇತ್ಯುಕ್ತ್ವಾ ತಮಶ್ವಮಧಿರುಹ್ಯ ಉಪಾಧ್ಯಾಯಿನೀಂ ಪ್ರತ್ಯಾಜಗಾಮ
॥೧೬೯॥

ಅವನು ಹಾಗೆಯೇ ಆಗಲಿ ಎಂದು ಹೇಳಿ, ಆ ಅಶ್ವವನ್ನು ಏರಿ ಉಪಾಧ್ಯಾಯ ಪತ್ನಿಯ ಎದುರಿಗೆ ಬಂದನು.

ಉಪಾಧ್ಯಾಯಿನೀ ಸ್ನಾತ್ವಾ ಕೇಶಾನಾವಪಂತ್ಯುಪವಿಷ್ಟಾ ।
ಅದ್ಯಾಪ್ಯುದಂಕೋ ನಾಗಚ್ಛತೀತಿ ಶಾಪಾಯಾಸ್ಯ ಮತಿಂ ದಧ್ರೇ ॥೧೭೦॥

ಉಪಾಧ್ಯಾಯ ಪತ್ನಿಯು ಸ್ನಾನವನ್ನು ಮಾಡಿ ತಲೆಯನ್ನು ಬಾಚಿಕೊಳ್ಳುತ್ತಿದ್ದಳು. ಈ ದಿನವೂ ಉದಂಕನು ಬರಲಿಲ್ಲ ಎಂದು ಅವನಿಗೆ ಶಾಪವನ್ನು ಕೊಡಲು ನಿಶ್ಚಯಿಸಿದಳು.

ಅಥೋದಂಕಃ ಪ್ರವಿಶ್ಯೋಪಾಧ್ಯಾಯಿನೀಮಭ್ಯವಾದಯತ್ । ತೇ
ಚಾಸ್ಯೈ ಕುಂಡಲೇ ಪ್ರಾಯಚ್ಛತ್ ॥೧೭೧॥

ಆ ವೇಳೆಗೆ ಉದಂಕನು ಪ್ರವೇಶಿಸಿ, ಉಪಾಧ್ಯಾಯಿನಿಗೆ ನಮಸ್ಕರಿಸಿದನು. ಆ ಎರಡು ಕುಂಡಲಗಳನ್ನು ಅವಳಿಗೆ ಕೊಟ್ಟನು.

ಸಾ ಚೈನಂ ಪ್ರತ್ಯುವಾಚ । ಉದಂಕ ದೇಶೇ ಕಾಲೇऽಭ್ಯಾಗತೋಸಿ ।
ಸ್ವಾಗತಂ ತೇ ವತ್ಸ । ಅನಾಗಾ ಅಸಿ । ಕಥಮಪಿ ಮಯಾ ನ ಶಪ್ತಃ ।
ಶ್ರೇಯಸ್ತವೋಪಸ್ಥಿತಂ ಸಿದ್ಧಿಮವಾಪ್ನುಹೀತಿ ॥೧೭೨॥

ಅವಳು ಉದಂಕನನ್ನು ಕುರಿತು, ಉದಂಕನೇ ಸರಿಯಾದ ದೇಶಕ್ಕೆ, ಸರಿಯಾದ ಕಾಲದಲ್ಲಿ ಆಗಮಿಸಿದ್ದೀಯೆ. ವತ್ಸ ನಿನಗೆ ಸ್ವಾಗತ. ನೀನು ನಿರಪರಾಧಿಯಾಗಿದ್ದೀಯೆ. ಹೇಗೋ ನಾನು ನಿನಗೆ ಶಾಪವನ್ನು ಕೊಡಲಿಲ್ಲ. ನಿನಗೆ ಶ್ರೇಯಸ್ಸು ಸನ್ನಿಹಿತವಾಗಿದೆ. ನೀನು ಸಿದ್ಧಿಯನ್ನು ಪಡೆಯುವವನಾಗು ಎಂದು ಹೇಳಿದಳು.

ಅಥೋದಂಕ ಉಪಾಧ್ಯಾಯಮಭ್ಯವಾದಯತ್ । ತಮುಪಾಧ್ಯಾಯಃ
ಪ್ರತ್ಯುವಾಚ । ವತ್ಸೋದಂಕ ಸ್ವಾಗತಂ ತೇ ಚಿರಂ ಕೃತಮಿತಿ ॥೧೭೩॥

ಅನಂತರ ಉದಂಕನು ಉಪಾಧ್ಯಾಯರಿಗೆ ನಮಸ್ಕರಿಸಿದನು. ಆಗ ಉಪಾಧ್ಯಾಯನು ಅವನನ್ನು ಕುರಿತು, ವತ್ಸ ಉದಂಕ ನಿನಗೆ ಸ್ವಾಗತ. ಏಕೆ ತಡಮಾಡಿದೆ ಎಂದು ಕೇಳಿದರು.

ತಮುದಂಕಃ ಪ್ರತ್ಯುವಾಚ ।ಭೋ ತಕ್ಷಕೇಣ ನಾಗರಾಜೇನ ವಿಘ್ನಃ
ಕೃತಃ ಅಸ್ಮಿನ್ಕರ್ಮಣಿ, ತೇನಾಸ್ಮಿ ನಾಗಲೋಕಗತಸ್ತತ್ರ ಚ ಮಯಾ
ದೃಷ್ಟೇ ಸ್ತ್ರಿಯೌ ತಂತ್ರೇಽಧಿರೋಪ್ಯ ತಂತೂನ್ ಪಟಂ ವಯಂತ್ಯೌ,
ತಸ್ಮಿಂಶ್ಚ ತಂತ್ರೇ ಕೃಷ್ಣಾಃ ಶ್ವೇತಾಶ್ಚ ತಂತವಃ ಕಿಂ ತತ್ ।
ತತ್ರ ಚಕ್ರಮಪಿ ದೃಷ್ಟಂ ದ್ವಾದಶಾರಂ ಷಟ್ ಚೈನಂ ಕುಮಾರಾಃ
ಪರಿವರ್ತಯಂತಿ ತದಪಿ ಕಿಮ್ । ಪುರುಷಶ್ಚ ಮಯಾ ದೃಷ್ಟಃ ।
ಸ ಪುನಃ ಕಃ । ಅಶ್ವಶ್ಚಾತಿಪ್ರಮಾಣಯುಕ್ತಃ ಸ ಚಾಪಿ ಕಃ ।
ಪಥಿ ಗಚ್ಛತಾ ಮಯಾ ವೃಷಭೋ ದೃಷ್ಟಃ ತಂ ಚ ಪುರುಷೋಽಧಿರೂಢಃ
ತೇನಾಸ್ಮಿ ಸೋಪಚಾರಮುಕ್ತಃ । ವೃಷಭಸ್ಯ ಪುರೀಷಂ ಭಕ್ಷಯ ।
ಉಪಾಧ್ಯಾಯೇನಾಪಿ ತೇ ಭಕ್ಷಿತಮಿತಿ । ತತಸ್ತಸ್ಯ ವಚನಾನ್ಮಯಾಽಪಿ
ತದ್ವೃಷಭಸ್ಯ ಪುರೀಷಮುತ್ತಮಮುಪಯುಕ್ತಮ್ ।
ತದಿಚ್ಛಾಮಿ ಭವತೋಪದಿಷ್ಟಂ ಕಿಂ ತದಿತಿ ॥೧೭೪॥

ಆಗ ಉದಂಕನು ಪೂಜ್ಯರೇ ನಾಗರಾಜನಾದ ತಕ್ಷಕನು ಈ ಕಾರ್ಯದಲ್ಲಿ ವಿಘ್ನವನ್ನು ಮಾಡಿದನು. ಅದರಿಂದ ನಾನು ನಾಗಲೋಕಕ್ಕೆ ಹೋಗಿ ಅಲ್ಲಿ ನಾನು ರಾಟೆಯಲ್ಲಿ ನೂಲುಗಳನ್ನು ಸೇರಿಸಿ ಬಟ್ಟೆಗಳನ್ನು ನೇಯುತ್ತಿದ್ದ ಇಬ್ಬರು ಸ್ತ್ರೀಯರನ್ನು ನೋಡಿದೆನು. ಆ ರಾಟೆಯಲ್ಲಿ ಕಪ್ಪು-ಬಿಳಿಯ ಬಣ್ಣದ ನೂಲುಗಳಿದ್ದವು. ಅವು ಏನು? ಅಲ್ಲದೇ ನಾನು ಅಲ್ಲಿ ಹನ್ನೆರಡು ಅರಗಳುಳ್ಳ ಒಂದು ಚಕ್ರವನ್ನು ನೋಡಿದೆನು. ಆರುಕುಮಾರರು ಅದನ್ನು ತಿರುಗಿಸುತ್ತಿದ್ದರು ಅದು ಕೂಡ ಏನು? ಒಬ್ಬ ಪುರುಷನನ್ನು ನೋಡಿದೆ ಅವನು ಯಾರು? ಒಂದು ಮಹಾಪ್ರಮಾಣದ ಅಶ್ವವನ್ನೂ ನೋಡಿದೆ. ಆ ಅಶ್ವವು ಏನು? ನಾನು ದಾರಿಯಲ್ಲಿ ಬರುತ್ತಾ ಒಂದು ವೃಷಭವನ್ನು ನೋಡಿದೆ. ಅದರ ಮೇಲೆ ಒಬ್ಬ ಪುರುಷನು ಕುಳಿತಿದ್ದನು. ಅವನು ನನ್ನನ್ನು ಕುರಿತು ಉಪಚಾರಪೂರ್ವಕವಾಗಿ ಈ ವೃಷಭದ ಗೋಮಯವನ್ನು ತಿನ್ನು, ನಿನ್ನ ಉಪಾಧ್ಯಾಯನು ಕೂಡ ಹಿಂದೆ ತಿಂದಿದ್ದಾನೆ ಎಂದು ಹೇಳಿದನು. ಆಗ ಅವನ ವಚನದಂತೆ ನಾನೂ ಸಹ ಆ ವೃಷಭದ ಶ್ರೇಷ್ಠವಾದ ಗೋಮಯವನ್ನು ತಿಂದೆನು. ಅದು ಏನು ಎಂದು ನಿಮ್ಮ ಉಪದೇಶದಿಂದ ತಿಳಿದುಕೊಳ್ಳಲು ನಾನು ಇಚ್ಛಿಸುತ್ತೇನೆ ಎಂದು ಹೇಳಿದನು.

ತೇನೈವಮುಕ್ತ ಉಪಾಧ್ಯಾಯಃ ಪ್ರತ್ಯುವಾಚ । ಯೇ ತೇ ಸ್ತ್ರಿಯೌ ಧಾತಾ
ವಿಧಾತಾ ಚ । ಯೇ ತೇ ಕೃಷ್ಣಾಸ್ತಿತಾಶ್ಚ ತಂತವಃ ತೇ

ರಾತ್ರ್ಯಹನೀ । ತದಪಿ ಚಕ್ರಂ ದ್ವಾದಶಾರಂ ಷಟ್‌ಕುಮಾರಾಃ
ಪರಿವರ್ತಯಂತಿ ತೇ ಋತವಃ ಷಟ್ ದ್ವಾದಶಾರಾಣಿ
ದ್ವಾದಶಮಾಸಾಃ ಸಂವತ್ಸರಶ್ಚಕ್ರಮ್ । ಯಃ ಪುರುಷಃ ಸ ಪರ್ಜನ್ಯಃ
ಯೋಽಶ್ವಃ ಸೋಽಗ್ನಿಃ । ಯೋ ವೃಷಭಸ್ತ್ವಯಾ ಪಥಿ ದೃಷ್ಟಃ ಸ
ಐರಾವತೋ ನಾಮ ನಾಗರಾಜಃ । ಯಶ್ಚೈನಮಧಿರೂಢಃ ಸ
ಇಂದ್ರಃ । ಯದಪಿ ತೇ ಪುರೀಷಂ ಭಕ್ಷಿತಂ ತದಮೃತಮ್ ।
ತೇನ ಖಿಲ್ವಸಿ ನ ವ್ಯಾಪನ್ನಃ ತಸ್ಮಿನ್ ನಾಗಲೋಕೇ।
ಸ ಚಾಪಿ ಮಮ ಸಖೇಂದ್ರಃ । ತದನುಗ್ರಹಾತ್ ಕುಂಡಲೇ ಅಭಿಗೃಹ್ಯ
ಪುನರಭ್ಯಾಗತೋಽಸಿ । ತತ್ಪ್ರೇಮ್ಯ ಗಮ್ಯತಾಮ್ ।
ಅನುಜಾನೇ ಭವಂತಂ ಶ್ರೇಯೋಽವಾಪ್ಸ್ಯಸೀತಿ ॥೧೭೫॥

ಅವನಿಂದ ಹೀಗೆ ಹೇಳಲ್ಪಟ್ಟ ಉಪಾಧ್ಯಾಯರು ಅವನನ್ನು ಕುರಿತು, ಆ ಇಬ್ಬರು ಸ್ತ್ರೀಯರು ಧಾತೃ ಮತ್ತು ವಿಧಾತೃ ದೇವತೆಗಳು. ಕಪ್ಪು ಮತ್ತು ಬಿಳಿಯ ದಾರಗಳು ರಾತ್ರಿ ಮತ್ತು ಹಗಲುಗಳು, ಆರು ಕುಮಾರರು ಋತುಗಳು. ದ್ವಾದಶ ಅರಗಳು ದ್ವಾದಶ ಮಾಸಗಳು. ಚಕ್ರವು ಸಂವತ್ಸರ. ಆ ಪುರುಷನು ಪರ್ಜನ್ಯ. ಆಶ್ವವು ಅಗ್ನಿ. ಯಾವ ವೃಷಭವನ್ನು ನೀನು ದಾರಿಯಲ್ಲಿ ನೋಡಿದೆಯೋ, ಅದು ಐರಾವತವೆಂಬ ಗಜರಾಜ. ಅದರ ಮೇಲೆ ಕುಳಿತಿದ್ದ ಪುರುಷನು ಇಂದ್ರ. ಅಲ್ಲಿ ನೀನು ಯಾವ ಗೋಮಯವನ್ನು ತಿಂದೆಯೋ ಅದು ಅಮೃತ. ಆ ಕಾರಣದಿಂದ ನೀನು ಆ ನಾಗಲೋಕದಲ್ಲಿ ಮೃತನಾಗಿಲ್ಲ. ಆ ಇಂದ್ರನಾದರೋ ನನ್ನ ಸ್ನೇಹಿತನಾಗಿದ್ದಾನೆ. ಅವನ ಅನುಗ್ರಹದಿಂದ ಕುಂಡಲವನ್ನು ತೆಗೆದುಕೊಂಡು ನೀನು ಹಿಂದಿರುಗಿ ಬಂದಿದ್ದೀಯೆ. ಪ್ರೀತಿಪಾತ್ರನೇ ನೀನು ಹೋಗಿಬಾ. ನಿನಗೆ ಅನುಮತಿಯನ್ನು ನೀಡುತ್ತಿದ್ದೇನೆ. ನೀನು ಶ್ರೇಯಸ್ಸನ್ನು ಪಡೆಯುವಿ ಎಂದು ಹೇಳಿದರು.

ಸ ಉಪಾಧ್ಯಾಯೇನಾನುಜ್ಞಾತ ಉದಂಕಃ ತಸ್ಯ ತಕ್ಷಕಸ್ಯ
ಪ್ರತಿಚಿಕೀರ್ಷಮಾಣೋ ಹಸ್ತಿನಪುರಂ ಪ್ರತಸ್ಥೇ ॥೧೭೬॥

ಉಪಾಧ್ಯಾಯರ ಅನುಮತಿಯನ್ನು ಪಡೆದ ಆ ಉದಂಕನು ಆ ತಕ್ಷಕನಿಗೆ ಪ್ರತೀಕಾರವನ್ನು ಮಾಡಲು ಬಯಸಿ ಹಸ್ತಿನಪುರಕ್ಕೆ ಹೊರಟನು.

ಸ ಹಸ್ತಿನಪುರಂ ಪ್ರಾಪ್ಯ ನ ಚಿರಾದ್ ದ್ವಿಜಸತ್ತಮಃ ।
ಸಮಾಗಚ್ಛತ ರಾಜಾನಮುದಂಕೋ ಜನಮೇಜಯಮ್ ॥೧೭೭॥

ಆ ದ್ವಿಜಶ್ರೇಷ್ಠನು ಶೀಘ್ರವಾಗಿ ಹಸ್ತಿನಪುರವನ್ನು ತಲುಪಿ ಜನಮೇಜಯರಾಜನೊಂದಿಗೆ ಸಮಾಗಮವನ್ನು ಹೊಂದಿದನು.

ಪುರಾ ತಕ್ಷಶಿಲಾಯಾಸ್ತು ನಿವೃತ್ತಮಪರಾಜಿತಮ್ ।
ಸಮ್ಯಗ್ವಿಜಯಿನಂ ದೃಷ್ಟ್ವಾ ಸಮಂತಾನ್ಮಂತ್ರಿಭಿರ್ವೃತಮ್ ॥೧೭೮॥

ತಸ್ಮೈ ಜಯಾಶಿಷಃ ಪೂರ್ವಂ ಯಥಾನ್ಯಾಯಂ ಪ್ರಯುಜ್ಯ ಸಃ ।
ಉವಾಚೈನಂ ವಚಃ ಕಾಲೇ ಶಬ್ದಸಂಪನ್ನಯಾ ಗಿರಾ ॥೧೭೯॥

ಮೊದಲು ತಕ್ಷಶಿಲೆಗೆ ಹೋಗಿ, ಅಪರಾಜಿತನಾಗಿ ವಿಜಯವನ್ನು ಸಂಪಾದಿಸಿ ಹಿಂದಿರುಗಿ ಬಂದು ಸುತ್ತಲೂ ಮಂತ್ರಿಗಳಿಂದ ಸುತ್ತುವರಿಯಲ್ಪಟ್ಟಿದ್ದಂತಹ ಆ ರಾಜನಿಗೆ ಮೊದಲು ಸಂಪ್ರದಾಯಕ್ಕೆ ಅನುಗುಣವಾಗಿ ಜಯಾಶೀರ್ವಾದಗಳನ್ನು ಮಾಡಿ ಉಚಿತವಾದ ಕಾಲದಲ್ಲಿ ಒಳ್ಳೆಯ ಶಬ್ದಗಳಿಂದ ಕೂಡಿದ ಮಾತುಗಳಿಂದ ರಾಜನನ್ನು ಕುರಿತು ಮಾತನಾಡಿದನು.

ಅನ್ಯಸ್ಮಿನ್ ಕರಣೀಯೇ ತೇ ಕಾರ್ಯೇ ಪಾರ್ಥಿವಸತ್ತಮ ।
ಬಾಲ್ಯಾದಿವಾನ್ಯದೇವ ತ್ವಂ ಕುರುಷೇ ನೃಪಸತ್ತಮ ॥೧೮೦॥

ಎಲೈ ರಾಜಶ್ರೇಷ್ಠನೇ ಮಾಡಬೇಕಾದ ಕಾರ್ಯವು ಬೇರೆಯಿರುವಾಗ ನೀನು ಬಾಲ್ಯದಿಂದೆಂಬಂತೆ ಬೇರೆ ಕಾರ್ಯವನ್ನೇ ಮಾಡುತ್ತಿದ್ದೀಯೆ.

ಸೂತಃ

ಏವಮುಕ್ತಸ್ತು ವಿಪ್ರೇಣ ಸ ರಾಜಾ ಪ್ರತ್ಯುವಾಚ ಹ ।
ಜನಮೇಜಯಃ ಪ್ರಸನ್ನಾತ್ಮಾ ಸಮ್ಯಕ್ ಸಂಪೂಜ್ಯ ತಂ ಮುನಿಮ್
॥೧೮೧॥

ಆ ಬ್ರಾಹ್ಮಣದಿಂದ ಹೀಗೆ ಹೇಳಲ್ಪಟ್ಟ ಜನಮೇಜಯರಾಜನು ಸಂತೋಷದಿಂದ ಕೂಡಿದ ಮನಸ್ಸುಳ್ಳವನಾಗಿ ಆ ಋಷಿಗೆ ಯೋಗ್ಯವಾದ ಪೂಜೆಯನ್ನು ಮಾಡಿ, ಅವನನ್ನು ಕುರಿತು ಮಾತನಾಡಿದನು.

ಅಹಂ ಪ್ರಜಾನಾಂ ಪರಿಪಾಲನೇನ
ಸ್ವಂ ಕ್ಷತ್ರಧರ್ಮಂ ಪರಿಪಾಲಯಾಮಿ ।
ಪ್ರಬ್ರೂಹಿ ಕಿಂ ವಾ ಕ್ರಿಯತಾಂ ದ್ವಿಜೇಂದ್ರ
ಶುಶ್ರೂಷುರಸ್ಮ್ಯದ್ಯ ವಚಸ್ತ್ವದೀಯಮ್ ॥೧೮೨॥

ನಾನು ಪ್ರಜೆಗಳ ಪರಿಪಾಲನೆಯನ್ನು ಮಾಡಿ ನನ್ನ ಕ್ಷತ್ರಿಯಧರ್ಮವನ್ನು ಆಚರಿಸುತ್ತಿದ್ದೇನೆ. ಎಲೈ ಬ್ರಾಹ್ಮಣಶ್ರೇಷ್ಠನೇ ನಾನು ಏನು ಮಾಡಬೇಕೆಂದು ಹೇಳು. ನಿನ್ನ ಮಾತುಗಳನ್ನು ಕೇಳಲು ನಾನು ಆಸಕ್ತಿಯಿಂದ ಇದ್ದೇನೆ.

ಸೂತಃ

ಸ ಏವಮುಕ್ತಸ್ತು ನೃಪೋತ್ತಮೇನ
ದ್ವಿಜೋತ್ತಮಃ ಪುಣ್ಯಕೃತಾಂ ವರಿಷ್ಠಃ ।
ಉವಾಚ ರಾಜಾನಮದೀನಸತ್ವಂ
ಸ್ವಮೇವ ಕಾರ್ಯಂ ನೃಪತೇಶ್ಚ ಯತ್ತತ್ ॥೧೮೩॥

ಆ ರಾಜಶ್ರೇಷ್ಠನಿಂದ ಹೀಗೆ ಹೇಳಲ್ಪಟ್ಟ ಪುಣ್ಯಕಾರ್ಯವನ್ನು ಮಾಡುವ ಶ್ರೇಷ್ಠನಾದ ಆ ದ್ವಿಜೋತ್ತಮನು ಉದಾರಸತ್ವನಾದ ಆ ರಾಜನನ್ನು ಕುರಿತು ತನ್ನದೇ ಆದ ಮತ್ತು ರಾಜನು ಮಾಡಬೇಕಾದ ಕಾರ್ಯವು ಯಾವುದು ಇದ್ದಿತೋ ಅದನ್ನು ಹೇಳಿದನು.

ಉದಂಕಃ

ತಕ್ಷಕೇಣ ಹಿ ರಾಜೇಂದ್ರ ಯೇನ ತೇ ಹಿಂಸಿತಃ ಪಿತಾ ।
ತಸ್ಯೈ ಪ್ರತಿಕುರುಷ್ವ ತ್ವಂ ಪನ್ನಗಾಯ ದುರಾತ್ಮನೇ ॥೧೮೪॥

ಎಲೈ ರಾಜೇಂದ್ರನೇ ಯಾವ ತಕ್ಷಕನು ನಿನ್ನ ತಂದೆಯನ್ನು ಹಿಂಸಿಸಿದನೋ ಅಂತಹ ದುರಾತ್ಮನಾದ ಸರ್ಪಕ್ಕೆ ನೀನು ಪ್ರತೀಕಾರವನ್ನು ಮಾಡು.

ಕಾರ್ಯಕಾಲಂ ಚ ಮನ್ಯೇಽಹಂ ವಿಧಿದೃಷ್ಟಸ್ಯ ಕರ್ಮಣಃ ।
ತದ್ ಗಚ್ಛಾಪಚಿತಿಂ ರಾಜನ್ ಪಿತುಸ್ತಸ್ಯ ಮಹಾತ್ಮನಃ ॥೧೮೫॥

ವಿಧಿವಿಹಿತವಾದ ಅಂತಹ ಕರ್ಮವನ್ನು ಮಾಡಲು ಇದು ಯೋಗ್ಯವಾದ ಕಾಲವೆಂದು ನಾನು ಭಾವಿಸುತ್ತೇನೆ. ರಾಜನೇ ಅಂತಹ ಕಾರ್ಯವನ್ನು ಮಾಡಿ, ಮಹಾತ್ಮನಾದ ನಿನ್ನ ತಂದೆಗೆ ಉಂಟಾದ ಅಪಕಾರಕ್ಕೆ ಪ್ರತೀಕಾರವನ್ನು ಮಾಡು.

ತೇನ ಹ್ಯನಪರಾಧೀ ಸ ದಷ್ಟೋ ದುಷ್ಟಾಂತರಾತ್ಮನಾ ।
ಪಂಚತ್ವಮಗಮದ್ ರಾಜಾ ವಜ್ರಾಹತ ಇವ ದ್ರುಮಃ ॥೧೮೬॥

ನಿರಪರಾಧಿಯಾದ ನಿನ್ನ ತಂದೆಯಾದ ಪರೀಕ್ಷಿತರಾಜನು ದುಷ್ಟಾತ್ಮನಾದ ತಕ್ಷಕನಿಂದ ಕಚ್ಚಲ್ಪಟ್ಟು ವಜ್ರಾಯುಧದ ಹೊಡೆತಕ್ಕೆ ಒಳಗಾದ ವೃಕ್ಷದಂತೆ ಮರಣವನ್ನು ಹೊಂದಿದನು.

ಬಲದರ್ಪಸಮುತ್ಸಿಕ್ತಸ್ತಕ್ಷಕಃ ಪನ್ನಗಾಧಮಃ ।
ಅಕಾರ್ಯಂ ಕೃತವಾನ್ ಪಾಪೋ ಯೋಽದಶತ್ ಪಿತರಂ ತವ ॥೧೮೭॥

ಆ ಪನ್ನಗಾಧಮನಾದ ತಕ್ಷಕನು ಬಲದಿಂದಲೂ, ದರ್ಪದಿಂದಲೂ ಉಬ್ಬಿಹೋದವನಾಗಿ ನಿನ್ನ ತಂದೆಯನ್ನು ಕಚ್ಚಿ ಪಾಪಿಯಾದ ಅವನು ಅಕಾರ್ಯವನ್ನು ಮಾಡಿದ್ದಾನೆ.

ರಾಜರ್ಷಿವಂಶಗೋಪ್ತಾರಮಮರಪ್ರತಿಮಂ ನೃಪಮ್ ।
ಜಘಾನ ಕಾಶ್ಯಪಂ ಚೈವ ನ್ಯವರ್ತಯತ ಪಾಪಕೃತ್ ॥೧೮೮॥

ರಾಜರ್ಷಿಗಳ ವಂಶದ ರಕ್ಷಕನಾದಂತಹ ದೇವತೆಯಂತಿದ್ದ ರಾಜನನ್ನು ಕೊಂದನು. ಅಷ್ಟೇ ಅಲ್ಲದೇ ಪಾಪಕಾರ್ಯವನ್ನು ಮಾಡುವ ಅವನು ಕಾಶ್ಯಪಬ್ರಾಹ್ಮಣನನ್ನು ಹಿಂದಿರುಗಿಸಿದನು.

ದಗ್ಧುಮರ್ಹಸಿ ರಾಜಂಸ್ತ್ವಂ ಜ್ವಲಿತೇ ಹವ್ಯವಾಹನೇ ।
ಸರ್ಪಸತ್ರೇ ಮಹಾರಾಜ ತ್ವಯಿ ತದ್ಧಿ ವಿಧೀಯತೇ ॥೧೮೯॥

ಎಲೈ ರಾಜನೇ ನೀನು ಸರ್ಪಸತ್ರದಲ್ಲಿ ಜ್ವಲಿಸುವ ಅಗ್ನಿಯಲ್ಲಿ ಆ ಸರ್ಪಗಳನ್ನು ದಹಿಸಲು ಅರ್ಹನಾಗಿದ್ದೀಯೆ. ಮಹಾರಾಜನೇ ಇದು ಈಗ ನಿನಗೆ ವಿಹಿತವಾದ ಕಾರ್ಯ.

ಏವಂ ಪಿತುಶ್ಚಾಪಚಿತಿಂ ಗತವಾಂಸ್ತ್ವಂ ಭವಿಷ್ಯಸಿ ।
ಮಮ ಪ್ರಿಯಂ ಚ ಸುಮಹತ್ ಕೃತಂ ರಾಜನ್ ಭವಿಷ್ಯತಿ ॥೧೯೦॥

ಹೀಗೆ ಮಾಡಿದರೆ ನೀನು ನಿನ್ನ ತಂದೆಗೆ ಉಂಟಾದ ಅಪಕಾರಕ್ಕೆ ಪ್ರತೀಕಾರವನ್ನು ಮಾಡಿದಂತೆ ಆಗುವುದು. ರಾಜನೇ ನನಗೂ ಬಹಳ ಪ್ರಿಯವಾದ ಕಾರ್ಯವನ್ನು ಮಾಡಿದಂತಾಗುವುದು.

ಕರ್ಮಣಾ ಪೃಥಿವೀಪಾಲ ಮಮ ಯೇನ ದುರಾತ್ಮನಾ ।
ವಿಘ್ನಃ ಕೃತೋ ಮಹಾರಾಜ ಗುರ್ವರ್ಥಂ ಚರತೋಽನಘ ॥೧೯೧॥

ಎಲೈ ಮಹಾರಾಜನೇ, ಅನಘನೇ ಆ ದುರಾತ್ಮನು ತನ್ನ ಕರ್ಮದಿಂದ ಗುರುದಕ್ಷಿಣೆಯನ್ನು ಕೊಡಲು ಹೋಗುತ್ತಿದ್ದ ನನಗೆ ವಿಘ್ನವನ್ನು ಮಾಡಿದನು.

ಸೂತಃ

ಏತಚ್ಛ್ರುತ್ವಾ ತು ನೃಪತಿಸ್ತಕ್ಷಕಸ್ಯ ಚುಕೋಪ ಹ ।
ಉದಂಕವಾಕ್ಯಹವಿಷಾ ದೀಪ್ತೋಽಗ್ನಿರ್ಹವಿಷಾ ಯಥಾ ॥೧೯೨॥

ಈ ಮಾತುಗಳನ್ನು ಕೇಳಿದ ಜನಮೇಜಯ ರಾಜನು ಉರಿಯುವ ಅಗ್ನಿಯು ಹವಿಸ್ಸಿನಿಂದ ಜ್ವಲಿಸುವಂತೆ ಉದಂಕನ ವಾಕ್ಯವೆಂಬ ಹವಿಸ್ಸಿನಿಂದ ಕೋಪದಿಂದ ಜ್ವಲಿಸಿದನು.

ಅಪೃಚ್ಛಚ್ಚ ತದಾ ರಾಜಾ ಮಂತ್ರಿಣಸ್ತಾನ್ ಸುದುಃಖಿತಃ ।
ಉದಂಕಸ್ಯೈವ ಸಾನ್ನಿಧ್ಯೇ ಪಿತುಃ ಸ್ವರ್ಗಗತಂ ಪ್ರತಿ ॥೧೯೩॥

ಅತ್ಯಂತ ದುಃಖಿತನಾದ ಆ ರಾಜನು ಉದಂಕನ ಸನ್ನಿಧಿಯಲ್ಲಿಯೇ ಆ ಮಂತ್ರಿಗಳನ್ನು ಕುರಿತು ತನ್ನ ತಂದೆಯ ಸ್ವರ್ಗಗತಿಯ ಬಗ್ಗೆ ಪ್ರಶ್ನೆಯನ್ನು ಮಾಡಿದನು.

ತದೈವ ಹಿ ಸ ರಾಜೇಂದ್ರೋ ದುಃಖಶೋಕಾಪ್ಲುತೋಽಭವತ್ ।
ಯದೈವಂ ಪಿತರಂ ವೃತ್ತಮುದಂಕಾದಶೃಣೋದ್ ದ್ವಿಜಾತ್ ॥೧೯೪॥

ಆ ರಾಜೇಂದ್ರನು ಉದಂಕ ಬ್ರಾಹ್ಮಣನಿಂದ ತನ್ನ ತಂದೆಗೆ ಉಂಟಾದ ಇಂತಹ ಪರಿಸ್ಥಿತಿಯನ್ನು ಯಾವಾಗ ಕೇಳಿದನೋ, ಆಗಲೇ ಅವನು ದುಃಖದಿಂದಲೂ ಶೋಕದಿಂದಲೂ ತುಂಬಿಹೋದನು.

॥ ಇತಿ ಶ್ರೀಮನ್ಮಹಾಭಾರತೇ ಶತಸಹಸ್ರಿಕಾಯಾಂಸಂಹಿತಾಯಾಮಾದಿಪರ್ವಣಿ
ತೃತೀಯೋಽಧ್ಯಾಯಃ ॥

॥ ಪೌಷ್ಯಪರ್ವ ಸಮಾಪ್ತಮ್॥

ಇಲ್ಲಿಗೆ ಮಹಾಭಾರತದ ಆದಿಪರ್ವದಲ್ಲಿ ಮೂರನೆಯ ಅಧ್ಯಾಯ ಮುಗಿಯಿತು.

ಇಲ್ಲಿಗೆ ಪೌಷ್ಯಪರ್ವವು ಮುಗಿಯಿತು

೪. ಪೌಲೋಮಪರ್ವ

ನಾಲ್ಕನೆಯ ಅಧ್ಯಾಯ

(ಸತ್ರಯಾಗದಲ್ಲಿದ್ದ ಋಷಿಗಳಿಂದ ಶೌನಾಕಾಗಮನದನಂತರ ಕಥೆಯನ್ನು ಹೇಳುವಂತೆ ಸೂತರಿಗೆ ಪ್ರಾರ್ಥನೆ ಮತ್ತು ಶೌನಕರ ಆಗಮನ)

ಸೂತಃ

ರೋಮಹರ್ಷಣಪುತ್ರ ಉಗ್ರಶ್ರವಾಃ ಸೂತಃ ಪೌರಾಣಿಕೋ
ನೈಮಿಶಾರಣ್ಯೇ ಶೌನಕಸ್ಯ ಕುಲಪತೇಃ ಸತ್ರೇಃ ವರ್ತಮಾನೇ
ಋಷೀನಭ್ಯಾಗತಾನುಪತಸ್ಥೇ ॥೧॥

ನೈಮಿಶಾರಣ್ಯದಲ್ಲಿ ಕುಲಪತಿಗಳಾದ ಶೌನಕರ ಸತ್ರಯಾಗವು ನಡೆಯುತ್ತಿರಲು ರೋಮಹರ್ಷಣಪುತ್ರರಾದ ಉಗ್ರಶ್ರವಸ್ ಎಂಬ ಸೂತರು ಸಮಾಗತರಾದ ಋಷಿಗಳನ್ನು ಪ್ರಶಂಸಿಸಿದರು.

ಪೌರಾಣಿಕಃ ಪುರಾಣೇ ಕೃತಶ್ರಮಃ ಸ ತಾನ್ ಕೃತಾಂಜಲಿರುವಾಚ ॥೨॥

ಪೌರಾಣಿಕರಾಗಿ ಪುರಾಣಗಳಲ್ಲಿ ಪರಿಶ್ರಮವನ್ನು ಹೊಂದಿದ ಅವರು ಆ ಋಷಿಗಳನ್ನು ಕುರಿತು ಕೈಗಳನ್ನು ಮುಗಿದು ಮಾತನಾಡಿದರು.

ಮಯೋದಂಕಸ್ಯ ಚರಿತಮಶೇಷಮುಕ್ತಂ ಜನಮೇಜಯಸ್ಯ
ಸರ್ಪಸತ್ರಾಂತರಮಿದಮಸ್ತಿ ಕಂ ಭವಂತಃ ಶ್ರೋತುಮಿಚ್ಛಂತೀತಿ ।
ಕಿಮಹಂ ಬ್ರುವಾಣಿ ॥೩॥

ನಾನು ಉದಂಕನ ಚರಿತ್ರೆಯನ್ನು ಸಂಪೂರ್ಣವಾಗಿ ಹೇಳಿದ್ದೇನೆ. ಜನಮೇಜಯನ ಸರ್ಪಯಾಗಕ್ಕೆ ಅವಕಾಶವು ದೊರೆಯುವಂತಹ ಉದಂಕನ ಮುಖದಿಂದ ಜನಮೇಜಯನು ತನ್ನ ತಂದೆಯಾದ ಪರೀಕ್ಷಿತನ ಮರಣದ ವಾರ್ತೆಯನ್ನು ಕೇಳಿದ ಪ್ರಮೇಯವು ಇಲ್ಲಿಯೇ ಹೇಳಲ್ಪಟ್ಟಿದೆ. ನೀವು ಇನ್ನೇನನ್ನು ಕೇಳಲು ಬಯಸುತ್ತೀರಿ. ನಾನು ಏನನ್ನು ಹೇಳಲಿ?

ತಮೃಷಯ ಊಚುಃ । ಪರಂ ರೌಮಹರ್ಷಣೇ ಪ್ರವಕ್ಷ್ಯಾಮಸ್ತ್ವಂ ತ್ವಂ ವಕ್ಷ್ಯಸಿ ಪ್ರತಿ ವಚಃ ಶುಶ್ರೂಷತಾಂ ಕಥಾಯೋಗಂ ನಃ ಕಥಾಯೋಗೇ ಭಗವಾಂಶ್ಚ ತಾವಚ್ಚೌನಕೋऽಗ್ನಿಶರಣ ಏವಾಸ್ತೇ ॥೪॥

ಅವನನ್ನು ಕುರಿತು ಋಷಿಗಳು ರೋಮಹರ್ಷಣ ಪುತ್ರನೇ ನಾವು ಅನಂತರ ನಿನಗೆ ಹೇಳುತ್ತೇವೆ. ಆಗ ನೀನು ನಿನ್ನ ಕಥೆಗಳನ್ನು ಕೇಳುವ ಆಸೆಯುಳ್ಳ ನಮಗೆ ಕಥೆಗಳನ್ನು ಹೇಳುವಿಯಂತೆ. ಕಥೆಯನ್ನು ಕೇಳುವ ಆಸೆಯುಳ್ಳ ಪೂಜ್ಯರಾದ ಶೌನಕರೂ ಸಹ ಸದ್ಯದಲ್ಲಿ ಅಗ್ನಿಶಾಲೆಯಲ್ಲಿ ಇದ್ದಾರೆ ಎಂದು ಹೇಳಿದರು.

ಯೋऽಸೌ ದಿವ್ಯಾಃ ಕಥಾ ವೇದ ದೇವತಾಸುರಸಂಭವಾಃ ॥೫॥

ಮಾನುಷೀಃ ದೇವಗಾಂಧರ್ವೀಃ ಕಥಾ ವೇದ ಚ ಸರ್ವಶಃ ॥೬॥

ಆ ಶೌನಕರು ದೇವತೆ ಮತ್ತು ಅಸುರರಿಗೆ ಸಂಬಂಧಿಸಿದ ದಿವ್ಯವಾದ ಕಥೆಗಳನ್ನೂ, ಮನುಷ್ಯರಿಗೆ ಮತ್ತು ದೇವಗಂಧರ್ವರಿಗೆ ಸಂಬಂಧಿಸಿದ ಎಲ್ಲಾ ಕಥೆಗಳನ್ನೂ ತಿಳಿದಿದ್ದಾರೆ.

ಸ ಚಾಪ್ಯಸ್ಮಿನ್ಮಖೇ ಸೌತೇ ವಿದ್ವಾನ್ ಕುಲಪತಿರ್ದ್ವಿಜಃ ।
ದಕ್ಷೋ ಧೃತವ್ರತೋ ಧೀಮಾನ್ ಶಾಸ್ತ್ರೇ ಚಾರಣ್ಯಕೇ ಗುರುಃ ।
ಸತ್ಯವಾದೀ ಶಮಪರಸ್ತಪಸ್ವೀ ನಿಯತವ್ರತಃ ॥೭॥

ಎಲೈ ಸೂತಪುತ್ರನೇ, ಆ ಬ್ರಾಹ್ಮಣರಾದ ಶೌನಕರಾದರೂ ನಮ್ಮ ಈ ಸತ್ರಯಾಗದಲ್ಲಿ ಕುಲಪತಿಗಳಾಗಿ ಮಾಡಲ್ಪಟ್ಟಿದ್ದಾರೆ. ಅವರು ದಕ್ಷರೂ, ಧೃತವ್ರತರೂ, ಮೇಧಾವಿಗಳೂ, ಶಾಸ್ತ್ರದಲ್ಲೂ ಮತ್ತು ಉಪನಿಷತ್ತುಗಳಲ್ಲಿಯೂ ಗುರುಗಳಾದವರೂ, ಸತ್ಯವನ್ನು ಹೇಳುವವರೂ, ಭಗವನ್ನಿಷ್ಠೆಯುಳ್ಳವರೂ, ತಪಸ್ವಿಗಳೂ ಮತ್ತು ವ್ರತನಿಯಮಗಳನ್ನು ಆಚರಿಸುವವರು.

ಸರ್ವೇಷಾಮೇವ ನೋ ಮಾನ್ಯಃ ಸ ತಾವತ್ಕ್ರತಿಪಾಲ್ಯತಾಮ್ ।
ತಸ್ಮಿನ್ನಧ್ಯಾಸತಿ ಗುರಾವಾಸನಂ ಪರಮಾರ್ಚಿತಮ್ ।
ತತೋ ವಕ್ಷ್ಯಸಿ ಯತ್ ತ್ವಾಂ ಸ ಪೃಚ್ಛತಿ ದ್ವಿಜಸತ್ತಮಃ ॥೮॥

ಅವರು ನಮಗೆಲ್ಲರಿಗೂ ಮಾನ್ಯರಾದವರು. ಅವರು ಬರುವವರೆಗೆ ನಿರೀಕ್ಷೆಯನ್ನು ಮಾಡೋಣ. ಗುರುಗಳಾದ ಅವರು ಬಂದು ಶ್ರೇಷ್ಠವಾದ ಆಸನವನ್ನು ಸ್ವೀಕರಿಸಿದ ಮೇಲೆ, ಬ್ರಾಹ್ಮಣಶ್ರೇಷ್ಠರಾದ ಅವರು ನಿನ್ನನ್ನು ಏನು ಕೇಳುತ್ತಾರೆಯೋ ಅಂತಹ ಕಥೆಗಳನ್ನು ನೀನು ಹೇಳುವಿ.

ಸೂತಃ

ಏವಮಸ್ಮಿ ಗುರೌ ತಸ್ಮಿನ್ನುಪವಿಷ್ಟೇ ಮಹಾತ್ಮನಿ ।
ತೇನ ಪೃಷ್ಟಾಃ ಕಥಾಃ ಪುಣ್ಯಾ ವಕ್ಷ್ಯಾಮಿ ವಿವಿಧಾಶ್ರಯಾಃ ॥೯॥

ನಾನು ಹಾಗೆಯೇ ಮಾಡುತ್ತೇನೆ. ಮಹಾತ್ಮರಾದ ಗುರುಗಳು ಕುಳಿತುಕೊಂಡ ಮೇಲೆ ಅವರು ಕೇಳಿದ ವಿವಿಧ ವಿಷಯಕ್ಕೆ ಸಂಬಂಧಿಸಿದ ಪುಣ್ಯ ಕಥೆಗಳನ್ನು ಹೇಳುವೆನು.

ಸೋಽಥ ವಿಪ್ರರ್ಷಭಃ ಕೃತ್ವಾ ಕಾರ್ಯಂ ಸರ್ವಂ ಯಥಾಕ್ರಮ ।
ದೇವಾನ್ ವಾಗ್ಭಿಃ ಪಿತೄನದ್ಭಿಸ್ತರ್ಪಯಿತ್ವಾऽऽಜಗಾಮ ಹ ॥೧೦॥

ಆ ಬ್ರಾಹ್ಮಣಶ್ರೇಷ್ಠರೂ ಸಹ ತಮ್ಮ ಎಲ್ಲಾ ಕಾರ್ಯಗಳನ್ನು ಕ್ರಮದಿಂದ ಮುಗಿಸಿ ದೇವತೆಗಳನ್ನು ಸ್ತೋತ್ರಗಳಿಂದಲೂ, ಪಿತೃಗಳನ್ನು ಜಲದಿಂದಲೂ ಸಂತೃಪ್ತಿಪಡಿಸಿ ಅಲ್ಲಿಗೆ ಬಂದರು.

ಯತ್ರ ಬ್ರಹ್ಮರ್ಷಯಃ ಸಿದ್ಧಾಸ್ತ ಆಸೀರನ್ ಯತವ್ರತಾಃ ।
ಯಜ್ಞಾಯತನಮಾಶ್ರಿತ್ಯ ಸೂತಪುತ್ರಪುರಸ್ಸರಾಃ ॥೧೧॥

ಎಲ್ಲಿ ಧೃತವ್ರತರೂ, ಸಿದ್ಧರೂ ಆದ ಬ್ರಹ್ಮರ್ಷಿಗಳು ಸೂತಪುತ್ರರನ್ನು ಮುಂದೆ ಮಾಡಿಕೊಂಡು ಯಾವ ಯಜ್ಞಶಾಲೆಯಲ್ಲಿ ಕುಳಿತಿದ್ದರೋ (ಅಲ್ಲಿಗೆ ಬಂದರು)

ಋತ್ವಿಕ್ಷು ಚ ಸದಸ್ಯೇಷು ಸ ವೈ ಗೃಹಪತಿಸ್ತತಃ ।
ಉಪವಿಷ್ಟೇಷೂಪವಿಷ್ಟಃ ಶೌನಕೋऽಥಾಬ್ರವೀದಿದಮ್ ॥೧೨॥

ಋತ್ವಿಜರು ಮತ್ತು ಸದಸ್ಯರು ಕುಳಿತುಕೊಂಡ ಮೇಲೆ ಗೃಹಪತಿಗಳಾದ ಶೌನಕರು ತಮ್ಮ ಆಸನದಲ್ಲಿ ಕುಳಿತು ಈ ಮಾತನ್ನು ಆಡಿದರು.

॥ ಇತಿ ಶ್ರೀಮನ್ಮಹಾಭಾರತೇ ಶತಸಹಸ್ರಿಕಾಯಾಂ ಸಂಹಿತಾಯಮಾದಿಪರ್ವಣಿ ಚತುರ್ಥೋऽಧ್ಯಾಯಃ ॥

॥ ಪೌಲೋಮಪರ್ವಣಿ ಪ್ರಥಮೋऽಧ್ಯಾಯಃ ॥

ಇಲ್ಲಿಗೆ ಮಹಾಭಾರತದ ಆದಿಪರ್ವದಲ್ಲಿ ನಾಲ್ಕನೆಯ ಅಧ್ಯಾಯ ಮುಗಿಯಿತು.

★★★★★

ಐದನೆಯ ಅಧ್ಯಾಯ

(ಭಾರತ ವಕ್ತೃಗಳಾದ ಉಗ್ರಶ್ರವರ ಪಿತೃಗಳ ಕಥನ ಮತ್ತು ಶೌನಕರ ವಂಶವೃತ್ತಾಂತಕಥನ, ಭೃಗುಭಾರ್ಯೆಯನ್ನು ಅಪಹರಿಸಲು ಪುಲೋಮ ರಾಕ್ಷಸನಿಂದ ಅಗ್ನಿಯನ್ನು ಕುರಿತು ಪ್ರಶ್ನೆ ಮತ್ತು ಅಗ್ನಿಯ ಉತ್ತರ)

ಶೌನಕಃ

ಪುರಾಣಮಖಿಲಂ ತಾತ ಪಿತಾ ತೇऽಧೀತವಾನ್ ಪುರಾ ।
ಕಚ್ಚಿತ್ ತ್ವಮಪಿ ತತ್ಸರ್ವಂ ಅಧೀತೋ ರೋಮಹರ್ಷಣೇ ॥೧॥

ಪ್ರೀತಿಪಾತ್ರನೇ, ನಿನ್ನ ತಂದೆಯು ಹಿಂದೆ ಎಲ್ಲಾ ಪುರಾಣಗಳನ್ನೂ ಅಧ್ಯಯನ ಮಾಡಿದ್ದನು. ಎಲೈ ರೋಮಹರ್ಷಣಿಯೇ ನೀನೂ ಸಹ ಆ ಎಲ್ಲವನ್ನು ಅಧ್ಯಯನ ಮಾಡಿದ್ದೀಯಾ ?

ಪುರಾಣೇ ಹಿ ಕಥಾ ದಿವ್ಯಾ ಆದಿವಂಶಾಶ್ಚ ಧೀಮತಾಮ್ ।
ಕಥ್ಯಂತೇ ತಾಃ ಪುರಾऽಸ್ಮಾಭಿಃ ಶ್ರುತಾಃ ಪೂರ್ವಂ ಪಿತುಸ್ತವ ॥೨॥

ಪುರಾಣಗಳಲ್ಲಿ ಮೇಧಾವಿಗಳಾದವರ ಆದಿವಂಶಗಳ ದಿವ್ಯವಾದ ಕಥೆಯು ಹೇಳಲ್ಪಡುತ್ತದೆ. ಆ ಕಥೆಗಳನ್ನು ನಾವು ಹಿಂದೆ ನಿನ್ನ ತಂದೆಯಿಂದ ಕೇಳಿದ್ದೇವೆ.

ತತ್ರ ವಂಶಮಹಂ ಪೂರ್ವಂ ಶ್ರೋತುಮಿಚ್ಛಾಮಿ ಭಾರ್ಗವಮ್ ।
ಕಥಯಸ್ವ ಕಥಾಂ ಪುಣ್ಯಾಂ ಕಲ್ಪಾಃ ಸ್ಮಃ ಶ್ರವಣೇ ತವ ॥೩॥

ನಾನು ಅದರಲ್ಲಿ ಮೊದಲು ಭಾರ್ಗವವಂಶದ ವಿಸ್ತಾರವನ್ನು ಕೇಳಲು ಬಯಸುತ್ತೇನೆ. ಆ ಪವಿತ್ರವಾದ ಕಥೆಯನ್ನು ಹೇಳು. ನಾವು ನಿನ್ನಿಂದ ಕೇಳಲು ಸಮರ್ಥರಾಗಿ ಕುಳಿತಿದ್ದೇವೆ.

ಸೂತಃ

ಯದಧೀತಂ ಸದಾ ಸಮ್ಯಗ್ ದ್ವಿಜಶ್ರೇಷ್ಠೈರ್ಮಹಾತ್ಮಭಿಃ ।
ವೈಶಂಪಾಯನವಿಪ್ರಾದ್ಯೈಸ್ತೈಶ್ಚಾಪಿ ಕಥಿತಂ ತದಾ ।
ಯದಧೀತಂ ಚ ಪಿತ್ರಾ ಮೇ ಸಮ್ಯಕ್ತೈವ ತತೋ ಮಯಾ ॥೪॥

ಮಹಾತ್ಮರಾದ, ದ್ವಿಜಶ್ರೇಷ್ಠರಾದ ವೈಶಂಪಾಯನ ಮೊದಲಾದವರು ಅಧ್ಯಯನ ಮಾಡಿರುವುದನ್ನೆಲ್ಲಾನಾನೂ ಅಧ್ಯಯನ ಮಾಡಿದ್ದೇನೆ. ವೈಶಂಪಾಯನ ಮೊದಲಾದ ಬ್ರಾಹ್ಮಣರಿಂದ ಆ ಕಥೆಗಳು ಹೇಳಲ್ಪಟ್ಟವು. ನನ್ನ ತಂದೆಯು ಅಧ್ಯಯನ ಮಾಡಿದ ಪುರಾಣಗಳನ್ನೂ ನಾನು ಅವರಿಂದ ಚೆನ್ನಾಗಿ ಅಧ್ಯಯನ ಮಾಡಿದ್ದೇನೆ.

ತಂ ತಾವಚ್ಛೃಣು ಯೋ ದೇವೈಃ ಸರ್ವೈಃ ಸಾಗ್ನಿಮರುದ್ಗಣೈಃ ।
ಪೂಜಿತಃ ಪ್ರವರೋ ವಂಶೋ ಭಾರ್ಗವಃ ಪೃಥುನಂದನ ।
ಇಮಂ ವಂಶಂ ಮಹದ್ದಿವ್ಯಂ ಭಾರ್ಗವಂ ತೇ ಮಹಾಮುನೇ ॥೫॥

ಎಲೈ ಮಹಾಮುನಿಯೇ, ಅಗ್ನಿಯಿಂದಲೂ ಮತ್ತು ಮರುದ್ಗಣಗಳಿಂದಲೂ ಕೂಡಿದ ಎಲ್ಲಾ ದೇವತೆಗಳಿಂದಲೂ ಪೂಜಿತವಾದ ಶ್ರೇಷ್ಠವಾದ ಭಾರ್ಗವವಂಶವನ್ನು ಮೊದಲು ಕೇಳು. ಎಲೈ ಪೃಥುನಂದನನೇ, ಈ ದೊಡ್ಡದಾದ ಮತ್ತು ದಿವ್ಯವಾದ ಭಾರ್ಗವವಂಶವನ್ನು ನಾನು ನಿನಗೆ ಹೇಳುತ್ತೇನೆ.

ಭೃಗುರ್ಮಹರ್ಷಿರ್ಭಗವಾನ್ ಬ್ರಹ್ಮಣಾ ವೈ ಸ್ವಯಂಭುವಾ ।
ವರುಣಸ್ಯ ಕ್ರತೌ ಜಾತಃ ಪಾವಕಾದಿತಿ ನಃ ಶ್ರುತಮ್ ॥೬॥

ಪೂಜ್ಯರಾದ ಭೃಗುಮಹರ್ಷಿಗಳು ವರುಣನ ಯಜ್ಞದಲ್ಲಿ ಬ್ರಹ್ಮದೇವರ ದೆಸೆಯಿಂದ ಅಗ್ನಿಯಲ್ಲಿ ಹುಟ್ಟಿ ಬಂದರೆಂದು ನಾವು ಕೇಳಿದ್ದೇವೆ.

ನಿಗದಾಮಿ ಕಥಾಯುಕ್ತಂ ಪುರಾಣಾಶ್ರಯಮದ್ಭುತಮ್ ।
ಭೃಗೋಶ್ಚ ದಯಿತಃ ಪುತ್ರಶ್ಚ್ಯವನೋ ನಾಮ ಭಾರ್ಗವಃ ॥೭॥

ಪುರಾಣಗಳಲ್ಲಿ ಆಶ್ರಿತವಾದ ಅದ್ಭುತವಾದ ಆ ವಂಶದ ಕಥೆಯನ್ನು ಹೇಳುತ್ತೇನೆ. ಭೃಗುವಿಗೆ ಪ್ರೀತಿಪಾತ್ರನಾದ ಚ್ಯವನನೆಂಬ ಪುತ್ರನಿದ್ದನು. ಅವನೂ ಭಾರ್ಗವನಷ್ಟೆ.

ಚ್ಯವನಸ್ಯಾಪಿ ದಾಯಾದಃ ಪ್ರಮತಿರ್ನಾಮ ಧಾರ್ಮಿಕಃ ।
ಪ್ರಮತೇರಪ್ಯಭೂತ್ ಪುತ್ರೋ ಘೃತಾಚ್ಯಾಂ ರುರುರಿತ್ಯುತ ॥೮॥

ಚ್ಯವನನ ಪುತ್ರನು ಧಾರ್ಮಿಕನಾದ ಪ್ರಮತಿ. ಆ ಪ್ರಮತಿಗಳಾದರೊ ಘೃತಾಚಿಯಲ್ಲಿ ರುರುವು ಎಂಬ ಪುತ್ರನು ಜನಿಸಿದನು.

ರುರೋರಪಿ ಸುತೋ ಜಜ್ಞೇ ಶುನಕೋ ವೇದಪಾರಗಃ ।
ಪ್ರಮದ್ವರಾಯಾಂ ಧರ್ಮಾತ್ಮಾ ತವ ಪೂರ್ವಃ ಪಿತಾಮಹಃ ॥೯॥

ರುರುವಿಗೆ ಪ್ರಮದ್ವರೆಯಲ್ಲಿ ವೇದಪಾರಂಗತನಾದ ಶುನಕ ಎಂಬ ಪುತ್ರನು ಜನಿಸಿದನು. ಧರ್ಮಾತ್ಮನಾದ ಅವನು ನಿನ್ನ ಪೂರ್ವಪಿತಾಮಹನಾದವನು.

ತಪಸ್ವೀ ಚ ಯಶಸ್ವೀ ಚ ಶ್ರುತವಾನ್ ಧರ್ಮವಿತ್ತಮಃ ।
ಧರ್ಮಿಷ್ಠಃ ಸತ್ಯವಾದೀ ಚ ನಿಯತೋ ನಿಯತೇಂದ್ರಿಯಃ ॥೧೦॥

ಅವನು ತಪಸ್ವಿಯೂ, ಕೀರ್ತಿವಂತನೂ ಬಹಳ ಅಧ್ಯಯನವನ್ನು ಮಾಡಿದವನೂ, ಧರ್ಮವನ್ನು ತಿಳಿದವರಲ್ಲಿ ಶ್ರೇಷ್ಠನೂ. ಸ್ಥತಃ ಧರ್ಮಾಚರಣೆಯನ್ನು ಮಾಡುವವನೂ, ಜಿತೇಂದ್ರಿಯನೂ ಆಗಿದ್ದನು.

ಶೌನಕಃ

ಸೂತಪುತ್ರ ಯಥಾ ತಸ್ಯ ಭಾರ್ಗವಸ್ಯ ಮಹಾತ್ಮನಃ ।
ಚ್ಯವನತ್ವಂ ಕಥಂ ಪ್ರಾಪ್ತಂ ತನ್ಮಮಾಚಕ್ಷ್ವ ಸುವ್ರತ ॥೧೧॥

ಸೂತ ಪುತ್ರನೇ, ಸುವ್ರತನೇ ಆ ಮಹಾತ್ಮನಾದ ಭೃಗುಪುತ್ರನಿಗೆ ಚ್ಯವನತ್ವವು ಹೇಗೆ ಪ್ರಾಪ್ತವಾಯಿತು ಎಂಬುದನ್ನು ನನಗೆ ಹೇಳು.

ಸೂತಃ

ಭೃಗೋಸ್ತುದಯಿತಾ ಭಾರ್ಯಾ ಪುಲೋಮೇತ್ಯಭಿವಿಶ್ರುತಾ ।
ತಸ್ಯಾಂ ಗರ್ಭಃ ಸಮಭವದ್ಭೃಗೋರ್ವೀರ್ಯಸಮುದ್ಭವಃ ॥೧೨॥

ಭೃಗುಗಳಿಗೆ ಪುಲೋಮಾ ಎಂಬ ಪ್ರೀತಿಪಾತ್ರಳಾದ ಹೆಂಡತಿಯಿದ್ದಳು. ಭೃಗುಗಳ ವೀರ್ಯದಿಂದ ಅವಳಲ್ಲಿ ಗರ್ಭವು ಉಂಟಾಯಿತು.

ತಸ್ಮಿನ್ ಗರ್ಭೇ ಸಮುದ್ಭೂತೇ ಪುಲೋಮಾಯಾಂ ಭೃಗೂದ್ಭವ ।
ಸಮಯೇ ಸಮಶೀಲಿನ್ಯಾಂ ಧರ್ಮಪತ್ನ್ಯಾಂ ಯಶಸ್ವಿನಃ ।
ಅಭಿಷೇಕಾಯ ನಿಷ್ಕ್ರಾಂತೇ ಭೃಗೌ ಧರ್ಮಭೃತಾಂ ವರೇ ।
ಆಶ್ರಮಂ ತಸ್ಯ ರಕ್ಷೋಽಥ ಪುಲೋಮಾಭ್ಯಾಜಗಾಮ ಹ ॥ ೧೩ ॥

ಎಲೈ ಭೃಗು ಕುಲೋತ್ಪನ್ನನೇ, ಕೀರ್ತಿವಂತರಾದ ಭೃಗುಗಳಿಗೆ ಅವರಿಗೆ ಅನುಗುಣವಾದ ಶೀಲವುಳ್ಳ ಧರ್ಮಪತ್ನಿಯಾದ ಪುಲೋಮೆಯಲ್ಲಿ ಯೋಗ್ಯವಾದ ಸಮಯದಲ್ಲಿ ಗರ್ಭವುಂಟಾದಾಗ ಒಮ್ಮೆ ಆಗ ಧರ್ಮಿಷ್ಠರಲ್ಲಿ ಶ್ರೇಷ್ಠರಾದ ಭೃಗುಗಳು ಸ್ನಾನ ಮಾಡುವುದಕ್ಕೆ ಹೊರಗೆ ಹೋಗಿದ್ದಾಗ, ಆ ಆಶ್ರಮಕ್ಕೆ ಪುಲೋಮಾ ಎಂಬ ರಾಕ್ಷಸನು ಬಂದನು.

ತಂ ಪ್ರವಿಶ್ಯಾಶ್ರಮಂ ದೃಷ್ಟ್ವಾ ಭೃಗೋರ್ಭಾರ್ಯಾಮ ನಿಂದಿತಾಮ್
ಹೃಚ್ಛಯೇನ ಸಮಾವಿಷ್ಟೋ ವಿಚೇತಾಃ ಸಮಪದ್ಯತ ॥೧೪॥

ಅವನು ಆಶ್ರಮವನ್ನು ಪ್ರವೇಶಿಸಿ, ಪರಿಶುದ್ಧವಾದ ಭೃಗುಗಳ ಪತ್ನಿಯನ್ನು ನೋಡಿ, ಕಾಮದಿಂದ ಸಮಾವಿಷ್ಟನಾಗಿ, ಬುದ್ಧಿಸ್ವಾಸ್ಥ್ಯವನ್ನು ಕಳೆದುಕೊಂಡನು.

ಅಭ್ಯಾಗತಂ ತು ತದ್ದೃಷ್ಟ್ವಾ ಪುಲೋಮಾ ಚಾರುಹಾಸಿನೀ ।
ನ್ಯಮಂತ್ರಯತ ವನ್ಯೇನ ಫಲಮೂಲಾದಿನಾ ತದಾ ॥೧೫॥

ಅಭ್ಯಾಗತನಾಗಿ ಬಂದ ಅವನನ್ನು ನೋಡಿ, ಚಾರುಹಾಸಿನಿಯಾದ ಪುಲೋಮೆಯು ಕಾಡಿನ ಫಲಮೂಲಗಳಿಂದ ಅವನನ್ನು ಆಹ್ವಾನಿಸಿ ಸತ್ಕರಿಸಿದಳು.

ತಾಂ ತು ರಕ್ಷಸ್ತದಾ ಬ್ರಹ್ಮನ್ ಹೃಚ್ಛಯೇನ ನಿಪೀಡಿತಃ ।
ದೃಷ್ಟ್ವಾ ಹೃಷ್ಟಮನಾ ಭೂತ್ವಾ ಜಹೀರ್ಷುಸ್ತಾಮನಿಂದಿತಾಮ್ ॥೧೬॥

ಎಲೈ ಬ್ರಾಹ್ಮಣನೇ ಕಾಮಪೀಡಿತವಾದ ಮನಸುಳ್ಳ ಆ ರಾಕ್ಷಸನು ಆ ಪುಲೋಮೆಯನ್ನು ನೋಡಿ ಮನಸ್ಸಿನಲ್ಲಿ ಹರ್ಷಗೊಂಡು, ಪರಿಶುದ್ಧಳಾದ ಅವಳನ್ನು ಅಪಹರಿಸಲು ಬಯಸಿದನು.

ಅಥಾಗ್ನಿಶರಣೇಽಪಶ್ಯಜ್ಜ್ವಲಿತಂ ಜಾತವೇದಸಮ್ ।
ತಮಪೃಚ್ಛತ್ ತತೋ ರಕ್ಷಃ ಪಾವಕಂ ಜ್ವಲಿತಂ ತದಾ ॥೧೭॥

ಅವನು ಆಗ ಅಗ್ನಿಶಾಲೆಯಲ್ಲಿ ಜ್ವಲಿಸುತ್ತಿದ್ದ ಅಗ್ನಿಯನ್ನು ನೋಡಿ, ಆ ಅಗ್ನಿಯನ್ನು ಕುರಿತು ಅವನು ಪ್ರಶ್ನೆ ಮಾಡಿದನು.

ಶಂಸ ಮೇ ಕಸ್ಯ ಭಾರ್ಯೇಯಮಗ್ನೇ ಪೃಚ್ಛ ಋತೇನ ವೈ ।
ಸತ್ಯಸ್ತ್ವಮಸಿ ಸತ್ಯಂ ವೈ ವದ ಪಾವಕ ಪೃಚ್ಛತಃ ॥೧೮॥

ಅಗ್ನಿಯೇ ಇವಳು ಯಾರ ಭಾರ್ಯೆಯೆಂದು ನನಗೆ ನಿಜವಾಗಿ ಹೇಳು. ಪಾವಕನೇ ನಿನ್ನನ್ನು ಸತ್ಯನೆಂದು ಕರೆಯುತ್ತಾರೆ. ಪ್ರಶ್ನೆ ಮಾಡುವ ನನಗೆ ಸತ್ಯವಾದ ಉತ್ತರವನ್ನು ಕೊಡು.

ಮಯಾ ಹೀಯಂ ವೃತಾ ಪೂರ್ವಂ ಭಾರ್ಯಾರ್ಥೇ ವರವರ್ಣಿನೀ ।
ಪಶ್ಚಾತ್ ತ್ವಿಮಾಂ ಪಿತಾ ಪ್ರಾದಾದ್ ಭೃಗವೇಽನೃತಕಾರಿಣೇ ॥೧೯॥

ಈ ಸುಂದರಿಯನ್ನು ನಾನು ಹಿಂದೆ ಪತ್ನಿಯಾಗಿ ಸ್ವೀಕರಿಸಲು ಯಾಚಿಸಿದ್ದೆನು. ಅನಂತರ ಅವಳ ತಂದೆಯು ಇವಳನ್ನು ಅನೃತ ಶೀಲನಾದ ಭೃಗುವಿಗೆ ಕೊಟ್ಟನು.

ಸೇಯಂ ಯದಿ ವರಾರೋಹಾ ಭೃಗೋರ್ಭಾರ್ಯಾ ರಹೋಗತಾ ।
ತಥಾ ಸತ್ಯಂ ಮಮಾಖ್ಯಾಹಿ ಜಿಹೀರ್ಷಾಮ್ಯಾಶ್ರಮಾದಿಮಾಮ್ ॥೨೦॥

ಈ ಏಕಾಂತದಲ್ಲಿರುವ ಸುಂದರಿಯು ಭೃಗುವಿನ ಭಾರ್ಯೆಯಾದರೆ, ಸತ್ಯವಾಗಿ ನನಗೆ ಹೇಳು. ಇವಳನ್ನು ಆಶ್ರಮದಿಂದ ಅಪಹರಿಸಲು ಬಯಸುತ್ತೇನೆ.

ಮನ್ಯುರ್ಹಿ ಹೃದಯಂ ಮೇಽದ್ಯ ನಿರ್ದಹನ್ನಿವ ತಿಷ್ಠತಿ ।
ಮತ್ಪೂರ್ವಭಾರ್ಯಾಂ ಯದಿಮಾಂ ಭೃಗುಃ ಪ್ರಾಪ ಸುಮಧ್ಯಮಾಮ್ ॥

ಈ ದಿನ ನನ್ನ ಹೃದಯಲ್ಲಿ ಕೋಪವು ಜ್ವಲಿಸುತ್ತಿದೆ. ನನಗೆ ಭಾರ್ಯೆಯಾಗಿ ಸೇರಬೇಕಾಗಿದ್ದ ಈ ಸುಂದರಿಯನ್ನು ಭೃಗುವು ಪಡೆದಿದ್ದಾನೆ.

ತದ್ರಕ್ಷ ಏವಮಾಮಂತ್ರ್ಯ ಜ್ವಲಿತಂ ಜಾತವೇದಸಮ್ ।
ಶಂಕಮಾನೋ ಭೃಗೋರ್ಭಾರ್ಯಾಂ ಪುನಃ ಪುನರಪೃಚ್ಛತ ॥೨೨॥

ಆ ರಾಕ್ಷಸನು ಅವಳನ್ನು ಭೃಗುವಿನ ಭಾರ್ಯೆಯೆಂದು ಶಂಕಿಸುತ್ತಾ ಜ್ವಲಿಸುತ್ತಿದ್ದ ಅಗ್ನಿಯನ್ನು ಕುರಿತು ಪುನಃ ಪುನಃ ಪ್ರಶ್ನೆಯನ್ನು ಮಾಡಿದನು.

ತ್ವಮಗ್ನೇ ಸರ್ವಭೂತಾನಾಮಂತರ್ವಸಸಿ ನಿತ್ಯದಾ ।
ಸಾಕ್ಷಿವತ್ ಪುಣ್ಯಪಾಪೇಷು ಸತ್ಯಂ ಬ್ರೂಹಿ ಕವೇ ವಚಃ ॥೨೩॥

ಅಗ್ನಿಯೇ ನೀನು ಎಲ್ಲ ಜೀವರ ಒಳಗೂ ಯಾವಾಗಲೂ ಪುಣ್ಯ-ಪಾಪಗಳಿಗೆ ಸಾಕ್ಷಿಯಾಗಿ ವಾಸಮಾಡುತ್ತಿಯೆ, ಎಲೈ ಕವಿಯೇ ನನಗೆ ಸತ್ಯವಾದ ಮಾತನ್ನು ಹೇಳು.

ಮತ್ಪೂರ್ವಭಾರ್ಯಾಽಪಹೃತಾ ಭೃಗುಣಾಽನೃತಕಾರಿಣಾ ।
ಸೇಯಂ ಯದಿ ತಥಾ ಮೇ ತ್ವಂ ಸತ್ಯಮಾಖ್ಯಾತುಮರ್ಹಸಿ ॥೨೪॥

ನನಗೆ ಸೇರಬೇಕಾಗಿದ್ದ ಪತ್ನಿಯನ್ನು ಅನೃತಶೀಲನಾದ ಭೃಗುವು ಅಪಹರಿಸಿದ್ದಾನೆ. ಇವಳು ಭೃಗುವಿನ ಪತ್ನಿಯೇ ಆದರೆ ನೀನು ನನಗೆ ಸತ್ಯವನ್ನು ಹೇಳು.

ಶ್ರುತ್ವಾ ತ್ವತ್ತೋ ಭೃಗೋರ್ಭಾರ್ಯಾಂ ಹರಿಷ್ಯಾಮ್ಯಹಮಾಶ್ರಮಾತ್।
ಜಾತವೇದಃ ಪಶ್ಯತಸ್ತೇ ವದ ಸತ್ಯಾಂ ಗಿರಂ ಮಮ ॥೨೫॥

ಇವಳು ಭೃಗುವಿನ ಭಾರ್ಯೆಯೆಂದು ನಿನ್ನಿಂದ ಕೇಳಿದ ಮೇಲೆ, ಎಲೈ ಅಗ್ನಿಯೇ ನಿನ್ನ ಕಣ್ಣೆದುರಿಗೆ ಇವಳನ್ನು ಆಶ್ರಮದಿಂದ ಅಪಹರಿಸುವೆನು. ನನಗೆ ಸತ್ಯವಾದ ಉತ್ತರವನ್ನು ನೀಡು.

ತಸ್ಯ ತದ್ವಚನಂ ಶ್ರುತ್ವಾ ಸಪ್ತಾರ್ಚಿರ್ದುಃಖಿತೋ ಭೃಶಮ್ ।
ಭೀತೋಽನೃತಾಚ್ಚ ಶಾಪಾಚ್ಚ ಭೃಗೋರಿತ್ಯಬ್ರವೀಚ್ಛನೈಃ ॥೨೬॥

ಅವನ ಆ ಮಾತನ್ನು ಕೇಳಿ, ಅಗ್ನಿಯು ಪರಮ ದುಃಖಿತನಾದನು , ರಾಕ್ಷಸ ಭಾರ್ಯೆಯೆಂದು ಹೇಳಿದರೆ ಉಂಟಾಗುವ ಅನೃತದಿಂದಲೂ ಮತ್ತು ಅನೃತನಿಮಿತ್ತವಾದ ಶಾಪದಿಂದಲೂ ಹೆದರಿ ಭೃಗುವಿನ ಪತ್ನಿ ಎಂದು ಮೆಲ್ಲನೆ ಹೇಳಿದನು.

॥ ಇತಿ ಶ್ರೀಮನ್ಮಹಾಭಾರತೇ ಶತಸಹಸ್ರಿಕಾಯಾಂಸಂಹಿತಾಯಾಮಾದಿಪರ್ವಣಿ
ಪಂಚಮೋಽಧ್ಯಾಯಃ ॥

॥ ಇತಿ ಪೌಲೋಮಪರ್ವಣಿ ದ್ವಿತೀಯೋಽಧ್ಯಾಯಃ ॥

ಇಲ್ಲಿಗೆ ಮಹಾಭಾರತದ ಆದಿಪರ್ವದಲ್ಲಿ ಐದನೆಯ ಅಧ್ಯಾಯ ಮುಗಿಯಿತು.

★★★★★

ಆರನೆಯ ಅಧ್ಯಾಯ

(ರಾಕ್ಷಸನಾದ ಪುಲೋಮನಿಂದ ಭೃಗುಭಾರ್ಯೆಯಾದ ಪುಲೋಮೆಯ ಅಪಹರಣ. ಗರ್ಭಿಣಿಯಾದ ಅವಳ ಉದರದಿಂದ ಪುತ್ರನ ನಿಷ್ಕ್ರಮಣ. ರಾಕ್ಷಸನ ಮರಣ, ವಧೂಸರನದಿಯ ಉತ್ಪತ್ತಿ, ಭೃಗುವಿನಿಂದ ಅಗ್ನಿಗೆ ಶಾಪದಾನ)

ಸೂತಃ -

ಅಗ್ನೇರಥ ವಚಃ ಶ್ರುತ್ವಾ ತದ್‌ರಕ್ಷಃ ಪ್ರಜಹಾರ ತಾಮ್ ।
ಬ್ರಹ್ಮನ್ ವರಾಹರೂಪೇಣ ಮನೋಮಾರುತರಂಹಸಾ ॥೧॥

ಎಲೈ ಬ್ರಾಹ್ಮಣನೇ ಅಗ್ನಿಯ ಮಾತನ್ನು ಕೇಳಿ, ಮತ್ತು ಅಗ್ನಿಯ ಪ್ರತಿಷೇಧನೆಯ ಮಾತನ್ನು ಮೀರಿ, ಆ ರಾಕ್ಷಸನು ವರಾಹರೂಪವನ್ನು ಧರಿಸಿ ಮನೋವೇಗ ಮತ್ತು ವಾಯುವೇಗದಿಂದ ಕೂಡಿದವನಾಗಿ ಅವಳನ್ನು ಅಪಹರಿಸಿದನು.

ನಿವಸಂಶ್ಚೈವ ತತ್ಕುಕ್ಷೌ ಸ ವೈ ಭೃಗುಕುಲೋದ್ವಹಃ ।
ರೋಷಾನ್ಮಾತುಶ್ಚ್ಯುತಃ ಕುಕ್ಷೇಶ್ಚ್ಯವನಸ್ತೇನ ಸೋಽಭವತ್ ॥೨॥

ಅವಳ ಕುಕ್ಷಿದಲ್ಲಿ ವಾಸಿಸುತ್ತಿದ್ದ ಆ ಭೃಗುಕುಲೋದ್ವಹನು ರೋಷದಿಂದ ತಾಯಿಯ ಉದರದಿಂದ ಕೆಳಗೆ ಬಿದ್ದನು. ಆದ್ದರಿಂದ ಅವನಿಗೆ ಚ್ಯವನ (ಜಾರಿದವನು) ಎಂದು ಹೆಸರಾಯಿತು.

ತಂ ದೃಷ್ಟ್ವಾ ಮಾತುರುದರಾಚ್ಚ್ಯುತಮಾದಿತ್ಯವರ್ಚಸಮ್ ।
ತದ್ ರಕ್ಷೋ ಭಸ್ಮಸಾದ್ ಭೂತಂ ಪಪಾತ ಪರಿಮುಚ್ಯ ತಾಮ್ ॥೩॥

ತಾಯಿಯ ಉದರದಿಂದ ಜಾರಿಬಂದ ಸೂರ್ಯನ ತೇಜಸ್ಸನ್ನು ಹೊಂದಿದ್ದ ಆ ಮಗುವನ್ನು ನೋಡಿ, ಆ ರಾಕ್ಷಸನು ಪುಲೋಮೆಯನ್ನು ಬಿಟ್ಟು, ಭೂಮಿಯಲ್ಲಿ ಬಿದ್ದು ಭಸ್ಮವಾಗಿ ಹೋದನು.

ಸಾ ತಮಾದಯ ಸುಶ್ರೋಣೀ ಸಸಾರ ಭೃಗುನಂದನಮ್ ।
ಚ್ಯವನಂ ಭಾರ್ಗವಂ ಬ್ರಹ್ಮನ್ ಪುಲೋಮಾ ದುಃಖಮೂರ್ಛಿತಾ ॥೪॥

ಎಲೈ ಬ್ರಾಹ್ಮಣನೇ ಅತಿಶಯವಾದ ದುಃಖದಿಂದ ಕೂಡಿದ ಸುಂದರಿಯಾದ ಪುಲೋಮೆಯು ಭೃಗುನಂದನನಾದ ಆ ಚ್ಯವನನನ್ನು ಎತ್ತಿಕೊಂಡು ಆಶ್ರಮದ ಕಡೆಗೆ ಹೊರಟಳು.

ತಾಂ ದದರ್ಶ ಸ್ವಯಂ ಬ್ರಹ್ಮಾ ಸರ್ವಲೋಕಪಿತಾಮಹಃ ।
ರುದಂತೀಂ ಬಾಷ್ಪಪೂರ್ಣಾಕ್ಷೀಂ ಭೃಗೋರ್ಭಾರ್ಯಾಮನಿಂದಿತಾಮ್ ॥

ಸರ್ವಲೋಕ ಪಿತಾಮಹರಾದ ಬ್ರಹ್ಮದೇವರು, ಪರಿಶುದ್ಧಳಾದ ಭೃಗುಪತ್ನಿಯು ಕಣ್ಣುಗಳಲ್ಲಿ ನೀರು ತುಂಬಿಕೊಂಡು ಅಳುತ್ತಿರುವುದನ್ನು ತಾವೇ ನೋಡಿದರು.

ಸಾಂತ್ವಯಾಮಾಸ ಭಗವಾನ್ ವಧೂಂ ಬ್ರಹ್ಮಾ ಪಿತಾಮಹಃ ।
ಅಶ್ರುಬಿಂದೂದ್ಭವಾ ತಸ್ಯಾಃ ಪ್ರಾವರ್ತತ ಮಹಾನದೀ ॥೬॥

ಪಿತಾಮಹರಾದ ಪೂಜ್ಯರಾದ ಬ್ರಹ್ಮದೇವರು ತಮ್ಮ ಸೊಸೆಯನ್ನು ತಾವೇ ಸಮಾಧಾನ ಮಾಡಿದರು. ಅವಳ ಕಣ್ಣೀರಿನಿಂದ ಒಂದು ಮಹಾನದಿಯು ಉದ್ಭವವಾಯಿತು.

ಅನುವರ್ತ್ಮ ಸೃತಾ ತಸ್ಯಾ ಭೃಗೋಃ ಪತ್ನ್ಯಾ ಯಶಸ್ವಿನಃ ।
ತಸ್ಯಾ ಮಾರ್ಗಂ ದ್ರುತವತೀಂ ದೃಷ್ಟ್ವಾ ತು ಸರಿತಂ ತದಾ ॥೭॥

ನಾಮ ತಸ್ಯಾಸ್ತದಾ ನದ್ಯಾಶ್ಚಕ್ರೇ ಲೋಕಪಿತಾಮಹಃ ।
ವಧೂಸರೇತಿ ಭಗವಾನ್ ಚ್ಯವನಸ್ಯಾಶ್ರಮಂ ಪ್ರತಿ ॥೮॥

ಅವಳು ಆಶ್ರಮದ ಕಡೆಗೆ ನಡೆದಂತೆ ಯಶಸ್ವಿನಿಯಾದ ಆ ಭೃಗುಪತ್ನಿಯು ಹೋದ ಮಾರ್ಗದಲ್ಲಿ ಅವಳನ್ನು ಅನುಸರಿಸಿಕೊಂಡು, ಆ ನದಿಯೂ ಹರಿಯಿತು. ಆಗ ಲೋಕಪಿತಾಮಹರಾದ ಪೂಜ್ಯರಾದ ಬ್ರಹ್ಮದೇವರು ಚ್ಯವನಾಶ್ರಮದ ಬಳಿ ಹರಿಯುವ ಆ ನದಿಯನ್ನು ನೋಡಿ ಅದಕ್ಕೆ ವಧೂಸರಾ ಎಂದು ನಾಮಕರಣವನ್ನು ಮಾಡಿದರು.

ಸ ಏಷ ಚ್ಯವನೋ ಜಜ್ಞೇ ಭೃಗೋಃ ಪುತ್ರಃ ಪ್ರತಾಪವಾನ್ ।
ತಂ ದದರ್ಶ ಪಿತಾ ತತ್ರ ಚ್ಯವನಂ ತಾಂ ಚ ಭಾಮಿನೀಮ್ ॥೯॥

ಪ್ರತಾಪಶಾಲಿಯಾದ ಭೃಗುಪುತ್ರನಾದ ಈ ಚ್ಯವನರು ಹೀಗೆ ಜನಿಸಿದರು. ತಂದೆಯಾದ ಭೃಗುಗಳು ಆಶ್ರಮದಲ್ಲಿ ಆ ಚ್ಯವನರನ್ನು ಮತ್ತು ತಮ್ಮ ಪತ್ನಿಯನ್ನು ನೋಡಿದರು.

ಸ ಪುಲೋಮಾಂ ತತೋ ಭಾರ್ಯಾಂ ಪಪ್ರಚ್ಛ ಕುಪಿತೋ ಭೃಗುಃ ।
ಕೇನಾಸಿ ರಕ್ಷಸೇ ತಸ್ಮೈ ಕಥಿತೇಹ ಜಿಹೀರ್ಷವೇ ॥೧೦॥

ಕೋಪಗೊಂಡ ಭೃಗುಗಳು ಆಗ ತಮ್ಮ ಹೆಂಡತಿಯಾದ ಪುಲೋಮೆಯನ್ನು ಕುರಿತು, ನಿನ್ನನ್ನು ಅಪಹರಿಸಿಕೊಂಡು ಹೋಗಲು ಬಯಸಿದ ಆ ರಾಕ್ಷಸನಿಗೆ ನೀನು ನನ್ನ ಹೆಂಡತಿಯೆಂದು ಹೇಳಿದವರು ಯಾರು ಎಂದು ಕೇಳಿದರು.

ನ ಹಿ ತ್ವಾಂ ವೇದ ತದ್ರಕ್ಷೋ ಮದ್ಭಾರ್ಯಾಂ ಚಾರುಹಾಸಿನೀಮ್ ।
ತತ್ತ್ವಮಾಖ್ಯಾಹಿ ತಂ ಹ್ಯದ್ಯ ಶಪ್ತುಮಿಚ್ಛಾಮ್ಯಹಂ ರುಷಾ ।
ಬಿಭೇತಿ ಕೋ ನ ಶಾಪಾನ್ಮೇ ಕಸ್ಯ ಚಾऽಯಂ ವ್ಯತಿಕ್ರಮಃ ॥೧೧॥

ಸುಂದರಿಯಾದ ನೀನು ನನ್ನ ಭಾರ್ಯೆಯೆಂದು ಆ ರಾಕ್ಷಸನಿಗೆ ತಿಳಿದಿರಲಿಲ್ಲ. ನನಗೆ ನಿಜವಾಗಿ ಹೇಳು. ನಾನು ಹಾಗೆ ಹೇಳಿದವನಿಗೆ ಶಾಪವನ್ನು ಕೊಡಲು ಬಯಸುತ್ತೇನೆ. ನನ್ನ ಶಾಪಕ್ಕೆ ಯಾರು ಹೆದರುವುದಿಲ್ಲ? ಯಾರು ಈ ಅತಿಕ್ರಮವನ್ನು ಮಾಡಿದವರು?

ಪುಲೋಮಾ

ಅಗ್ನಿನಾ ಭಗವಂಸ್ತಸ್ಮೈ ರಕ್ಷಸೇऽಹಂ ನಿವೇದಿತಾ ।
ತತೋ ಮಾಮನಯದ್ ರಕ್ಷಃ ಕ್ರೋಶಂತೀಂ ಕುರರೀಮಿವ ॥೧೨॥

ಪೂಜ್ಯರೇ ಅಗ್ನಿಯು ಆ ರಾಕ್ಷಸನಿಗೆ ನಾನು ಭೃಗುಭಾರ್ಯೆಯೆಂದು ಹೇಳಿದನು. ಆಗ ಆ ರಾಕ್ಷಸನು ಕುರರೀಪಕ್ಷಿಯಂತೆ ದುಃಖದಿಂದ ಕಿರುಚುವ ನನ್ನನ್ನು ತೆಗೆದುಕೊಂಡು ಹೋದನು.

ಸಾऽಹಂ ತವ ಸುತಸ್ಯಾಸ್ಯ ತೇಜಸಾऽಥಾಪಿ ಮೋಕ್ಷಿತಾ ।
ಭಸ್ಮೀಭೂತಂ ತು ತದ್ರಕ್ಷೋ ಮಾಮುತ್ಸೃಜ್ಯ ಪಪಾತ ವೈ ॥೧೩॥

ಆದರೂ ನಾನು ಈ ನಿಮ್ಮ ಪುತ್ರನ ಪ್ರಭಾವದಿಂದ ಅವನಿಂದ ಬಿಡುಗಡೆಯನ್ನು ಹೊಂದಿದ್ದೇನೆ. ಆ ರಾಕ್ಷಸನು ನನ್ನನ್ನು ಬಿಟ್ಟು ಭಸ್ಮವಾಗಿ ಬಿದ್ದುಹೋದನು.

ಸೂತಃ

ಇತಿ ಶ್ರುತ್ವಾ ಪುಲೋಮಾಯಾ ಭೃಗುಃ ಪರಮಮನ್ಯುಮಾನ್ ।
ಶಶಾಪಾಗ್ನಿಮತಿಕ್ರುದ್ಧಃ ಸರ್ವಭಕ್ಷೋ ಭವಿಷ್ಯಸಿ ॥೧೪॥

ಪುಲೋಮೆಯ ಈ ಮಾತುಗಳನ್ನು ಕೇಳಿ ಪರಮ ಕೋಪದಿಂದ ಕೂಡಿದ ಭೃಗುಗಳು ಇನ್ನೂ ಕೋಪದಿಂದ ಕೂಡಿದವರಾಗಿ ಅಗ್ನಿಯನ್ನು ಕುರಿತು ನೀನು ಸರ್ವಭಕ್ಷನಾಗು ಎಂದು ಶಾಪವನ್ನು ಕೊಟ್ಟರು.

॥ ಇತಿ ಶ್ರೀಮನ್ಮಹಾಭಾರತೇ ಶತಸಹಸ್ರಿಕಾಯಾಂಸಂಹಿತಾಯಾಮಾದಿಪರ್ವಣಿ ಷಷ್ಠೋಽಧ್ಯಾಯಃ ॥

॥ ಇತಿ ಪೌಲೋಮಪರ್ವಣಿ ತೃತೀಯೋಽಧ್ಯಾಯಃ ॥

ಇಲ್ಲಿಗೆ ಮಹಾಭಾರತದ ಆದಿಪರ್ವದಲ್ಲಿ ಆರನೆಯ ಅಧ್ಯಾಯ ಮುಗಿಯಿತು.

★★★★★

ಏಳನೆಯ ಅಧ್ಯಾಯ

(ಶಾಪಗ್ರಸ್ತನಾದ ಅಗ್ನಿಯಿಂದ ತನ್ನ ಮಹಿಮಾ ಕಥನಪೂರ್ವಕವಾಗಿ ಅಗ್ನಿಕುಂಡಗಳಿಂದ ತಿರೋಧಾನ. ಋಷಿಗಳಿಂದ ಪ್ರಾರ್ಥಿಸಲ್ಪಟ್ಟ ಬ್ರಹ್ಮದೇವರಿಂದ ಶಾಪ ವಿಮುಕ್ತನಾಗಿ ಪುನಃ ಸ್ವಾತ್ಮಪ್ರಕಾಶ)

ಸೂತ

ಶಪ್ತಸ್ತು ಭೃಗುಣಾ ವಹ್ನಿಃ ಕ್ರುದ್ಧೋ ವಾಕ್ಯಮಥಾಬ್ರವೀತ್ ।
ಕಿಮಿದಂ ಸಾಹಸಂ ಬ್ರಹ್ಮನ್ ಕೃತವಾನಸಿ ಸಾಂಪ್ರತಮ್ ॥೧॥

ಭೃಗುಗಳಿಂದ ಶಾಪಕ್ಕೆ ಒಳಗಾದ ಅಗ್ನಿಯು ಕ್ರೋಧದಿಂದ ಅವರನ್ನು ಕುರಿತು ಬ್ರಾಹ್ಮಣನೇ ಈಗ ಇದೇನು ಸಾಹಸದ ಕಾರ್ಯವನ್ನು (ಆಲೋಚನೆಯಿಲ್ಲದ ಕಾರ್ಯವನ್ನು) ಮಾಡುತ್ತಿದ್ದೀಯೆ ಎಂದು ಹೇಳಿದನು.

ಧರ್ಮೇಽಪಿ ಯತಮಾನಸ್ಯ ಸತ್ಯಂ ಚ ವದತಃ ಸಮಮ್ ।
ಮೃಷ್ಟೋ ಯದಬ್ರುವಂ ಸತ್ಯಂ ವ್ಯಭಿಚಾರೋಽತ್ರ ಕೋ ಮಮ ॥೨॥

ಯಾವಾಗಲೂ ಧರ್ಮದಲ್ಲಿಯೇ ಪ್ರಯತ್ನ ಪಡುವ ಮತ್ತು ಸತ್ಯವನ್ನು ಮಾತನಾಡುವ ನಾನು ಕೇಳಿದ ಪ್ರಶ್ನೆಗೆ ಉತ್ತರವಾಗಿ ಸತ್ಯವನ್ನೇ ಹೇಳಿದಾಗ, ಇಲ್ಲಿ ನನ್ನ ಧರ್ಮದ ಅತಿಕ್ರಮವು ಏನಿದೆ?

ಪೃಷ್ಟೋ ಹಿ ಸಾಕ್ಷೀ ಯಃ ಸಾಕ್ಷ್ಯೇ ಜಾನಮಾನೋಽನ್ಯಥಾ ವದೇತ್ ।
ಸ ಪೂರ್ವಾನಾತ್ಮನಃ ಸಪ್ತ ಕುಲೇ ಹನ್ಯಾತ್ ತಥಾಽಪರಾನ್ ॥೩॥

ಯಾವ ಸಾಕ್ಷಿಯು ಸಾಕ್ಷಿಯ ಸ್ಥಾನದಲ್ಲಿ ನಿಂತು ತನಗೆ ವಿಷಯವು ತಿಳಿದಿದ್ದರೂ ಅದಕ್ಕೆ ವಿರುದ್ಧವಾಗಿ ಹೇಳುತ್ತಾನೆಯೋ, ಅವನು ತನ್ನ ಕುಲದ ಹಿಂದಿನ ಏಳು ಪಿತೃಗಳನ್ನು ಮತ್ತು ಮುಂದಿನ ಏಳು ಪಿತೃಗಳನ್ನು ಅಧಃಪಾತಕ್ಕೀಡು ಮಾಡುತ್ತಾನೆ.

ಯಶ್ಚ ಕಾರ್ಯಾರ್ಥತತ್ತ್ವಜ್ಞೋ ಜಾನಮಾನೋ ನ ಭಾಷತೇ ।
ಸೋಽಪಿ ತೇನೈವ ಪಾಪೇನ ಲಿಪ್ಯತೇ ನಾತ್ರ ಸಂಶಯಃ ॥೪॥

ಮತ್ತು ಯಾವನು ನಡೆದದ್ದನ್ನು ಚೆನ್ನಾಗಿ ತಿಳಿದಿದ್ದರೂ ಸಾಕ್ಷಿಯಾಗಿ ನಿಂತು ಮಾತನಾಡುವುದಿಲ್ಲವೋ, ಅವನೂ ಸಹ ಅದೇ ಪಾಪದಿಂದ ಯುಕ್ತನಾಗುತ್ತಾನೆ. ಈ ವಿಷಯದಲ್ಲಿ ಸಂಶಯವಿಲ್ಲ.

ಶಕ್ತೋಽಹಮಭಿಶಪ್ತುಂ ತ್ವಾಂ ಮಾನ್ಯಾಸ್ತು ಬ್ರಾಹ್ಮಣಾ ಮಮ ।
ಜಾನತೋಽಪಿ ಚ ತೇ ವ್ಯಕ್ತಂ ಕಥಯಿಷ್ಯೇ ನಿಬೋಧ ತತ್ ॥೫॥

ನಾನೂ ಕೂಡ ನಿನಗೆ ಶಾಪವನ್ನು ಕೊಡಲು ಸಮರ್ಥನಾಗಿದ್ದೇನೆ. ಆದರೆ ಕೊಡುವುದಿಲ್ಲ. ಏಕೆಂದರೆ ಬ್ರಾಹ್ಮಣರು ನನಗೆ ಪೂಜ್ಯರಾದವರು. ನಿನಗೆ ತಿಳಿದಿದ್ದರೂ ನನ್ನ ಮಹಿಮೆಯನ್ನು ಹೇಳುತ್ತೇನೆ ಕೇಳು.

ಯೋಗೇನ ಬಹುಧಾಽಽತ್ಮಾನಂ ಕೃತ್ವಾ ತಿಷ್ಠಾಮಿ ಮೂರ್ತಿಷು ।
ಅಗ್ನಿಹೋತ್ರೇಷು ಸತ್ರೇಷು ಕ್ರಿಯಾಸು ಚ ಮಖೇಷು ಚ ॥೬॥

ನನ್ನ ಯೋಗಶಕ್ತಿಯಿಂದ ಅನೇಕ ರೂಪಗಳನ್ನು ಧರಿಸಿ, ನಾನು ಅಗ್ನಿಹೋತ್ರಗಳಲ್ಲಿಯೂ, ಕ್ರತುಗಳಲ್ಲಿಯೂ, ವೈಶದೇವಾದಿ ಕ್ರಿಯೆಗಳಲ್ಲಿಯೂ, ಮತ್ತು ಯಜ್ಞಗಳಲ್ಲಿಯೂ ಇರುತ್ತೇನೆ.

ವೇದೋಕ್ತೇನ ವಿಧಾನೇನ ಮಯಿ ಯದ್ಧೂಯತೇ ಹವಿಃ ।
ದೇವತಾಃ ಪಿತರಶ್ಚೈವ ತೃಪ್ತಾಸ್ತೇನ ಭವಂತಿ ವೈ ॥೭॥

ವೇದೋಕ್ತವಿಧಾನದಿಂದ ನನ್ನಲ್ಲಿ ಯಾವ ಹವಿಸ್ಸು ಅರ್ಪಿಸಲ್ಪಡುತ್ತದೆಯೋ, ಅದರಿಂದ ದೇವತೆಗಳು ಮತ್ತು ಪಿತೃಗಳು ತೃಪ್ತರಾಗುತ್ತಾರೆ.

ಆಯುರ್ದೇವಗಣಾಃ ಸರ್ವೇ ಆಯುಃಪಿತೃಗಣಾಸ್ತಥಾ ।
ದರ್ಶಶ್ಚ ಪೌರ್ಣಮಾಸಶ್ಚ ದೇವಾನಾಂ ಪಿತೃಭಿಃ ಸಹ ॥೮॥

ದರ್ಶ ಮತ್ತು ಪೌರ್ಣಮಾಸಗಳು ಪಿತೃಗಳ ಮತ್ತು ದೇವತೆಗಳ ಪೂಜೆಗೆ ಯೋಗ್ಯವಾದ ತಿಥಿಗಳು. ದರ್ಶದಲ್ಲಿ ಪೂಜಿಸಲ್ಪಟ್ಟ ಪಿತೃಗಳು ಸ್ವರ್ಗಲೋಕದಲ್ಲಿ ಬಹುಕಾಲ ಇರುವಂತೆ ಆಯುರ್ದಾನವನ್ನು ಮಾಡುತ್ತಾರೆ. ಪೌರ್ಣಮಾಸದಲ್ಲಿ ಪೂಜಿಸಲ್ಪಟ್ಟ ದೇವತೆಗಳ ಗಣವು ಸ್ವರ್ಗಲೋಕದಲ್ಲಿ ಬಹುಕಾಲ ಇರುವಂತೆ ಆಯುರ್ದಾನವನ್ನು ಮಾಡುತ್ತಾರೆ.

ದೇವತಾಃ ಪಿತರಸ್ತಸ್ಮಾತ್ ಪಿತರಶ್ಚಾಪಿ ದೇವತಾಃ ।
ಏಕೀಭೂತಾಶ್ಚ ದೃಶ್ಯಂತೇ ಪೃಥಕ್ತ್ವೇನ ಚ ಪರ್ವಸು ॥೧೦॥

ಸೋಮಃಪಿತೃವಾನ್ ಎಂಬ ವೇದವಚನದಂತೆ ದೇವತೆಗಳೇ ಪಿತೃಗಳು, ಪಿತೃಗಳೇ ದೇವತೆಗಳು. ಅವರು ಒಂದಾಗಿ ಕಾಣುತ್ತಾರೆ. ಮತ್ತು ದರ್ಶ ಮತ್ತು ಪೌರ್ಣಮಾಸದಲ್ಲಿ ಭಿನ್ನಭಿನ್ನವಾಗಿ ಪಿತೃಗಳು ಮತ್ತು ದೇವತೆಗಳು ಕ್ರಮವಾಗಿ ಪೂಜಿಸಲ್ಪಡುತ್ತಾರೆ.

ದೇವಶ್ಚ ಪಿತರಶ್ಚೈವ ಜುಹ್ವತೇ ಮಯಿ ಸರ್ವದಾ ।
ತ್ರಿದಶಾನಾಂ ಪಿತೄಣಾಂ ಚ ಮುಖಮೇವಮಹಂ ಪರಮ್ ॥೧೧॥

ದೇವತೆಗಳೂ ಮತ್ತು ಪಿತೃಗಳೂ ಸಹ ನನ್ನಲ್ಲಿಯೇ ಹೋಮವನ್ನು ಮಾಡುತ್ತಾರೆ. ನಾನೇ ದೇವತೆಗಳಿಗೆ ಮತ್ತು ಪಿತೃಗಳಿಗೆ ಶ್ರೇಷ್ಠವಾದ ಮುಖ.

ದೇವತೆಗಳು ಮತ್ತು ಪಿತೃಗಳು ಎರಡು ರೂಪಗಳನ್ನು ತೆಗೆದುಕೊಂಡು ಹೋಮಮಾಡುವನಲ್ಲಿದ್ದು ಅವರೇ ಮುಖ್ಯವಾದ ಹವಿರ್ದಾತೃ- ಗಳಾಗುತ್ತಾರೆ. ತಮ್ಮನ್ನೇ ಉದ್ದೇಶಿಸಿ ಹೋಮವನ್ನು ಮಾಡುವುದರಿಂದ ಅವರೇ ಮುಖ್ಯ ಪ್ರತಿಗ್ರಹೀತೃಗಳಾಗುತ್ತಾರೆ.

ಅಮಾವಾಸ್ಯಾಯಾಂ ಚ ಪಿತರಃ ಪೌರ್ಣಮಾಸ್ಯಾಂ ಚ ದೇವತಾಃ ।
ಮನ್ಮುಖೇನೈವ ಹೂಯಂತೇ ಭುಂಜತೇ ಯದ್ಧುತಂ ಹವಿಃ ॥೧೨॥

ಅಮಾವಾಸ್ಯೆಯಂದು ಪಿತೃಗಳು, ಪೌರ್ಣಮಾಸಿ ಯಂದು ದೇವತೆಗಳು ನನ್ನ ಮುಖದಿಂದಲೇ ಹೋಮಿಸಲ್ಪಡುತ್ತಾರೆ. ಮತ್ತು ನನ್ನಲ್ಲಿ ಹೋಮಿಸಿದ ಹವಿಸ್ಸನ್ನು ಸ್ವೀಕರಿಸುತ್ತಾರೆ.

ಸರ್ವಭಕ್ಷಃ ಕಥಂ ತೇಷಾಂ ಭವಿಷ್ಯಾಮಿ ಮುಖಂ ತ್ವಹಮ್ ।
ಚಿಂತಯಿತ್ವಾ ತತೋ ವಹ್ನಿಶ್ಚಕ್ರೇ ಸಂಹಾರಮಾತ್ಮನಃ ॥೧೩॥

ಅವರಿಗೆ ಮುಖವಾಗಿರುವ ನಾನು ಹೇಗೆ ಸರ್ವಭಕ್ಷನಾಗುವೆನು? ಹೀಗೆ ಹೇಳಿ ಅಗ್ನಿಯು ಆಲೋಚಿಸಿ, ಅಗ್ನಿಕುಂಡಾದಿಗಳಿಂದ ಅಂತರ್ಧಾನನಾದನು.

ದ್ವಿಜಾನಾಮಗ್ನಿಹೋತ್ರೇಷು ಯಜ್ಞಸತ್ರಕ್ರಿಯಾಸು ಚ ।
ನಿರೋಂಕಾರವಷಟ್‌ಕಾರಾಃ ಸ್ವಧಾಸ್ವಾಹಾವಿವರ್ಜಿತಾಃ ॥೧೪॥

ಬ್ರಾಹ್ಮಣರ ಅಗ್ನಿಹೋತ್ರಗಳು, ಮತ್ತು ಯಜ್ಞಸತ್ರಕ್ರಿಯೆಗಳು ಓಂಕಾರ ವಷಟ್‌ಕಾರಗಳಿಂದ ಹೀನವಾಗಿ ಸ್ವಧಾಸ್ವಾಹಾ ಶಬ್ದಗಳಿಂದಲೂ ರಹಿತವಾದವು.

ವಿನಾಗ್ನಿನಾ ಪ್ರಜಾಃ ಸರ್ವಾಸ್ತ್ರಸ್ತಾಃ ಹ್ಯಾಸನ್ ಸುದುಃಖಿತಾಃ ।
ಅಥರ್ಷಯಃ ಸಮುದ್ವಿಗ್ನಾ ದೇವಾನ್ ಗತ್ವಾಽಬ್ರುವನ್ ವಚಃ ॥೧೫॥

ಅಗ್ನಿ ಇಲ್ಲದೆ ಎಲ್ಲ ಪ್ರಜೆಗಳು ಭಯಗ್ರಸ್ತರಾಗಿ ಬಹಳದುಃಖದಿಂದ ಕೂಡಿದವರಾದರು. ಆಗ ಋಷಿಗಳು ಉದ್ವಿಗ್ನರಾಗಿ, ದೇವತೆಗಳನ್ನು ಸಮೀಪಿಸಿ ಮಾತನಾಡಿದರು.

ಅಗ್ನಿನಾಶಾತ್ ಕ್ರಿಯಾಭ್ರಂಶಾನ್ನಷ್ಟಾ ಲೋಕಾಸ್ತ್ರಯೋಽನಘಾಃ ।
ವಿದಧ್ವಮತ್ರ ಯತ್ ಕಾರ್ಯಂ ನ ಸ್ಯಾತ್ ಕಾಲಾತ್ಯಯೋ ಯಥಾ ॥

ಪರಿಶುದ್ಧರಾದ ದೇವತೆಗಳೇ, ಅಗ್ನಿನಾಶವಾಗಿರುವುದರಿಂದ ಕ್ರಿಯಾಲೋಪವಾಗಿ ಮೂರುಲೋಕಗಳೂ ನಾಶವಾಗುತ್ತಿವೆ. ವಿಳಂಬವನ್ನು ಮಾಡದೆ ಇದಕ್ಕೆ ಏನು ಪರಿಹಾರವನ್ನು ಮಾಡಬೇಕೋ, ಅದನ್ನು ಮಾಡಿ.

ಅಥರ್ಷಯಶ್ಚ ದೇವಾಶ್ಚ ಬ್ರಹ್ಮಾಣಮುಪಜಗ್ಮತುಃ ।
ಅಗ್ನೇರಾವೇದಯನ್ ನಾಶಂ ಕ್ರಿಯಾಸಂಹಾರಮೇವ ಚ ॥೧೭॥

ಭೃಗುಣಾ ವೈ ಮಹಾಭಾಗಾಃ ಶಪ್ತೋಽಗ್ನಿಃ ಕಾರಣಾಂತರೇ ।
ಕಥಂ ದೇವಮುಖಂ ಭೂತ್ವಾ ಯಜ್ಞಭಾಗಾಗ್ರಭುಕ್ ತಥಾ ।
ಹುತಭುಕ್ ಸರ್ವಲೋಕೇಷು ಸರ್ವಭಕ್ಷತ್ವಮೇಷ್ಯತಿ ॥೧೮॥

ಆಗ ಋಷಿಗಳು ಮತ್ತು ದೇವತೆಗಳು ಬ್ರಹ್ಮದೇವರ ಸಮೀಪಕ್ಕೆ ಹೋದರು. ಮಹಾಭಾಗರಾದ ಭೃಗುಗಳಿಂದ ಅಗ್ನಿಯು ಬೇರೆ ಕಾರಣದಿಂದ ಶಪಿತನಾದನು. ದೇವಮುಖನು ಯಜ್ಞಭಾಗದಲ್ಲಿ ಅಗ್ರಭೋಕ್ತವಾದ ಅಗ್ನಿಯು ಎಲ್ಲ ಲೋಕಗಳಲ್ಲಿಯೂ ಹೇಗೆ ಸರ್ವಭಕ್ಷನಾಗುತ್ತಾನೆ?

ಶ್ರುತ್ವಾ ತು ತದ್ವಚಸ್ತೇಷಾಮಗ್ನಿ ಮಾಹೂಯ ಲೋಕಕೃತ್ ।
ಉವಾಚ ವಚನಂ ಶ್ಲಕ್ಷ್ಣಂ ಭೂತಭಾವನಮವ್ಯಯಮ್ ॥೧೯॥

ಅವರ ಆ ಮಾತನ್ನು ಕೇಳಿ ಸೃಷ್ಟಿಕರ್ತರಾದ ಬ್ರಹ್ಮದೇವರು ಅಗ್ನಿಯನ್ನು ಕರೆದು ಲೋಕದ ಉತ್ಪತ್ತಿಗೆ ಕಾರಣನಾದ ಶಾಶ್ವತನಾದ ಅವನನ್ನು ಕುರಿತು ಮಧುರವಾದ ಮಾತುಗಳನ್ನು ಆಡಿದನು.

ಬ್ರಹ್ಮಾ

ಲೋಕಾನಾಮಿಹ ಸರ್ವೇಷಾಂ ತ್ವಂ ಕರ್ತಾ ಚಾಂತ ಏವ ಚ ॥೨೦॥

ಅಗ್ನಿಯೇ ನೀನು ಎಲ್ಲಾ ಲೋಕಗಳಿಗೂ ಸೃಷ್ಟಿಕರ್ತನು ಮತ್ತು ಸಂಹಾರಕರ್ತನು.

ತ್ವಂ ಧಾರಯಸಿ ಲೋಕಾಂಸ್ತ್ರೀನ್ ಗುಣಾನಾಂ ಚ ಪ್ರವರ್ತಕಃ ।
ಸ ತಥಾ ಕುರು ಲೋಕೇಶ ನೋಚ್ಛಿದ್ಯೇರನ್ ಕ್ರಿಯಾ ಯಥಾ ॥೨೧॥

ನೀನು ಮೂರು ಲೋಕಗಳನ್ನು ಪಾಲಿಸುವನು. ಮತ್ತು ಸತ್ವರಜಸ್ತಮೋಗುಣಗಳನ್ನು ಪ್ರವರ್ತನೆ ಮಾಡುವವನು. ಲೋಕೇಶನೇ, ಯಜ್ಞಾದಿಕ್ರಿಯೆಗಳು ಲೋಪವಾಗದಂತೆ ಮಾಡು.

ಕಸ್ಮಾದೇವಂ ಸ ಮೂಢಸ್ತ್ವಂ ಈಶಸ್ತ್ವಂ ಹಿ ಹುತಾಶನ ।
ತ್ವಂ ಪವಿತ್ರಂ ಸದಾ ಲೋಕೇ ಸರ್ವಭೂತಗತಶ್ಚ ಹ ॥೨೨॥

ಎಲೈ ಹುತಾಶನನೇ ಸಮರ್ಥನಾದ ನೀನು ಏಕೆ ಹೀಗೆ ಅಂತರ್ಧಾನವನ್ನು ಹೊಂದಿದ್ದೀಯೇ, ನೀನು ಲೋಕದಲ್ಲಿ ಸದಾ ಪವಿತ್ರನಾದವನು. ಮತ್ತು ಎಲ್ಲಾ ಪ್ರಾಣಿಗಳಲ್ಲೂ ಇರುವವನು.

ನ ತ್ವಂ ಸರ್ವಶರೀರೇಣ ಸರ್ವಭಕ್ಷತ್ವಮೇಷ್ಯಸಿ ।
ಉಪಾದಾನಾಽರ್ಚಿಷೋ ಯಾಸ್ತೇ ಸರ್ವಂ ಭಕ್ಷ್ಯಂತಿ ತಾಃ ಶಿಖಾಃ ॥

ನಿನ್ನ ಎಲ್ಲಾ ಶರೀರದಿಂದ ಎಂದರೆ ಸರ್ವಪ್ರಾಣಿಗಳ ಉದರದಲ್ಲಿರುವ ವೈಶ್ವಾನರ ಶರೀರದಿಂದ, ಸಮುದ್ರದ ಮಧ್ಯದಲ್ಲಿ ವಡವಾನಲ ಶರೀರದಿಂದ, ಪಾತಾಳಾದಿ ಲೋಕದಲ್ಲಿರುವ ನಿನ್ನ ನಾನಾ ಶರೀರಗಳಿಂದ ಸರ್ವಭಕ್ಷನಾಗುವುದಿಲ್ಲ. ಸ್ಥೂಲತೇಜೋರೂಪನಾದ ನಿನಗೆ ಉಪಾದಾನವಾದ ಸೂಕ್ಷ್ಮವಾದ ಅಗ್ನಿಯ ಕಣಗಳು ಎಲ್ಲವನ್ನೂ ಭಕ್ಷಿಸುತ್ತವೆ.

ಯಥಾ ಸೂರ್ಯಾಂಶುಭಿಃ ಸ್ಪೃಷ್ಟಂ ಸರ್ವಂ ಶುಚಿ ವಿಭಾವ್ಯತೇ ।
ತಥಾ ತ್ವದರ್ಚಿರ್ನಿರ್ದಗ್ಧಂ ಸರ್ವಂ ಶುಚಿ ಭವಿಷ್ಯತಿ ॥೨೪॥

ಹೇಗೆ ಸೂರ್ಯಕಿರಣಗಳಿಂದ ಸಂಬಂಧವನ್ನು ಹೊಂದಿದ ಎಲ್ಲವೂ ಶುದ್ಧವಾಗುತ್ತವೆಯೋ, ಹಾಗೆ ನಿನ್ನ ಸೂಕ್ಷ್ಮಕಣಗಳ ಅಥವಾ ಸೂಕ್ಷ್ಮಜ್ವಾಲೆಗಳ ಸಂಬಂಧವನ್ನು ಹೊಂದಿದ ಎಲ್ಲವೂ ಶುದ್ಧವೇ ಆಗುತ್ತವೆ.

ನಿನಗೆ ಅಶುದ್ಧಿಯು ಬರುವುದಿಲ್ಲ. ಅದಕ್ಕೆ ಬದಲಾಗಿ ನಿನ್ನ ಸಂಬಂಧವನ್ನು ಹೊಂದಿದ ಪದಾರ್ಥಗಳಿಗೆ ಶುದ್ಧಿಯೇ ಉಂಟಾಗುತ್ತದೆ.

ತದಗ್ನೇ ತ್ವಂ ಮಹಾತೇಜಾಃ ಸ್ವಪ್ರಭಾವಾದ್ ವಿನಿರ್ಗತಮ್ ।
ಸ್ವತೇಜಸೈವ ತಂ ಶಾಪಂ ಕುರು ಸತ್ಯಮೃಷೇರ್ವಿಭೋ ।
ದೇವಾನಾಂ ಚಾತ್ಮನೋ ಭಾಗಂ ಗೃಹಣ ತ್ವಂ ಮುಖೇ ಹುತಮ್ ॥೨೫॥

ಆದ್ದರಿಂದ ಎಲೈ ಅಗ್ನಿಯೇ ನೀನು ಮಹಾತೇಜಸ್ಸುವುಳ್ಳವನು. ನಿನ್ನ ಪ್ರಭಾವದಿಂದಲೇ ಹೊರಬಂದ ವಿಪ್ರಶಾಪವನ್ನು ನಿನ್ನ ತೇಜಸ್ಸಿನಿಂದಲೇ ಸತ್ಯವನ್ನಾಗಿ ಮಾಡು. ಎಲೈ ವಿಭುವೇ, ನೀನು ನಿನ್ನ ಮುಖದಲ್ಲಿ ಹೋಮವನ್ನು ಮಾಡಿದ, ನಿನ್ನ ಭಾಗವನ್ನು ಮತ್ತು ದೇವತೆಗಳ ಭಾಗವನ್ನು ಸ್ವೀಕರಿಸು.

ಸೂತಃ

ಏವಮಸ್ತ್ವಿತಿ ತಂ ವಹ್ನಿಃ ಪ್ರತ್ಯುವಾಚ ಪಿತಾಮಹಮ್ ।
ಜಗಾಮ ಶಾಸನಂ ಕರ್ತುಂ ದೇವಸ್ಯ ಪರಮೇಷ್ಠಿನಃ ॥೨೬॥

ಅಗ್ನಿಯು ಬ್ರಹ್ಮದೇವರನ್ನು ಕುರಿತು ಹಾಗೆಯೇ ಆಗಲಿ ಎಂದು ಹೇಳಿ, ಬ್ರಹ್ಮದೇವರ ಶಾಸನವನ್ನು ನೆರವೇರಿಸಲು ಹೋದನು. (ಎಲ್ಲಾ ಅಗ್ನಿಕುಂಡಗಳಲ್ಲಿ ಅಭಿವ್ಯಕ್ತನಾದನು.)

ದೇವರ್ಷಯಶ್ಚ ಮುದಿತಾಸ್ತತೋ ಜಗ್ಮುರ್ಯಥಾಗತಮ್ ।
ಋಷಯಶ್ಚ ಯಥಾಪೂರ್ವಂ ಕ್ರಿಯಾಃ ಸರ್ವಾಃ ಪ್ರಚಕ್ರಿರೇ ॥೨೭॥

ದೇವತೆಗಳು ಮತ್ತು ಋಷಿಗಳು ಸಂತೋಷದಿಂದ ಕೂಡಿದವರಾಗಿ ಅಲ್ಲಿಂದ ತಾವು ಬಂದಂತೆಯೇ ಹೊರಟು ಹೋದರು. ಋಷಿಗಳೆಲ್ಲರೂ ಮೊದಲಿನಂತೆಯೇ ಯಜ್ಞಾದಿಕ್ರಿಯೆಗಳನ್ನು ಮಾಡಿದರು.

ದಿವಿ ದೇವಾ ಮುಮುದಿರೇ ಭೂತಸಂಘಾಶ್ಚ ಲೌಕಿಕಾಃ ।
ಅಗ್ನಿಶ್ಚ ಪರಮಾಂ ಪ್ರೀತಿಮವಾಪ ಗತಕಲ್ಮಷಃ ॥೨೮॥

ಏವಮೇಷ ಪುರಾವೃತ್ತ ಇತಿಹಾಸೋऽಗ್ನಿಶಾಪಜಃ ।
ಪುಲೋಮ್ನೋऽಸ್ಯ ವಿನಾಶಶ್ಚ ಚ್ಯವನಸ್ಯ ಚ ಸಂಭವಃ ॥೨೯॥

ಸ್ವರ್ಗಲೋಕದಲ್ಲಿ ದೇವತೆಗಳು ಸಂತೋಷ ಪಟ್ಟರು. ಭೂಲೋಕದಲ್ಲಿ ಎಲ್ಲಾ ಪ್ರಾಣಿಗಳೂ ಸಂತೋಷಪಟ್ಟವು. ಪರಿಶುದ್ಧನಾದ ಅಗ್ನಿಯು ಪರಮ ಸಂತೋಷವನ್ನು ಹೊಂದಿದನು. ಹೀಗೆ ಅಗ್ನಿಗೆ ಕೊಟ್ಟ ಶಾಪವೂ ಅದರಿಂದ ಉಂಟಾದ ಪರಿಸ್ಥಿತಿಯು ಪುಲೋಮ ರಾಕ್ಷಸನ ವಿನಾಶವೂ, ಚ್ಯವನರ ಉತ್ಪತ್ತಿಯೂ, ಹಿಂದೆ ಜರುಗಿದ ಇತಿಹಾಸ.

॥ ಇತಿ ಶ್ರೀಮನ್ಮಹಾಭಾರತೇ ಶತಸಹಸ್ರಿಕಾಯಾಂಸಂಹಿತಾಯಾಮಾದಿಪರ್ವಣಿ॥
ಸಪ್ತಮೋऽಧ್ಯಾಯಃ ॥

॥ ಇತಿ ಪೌಲೋಮಪರ್ವಣಿ ಚತುರ್ಥೋऽಧ್ಯಾಯಃ ॥

ಇಲ್ಲಿಗೆ ಮಹಾಭಾರತದ ಆದಿಪರ್ವದಲ್ಲಿ ಏಳನೆಯ ಅಧ್ಯಾಯ ಮುಗಿಯಿತು.

★★★★★

ಎಂಟನೆಯ ಅಧ್ಯಾಯ

(ಭೃಗುಪುತ್ರರಾದ ಚ್ಯವನರಿಂದ ಪ್ರಮತಿಯ ಪಿತಾಮಹನ ಪಿತನಾದ ಶೌನಕರ ಜನನ, ಪ್ರಮತಿಯ ಸುತನಾದ ರುರು ಮತ್ತು ಪ್ರಮದ್ವರೆಯ ವಿವಾಹ ನಿಶ್ಚಯ, ಪ್ರಮದ್ವರೆಯ ಮರಣ)

ಸೂತ

ಸ ಚಾಪಿ ಭಾರ್ಗವೋ ಬ್ರಹ್ಮನ್ ಚ್ಯವನೋಽಜನಯತ್ಸುತಮ್ ।
ಸುಕನ್ಯಾಯಾಂ ಮಹಾತ್ಮಾನಂ ಪ್ರಮತಿಂ ದೀಪ್ತತೇಜಸಮ್ ॥೧॥

ಎಲೈ ಬ್ರಾಹ್ಮಣನೇ, ಆ ಭಾರ್ಗವರಾದ ಚ್ಯವನರೂ ಸಹ ಸುಕನ್ಯೆಯಲ್ಲಿ ಮಹಾತ್ಮನೂ, ಕಾಂತಿಯುಕ್ತನೂ ಆದ ಪ್ರಮತಿ ಎಂಬ ಮಗನನ್ನು ಪಡೆದನು.

ಪ್ರಮತಿಸ್ತು ರುರುಂ ನಾಮ ಘೃತಾಚ್ಯಾಂ ಸಮಜೀಜನತ್ ।
ರುರೋಃ ಪ್ರಮದ್ವರಾಯಾಂ ತು ಶುನಕಃ ಸಮಪದ್ಯತ ।
ಶೌನಕಸ್ತ್ವಂ ಮಹಾಭಾಗಃ ಶುನಕಸ್ಯ ಸುತೋಽಭವಃ ॥೨॥

ಪ್ರಮತಿಯ ಪತ್ನಿಯಾದ ಘೃತಾಚಿಯಲ್ಲಿ ರುರುವು ಜನಿಸಿದನು. ರುರುವಿಗೆ ಪ್ರಮದ್ವರೆಯಲ್ಲಿ ಶುನಕನು ಜನಿಸಿದನು. ಬ್ರಾಹ್ಮಣನೇ, ಮಹಾನುಭಾವನಾದ ನೀನು ಶುನಕನ ಮಗನಾಗಿ ಹುಟ್ಟಿ ಶೌನಕನೆಂದು ಕರೆಸಿಕೊಳ್ಳುತ್ತೀಯೆ.

ತಸ್ಯ ಬ್ರಹ್ಮನ್ ರುರೋಃ ಸರ್ವಂ ಚರಿತಂ ಭೂರಿತೇಜಸಃ ।
ವಿಸ್ತರೇಣ ಪ್ರವಕ್ಷ್ಯಾಮಿ ತಚ್ಛೃಣು ತ್ವಮಶೇಷತಃ ॥೩॥

ಎಲೈ ಬ್ರಾಹ್ಮಣನೇ, ಮಹಾತೇಜಸ್ವಿಯಾದ ಆ ರುರುವಿನ ಎಲ್ಲಾ ಚರಿತ್ರೆಯನ್ನು ವಿಸ್ತಾರವಾಗಿ ಹೇಳುತ್ತೇನೆ, ಅದನ್ನು ಸಮಗ್ರವಾಗಿ ಕೇಳು.

ಋಷಿರಾಸೀನ್ಮಹಾನ್ ಪೂರ್ವಂ ತಪೋವಿದ್ಯಾವಿಶಾರದಃ ।
ಸ್ಥೂಲಕೇಶ ಇತಿ ಖ್ಯಾತಃ ಸರ್ವಭೂತಹಿತೇ ರತಃ ॥೪॥

ಹಿಂದೆ ತಪೋವಿದ್ಯಾವಿಶಾರದರಾದ ಸರ್ವಭೂತಹಿತದಲ್ಲಿ ರತರಾದ ಸ್ಥೂಲಕೇಶರೆಂಬ ದೊಡ್ಡ ಋಷಿಗಳು ಇದ್ದರು.

ಏತಸ್ಮಿನ್ನೇವ ಕಾಲೇ ತು ಮೇನಕಾಯಾಂ ಪ್ರಜಜ್ಞಿವಾನ್ ।
ಗಂಧರ್ವರಾಜೋ ವಿಪ್ರರ್ಷೇ ವಿಶ್ವಾವಸುರಿತಿ ಶ್ರುತಃ ॥೫॥

ಎಲೈ ವಿಪ್ರರ್ಷಿಯೇ, ಅದೇ ಸಮಯದಲ್ಲಿ ವಿಶ್ವಾವಸು ಎಂಬ ಗಂದರ್ವರಾಜನು ಮೇನಕೆಯಲ್ಲಿ ಗರ್ಭಾಧಾನವನ್ನು ಮಾಡಿದನು.

ಅಪ್ಸರಾ ಮೇನಕಾ ಚಾಪಿ ತಂ ಗರ್ಭಂ ಭೃಗುನಂದನ ।
ಉತ್ಸಸರ್ಜ ಯಥಾಕಾಲಂ ಸ್ಥೂಲಕೇಶಾಶ್ರಮಂ ಪ್ರತಿ ।
ಉತ್ಸೃಜ್ಯ ಚೈವ ಗರ್ಭಂ ಸ್ವಂ ನದ್ಯಾಸ್ತೀರೇ ಜಗಾಮ ಸಾ ॥೬॥

ಎಲೈ ಭೃಗುನಂದನನೇ, ಅಪ್ಸರೆಯಾದ ಮೇನಕೆಯಾದರೂ ಆ ಗರ್ಭವನ್ನು ಯೋಗ್ಯವಾದ ಕಾಲದಲ್ಲಿ ಸ್ಥೂಲಕೇಶರ ಆಶ್ರಮದ ಬಳಿಯಲ್ಲಿ ಪರಿತ್ಯಜಿಸಿದಳು. ಅವಳು, ನದಿಯ ದಡದಲ್ಲಿ ಆ ಗರ್ಭವನ್ನು ಬಿಟ್ಟು ಹೊರಟುಹೋದಳು.

ಕನ್ಯಾಮಮರಗರ್ಭಾಭಾಂ ಜ್ವಲಂತೀಮಿವ ಚ ಶ್ರಿಯಾ ।
ತಾಂ ದದರ್ಶ ಸಮುತ್ಸೃಷ್ಟಾಂ ನದ್ಯಾಸ್ತೀರೇ ಮಹಾನೃಷಿಃ ।
ಸ್ಥೂಲಕೇಶಃ ಸುತೇಜಸ್ವೀ ವಿಜನೇ ಬಂಧುವರ್ಜಿತಾಮ್ ॥೭॥

ಮಹಾಋಷಿಗಳಾದ ಸ್ಥೂಲಕೇಶರು ನದಿಯ ತೀರದಲ್ಲಿ ಪರಿತ್ಯಜಿಸಲ್ಪಟ್ಟಿದ್ದ ದೇವತೆಯ ಶಿಶುವಿನಂತೆ ಕಾಂತಿಯಿಂದ ಕಂಗೊಳಿಸುತ್ತಿದ್ದ ಆ ಹೆಣ್ಣು ಶಿಶುವನ್ನು ನೋಡಿದರು. ತೇಜಸ್ವಿಗಳಾದ ಅವರು ಬಂಧುವರ್ಜಿತಳಾಗಿ ನಿರ್ಜನವಾದ ಸ್ಥಳದಲ್ಲಿ ಆ ಶಿಶುವು ಇರುವುದನ್ನು ನೋಡಿದರು.

ಸ ತಾಂ ದೃಷ್ಟ್ವಾ ತದಾ ಕನ್ಯಾಂ ಸ್ಥೂಲಕೇಶೋ ದ್ವಿಜೋತ್ತಮಃ ।
ಜಗ್ರಾಹಾಥ ಮುನಿಶ್ರೇಷ್ಠಃ ಕೃಪಾವಿಷ್ಟಃ ಪುಪೋಷ ಚ ।
ವವೃಧೇ ಸಾ ವರಾರೋಹಾ ತಸ್ಯಾಶ್ರಮಪದೇ ಶುಭಾ ॥೮॥

ದ್ವಿಜಶ್ರೇಷ್ಠರೂ ಮುನಿಶ್ರೇಷ್ಠರೂ ಆದ ಸ್ಥೂಲಕೇಶರು ಆ ಹೆಣ್ಣುಮಗುವನ್ನು ನೋಡಿ ಕರುಣೆಯಿಂದ ಕೂಡಿದವರಾಗಿ ಅದನ್ನು ತೆಗೆದುಕೊಂಡು ಬಂದು ತಮ್ಮ ಆಶ್ರಮದಲ್ಲಿ

ಪೋಷಿಸಿದರು. ಆ ಕನ್ಯೆಯು ಅವರ ಆಶ್ರಮದಲ್ಲಿ ಪವಿತ್ರವಾದ ಸುಂದರಿಯಾಗಿ ಬೆಳೆದಳು.

ಪ್ರಮದಾಭ್ಯೋ ವರಾ ಸಾ ತು ರೂಪಶೀಲಾದಿಭಿರ್ಗುಣೈಃ ।
ತತಃ ಪ್ರಮದ್ವರೇತ್ಯಸ್ಯಾ ನಾಮ ಚಕ್ರೇ ಮಹಾನೃಷಿಃ ॥೯॥

ರೂಪಶೀಲಗುಣಗಳಿಂದ ಅವಳು ಉಳಿದ ಪ್ರಮದೆಯರನ್ನು ಮೀರಿದ್ದ ಕಾರಣ ಆ ದೊಡ್ಡ ಋಷಿಗಳು ಅವಳಿಗೆ ಪ್ರಮದ್ವರೆಯೆಂದು ನಾಮಕರಣ ಮಾಡಿದರು.

ತಾಮಾಶ್ರಮಪದೇ ತಸ್ಯ ರುರುರ್ದಷ್ಟ್ವಾ ಪ್ರಮದ್ವರಾಮ್ ।
ಬಭೂವ ಕಿಲ ಧರ್ಮಾತ್ಮಾ ಮದನಾನುಗತಾತ್ಮವಾನ್ ॥೧೦॥

ಪಿತರಂ ಸಖಿಭಿಃ ಸೋಽಥ ಯಾಚಯಾಮಾಸ ಭಾರ್ಗವಃ ।
ಪ್ರಮತಿಶ್ಚಾಭ್ಯಯಾಜ್ಞಾತ್ವಾ ಸ್ಥೂಲಕೇಶಂ ಯಶಸ್ವಿನಮ್ ॥೧೧॥

ಧರ್ಮಾತ್ಮನಾದ ರುರುವು ಆ ಆಶ್ರಮದ ಬಳಿ ಪ್ರಮದ್ವರೆಯನ್ನು ನೋಡಿ ಕಾಮಾವಿಷ್ಟನಾದನು. ಭಾರ್ಗವನಾದ ರುರುವು ತನ್ನ ತಂದೆಗೆ ತನ್ನ ಸ್ನೇಹಿತರ ಮೂಲಕ ಆ ವಿಷಯವನ್ನು ತಿಳಿಸಿ ಯಾಚಿಸಿದನು. ವಿಷಯವನ್ನು ತಿಳಿದ ಪ್ರಮತಿಯು ಕೀರ್ತಿಶಾಲಿಗಳಾದ ಸ್ಥೂಲಕೇಶರ ಬಳಿಗೆ ಹೋದನು.

ತತಃ ಪ್ರಾದಾತ್ ಪಿತಾ ಕನ್ಯಾಂ ರುರವೇ ತಾಂ ಪ್ರಮದ್ವರಾಮ್ ।
ವಿವಾಹಂ ಸ್ಥಾಪಯಿತ್ವಾಗ್ನೇ ನಕ್ಷತ್ರೇ ಭಗದೈವತೇ ॥೧೨॥

ಅನಂತರ, ಸ್ಥೂಲಕೇಶರು ವಿವಾಹವನ್ನು ಮುಂದಿನ ಭಗವದೇವತಾಕವಾದ ಉತ್ತರಾನಕ್ಷತ್ರದದಿನದಂದು ನಿಶ್ಚಯಿಸಿ ರುರುವಿಗೆ ಪ್ರಮದ್ವರೆಯನ್ನು ವಾಗ್ದಾನವನ್ನು ಮಾಡಿದರು.

ತತಃ ಕತಿಪಯಾಹಸ್ಸು ವಿವಾಹೇ ಸಮುಪಸ್ಥಿತೇ ।
ಸಖೀಭಿಃ ಕ್ರೀಡತೀ ಸಾರ್ಧಂ ಸಾ ಕನ್ಯಾ ವರವರ್ಣಿನೀ ॥೧೩॥

ನಾಪಶ್ಯತ ಪ್ರಸುಪ್ತಂ ವೈ ಭುಜಂಗಂ ತಿರ್ಯಗಾಯತಮ್ ।
ಪದಾ ಚೈನಂ ಸಮಾಕ್ರಾಮನ್ ಮುಮೂರ್ಷುಃ ಕಾಲಚೋದಿತಾ ॥೧೪॥

ಅನಂತರ, ವಿವಾಹಕ್ಕೆ ಇನ್ನು ಕೆಲವೇ ದಿನಗಳು ಉಳಿದಿರುವಾಗ ತನ್ನ ಸ್ನೇಹಿತೆಯರ ಜೊತೆಯಲ್ಲಿ ಆಡುತ್ತಿದ್ದ ಸುಂದರಿಯಾದ ಆ ಕನ್ಯೆಯು ತನ್ನ ದಾರಿಗೆ ಅಡ್ಡವಾಗಿ ಉದ್ದವಾಗಿ ಮಲಗಿದ್ದ ಒಂದು ಸರ್ಪವನ್ನು ಗಮನಿಸದೆ ಕಾಲಚೋದಿತಳಾಗಿ ಮರಣವು ಸನ್ನಿಹಿತವಾದವಳಾಗಿ ಆ ಸರ್ಪವನ್ನು ಕಾಲಿನಿಂದ ತುಳಿದಳು.

ಸ ತಸ್ಯಾಃ ಸಂಪ್ರಮತ್ತಾಯಾಶ್ಚೋದಿತಃ ಕಾಲಧರ್ಮಣಾ ।
ವಿಷೋಪಲಿಪ್ತದಂತಾಭ್ಯಾಂ ವ್ಯದಂಶಚ್ಚ ನ್ಯಪಾತಯತ್ ॥೧೫॥

ಕಾಲಧರ್ಮದಿಂದ ಪ್ರೇರಿತವಾದ ಆ ಸರ್ಪವು ಮೈಮರೆತಿದ್ದ ಅವಳನ್ನು ತನ್ನ ವಿಷಪೂರಿತವಾದ ದಂತಗಳಿಂದ ಕಡಿದು ನೆಲಕ್ಕೆ ಉರುಳಿಸಿತು.

ಸಾ ದಷ್ಟಾ ಸಹಸಾ ಭೂಮೌ ಪಪಾತ ಗತಚೇತನಾ ।
ವ್ಯಸುರಪ್ರೇಕ್ಷಣೀಯಾಚ ಪ್ರೇಕ್ಷಣೇಯತಮಾಕೃತಿಃ ॥೧೬॥

ಸರ್ಪದಿಂದ ಕಡಿಯಲ್ಪಟ್ಟ ಅತ್ಯಂತ ಸುಂದರವಾದ ರೂಪವನ್ನು ಹೊಂದಿದ್ದ ಅವಳು ನೆಲದ ಮೇಲೆ ಬಿದ್ದು ಚೈತನ್ಯವನ್ನೂ, ಪ್ರಾಣವನ್ನೂ ಕಳೆದುಕೊಂಡು ನೋಡಲು ಸಾಧ್ಯವಿಲ್ಲದವಳಾಗಿ ಆದಳು.

ಪ್ರಸುಪ್ತೇವಾಭವಚ್ಚಾಪಿ ಭುವಿ ಸರ್ಪವಿಷಾರ್ದಿತಾ ।
ಭೂಯೋऽಮನೋಹರತಮಾ ಬಭೂವ ತನುಮಧ್ಯಮಾ ॥೧೭॥

ಸರ್ಪವಿಷದ ಬಾದೆಗೆ ಒಳಗಾದವಳಾಗಿ ಅವಳು ನಿದ್ದೆಮಾಡುವವಳಂತೆ ಮಲಗಿದಳು. ಕೃಶಮಧ್ಯವುಳ್ಳ ಅವಳು ನೋಡಲು ವಿಷಾದಕರವಾಗಿ ಕಂಡಳು.

ತಾಂ ದದರ್ಶ ಪಿತಾ ಚೈವ ತೇ ಚೈವಾನ್ಯೇ ತಪಸ್ವಿನಃ ।
ವಿವೇಷ್ಟಮಾನಾಂ ಪತಿತಾಂ ಭೂತಳೇ ಪದ್ಮವರ್ಚಸಮ್ ॥೧೮॥

ತಂದೆಯಾದ ಸ್ಥೂಲಕೇಶರೂ ಮತ್ತು ಉಳಿದ ತಪಸ್ವಿಗಳೂ ಭೂಮಿಯಮೇಲೆ ಬಿದ್ದು ಹೊರಳಾಡುವ ಪದ್ಮಕಾಂತಿಯುಳ್ಳ ಅವಳನ್ನು ನೋಡಿದರು.

ತತಃ ಸರ್ವೇ ದ್ವಿಜವರಾಃ ಸಮಾಜಗ್ಮುಃ ಕೃಪಾನ್ವಿತಾಃ ।
ಸ್ವಸ್ತ್ಯಾತ್ರೇಯೋ ಮಹಾಜಾನುಃ ಕುಶಿಕಃ ಶಂಖಮೇಖಲಃ ॥೧೯॥

ಉದ್ದಾಲಕೋಽಕ್ಷಕರಶ್ಚೈವ ಶ್ವೇತಕೇತುಸ್ತಥೈವ ಚ ।
ಭರದ್ವಾಜಃ ಕೌಣಕುತ್ಸ ಆರ್ಷ್ಟಿಷೇಣೋಽಥ ಗೌತಮಃ ॥೩೦॥

ಆಗ ಸ್ವಸ್ತ್ಯಾತ್ರೇಯ, ಮಹಾಜಾನು, ಕುಶಿಕ, ಶಂಖಮೇಖಳ, ಉದ್ದಾಲಕ, ಅಕ್ಷಕರ,ಶ್ವೇತಕೇತು, ಭರದ್ವಾಜ, ಕೌಣಕುತ್ಸ, ಆರ್ಷ್ಟಿಷೇಣ, ಗೌತಮ ಮೊದಲಾದ ಎಲ್ಲಾ ಬ್ರಾಹ್ಮಣಶ್ರೇಷ್ಠರೂ ದಯೆಯಿಂದ ಕೂಡಿದವರಾಗಿ ಅಲ್ಲಿಗೆ ಬಂದರು.

ಪ್ರಮತಿಃ ಸಹ ಪುತ್ರೇಣ ತಥಾನ್ಯೇ ವನವಾಸಿನಃ ।
ತಾಂ ತೇ ಕನ್ಯಾಂ ವ್ಯಸುಂ ದೃಷ್ಟ್ವಾ ಭುಜಂಗಸ್ಯ ವಿಷಾರ್ದಿತಾಮ್ ॥

ರುರುದುಃ ಕೃಪಯಾಽಽವಿಷ್ಟಾ ರುರುಸ್ತ್ವತ್ರೋ ಬಹಿರ್ಯಯೌ ।
ತೇ ಚ ಸರ್ವೇ ದ್ವಿಜಶ್ರೇಷ್ಠಾಸ್ತತ್ರೈವೋಪಾವಿಶಂಸ್ತದಾ ॥೩೨॥

ಪ್ರಮತಿಯು ತನ್ನ ಪುತ್ರನಾದ ರುರುವಿನ ಜೊತೆಯಲ್ಲಿ ಅಲ್ಲಿಗೆ ಬಂದು ಸರ್ಪದ ವಿಷದಭಾದೆಯಿಂದ ಪ್ರಾಣವನ್ನು ತ್ಯಜಿಸಿದ್ದ ಆ ಕನ್ಯೆಯನ್ನು ನೋಡಿ ಕೃಪೆಯಿಂದ ಕೂಡಿದವರಾಗಿ ರೋದನವನ್ನು ಮಾಡಿದನು. ದುಃಖಪೂರ್ಣನಾದ ರುರುವು ಮಾತ್ರ ಅಲ್ಲಿಂದ ಎದ್ದು ಹೊರಗೆ ಹೋದನು. ಆ ಉಳಿದ ಎಲ್ಲಾ ದ್ವಿಜಶ್ರೇಷ್ಠರೂ ಆಗ ಅಲ್ಲಿಯೇ ಕುಳಿತುಕೊಂಡರು.

॥ ಇತಿ ಶ್ರೀಮನ್ಮಹಾಭಾರತೇ ಶತಸಹಸ್ರಿಕಾಯಾಂಸಂಹಿತಾಯಾಮಾದಿಪರ್ವಣಿ
ಅಷ್ಟಮೋಽಧ್ಯಾಯಃ ॥

॥ ಇತಿ ಪೌಲೋಮಪರ್ವಣಿ ಪಂಚಮೋಽಧ್ಯಾಯಃ ॥

ಇಲ್ಲಿಗೆ ಮಹಾಭಾರತದ ಆದಿಪರ್ವದಲ್ಲಿ ಎಂಟನೆಯ ಅಧ್ಯಾಯ ಮುಗಿಯಿತು.

★★★★★

ಒಂಭತ್ತನೆಯ ಅಧ್ಯಾಯ

(ರುರು ಶೋಕ, ದೇವದೂತನ ಪ್ರೇರಣೆಯಂತೆ ಪ್ರಮದ್ವರೆಗೆ ತನ್ನ ಅರ್ಧಾಯುಷ್ಯದಾನ, ವಿವಾಹ, ರುರುವಿನ ಸರ್ಪದ್ವೇಷ ಮತ್ತು ಡುಂಡುಭ ವಧ ಪ್ರಯತ್ನ)

ಸೂತ ಉವಾಚ

ತೇಷು ತತ್ರೋಪವಿಷ್ಟೇಷು ಬ್ರಹ್ಮಣೇಷು ಸಮಂತತಃ ।
ರುರುಶ್ಚುಕ್ರೋಶ ಗಹನಂ ವನಂ ಗತ್ವಾ ಸುದುಃಖಿತಃ ॥೧॥

ಆ ಬ್ರಾಹ್ಮಣರೆಲ್ಲರೂ ಅಲ್ಲಿ ಸುತ್ತಲೂ ಕುಳಿತರು, ಬಹಳ ದುಖದಿಂದ ಕೂಡಿದ ರುರುವು ದಟ್ಟವಾದ ಕಾಡಿಗೆ ಹೋಗಿ ಕಿರುಚುತ್ತಾ ಅತ್ತನು.

ಶೋಕೇನಾಭಿಹತಃ ಸೋಽಥ ವಿಲಪನ್ ಕರುಣಂ ಸ್ವಯಮ್ ।
ಅಬ್ರವೀದ್ ವಚನಂ ಶೋಚನ್ ಪ್ರಿಯಾಂ ಚಿಂತ್ಯ ಪ್ರಮದ್ವರಾಮ್॥

ಶೋಕಾಭಿಹತನಾದ ಅವನು ಕರುಣಾಜನಕವಾಗಿ ವಿಲಾಪವನ್ನು ಮಾಡುತ್ತಾ ತನ್ನ ಪ್ರಿಯೆಯಾದ ಪ್ರಮದ್ವರೆಯನ್ನು ಸ್ಮರಿಸಿ ಈ ಮಾತುಗಳನ್ನು ಆಡಿದನು.

ಶೇತೇ ಸಾ ಭುವಿ ತನ್ವಂಗೀ ಮಮ ಶೋಕವಿವರ್ಧಿನೀ ।
ಬಾಂಧವಾನಾಂ ಚ ಸರ್ವೇಷಾಂ ಕಿಂ ನು ದುಃಖಿಮತಃ ಪರಮ್ ॥೩॥

ಯದಿ ದತ್ತಂ ತಪಸ್ತಪ್ತಂ ಗುರವೋ ವಾ ಮಯಾ ಯದಿ ।
ಸಮ್ಯಗಾರಾಧಿತಾಸ್ತೇನ ಸಾ ಜೀವತು ಮಮ ಪ್ರಿಯಾ ॥೪॥

ನನ್ನ ಪ್ರಿಯಳಾದ ಆ ತನ್ವಂಗಿಯು ನನ್ನ ಮತ್ತು ಬಾಂಧವರೆಲ್ಲರ ಶೋಕವನ್ನು ವೃದ್ಧಿಮಾಡುತ್ತಾ ಭೂಮಿಯ ಮೇಲೆ ಮಲಗಿದ್ದಾಳೆ. ಇದಕ್ಕಿಂತ ಹೆಚ್ಚು ದುಃಖಕರವಾದದ್ದು ಯಾವುದು ? ನಾನು ದಾನವನ್ನು ಮಾಡಿದ್ದರೆ ಅಥವಾ ತಪಸ್ಸನ್ನು ಆಚರಿಸಿದ್ದರೆ ಅಥವಾ ಚೆನ್ನಾದ ರೀತಿಯಲ್ಲಿ ಗುರುಗಳನ್ನು ಆರಾಧನೆ ಮಾಡಿದ್ದರೆ ನನ್ನ ಪ್ರಿಯೆಯು ಮರಳಿ ಜೀವವನ್ನು ಪಡೆಯಲಿ.

ಯಥಾ ಚ ಜನ್ಮಪ್ರಭೃತಿ ಯತಾತ್ಮಾಽಹಂ ಧೃತವ್ರತಃ ।
ಪ್ರಮದ್ವರಾ ತಥಾದ್ಯಾಸಾವುತ್ತಿಷ್ಠತು ಮಮ ಪ್ರಿಯಾ ॥೫॥

ನಾನು ಜನ್ಮಾರಭ್ಯ ವ್ರತಗಳನ್ನು ಧರಿಸಿ ಒಳ್ಳೆಯ ನಿಯಮವನ್ನು ಉಳ್ಳವನಾದರೆ ನನ್ನ ಪ್ರಿಯೆಯಾದ ಈ ಪ್ರಮದ್ವರೆಯು ಮೇಲಕ್ಕೇಳಲಿ.

ಏವಂ ವಿಲಪತಸ್ತಸ್ಯ ಋಷಿಪುತ್ರಸ್ಯ ವೈ ತದಾ ।
ದೇವದೂತಸ್ತದಾಽಭ್ಯೇತ್ಯ ವಾಕ್ಯಮಾಹ ರುರುಂ ವನೇ ॥೬॥

ಹೀಗೆ ಆ ಋಷಿಪುತ್ರನು ವಿಲಾಪವನ್ನು ಮಾಡುತ್ತಿರಲು ದೇವದೂತನಾದ ಒಬ್ಬ ಗಂಧರ್ವನು ಆ ಕಾಡಿನಲ್ಲಿ ರುರುವನ್ನು ಸಮೀಪಿಸಿ ಹೀಗೆ ಮಾತನಾಡಿದನು.

ದೇವದೂತಃ

ಅಭಿಧತ್ಸೇ ಹ ಯದ್ವಾಚಾ ರುರೋ ದುಃಖೇನ ತನ್ಮೃಷಾ ।
ನ ತು ಮರ್ತ್ಯಸ್ಯ ಧರ್ಮಾತ್ಮನ್ನಾಯುರಸ್ತಿ ಗತಾಯುಷಃ ॥೭॥

ರುರುವೇ ದುಃಖದಿಂದ ಏನು ಮಾತನಾಡುತ್ತಿದ್ದೀಯೋ ಅದು ವ್ಯರ್ಥವಾದುದು. ಎಲೈ ಧರ್ಮಾತ್ಮನೇ, ಮರಣಶೀಲನಾದ ವ್ಯಕ್ತಿಯು ಆಯುಸ್ಸನ್ನು ಕಳೆದುಕೊಂಡು ಮರಣಹೊಂದಿದ ಮೇಲೆ ಪುನಃ ಅವನು ಬದುಕುವುದಿಲ್ಲ.

ಗತಾಸುರೇಷಾ ಕೃಪಣಾ ಗಂಧರ್ವಾಪ್ಸರಸೋಃ ಸುತಾ ।
ತಸ್ಮಾಚ್ಛೋಕೇ ಮನಸ್ತಾತ ಮಾ ಕೃಥಾಸ್ತ್ವಂ ಕಥಂಚನ ॥೮॥

ಪ್ರೀತಿಪಾತ್ರನೇ, ಗಂಧರ್ವ ಮತ್ತು ಅಪ್ಸರೆಯರ ಮಗಳಾದ ಈ ಪ್ರಮದ್ವರೆಯು ಮರಣವನ್ನು ಹೊಂದಿದ್ದಾಳೆ. ಆದ್ದರಿಂದ ಇನ್ನು ಯಾವ ರೀತಿಯಲ್ಲೂ ಮನಸ್ಸಿನಲ್ಲಿ ಶೋಕ ಪಡಬೇಡ.

ಉಪಾಯಶ್ಚಾತ್ರ ವಿಹಿತಃ ಪೂರ್ವಂ ದೇವೈರ್ಮಹಾತ್ಮಭಿಃ ।
ತಂ ಯದೀಚ್ಛಸಿ ಕರ್ತುಂ ತ್ವಂ ಲಪ್ಸ್ಯಸೀಮಾಂ ಪ್ರಮದ್ವರಾಮ್ ॥೯॥

ಮಹಾತ್ಮರಾದ ದೇವತೆಗಳು ಹಿಂದೆ ಈ ವಿಷಯದಲ್ಲಿ ಒಂದು ಉಪಾಯವನ್ನು ವಿಧಾನ ಮಾಡಿದ್ದಾರೆ. ನೀನು ಅದನ್ನು ಮಾಡಲು ಬಯಸುವುದಾದರೆ ಪ್ರಮದ್ವರೆಯನ್ನು ನೀನು ಮರಳಿ ಪಡೆಯುತ್ತೀಯೆ.

ರುರುಃ

ಕ ಉಪಾಯಃ ಕೃತೋ ದೇವೈರ್ಬ್ರೂಹಿ ತತ್ತ್ವೇನ ಖೇಚರ ।
ಕರಿಷ್ಯೇಽಹಂ ತಥಾ ಶ್ರುತ್ವಾ ತ್ರಾತುಮರ್ಹತಿ ಮಾಂ ಭವಾನ್ ॥೧೦॥

ಎಲೈ ಗಗನಚರನೇ, ದೇವತೆಗಳು ಏನು ಉಪಾಯವನ್ನು ಮಾಡಿದ್ದಾರೆ ? ಅದನ್ನು ನನಗೆ ಸರಿಯಾಗಿ ಹೇಳು, ನಾನು ಕೇಳಿ ಅದರಂತೆಯೇ ಮಾಡುವೆನು. ನನ್ನನ್ನು ನೀನು ರಕ್ಷಿಸು.

ದೇವದೂತಃ

ಆಯುಷೋಽರ್ಧಂ ಪ್ರಯಚ್ಛಸ್ವ ಕನ್ಯಾಯೈ ಭೃಗುನಂದನ ।
ಏವಮುತ್ಥಾಸ್ಯತಿ ರುರೋ ತವ ಭಾರ್ಯಾ ಪ್ರಮದ್ವರಾ ॥ ೧೧ ॥

ಎಲೈ ಭೃಗುನಂದನನೇ, ನೀನು ಈ ಕನ್ಯೆಗೆ ನಿನ್ನ ಅರ್ಧಾಯುಷ್ಯವನ್ನು ಕೊಡು. ರುರುವೇ, ಹಾಗೆ ಮಾಡಿದರೆ ನಿನ್ನ ಭಾರ್ಯೆಯಾದ ಪ್ರಮದ್ವರೆಯು ಎದ್ದೇಳುತ್ತಾಳೆ.

ರುರುಃ

ಆಯುಷೋಽರ್ಧಂ ಪ್ರಯಚ್ಛಾಮಿ ಕನ್ಯಾಯೈ ಖೇಚರೋತ್ತಮ ।
ಶೃಂಗರರೂಪಾಭರಣಾ ಚೋತ್ತಿಷ್ಠತು ಮಮ ಪ್ರಿಯಾ ॥೧೨॥

ಎಲೈ ಗಗನಚರಶ್ರೇಷ್ಠನೇ, ನಾನು ನನ್ನ ಆಯುಷ್ಯದ ಅರ್ಧಭಾಗವನ್ನು ಈ ಕನ್ಯೆಗೆ ಕೊಡುತ್ತಿದ್ದೇನೆ. ಶೃಂಗಾರರೂಪವಾದ ಆಭರಣದಿಂದ ಯುಕ್ತಳಾಗಿ ನನ್ನ ಪ್ರಿಯೆಯು ಮೇಲಕ್ಕೇಳಲಿ.

ತತೋ ಗಂಧರ್ವರಾಜಶ್ಚ ದೇವದೂತಶ್ಚ ಸತ್ತಮ ।
ಧರ್ಮರಾಜಮುಪೇತ್ಯೇದಂ ವಚನಂ ಪ್ರತ್ಯಭಾಷತಾಮ್ ॥೧೩॥

ಎಲೈ ಸಜ್ಜನರಲ್ಲಿ ಶ್ರೇಷ್ಠನೇ, ಅನಂತರ ಗಂಧರ್ವರಾಜನಾದ ವಿಶ್ವಾವಸುವೂ ಮತ್ತು ಆ ದೇವದೂತನೂ ಯಮಧರ್ಮರಾಜನ ಬಳಿಗೆ ಹೋಗಿ ಹೀಗೆ ಮಾತನಾಡಿದರು.

ಧರ್ಮರಾಜಾಯುಷೋಽರ್ಧೇನ ರುರೋರ್ಭಾರ್ಯಾ ಪ್ರಮದ್ವರಾ ।
ಸಮುತ್ತಿಷ್ಠತು ಕಲ್ಯಾಣೀ ಮೃತೈವ ಯದಿ ಮನ್ಯಸೇ ॥೧೪॥

ಎಲೈ ಧರ್ಮರಾಜನೇ ನೀನು ಪ್ರಮದ್ವರೆಯನ್ನು ಮೃತಳಾಗಿದ್ದಾಳೆ ಎಂದು ಭಾವಿಸಿದ್ದರೆ ರುರುವಿನಭಾರ್ಯೆಯಾದ, ಕಲ್ಯಾಣಿಯಾದ ಅವಳು ರುರುವಿನ ಅರ್ಧಾಯುಷ್ಯದಿಂದ ಮೇಲಕ್ಕೇಳಲಿ.

ಯಮಃ

ಪ್ರಮದ್ವರಾ ರುರೋರ್ಭಾರ್ಯಾ ದೇವದೂತ ಯದೀಚ್ಛಸಿ ।
ಉತ್ತಿಷ್ಠತ್ವಾಯುಷೋಽರ್ಧೇನ ರುರೋರೇವ ಸಮನ್ವಿತಾ ॥೧೫॥

ಎಲೈ ದೇವದೂತನೇ, ನೀನು ಬಯಸುವುದಾದರೆ ರುರುವಿನ ಅರ್ಧಾಯುಷ್ಯದಿಂದ ಕೂಡಿದವಳಾಗಿ ರುರುವಿನ ಭಾರ್ಯೆಯಾದ ಈ ಪ್ರಮದ್ವರೆಯು ಮೇಲಕ್ಕೇಳಲಿ.

ಏವಮುಕ್ತೇ ತತಃ ಕನ್ಯಾ ಸೋದತಿಷ್ಠತ್ ಪ್ರಮದ್ವರಾ ।
ರುರೋಸ್ತಸ್ಯಾಯುಷೋಽರ್ಧೇನ ಸುಪ್ತೇವ ವರವರ್ಣಿನೀ ॥೧೬॥

ಯಮದೇವರು ಹೀಗೆ ಹೇಳುತ್ತಿರಲು, ಸುಂದರಿಯಾದ ಆ ಪ್ರಮದ್ವರೆಯು ರುರುವಿನ ಅರ್ಧ ಆಯುಷ್ಯವನ್ನು ತೆಗೆದುಕೊಂಡು ನಿದ್ದೆಯಿಂದ ಎದ್ದವಳಂತೆ ಮೇಲಕ್ಕೆದ್ದಳು.

ಏತದ್ ದೃಷ್ಟಂ ಹಿ ತದ್ವೀರ್ಯಂ ರುರೋರುತ್ತಮತೇಜಸಃ ।
ಆಯುಷೋಽತಿಪ್ರವೃದ್ಧಸ್ಯ ಭಾರ್ಯಾರ್ಥೇಽರ್ಧಂ ಪ್ರದಾಸ್ಯತಃ ॥೧೭॥

ಶ್ರೇಷ್ಠತೇಜಸ್ವಿಯಾದ ಆ ರುರುವಿನ ಈ ಪರಾಕ್ರಮವು ನೋಡಲ್ಪಟ್ಟಿತು. ಅತಿದೀರ್ಘವಾದ ಆಯುಷ್ಯವನ್ನು ಹೊಂದಿದ್ದ ಅವನು ತನ್ನ ಆಯುಷ್ಯದ ಅರ್ಧಭಾಗವನ್ನು ಕೊಟ್ಟು ಪ್ರಮದ್ವರೆಯನ್ನು ಬದುಕಿಸಿದನು.

ತಮುದ್ದಿಷ್ಟೇಽಹನಿ ತಯೋಃ ಪಿತರೌ ಚಕ್ರತುರ್ಮುದಾ ।
ವಿವಾಹಂ ತೌ ಚ ರೇಮಾತೇ ಪರಸ್ಪರಹಿತೈಷಿಣೌ ॥೧೮॥

ಉದ್ದಿಷ್ಟವಾದ ದಿನದಲ್ಲಿಯೇ ಅವರ ಪಿತೃಗಳು ರುರು ಮತ್ತು ಪ್ರಮದ್ವರೆಯ ವಿವಾಹವನ್ನು ಜರುಗಿಸಿದರು. ಅವರಿಬ್ಬರೂ ಪರಸ್ಪರ ಹಿತವನ್ನು ಮಾಡುತ್ತಾ ಸಂತೋಷದಿಂದ ಕೂಡಿದರು.

ಸ ಲಬ್ಧ್ವಾ ದುರ್ಲಭಾಂ ಭಾರ್ಯಾಂ ಪದ್ಮಕಿಂಜಲ್ಕಸಪ್ರಭಾಮ್ ।
ವ್ರತಂ ಚಕ್ರೇ ವಿನಾಶಾಯ ಜಿಹ್ಮಗಾನಾಂ ಮಹಾವ್ರತಃ ॥೧೯॥

ಪದ್ಮಕಿಂಜಲ್ಕ ಕಾಂತಿಯುಳ್ಳ ದುರ್ಲಭಳಾದ ಪತ್ನಿಯನ್ನು ಪಡೆದ ಮಹಾವ್ರತನಾದ ರುರುವು ಸರ್ಪಗಳ ವಿನಾಶಮಾಡುವೆನೆಂದು ವ್ರತವನ್ನು ಧರಿಸಿದನು. (ಪ್ರತಿಜ್ಞೆಯನ್ನು ಮಾಡಿದನು)

ಸ ದೃಷ್ಟ್ವಾ ಜಿಹ್ಮಗಾನ್ ಸರ್ವಾಂಸ್ತೀಕ್ಷ್ಣಕೋಪಸಮನ್ವಿತಃ ।
ಅಭಿಹಂತಿ ಯದಾಸನ್ನಂ ಗೃಹ್ಯ ಪ್ರಹರಣಂ ತದಾ ॥೨೦॥

ಅವನು ಸರ್ಪಗಳನ್ನು ನೋಡಿದ ಕೂಡಲೇ ಬಹಳ ಕೋಪದಿಂದ ಕೂಡಿದವನಾಗಿ ಕೈಗೆ ಸಿಲುಕಿದ ಒಂದು ಹೊಡೆಯುವ ಸಾಧನವನ್ನು ತೆಗೆದುಕೊಂಡು ಅವುಗಳನ್ನು ಕೊಲ್ಲುತ್ತಿದ್ದನು.

ಸ ಕದಾಚಿದ್ವನಂ ವಿಪ್ರೋ ರುರುರಭ್ಯಾಗಮದ್ ಗೃಹಾತ್ ।
ಶಯಾನಂ ತತ್ರ ಚಾಪಶ್ಯತ್ ಡುಂಡುಭಂ ವಯಸಾऽನ್ವಿತಮ್ ॥೨೧॥

ಒಮ್ಮೆ ಬ್ರಾಹ್ಮಣನಾದ ರುರುವು ಮನೆಯಿಂದ ಕಾಡಿಗೆ ಹೋದನು. ಅಲ್ಲಿ ಒಂದು ವಯಸ್ಸಾದ ಡುಂಡುಭವು (ನೀರು ಹಾವು-ವಿಷರಹಿತವಾದ ಸರ್ಪ) ಮಲಗಿರುವುದನ್ನು ನೋಡಿದನು.

ತತ ಉದ್ಯಮ್ಯ ದಂಡಂ ಸ ಕಾಲದಂಡೋಪಮಂ ತದಾ ।
ಅತ್ಯಂತಂ ರುಷಿತೋ ವಿಪ್ರಸ್ತಮುವಾಚಾಥ ಡುಂಡುಭಃ ॥೨೨॥

ಆಗ ರೋಷದಿಂದ ಕೂಡಿದ ಬ್ರಾಹ್ಮಣನಾದ ಆ ರುರುವು ಯಮದಂಡದಂತಿದ್ದ ತನ್ನ ಕೈಯಲ್ಲಿದ್ದ ದಂಡವನ್ನು ಎತ್ತಿ ಹೊಡೆಯಲು ಉದ್ಯುಕ್ತನಾದನು. ಆಗ ಆ ಡುಂಡುಭವು ಅವನನ್ನು ಕುರಿತು ಮಾತನಾಡಿತು.

ನಾಪರಾಧ್ಯಾಮಿ ತೇ ಕಿಂಚಿದಹಮದ್ಯ ತಪೋಧನ ।
ಸಂರಂಭೋऽತ್ರ ಕಿಮರ್ಥಂ ವೈ ಮಾಮಭಿಹಂಸಿ ರುಷಾನ್ವಿತಃ ॥೨೩॥

ಎಲೈ ತಪೋಧನನೇ, ನಾನು ನಿನಗೆ ಯಾವ ಅಪರಾಧವನ್ನೂ ಮಾಡಿಲ್ಲ. ನೀನು ಕೋಪದಿಂದ ಕೂಡಿದವನಾಗಿ ನನ್ನನ್ನು ಕೊಲ್ಲಲು ಹೋಗುತ್ತಿದ್ದೀಯೆ, ನಿನಗೆ ಏಕೆ ಇಷ್ಟು ಕೋಪ?

॥ ಇತಿ ಶ್ರೀಮನ್ಮಹಾಭಾರತೇ ಶತಸಹಸ್ರಿಕಾಯಾಂಸಂಹಿತಾಯಾಮಾದಿಪರ್ವಣಿ ನವಮೋऽಧ್ಯಾಯಃ ॥

॥ ಇತಿ ಪೌಲೋಮಪರ್ವಣಿ ಷಷ್ಠೋऽಧ್ಯಾಯಃ ॥

ಇಲ್ಲಿಗೆ ಮಹಾಭಾರತದ ಆದಿಪರ್ವದಲ್ಲಿ ಒಂಭತ್ತನೆಯ ಅಧ್ಯಾಯ ಮುಗಿಯಿತು.

★★★★★

ಹತ್ತನೆಯ ಅಧ್ಯಾಯ

(ಸಹಸ್ರಪಾತ್ ಋಷಿಗೆ ಶಾಪದಿಂದ ಸರ್ಪಶರೀರಪ್ರಾಪ್ತಿ)

ರುರುಃ

ಮಮ ಪ್ರಾಣಸಮಾ ಭಾರ್ಯಾ ದಷ್ಟಾಸೀದ್ ಭುಜಗೇನ ವೈ ।
ತತ್ರ ಮೇ ಸಮಯೋ ಘೋರ ಆತ್ಮನೋರಗ ವೈ ಕೃತಃ ॥೧॥

ಎಲೈ ಸರ್ಪವೇ, ನನ್ನ ಪ್ರಾಣಸಮಳಾದ ಪತ್ನಿಯನ್ನು ಒಂದು ಸರ್ಪವು ಕಚ್ಚಿ ಕೊಂದಿತು. ಆ ಕಾರಣದಿಂದ ನಾನು ಇಂತಹ ಒಂದು ಘೋರ ನಿಯಮವನ್ನು ಆಚರಿಸುತ್ತಿದ್ದೇನೆ.

ಭುಜಂಗಮಾನ್ ಸದಾ ಹನ್ಯಾಂ ಯಂ ಯಂ ಪಶ್ಯೇಯಮಿತ್ಯುತ ।
ತತೋऽಹಂ ತ್ವಾಂ ಜಿಘಾಂಸಾಮಿ ಜೀವಿತೇನ ವಿಮೋಕ್ಷ್ಯಸೇ ॥೨॥

ಯಾವಯಾವ ಸರ್ಪವನ್ನು ನೋಡುವೆನೊ ಅವುಗಳನ್ನು ಯಾವಾಗಲೂ ಕೊಲ್ಲುವೆನು ಎಂದು ನನ್ನ ನಿಯಮ. ಆದ್ದರಿಂದ ನಾನು ನಿನ್ನನ್ನು ಕೊಲ್ಲಲು ಇಚ್ಛಿಸುತ್ತೇನೆ, ನೀನು ಪ್ರಾಣವನ್ನು ತ್ಯಜಿಸುವಿ.

ಡುಂಡುಭಃ

ಅನ್ಯೇ ತೇ ಭುಜಗಾ ವಿಪ್ರ ಯೇ ದಶಂತಿಹ ಮಾನವಾನ್ ।
ಡುಂಡುಭಾ ನಹಿ ಶಬ್ದೇನ ನ ತ್ವಂ ಹಿಂಸಿತುಮರ್ಹಸಿ ॥೩॥

ಎಲೈ ಬ್ರಾಹ್ಮಣನೇ, ಬೇರೆ ಸರ್ಪಗಳು ಮನುಷ್ಯರನ್ನು ಕಡಿಯುತ್ತವೆ. ಡುಂಡುಭಗಳಾದ ನಾವು ಕಡಿಯುವುದಿಲ್ಲ. ಕೇವಲ ಸರ್ಪ ಎಂಬ ಒಂದು ಶಬ್ದ ಇರುವ ಮಾತ್ರಕ್ಕೆ ನಮ್ಮನ್ನು ನೀನು ಕೊಲ್ಲಬಾರದು.

ಏಕಾರ್ಥಾನ್ ಪೃಥಗರ್ಥಾನ್ ವಾ ಏಕದುಃಖಾನ್ ಪೃಥಕ್‌ಸುಖಾನ್ ।
ಡುಂಡುಭಾನ್ ಧರ್ಮವಿದ್ ಭೂತ್ವಾ ನ ತ್ವಂ ಹಿಂಸಿತುಮರ್ಹಸಿ ॥

ನಮಗೆ ಸರ್ಪ ಎಂಬ ಸಾಮಾನ್ಯ ಹೆಸರಿದ್ದರೂ ಡುಂಡುಭ ಎಂಬ ವಿಶೇಷವಾದ ಹೆಸರೂ ಇದೆ. ಸರ್ಪಗಳನ್ನು ನೋಡುವುದರಿಂದ ಉಂಟಾಗುವ ಭಯವು ಎಲ್ಲ ಸರ್ಪಗಳಿಗೂ ಸಾಧಾರಣವಾಗಿದ್ದರೂ ಮರಣವನ್ನು ಉಂಟುಮಾಡುವ ಮತ್ತು ಮರಣವನ್ನು ಉಂಟುಮಾಡದೇ ಇರುವ ಪ್ರಭೇದವೂ ಅದರಲ್ಲಿದೆ. ಧರ್ಮವೇತ್ತನಾದ ನೀನು ಮರಣವನ್ನು ಉಂಟುಮಾಡದೆ ಸುಖವನ್ನು ಕೊಡುವ ಡುಂಡುಭಗಳಾದ ನಮ್ಮನ್ನು ಏಕೆ ಕೊಲ್ಲುತ್ತೀಯೆ?

ಸೂತಃ

ಇತಿ ಶ್ರುತ್ವಾ ವಚಸ್ತಸ್ಯ ಭುಜಗಸ್ಯ ರುರುಸ್ತದಾ ।
ನಾವಧೀದ್ ಭೃಶಸಂವಿಗ್ನಂ ಋಷಿಂ ಮತ್ವಾಽಥ ಡುಂಡುಭಮ್ ॥೫॥

ಆಗ ರುರುವು ಆ ಸರ್ಪದ ಮಾತನ್ನು ಕೇಳಿ, ಆ ಸರ್ಪವು ಬಹಳ ಉದ್ವೇಗಕ್ಕೆ ಒಳಗಾದ ಒಬ್ಬ ಋಷಿಯೆಂದು ತಿಳಿದು ಅದನ್ನು ಕೊಲ್ಲಲಿಲ್ಲ.

ಉವಾಚ ಚೈನಂ ಭಗವಾನ್ ರುರುಃ ಸಂಶಯವಾನ್ ಗಿರಾ ।
ಕೇನ ತ್ವಂ ಭುಜಗ ಬ್ರೂಹಿ ಕೋಽಸೀಮಾಂ ವಿಕ್ರಿಯಾಂ ಗತಃ ॥೬॥

ಪೂಜ್ಯನಾದ ರುರುವು ಆ ಸರ್ಪದ ಮಾತಿನಿಂದ ಸಂಶಯವನ್ನು ಹೊಂದಿದವನಾಗಿ ಅದನ್ನು ಕುರಿತು ಎಲೈ ಸರ್ಪವೇ, ನೀನು ಯಾರು, ಏತಕ್ಕೆ ಇಂತಹ ಸ್ಥಿತಿಯನ್ನು ಹೊಂದಿದ್ದೀಯೆ ಎಂದು ಕೇಳಿದನು.

ಡುಂಡುಭಃ

ಅಹಂ ಪುರಾ ರುರೋ ನಾಮ್ನಾ ಋಷಿರಾಸಂ ಸಹಸ್ರಪಾತ್ ।
ಸೋಽಹಂ ಶಾಪೇನ ವಿಪ್ರಸ್ಯ ಭುಜಗತ್ವಮುಪಾಗತಃ ॥೭॥

ಎಲೈ ರುರುವೇ ನಾನು ಹಿಂದೆ ಸಹಸ್ರಪಾತ್ ಎಂಬ ಋಷಿಯಾಗಿದ್ದೆ. ಅಂತಹ ನಾನು ಒಬ್ಬ ಬ್ರಾಹ್ಮಣನ ಶಾಪದಿಂದ ಹೀಗೆ ಸರ್ಪದ ಜನ್ಮವನ್ನು ಹೊಂದಿದೆ.

ರುರುಃ

ಕಿಮರ್ಥಂ ಶಪ್ತವಾನ್ ಕ್ರುದ್ಧೋ ದ್ವಿಜಸ್ತ್ವಾಂ ಭುಜಗೋತ್ತಮ ।
ಕಿಯಂತಂ ಚೈವ ಕಾಲಂ ತೇ ವಪುರೇತದ್ ಭವಿಷ್ಯತಿ ॥೮॥

ಎಲೈ ಭುಜಗಶ್ರೇಷ್ಠನೇ ಆ ಬ್ರಾಹ್ಮಣನು ಏತಕ್ಕಾಗಿ ನಿನಗೆ ಶಾಪವನ್ನು ಕೊಟ್ಟನು? ನೀನು ಎಷ್ಟು ಸಮಯದವರೆಗೆ ಈ ಶರೀರವನ್ನು ಧರಿಸಿರುತ್ತೀಯೆ?

॥ ಇತಿ ಶ್ರೀಮನ್ಮಹಾಭಾರತೇ ಶತಸಹಸ್ರಿಕಾಯಾಂಸಂಹಿತಾಯಾಮಾದಿಪರ್ವಣಿ ದಶಮೋಽಧ್ಯಾಯಃ ॥

॥ ಇತಿ ಪೌಲೋಮಪರ್ವಣಿ ಸಪ್ತಮೋಽಧ್ಯಾಯಃ ॥

ಇಲ್ಲಿಗೆ ಮಹಾಭಾರತದ ಆದಿಪರ್ವದಲ್ಲಿ ಹತ್ತನೆಯ ಅಧ್ಯಾಯ ಮುಗಿಯಿತು.

★★★★★

ಹನ್ನೊಂದನೆಯ ಅಧ್ಯಾಯ

(ಡುಂಡುಭನಿಂದ ತನಗೆ ಬಂದ ಶಾಪದ ಕಥನ. ರುರುವಿಗೆ ಶಾಂತಿಯಿಂದಿರಲು ಉಪದೇಶ. ಪ್ರಸಂಗದಿಂದ ಜನಮೇಜಯನ ಸರ್ಪಯಾಗದ ಉಲ್ಲೇಖ.)

ಡುಂಡುಭಃ

ಸಖಾ ಬಭೂವ ಮೇ ಪೂರ್ವಂ ಖಗಮೋ ನಾಮ ವೈ ದ್ವಿಜಃ ।
ಭೃಶಂ ಸಂಶಿತವಾಕ್ ತಾತ ತಪೋಬಲಸಮನ್ವಿತಃ ॥೧॥

ನನಗೆ ಹಿಂದೆ ಖಗಮ ಎಂಬ ಒಬ್ಬ ಬ್ರಾಹ್ಮಣನು ಸ್ನೇಹಿತನಾಗಿದ್ದನು. ಪ್ರೀತಿಪಾತ್ರನೇ, ಅವನು ತಪೋಬಲಯುಕ್ತನಾದವನೂ ಮತ್ತು ವಾಙ್‌ನಿಯಮವುಳ್ಳವನೂ ಆಗಿದ್ದನು.

ಸ ಮಯಾ ಕ್ರೀಡತಾ ಬಾಲ್ಯೇ ಕೃತ್ವಾ ತಾರ್ಣಮಥೋರಗಮ್ ।
ಅಗ್ನಿಹೋತ್ರೇ ಪ್ರವೃತ್ತಃ ಸನ್ ಭೀಷಿತಃ ಪ್ರಮುಮೋಹ ವೈ ॥೨॥

ನಾನು ಅವನ ಜೊತೆಯಲ್ಲಿ ಬಾಲ್ಯದಲ್ಲಿ ಆಟವನ್ನು ಆಡುತ್ತಾ ತೃಣಗಳಿಂದ ಒಂದು ಸರ್ಪವನ್ನು ರಚಿಸಿ ಅಗ್ನಿಹೋತ್ರದಲ್ಲಿ ನಿರತನಾಗಿದ್ದ ಅವನನ್ನು ಹೆದರಿಸಿದೆ. ಅವನು ಹೆದರಿಕೆಯಿಂದ ಮೂರ್ಛೆಹೋದ.

ಲಬ್ಧ್ವಾ ಚ ಸ ಪುನಃ ಸಂಜ್ಞಾಂ ಮಾಮುವಾಚ ತಪೋಧನಃ ।
ನಿರ್ದಹನ್ನಿವ ಕೋಪೇನ ಸತ್ಯವಾಕ್ ಸಂಶಿತವ್ರತಃ ॥೩॥

ತಪೋಧನನೂ, ಸತ್ಯವಚನನೂ, ಶ್ರೇಷ್ಠವ್ರತಧಾರಿಯೂ ಆದ ಅವನು ಪುನಃ ಪ್ರಜ್ಞೆಯನ್ನು ಪಡೆದು, ಕೋಪದಿಂದ ಪ್ರಜ್ವಲಿಸುತ್ತಾ ನನ್ನನ್ನು ಕುರಿತು ಮಾತನಾಡಿದನು.

ಯಥಾವೀರ್ಯಃ ಕೃತಃ ಸರ್ಪಃ ತ್ವಯಾಯಂ ಮದ್ವಿಭೀಷಯಾ ।
ತಥಾವೀರ್ಯೋ ಭುಜಂಗಸ್ತ್ವಂ ಮಮ ಕೋಪಾದ್ ಭವಿಷ್ಯಸಿ ॥೪॥

ನೀನು ನನ್ನನ್ನು ಹೆದರಿಸಲು ಎಂತಹ ಶಕ್ತಿಯುಳ್ಳ ಸರ್ಪವನ್ನು ಮಾಡಿದ್ದೀಯೋ, ನೀನು ನನ್ನ ಕೋಪದಿಂದ ಅಂತಹ ಸರ್ಪವೇ ಆಗುವಿ ಎಂದು ಹೇಳಿದನು.

ತಸ್ಯಾಹಂ ತಪಸೋ ವೀರ್ಯಂ ಜಾನಮಾನಸ್ತಪೋಧನ ।
ಭೃಶಮುದ್ವಿಗ್ನಹೃದಯಸ್ತಮವೋಚಂ ತಪೋಧನಮ್ ।
ಪ್ರಯತಃ ಸಂಭ್ರಮಾಚ್ಚೈವ ಪ್ರಾಂಜಲಿಃ ಪ್ರಣತಃ ಸ್ಥಿತಃ ॥೫॥

ಎಲೈ ತಪೋಧನನೇ, ಅವನ ತಪಸ್ಸಿನ ವೀರ್ಯವನ್ನು ತಿಳಿದ ನಾನು ಮನಸ್ಸಿನಲ್ಲಿ ಬಹಳ ಉದ್ವೇಗಕ್ಕೆ ಒಳಗಾದವನಾಗಿ, ಆ ತಪೋಧನನನ್ನು ಕುರಿತು ವಿನಯದಿಂದ ಮತ್ತು ಗಾಬರಿಯಿಂದ ಕೈಗಳನ್ನು ಜೋಡಿಸಿ ನಮಸ್ಕಾರವನ್ನು ಮಾಡಿ ನಿಂತೆ.

ಸಖೇತಿ ಸಹಸೇದಂ ತೇ ಹಾಸ್ಯಾರ್ಥಂ ವೈ ಕೃತಂ ಮಯಾ ।
ಕ್ಷಂತುಮರ್ಹಸಿ ಮೇ ಬ್ರಹ್ಮನ್ ಶಾಪೋಽಯಂ ವಿನಿವರ್ತ್ಯತಾಮ್
॥೬॥

ಎಲೈ ಬ್ರಾಹ್ಮಣನೇ, ನೀನು ನನ್ನ ಸ್ನೇಹಿತನೆಂಬ ಕಾರಣದಿಂದ ಹಾಸ್ಯದ ಸಲುವಾಗಿ ಈ ಕಾರ್ಯವನ್ನು ಇದ್ದಕ್ಕಿದ್ದಂತೆಯೇ ಮಾಡಿದೆ. ನೀನು ನನ್ನನ್ನು ಕ್ಷಮಿಸು. ಶಾಪವನ್ನು ಹಿಂದಕ್ಕೆ ತೆಗೆದುಕೋ.

ಸ ತು ಮಾಮಬ್ರವೀದ್ ದೃಷ್ಟ್ವಾ ಭೃಶಮುದ್ವಿಗ್ನಚೇತಸಂ ।
ಮುಹುರುಷ್ಣಂ ವಿನಿಃಶ್ವಸ್ಯ ಸುಸಂಭ್ರಾಂತಸ್ತಪೋಧನಃ ॥೮॥

ತಪೋಧನನಾದ ಅವನಾದರೋ ನನ್ನನ್ನು ನೋಡಿ ಉದ್ವಿಗ್ನ ಮನಸ್ಸುಳ್ಳವನಾಗಿ, ದಿಗ್ಭ್ರಮೆಯಿಂದ ಕೂಡಿದವನಾಗಿ, ಬಿಸಿಯಾಗಿ ನಿಟ್ಟುಸಿರನ್ನು ಬಿಡುತ್ತಾ ಮಾತನಾಡಿದನು.

ನಾನೃತಂ ವೈ ಮಯಾ ಪ್ರೋಕ್ತಂ ಭವಿತೇದಂ ಕಥಂಚನ ।
ಯತ್ತು ವಕ್ಷ್ಯಾಮಿ ತೇ ವಾಕ್ಯಂ ಶೃಣು ತನ್ಮೇ ಧೃತವ್ರತ ।
ಶ್ರುತ್ವಾ ಚ ಹೃದಿ ಮೇ ವಾಕ್ಯಮಿದಮಸ್ತು ತವಾನಘ ॥೯॥

ನನ್ನ ಈ ಮಾತು ಯಾವ ರೀತಿಯಲ್ಲೂ ಸುಳ್ಳಾಗುವುದಿಲ್ಲ. ಎಲೈ ಧೃತವ್ರತನೇ, ನಾನು ಹೇಳುವ ಮಾತನ್ನು ಕೇಳು. ಎಲೈ ಅನಘನೇ, ಆ ಮಾತನ್ನು ಕೇಳಿ ನಿನ್ನ ಮನಸ್ಸಿನಲ್ಲಿ ಅದನ್ನು ಧಾರಣೆ ಮಾಡು.

ಉತ್ಪತ್ಸ್ಯತಿ ರುರುರ್ನಾಮ ಪ್ರಮತೇರಾತ್ಮಜಃ ಶುಚಿಃ ।
ತಂ ದೃಷ್ಟ್ವಾ ಶಾಪಮೋಕ್ಷಸ್ತೇ ಭವಿತಾ ನಚಿರಾದಿವ ॥೧೦॥

ಮುಂದೆ ಪ್ರಮತಿಯ ಮಗನಾದ ಪರಿಶುದ್ಧನಾದ ರುರು ಎಂಬ ಬ್ರಾಹ್ಮಣನು ಜನಿಸುವನು. ನೀನು ಅವನನ್ನು ನೋಡಿದಾಗ ತಕ್ಷಣದಲ್ಲಿಯೇ ನಿನಗೆ ಶಾಪವಿಮೋಚನೆಯಾಗುವುದು.

ಸ ತ್ವಂ ರುರುರಿತಿ ಖ್ಯಾತಃ ಪ್ರಮತೇರಾತ್ಮಜಃ ಶುಚಿಃ ।
ಸ್ವಂ ರೂಪಂ ಪ್ರತಿಲಭ್ಯಾಹಮತ್ರ ವಕ್ಷ್ಯಾಮಿ ತೇ ಹಿತಮ್ ॥೧೧॥

ನೀನೇ ಪ್ರಮತಿಯ ಪುತ್ರನಾದ ಪರಿಶುದ್ಧನಾದ ರುರುವು. ನಾನು ಮೊದಲನೆಯ ರೂಪವನ್ನು ಪಡೆದು ನಿನಗೆ ಹಿತವನ್ನು ಹೇಳುವೆನು.

ಇತಿ ಸ್ವರೂಪಂ ಗೃಹ್ಯಾಶು ತತ್ರರ್ಷಿಂ ವಾಕ್ಯಮಬ್ರವೀತ್ ।
ಅಹಿಂಸಾ ಪರಮೋ ಧರ್ಮಃ ಸರ್ವಪ್ರಾಣಭೃತಾಂವರಃ ॥೧೨॥

ಹೀಗೆ ಆ ಡುಂಡುಭುವು ತನ್ನ ನಿಜಸ್ವರೂಪವನ್ನು ಪಡೆದು ಆ ಋಷಿಯಾದ ರುರುವನ್ನು ಕುರಿತು ಹೇಳಿತು. ಎಲ್ಲಾ ಪ್ರಾಣಿಗಳಿಗೂ ಶ್ರೇಷ್ಠವಾದ ಧರ್ಮವೆಂದರೆ ಅಹಿಂಸೆಯೇ.

ತಸ್ಮಾತ್ ಪ್ರಾಣಭೃತಃ ಸರ್ವಾನ್ನ ಹಿಂಸೇದ್ ಬ್ರಾಹ್ಮಣಃ ಕ್ವಚಿತ್ ।
ಬ್ರಾಹ್ಮಣಃ ಸೌಮ್ಯಭಾವೇನ ಜಾಯೋತೇತಿ ಪರಾ ಶ್ರುತಿಃ ॥೧೩॥

ಆದ್ದರಿಂದ ಬ್ರಾಹ್ಮಣನಾದವನು ಯಾವ ಪ್ರಾಣಿಯನ್ನೂ ಎಂದೂ ಹಿಂಸಿಸಬಾರದು. ಬ್ರಾಹ್ಮಣನು ಶಾಂತಭಾವವನ್ನು ಉಳ್ಳವನು ಎಂದು ವೇದವು ಹೇಳುತ್ತದೆ.

ವೇದವೇದಾಂಗವಿತ್ ತಾತ ಸರ್ವಭೂತಾಭಯಪ್ರದಃ ।
ಅಹಿಂಸಾ ಸತ್ಯವಚನಂ ಕ್ಷಮಾ ಚೇತಿ ವಿನಿಶ್ಚಿತಮ್ ॥೧೪॥

ಎಲೈ ಪ್ರೀತಿಪಾತ್ರನೇ, ಬ್ರಾಹ್ಮಣನಾದವನು ವೇದವೇದಾಂಗ-ಪಾರಗನಾಗಿರಬೇಕು. ಸರ್ವಭೂತಗಳಿಗೂ ಅಭಯವನ್ನು ಕೊಡಬೇಕು. ಅಹಿಂಸಾ, ಸತ್ಯವಚನ, ಮತ್ತು ಕ್ಷಮೆಯನ್ನು ಹೊಂದಿರಬೇಕು ಎಂಬುದು ನಿಶ್ಚಿತವಾದುದು.

ಬ್ರಾಹ್ಮಣಸ್ಯ ಪರೋ ಧರ್ಮೋ ವೇದಾನಾಂ ಧರಣಾದಪಿ ।
ಕ್ಷತ್ರಿಯಸ್ಯ ಚ ಯೋ ಧರ್ಮಃ ಸ ನೇಹೇಷ್ಯತಿ ವೈ ತವ ॥೧೫॥

ವೇದಗಳನ್ನು ಧಾರಣೆ ಮಾಡುವುದೇ ಬ್ರಾಹ್ಮಣರ ಶ್ರೇಷ್ಠವಾದ ಧರ್ಮ. ಕ್ಷತ್ರಿಯರಿಗೆ ಯಾವುದು ಧರ್ಮವೋ ಅದು ಬ್ರಾಹ್ಮಣನಾದ ನಿನಗೆ ಧರ್ಮವಲ್ಲ.

ದಂಡಧಾರಣಮತ್ಯುಗ್ರಂ ಪ್ರಜಾನಾಂ ಪರಿಪಾಲನಮ್ ।
ತದಿದಂ ಕ್ಷತ್ರಿಯಸ್ಯಾಸೀತ್ ಕರ್ಮಣಾ ಶೃಣು ಮೇ ರುರೋ ॥೧೬॥

ಎಲೈ ರುರುವೇ, ಪ್ರಜೆಗಳ ಪರಿಪಾಲನೆ ಮತ್ತು ಉಗ್ರವಾದ ದಂಡಧಾರಣೆ, ಇದು ಕ್ಷತ್ರಿಯನು ಮಾಡಬೇಕಾದ ಕರ್ಮ ಎಂದು ತಿಳಿ.

ಜನಮೇಜಯಸ್ಯ ಯಜ್ಞೇಽಸ್ಮಿನ್ ಸರ್ಪಾಣಾಂ ಹಿಂಸನಂ ಪುರಾ ।
ಪರಿತ್ರಾಣಂ ಚ ಭೀತಾನಾಮುಪರಿ ಬ್ರಾಹ್ಮಣಾದಪಿ ॥೧೭॥

ತಪೋವೀರ್ಯಬಲೋಪೇತಾದ್ ವೇದವೇದಾಂಗಪಾರಗಾತ್।
ಆಸ್ತೀಕಾದ್ ದ್ವಿಜಮುಖ್ಯಾದ್ ವೈ ಸರ್ಪಸತ್ರೇ ದ್ವಿಜೋತ್ತಮ ॥೧೮॥

ಎಲೈ ವೀರೋತ್ತಮನೇ, ಜನಮೇಜಯನ ಅಂತಹ ಯಜ್ಞದಲ್ಲಿ ಹಿಂದೆ ಸರ್ಪಗಳ ವಧೆಯು ನಡೆಯಿತು. ಅನಂತರ ತಪೋವೀರ್ಯ- ಬಲಸಮನ್ವಿತನಾದ, ವೇದವೇದಾಂಗಪಾರಗನಾದ, ಬ್ರಾಹ್ಮಣಶ್ರೇಷ್ಠನಾದ ಆಸ್ತೀಕನಿಂದ ಸರ್ಪಸತ್ರದಲ್ಲಿ ಆ ಭಯಗ್ರಸ್ತವಾದ ಸರ್ಪಗಳಿಗೆ ರಕ್ಷಣೆಯು ದೊರೆಯಿತು.

॥ ಇತಿ ಶ್ರೀಮನ್ಮಹಾಭಾರತೇ ಶತಸಹಸ್ರಿಕಾಯಾಂಸಂಹಿತಾಯಾಮಾದಿಪರ್ವಣಿ ಏಕಾದಶೋऽಧ್ಯಾಯಃ ॥

॥ ಇತಿ ಪೌಲೋಮಪರ್ವಣಿ ಅಷ್ಟಮೋऽಧ್ಯಾಯಃ ॥

ಇಲ್ಲಿಗೆ ಮಹಾಭಾರತದ ಆದಿಪರ್ವದಲ್ಲಿ ಹನ್ನೊಂದನೆಯ ಅಧ್ಯಾಯ ಮುಗಿಯಿತು.

★★★★★

ಹನ್ನೆರಡನೆಯ ಅಧ್ಯಾಯ

(ರುರುವಿಗೆ ವಿಸ್ತಾರವಾಗಿ ಸರ್ಪಯಾಗವನ್ನು ಕೇಳುವ ಇಚ್ಛೆ. ಮುಂದೆ ಕೇಳುವಿ ಎಂದು ಹೇಳಿ ಸಹಸ್ರಪದನ ಅಂತರ್ಧಾನ. ತಂದೆಯಲ್ಲಿ ಪುನಃ ಸರ್ಪಯಾಗದ ಪ್ರಶ್ನೆ.)

ರುರುಃ

ಕಥಂ ಹಿಂಸಿತವಾನ್ ಸರ್ಪಾನ್ ಕ್ಷತ್ರಿಯೋ ಜನಮೇಜಯಃ ।
ಸರ್ಪಾ ವಾ ಹಿಂಸಿತಾಸ್ತೇನ ಕಿಮರ್ಥಂ ಋಷಿಸತ್ತಮ ॥೧॥

ಎಲೈ ಋಷಿಶ್ರೇಷ್ಠನೇ, ಕ್ಷತ್ರಿಯನಾದ ಜನಮೇಜಯನು ಸರ್ಪಗಳನ್ನು ಹೇಗೆ ಹಿಂಸಿಸಿದನು ಮತ್ತು ಅವನು ಸರ್ಪಗಳನ್ನು ನಾಶಮಾಡಲು ಕಾರಣವೇನು?

ಕಿಮರ್ಥಂ ಮೋಕ್ಷಿತಾಸ್ತೇನ ಪನ್ನಗಾಶ್ಚೈವ ಶಂಸ ಮೇ ।
ಆಸ್ತೀಕೇನ ತದಾಚಕ್ಷ್ವ ಶ್ರೋತುಮಿಚ್ಛಾಮ್ಯಶೇಷತಃ ॥೨॥

ಆಸ್ತೀಕನಿಂದ ಆ ಸರ್ಪಗಳಾದರೋ ಏಕೆ ಬಿಡುಗಡೆ ಮಾಡಲ್ಪಟ್ಟವು? ಎಲ್ಲವನ್ನೂ ನನಗೆ ಹೇಳು. ನಾನು ಕೇಳಲು ಬಯಸುತ್ತೇನೆ.

ಋಷಿಃ

ಶ್ರೋಷ್ಯಸೇ ತ್ವಂ ರುರೋ ವತ್ಸ ಆಸ್ತೀಕಚರಿತಂ ಮಹತ್ ।
ಬ್ರಾಹ್ಮಣಾನಾಂ ಕಥಯತಾಮಿತ್ಯುಕ್ತ್ವಾಂತರಧೀಯತ ॥೩॥

ವತ್ಸನೇ, ನೀನು ದೊಡ್ಡದಾದ ಆಸ್ತೀಕ ಚರಿತ್ರೆಯನ್ನು ಮುಂದೆ ಬ್ರಾಹ್ಮಣರ ಬಾಯಲ್ಲಿ ಕೇಳುವಿ ಎಂದು ಹೇಳಿ ಅಂತರ್ಧಾನವನ್ನು ಹೊಂದಿದನು.

ಸೂತಃ

ರುರುಸ್ತ್ವಥ ವನಂ ಸರ್ವಂ ಪರ್ಯಧಾವತ್ ಸಮಂತತಃ ।
ತಮೃಷಿಂ ನಷ್ಟಮನ್ವಿಚ್ಛನ್ ಸಂಶ್ರಾಂತೋ ನ್ಯಪತದ್ ಭುವಿ ॥೪॥

ಅನಂತರ ರುರುವು ಆ ಅದೃಶ್ಯನಾದ ಋಷಿಯನ್ನು ಕಾಡಿನಲ್ಲಿ ಎಲ್ಲಾ ಕಡೆಯಲ್ಲೂ ಹುಡುಕುತ್ತಾ ತಿರುಗಾಡಿ ಬಳಲಿ ಭೂಮಿಯ ಮೇಲೆ ಬಿದ್ದನು.

ಸ ಮೋಹಂ ಪರಮಂ ಗತ್ವಾ ನಷ್ಟಸಂಜ್ಞ ಇವಾಭವತ್ ।
ತದ್ ಋಷೇರ್ವಚನಂ ತದ್ ವೈ ಚಿಂತಯಾನಃ ಪುನಃ ಪುನಃ ॥೫॥

ಅವನು ಆ ಋಷಿಗಳ ವಾಕ್ಯವನ್ನು ಮತ್ತೆ ಮತ್ತೆ ಆಲೋಚಿಸುತ್ತಾ ಮೋಹವಶನಾಗಿ ಮೂರ್ಛೆಹೊಂದಿದವನಂತೆ ಆದನು.

ಲಬ್ಧಸಂಜ್ಞೋ ರುರುಶ್ಚಾಯಾತ್ ತಚ್ಚಾಚಖ್ಯೌ ಪಿತುಸ್ತದಾ ।
ಪಿತ್ರೇ ತು ಸರ್ವಮಾಖ್ಯಾಯ ಡುಂಡುಭಸ್ಯ ವಚೋऽರ್ಥವತ್ ॥೬॥

ಅಪೃಚ್ಛತ್ಪಿತರಂ ಭೂಯಃ ಸೋऽಸ್ತೀಕಚರಿತಂ ಮಹತ್ ।
ಯದ್ ತದಾಖ್ಯಾನಮಾಸ್ತೀಕಂ ಡುಂಡುಭೇನಾಥ ಕೀರ್ತಿತಮ್ ॥೭॥

ಪುನಃ ಮನಸ್ಸಿನ ಸಮಾಧಾನ ಸ್ಥಿತಿಯನ್ನು ತಂದುಕೊಂಡು ಮನೆಗೆ ಬಂದು ತನ್ನ ತಂದೆಗೆ ಎಲ್ಲಾ ವಿಷಯವನ್ನೂ ತಿಳಿಸಿದನು. ತನ್ನ ತಂದೆಗೆ ಆ ಡುಂಡುಭದ ಅರ್ಥಪೂರ್ಣವಾದ ಎಲ್ಲಾ ಮಾತುಗಳನ್ನೂ ತಿಳಿಸಿ ಪುನಃ ಡುಂಡುಭನು ಉಲ್ಲೇಖಮಾಡಿದ ಆ ದೊಡ್ಡದಾದ ಆಸ್ತೀಕಚರಿತ್ರೆಯನ್ನು ಹೇಳುವಂತೆ ತಂದೆಯನ್ನು ಕೇಳಿದನು.

ತತ್ ಕೀರ್ತ್ಯಮಾನಂ ಭಗವನ್ ಶ್ರೋತುಮರ್ಹಸಿ ತತ್ತ್ವತಃ।
ಪಿತಾ ಚಾಸ್ಯ ತದಾಖ್ಯಾನಂ ಪೃಷ್ಟಃ ಸರ್ವಂ ನ್ಯವೇದಯತ್ ॥೮॥

ಪೂಜ್ಯರಾದ ಶೌನಕರೇ, ನಾನು ಹೇಳುವ ಆ ಕಥೆಯನ್ನು ನೀವು ಯಥಾರ್ಥವಾಗಿ ಕೇಳಿ. ರುರುವಿಗಾದರೋ ಅವನ ತಂದೆಯು ಪ್ರಶ್ನಿಸಲ್ಪಟ್ಟವನಾಗಿ ಆ ಕಥೆಯನ್ನು ಸಮಗ್ರವಾಗಿ ನಿರೂಪಿಸಿದನು.

॥ ಇತಿ ಶ್ರೀಮನ್ಮಹಾಭಾರತೇ ಶತಸಹಸ್ರಿಕಾಯಾಂಸಂಹಿತಾಯಾಮಾದಿಪರ್ವಣಿ
ದ್ವಾದಶೋऽಧ್ಯಾಯಃ ॥
॥ ಇತಿ ಪೌಲೋಮಪರ್ವಣಿ ನವಮೋऽಧ್ಯಾಯಃ ॥

॥ ಪೌಲೋಮಪರ್ವ ಸಮಾಪ್ತಮ್ ॥

ಇಲ್ಲಿಗೆ ಮಹಾಭಾರತದ ಆದಿಪರ್ವದಲ್ಲಿ ಹನ್ನೆರಡನೆಯ ಅಧ್ಯಾಯ ಮುಗಿಯಿತು.

ಇಲ್ಲಿಗೆ ಪೌಲೋಮಪರ್ವವು ಮುಗಿಯಿತು.

★★★★★

೫. ಆಸ್ತೀಕಪರ್ವ

ಹದಿಮೂರನೆಯ ಅಧ್ಯಾಯ

(ಆಸ್ತೀಕನು ಸರ್ಪಗಳನ್ನು ರಕ್ಷಿಸಿದ ಬಗ್ಗೆ ತಿಳಿಯಲು ಶೌನಕನ ಪ್ರಶ್ನೆ. ಜರತ್ಕಾರುವಿನ ವಿವಾಹ ಪ್ರಯತ್ನ. ವಾಸುಕಿಯ ತಂಗಿಯ ಜೊತೆಯಲ್ಲಿ ವಿವಾಹ. ಕದ್ರುವಿನಿಂದ ತನ್ನ ಮಕ್ಕಳಾದ ಸರ್ಪಗಳಿಗೆ ಶಾಪ. ಶಾಪವಿಮೋಚನೆಗಾಗಿ ಆಸ್ತೀಕನ ಜನನ.)

ಶೌನಕಃ

ಕಿಮರ್ಥಂ ಮುನಿಶಾರ್ದೂಲ ಸ ರಾಜಾ ಜನಮೇಜಯಃ ।
ಸರ್ಪಸತ್ರೇಣ ಸರ್ಪಾಣಾಂ ಗಮಿತೋಽಂತಂ ವದಸ್ವ ಮೇ ॥೧॥

ಎಲೈ ಮುನಿಶಾರ್ದೂಲನೇ, ಆ ಜನಮೇಜಯರಾಜನು ಏಕೆ ಸರ್ಪಸತ್ರವನ್ನು ಮಾಡಿ ಸರ್ಪಗಳನ್ನು ನಾಶಮಾಡಿದನು ಎಂದು ನನಗೆ ಹೇಳು.

ಆಸ್ತೀಕಶ್ಚ ದ್ವಿಜಶ್ರೇಷ್ಠಃ ಕಿಮರ್ಥಂ ಜಪತಾಂ ವರಃ ।
ಮೋಕ್ಷಯಾಮಾಸ ಭುಜಗಾನ್ ಘೋರಾತ್ ತಸ್ಮಾದ್ಹುತಾಶನಾತ್ ॥೨॥

ದ್ವಿಜಶ್ರೇಷ್ಠನೂ, ಜಪವನ್ನು ಮಾಡುವುದರಲ್ಲಿ ಅಗ್ರಗಣ್ಯನೂ ಆದ ಆಸ್ತೀಕನು ಏಕೆ ಆ ಘೋರವಾದ ಅಗ್ನಿಯಿಂದ ಸರ್ಪಗಳನ್ನು ವಿಮೋಚನೆಗೊಳಿಸಿದನು?

ಕಸ್ಯ ಪುತ್ರಃ ಸ ರಾಜಾಸೀತ್ ಸರ್ಪಸತ್ರಂ ಯ ಆಹರತ್ ।
ಸ ಚ ದ್ವಿಜಾತಿಪ್ರವರಃ ಕಸ್ಯ ಪುತ್ರೋ ವದಸ್ವ ತಮ್ ॥೩॥

ಸರ್ಪಸತ್ರವನ್ನು ಮಾಡಿದ ಆ ರಾಜನು ಯಾರ ಪುತ್ರ ಮತ್ತು ಆ ದ್ವಿಜಶ್ರೇಷ್ಠನೂ ಸಹ ಯಾರ ಪುತ್ರನೆಂದು ನನಗೆ ಹೇಳು.

ಶ್ರೋತುಮಿಚ್ಛಾಮ್ಯಶೇಷೇಣ ಕಥಾಮೇತಾಂ ಮನೋಹರಾಮ್ ।
ಆಸ್ತೀಕಸ್ಯ ಪುರಾಣಸ್ಯ ಬ್ರಾಹ್ಮಣಸ್ಯ ತಪಸ್ವಿನಃ ॥೪॥

ನಾನು ಬ್ರಾಹ್ಮಣನೂ, ತಪಸ್ವಿಯೂ, ಪ್ರಾಚೀನನೂ ಆದ ಈ ಆಸ್ತೀಕನ ಮನೋಹರವಾದ ಈ ಕಥೆಯನ್ನು ಸಮಗ್ರವಾಗಿ ಕೇಳಲು ಬಯಸುತ್ತೇನೆ.

ಸೂತಃ

ಮಹದಾಖ್ಯಾನಮಾಸ್ತೀಕಂ ಯತ್ಕೈತತ್ ಪ್ರೋಚ್ಯತೇ ಬುಧೈಃ ।
ಸರ್ವಮೇತದಶೇಷೇಣ ಶೃಣು ಮೇ ವದತಾಂ ವರ ॥೫॥

ಜ್ಞಾನಿಗಳು ಹೇಳುವ ಈ ಆಸ್ತೀಕ ಕಥೆಯು ಬಹಳ ದೊಡ್ಡದಾದುದು. ಮಾತನಾಡುವವರಲ್ಲಿ ಶ್ರೇಷ್ಠನಾದ ಎಲೈ ಜನಮೇಜಯನೇ, ಆ ಸಮಗ್ರವಾದ ಕಥೆಯನ್ನು ನನ್ನಿಂದ ಕೇಳು

ಇತಿಹಾಸಮಿಮಂ ವೃದ್ಧಾಃ ಪುರಾಣಂ ಪರಿಚಕ್ಷತೇ ।
ಕೃಷ್ಣದ್ವೈಪಾಯನಪ್ರೋಕ್ತಂ ನೈಮಿಶಾರಣ್ಯವಾಸಿಷು ॥೬॥

ಈ ಇತಿಹಾಸವನ್ನು ನೈಮಿಷಾರಣ್ಯವಾಸಿಗಳಿಗೆ ಕೃಷ್ಣದ್ವೈಪಾಯನರು ಹೇಳಿದ ಪುರಾಣವೆಂದು ವೃದ್ಧರು ಕರೆಯುತ್ತಾರೆ.

ಪೂರ್ವಂ ಪ್ರಚೋದಿತಃ ಸೂತಃ ಪಿತಾ ಮೇ ರೋಮಹರ್ಷಣಃ ।
ಶಿಷ್ಯೋ ವ್ಯಾಸಸ್ಯ ಮೇಧಾವೀ ಬ್ರಾಹ್ಮಣೇಷ್ವಿದಮುಕ್ತವಾನ್ ॥೭॥

ನನ್ನ ತಂದೆಯಾದ, ವ್ಯಾಸಶಿಷ್ಯರಾದ, ಮೇಧಾವಿಯಾದ ರೋಮಹರ್ಷಣರು ಹಿಂದೆ ಬ್ರಾಹ್ಮಣರಿಂದ ಕೇಳಲ್ಪಟ್ಟವರಾಗಿ ಈ ಕಥೆಯನ್ನು ಹೇಳಿದರು.

ತಸ್ಮಾದಹಮುಪಶ್ರುತ್ಯ ಪ್ರವಕ್ಷ್ಯಾಮಿ ಯಥಾತಥಮ್ ।
ಇದಮಾಸ್ತೀಕಮಾಖ್ಯಾನಂ ಶುಭಂ ಶೌನಕ ಪೃಚ್ಛತೇ ॥೮॥

ಎಲೈ ಶೌನಕನೇ, ನಾನೂ ಅವರಿಂದ ಕೇಳಿ ಶುಭವಾದ ಈ ಆಸ್ತೀಕನ ಕಥೆಯನ್ನು ಕೇಳಲು ಬಯಸುವ ನಿನಗೆ ಸರಿಯಾಗಿ ಹೇಳುತ್ತೇನೆ.

೫. ಆಸ್ತೀಕಪರ್ವ

ಹದಿಮೂರನೆಯ ಅಧ್ಯಾಯ

(ಆಸ್ತೀಕನು ಸರ್ಪಗಳನ್ನು ರಕ್ಷಿಸಿದ ಬಗ್ಗೆ ತಿಳಿಯಲು ಶೌನಕನ ಪ್ರಶ್ನೆ. ಜರತ್ಕಾರುವಿನ ವಿವಾಹ ಪ್ರಯತ್ನ. ವಾಸುಕಿಯ ತಂಗಿಯ ಜೊತೆಯಲ್ಲಿ ವಿವಾಹ. ಕದ್ರುವಿನಿಂದ ತನ್ನ ಮಕ್ಕಳಾದ ಸರ್ಪಗಳಿಗೆ ಶಾಪ. ಶಾಪವಿಮೋಚನೆಗಾಗಿ ಆಸ್ತೀಕನ ಜನನ.)

ಶೌನಕಃ

ಕಿಮರ್ಥಂ ಮುನಿಶಾರ್ದೂಲ ಸ ರಾಜಾ ಜನಮೇಜಯಃ ।
ಸರ್ಪಸತ್ರೇಣ ಸರ್ಪಾಣಾಂ ಗಮಿತೋಽಂತಂ ವದಸ್ವ ಮೇ ॥೧॥

ಎಲೈ ಮುನಿಶಾರ್ದೂಲನೇ, ಆ ಜನಮೇಜಯರಾಜನು ಏಕೆ ಸರ್ಪಸತ್ರವನ್ನು ಮಾಡಿ ಸರ್ಪಗಳನ್ನು ನಾಶಮಾಡಿದನು ಎಂದು ನನಗೆ ಹೇಳು.

ಆಸ್ತೀಕಶ್ಚ ದ್ವಿಜಶ್ರೇಷ್ಠಃ ಕಿಮರ್ಥಂ ಜಪತಾಂ ವರಃ ।
ಮೋಕ್ಷಯಾಮಾಸ ಭುಜಗಾನ್ ಘೋರಾತ್ ತಸ್ಮಾದ್ಹುತಾಶನಾತ್ ॥೨॥

ದ್ವಿಜಶ್ರೇಷ್ಠನೂ, ಜಪವನ್ನು ಮಾಡುವುದರಲ್ಲಿ ಅಗ್ರಗಣ್ಯನೂ ಆದ ಆಸ್ತೀಕನು ಏಕೆ ಆ ಘೋರವಾದ ಅಗ್ನಿಯಿಂದ ಸರ್ಪಗಳನ್ನು ವಿಮೋಚನೆಗೊಳಿಸಿದನು?

ಕಸ್ಯ ಪುತ್ರಃ ಸ ರಾಜಾಸೀತ್ ಸರ್ಪಸತ್ರಂ ಯ ಆಹರತ್ ।
ಸ ಚ ದ್ವಿಜಾತಿಪ್ರವರಃ ಕಸ್ಯ ಪುತ್ರೋ ವದಸ್ವ ತಮ್ ॥೩॥

ಸರ್ಪಸತ್ರವನ್ನು ಮಾಡಿದ ಆ ರಾಜನು ಯಾರ ಪುತ್ರ ಮತ್ತು ಆ ದ್ವಿಜಶ್ರೇಷ್ಠನೂ ಸಹ ಯಾರ ಪುತ್ರನೆಂದು ನನಗೆ ಹೇಳು.

ಶ್ರೋತುಮಿಚ್ಛಾಮ್ಯಶೇಷೇಣ ಕಥಾಮೇತಾಂ ಮನೋಹರಾಮ್ ।
ಆಸ್ತೀಕಸ್ಯ ಪುರಾಣಸ್ಯ ಬ್ರಾಹ್ಮಣಸ್ಯ ತಪಸ್ವಿನಃ ॥೪॥

ನಾನು ಬ್ರಾಹ್ಮಣನೂ, ತಪಸ್ವಿಯೂ, ಪ್ರಾಚೀನನೂ ಆದ ಈ ಆಸ್ತೀಕನ ಮನೋಹರವಾದ ಈ ಕಥೆಯನ್ನು ಸಮಗ್ರವಾಗಿ ಕೇಳಲು ಬಯಸುತ್ತೇನೆ.

ಸೂತಃ

ಮಹದಾಖ್ಯಾನಮಾಸ್ತೀಕಂ ಯತ್ಕೃತತ್ ಪ್ರೋಚ್ಯತೇ ಬುಧೈಃ ।
ಸರ್ವಮೇತದಶೇಷೇಣ ಶೃಣು ಮೇ ವದತಾಂ ವರ ॥೫॥

ಜ್ಞಾನಿಗಳು ಹೇಳುವ ಈ ಆಸ್ತೀಕ ಕಥೆಯು ಬಹಳ ದೊಡ್ಡದಾದುದು. ಮಾತನಾಡುವವರಲ್ಲಿ ಶ್ರೇಷ್ಠನಾದ ಎಲೈ ಜನಮೇಜಯನೇ, ಆ ಸಮಗ್ರವಾದ ಕಥೆಯನ್ನು ನನ್ನಿಂದ ಕೇಳು

ಇತಿಹಾಸಮಿಮಂ ವೃದ್ಧಾಃ ಪುರಾಣಂ ಪರಿಚಕ್ಷತೇ ।
ಕೃಷ್ಣದ್ವೈಪಾಯನಪ್ರೋಕ್ತಂ ನೈಮಿಶಾರಣ್ಯವಾಸಿಷು ॥೬॥

ಈ ಇತಿಹಾಸವನ್ನು ನೈಮಿಷಾರಣ್ಯವಾಸಿಗಳಿಗೆ ಕೃಷ್ಣದ್ವೈಪಾಯನರು ಹೇಳಿದ ಪುರಾಣವೆಂದು ವೃದ್ಧರು ಕರೆಯುತ್ತಾರೆ.

ಪೂರ್ವಂ ಪ್ರಚೋದಿತಃ ಸೂತಃ ಪಿತಾ ಮೇ ರೋಮಹರ್ಷಣಃ ।
ಶಿಷ್ಯೋ ವ್ಯಾಸಸ್ಯ ಮೇಧಾವೀ ಬ್ರಾಹ್ಮಣೇಷ್ವಿದಮುಕ್ತವಾನ್ ॥೭॥

ನನ್ನ ತಂದೆಯಾದ, ವ್ಯಾಸಶಿಷ್ಯರಾದ, ಮೇಧಾವಿಯಾದ ರೋಮಹರ್ಷಣರು ಹಿಂದೆ ಬ್ರಾಹ್ಮಣರಿಂದ ಕೇಳಲ್ಪಟ್ಟವರಾಗಿ ಈ ಕಥೆಯನ್ನು ಹೇಳಿದರು.

ತಸ್ಮಾದಹಮುಪಶ್ರುತ್ಯ ಪ್ರವಕ್ಷ್ಯಾಮಿ ಯಥಾತಥಮ್ ।
ಇದಮಾಸ್ತೀಕಮಾಖ್ಯಾನಂ ಶುಭಂ ಶೌನಕ ಪೃಚ್ಛತೇ ॥೮॥

ಎಲೈ ಶೌನಕನೇ, ನಾನೂ ಅವರಿಂದ ಕೇಳಿ ಶುಭವಾದ ಈ ಆಸ್ತೀಕನ ಕಥೆಯನ್ನು ಕೇಳಲು ಬಯಸುವ ನಿನಗೆ ಸರಿಯಾಗಿ ಹೇಳುತ್ತೇನೆ.

ಕಥಯಿಷ್ಯಾಮ್ಯಶೇಷೇಣ ಸರ್ವಪಾಪಪ್ರಣಾಶನಮ್ ।
ಆಸ್ತೀಕಸ್ಯ ಪಿತಾ ಹ್ಯಾಸೀತ್ ಪ್ರಜಾಪತಿಸಮಃ ಪ್ರಭುಃ ॥೯॥

ಸರ್ವಪಾಪಪರಿಹಾರಕವಾದ ಈ ಕಥೆಯನ್ನು ಸಮಗ್ರವಾಗಿ ಹೇಳುವೆನು. ಆಸ್ತೀಕನ ತಂದೆಯು ಪ್ರಜಾಪತಿಗೆ ಸಮನಾದ, ಸಮರ್ಥನಾದವನು ಒಬ್ಬನಿದ್ದನು.

ಬ್ರಹ್ಮಚಾರೀ ಯತಾಹಾರಸ್ತಪಸ್ಯುಗ್ರೇ ರತಃ ಸದಾ ।
ಜರತ್ಕಾರುರಿತಿ ಖ್ಯಾತ ಊರ್ಧ್ವರೇತಾ ಮಹಾನೃಷಿಃ ॥೧೦॥

ಅವನು ಬ್ರಹ್ಮಚಾರಿ, ನಿಯತವಾದ ಆಹಾರವುಳ್ಳವನೂ, ಯಾವಾಗಲೂ ಉಗ್ರವಾದ ತಪಸ್ಸಿನಲ್ಲಿ ರತನಾದವನೂ, ಊರ್ಧ್ವರೇತಸ್ಕನೂ ಆದ ಮಹಾಋಷಿ. ಅವನು ಜರತ್ಕಾರು ಎಂಬ ಹೆಸರಿನಿಂದ ಪ್ರಖ್ಯಾತನಾಗಿದ್ದನು.

ಯಾಯಾವರಾಣಾಂ ವಿಪ್ರಾಣಾಂ ಧರ್ಮಜ್ಞಃ ಸಂಶಿತವ್ರತಃ ॥೧೧॥

ಶ್ರೇಷ್ಠವಾದ ವ್ರತಧಾರಿಯೂ, ಧರ್ಮಜ್ಞನೂ ಆದ ಅವನು ಯಾಯಾವರ ಬ್ರಾಹ್ಮಣರ ಧರ್ಮಗಳನ್ನು ತಿಳಿದವನಾಗಿದ್ದನು.

ಅಟಮಾನಃ ಕದಾಚಿತ್ ಸ ಸ್ವಾಂ ದದರ್ಶ ಪಿತಾಮಹಾನ್ ।
ಲಂಬಮಾನಾನ್ ಮಹಾಗರ್ತೇ ಪಾದೈರೂರ್ಧ್ವೈರವಾಙ್ಮುಖಾನ್
ತಾನಬ್ರವೀತ್ ಸ ದೃಷ್ಟ್ವೈವ ಜರತ್ಕಾರುಃ ಪಿತಾಮಹಾನ್ ॥೧೨॥

ಅವನು ಒಮ್ಮೆ ಸಂಚಾರಮಾಡುತ್ತಾ ಒಂದು ದೊಡ್ಡ ಹಳ್ಳದಲ್ಲಿ ತಲೆಕೆಳಗಾಗಿ ಜೋತುಬಿದ್ದಿದ್ದ ತನ್ನ ಪಿತಾಮಹರನ್ನು ನೋಡಿದನು. ಅವರನ್ನು ನೋಡಿದ ಕೂಡಲೇ, ಜರತ್ಕಾರುವು ಅವರನ್ನು ಕುರಿತು ಪ್ರಶ್ನಿಸಿದನು.

ಜರತ್ಕಾರುಃ

ಕೇ ವೈ ಭವಂತೋ ಲಂಬಂತೇ ಗರ್ತೇಽಸ್ಮಿನ್ ವೈ ಹ್ಯಧೋಮುಖಾಃ ।
ಕಸ್ಯ ವೈ ಪಿತರೋ ಯೂಯಂ ಪರಿಭ್ರಷ್ಟಾಃ ಕುತೋ ದಿವಃ॥೧೩॥

ನೀವು ಯಾರು? ಈ ಹಳ್ಳದಲ್ಲಿ ತಲೆಕೆಳಗಾಗಿ ಜೋತಾಡುತ್ತಿದ್ದೀರಿ. ನೀವು ಯಾರ ಪಿತೃಗಳು? ಏಕೆ ಸ್ವರ್ಗದಿಂದ ಭ್ರಷ್ಟರಾಗಿದ್ದೀರಿ?

ವೀರಣಸ್ತಂಬಕೇ ಲಗ್ನಾಃ ಸರ್ವತಃ ಪರಿಭಕ್ಷಿತೇ ।
ಮೂಷಕೇಣ ನಿಗೂಢೇನ ಗರ್ತೇಽಸ್ಮಿನ್ ನಿತ್ಯವಾಸಿನಾ ॥೧೪॥

ಈ ಹಳ್ಳದಲ್ಲಿ ಅವಿತುಕೊಂಡು ಯಾವಾಗಲೂ ವಾಸಮಾಡುವ ಮೂಷಿಕದಿಂದ ಎಲ್ಲಾ ಕಡೆಯಲ್ಲಿಯೂ ತಿನ್ನಲ್ಪಟ್ಟಿರುವ ಲಾವಂಚಹುಲ್ಲಿನ ಒಂದು ಪೊದೆಯಲ್ಲಿ ನೀವೆಲ್ಲರೂ ಜೋತಾಡುತ್ತಿದ್ದೀರಿ.

ಪಿತರಃ

ಯಾಯಾವರಾ ನಾಮ ವಯಂ ಋಷಯಃ ಸಂಶಿತವ್ರತಾಃ ।
ಸಂತಾನಪ್ರಕ್ಷಯಾದ್ ಬ್ರಹ್ಮನ್ ಅಧೋ ಗಚ್ಛಾಮ ಸಂತತಮ್ ॥೧೫॥

ನಾವು ಯಾಯಾವರ ಎಂಬ ಶ್ರೇಷ್ಠವ್ರತಧಾರಿಗಳಾದ ಋಷಿಗಳು. ಎಲೈ ಬ್ರಾಹ್ಮಣನೇ, ನಮ್ಮ ಸಂತಾನವು ನಾಶವಾದ ಕಾರಣ ಯಾವಾಗಲೂ ಅಧೋಗತಿಗೆ ಹೋಗುತ್ತಿದ್ದೇವೆ.

ಅಸ್ಮಾಕಂ ಸಂತತಿಸ್ತ್ವೇಕೋ ಜರತ್ಕಾರುರಿತಿ ಶ್ರುತಃ ।
ಮಂದಭಾಗ್ಯೋಽಲ್ಪಭಾಗ್ಯಾನಾಂ ತಪ ಏವ ಸಮಾಸ್ಥಿತಃ ॥೧೬॥

ಅಲ್ಪಭಾಗ್ಯರಾದ ನಮ್ಮ ಸಂತತಿಯಲ್ಲಿ ಜರತ್ಕಾರು ಎಂಬ ಒಬ್ಬನೇ ಒಬ್ಬನು ಉಳಿದಿದ್ದಾನೆ. ಅವನೂ ಕೂಡ ಮಂದಭಾಗ್ಯನಾದವನು. ಯಾವಾಗಲೂ ತಪಸ್ಸಿನಲ್ಲಿಯೇ ನಿರತನಾಗಿದ್ದಾನೆ.

ನ ಸ ಪುತ್ರಾನ್ ಜನಯಿತುಂ ದಾರಾನ್ ಮೂಢಶ್ಚಿಕೀರ್ಷತಿ ।
ತೇನ ಲಂಬಾಮಹೇ ಗರ್ತೇ ಸಂತಾನಪ್ರಕ್ಷಯಾದಿಹ ॥೧೭॥

ಅವನೂ ಕೂಡ ಮೌಢ್ಯದಿಂದ ಕೂಡಿದವನಾಗಿ, ವಿವಾಹವನ್ನು ಮಾಡಿಕೊಂಡು ಪುತ್ರನನ್ನು ಪಡೆಯಲು ಇಚ್ಛಿಸುತ್ತಿಲ್ಲ. ಆ ಕಾರಣದಿಂದ ಸಂತಾನನಾಶವಾಗಿ ನಾವು ಈ ಹಳ್ಳದಲ್ಲಿ ಜೋಲಾಡುತ್ತಿದ್ದೇವೆ.

ಅನಾಥಾಸ್ತೇನ ನಾಥೇನ ಯಥಾ ದುಷ್ಕೃತಿನಸ್ತಥಾ ।
ಕಸ್ತ್ವಂ ಬಂಧುರಿವಾಸ್ಮಾಕಮನುಶೋಚಸಿ ಸತ್ತಮ ॥೧೮॥

ಅವನಂತಹ ನಾಥನಿಂದ ಕೂಡಿದ್ದರೂ ಸಹ ನಾವು ಪಾಪವನ್ನು ಮಾಡಿದವರಂತೆ ಅನಾಥರಾಗಿದ್ದೇವೆ. ಎಲೈ ಸಜ್ಜನಶ್ರೇಷ್ಠನೇ, ಬಂಧುವಿನಂತೆ ನಮ್ಮ ಮೇಲೆ ಅನುಕಂಪವನ್ನು ತೋರಿಸುತ್ತಿದ್ದೀಯೆ. ನೀನು ಯಾರು?

ಜ್ಞಾತುಮಿಚ್ಛಾಮಹೇ ಬ್ರಹ್ಮನ್ ಕೋ ಭವಾನಿಹ ತಿಷ್ಠತಿ ।
ಕಿಮರ್ಥಂ ಚೈವ ನಃ ಶೋಚ್ಯಾನ್ ಅನುಶೋಚಿತುಮರ್ಹತಿ ॥೧೯॥

ಎಲೈ ಬ್ರಾಹ್ಮಣನೇ, ನೀನು ಯಾರು ಎಂದು ನಾವು ತಿಳಿಯಲು ಬಯಸುತ್ತೇವೆ. ಏತಕ್ಕೆ ಇಲ್ಲಿ ಇದ್ದೀಯೆ? ಶೋಚನೀಯರಾದ ನಮ್ಮ ಮೇಲೆ ಏಕೆ ಇಷ್ಟು ಅನುಕಂಪವನ್ನು ತೋರಿಸುತ್ತಿದ್ದೀಯೆ?

ಜರತ್ಕಾರುಃ

ಮಮ ಪೂರ್ವೇ ಭವಂತೋ ವೈ ಪಿತರಃ ಸಪಿತಾಮಹಾಃ ।
ಬ್ರೂತ ಕಿಂ ಕರವಾಣ್ಯದ್ಯ ಜರತ್ಕಾರುರಹಂ ಸ್ವಯಮ್ ॥೨೦॥

ನೀವೆಲ್ಲರೂ ನನ್ನ ಪಿತೃಪಿತಾಮಹರು. ನಾನೇ ಜರತ್ಕಾರು. ನಿಮಗೆ ಈಗ ಏನು ಮಾಡಬೇಕೆಂದು ಹೇಳಿ.

ಪಿತರಃ

ಯತಸ್ವ ಯತ್ನವಾಂಸ್ತಾತ ಸಂತಾನಾಯ ಕುಲಸ್ಯ ನಃ ।
ಆತ್ಮನೋಽರ್ಥೇಽಸ್ಮದರ್ಥೇ ಚ ಧರ್ಮ ಇತ್ಯೇವ ವಾ ವಿಭೋ ॥೨೧॥

ಪ್ರೀತಿಪಾತ್ರನೇ, ನೀನು ಸಂತಾನಕ್ಕೋಸ್ಕರವಾಗಿ ಬಹಳ ಪ್ರಯತ್ನವನ್ನು ಮಾಡು. ವಿಭುವೇ, ನಮ್ಮ ಕುಲದ ಸಲುವಾಗಿ ಮತ್ತು ನಮ್ಮ ಸಲುವಾಗಿ ಮತ್ತು ನಿನ್ನ ಸಲುವಾಗಿ, ಅಥವಾ ಧರ್ಮವೆಂದೇ ತಿಳಿದು ಸಂತಾನವನ್ನು ಪಡೆ.

ನ ಹಿ ಧರ್ಮಫಲೈಸ್ತಾತ ನ ತಪೋಭಿಃ ಸುಸಂಚಿತೈಃ ।
ತಾಂ ಗತಿಂ ಪ್ರಾಪ್ನುವಂತೀಹ ಪುತ್ರಿಣೋ ಯಾಂ ವ್ರಜಂತಿ ಹ ॥೨೨॥

ಪ್ರೀತಿಪಾತ್ರನೇ, ಪುತ್ರನಿಂದ ಎಂತಹ ಗತಿಯನ್ನು ಪಡೆಯುತ್ತಾರೆಯೋ ಅಂತಹ ಗತಿಯನ್ನು ಕೂಡಿಟ್ಟ ತಪಸ್ಸಿನಿಂದಾಗಲೀ ಅಥವಾ ಬೇರೆ ಧರ್ಮಫಲಗಳಿಂದಾಗಲೀ ಪಡೆಯುವುದಿಲ್ಲ.

ತದ್ ದಾರಗ್ರಹಣೇ ಯತ್ನಂ ಸಂತತ್ಯರ್ಥೇ ಮನಃ ಕುರು ।
ಪುತ್ರಕ ತ್ವಾಂ ನಿಯೋಕ್ಷ್ಯಾಮ ಏತನ್ನಃ ಪರಮಂ ಹಿತಮ್ ॥೨೩॥

ಆದ್ದರಿಂದ ಸಂತತಿಯ ಸಲುವಾಗಿ ಪತ್ನಿಯನ್ನು ಸಂಪಾದಿಸಲು ನಿರ್ಧರಿಸು. ಪುತ್ರನೇ, ನಾವು ನಿನಗೆ ಆಜ್ಞಾಪಿಸುತ್ತಿದ್ದೇವೆ. ಇದು ನಮಗೆ ಪರಮಹಿತವಾದ ಕಾರ್ಯ.

ಜರತ್ಕಾರುಃ

ನ ದಾರಾನ್ ವೈ ಕರಿಷ್ಯೇಽಹಂ ಇತಿ ಮೇ ಭಾವಿತಂ ಮನಃ ।
ಭವತಾಂ ತು ಹಿತಾರ್ಥಾಯ ಕರಿಷ್ಯೇ ದಾರಸಂಗ್ರಹಮ್ ॥೨೪॥

ನಾನು ವಿವಾಹವನ್ನು ಮಾಡಿಕೊಳ್ಳುವುದಿಲ್ಲ ಎಂದು ಮನಸ್ಸಿನಲ್ಲಿ ನಿಶ್ಚಯಿಸಿದ್ದೆ. ಆದರೆ ನಿಮ್ಮ ಹಿತಕ್ಕಾಗಿ ನಾನು ಪತ್ನಿಯನ್ನು ಸ್ವೀಕರಿಸುತ್ತೇನೆ.

ಸಮಯೇನ ಚ ಕರ್ತಾಽಹಮನೇನ ವಿಧಿಪೂರ್ವಕಂ ।
ಯಥಾವದುಪಲಪ್ಸ್ಯಾಮಿ ಕರಿಷ್ಯೇ ನಾನ್ಯಥಾ ತ್ವಹಮ್ ॥೨೫॥

ನನ್ನ ನಿಯಮಕ್ಕೆ ಅನುಸಾರವಾಗಿ ನಾನು ಒಂದು ಕನ್ಯೆಯನ್ನು ಪಡೆದರೆ, ವಿಧಿ ಪೂರ್ವಕವಾಗಿ ನಾನು ಸ್ವೀಕರಿಸುತ್ತೇನೆ. ಇಲ್ಲದಿದ್ದರೆ, ನಾನು ವಿವಾಹವನ್ನು ಮಾಡಿಕೊಳ್ಳುವುದಿಲ್ಲ.

ಸನಾಮ್ನೀ ಯಾ ಭವಿತ್ರೀ ಮೇ ದಿತ್ಸಿತಾ ಚೈವ ಬಂಧುಭಿಃ ।
ಭೈಕ್ಷವತ್ ತಾಮಹಂ ಕನ್ಯಾಮುಪಯಂಸ್ಯೇ ವಿಧಾನತಃ ॥೨೬॥

ನಾನು ವಿವಾಹವಾಗುವ ಕನ್ಯೆಯು ನನ್ನ ಹೆಸರಿನವಳೇ ಆಗಿರಬೇಕು. ಅವಳ ಬಂಧುಗಳೇ ಅವಳನ್ನು ನನಗೆ ಭಿಕ್ಷೆಯಂತೆ ಕೊಡಬೇಕು. ಹಾಗಿದ್ದರೆ ಮಾತ್ರ ನಾನು ವಿಧಿಪೂರ್ವಕವಾಗಿ ಆ ಕನ್ಯೆಯನ್ನು ವಿವಾಹವಾಗುವೆನು.

ದರಿದ್ರಾಯ ಚ ಮೇ ಕನ್ಯಾಂ ಕೋ ದಾಸ್ಯತಿ ವಿಶೇಷತಃ ।
ಪ್ರತಿಗ್ರಹೀಷ್ಯೇ ಭಿಕ್ಷಾಂ ತು ಯದಿ ಕಶ್ಚಿತ್ ಪ್ರದಾಸ್ಯತಿ ॥೨೭॥

ವಿಶೇಷವಾಗಿ ದರಿದ್ರನಾದ ನನಗೆ ಕನ್ಯೆಯನ್ನು ಕೊಡುವವರು ಯಾರು? ಆದರೂ, ಯಾರಾದರೂ ಭಿಕ್ಷೆಯಂತೆ ನನಗೆ ಕೊಟ್ಟರೆ, ನಾನು ಅವಳನ್ನು ಸ್ವೀಕರಿಸುತ್ತೇನೆ.

ಏವಂ ದಾರಕ್ರಿಯಾಹೇತೋಃ ಪ್ರಯತಿಷ್ಯೇ ಪಿತಾಮಹಾಃ ।
ಅನೇನ ವಿಧಿನಾ ಶಶ್ವತ್ ಕರಿಷ್ಯೇ ನಾಹಮನ್ಯಥಾ ॥೨೮॥

ಎಲೈ ಪಿತಾಮಹರೇ, ಈ ರೀತಿಯಲ್ಲಿ ನಾನು ವಿವಾಹಕ್ಕಾಗಿ ಪ್ರಯತ್ನಪಡುವೆನು. ಇದೇ ನಿಯಮಕ್ಕೆ ಅನುಸಾರವಾಗಿ ನಾನು ಪ್ರಯತ್ನಪಡುವೆನು. ಬೇರೆ ರೀತಿಯಲ್ಲಿ ನಾನು ವಿವಾಹವಾಗುವುದಿಲ್ಲ.

ತತ್ರೋತ್ಪತ್ಸ್ಯತಿ ಚೇಜ್ಜಂತುರ್ಭವತಾಂ ತಾರಣಾಯ ವೈ ।
ಶಾಶ್ವತಂ ಸ್ಥಾನಮಾಸಾದ್ಯ ಮೋದಂತು ಪಿತರೋ ಮಮ ॥೨೯॥

ಅವಳಲ್ಲಿ ನಿಮ್ಮನ್ನು ಕಷ್ಟದಿಂದ ದಾಟಿಸುವುದಕ್ಕೋಸ್ಕರ ಒಬ್ಬ ಪುತ್ರನು ಉತ್ಪನ್ನನಾದರೆ, ನನ್ನ ಪಿತೃಗಳಾದ ನೀವು ಶಾಶ್ವತವಾದ ಲೋಕವನ್ನು ಹೊಂದಿ ಸಂತೋಷದಿಂದ ಇರುವವರಾಗಿ.

ಸೂತಃ

ತತೋ ನಿವೇಶಾಯ ತದಾ ಸ ವಿಪ್ರಃ ಸಂಶಿತವ್ರತಃ ।
ಮಹೀಂ ಚಚಾರ ದಾರಾರ್ಥೀ ನ ಚ ದಾರಾನವಿಂದತ ॥೩೦॥

ಅನಂತರ ಮದುವೆ ಮಾಡಿಕೊಳ್ಳುವ ಸಲುವಾಗಿ ಕನ್ಯೆಯನ್ನು ಬಯಸಿ, ಆ ಶ್ರೇಷ್ಠವ್ರತಧಾರಿಯಾದ ಬ್ರಾಹ್ಮಣನು ಭೂಮಿಯನ್ನೆಲ್ಲಾ ಸಂಚರಿಸಿದನು. ಆದರೂ ಕನ್ಯೆಯು ದೊರೆಯಲಿಲ್ಲ.

ಸ ಕದಾಚಿದ್ ವನಂ ಗತ್ವಾ ವಿಪ್ರಃ ಪಿತೃವಚಃ ಸ್ಮರನ್ ।
ಚುಕ್ರೋಶ ಕನ್ಯಾಭಿಕ್ಷಾರ್ಥೀ ತಿಸ್ರೋ ವಾಚಃ ಶನೈಃ ಶನೈಃ ॥೩೧॥

ಅವನು ಒಮ್ಮೆ ಕಾಡಿಗೆ ಹೋಗಿ ಪಿತೃಗಳ ವಚನವನ್ನು ಸ್ಮರಿಸಿಕೊಂಡು, ಕನ್ಯಾಭಿಕ್ಷಾರ್ಥಿಯಾಗಿ ಮೂರು ಬಾರಿ ನಿಧಾನವಾಗಿ (ಕನ್ಯಾಂ ದೇಹಿ ಎಂದು) ಕಿರುಚಿದನು.

ತಾಂ ವಾಸುಕಿಃ ಪ್ರತ್ಯಗೃಹ್ಣಾದ್ ಉದ್ಯಮ್ಯ ಭಗಿನೀಂ ತದಾ ।
ನ ಚ ತಾಂ ಪ್ರತಿಜಗ್ರಾಹ ನ ಸನಾಮ್ನೀತಿ ಚಿಂತಯನ್ ॥೩೨॥

ಆಗ ವಾಸುಕಿಯು ತನ್ನ ತಂಗಿಯನ್ನು ಕರೆದುಕೊಂಡು ಬಂದು ಅವನಿಗೆ ಸಮರ್ಪಿಸಿದನು. ಆಗ ಜರತ್ಕಾರುವು ಅವಳು ತನ್ನ ಹೆಸರಿನವಳಲ್ಲ ಎಂದು ತಿಳಿದು ಅವಳನ್ನು ಸ್ವೀಕರಿಸಲಿಲ್ಲ.

ಸನಾಮ್ನೀಮುದ್ಯತಾಂ ಭಾರ್ಯಾಂ ಗೃಹ್ಣೀಯಾಮಿತಿ ತಸ್ಯ ಹಿ ।
ಮನೋ ನಿವಿಷ್ಟಮಭವಜ್ಜರತ್ಕಾರೋರ್ಮಹಾತ್ಮನಃ ॥೩೩॥

ಕನ್ಯೆಯು ನನ್ನ ಹೆಸರಿನವಳೇ ಆದರೆ ಮಾತ್ರ ಅವಳನ್ನು ಸ್ವೀಕರಿಸುತ್ತೇನೆ ಎಂಬುದು ಮಹಾತ್ಮನಾದ ಜರತ್ಕಾರುವಿನ ದೃಢವಾದ ಸಂಕಲ್ಪವಾಗಿದ್ದಿತು.

ತಮುವಾಚ ಮಹಾಪ್ರಾಜ್ಞೋ ಜರತ್ಕಾರುರ್ಮಹಾತಪಾಃ ।
ಕಿಂನಾಮ್ನೀ ಭಗಿನೀಯಂ ತೇ ಬ್ರೂಹಿ ಸತ್ಯಂ ಭುಜಂಗಮ ॥೩೪॥

ಮಹಾಪ್ರಾಜ್ಞನೂ, ಮಹಾತಪಸ್ವಿಯೂ, ಆದ ಜರತ್ಕಾರುವು ವಾಸುಕಿಯನ್ನು ಕುರಿತು ಎಲೈ ಸರ್ಪನೇ, ನಿನ್ನ ತಂಗಿಯ ಹೆಸರೇನು? ಸತ್ಯವಾಗಿ ಹೇಳು ಎಂದು ಕೇಳಿದನು.

ವಾಸುಕಿಃ

ಜರತ್ಕಾರೋ ಜರತ್ಕಾರುಃ ಸ್ವಸೇಯಮನುಜಾ ಮಮ ।
ಪ್ರತಿಗೃಹೀಷ್ವ ಭದ್ರಂ ತೇ ಮಯಾ ದತ್ತಾಂ ಸುಮಧ್ಯಮಾಮ್ ॥೩೫॥

ಎಲೈ ಜರತ್ಕಾರುವೇ, ಈ ನನ್ನ ತಂಗಿಯ ಹೆಸರು ಜರತ್ಕಾರು ಎಂದು. ನಿನಗೆ ಮಂಗಳವಾಗಲಿ. ನಾನು ಕೊಡುತ್ತಿರುವ ಈ ಸುಂದರಿಯನ್ನು ಸ್ವೀಕರಿಸು.

ತ್ವದರ್ಥಂ ರಕ್ಷಿತಾ ಪೂರ್ವಂ ಪ್ರತೀಚ್ಛೇಮಾಂ ದ್ವಿಜೋತ್ತಮ ।
ಏವಮುಕ್ತ್ವಾ ತತಃ ಪ್ರಾದಾದ್ ಭಾರ್ಯಾರ್ಥೇ ವರವರ್ಣಿನೀಮ್॥

ಎಲೈ ದ್ವಿಜಶ್ರೇಷ್ಠನೇ, ನಿನ್ನ ಸಲುವಾಗಿ ನಾನು ಇವಳನ್ನು ಇದುವರೆಗೂ ರಕ್ಷಿಸಿಕೊಂಡಿದ್ದೇನೆ. ಇವಳನ್ನು ಸ್ವೀಕರಿಸು ಹೀಗೆ ಹೇಳಿ ಆ ಸುಂದರಿಯನ್ನು ಪತ್ನಿಯಾಗಿ ಜರತ್ಕಾರುವಿಗೆ ದಾನಮಾಡಿದನು.

ಸೂತಃ

ಮಾತ್ರಾ ಹಿ ಭುಜಗಾಃ ಶಪ್ತಾಃ ಪೂರ್ವಂ ಬ್ರಹ್ಮವಿದಾಂ ವರ ।
ಜನಮೇಜಯಸ್ಯ ವೋ ಯಜ್ಞೇ ಧಕ್ಷ್ಯತ್ಯನಿಲಸಾರಥಿಃ ॥೩೭॥

ಎಲೈ ಬ್ರಹ್ಮಜ್ಞಾನಿಗಳಲ್ಲಿ ಶ್ರೇಷ್ಠನಾದ ಶೌನಕನೇ, ಹಿಂದೆ ತಾಯಿಯಾದ ಕದ್ರುದೇವಿಯು ಸರ್ಪಗಳನ್ನು ಕುರಿತು ಜನಮೇಜಯರಾಜನ ಯಜ್ಞದಲ್ಲಿ ನೀವು ಅಗ್ನಿಯಿಂದ ದಗ್ಧರಾಗಿ ನಾಶವನ್ನು ಹೊಂದುವಿರಿ ಎಂದು ಶಾಪವನ್ನು ಕೊಟ್ಟಿದ್ದಳು.

ತಸ್ಯ ಶಾಪಸ್ಯ ಶಾಂತ್ಯರ್ಥಂ ಪ್ರದದೌ ಪನ್ನಗೋತ್ತಮಃ ।
ಸ್ವಸಾರಮೃಷಯೇ ತಸ್ಮೈ ಸುವ್ರತಾಯ ಮಹಾತ್ಮನೇ ॥೩೮॥

ಆ ಶಾಪದ ವಿಮೋಚನೆಗಾಗಿ ಸರ್ಪಶ್ರೇಷ್ಠನಾದ ವಾಸುಕಿಯು ಒಳ್ಳೆಯ ಗುಣಶೀಲಗಳಿಂದ ಯುಕ್ತನಾದ ಮಹಾತ್ಮನಾದ ಆ ಋಷಿಗೆ ತನ್ನ ತಂಗಿಯನ್ನು ಕೊಟ್ಟನು.

ಸ ಚ ತಾಂ ಪ್ರತಿಜಗ್ರಾಹ ವಿಧಿದೃಷ್ಟೇನ ಕರ್ಮಣಾ ।
ಆಸ್ತೀಕೋ ನಾಮ ಪುತ್ರಶ್ಚ ತಸ್ಯಾಂ ಜಜ್ಞೇ ಮಹಾಮನಾಃ ॥೩೯॥

ಜರತ್ಕಾರುವಾದರೋ ವಿಧಿಪೂರ್ವಕವಾದ ಕರ್ಮದಿಂದ ಆ ಕನ್ಯೆಯನ್ನು ಸ್ವೀಕರಿಸಿದನು. ಅವಳಲ್ಲಿ ಅವನಿಗೆ ಧೈರ್ಯಶಾಲಿಯಾದ ಆಸ್ತೀಕ ಎಂಬ ಪುತ್ರನು ಜನಿಸಿದನು.

ತಪಸ್ವೀ ಚ ಮಹಾತ್ಮಾ ಚ ವೇದವೇದಾಂಗಪಾರಗಃ ।
ಸಮಃ ಸರ್ವಸ್ಯ ಲೋಕಸ್ಯ ಪಿತೃಮಾತೃಭಯಾಪಹಃ ॥೪೦॥

ಮಹಾತ್ಮನಾದ ಆಸ್ತೀಕನು ತಪಸ್ವಿಯೂ, ವೇದವೇದಾಂಗಪಾರಗನೂ ಆದನು. ಎಲ್ಲರ ಬಗ್ಗೆಯೂ ಸಮವಾಗಿರುತ್ತಿದ್ದನು (ರಾಗದ್ವೇಷಗಳಿಂದ ರಹಿತನಾಗಿದ್ದನು) ಮತ್ತು ಮಾತಾಪಿತೃಗಳ ಭಯವನ್ನು ನಿವಾರಣೆ ಮಾಡುವವನಾದನು.

ಅಥ ಕಾಲಸ್ಯ ಮಹತಃ ಪಾಂಡವೇಯೋ ನರಾಧಿಪಃ ।
ಆಜಹಾರ ಮಹಾಯಜ್ಞಂ ಸರ್ಪಸತ್ರಮಿತಿ ಶ್ರುತಮ್ ॥೪೧॥

ಅನಂತರ ಎಷ್ಟೋ ಕಾಲವು ಕಳೆದ ಮೇಲೆ ಪಾಂಡವರ ವಂಶದಲ್ಲಿ ಹುಟ್ಟಿದ ಜನಮೇಜಯರಾಜನು ಸರ್ಪಸತ್ರವೆಂಬ ದೊಡ್ಡ ಯಾಗವನ್ನು ಮಾಡಿದನೆಂದು ನಾವು ಕೇಳಿದ್ದೇವೆ.

ತಸ್ಮಿನ್ ಪ್ರವೃತ್ತೇ ಸತ್ರೇ ತು ಸರ್ಪಾಣಾಮಂತಕಾಯ ವೈ ।
ಮೋಚಯಾಮಾಸ ತಂ ಶಾಪಂ ಆಸ್ತೀಕಃ ಸುಮಹಾತಪಾಃ ॥೪೨॥

ಸರ್ಪಗಳ ವಿನಾಶಕ್ಕಾಗಿ ಆ ಯಜ್ಞವು ನಡೆಯುತ್ತಿರಲು, ಮಹಾತಪಸ್ವಿಯಾದ ಆಸ್ತೀಕನು ಅಲ್ಲಿಗೆ ಬಂದು ಸರ್ಪಗಳನ್ನು ಆ ಶಾಪದಿಂದ ವಿಮೋಚನೆಗೊಳಿಸಿದನು.

ನಾಗಾಂಶ್ಚ ಮಾತುಲಾಂಶ್ಚಾಪಿ ತಥಾ ಸಂಬಂಧಿಬಾಂಧವಾನ್।
ಪಿತೄಂಶ್ಚ ತಾರಯಾಮಾಸ ಸಂತತ್ಯಾ ತಪಸಾ ತಥಾ ॥೪೩॥

ತನ್ನ ಸೋದರಮಾವಂದಿರಾದ ನಾಗಗಳನ್ನೂ ಹಾಗೂ ಸಂಬಂಧಿಬಾಂಧವರನ್ನೂ ಮತ್ತು ಪಿತೃಗಳನ್ನೂ ತನ್ನ ತಪಸ್ಸಿನಿಂದಲೂ ಮತ್ತು ಸಂತತಿಯಿಂದಲೂ ದುರವಸ್ಥೆಯಿಂದ ದಾಟಿಸಿದನು.

ವ್ರತೈಶ್ಚ ವಿವಿಧೈರ್ಬ್ರಹ್ಮನ್ ಸ್ವಾಧ್ಯಾಯೈಶ್ಚಾನೃಣೋऽಭವತ್ ।
ದೇವಾಂಶ್ಚ ತರ್ಪಯಾಮಾಸ ಯಜ್ಞೈರ್ವಿವಿಧದಕ್ಷಿಣೈಃ ॥೪೪॥

ಎಲೈ ಬ್ರಾಹ್ಮಣನೇ, ವಿವಿಧವಾದ ವ್ರತಗಳನ್ನು ಆಚರಿಸಿ, ಸ್ವಾಧ್ಯಾಯಗಳನ್ನು ಮಾಡಿ ಋಷಿ ಋಣವನ್ನು ತೀರಿಸಿದನು. ಭೂರಿದಕ್ಷಿಣೆಯುಳ್ಳ ಯಜ್ಞಗಳನ್ನು ಆಚರಿಸಿ, ದೇವತೆಗಳನ್ನು ಸಂತೋಷಪಡಿಸಿ ದೇವ ಋಣವನ್ನು ತೀರಿಸಿದನು.

ಋಷೀಂಶ್ಚ ಬ್ರಹ್ಮಚರ್ಯೇಣ ಸಂತತ್ಯಾ ಚ ಪಿತಾಮಹಾನ್ ।
ಅಪಹೃತ್ಯ ಗುರುಂ ಭಾರಂ ಪಿತೄಣಾಂ ಸಂಶಿತವ್ರತಃ ॥೪೫॥

ಸಂಶಿತವ್ರತನಾದ ಅವನು ತನ್ನ ಬ್ರಹ್ಮಚರ್ಯದಿಂದ ಋಷಿಗಳನ್ನು ಸಂತೋಷಪಡಿಸಿದನು ಮತ್ತು ಸಂತತಿಯನ್ನು ಪಡೆದು ತನ್ನ ಪಿತಾಮಹರ ಮೇಲಿದ್ದ ದೊಡ್ಡ ಸಂಕಟದ ಭಾರವನ್ನು ಪರಿಹರಿಸಿ ಅವರನ್ನೂ ಸಂತೋಷಪಡಿಸಿದನು.

ಜರತ್ಕಾರುರ್ಗತಃ ಸ್ವರ್ಗಂ ಸಹಿತಃ ಸ್ವೈಃ ಪಿತಾಮಹೈಃ ।
ಆಸ್ತೀಕಂ ಚ ಸುತಂ ಪ್ರಾಪ್ಯ ಧರ್ಮಂ ಚಾನುತ್ತಮಂ ಮುನಿಃ ॥೪೬॥

ಜರತ್ಕಾರು ಮುನಿಯು ಆಸ್ತೀಕನೆಂಬ ಪುತ್ರನನ್ನು ಪಡೆದು ಶ್ರೇಷ್ಠವಾದ ಧರ್ಮವನ್ನು ಆಚರಿಸಿ ತನ್ನ ಪಿತಾಮಹರ ಜೊತೆಯಲ್ಲಿ ಸ್ವರ್ಗಕ್ಕೆ ಹೋದನು.

ಜರತ್ಕಾರುಃ ಸುಮಹತಾ ಕಾಲೇನ ಸ್ವರ್ಗಮೇಯಿವಾನ್ ।
ಏತದಾಖ್ಯಾನಮಾಸ್ತೀಕಂ ಯಥಾವತ್ ಕೀರ್ತಿತಂ ಮಯಾ ।
ಪ್ರಬ್ರೂಹಿ ಭೃಗುಶಾರ್ದೂಲ ಕಿಂ ಭೂಯಃ ಕಥ್ಯತಾಮಿತಿ ॥೪೭॥

ಅನೇಕ ವರ್ಷಗಳ ಸಾಧನೆಯ ನಂತರ ಜರತ್ಕಾರುವು ಸ್ವರ್ಗಕ್ಕೆ ಹೋದನು. ಈ ಆಸ್ತೀಕ ಚರಿತ್ರೆಯನ್ನು ನಾನು ನಿನಗೆ ಯಥಾವತ್ತಾಗಿ ಹೇಳಿದ್ದೇನೆ. ಭೃಗುಶಾರ್ದೂಲನೇ, ನಾನು ಪುನಃ ಏನು ಹೇಳಬೇಕೆಂದು ಕೇಳು.

॥ ಇತಿ ಶ್ರೀಮನ್ಮಹಾಭಾರತೇ ಶತಸಹಸ್ರಿಕಾಯಾಂಸಂಹಿತಾಯಾಮಾದಿಪರ್ವಣಿ ತ್ರಯೋದಶೋऽಧ್ಯಾಯಃ ॥

॥ ಇತಿ ಆಸ್ತೀಕಪರ್ವಣಿ ಪ್ರಥಮೋऽಧ್ಯಾಯಃ ॥

ಇಲ್ಲಿಗೆ ಮಹಾಭಾರತದ ಆದಿಪರ್ವದಲ್ಲಿ ಹದಿಮೂರನೆಯ ಅಧ್ಯಾಯ ಮುಗಿಯಿತು.

★★★★★

ಹದಿನಾಲ್ಕನೆಯ ಅಧ್ಯಾಯ

(ಇನ್ನೂ ವಿಸ್ತಾರವಾಗಿ ಆಸ್ತೀಕಚರಿತ್ರೆಯ ಕಥನದ ಉಪಕ್ರಮ. ಕದ್ರುವಿನತೆಯರ ಸ್ಪರ್ಧೆ. ಕದ್ರುವಿನಿಂದ ಸರ್ಪಗಳ ಜನನ. ವಿನತೆಗೆ ಮಗನಾದ ಅರುಣನಿಂದ ಶಾಪಪ್ರಾಪ್ತಿ. ಅರುಣನ ಸೂರ್ಯಸಾರಥ್ಯ ಮತ್ತು ಗರುಡನ ಜನ್ಮ.)

ಶೌನಕಃ

ಸೌಮ್ಯ ಕಥಯ ತತ್ತ್ವೇನ ವಿಸ್ತರೇಣ ಕಥಾಮಿಮಾಮ್ ।
ಆಸ್ತೀಕಸ್ಯ ಮುನೇಃ ಸಾಧೋಃ ಶುಶ್ರೂಷಾ ಪರಮಾ ಹಿ ನಃ ॥೧॥

ಪ್ರೀತಿಪಾತ್ರನೇ, ಈ ಸಾಧುವಾದ ಆಸ್ತೀಕ ಋಷಿಯ ಈ ಕಥೆಯನ್ನು ಇನ್ನೂ ವಿಸ್ತಾರವಾಗಿ ಹೇಳು. ಇದನ್ನು ಕೇಳಲು ನಮಗೆ ಬಹಳವಾದ ಕುತೂಹಲವಿದೆ.

ಮಧುರಂ ಕಥ್ಯತೇ ಸೂತ ಶ್ಲಕ್ಷ್ಣಾಕ್ಷರಪದಸ್ವರಮ್ ।
ಪ್ರೀಯಾಮಹೇ ಭೃಶಂ ತಾತ ಪಿತೇವ ತ್ವಂ ಪ್ರಭಾಷಸೇ ॥೨॥

ಸೂತನೇ, ನೀನು ಮಧುರವಾದ ಅಕ್ಷರ ಮತ್ತು ಸ್ವರಗಳಿಂದ ಕೂಡಿರುವ ಪದಗಳಿಂದ ಈ ಕಥೆಯನ್ನು ಸುಂದರವಾಗಿ ಹೇಳುತ್ತಿದ್ದೀಯೆ. ಪ್ರೀತಿಪಾತ್ರನೇ, ನೀನೂ

ಸಹ ನಿನ್ನ ತಂದೆಯಂತೆಯೇ ಮಾತನಾಡುತ್ತಿದ್ದೀಯೆ. ನಮಗೆ ಬಹಳ ಸಂತೋಷವಾಗಿದೆ.

ಅಸ್ಮಚ್ಛುಶ್ರೂಷಣೇ ನಿತ್ಯಂ ಪಿತಾ ಹಿ ನಿರತಸ್ತವ ।
ಆಚಷ್ಟೇ ತದ್ಯಥಾSSಖ್ಯಾನಂ ಪಿತಾ ತತ್ ತ್ವಂ ತಥಾ ವದ ॥೩॥

ನಿನ್ನ ತಂದೆಯಾದ ರೋಮಹರ್ಷಣರೂ ಸಹ ಯಾವಾಗಲೂ ನಮ್ಮ ಶುಶ್ರೂಷೆಯಲ್ಲಿ ನಿರತರಾಗಿದ್ದರು. ನಿನ್ನ ತಂದೆಯು ನಿನಗೆ ಈ ಕಥೆಯನ್ನು ಹೇಗೆ ಹೇಳಿದ್ದರೋ ಹಾಗೆಯೇ ನಮಗೂ ಹೇಳು.

ಸೂತಃ

ಆಯುಷ್ಮನ್ನಿದಮಾಖ್ಯಾನಮಾಸ್ತೀಕಂ ಕಥಯಾಮಿ ತೇ ।
ಯಥಾಶ್ರುತಂ ಕಥಯತಃ ಸಕಾಶಾಚ್ಚ ಪಿತುರ್ಮಯಾ ॥೪॥

ಆಯುಷ್ಮಂತನೇ, ನಾನು ಈ ಆಸ್ತೀಕನ ಕಥೆಯನ್ನು ನನ್ನ ತಂದೆಯು ಹೇಳುವಾಗ ಅವನಿಂದ ಹೇಗೆ ಕೇಳಿದ್ದೆನೋ ಅದರಂತೆಯೇ ಹೇಳುತ್ತೇನೆ.

ಪುರಾ ದೇವಯುಗೇ ಬ್ರಹ್ಮನ್ ಪ್ರಜಾಪತಿಸುತೇ ಶುಭೇ ।
ಆಸ್ತಾಂ ಭಗಿನ್ಯೌ ರೂಪೇಣ ಸಮುಪೇತೇSದ್ಭುತೇ ತದಾ ॥೫॥

ಎಲೈ ಬ್ರಾಹ್ಮಣನೇ, ಹಿಂದೆ ಕೃತಯುಗದಲ್ಲಿ ದಕ್ಷಪ್ರಜಾಪತಿಯ ಇಬ್ಬರು ಹೆಣ್ಣುಮಕ್ಕಳಾದ ಕದ್ರು ಮತ್ತು ವಿನತೆಯರು ಅದ್ಭುತವಾದ ರೂಪಸಂಪತ್ತಿನಿಂದ ಕೂಡಿದವರಾಗಿ ಸಹೋದರಿಯರಾಗಿದ್ದರು.

ತೇ ಭಾರ್ಯೇ ಕಾಶ್ಯಪಸ್ಯಾಸ್ತಾಂ ಕದ್ರೂಶ್ಚ ವಿನತಾ ತಥಾ ।
ಪ್ರಾದಾತ್ ತಾಭ್ಯಾಂ ವರಂ ಪ್ರೀತಃ ಪ್ರಜಾಪತಿಸಮಃ ಪತಿಃ ।
ಕಾಶ್ಯಪೋ ಧರ್ಮಪತ್ನೀಭ್ಯಾಂ ಮುದಾ ಪರಮಯಾ ಯುತಃ ॥೬॥

ಆ ಕದ್ರು ಮತ್ತು ವಿನತೆಯರು ಕಾಶ್ಯಪರ ಪತ್ನಿಯರಾಗಿದ್ದರು. ಪ್ರಜಾಪತಿಗೆ ಸಮಾನವಾದ ಪ್ರಭಾವವುಳ್ಳ ಕಾಶ್ಯಪರು ತಮ್ಮ ಧರ್ಮಪತ್ನಿಯರಾದ ಅವರಿಬ್ಬರಿಗೆ ಪರಮ ಸಂತೋಷದಿಂದ ಕೂಡಿದವರಾಗಿ ವರವನ್ನು ನೀಡಿದರು.

ವರಾತಿಸರ್ಗಂ ಶ್ರುತ್ವೈವ ಕಾಶ್ಯಪಾದುತ್ತಮಂ ಚ ತೇ ।
ಹರ್ಷಾದಪ್ರತಿಮಾಂ ಪ್ರೀತಿಂ ಪ್ರಾಪತುಃ ಸ್ಮ ವರಸ್ತ್ರಿಯೌ ।
ವವ್ರೇ ಕದ್ರೂಃ ಸುತಾನ್ ನಾಗಾನ್ ಸಹಸ್ರಂ ತುಲ್ಯತೇಜಸಃ ॥೭॥

ಕಾಶ್ಯಪರು ಶ್ರೇಷ್ಠವಾದ ವರವನ್ನು ಕೊಡುವರೆಂದು ಕೇಳಿದ ಕೂಡಲೇ ಆ ಇಬ್ಬರು ಶ್ರೇಷ್ಠವನಿತೆಯರು ಅತುಲವಾದ ಸಂತೋಷವನ್ನು ಪಡೆದರು. ಕದ್ರುವು ಸಮಾನವಾದ ಪರಾಕ್ರಮವುಳ್ಳ ಸಹಸ್ರನಾಗಗಳನ್ನು ಮಕ್ಕಳನ್ನಾಗಿ ವರಿಸಿದಳು.

ದ್ವೌ ಪುತ್ರೌ ವಿನತಾ ವವ್ರೇ ಕದ್ರೂಪುತ್ರಾಧಿಕೌ ಬಲೇ ।
ಓಜಸಾ ತೇಜಸಾ ಚೈವ ವಿಕ್ರಮೇಣಾಧಿಕೌ ಸುತೌ ॥೮॥

ವಿನತೆಯಾದರೋ ಪರಾಕ್ರಮದಿಂದಲೂ, ಶಕ್ತಿಯಿಂದಲೂ ಮತ್ತು ತೇಜಸ್ಸಿನಿಂದಲೂ ಕದ್ರುಪುತ್ರರಿಗಿಂತ ಅಧಿಕವಾದ ಬಲವುಳ್ಳ ಇಬ್ಬರು ಮಕ್ಕಳನ್ನು ಬೇಡಿದಳು.

ತಸ್ಯೈ ಭರ್ತಾ ವರಂ ಪ್ರಾದಾದ್ ಈದೃಶೌ ತೇ ಭವಿಷ್ಯತಃ ।
ಏವಮಸ್ತ್ವಿತಿ ತಂ ಚಾಹ ಕಾಶ್ಯಪಂ ವಿನತಾ ತದಾ ॥೯॥

ಕಾಶ್ಯಪರು ವಿನತೆಯನ್ನು ಕುರಿತು ನಿನಗೆ ಅಂತಹ ಇಬ್ಬರು ಮಕ್ಕಳೇ ಜನಿಸುವರು ಎಂದು ಹೇಳಿದರು. ವಿನತೆಯೂ ಸಹ ಕಾಶ್ಯಪರನ್ನು ಕುರಿತು ಹಾಗೆಯೇ ಆಗಲಿ ಎಂದು ಹೇಳಿದಳು.

ಕೃತಕೃತ್ಯಾ ತು ವಿನತಾ ಲಬ್ಧ್ವಾ ವೀರ್ಯಾತಿಗೌ ಸುತೌ ।
ಕದ್ರೂಶ್ಚ ಲಬ್ಧ್ವಾ ಪುತ್ರಾಣಾಂ ಸಹಸ್ರಂ ತುಲ್ಯತೇಜಸಾಮ್ ॥೧೦॥

ವಿನತೆಯು ಹೆಚ್ಚು ಬಲವೀರ್ಯವನ್ನುಳ್ಳ ಎರಡು ಮಕ್ಕಳ ವರವನ್ನು ಪಡೆದು ತಾನು ಧನ್ಯಳೆಂದು ಭಾವಿಸಿದಳು. ಕದ್ರುವೂ ಸಹ ಸಮಾನಪರಾಕ್ರಮವುಳ್ಳ ಸಹಸ್ರ ಪುತ್ರಪ್ರಾಪ್ತಿಯ ವರವನ್ನು ಪಡೆದು ತಾನೂ ಧನ್ಯಳೆಂದು ಭಾವಿಸಿದಳು.

ಧ್ಯಾಯೇ ಪ್ರಯತ್ನತೋ ಗರ್ಭಾವಿತ್ಯುಕ್ತ್ವಾ ಸ ಮಹಾತಪಾಃ ।
ತೇ ಭಾರ್ಯೇ ವರಸಂಹೃಷ್ಟೇ ಕಾಶ್ಯಪೋ ವನಮಾವಿಶತ್ ॥೧೧॥

ಮಹಾತಪಸ್ವಿಗಳಾದ ಕಾಶ್ಯಪರು ವರದಿಂದ ಸಂತುಷ್ಟರಾದ ಆ ಭಾರ್ಯೆಯರನ್ನು ಕುರಿತು ಎಚ್ಚರಿಕೆಯಿಂದ ಗರ್ಭವನ್ನು ರಕ್ಷಣೆಮಾಡಿ ಎಂದು ಹೇಳಿ ಕಾಡಿಗೆ ಹೊರಟುಹೋದರು.

ಕಾಲೇನ ಮಹತಾ ಕದ್ರೂರಂಡಾನಾಂ ದಶತಃ ಶತಮ್ ।
ಜನಯಾಮಾಸ ವಿಪ್ರೇಂದ್ರ ದ್ವೇ ತ್ವಂಡೇ ವಿನತಾ ತಥಾ ॥೧೨॥

ಎಲೈ ಬ್ರಾಹ್ಮಣಶ್ರೇಷ್ಠನೇ, ಎಷ್ಟೋ ಕಾಲವು ಕಳೆದ ಮೇಲೆ ಕದ್ರುವು ಒಂದು ಸಹಸ್ರ ಅಂಡಗಳನ್ನು (ಮೊಟ್ಟೆಗಳನ್ನು) ಪ್ರಸವಿಸಿದಳು. ವಿನತೆಯೂ ಸಹ ಎರಡು ಅಂಡಗಳನ್ನು ಪ್ರಸವಿಸಿದಳು.

ತತೋಽಪ್ಯಂಡಾನಿ ನಿದಧುಃ ಪ್ರಹೃಷ್ಟಾಃ ಪರಿಚಾರಕಾಃ ।
ಸೋಪಸ್ವೇದೇಷು ಕುಂಡೇಷು ಪಂಚವರ್ಷಶತಾನಿ ಚ ॥೧೩॥

ಆಗ ಸಂತೋಷಗೊಂಡ ಪರಿಚಾರಕರು ಆ ಮೊಟ್ಟೆಗಳನ್ನು ಸ್ವಲ್ಪ ಶಾಖವಿರುವ ಕುಂಡಗಳಲ್ಲಿ ಐದುನೂರು ವರ್ಷಗಳ ಕಾಲ ಇಟ್ಟರು.

ತತಃ ಪಂಚಶತೇ ವರ್ಷೇ ಕದ್ರೂಪುತ್ರಾ ವಿನಿಃಸೃತಾಃ ।
ಅಂಡೇಭ್ಯೋ ವಿನತಾಯಾಸ್ತು ಮಿಥುನಂ ನಾಭ್ಯಪದ್ಯತ ॥೧೪॥

ಐದು ನೂರು ವರ್ಷಗಳು ಕಳೆಯುತ್ತಿರಲು ಕದ್ರುವಿನ ಪುತ್ರರು ಮೊಟ್ಟೆಗಳನ್ನು ಒಡೆದುಕೊಂಡು ಹೊರಗೆ ಬಂದರು. ಆದರೆ, ವಿನತೆಯ ಎರಡು ಮೊಟ್ಟೆಗಳು ಮಾತ್ರ ಒಡೆಯಲಿಲ್ಲ.

ತತಃ ಪುತ್ರಾರ್ಥಿನೀ ದೇವೀ ವ್ರೀಡಿತಾ ಸಾ ತಪಸ್ವಿನೀ ।
ಅಂಡಂ ಬಿಭೇದ ವಿನತಾ ತತ್ರ ಪುತ್ರಮಪಶ್ಯತ ॥೧೫॥

ಆಗ ನಾಚಿಕೆಗೊಂಡ, ತಪಸ್ವಿನಿಯಾದ, ಪುತ್ರರನ್ನು ಬಯಸುವ, ವಿನತಾದೇವಿಯು ಒಂದು ಅಂಡವನ್ನು ಒಡೆದು ಅದರಲ್ಲಿ ಒಬ್ಬ ಮಗನನ್ನು ನೋಡಿದಳು.

ಪೂರ್ವಾರ್ಧಕಾಯಸಂಪನ್ನಮಿತರೇಣಾಪ್ರಕಾಶತಾ ।
ಸ ಪುತ್ರೋ ರೋಷಸಂರಬ್ಧಃ ಶಶಾಪೈನಾಮಿತಿ ಶ್ರುತಿಃ ॥೧೬॥

ತಲೆಯಿಂದ ತೊಡೆಯವರೆಗೆ ಅರ್ಧದೇಹವು ಮಾತ್ರ ಬೆಳೆದಿದ್ದ, ಉಳಿದ ಭಾಗವು ಕಾಣಸದಿರುವ ಪುತ್ರನನ್ನು ನೋಡಿದಳು. ಆ ಪುತ್ರನಾದರೋ ರೋಷದಿಂದ ಕೂಡಿದವನಾಗಿ ತನ್ನ ತಾಯಿಗೆ ಶಾಪವನ್ನು ಕೊಟ್ಟನು ಎಂದು ನಾವು ಕೇಳಿದ್ದೇವೆ.

ಸೋಽಹಮೇವಂಕೃತೋ ಮಾತಸ್ತ್ವಯಾ ಲೋಭಪರೀತಯಾ ।
ಶರೀರೇಣಾಸಮಗ್ರೋಽದ್ಯ ತಸ್ಮಾದ್ ದಾಸೀ ಭವಿಷ್ಯಸಿ ॥೧೭॥

ಎಲೌ ತಾಯಿಯೇ, ಲೋಭದಿಂದ ಕೂಡಿದ ನಿನ್ನಿಂದ ನಾನು ಹೀಗೆ ಪರಿಪೂರ್ಣ ಶರೀರವಿಲ್ಲದವನಾಗಿ ಮಾಡಲ್ಪಟ್ಟಿದ್ದೇನೆ. ಆದ್ದರಿಂದ ನೀನು ದಾಸಿಯಾಗುವಿ.

ಪಂಚ ವರ್ಷಶತಾನ್ಯದ್ಯ ಯವೀಯಾನ್ ವರ್ಧತೇ ಮಮ ।
ಏಷ ಚ ತ್ವಾಂ ಸುತೋ ಮಾತರ್ದಾಸೀತ್ವಾನ್ಮೋಕ್ಷಯಿಷ್ಯತಿ ॥೧೮॥

ನನ್ನ ತಮ್ಮನು ಈ ದಿನದಿಂದ ಇನ್ನೂ ಐದು ನೂರು ವರ್ಷಗಳ ಕಾಲ ಅಂಡದಲ್ಲಿಯೇ ಬೆಳೆಯುತ್ತಾನೆ. ನಿನ್ನ ಮಗನಾದ ಅವನಾದರೋ ನಿನ್ನನ್ನು ದಾಸ್ಯದಿಂದ ವಿಮೋಚನೆಗೊಳಿಸುವನು.

ಯದ್ಯೇನಮಪಿ ಮಾತಸ್ತ್ವಂ ಮಾಮಿವಾಂಡವಿಭೇದನಾಂ ।
ನ ಕರಿಷ್ಯಸ್ಯದೇಹಂ ವಾ ವ್ಯಂಗಂ ವಾಪಿ ತಪಸ್ವಿನಮ್ ॥೧೯॥

ತಾಯಿಯೇ, ನನ್ನನ್ನು ಒಡೆದಂತೆ ನೀನು ಆ ತಪಸ್ವಿಯಾದ ಅವನನ್ನೂ ಸಹ ಮೊಟ್ಟೆಯನ್ನು ಒಡೆದು ಅವಯವಶೂನ್ಯನಾಗಿ ಅಥವಾ ದೇಹಶೂನ್ಯನಾಗಿ ಮಾಡದಿದ್ದರೆ (ಅವನು ದಾಸ್ಯದಿಂದ ಮೋಚನೆಗೊಳಿಸುತ್ತಾನೆ.)

ಪ್ರತಿಪಾಲಯಿತವ್ಯಸ್ತೇ ಜನ್ಮಕಾಲೋಽಸ್ಯ ಧೀರಯಾ ।
ವಿಶಿಷ್ಟಂ ಫಲಮೀಕ್ಷಂತ್ಯಾ ಪಂಚವರ್ಷಶತಾತ್ ಪರಮ್ ॥೨೦॥

ವಿಶಿಷ್ಟವಾದ ಫಲವನ್ನು ಬಯಸುವ ನೀನು ಇನ್ನೂ ಐದು ನೂರು ವರ್ಷಗಳ ಕಾಲ ಧೈರ್ಯವನ್ನು ವಹಿಸಿ. ಅವನ ಜನ್ಮವು ಉಂಟಾಗುವವರೆಗೆ ನಿರೀಕ್ಷೆಯನ್ನು ಮಾಡಬೇಕು.

ಏವಂ ಶಪ್ತ್ವಾ ತತಃ ಪುತ್ರೋ ವಿನತಾಮಂತರಿಕ್ಷಗಃ ।
ಅರುಣೋ ದೃಶ್ಯತೇ ಬ್ರಹ್ಮನ್ ಪ್ರಭಾತಸಮಯೇ ಸದಾ ॥೨೧॥

ಹೀಗೆ ತಾಯಿಯನ್ನು ಶಪಿಸಿ ಆ ಅರುಣನು ಅಂತರಿಕ್ಷಕ್ಕೆ ಹೊರಟುಹೋದನು. ಬ್ರಾಹ್ಮಣನೇ, ಆ ಅರುಣನು ಪ್ರಭಾತ ಸಮಯದಲ್ಲಿ ಈಗಲೂ ಸರ್ವದಾ ಕಾಣಿಸುತ್ತಾನೆ.

ಆದಿತ್ಯರಥಮಧ್ಯಾಸ್ತೇ ಸಾರಥ್ಯಂ ಸಮಕಲ್ಪಯನ್ ।
ಗರುಡೋಽಪಿ ಯಥಾಕಾಲಂ ಜಜ್ಞೇ ಪನ್ನಗಸೂದನಃ ॥೨೨॥

ಅವನು ಸಾರಥ್ಯವನ್ನು ಮಾಡುತ್ತಾ ಆದಿತ್ಯನ ರಥದಲ್ಲಿ ಕುಳಿತಿರುತ್ತಾನೆ. ಸರ್ಪಶತ್ರುವಾದ ಗರುಡನೂ ಸಹ ಯೋಗ್ಯವಾದ ಕಾಲದಲ್ಲಿ (ಐದು ನೂರು ವರ್ಷಗಳ ನಂತರ) ಜನಿಸಿದನು.

ಸ ಜಾತಮಾತ್ರೋ ವಿನತಾಂ ಪರಿತ್ಯಜ್ಯ ಖಮಾವಿಶತ್ ।
ಆದಾಸ್ಯನ್ನಾತ್ಮನೋ ಭೋಜ್ಯಮನ್ನಂ ವಿಹಿತಮಸ್ಯ ಯತ್ ।
ವಿಧಾತ್ರಾ ಭೃಗುಶಾರ್ದೂಲ ಕ್ಷುಧಿತಸ್ಯ ಬುಭುಕ್ಷತಃ ॥೨೩॥

ಎಲೈ ಭೃಗುಶಾರ್ದೂಲನೇ, ಅವನು ಹುಟ್ಟಿದ ಕೂಡಲೇ ಬಹಳ ಹಸಿವೆಯಿಂದ ಕೂಡಿದವನಾಗಿ, ಬ್ರಹ್ಮದೇವರು ಹಸಿದಿರುವ ಅವನಿಗೆ ಕ್ಷುಪ್ತಿ ಮಾಡಿದ್ದ ಆಹಾರವನ್ನು ಸ್ವೀಕರಿಸಲು ಅಂತರಿಕ್ಷಕ್ಕೆ ಹಾರಿದನು.

॥ ಇತಿ ಶ್ರೀಮನ್ಮಹಾಭಾರತೇ ಶತಸಹಸ್ರಿಕಾಯಾಂಸಂಹಿತಾಯಾಮಾದಿಪರ್ವಣಿ
ಚತುರ್ದಶೋಽಧ್ಯಾಯಃ ॥

॥ ಇತಿ ಆಸ್ತೀಕಪರ್ವಣಿ ದ್ವಿತೀಯೋಽಧ್ಯಾಯಃ ॥

ಇಲ್ಲಿಗೆ ಮಹಾಭಾರತದ ಆದಿಪರ್ವದಲ್ಲಿ ಹದಿನಾಲ್ಕನೆಯ ಅಧ್ಯಾಯ ಮುಗಿಯಿತು.

★★★★★

ಹದಿನೈದನೆಯ ಅಧ್ಯಾಯ

(ಕದ್ರುವಿನತೆಯರ ಪಣ. ಅಮೃತವನ್ನು ಪಡೆಯಲು ಕ್ಷೀರಸಮುದ್ರವನ್ನು ಮಥಿಸಲು ದೇವಾಸುರರ ನಿರ್ಧಾರ.)

ಸೂತಃ

ಏತಸ್ಮಿನ್ನೇವ ಕಾಲೇ ತು ಭಗಿನ್ಯೌ ತೇ ತಪೋಧನ ।
ಅಪಶ್ಯತಾಂ ಸಮಾಯಾಂತಂ ಉಚ್ಚೈಃಶ್ರವಸಮಂತಿಕಾತ್ ॥೧॥

ಆ ಸಮಯದಲ್ಲಿ ಆ ಅಕ್ಕತಂಗಿಯರಾದ ಕದ್ರುವಿನತೆಯರು ಸಮೀಪದಲ್ಲಿ ಉಚ್ಚೈಃಶ್ರವಸ್ ಅಶ್ವವು ಬರುತ್ತಿರುವುದನ್ನು ನೋಡಿದರು.

ಯಂ ತು ದೇವಗಣಾಃ ಸರ್ವೇ ಹೃಷ್ಟರೂಪಾ ಹ್ಯಪೂಜಯನ್ ।
ಮಥ್ಯಮಾನೇऽಮೃತೇ ಜಾತಮಶ್ವರತ್ನಮನುತ್ತಮಮ್ ॥೨॥

ಯಾವ ಅಶ್ವಶ್ರೇಷ್ಠವು ಅಮೃತಮಥನವನ್ನು ಮಾಡುವಾಗ ಕ್ಷೀರಸಮುದ್ರದಿಂದ ಉತ್ಪನ್ನವಾಯಿತೋ ಮತ್ತು ಯಾವ ಅಶ್ವವನ್ನು ದೇವತೆಗಳು ಸಂತೋಷದಿಂದ ಪೂಜಿಸಿದರೋ (ಅಂತಹ ಅಶ್ವವನ್ನು ನೋಡಿದರು.)

ಅಮೋಘಬಲಮಶ್ವಾನಾಮುತ್ತಮಂ ಜವವತಾಂ ವರಮ್ ।
ಶ್ರೀಮಂತಮಜರಂ ದಿವ್ಯಂ ಸರ್ವಲಕ್ಷಣಲಕ್ಷಿತಮ್ ॥೩॥

ಅಶ್ವಜಾತಿಯಲ್ಲಿಯೇ ಅತ್ಯಂತ ಉತ್ಕೃಷ್ಟವಾದಂತಹ, ಶ್ರೇಷ್ಠವಾದ ವೇಗವನ್ನು ಹೊಂದಿದಂತಹ, ಸರ್ವಲಕ್ಷಣಭೂಷಿತವಾದಂತಹ, ಕಾಂತಿಯುಕ್ತವಾದ, ಜರಾರಹಿತವಾದ ದಿವ್ಯವಾದ (ಅಶ್ವವನ್ನು ನೋಡಿದರು.)

ಶೌನಕಃ

ಕಥಂ ತದಮೃತಂ ದೇವೈರ್ಮಥಿತಂ ಕ್ವ ಚ ಶಂಸ ಮೇ ।
ಯತ್ರ ಜಜ್ಞೇ ಮಹಾವೀರ್ಯಃ ಸೋऽಶ್ವರಾಜೋ ಮಹಾದ್ಯುತಿಃ ॥೪॥

ಸೂತರೇ, ದೇವತೆಗಳು ಹೇಗೆ ಮತ್ತು ಎಲ್ಲಿ ಅಮೃತವನ್ನು ಮಥನಮಾಡಿದರು? ಎಲ್ಲಿ ಈ ಮಹಾಕಾಂತಿಯುಕ್ತವಾದ ಅಶ್ವಶ್ರೇಷ್ಠವು ಉತ್ಪನ್ನವಾಯಿತೋ, ಅಂತಹ ಅಮೃತಮಥನವು ಎಲ್ಲಿ ಆಯಿತು ಎಂದು ನನಗೆ ಹೇಳಿ.

ಸೂತಃ

ಜ್ವಲಂತಮಚಲಂ ಮೇರುಂ ತೇಜೋರಾಶಿಮನುತ್ತಮಮ್ ।
ಆಕ್ಷಿಪಂತಂ ಪ್ರಭಾಂ ಭಾನೋಃ ಸ್ವಶೃಂಗೈಃ ಕಾಂಚನೋಜ್ಜ್ವಲೈಃ ॥೫॥

ಕಾಂಚನಾಭರಣಂ ದಿವ್ಯಂ ದೇವಗಂಧರ್ವಸೇವಿತಮ್ ।
ಅಪ್ರಮೇಯಮನಾಧೃಷ್ಯಮಧರ್ಮಬಹುಲೈರ್ಜನೈಃ ॥೬॥

ವ್ಯಾಲೈರಾಚರಿತಂ ಘೋರೈರ್ದಿವ್ಯೌಷಧವಿದೀಪಿತಮ್ ।
ನಾಕಮಾವೃತ್ಯ ತಿಷ್ಠಂತಮುಚ್ಛ್ರಾಯೇಣ ಮಹಾಗಿರಿಮ್ ॥೭॥

ಅಗಮ್ಯಂ ಮನಸಾಪ್ಯನ್ಯೈರ್ನದಿವೃಕ್ಷಗಣಾನ್ವಿತಮ್ ।
ನಾನಾಪತಂಗಸಂಘೈಶ್ಚ ನಾದಿತಂ ಸುಮನೋಹರೈಃ ॥೮॥

ತೇಜೋರಾಶಿಯಾದ, ಅತ್ಯಂತ ಶ್ರೇಷ್ಠವಾದ, ಪ್ರಕಾಶಿಸುವ ಮೇರುಪರ್ವತವಿದೆ. ತನ್ನ ಕಾಂಚನಮಯವಾದ ಶೃಂಗಗಳಿಂದ ಅದು ಸೂರ್ಯನ ಪ್ರಭೆಯನ್ನು ಧಿಕ್ಕರಿಸುವಂತೆ ಇದೆ. ಅದು ಸುವರ್ಣಮಯವಾದ ಆಭರಣದಿಂದ ಕಂಗೊಳಿಸುವಂತೆ ಇದ್ದು, ದೇವಗಂಧರ್ವರಿಂದ ಸೇವಿತವಾಗಿದೆ. ಅಧರ್ಮಿಷ್ಠರಾದ ಜನರು ಅದನ್ನು ತಿಳಿಯಲು ಅಥವಾ ಪರಾಭವಗೊಳಿಸಲು ಸಾಧ್ಯವಿಲ್ಲದಂತಹ ದಿವ್ಯಪರ್ವತವು ಅದಾಗಿದೆ. ಅಲ್ಲಿ ಘೋರವಾದ ವ್ಯಾಲಮೃಗಗಳು ಸಂಚರಿಸುತ್ತವೆ. ಶ್ರೇಷ್ಠವಾದ ಔಷಧಿ ವನಸ್ಪತಿಗಳಿವೆ. ಆ ಮಹಾಗಿರಿಯು ತನ್ನ ಔನ್ನತ್ಯದಿಂದ ಸ್ವರ್ಗವನ್ನು ಆವರಿಸಿಕೊಂಡು ನಿಂತಿರುವಂತಿದೆ. ಅದು ನದಿಗಳಿಂದಲೂ, ವೃಕ್ಷಸಮೂಹದಿಂದಲೂ ಕೂಡಿದುದಾಗಿದೆ. ಯಾರೂ ಕೂಡ ಮನಸ್ಸಿನಿಂದಲೂ ಅಲ್ಲಿಗೆ ಹೋಗಲು ಸಾಧ್ಯವಿಲ್ಲ. ಅದು ನಾನಾವಿಧವಾದ ಪಕ್ಷಿಗಳ ಮನೋಹರವಾದ ನಾದದಿಂದ ತುಂಬಿದೆ.

ತಸ್ಯ ಪೃಷ್ಠಂ ಸಮಾರುಹ್ಯ ಬಹುರತ್ನಾಚಿತಂ ದ್ಯುಮತ್ ।
ಅನಂತಕಲ್ಪಮದ್ವಂದ್ವಂ ಸುರಾಃ ಸರ್ವೇ ಮಹೌಜಸಃ ॥೯॥

ತೇ ಮಂತ್ರಯಿತುಮಾರಬ್ಧಾಸ್ತತ್ರಾಸೀನಾ ದಿವೌಕಸಃ ।
ಅಮೃತಾರ್ಥಂ ಸಮಾಗಮ್ಯ ಸರ್ವೇ ಚಂದ್ರಪುರೋಗಮಾಃ ॥೧೦॥

ಮಹಾಬಲಶಾಲಿಗಳಾದ ದೇವತೆಗಳೆಲ್ಲರೂ ಅಸದೃಶವಾದ, ಬಹುರತ್ನಭರಿತವಾದ, ಕಾಂತಿಯುಕ್ತವಾದ, ವಿಶಾಲವಾದ ಆ ಪರ್ವತದ ಪೃಷ್ಠದಲ್ಲಿ ಕುಳಿತು ಮಂತ್ರಾಲೋಚನೆಯನ್ನು ಪ್ರಾರಂಭಿಸಿದರು. ಚಂದ್ರ ಮೊದಲಾದ ಎಲ್ಲಾ ದೇವತೆಗಳು ಅಲ್ಲಿಗೆ ಬಂದು ಕುಳಿತು ಅಮೃತದ ಸಲುವಾಗಿ ಮಂತ್ರಾಲೋಚನೆಯನ್ನು ಮಾಡಿದರು.

ತತ್ರ ನಾರಾಯಣೋ ದೇವೋ ಬ್ರಹ್ಮಾಣಮಿದಮಬ್ರವೀತ್ ।
ಚಿಂತಯತ್ಸು ಸುರೇಷ್ವೇವಂ ಮಂತ್ರಯತ್ಸು ಚ ಸರ್ವಶಃ ॥೧೧॥

ಎಲ್ಲಾ ದೇವತೆಗಳೂ ಈ ರೀತಿ ಮಂತ್ರಾಲೋಚನೆಯನ್ನು ನಡೆಸುತ್ತಿರಲು ನಾರಾಯಣನು ಬ್ರಹ್ಮದೇವರನ್ನು ಕುರಿತು ಈ ಮಾತನ್ನು ಆಡಿದನು.

ದೇವೈರಸುರಸಂಘೈಶ್ಚ ಮಥ್ಯತಾಂ ಕಲಶೋದಧಿಃ ।
ಭವಿಷ್ಯತ್ಯಮೃತಂ ತತ್ರ ಮಥ್ಯಮಾನೇ ಮಹೋದಧೌ ॥೧೨॥

ಸರ್ವೌಷಧೀಃ ಸಮಾವಾಪ್ಯ ಸರ್ವರತ್ನಾನಿ ಚೈವ ಹಿ ।
ಮಂಥಧ್ವಮುದಧಿಂ ದೇವಾ ಲಪ್ಸ್ಯಧ್ವಮಮೃತಂ ತತಃ ॥೧೩॥

ದೇವತೆಗಳೂ ಮತ್ತು ಅಸುರರೂ ಸೇರಿ ಕ್ಷೀರಸಮುದ್ರವನ್ನು ಮಥನಮಾಡಿ. ಆ ಮಹಾಸಮುದ್ರವನ್ನು ಮಥನ ಮಾಡಿದರೆ, ಅಮೃತವು ಉಂಟಾಗುತ್ತದೆ. ಎಲೈ ದೇವತೆಗಳೇ, ಎಲ್ಲಾ ಔಷಧಿಗಳನ್ನೂ ಮತ್ತು ಎಲ್ಲಾ ರತ್ನಗಳನ್ನೂ ತಂದು ಹಾಕಿ ಕ್ಷೀರಸಮುದ್ರವನ್ನು ಮಥನಮಾಡಿ ಅದರಿಂದ ಅಮೃತವನ್ನು ಪಡೆಯಿರಿ.

॥ ಇತಿ ಶ್ರೀಮನ್ಮಹಾಭಾರತೇ ಶತಸಹಸ್ರಿಕಾಯಾಂಸಂಹಿತಾಯಾಮಾದಿಪರ್ವಣಿ ಪಂಚದಶೋऽಧ್ಯಾಯಃ ॥

॥ ಇತಿ ಆಸ್ತೀಕಪರ್ವಣಿ ತೃತೀಯೋऽಧ್ಯಾಯಃ ॥

ಇಲ್ಲಿಗೆ ಮಹಾಭಾರತದ ಆದಿಪರ್ವದಲ್ಲಿ ಹದಿನೈದನೆಯ ಅಧ್ಯಾಯ ಮುಗಿಯಿತು.

★★★★★

ಮಹಾಭಾರತ ತಾತ್ಪರ್ಯ ನಿರ್ಣಯ

ಅಧ್ಯಾಯ-೧೦

ದ್ವಾಪರೇಽಥ ಯುಗೇ ಪ್ರಾಪ್ತೇ ತ್ವಷ್ಟಾವಿಂಶತಿಮೇ ಪುನಃ ।
ಸ್ವಯಂಭು ಶರ್ವ ಶಕ್ರಾದ್ಯಾ ದುಗ್ಧಾಬ್ಧೇಸ್ತೀರಮಾಯಯುಃ ॥ ೧ ॥

ಶ್ರೀವೇದವ್ಯಾಸರು ಹಿಂದೆ ಅನೇಕ ದ್ವಾಪರಗಳಲ್ಲಿ ಅನೇಕ ಬಾರಿ ಅವತರಿಸಿದ್ದರು. ಪುನಃ ಇಪ್ಪತ್ತೆಂಟನೆ ದ್ವಾಪರದಲ್ಲಿಯೂ ಆ ಯುಗದ ಕೊನೆಯಲ್ಲಿ ಅವತರಿಸಲಿ ಎಂದು ಪ್ರಾರ್ಥಿಸುವುದಕ್ಕಾಗಿ ಬ್ರಹ್ಮರುದ್ರ ಇಂದ್ರಾದಿಗಳು ಕ್ಷೀರಸಮುದ್ರತೀರಕ್ಕೆ ಬಂದರು.

ಪಯೋಬ್ಧೇರುತ್ತರಂ ತೀರಮಾಸಾದ್ಯ ವಿಬುಧರ್ಷಭಾಃ ।
ತುಷ್ಟುವುಃ ಪುಂಡರೀಕಾಕ್ಷಮಕ್ಷಯಂ ಪುರುಷೋತ್ತಮಮ್ ॥ ೨ ॥

ಕ್ಷೀರಸಮುದ್ರದ ಉತ್ತರತೀರವನ್ನು ಸೇರಿ ದೇವಶ್ರೇಷ್ಠರು ನಾಶರಹಿತನಾದ ಕಮಲಾಕ್ಷನಾದ ಪುರೋಷತ್ತಮನನ್ನು ಸ್ತುತಿಸಿದರು.

ನಮೋ ನಮೋಽಗಣ್ಯಗುಣೈಕಧಾಮ್ನೇ ಸಮಸ್ತ ವಿಜ್ಞಾನಮರೀಚಿಮಾಲಿನೇ ।
ಅನಾದ್ಯವಿಜ್ಞಾನತಮೋ ನಿಹಂತ್ರೇ ಪರಾಮೃತಾನಂದಪದಪ್ರದಾಯಿನೇ ॥೩॥

ಅಗಣಿತ ಗುಣಗಳಿಗೆ ಮುಖ್ಯಾಶ್ರಯನೂ ಪೂರ್ಣಜ್ಞಾನ ಪ್ರಕಾಶಗಳ ಮಾಲೆ ಉಳ್ಳವನೂ ಅನಾದಿ ಅಜ್ಞಾನದ ಕತ್ತಲನ್ನು ನಾಶಪಡಿಸುವವನೂ ಉತ್ತಮ ಜೀವರಿಗೆ ಶ್ರೇಷ್ಠವಾದ ಶಾಶ್ವತಾನಂದ ರೂಪ ಮೋಕ್ಷ ನೀಡುವವನೂ ಆದ ಹರಿಗೆ ನಮೋನಮಃ.

ಸ್ವದತ್ತಮಾಲಾಭುವಿಪಾತಕೋಪತೋ
ದುರ್ವಾಸಸಃ ಶಾಪತ ಆಶು ಹಿ ಶ್ರಿಯಾ।
ಶಕ್ರೇ ವಿಹೀನೇ ದಿತಿಜೈಃ ಪರಾಜಿತೇ ಪುರಾ
ವಯಂ ತ್ವಾಂ ಶರಣಂ ಗತಾಃ ಸ್ಮಃ ॥೪॥

ತಾನು ದೇವೇಂದ್ರನಿಗೆ ಕೊಟ್ಟ ಹೂಮಾಲೆ ನೆಲದಲ್ಲಿ ಬಿದ್ದುದನ್ನು ಕಂಡು ಕೋಪದಿಂದ ದುರ್ವಾಸರು ಶಪಿಸಿದರು. ಒಡನೆ ಇಂದ್ರ ಐಶ್ವರ್ಯದಿಂದ ಚ್ಯುತನಾಗಿ ದೈತ್ಯರಿಂದ ಪರಾಜಿತನಾದ. ಅದರಿಂದ ನಾವು ನಿನ್ನನ್ನು ಶರಣು ಹೊಂದಿದ್ದೇವೆ.

ತ್ವದಾಜ್ಞಯಾ ಬಲಿನಾ ಸಂದಧಾನಾ
ವರಾದ್ ಗಿರೀಶಸ್ಯ ಪರೈರಚಾಲ್ಯಮ್ ।
ವೃಂದಾರಕಾ ಮಂದರಮೇತ್ಯ
ಬಾಹುಭಿರ್ನಶೇಕುರುದ್ಧರ್ತುಮಿಮೇ ಸಮೇತಾ ॥೫॥

ತದಾ ತ್ವಯಾ ನಿತ್ಯಬಲತ್ವಹೇತುತೋ
ಯೋಽನಂತನಾಮಾ ಗರುಡಸ್ತದಂಸಕೇ।
ಉತ್ಪಾಟ್ಯ ಚೈಕೇನ ಕರೇಣ ಮಂದರೋ
ನಿಧಾಪಿತಸ್ತಂ ಸ ಸಹ ತ್ವಯಾವಹತ್ ॥೬॥

ನಿನ್ನಾಜ್ಞೆಯಂತೆ ಈ ದೇವತೆಗಳು ಬಲಿಚಕ್ರವರ್ತಿಯೊಡನೆ ಸಂಧಿ ಮಾಡಿಕೊಂಡರು. ದೈತ್ಯರಿಂದೊಡಗೂಡಿ. ಶಿವವರದಿಂದ ಬೇರೆಯವರಿಗೆ ಅಲ್ಲಾಡಿಸಲು ಬಾರದ ಮಂದರ ಪರ್ವತವನ್ನು ತಮ್ಮ ಕೈಗಳಿಂದ ಎತ್ತಿಕೊಳ್ಳಲು ಪ್ರಯತ್ನಿಸಿದರು. ಆದರೆ ಶಕ್ತರಾಗಲಿಲ್ಲ. ಆಗ ನಿತ್ಯಶಕ್ತಿಶಾಲಿಯಾದ ನೀನು ಮಂದರವನ್ನು ಒಂದು ಎಡಗೈಯಿಂದಲೆ ಕಿತ್ತು ಅನಂತ ಎಂಬ ಇನ್ನೊಂದು ಹೆಸರುಳ್ಳ ಗರುಡನ ಹೆಗಲ ಮೇಲೆ ಇಟ್ಟೆ. ಅವನು ನಿನ್ನ ಜೊತೆಗೆ ಬೆಟ್ಟವನ್ನೂ ಹೊತ್ತ.

ಪುನಃ ಪರೀಕ್ಷದ್ಬಿರಸೌ ಗಿರಿಃ ಸುರೈಃ
ಸಹಾಸುರೈರುನ್ನಮಿತಸ್ತದಂಸತಃ ।
ವ್ಯಚೂರ್ಣಯತ್ ತಾನಖಿಲಾನ್ ಪುನಶ್ಚ ತೇ
ತ್ವದೀಕ್ಷಯಾ ಪೂರ್ವವದುತ್ಥಿತಾಃ ಪ್ರಭೋ ॥೭॥

ಪುನಃ ದೇವತೆಗಳೂ, ಅಸುರರೂ ಕೂಡಿ ತಮ್ಮ ಶಕ್ತಿಯನ್ನು ಪರೀಕ್ಷಿಸಿಕೊಳ್ಳಲು ಗರುಡನ ಹೆಗಲಮೇಲಿಂದ ಬೆಟ್ಟವನ್ನು ಎತ್ತಿದರು. ಆದರೆ ಬೆಟ್ಟ ಬಿದ್ದು ಅವರೆಲ್ಲರನ್ನೂ ಪುಡಿ ಮಾಡಿತು. ಬಳಿಕ ನಿನ್ನ ದಯೆಯ ನೋಟದಿಂದ ಮೊದಲಿನಂತಾಗಿ ಎದ್ದರು.

ಪುನಶ್ಚ ವಾಮೇನ ಕರೇಣ ವೀಶ್ವರೇ
ನಿಧಾಯ ತಂ ಸ್ಕಂಧಗತಸ್ತ್ವಮಸ್ಯ ।
ಅಗಾಃ ಪಯೋಬ್ಧಿಂ ಸಹಿತಃ ಸುರಾಸುರೈ
ರ್ಮಥ್ನಾ ಚ ತೇನಾಬ್ಧಿಮಥಾಪ್ಯಮಥ್ನಾಃ ॥೮॥

ಪುನಃ ನೀನು ಎಡಗೈಯಿಂದ ಆ ಬೆಟ್ಟವನ್ನೆತ್ತಿ ಗರುಡನ ಮೇಲಿಟ್ಟು ಅವನ ಹೆಗಲ ಮೇಲೇರಿ ದೇವಾಸುರರೊಂದಿಗೆ ಕ್ಷೀರಸಮುದ್ರಕ್ಕೆ ಹೋದೆ. ಆ ಬೆಟ್ಟವನ್ನು ಕಡಗೋಲನ್ನಾಗಿ ಮಾಡಿ ದೇವಾಸುರರೊಂದಿಗೆ ನೀನೂ ಸಮುದ್ರವನ್ನು ಕಡೆದೆ.

ಕೃತಶ್ಚ ಕದ್ರ್ಯಾ ಸ್ತನಯೋಽತ್ರ ವಾಸುಕಿ
ರ್ನೇತ್ರಂ ತ್ವಯಾ ಕಶ್ಯಪಜಃ ಸ ನಾಗರಾಟ್ ।
ಮಮಂಥುರಬ್ಧಿಂ ಸಹಿತಾಸ್ತ್ವಯಾ ಸುರಾಃ
ಸಹಾಸುರಾ` ದಿವ್ಯಪಯೋಫೃತಾಧಿಕಮ್ ॥೯॥

ಕದ್ರೂದೇವಿಯ ಪುತ್ರನಾಗಿ ಕಶ್ಯಪನಿಂದ ಜನಿಸಿದ ನಾಗರಾಜನಾದ ವಾಸುಕಿಯನ್ನು ನೀನು ಈ ಸಮುದ್ರಮಥನದಲ್ಲಿ ನೇಣನ್ನಾಗಿ ಮಾಡಿದೆ. ದೇವಾಸುರರು ನಿನ್ನೊಡನೆ ಸೇರಿ ಬಹಳ ತುಪ್ಪದಿಂದ ಯುಕ್ತವಾದ ಎಂದೂ ಕೆಡದಿರುವ ಹಾಲಿನಿಂದ ತುಂಬಿದ್ದು ಶ್ರೇಷ್ಠವೆನಿಸಿದ ಕ್ಷೀರಸಮುದ್ರವನ್ನು ಕಡೆದರು.

ನೈಚ್ಛಂತ ಪುಚ್ಛಂ ದಿತಿಜಾ ಅಮಂಗಲಂ
ತದಿತ್ಯಥಾಗ್ರಂ ಜಗೃಹುರ್ವಿಷೋಲ್ಬಣಮ್ ।
ಶ್ರಾಂತಾಶ್ಚ ತೇಽತೋ ವಿಬುಧಾಸ್ತು ಪುಚ್ಛಂ
ತ್ವಯಾ ಸಮೇತಾ ಜಗೃಹುಸ್ತ್ವದಾಶ್ರಯಾಃ ॥೧೦॥

ಹಾವಿನ ಬಾಲ ಅಮಂಗಲವೆಂಬ ಭಾವನೆಯಿಂದ ದೈತ್ಯರು ವಾಸುಕಿಯ ಬಾಲ ಹಿಡಿಯಲು ಒಪ್ಪಲಿಲ್ಲ. ವಿಷದಿಂದ ಕ್ರೂರವಾದ ಹೆಡೆಯನ್ನೆ ಹಿಡಿದರು. ಅದರಿಂದ ಆಯಾಸಗೊಂಡರು. ನಿನ್ನನ್ನೆ ಆಶ್ರಯಿಸಿದ ದೇವತೆಗಳು ಮಾತ್ರ ನಿನ್ನೊಂದಿಗೆ ಬಾಲವನ್ನೆ ಹಿಡಿದರು.

ಅಥಾತಿಭಾರಾದವಿಶತ್ ಸುಕಾಂಚನೋ ಗಿರಿಃ ಸ ಪಾತಾಲಮಥ ತ್ವಮೇವ ।
ತಂ ಕಚ್ಛಪಾತ್ಮಾ ತ್ವಭರಃ ಸ್ವಪೃಷ್ಠೇ ಹ್ಯನನ್ಯಧಾರ್ಯಂ ಪುರುಲೀಲಯೈವ ॥

ಬಳಿಕ ಅತಿಯಾದ ಭಾರದಿಂದ ಆ ಚಿನ್ನದ ಬೆಟ್ಟ ಕೆಳಗಿಳಿದು ಪಾತಾಲವನ್ನು ಪ್ರವೇಶಿಸಿತು. ಆಗ ಬೇರೆಯವರಿಗೆ ಹೊರಲು ಅಶಕ್ಯವಾದ ಆ ಬೆಟ್ಟವನ್ನು ನೀನು ಕೂರ್ಮರೂಪನಾಗಿ ಮಹಾಲೀಲೆಯಿಂದಲೆ ನಿನ್ನ ಬೆನ್ನ ಮೇಲೆ ಹೊತ್ತುಕೊಂಡೆ.

ಉಪರ್ಯಧಶ್ಚಾತ್ಮನಿ ನೇತ್ರಗೋತ್ರಯೋ
ಸ್ತ್ವಯಾ ಪರೇಣಾವಿಶತಾ ಸಮೇಧಿತಾಃ ।
ಮಮಂಥುರಬ್ಧಿಂ ತರಸಾ ಮದೋತ್ಕಟಾಃ
ಸುರಾಸುರಾಃ ಕ್ಷೋಭಿತನಕ್ರಚಕ್ರಮ್ ॥೧೨॥

ನೇಣು ಮತ್ತು ಬೆಟ್ಟಗಳ ಒಳಗೂ ಮೇಲೂ ಕೆಳಗೂ ನಮ್ಮೆಲ್ಲರಲ್ಲಿಯೂ ಸರ್ವೋತ್ತಮನಾದ ನೀನು ಪ್ರವೇಶಿಸಿ ಬಲಪಡಿಸಿದ್ದರಿಂದ ದೇವಾಸುರರು ಮದಭರಿತರಾಗಿ ಸಮುದ್ರವನ್ನು ಅದರೊಳಗಿರುವ ಜಲಚರಗಳ ಸಮೂಹ ಕ್ಷೋಭೆಗೊಳ್ಳುವಂತೆ ವೇಗದಿಂದ ಕಡೆದರು.

ಶ್ರಾಂತೇಷು ತೇಷ್ವೇಕ ಉರುಕ್ರಮ ತ್ವಂ
ಸುಧಾರಸಾಪ್ಯೈ ಮುದಿತೋ ಹ್ಯಮಥ್ನಾಃ ।
ತದಾ ಜಗದ್ಧ್ವಂಸಿ ವಿಷಂ ಸಮುತ್ಥಿತಂ
ತ್ವದಾಜ್ಞಯಾ ವಾಯುರಧಾತ್ ಕರೇ ನಿಜೇ ॥೧೩॥

ಅವರೆಲ್ಲರೂ ಆಯಾಸಗೊಂಡಾಗ ಸರ್ವಶಕ್ತನಾದ ನೀನೊಬ್ಬನೆ ಆನಂದದಿಂದ ಅಮೃತರಸಪ್ರಾಪ್ತಿಗಾಗಿ ಕಡೆದೆ. ಆಗ ಜಗತ್ತನ್ನೆ ನಾಶಮಾಡಬಲ್ಲ ವಿಷ ಎದ್ದಿತು. ನಿನ್ನಾಜ್ಞೆಯಿಂದ ವಾಯು ಅದನ್ನು ತನ್ನ ಕೈಯಲ್ಲಿ ಎತ್ತಿಕೊಂಡ.

ಕಲೇಃ ಸ್ವರೂಪಂ ತದತೀವ ದುಷ್ಪಹಂ
ವರಾದ್ ವಿಧಾತುಃ ಸಕಲೈಶ್ಚ ದುಸ್ಪ್ರಶಮ್ ।
ಕರೇ ವಿಮಥ್ಯಾಸ್ತಬಲಂ ವಿಧಾಯ ದದೌ ಸ
ಕಿಂಚಿದ್ ಗಿರಿಶಾಯ ವಾಯುಃ ॥೧೪॥

ಆ ವಿಷ ಕಲಿಯಿಂದ ಅಭಿಮನ್ಯಮಾನವಾಗಿದ್ದು ಬ್ರಹ್ಮನ ವರದಿಂದ ಯಾರಿಗೂ ಅದನ್ನು ತಡೆದುಕೊಳ್ಳಲಾಗುತ್ತಿದ್ದಿಲ್ಲ. ಮುಟ್ಟಲೂ ಸಾಧ್ಯವಿರಲಿಲ್ಲ. ವಾಯು ಅದರಲ್ಲಿ ಸ್ವಲ್ಪವೆ ಕೈಗೆತ್ತಿಕೊಂಡು ಹಿಂಡಿ ನಿರ್ವೀರ್ಯವನ್ನಾಗಿ ಮಾಡಿ ಶಿವನಿಗೆ ಇತ್ತ.

ಸ ತತ್ ಪಿಬತ್ ಕಂಠಗತೇನ ತೇನ ನಿಪಾತಿತೋ ಮೂರ್ಚ್ಛಿತ ಆಶು ರುದ್ರಃ ।
ಹರೇಃ ಕರಸ್ಪರ್ಶಬಲಾತ್‌ನ ಸಂಜ್ಞಾಮವಾಪ ನೀಲೋಽಸ್ಯ ಗಳಸ್ತದಾಸೀತ್ ॥

ಆ ಹಾಲಾಹಲ ವಿಷವನ್ನು ಶಿವ ಕುಡಿದಾಗ ಅದು ಕುತ್ತಿಗೆಯಲ್ಲಿಯೆ ನಿಂತಿತು. ಆದರೆ ತಕ್ಷಣವೆ ಅದು ಅವನನ್ನು ಮೂರ್ಛೆಗೊಳಿಸಿತು. ಹರಿಯ ಕರಸ್ಪರ್ಶ ಬಲದಿಂದ ಆತ ಎಚ್ಚೆತ್ತ. ಆತನ ಕಂಠ ನೀಲವಾಯಿತು.

ಅಥ ತ್ವದಾಜ್ಞಾಂ ಪುರತೋ ನಿಧಾಯ
ನಿಧಾಯ ಪಾತ್ರೇ ತಪನೀಯ ರೂಪೇ ।
ಸ್ವಯಂ ನಿರ್ಮಥ್ಯ ಬಲೋಪಪನ್ನಂ
ಪಪೌ ಸ ವಾಯುಸ್ತದುಚಾಸ್ಯ ಜೀರ್ಣಮ್ ॥೧೬॥

ಬಲಿಕ ನಿನ್ನಾಜ್ಞೆಯನ್ನು ಪುರಸ್ಕರಿಸಿ ವಾಯುದೇವ ಚಿನ್ನದ ಬಟ್ಟಲಲ್ಲಿ ವಿಷವನ್ನು ಇಟ್ಟುಕೊಂಡು ಹಿಂಡದೆಯೆ ಪ್ರಬಲವಾಗಿದ್ದು ಆ ವಿಷವನ್ನು ತಾನೇ ಕುಡಿದ. ಅದೂ ಅವನಿಗೆ ಜೀರ್ಣವಾಯಿತು.

ಅತ್ಯಲ್ಪ ಪಾನಾಚ್ಚ ಬಭೂವ ಶೂಲಾ
ಶಿವಸ್ಯ ಶೀರ್ಷ್ಣಶ್ಚ ಕರಾವಶಿಷ್ಟಮ್ ।
ಅಭೂತ್ ಕಲಿಃ ಸರ್ವ ಜಗತ್ಸುಪೂರ್ಣಂ
ಪೀತ್ವಾ ವಿಕಾರೋ ನ ಬಭೂವ ವಾಯೋಃ ॥೧೭॥

ಅತ್ಯಲ್ಪವಾಗಿ ವಿಷ ಕುಡಿದಿದ್ದರೂ ಶಿವನಿಗೆ ತಲೆನೋವು ಉಂಟಾಯಿತು. ಅವನ ಕೈಯಲ್ಲಿ ಇನ್ನೂ ವಿಷ ಉಳಿದಿತ್ತು. ಮುಂದೆ ಅದು ಕಲಿಯ ಶರೀರವಾಗಿ ಎಲ್ಲ ಜಗತ್ತಿನಲ್ಲಿ ಹಬ್ಬಿತು. ಬಳಿಕ ಎಲ್ಲ ವಿಷವನ್ನೂ ವಾಯುದೇವ ಕುಡಿದ. ಆದರೂ ಅದರಿಂದ ಅವನಿಗೆ ಏನೂ ದುಷ್ಪರಿಣಾಮವಾಗಲಿಲ್ಲ.

ಕಲೇಃ ಶರೀರಾದಭವನ್ ಕುನಾಗಾಃ ಸವೃಶ್ಚಿಕಾಃ ಶ್ವಾಪದ ಯಾತುಧಾನಾಃ ।
ಅಥ ತ್ವಯಾಬ್ಧೌ ತು ವಿಮಥ್ಯಮಾನೇ ಸುರಾಽಭವತ್ ತಾಮಸುರಾ ಅವಾಪುಃ॥

ಕಲಿಯ ಶರೀರವಾದ ಆ ವಿಷದಿಂದ ದುಷ್ಟ ಸರ್ಪಗಳು ಚೇಳುಗಳು ತೋಳ ಹುಲಿ ಮುಂತಾದವು ಮತ್ತು ರಾಕ್ಷಸರು ಹುಟ್ಟಿದರು. ಬಳಿಕ ನೀನು ಸಮುದ್ರ ಮಥನ ಮಾಡುತ್ತಿದ್ದಂತೆ ಮದ್ಯ ಉದ್ಭವಿಸಿತು. ಅದನ್ನು ಅಸುರರು ಸ್ವೀಕರಿಸಿದರು.

ಉಚ್ಚೈಃಶ್ರವಾ ನಾಮ ತುರಂಗಮೋऽಥ ಕರೀ ತಥೈರಾವತನಾಮಧೇಯಃ
ಅನ್ಯೇ ಚ ದಿಕ್ಪಾಲಗಜಾ ಬಭೂವುರ್ವರಂ ತಥೈವಾಪ್ಸರಸಾಂ ಸಹಸ್ರಮ್ ॥

ಉಚ್ಚೈಃಶ್ರವ ಎಂಬ ಕುದುರೆ, ಐರಾವತ ಎಂಬ ಹೆಸರಿನ ಆನೆ, ಬೇರೆ ದಿಕ್ಪಾಲಕರ ಆನೆಗಳು ಹುಟ್ಟಿದವು. ಹಾಗೇ ಸಹಸ್ರ ಶ್ರೇಷ್ಠ ಅಪ್ಸರೆಯರೂ ಹುಟ್ಟಿದರು.

ತಥಾಯುಧಾನ್ಯಾಭರಣಾನಿ ಚೈವ ದಿವೌಕಸಾಂ ಪಾರಿಜಾತಸ್ತರುಶ್ಚ ।
ತಥೈವ ಸಾಕ್ಷಾತ್ಸುರಭಿರ್ನಿಶೇಶೋ ಬಭೂವ ತತ್ಕೌಸ್ತುಭಂ ಲೋಕಸಾರಮ್ ॥

ಹಾಗೇ ದೇವತೆಗಳ ಆಯುಧಗಳು, ಆಭರಣಗಳು ಮತ್ತು ಪಾರಿಜಾತ ವೃಕ್ಷಗಳು ಹುಟ್ಟಿದವು. ಹಾಗೇ ಮುಖ್ಯಕಾಮಧೇನು ಜನಿಸಿದಳು. ಚಂದ್ರ ಜನಿಸಿದ. ಲೋಕದಲ್ಲೆಲ್ಲ ಶ್ರೇಷ್ಠವಾದ ಕೌಸ್ತುಭಮಣಿಯೂ ಹುಟ್ಟಿತು.

ಅಥೇಂದಿರಾ ಯದ್ಯಪಿ ನಿತ್ಯದೇಹಾ ಬಭೂವ ತತ್ರಾಪರಯಾ ಸ್ವತನ್ವಾ ।
ತತೋ ಭವಾನ್ ದಕ್ಷಿಣಬಾಹುನಾ ಸುಧಾಕಮಂಡಲುಂ ಕಲಶಂ ಚಾಪರೇಣ।
ಪ್ರಗೃಹ್ಯ ತಸ್ಮಾನ್ನಿರಗಾತ್ ಸಮುದ್ರಾದ್ ಧನ್ವಂತರಿರ್ನಾಮ ಹರಿನ್ಮಣಿದ್ಯುತಿಃ ॥

ಬಳಿಕ ಮಹಾಲಕ್ಷ್ಮೀ ನಿತ್ಯಸ್ವರೂಪಳಾಗಿದ್ದರೂ ಇನ್ನೊಂದು ರೂಪದಿಂದ ಕ್ಷೀರ ಸಮುದ್ರದಲ್ಲಿ ಪ್ರಾದುರ್ಭವಿಸಿದಳು. ಬಳಿಕ ಇಂದ್ರನೀಲ ಮಣಿಯಂಥ ಕಾಂತಿಯುಳ್ಳ ಧನ್ವಂತರಿಯಾಗಿ ನೀನು ಬಲಗೈಯಿಂದ ಅಮೃತ ಬಡಿಸುವ ಕಮಂಡಲುವನ್ನೂ ಎಡಗೈಯಿಂದ ಅಮೃತ ತುಂಬಿದ ಕಲಶವನ್ನೂ ಹಿಡಿದು ಸಮುದ್ರದಿಂದ ಉದ್ಭವಿಸಿದೆ.

ತತೋ ಭವದ್ದಸ್ತಗತಂ ದಿತೇಃ ಸುತಾಃ
ಸುಧಾಭಾರಂ ಕಲಶಂ ಚಾಪಜಹ್ರುಃ ।
ಮುಕ್ತಂ ತ್ವಯಾ ಶಕ್ತಿಮತಾಪಿ ದೈತ್ಯಾನ್
ಸತ್ಯಚ್ಯುತಾನ್ ಕಾರಯತಾಂ ವಧಾಯ ॥೨೨॥

ಆಗ ನಿನ್ನ ಕೈಯಲ್ಲಿದ್ದ ಅಮೃತಪೂರ್ಣ ಕಲಶವನ್ನು ದೈತ್ಯರು ಅಪಹರಿಸಿದರು. ನೀನು ಶಕ್ತಿ ಉಳ್ಳವನಾದರೂ ಬಿಟ್ಟುಬಿಟ್ಟೆ, ದೈತ್ಯರನ್ನು ಸತ್ಯಭ್ರಷ್ಟರನ್ನಾಗಿಸಿ ಮುಂದೆ ಅವರನ್ನು ವಧಿಸುವುದಕ್ಕಾಗಿ.

ತತೋ ಭವಾನನುಪಮಮುತ್ತಮಂ ವಪು-
ರ್ಬಭೂವ ದಿವ್ಯಪ್ರಮದಾತ್ಮಕಂ ತ್ವರನ್ ।
ಶ್ಯಾಮಂ ನಿತಂಬಾರ್ಪಿತ ರತ್ನಮೇಖಲಂ
ಚಾಂಬೂನದಾಭಾಂಬರಭೃತ್ ಸುಮಧ್ಯಮಮ್ ॥೨೩॥

ಆಗ ನೀನು ಬೇಗನೆ ಅನುಪಮ ಉತ್ತಮ ದಿವ್ಯಸ್ತ್ರೀರೂಪವಾದೆ. ಆ ರೂಪ ನೀಲವರ್ಣದ್ದು, ನಿತಂಬದಲ್ಲಿ ರತ್ನದ ಒಡ್ಯಾಣ ಧರಿಸಿತ್ತು. ಬಂಗಾರದಂತೆ ಹೊಳೆವೆ ಸೀರೆ ಉಟ್ಟಿತ್ತು. ಚೆಲುವಾದ ನಡುವಿನದಾಗಿತ್ತು.

ಬೃಹನ್ನಿತಂಬಂ ಕಲಶೋಪಮಸ್ತನಂ
ಸತ್ತುಂಡರೀಕಾಯತನೇತ್ರಮುಜ್ವಲಮ್ ।
ಸಮಸ್ತಸಾರಂ ಪರಿಪೂರ್ಣಸದ್ಗುಣಂ
ದೃಷ್ಟ್ವೈವತತ್ ಸಂಮುಮುಹುಃ ಸುರಾರಯಃ ॥೨೪॥

ಹರಿಯ ಆ ಸ್ತ್ರೀರೂಪ ವಿಶಾಲ ನಿತಂಬ, ಕಲಶದಂಥ ಸ್ತನ, ಒಳ್ಳೆಯ ಕಮಲದಂತೆ ವಿಶಾಲವಾದ ಕಣ್ಣುಗಳುಳ್ಳದ್ದು. ಉಜ್ವಲ, ಸರ್ವಶ್ರೇಷ್ಠ, ಪರಿಪೂರ್ಣ ಸದ್ಗುಣ ಭರಿತ. ಅದನ್ನು ನೋಡಿಯೆ ದೈತ್ಯರು ಮೋಹಗೊಂಡರು.

ಪರಸ್ಪರಂ ತೇऽಮೃತಹೇತುತೋऽಖಿಲಾ
ವಿರುಧ್ಯಮಾನಾಃ ಪ್ರದದುಃ ಸ್ಮ ತೇ ಕರೇ ।
ಸಮಂ ಸುಧಾಯಾಃ ಕಲಶಂ ವಿಭಜ್ಯ
ನಿಪಾಯಯಾಸ್ಮಾನಿತಿ ವಂಚಿತಾಸ್ತ್ವಯಾ ॥೨೫॥

ನಿನ್ನಿಂದ ವಂಚಿತರಾದ ಅವರೆಲ್ಲರೂ ಅಮೃತನಿಮಿತ್ತವಾಗಿ ಜಗಳಾಡುತ್ತಿದ್ದವರು 'ನೀನು ನಮ್ಮಲ್ಲಿ ಸರಿಯಾಗಿ ಹಂಚಿ ಉಣಿಸು' ಎನ್ನುತ್ತ ನಿನ್ನ ಕೈಯಲ್ಲಿ ಅಮೃತ ಕಲಶವನ್ನಿತ್ತರು.

ಧರ್ಮಚ್ಛಲಂ ಪಾಪಜನೇಷು ಧರ್ಮ
ಇತಿ ತ್ವಯಾ ಜ್ಞಾಪಯಿತುಂ ತದೋಕ್ತಮ್ ।
ಯದ್ಯತ್ಕೃತಂ ಮೇ ಭವತಾಂ ಯದೀಹ
ಸಂವಾದ ಏವೋದ್ವಿಭಜೇ ಸುಧಾಮಿಮಾಮ್ ॥೨೬॥

ಧರ್ಮರಕ್ಷಣೆಗಾಗಿ ಪಾಪಿಜನರಲ್ಲಿ ವಂಚನೆ ಮಾಡುವುದೂ ಧರ್ಮವೆ ಎಂದು ತೋರಿಸುವುದಕ್ಕಾಗಿ ನೀನು ನುಡಿದೆ - 'ನಾನೇನು ಮಾಡಿದರೂ ಅದನ್ನು ನೀವು ಒಪ್ಪುವುದಾಗಿದ್ದರೆ ಮಾತ್ರ ಅಮೃತವನ್ನು ಹಂಚುತ್ತೇನೆ'.

ಯಥೇಷ್ಟತೋಽಹಂ ವಿಭಜಾಮಿ ಸರ್ವಥಾ ನ
ವಿಶ್ವಸಧ್ವಂ ಮಯಿ ಕೇನಚಿತ್ಕ್ವಚಿತ್ ।
ಇತಿ ಪ್ರಹಸ್ಯಾಭಿಹಿತಂ ನಿಶಮ್ಯ
ಸ್ತ್ರೀಭಾವಮುಗ್ಧಾಸ್ತು ತಥೇತಿ ತೇಽವದನ್ ॥೨೭॥

'ನಾನು ನನ್ನಿಚ್ಛಾನುಸಾರವೆ ಹಂಚುವೆ. ನೀನು ಯಾವ ರೀತಿಯಿಂದಲೂ ಯಾವ ವಿಷಯದಲ್ಲಿಯೂ ನನ್ನಲ್ಲಿ ಸರ್ವಥಾ ವಿಶ್ವಾಸವಿಡಬೇಡಿ' ಎಂದು ನಗುತ್ತ ನೀನು ಹೇಳಿದುದನ್ನು ಕೇಳಿ ಅವರು ಸ್ತ್ರೀಸ್ವಭಾವಕ್ಕೆ ಮರುಳಾಗಿ 'ಹಾಗೇ ಆಗಲಿ' ಎಂದರು.

ತತಶ್ಚ ಸಂಸ್ಥಾಪ್ಯ ಪೃಥಕ್ ಸುರಾಸುರಾಂ-
ಸ್ತವಾತಿರೂಪೋಚ್ಚಲಿತಾನ್ ಸುರೇತರಾನ್ ।
ಸರ್ವಾನ್ ಭವದ್ದರ್ಶಿನ ಈಕ್ಷ್ಯಲಜ್ಜಿತಾ-
ಸ್ಮ್ಯಹಂ ದೃಶೋ ಮೀಲಯತೇತ್ಯವೋಚಃ ॥೨೮॥

ಬಳಿಕ ದೇವತೆಗಳನ್ನೂ ಅಸುರರನ್ನೂ ಬೇರೆ ಬೇರೆಯಾಗಿ ಕುಳ್ಳಿರಿಸಿ, ನಿನ್ನ ಅತಿಯಾದ ಸೌಂದರ್ಯದಿಂದ ಮನಸ್ಸಿನಲ್ಲಿ ಬಹಳ ವಿಚಲಿತರಾದ ಅಸುರರಿಗೆ ನೀನು ಹೇಳಿದೆ. 'ನೀನು ನನ್ನನ್ನು ಹೀಗೆ ನೋಡುತ್ತಿದ್ದರೆ ನೋಡಿ ನಾನು ನಾಚುವೆ. ಕಣ್ಣು ಮುಚ್ಚಿಕೊಳ್ಳಿ'.

ನಿಮೀಲಿತಾಕ್ಷೇಷ್ವಸುರೇಷು ದೇವತಾ
ನ್ಯಪಾಯಯಃ ಸಾಧ್ವಮೃತಂ ತತಃ ಪುಮಾನ್ ।
ಕ್ಷಣೇನ ಭೂತ್ವಾಪಿಬತಃ ಸುಧಾಂ ಶಿರೋ
ರಾಹೋರ್ನ್ಯಕೃಂತಶ್ಚ ಸುದರ್ಶನೇನ ॥೨೯॥

ಅಸುರರು ಕಣ್ಣು ಮುಚ್ಚಿಕೊಂಡಿರಲು ನೀನು ದೇವತೆಗಳಿಗೇ ಚೆನ್ನಾಗಿ ಅಮೃತವನ್ನು ಉಣಿಸಿದೆ. ಬಳಿಕ ಕ್ಷಣದಲ್ಲಿ ಪುರುಷನಾಗಿ, ಅಮೃತ ಕುಡಿಯುತ್ತಿದ್ದ ರಾಹುವಿನ ಶಿರಸ್ಸನ್ನು ಸುದರ್ಶನದಿಂದ ಕತ್ತರಿಸಿದೆ.

ತೇನಾಮೃಥಾರ್ಥಂ ಹಿ ಸಹಸ್ರ ಜನ್ಮಸು
ಪ್ರತಪ್ಯ ಭೂಯಸ್ತಪ ಆರಿತೋ ವರಃ ।
ಸ್ವಯಂಭುವಸ್ತೇನ ಭವಾನ್ ಕರೇಽಸ್ಯ
ಬಿಂದುಂ ಸುಧಾಂ ಪ್ರಾಸ್ಯ ಶಿರೋ ಜಹಾರ ॥೩೦॥

ರಾಹು ಅಮೃತಕ್ಕಾಗಿ ಸಾವಿರ ಜನ್ಮಗಳಲ್ಲಿ ಬಹಳ ಚೆನ್ನಾಗಿ ತಪಸ್ಸು ಮಾಡಿ ಬ್ರಹ್ಮನಿಂದ ವರ ಪಡೆದಿದ್ದ. ಅದರಿಂದ ನೀನು ಅವನ ಕೈಗೆ ಒಂದು ತೊಟ್ಟು ಅಮೃತವನ್ನು ಬಡಿಸಿ ಶಿರಸ್ಸನ್ನು ತೆಗೆದೆ.

ಶಿರಸ್ತು ತಸ್ಯ ಗ್ರಹತಾಮವಾಪ ಸುರೈಃ
ಸಮಾವಿಷ್ಟಮಥೋ ಸಬಾಹು ।
ಕ್ಷಿಪ್ತಃ ಕವಂಧೋಽಸ್ಯ ಶುಭೋದಸಾಗರೇ
ತ್ವಯಾ ಸ್ಥಿತೋಽದ್ಯಾಪಿ ಹಿ ತತ್ರ ಸಾಮೃತಃ ॥೩೧॥

ರಾಹುವಿನ ಶಿರಸ್ಸು ಮಾತ್ರ ದೇವತೆಗಳಿಂದ ಆವಿಷ್ಟವಾಗಿ ಗ್ರಹವಾಯಿತು. ಬಳಿಕ ಬಾಹುಸಮೇತವಾದ ಮುಂಡವನ್ನು ನೀನು ಸ್ವಾದೂದಕ ಸಮುದ್ರದಲ್ಲಿ ಎಸೆದೆ. ಅದರಲ್ಲಿ ಅಮೃತ ಪ್ರವೇಶಿಸಿದ್ದರಿಂದ ಇಂದಿಗೂ ನಶಿಸದೆ ಅಲ್ಲಿ ಇದೆ.

ಅಥಾಸುರಾಃ ಪ್ರತ್ಯಪತನ್ನುದಾಯುಧಾಃ
ಸಮಸ್ತಶಸ್ತೇ ಚ ಹತಾಸ್ತ್ವಯಾ ರಣೇ
ಕಲಿಸ್ತು ಸ ಬ್ರಹ್ಮವರಾದಜೇಯೋ ಋತೇ
ಭವಂತಂ ಪುರುಷೇಷು ಸಂಸ್ಥಿತಃ ॥೩೨॥

ಬಳಿಕ ಅಸುರರು ಆಯುಧಗಳನ್ನು ಎತ್ತಿಕೊಂಡು ಏರಿಬಂದರು. ಅವರೆಲ್ಲರೂ ನಿನ್ನಿಂದ ಹತರಾದರು. ಕಲಿ ಮಾತ್ರ ಬ್ರಹ್ಮನ ವರದಿಂದ ನಿನಗೆ ಹೊರತು ಇನ್ನಾರಿಗೂ ಅಜೇಯನೇ ಆಗಿದ್ದುದರಿಂದ ಮನುಷ್ಯರಲ್ಲಿ ಸ್ಥಿರವಾಗಿ ನೆಲೆಸಿದ್ದಾನೆ.

ತಸ್ಯಾರ್ಧದೇಹಾತ್ ಸಮಭೂದಲಕ್ಷ್ಮೀಸ್ತತ್ಸುತ್ರಕಾ
ದೋಷಗಣಾಶ್ಚ ಸರ್ವಶಃ ।
ಅಥೇಂದಿರಾ ವಕ್ಷಸಿ ತೇ ಸಮಾಸ್ಥಿತಾ
ತ್ವತ್ಕಂಠಗಂ ಕೌಸ್ತುಭಮಾಸ ಧಾತಾ ॥೩೩॥

ಕಲಿಯ ಅರ್ಧಾಂಗಿನಿಯಾದ ಅಲಕ್ಷ್ಮಿಯೂ ಅವಳ ಮಕ್ಕಳಾದ ಸಕಲ ದೋಷಾಭಿಮಾನಿ ದೈತ್ಯ ಸಮೂಹಗಳೂ ಕ್ಷೀರಸಮುದ್ರದಿಂದ ಎದ್ದು ಬಂದರು. ಬಳಿಕ ಮಹಾಲಕ್ಷ್ಮಿ ನಿನ್ನ ಎದೆಯಲ್ಲಿ ನೆಲೆಸಿದಳು. ಬ್ರಹ್ಮನಿಂದ ಅಭಿಮನ್ಯಮಾನವಾದ ಕೌಸ್ತುಭ ನಿನ್ನ ಕಂಠದಲ್ಲಿ ಶೋಭಿಸಿತು.

ಯಥಾವಿಭಾಗಂ ಚ ಸುರೇಷು ದತ್ತಾಸ್ತ್ವಯಾ
ತಥಾನ್ಯೇಽಪಿ ಹಿ ತತ್ರ ಜಾತಾಃ ।
ಇತ್ಥಂ ತ್ವಯಾ ಸಾಧ್ವಮೃತಂ ಸುರೇಷು
ದತ್ತಂ ಹಿ ಮೋಕ್ಷಸ್ಯ ನಿದರ್ಶನಾಯ ॥೩೪॥

ಕ್ಷೀರಸಮುದ್ರದಲ್ಲಿ ಉದ್ಭವಿಸಿದ ಬೇರೆ ರತ್ನಗಳನ್ನೂ ನೀನು ಯಥಾಯೋಗ್ಯವಾಗಿ ವಿಭಾಗ ಮಾಡಿ ಸುರರಿಗೆ ನೀಡಿದೆ. ಹೀಗೆ ಸುರರಿಗೆ ಮಾತ್ರ ಅಮೃತವನ್ನು ಚೆನ್ನಾಗಿ ಉಣಿಸಿದೆ, ಮೋಕ್ಷಕ್ಕೆ ನಿದರ್ಶನ ನೀಡುವುದಕ್ಕಾಗಿ.

ಭವೇದ್ಧಿ ಮೋಕ್ಷೋ ನಿಯತಂ ಸುರಾಣಾಂ
ನೈವಾಸುರಾಣಾಂ ಸ ಕಥಂಚನ ಸ್ಯಾತ್ ।
ಉತ್ಸಾಹಯುಕ್ತಸ್ಯ ಚ ತತ್ತತ್ತೀಪಂ ಭವೇದ್ಧಿ
ರಾಹೋರಿವ ದುಃಖರೂಪಮ್ ॥೩೫॥

ಸುರರಿಗೆ ಮೋಕ್ಷ ನಿಶ್ಚಯವಾಗಿ ಸಿಗುತ್ತದೆ. ಅಸುರ ಸ್ವಭಾವದವರಿಗೆ ಯಾವ ರೀತಿಯಿಂದಲೂ ಮೋಕ್ಷ ಸಿಗಲಾರದು. ಅವರು ಮೋಕ್ಷ ಪಡೆಯಲು ಉತ್ಸಾಹ ಯುಕ್ತರಾದರೆ ಫಲವಿಲ್ಲ. ರಾಹುವಿಗೆ ಹೇಗೋ ಹಾಗೆ ಮೋಕ್ಷಕ್ಕೆ ವಿಪರೀತವಾಗಿ ದುಃಖ ರೂಪವಾದ ತಮಸ್ಸು ಸಿಗುವುದು.

★ ★ ★ ★ ★

ಹದಿನಾರನೆಯ ಅಧ್ಯಾಯ

(ಮಂದರವನ್ನು ಕಡೆಗೋಲನ್ನಾಗಿ ಮಾಡಿ, ವಾಸುಕಿಯನ್ನು ಹಗ್ಗವನ್ನು ಮಾಡಿ, ಸರ್ವೌಷಧಿಗಳನ್ನು ಹಾಕಿ ಸಮುದ್ರಮಥನ, ಪಾರಿಜಾತಾದಿ ಉತ್ಪತ್ತಿ, ಧನ್ವಂತರಿಯ ಪ್ರಾದುರ್ಭಾವ, ದೈತ್ಯರಿಗೆ ವಂಚನೆ.)

ಸೂತಃ

ತತೋಽಭ್ರಶಿಖರಾಕಾರೈರ್ಗಿರಿಶೃಂಗೈರಲಂಕೃತಮ್ ।
ಮಂದರಂ ಪರ್ವತವರಂ ಲತಾಜಾಲಸಮಾವೃತಮ್ ॥೧॥

ನಾನಾವಿಹಂಗಸಂಘುಷ್ಟಂ ನಾನಾದಂಷ್ಟ್ರಿಸಮಾಕುಲಮ್ ।
ಕಿನ್ನರೈರಪ್ಸರೋಭಿಶ್ಚ ದೇವೈರಪಿ ಚ ಶೋಭಿತಮ್ ॥೨॥

ಏಕಾದಶ ಸಹಸ್ರಾಣಿ ಯೋಜನಾನಾಂ ಸಮುಚ್ಛ್ರಿತಮ್ ।
ಅಧೋಭೂಮೇಃ ಸಹಸ್ರೇಷು ತಾವತ್ಸ್ವೇವ ಪ್ರತಿಷ್ಠಿತಮ್ ॥೩॥

ಸಮುದ್ಧರ್ತುಮಶಕ್ತಾ ವೈ ಸರ್ವೇ ದೇವಗಣಾಸ್ತದಾ ।
ವಿಷ್ಣುಮಾಸೀನಮಭ್ಯೇತ್ಯ ಬ್ರಹ್ಮಾಣಂ ಚೇದಮಬ್ರುವನ್ ॥೪॥

ಅನಂತರ ಮೇಘಶಿಖರದಂತಿದ್ದ, ಅನೇಕ ಶಿಖರಗಳಿಂದ ಅಲಂಕೃತವಾದ, ಲತಾಜಾಲಗಳಿಂದ ಯುಕ್ತವಾದ, ನಾನಾ ಪಕ್ಷಿಗಳ ಘೋಷದಿಂದ ಕೂಡಿದ, ನಾನಾ ಕ್ರೂರಮೃಗಗಳಿಂದ ಸಮಾಕುಲವಾದ, ದೇವತೆಗಳು, ಕಿನ್ನರರು ಮತ್ತು ಅಪ್ಸರೆಯರಿಂದ ಶೋಭಿತವಾದ, ಹನ್ನೊಂದು ಸಹಸ್ರಯೋಜನ ಎತ್ತರವಾದ, ಭೂಮಿಯೊಳಗೆ, ಅಷ್ಟೇ ಆಳದವರೆಗೆ ನೆಡಲ್ಪಟ್ಟಿದ್ದ, ಮಂದರಪರ್ವತವನ್ನು ಎತ್ತಲು ಸಾಧ್ಯವಾಗದೆ, ಎಲ್ಲಾ ದೇವತಾಗಣಗಳು ವಿಷ್ಣುಬ್ರಹ್ಮರನ್ನು ಸಮೀಪಿಸಿ ಹೀಗೆ ಮಾತನಾಡಿದರು.

ಭವಂತಾವತ್ರ ಕುರುತಾಂ ಬುದ್ಧಿಂ ನೈಶ್ರೇಯಸೀಂ ಪರಾಮ್ ।
ಮಂದರೋದ್ಧರಣೇ ಯತ್ನಃ ಕ್ರಿಯತಾಂ ಚ ಹಿತಾಯ ನಃ ॥೫॥

ನೀವಿಬ್ಬರೂ ನಮ್ಮನ್ನು ಈ ಸಂಕಟದಿಂದ ಪಾರುಗಾಣಿಸುವ ಆಲೋಚನೆಯನ್ನು ಮಾಡಿ. ನಮ್ಮ ಹಿತಕ್ಕೋಸ್ಕರವಾಗಿ ಮಂದರಪರ್ವತವನ್ನು ಎತ್ತುವ ಪ್ರಯತ್ನವನ್ನು ಮಾಡಿ.

ತಥೇತಿ ಚಾಬ್ರವೀದ್ ವಿಷ್ಣುರ್ಬ್ರಹ್ಮಣಾ ಸಹ ಭಾರ್ಗವ ।
ಅಚೋದಯದಮೇಯಾತ್ಮಾ ಫಣೀಂದ್ರಂ ಪದ್ಮಲೋಚನಃ ॥೬॥

ಎಲೈ ಶೌನಕನೇ, ಆಗ ವಿಷ್ಣುವು ಬ್ರಹ್ಮನ ಜೊತೆಯಲ್ಲಿ 'ಹಾಗೆಯೇ ಆಗಲಿ' ಎಂದು ಹೇಳಿ ಪುಂಡರೀಕಾಕ್ಷನೂ, ಅಪ್ರಮೇಯಸ್ವರೂಪನೂ ಆದ ಅವನು ಗರುಡನನ್ನು ಪ್ರೇರಿಸಿದನು.

ಇಲ್ಲಿ ಫಣೀಂದ್ರ ಎಂದರೆ, ಫಣಿ = ಸರ್ಪಗಳ, ಈ = ಐಶ್ವರ್ಯವನ್ನು ದ್ರ = ನಾಶಮಾಡುವವನು ಎಂಬ ಅರ್ಥವನ್ನು ತೆಗೆದುಕೊಂಡು ಗರುಡ ಎಂದು ಅರ್ಥವನ್ನು ಮಾಡಬೇಕು. ಇಲ್ಲದಿದ್ದರೆ, ಭಾಗವತ ಮತ್ತು ಇಲ್ಲಿಯ ಮುಂದಿನ ಶ್ಲೋಕಗಳಿಂದ ವಿರೋಧವು ಬರುತ್ತದೆ. ಆಚಾರ್ಯರೂ ಸಹ 'ಯೋನಂತನಾಮಾ ಗರುಡಸ್ತದಂಸಕೇ' ಎಂದು ಹೇಳಿ ಅನಂತನಾಮಕನಾದ ಗರುಡನ ಹೆಗಲಿನ ಮೇಲೆ ಮಂದರಪರ್ವತವನ್ನು ವಿಷ್ಣುವು ತೆಗೆದುಕೊಂಡು ಬಂದನು ಎಂದು ಹೇಳಿದ್ದಾರೆ. ಇಲ್ಲಿಯೂ ಸಹ ಮುಂದಿನ ಶ್ಲೋಕಗಳಲ್ಲಿ ಗರುಡನಿಗೆ ಅನಂತ ಎಂಬ ಶಬ್ದ ಪ್ರಯೋಗವೇ ಇದೆ. ಮಂದರಪರ್ವತವನ್ನು ಎತ್ತಲು ಮಹಾಬಲವು ಅವಶ್ಯಕವಾದ್ದರಿಂದ ನಿಸ್ಸೀಮಬಲನಾದ, ಅನಂತನಾಮಕ, ವಿಷ್ಣುವಿನ ಸನ್ನಿಧಾನಕ್ಕೆ ಪಾತ್ರನಾದ ಮಹಾಬಲವುಳ್ಳ ಗರುಡನು ಅನಂತನೆಂದು ಹೇಳಲ್ಪಡುತ್ತಾನೆ.

ತತೋऽನಂತಃ ಸಮುತ್ಥಾಯ ಬ್ರಹ್ಮಣಾ ಪರಿಚೋದಿತಃ ।
ನಾರಾಯಣೇನ ಚಾಪ್ಯುಕ್ತಸ್ತಸ್ಮಿನ್ ಕರ್ಮಣಿ ವೀರ್ಯವಾನ್ ॥೭॥

ಅನಂತರ ಬ್ರಹ್ಮದೇವರಿಂದಲೂ ಮತ್ತು ಆ ಕಾರ್ಯದಲ್ಲಿ ನಾರಾಯಣನಿಂದಲೂ ಪ್ರೇರಿಸಲ್ಪಟ್ಟವನಾಗಿ, ಪರಾಕ್ರಮಶಾಲಿಯಾದ ಗರುಡನು ಅಲ್ಲಿಂದ ಎದ್ದನು.

ಅಥ ಪರ್ವತರಾಜಾನಂ ತಮನಂತೋ ಮಹಾಬಲಃ ।
ಉಜ್ಜಹಾರ ಬಲಾದ್ ಬ್ರಹ್ಮನ್ ಸವನಂ ಸವನೌಕಸಮ್ ॥೮॥

ಎಲೈ ಬ್ರಾಹ್ಮಣನೇ, ಅನಂತರ, ಮಹಾಬಲನಾದ, ಅನಂತನಾಮಕನಾದ ಗರುಡನು ವನ ಮತ್ತು ವನವಾಸಿಗಳಿಂದ ಸಹಿತವಾದ ಆ ಶ್ರೇಷ್ಠಪರ್ವತವನ್ನು ತನ್ನಲ್ಲಿ ಆವಿಷ್ಟನಾದ ವಿಷ್ಣುವಿನ ಮತ್ತು ತನ್ನ ಬಲದಿಂದ ಕಿತ್ತನು.

ಭಾಗವತ ಮತ್ತು ಮಹಾಭಾರತಕ್ಕೆ ಮತ್ತು ಆಚಾರ್ಯರ ಮಹಾಭಾರತತಾತ್ಪರ್ಯನಿರ್ಣಯಕ್ಕೆ ಅನುಗುಣವಾಗಿ ದೇವಾಸುರರು ತಮ್ಮ ಬಲದಿಂದ ಮಂದರಪರ್ವತವನ್ನು ಕೀಳಲು ಸಾಧ್ಯವಿಲ್ಲದೇ ಹೋದಾಗ ವಿಷ್ಣುವೇ ಅದನ್ನು ಕಿತ್ತು, ಗರುಡನ ಮೇಲೆ ಇಟ್ಟನು. ಗರುಡನ ಮೇಲೆ ಮಂದರಪರ್ವತವನ್ನು ತೆಗೆದುಕೊಂಡು ಬರುತ್ತಿರುವಾಗ ಪುನಃ ದೇವತೆಗಳು ಗರುಡನ ಜೊತೆಯಲ್ಲಿ ಸ್ಪರ್ಧೆಯನ್ನು ಮಾಡಿದ್ದರಿಂದ ಆ ಪರ್ವತವನ್ನು ಕೆಳಗಿಳಿಸಿದನು. ಆ ಕೆಳಗಿಳಿಸಿದ ಪರ್ವತವನ್ನು ದೇವತೆಗಳು ಎತ್ತಲು ಸಾಧ್ಯವಾಗಲಿಲ್ಲ. ಇನ್ನು ಭೂಮಿಯಲ್ಲಿ ಹನ್ನೊಂದುಸಾವಿರ ಯೋಜನ ಆಳದಲ್ಲಿ ನೆಡಲ್ಪಟ್ಟ ಮಂದರಪರ್ವತವನ್ನು ಎತ್ತುವುದು ಹೇಗೆ? ಆಗ ಪುನಃ ವಿಷ್ಣುವು ಮಂದರಪರ್ವತವನ್ನು ಎತ್ತಿಕೊಂಡು ಗರುಡನ ಮೇಲೆ ಇಟ್ಟು ಕ್ಷೀರಸಮುದ್ರದ ಬಳಿಗೆ ಬಂದು ಆ ಪರ್ವತವನ್ನು ಇಳಿಸಿದನು ಎಂದು ತಿಳಿಯಬೇಕು.

ತತಸ್ತೇನ ಸುರಾಃ ಸಾರ್ಧಂ ಸಮುದ್ರಮುಪತಸ್ಥಿರೇ ।
ತಮೂಚುರಮೃತಸ್ಯಾರ್ಥೇ ನಿರ್ಮಥಿಷ್ಯಾಮ ತೇ ಜಲಮ್ ॥೯॥

ಆಗ ಗರುಡನ ಜೊತೆಯಲ್ಲಿ ದೇವತೆಗಳೆಲ್ಲರೂ ಕ್ಷೀರಸಮುದ್ರದ ದಡಕ್ಕೆ ಬಂದು ಅಮೃತದ ಸಲುವಾಗಿ ನಾವೆಲ್ಲರೂ ನಿನ್ನ ಜಲವನ್ನು ಮಥನವನ್ನು ಮಾಡುತ್ತೇವೆ ಎಂದು ಅವನನ್ನು ಕುರಿತು ಹೇಳಿದರು.

ಅಪಾಂಪತಿರಥೋವಾಚ ಮಮಾಪ್ಯಂಶೋ ಭವೇತ್ ತತಃ ।
ಸೋಢಾऽಸ್ಮಿ ವಿಪುಳಂ ಮರ್ದಂ ಮಂದರಭ್ರಮಣಾದಿಹ ॥೧೦॥

ಜಲಪತಿಯಾದ ವರುಣನೂ ಸಹ ನಾನು ಮಂದರಪರ್ವತದ ಪರಿಭ್ರಮಣದಿಂದ ಉಂಟಾಗುವ ವಿಪುಲವಾದ ಮರ್ದನವನ್ನು ಸಹಿಸಬೇಕಾಗುವುದು, ಆದ್ದರಿಂದ ನನಗೂ ಅಮೃತದ ಒಂದು ಭಾಗವು ಬೇಕು ಎಂದು ಹೇಳಿದನು.

ಊಚುಶ್ಚ ಕೂರ್ಮರಾಜಾನಮಕೂಪಾರಂ ಸುರಾಸುರಾಃ ।
ಆಧಿಷ್ಠಾನಂ ಗಿರೇರಸ್ಯ ಭವಾನ್ ಭವಿತುಮರ್ಹತಿ ॥೧೧॥

ದೇವಾಸುರರು ಒಟ್ಟಿಗೆ ಸೇರಿ, ಅಕೂಪಾರನೆಂದು ಕರೆಸಿಕೊಳ್ಳಲ್ಪಡುವ ಕೂರ್ಮರಾಜನಾದ ವಿಷ್ಣುವನ್ನು ಸಮೀಪಿಸಿ, ಈ ಪರ್ವತವನ್ನು ಕೆಳಗೆ ಮುಳುಗದಂತೆ ನೀನು ಎತ್ತಿ ಹಿಡಿಯಬೇಕು ಎಂದು ಪ್ರಾರ್ಥಿಸಿದರು.

ಕೂರ್ಮೇಣ ತು ತಥೇತ್ಯುಕ್ತೇ ಪೃಷ್ಠೇ ತಸ್ಯ ಸಮರ್ಪಿತಃ ।
ಸ ಶೈಲಸ್ತಸ್ಯ ಚಾಗ್ರಂ ವೈ ವಜ್ರೇಣೇಂದ್ರೋ ಹ್ಯಪೀಡಯತ್ ॥೧೨॥

ಕೂರ್ಮರೂಪಿಯಾದ ವಿಷ್ಣುವು 'ಹಾಗೆಯೇ ಆಗಲಿ' ಎಂದು ಹೇಳುತ್ತಿರಲು, ದೇವಾಸುರರು ಆ ಮಂದರಪರ್ವತವನ್ನು ಅವನ ಬೆನ್ನಿನ ಮೇಲೆ ಇಟ್ಟರು. ಆ ಪರ್ವತದ ಅಗ್ರಭಾಗವನ್ನು ಇಂದ್ರನು ತನ್ನ ವಜ್ರಾಯುಧದಿಂದ ಸರಿಮಾಡಿದನು. (ಹಗ್ಗವನ್ನು ಕಟ್ಟಲು ಅನುಕೂಲವನ್ನಾಗಿ ಮಾಡಿದನು.)

ಮಂಥಾನಂ ಮಂದರಂ ಕೃತ್ವಾ ಯೋಕ್ತ್ರಂ ಕೃತ್ವಾ ತು ವಾಸುಕಿಮ್।
ದೇವಾ ಮಥಿತುಮಾರಬ್ಧಾಃ ಸಮುದ್ರಂ ನಿಧಿಮಂಭಸಾಮ್ ॥೧೩॥

ದೇವತೆಗಳು ಮಂದರಪರ್ವತವನ್ನು ಕಡೆಗೋಲನ್ನಾಗಿ ಮಾಡಿ, ವಾಸುಕಿಯನ್ನು ಹಗ್ಗವನ್ನಾಗಿ ಮಾಡಿ ಕ್ಷೀರಸಮುದ್ರವನ್ನು ಮಥನಮಾಡಲು ಪ್ರಾರಂಭಿಸಿದರು.

ಅಮೃತಾರ್ಥಿನಸ್ತತೋ ಬ್ರಹ್ಮನ್ ಸಹಿತಾ ದೈತ್ಯದಾನವೈಃ ।
ಅನಂತೋ ಭಗವಾನ್ ದೇವೋ ಯತೋ ನಾರಾಯಣಃ ಸ್ಥಿತಃ ।
ವಿಬುಧಾಃ ಸಹಿತಾಃ ಸರ್ವೇ ಯತಃ ಪುಚ್ಛಂ ತತಃ ಸ್ಥಿತಾಃ ॥೧೪॥

ಎಲೈ ಬ್ರಾಹ್ಮಣನೇ, ಅಮೃತಾರ್ಥಿಗಳಾದ ದೇವತೆಗಳೂ ಮತ್ತು ದಾನವರೂ ಒಟ್ಟುಗೂಡಿದರು. ಗರುಡನೂ, ಭಗವಂತನಾದ ನಾರಾಯಣನೂ, ಎಲ್ಲಾ ದೇವತೆಗಳೂ, ವಾಸುಕಿಯ ಪುಚ್ಛದ ಬಳಿ ನಿಂತರು.

ವಾಸುಕೇರಂಗಮಾಶ್ಲಿಷ್ಯಾ ನಾಗರಾಜ್ಞೋ ಮಹಾಸುರಾಃ ।
ಶಿರ ಉದ್ಯಮ್ಯ ನಾಗಸ್ಯ ಪುನಃ ಪುನರವಾಕ್ಷಿಪನ್ ॥೧೫॥

ಮಹಾಸುರರೆಲ್ಲರೂ ತಲೆಯ ಬಳಿ ನಾಗರಾಜನಾದ ವಾಸುಕಿಯ ಶರೀರವನ್ನು ಹಿಡಿದು ಅದನ್ನು ಮೇಲಕ್ಕೆತ್ತಿ ಪುನಃ ಕೆಳಮುಖವಾಗಿ ತಳ್ಳುತ್ತಿದ್ದರು.

ವಾಸುಕೇರಥ ನಾಗಸ್ಯ ಸಹಸಾ ಕ್ಷಿಪ್ಯತೋಽಸುರೈಃ ।
ಸಧೂಮಾಶ್ಚಾರ್ಚಿಷೋ ವಾತಾ ನಿಷ್ಪೇತುರಸಕೃನ್ಮುಖಾತ್ ॥೧೬॥

ಹೀಗೆ ಮತ್ತೆ ಮತ್ತೆ ಮೇಲಕ್ಕೆತ್ತಿ ಕೆಳಗೆ ತಳ್ಳಲ್ಪಡುತ್ತಿದ್ದ ವಾಸುಕಿಯ ಮುಖದಿಂದ ವಿಷಪೂರಿತವಾದ, ಧೂಮಸಹಿತವಾದ, ಅಗ್ನಿಯಿಂದ ಕೂಡಿದ ವಾತವು ಇದ್ದಕ್ಕಿದ್ದಂತೆಯೇ ಹೊರಹೊಮ್ಮಿತು.

ವಾಸುಕೇರ್ಮಥ್ಯಮಾನಸ್ಯ ನಿಸ್ಸೃತೇನ ವಿಷೇಣ ಚ ।
ಅಭವನ್ ಮಿಶ್ರಿತಂ ತೋಯಂ ತದಾ ಭಾರ್ಗವನಂದನ ॥೧೭॥

ಎಲೈ ಭಾರ್ಗವನಂದನನೇ, ಹೀಗೆ ಕಡೆಯಲ್ಪಟ್ಟ ವಾಸುಕಿಯ ಮುಖದಿಂದ ಹೊರಟ ವಿಷದಿಂದ ಕ್ಷೀರಸಮುದ್ರದ ಜಲವು ಮಿಶ್ರಿತವಾಯಿತು.

ಮಥನಾನ್ಮಂದರೇಣಾಥ ದೇವದಾನವಬಾಹುಭಿಃ ।
ವಿಷಂ ತೀಕ್ಷ್ಣಂ ಸಮುದ್ಭೂತಂ ಹಾಲಾಹಲಮಿತಿ ಶ್ರುತಮ್॥೧೮॥

ದೇವದಾನವರು ತಮ್ಮ ಬಾಹುಗಳಿಂದ ಮಂದರಪರ್ವತವನ್ನು ಹೀಗೆ ಕಡೆಯುತ್ತಿರಲು ಹಾಲಾಹಲವೆಂದು ಪ್ರಖ್ಯಾತವಾದ ತೀಕ್ಷ್ಣವಾದ ವಿಷವು ಉದ್ಭವಿಸಿತು.

ದೇವಾಶ್ಚ ದಾನವಾಶ್ಚೈವ ದಗ್ಧಾಸ್ತೇನ ವಿಷೇಣ ಹ ।
ಅಪಕ್ರಾಮಂಸ್ತತೋ ಭೀತಾ ವಿಷಾದಮಗಮಂಸ್ತದಾ ॥೧೯॥

ದೇವತೆಗಳೂ ಮತ್ತು ದಾನವರೂ ಆ ವಿಷದಿಂದ ದಗ್ಧರಾಗಿ ಭಯದಿಂದ ಹಿಂದಕ್ಕೆ ಸರಿದು ವಿಷಾದವನ್ನು ಹೊಂದಿದರು.

ಬ್ರಹ್ಮಾಣಮಬ್ರುವನ್ ದೇವಾಃ ಸಮೇತ್ಯ ಮುನಿಪುಂಗವೈಃ ।
ಮಥ್ಯಮಾನೇಽಮೃತೇ ಜಾತಂ ವಿಷಂ ಕಾಲಾನಲಪ್ರಭಮ್ ।
ತೇನ ವೈ ತಾಪಿತಾ ಲೋಕಾಸ್ತಸ್ಯ ಪ್ರತಿಕುರುಷ್ವ ಹ ॥೨೦॥

ದೇವತೆಗಳು ಋಷಿಶ್ರೇಷ್ಠರ ಜೊತೆಯಲ್ಲಿ ಆಗ ಬ್ರಹ್ಮದೇವರನ್ನು ಸಮೀಪಿಸಿ ಅಮೃತಕ್ಕಾಗಿ ಮಥನಮಾಡುತ್ತಿರಲು ಕಾಲಾನಲ ತೇಜಸ್ಸುಳ್ಳ ವಿಷವು ಉತ್ಪನ್ನವಾಯಿತು. ಅದರಿಂದ ನಾವೂ ಮತ್ತು ಎಲ್ಲಾ ಲೋಕಗಳೂ ತಾಪಕ್ಕೆ ಒಳಗಾಗಿದ್ದೇವೆ. ಆ ವಿಷದ ಬಾಧೆಯನ್ನು ಪರಿಹರಿಸು ಎಂದು ಹೇಳಿದರು.

ಏವಮುಕ್ತಸ್ತತೋ ಬ್ರಹ್ಮಾ ದಧ್ಯೌ ಲೋಕೇಶ್ವರಂ ಹರಮ್ ।
ತ್ರ್ಯಕ್ಷಂ ತ್ರಿಶೂಲಿನಂ ರುದ್ರಂ ದೇವದೇವಮುಮಾಪತಿಮ್ ॥೨೧॥

ಹೀಗೆ ಹೇಳಲ್ಪಟ್ಟ ಬ್ರಹ್ಮನು ಆಗ ತ್ರಿಶೂಲಿಯೂ, ತ್ರಿನೇತ್ರನೂ, ದೇವದೇವನೂ, ಲೋಕೇಶ್ವರನೂ ಆದ ರುದ್ರನನ್ನು ಸ್ಮರಿಸಿದನು.

ತದಾऽಥ ಚಿಂತಿತೋ ದೇವಸ್ತಜ್ಞಾತ್ವಾ ದ್ರುತಮಾಯಯೌ ।
ತಸ್ಯಾಥ ದೇವಸ್ತತ್ಸರ್ವಮಾಚಚಕ್ಷೇ ಪ್ರಜಾಪತಿಃ ॥೨೨॥

ಆಗ ಬ್ರಹ್ಮದೇವರು ತನ್ನನ್ನು ಸ್ಮರಿಸುತ್ತಿರುವುದನ್ನು ತಿಳಿದು ಶಂಕರನು ಬೇಗ ಅಲ್ಲಿಗೆ ಬಂದನು. ಅನಂತರ, ಪ್ರಜಾಪತಿಯಾದ ಬ್ರಹ್ಮದೇವರು ರುದ್ರನಿಗೆ ಎಲ್ಲ ವಿಷಯವನ್ನೂ ತಿಳಿಸಿದರು.

ತಚ್ಛ್ರುತ್ವಾ ದೇವದೇವೇಶೋ ಲೋಕಸ್ಯಾಸ್ಯ ಹಿತೇ ರತಃ ।
ಅಪಿಬತ್ ತದ್ವಿಷಂ ರುದ್ರಃ ಕಾಲಾನಲಸಮಪ್ರಭಮ್ ॥೨೩॥

ಬ್ರಹ್ಮದೇವರ ಮಾತನ್ನು ಕೇಳಿದ ಈ ಲೋಕದ ಹಿತದಲ್ಲಿಯೇ ರತನಾದ ದೇವದೇವೇಶನಾದ ಶಂಕರನು ಕಾಲಾಗ್ನಿಯ ಕಾಂತಿಯುಕ್ತವಾದ ಆ ವಿಷವನ್ನು ಪಾನಮಾಡಿದನು.

ಕಂಠೇ ಸ್ಥಾಪಿತವಾನ್ ದೇವೋ ಲೋಕಾನಾಂ ಹಿತಕಾಮ್ಯಯಾ ।
ಯಸ್ಮಾತ್ತು ನೀಲತಾ ಕಂಠೇ ನೀಲಕಂಠಸ್ತತಃ ಸ್ಮೃತಃ ॥೨೪॥

ಲೋಕಗಳಿಗೆ ಹಿತವನ್ನು ಉಂಟುಮಾಡುವ ದೃಷ್ಟಿಯಿಂದ ರುದ್ರದೇವನು ಆ ವಿಷವನ್ನು ಕಂಠದಲ್ಲಿಯೇ ಉಳಿಸಿಕೊಂಡನು. ನೀಲವಾದ ವಿಷವನ್ನು ಕಂಠದಲ್ಲಿ ಧರಿಸಿದ ಕಾರಣ ಅವನಿಗೆ ನೀಲಕಂಠನೆಂದು ಹೆಸರು ಬಂದಿತು.

ಪೀತಮಾತ್ರೇ ವಿಷೇ ತತ್ರ ರುದ್ರೇಣಾಮಿತತೇಜಸಾ ।
ದೇವಾಃ ಪ್ರೀತಾಃ ಪುನರ್ಜಗ್ಮುಶ್ಚಕ್ರುರ್ವೈ ಕರ್ಮ ತತ್ತಥಾ ॥೨೫॥

ಅಮಿತಪರಾಕ್ರಮಿಯಾದ ರುದ್ರನು ಅಲ್ಲೇ ಆ ವಿಷವನ್ನು ಕುಡಿಯುತ್ತಿರಲು ದೇವತೆಗಳು ಸಂತುಷ್ಟರಾಗಿ ಪುನಃ ಕ್ಷೀರಸಮುದ್ರದ ಬಳಿಗೆ ಬಂದು ಮಥನವನ್ನು ಮುಂದುವರೆಸಿದರು.

ಮಥ್ಯಮಾನೇऽಮೃತಸ್ಯಾರ್ಥೇ ಭೂಯೋ ವೈ ದೇವದಾನವೈಃ ।
ವಾಸುಕೇರಥ ನಾಗಸ್ಯ ಸಹಸಾ ಕ್ಷಿಪ್ಯತಸ್ತು ತೈಃ ।
ಸಧೂಮಾಃ ಸಾರ್ಚಿಷೋ ವಾತಾ ನಿಷ್ಪೇತುರಸಕೃನ್ಮುಖಾತ್ ॥೨೬॥

ದೇವದಾನವರು ಅಮೃತದ ಸಲುವಾಗಿ ಮಥನವನ್ನು ಮಾಡಿ ವಾಸುಕಿಯನ್ನು ಬಹಳವಾಗಿ ಎಳೆದಾಡುತ್ತಿರಲು ವಾಸುಕಿಯ ಮುಖದಿಂದ ವಿಷಧೂಮಸಹಿತವಾದ ಅಗ್ನಿಯ ಕಿಡಿಗಳುಳ್ಳ ವಾಯುವು ಹೊರಹೊಮ್ಮಿತು.

ತೇ ಧೂಮಸಂಘಾಃ ಸಂಭೂತಾ ಮಹಾಮೇಘಾಃ ಸವಿದ್ಯುತಃ ।
ಅಭ್ಯವರ್ಷನ್ ಸುರಗಣಾನ್ ಶ್ರಮಸಂತಾಪಕರ್ಶಿತಾನ್ ॥
ತಸ್ಮಾಚ್ಚ ಗಿರಿಕೂಟಾಗ್ರಾತ್ ಪ್ರಚ್ಯುತಾಃ ಪುಷ್ಪವೃಷ್ಟಯಃ ।
ಸುರಾಸುರಗಣಾನ್ ಮಾಲ್ಯೈ ಸರ್ವತಃ ಸಮವಾಕಿರನ್ ॥೨೭॥

ಆ ಧೂಮವೆಲ್ಲವೂ ಒಟ್ಟುಗೂಡಿ ಮಹಾಮೇಘವಾಗಿ ಪರಿಣಮಿಸಿ, ವಿದ್ಯುತ್‌ಗಳ ಜೊತೆಯಲ್ಲಿ ಸೇರಿ, ದೇವತಾಗಣದ ಮೇಲೆ ಮಳೆಯನ್ನು ಸುರಿಸಿ ಅವರ ಶ್ರಮಸಂತಾಪಗಳನ್ನು ನಾಶಗೊಳಿಸಿದವು. ಮಂದರಪರ್ವತದ ಶಿಖರದಲ್ಲಿದ್ದ ಮರಗಳಿಂದ ಉದುರಿದ ಪುಷ್ಪಗಳು ಸುರಾಸುರಗಣಗಳಿಗೆ ಪುಷ್ಪವೃಷ್ಟಿಯನ್ನು ಮಾಡಿ ಅವರ ತಾಪವನ್ನು ಕಡಿಮೆ ಮಾಡಿದವು.

ಬಭೂವಾತ್ರ ಮಹಾಘೋಷೋ ಮಹಾಮೇಘರವೋಪಮಃ ।
ಉದಧೇರ್ಮಥ್ಯಮಾನಸ್ಯ ಮಂದರೇಣ ಸುರಾಸುರೈಃ ॥೨೮॥

ಸುರಾಸುರರು ಮಂದರಪರ್ವತದಿಂದ ಉದಧಿಯನ್ನು ಮಥನ ಮಾಡುತ್ತಿರಲು, ಆ ಕಡೆಯುವ ಘೋಷವು ಮಹಾಮೇಘ ಘೋಷದಂತೆ ಇದ್ದಿತು.

ತತ್ರ ನಾನಾಜಲಚರಾ ವಿನಿರ್ಧೂತಾ ಮಹಾದ್ರಿಣಾ ।
ವಿಲಯಂ ಸಮುಪಾಜಗ್ಮುಃ ಶತಶೋ ಲವಣಾಂಭಸಿ ॥೨೯॥

ಆ ಮಹಾಪರ್ವತದ ಭಾರಕ್ಕೆ ಸಿಲುಕಿದ ಅನೇಕ ಜಲಚರಪ್ರಾಣಿಗಳು, ನೂರಾರರ ಸಂಖ್ಯೆಯಲ್ಲಿ ಅಲ್ಲಿ ನಾಶವನ್ನು ಹೊಂದಿದವು.

ವಾರುಣಾನಿ ಚ ಭೂತಾನಿ ವಿವಿಧಾನಿ ಮಹೀಧರಾತ್ ।
ಪಾತಾಳತಲವಾಸೀನಿ ವಿಲಯಂ ಸಮುಪಾಗಮನ್ ॥೩೦॥

ಅನೇಕ ಜಲಚರಪ್ರಾಣಿಗಳೂ, ಪಾತಾಳತಳವಾಸಿಯಾದ ಪ್ರಾಣಿಗಳೂ, ಸಮುದ್ರದ ಭಾರದಿಂದ ನಾಶವನ್ನು ಹೊಂದಿದವು.

ತಸ್ಮಿಂಶ್ಚ ಭ್ರಾಮ್ಯಮಾಣೇऽದ್ರೌ ಸಂಘೃಷ್ಯಂತಃ ಪರಸ್ಪರಮ್ ।
ನ್ಯಪತನ್ಪತಗೋಪೇತಾಃ ಪರ್ವತಾಗ್ರಾನ್ಮಹಾದ್ರುಮಾಃ ॥ ೩೧॥

ಆ ಮಂದರವು ತಿರುಗಿಸಲ್ಪಡುತ್ತಿರಲು ಪರ್ವತದ ಶಿಖರದಲ್ಲಿದ್ದ ಮಹಾವೃಕ್ಷಗಳು ಒಂದರ ಮೇಲೊಂದು ಬೀಳುತ್ತಾ ತಮ್ಮಲ್ಲಿ ವಾಸಮಾಡಿದ ಪಕ್ಷಿಗಳ ಜೊತೆಯಲ್ಲಿ ಸಮುದ್ರದೊಳಗೆ ಬಿದ್ದವು.

ತೇಷಾಂ ಸಂಘರ್ಷತಶ್ಚಾಗ್ನಿರುತ್ಥಿತಃ ಪ್ರಜ್ವಲನ್ ಮುಹುಃ ।
ವಿದ್ಯುದ್ಭಿರಿವ ನೀಲಭ್ರಮಾವೃಣೋನ್ಮಂದರಂ ಗಿರಿಮ್ ॥೩೨॥

ಮರಗಳ ಪರಸ್ಪರ ಸಂಘರ್ಷದಿಂದ ಉಂಟಾದ ಅಗ್ನಿಯು ಮಿಂಚುಗಳೋಪಾದಿಯಲ್ಲಿದ್ದು, ಮಂದರಪರ್ವತವನ್ನು ಆವರಿಸಿತು.

ದದಾಹ ಕುಂಜರಾಂಶ್ಚೈವ ಸಿಂಹಾಂಶ್ಚೈವ ವಿನಿರ್ಗತಾನ್ ।
ವಿಗತಾಸೂನಿ ಸತ್ವಾನಿ ಸರ್ವಾಣಿ ವಿವಿಧಾನಿ ಚ ॥೩೩॥

ತಮ್ಮ ವಾಸಸ್ಥಾನಗಳಿಂದ ಹೊರಬಂದ ಆನೆಗಳನ್ನೂ ಮತ್ತು ಸಿಂಹಗಳನ್ನೂ ಮತ್ತು ಅನೇಕ ವಿಧವಾದ ಪ್ರಾಣಿಗಳನ್ನೂ ಆ ಅಗ್ನಿಯು ನಾಶಮಾಡಿತು.

ತಮಗ್ನಿಂ ಮಂದರಶ್ರೇಷ್ಠಂ ಪ್ರದಹಂತಮಿತಸ್ತತಃ ।
ವಾರಿಣಾ ಮೇಘಜೇನೇಂದ್ರಃ ಶಮಯಾಮಾಸ ಸರ್ವಶಃ ॥೩೪॥

ಎಲ್ಲಾ ಕಡೆಯಲ್ಲಿಯೂ ಆ ಮಂದರಪರ್ವತವನ್ನು ದಹಿಸುತ್ತಿರುವ ಅಗ್ನಿಯನ್ನು ಇಂದ್ರನು ಮೇಘಜನ್ಯವಾದ ಜಲದಿಂದ ಶಮನಗೊಳಿಸಿದನು.

ತತೋ ನಾನಾವಿಧಾಸ್ತತ್ರ ಸುಸ್ರುವುಃ ಸಾಗರಾಂಭಸಿ ।
ಮಹಾದ್ರುಮಾಣಾಂ ನಿರ್ಯಾಸಾ ಬಹವಶ್ಚೌಷಧೀರಸಾಃ ॥೩೫॥

ಅನಂತರ ಆ ಸಾಗರದ ನೀರಿನಲ್ಲಿ ಅನೇಕ ವಿಧವಾದ ವೃಕ್ಷಗಳ ರಸಗಳೂ ಮತ್ತು ಅನೇಕ ಔಷಧಿಗಳ ರಸಗಳೂ ಸಹ, ಆಯಾ ಮರಗಳಿಂದ ಮತ್ತು ಲತೆಗಳಿಂದ ಸ್ರವಿಸಿ ಸೇರಿಕೊಂಡವು.

ತೇಷಾಮಮೃತವೀರ್ಯಾಣಾಂ ರಸಾನಾಮಾಸವೇನ ಚ ।
ಅಮೃತತ್ವಂ ಸುರಾ ಜಗ್ಮುಃ ಕಾಂಚನಸ್ಯ ಚ ನಿಸ್ರವಾತ್ ॥೩೬॥

ಆ ವೃಕ್ಷಗಳ ಮಹಾಪರಿಣಾಮವುಳ್ಳ ರಸಗಳಿಂದಲೂ, ಕಾಂಚನರಸದಿಂದಲೂ, ದೇವತೆಗಳು ಅಮೃತತ್ವವನ್ನು ಹೊಂದಿದರು (ಬಲಿಷ್ಠರಾದರು)

ಅಥ ತಸ್ಯ ಸಮುದ್ರಸ್ಯ ಸಂಜಾತಮುದಕಂ ಪಯಃ ।
ರಸೋಪಮರ್ದೈರ್ಮಿಶ್ರಂ ಚ ತತಃ ಕ್ಷೀರಾದಭೂದ್ ಘೃತಮ್ ॥೩೭॥

ಅನಂತರ ಈ ಅನೇಕ ರಸಗಳಿಂದ ಮಿಶ್ರಿತವಾದ ಆ ಸಮುದ್ರದ ಕ್ಷೀರರೂಪವಾದ ಜಲವು ಘೃತವಾಗಿ ಪರಿಣಮಿಸಿತು.

ತತೋ ಬ್ರಹ್ಮಾಣಮಾಸೀನಂ ದೇವಾ ವರದಮಬ್ರುವನ್ ।
ಶ್ರಾಂತಾಃ ಸ್ಮ ಸುಭೃಶಂ ಬ್ರಹ್ಮನ್ನ ಭವತ್ಯಮೃತಂ ಜಲಾತ್ ॥೩೮॥

ಆಗ ದೇವತೆಗಳು ವರದನಾದ ಬ್ರಹ್ಮದೇವರನ್ನು ಸಮೀಪಿಸಿ ಬ್ರಹ್ಮದೇವನೇ, ನಾವು ಬಹಳವಾಗಿ ಬಳಲಿದ್ದೇವೆ. ಸಮುದ್ರದಿಂದ ಅಮೃತವು ಉಂಟಾಗುತ್ತಿಲ್ಲ ಎಂದು ಹೇಳಿದರು.

ಋತೇ ನಾರಾಯಣಂ ದೇವಂ ದೈತ್ಯಾ ನಾಗೋತ್ತಮೋ ವಯಮ್ ।
ಚಿರಾರಬ್ಧಮಿದಂ ಚಾಪಿ ಸಾಗರಸ್ಯ ವಿಮಂಥನಮ್ ॥೩೯॥

ನಾರಾಯಣನನ್ನೊಬ್ಬನನ್ನು ಬಿಟ್ಟು ದೈತ್ಯರೂ, ನಾವೂ ಮತ್ತು ವಾಸುಕಿಯೂ ಸೇರಿ ಸಾಗರದ ಮಂಥನವನ್ನು ಪ್ರಾರಂಭಿಸಿ ಬಹಳ ಕಾಲವು ಕಳೆಯಿತು ಎಂದು ಹೇಳಿದರು.

ದೇವಾನಾಂ ವಚನಂ ಶ್ರುತ್ವಾ ಬ್ರಹ್ಮಾ ಲೋಕಪಿತಾಮಹಃ ।
ತತೋ ನಾರಾಯಣಂ ದೇವಂ ವಚನಂ ಚೇದಮಬ್ರವೀತ್ ।
ವಿಧತ್ಸ್ವೈಷಾಂ ಬಲಂ ವಿಷ್ಣೋ ಭವಾನತ್ರ ಪರಾಯಣಃ ॥೪೦॥

ದೇವತೆಗಳ ವಚನವನ್ನು ಕೇಳಿದ ಲೋಕಪಿತಾಮಹನಾದ ಬ್ರಹ್ಮದೇವನು ಆಗ ನಾರಾಯಣನನ್ನು ಕುರಿತು ವಿಷ್ಣುವೇ, ನೀನೇ ಎಲ್ಲರಿಗೂ ಶ್ರೇಷ್ಠನಾದ ಪರಾಯಣನಾದವನು. ಆದ್ದರಿಂದ ಇವರಿಗೆ ಸಾಮರ್ಥ್ಯವನ್ನು ಕೊಡು ಎಂದು ಹೇಳಿದನು.

ಶ್ರೀಭಗವನ್

ಬಲಂ ದದಾಮಿ ಸರ್ವೇಷಾಂ ಕರ್ಮೈತದ್ ಯೇ ಸಮಾಸ್ಥಿತಾಃ ।
ಕ್ಷೀಭ್ಯತಾಂ ಕಲಶಃ ಸರ್ವೈರ್ಮಂದರಃ ಪರಿವರ್ತ್ಯತಾಮ್ ॥ ೪೧॥

ನಾನು ಈ ಕಾರ್ಯದಲ್ಲಿ ಉದ್ಯುಕ್ತರಾದವರಿಗೆಲ್ಲಾ ಬಲವನ್ನು ಕೊಡುತ್ತೇನೆ. ಎಲ್ಲರೂ ಸೇರಿ ಮಂದರವನ್ನು ತಿರುಗಿಸಿ ಸಮುದ್ರವನ್ನು ಕಡೆಯಿರಿ.

ಸೂತಃ

ನಾರಾಯಣವಚಃ ಶ್ರುತ್ವಾ ಬಲಿನಸ್ತೇ ಮಹೋದಧೇಃ ।
ತತ್ಪಯಃ ಸಹಿತಾ ಭೂಯಶ್ಚಕ್ರಿರೇ ಭೃಶಮಾಕುಲಮ್ ॥೪೨॥

ನಾರಾಯಣನ ಮಾತನ್ನು ಕೇಳಿ ಬಲಿಷ್ಠರಾದ ದೇವಾಸುರರು ಪುನಃ ಆ ಮಹೋದಧಿಯ ಜಲವನ್ನು ಕಡೆದು ಪ್ರಕ್ಷುಬ್ಧವನ್ನಾಗಿ ಮಾಡಿದರು.

ತತ್ರ ಪೂರ್ವಂ ವಿಷಂ ಜಾತಂ ತದ್ ಬ್ರಹ್ಮವಚನಾಚ್ಛಿವಃ ।
ಪ್ರಾಗ್ರಸಲ್ಲೋಕರಕ್ಷಾರ್ಥಂ ತತೋ ಜ್ಯೇಷ್ಠಾ ಸಮುತ್ಥಿತಾ ।
ಕೃಷ್ಣರೂಪಧರಾ ದೇವೀ ಸರ್ವಾಭರಣಭೂಷಿತಾ ॥೪೩॥

ಆಗ ಅಲ್ಲಿ ಮೊದಲು ವಿಷವು ಉತ್ಪನ್ನವಾಯಿತು. ಬ್ರಹ್ಮದೇವರ ವಚನದಂತೆ ಶಿವನು ಲೋಕವನ್ನು ರಕ್ಷಿಸುವ ಸಲುವಾಗಿ ಅದನ್ನು ಪಾನಮಾಡಿದನು. ಅನಂತರ ಕೃಷ್ಣವರ್ಣೋಪೇತಳಾದ, ಸರ್ವಾಭರಣಭೂಷಿತಳಾದ ಜ್ಯೇಷ್ಠಾದೇವಿ ಉತ್ಪನ್ನಳಾದಳು.

ತತಃ ಶತಸಹಸ್ರಾಂಶುಃ ಸಮಾನ ಇವ ಸಾಗರಾತ್ ।
ಪ್ರಸನ್ನಾಭಃ ಸಮುತ್ಪನ್ನಃ ಸೋಮಃ ಶೀತಾಂಶುರುಜ್ಜ್ವಲನ್ ॥೪೪॥

ಅನಂತರ ಸಹಸ್ರಾರು ಕಿರಣಗಳುಳ್ಳ, ತನ್ನ ಶ್ವೇತವರ್ಣದಿಂದ ಕ್ಷೀರಸಮುದ್ರಕ್ಕೆ ಸಮಾನನಾದ, ಪ್ರಸನ್ನವಾದ ಕಾಂತಿಯನ್ನು ಹೊಂದಿದ ಶೀತಕಿರಣಗಳನ್ನುಳ್ಳ ಚಂದ್ರನು ಪ್ರಕಾಶಿಸುತ್ತಾ ಮೇಲೆ ಬಂದನು.

ಶ್ರೀರನಂತರಮುತ್ಪನ್ನಾ ಘೃತಾತ್ ಪಾಂಡರವಾಸಿನೀ ।
ಸುರಾ ದೇವೀ ಸಮುತ್ಪನ್ನಾ ತುರಗಃ ಪಾಂಡರಸ್ತಥಾ ।

ಕೌಸ್ತುಭಶ್ಚ ಮಣಿರ್ದಿವ್ಯ ಉತ್ಪನ್ನೋಽಮೃತಸಂಭವಃ ।
ಮರೀಚಿವಿಕಚಃ ಶ್ರೀಮಾನ್ ಸ ಚ ನಾರಾಯಣಂ ಗತಃ ॥೪೫॥

ಅನಂತರ ಶುಭ್ರ ಶ್ವೇತವಸ್ತ್ರವನ್ನು ಧರಿಸಿದ ಲಕ್ಷ್ಮೀದೇವಿಯು ಆ ಘೃತದಿಂದ ಮೇಲೆದ್ದು ಬಂದಳು. ಅನಂತರ ಮದ್ಯಾಭಿಮಾನಿ ದೇವತೆಯೂ ಮೇಲೆ ಬಂದಳು. ಬಿಳಿಯ ಬಣ್ಣದ ಉಚ್ಚೈಃಶ್ರವ ಕುದುರೆಯೂ ಮತ್ತು ದಿವ್ಯವಾದ ಕೌಸ್ತುಭಮಣಿಯೂ ಅಮೃತಸಮುದ್ರದಿಂದ ಮೇಲೆ ಬಂದವು. ಒಳ್ಳೆಯ ಕಿರಣಗಳಿಂದ ಕೂಡಿದ ಪ್ರಕಾಶವಾದ ಆ ಮಣಿಯನ್ನು ನಾರಾಯಣನು ಧರಿಸಿದನು.

ಪಾರಿಜಾತಶ್ಚ ತತ್ರೈವ ಸುರಭಿಶ್ಚ ಮಹಾಮುನೇ ।
ಜಜ್ಞಾತೇ ತೌ ತದಾ ಬ್ರಹ್ಮನ್ ಸರ್ವಕಾಮಫಲಪ್ರದೌ ॥೪೬॥

ಎಲೈ ಮಹರ್ಷಿಯೇ, ಅಲ್ಲಿಯೇ ಪಾರಿಜಾತ ವೃಕ್ಷವೂ ಮತ್ತು ಧೇನುವಾದ ಸುರಭಿಯೂ ಜನಿಸಿದವು. ಬ್ರಾಹ್ಮಣನೇ, ಅವೆರಡೂ ವಸ್ತುಗಳೂ ಸರ್ವಕಾಮಪ್ರದವಾದುವು.

ತತೌ ಜಜ್ಞೇ ಮಹಾಭಾಗ ಚತುರ್ದಂತೋ ಮಹಾಗಜಃ ।
ಐರಾವತಃ ಸ ವೈ ನಾಗೋ ನಾಗಾನಾಂ ಪ್ರವರಃ ಶುಚಿಃ ॥೪೭॥

ಎಲೈ ಮಹಾನುಭಾವನೇ, ಅನಂತರ ನಾಲ್ಕುದಂತಗಳುಳ್ಳ ಗಜಜಾತಿಯಲ್ಲೇ ಶ್ರೇಷ್ಠವಾದ ಶ್ವೇತವರ್ಣದ, ಪರಿಶುದ್ಧವಾದ ಐರಾವತಗಜವು ಉತ್ಪನ್ನವಾಯಿತು.

ಕೌಸ್ತುಭಶ್ಚಾಪ್ಸರಾಶ್ಚೈವ ಐರಾವತಮಹಾಗಜಃ ।
ಯತೋ ದೇವಾಸ್ತತೋ ಜಗ್ಮುರಾದಿತ್ಯಪಥಮಾಶ್ರಿತಾಃ ॥೪೮॥

ಕೌಸ್ತುಭವೂ, ಅಪ್ಸರೆಯರೂ, ಐರಾವತಗಜವೂ, ಸೂರ್ಯಮಾರ್ಗವನ್ನು ಆಶ್ರಯಿಸಿ ದೇವತೆಗಳ ಕಡೆಗೆ ಹೋದವು.

ಧನ್ವಂತರಿಸ್ತತೋ ದೇವೋ ವಪುಷ್ಮಾನುದತಿಷ್ಠತ ।
ಶ್ವೇತಂ ಕಮಂಡಲುಂ ಬಿಭ್ರದಮೃತಂ ಯತ್ರ ತಿಷ್ಠತಿ ॥೪೯॥

ಅನಂತರ ದೇವನಾದ ಧನ್ವಂತರಿಯು ಒಂದು ಮೂರ್ತಿಯನ್ನು ಧರಿಸಿ ಅಮೃತವು ತುಂಬಿದ ಶ್ವೇತ ಕಮಂಡಲುವನ್ನು ಕೈಯಲ್ಲಿ ಹಿಡಿದು ಎದ್ದು ಬಂದನು.

ಏತದತ್ಯದ್ಭುತಂ ದೃಷ್ಟ್ವಾ ದಾನವಾನಾಂ ಸಮುತ್ಥಿತಃ ।
ಅಮೃತಾರ್ಥೇ ಮಹಾನ್ ನಾದೋ ಮಮೇದಮಿತಿ ಜಲ್ಪತಾಮ್ ॥

ಈ ಅದ್ಭುತವಾದ ದೃಶ್ಯವನ್ನು ನೋಡಿದ ದಾನವರ ಸಮೂಹದಿಂದ ಅಮೃತದ ಸಲುವಾಗಿ 'ಇದು ನನ್ನದು ಇದು ನನ್ನದು' ಎಂಬ ಕಿರುಚಾಟವು ಕೇಳಿಬಂದಿತು.

ತತೋ ನಾರಾಯಣೋ ಮಾಯಾಮಾಸ್ಥಿತೋ ಮೋಹಿನೀಂ ಪ್ರಭುಃ।
ಸ್ತ್ರೀರೂಪಮದ್ಭುತಂ ಕೃತ್ವಾ ದಾನವಾನಭಿಸಂಶ್ರಿತಃ ॥೫೧॥

ಆಗ ನಾರಾಯಣನು ತನ್ನ ಇಚ್ಛೆಯಿಂದ ಮೋಹಕವಾದ, ಅದ್ಭುತವಾದ ಒಂದು ಸ್ತ್ರೀರೂಪವನ್ನು ಧರಿಸಿ ದಾನವರ ಕಡೆಗೆ ಬಂದನು.

ತತಸ್ತದಮೃತಂ ತಸ್ಯೈ ದದುಸ್ತೇ ಮೂಢಚೇತಸಃ ।
ಸ್ತ್ರಿಯೈ ದಾನವದೈತೇಯಾಃ ಸರ್ವೇ ತದ್ಗತಮಾನಸಾಃ ॥೫೨॥

ಆಗ ಆ ದಾನವದೈತೇಯರೆಲ್ಲರೂ ಅವಳಲ್ಲೇ ನೆಟ್ಟ ಮನಸ್ಸುಳ್ಳವರಾಗಿ ಮೌಢ್ಯದಿಂದ ಕೂಡಿದವರಾಗಿ ಅವಳ ಕೈಯಲ್ಲಿ ಅಮೃತಕಲಶವನ್ನು ಕೊಟ್ಟರು.

ಸಾ ತು ನಾರಾಯಣೇ ಮಾಯಾ ಧಾರಯಂತೀ ಕಮಂಡಲುಮ್।
ಅಸ್ಯಮಾನೇಷು ದೇವೇಷು ಪಂಕ್ತ್ಯಾ ಚ ಸಹ ದಾನವೈಃ ।
ದೇವಾನಪಾಯಯದ್ ದೇವೀ ನ ದೈತ್ಯಾಂಸ್ತೇ ಚ ಚುಕ್ರುಶುಃ ॥೫೩॥

ದೇವತೆಗಳೂ ಮತ್ತು ದಾನವರೂ ಬೇರೆ ಬೇರೆ ಪಂಕ್ತಿಗಳಲ್ಲಿ ಕುಳಿತಿರಲು ಮೋಹಿನಿಯ ರೂಪವನ್ನು ಧರಿಸಿದ ನಾರಾಯಣನು ದೇವತೆಗಳಿಗೆ ಅಮೃತವನ್ನು ಪಾನಮಾಡಿಸಿದನು. ದೈತ್ಯರಿಗೆ ಅಮೃತವು ದೊರೆಯಲಿಲ್ಲ. ಅವರು ಆಕ್ರೋಶವನ್ನು ಮಾಡಿದರು.

॥ ಇತಿ ಶ್ರೀಮನ್ಮಹಾಭಾರತೇ ಶತಸಹಸ್ರಿಕಾಯಾಂಸಂಹಿತಾಯಾಮಾದಿಪರ್ವಣಿ ಷೋಡಷೋऽಧ್ಯಾಯಃ ॥

॥ ಇತಿ ಆಸ್ತೀಕಪರ್ವಣಿ ಚತುರ್ಥೋऽಧ್ಯಾಯಃ ॥

ಇಲ್ಲಿಗೆ ಮಹಾಭಾರತದ ಆದಿಪರ್ವದಲ್ಲಿ ಹದಿನಾರನೆಯ ಅಧ್ಯಾಯ ಮುಗಿಯಿತು.

★★★★★

ಹದಿನೇಳನೆಯ ಅಧ್ಯಾಯ

(ದೇವತೆಗಳಿಂದ ಅಮೃತಪಾನ, ದೇವಾಸುರ ಸಂಗ್ರಾಮ, ಅಸುರರ ಪರಾಭವ, ಮಂದರಪರ್ವತದ ಯಥಾಸ್ಥಾನಗಮನ ಮತ್ತು ಅಮೃತದ ರಕ್ಷಣೆ.)

ಸೂತಃ

ಅಥಾವರಣಮುಖ್ಯಾನಿ ನಾನಾಪ್ರಹರಣಾನಿ ಚ ।
ಪ್ರಗೃಹ್ಯಾಭ್ಯದ್ರವನ್ ದೇವಾನ್ ಸಹಿತಾ ದೈತ್ಯದಾನವಾಃ ॥೧॥

ಅನಂತರ ದೈತ್ಯದಾನವರು ಅನೇಕ ಆಯುಧಗಳನ್ನೂ ಮತ್ತು ಆಯುಧಪ್ರಹಾರಗಳನ್ನು ನಿವಾರಣೆ ಮಾಡುವ ಸಾಧನಗಳನ್ನೂ ತೆಗೆದುಕೊಂಡು ಒಂದುಗೂಡಿ ದೇವತೆಗಳ ಮೇಲೆ ಎರಗಿದರು.

ತತಸ್ತದಮೃತಂ ದೇವೋ ವಿಷ್ಣುರಾದಾಯ ವೀರ್ಯವಾನ್ ।
ಜಗಾಮ ದಾನವೇಂದ್ರೇಭ್ಯೋ ನರೇಣ ಸಹಿತಃ ಪ್ರಭುಃ ॥೨॥

ಆಗ ಪರಾಕ್ರಮಶಾಲಿಯಾದ ವಿಷ್ಣುವು ಆಗತಾನೇ ಧರಿಸಿದ್ದ ಪುರುಷರೂಪವನ್ನು ತೆಗೆದುಕೊಂಡು, ಅಮೃತವನ್ನು ತೆಗೆದುಕೊಂಡು ನರನಿಂದ ಸಹಿತನಾಗಿ ದಾನವೇಂದ್ರರ ಸಮೀಪದಿಂದ ದೇವತೆಗಳ ಬಳಿಗೆ ಹೋದನು.

ತತೋ ದೇವಗಣಾಃ ಸರ್ವೇ ಪಪುಸ್ತದಮೃತಂ ತದಾ ।
ವಿಷ್ಣೋಃ ಸಕಾಶಾತ್ ಸಂಪ್ರಾಪ್ಯ ಸಂಗ್ರಾಮೇ ತುಮುಲೇ ಸತಿ ॥೩॥

ಆಗ ದೇವತೆಗಳೆಲ್ಲರೂ ತುಮುಲವಾದ ಸಂಗ್ರಾಮವು ಜರುಗುತ್ತಿರಲು, ಆ ದೊಡ್ಡ ಕೋಲಾಹಲ ಮಧ್ಯದಲ್ಲಿ ವಿಷ್ಣುವಿನ ಕೈಯಿಂದ ಅಮೃತವನ್ನು ಪಡೆದು ಪಾನಮಾಡಿದರು.

ಪಾಯಯತ್ಯಮೃತಂ ದೇವಾನ್ ಹರೌ ಬಾಹುಬಲೇನ ಚ ।
ನರೋ ರಕ್ಷತಿ ಚಾಪೇನ ದೂರೀಕೃತ್ಯ ಧನುರ್ಧರಾನ್ ॥೪॥

ಹರಿಯು ದೇವತೆಗಳಿಗೆ ಅಮೃತವನ್ನು ಪಾನಮಾಡಿಸುತ್ತಿರಲು ನರನು ತನ್ನ ಬಾಹುಬಲದಿಂದ ಕೈಯಲ್ಲಿ ಚಾಪವನ್ನು ಧರಿಸಿ ಧನುರ್ಧರರಾದ ದಾನವರನ್ನು ದೂರಕ್ಕಟ್ಟುತ್ತಿದ್ದನು.

ತತಃ ಪಿಬತ್ಸು ತತ್ಕಾಲೇ ದೇವೇಷ್ವಮೃತಮುತ್ತಮಮ್ ।
ರಾಹುರ್ವಿಬುಧರೂಪೇಣ ದಾನವಃ ಪ್ರಾಪಿಬತ್ ತದಾ ॥೫॥

ಆಗ ದೇವತೆಗಳು ಶ್ರೇಷ್ಠವಾದ ಅಮೃತವನ್ನು ಪಾನಮಾಡುತ್ತಿರಲು ಆ ಕಾಲದಲ್ಲಿ ದಾನವನಾದ ರಾಹುವು ದೇವತೆಯ ರೂಪವನ್ನು ಧರಿಸಿ ಅಮೃತವನ್ನು ಪಾನಮಾಡಿದನು.

ತಸ್ಯ ಕಂಠಮನುಪ್ರಾಪ್ತೇ ದಾನವಸ್ಯಾಮೃತೇ ಸತಿ ।
ಆಖ್ಯಾತಂ ಚಂದ್ರಸೂರ್ಯಾಭ್ಯಾಂ ಸುರಾಣಾಂ ಹಿತಕಾಮ್ಯಯಾ ॥

ಅಮೃತವು ಆ ದಾನವನ ಕಂಠದವರೆಗೆ ಹೋಗುತ್ತಿರಲು ದೇವತೆಗಳ ಹಿತದ ಕಾಮನೆಯಿಂದ ಸೂರ್ಯಚಂದ್ರರು ಆ ವಿಷಯವನ್ನು ನಾರಾಯಣನಿಗೆ ತಿಳಿಸಿದರು.

ತತೋ ಭಗವತಾ ತಸ್ಯ ಶಿರಶ್ಛಿನ್ನಮಲಂಕೃತಮ್ ।
ಚಕ್ರಾಯುಧೇನ ಚಕ್ರೇಣ ಪಿಬತೋಽಮೃತಮೋಜಸಾ ॥೭॥

ಆಗ ಭಗವಂತನಾದ ನಾರಾಯಣನು ಬಲಾತ್ಕಾರದಿಂದ ಅಮೃತವನ್ನು ಪಾನಮಾಡುತ್ತಿರುವ ರಾಹುವಿನ ಅಲಂಕೃತವಾದ ಶಿರಸ್ಸನ್ನು ಚಕ್ರಾಯುಧನಾದ ಅವನು ತನ್ನ ಚಕ್ರದಿಂದ ಕತ್ತರಿಸಿದನು.

ತಚ್ಛೈಲಶೃಂಗಪ್ರತಿಮಂ ದಾನವಸ್ಯ ಶಿರೋ ಮಹತ್ ।
ಚಕ್ರೇಣೋತ್ಕೃತ್ತಮಪತಚ್ಚಾಲಯದ್ ವಸುಧಾತಲಮ್ ॥೮॥

ದಾನವನ ಗಿರಿಶಿಖರಸದೃಶವಾದ ಆ ದೊಡ್ಡ ಶಿರಸ್ಸು ಚಕ್ರದಿಂದ ಕತ್ತರಿಸಲ್ಪಟ್ಟು ಭೂಮಿಯನ್ನು ನಡುಗಿಸುತ್ತಾ ನೆಲದ ಮೇಲೆ ಬಿದ್ದಿತು.

ತತ್ ಕಬಂಧಂ ಪಪಾತಾಸ್ಯ ವಿಸ್ಫುರದ್ ಧರಣೀತಳೇ ।
ಸಪರ್ವತವನದ್ವೀಪಾಂ ದೈತ್ಯಸ್ಯಾಕಂಪಯನ್ ಮಹೀಮ್ ॥೯॥

ಆ ದೈತ್ಯನ ಚಂಚಲವಾದ ಕಬಂಧವೂ ಸಹ ಪರ್ವತವನದ್ವೀಪಗಳಿಂದ ಸಹಿತವಾದ ಭೂಮಿಯನ್ನು ನಡುಗಿಸುತ್ತಾ ಭೂಮಿಯ ಮೇಲೆ ಬಿದ್ದಿತು.

ತತೋ ವೈರವಿನಿರ್ಬಂಧಃ ಕೃತೋ ರಾಹುರ್ಮುಖೇನ ವೈ ।
ಶಾಶ್ವತಶ್ಚಂದ್ರಸೂರ್ಯಾಭ್ಯಾಂ ಗ್ರಸತ್ಯದ್ಯಾಪಿ ಚೈವ ತೌ ॥೧೦॥

ಆ ಕಾರಣದಿಂದ ರಾಹುವು ಚಂದ್ರಸೂರ್ಯರ ಮೇಲೆ ತನ್ನ ಶಿರಸ್ಸಿನಿಂದಲೇ ಆಗ್ರಹದಿಂದ ವೈರವನ್ನು ಸಾಧಿಸಿದನು. ಈಗಲೂ ಸಹ ಅವರಿಬ್ಬರನ್ನೂ ಅವನು ತನ್ನ ಮುಖದಿಂದಲೇ ನುಂಗುತ್ತಾನೆ.

ವಿಹಾಯ ಭಗವಾಂಶ್ಚಾಪಿ ಸ್ತ್ರೀರೂಪಮತುಳಂ ಹರಿಃ ।
ನಾನಾಪ್ರಹರಣೈರ್ಘೋರೈರ್ದಾನವಾನ್ ಸಮಕಂಪಯತ್ ॥೧೧॥

ಹರಿಯೂ ಸಹ ತನ್ನ ಅಸದೃಶವಾದ ಸ್ತ್ರೀರೂಪವನ್ನು ತೊರೆದು ಭಯಂಕರವಾದ ನಾನಾಯುಧಗಳನ್ನು ಹಿಡಿದು ದಾನವರನ್ನು ನಡುಗಿಸಿದನು.

ತತಃ ಪ್ರವೃತ್ತಃ ಸಂಗ್ರಾಮಃ ಸಮೀಪೇ ಲವಣಾಂಭಸಃ ।
ಸುರಾಣಾಮಸುರಾಣಾಂ ಚ ಸ ವೈ ಘೋರತರೋ ಮಹಾನ್ ॥೧೨॥

ಅನಂತರ ಲವಣಸಮುದ್ರದ ಸಮೀಪದಲ್ಲಿ ದೇವತೆಗಳಿಗೂ ಮತ್ತು ಅಸುರರಿಗೂ ಘೋರವಾದ ಒಂದು ದೊಡ್ಡಯುದ್ಧವು ಜರುಗಿತು.

ಪ್ರಾಸಾಃ ಸುನೀಲಾಸ್ತೀಕ್ಷ್ಣಾಗ್ರಾ ನ್ಯಪತಂತ ಸಹಸ್ರಶಃ ।
ತೋಮರಾಶ್ಚ ಸುತೀಕ್ಷ್ಣಾಗ್ರಾಃ ಶಸ್ತ್ರಾಣಿ ವಿವಿಧಾನಿ ಚ ॥೧೩॥

ಹರಿತವಾದ ಕೃಷ್ಣವರ್ಣೋಪೇತವಾದ ಪ್ರಾಸಗಳೂ, ಅತ್ಯಂತ ಹರಿತವಾದ ತೋಮರಗಳೂ, ಅನೇಕವಿಧವಾದ ಶಸ್ತ್ರಗಳೂ ಪ್ರಯೋಗಿಸಲ್ಪಟ್ಟವು.

ತತೋಽಸುರಾಶ್ಚಕ್ರಭಿನ್ನಾ ವಮಂತೋ ರುಧಿರಂ ಬಹು ।
ಅಸಿಶಕ್ತಿಗದಾರುಗ್ಣಾ ನಿಪೇತುರ್ಧರಣೀತಳೇ ॥೧೪॥

ಆಗ ಅಸುರರು ಚಕ್ರದಿಂದ ಕತ್ತರಿಸಲ್ಪಟ್ಟರಾಗಿ ರಕ್ತವನ್ನು ಕಾರುತ್ತಾ, ಖಡ್ಗದಿಂದ, ಶಕ್ತಿಯಿಂದ ಮತ್ತು ಗದೆಯಿಂದ ಪೀಡಿತರಾಗಿ ಭೂಮಿಯ ಮೇಲೆ ಬಿದ್ದರು.

ಛಿನ್ನಾನಿ ಪಟ್ಟಸೈಶ್ಚಾಪಿ ಶಿರಾಂಸಿ ವಿಬುಧದ್ವಿಷಾಮ್ ।
ತಪ್ತಕಾಂಚನಮಾಲ್ಯಾನಿ ನಿಪೇತುರನಿಶಂ ತದಾ ॥೧೫॥

ವಿಬುಧಶತ್ರುಗಳಾದ ದಾನವರ ತಪ್ತಕಾಂಚನದ ಮಾಲೆಗಳನ್ನು ಧರಿಸಿದ ಶಿರಸ್ಸುಗಳು ಪಟ್ಟಸ ಎಂಬ ಆಯುಧದಿಂದ ಛಿನ್ನವಾಗಿ ಭೂಮಿಯ ಮೇಲೆ ಸತತವಾಗಿ ಬಿದ್ದವು.

ರುಧಿರೇಣೋಪಲಿಪ್ತಾಂಗಾ ನಿಹತಾಶ್ಚ ಮಹಾಸುರಾಃ ।
ಅದ್ರೀಣಾಮಿವ ಕೂಟಾನಿ ಧಾತುರಕ್ತಾನಿ ಶೇರತೇ ॥೧೬॥

ರಕ್ತದಿಂದ ಎಲ್ಲ ಕಡೆಯಲ್ಲೂ ತೊಯ್ದ ಅವಯವವುಳ್ಳವರಾಗಿ ಮಡಿದ ಮಹಾಸುರರು ವೇಗೈರಿಕಾದಿ ಧಾತುವಿನಿಂದ ಕೆಂಪಾದ ಗಿರಿಶಿಖರಗಳಂತೆ ಅಲ್ಲಲ್ಲಿ ಬಿದ್ದಿದ್ದರು.

ತತೋ ಹಲಹಲಾಶಬ್ದಃ ಸಂಬಭೂವ ಸಮಂತತಃ ।
ಹಾಹಾರವಃ ಸಂಬಭೂವ ತತ್ರ ತತ್ರ ಸಮಂತತಃ ॥೧೭॥

ಆಗ ಎಲ್ಲ ಕಡೆಯಲ್ಲೂ ಹಲಾಹಲಾ ಶಬ್ದವೂ ಮತ್ತು ಹಾಹಾಕಾರವೂ ಉಂಟಾಯಿತು.

ಅನ್ಯೋನ್ಯಂ ಛಿಂದತಾಂ ಶಸ್ತ್ರೈರಾದಿತ್ಯೇ ಲೋಹಿತಾಯತಿ ।
ಪರಿಘೈಶ್ಚಾಯಸೈಃ ಪೀನೈಃ ಸನ್ನಿಕೃಷ್ಟೈಶ್ಚ ಮುಷ್ಟಿಭಿಃ ।
ನಿಘ್ನತಾಂ ಸಮರೇಽನ್ಯೋನ್ಯಂ ಶಬ್ದೋ ದಿವಮಥಾಸ್ಪೃಶತ್ ॥೧೮॥

ಸೂರ್ಯನು ಮುಳುಗುತ್ತಾ ಕೆಂಪಾಗುತ್ತಿರಲು ಶಸ್ತ್ರಗಳಿಂದಲೂ, ಆಯಸವಾದ ಪರಿಘಗಳಿಂದಲೂ, ಮುಷ್ಟಿಗಳಿಂದಲೂ ಪರಸ್ಪರವಾಗಿ ಛೇದನೆ ಮಾಡುವ ಮತ್ತು ಪೀಡಿಸುವ ಅವರಿಂದ ಉಂಟಾದ ಶಬ್ದವು ಆಕಾಶವನ್ನು ಮುಟ್ಟಿತು.

ಛಿಂಧಿ ಛಿಂಧಿ ಪ್ರಧಾವಧ್ವಂ ಪಾತಯಾಭಿಸರೇತಿ ಚ ।
ವ್ಯಶ್ರೂಯಂತ ಮಹಾಘೋರಾಃ ಶಬ್ದಾಸ್ತತ್ರ ಸಮಂತತಃ ॥೧೯॥

'ಕತ್ತರಿಸು', 'ಹೊಡೆದು ಹಾಕು', 'ಧಾವಿಸಿಹೋಗು', 'ಕೆಳಗೆ ಉರುಳಿಸು' 'ಹಿಂಬಾಲಿಸು' ಎಂಬ ಮಹಾಘೋರವಾದ ಶಬ್ದಗಳು ಅಲ್ಲಿ ಎಲ್ಲಾಕಡೆಗಳಲ್ಲಿಯೂ ಕೇಳಿಬಂದವು.

ಏವಂ ಸುತುಮುಲೇ ಯುದ್ಧೇ ವರ್ತಮಾನೇ ಭಯಾವಹೇ ।
ನರನಾರಾಯಣೌ ದೇವೌ ಸಮಾಜಗ್ಮತುರಾಹವಮ್ ।
ತತ್ರ ದಿವ್ಯಂ ಧನುರ್ದೃಷ್ಟ್ವಾ ನರಸ್ಯ ಭಗವಾನಪಿ ।
ಚಿಂತಯಾಮಾಸ ತಚ್ಚಕ್ರಂ ವಿಷ್ಣುರ್ದಾನವಸೂದನಃ ॥೨೦॥

ಹೀಗೆ ಭಯಂಕರವಾದ, ತುಮುಲವಾದ ಯುದ್ಧವು ನಡೆಯುತ್ತಿರಲು, ಆ ಯುದ್ಧಪ್ರದೇಶಕ್ಕೆ ನರನಾರಾಯಣರು ಆಗಮಿಸಿದರು. ಭಗವಂತನಾದ ನಾರಾಯಣನು ನರನ ದಿವ್ಯವಾದ ಧನುಸ್ಸನ್ನು ನೋಡಿ ದಾನವಸೂದನನಾದ ವಿಷ್ಣುವಾದ ಅವನು ತನ್ನ ಚಕ್ರವನ್ನು ಸ್ಮರಿಸಿದನು.

ತತೋಽಂಬರಾಚ್ಚಿಂತಿತಮಾತ್ರಮಾಗತಂ
ಮಹಾಪ್ರಭಂ ಚಕ್ರಮಭಿತ್ರನಾಶನಮ್ ।
ವಿಭಾವಸೋಸ್ತುಲ್ಯಮಕುಂಠಮಂಡಲಂ
ಸುದರ್ಶನಂ ಭೀಮಮಜಯ್ಯಮುತ್ತಮಮ್ ॥೨೧॥

ಆಗ ವಿಷ್ಣುವು ಸ್ಮರಿಸಿದ ಕೂಡಲೇ ಮಹಾಪ್ರಭೆಯುಳ್ಳ, ಶತ್ರುನಾಶಕವಾದ, ಅಗ್ನಿಗೆ ಸಮಾನವಾದ ಪರಾಕ್ರಮವುಳ್ಳ, ಪೂರ್ಣಮಂಡಲವನ್ನು ಹೊಂದಿದ, ಭಯಂಕರವಾದ, ಯಾರೂ ಜಯಿಸಲು ಸಾಧ್ಯವಿಲ್ಲದ, ಶ್ರೇಷ್ಠವಾದ ಆ ಸುದರ್ಶನಚಕ್ರವು ಪ್ರಾಪ್ತವಾಗಿ ಬಂದಿತು.

ತದಾಗತಂ ಜ್ವಲಿತಹುತಾಶನಪ್ರಭಂ
ಭಯಂಕರಂ ಕರಿಕರಬಾಹುರಚ್ಯುತಃ ।
ಮುಮೋಚ ವೈ ವಿಪುಳಮುದಗ್ರತೇಜವನ್-
ಮಹಾಪ್ರಭಂ ಪರನಗರಾವದಾರಣಮ್ ॥೨೨॥

ಹೀಗೆ ಆಗತವಾದ, ಜ್ವಲಿಸುವ ಅಗ್ನಿಯ ಕಾಂತಿಯುಳ್ಳ, ಭಯಂಕರವಾದ, ವಿಸ್ತಾರವಾದ, ಉದೀರ್ಣವಾದ ತೇಜಸ್ಸುಳ್ಳ, ಮಹಾಪ್ರಭೆಯುಳ್ಳ, ಶತ್ರುನಗರವಿನಾಶಕವಾದ ಆ ಚಕ್ರವನ್ನು ಕರಿಕರದಂತಹ ಬಾಹುಗಳುಳ್ಳ ಅಚ್ಯುತನು ಕೈಯಲ್ಲಿ ಹಿಡಿದು ಶತ್ರುಸೈನ್ಯದ ಮೇಲೆ ಪ್ರಯೋಗಿಸಿದನು.

ತದರ್ಕಕೋಟಿಜ್ವಲಿತಹುತಾಶಸನ್ನಿಭಂ
ಪುನಃ ಪುನರ್ಯಪತದುದಗ್ರವೇಗವತ್ ।
ವ್ಯದಾರಯದ್ ದಿತಿದನುಜಾನ್ ಸಹಸ್ರಶಃ
ಕರೇರಿತಂ ಪುರುಷವರೇಣ ಸಂಯುಗೇ ॥೨೩॥

ಆ ಚಕ್ರವಾದರೋ ಕೋಟಿಸೂರ್ಯಪ್ರಭೆಯುಳ್ಳದ್ದಾಗಿ, ಜ್ವಲಿಸುವ ಅಗ್ನಿಯ ಕಾಂತಿಯುಳ್ಳದ್ದಾಗಿ, ಮಹಾವೇಗವುಳ್ಳದ್ದಾಗಿ, ಯುದ್ಧದಲ್ಲಿ ಪುರುಷೋತ್ತಮನ ಕರದಿಂದ ಪ್ರಯೋಗಿಸಲ್ಪಟ್ಟಿದ್ದಾಗಿ, ಪುನಃ ಪುನಃ ಶತ್ರುಗಳ ಸೇನೆಯ ಮೇಲೆ ಬೀಳುತ್ತಾ, ಸಹಸ್ರಸಂಖ್ಯೆಯಲ್ಲಿ ದಿತಿಜರನ್ನೂ ಮತ್ತು ದನುಜರನ್ನೂ ಸೀಳಿಹಾಕಿತು.

ದಹತ್ ಕ್ವಚಿಜ್ಜ್ವಲನ ಇವಾವಲೇಲಿಹತ್
ಪ್ರಸಹ್ಯ ತಾನಸುರಗಣಾನ್ ನ್ಯಕೃಂತತ ।
ಪ್ರವೇಪಿತಂ ವಿಯತಿ ಮುಹುಃ ಕ್ಷಿತೌ ತದಾ
ಪಪೌ ರಣೇ ರುಧಿರಮಥೋ ಪಿಶಾಚವತ್ ॥೨೪॥

ಒಮ್ಮೊಮ್ಮೆ ಅಗ್ನಿಯಂತೆ ಜ್ವಲಿಸುತ್ತಾ, ಒಮ್ಮೊಮ್ಮೆ ಅಗ್ನಿಯ ಜ್ವಾಲೆಗಳಂತೆ ನೆಕ್ಕುತ್ತಾ, ತನ್ನ ಬಲದಿಂದ ಆ ಅಸುರಗಣಗಳನ್ನೆಲ್ಲಾ ಅದು ಕತ್ತರಿಸಿ ಹಾಕಿತು. ಒಮ್ಮೊಮ್ಮೆ ಭೂಮಿಯಲ್ಲಿ, ಒಮ್ಮೊಮ್ಮೆ ಆಕಾಶದಲ್ಲಿ ಸಂಚರಿಸುತ್ತಾ ಪಿಶಾಚಿಯಂತೆ ಅದು ದೈತ್ಯರ ರಕ್ತವನ್ನು ಪಾನಮಾಡಿತು.

ಅಥಾಸುರಾ ಗಿರಿಭಿರದೀನಚೇತಸಾ
ಮುಹುರ್ಮುಹುಃ ಸುರಗಣಮದ್ರಯಂಸ್ತದಾ ।
ಮಹಾಬಲಾ ವಿಗಳಿತಮೇಘವರ್ಚಸಃ
ಸಹಸ್ರಶೋ ಗಗನಮಭಿಪ್ರಪದ್ಯ ತೇ ॥೨೫॥

ಆಗ ಅಸುರರು ಎದೆಗುಂದದೆ, ಮಹಾಬಲವುಳ್ಳವರಾಗಿ ಆಕಾಶದಿಂದ ಕೆಳಗುರುಳಿದ ಮೇಘಗಳಂತೆ ಕಾಂತಿಯುಳ್ಳ ಅವರು ಸಹಸ್ರಸಂಖ್ಯೆಯಲ್ಲಿ ಆಕಾಶವನ್ನು ಏರಿ, ದೇವತಾಗಣವನ್ನು ಪುನಃ ಪುನಃ ಘಾತಿಸಿದರು.

ಅಥಾಂಬರಾದ್ ಭಯಜನನಾಃ ಪ್ರಪೇದಿರೇ
ಸಪಾದಪಾ ಬಹುವಿಧಮೇಘರೂಪಿಣಃ ।

ಮಹಾದ್ರಯಃ ಪ್ರವಿಗಳಿತಾಗ್ರಸಾನವಃ
ಪರಸ್ಪರಂ ದ್ರುತಮಭಿಹತ್ಯ ಸಸ್ವನಾಃ ॥೨೬॥

ಆಗ ಆಕಾಶದಿಂದ ಭಯಂಕರವಾದ ಅನೇಕವಿಧವಾದ ಮೇಘಗಳಂತಿರುವ ವೃಕ್ಷಗಳ ಮಳೆಯು ಉಂಟಾಯಿತು. ದೊಡ್ಡ ದೊಡ್ಡ ಪರ್ವತಗಳು ತಮ್ಮ ಶಿಥಿಲವಾದ ಶಿಖರಗಳ ಜೊತೆಯಲ್ಲಿ ಮರಗಳ ಮೇಲೆ ಬೀಳುತ್ತಾ ದೊಡ್ಡ ಶಬ್ದವನ್ನುಂಟು ಮಾಡಿ ಕೆಳಗೆ ಉರುಳಿದವು.

ತತೋ ಮಹೀ ಪ್ರವಿಚಲಿತಾ ಸಕಾನನಾ
ಮಹಾದ್ರಿಪಾತಾಭಿಹತಾ ಸಮಂತತಃ ।
ಪರಸ್ಪರಂ ಭೃಶಮಭಿಗಮ್ಯ ಸಸ್ವನಂ
ವಿಮರ್ದನಂ ಭೃಶಮಭಿಸಂಪ್ರವರ್ತತೇ ॥೨೭॥

ಆಗ ಮಹಾಪರ್ವತಪಾತದಿಂದ ಎಲ್ಲ ಕಡೆಯಲ್ಲಿಯೂ ಪ್ರಹಾರಕ್ಕೆ ಒಳಗಾದ ಕಾನನಸಹಿತವಾದ ಭೂಮಿಯು ಕಂಪಿಸಿತು. ದೇವದಾನವರು ಪರಸ್ಪರವಾಗಿ ಒಬ್ಬರನ್ನೊಬ್ಬರು ಸಮೀಪಿಸಿ ಘೋರಶಬ್ದಸಹಿತವಾಗಿ ಪರಸ್ಪರವಾಗಿ ವಿಮರ್ದನವನ್ನು ಮಾಡಿದರು.

ನರಸ್ತತೋ ವರಕನಕಾಗ್ರಭೂಷಣೈ-
ರ್ಮಹೇಷುಭಿಃ ಪವನಪಥಂ ಸಮಾವೃಣೋತ್ ।
ವಿದಾರಯನ್ ಗಿರಿಶಿಖರಾಣಿ ಪತ್ರಿಭಿ-
ರ್ಮಹಾಹವೇಽಸುರಗಣವಿಗ್ರಹೇ ತದಾ ॥೨೮॥

ಆಗ ನರನು ಶ್ರೇಷ್ಠವಾದ ಸುವರ್ಣಾಭರಣಗಳಿಂದ ಅಲಂಕೃತವಾದ ಬಾಣಗಳಿಂದ ವಾಯುಪಥವಾದ ಆಕಾಶವನ್ನೇ ಮುಚ್ಚಿಹಾಕಿದನು. ಅಸುರರ ಜೊತೆಯಲ್ಲಿ ನಡೆದ ಆ ದೊಡ್ಡ ಯುದ್ಧದಲ್ಲಿ ತನ್ನ ಬಾಣಗಳಿಂದ ಆ ಗಿರಿಶಿಖರಗಳನ್ನು ಸೀಳುತ್ತಾ ಯುದ್ಧವನ್ನು ಮಾಡಿದನು.

ತತೋ ಮಹೀಂ ಲವಣಜಲಂ ಚ ಸಾಗರಂ
ಮಹಾಸುರಾಃ ಪ್ರವಿವಿಶುರರ್ದಿತಾಃ ಸುರೈಃ ।
ವಿಯದ್ಗತಂ ಜ್ವಲಿತಹುತಾಶನಪ್ರಭಂ
ಸುದರ್ಶನಂ ಪರಿಕುಪಿತಂ ನಿಶಾಮ್ಯ ಚ ॥೨೯॥

ಜ್ವಲಿಸುವ ಅಗ್ನಿಯ ಕಾಂತಿಯುಳ್ಳ, ಕ್ರೋಧೋದ್ದೀಪ್ತವಾದ ಸುದರ್ಶನ ಚಕ್ರವು ಆಕಾಶದಲ್ಲಿರುವುದನ್ನು ನೋಡಿದ ಮಹಾಸುರರು ದೇವತೆಗಳ ಶಸ್ತ್ರಗಳಿಂದ ಘಾತಿತರಾಗಿ ಭೂಮಿಯನ್ನೂ ಮತ್ತು ಲವಣಸಮುದ್ರವನ್ನೂ ಸೇರಿದರು.

ತತಸ್ತು ತೈರ್ವಿಜಯಮವಾಪ್ಯ ಮಂದರಃ
ಸ್ವಮೇವ ದೇಶಂ ಗಮಿತಃ ಸುಪೂಜಿತಃ ।
ವಿನಾದ್ಯ ಖಂ ದಿವಮಪಿ ಚೈವ ಸರ್ವಶ-
ಸ್ತತೋ ಗತಾಃ ಸಲಿಲಧರಾ ಯಥಾಗತಮ್ ॥೩೦॥

ಆಗ ದೇವತೆಗಳು ವಿಜಯವನ್ನು ಪಡೆದು ಮಂದರಪರ್ವತವನ್ನು ಅದರ ಮೂಲಸ್ಥಾನಕ್ಕೆ ಸೇರಿಸಿದರು. ಆಕಾಶದಲ್ಲಿ ಸೇರಿದ್ದ ಮೋಡಗಳು ದಿಕ್ಕುದಿಕ್ಕುಗಳು ಪ್ರತಿಧ್ವನಿಸುವಂತೆ ಗುಡುಗಿ ತಮ್ಮ ದಾರಿಯನ್ನು ಹಿಡಿದು ಹೊರಟುಹೋದವು.

ತತೋऽಮೃತಂ ಸುನಿಹಿತಮೇವ ಚಕ್ರಿರೇ
ಸುರಾಃ ಪರಾಂ ಮುದಮಧಿಗಮ್ಯ ಪುಷ್ಕಲಾಮ್ ।
ದದುಶ್ಚ ತಂ ನಿಧಿಮಮೃತಸ್ಯ ರಕ್ಷಿತುಂ
ಕಿರೀಟಿನೇ ಬಲಿಭಿರಥಾಮರಾರಿಭಿಃ ॥೩೧॥

ಆಗ ದೇವತೆಗಳು ಬಹಳವಾದ ಸಂತೋಷವನ್ನು ಪಡೆದು ಅಮೃತವನ್ನು ಸರಿಯಾದ ಸ್ಥಳದಲ್ಲಿ ಸ್ಥಾಪನೆಮಾಡಿದರು ಮತ್ತು ಬಲಿಷ್ಠರಾದ ದೇವಶತ್ರುಗಳಿಂದ ಆ ಅಮೃತವನ್ನು ರಕ್ಷಿಸಲು ಇಂದ್ರನಿಗೆ ಆ ಅಮೃತದ ಕಲಶವನ್ನು ನೀಡಿದರು.

॥ ಇತಿ ಶ್ರೀಮನ್ಮಹಾಭಾರತೇ ಶತಸಹಸ್ರಿಕಾಯಾಂಸಂಹಿತಾಯಾಮಾದಿಪರ್ವಣಿ
ಸಪ್ತದಶೋऽಧ್ಯಾಯಃ ॥

॥ ಇತಿ ಆಸ್ತೀಕಪರ್ವಣಿ ಪಂಚಮೋऽಧ್ಯಾಯಃ ॥

ಇಲ್ಲಿಗೆ ಮಹಾಭಾರತದ ಆದಿಪರ್ವದಲ್ಲಿ ಹದಿನೇಳನೆಯ ಅಧ್ಯಾಯ ಮುಗಿಯಿತು.

★★★★★

ಹದಿನೆಂಟನೆಯ ಅಧ್ಯಾಯ

(ಉಚ್ಚೈಃಶ್ರವಸ್ಸಿನ ಬಾಲದ ಬಣ್ಣದ ವಿಷಯದಲ್ಲಿ ಕದ್ರುವಿನತೆಯರ ಪಣ, ಕದ್ರುವಿನಿಂದ ತನ್ನ ಮಕ್ಕಳಿಗೆ ಶಾಪ, ಬ್ರಹ್ಮದೇವರ ಅನುಮೋದನೆ. ಕಾಶ್ಯಪರಿಗೆ ಬ್ರಹ್ಮದೇವರ ಸಮಾಧಾನವಚನ, ಕಾರ್ಕೋಟಕನಿಂದ ತಾಯಿಗೆ ಆಶ್ವಾಸನೆ)

ಸೂತಃ

ಏತತ್ತೇ ಸರ್ವಮಾಖ್ಯಾತಮಮೃತಂ ಮಥಿತಂ ಯಥಾ ।
ತತ್ರ ಸೋಽಶ್ವಃ ಸಮುತ್ಪನ್ನಃ ಶ್ರೀಮಾನತುಲವಿಕ್ರಮಃ ॥೧॥

ತಂ ನಿಶಮ್ಯ ತದಾ ಕದ್ರೂರ್ವಿನತಾಮಿದಮಬ್ರವೀತ್ ।
ಉಚ್ಚೈಃಶ್ರವಾಸ್ತು ಕಿಂವರ್ಣೋ ಭದ್ರೇ ಜಾನೀಹಿ ಮಾಚಿರಮ್ ॥೨॥

ಶೌನಕರೇ, ಅಮೃತಮಥನವು ಹೇಗೆ ನಡೆಯಿತೆಂದು ನಾನು ನಿಮಗೆ ಸಮಗ್ರವಾಗಿ ಹೇಳಿದ್ದೇನೆ. ಅಂತಹ ಅತುಲ ಪರಾಕ್ರಮವುಳ್ಳ, ಕಾಂತಿಯುಕ್ತವಾದ ಉಚ್ಚೈಃಶ್ರವಸ್ ಅಶ್ವವು ಅಲ್ಲಿ ಉತ್ಪನ್ನವಾಯಿತು. ಅದನ್ನು ಕೇಳಿದ ಕದ್ರುವು ವಿನತೆಯನ್ನು ಕುರಿತು, 'ಭದ್ರೇ, ಉಚ್ಚೈಃಶ್ರವದ ಬಣ್ಣವು ಯಾವುದು ಎಂದು ಬೇಗ ಹೇಳು' ಎಂದು ಹೇಳಿದಳು.

ವಿನತಾ

ಶ್ವೇತ ಏವಾಶ್ವರಾಜೋಽಯಂ ಕಿಂ ವಾ ತ್ವಂ ಮನ್ಯಸೇ ಶುಭೇ ।
ಬ್ರೂಹಿ ವರ್ಣಂ ತ್ವಮಪ್ಯಸ್ಯ ತಥಾऽऽವಾಂ ವಿಪಣಾವಹೇ ॥೩॥

ಶುಭಳಾದವಳೇ, ಈ ಅಶ್ವರಾಜನ ಬಣ್ಣ ಶ್ವೇತವೇ. ನಿನ್ನ ಅಭಿಪ್ರಾಯವೇನು? ನೀನು ಅದರ ಬಣ್ಣವನ್ನು ಹೇಳು. ನಾವಿಬ್ಬರೂ ಈ ವಿಷಯದಲ್ಲಿ ಪಣವನ್ನು ಕಟ್ಟೋಣ (ಬಾಜಿಯನ್ನು ಕಟ್ಟೋಣ.)

ಕದ್ರೂಃ

ಕೃಷ್ಣಬಾಲಮಹಂ ಮನ್ಯೇ ಹಯಮೇನಂ ಶುಚಿಸ್ಮಿತೇ ।
ಏಹಿ ಸಾರ್ಧಂ ಮಯಾ ಪಶ್ಯ ದಾಸಭಾವಾಯ ಭಾಮಿನಿ ॥೪॥

ಶುಚಿಸ್ಮಿತೆಯೇ, ನಾನು ಅದರ ಬಾಲವನ್ನು ಮಾತ್ರ ಕಪ್ಪೆಂದು ತಿಳಿಯುತ್ತೇನೆ. ಬಂದು ನನ್ನ ಜೊತೆಯಲ್ಲಿನೋಡು. ಎಲೌ ಭಾಮಿನಿಯೇ, ಸೋತವರ ದಾಸ್ಯವನ್ನು ಪಣವಾಗಿಟ್ಟು (ನಾವು) ಆಡೋಣ.

ಸೂತಃ

ಏವಂ ತೇ ಸಮಯಂ ಕೃತ್ವಾ ದಾಸಭಾವಾಯ ವೈ ಮಿಥಃ ।
ಜಗ್ಮತುಃ ಸ್ವಗೃಹಾನೇವ ಶ್ವೋ ದ್ರಕ್ಷ್ಯಾವ ಇತಿ ಸ್ಮ ಹ ॥೫॥

ಹೀಗೆ ಅವರು ಪರಸ್ಪರವಾಗಿ ದಾಸ್ಯದ ಪಣವನ್ನು ತೊಟ್ಟು ನಾಳೆ ನೋಡೋಣ ಎಂದು ಯೋಚಿಸಿ ತಮ್ಮ ಮನೆಗಳಿಗೆ ಹೋದರು.

ತತ್ರ ಪುತ್ರಸಹಸ್ರಂ ತತ್ ಕದ್ರೂರ್ಜಿಹ್ಮಂ ಚಿಕೀರ್ಷತೀ ।
ಆಜ್ಞಾಪಯಾಮಾಸ ತದಾ ಬಾಲೇ ಭೂತ್ವಾಽಂಜನಪ್ರಭಾಃ ।
ಪ್ರವಿಶಧ್ವಂ ಹಯಂ ಶೀಘ್ರಂ ದಾಸೀ ನ ಸ್ಯಾಮಹಂ ಯಥಾ ॥೬॥

ಆಗ ತನ್ನ ಸಹಸ್ರಪುತ್ರರಿಂದ ಆ ಪಣದಲ್ಲಿ ವಂಚನೆಯನ್ನು ಮಾಡಲು ಬಯಸಿದ ಕದ್ರೂದೇವಿಯು ಮಕ್ಕಳನ್ನು ಕುರಿತು ನೀವೆಲ್ಲರೂ ಕಪ್ಪುಬಣ್ಣದ ಸರ್ಪಗಳಾಗಿ ಆ ಅಶ್ವದ ಬಾಲದಲ್ಲಿ ನಾನು ದಾಸಿಯಾಗದಿರುವಂತೆ ಶೀಘ್ರವಾಗಿ ಸೇರಿಕೊಳ್ಳಿ ಎಂದು ಹೇಳಿದಳು.

ತದಾಶ್ವಂ ನಾನ್ವಪದ್ಯಂತ ತಾನ್ ಶಶಾಪ ಭುಜಂಗಮಾನ್ ।
ಸರ್ಪಸತ್ರೇ ವರ್ತಮಾನೇ ಪಾವಕೋ ವಃ ಪ್ರಧಕ್ಷ್ಯತಿ ।
ಜನಮೇಜಯಸ್ಯ ರಾಜರ್ಷೇಃ ಪಾಂಡವೇಯಸ್ಯ ಧೀಮತಃ ॥೭॥

ಆ ಮಕ್ಕಳು ಆ ವಾಕ್ಯವನ್ನು ಕೇಳದೇ ಇರುತ್ತಿರಲು, ಕದ್ರೂದೇವಿಯು ಆ ಸರ್ಪಗಳನ್ನು ಕುರಿತು ಮೇಧಾವಿಯಾದ ಪಾಂಡುವಂಶದಲ್ಲಿ ಉದ್ಭವಿಸಿದ ರಾಜರ್ಷಿಯಾದ ಜನಮೇಜಯನ ಸರ್ಪಯಾಗದಲ್ಲಿ ಅಗ್ನಿಯು ನಿಮ್ಮನ್ನು ಸುಟ್ಟು ಬೂದಿಮಾಡುವನು ಎಂದು ಶಾಪವನ್ನು ಕೊಟ್ಟಳು.

ಶಾಪಮೇನಂ ತು ಶುಶ್ರಾವ ಸ್ವಯಮೇವ ಪಿತಾಮಹಃ ।
ಅತಿಕ್ರೂರಂ ಸಮುದ್ದಿಷ್ಟಂ ಕದ್ರ್ವಾ ದೈವಾದಿತೀವ ಹ ॥೮॥

ಕದ್ರುವು ದೈವಪ್ರೇರಿತಳಾಗಿ ಕೊಟ್ಟ ಈ ಅತಿಕ್ರೂರವಾದ ಶಾಪವನ್ನು ಬ್ರಹ್ಮದೇವರು ತಾವೇ ಕೇಳಿದರು.

ಸಾರ್ಧಂ ದೇವಗಣೈಃ ಸರ್ವೈರ್ವಚನಂ ಚಾನ್ವಮೋದತ ।
ಬಹುತ್ವಂ ಪ್ರೇಕ್ಷ್ಯ ಸರ್ಪಾಣಾಂ ಪ್ರಜಾನಾಂ ಹಿತಕಾಮ್ಯಯಾ ॥೯॥

ಸರ್ಪಗಳು ಬಹುಸಂಖ್ಯೆಯಲ್ಲಿರುವುದನ್ನು ಗಮನಿಸಿ ಪ್ರಜೆಗಳ ಹಿತದೃಷ್ಟಿಯಿಂದ ದೇವಗಣಗಳಿಂದ ಕೂಡಿದ ಬ್ರಹ್ಮದೇವರು ಕದ್ರುವಿನ ವಚನವನ್ನು ಅನುಮೋದಿಸಿದರು.

ತಿಗ್ಮವೀರ್ಯವಿಷಾ ಹ್ಯೇತೇ ದಂದಶೂಕಾ ಮಹಾಬಲಾಃ ।
ತೇಷಾಂ ತೀಕ್ಷ್ಣವಿಷತ್ವಾದ್ಧಿ ಪ್ರಜಾನಾಂ ಚ ಹಿತಾಯ ವೈ ॥೧೦॥

ಯುಕ್ತಂ ಮಾತೃಕೃತಂ ತೇಷಾಂ ಪರಪೀಡಾಪ್ರಸರ್ಪತಾಮ್ ।
ಅನ್ಯೇಷಾಮಪಿ ಸತ್ವಾನಾಂ ನಿತ್ಯಂ ದೋಷಕರಾಶ್ಚ ಯೇ ।
ತೇಷಾಂ ಪ್ರಾಣಾಂತಿಕೋ ದಂಡೋ ದೈವೇನ ವಿನಿಪಾತ್ಯತೇ ॥೧೧॥

ಈ ಸರ್ಪಗಳು ಮಹಾಬಲಿಷ್ಠವಾಗಿ ಕಚ್ಚುವ ಸ್ವಭಾವವನ್ನು ಹೊಂದಿ ಬಹಳ ಪ್ರಬಲವಾದ ವಿಷವನ್ನು ಹೊಂದಿವೆ. ಅವುಗಳ ವಿಷತೀಕ್ಷ್ಣತೆಯಿಂದಲೂ ಮತ್ತು ಪ್ರಜೆಗಳ ಹಿತದೃಷ್ಟಿಯಿಂದಲೂ ಪರಪೀಡೆಗಾಗಿ ಸಂಚರಿಸುವ ಅವುಗಳಿಗೆ ತಾಯಿಯು ಕೊಟ್ಟ ಶಾಪವು ಯುಕ್ತವಾಗಿಯೇ ಇದೆ. ಈ ಸರ್ಪಗಳು ಉಳಿದ ಪ್ರಾಣಿಗಳಿಗೂ ಹಿಂಸೆಯನ್ನುಂಟು ಮಾಡುತ್ತವೆ. ಆದ್ದರಿಂದ ಅವುಗಳಿಗೆ ದೈವೇಚ್ಛೆಯಿಂದ ಪ್ರಾಣಾಂತಿಕವಾದ ಶಿಕ್ಷೆಯು ಹೀಗೆ ವಿಧಿಸಲ್ಪಡುತ್ತದೆ.

ಏವಮುಕ್ತ್ವಾ ಸ ದೇವಸ್ತು ಪೂರ್ವಂ ಕದ್ರೂಂ ಚ ತಾಂ ತದಾ ।
ಆಹೂಯ ಕಾಶ್ಯಪಂ ದೇವೋ ವಚನಂ ಚೇದಮಬ್ರವೀತ್ ॥೧೨॥

ಬ್ರಹ್ಮದೇವರು ದೇವತೆಗಳಿಗೆ ಮೊದಲು ಹೀಗೆ ಹೇಳಿ, ಅನಂತರ ಕಾಶ್ಯಪರನ್ನೂ ಮತ್ತು ಕದ್ರುವನ್ನೂ ಕರೆದು ಹೀಗೆ ಮಾತನಾಡಿದರು.

ಯದಿ ತೇ ದಂದಶೂಕಾಶ್ಚ ಸರ್ಪಾ ಜಾತಾಶ್ಚ ತೇಽನಘ ।
ವಿಷೋದ್ಬಣಾ ಮಹಾಭೋಗಾ ಮಾತ್ರಾ ಶಪ್ತಾಃ ಪರಂತಪ ॥೧೩॥

ತತ್ರ ಮನ್ಯುಸ್ತ್ವಯಾ ತಾತ ನ ಕರ್ತವ್ಯಃ ಕಥಂಚನ ।
ದೃಷ್ಟಂ ಪುರಾತನೇ ಹ್ಯೇತತ್ ಯಜ್ಞೇ ಸರ್ಪವಿನಾಶನಮ್ ॥೧೪॥

ಪರಿಶುದ್ಧನಾದ ಕಾಶ್ಯಪನೇ, ನಿನ್ನ ಪುತ್ರರಾಗಿ ಜನಿಸಿದ ಕಡಿಯುವ ಸ್ವಭಾವವುಳ್ಳ ಸರ್ಪಗಳು ಉಲ್ಬಣವಾದ ವಿಷದಿಂದ ಕೂಡಿದ್ದು, ದೊಡ್ಡ ಶರೀರಗಳಿಂದ

ಕೂಡಿದವುಗಳಾಗಿ ತಾಯಿಯಿಂದ ಶಪಿಸಲ್ಪಟ್ಟಿವೆ. ಎಲೈ ಪರಂತಪನೇ ಮತ್ತು ಪ್ರೀತಿಪಾತ್ರನೇ, ನೀನು ಈ ವಿಷಯದಲ್ಲಿ ಕೋಪಗೊಳ್ಳಬಾರದು. ಯಜ್ಞದಲ್ಲಿ ಸರ್ಪವಿನಾಶವು ಹಿಂದಿನಿಂದಲೂ ನಡೆದು ಬಂದಿರುವುದು ಕಂಡಿದೆ.

ಇತ್ಯುಕ್ತ್ವಾ ಸೃಷ್ಟಿಕೃದ್ ದೇವಸ್ತಂ ಪ್ರಸಾದ್ಯ ಪ್ರಶಸ್ಯ ಚ ।
ಪ್ರಾದಾದ್ ವಿಷಹರೀಂ ವಿದ್ಯಾಂ ಕಾಶ್ಯಪಾಯ ಮಹಾತ್ಮನೇ ॥೧೫॥

ಹೀಗೆ ಹೇಳಿ ಸೃಷ್ಟಿಕರ್ತನಾದ ಬ್ರಹ್ಮದೇವರು ಅವರನ್ನು ಸಮಾಧಾನಗೊಳಿಸಿ, ಅವರನ್ನು ಪ್ರಶಂಸೆಮಾಡಿ, ಮಹಾತ್ಮರಾದ ಆ ಕಾಶ್ಯಪರಿಗೆ ವಿಷಹರವಿದ್ಯೆಯನ್ನು ಉಪದೇಶಮಾಡಿದರು.

ಏವಂ ಶಪ್ತೇಷು ನಾಗೇಷು ಕದ್ರ್ಯಾ ಚ ದ್ವಿಜಸತ್ತಮ
ಉದ್ವಿಗ್ನಃ ಶಾಪತಸ್ತಸ್ಯಾಃ ಕದ್ರೂಂ ಕಾರ್ಕೋಟಕೋಽಬ್ರವೀತ್ ।
ಮಾತರಂ ಪರಮಪ್ರೀತಸ್ತಥಾ ಭುಜಗಸತ್ತಮಃ ॥೧೬॥

ಎಲೈ ಬ್ರಾಹ್ಮಣಶ್ರೇಷ್ಠರೇ, ಹೀಗೆ ನಾಗಗಳು ತಾಯಿಯಿಂದ ಶಪಿಸಲ್ಪಡುತ್ತಿರಲು ಆ ಶಾಪವನ್ನು ಕೇಳಿ ಉದ್ವಿಗ್ನನಾದ ಭುಜಗಶ್ರೇಷ್ಠನಾದ ಕಾರ್ಕೋಟಕನು ತಾಯಿಯನ್ನು ಸಮೀಪಿಸಿ ಸಂತೋಷದಿಂದ ಮಾತನಾಡಿದನು.

ಆವಿಶ್ಯ ವಾಜಿನಂ ಮುಖ್ಯಂ ಬಾಲೋ ಭೂತ್ವಾಽಂಜನಪ್ರಭಃ ।
ದರ್ಶಯಿಷ್ಯಾಮಿ ತತ್ರಾಹಮಾತ್ಮಾನಂ ಕಾಮಮಾಶ್ವಸ ।
ಏವಮಸ್ತ್ವಿತಿ ಸಾ ಪುತ್ರಂ ಪ್ರತ್ಯುವಾಚ ಯಶಸ್ವಿನೀ ॥೧೭॥

ತಾಯಿಯೇ, ನಾನು ಕಪ್ಪುಬಣ್ಣವನ್ನು ಧರಿಸಿ ಆ ಅಶ್ವದ ಬಾಲವನ್ನು ಸೇರಿ ನಾನು ಆ ಬಾಲವನ್ನು ಕಪ್ಪಾಗಿ ತೋರಿಸುತ್ತೇನೆ. ನೀನು ಸಮಾಧಾನದಿಂದಿರು ಎಂದು ಹೇಳಿದನು. ಈ ಮಾತುಗಳನ್ನು ಕೇಳಿದ ಯಶಸ್ವಿನಿಯಾದ ಕದ್ರುದೇವಿಯು ಮಗನನ್ನು ಕುರಿತು 'ಹಾಗೆಯೇ ಆಗಲಿ' ಎಂದು ಹೇಳಿದಳು.

॥ ಇತಿ ಶ್ರೀಮನ್ಮಹಾಭಾರತೇ ಶತಸಹಸ್ರಿಕಾಯಾಂಸಂಹಿತಾಯಾಮಾದಿಪರ್ವಣಿ
ಅಷ್ಟಾದಶೋಽಧ್ಯಾಯಃ ॥

॥ ಇತಿ ಆಸ್ತೀಕಪರ್ವಣಿ ಷಷ್ಠೋಽಧ್ಯಾಯಃ ॥

ಇಲ್ಲಿಗೆ ಮಹಾಭಾರತದ ಆದಿಪರ್ವದಲ್ಲಿ ಹದಿನೆಂಟನೆಯ ಅಧ್ಯಾಯ ಮುಗಿಯಿತು.

ಹತ್ತೊಂಭತ್ತನೆಯ ಅಧ್ಯಾಯ

(ಕದ್ರುವಿನತೆಯರಿಂದ ಸಮುದ್ರಗಮನ ಮತ್ತು ಸಮುದ್ರದ ವರ್ಣನೆ.)

ಸೂತಃ

ತತೋ ರಾತ್ರ್ಯಾಂ ವ್ಯತೀತಾಯಾಂ ಪ್ರಭಾತೇऽಭ್ಯುದಿತೇ ರವೌ ।
ಕದ್ರೂಶ್ಚ ವಿನತಾ ಚೈವ ಭಗಿನ್ಯೌ ತೇ ತಪೋಧನ ॥೧॥

ಅಮರ್ಷಿತೇ ಸುಸಂರಬ್ಧೇ ದಾಸ್ಯೇ ಕೃತಪಣೇ ತದಾ ।
ಜಗ್ಮತುಸ್ತುರಗಂ ದ್ರಷ್ಟುಮುಚ್ಚೈಃಶ್ರವಸಮಂತಿಕಾತ್ ॥೨॥

ಎಲೈ ತಪೋಧನನೇ, ಅನಂತರ ರಾತ್ರಿಯು ಕಳೆದು ಪ್ರಾತಃಕಾಲದಲ್ಲಿ ರವಿಯು ಉದಯಿಸುತ್ತಿರಲು, ಕೋಪದಿಂದ ಕೂಡಿದ ಅಕ್ಕತಂಗಿಯರಾದ ಕದ್ರು ಮತ್ತು ವಿನತೆಯರು ದಾಸ್ಯದ ಪಣವನ್ನು ತೊಟ್ಟು ಉಚ್ಚೈಃಶ್ರವಸ್ ಕುದುರೆಯನ್ನು ಹತ್ತಿರದಿಂದ ನೋಡಲು ಹೊರಟರು.

ದದೃಶಾತೇ ಉಭೇ ತತ್ರ ಸಮುದ್ರಂ ನಿಧಿಮಂಭಸಾಮ್ ।
ಮಹಾಂತಮುದಕಾಗಾಧಂ ಕ್ಷೋಭ್ಯಮಾಣಂ ಮಹಾಸ್ವನಮ್ ॥೩॥

ಅವರಿಬ್ಬರೂ ಅಲ್ಲಿ ಜಲನಿಧಿಯಾದ ಮಹಾಜಲರಾಶಿಯಿಂದ ಕೂಡಿದ ಆಳವೇ ತಿಳಿಯದಿದ್ದಂತಹ, ಅಲೆಗಳಿಂದ ಪ್ರಕ್ಷುಬ್ಧವಾಗಿ ಗರ್ಜಿಸುತ್ತಿದ್ದ ಸಮುದ್ರವನ್ನು ನೋಡಿದರು.

ತಿಮಿಂಗಿಲರ್ಝಷಾಕೀರ್ಣಂ ಮಕರೈರಾವೃತಂ ತಥಾ ।
ಸತ್ತ್ವೈಶ್ಚ ಬಹುಸಾಹಸ್ರೈರ್ನಾನಾರೂಪೈಃ ಸಮಾವೃತಮ್ ॥೪॥

ಉದ್ಗೈರ್ನಿತ್ಯಮನಾಧೃಷ್ಯಂ ಕೂರ್ಮಗ್ರಾಹಸಮಾಕುಲಮ್ ।
ಆಕರಂ ಸರ್ವರತ್ನಾನಾಮಾಲಯಂ ವರುಣಸ್ಯ ಚ ॥೫॥

ನಾಗಾನಾಮಾಶ್ರಯಂ ರಮ್ಯಮುತ್ತಮಂ ಸರಿತಾಂ ಪತಿಮ್ ।
ಪಾತಾಳಜ್ವಲನಾವಾಸಮಸುರಾಣಾಂ ಚ ಬಂಧನಮ್ ॥೬॥

ಭಯಂಕರಂ ಚ ಸತ್ತ್ವಾನಾಂ ಪಯಸಾಂ ನಿಧಿಮದ್ಭುತಮ್ ।
ಶುಭ್ರಂ ದಿವ್ಯಮಮರ್ತ್ಯಾನಾಮಮೃತಸ್ಯಾಕರಂ ಪರಮ್ ॥೭॥

ಅಪ್ರಮೇಯಮಚಿಂತ್ಯಂ ಚ ಸುಪುಣ್ಯಜಲಮದ್ಭುತಮ್ ।
ಘೋರಂ ಜಲಚರಾಕೀರ್ಣಂ ರೌದ್ರಂ ಭೈರವನಿಸ್ವನಮ್ ॥೮॥

ಸಮುದ್ರವು ತಿಮಿಂಗಲಗಳಿಂದಲೂ, ಮೀನುಗಳಿಂದಲೂ ಕೂಡಿದ್ದು, ಮೊಸಳೆಗಳಿಂದಲೂ, ಅನೇಕ ಸಹಸ್ರಸಂಖ್ಯೆಯ ನಾನಾರೂಪದ ಪ್ರಾಣಿಗಳಿಂದಲೂ ತುಂಬಿಹೋಗಿದ್ದಿತು. ಉಗ್ರವಾದ ಕೂರ್ಮ, ಮೊಸಳೆ ಮೊದಲಾದ ಪ್ರಾಣಿಗಳಿಂದ ತುಂಬಿ, ಯಾರೂ ಅದನ್ನು ಪರಾಭವಗೊಳಿಸುವಂತಿರಲಿಲ್ಲ. ಅದು ಸರ್ವರತ್ನಗಳಿಗೂ ಆಶ್ರಯವಾಗಿ ವರುಣನ ಆಲಯವಾಗಿದ್ದಿತು. ಅದು ಅನೇಕ ಸರ್ಪಗಳಿಗೂ ಆಶ್ರಯವಾಗಿದ್ದಿತು. ಎಲ್ಲನದಿಗಳಿಗೂ ಪತಿಯಾಗಿದ್ದಿತು. ಪಾತಾಳಾಗ್ನಿಗೂ ಆವಾಸವಾಗಿ ರಾಕ್ಷಸರ ಬಂಧನದ ಸ್ಥಾನವಾಗಿದ್ದಿತು. ಜಲಚರಪ್ರಾಣಿಗಳಿಂದ ಭಯಂಕರವಾಗಿದ್ದು, ಜಲಗಳಿಗೆ ಅದ್ಭುತವಾದ ಆಶ್ರಯವಾಗಿದ್ದಿತು. ಶುಭ್ರವಾಗಿ, ದಿವ್ಯವಾಗಿ, ದೇವತೆಗಳ ಆಹಾರವಾದ ಅಮೃತಕ್ಕೂ ಆಕರವಾಗಿದ್ದಿತು. ಪೂರ್ಣವಾಗಿ ತಿಳಿಯಲು ಸಾಧ್ಯವಾಗದೆ, ಚಿಂತನೆಗೂ ನಿಲುಕದಂತೆ ಇದ್ದಿತು. ಪುಣ್ಯಜಲದಿಂದ ಪೂರ್ಣವಾಗಿ ಅದ್ಭುತವೂ, ಘೋರವೂ, ಭಯಂಕರವಾದ ಶಬ್ದವನ್ನು ಹೊಂದಿರುವುದರಿಂದ ರೌದ್ರವೂ ಆಗಿ ಜಲಚರಪ್ರಾಣಿಗಳಿಂದ ತುಂಬಿದ್ದಿತು.

ಗಂಭೀರಾವರ್ತಸಲಿಲಂ ಸರ್ವಭೂತಭಯಂಕರಮ್ ।
ವೇಲಾಡೋಲಾನಿಲಬಲಕ್ಷೋಭವೇಗಸಮುತ್ಥಿತೈಃ ॥೯॥

ವೀಚೀಹಸ್ತೈಃ ಪ್ರಚಲಿತೈರ್ನೃತ್ಯಂತಮಿವ ಸರ್ವತಃ ।
ಚಂದ್ರವೃದ್ಧಿಕ್ಷಯವಶಾದುದ್ವೃತೋರ್ಮಿಂ ದುರಾಸದಮ್ ॥೧೦॥

ಪಾಂಚಜನ್ಯಸ್ಯ ಜನನಂ ರತ್ನಾಕರಮನುತ್ತಮಮ್ ।
ಗಾಂ ವಿಂದತಾ ಭಗವತಾ ಗೋವಿಂದೇನಾಮಿತೌಜಸಾ ।
ವರಾಹರೂಪಿಣಾ ಚಾಂತರ್ವಿಲೋಳಿತಜಲಾವಿಲಮ್ ॥೧೧॥

ಆಳವಾದ ಅನೇಕ ಸುಳಿಗಳಿಂದ ಕೂಡಿದ ನೀರನ್ನು ಹೊಂದಿ ಎಲ್ಲರಿಗೂ ಭಯವನ್ನುಂಟುಮಾಡುವುದಾಗಿ, ಅಲೆಗಳೆಂಬ ಉಯ್ಯಾಲೆಯ ಮೇಲೆ ಸಂಚರಿಸುವ ವಾಯುವೇಗದಿಂದ, ವೀಚೀತರಂಗಗಳೆಂಬ ಹಸ್ತಗಳಿಂದ ಎಲ್ಲ ಕಡೆಯಲ್ಲಿಯೂ

ನೃತ್ಯಮಾಡುವಂತೆ ಕಾಣುತ್ತಿದ್ದಿತು. ಚಂದ್ರನ ವೃದ್ಧಿಯನ್ನು ಅನುಸರಿಸಿ ವೃದ್ಧಿಯನ್ನು ಪಡೆದು ಹತ್ತಿರ ಹೋಗಲು ದುಸ್ಸಾಧ್ಯವಾಗಿದ್ದಿತು. ಅದು ಪಾಂಚಜನ್ಯ ಶಂಖದ ಉತ್ಪತ್ತಿ ಭೂಮಿಯೂ, ರತ್ನಗಳಿಗೆ ಶ್ರೇಷ್ಠವಾದ ಆಶ್ರಯವೂ ಆಗಿದ್ದಿತು. ಭೂಮಿಯನ್ನು ಮೇಲಕ್ಕೆ ತರಲು ಹೋದ ಅಮಿತಪರಾಕ್ರಮಿಯಾದ ವರಾಹರೂಪಿಯಾದ ಭಗವಂತನಿಂದ ಒಳಗೆ ಕಲಕಲ್ಪಟ್ಟ ಜಲವನ್ನು ಹೊಂದಿದ್ದಾಗಿದ್ದಿತು.

ಬ್ರಹ್ಮರ್ಷಿಣಾ ಚ ತಪತಾ ವರ್ಷಾಣಾಂ ಶತಮತ್ರಿಣಾ ।
ಅನಾಸಾದಿತಪರ್ಯಂತಂ ಪಾತಾಳತಳಮವ್ಯಯಮ್ । ।೧೨।।

ಅಧ್ಯಾತ್ಮಯೋಗನಿದ್ರಾಂ ಚ ಪದ್ಮನಾಭಸ್ಯ ಸೇವತಃ ।
ಯುಗಾಂತಕಾಲಶಯನಂ ವಿಷ್ಣೋರಮಿತತೇಜಸಃ ।।೧೩।।

ವಡವಾಮುಖಿದೀಪ್ತಾಗ್ನೇಸ್ತೋಯಹವ್ಯಪ್ರದಂ ಶುಭಮ್ ।
ಅಗಾಧಪಾರವಿಸ್ತೀರ್ಣಮಪ್ರಮೇಯಂ ಸರಿತ್ಪತಿಮ್ ।।೧೪।।

ಮಹಾನದೀಭಿರ್ಬಹ್ವೀಭಿಃ ಸ್ಪರ್ಧಯೇವ ಸಹಸ್ರಶಃ ।
ಅಭಿಸಾರ್ಯಮಾಣಮನಿಶಂ ತತ್ರ ತತ್ರ ಸಮಂತತಃ ।।೧೫।।

ಬ್ರಹ್ಮರ್ಷಿಗಳಾದ ಅತ್ರಿಗಳು ನೂರುವರ್ಷ ತಪಸ್ಸನ್ನು ಮಾಡಿದರೂ, ಅದರ ವಿಸ್ತಾರವನ್ನಾಗಲಿ, ಆಳವನ್ನಾಗಲಿ, ಅದರ ತಳವನ್ನಾಗಲಿ ತಿಳಿಯಲು ಸಾಧ್ಯವಾಗದೆ, ನಿತ್ಯವಾಗಿದ್ದಿತು. ಯೋಗನಿದ್ರೆಯನ್ನು ಮಾಡುವ ಪದ್ಮನಾಭರೂಪಿಯಾದ ಅಮಿತಪರಾಕ್ರಮಿಯಾದ ವಿಷ್ಣುವಿಗೆ ಯುಗಾಂತಕಾಲದ ಶಯನವಾಗಿದ್ದಿತು. ವಡವಾ ಮುಖದಿಂದ ಹೊರಬರುವ ಜ್ವಲಿಸುವ ಅಗ್ನಿಗೆ ಜಲವೆಂಬ ಹವಿಸ್ಸನ್ನು ಪ್ರದಾನ ಮಾಡುತ್ತಾ ಶುಭವಾಗಿದ್ದಿತು. ಆಳವಾಗಲಿ, ಎಲ್ಲೆಯಾಗಲಿ ತಿಳಿಯದೆ, ಸಹಸ್ರಾರು ನದಿಗಳಿಂದ ಪರಸ್ಪರ ಸ್ಪರ್ಧೆಯಿಂದ ಬಂದು ಎಲ್ಲಾ ಕಡೆಗಳಲ್ಲಿಯೂ ಅಲ್ಲಲ್ಲಿ ಸೇರಲ್ಪಟ್ಟ ಆ ಸರಿತ್ಪತಿಯನ್ನು ನೋಡಿದರು.

ಇತ್ಯೇವಂ ಋಷಮಕರೋರ್ಮಿಸಂಕುಲಂ ತಂ
ಗಂಭೀರಂ ವಿಲಸಿತಮಂಬರಪ್ರಕಾಶಮ್ ।
ಪಾತಾಲಜ್ವಲನಶಿಖಾವಿದೀಪಿತಾಂತಂ
ಪಶ್ಯಂತ್ಯೌ ದ್ರುತಮಭಿಪೇತತುಸ್ತದಾಬ್ಧಿಮ್ ।।೧೬।।

ಹೀಗೆ ಮೀನು ಮೊಸಳೆಗಳು ಮತ್ತು ಅಲೆಗಳಿಂದ ನಿಬಿಡವಾದಂತಹ ಅಗಾಧವಾದ, ಆಕಾಶದಂತೆ ವಿಸ್ತಾರವಾಗಿ ಶೋಭಿಸುವ, ಪಾತಾಳಾಗ್ನಿಯ ಶಿಖೆಗಳಿಂದ ಜ್ವಲಿಸುವ ಅಲೆಗಳ ತುದಿಗಳನ್ನುಳ್ಳಂತಹ ಆ ಸಮುದ್ರವನ್ನು ನೋಡುತ್ತಾ ಅವರಿಬ್ಬರೂ ಶೀಘ್ರವಾಗಿ ಅದರ ಬಳಿಗೆ ಹೋದರು.

॥ ಇತಿ ಶ್ರೀಮನ್ಮಹಾಭಾರತೇ ಶತಸಹಸ್ರಿಕಾಯಾಂಸಂಹಿತಾಯಾಮಾದಿಪರ್ವಣಿ ಏಕೋನವಿಂಶೋಽಧ್ಯಾಯಃ ॥

॥ ಇತಿ ಆಸ್ತೀಕಪರ್ವಣಿ ಸಪ್ತಮೋಽಧ್ಯಾಯಃ ॥

ಇಲ್ಲಿಗೆ ಮಹಾಭಾರತದ ಆದಿಪರ್ವದಲ್ಲಿ ಹತ್ತೊಂಭತ್ತನೆಯ ಅಧ್ಯಾಯ ಮುಗಿಯಿತು.

★★★★★

ಇಪ್ಪತ್ತನೆಯ ಅಧ್ಯಾಯ

(ಪಣದಲ್ಲಿ ಕುಟಿಲೋಪಾಯದಿಂದ ಕದ್ರುವಿನ ಜಯ, ವಿನತೆಯ ದಾಸ್ಯ , ಗರುಡನ ಉತ್ಪತ್ತಿ . ಗರುಡನಿಗೆ ಹೆದರಿ ದೇವತೆಗಳಿಂದ ಅವನ ಸ್ತುತಿ. ಗರುಡನಿಂದ ತನ್ನ ದೇಹದ ಮತ್ತು ತೇಜಸ್ಸಿನ ಉಪಸಂಹಾರ.)

ಸೂತಃ

ತಂ ಸಮುದ್ರಮತಿಕ್ರಮ್ಯ ಕದ್ರೂರ್ವಿನತಯಾ ಸಹ ।
ನ್ಯಪತತ್ ತುರಗಾಭ್ಯಾಶೇ ನಚಿರಾದಿವ ಶೀಘ್ರಗಾ ॥೧॥

ಕದ್ರುವು ವಿನತೆಯ ಜೊತೆಯಲ್ಲಿ ಆ ಸಮುದ್ರವನ್ನು ದಾಟಿ ಶೀಘ್ರವಾಗಿ ಹೋಗುತ್ತಾ ಅಲ್ಪಕಾಲದಲ್ಲಿಯೇ ಆ ತುರಗದ ಸಮೀಪಕ್ಕೆ ಹೋದಳು.

ನಾಗಾಸ್ತು ಸಹಿತಾಃ ಕೃತ್ವಾ ಕರ್ತವ್ಯಮಿತಿ ತದ್ವಚಃ ।
ನಿಸ್ಸ್ನೇಹಾ ವೈ ದಹೇನ್ಮಾತಾ ಹ್ಯಸಂಪ್ರಾಪ್ತಮನೋರಥಾ ॥೨॥

ಸಪತ್ನೀ ನ ಜಯೇದಸ್ಮಾನ್ ತಸ್ಮಾಜ್ಜಯ್ಯಾದ್ಯ ಭಾಮಿನೀ ।
ಕೃಷ್ಣಂ ಪುಚ್ಛಂ ಕರಿಷ್ಯಾಮಸ್ತುರಗಸ್ಯ ನ ಸಂಶಯಃ ।
ತಥೇತಿ ಗತ್ವಾ ತೇ ತಸ್ಯ ಪುಚ್ಛೇ ಬಾಲಾ ಇವಾಸ್ಥಿತಾಃ ॥೩॥

ನಾಗಗಳೆಲ್ಲವೂ ಸೇರಿ ಅವಳ ಮಾತನ್ನು ನೆರವೇರಿಸಬೇಕೆಂದು ನಿಶ್ಚಯಿಸಿದವು. ನಾವು ಅವಳ ಮಾತಿನಂತೆ ನಡೆಯದಿದ್ದರೆ, ಸ್ನೇಹರಹಿತಳಾದ ನಮ್ಮ ತಾಯಿಯು ನಮ್ಮನ್ನು ಸುಡುವಳು. ನಮ್ಮ ತಾಯಿಯ ಸವತಿಯು ನಮ್ಮನ್ನು ಜಯಿಸಬಾರದು. ಆದ್ದರಿಂದ ಈ ದಿನ ನಾವು ಭಾಮಿನಿಯಾದ ವಿನತೆಯನ್ನು ಜಯಿಸಬೇಕು. ಅಶ್ವದ ಬಾಲವನ್ನು ಸೇರಿ ಒಂದೊಂದು ಕೂದಲಿನಲ್ಲಿಯೂ ಕಪ್ಪುಶರೀರವನ್ನು ಹೊಂದಿದ ನಾವು ಸೇರಿ ಒಟ್ಟು ಬಾಲವನ್ನು ಕಪ್ಪಾಗಿ ಮಾಡೋಣ. ಹೀಗೆ ಯೋಚಿಸಿ ಆ ಅಶ್ವದ ಬಳಿಗೆ ಹೋಗಿ, ಅದರ ಬಾಲದಲ್ಲಿ ಕಪ್ಪುಕೂದಲುಗಳಾಗಿ ನಾಗಗಳು ನೆಲೆಸಿದವು.

ಏತಸ್ಮಿನ್ನಂತರೇ ತೇ ತು ಸಪತ್ನ್ಯೌ ಪಣಿತೇ ತದಾ ।
ಜಗ್ಮತುಃ ಪರಯಾ ಪ್ರೀತ್ಯಾ ಪರಂ ಪಾರಂ ಮಹೋದಧೇಃ ॥೪॥

ಆ ಸಮಯಕ್ಕೆ ಸರಿಯಾಗಿ ಪಣವನ್ನು ಕಟ್ಟಿದ್ದ ಸಪತ್ನಿಯರು ಬಹಳ ಸಂತೋಷದಿಂದ ಸಮುದ್ರದ ಆಚೆಯ ದಡವನ್ನು ತಲುಪಿದರು.

ನಿಶಾಮ್ಯ ಚ ಬಹೂನ್ ವಾಲಾನ್ ಕೃಷ್ಣಾನ್ ಪುಚ್ಛಮುಪಾಶ್ರಿತಾನ್ ।
ವಿನತಾಂ ವಿಷಣ್ಣವದನಾಂ ಕದ್ರೂರ್ದಾಸ್ಯೇ ನ್ಯಯೋಜಯತ್ ॥೫॥

ಬಾಲದಲ್ಲಿದ್ದ ಅನೇಕ ಕೂದಲುಗಳು ಕಪ್ಪಾಗಿರುವುದನ್ನು ನೋಡಿ, ವಿಷಾದದಿಂದ ಕೂಡಿದ ವಿನತೆಯನ್ನು ಕದ್ರುವು ದಾಸ್ಯದಲ್ಲಿ ನಿಯೋಜಿಸಿದಳು.

ತತಃ ಸಾ ವಿನತಾ ತಸ್ಮಿನ್ ಪಣಿತೇನ ಪರಾಜಿತಾ ।
ಅಭವದ್ ದುಃಖಸಂತಪ್ತಾ ದಾಸೀಭಾವೇ ಸಮಾಸ್ಥಿತಾ ॥೬॥

ಆಗ ಆ ಪಣದಲ್ಲಿ ಪರಾಜಿತಳಾದ ವಿನತೆಯು ದುಃಖಸಂತಪ್ತಳಾಗಿ ದಾಸ್ಯವನ್ನು ಸ್ವೀಕರಿಸಿದಳು.

ಏತಸ್ಮಿನ್ನಂತರೇ ಚೈವ ಗರುಡಃ ಕಾಲ ಆಗತೇ ।
ವಿನಾ ಮಾತ್ರಾ ಮಹಾತೇಜಾ ವಿದಾರ್ಯಾಂಡಮಜಾಯತ ॥೭॥

ಅಗ್ನಿರಾಶಿರಿವೋದ್ಧಾಸಃ ಸಮಿದ್ಧೋऽತಿಭಯಂಕರಃ ।
ಪ್ರವೃದ್ಧಃ ಸಹಸಾ ಪಕ್ಷೀ ಮಹಾಕಾಯೋ ನಭೋಗತಃ ॥೮॥

ಆ ಸಮಯಕ್ಕೆ ಸರಿಯಾಗಿ (ಅರುಣನು ಹೇಳಿದಂತೆ ಐದುನೂರು ವರ್ಷಗಳು ಕಳೆಯುತ್ತಿರಲು) ತಾಯಿಯು ಇಲ್ಲದ ಸಂದರ್ಭದಲ್ಲಿಯೇ ಮಹಾತೇಜಸ್ವಿಯಾದ

ಗರುಡನು ಮೊಟ್ಟೆಯನ್ನು ಒಡೆದುಕೊಂಡು ಹೊರಗೆ ಬಂದನು. ಅವನು ಅಗ್ನಿಯ ರಾಶಿಯಂತೆ ಕಾಂತಿಯನ್ನು ಹೊಂದಿ ಅತಿಭಯಂಕರನಾಗಿದ್ದನು. ತಕ್ಷಣದಲ್ಲಿಯೇ ದೇಹವೃದ್ಧಿಯನ್ನು ಪಡೆದು ದೊಡ್ಡ ದೇಹವನ್ನು ಧರಿಸಿ ಪಕ್ಷಿಯಾಗಿ ಆಕಾಶಕ್ಕೆ ಹಾರಿದನು.

ತಂ ದೃಷ್ಟ್ವಾ ಶರಣಂ ಜಗ್ಮುಃ ಪ್ರಜಾಃ ಸರ್ವಾ ವಿಭಾವಸುಮ್ ।
ಪ್ರಣಿಪತ್ಯಾಬ್ರುವಂಶ್ಚೈನಮಾಸೀನಂ ವಿಶ್ವರೂಪಿಣಮ್ ॥೯॥

ಮಾ ತ್ವಮಗ್ನೇ ಪ್ರವರ್ಧಿಷ್ಠಾಃ ಕಚ್ಚಿನ್ನೋ ನ ದಿಧಕ್ಷಸಿ ।
ಅಸೌ ಹಿ ರಾಶಿಃ ಸುಮಹಾನ್ ಸಮಿದ್ಧಸ್ತವ ಸರ್ಪತಿ ॥೧೦॥

ಅವನನ್ನು ನೋಡಿ ಎಲ್ಲಾ ಪ್ರಜೆಗಳೂ ಆಗ್ನೇಯ ದಿಕ್ಪಾಲಕನಾದ ಅಗ್ನಿಗೆ ಶರಣಾಗತರಾದರು. ವಿಶ್ವರೂಪಿಯಾಗಿ ಸಮಾಸೀನನಾದ ಅಗ್ನಿಯನ್ನು ಕುರಿತು ನಮಸ್ಕಾರವನ್ನು ಮಾಡಿ ಅವರು ಅಗ್ನಿಯೇ, ಹೀಗೆ ಅಭಿವೃದ್ಧಿಯನ್ನು ಹೊಂದಬೇಡ. ನಮ್ಮನ್ನು ನೀನು ದಹಿಸುವುದಿಲ್ಲವಷ್ಟೇ . ನಿನ್ನ ತೇಜೋರಾಶಿಯು ಬಹಳ ಪ್ರವೃದ್ಧವಾಗಿ ನಮ್ಮ ಕಡೆಗೆ ಬರುತ್ತಿದೆ ಎಂದು ಹೇಳಿದರು.

ಅಗ್ನಿಃ

ನೈತದೇವಂ ಯಥಾ ಯೂಯಂ ಮನ್ಯಧ್ವಮಸುರಾರ್ದನಾಃ ।
ಗರುಡೋ ಭಗವಾನೇಷ ಮಮ ತುಲ್ಯಃ ಸ್ವತೇಜಸಾ ॥೧೧॥

ನಾಗಕ್ಷಯಕರಸ್ತ್ವೇಷಃ ಕಾಶ್ಯಪೇಯೋ ಮಹಾಬಲಃ ।
ದೇವಾನಾಂ ಚ ಹಿತೇ ಯುಕ್ತಸ್ತ್ವಹಿತೋ ದೈತ್ಯರಕ್ಷಸಾಮ್ ॥೧೨॥

ಎಲೈ ಅಸುರಶತ್ರುಗಳೇ, ಇದು ನೀವು ತಿಳಿದುಕೊಂಡಂತೆ ಅಲ್ಲ. ಇವನು ಪೂಜ್ಯನಾದ ಗರುಡ. ನನಗೆ ಸಮಾನವಾದ ತೇಜಸ್ಸುಳ್ಳವನು.ಕಾಶ್ಯಪರಿಂದ ಮಹಾಬಲನಾಗಿ ಜನಿಸಿದ ಇವನು ಸರ್ಪಗಳ ನಾಶವನ್ನು ಮಾಡುವವನು. ಇವನು ದೇವತೆಗಳಿಗೆ ಹಿತವನ್ನೂ ದೈತ್ಯರಾಕ್ಷಸರಿಗೆ ಅಹಿತವನ್ನೂ ಮಾಡುವನು. (ಇವನನ್ನು ನೀವು ಅಗ್ನಿಯಾದ ನಾನೆಂದು ಭ್ರಮಿಸಿದ್ದೀರಿ.)

ಸೂತಃ

ಏವಮುಕ್ತಾಸ್ತತೋ ಗತ್ವಾ ಗರುಡಂ ವಾಗ್ಭಿರಸ್ತುವನ್ ।
ಅದೂರಾದಭ್ಯುಪೇತ್ಯೈನಂ ಗತ್ವಾ ಸರ್ಷಿಗಣಾಸ್ತದಾ ॥೧೩॥

ಹೀಗೆ ಹೇಳಲ್ಪಟ್ಟ ದೇವತೆಗಳು ಮತ್ತು ಋಷಿಗಣಗಳು ಆಗ ಗರುಡನ ಸಮೀಪಕ್ಕೆ ಹೋಗಿ ಮುಂದೆ ನಿಂತು ತಮ್ಮ ವಾಕ್ಯಗಳಿಂದ ಗರುಡನನ್ನು ಸ್ತೋತ್ರಮಾಡಿದರು.

ದೇವಾಃ

ತ್ವಮೃಷಿಸ್ತ್ವಂ ಮಹಾಭಾಗಸ್ತ್ವಂ ದೇವಃ ಪತಗೋತ್ತಮಃ ।
ತ್ವಂ ಪ್ರಭುಸ್ತಪನಃ ಸೂರ್ಯಃ ಪರಮೇಷ್ಠೀ ಪ್ರಜಾಪತಿಃ ॥೧೪॥

ಎಲೈ ಮಹಾನುಭಾವನೇ, ನೀನು ಋಷಿ. ನೀನು ದೇವತೆ. ನೀನು ಪಕ್ಷಿಶ್ರೇಷ್ಠನಾದವನು. ನೀನು ಪ್ರಭು. ನೀನು ತಾಪವನ್ನು ಕೊಡುವ ಸೂರ್ಯ. ನೀನು ಪ್ರಜಾಪತಿಯಾದ ಬ್ರಹ್ಮದೇವರು.

ತ್ವಮೀಂದ್ರಸ್ತ್ವಂ ಹಯಮುಖಸ್ತ್ವಂ ಸರ್ವಸ್ತ್ವಂ ಜಗತ್ಪತಿಃ ।
ತ್ವಂ ಮುಖಂ ಪದ್ಮಜೋ ವಿಪ್ರಸ್ತ್ವಮಗ್ನಿಃ ಪವನಸ್ತಥಾ ॥೧೫॥

ನೀನು ಇಂದ್ರ. ನೀನು ಹಯಗ್ರೀವ. ನೀನೇ ಸರ್ವವೂ ಆದ ಜಗತ್ಪತಿ. ನೀನು ಬ್ರಹ್ಮನ ಮುಖದಿಂದ ಹುಟ್ಟಿದ ಬ್ರಾಹ್ಮಣನಾದ ಪಚನವನ್ನು ಮಾಡುವ ವೈಶ್ವಾನರಾಗ್ನಿ. ನೀನೇ ಪವನ.

ತ್ವಂ ವಿಧಾತಾ ಚ ಧಾತಾ ಚ ತ್ವಂ ವಿಷ್ಣುಃ ಸುರಸತ್ತಮಃ ।
ತ್ವಂ ಮಹಾನಭಿಭೂಃ ಶಶ್ವದಮೃತಂ ತ್ವಂ ಮಹದ್ ಯಶಃ ॥೧೬॥

ನೀನೇ ವಿಧಾತೃ, ನೀನೇ ಧಾತೃ. ನೀನೇ ಸುರಶ್ರೇಷ್ಠನಾದ ವಿಷ್ಣು. ನೀನೇ ಮಹೋತ್ತಮನಾದವನು. ಎಲ್ಲರನ್ನೂ ಪರಾಭವಗೊಳಿಸುವವನು. ನೀನೇ ಶಾಶ್ವತನಾಗಿ ನಾಶರಹಿತನಾದವನು. ನೀನೇ ಕೀರ್ತಿವಂತನಾದವನು.

ಈ ಎಲ್ಲಾ ಶ್ಲೋಕಗಳಿಗೆ ಎಲ್ಲಾ ದೇವತೆಗಳ ಸನ್ನಿಧಾನವು ಗರುಡನಲ್ಲಿ ಇದೆ ಎಂದು ತಾತ್ಪರ್ಯ. ವಿಷ್ಣುವಿನ ವಾಹನವಾದ ಗರುಡನು ಎಂದೂ ವಿಷ್ಣುವಾಗುವುದಿಲ್ಲ. ಮಹಾಭಾರತದಲ್ಲಿಯೇ 'ನಾಸ್ತಿ ನಾರಾಯಣ ಸಮಂ' ಎಂಬ ಪ್ರತಿಜ್ಞೆಯಿದೆ. ಆದ್ದರಿಂದ ಹೀಗೆಯೇ ಅರ್ಥವನ್ನು ಮಾಡಬೇಕು.

ತ್ವಂ ಪ್ರಭಾಸ್ತ್ವಮಭಿಪ್ರೇತಸ್ತ್ವಂ ನಸ್ತ್ರಾಣಮನುತ್ತಮಮ್ ।
ತ್ವಂ ಗತಿಃ ಸತತಂ ತತ್ತ್ವತಃ ಕಥಂ ನಃ ಪ್ರಾಪ್ನುಯಾದ್ ಭಯಮ್ ॥೧೭॥

ಗರುಡನು ಮೊಟ್ಟೆಯನ್ನು ಒಡೆದುಕೊಂಡು ಹೊರಗೆ ಬಂದನು. ಅವನು ಅಗ್ನಿಯ ರಾಶಿಯಂತೆ ಕಾಂತಿಯನ್ನು ಹೊಂದಿ ಅತಿಭಯಂಕರನಾಗಿದ್ದನು. ತಕ್ಷಣದಲ್ಲಿಯೇ ದೇಹವೃದ್ಧಿಯನ್ನು ಪಡೆದು ದೊಡ್ಡ ದೇಹವನ್ನು ಧರಿಸಿ ಪಕ್ಷಿಯಾಗಿ ಆಕಾಶಕ್ಕೆ ಹಾರಿದನು.

ತಂ ದೃಷ್ಟ್ವಾ ಶರಣಂ ಜಗ್ಮುಃ ಪ್ರಜಾಃ ಸರ್ವಾ ವಿಭಾವಸುಮ್ ।
ಪ್ರಣಿಪತ್ಯಾಬ್ರುವಂಶ್ಚೈನಮಾಸೀನಂ ವಿಶ್ವರೂಪಿಣಮ್ ॥೯॥

ಮಾ ತ್ವಮಗ್ನೇ ಪ್ರವರ್ಧಿಷ್ಠಾಃ ಕಚ್ಚಿನ್ನೋ ನ ದಿಧಕ್ಷಸಿ ।
ಅಸೌ ಹಿ ರಾಶಿಃ ಸುಮಹಾನ್ ಸಮಿದ್ಧಸ್ತವ ಸರ್ಪತಿ ॥೧೦॥

ಅವನನ್ನು ನೋಡಿ ಎಲ್ಲಾ ಪ್ರಜೆಗಳೂ ಆಗ್ನೇಯ ದಿಕ್ಪಾಲಕನಾದ ಅಗ್ನಿಗೆ ಶರಣಾಗತರಾದರು. ವಿಶ್ವರೂಪಿಯಾಗಿ ಸಮಾಸೀನನಾದ ಅಗ್ನಿಯನ್ನು ಕುರಿತು ನಮಸ್ಕಾರವನ್ನು ಮಾಡಿ ಅವರು ಅಗ್ನಿಯೇ, ಹೀಗೆ ಅಭಿವೃದ್ಧಿಯನ್ನು ಹೊಂದಬೇಡ. ನಮ್ಮನ್ನು ನೀನು ದಹಿಸುವುದಿಲ್ಲವಷ್ಟೇ . ನಿನ್ನ ತೇಜೋರಾಶಿಯು ಬಹಳ ಪ್ರವೃದ್ಧವಾಗಿ ನಮ್ಮ ಕಡೆಗೆ ಬರುತ್ತಿದೆ ಎಂದು ಹೇಳಿದರು.

ಅಗ್ನಿಃ

ನೈತದೇವಂ ಯಥಾ ಯೂಯಂ ಮನ್ಯಧ್ವಮಸುರಾರ್ದನಾಃ ।
ಗರುಡೋ ಭಗವಾನೇಷ ಮಮ ತುಲ್ಯಃ ಸ್ವತೇಜಸಾ ॥೧೧॥

ನಾಗಕ್ಷಯಕರಸ್ತ್ವೇಷಃ ಕಾಶ್ಯಪೇಯೋ ಮಹಾಬಲಃ ।
ದೇವಾನಾಂ ಚ ಹಿತೇ ಯುಕ್ತಸ್ತ್ವಹಿತೋ ದೈತ್ಯರಕ್ಷಸಾಮ್ ॥೧೨॥

ಎಲೈ ಅಸುರಶತ್ರುಗಳೇ, ಇದು ನೀವು ತಿಳಿದುಕೊಂಡಂತೆ ಅಲ್ಲ. ಇವನು ಪೂಜ್ಯನಾದ ಗರುಡ. ನನಗೆ ಸಮಾನವಾದ ತೇಜಸ್ಸುಳ್ಳವನು.ಕಾಶ್ಯಪರಿಂದ ಮಹಾಬಲನಾಗಿ ಜನಿಸಿದ ಇವನು ಸರ್ಪಗಳ ನಾಶವನ್ನು ಮಾಡುವವನು. ಇವನು ದೇವತೆಗಳಿಗೆ ಹಿತವನ್ನೂ ದೈತ್ಯರಾಕ್ಷಸರಿಗೆ ಅಹಿತವನ್ನೂ ಮಾಡುವನು. (ಇವನನ್ನು ನೀವು ಅಗ್ನಿಯಾದ ನಾನೆಂದು ಭ್ರಮಿಸಿದ್ದೀರಿ.)

ಸೂತಃ

ಏವಮುಕ್ತಾಸ್ತತೋ ಗತ್ವಾ ಗರುಡಂ ವಾಗ್ಭಿರಸ್ತುವನ್ ।
ಅದೂರಾದಭ್ಯುಪೇತ್ಯೈನಂ ಗತ್ವಾ ಸರ್ಷಿಗಣಾಸ್ತದಾ ॥೧೩॥

ಹೀಗೆ ಹೇಳಲ್ಪಟ್ಟ ದೇವತೆಗಳು ಮತ್ತು ಋಷಿಗಣಗಳು ಆಗ ಗರುಡನ ಸಮೀಪಕ್ಕೆ ಹೋಗಿ ಮುಂದೆ ನಿಂತು ತಮ್ಮ ವಾಕ್ಯಗಳಿಂದ ಗರುಡನನ್ನು ಸ್ತೋತ್ರಮಾಡಿದರು.

ದೇವಾಃ

ತ್ವಮೃಷಿಸ್ತ್ವಂ ಮಹಾಭಾಗಸ್ತ್ವಂ ದೇವಃ ಪತಗೋತ್ತಮಃ ।
ತ್ವಂ ಪ್ರಭುಸ್ತುಪನಃ ಸೂರ್ಯಃ ಪರಮೇಷ್ಠೀ ಪ್ರಜಾಪತಿಃ ॥೧೪॥

ಎಲೈ ಮಹಾನುಭಾವನೇ, ನೀನು ಋಷಿ. ನೀನು ದೇವತೆ. ನೀನು ಪಕ್ಷಿಶ್ರೇಷ್ಠನಾದವನು. ನೀನು ಪ್ರಭು. ನೀನು ತಾಪವನ್ನು ಕೊಡುವ ಸೂರ್ಯ. ನೀನು ಪ್ರಜಾಪತಿಯಾದ ಬ್ರಹ್ಮದೇವರು.

ತ್ವಮೀಂದ್ರಸ್ತ್ವಂ ಹಯಮುಖಸ್ತ್ವಂ ಸರ್ವಸ್ತ್ವಂ ಜಗತ್ಪತಿಃ ।
ತ್ವಂ ಮುಖಂ ಪದ್ಮಜೋ ವಿಪ್ರಸ್ತ್ವಮಗ್ನಿಃ ಪವನಸ್ತಥಾ ॥೧೫॥

ನೀನು ಇಂದ್ರ. ನೀನು ಹಯಗ್ರೀವ. ನೀನೇ ಸರ್ವವೂ ಆದ ಜಗತ್ಪತಿ. ನೀನು ಬ್ರಹ್ಮನ ಮುಖದಿಂದ ಹುಟ್ಟಿದ ಬ್ರಾಹ್ಮಣನಾದ ಪಚನವನ್ನು ಮಾಡುವ ವೈಶ್ವಾನರಾಗ್ನಿ. ನೀನೇ ಪವನ.

ತ್ವಂ ವಿಧಾತಾ ಚ ಧಾತಾ ಚ ತ್ವಂ ವಿಷ್ಣುಃ ಸುರಸತ್ತಮಃ ।
ತ್ವಂ ಮಹಾನಭಿಭೂಃ ಶಶ್ವದಮೃತಂ ತ್ವಂ ಮಹದ್ ಯಶಃ ॥೧೬॥

ನೀನೇ ವಿಧಾತೃ, ನೀನೇ ಧಾತೃ. ನೀನೇ ಸುರಶ್ರೇಷ್ಠನಾದ ವಿಷ್ಣು. ನೀನೇ ಮಹೋತ್ತಮನಾದವನು. ಎಲ್ಲರನ್ನೂ ಪರಾಭವಗೊಳಿಸುವವನು. ನೀನೇ ಶಾಶ್ವತನಾಗಿ ನಾಶರಹಿತನಾದವನು. ನೀನೇ ಕೀರ್ತಿವಂತನಾದವನು.

ಈ ಎಲ್ಲಾ ಶ್ಲೋಕಗಳಿಗೆ ಎಲ್ಲಾ ದೇವತೆಗಳ ಸನ್ನಿಧಾನವು ಗರುಡನಲ್ಲಿ ಇದೆ ಎಂದು ತಾತ್ಪರ್ಯ. ವಿಷ್ಣುವಿನ ವಾಹನವಾದ ಗರುಡನು ಎಂದೂ ವಿಷ್ಣುವಾಗುವುದಿಲ್ಲ. ಮಹಾಭಾರತದಲ್ಲಿಯೇ 'ನಾಸ್ತಿ ನಾರಾಯಣ ಸಮಂ' ಎಂಬ ಪ್ರತಿಜ್ಞೆಯಿದೆ. ಆದ್ದರಿಂದ ಹೀಗೆಯೇ ಅರ್ಥವನ್ನು ಮಾಡಬೇಕು.

ತ್ವಂ ಪ್ರಭಾಸ್ತ್ವಮಭಿಪ್ರೇತಸ್ತ್ವಂ ನಸ್ತ್ರಾಣಮನುತ್ತಮಮ್ ।
ತ್ವಂ ಗತಿಃ ಸತತಂ ತತ್ತಃ ಕಥಂ ನಃ ಪ್ರಾಪ್ನುಯಾದ್ ಭಯಮ್ ॥೧೭॥

ನೀನೇ ಕಾಂತಿ, ನೀನೇ ಎಲ್ಲರಿಗೂ ಇಷ್ಟನಾದವನು. ನೀನೇ ಶ್ರೇಷ್ಠನಾದ ರಕ್ಷಕ. ನೀನೇ ಶಾಶ್ವತವಾದ ಗತಿ. ನಿನ್ನಿಂದ ನಮಗೆ ಹೇಗೆ ಭಯವು ಉಂಟಾಗದೇ ಇರಬಹುದು ?

ಬಲೋತ್ತಮಃ ಸಾಧುರದೀನಸತ್ತ್ವಃ
ಸಮೃದ್ಧಿಮಾನ್ ದುಷ್ಪ್ರಸಹಸ್ತ್ವಮೇವ ।
ತಪಃ ಶ್ರುತಂ ಸರ್ವಮಹೀನಕೀರ್ತೇಃ
ಅನಾಗತಂ ಚೋಪಗತಂ ಚ ಸರ್ವಮ್ ॥೧೮॥

ನೀನು ಶ್ರೇಷ್ಠವಾದ ಬಲವುಳ್ಳವನು. ಸಜ್ಜನನಾದವನು. ದೈನ್ಯರಹಿತವಾದ ಪರಾಕ್ರಮವುಳ್ಳವನು. ಸಮೃದ್ಧಿಯುಳ್ಳವನು. ಯಾರಿಂದಲೂ ತಡೆಯಲು ಸಾಧ್ಯವಾಗದವನು. ಕೀರ್ತಿನಾಶವಾಗದವನು. ಅತೀತಾನಾಗತವಾದ ಎಲ್ಲಾ ವಿದ್ಯೆಗಳನ್ನೂ, ತಪಸ್ಸನ್ನೂ ಸಂಪಾದಿಸಿದವನು.

ತ್ವಮುತ್ತಮಃ ಸತ್ತ್ವಮಿದಂ ಚರಾಚರಂ
ಗಭಸ್ತಿಭಿರ್ಭಾನುರಿವಾವಭಾಸಸೇ ।
ಸಮಾಕ್ಷಿಪನ್ ಭಾನುಮತಃ ಪ್ರಭಾಂ ಮುಹುಃ
ತ್ವಮಂತತಃ ಸರ್ವಮಿದಂ ಧ್ರುವಾಧ್ರುವಮ್ ॥೧೯॥

ನೀನೇ ಸರ್ವೋತ್ತಮನಾದವನು. ನೀನೇ ಚರಾಚರಪ್ರಾಣ್ಯಾತ್ಮಕವಾದ ಈ ಜಗತ್ತನ್ನು ಸೂರ್ಯನಂತೆ ನಿನ್ನ ಕಿರಣಗಳಿಂದ ಪ್ರಕಾಶಿಸುತ್ತಿದ್ದೀಯೆ. ನಿನ್ನ ಪ್ರಭೆಯಿಂದ ಸೂರ್ಯನ ಪ್ರಭೆಯನ್ನು ಪರಾಭವಗೊಳಿಸುತ್ತಿದ್ದೀಯೆ. ನಿತ್ಯಾನಿತ್ಯವಾದ ಎಲ್ಲವೂ ನೀನೇ. (ಎಲ್ಲವೂ ನಿನ್ನ ಅಧೀನ.)

ದಿವಾಕರಃ ಪರಿಕುಪಿತೋ ಯಥಾ ದಹೇತ್
ಪ್ರಜಾಸ್ತಥಾ ದಹಸಿ ಹುತಾಶನಪ್ರಭಃ ।
ಭಯಂಕರಃ ಪ್ರಲಯ ಇವಾಗ್ನಿರುತ್ಥಿತೋ
ವಿನಾಶಯನ್ ಯುಗಪರಿವರ್ತನಾಂತಕೃತ್ ॥೨೦॥

ಅಗ್ನಿಗೆ ಸಮಾನವಾದ ತೇಜಸ್ಸುಳ್ಳ ನೀನು ಕೋಪಗೊಂಡ ಸೂರ್ಯನು ಪ್ರಜೆಗಳನ್ನು ದಹಿಸುವಂತೆ ದಹಿಸುತ್ತಿದ್ದೀಯೆ. ಪ್ರಳಯಕಾಲದಲ್ಲಿ ಉತ್ಥಿತವಾದ ಭಯಂಕರವಾದ

ಅಗ್ನಿಯಂತೆ ಪ್ರಜೆಗಳನ್ನು ವಿನಾಶಮಾಡುತ್ತಾ ಯುಗಗಳ ಪರಿವರ್ತನೆಯನ್ನೂ ಮತ್ತು ಯುಗಾಂತವನ್ನೂ ಮಾಡುವವನಾಗಿದ್ದೀಯೆ.

ಖಗೇಶ್ವರಂ ಶರಣಮುಪಸ್ಥಿತಾ ವಯಂ
ಮಹೌಜಸಂ ವಿತಿಮಿರದಭ್ರಗೋಚರಮ್ ।
ಮಹಾಬಲಂ ಗರುಡಮುಪೇತ್ಯ ಖೇಚರಂ
ಪರಾವರಂ ವರದಮಜೇಯವಿಕ್ರಮಮ್ ॥೨೧॥

ಪಕ್ಷಿರಾಜನಾದ ನಿನಗೆ ನಾವು ಶರಣಾಗತರಾಗಿದ್ದೇವೆ. ಮಹಾಪರಾಕ್ರಮವುಳ್ಳ, ತಿಮಿರರಹಿತವಾದ ಸ್ಥಳದಲ್ಲಿ ಅಲ್ಪವಾಗಿ ಗೋಚರಿಸುವ ಮಹಾಬಲವುಳ್ಳ, ಅಂತರಿಕ್ಷಚಾರಿಯಾದ, ಅನೇಕರಿಗಿಂತ ಶ್ರೇಷ್ಠನಾದ, ವರದನಾದ, ಅಜೇಯಪರಾಕ್ರಮವುಳ್ಳ ಗರುಡನಾದ ನಿನಗೆ ನಾವು ಶರಣಾಗತರಾಗಿದ್ದೇವೆ.

ಸೂತಃ

ಸ್ತವಂ ಶ್ರುತ್ವಾತ್ಮನೋ ದೇಹಂ ಸುಪರ್ಣಃ ಪ್ರೇಕ್ಷ್ಯ ಚ ಸ್ವಯಮ್।
ತತಃ ಸಂಪರಿಹರ್ತುಂ ಸ ಸರ್ವತಃ ಪರಿಚಕ್ರಮೇ ॥೨೨॥

ಗರುಡನು ತನ್ನ ಈ ಸ್ತೋತ್ರವನ್ನು ಕೇಳಿ ತನ್ನ ದೇಹವನ್ನು ತಾನೇ ನೋಡಿ, ತನ್ನ ದೇಹವನ್ನು ಎಲ್ಲ ಕಡೆಗಳಿಂದಲೂ ಸಂಕೋಚಗೊಳಿಸಲು ಉಪಕ್ರಮಿಸಿದನು.

ಸುಪರ್ಣಃ

ನ ಮೇ ಸರ್ವಾಣಿ ಭೂತಾನಿ ಬಿಭಿಯುರ್ದೇಹದರ್ಶನಾತ್ ।
ಸಮುದ್ವಿಗ್ನಾನಿ ರೂಪಾನ್ಮೇ ಇತಿ ತೇಜಃ ಸಮಾಹರತ್ ॥೨೩॥

ನನ್ನ ದೇಹವನ್ನು ನೋಡಿ ಎಲ್ಲಾ ಪ್ರಾಣಿಗಳು ಭಯಪಡಬಾರದು. ಎಲ್ಲಾ ಪ್ರಾಣಿಗಳೂ ನನ್ನ ರೂಪದಿಂದ ಬಹಳ ಉದ್ವಿಗ್ನವಾಗಿವೆ ಎಂದು ತನ್ನ ತೇಜಸ್ಸನ್ನು ಉಪಸಂಹರಿಸಿದನು.

॥ ಇತಿ ಶ್ರೀಮನ್ಮಹಾಭಾರತೇ ಶತಸಹಸ್ರಿಕಾಯಾಂಸಂಹಿತಾಯಾಮಾದಿಪರ್ವಣಿ ವಿಂಶೋಽಧ್ಯಾಯಃ ॥

॥ ಇತಿ ಆಸ್ತೀಕಪರ್ವಣಿ ಅಷ್ಟಮೋಽಧ್ಯಾಯಃ ॥

ಇಲ್ಲಿಗೆ ಮಹಾಭಾರತದ ಆದಿಪರ್ವದಲ್ಲಿ ಇಪ್ಪತ್ತನೆಯ ಅಧ್ಯಾಯ ಮುಗಿಯಿತು.

ನೀನೇ ಕಾಂತಿ, ನೀನೇ ಎಲ್ಲರಿಗೂ ಇಷ್ಟನಾದವನು. ನೀನೇ ಶ್ರೇಷ್ಠನಾದ ರಕ್ಷಕ. ನೀನೇ ಶಾಶ್ವತವಾದ ಗತಿ. ನಿನ್ನಿಂದ ನಮಗೆ ಹೇಗೆ ಭಯವು ಉಂಟಾಗದೇ ಇರಬಹುದು ?

ಬಲೋತ್ತಮಃ ಸಾಧುರದೀನಸತ್ತ್ವಃ
ಸಮೃದ್ಧಿಮಾನ್ ದುಷ್ಪ್ರಸಹಸ್ತ್ವಮೇವ ।
ತಪಃ ಶ್ರುತಂ ಸರ್ವಮಹೀನಕೀರ್ತೇಃ
ಅನಾಗತಂ ಚೋಪಗತಂ ಚ ಸರ್ವಮ್ ॥೧೮॥

ನೀನು ಶ್ರೇಷ್ಠವಾದ ಬಲವುಳ್ಳವನು. ಸಜ್ಜನನಾದವನು. ದೈನ್ಯರಹಿತವಾದ ಪರಾಕ್ರಮವುಳ್ಳವನು. ಸಮೃದ್ಧಿಯುಳ್ಳವನು. ಯಾರಿಂದಲೂ ತಡೆಯಲು ಸಾಧ್ಯವಾಗದವನು. ಕೀರ್ತಿನಾಶವಾಗದವನು. ಅತೀತಾನಾಗತವಾದ ಎಲ್ಲಾ ವಿದ್ಯೆಗಳನ್ನೂ, ತಪಸ್ಸನ್ನೂ ಸಂಪಾದಿಸಿದವನು.

ತ್ವಮುತ್ತಮಃ ಸತ್ವಮಿದಂ ಚರಾಚರಂ
ಗಭಸ್ತಿಭಿರ್ಭಾನುರಿವಾವಭಾಸಸೇ ।
ಸಮಾಕ್ಷಿಪನ್ ಭಾನುಮತಃ ಪ್ರಭಾಂ ಮುಹುಃ
ತ್ವಮಂತತಃ ಸರ್ವಮಿದಂ ಧ್ರುವಾಧ್ರುವಮ್ ॥೧೯॥

ನೀನೇ ಸರ್ವೋತ್ತಮನಾದವನು. ನೀನೇ ಚರಾಚರಪ್ರಾಣ್ಯಾತ್ಮಕವಾದ ಈ ಜಗತ್ತನ್ನು ಸೂರ್ಯನಂತೆ ನಿನ್ನ ಕಿರಣಗಳಿಂದ ಪ್ರಕಾಶಿಸುತ್ತಿದ್ದೀಯೆ. ನಿನ್ನ ಪ್ರಭೆಯಿಂದ ಸೂರ್ಯನ ಪ್ರಭೆಯನ್ನು ಪರಾಭವಗೊಳಿಸುತ್ತಿದ್ದೀಯೆ. ನಿತ್ಯಾನಿತ್ಯವಾದ ಎಲ್ಲವೂ ನೀನೇ. (ಎಲ್ಲವೂ ನಿನ್ನ ಅಧೀನ.)

ದಿವಾಕರಃ ಪರಿಕುಪಿತೋ ಯಥಾ ದಹೇತ್
ಪ್ರಜಾಸ್ತಥಾ ದಹಸಿ ಹುತಾಶನಪ್ರಭಃ ।
ಭಯಂಕರಃ ಪ್ರಲಯ ಇವಾಗ್ನಿರುತ್ಥಿತೋ
ವಿನಾಶಯನ್ ಯುಗಪರಿವರ್ತನಾಂತಕೃತ್ ॥೨೦॥

ಅಗ್ನಿಗೆ ಸಮಾನವಾದ ತೇಜಸ್ಸುಳ್ಳ ನೀನು ಕೋಪಗೊಂಡ ಸೂರ್ಯನು ಪ್ರಜೆಗಳನ್ನು ದಹಿಸುವಂತೆ ದಹಿಸುತ್ತಿದ್ದೀಯೆ. ಪ್ರಳಯಕಾಲದಲ್ಲಿ ಉತ್ಥಿತವಾದ ಭಯಂಕರವಾದ

ಅಗ್ನಿಯಂತೆ ಪ್ರಜೆಗಳನ್ನು ವಿನಾಶಮಾಡುತ್ತಾ ಯುಗಗಳ ಪರಿವರ್ತನೆಯನ್ನೂ ಮತ್ತು ಯುಗಾಂತವನ್ನೂ ಮಾಡುವವನಾಗಿದ್ದೀಯೆ.

ಖಗೇಶ್ವರಂ ಶರಣಮುಪಸ್ಥಿತಾ ವಯಂ
ಮಹೌಜಸಂ ವಿತಿಮಿರದಭ್ರಗೋಚರಮ್ ।
ಮಹಾಬಲಂ ಗರುಡಮುಪೇತ್ಯ ಖೇಚರಂ
ಪರಾವರಂ ವರದಮಜೇಯವಿಕ್ರಮಮ್ ॥೨೧॥

ಪಕ್ಷಿರಾಜನಾದ ನಿನಗೆ ನಾವು ಶರಣಾಗತರಾಗಿದ್ದೇವೆ. ಮಹಾಪರಾಕ್ರಮವುಳ್ಳ, ತಿಮಿರರಹಿತವಾದ ಸ್ಥಳದಲ್ಲಿ ಅಲ್ಪವಾಗಿ ಗೋಚರಿಸುವ ಮಹಾಬಲವುಳ್ಳ, ಅಂತರಿಕ್ಷಚಾರಿಯಾದ, ಅನೇಕರಿಗಿಂತ ಶ್ರೇಷ್ಠನಾದ, ವರದನಾದ, ಅಜೇಯಪರಾಕ್ರಮವುಳ್ಳ ಗರುಡನಾದ ನಿನಗೆ ನಾವು ಶರಣಾಗತರಾಗಿದ್ದೇವೆ.

ಸೂತಃ

ಸ್ತವಂ ಶ್ರುತ್ವಾತ್ಮನೋ ದೇಹಂ ಸುಪರ್ಣಃ ಪ್ರೇಕ್ಷ್ಯ ಚ ಸ್ವಯಮ್।
ತತಃ ಸಂಪರಿಹರ್ತುಂ ಸ ಸರ್ವತಃ ಪರಿಚಕ್ರಮೇ ॥೨೨॥

ಗರುಡನು ತನ್ನ ಈ ಸ್ತೋತ್ರವನ್ನು ಕೇಳಿ ತನ್ನ ದೇಹವನ್ನು ತಾನೇ ನೋಡಿ, ತನ್ನ ದೇಹವನ್ನು ಎಲ್ಲ ಕಡೆಗಳಿಂದಲೂ ಸಂಕೋಚಗೊಳಿಸಲು ಉಪಕ್ರಮಿಸಿದನು.

ಸುಪರ್ಣಃ

ನ ಮೇ ಸರ್ವಾಣಿ ಭೂತಾನಿ ಬಿಭಿಯುರ್ದೇಹದರ್ಶನಾತ್ ।
ಸಮುದ್ವಿಗ್ನಾನಿ ರೂಪಾನ್ಮೇ ಇತಿ ತೇಜಃ ಸಮಾಹರತ್ ॥೨೩॥

ನನ್ನ ದೇಹವನ್ನು ನೋಡಿ ಎಲ್ಲಾ ಪ್ರಾಣಿಗಳು ಭಯಪಡಬಾರದು. ಎಲ್ಲಾ ಪ್ರಾಣಿಗಳೂ ನನ್ನ ರೂಪದಿಂದ ಬಹಳ ಉದ್ವಿಗ್ನವಾಗಿವೆ ಎಂದು ತನ್ನ ತೇಜಸ್ಸನ್ನು ಉಪಸಂಹರಿಸಿದನು.

॥ ಇತಿ ಶ್ರೀಮನ್ಮಹಾಭಾರತೇ ಶತಸಹಸ್ರಿಕಾಯಾಂಸಂಹಿತಾಯಾಮಾದಿಪರ್ವಣಿ
ವಿಂಶೋಽಧ್ಯಾಯಃ ॥

॥ ಇತಿ ಆಸ್ತೀಕಪರ್ವಣಿ ಅಷ್ಟಮೋಽಧ್ಯಾಯಃ ॥

ಇಲ್ಲಿಗೆ ಮಹಾಭಾರತದ ಆದಿಪರ್ವದಲ್ಲಿ ಇಪ್ಪತ್ತನೆಯ ಅಧ್ಯಾಯ ಮುಗಿಯಿತು.

ಇಪ್ಪತ್ತೊಂದನೆಯ ಅಧ್ಯಾಯ

(ವಿನತೆಯಿಂದ ಕದ್ರುವಿನ ವಹನ ಮತ್ತು ಗರುಡನಿಂದ ಸರ್ಪಗಳ ವಹನ. ಸೂರ್ಯತಾಪಕ್ಕೆ ಒಳಗಾದ ಸರ್ಪಗಳ ಶಾಂತಿಗಾಗಿ ಕದ್ರುವಿನಿಂದ ಇಂದ್ರಸ್ತುತಿ)

ಸೂತಃ

ತತಃ ಕಾಮಗಮಃ ಪಕ್ಷೀ ಮಹಾವೀರ್ಯೋ ಮಹಾಬಲಃ ।
ಅರುಣಂ ಚಾತ್ಮನಃ ಪೃಷ್ಠಮುಪಾರೋಪ್ಯ ಪಿತುರ್ಗೃಹಾತ್ ॥೧॥

ಮಾತುರಂತಿಕಮಾಗಚ್ಛತ್ ಪರಂ ಪಾರಂ ಮಹೋದಧೇಃ ।
ಯತ್ರ ಸಾ ವಿನತಾ ತಸ್ಮಿನ್ ಪಣಿತೇ ವೈ ಪರಾಜಿತಾ ॥೨॥

ಅನಂತರ ಮಹಾಪರಾಕ್ರಮದಿಂದ ಮತ್ತು ಮಹಾಬಲದಿಂದ ಕೂಡಿದ ಕಾಮಗಮನಾದ ಪಕ್ಷಿಯಾದ ಗರುಡನು ಅರುಣನನ್ನು ತನ್ನ ಬೆನ್ನಿನ ಮೇಲೆ ಕೂಡಿಸಿಕೊಂಡು ತನ್ನ ತಂದೆಯ ಮನೆಯಿಂದ ಹೊರಟು ಸಮುದ್ರದ ಆಚೆಯ ದಡದಲ್ಲಿ ಎಲ್ಲಿ ವಿನತೆಯು ಕದ್ರುವಿಗೆ ಪಣದಲ್ಲಿ ಸೋತಿದ್ದಳೋ ಅಂತಹ ಸ್ಥಳದಲ್ಲಿ ತಾಯಿಯ ಸಮೀಪಕ್ಕೆ ಹೋದನು.

ಅತೀವ ದುಃಖಸಂತಪ್ತಾ ದಾಸೀಭಾವಮುಪಾಗತಾ ।
ತತಃ ಕದಾಚಿದ್ ವಿನತಾಂ ಪ್ರವಣಾಂ ಪುತ್ರಸನ್ನಿಧೌ ।
ಕಾಲ ಆಹೂಯ ವಚನಂ ಕದ್ರೂರಿದಮಭಾಷತ ॥೩॥

ವಿನತೆಯಾದರೋ ದಾಸ್ಯವನ್ನು ಹೊಂದಿ ಬಹಳ ದುಃಖಸಂತಪ್ತಳಾಗಿದ್ದಳು. ಅನಂತರ ಒಮ್ಮೆ ಪುತ್ರಸನ್ನಿಧಿಯಲ್ಲಿ ತನಗೆ ವಿನಯಶಾಲಿನಿಯಾಗಿದ್ದ ವಿನತೆಯನ್ನು ಕರೆದು ಕದ್ರುವು ಈ ಮಾತುಗಳನ್ನು ಆಡಿದಳು.

ನಾಗಾನಾಮಾಲಯಂ ಭದ್ರೇ ಸುರಮ್ಯಂ ರಮಣೀಯಕಮ್ ।
ಸಮುದ್ರಕುಕ್ಷಾವೇಕಾಂತೇ ತತ್ರ ಮಾಂ ವಿನತೇ ವಹ ॥೪॥

ಭದ್ರೆಯೇ, ಸಮುದ್ರಕುಕ್ಷಿಯಲ್ಲಿ ಒಂದು ಪ್ರದೇಶದಲ್ಲಿ ನಾಗಾಲಯವಿದೆ. ಅದು ಬಹಳ ಸುಂದರವಾಗಿದೆ. ವಿನತೆಯೇ ನನ್ನನ್ನು ಅಲ್ಲಿಗೆ ಎತ್ತಿಕೊಂಡು ಹೋಗು.

ತತಃ ಸುಪರ್ಣಮಾತಾ ತಾಮವಹತ್ ಸರ್ಪಮಾತರಮ್ ।
ಪನ್ನಗಾನ್ ಗರುಡಶ್ಚಾಪಿ ಮಾತುರ್ವಚನಚೋದಿತಃ ॥೫॥

ಆಗ ಗರುಡನ ತಾಯಿಯಾದ ವಿನತೆಯು ಸರ್ಪಮಾತೆಯಾದ ಕದ್ರುವನ್ನು ಎತ್ತಿಕೊಂಡು ಹೊರಟಳು. ತಾಯಿಯ ಮಾತಿನಂತೆ ಗರುಡನೂ ಸಹ ಸರ್ಪಗಳನ್ನು ಎತ್ತಿಕೊಂಡು ಹೊರಟನು.

ಸ ಸೂರ್ಯಮಭಿತೋ ಯಾತಿ ವೈನತೇಯೋ ವಿಹಂಗಮಃ ।
ಸೂರ್ಯರಶ್ಮಿಪರೀತಾಶ್ಚ ಮೂರ್ಚ್ಛಿತಾಃ ಪನ್ನಗಾऽಭವನ್ ।
ತದವಸ್ಥಾನ್ ಸುತಾನ್ ದೃಷ್ಟ್ವಾ ಕದ್ರೂಃ ಶಕ್ರಮಥಾಸ್ತುವತ್ ॥೬॥

ಆ ವಿನತೆಯ ಮಗನಾದ ಪಕ್ಷಿಯಾದ ಗರುಡನು ಸೂರ್ಯನಿಗೆ ಅಭಿಮುಖವಾಗಿ ಹೋಗಲು ಪ್ರಾರಂಭಿಸಿದನು. ಸರ್ಪಗಳೆಲ್ಲವೂ ಸೂರ್ಯರಶ್ಮಿಯಿಂದ ಬಳಲಿ ಮೂರ್ಛಿತವಾದವು. ತನ್ನ ಮಕ್ಕಳ ಅಂತಹ ಸ್ಥಿತಿಯನ್ನು ನೋಡಿ ಕದ್ರುವು ಇಂದ್ರನನ್ನು ಸ್ತೋತ್ರಮಾಡಿದಳು.

ಕದ್ರೂಃ

ನಮಸ್ತೇ ದೇವದೇವೇಶ ನಮಸ್ತೇ ಬಲಸೂದನ ।
ನಮುಚಿಘ್ನ ನಮಸ್ತೇऽಸ್ತು ಸಹಸ್ರಾಕ್ಷ ಶತಕ್ರತೋ ॥೭॥

ದೇವದೇವೇಶನಾದ ನಿನಗೆ ನಮಸ್ಕಾರ. ಬಲಸೂದನನಾದ ನಿನಗೆ ನಮಸ್ಕಾರ. ನಮುಚಿಹಂತಕನಾದ ನಿನಗೆ ನಮಸ್ಕಾರ. ಸಹಸ್ರಾಕ್ಷನೂ, ಶತಕ್ರತುವೂ ಆದ ನಿನಗೆ ನಮಸ್ಕಾರ.

ಸರ್ಪಾಣಾಂ ಸೂರ್ಯತಪ್ತಾನಾಂ ವಾರಿಣಾ ತ್ವಂ ಪ್ಲವೋ ಭವ ।
ತ್ವಮೇವ ಪರಮಂ ತ್ರಾಣಮಸ್ಮಾಕಮಮರೋತ್ತಮ ॥೮॥

ಸೂರ್ಯನ ತಾಪಕ್ಕೆ ಒಳಗಾದ ಸರ್ಪಗಳಿಗೆ ಜಲವನ್ನು ದಯಪಾಲಿಸಿ ನೀನು ಹಡಗಿನಂತೆ ದಾಟಿಸು. ದೇವಶ್ರೇಷ್ಠನೇ, ನಮಗೆ ನೀನೇ ಪರಮರಕ್ಷಕನಾದವನು.

ಈಶೋ ಹ್ಯಸಿ ಪಯಃ ಸ್ರಷ್ಟುಮನಲ್ಪಂ ಚ ಪುರಂದರ ।
ತ್ವಮೇವ ಮೇಘಸ್ತ್ವಂ ವಾಯುಸ್ತ್ವಮಗ್ನಿರ್ವೈದ್ಯುತಃ ಪುರಾ ॥೯॥

ಪುರಂದರನೇ, ಅಗಾಧವಾದ ನೀರನ್ನು ಸೃಷ್ಟಿಸಲು ನೀನು ಸಮರ್ಥನಾಗಿದ್ದೀಯೆ. ನೀನೇ ಮೇಘ. ನೀನೇ ವಾಯು. ನೀನೇ ಶ್ರೇಷ್ಠವಾದ ವಿದ್ಯುತ್ತಿನ ಅಗ್ನಿ. (ಇವೆಲ್ಲವೂ ನಿನ್ನ ಅಧೀನ ಎಂದು ತಿಳಿಯಬೇಕು.)

ತ್ವಮೇವ ಘನವಿಕ್ಷೇಪ್ತಾ ತ್ವಾಮೇವಾಹುರ್ಘನಂ ಪುರಾ ।
ತ್ವಂ ವಜ್ರಮತುಲಂ ಘೋರಂ ಮಘವಾಂಸ್ತ್ವಂ ಬಲಾಹಕಃ ॥೧೦॥

ನೀನೇ ಮೋಡಗಳನ್ನು ಚದುರಿಸುವವನು. ನಿನ್ನನ್ನೇ ಮೋಡವೆಂದು ಕರೆಯುತ್ತಾರೆ. ನೀನೇ ಅಸದೃಶವಾದ, ಘೋರವಾದ ವಜ್ರ. ನೀನೇ ಮೋಡಗಳು.

ಸ್ರಷ್ಟಾ ತ್ವಮೇವ ಲೋಕಾನಾಂ ಸಂಹರ್ತಾ ಚಾಪರಾಜಿತಃ ।
ತ್ವಂ ಯೋನಿಃ ಸರ್ವಭೂತಾನಾಂ ತ್ವಮಾದಿತ್ಯೋ ವಿಭಾವಸುಃ ॥೧೧॥

ನೀನೇ ಲೋಕಗಳನ್ನು ಸೃಷ್ಟಿಸುವವನು ಮತ್ತು ಸಂಹರಿಸುವವನು. ನೀನು ಅಪರಾಜಿತನಾದವನು. ನೀನು ಎಲ್ಲಾ ಜೀವರಿಗೂ ಸೃಷ್ಟಿಕರ್ತನಾದವನು. ನೀನೇ ಆದಿತ್ಯ. ನೀನೇ ಅಗ್ನಿ. (ಯೋಗ್ಯವಾದ ಈ ವಿಶೇಷಣಗಳನ್ನು ಇಂದ್ರನ ಅಂತರ್ಯಾಮಿಗೆ ಅನ್ವಯಮಾಡಬೇಕು. ಆದಿತ್ಯ, ವಿಭಾವಸು ಮೊದಲಾದ ಎಲ್ಲಾ ಶಬ್ದಗಳಿಂದಲೂ ವಿಷ್ಣುವೇ ವಾಚ್ಯನೆಂದು ತಿಳಿಯಬೇಕು. ಮುಂದೆಯೂ ಹೀಗೆಯೆ.)

ತ್ವಂ ಮಹಾಭೂತಮಾಶ್ಚರ್ಯಂ ತ್ವಂ ರಾಜಾ ತ್ವಂ ಸುರೋತ್ತಮಃ ।
ತ್ವಂ ವಿಷ್ಣುಸ್ತ್ವಂ ಸುರಾರಿಘ್ನಸ್ತ್ವಂ ದೇವಸ್ತ್ವಂ ಪರಾಯಣಮ್ ॥೧೨॥

ನೀನೇ ಮಹಾಭೂತಗಳು. ನೀನೇ ಆಶ್ಚರ್ಯನಾದವನು. ನೀನೇ ಎಲ್ಲರನ್ನೂ ರಂಜಿಸುವವನು. ನೀನೇ ಸುರಶ್ರೇಷ್ಠನಾದವನು. ನೀನೇ ವಿಷ್ಣುವು. ನೀನೇ ಅಸುರರನ್ನು ಸಂಹಾರಮಾಡುವವನು. ನೀನೇ ದೇವನಾದವನು. ನೀನೇ ಶ್ರೇಷ್ಠನಾದ ಆಶ್ರಯನು.

ತ್ವಂ ಸರ್ವಮಮೃತಂ ದೇವ ತ್ವಂ ಸೋಮಃ ಪರಮಾರ್ಚಿತಃ ।
ತ್ವಂ ಮುಹೂರ್ತಸ್ತಿಥಿಸ್ತ್ವಂ ಚ ತ್ವಂ ಲವಸ್ತ್ವಂ ಪುನಃ ಕ್ಷಣಃ ॥೧೩॥

ನೀನೇ ಎಲ್ಲವೂ. ದೇವನೇ, ನೀನೇ ಮುಕ್ತಸಮುದಾಯವು. ನೀನೇ ಪರಮಾರ್ಚಿತನಾದ ಚಂದ್ರನು. ನೀನೇ ಮುಹೂರ್ತ, ನೀನೇ ತಿಥಿ. ನೀನೇ ಲವ ಮತ್ತು ನೀನೇ ಕ್ಷಣ.

ಶುಕ್ಲಸ್ತ್ವಂ ಬಹುಲಶ್ಚೈವ ಕಲಾಃ ಕಾಷ್ಠಾ ತಥಾ ತ್ರುಟಿಃ ।
ಸಂವತ್ಸರಸ್ತು ಮಾಸಾಶ್ಚ ರಜನ್ಯಶ್ಚ ದಿನಾನಿ ಚ ॥೧೪॥

ನೀನೇ ಶುಕ್ಲಪಕ್ಷ. ನೀನೇ ಕೃಷ್ಣಪಕ್ಷ. ಕಲಾ, ಕಾಷ್ಠ ಮತ್ತು ತ್ರುಟಿಗಳೂ ನೀನೇ. ಸಂವತ್ಸರಗಳೂ, ಮಾಸಗಳೂ, ರಾತ್ರಿಗಳೂ, ಹಗಲುಗಳೂ, ಎಲ್ಲವೂ ನೀನೇ.

ತ್ವಮುತ್ತಮಃ ಸಗಿರಿವನಾ ವಸುಂಧರಾ
ಸುಭಾಸ್ವರಂ ವಿತಿಮಿರಮಂಬರಂ ತಥಾ ।
ಮಹೋದಧಿಃ ಸತಿಮಿತಿಮಿಂಗಲಸ್ತಥಾ
ಮಹೋರ್ಮಿಮಾನ್ ಬಹುಮಕರೋ ಝಷಾಲಯಃ ॥೧೫॥

ಪರ್ವತ ಮತ್ತು ಕಾಡುಗಳಿಂದ ಕೂಡಿದ ವಸುಂಧರೆಯೂ ನೀನೇ. ನೀನೇ ಸರ್ವೋತ್ತಮನಾದವನು. ನೀನೇ ಪ್ರಕಾಶರೂಪವಾದ, ಅಂಧಕಾರಶೂನ್ಯವಾದ ಆಕಾಶನು. ತಿಮಿಂಗಲಗಳನ್ನು ಹೊಂದಿದ ಅನೇಕ ಅಲೆಗಳನ್ನೂ, ಅನೇಕ ಮೊಸಳೆಗಳನ್ನೂ ಮತ್ತು ಅನೇಕ ಮೀನುಗಳನ್ನೂ ಹೊಂದಿದ ಸಮುದ್ರವೂ ನೀನೇ.

ಮನೀಷಿಭಿಸ್ತ್ವಮಿತಿ ಸದಾऽಭಿಪೂಜ್ಯಸೇ
ಮಹರ್ಷಿಭಿರ್ಮುದಿತಹೃದಂಬುಜೇ ವಿಭೋ ।
ಅಭಿಷ್ಟುತಃ ಪಿಬಸಿ ಚ ಸೋಮಮಧ್ವರೇ
ವಷಟ್‌ಕೃತಾನ್ಯಪಿ ಚ ಹವೀಂಷಿ ಭೂತಳೇ ॥೧೬॥

ಎಲೈ ವಿಭುವೇ, ವಿವೇಕಿಗಳಾದ ಮಹರ್ಷಿಗಳು ಅವರ ಹೃದಯಕಮಲದಲ್ಲಿ ನಿನ್ನನ್ನು ಸದಾ ಹೀಗೆ ಪೂಜೆಮಾಡುತ್ತಾರೆ. ಅವರಿಂದ ಸ್ತೋತ್ರಮಾಡಲ್ಪಟ್ಟು ಯಜ್ಞದಲ್ಲಿ ನೀನು ಸೋಮಭಾಗವನ್ನು ಸ್ವೀಕರಿಸುತ್ತೀಯೆ. ಭೂಮಿಯಲ್ಲಿ ವಷಟ್ಕಾರಸಹಿತವಾಗಿ ಕೊಟ್ಟ ಹವಿಸ್ಸುಗಳನ್ನೂ ಸ್ವೀಕರಿಸುತ್ತೀಯೆ.

ಅಜಾಯ ಲೋಕತ್ರಯಭಾವನಾಯ
ಭೂತಾತ್ಮನೇ ಗೋಪತಯೇ ವೃಷಾಯ ।

ಸೂರ್ಯಾಯ ಸರ್ಗಪ್ರಳಯಾನಲಾಯ
ನಮೋ ಮಹಾಕಾರುಣಿಕೋತ್ತಮಾಯ ॥೧೭॥

ಜನ್ಮರಹಿತನಾದ, ಲೋಕತ್ರಯಗಳ ಸೃಷ್ಟಿಕರ್ತನಾದ, ಸರ್ವಸ್ವಾಮಿಯಾದ ಕಿರಣಗಳಿಗೆ ಒಡೆಯನಾದ, ಸರ್ವಶ್ರೇಷ್ಠನಾದ, ಸೃಷ್ಟಿಸ್ಥಿತಿಲಯಗಳಿಗೆ ಕಾರಣನಾದ, ಮಹಾಕಾರುಣಿಕನಾದ, ಸರ್ವೋತ್ತಮನಾದ ಸೂರ್ಯರೂಪನಾದ ನಿನಗೆ ನಮಸ್ಕಾರ.

ವಿವಸ್ವತೇ ಜ್ಞಾನಭೃದಂತರಾತ್ಮನೇ
ಜಗತ್ಪ್ರದೀಪಾಯ ಜಗದ್ಧಿತೈಷಿಣೇ ।
ಸ್ವಯಂಭುವೇ ದೀಪ್ತಸಹಸ್ರಚಕ್ಷುಷೇ
ಸುರೋತ್ತಮಾಯಾಮಿತತೇಜಸೇ ನಮಃ ॥೧೮॥

ಜ್ಞಾನಿಗಳ ಅಂತರಾತ್ಮನಾದ, ಜಗತ್ತಿನ ಹಿತವನ್ನು ಬಯಸುವ, ಜಗತ್ತಿಗೆ ದೀಪಪ್ರಾಯನಾಗಿರುವ, ದೀಪ್ತವಾದ ಸಹಸ್ರಚಕ್ಷುಸ್ಸುಗಳನ್ನು ಹೊಂದಿದ, ಸ್ವಯಂಭುವಾದ, ಸುರೋತ್ತಮನಾದ, ಅಮಿತ ತೇಜಸ್ಸುಳ್ಳ, ವಿವಸ್ವಾನ್ ಎಂಬ ಸೂರ್ಯನಾಮಕನಾದ ನಿನಗೆ ನಮಸ್ಕಾರ.

ತ್ವಂ ವಿಪ್ರೈಃ ಸತತಮಿಹೇಜ್ಯಸೇ ಫಲಾರ್ಥಂ
ವೇದಾಂತೇಷ್ವತುಲಬಲೌಘ ಗೀಯಸೇ ತ್ವಮ್ ।
ತ್ವದ್ಭೀತೋರ್ಯಜನಪರಾಯಣಾ ದ್ವಿಜೇಂದ್ರಾ
ವೇದಾಂತಾನ್ಯಭಿಗಮಯಂತಿ ಸರ್ವವೇದ್ಯೈಃ ॥೧೯॥

ನೀನು ಅಪೇಕ್ಷಿತ ಫಲಗಳ ಪ್ರಾಪ್ತಿಗಾಗಿ ವಿಪ್ರರಿಂದ ಇಲ್ಲಿಯಾವಾಗಲೂ ಆರಾಧಿಸಲ್ಪಡುತ್ತೀಯೆ. ಎಲೈ ಅಸದೃಶಬಲರಾಶಿರೂಪನಾದವನೇ, ವೇದಾಂತಗಳಲ್ಲಿನೀನೇ ಗಾನಮಾಡಲ್ಪಡುತ್ತೀಯೆ. ನಿನ್ನಪ್ರೀತಿಯ ಸಲುವಾಗಿ ಯಜನಶೀಲರಾದ ದ್ವಿಜೇಂದ್ರರು ಸರ್ವವೇದಗಳಿಂದ ವೇದಾಂತವನ್ನು ಸಂಯೋಜಿಸಿ ನಿನ್ನನ್ನು ಶಿಷ್ಯರಲ್ಲಿ ಉಪದೇಶಮಾಡುತ್ತಾರೆ.

॥ ಇತಿ ಶ್ರೀಮನ್ಮಹಾಭಾರತೇ ಶತಸಹಸ್ರಿಕಾಯಾಂಸಂಹಿತಾಯಾಮಾದಿಪರ್ವಣಿ
ಏಕೋವಿಂಶೋಽಧ್ಯಾಯಃ ॥

॥ ಇತಿ ಆಸ್ತೀಕಪರ್ವಣಿ ನವಮೋಽಧ್ಯಾಯಃ ॥

ಇಲ್ಲಿಗೆ ಮಹಾಭಾರತದ ಆದಿಪರ್ವದಲ್ಲಿ ಇಪ್ಪತ್ತೊಂದನೆಯ ಅಧ್ಯಾಯ ಮುಗಿಯಿತು.

ಇಪ್ಪತ್ತೆರಡನೆಯ ಅಧ್ಯಾಯ

(ಇಂದ್ರನು ಸುರಿಸಿದ ಮಳೆಯಿಂದ ಸರ್ಪಗಳ ತಾಪ ಪರಿಹಾರ.)

ಸೂತಃ

ಏವಂ ಸ್ತುತಸ್ತದಾ ಕದ್ರ್ಯಾ ವೈ ಭಗವಾನ್ ಹರಿವಾಹನಃ ।
ನೀಲಜೀಮೂತಸಂಘಾತೈರ್ವ್ಯೋಮ ಸರ್ವಂ ಸಮಾವೃಣೋತ್ ॥೧॥

ಕದ್ರುವಿನಿಂದ ಹೀಗೆ ಸ್ತೋತ್ರಮಾಡಲ್ಪಟ್ಟ ಭಗವಾನ್ ಇಂದ್ರನು ನೀಲಮೇಘಗಳ ಸಮುದಾಯದಿಂದ ಎಲ್ಲಾ ಆಕಾಶವನ್ನೂ ತುಂಬಿದನು.

ತೇ ಮೇಘಾ ಮುಮುಚುಸ್ತೋಯಂ ಮುಹೂರ್ತಂ ವಿದ್ಯುದುಜ್ಜ್ವಲಾಃ ।
ಪರಸ್ಪರಮಿವಾತ್ಯರ್ಥಂ ಗರ್ಜಂತಃ ಸತತಂ ದಿವಿ ॥೨॥

ಆ ಮೋಡಗಳು ಸ್ಪರ್ಧೆಯಿಂದಲೋ ಎಂಬಂತೆ ಪರಸ್ಪರವಾಗಿ ಗರ್ಜಿಸುತ್ತಾ ಆಕಾಶದಲ್ಲಿ ಗುಡುಗುಗಳನ್ನು ಉಂಟುಮಾಡಿ ಒಂದು ಮುಹೂರ್ತದ ಕಾಲ ಮಿಂಚಿನಿಂದ ಕೂಡಿದವುಗಳಾಗಿ ಉಜ್ವಲವಾದ ಮಳೆಯನ್ನು ಸುರಿಸಿದವು.

ಅದ್ರಿಸಂಘೈರಿವಾಕಾಶಂ ಜಲದೈಸ್ತು ಮಹಾದ್ಭುತೈಃ ।
ಸೃಜದ್ಭಿರತುಲಂ ತೋಯಮಜಸ್ರಂ ಸುಮಹಾರವೈಃ ॥೩॥

ಮಹಾದ್ಭುತಗಳಾದ, ಬಹಳ ಗರ್ಜನೆಯಿಂದ ಕೂಡಿದ ಪರ್ವತಪ್ರಾಯವಾದ ಮೇಘಗಳಿಂದ ಅಸಾಧಾರಣವಾದ ಜಲರಾಶಿಯು ಸತತವಾಗಿ ಸೃಷ್ಟಿಸಲ್ಪಟ್ಟಿತು.

ಸಂಪ್ರವೃತ್ತಮಿವಾಕಾಶಂ ಧಾರಾತ್ಮಭಿರನೇಕಶಃ ।
ಮೇಘಸ್ತನಿತನಿರ್ಘೋಷಮಂಬರಂ ಸಮಪದ್ಯತ ॥೪॥

ಆಕಾಶವು ನೀರಿನಿಂದಲೂ, ಮೇಘಗಳ ಗರ್ಜನೆಯ ನಿರ್ಘೋಷದಿಂದಲೂ ತುಂಬಿಹೋದಂತೆ ಕಾಣುತ್ತಿತ್ತು.

ನಾಗಾನಾಮುತ್ತಮೋ ಹರ್ಷಸ್ತಥಾ ವರ್ಷತಿ ವಾಸವೇ ।
ಆಪೂರ್ಯತ ಮಹೀ ಚಾಪಿ ಸಲಿಲೇನ ಸಮಂತತಃ ॥೫॥

ಇಂದ್ರನು ಹಾಗೆ ಮಳೆಯನ್ನು ಸುರಿಸುತ್ತಿರಲು ಸರ್ಪಗಳಿಗೆ ಬಹಳ ಸಂತೋಷವಾಯಿತು. ಭೂಮಿಯೂ ಕೂಡ ಎಲ್ಲ ಕಡೆಯಲ್ಲಿಯೂ ನೀರಿನಿಂದ ತುಂಬಿತು.

॥ ಇತಿ ಶ್ರೀಮನ್ಮಹಾಭಾರತೇ ಶತಸಹಸ್ರಿಕಾಯಾಂಸಂಹಿತಾಯಾಮಾದಿಪರ್ವಣಿ
ದ್ವಾವಿಂಶೋऽಧ್ಯಾಯಃ ॥

॥ ಇತಿ ಆಸ್ತೀಕಪರ್ವಣಿ ದಶಮೋऽಧ್ಯಾಯಃ ॥

ಇಲ್ಲಿಗೆ ಮಹಾಭಾರತದ ಆದಿಪರ್ವದಲ್ಲಿ ಇಪ್ಪತ್ತೆರಡನೆಯ ಅಧ್ಯಾಯ ಮುಗಿಯಿತು.

★★★★★

ಇಪ್ಪತ್ಮೂರನೆಯ ಅಧ್ಯಾಯ

(ಸರ್ಪಗಳ ಮಾತಿನಂತೆ ತಾಯಿಯನ್ನು ದಾಸ್ಯದಿಂದ ಬಿಡಿಸಲು ಅಮೃತವನ್ನು ತರಲು ಗರುಡನ ಪ್ರಯತ್ನ. ತಾಯಿಯನ್ನು ಕುರಿತು ಆಹಾರ ಪ್ರಾರ್ಥನೆ. ತಾಯಿಯ ಮಾತಿನಂತೆ ಸಮುದ್ರಮಧ್ಯದಲ್ಲಿದ್ದ ನಿಷಾದರ ಭಕ್ಷಣ)

ಸೂತಃ

ಸುಪರ್ಣೇನೋಹ್ಯಮಾನಾಸ್ತೇ ಜಗ್ಮುಸ್ತಂ ದೇಶಮಾಶು ವೈ ।
ಸಾಗರಾಂಬುಪರಿಕ್ಷಿಪ್ತಂ ಪಕ್ಷಿಸಂಘನಿನಾದಿತಮ್ ॥೧॥

ಸುಪರ್ಣನಿಂದ ಹೊತ್ತುಕೊಂಡು ಹೋಗಲ್ಪಟ್ಟ ಆ ಸರ್ಪಗಳು ಸಾಗರದ ಜಲದ ಮಧ್ಯದಲ್ಲಿರುವ ಪಕ್ಷಿಸಮೂಹದ ನಾದದಿಂದ ಕೂಡಿದ್ದ ಆ ಪ್ರದೇಶವನ್ನು ತಲುಪಿದವು.

ವಿಚಿತ್ರಫಲಪುಷ್ಪಾಭಿರ್ವನರಾಜಿಭಿರಾವೃತಮ್ ।
ಭವನೈಶ್ಚಾವೃತಂ ದಿವ್ಯೈಸ್ತಥಾ ಪದ್ಮಾಕರೈರಪಿ ॥೨॥

ಪ್ರಸನ್ನಸಲಿಲೈಶ್ಚಾಪಿ ಹೃದೈಶ್ಚಿತ್ರೈರ್ವಿಭೂಷಿತಮ್ ।
ದಿವ್ಯಗಂಧವಹೈಃ ಪುಣ್ಯೈರ್ಮಾರುತೈರುಪವೀಜಿತಮ್ ॥೩॥

ಆಜಿಘ್ರದ್ಬಿರಿವಾಕಾಶಂ ವೃಕ್ಷೈರ್ಮಲಯಜೈರಪಿ ।
ಶೋಭಿತಂ ಪುಷ್ಪವರ್ಷಾಣಿ ಮುಂಚದ್ಭಿರ್ಮಾರುತೋದ್ಧತೈಃ ॥೪॥

ಆ ಪ್ರದೇಶವು ವಿಚಿತ್ರವಾದ ಫಲಪುಷ್ಪಗಳನ್ನು ಹೊಂದಿದ್ದ ಮರಗಳ ಶ್ರೇಣಿಗಳಿಂದ ಆವೃತವಾಗಿದ್ದಿತು. ಅದು ದಿವ್ಯವಾದ ಭವನಗಳಿಂದಲೂ ಮತ್ತು ಪದ್ಮಸರೋವರಗಳಿಂದಲೂ ಕೂಡಿದ್ದಿತು. ಸ್ವಚ್ಛವಾದ ನೀರಿನಿಂದ ಕೂಡಿದ ವಿಚಿತ್ರವಾದ ಅನೇಕ ಮಡುಗಳಿಂದ ಭೂಷಿತವಾಗಿದ್ದಿತು. ವಾಯುವು ವೃಕ್ಷಗಳ ಮೇಲಿನ ದಿವ್ಯಗಂಧವನ್ನು ತೆಗೆದುಕೊಂಡು ಬೀಸುತ್ತಿದ್ದಿತು. ಮಲಯಜವೃಕ್ಷಗಳು ಆಕಾಶವನ್ನೇ ಆಘ್ರಾಣಿಸುವಂತೆ ಎತ್ತರವಾಗಿ ಬೆಳೆದಿದ್ದವು. ವಾಯುವಿನಿಂದ ಕಂಪಿಸಲ್ಪಟ್ಟ ಮರಗಳಿಂದ ಬಿದ್ದ ಪುಷ್ಪವರ್ಷದಿಂದ ಆ ಪ್ರದೇಶವು ಶೋಭಿತವಾಗಿದ್ದಿತು.

ಕಿರದ್ಭಿರಿವ ತತ್ರಸ್ಥಾನ್ ನಾಗಾನ್ ಪುಷ್ಪಾಂಬುವೃಷ್ಟಿಭಿಃ ।
ಮನಃಸಂಹರ್ಷಣಂ ಪುಣ್ಯಂ ಗಂಧರ್ವಾಪ್ಸರಸಾಂ ಪ್ರಿಯಮ್ ॥೫॥

ನಾನಾಪಕ್ಷಿರುತಂ ರಮ್ಯಂ ಕದ್ರೂಪುತ್ರಪ್ರಹರ್ಷಣಮ್ ।
ತತ್ತೇ ವನಂ ಸಮಾಸಾದ್ಯ ವಿಜಹ್ರುಃ ಪನ್ನಗಾ ಮುದಾ ।
ಅಬ್ರುವಂಶ್ಚ ಮಹಾವೀರ್ಯಂ ಸುಪರ್ಣಂ ಪತಗೋತ್ತಮಮ್ ॥೬॥

ಆ ಪ್ರದೇಶದಲ್ಲಿದ್ದ ಸರ್ಪಗಳನ್ನು ಪುಷ್ಪವೃಷ್ಟಿ ಮತ್ತು ಜಲವೃಷ್ಟಿಗಳಿಂದ ತುಂಬುವಂತೆ ಆ ವೃಕ್ಷಗಳಿದ್ದವು. ಅದು ಮನಸ್ಸಿಗೆ ಸಂತೋಷದಾಯಕವೂ, ಪವಿತ್ರವೂ, ಗಂಧರ್ವರಿಗೆ ಮತ್ತು ಅಪ್ಸರೆಯರಿಗೆ ಪ್ರಿಯವೂ ಆಗಿದ್ದಿತು. ಅನೇಕ ವಿಧವಾದ ಪಕ್ಷಿಗಳ ಕಲರವದಿಂದ ರಮ್ಯವಾಗಿದ್ದಿತು. ಕದ್ರುವಿನ ಮಕ್ಕಳಾದ ನಾಗಗಳಿಗೆ ಸಂತೋಷವನ್ನುಂಟುಮಾಡುವುದಾಗಿದ್ದಿತು. ನಾಗಗಳು ಆ ಪ್ರದೇಶವನ್ನು ತಲುಪಿ ಸಂತೋಷದಿಂದ ವಿಹರಿಸಿ ಪುನಃ ಪಕ್ಷಿಶ್ರೇಷ್ಠನಾದ, ಮಹಾಬಲಶಾಲಿಯಾದ ಗರುಡನನ್ನು ಕುರಿತು ಹೇಳಿದವು.

ನಾಗಾಃ

ವಹಾಸ್ಮಾನಪರಂ ದ್ವೀಪಂ ಸುರಮ್ಯಂ ವಿಪುಲೋದಕಮ್ ।
ತ್ವಂ ಹಿ ದೇಶಾನ್ ಬಹೂನ್ ರಮ್ಯಾನ್ ಪತನ್ ಪಶ್ಯಸಿ ಖೇಚರ ॥೭॥

ಖೇಚರನೇ, ನಮ್ಮನ್ನು ಸುಂದರವಾದ, ಬಹಳ ಜಲವಿರುವ ಇನ್ನೊಂದು ದ್ವೀಪಕ್ಕೆ ಎತ್ತಿಕೊಂಡು ಹೋಗು. ನೀನು ಆಕಾಶದಲ್ಲಿ ಸಂಚರಿಸುತ್ತಾ ಅನೇಕ ಸುಂದರವಾದ ದೇಶಗಳನ್ನು ನೋಡಿರುವಿಯಷ್ಟೆ.

ಸೂತಃ

ಸ ವಿಚಿಂತ್ಯಾಬ್ರವೀತ್ ಪಕ್ಷೀ ಮಾತರಂ ವಿನತಾಂ ತದಾ ।
ಕಿಂ ಕಾರಣಂ ಮಯಾ ಮಾತಃ ಕರ್ತವ್ಯಂ ಸರ್ಪಭಾಷಿತಮ್ ॥೮॥

ಪಕ್ಷಿಯಾದ ಗರುಡನು ಆ ಮಾತನ್ನು ಚಿಂತಿಸಿ ತಾಯಿಯಾದ ವಿನತೆಯನ್ನು ಕುರಿತು ಅಮ್ಮಾ ಸರ್ಪಗಳು ಹೇಳಿದಂತೆ ನಾನು ಏಕೆ ಕೇಳಬೇಕು ಎಂದು ಕೇಳಿದನು.

ವಿನತಾ

ದಾಸೀಭೂತಾಸ್ಮ್ಯನಾರ್ಯಾಯಾ ಭಗಿನ್ಯಾಃ ಪತಗೋತ್ತಮ ।
ಪಣಂ ವಿತಥಮಾಸ್ಥಾಯ ಸರ್ಪೈರುಪಧಿನಾ ಕೃತಮ್ ॥೯॥

ಎಲೈ ಪಕ್ಷಿಶ್ರೇಷ್ಠನೇ, ಅನಾರ್ಯಳಾದ ಸಹೋದರಿಯು ಒಂದು ವ್ಯರ್ಥವಾದ ಪಣವನ್ನು ಒಡ್ಡಿ ವಂಚನೆಯಿಂದ ನನ್ನನ್ನು ಸೋಲಿಸಿದ್ದಾಳೆ. ಆದ್ದರಿಂದ ದಾಸಿಯಾಗಿದ್ದೇನೆ.

ಸೂತಃ

ತಸ್ಮಿಂಸ್ತು ಕಥಿತೇ ಮಾತ್ರಾ ಕಾರಣೇ ಗಗನೇಚರಃ ।
ಉವಾಚ ವಚನಂ ಸರ್ಪಾಂಸ್ತೇನ ದುಃಖೇನ ದುಃಖಿತಃ ॥೧೦॥

ತಾಯಿಯಿಂದ ಆ ಮಾತುಗಳನ್ನು ಕೇಳಿದ ಗರುಡನು ತಾಯಿಯ ದುಃಖದಿಂದ ದುಃಖಿತನಾಗಿ, ಸರ್ಪಗಳನ್ನು ಕುರಿತು ಹೀಗೆ ಮಾತನಾಡಿದನು.

ಕಿಂ ವಾऽऽಹೃತ್ಯ ವಿಜಿತ್ವಾ ಕಿಂ ಕಿಂ ವಾ ಕೃತ್ವೇಹ ಪೌರುಷಮ್ ।
ದಾಸ್ಯಾದ್ ವಾ ವಿಪ್ರಮುಚ್ಯೇಯಂ ಸತ್ಯಂ ಶಂಸಥ ಲೇಲಿಹಾಃ ॥

ಏನನ್ನು ತಂದುಕೊಂಡು ಅಥವಾ ಏನನ್ನು ಜಯಿಸಿ ಅಥವಾ ಇಲ್ಲಿ ಯಾವ ಪರಾಕ್ರಮದ ಕೆಲಸವನ್ನು ಮಾಡಿದರೆ, ನನ್ನ ತಾಯಿಯು ದಾಸ್ಯದಿಂದ ಬಿಡುಗಡೆಯನ್ನು ಹೊಂದುವಳು? ಎಲೈ ಸರ್ಪಗಳೇ, ಸತ್ಯವನ್ನು ಹೇಳಿ.

ಶ್ರುತ್ವಾ ತಮಬ್ರುವನ್ ಸರ್ಪಾ ಆಹರಾಮೃತಮೋಜಸಾ ।
ತದಾ ದಾಸ್ಯಾದ್ ವಿಪ್ರಮೋಕ್ಷೋ ತವ ಮಾತುರ್ಭವಿಷ್ಯತಿ ॥೧೨॥

ಈ ಮಾತನ್ನು ಕೇಳಿದ ಸರ್ಪಗಳು ನಿನ್ನ ಸಾಮರ್ಥ್ಯದಿಂದ ಅಮೃತವನ್ನು ತೆಗೆದುಕೊಂಡು ಬಾ, ಆಗ ನಿನ್ನ ತಾಯಿಗೆ ದಾಸ್ಯದಿಂದ ವಿಮೋಚನೆಯಾಗುವುದು ಎಂದು ಹೇಳಿದವು.

ಸೂತಃ

ಇತ್ಯುಕ್ತೋ ಗರುಡಃ ಸರ್ಪೈಸ್ತತೋ ಮಾತರಮಬ್ರವೀತ್ ।
ಗಚ್ಛಾಮ್ಯಮೃತಮಾಹರ್ತುಂ ಭಕ್ಷ್ಯಮಿಚ್ಛಾಮಿ ದೇಹಿ ತತ್ ॥೧೩॥

ಸರ್ಪಗಳಿಂದ ಹೀಗೆ ಹೇಳಲ್ಪಟ್ಟ ಗರುಡನು ತಾಯಿಯನ್ನು ಕುರಿತು, ಅಮ್ಮಾ, ಅಮೃತವನ್ನು ತರಲು ಹೋಗುತ್ತಿದ್ದೇನೆ. ಏನಾದರೂ ತಿನ್ನಲು ಕೊಡು ಎಂದು ಹೇಳಿದನು.

ವಿನತಾ

ಸಮುದ್ರಕುಕ್ಷಾವೇಕಾಂತೇ ನಿಷಾದಾಲಯಮುತ್ತಮಮ್ ।
ಸಹಸ್ರಾಣಾಮನೇಕೇಷಾಂ ತಾನ್ ಭುಕ್ತ್ವಾಮೃತಮಾಹರ ॥೧೪॥

ಸಮುದ್ರಕುಕ್ಷಿಯಲ್ಲಿ ಒಂದು ಏಕಾಂತಪ್ರದೇಶದಲ್ಲಿ ಶ್ರೇಷ್ಠವಾದ ನಿಷಾದಾಲಯವಿದೆ. ಅಲ್ಲಿ ನಿಷಾದರು ಅನೇಕ ಸಹಸ್ರಸಂಖ್ಯೆಯಲ್ಲಿದ್ದಾರೆ. ಅವರನ್ನು ತಿಂದು ಅಮೃತವನ್ನು ತೆಗೆದುಕೊಂಡು ಬಾ.

ನ ತು ತೇ ಬ್ರಾಹ್ಮಣಾನ್ ಹಂತುಂ ಕಾರ್ಯಾ ಬುದ್ಧಿಃ ಕಥಂಚನ ।
ಅವಧ್ಯಃ ಸರ್ವಭೂತಾನಾಂ ಬ್ರಾಹ್ಮಣೋ ಹ್ಯನಲೋಪಮಃ ॥೧೫॥

ಎಂದಿಗೂ ಬ್ರಾಹ್ಮಣರನ್ನು ಕೊಲ್ಲುವ ಬುದ್ಧಿಯನ್ನು ಮಾಡಬೇಡ. ಬ್ರಾಹ್ಮಣನು ಅಗ್ನಿಗೆ ಸಮಾನನಾದವನು. ಅವನು ಎಲ್ಲರಿಂದಲೂ ಅವಧ್ಯನಾದವನು.

ಅಗ್ನಿರರ್ಕೋ ವಿಷಂ ಶಸ್ತ್ರಂ ವಿಪ್ರೋ ಭವತಿ ಕೋಪಿತಃ ।
ಭೂತಾನಾಮಗ್ರಭುಗ್ ವಿಪ್ರೋ ವರ್ಣಶ್ರೇಷ್ಠಸ್ತಥಾ ಗುರುಃ ॥೧೬॥

ಕೋಪಗೊಂಡ ಬ್ರಾಹ್ಮಣನು ಅಗ್ನಿಯಾಗುತ್ತಾನೆ. ಸೂರ್ಯನಾಗುತ್ತಾನೆ. ವಿಷವಾಗುತ್ತಾನೆ ಮತ್ತು ಶಸ್ತ್ರನಾಗುತ್ತಾನೆ. ಬ್ರಾಹ್ಮಣನು ಎಲ್ಲರಿಗಿಂತ ಮೊದಲು ಭೋಜನಮಾಡುವ ಅರ್ಹತೆಯುಳ್ಳವನು, ಎಲ್ಲಾವರ್ಣಗಳಲ್ಲಿಯೂ ಶ್ರೇಷ್ಠನಾದವನು ಮತ್ತು ಎಲ್ಲರಿಗೂ ಗುರುವಾದವನು.

ಏವಮಾದಿಭೀ ರೂಪೈಸ್ತು ಸದ್ಗುಣೈರ್ ಬ್ರಾಹ್ಮಣೋ ವರಃ ।
ಸ ತೇ ತಾತ ನ ಹಂತವ್ಯಃ ಸಂಕ್ರುದ್ಧೇನಾಪಿ ಸರ್ವಶಃ ॥೧೭॥

ಇಂತಹ ರೂಪವನ್ನೂ ಮತ್ತು ಸದ್ಗುಣಗಳನ್ನೂ ಹೊಂದಿದ ಬ್ರಾಹ್ಮಣನು ಶ್ರೇಷ್ಠನಾದವನು. ಪ್ರೀತಿಪಾತ್ರನೇ, ನಿನಗೆ ಎಲ್ಲರ ಮೇಲೆ ಕೋಪವುಂಟಾದರೂ ಬ್ರಾಹ್ಮಣರನ್ನು ಮಾತ್ರ ಕೊಲ್ಲಬಾರದು.

ಬ್ರಾಹ್ಮಣಾನಾಮಭಿದ್ರೋಹೋ ನ ಕರ್ತವ್ಯಃ ಕದಾಚನ ।
ನಚೈವಾಗ್ನಿರ್ನಚಾದಿತ್ಯೋ ಭಸ್ಮೀಕುರ್ಯಾತ್ ತಥಾऽನಘ ॥೧೮॥

ಯಥಾ ಕುರ್ಯಾದಭಿಕ್ರುದ್ಧೋ ಬ್ರಾಹ್ಮಣಃ ಸಂಶಿತವ್ರತಃ ।
ತದೇತೈರ್ವಿವಿಧೈರ್ಲಿಂಗೈಃ ಸಂವಿದ್ಯಾತ್ ತಂ ದ್ವಿಜೋತ್ತಮಮ್ ॥೧೯॥

ಯಾವ ಕಾರಣದಿಂದಲೂ ಬ್ರಾಹ್ಮಣರಿಗೆ ದ್ರೋಹವನ್ನು ಉಂಟು ಮಾಡಬಾರದು. ಎಲೈ ಅನಘನೇ, ವ್ರತಧಾರಿಯಾದ, ಶ್ರೇಷ್ಠನಾದ ಬ್ರಾಹ್ಮಣನು ಕೋಪಗೊಂಡರೆ, ಹೇಗೆ ಎಲ್ಲವನ್ನೂ ನಿಶ್ಶೇಷವಾಗಿ ದಹಿಸುತ್ತಾನೋ, ಹಾಗೇ ಅಗ್ನಿಯಾಗಲೀ ಅಥವಾ ಆದಿತ್ಯನಾಗಲೀ ದಹಿಸಲು ಸಾಧ್ಯವಿಲ್ಲ. ಇಂತಹ ಅನೇಕ ಚಿಹ್ನೆಗಳಿಂದ ದ್ವಿಜೋತ್ತಮನಾದ ಬ್ರಾಹ್ಮಣನನ್ನು ಗುರುತಿಸು.

ವೈನತೇಯ

ಯಥಾಹಮನುಜಾನೀಯಾಂ ಬ್ರಾಹ್ಮಣಂ ಲಕ್ಷಣೈಃ ಶುಭೈಃ ।
ಏತನ್ಮೇ ಕಾರಣಂ ಮಾತಃ ಪೃಚ್ಛತೇ ವಕ್ತುಮರ್ಹಸಿ ।
ಕಿಂರೂಪೋ ಬ್ರಾಹ್ಮಣೋ ಮಾತಃ ಕಿಂಶೀಲಃ ಕಿಂಪರಾಯಣಃ ॥೨೦॥

ತಾಯಿಯೇ, ನಾನು ಯಾವ ಲಕ್ಷಣಗಳಿಂದ ಬ್ರಾಹ್ಮಣನನ್ನು ತಿಳಿದುಕೊಳ್ಳಬಹುದೋ ಅಂತಹ ಲಕ್ಷಣಗಳನ್ನು ನನಗೆ ಹೇಳು. ಬ್ರಾಹ್ಮಣನು ಯಾವ

ರೂಪವನ್ನು ಧರಿಸಿರುತ್ತಾನೆ, ಯಾವ ಶೀಲದವನಾಗಿರುತ್ತಾನೆ, ಮತ್ತು ಯಾರನ್ನು ಆಶ್ರಯಿಸಿರುತ್ತಾನೆ?

ವಿನತಾ

ಯಸ್ತೇ ಕಂಠಮನುಪ್ರಾಪ್ತೋ ನಿಗೀರ್ಣಂ ಬಡಿಶಂ ಯಥಾ ।
ದಹೇದಂಗಾರವತ್ ಪುತ್ರ ತಂ ವಿದ್ಯಾದ್ ಬ್ರಾಹ್ಮಣರ್ಷಭಮ್ ॥

ಪುತ್ರನೇ, ಯಾರು ನಿನ್ನ ಕಂಠದೇಶವನ್ನು ಸಮೀಪಿಸಿದಾಗ ಮತ್ಸ್ಯಯಂತ್ರದಂತೆ, ಅಗ್ನಿಯಂತೆ ಸುಡುತ್ತಾನೆಯೋ, ಅವನನ್ನು ಬ್ರಾಹ್ಮಣಶ್ರೇಷ್ಠನೆಂದು ತಿಳಿ.

ಸೂತಃ

ಪ್ರೋವಾಚ ಚೈನಂ ವಿನತಾ ಪುತ್ರಸ್ನೇಹಾದಿದಂ ವಚಃ ।
ಜಾನಂತ್ಯಪ್ಯತುಲಂ ವೀರ್ಯಮಾಶೀರ್ವಾದಸಮನ್ವಿತಮ್ ॥೨೨॥

ವಿನತೆಯು ಮಗನ ಅತುಲಪರಾಕ್ರಮವನ್ನು ತಿಳಿದಿದ್ದರೂ, ಮಗನ ಮೇಲಿನ ಸ್ನೇಹದಿಂದ ಆಶೀರ್ವಾದಯುಕ್ತವಾದ ಈ ಮಾತುಗಳನ್ನು ಆಡಿದಳು.

ಪಕ್ಷೌ ತೇ ಪಾತು ಭಗವಾನ್ ಚಂದ್ರಃ ಪೃಷ್ಠಂ ತು ಪುತ್ರಕ ।
ಶಿರಸ್ತು ಪಾತು ತೇ ವಹ್ನಿರ್ಮಾರುತಃ ಪ್ರಾಣಮೇವ ಚ ॥೨೩॥

ಭಗವಂತನಾದ ನಾರಾಯಣನು ನಿನ್ನ ಪಕ್ಷಗಳನ್ನು ರಕ್ಷಿಸಲಿ. ಪ್ರೀತಿಪಾತ್ರನಾದ ಪುತ್ರನೇ, ಚಂದ್ರನು ನಿನ್ನ ಪೃಷ್ಠವನ್ನು ರಕ್ಷಿಸಲಿ. ವಹ್ನಿಯು ನಿನ್ನ ಶಿರಸ್ಸನ್ನು ರಕ್ಷಿಸಲಿ. ಮಾರುತನು ನಿನ್ನ ಪ್ರಾಣವನ್ನು ರಕ್ಷಿಸಲಿ.

ಅಹಂ ಚ ತೇ ಸದಾ ಪುತ್ರ ಶಾಂತಿಸ್ವಸ್ತಿಪರಾಯಣಾ ।
ಇಹಾಸೀನಾ ಭವಿಷ್ಯಾಮಿ ಸ್ವಸ್ತಿಕಾರೇ ರತಾ ಸದಾ ।
ಅರಿಷ್ಟಂ ವ್ರಜ ಪಂಥಾನಂ ವತ್ಸ ಕಾರ್ಯಾರ್ಥಸಿದ್ಧಯೇ ॥೨೪॥

ಎಲೈ ಪುತ್ರನೇ ನಾನು ಯಾವಾಗಲೂ ನಿನ್ನ ಶಾಂತಿ ಮತ್ತು ಕ್ಷೇಮವನ್ನು ಆಶಂಸಿಸುತ್ತಾ ಇಲ್ಲಿಯೇ ಸ್ವಸ್ತಿಕಾಸನದಲ್ಲಿ ಕುಳಿತುಕೊಳ್ಳುತ್ತೇನೆ. ವತ್ಸನೇ, ನಿರ್ವಿಘ್ನವಾಗಿ ಹೋಗಿ ಬಾ. ನಿನ್ನ ಕಾರ್ಯವು ಸಿದ್ಧಿಸಲಿ.

ಸೂತಃ

ತತಃ ಸ ಮಾತುರ್ವಚನಂ ನಿಶಮ್ಯ
ವಿತತ್ಯ ಪಕ್ಷೌ ನಭ ಉತ್ಪಪಾತ ।
ತತೋ ನಿಷಾದಾನ್ ಬಲವಾನುಪಾಗಮತ್
ಬುಭುಕ್ಷಿತಃ ಕಾಲ ಇವಾಂತಕೋ ಮಹಾನ್ ॥೨೫॥

ಆಗ ಗರುಡನು ತಾಯಿಯ ಮಾತನ್ನು ಕೇಳಿ ತನ್ನ ರೆಕ್ಕೆಗಳನ್ನು ಹರಡಿ ಆಕಾಶಕ್ಕೆ ಹಾರಿದನು. ಅನಂತರ, ಬಹಳ ಹಸಿದಿದ್ದ ಬಲಶಾಲಿಯಾದ ಅವನು ಸರ್ವವನ್ನೂ ನಾಶಮಾಡುವ ದೊಡ್ಡ ಯಮನಂತೆ ಆ ನಿಷಾದರ ಸಮೀಪಕ್ಕೆ ಬಂದನು.

ಸ ತಾನ್ ನಿಷಾದಾನುಪಸಂಹರಂಸ್ತದಾ
ರಜಃ ಸಮುದ್ಧೂಯ ನಭಃಸ್ಪೃಶಂ ಮುಹುಃ ।
ಸಮುದ್ರಕುಕ್ಷೌ ಚ ವಿಶೋಷಯನ್ ಪಯಃ
ಸಮೀಪಗಾನ್ ಭೂಮಿಧರಾನ್ ವಿಚಾಲಯನ್ ॥೨೬॥

ಅವನು ತನ್ನ ರೆಕ್ಕೆಯ ಚಲನೆಯಿಂದ ಆಕಾಶಕ್ಕೆ ಏರುವಷ್ಟು ಧೂಳನ್ನು ಎಬ್ಬಿಸುತ್ತಾ ಸಮುದ್ರದ ಕುಕ್ಷಿಯಲ್ಲಿದ ಜಲವನ್ನು ಶೋಷಿಸುತ್ತಾ, ಸಮೀಪದಲ್ಲಿದ್ದ ಮರಗಳನ್ನು ಅಲ್ಲಾಡಿಸುತ್ತಾ, ಆ ನಿಷಾದರನ್ನು ಭಕ್ಷಣೆಮಾಡಿದನು.

ತತಃ ಸ ಚಕ್ರೇ ಮಹದಾನನಂ ತದಾ
ನಿಷಾದಮಾರ್ಗಂ ಪ್ರತಿರುಧ್ಯ ಪಕ್ಷಿರಾಟ್ ।
ತತೋ ನಿಷಾದಾಸ್ತ್ವರಿತಂ ಪ್ರವವ್ರಜುಃ
ಯತೋ ಮುಖಿಂ ತಸ್ಯ ಭುಜಂಗಭೋಜಿನಃ ॥೨೭॥

ಆಗ ಪಕ್ಷಿಗಳ ರಾಜನಾದ ಅವನು ನಿಷಾದರ ಮಾರ್ಗಕ್ಕೆ ಎದುರಾಗಿ ನಿಂತು ತನ್ನ ಬಾಯಿಯನ್ನು ದೊಡ್ಡದಾಗಿ ತೆರೆದನು. ಆಗ ನಿಷಾದರು ತ್ವರಿತವಾಗಿ ಸರ್ಪಭಕ್ಷಣನಾದ ಆ ಗರುಡನ ಮುಖದೊಳಗೆ ಪ್ರವೇಶಿಸಿದರು.

ತದಾನನಂ ವಿವೃತಮತಿಪ್ರಮಾಣವತ್
ಸಮಭ್ಯಯುರ್ಗಗನಮಿವಾರ್ದಿತಾಃ ಖಗಾಃ ।
ಸಹಸ್ರಶಃ ಪವನರಯೇಣ ಮೋಹಿತಾ
ಮಹಾನಿಲಪ್ರಚಲಿತಪಾದಪೇ ವನೇ ॥೨೮॥

ಪೀಡೆಗೆ ಒಳಗಾದ ಪಕ್ಷಿಗಳು ಆಕಾಶವನ್ನು ಸೇರುವಂತೆ ಮತ್ತು ವಾಯುವೇಗದಿಂದ ಮೋಹಿತವಾದ ಪ್ರಚಲಿಸುವ ವೃಕ್ಷಗಳಂತೆ, ಆ ನಿಷಾದರು ಅವನ ಅತಿದೊಡ್ಡದಾಗಿ ತೆರೆದ ಬಾಯಿಯೊಳಗೆ ಪ್ರವೇಶಿಸಿದರು.

ತತಃ ಖಗೋ ವದನಮಮಿತ್ರತಾಪನಃ
ಸಮಾಹರತ್ ಪರಿಚಪಲೋ ಮಹಾಬಲಃ ।
ನಿಷೂದಯನ್ ಬಹುವಿಧಮತ್ಸ್ಯಭಕ್ಷಿಕೋ
ಬುಭುಕ್ಷಿತೋ ಗಗನಚರೇಶ್ವರಸ್ತದಾ ॥೨೯॥

ಆಗ ಮಹಾಬಲನೂ, ಶತ್ರುತಾಪನನೂ, ಅತಿವೇಗವುಳ್ಳವನೂ ಆದ ಆ ಪಕ್ಷಿಯು ತನ್ನ ಬಾಯಿಯನ್ನು ಮುಚ್ಚಿದನು. ಆಗ, ಹಸಿವಿನಿಂದ ಕೂಡಿದ ಗಗನಚರೇಶ್ವರನಾದ ಗರುಡನು ಬಹುವಿಧವಾದ ಮತ್ಸ್ಯವನ್ನು ಭಕ್ಷಣಮಾಡುವ ಆ ನಿಷಾದರನ್ನು ಸಂಹರಿಸಿದನು.

॥ ಇತಿ ಶ್ರೀಮನ್ಮಹಾಭಾರತೇ ಶತಸಹಸ್ರಿಕಾಯಾಂಸಂಹಿತಾಯಾಮಾದಿಪರ್ವಣಿ
ತ್ರಯೋವಿಂಶೋऽಧ್ಯಾಯಃ ॥

॥ ಇತಿ ಆಸ್ತೀಕಪರ್ವಣಿ ಏಕಾದಶೋऽಧ್ಯಾಯಃ ॥

ಇಲ್ಲಿಗೆ ಮಹಾಭಾರತದ ಆದಿಪರ್ವದಲ್ಲಿ ಇಪ್ಪತ್ಮೂರನೆಯ ಅಧ್ಯಾಯ ಮುಗಿಯಿತು.

★★★★★

ಇಪ್ಪತ್ತನಾಲ್ಕನೆಯ ಅಧ್ಯಾಯ

(ನಿಷಾದರ ಮಧ್ಯದಲ್ಲಿದ್ದ ಬ್ರಾಹ್ಮಣನೊಬ್ಬನನ್ನು ಬಿಟ್ಟು ಗರುಡನಿಂದ ಎಲ್ಲಾ ನಿಷಾದರ ಭಕ್ಷಣ. ಆಹಾರಕ್ಕಾಗಿ ಪುನಃ ತಂದೆಯನ್ನು ಕುರಿತು ಪ್ರಾರ್ಥನೆ. ತಂದೆಯ ಆಜ್ಞೆಯಂತೆ ಗಜ ಮತ್ತು ಕೂರ್ಮಗಳ ಭಕ್ಷಣ. ವಟವೃಕ್ಷದ ಆಹ್ವಾನದಂತೆ ವಟವೃಕ್ಷದ ಮೇಲೆ ಉಪವೇಶನ. ವೃಕ್ಷದ ಶಾಖಾಭಂಗ.)

ಸೂತಃ

ತಸ್ಯ ಕಂಠಮನುಪ್ರಾಪ್ತೋ ಬ್ರಾಹ್ಮಣಃ ಸಹ ಭಾರ್ಯಯಾ ।
ದಹನ್ ದೀಪ್ತ ಇವಾಂಗಾರಸ್ತಮುವಾಚಾಂತರಿಕ್ಷಗಃ ॥೧॥

ಒಬ್ಬ ಬ್ರಾಹ್ಮಣನು ತನ್ನ ಭಾರ್ಯೆಯ ಜೊತೆಯಲ್ಲಿ ಗರುಡನ ಕಂಠಪ್ರದೇಶವನ್ನು ತಲುಪಿ ಉರಿಯುವ ಅಗ್ನಿಯಂತೆ ದಹಿಸಲು ಪ್ರಾರಂಭಿಸಿದಾಗ ಅಂತರಿಕ್ಷಚಾರಿಯಾದ ಗರುಡನು ಅವನನ್ನು ಕುರಿತು ಹೇಳಿದನು.

ದ್ವಿಜೋತ್ತಮ ವಿನಿರ್ಗಚ್ಛ ತೂರ್ಣಮಾಸ್ಯಾದಪಾವೃತಾತ್ ।
ನ ಹಿ ಮೇ ಬ್ರಾಹ್ಮಣೋ ವಧ್ಯಃ ಪಾಪೇಷ್ವಭಿರತಃ ಸದಾ ॥೨॥

ಬ್ರಾಹ್ಮಣಶ್ರೇಷ್ಠನೇ, ನನ್ನ ತೆರೆದ ಬಾಯಿಯಿಂದ ಬೇಗ ಹೊರಗೆ ಬಾ. ಬ್ರಾಹ್ಮಣನು ಪಾಪದಲ್ಲಿ ಆಸಕ್ತನಾಗಿದ್ದರೂ ಸಹ ಅವನು ನನಗೆ ವಧ್ಯನಲ್ಲ.

ಬ್ರುವಾಣಮೇವಂ ಗರುಡಂ ಬ್ರಾಹ್ಮಣಃ ಸಮಭಾಷತ ।
ನಿಷಾದೀ ಮಮ ಭಾರ್ಯೇಯಂ ನಿರ್ಗಚ್ಛತು ಮಯಾ ಸಹ ॥೩॥

ಹೀಗೆ ಹೇಳುವ ಗರುಡನನ್ನು ಕುರಿತು ಬ್ರಾಹ್ಮಣನು ನನ್ನ ಈ ಹೆಂಡತಿಯು ನಿಷಾದಜಾತಿಗೆ ಸೇರಿದವಳು. ಅವಳೂ ಸಹ ನನ್ನ ಜೊತೆಯಲ್ಲಿ ಹೊರಗೆ ಬರಬೇಕು.

ಗರುಡಃ

ಏತಾಮಪಿ ನಿಷಾದೀಂ ತ್ವಂ ಪ್ರತಿಗೃಹ್ಯಾಶು ನಿಷ್ಪತ ।
ತೂರ್ಣಂ ಸಂಭಾವಯಾತ್ಮಾನಮಜೀರ್ಣಂ ಮಮ ತೇಜಸಾ ॥೪॥

ಆ ನಿಷಾದಿಯನ್ನು ಕರೆದುಕೊಂಡು ಬೇಗ ಹೊರಗೆ ಬಾ. ನನ್ನ ತೇಜಸ್ಸಿನಿಂದ ಅರಗಿಹೋಗದಂತೆ ಬೇಗ ನಿನ್ನನ್ನು ನೀನು ನಿರ್ವಹಿಸು.

ಸೂತಃ

ನಿಶ್ಚಕ್ರಾಮ ತತೋ ವಿಪ್ರೋ ನಿಷಾದೀಸಹಿತಸ್ತದಾ ।
ವರ್ಧಯಿತ್ವಾ ಚ ಗರುಡಮಿಷ್ಟಂ ದೇಶಂ ಜಗಾಮ ಹ ॥೫॥

ಆಗ ಆ ಬ್ರಾಹ್ಮಣನು ನಿಷಾದಿಯ ಜೊತೆಯಲ್ಲಿ ಹೊರಗೆ ಬಂದು ಗರುಡನನ್ನು ಆಶೀರ್ವಾದಗಳಿಂದ ಅಭಿವೃದ್ಧಿಗೊಳಿಸಿ ತನಗೆ ಇಷ್ಟವಾದ ದೇಶಕ್ಕೆ ಹೊರಟುಹೋದನು.

ಸಭಾರ್ಯೇಽಭಿವಿನಿಷ್ಕ್ರಾಂತೇ ತಸ್ಮಿನ್ ವಿಪ್ರೇ ಸ ಪಕ್ಷಿರಾಟ್ ।
ವಿತತ್ಯ ಪಕ್ಷಾವಾಕಾಶಮುತ್ಪಪಾತ ಮನೋಜವಃ ॥೬॥

ತನ್ನ ಭಾರ್ಯೆಯಿಂದ ಸಹಿತನಾದ ಆ ಬ್ರಾಹ್ಮಣನು ಹೊರಗೆ ಬರುತ್ತಿರಲು ಪಕ್ಷಿರಾಜನಾದ ಮನೋಜವವುಳ್ಳ ಗರುಡನು, ತನ್ನ ರೆಕ್ಕೆಗಳನ್ನು ಹರಡಿ ಆಕಾಶಕ್ಕೆ ಹಾರಿದನು.

ತತೋಽಪಶ್ಯತ್ ಸ ಪಿತರಂ ಪೃಷ್ಟಶ್ಚಾಖ್ಯಾತವಾನ್ ಪಿತುಃ ।
ಅಹಂ ಹಿ ಸರ್ಪೈಃ ಪ್ರಹಿತಃ ಸೋಮಮಾಹರ್ತುಮುದ್ಯತಃ ॥೭॥

ಆಗ ಅವನು ತಂದೆಯನ್ನು ನೋಡಿ ಅವನಿಂದ ಪ್ರಶ್ನಿಸಲ್ಪಟ್ಟು ನಾನು ಸರ್ಪಗಳಿಂದ ಅಮೃತವನ್ನು ತರಲು ಆಜ್ಞಾಪಿಸಲ್ಪಟ್ಟಿದ್ದೇನೆ. ಅದಕ್ಕಾಗಿ ಪ್ರಯತ್ನ ಪಡುತ್ತಿದ್ದೇನೆ ಎಂದು ಹೇಳಿದನು.

ಮಾತುರ್ದಾಸ್ಯವಿಮೋಕ್ಷಾರ್ಥಮಾಹರಿಷ್ಯೇ ತದದ್ಯ ವೈ ।
ಮಾತ್ರಾ ಚಾಸ್ಮಿ ಸಮಾದಿಷ್ಟೋ ನಿಷಾದಾನ್ ಭಕ್ಷಯೇತಿ ವೈ ॥೭॥

ತಾಯಿಯನ್ನು ದಾಸ್ಯದಿಂದ ವಿಮೋಚನೆ ಮಾಡಲು ನಾನು ಈ ದಿನ ಅಮೃತವನ್ನು ತರುವೆನು. ತಾಯಿಯಾದರೋ ನನಗೆ ನಿಷಾದರನ್ನು ಭಕ್ಷಿಸು ಎಂದು ಆದೇಶವನ್ನು ನೀಡಿದ್ದಳು.

ನ ಚ ಮೇ ತೃಪ್ತಿರಭವದ್ ಭಕ್ಷಯಿತ್ವಾ ಸಹಸ್ರಶಃ ।
ತಸ್ಮಾದ್ ಭೋಕ್ತವ್ಯಮಪರಂ ಭಗವನ್ ಪ್ರವಿಧತ್ಸ್ವ ಮೇ ।
ಯದ್ ಭುಕ್ತ್ವಾಽಮೃತಮಾಹರ್ತುಂ ಸಮರ್ಥಃ ಸ್ಯಾಮಹಂ ಪ್ರಭೋ ॥

ಸಾವಿರಾರು ನಿಷಾದರನ್ನು ಭಕ್ಷಿಸಿದರೂ ನನಗೆ ತೃಪ್ತಿಯಾಗಿಲ್ಲ. ಆದ್ದರಿಂದ ಪೂಜ್ಯನಾದ ತಂದೆಯೇ, ಬೇರೆ ಏನಾದರೂ ಆಹಾರವನ್ನು ನನಗೆ ಕಲ್ಪಿಸು. ನಾನು ಅದನ್ನು ಸ್ವೀಕರಿಸಿ ಅಮೃತವನ್ನು ತರಲು ಸಮರ್ಥನಾಗುತ್ತೇನೆ.

ಕಾಶ್ಯಪಃ

ಆಸೀದ್ ವಿಭಾವಸುರ್ನಾಮ ಮಹರ್ಷಿಃ ಕೋಪನೋ ಭೃಶಮ್ ।
ಭ್ರಾತಾ ತಸ್ಯಾನುಜಶ್ಚಾಸೀತ್ ಸುಪ್ರತೀಕೋ ಮಹಾತಪಾಃ ॥೯॥

ಹಿಂದೆ ವಿಭಾವಸು ಎಂಬ ಬಹಳ ಕೋಪಶೀಲರಾದ ಮಹರ್ಷಿಗಳಿದ್ದರು. ಅವರಿಗೆ ಸುಪ್ರತೀಕನೆಂಬ ಮಹಾತಪಸ್ವಿಯಾದ ತಮ್ಮನಿದ್ದನು.

ಸ ನೇಚ್ಛತಿ ಧನಂ ಭ್ರಾತ್ರಾ ಸಹೈಕಸ್ಥಂ ಮಹಾದ್ಯುತಿಃ ।
ವಿಭಾಗಂ ಕೀರ್ತಯತ್ಯೇವ ಸುಪ್ರತೀಕಃ ಸ ನಿತ್ಯಶಃ ॥೧೦॥

ಮಹಾದ್ಯುತಿಯಾದ ಅವನು ತನ್ನ ಅಣ್ಣನ ಜೊತೆಯಲ್ಲಿ ಒಟ್ಟಿಗೆ ಇದ್ದು ಧನವನ್ನು ಭೋಗಿಸಲು ಇಚ್ಛೆಪಡಲಿಲ್ಲ. ಸುಪ್ರತೀಕನು ಯಾವಾಗಲೂ ವಿಭಾಗವನ್ನು (ಪಾಲನ್ನು) ಕೊಡಬೇಕೆಂದು ಹೇಳುತ್ತಲೇ ಇದ್ದನು.

ಅಥಾಬ್ರವೀತ್ ಸ ತಂ ಭ್ರಾತಾ ಸುಪ್ರತೀಕಂ ವಿಭಾವಸುಃ ।
ವಿಭಾಗೇ ಬಹವೋ ದೋಷಾ ಭವಿಷ್ಯಂತಿ ಮಹಾತಪಃ ॥೧೧॥

ಆಗ ಅಣ್ಣನಾದ ವಿಭಾವಸುವು ಸುಪ್ರತೀಕನನ್ನು ಕುರಿತು ಎಲೈ ಮಹಾತಪಸ್ವಿಯೇ, ವಿಭಾಗವನ್ನು ಮಾಡಿಕೊಂಡರೆ, ಅನೇಕ ದೋಷಗಳು ಉಂಟಾಗುವುವು.

ವಿಭಾಗಂ ಬಹವೋ ಮೋಹಾತ್ ಕರ್ತುಮಿಚ್ಛಂತಿ ನಿತ್ಯಶಃ ।
ತತೋ ವಿಭಕ್ತಾಶ್ಚಾನ್ಯೋನ್ಯಂ ನ ಪ್ರೀಯಂತೇऽರ್ಥಮೋಹಿತಾಃ ॥೧೨॥

ಮೋಹಕ್ಕೆ ಒಳಗಾದ ಅನೇಕ ಜನರು ನಿತ್ಯವೂ ವಿಭಾಗವನ್ನು ಮಾಡಿಕೊಳ್ಳುತ್ತಾರೆ. ವಿಭಾಗವನ್ನು ಮಾಡಿಕೊಂಡ ಮೇಲೆ, ಧನದ ಮೋಹಕ್ಕೆ ಒಳಗಾದವರಾಗಿ ಒಬ್ಬರನ್ನೊಬ್ಬರು ಪ್ರೀತಿಸುವುದಿಲ್ಲ.

ತತಃ ಸ್ವಾರ್ಥಪರಾನ್ ಮೂಢಾನ್ ಪೃಥಗ್ಭೂತಾನ್ ಸ್ವಕೈರ್ಜನೈಃ ।
ವಿದಿತ್ವಾ ಭೇದಯನ್ತ್ಯೇನಾನಮಿತ್ರಾ ಮಿತ್ರರೂಪಿಣಃ ॥೧೩॥

ಆಗ ಸ್ವಾರ್ಥಪರರಾಗಿ ಮೌಢ್ಯದಿಂದ ವಿಭಕ್ತರಾಗಿ ತಮ್ಮ ಜನರಿಂದಲೂ ದೂರರಾದ ಇವರನ್ನು ತಿಳಿದು ಶತ್ರುಗಳು ಮಿತ್ರರೂಪವನ್ನು ಧರಿಸಿ ಇವರಲ್ಲಿ ಭೇದವನ್ನುಂಟುಮಾಡುತ್ತಾರೆ.

ವಿದೀರ್ಣಾಶ್ಚಾಪರೇ ಭಿನ್ನಾನಂತರೇಷು ಪತಂತ್ಯಥ ।
ಭಿನ್ನಾನಾಮಭಿತೋ ನಾಶಃ ಕ್ಷಿಪ್ರಮೇವ ಪ್ರವರ್ತತೇ ॥೧೪॥

ಹೀಗೆ ವಿಭಾಗವನ್ನು ಹೊಂದಿ ವಿದೀರ್ಣರಾಗಿ ಕೆಳಗೆ ಬೀಳುತ್ತಾರೆ. ಹೀಗೆ ವಿಭಕ್ತರಾದ ಮೇಲೆ ಬಹಳ ಬೇಗ ನಾಶವು ಉಂಟಾಗುತ್ತದೆ.

ತಸ್ಮಾಚ್ಚೈವ ವಿಭಾಗಂ ತಂ ನ ಪ್ರಶಂಸಂತಿ ಪಂಡಿತಾಃ ।
ಏವಮುಕ್ತಃ ಸುಪ್ರತೀಕೋ ಭಾಗಂ ಕೀರ್ತಯತೇಽನಿಶಮ್ ॥೧೫॥

ಆದ್ದರಿಂದಲೇ, ತಿಳಿದವರು ವಿಭಾಗವನ್ನು ಎಂದೂ ಪ್ರಶಂಸಿಸುವುದಿಲ್ಲ ಎಂದು ಹೇಳಿದನು. ಹೀಗೆ ಹೇಳಿದರೂ ಸಹ ಸುಪ್ರತೀಕನು ನನ್ನ ಪಾಲನ್ನು ಕೊಡು ಎಂದು ಹೇಳುತ್ತಲೇ ಇದ್ದನು.

ಏವಂ ನಿರ್ಬಧ್ಯಮಾನಸ್ತು ಶಶಾಪೈನಂ ವಿಭಾವಸುಃ ।
ಗುರುಶಾಸ್ತ್ರೇಣ ಬದ್ಧಾನಾಮನ್ಯೋನ್ಯಮವಶಂಕಿನಾಮ್ ॥೧೬॥

ಹೀಗೆ ನಿರ್ಬಂಧಕ್ಕೆ ಒಳಗಾದ ವಿಭಾವಸುವು ಸುಪ್ರತೀಕನಿಗೆ ಶಾಪವನ್ನು ನೀಡಿದನು. ಶಾಸ್ತ್ರಕೋವಿದರಾದಂತಹ ಇನ್ನೊಬ್ಬರನ್ನು ಶಂಕಿಸದಂತಹ ಜನಗಳಿಂದ ನಿನ್ನನ್ನು ನಿಯಂತ್ರಿಸುವುದು ಸಾಧ್ಯವಿಲ್ಲ.

ತೇಷಾಂ ಮಧ್ಯೇ ತ್ವಮಪ್ಯೇಕಶ್ಚದ್ಮಕೃಚ್ಚ ಮಹಾತ್ಮಭಿಃ ।
ನಿಯಂತುಂ ನ ಹಿ ಶಕ್ಯಸ್ತ್ವಂ ಭೇದತೋ ಧನಮಿಚ್ಛಸಿ ॥೧೭॥

ನಿಯಂತ್ರಿಸಲು ಸಾಧ್ಯವಿಲ್ಲದವರ ಮಧ್ಯದಲ್ಲಿ ನೀನೂ ಒಬ್ಬನು. ಮೋಸವನ್ನು ಮಾಡುವವನೂ ಆಗಿದ್ದೀಯೆ. ಮಹಾತ್ಮರು ನಿನ್ನನ್ನು ನಿಯಂತ್ರಿಸಲಾರರು. ಭೇದವನ್ನು ಮಾಡಿ ನೀನು ಧನವನ್ನು ಬಯಸುತ್ತಿದ್ದೀಯೆ.

ಯಸ್ಮಾತ್ ತಸ್ಮಾತ್ ಸುಪ್ರತೀಕ ಹಸ್ತಿತ್ವಂ ಸಮವಾಪ್ಸ್ಯಸಿ ।
ಶಪ್ತಸ್ತೇ ತ್ವೇವಂ ಸುಪ್ರತೀಕೋ ವಿಭಾವಸುಮಥಾಬ್ರವೀತ್ ।
ತ್ವಮಪ್ಯಂತರ್ಜಲಚರಃ ಕಚ್ಛಪಃ ಸಂಭವಿಷ್ಯಸಿ ॥೧೮॥

ಆ ಕಾರಣದಿಂದ, ಎಲೈ ಸುಪ್ರತೀಕನೇ, ನೀನು ಒಂದು ಗಜವಾಗುತ್ತೀಯೆ. ಹೀಗೆ ಶಾಪಕ್ಕೆ ಒಳಗಾದ ಸುಪ್ರತೀಕನು ವಿಭಾವಸುವನ್ನು ಕುರಿತು ಹೇಳಿದನು. ನೀನೂ ಸಹ ಅಂತರ್ಜಲದಲ್ಲಿ ಸಂಚರಿಸುವ ಒಂದು ಕೂರ್ಮನಾಗಿ ಜನಿಸುವಿ.

ಏವಮನ್ಯೋನ್ಯಶಾಪಾತ್ ತೌ ಸುಪ್ರತೀಕವಿಭಾವಸೂ ।
ಗಜಕಚ್ಛಪತಾಂ ಪ್ರಾಪ್ತಾವರ್ಥಾರ್ಥೌ ಮೂಢಚೇತಸೌ ॥೧೯॥

ಹೀಗೆ ಅನ್ಯೋನ್ಯಶಾಪದಿಂದ ಆ ಸುಪ್ರತೀಕ ಮತ್ತು ವಿಭಾವಸುಗಳಿಬ್ಬರೂ, ಮೂಢಚೇತನರಾಗಿ, ಅರ್ಥಾರ್ಥಿಗಳಾಗಿ ಗಜ ಮತ್ತು ಕೂರ್ಮದ ಜನ್ಮವನ್ನು ತಾಳಿದರು.

ರೋಷರೋಷಾನುಷಂಗೇಣ ತಿರ್ಯಗ್ಯೋನಿಗತಾವಪಿ ।
ಪರಸ್ಪರದ್ವೇಷರತೌ ಪ್ರಮಾಣಬಲದರ್ಪಿತೌ ॥೨೦॥

ಒಬ್ಬನ ರೋಷ. ಅದಕ್ಕೆ ಪ್ರತಿಯಾಗಿ ಇನ್ನೊಬ್ಬನ ರೋಷ. ಆ ಕಾರಣದಿಂದ ತಿರ್ಯಗ್ಯೋನಿಯಲ್ಲಿದ್ದರೂ ಸಹ, ಪರಿಮಾಣದಿಂದಲೂ ಮತ್ತು ಬಲದಿಂದಲೂ ದರ್ಪಿತರಾದ ಅವರಿಬ್ಬರೂ ಪರಸ್ಪರ ದ್ವೇಷವುಳ್ಳವರಾದರು.

ಸರಸ್ಯಸ್ಮಿನ್ ಮಹಾಕಾಯೌ ಪೂರ್ವವೈರಾನುಸಾರಿಣೌ ।
ತಯೋರೇಕತರಃ ಶ್ರೀಮಾನ್ ಸಮುಪೈತಿ ಮಹಾಗಜಃ ॥೨೧॥

ಈ ಸರೋವರದಲ್ಲಿ ದೊಡ್ಡಶರೀರವನ್ನು ಹೊಂದಿದ ಅವರಿಬ್ಬರೂ ಹಿಂದಿನ ಜನ್ಮದ ವೈರವನ್ನು ಸ್ಮರಿಸಿಕೊಂಡಿದ್ದಾರೆ. ಅವರಲ್ಲಿ ಒಬ್ಬನಾದ ಕಾಂತಿಯುಕ್ತನಾದ ಮಹಾಗಜವು ಸಮೀಪಕ್ಕೆ ಬರುತ್ತದೆ.

ತಸ್ಯ ಬೃಂಹಿತಶಬ್ದೇನ ಕೂರ್ಮೋ೯ಽಪ್ಯಂತರ್ಜಲೇಚರಃ ।
ಉತ್ಥಿತೋ೯ಽಸೌ ಮಹಾಕಾಯಃ ಕೃತ್ಸ್ನಂ ಸಂಕ್ಷೋಭಯನ್ ಸರಃ ॥೨೨॥

ಆ ಗಜದ ಬೃಂಹಿತನಾದವನ್ನು ಕೇಳಿ ನೀರಿನ ಒಳಗೆ ಸಂಚರಿಸುವ ಕೂರ್ಮವೂ ಸಹ ತನ್ನ ದೊಡ್ಡಶರೀರವನ್ನು ಮೇಲಕ್ಕೆತ್ತಿ ಸರೋವರದ ನೀರನ್ನೆಲ್ಲಾ ಕ್ಷೋಭೆಗೆ ಒಳಪಡಿಸಿ ಮೇಲಕ್ಕೇಳುತ್ತದೆ.

ಯಂ ದೃಷ್ಟ್ವಾ೯ಽವೇಷ್ಟಿತಕರಃ ಪತತ್ಯೇಷ ಗಜೋ ಜಲಮ್ ।
ದಂತಹಸ್ತಾಗ್ರಲಾಂಗೂಲಪಾದವೇಗೇನ ವೀರ್ಯವಾನ್ ।
ತಂ ವಿಕ್ಷೋಭಯಮಾಣಂ ತು ಸರೋ ಬಹುಝಷಾಕುಲಮ್ ॥೨೩॥

ಆ ಕೂರ್ಮವನ್ನು ನೋಡಿದ ತಕ್ಷಣ ಈ ಗಜವು ಸೊಂಡಿಲನ್ನು ಸುತ್ತಿ ದಂತ, ಸೊಂಡಿಲನ ತುದಿ, ಬಾಲ ಮತ್ತು ಪಾದಗಳ ವೇಗದಿಂದ ಪರಾಕ್ರಮಶಾಲಿಯಾಗಿ, ಆ ಅನೇಕ ಮೀನುಗಳಿಂದ ಕೂಡಿದ ಆ ಸರೋವರದ ನೀರನ್ನು ವಿಕ್ಷೋಭಿಸುತ್ತಾ ಸರೋವರವನ್ನು ಪ್ರವೇಶಿಸಿ ಆ ಕೂರ್ಮಕ್ಕೆ ಎದುರಾಗುತ್ತದೆ.

ಸ ಕೂರ್ಮೋಽಪ್ಯಭ್ಯುದ್ಯತಶಿರಾ ಯುದ್ಧಯಾಭ್ಯೇತಿ ವೀರ್ಯವಾನ್ ।
ಷಡುಚ್ಛ್ರಿತೋ ಯೋಜನಾನಿ ಗಜಸ್ತದ್ದ್ವಿಗುಣಾಯತಃ ।
ಕೂರ್ಮಸ್ತ್ರಿಯೋಜನೋತ್ಸೇಧೋ ದಶಯೋಜನಮಂಡಲಃ ॥೨೪॥

ಆ ಆನೆಯನ್ನು ನೋಡಿದ ಪರಾಕ್ರಮಶಾಲಿಯಾದ ಕೂರ್ಮವೂ ಸಹ ತಲೆಯನ್ನು ಎತ್ತಿ ಯುದ್ಧಕ್ಕೆ ಸನ್ನದ್ಧವಾಗುತ್ತದೆ. ಆ ಗಜವು ಆರುಯೋಜನ ಎತ್ತರವಿದೆ. ಕೂರ್ಮವಾದರೋ ಅದರ ಎರಡರಷ್ಟು ವಿಸ್ತಾರವನ್ನು ಹೊಂದಿದೆ. ಮೂರುಯೋಜನ ಎತ್ತರ ಮತ್ತು ಹತ್ತುಯೋಜನ ಪರಿಮಂಡಲವುಳ್ಳದ್ದಾಗಿದೆ.

ತಾವುಭೌ ಯುದ್ಧಸಂಯುಕ್ತೌ ಪರಸ್ಪರವಧೈಷಿಣೌ ।
ಉಪಯುಜ್ಯ ಸುಕರ್ಮೇದಂ ಸಾಧಯೇಪ್ಸಿತಮಾತ್ಮನಃ ॥೨೫॥

ಪರಸ್ಪರ ವಧೆಯನ್ನು ಬಯಸುವ ಯುದ್ಧಸನ್ನದ್ಧರಾದ ಆ ಕೂರ್ಮ ಮತ್ತು ಗಜಗಳನ್ನು ತಿಂದು ನಿನಗೆ ಇಷ್ಟವಾದ ಈ ಶುಭಕರ್ಮವನ್ನು ಮಾಡು.

ಸೂತಃ

ಸ ತಚ್ಛ್ರುತ್ವಾ ಪಿತುರ್ವಾಕ್ಯಂ ಭೀಮವೇಗೋಽಂತರಿಕ್ಷಗಃ ।
ನಖೇನ ಗಜಮೇಕೇನ ಕೂರ್ಮಮೇಕೇನ ಚಾಕ್ಷಿಪತ್ ॥೨೬॥

ತಂದೆಯ ಈ ವಾಕ್ಯವನ್ನು ಕೇಳಿದ ಭಯಂಕರ ವೇಗವುಳ್ಳ ಪಕ್ಷಿಯಾದ ಗರುಡನು ಒಂದು ನಖದಿಂದ ಗಜವನ್ನೂ ಇನ್ನೊಂದು ನಖದಿಂದ ಕೂರ್ಮವನ್ನೂ ಎತ್ತಿಕೊಂಡು ಹೊರಟನು.

ಸಮುತ್ಪಪಾತ ಚಾಕಾಶಂ ತತ ಉಚ್ಚೈರ್ವಿಹಂಗಮಃ ।
ಸೋಽಲಂಭತೀರ್ಥಮಾಸಾದ್ಯ ದೇವವೃಕ್ಷಾನುಪಾಗಮತ್ ॥೨೭॥

ಅನಂತರ ಆ ಪಕ್ಷಿಯಾದ ಗರುಡನು ಆಕಾಶದಲ್ಲಿ ಎತ್ತರಕ್ಕೆ ಹಾರಿ, ಅಲಂಭತೀರ್ಥವನ್ನು ಸಮೀಪಿಸಿ ದೇವವೃಕ್ಷಗಳ ಬಳಿಗೆ ಹೋದನು.

ತೇ ಭೀತಾಃ ಸಮಕಂಪಂತ ತಸ್ಯ ಪಕ್ಷಾನಿಲಾಹತಾಃ ।
ನ ನೋಽಭಾಂಕ್ಷೀದಿತಿ ತದಾ ದಿವ್ಯಾಃ ಕಾನನಶಾಖಿನಃ ॥೨೮॥

ಆ ದಿವ್ಯವಾದ ಕಾನನದಲ್ಲಿದ್ದ ದೇವವೃಕ್ಷಗಳು ಗರುಡನ ರೆಕ್ಕೆಯ ವಾಯುವಿನಿಂದ ಆಹತರಾಗಿ, ಹೆದರಿ ನಮ್ಮನ್ನು ಇವನು ಮುರಿಯದಿರಲಿ ಎಂದು ಚಿಂತಿಸಿದವು.

ಪ್ರಚಲಾಂಗಾನ್ ಸ ತಾನ್ ದೃಷ್ಟ್ವಾ ಮನೋಹರಫಲಾಂಕುರಾನ್ ।
ಅನ್ಯಾನತುಲರೂಪಾಂಗಾನುಪಚಕ್ರಾಮ ಖೇಚರಃ ॥೨೯॥

ಅಂತರಿಕ್ಷಚಾರಿಯಾದ ಗರುಡನು ನಡುಗುತ್ತಿದ್ದ ಮನೋಹರವಾದ ಫಲಾಂಕುರಗಳನ್ನುಳ್ಳ ಆ ವೃಕ್ಷಗಳನ್ನು ನೋಡಿ ಅವುಗಳನ್ನು ಬಿಟ್ಟು, ಅಂತಹ ಅಸದೃಶವಾದ ಆಕಾರ ಮತ್ತು ಅವಯವಗಳುಳ್ಳ ಬೇರೆ ಮರಗಳ ಸಮೀಪಕ್ಕೆ ಹೋದನು.

ಕಾಂಚನೈ ರಾಜತೈಶ್ಚೈವ ಫಲೈರ್ವೈಢೂರ್ಯಶಾಖಿನಃ ।
ಸಾಗರಾಂಬುಪರಿಕ್ಷಿಪ್ತಾನ್ ಭ್ರಾಜಮಾನಾನ್ ಮಹಾದ್ರುಮಾನ್ ॥೩೦॥

ಆ ಮರಗಳು ಸುವರ್ಣಮಯವಾದ ಮತ್ತು ರಜತಮಯವಾದ, ಫಲಗಳಿಂದ ಶೋಭಿತವಾಗಿದ್ದವು. ವೈಢೂರ್ಯದ ಶಾಖೆಗಳಿಂದ ಕೂಡಿದ್ದವು. ಸಾಗರದ ಜಲದ ಸುತ್ತಲೂ ಇದ್ದ ಕಂಗೊಳಿಸುತ್ತಿದ್ದ ಆ ಮಹಾವೃಕ್ಷಗಳ ಕಡೆಗೆ (ಗರುಡನು ಹೋದನು).

ತಮುವಾಚ ಖಗಶ್ರೇಷ್ಠಃ ತತ್ರ ರೋಹಿಣಪಾದಪಃ ।
ಅತಿಪ್ರವೃದ್ಧಃ ಸುಮಹಾನ್ ಆಪತಂತಂ ಮನೋಜವಮ್ ॥೩೧॥

ಅಲ್ಲಿ ಬಹಳ ದೊಡ್ಡದಾಗಿ ಬೆಳೆದಿದ್ದ ಒಂದು ವಟವೃಕ್ಷವು, ಹಾರಿಬರುತ್ತಿದ್ದ ಮನೋಜವವುಳ್ಳ ಗರುಡನನ್ನು ನೋಡಿ ಹೀಗೆ ಹೇಳಿತು.

ರೋಹಿಣಃ

ಏಷಾ ಮಮ ಮಹಾಶಾಖಾ ಶತಯೋಜನಮಾಯತಾ ।
ಏತಾಮಾಸ್ಥಾಯ ಶಾಖಾಂ ತ್ವಂ ಖಾದೇಮೌ ಗಜಕಚ್ಛಪೌ ॥೩೨॥

ಈ ನನ್ನ ದೊಡ್ಡ ಕೊಂಬೆಯು ನೂರುಯೋಜನ ವಿಸ್ತಾರವಾಗಿದೆ. ಈ ಕೊಂಬೆಯ ಮೇಲೆ ಕುಳಿತುಕೊಂಡು ಈ ಗಜಕೂರ್ಮಗಳನ್ನು ತಿನ್ನು.

ತತೋ ದ್ರುಮಂ ಪತಗಸಹಸ್ರಸೇವಿತಂ
ಮಹೀಧರಪ್ರತಿಮವಪುಃ ಪ್ರಕಂಪಯನ್ ।
ಖಗೋತ್ತಮೋ ದ್ರುತಮಭಿಗಮ್ಯ ವೇಗವಾನ್
ಬಭಂಜ ತಾಮವಿರಲಪತ್ರಸಂಯುತಾಮ್ ॥ ೩೪ ॥

ಆಗ ಗರುಡನು ಸಹಸ್ರಾರು ಪಕ್ಷಿಗಳಿಂದ ಸೇವಿತವಾದ ಒಂದು ಬೆಟ್ಟದಂತೆ ತೋರುತ್ತಿದ್ದ, ಆ ಮರದ ಬಳಿಗೆ ವೇಗದಿಂದ ಸಾಗಿಬಂದು ಕೊಂಬೆಯ ಮೇಲೆ ಕುಳಿತುಕೊಂಡನು. ಆಗ ಬಹಳ ಪತ್ರಗಳಿಂದ ಮತ್ತು ರೆಂಬೆಗಳಿಂದ ಕೂಡಿದ ಆ ಶಾಖೆಯು (ಕೊಂಬೆಯು) ಮುರಿದುಹೋಯಿತು.

॥ ಇತಿ ಶ್ರೀಮನ್ಮಹಾಭಾರತೇ ಶತಸಹಸ್ರಿಕಾಯಾಂಸಂಹಿತಾಯಾಮಾದಿಪರ್ವಣಿ ಚತುರ್ವಿಂಶೋಽಧ್ಯಾಯಃ ॥

॥ ಇತಿ ಆಸ್ತೀಕಪರ್ವಣಿ ದ್ವಾದಶೋಽಧ್ಯಾಯಃ ॥

ಇಲ್ಲಿಗೆ ಮಹಾಭಾರತದ ಆದಿಪರ್ವದಲ್ಲಿ ಇಪ್ಪತ್ತನಾಲ್ಕನೆಯ ಅಧ್ಯಾಯ ಮುಗಿಯಿತು.

★★★★★

ಇಪ್ಪತ್ತೈದನೆಯ ಅಧ್ಯಾಯ

(ಕಾಶ್ಯಪರಿಂದ ವಾಲಖಿಲ್ಯರ ಸಾಂತ್ವನ. ಕಾಶ್ಯಪರ ವಚನದಂತೆ ಹಿಮಾಲಯದಲ್ಲಿ ಗರುಡನಿಂದ ಶಾಖೆಯ ಮೋಚನ. ವಾಲಖಿಲ್ಯರಿಗೆ ಇಂದ್ರನು ಮಾಡಿದ ಅಪರಾಧ. ಅಮೃತ ರಕ್ಷಣೆಗಾಗಿ ದೇವತೆಗಳ ಪ್ರಯತ್ನ)

ಸೂತಃ

ಸ್ಪೃಷ್ಟಮಾತ್ರೇಣ ಪದ್ಭ್ಯಾಂ ಸಾ ಗರುಡೇನ ಬಲೀಯಸಾ ।
ಅಭಜ್ಯತ ತರೋಃ ಶಾಖಾ ಭಗ್ನಾಂ ಚೈನಾಮಧಾರಯತ್ ॥೧॥

ಬಲಿಷ್ಠನಾದ, ಗರುಡನು ಆ ವಟವೃಕ್ಷದ ಕೊಂಬೆಯ ಮೇಲೆ ತನ್ನ ಪಾದಗಳನ್ನು ಇಟ್ಟ ಕೂಡಲೇ ಆ ಶಾಖೆಯು ಮುರಿಯಿತು. ಅದನ್ನು ಗರುಡನು ತನ್ನ ಕೊಕ್ಕಿನಿಂದ ಹಿಡಿದುಕೊಂಡನು.

ತಾಂ ಭಂಕ್ತ್ವಾ ಮಹತೀಂ ಶಾಖಾಂ ವಿಸ್ಮಯಾತ್ ಸಮಲೋಕಯನ್।
ಅಥಾಽತ್ರ ಲಂಬತೋಽಪಶ್ಯದ್ ವಾಲಖಿಲ್ಯಾಂಸ್ತ್ವಧೋಮುಖಾನ್ ॥

ಗರುಡನು ಆ ದೊಡ್ಡಕೊಂಬೆಯನ್ನು ಮುರಿದು ವಿಸ್ಮಯದಿಂದ ನೋಡುತ್ತಾ ಆ ಕೊಂಬೆಯಲ್ಲಿ ತಲೆಕೆಳಕಾಗಿ ನೇತಾಡುತ್ತಿರುವ ವಾಲಖಿಲ್ಯರನ್ನು ನೋಡಿದನು.

ವೈಖಾನಸಾಂಶ್ಚ ಶಾಖಾಯಾಂ ಲಂಬಮಾನಾನವಾಙ್ಮುಖಾನ್ ।
ಸ ತದ್ವಿನಾಶಸಂತ್ರಾಸಾದನುಪಶ್ಯನ್ ಖಗಾಧಿಪಃ ॥೩॥

ಶಾಖಾಮಾಸ್ಯೇನ ಜಗ್ರಹೇ ತೇಷಾಮೇವಾನುಕಂಪಯಾ ।
ಶನೈಃ ಪರ್ಯಾಚರತ್ ಪಕ್ಷೀ ಪರ್ವತಾನ್ ಪ್ರವಿಚಾಲಯನ್ ॥೪॥

ಆದೇ ಶಾಖೆಯಲ್ಲಿ ತಲೆಕೆಳಕಾಗಿ ಜೋಲಾಡುತ್ತಿದ್ದ ವೈಖಾನಸರನ್ನು ನೋಡಿ, ಅವರ ವಿನಾಶವು ಉಂಟಾಗಬಹುದೆಂಬ ಭಯದಿಂದ ಪಕ್ಷಿರಾಜನಾದ ಗರುಡನು ಅವರ ಮೇಲಿನ ಅನುಕಂಪದಿಂದ ಕೊಂಬೆಯನ್ನು ತನ್ನ ಬಾಯಿಯಲ್ಲಿ ಹಿಡಿದು ಪರ್ವತವನ್ನು ಅಲುಗಾಡಿಸುತ್ತಿದ್ದರೂ, ಮೆಲ್ಲನೆ ಮುಂದೆ ಸಾಗಿದನು.

ಏವಂ ಸೋಽಭ್ಯಪತದ್ ದೇಶಾನ್ ಪಕ್ಷೀ ಸಗಜಕಚ್ಛಪಃ ।
ಯದರ್ಥಂ ವಾಲಖಿಲ್ಯಾನಾಂ ನಾವಸ್ಥಾನಮವಿಂದತ ॥೫॥

ಹೀಗೆ ಆ ಪಕ್ಷಿಯಾದ ಗರುಡನು ಗಜ ಮತ್ತು ಕೂರ್ಮಗಳ ಜೊತೆಯಲ್ಲಿ ಆ ಕೊಂಬೆಯನ್ನೂ ತೆಗೆದುಕೊಂಡು ಹೋಗುತ್ತಿದ್ದರೂ, ವಾಲಖಿಲ್ಯರನ್ನು ಸುರಕ್ಷಿತವಾಗಿಡುವ ಒಂದು ಸ್ಥಾನವು ದೊರೆಯಲಿಲ್ಲ.

ಸ ಗತ್ವಾ ಪರ್ವತಶ್ರೇಷ್ಠಂ ಗಂಧಮಾದನಮವ್ಯಯಮ್ ।
ದದರ್ಶ ಕಾಶ್ಯಪಂ ತತ್ರ ಪಿತರಂ ಸಂಶಿತವ್ರತಮ್ ॥೬॥

ಅವನು ಪರ್ವತಶ್ರೇಷ್ಠವಾದ ಮತ್ತು ನಿತ್ಯವಾದ ಗಂಧಮಾದನಕ್ಕೆ ಹೋಗಿ ಅಲ್ಲಿ ಶ್ರೇಷ್ಠವ್ರತಧಾರಿಯಾದ, ತನ್ನ ತಂದೆಯಾದ ಕಾಶ್ಯಪರನ್ನು ನೋಡಿದನು.

ದದರ್ಶ ತಂ ಪಿತಾ ಚಾಪಿ ದಿವ್ಯರೂಪಂ ವಿಹಂಗಮಮ್ ।
ತೇಜೋವೀರ್ಯಬಲೋಪೇತಂ ಮನೋಮಾರುತರಂಹಸಮ್ ॥

ಶೈಲಶೃಂಗಪ್ರತೀಕಾಶಂ ಬ್ರಹ್ಮದಂಡಮಿವೋದ್ಯತಮ್ ।
ಅಚಿಂತ್ಯಮನಭಿಜ್ಞೇಯಂ ಸರ್ವಭೂತಭಯಂಕರಮ್ ॥೮॥

ಆ ತಂದೆಯೂ ಕೂಡ ದಿವ್ಯರೂಪವನ್ನು ಧರಿಸಿದ, ತೇಜೋವೀರ್ಯಬಲ ಸಮನ್ವಿತನಾದ, ಮನೋವೇಗ ಮತ್ತು ವಾಯುವೇಗವುಳ್ಳ, ಪರ್ವತದ ಶಿಖರದಂತೆ ತೋರುತ್ತಿರುವ ಉದ್ಯತವಾದ ಬ್ರಹ್ಮದಂಡದಂತೆ ಇರುವ, ಅಚಿಂತ್ಯನಾದ ತಿಳಿಯಲು

ಸಾಧ್ಯವಿಲ್ಲದ, ಸರ್ವಭೂತಭಯಂಕರನಾದ, ದಿವ್ಯರೂಪವುಳ್ಳ ಗರುಡನನ್ನು ನೋಡಿದನು.

ಮಹಾವೀರ್ಯಧರಂ ಸಾಕ್ಷಾದ್ ಅಗ್ನಿಮಿದ್ಧಮಿವೋದ್ಯತಮ್ ।
ಅಪ್ರಧೃಷ್ಯಮಜೇಯಂ ಚ ದೇವದಾನವರಾಕ್ಷಸೈಃ ॥೯॥

ಭೇತ್ತಾರಂ ಗಿರಿಶೃಂಗಾಣಾಂ ನದೀಜಲವಿಶೋಷಣಮ್ ।
ಲೋಕಸಂಕ್ಷೋಭಣಂ ಘೋರಂ ಕೃತಾಂತಸಮದರ್ಶನಮ್ ॥೧೦॥

ಮಹಾಬಲದಿಂದ ಕೂಡಿದ, ಸಾಕ್ಷಾತ್ ಅಗ್ನಿಯಂತೆ ಜ್ವಲಿಸುವ, ಯಾರಿಂದಲೂ ಸೋಲಿಸಲು ಅಸಾಧ್ಯವಾದ ಮತ್ತು ದೇವದಾನವ- ರಾಕ್ಷಸರಿಂದ ಸೋಲಿಸಲ್ಪಡದ, ಪರ್ವತಶಿಖರಗಳನ್ನು ಭೇದಿಸುವ, ನದೀಜಲವನ್ನು ಶೋಷಿಸುವ, ಲೋಕವನ್ನೆಲ್ಲಾ ಸಂಕ್ಷೋಭಗೊಳಿಸುವ, ಘೋರನಾದ ಯಮನಂತೆ ತೋರುವ (ಗರುಡನನ್ನು ನೋಡಿದನು.)

ತಮಾಗತಮಭಿಪ್ರೇತ್ಯ ಭಗವಾನ್ ಕಾಶ್ಯಪಸ್ತದಾ ।
ವಿದಿತ್ವಾ ಚಾಸ್ಯ ಸಂಕಲ್ಪಮಿದಂ ವಚನಮಬ್ರವೀತ್ ॥೧೧॥

ಸಮೀಪಕ್ಕೆ ಬಂದ ಅವನನ್ನು ನೋಡಿ, ಪೂಜ್ಯರಾದ ಕಾಶ್ಯಪರು ಅವನ ಮನಸ್ಸಿನ ಸಂಕಲ್ಪವನ್ನು ತಿಳಿದು ಅವನನ್ನು ಕುರಿತು ಹೀಗೆ ಹೇಳಿದರು.

ಕಾಶ್ಯಪಃ

ಪುತ್ರ ಮಾ ಸಾಹಸಂ ಕಾರ್ಷೀಸ್ತ್ವಂ ಸದ್ಯೋ ಲಪ್ಸ್ಯಸೇ ವ್ಯಥಾಮ್ ।
ನ ತ್ವಾಂ ದಹೇಯುಃ ಸಂಕ್ರುದ್ಧಾ ವಾಲಖಿಲ್ಯಾ ಮರೀಚಿಪಾಃ ॥೧೨॥

ಪುತ್ರನೇ, ಇದ್ದಕ್ಕಿದ್ದಂತೆಯೇ ಕೊಂಬೆಯನ್ನು ಕೆಳಗೆ ಹಾಕಬೇಡ. ಹಾಗೆ ಮಾಡಿದರೆ, ತಕ್ಷಣದಲ್ಲಿಯೇ ನಿನಗೆ ವ್ಯಥೆಯುಂಟಾಗುತ್ತದೆ. ಸೂರ್ಯನ ಕಿರಣಗಳನ್ನು ಪಾನಮಾಡಿ ತಪಸ್ಸುಮಾಡುವ ವಾಲಖಿಲ್ಯರು ಕ್ರೋಧದಿಂದ ನಿನ್ನನ್ನು ಸುಡದಿರಲಿ.

ಸೂತಃ

ಪ್ರಸಾದಯಾಮಾಸ ಸ ತಾನ್ ಕಾಶ್ಯಪಃ ಪುತ್ರಕಾರಣಾತ್ ।
ವಾಲಖಿಲ್ಯಾಂಸ್ತಪಃಸಿದ್ಧಾನಿದಂ ವಚನಮಬ್ರವೀತ್ ॥೧೩॥

ಕಾಶ್ಯಪರು ತನ್ನ ಮಗನ ಸಲುವಾಗಿ ತಪಸ್ಸಿದ್ದರಾದ ಆ ವಾಲಖಿಲ್ಯರನ್ನು ಕುರಿತು, ಅವರನ್ನು ಸಮಾಧಾನಪಡಿಸುತ್ತಾ ಈ ಮಾತನ್ನು ಆಡಿದರು.

ಕಾಶ್ಯಪಃ

ಪ್ರಜಾಹಿತಾರ್ಥಮಾರಂಭೋ ಗರುಡಸ್ಯ ತಪೋಧನಾಃ ।
ಚಿಕೀರ್ಷತಿ ಮಹತ್ಕರ್ಮ ತದನುಜ್ಞಾತುಮರ್ಹಥ ॥೧೪॥

ಎಲೈ ತಪೋಧನರೇ, ಗರುಡನ ಈ ಪ್ರಯತ್ನವು ಪ್ರಜೆಗಳ ಹಿತಕ್ಕೋಸ್ಕರವಾಗಿ ಆಗಿದೆ. ಈ ಮಹತ್ಕಾರ್ಯವನ್ನು ಮಾಡಲು ಹೊರಟ ಗರುಡನಿಗೆ ನೀವು ಅನುಮತಿಯನ್ನು ಕೊಡಬೇಕು.

ಗರುಡ ಮತ್ತು ವಿನತೆಯರನ್ನು ದಾಸ್ಯದಿಂದ ವಿಮೋಚನೆ ಮಾಡುವುದು ಈ ಪ್ರಯತ್ನದ ಫಲ. ಗರುಡನು ದಾಸ್ಯದಿಂದ ಮುಕ್ತನಾಗದಿದ್ದರೆ, ಸರ್ಪಗಳು ನಿರಂಕುಶವಾಗಿ ಯಾವ ಭಯವೂ ಇಲ್ಲದೆ ಪ್ರಜೆಗಳಿಗೆ ಇನ್ನೂ ಹಿಂಸೆಯನ್ನು ಮಾಡುತ್ತವೆ. ದಾಸ್ಯದಿಂದ ವಿಮೋಚನೆ ಮಾಡಿದರೆ, ಸರ್ಪಗಳ ಭಯವು ಕಡಿಮೆಯಾಗುವುದಾದ್ದರಿಂದ ಗರುಡನ ದಾಸ್ಯವೋಚನೆಯು ಪ್ರಜೆಗಳ ಹಿತಾರ್ಥಕ್ಕಾಗಿಯೇ ಇದೆ ಎಂದು ತಾತ್ಪರ್ಯ.

ಸೂತಃ

ಏವಮುಕ್ತಾ ಭಗವತಾ ಮುನಯಸ್ತೇ ಸಮಭ್ಯಯುಃ ।
ಮುಕ್ತ್ವಾ ಶಾಖಾಂ ಗಿರಿಂ ಪುಣ್ಯಂ ಹಿಮವಂತಂ ತಪೋಧನಾಃ ॥೧೫॥

ಹೀಗೆ ಪೂಜ್ಯರಾದ ಕಾಶ್ಯಪರಿಂದ ಹೇಳಲ್ಪಟ್ಟ ತಪೋಧನರಾದ ಆ ಋಷಿಗಳು ಆ ಶಾಖೆಯನ್ನು ಬಿಟ್ಟು ಪವಿತ್ರವಾದ ಹಿಮಾಲಯಪರ್ವತಕ್ಕೆ ಹೊರಟುಹೋದರು.

ತತಸ್ತೇಷ್ವಪಯಾತೇಷು ಪಿತರಂ ವಿನತಾತ್ಮಜಃ ।
ಶಾಖಾವ್ಯಾಕ್ಷಿಪ್ತವದನಃ ಪರ್ಯಪೃಚ್ಛತ ಕಾಶ್ಯಪಮ್ ॥೧೬॥

ಆ ತಪೋಧನರು ಹೊರಟುಹೋಗುತ್ತಿರಲು, ವಿನತೆಯ ಪುತ್ರನಾದ ಗರುಡನು, ಶಾಖೆಯನ್ನು ತನ್ನ ಬಾಯಿಯಲ್ಲಿಯೇ ಇನ್ನೂ ಇಟ್ಟುಕೊಂಡು ತಂದೆಯನ್ನು ಕುರಿತು ಕೇಳಿದನು.

ಭಗವಾನ್ ಕ್ವ ವಿಮುಂಚಾಮಿ ತರುಶಾಖಾಮಿಮಾಮಹಮ್ ।
ವರ್ಜಿತಂ ಬ್ರಾಹ್ಮಣೈರ್ದೇಶಮಾಖ್ಯಾತು ಭಗವಾನ್ ಮಮ ॥೧೭॥

ಪೂಜ್ಯನಾದ ತಂದೆಯೇ, ಈ ಮರದ ಕೊಂಬೆಯನ್ನು ಬ್ರಾಹ್ಮಣರಿರದ ಯಾವ ದೇಶದಲ್ಲಿ ನಾನು ಹಾಕಬೇಕು ಎಂದು ಪೂಜ್ಯರಾದ ನೀವು ಅಪ್ಪಣೆಯನ್ನು ಕೊಡಬೇಕು.

ಸೂತಃ

ತತೋ ನಿಷ್ಪುರುಷಂ ಶೈಲಂ ಹಿಮಸಂರುದ್ಧಕಂದರಮ್ ।
ಅಗಮ್ಯಂ ಮನಸಾಪ್ಯನ್ಯೈ ರ್ಯಸ್ತಸ್ಯಾಚಖ್ಯೌ ಸ ಕಾಶ್ಯಪಃ ॥೧೮॥

ಕಾಶ್ಯಪರು ಪುರುಷಪ್ರವೇಶವಿಲ್ಲದ ಮನಸ್ಸಿನಿಂದಲೂ ಅಗಮ್ಯವಾದ ಹಿಮಾಲಯಪರ್ವತದ ಒಂದು ಕಣಿವೆಯನ್ನು ಗರುಡನಿಗೆ ತಿಳಿಸಿದರು.

ತಂ ಪರ್ವತಂ ಮಹಾಕುಕ್ಷಿಮಾದಿಶ್ಯ ಮನಸಾ ಖಗಃ ।
ಜವೇನಾಭ್ಯಪತತ್ ತಾರ್ಕ್ಷ್ಯಃ ಸಶಾಖಾಗಜಕಚ್ಛಪಃ ॥೧೯॥

ಆಗ ಗರುಡನು ಮನಸ್ಸಿನಿಂದ ಆ ಪರ್ವತದ ಮಹಾಕುಕ್ಷಿಯನ್ನು ಉದ್ದೇಶಿಸಿ, ಶಾಖೆ, ಗಜ ಮತ್ತು ಕೂರ್ಮಗಳನ್ನು ಎತ್ತಿಕೊಂಡೇ ವೇಗವಾಗಿ ಆ ಪ್ರದೇಶದ ಕಡೆಗೆ ಹೊರಟನು.

ನ ತಾಂ ವಾರ್ಧ್ರಃ ಪರಿಣಾಹೇಚ್ಛತಚರ್ಮಾ ಮಹಾನಣುಃ ।
ಶಾಖಿನೋ ಮಹತೀಂ ಶಾಖಾಂ ಯಾಂ ಪ್ರಗೃಹ್ಯ ಯಯೌ ಖಗಃ॥೨೦॥

ಯಾವ ಕೊಂಬೆಯನ್ನು ಗರುಡನು ಎತ್ತಿಕೊಂಡು ಹೊರಟನೋ, ಆ ಕೊಂಬೆಯನ್ನು ನೂರು ಎಮ್ಮೆಗಳ ಚರ್ಮದಿಂದ ಒಂದು ಕನಿಷ್ಠ ಅಂಗುಲಿಯ ಗಾತ್ರದಲ್ಲಿ ಮಾಡಲ್ಪಟ್ಟ ಚರ್ಮಮಯವಾದ ಹಗ್ಗವು ಒಂದು ಬಾರಿ ಸುತ್ತಲು ಸಾಧ್ಯವಾಗುತ್ತಿರಲಿಲ್ಲ.

ತತಃ ಶತಸಹಸ್ರಂ ಸ ಯೋಜನಾನ್ತರಮಾಗತಃ ।
ಕಾಲೇನ ನಾತಿಮಹತಾ ಗರುಡಃ ಪತತಾಂ ವರಃ ॥೨೧॥

ಆಗ ಹಾರುವವರಲ್ಲಿ ಅಗ್ರಗಣ್ಯನಾದ ಗರುಡನು ಒಂದು ಲಕ್ಷಯೋಜನ ದೂರವನ್ನು ಅಲ್ಪಕಾಲದಲ್ಲಿಯೇ ಅತಿಕ್ರಮಿಸಿ ಬಂದನು.

ಸ ತಂ ಗತ್ವಾ ಕ್ಷಣೇನೈವ ಪರ್ವತಂ ವಚನಾತ್ ಪಿತುಃ ।
ಪ್ರಾಮುಂಚನ್ ಮಹತೀಂ ಶಾಖಾಂ ಸಸ್ವನಾಂ ತತ್ರ ಖೇಚರಃ ॥೨೨॥

ತಂದೆಯ ಮಾತಿನಂತೆ, ಆ ಪರ್ವತದ ಸಮೀಪಕ್ಕೆ ಒಂದು ಕ್ಷಣದಲ್ಲಿ ಬಂದು ಆ ದೊಡ್ಡ ಶಾಖೆಯನ್ನು ಅಲ್ಲಿ ಪರಿತ್ಯಜಿಸಿದನು. ಗಗನಚರನಾದ ಗರುಡನು ಆ ಕೊಂಬೆಯನ್ನು ಕೆಳಗೆ ಹಾಕುತ್ತಿರಲು, ದೊಡ್ಡ ಶಬ್ದವುಂಟಾಯಿತು.

ತಸ್ಯ ಪಕ್ಷಾನಿಲಹತಃ ಪ್ರಾಕಂಪತ ಸ ಶೈಲರಾಟ್ ।
ಮುಮುಚುಃ ಪುಷ್ಪವರ್ಷಂ ಚ ಸಮಾಗಾಳಿತಪಾದಪಾಃ ॥೨೩॥

ಗರುಡನ ರೆಕ್ಕೆಯ ಅನಿಲದಿಂದ ಹೊಡೆಯಲ್ಪಟ್ಟ ಶೈಲರಾಜನಾದ ಹಿಮಾಲಯವು ಕಂಪಿಸಿತು. ವೃಕ್ಷಗಳು ಅಲ್ಲಾಡಿಸಲ್ಪಟ್ಟು ಪುಷ್ಪಗಳ ವೃಷ್ಟಿಯನ್ನು ಕರೆದವು.

ಶೃಂಗಾಣಿ ಚ ವ್ಯಶೀರ್ಯಂತ ಗಿರೇಸ್ತಸ್ಯ ಸಮಂತತಃ ।
ಮಣಿಕಾಂಚನಚಿತ್ರಾಣಿ ಶೋಭಯಂತಿ ಮಹಾಗಿರಿಮ್ ॥೨೪॥

ಮಣಿಕಾಂಚನಮಯವಾದ ಆ ಪರ್ವತದ ಶಿಖರಗಳು ಬಿರಿದು ಆ ದೊಡ್ಡಪರ್ವತಕ್ಕೆ ಶೋಭೆಯನ್ನು ಉಂಟು ಮಾಡಿದವು.

ಶಾಖಿನೋ ಬಹವಶ್ಚಾಪಿ ಶಾಖಿಯಾ ನಿಹತಾಸ್ತಯಾ ।
ಕಾಂಚನೈಃ ಕುಸುಮೈರ್ಭಾಂತಿ ವಿದ್ಯುತ್ವಂತ ಇವಾಂಬುದಾಃ ॥೨೫॥

ಇನ್ನೂ ಅನೇಕ ವೃಕ್ಷಗಳೂ ಸಹ, ಬೀಳುತ್ತಿದ್ದ ಆ ಕೊಂಬೆಯಿಂದ ಮುರಿಯಲ್ಪಟ್ಟವು. ಕಾಂಚನಮಯವಾದ ಕುಸುಮಗಳಿಂದ ಕೂಡಿದ ಆ ವೃಕ್ಷಗಳು ಮಿಂಚಿನಿಂದ ಕೂಡಿದ ಮೋಡಗಳಂತೆ ಹೊಳೆದು ಶೋಭಿಸುತ್ತಿದ್ದವು.

ತೇ ಹೇಮರಜಸಾ ಭೂಯೋ ಯುಕ್ತಾಃ ಪರ್ವತಧಾತುಭಿಃ ।
ವ್ಯರಾಜನ್ ಶಾಖಿನಸ್ತತ್ರ ಸೂರ್ಯಾಂಶುಪ್ರತಿರಂಜಿತಾಃ ॥೨೬॥

ಸುವರ್ಣದ ಧೂಳಿನಿಂದಲೂ, ಪರ್ವತಧಾತುಗಳಿಂದಲೂ ಯುಕ್ತವಾಗಿ ಸೂರ್ಯಕಿರಣಗಳಿಂದ ರಂಜಿತವಾದ ಆ ವೃಕ್ಷಗಳು ಅಲ್ಲಿ ಶೋಭಿಸಿದವು.

ತತಸ್ತಸ್ಯ ಗಿರೇಃ ಶೃಂಗಂ ಸಮಾಸ್ಥಾಯ ಖಗೋತ್ತಮಃ ।
ಭಕ್ಷಯಾಮಾಸ ಗರುಡಸ್ತಾವುಭೌ ಗಜಕಚ್ಛಪೌ ॥೨೭॥

ಅನಂತರ ಪಕ್ಷಿಶ್ರೇಷ್ಠನಾದ ಗರುಡನು ಆ ಪರ್ವತಶಿಖರದಲ್ಲಿ ಕುಳಿತು ಆ ಕೂರ್ಮ ಮತ್ತು ಗಜಗಳನ್ನು ಭಕ್ಷಿಸಿದನು.

ತಾವುಭೌ ಭಕ್ಷಯಿತ್ವಾ ತು ಸ ತಾರ್ಕ್ಷ್ಯಃ ಕೂರ್ಮಕುಂಜರೌ ।
ತತಃ ಪರ್ವತಕೂಟಾಗ್ರಾದುತ್ಪಪಾತ ಮನೋಜವಃ ॥೨೮॥

ಮನೋಜವವುಳ್ಳ ಗರುಡನು ಆ ಗಜಕೂರ್ಮಗಳನ್ನು ಭಕ್ಷಿಸಿ, ಆ ಪರ್ವತಶಿಖರದಿಂದ ಪುನಃ ಮೇಲಕ್ಕೆ ಹಾರಿದನು.

ಪ್ರಾವರ್ತಂತಾಥ ದೇವಾನಾಮುತ್ಪಾತ ಭಯವೇದಿನಃ ।
ಇಂದ್ರಸ್ಯ ವಜ್ರಂ ದಯಿತಂ ಪ್ರಜಜ್ವಾಲ ವ್ಯಥಾನ್ವಿತಮ್ ॥೨೯॥

ಆಗ ದೇವತೆಗಳಿಗೆ ಭಯವನ್ನು ಸೂಚಿಸುವ ಅನೇಕ ಅಪಶಕುನಗಳಾದವು. ಇಂದ್ರನಿಗೆ ಪ್ರಿಯವಾದ ವಜ್ರಾಯುಧವು ವ್ಯಥೆಯಿಂದ ಕೂಡಿ ಪ್ರಜ್ವಲಿಸಿತು.

ಸಧೂಮಾ ಚಾಪತತ್ ಸಾರ್ಚಿರ್ದಿವಿ ಚೋಲ್ಕಾ ನಭಶ್ಚ್ಯುತಾ ।
ತಥಾ ವಸೂನಾಂ ರುದ್ರಾಣಾಮಾದಿತ್ಯಾನಾಂ ಚ ಸರ್ವಶಃ ॥೩೦॥

ಸಾಧ್ಯಾನಾಂ ಮರುತಾಂ ಚೈವ ಯೇ ಚಾನ್ಯೇ ದೇವತಾಗಣಾಃ ।
ಸ್ವಂ ಸ್ವಂ ಪ್ರಹರಣಂ ತೇಷಾಂ ಪರಸ್ಪರಮುಪಾದ್ರವನ್ ॥೩೧॥

ಆಕಾಶದಿಂದ ಧೂಮಾಗ್ನಿಗಳ ಸಹಿತವಾದ ಉಲ್ಕಾಪಾತವಾಯಿತು. ವಸು, ರುದ್ರ, ಆದಿತ್ಯ, ಸಾಧ್ಯ, ಮರುತ್ ಮೊದಲಾದ ದೇವತೆಗಳ ಆಯುಧಗಳು ಪರಸ್ಪರವಾಗಿ ಒಂದರ ಕಡೆಗೆ ಒಂದು ಧಾವಿಸಿದವು.

ಅಭೂತಪೂರ್ವಃ ಸಂಗ್ರಾಮೋ ಯಥಾ ದೇವಾಸುರೇಷ್ವಪಿ ।
ವವುರ್ವಾತಾಃ ಸನಿರ್ಘಾತಾಃ ಪೇತುರುಲ್ಕಾಃ ಸಮಂತತಃ ॥೩೨॥

ಅಭೂತಪೂರ್ವವಾದ ದೇವಾಸುರ ಸಂಗ್ರಾಮದಲ್ಲಿ ಎಂತಹ ಅಪಶಕುನಗಳಾದವೋ, ಅಂತಹ ಅಪಶಕುನಗಳು ಸಂಭವಿಸಿದವು. ಬಹಳ ಒರಟಾದ ಗಾಳಿಯು ಬೀಸಿತು. ಎಲ್ಲಾ ಕಡೆಗಳಲ್ಲಿಯೂ ಉಲ್ಕಾಪಾತವಾಯಿತು.

ನಿರಭ್ರಮೇವ ಚಾಕಾಶಂ ಪ್ರಜಗರ್ಜ ಮಹಾಸ್ವನಮ್ ।
ದೇವಾನಾಮಪಿ ಯೋ ದೇವಃ ಸೋಽಪ್ಯವರ್ಷದಸೃಕ್ ತದಾ ॥೩೩॥

ಮೋಡವಿಲ್ಲದ ಆಕಾಶದಲ್ಲಿ ದೊಡ್ಡ ಗುಡುಗಿನ ಶಬ್ದಗಳಾದವು. ದೇವದೇವನಾದ ನಾರಾಯಣನು ರಕ್ತದ ಮಳೆಯನ್ನು ಸುರಿಸಿದನು.

ಮಮ್ಲುರ್ಮಾಲ್ಯಾನಿ ದೇವಾನಾಂ ತೇಜಸ್ತೇಜಾಂಸಿ ಚೈವ ಹ ।
ಉತ್ಪಾತಮೇಘಾ ರೌದ್ರಾಶ್ಚ ವವೃಷುಃ ಶೋಣಿತಂ ಬಹು ॥೩೪॥

ದೇವತೆಗಳ ಪುಷ್ಪಮಾಲೆಗಳು ಬಾಡಿಹೋದವು. ಅವರ ತೇಜಸ್ಸು ಕಳೆಗುಂದಿತು. ಉತ್ಪಾತಕಾಲದ ಭಯಂಕರವಾದ ಮೋಡಗಳು ರಕ್ತದಮಳೆಯನ್ನು ಸುರಿಸಿದವು.

ರಜಾಂಸಿ ಮಕುಟಾಂಶ್ಚೈಷಾಮುತ್ಥಿತಾನಿ ವ್ಯಕರ್ಷಯನ್ ।
ತತಸ್ತ್ರಾಸಸಮುದ್ವಿಗ್ನಃ ಸಹ ದೇವೈಃ ಶತಕ್ರತುಃ ॥೩೫॥

ಗಾಳಿಯಿಂದ ಎದ್ದ ಧೂಳಿನಿಂದ ದೇವತೆಗಳ ಕೀರಿಟಗಳು ಅಸ್ತವ್ಯಸ್ತವಾದವು. ಆಗ ಇಂದ್ರನು ದೇವತೆಗಳ ಜೊತೆಯಲ್ಲಿ ಭಯಗ್ರಸ್ತನಾದನು.

ಉತ್ಪಾತಾನ್ ದಾರುಣಾನ್ ಪಶ್ಯನ್ನಿತ್ಯುವಾಚ ಬೃಹಸ್ಪತಿಮ್ ।
ಕಿಮರ್ಥಂ ಭಗವನ್ ಘೋರಾ ಮಹೋತ್ಪಾತಾಃ ಸಮುತ್ಥಿತಾಃ ।
ನ ಹಿ ಪಶ್ಯಾಮಿ ಶತ್ರುಂ ಮೇ ಯುಧಿ ಯೋ ನಃ ಪ್ರಧರ್ಷಯೇತ್ ॥

ದಾರುಣವಾದ ಇಂತಹ ಉತ್ಪಾತಗಳನ್ನು ನೋಡಿದ ಇಂದ್ರನು ಬೃಹಸ್ಪತ್ಯಾಚಾರ್ಯರನ್ನು ಕುರಿತು ಹೀಗೆ ಹೇಳಿದನು. ಪೂಜ್ಯರೇ, ಏಕೆ ಇಂತಹ ಘೋರವಾದ ದೊಡ್ಡ ಅಪಶಕುನಗಳು ಸಂಭವಿಸುತ್ತಿವೆ? ನನ್ನನ್ನು ಯುದ್ಧದಲ್ಲಿ ಸೋಲಿಸಬಹುದಾದ ಯಾವ ಶತ್ರುವನ್ನೂ ನಾನು ಕಾಣುತ್ತಿಲ್ಲವಷ್ಟೆ?

ಬೃಹಸ್ಪತಿಃ

ತವಾಪರಾಧಾದ್ ದೇವೇಶ ಪ್ರಮಾದಾಚ್ಚ ಶತಕ್ರತೋ ।
ತಪಸಾ ವಾಲಖಿಲ್ಯಾನಾಂ ಭಯಮುತ್ಪನ್ನಮದ್ಭುತಮ್ ॥೩೭॥

ದೇವೇಶನೇ, ಶತಕ್ರತುವೇ, ನೀನು ವಾಲಖಿಲ್ಯರ ತಪಸ್ಸನ್ನು ಗಮನಿಸದೇ ಅವರಿಗೆ ಮಾಡಿದ ಅಪರಾಧದಿಂದಲೂ ಮತ್ತು ವಾಲಖಿಲ್ಯರ ತಪಸ್ಸಿನಿಂದಲೂ, ಈ ಅದ್ಭುತವಾದ ಉತ್ಪಾತಗಳು ಭಯವನ್ನು ಹುಟ್ಟಿಸುತ್ತಿವೆ.

ಕಾಶ್ಯಪಸ್ಯ ಮುನೇಃ ಪುತ್ರೋ ವಿನತಾಯಾಃ ಖಗೇಶ್ವರಃ ।
ಹರ್ತುಂ ಸೋಮಮನುಪ್ರಾಪ್ತೋ ಬಲವಾನ್ ಕಾಮರೂಪವಾನ್ ॥

ಕಾಶ್ಯಪ ಮತ್ತು ವಿನತೆಯರ ಮಗನಾದ, ಬಲಿಷ್ಠನಾದ, ಇಚ್ಛಾರೂಪವನ್ನು ಧರಿಸಲು ಸಮರ್ಥನಾದ, ಪಕ್ಷಿರಾಜನಾದ ಗರುಡನು ಅಮೃತವನ್ನು ಅಪಹರಿಸುವುದಕ್ಕೆ ಬರುತ್ತಿದ್ದಾನೆ.

ಸಮರ್ಥೋ ಬಲಿನಾಂ ಶ್ರೇಷ್ಠೋ ಹರ್ತುಂ ಸೋಮಮಿಹಾಗತಃ ।
ಸರ್ವಂ ಸಂಭಾವಯಾಮ್ಯಸ್ಮಿನ್ನಸಾಧ್ಯಮಪಿ ಸಾಧಯೇತ್ ॥೩೯॥

ಬಲಿಷ್ಠರಲ್ಲಿ ಶ್ರೇಷ್ಠನೂ, ಸಮರ್ಥನೂ ಆದ ಅವನು ಅಮೃತವನ್ನು ಅಪಹರಿಸಲು ಇಲ್ಲಿಗೆ ಬರುತ್ತಿದ್ದಾನೆ. ಅವನಲ್ಲಿ ಎಲ್ಲವೂ ಸಂಭಾವಿತ ಎಂದು ನನಗೆ ತೋರುತ್ತದೆ. ಅವನು ಅಸಾಧ್ಯವಾದುದನ್ನೂ ಸಾಧಿಸುತ್ತಾನೆ.

ಸೂತಃ

ಶ್ರುತ್ವೈತದ್ವಚನಂ ಶಕ್ರಃ ಪ್ರೋವಾಚಾಮೃತರಕ್ಷಿಣಃ ।
ಮಹವೀರ್ಯಬಲಃ ಪಕ್ಷೀ ಹರ್ತುಂ ಸೋಮಮಿಹೋದ್ಯತಃ ॥೪೦॥

ಯುಷ್ಮಾನ್ ಸಂಮೋಹಯಾಮ್ಯೇಷ ಯಥಾ ನ ಸ ಹರೇದ್ ಬಲಾತ್ ।
ಅತುಲಂ ಹಿ ಬಲಂ ತಸ್ಯ ಬೃಹಸ್ಪತಿರುವಾಚ ಮೇ ॥೪೧॥

ಈ ಮಾತನ್ನು ಕೇಳಿದ ಇಂದ್ರನು ಅಮೃತದ ಕಾವಲುಗಾರರಾದ ದೇವತೆಗಳನ್ನುದ್ದೇಶಿಸಿ, ಮಹಾವೀರ್ಯಬಲಯುಕ್ತವಾದ ಪಕ್ಷಿಯೊಂದು ಅಮೃತವನ್ನು ಅಪಹರಿಸಲು ಉದ್ಯುಕ್ತನಾಗಿ ಇಲ್ಲಿಗೆ ಬರುತ್ತಿದ್ದಾನೆ. ಅವನ ಬಲವು ಅಪ್ರತಿಮವೆಂದು ಬೃಹಸ್ಪತಿಗಳು ಹೇಳಿದ್ದಾರೆ. ಅವನು ತನ್ನ ಸಾಮರ್ಥ್ಯದಿಂದ ಅಮೃತವನ್ನು ಅಪಹಾರಮಾಡದಂತೆ ನೀವು ನೋಡಿಕೊಳ್ಳಬೇಕು ಎಂದು ನಿಮಗೆ ಎಚ್ಚರಿಕೆಯನ್ನು ನೀಡುತ್ತಿದ್ದೇನೆ ಎಂದು ಹೇಳಿದನು.

ಸೂತಃ

ತಚ್ಛ್ರುತ್ವಾ ವಿಬುಧಾ ವಾಕ್ಯಂ ವಿಸ್ಮಿತಾ ಯತ್ನಮಾಸ್ಥಿತಾಃ ।
ಪರಿವಾರ್ಯಾಮೃತಂ ತಸ್ಥುಃ ಸರ್ವೇ ಕ್ಷುಭಿತಮಾನಸಾಃ ॥೪೨॥

ಆ ವಾಕ್ಯವನ್ನು ಕೇಳಿದ ದೇವತೆಗಳು, ವಿಸ್ಮಯಾವಿಷ್ಟರಾಗಿ ಅಮೃತದ ಕಲಶದ ಸುತ್ತಲೂ ಮನಸ್ಸಿನಲ್ಲಿ ಕ್ಷೋಭೆಗೊಂಡವರಾಗಿದ್ದರೂ ಪ್ರಯತ್ನಪೂರ್ವಕವಾಗಿ ಅಮೃತವನ್ನು ರಕ್ಷಿಸಲು ನಿಂತರು.

ಧಾರಯಂತೋ ಮಹಾರ್ಹಾಣಿ ಕವಚಾನಿ ಮನಸ್ವಿನಃ ।
ಕಾಂಚನಾನಿ ವಿಚಿತ್ರಾಣಿ ವೈಢೂರ್ಯವಿಕೃತಾನಿ ಚ ॥೪೩॥

ವಿವಿಧಾನಿ ಚ ಶಸ್ತ್ರಾಣಿ ಸಮುದ್ಯಮ್ಯ ಸಹಸ್ರಶಃ ।
ಸಿತತೀಕ್ಷ್ಣಾಗ್ರಧಾರಾಣಿ ಸಮುದ್ಯಮ್ಯ ಸಹಸ್ರಶಃ ॥೪೪॥

ಸವಿಸ್ಫುಲಿಂಗಜ್ವಾಲಾನಿ ಘೋರರೂಪಾಣ್ಯನೇಕಶಃ ।
ಚಕ್ರಾಣಿ ಪರಿಘಾಂಶ್ಚೈವ ತ್ರಿಶೂಲಾನಿ ಪರಶ್ವಧಾನ್ ॥೪೫॥

ಶಕ್ತೀಶ್ಚ ವಿಮಲಾಸ್ತೀಕ್ಷ್ಣಾಃ ಕರವಾಳಾಂಶ್ಚ ನಿರ್ಮಲಾನ್ ।
ಸ್ವದೇಹರೂಪಾಣ್ಯಾದಾಯ ಗದಾಶ್ಚೋಗ್ರಪ್ರದರ್ಶನಾಃ ॥೪೬॥

ಧೈರ್ಯಶಾಲಿಗಳಾದ ಅವರು ಅನರ್ಘ್ಯವಾದ, ಕಾಂಚನದಿಂದಲೂ, ವೈಢೂರ್ಯಾದಿಗಳಿಂದಲೂ ಖಚಿತವಾದ, ವಿಚಿತ್ರವಾದ, ಕವಚಗಳನ್ನು ತೊಟ್ಟು, ಅನೇಕವಿಧವಾದ ಶಸ್ತ್ರಗಳನ್ನು ಸಹಸ್ರಸಂಖ್ಯೆಯಲ್ಲಿ ಕೈಗಳಲ್ಲಿ ಹಿಡಿದರು. ಹರಿತವಾದ, ತೀಕ್ಷ್ಣವಾದ ತುದಿಯುಳ್ಳ ಸಹಸ್ರಾರು ಸಂಖ್ಯೆಯ ಅಸ್ತ್ರವನ್ನು ಹಿಡಿದರು. ಧೂಮಸಹಿತವಾದ ಅಗ್ನಿಯನ್ನು ಉಗುಳುವ, ಘೋರರೂಪವಾದ ಅನೇಕ ಚಕ್ರಗಳನ್ನೂ, ಪರಿಘಗಳನ್ನೂ, ತ್ರಿಶೂಲಗಳನ್ನೂ, ಪರಶ್ವಧಗಳನ್ನೂ, ಶಕ್ತ್ಯಾಯುಧಗಳನ್ನೂ, ಹರಿತವಾದ ಮತ್ತು ಸ್ವಚ್ಛವಾದ ಮತ್ತು ನಿರ್ಮಲವಾದ ಖಡ್ಗಗಳನ್ನೂ, ತಮ್ಮ ದೇಹದ ಮೇಲೆ ಪ್ರಕಾಶವನ್ನು ಚೆಲ್ಲುವಂತೆ ಹೊಳೆಯುವ ಗದೆಗಳನ್ನೂ ಧರಿಸಿ ಉಗ್ರರಾಗಿ ಕಾಣುವಂತೆ ನಿಂತರು.

ತೈಃ ಶಸ್ತ್ರೈರ್ಭಾನುಮದ್ಭಿಸ್ತೇ ದಿವ್ಯಾಭರಣಭೂಷಿತಾಃ ।
ಭಾನುಮಂತಃ ಸುರಗಣಾಸ್ತಸ್ಥುರ್ವಿಗತಕಲ್ಮಷಾಃ ॥೪೭॥

ಆ ಪ್ರಕಾಶಮಾನವಾದ ಶಸ್ತ್ರಗಳನ್ನು ಹಿಡಿದು, ದಿವ್ಯಾಭರಣಭೂಷಿತರಾದ ಆ ಕಾಂತಿಯುಕ್ತರಾದ, ದೋಷರಹಿತರಾದ ಸುರಗಣಗಳು, ಉದ್ಯುಕ್ತರಾಗಿ ನಿಂತರು.

ಅನುಪಮಬಲವೀರ್ಯತೇಜಸೋ
ಧೃತಮನಸಃ ಪರಿರಕ್ಷಣೇऽಮೃತಸ್ಯ ।
ಅಸುರಪುರವಿದಾರಣಾಃ ಸುರಾಸ್ತೇ
ಜ್ವಲನಸಮಿದ್ಧವಪುಃಪ್ರಕಾಶಿನಃ ॥೪೮॥

ಅನುಪಮವಾದ ಬಲವೀರ್ಯಪರಾಕ್ರಮವುಳ್ಳವರೂ, ಮನಸ್ಸಿನ ಸ್ಥೈರ್ಯವುಳ್ಳವರೂ, ಅಸುರರ ಪಟ್ಟಣವನ್ನು ನಾಶಗೊಳಿಸುವವರೂ, ಸಮಿದ್ಧವಾದ ಅಗ್ನಿಯಂತೆ ಪ್ರಕಾಶಿಸುವ ತೇಜಃ ಪ್ರಚುರವಾದ ದೇಹವುಳ್ಳವರೂ ಆದ ದೇವತೆಗಳು,ಅಮೃತದ ರಕ್ಷಣೆಗಾಗಿ ನಿಂತರು.

ಇತಿ ಸಮರಪರಂ ಸುರಾಸ್ಥಿತಂ
ಪರಿಘಸಹಸ್ರಶತೈಃ ಸಮಾಕುಲಮ್ ।
ವಿಗಳಿತಮಿವ ಚಾಂಬರಾಂತರಂ
ತಪನಮರೀಚಿಭಿರಾರ್ಚಿತಂ ಬಭೌ ॥೪೯॥

ಹೀಗೆ, ಸಹಸ್ರಾರು ಪರಿಘಗಳಿಂದ ಕೂಡಿದ, ಯುದ್ಧದಲ್ಲಿ ತಾತ್ಪರ್ಯವುಳ್ಳ, ದೇವತೆಗಳ ಸಮೂಹವು, ಆಕಾಶದಿಂದ ಕಳಚಿಬಿದ್ದ ಅಗ್ನಿಯ ಕಿರಣಗಳಿಂದ ಹೊಳೆಯುವ ತೇಜಸ್ಸಿನ ಸಮೂಹದಂತೆ ಕಂಗೊಳಿಸಿತು.

॥ ಇತಿ ಶ್ರೀಮನ್ಮಹಾಭಾರತೇ ಶತಸಹಸ್ರಿಕಾಯಾಂಸಂಹಿತಾಯಾಮಾದಿಪರ್ವಣಿ
ಪಂಚವಿಂಶೋऽಧ್ಯಾಯಃ ॥

॥ ಇತಿ ಆಸ್ತೀಕಪರ್ವಣಿ ತ್ರಯೋದಶೋऽಧ್ಯಾಯಃ ॥

ಇಲ್ಲಿಗೆ ಮಹಾಭಾರತದ ಆದಿಪರ್ವದಲ್ಲಿ ಇಪ್ಪತ್ತೈದನೆಯ ಅಧ್ಯಾಯ ಮುಗಿಯಿತು.

★★★★★

ಇಪ್ಪತ್ತಾರನೆಯ ಅಧ್ಯಾಯ

(ಗರುಡನ ಉತ್ಪತ್ತಿಗೆ ಕಾರಣವನ್ನು ಕುರಿತು ಶೌನಕರ ಪ್ರಶ್ನೆ ಮತ್ತು ಸೂತರ ಉತ್ತರ.)

ಶೌನಕಃ

ಅಪರಾಧೋ ಮಹೇಂದ್ರಸ್ಯ ಕಃ ಪ್ರಮಾದಶ್ಚ ಸೂತಜ ।
ತಪಸಾ ವಾಲಖಿಲ್ಯಾನಾಂ ಸಂಭೂತೋ ಗರುಡಃ ಕಥಮ್ ॥೧॥

ಎಲೈ ಸೂತಪುತ್ರನೇ, ಮಹೇಂದ್ರನ ಪ್ರಮಾದ ಮತ್ತು ಅವನು ಮಾಡಿದ ಅಪರಾಧಗಳೇನು? ವಾಲಖಿಲ್ಯರ ತಪಸ್ಸಿನಿಂದ ಗರುಡನು ಹೇಗೆ ಜನಿಸಿದನು?

ಕಾಶ್ಯಪಸ್ಯ ದ್ವಿಜಾತೇಶ್ಚ ಕಥಂ ವೈ ಪಕ್ಷಿರಾಟ್ ಸುತಃ ।
ಅಧೃಷ್ಯಃ ಸರ್ವಭೂತಾನಾಮವಧ್ಯಶ್ಚಾಭವತ್ ಕಥಮ್ ॥೨॥

ಬ್ರಾಹ್ಮಣರಾದ ಕಾಶ್ಯಪರಿಗೆ ಪಕ್ಷಿರಾಜನು ಹೇಗೆ ಪುತ್ರನಾದನು? ಅವನು ಹೇಗೆ ಎಲ್ಲಾ ಪ್ರಾಣಿಗಳಿಂದಲೂ ಅಧೃಶ್ಯನೂ ಮತ್ತು ಅವಧ್ಯನೂ ಆದನು?

ಕಥಂ ಚ ಕಾಮರೂಪೀ ಸ ಕಾಮವೀರ್ಯಶ್ಚ ಖೇಚರಃ ।
ಏತದಿಚ್ಛಾಮ್ಯಹಂ ಶ್ರೋತುಂ ಪುರಾಣೇ ಯದಿ ಪಠ್ಯತೇ ॥೩॥

ಖೇಚರನಾದ ಗರುಡನು ಹೇಗೆ ಕಾಮರೂಪವುಳ್ಳವನೂ ಮತ್ತು ಕಾಮವೀರ್ಯವುಳ್ಳವನೂ ಆದನು? ಪುರಾಣಗಳಲ್ಲಿ ಈ ವಿಷಯವು ಹೇಳಲ್ಪಟ್ಟಿದ್ದರೆ, ನಾನು ಅದನ್ನು ತಿಳಿಯಲು ಇಚ್ಛಿಸುತ್ತೇನೆ.

ಸೂತಃ

ವಿಷಯೋಽಯಂ ಪುರಾಣಸ್ಯ ಯನ್ಮಾಂ ತ್ವಂ ಪರಿಪೃಚ್ಛಸಿ ।
ಶೃಣು ಮೇ ವದತಃ ಸರ್ವಮೇತತ್ ಸಂಕ್ಷೇಪತೋ ದ್ವಿಜ ॥೪॥

ಬ್ರಾಹ್ಮಣನಾದ ಶೌನಕನೇ, ನೀನು ಕೇಳುತ್ತಿರುವ ವಿಷಯವು ಪುರಾಣಗಳಲ್ಲಿ ಉಕ್ತವಾಗಿದೆ. ನಾನು ಎಲ್ಲವನ್ನೂ ಸಂಕ್ಷೇಪವಾಗಿ ಹೇಳುತ್ತೇನೆ ಕೇಳು.

ಯಜತಃ ಪುತ್ರಕಾಮಸ್ಯ ಕಾಶ್ಯಪಸ್ಯ ಪ್ರಜಾಪತೇಃ ।
ಸಾಹಾಯ್ಯಮೃಷಯೋ ದೇವಾ ಗಂಧರ್ವಾಶ್ಚ ದದುಃ ಕಿಲ ॥೫॥

ಪ್ರಜಾಪತಿಗಳಾದ ಕಾಶ್ಯಪರು ಪುತ್ರಕಾಮನೆಯಿಂದ ಯಾಗವನ್ನು ಮಾಡುವಾಗ, ದೇವತೆಗಳೂ, ಗಂಧರ್ವರೂ ಮತ್ತು ಋಷಿಗಳೂ ಸಹಾಯವನ್ನು ಮಾಡಿದರಷ್ಟೆ.

ತತ್ರೇಧ್ಮಾನಯನೇ ಶಕ್ರೋ ನಿಯುಕ್ತಃ ಕಾಶ್ಯಪೇನ ಹಿ ।
ಮುನಯೋ ವಾಲಖಿಲ್ಯಾಶ್ಚ ಯೇ ಚಾನ್ಯೇ ದೇವತಾಗಣಾಃ ॥೬॥

ಆಗ ಕಾಶ್ಯಪರು ಇಂದ್ರನನ್ನೂ, ಉಳಿದ ದೇವತಾಗಣವನ್ನೂ ಮತ್ತು ವಾಲಖಿಲ್ಯಋಷಿಗಳನ್ನೂ ಇಧ್ಮವನ್ನು ತರಲು ಆದೇಶಿಸಿದರು.

ಶಕ್ರಸ್ತು ವೀರ್ಯಸದೃಶಮಿಧ್ಮಭಾರಂ ಗಿರಿಪ್ರಭಮ್ ।
ಸಮುದ್ಯಮ್ಯಾನಯಾಮಾಸ ನಾತಿಕೃಚ್ಛ್ರಾದಿವ ಪ್ರಭುಃ ॥೭॥

ಇಂದ್ರನಾದರೋ, ತನ್ನ ಪರಾಕ್ರಮಕ್ಕೆ ಸದೃಶವಾದ ಒಂದು ಪರ್ವತಪ್ರಮಾಣದ ಕಟ್ಟಿಗೆಗಳ ಭಾರವನ್ನು ಆಯಾಸ ಪಡದೆಯೇ ಎತ್ತಿ ತಂದನು.

ಅಥಾಪಶ್ಯದೃಷೀನ್ ಸರ್ವಾನ್ ಹ್ರಸ್ವಾನಂಗುಷ್ಠಮಾತ್ರಕಾನ್ ।
ಪಾಲಾಶವೃಂತಿಕಾಮೇಕಾಂ ವಹತಃ ಸಹಿತಾನ್ ಪಥಿ ॥೮॥

ಆಗ ಅವನು ಒಂದು ಅಂಗುಷ್ಠದ ಮಾತ್ರವೇ ಎತ್ತರವಿದ್ದ ಅನೇಕ ಋಷಿಗಳು ಸೇರಿ ಒಂದು ಮುತ್ತುಗದ ಮರದ ಹೂವಿನ ದಂಟನ್ನು ತೆಗೆದುಕೊಂಡು ಬರುವುದನ್ನು ದಾರಿಯಲ್ಲಿ ನೋಡಿದನು.

ಪ್ರಲೀನಾನ್ ಸ್ವೇಷು ಚಾಂಗೇಷು ನಿರಾಹಾರಾಂಸ್ತಪೋಧನಾನ್ ।
ಕ್ಲಿಶ್ಯಮಾನಾನ್ ಮೃದುಬಲಾನ್ ಗೋಷ್ಪದೇ ಸಂಪ್ಲುತೋದಕೇ ॥೯॥

ಅವರು ತಮ್ಮ ಅಂಗಗಳಲ್ಲಿಯೇ ಲೀನವಾಗಿ ಹೋಗುವಂತಿದ್ದ ನಿರಾಹಾರರಾದ ಆ ತಪೋಧನರು ಬಹಳ ಅಲ್ಪಬಲವುಳ್ಳವರಾಗಿ ಒಂದು ಗೋವಿನ ಹೆಜ್ಜೆಯಷ್ಟು ಆಳದ ನೀರಿನಲ್ಲಿ ಬಹಳ ಕಷ್ಟಪಡುತ್ತಾ ಮುಂದೆ ಬರುತ್ತಿದ್ದರು.

ತಾನ್ ಸರ್ವಾನ್ ವಿಸ್ಮಯಾವಿಷ್ಟೋ ವೀರ್ಯಮತ್ತಃ ಪುರಂದರಃ ।
ಅಪಹಸ್ಯಾಭ್ಯಗಾಚ್ಛೀಘ್ರಂ ಲಂಘಯಿತ್ವಾಽವಮತ್ಯ ಚ ॥೧೦॥

ತನ್ನ ಪರಾಕ್ರಮದಿಂದ ಮತ್ತನಾದ ಪುರಂದರನು ಆಶ್ಚರ್ಯವನ್ನು ಹೊಂದಿದವನಾಗಿ, ಅವರೆಲ್ಲರನ್ನೂ ಅಪಹಾಸ ಮಾಡಿ, ಅವರನ್ನು ಅವಮಾನಗೊಳಿಸಿ, ಅವರನ್ನು ದಾಟಿ ಶೀಘ್ರವಾಗಿ ಬಂದನು.

ತೇ ತು ರೋಷಸಮಾವಿಷ್ಟಾ ಸುಭೃಶಂ ಜಾತಮನ್ಯವಃ ।
ಆರೇಭಿರೇ ಮಹತ್ಕರ್ಮ ತದಾ ಶಕ್ರಭಯಂಕರಮ್ ॥೧೧॥

ಆಗ ರೋಷಾವಿಷ್ಟರಾದ ಆ ಋಷಿಗಳೆಲ್ಲರೂ ಬಹಳ ಸಿಟ್ಟಿನಿಂದ ಕೂಡಿದವರಾಗಿ ಇಂದ್ರನಿಗೆ ಭಯವನ್ನುಂಟು ಮಾಡುವ ದೊಡ್ಡಕರ್ಮವನ್ನು ಆರಂಭಿಸಿದರು.

ಜುಹುವುಸ್ತೇ ಸುತಪಸೋ ವಿಧಿವಜ್ಜಾತವೇದಸಿ ।
ಮಂತ್ರೈರುಚ್ಚಾವಚೈರ್ವಿಪ್ರಾ ಯೇನ ಕಾಮೇನ ತಚ್ಛೃಣು ॥೧೨॥

ಎಲೈ ಬ್ರಾಹ್ಮಣರೇ, ಸಮಿದ್ಧವಾದ ಅಗ್ನಿಯಲ್ಲಿ ಶ್ರೇಷ್ಠವಾದ ಮತ್ತು ಕನಿಷ್ಠವಾದ ಮಂತ್ರಗಳಿಂದ ವಿಧಿಪೂರ್ವಕವಾಗಿ ಅವರು ಯಾವ ಕಾಮನೆಯಿಂದ ಹೋಮ ಮಾಡಿದರೆಂದು ಹೇಳುತ್ತೇನೆ ಕೇಳಿ.

ಕಾಮವೀರ್ಯಃ ಕಾಮವೇಗೋ ದೇವರಾಜಭಯಪ್ರದಃ ।
ಇಂದ್ರೋಽನ್ಯಃ ಸರ್ವಭೂತಾನಾಂ ಭವೇದಿತಿ ಯತವ್ರತಾಃ ॥೧೩॥

ಇಂದ್ರಾಚ್ಛತಗುಣೋ ವೀರ್ಯೇ ಶೌರ್ಯೇ ಚೈವ ಮನೋಜವಃ ।
ತಪಸೋ ನಃ ಫಲೇನಾದ್ಯ ದಾರುಣಃ ಸಂಭವತ್ವಿತಿ ॥೧೪॥

ಕಾಮವೀರ್ಯನೂ, ಕಾಮವೇಗವುಳ್ಳವನೂ, ದೇವರಾಜನಾದ ಇಂದ್ರನಿಗೆ ಸಮಾನವಾದ ಸಾಮರ್ಥ್ಯವುಳ್ಳವನೂ ಆದ ಎಲ್ಲಾಪ್ರಾಣಿಗಳಿಗೂ ನಾಯಕನಾದ ಇಂದ್ರನಿಗಿಂತ ನೂರುಪಟ್ಟು ಶೌರ್ಯ ಮತ್ತು ಬಲಗಳನ್ನು ಹೊಂದಿರುವ ಮನೋಜವವನ್ನುಳ್ಳ ಇನ್ನೊಬ್ಬ ಇಂದ್ರನು ನಮ್ಮ ತಪಸ್ಸಿನ ಬಲದಿಂದ ಜನಿಸಲಿ ಎಂದು ವ್ರತಧಾರಿಗಳಾದ ಅವರು ಸಂಕಲ್ಪವನ್ನು ಮಾಡಿದರು.

ತಚ್ಛ್ರುತ್ವಾ ಭೃಶಸಂವಿಗ್ನೋ ದೇವರಾಜಃ ಪುರಂದರಃ ।
ಜಗಾಮ ಶರಣಂ ತತ್ರ ಕಾಶ್ಯಪಂ ಸಂಶಿತವ್ರತಮ್ ॥೧೫॥

ಅದನ್ನು ಕೇಳಿದ ದೇವರಾಜನಾದ ಪುರಂದರನು ಬಹಳ ಉದ್ವೇಗಕ್ಕೆ ಒಳಗಾದವನಾಗಿ ಶ್ರೇಷ್ಠವ್ರತಧಾರಿಗಳಾದ ಕಾಶ್ಯಪರನ್ನು ಶರಣುಹೊಂದಿದನು.

ತಚ್ಛ್ರುತ್ವಾ ದೇವರಾಜಸ್ಯ ಕಾಶ್ಯಪೋಽಥ ಪ್ರಜಾಪತಿಃ ।
ವಾಲಖಿಲ್ಯಾನುಪಾಗಮ್ಯ ಕರ್ಮಸಿದ್ಧಿಮಪೃಚ್ಛತ ॥೧೬॥

ದೇವರಾಜನಾದ ಇಂದ್ರನ ಮೊರೆಯನ್ನು ಕೇಳಿ ಪ್ರಜಾಪತಿಗಳಾದ ಕಾಶ್ಯಪರು ವಾಲಖಿಲ್ಯರನ್ನು ಸಮೀಪಿಸಿ ಅವರ ಕರ್ಮಸಿದ್ಧಿಯನ್ನು ಕುರಿತು ಪ್ರಶ್ನೆಮಾಡಿದರು.

ಏವಮಸ್ತ್ವಿತಿ ತಂ ಚಾಪಿ ಪ್ರತ್ಯೂಚುಃ ಸತ್ಯವಾದಿನಃ ।
ತಾನ್ ಕಾಶ್ಯಪ ಉವಾಚೇದಂ ಸಾಂತ್ವಪೂರ್ವಂ ಪ್ರಜಾಪತಿಃ ॥೧೭॥

ಸತ್ಯವಾದಿಗಳಾದ ವಾಲಖಿಲ್ಯರು ನಿಮ್ಮ ಪ್ರಶ್ನೆಗಳಿಗೆ ನಾವು ಉತ್ತರಕೊಡುತ್ತೇವೆ ಎಂದು ಹೇಳಿದರು. ಆಗ ಪ್ರಜಾಪತಿಗಳಾದ ಕಾಶ್ಯಪರು ಸಮಾಧಾನಪೂರ್ವಕವಾಗಿ ಈ ಮಾತನ್ನು ಆಡಿದರು.

ಅಯಮಿಂದ್ರಸ್ತ್ರಿಭುವನೇ ನಿಯೋಗಾದ್ ಬ್ರಹ್ಮಣಃ ಕೃತಃ ।
ಇಂದ್ರಾರ್ಥಂ ಚ ಭವಂತೋಽಪಿ ಯತ್ನವಂತಸ್ತಪೋಧನಾಃ ॥೧೮॥

ಬ್ರಹ್ಮದೇವರ ಆಪ್ಪಣೆಯಂತೆ ಪುರಂದರನು ಮೂರು ಲೋಕಾಧಿಪತಿಯಾದ ಇಂದ್ರನಾಗಿ ಮಾಡಲ್ಪಟ್ಟಿದ್ದಾನೆ. ಈಗ ತಪೋಧನರಾದ ನೀವೂ ಸಹ ಇನ್ನೊಬ್ಬ ಇಂದ್ರನ ಉತ್ಪತ್ತಿಯ ಸಲುವಾಗಿ ಪ್ರಯತ್ನವನ್ನು ಮಾಡುತ್ತಿದ್ದೀರಿ.

ನ ಮಿಥ್ಯಾಂ ಬ್ರಹ್ಮಣೋ ವಾಕ್ಯಂ ಕರ್ತುಮರ್ಹಥ ಸತ್ತಮಾಃ ।
ಭವತಾಂ ಚ ನ ಮಿಥ್ಯೈಷಯಂ ಸಂಕಲ್ಪೋ ವಿಚಿಕೀರ್ಷಿತಃ ॥೧೯॥

ಸಜ್ಜನರಲ್ಲಿ ಶ್ರೇಷ್ಠರಾದ ನೀವು ಬ್ರಹ್ಮದೇವರ ವಾಕ್ಯವನ್ನು ಸುಳ್ಳುಮಾಡಬಾರದು ಮತ್ತು ನಿಮ್ಮ ಸಂಕಲ್ಪವೂ ಸಹ ಸುಳ್ಳಾಗಬಾರದು.

ಭವತ್ತ್ವೇಷ ಪತತ್ರೀಣಾಮಿಂದ್ರೋಽತಿಬಲವಿಕ್ರಮಃ ।
ಪ್ರಸಾದಃ ಕ್ರಿಯತಾಂ ಚೈವ ದೇವರಾಜಾಯ ಯಾಚತೇ ॥೨೦॥

ಆದ್ದರಿಂದ ನೀವು ಉತ್ಪತ್ತಿಮಾಡಲು ಹೊರಟಿರುವವನು ಅಮಿತಬಲಪರಾಕ್ರಮವುಳ್ಳನಾಗಿ ಪಕ್ಷಿಗಳಿಗೆ ಇಂದ್ರನಾಗಲಿ. ಯಾಚನೆಯನ್ನು ಮಾಡುತ್ತಿರುವ ದೇವರಾಜನಿಗೆ ನೀವು ಅನುಗ್ರಹವನ್ನು ಮಾಡಿ.

ಏವಮುಕ್ತಾಃ ಕಾಶ್ಯಪೇನ ವಾಲಖಿಲ್ಯಾಸ್ತಪಸ್ವಿನಃ ।
ಪ್ರತ್ಯೂಚುರಭಿಸಂಪೂಜ್ಯ ಮುನಿಶ್ರೇಷ್ಠಂ ಪ್ರಜಾಪತಿಮ್ ॥೨೧॥

ಕಾಶ್ಯಪರಿಂದ ಹೀಗೆ ಹೇಳಲ್ಪಟ್ಟ ತಪಸ್ವಿಗಳಾದ ವಾಲಖಿಲ್ಯರು ಮುನಿಶ್ರೇಷ್ಠರಾದ, ಪ್ರಜಾಪತಿಗಳಾದ ಕಾಶ್ಯಪರನ್ನು ಪೂಜಿಸಿ ಮಾತನಾಡಿದರು.

ವಾಲಖಿಲ್ಯಾಃ

ಇಂದ್ರಾರ್ಥೋ೯ಽಯಂ ಸಮಾರಂಭಃ ಸರ್ವೇಷಾಂ ನಃ ಪ್ರಜಾಪತೇ ।
ಅಪತ್ಯಾರ್ಥಂ ಸಮಾರಂಭೋ ಭವತಶ್ಚಾಯಮೀಪ್ಸಿತಃ ॥೨೨॥

ಎಲೈ ಪ್ರಜಾಪತಿಯೇ, ನಮ್ಮೆಲ್ಲರ ಈ ಪ್ರಯತ್ನವು ಇಂದ್ರನ ಉತ್ಪತ್ತಿಯ ಸಲುವಾಗಿದೆ. ಪುತ್ರನನ್ನು ಅಪೇಕ್ಷಿಸುತ್ತಿರುವ ನಿಮಗೂ ಸಹ ಈ ನಮ್ಮ ಪ್ರಯತ್ನವು ಅಭೀಷ್ಟವೇ ಆಗಿರುತ್ತದೆ.

ತದಿದಂ ಸಕಲಂ ಕರ್ಮ ತ್ವಯಾ ವೈ ಪ್ರತಿಗೃಹ್ಯತಾಮ್ ।
ತಥಾ ಚೈವಂ ವಿಧತ್ಸ್ವಾತ್ರ ಯಥಾ ಶ್ರೇಯೋಽನುಪಶ್ಯಸಿ ॥೨೩॥

ಆದ್ದರಿಂದ ಈ ಸಮಗ್ರವಾದ ಕರ್ಮದ ಜವಾಬ್ದಾರಿಯನ್ನು ನೀವೇ ತೆಗೆದುಕೊಳ್ಳಿ. ಹೇಗೆ ಮಾಡಿದರೆ ಎಲ್ಲರಿಗೂ ಶ್ರೇಯಸ್ಸು ಉಂಟಾಗುತ್ತದೆ ಎಂದು ನೀವು ಭಾವಿಸುತ್ತೀರೋ ಅದರಂತೆಯೇ ಕರ್ಮವನ್ನು ಮಾಡಿ.

ಏತಸ್ಮಿನ್ನೇವ ಕಾಲೇ ತು ದೇವೀ ದಾಕ್ಷಾಯಣೀ ಶುಭಾ ।
ವಿನತಾ ನಾಮ ಕಲ್ಯಾಣೀ ಪುತ್ರಕಾಮಾ ಯಶಸ್ವಿನೀ ॥೨೪॥

ತಪಸ್ತಪ್ತ್ವಾ ವ್ರತಪರಾ ಸ್ನಾತಾ ಪುಂಸವನೇ ಶುಚಿಃ ।
ಉಪಚಕ್ರಾಮ ಭರ್ತಾರಂ ತಾಮುವಾಚಾಥ ಕಾಶ್ಯಪಃ ॥೨೫॥

ಇದೇ ಸಮಯದಲ್ಲಿ ದಕ್ಷಪ್ರಜಾಪತಿಯ ಪುತ್ರಿಯಾದ, ಪರಿಶುದ್ಧಳೂ, ಮಂಗಳಸ್ವರೂಪಳೂ, ಕೀರ್ತಿವಂತಳೂ ಆದ ವಿನತಾದೇವಿಯು, ವ್ರತಗಳನ್ನು ಧರಿಸಿ ತಪಸ್ಸನ್ನು ಮಾಡಿ, ಋತುಸ್ನಾತಳಾಗಿ ಪತಿಗಳಾದ ಕಾಶ್ಯಪರನ್ನು ಸಮೀಪಿಸಿದಳು. ಕಾಶ್ಯಪರು ಅವಳನ್ನು ಕುರಿತು ಹೇಳಿದರು.

ಆರಂಭಃ ಸಫಲೋ ದೇವಿ ಭವಿತಾಽಯಂ ತವೇಪ್ಸಿತಃ ।
ಜನಯಿಷ್ಯಸಿ ಪುತ್ರೌ ದ್ವೌ ವೀರೌ ತ್ರಿಭುವನೇಶ್ವರೌ ॥೨೬॥

ದೇವಿ, ನಿನ್ನ ಈ ಪ್ರಯತ್ನವು ಸಫಲವಾಗುತ್ತದೆ. ನಿನಗೆ ಅಭೀಷ್ಟರಾದ ಮೂರುಲೋಕಕ್ಕೂ ಒಡೆಯರಾದ ಮತ್ತು ವೀರರಾದ ಇಬ್ಬರು ಕುಮಾರರನ್ನು ಪಡೆಯುವಿ.

ತಪಸಾ ವಾಲಖಿಲ್ಯಾನಾಂ ಮಮ ಸಂಕಲ್ಪಜೌ ತಥಾ ।
ಭವಿಷ್ಯತೋ ಮಹಾಭಾಗೌ ಪುತ್ರೌ ತೇ ಲೋಕಪೂಜಿತೌ ॥೨೭॥

ವಾಲಖಿಲ್ಯರ ತಪಸ್ಸಿನಿಂದಲೂ ಮತ್ತು ನನ್ನ ಸಂಕಲ್ಪದಿಂದಲೂ ಸಹ, ನಿನಗೆ ಲೋಕಪೂಜಿತರಾದ, ಮಹಾನುಭಾವರಾದ ಇಬ್ಬರು ಮಕ್ಕಳು ಜನಿಸುವರು.

ಉವಾಚ ಚೈನಾಂ ಭಗವಾನ್ ಮಾರೀಚಃ ಪುನರೇವ ಹ ।
ಧಾರ್ಯತಾಮಪ್ರಮಾದೇನ ಗರ್ಭೋಽಯಂ ಸುಮಹೋದಯಃ ॥

ಮರೀಚಿಯಷಿಗಳ ಪುತ್ರರಾದ, ಪೂಜ್ಯರಾದ ಕಾಶ್ಯಪರು ಪುನಃ ಅವಳನ್ನು ಕುರಿತು, ಬಹಳಶ್ರೇಯಸ್ಸನ್ನು ಉಂಟುಮಾಡುವ ಈ ಗರ್ಭವನ್ನು ಎಚ್ಚರಿಕೆಯಿಂದ ಧರಿಸು ಎಂದು ಹೇಳಿದರು.

ಏತೌ ಸರ್ವಪತತ್ರೀಣಾಮಿಂದ್ರತ್ವಂ ಕಾರಯಿಷ್ಯತಃ ।
ಲೋಕಸಂಭಾವಿತೌ ವೀರೌ ಕಾಮವೀರ್ಯೌ ವಿಹಂಗಮೌ ॥೨೯॥

ಇವರಿಬ್ಬರೂ ಎಲ್ಲಾ ಪಕ್ಷಿಗಳ ಮೇಲೆಯೂ ಪ್ರಭುತ್ವವನ್ನು ಹೊಂದಿರುವವರು ಆಗುತ್ತಾರೆ. ಇವರಿಬ್ಬರೂ ಆಕಾಶದಲ್ಲಿ ಸಂಚರಿಸುತ್ತಾ ತಮಗೆ ಇಷ್ಟಬಂದಷ್ಟು ಬಲವನ್ನು ಹೊಂದಿದವರಾಗಿ, ವೀರರಾಗಿ ಎಲ್ಲರಿಂದಲೂ ಪೂಜಿಸಲ್ಪಡುತ್ತಾರೆ.

ಶತಕ್ರತುಮಥೋವಾಚ ಪ್ರೀಯಮಾಣಃ ಪ್ರಜಾಪತಿಃ ।
ತ್ವತ್ಸಹಾಯೌ ಸಖಾಯೌ ತೌ ಖಗಾವೇತೌ ಭವಿಷ್ಯತಃ ॥೩೦॥

ನೈತಾಭ್ಯಾಂ ಭವಿತಾ ದೋಷಃ ಸಕಾಶಾತ್ ತೇ ಪುರಂದರ ।
ವ್ಯೇತು ತೇ ಶಕ್ರ ಸಂತಾಪಸ್ತ್ವಮೇವೇಂದ್ರೋ ಭವಿಷ್ಯಸಿ ॥೩೧॥

ಅನಂತರ ಪ್ರಜಾಪತಿಗಳಾದ ಕಾಶ್ಯಪರು ಸಂತೋಷದಿಂದ ಇಂದ್ರನನ್ನು ಕುರಿತು, ಈ ಎರಡು ಪಕ್ಷಿಗಳೂ ನಿನ್ನ ಸ್ನೇಹಿತರಾಗುತ್ತಾರೆ. ಪುರಂದರನೇ, ನಿನಗೆ ಈ ಪಕ್ಷಿಗಳಿಂದ

ಯಾವ ಭಯವೂ ಇಲ್ಲ. ನಿನ್ನ ಮನಸ್ಸಿನ ಸಂತಾಪವನ್ನು ತ್ಯಜಿಸು. ನೀನೇ ಇಂದ್ರನಾಗಿರುವಿ ಎಂದು ಹೇಳಿದರು.

ನ ಚಾಪ್ಯೇವಂ ತ್ವಯಾ ಭೂಯಃ ಕ್ಷೇಪ್ತವ್ಯಾ ಬ್ರಹ್ಮವಾದಿನಃ ।
ನ ಚಾವಮಾನ್ಯಾ ದರ್ಪಾತ್ ತೇ ವಾಗ್ವಿಷಾ ಭೃಶಕೋಪನಾಃ ॥೩೨॥

ನೀನು ಇನ್ನೊಮ್ಮೆ ಬ್ರಹ್ಮವಾದಿಗಳನ್ನು ನಿಂದನೆ ಮಾಡಬಾರದು ಅಥವಾ ದರ್ಪದಿಂದ ಹೀಗೆ ಅವಮಾನ ಮಾಡಬಾರದು. ಬೇಗ ಕೋಪಗೊಳ್ಳುವ ಬ್ರಾಹ್ಮಣರ ವಾಣಿಯಲ್ಲಿಯೇ ವಿಷವಿರುತ್ತದೆ.

ಸೂತಃ

ಏವಮುಕ್ತೋ ಜಗಾಮೇಂದ್ರೋ ನಿರ್ವಿಶಂಕಸ್ತ್ರಿವಿಷ್ಟಪಮ್ ।
ವಿನತಾ ಚಾಪಿ ಸಿದ್ಧಾರ್ಥಾ ಬಭೂವ ಮುದಿತಾ ತದಾ ॥೩೩॥

ಹೀಗೆ ಹೇಳಲ್ಪಟ್ಟ ಇಂದ್ರನು ನಿಶ್ಶಂಕೆಯಿಂದ ಸ್ವರ್ಗಕ್ಕೆ ಹಿಂದಿರುಗಿದನು. ವಿನತೆಯೂ ಸಹ, ತನ್ನ ಅಭೀಷ್ಟವನ್ನು ಪಡೆದವಳಾಗಿ ಸಂತುಷ್ಟಳಾದಳು.

ಜನಯಾಮಾಸ ಪುತ್ರೌ ದ್ವಾವರುಣಂ ಗರುಡಂ ತಥಾ ।
ವಿಕಲಾಂಗೋऽರುಣಸ್ತತ್ರ ಆದಿತ್ಯಸ್ಯ ಪುರಸ್ಸರಃ ॥೩೪॥

ಕಾಲಕ್ರಮದಲ್ಲಿ ಅವಳು ಅರುಣ ಮತ್ತು ಗರುಡನೆಂಬ ಎರಡು ಪಕ್ಷಿಗಳಿಗೆ ಜನ್ಮವಿತ್ತಳು. ವಿಕಲಾವಯವವುಳ್ಳ ಅರುಣನು ಸೂರ್ಯನಿಗೆ ಸಾರಥಿಯಾದನು.

ಪತತ್ರಿಣಾಂ ತು ಗರುಡ ಇಂದ್ರತ್ವೇನಾಭ್ಯಷಿಚ್ಯತ ।
ತಸ್ಯೈತತ್ ಸುಮಹತ್ಕರ್ಮ ಶ್ರೂಯತಾಂ ಭೃಗುನಂದನ ॥೩೫॥

ಗರುಡನು ಪಕ್ಷಿಗಳ ರಾಜನಾಗಿ ಅಭಿಷೇಕಮಾಡಲ್ಪಟ್ಟನು. ಎಲೈ ಭೃಗುನಂದನನೇ, ಅವನು ಮಾಡಿದ ಈ ಮಹಾಕಾರ್ಯವನ್ನು ಕೇಳು.

॥ ಇತಿ ಶ್ರೀಮನ್ಮಹಾಭಾರತೇ ಶತಸಹಸ್ರಿಕಾಯಾಂಸಂಹಿತಾಯಾಮಾದಿಪರ್ವಣಿ ಷಡ್‌ವಿಂಶೋऽಧ್ಯಾಯಃ ॥

॥ ಇತಿ ಆಸ್ತೀಕಪರ್ವಣಿ ಚತುರ್ದಶೋऽಧ್ಯಾಯಃ ॥

ಇಲ್ಲಿಗೆ ಮಹಾಭಾರತದ ಆದಿಪರ್ವದಲ್ಲಿ ಇಪ್ಪತ್ತಾನಾರನೆಯ ಅಧ್ಯಾಯ ಮುಗಿಯಿತು.

ಇಪ್ಪತ್ತೇಳನೆಯ ಅಧ್ಯಾಯ

(ಗರುಡನ ಜೊತೆಯಲ್ಲಿ ಯುದ್ಧಮಾಡಿದ ದೇವತೆಗಳ ಮತ್ತು ಅಮೃತರಕ್ಷಕರ ಪರಾಭವ.)

ಸೂತಃ

ತತಸ್ತಸ್ಮಾದ್ ದ್ವಿಜಶ್ರೇಷ್ಠಃ ಸಮುತ್ತೀರ್ಣೋ ಮಹಾಬಲಃ ।
ಗರುತ್ಮಾನ್ ಪಕ್ಷಿರಾಟ್ ತೂರ್ಣಂ ಸಂಪ್ರಾಪ್ತೋ ವಿಬುಧಾನ್ ಪ್ರತಿ ॥

ಮಹಾಬಲನಾದ ಪಕ್ಷಿರಾಜನಾದ ಗರುಡನು, ಆ ಪರ್ವತಶ್ರೇಣಿಗಳನ್ನು ದಾಟಿ ಶೀಘ್ರವಾಗಿ ದೇವತೆಗಳ ಸಮೀಪಕ್ಕೆ ಬಂದನು.

ತಂ ದೃಷ್ಟ್ವಾತಿಬಲಂ ಚೈವ ಪ್ರಾಕಂಪಂತ ಸುರಾಸ್ತತಃ ।
ಪರಸ್ಪರಂ ಚ ಪ್ರತ್ಯಘ್ನನ್ ಸರ್ವಪ್ರಹರಣಾನ್ವಿತಾಃ ॥೨॥

ಅತಿಬಲಿಷ್ಠನಾದ ಅವನನ್ನು ನೋಡಿ ದೇವತೆಗಳು ನಡುಗಿದರು. ಅನಂತರ ಎಲ್ಲಾ ಆಯುಧಗಳಿಂದಲೂ ಕೂಡಿದವರಾಗಿ ಗರುಡನ ಜೊತೆಯಲ್ಲಿ ಪರಸ್ಪರವಾಗಿ ಯುದ್ಧಮಾಡಿದರು.

ತತ್ರ ಚಾಸೀದಮೇಯಾತ್ಮಾ ವಿದ್ಯುದಗ್ನಿಸಮಪ್ರಭಃ ।
ಭೌವನಃ ಸುಮಹಾವೀರ್ಯಃ ಸೋಮಸ್ಯ ಪರಿರಕ್ಷಿತಾ ॥೩॥

ಅಲ್ಲಿ ವಿದ್ಯುತ್ ಮತ್ತು ಅಗ್ನಿಗಳ ಸಮಾನವಾದ ಕಾಂತಿಯುಳ್ಳ, ಅಪರಿಮಿತವಾದ ಬಲವನ್ನೂ ಮಹಾಪರಾಕ್ರಮವನ್ನು ಹೊಂದಿದ್ದ ವಿಶ್ವಕರ್ಮನು ಅಮೃತದ ರಕ್ಷಕನಾಗಿದ್ದನು.

ಸ ತೇನ ಪತಗೇಂದ್ರೇಣ ಪಕ್ಷತುಂಡನಖೈಃ ಕ್ಷತಃ ।
ಮುಹೂರ್ತಮತುಳಂ ಯುದ್ಧಂ ಕೃತ್ವಾ ವಿನಿಹತೋ ಯುಧಿ ॥೪॥

ಅವನು ಒಂದು ಮುಹೂರ್ತದ ಕಾಲ ಗರುಡನ ಜೊತೆ ಯುದ್ಧಮಾಡಿ ಗರುಡನ ರೆಕ್ಕೆ, ಕೊಕ್ಕು ಮತ್ತು ಉಗುರುಗಳ ಹೊಡೆತಕ್ಕೆ ಸಿಲುಕಿ, ಯುದ್ಧದಲ್ಲಿ ನೆಲದ ಮೇಲೆ ಬಿದ್ದನು.

ರಜಶ್ಚೋದ್ಧೂಯ ಸುಮಹತ್ ಪಕ್ಷವಾತೇನ ಖೇಚರಃ ।
ಕೃತ್ವಾ ಲೋಕಾನ್ ನಿರಾಲೋಕಾನ್ ತೇನ ದೇವಾನವಾಕಿರತ್ ॥೫॥

ಗಗನಚರನಾದ ಗರುಡನು ತನ್ನ ರೆಕ್ಕೆಗಳ ಗಾಳಿಯಿಂದ ಬಹಳವಾದ ಧೂಳನ್ನು ಎಬ್ಬಿಸಿ, ಎಲ್ಲ ಲೋಕಗಳನ್ನು ಕತ್ತಲೆಯಿಂದ ಮುಚ್ಚಿ ದೇವತೆಗಳ ಮೇಲೆ ಆ ರಜೋರಾಶಿಯನ್ನು ಸುರಿಸಿದನು.

ತೇನಾವಕೀರ್ಣಾ ರಜಸಾ ದೇವಾ ಮೋಹಮುಪಾವಿಶನ್ ।
ನ ಚೈನಂ ದದೃಶುಶ್ಚನ್ನಾ ರಜಸಾऽಮೃತರಕ್ಷಿಣಃ ॥೬॥

ಆ ರಜೋರಾಶಿಯಿಂದ ಆವೃತರಾದ ದೇವತೆಗಳು ಮೋಹಕ್ಕೆ ಒಳಗಾದರು. ದೇವತೆಗಳಾಗಲೀ, ಅಮೃತಕಲಶದ ಕಾವಲುಗಾರರಾಗಲೀ, ಧೂಳಿನಿಂದ ತುಂಬಿದ ಕಾರಣದಿಂದ ಗರುಡನನ್ನು ನೋಡಲು ಸಾಧ್ಯವಾಗಲಿಲ್ಲ.

ಏವಂ ಸಂಲೋಳಯಾಮಾಸ ಗರುಡಸ್ತ್ರಿದಶಾಲಯಾನ್ ।
ಪಕ್ಷತುಂಡಪ್ರಹಾರೈಶ್ಚ ದೇವಾನ್ ಸ ವಿರರಾದ ಹ ॥೭॥

ಹೀಗೆ ಗರುಡನು ಸ್ವರ್ಗವಾಸಿಗಳನ್ನು ಅಲ್ಲೋಲಕಲ್ಲೋಲ ಮಾಡಿದನು. ತನ್ನ ರೆಕ್ಕೆಗಳ ಹೊಡೆತ ಮತ್ತು ಕೊಕ್ಕಿನ ಪ್ರಹಾರಗಳಿಂದ ದೇವತೆಗಳನ್ನು ಸೀಳಿದನು.

ತತೋ ದೇವಃ ಸಹಸ್ರಾಕ್ಷಃ ತೂರ್ಣಂ ವಾಯುಮಚೋದಯತ್ ।
ಪ್ರಕ್ಷಿಪೇಮಾಂ ರಜೋವೃಷ್ಟಿಂ ತವೈತತ್ ಕರ್ಮ ಮಾರುತ ॥೮॥

ಆಗ ಸಹಸ್ರಾಕ್ಷನಾದ ಇಂದ್ರನು ಶೀಘ್ರವಾಗಿ ವಾಯುವನ್ನು ಸಮೀಪಿಸಿ, ಮಾರುತನೇ, ಈ ರಜೋರಾಶಿಯನ್ನು ದೂರಕ್ಕೆ ಎಸೆ. ಇದು ನಿನ್ನ ಕೆಲಸ ಎಂದು ಹೇಳಿದನು.

ಅಥ ವಾಯುರಪೋವಾಹ ತದ್ರಜಸ್ತರಸಾ ಬಲೀ ।
ತತೋ ವಿತಿಮಿರೇ ಜಾತೇ ದೇವಾಃ ಶಕುನಿಮರ್ದಯನ್ ॥೯॥

ಅನಂತರ ಬಲಿಷ್ಠನಾದ ವಾಯುವು ಶೀಘ್ರವಾಗಿ ಆ ರಜೋರಾಶಿಯನ್ನು ನಿವಾರಿಸಿದನು. ಆಗ ಪುನಃ ಬೆಳಕು ಉಂಟಾದ ಮೇಲೆ ದೇವತೆಗಳು ಗರುಡನ ಮೇಲೆ ಎರಗಿ ಅವನನ್ನು ಹಿಂಸಿಸಿದರು. ಆಗ, ಮೇಘದಂತೆ ಗಂಭೀರನಾದವುಳ್ಳ, ಬಲಿಷ್ಠನಾದ ಗರುಡನು ಉಚ್ಚಸ್ವರದಲ್ಲಿ ಗರ್ಜಿಸಿದನು.

ನನಾದ ಚೋಚ್ಚೈರ್ಬಲವಾನ್ ಮೇಘನಾದರವಃ ಖಗಃ ।
ವಧ್ಯಮಾನಃ ಸುರಗಣೈಸ್ಸರ್ವಭೂತಾನಿ ಭೀಷಯನ್ ।
ಉತ್ಪಪಾತ ಮಹಾವೀರ್ಯಃ ಪಕ್ಷಿರಾಟ್ ಪರವೀರಹಾ ॥೧೦॥

ಎಲ್ಲಾ ದೇವತೆಗಳಿಂದ ಪ್ರಹಾರಕ್ಕೆ ಒಳಗಾದ ಮಹಾಬಲನಾದ, ಶತ್ರುಸೂದನನಾದ ಗರುಡನು, ಎಲ್ಲಾ ಪ್ರಾಣಿಗಳಿಗೂ ಭಯವನ್ನುಂಟು ಮಾಡುತ್ತಾ, ಅಲ್ಲಿಂದ ಮೇಲಕ್ಕೆ ಹಾರಿದನು.

ತಮುಪೇತ್ಯಾಂತರಿಕ್ಷಸ್ಥಂ ದೇವಾನಾಮುಪರಿ ಸ್ಥಿತಮ್ ।
ವರ್ಮಿಣೋ ವಿಬುಧಾಃ ಸರ್ವೇ ನಾನಾಶಸ್ತ್ರೈರವಾಕಿರನ್ ॥೧೧॥

ಪಟ್ಟಸೈಃ ಪರಿಘೈಃ ಶೂಲೈರ್ಗದಾಭಿಶ್ಚ ಸವಾಸವಾಃ ।
ಕ್ಷುರಪ್ರೈರ್ಜ್ವಲಿತೈಶ್ಚಾಪಿ ಚಕ್ರೈರಾದಿತ್ಯರೂಪಿಭಿಃ ॥೧೨॥

ಅಂತರಿಕ್ಷಕ್ಕೆ ಹಾರಿ ದೇವತೆಗಳ ತಲೆಯ ಮೇಲೆ ನಿಂತ ಅವನನ್ನು, ಕವಚಗಳನ್ನು ಧರಿಸಿದ್ದ ದೇವತೆಗಳು, ಪಟ್ಟಸ, ಪರಿಘ, ಶೂಲ, ಗದಾ, ಚೆನ್ನಾಗಿ ಮಸೆದ ಚಕ್ರಗಳು, ಸೂರ್ಯನಂತೆ ಜ್ವಲಿಸುವ ಚಕ್ರಗಳು, ಮೊದಲಾದ ಅನೇಕ ಶಸ್ತ್ರಗಳಿಂದ ಅವನನ್ನು ಅರ್ದಿಸಿದರು. (ನಾನಾ ಶಸ್ತ್ರಗಳ ಮಳೆಯನ್ನು ಅವನ ಮೇಲೆ ಸುರಿಸಿದರು.)

ನಾನಾಶಸ್ತ್ರವಿಸರ್ಗೈಶ್ಚ ವಧ್ಯಮಾನಃ ಸಮಂತತಃ ।
ಕುರ್ವನ್ ಸುತುಮುಲಂ ಯುದ್ಧಂ ಪಕ್ಷಿರಾಣ್ನ ಹ್ಯಕಂಪತ ॥೧೩॥

ಎಲ್ಲಾ ಕಡೆಯಿಂದಲೂ ಹೀಗೆ ಅನೇಕ ಶಸ್ತ್ರಗಳ ಪ್ರಹಾರಕ್ಕೆ ಒಳಗಾದ ಪಕ್ಷಿರಾಜನಾದ ಗರುಡನು, ಸ್ವಲ್ಪವೂ ಅಲುಗಾಡದೆ, ಘೋರವಾದ ಯುದ್ಧವನ್ನು ಮಾಡಿದನು.

ವಿನರ್ದನ್ನಿವ ಚಾಕಾಶೇ ವೈನತೇಯಃ ಪ್ರತಾಪವಾನ್ ।
ಪಕ್ಷಾಭ್ಯಾಮುರಸಾ ಚೈವ ಸಮಂತಾದ್ ವ್ಯಾಕ್ಷಿಪತ್ ಸುರಾನ್ ॥೧೪॥

ಪ್ರತಾಪಶಾಲಿಯಾದ ಗರುಡನು ಆಕಾಶದಲ್ಲಿ ಗರ್ಜಿಸುತ್ತಾ ಎಲ್ಲಾ ಕಡೆಗಳಲ್ಲಿಯೂ ಇದ್ದ ದೇವತೆಗಳನ್ನು ತನ್ನ ರೆಕ್ಕೆಯಿಂದಲೂ, ತನ್ನ ಎದೆಯಿಂದಲೂ ದೂರಕ್ಕೆ ಎಸೆದನು.

ತೇ ವಿಕ್ಷಿಪ್ತಾಸ್ತತೋ ದೇವಾಃ ಪ್ರಜಗ್ಮುರ್ಗರುಡಾರ್ದಿತಾಃ ।
ನಖತುಂಡಹತಾಶ್ಚೈವ ಸುಸ್ರುವುಃ ಶೋಣಿತಂ ಬಹು ॥೧೫॥

ಹೀಗೆ ದೂರಕ್ಕೆ ಎಸೆಯಲ್ಪಟ್ಟ ದೇವತೆಗಳು, ನಖತುಂಡಪ್ರಹಾರಗಳಿಗೆ ಒಳಗಾದವರಾಗಿ, ಬಹಳವಾಗಿ ರಕ್ತವನ್ನು ಸುರಿಸುತ್ತಾ, ಅಲ್ಲಿಂದ ಹೊರಟುಹೋದರು.

ಸಾಧ್ಯಾಃ ಪ್ರಾಚೀಂ ಸಗಂಧರ್ವಾ ವಸವೋ ದಕ್ಷಿಣಾಂ ದಿಶಮ್ ।
ಪ್ರಜಗ್ಮುಃ ಸಹಿತಾ ರುದ್ರೈಃ ಪತಗೇಂದ್ರಪ್ರಧರ್ಷಿತಾಃ ।
ದಿಶಂ ಪ್ರತೀಚೀಮಾದಿತ್ಯಾ ನಾಸತ್ಯೌ ಚೋತ್ತರಾಂ ದಿಶಾಮ್ ॥೧೬॥

ಸಾಧ್ಯರು ಮತ್ತು ಗಂಧರ್ವರು ಪೂರ್ವದಿಕ್ಕಿಗೆ ಹೊರಟುಹೋದರು. ವಸುಗಳು ದಕ್ಷಿಣದಿಕ್ಕಿಗೆ ಹೊರಟುಹೋದರು. ಗರುಡನಿಂದ ಪ್ರಧರ್ಷಿತರಾದ ಆದಿತ್ಯರು ರುದ್ರರ ಜೊತೆಯಲ್ಲಿ ಪಶ್ಚಿಮದಿಕ್ಕಿಗೆ ಹೊರಟುಹೋದರು. ಅಶ್ವಿನಿದೇವತೆಗಳು ಉತ್ತರದಿಕ್ಕಿಗೆ ಹೊರಟುಹೋದರು.

ಮುಹುರ್ಮುಹುಃ ಪ್ರೇಕ್ಷಮಾಣಾ ಯುದ್ಧ್ಯಮಾನಮನೇಕಶಃ ॥೧೭॥

ಹೀಗೆ ಹೋದವರು ಇನ್ನೂ ಯುದ್ಧಮಾಡುವವರನ್ನು ತಿರುತಿರುಗಿ ನೋಡುತ್ತಾ, ತಮ್ಮ ದಾರಿಯಲ್ಲಿ ತಾವು ಹೊರಟರು.

ಅಶ್ವಕ್ರಂದೇನ ವೀರೇಣ ರೇಣುಕೇನ ಚ ಪಕ್ಷಿಣಾ ।
ಉಲೂಕಶ್ವಸನಾಭ್ಯಾಂ ಚ ನಿಮೇಷೇಣ ಚ ಪಕ್ಷಿಣಾ ॥೧೮॥

ಕಥನೇನ ಚ ಶೂರೇಣ ತಪನೇನ ಚ ಖೇಚರಃ ।
ಪುರುಜೇನ ಚ ಸಂಯುದ್ಧಂ ಚಕಾರ ಪ್ರಹಿಲೇನ ಚ ॥೧೯॥

ತಾನ್ ಪಕ್ಷನಖತುಂಡಾಗ್ರೈಃ ರರಾದ ವಿನತಾಸುತಃ ।
ಯುಗಾಂತಕಾಲೇ ಸಂಕ್ರುದ್ಧಃ ಪಿನಾಕೀವ ಮಹಾಬಲಃ ॥೨೦॥

ಅಮೃತರಕ್ಷಕರಾದ ವೀರರಾದ ಅಶ್ವಕ್ರಂದ, ರೇಣುಕ, ಉಲೂಕ, ಶ್ವಸನ, ನಿಮೇಷ, ಕಥನ, ಶೂರ, ತಪನ, ಪುರುಜ, ಪ್ರಲಿಹ, ಈ ಎಲ್ಲಾ ಪಕ್ಷಿಗಳ ಜೊತೆಯಲ್ಲಿಯೂ

ಯುದ್ಧಮಾಡಿ, ಯುಗಾಂತಕಾಲದಲ್ಲಿ ಕೋಪಗೊಂಡ ರುದ್ರನಂತೆ ಇದ್ದ, ಮಹಾಬಲನಾದ, ವಿನತೆಯ ಪುತ್ರನಾದ ಗರುಡನು ಅವರೆಲ್ಲರನ್ನೂ ತನ್ನ ಪಕ್ಷ, ನಖತುಂಡಗಳಿಂದ ಸೀಳಿದನು.

ಮಹಾವೀರ್ಯಾ ಮಹೋತ್ಸಾಹಾಸ್ತೇನ ತೇ ಬಹುಧಾ ಕ್ಷತಾಃ ।
ರೇಜುರಭ್ರಘನಪ್ರಖ್ಯಾ ರುಧಿರೌಘಪ್ರವರ್ಷಿಣಃ ॥೨೧॥

ಮಹಾಬಲವುಳ್ಳವರೂ, ಮಹಾಉತ್ಸಾಹವುಳ್ಳವರೂ ಆದ ಅವರೆಲ್ಲರೂ, ಗರುಡನಿಂದ ಬಹಳ ಗಾಯಗೊಂಡವರಾಗಿ ರಕ್ತವನ್ನು ಸುರಿಸುತ್ತಾ, ಮೋಡಗಳ ಪಂಕ್ತಿಯಂತೆ ಕಂಗೊಳಿಸಿದರು.

ತಾನ್ ಕೃತ್ವಾ ಪತಗಶ್ರೇಷ್ಠಃ ಸರ್ವಾನುತ್ಸಾಂತಜೀವಿತಾನ್ ।
ಅತಿಕ್ರಾಂತೋಽಮೃತಸ್ಯಾರ್ಥೇ ಸರ್ವತೋಽಗ್ನಿಮಪಶ್ಯತ ॥೨೨॥

ಆವೃಣ್ವಾನಂ ಮಹಾಜ್ವಾಲಮರ್ಚಿರ್ಭಿಃ ಸರ್ವತೋ ದಿಶಮ್ ।
ದಹಂತಮಿವ ದೀಪ್ತಾಂಶುಂ ಘೋರವಾಯುಸಮೀರಿತಮ್ ॥೨೩॥

ಪಕ್ಷಿಶ್ರೇಷ್ಠನಾದ ಗರುಡನು ಅವರೆಲ್ಲರನ್ನೂ ಸಂಹರಿಸಿ, ಅವರನ್ನು ದಾಟಿ, ಅಮೃತದ ಕಲಶದ ಬಳಿಗೆ ಹೋಗುತ್ತಾ, ಮಹಾಜ್ವಾಲೆಗಳಿಂದ ಎಲ್ಲಾ ದಿಕ್ಕುಗಳಲ್ಲೂ ವ್ಯಾಪಿಸಿದ ಉರಿಯುತ್ತಿರುವ ಸೂರ್ಯನಂತೆ ತೋರುವ, ಘೋರವಾಯುವಿನಿಂದ ಉದ್ದೀಪ್ತವಾದ ಅಗ್ನಿಯನ್ನು ನೋಡಿದನು.

ತತೋ ನವತ್ಯಾ ನವತಿಂ ಮುಖಾನಾಂ
ಕೃತ್ವಾ ತರಸ್ವೀ ಗರುಡೋ ಮಹಾತ್ಮಾ ।
ನದೀಃ ಸಮಾಪೀಯ ಮುಖೈಸ್ತತಸ್ತೈಃ
ಸ ಶೀಘ್ರಮಾಗತ್ಯ ಪುನರ್ಜವೇನ ॥೨೪॥

ಜ್ವಲಂತಮಗ್ನಿಂ ತಮಮಿತ್ರತಾಪನಃ
ಸಮಾವೃಣೋತ್ ಪತ್ರರಥೋ ನದೀಭಿಃ ।
ತತಃ ಸ ಚಕ್ರೇ ವಪುರನ್ಯದಲ್ಪಂ
ಪ್ರವೇಷ್ಟುಕಾಮೋಽಗ್ನಿಮಭಿಪ್ರಶಾಮ್ಯ ॥೨೫॥

ಆಗ, ಮಹಾತ್ಮನೂ, ವೇಗಶಾಲಿಯೂ ಆದ ಗರುಡನು ದೊಡ್ಡರೂಪವನ್ನು ಧರಿಸಿ, ಎಂಟುಸಾವಿರದ ನೂರು ಮುಖಿಗಳನ್ನು ಮಾಡಿಕೊಂಡು, ಆ ಎಲ್ಲಾ ಮುಖಿಗಳಲ್ಲಿಯೂ ನದಿಯ ನೀರನ್ನು ತುಂಬಿಕೊಂಡು, ಶೀಘ್ರವಾಗಿ ಹಿಂದಕ್ಕೆ ಬಂದು ಆ ನದಿಯ ನೀರಿನಿಂದ ಅಗ್ನಿಯನ್ನು ಶಮನಗೊಳಿಸಿದನು. ಶತ್ರುತಾಪನನಾದ, ಪತ್ರರಥನಾದ ಗರುಡನು, ಅಗ್ನಿಯನ್ನು ಶಮನಗೊಳಿಸಿ, ಅಮೃತದ ಕಲಶದ ಬಳಿಗೆ ಹೋಗಲು ಒಂದು ಅಲ್ಪವಾದ ರೂಪವನ್ನು ಧರಿಸಿದನು.

॥ ಇತಿ ಶ್ರೀಮನ್ಮಹಾಭಾರತೇ ಶತಸಹಸ್ರಿಕಾಯಾಂಸಂಹಿತಾಯಾಮಾದಿಪರ್ವಣಿ ಸಪ್ತವಿಂಶೋಽಧ್ಯಾಯಃ ॥

॥ ಇತಿ ಆಸ್ತೀಕಪರ್ವಣಿ ಪಂಚದಶೋಽಧ್ಯಾಯಃ ॥

ಇಲ್ಲಿಗೆ ಮಹಾಭಾರತದ ಆದಿಪರ್ವದಲ್ಲಿ ಇಪ್ಪತ್ತೇಳನೆಯ ಅಧ್ಯಾಯ ಮುಗಿಯಿತು.

★★★★★

ಇಪ್ಪತ್ತೆಂಟನೆಯ ಅಧ್ಯಾಯ

(ಯಂತ್ರವನ್ನು ಭೇದಿಸಿ ಗರುಡನಿಂದ ಅಮೃತಹರಣ. ವಿಷ್ಣು ಗರುಡರ ಸಂವಾದ, ಗರುಡನಲ್ಲಿ ವಜ್ರದ ವೈಫಲ್ಯ.)

ಸೂತಃ

ಜಾಂಬೂನದಮಯೋ ಭೂತ್ವಾ ಮರೀಚಿವಿಕಚೋಜ್ಜ್ವಲಃ ।
ಸ ಚಕ್ರಂ ಕ್ಷುರಪರ್ಯಂತಮಪಶ್ಯದಮೃತಾಂತಿಕೇ ॥೧॥

ಗರುಡನು ಕಿರಣಗಳ ಸಮೂಹದಿಂದ ಕಂಗೊಳಿಸುವ ಸುವರ್ಣಮಯವಾದ ಒಂದು ಸಣ್ಣರೂಪವನ್ನು ತಳೆದು ಅಮೃತದ ಸಮೀಪದಲ್ಲಿ ಕತ್ತಿಯ ಅಲುಗಿನಂತೆ ಹರಿತವಾದ ಅಂಚುಗಳನ್ನು ಹೊಂದಿರುವ ಒಂದು ಚಕ್ರವನ್ನು ನೋಡಿದನು.

ಪರಿಭ್ರಮಂತಮನಿಶಂ ತೀಕ್ಷ್ಣಧಾರಮಯಸ್ಮಯಮ್ ।
ಜ್ವಲನಾರ್ಕಪ್ರಭಂ ಘೋರಂ ಛೇದನಂ ಸೋಮಹಾರಿಣಾಮ್ ॥೨॥

ಘೋರರೂಪಂ ತದತ್ಯರ್ಥಂ ಯಂತ್ರಂ ದೇವೈಃ ಸುನಿರ್ಮಿತಮ್ ।
ತಸ್ಯಾಂತರಂ ಸ ದೃಷ್ಟ್ವೈವ ಪರ್ಯವರ್ತತ ಖೇಚರಃ ॥೩॥

ತೀಕ್ಷ್ಣಧಾರೆಯುಳ್ಳ, ಕಬ್ಬಿಣದಿಂದ ಮಾಡಲ್ಪಟ್ಟ, ಯಾವಾಗಲೂ ಸುತ್ತುತ್ತಿರುವ, ಅಗ್ನಿಸೂರ್ಯರ ತೇಜಸ್ಸನ್ನು ಹೊಂದಿದ, ಘೋರವಾದ, ಅಮೃತವನ್ನು ಕದಿಯಲು ಪ್ರಯತ್ನಿಸಿದವರನ್ನು ಕತ್ತರಿಸುವ, ಘೋರರೂಪವಾದ, ದೇವತೆಗಳಿಂದ ನಿರ್ಮಿಸಿ ಸ್ಥಾಪಿಸಲ್ಪಟ್ಟ ಆ ಯಂತ್ರವನ್ನು ನೋಡಿ, ಅಲ್ಲಿ ಅವಕಾಶವನ್ನು ನೋಡುವ ದೃಷ್ಟಿಯಿಂದಲೇ ಆ ಚಕ್ರದ ಸುತ್ತಲೂ ಸಂಚರಿಸಿದನು.

ಪ್ರವಿವೇಶ ಬಲಾತ್ ಪಕ್ಷೀ ವಾರಿವೇಗ ಇವಾರ್ಣವಃ ।
ಅರಾಂತರೇಣಾಭ್ಯಪತತ್ ಸಂಕ್ಷಿಪ್ಯಾಂಗಂ ಕ್ಷಣೇನ ಹ ॥೪॥

ಜಲಪ್ರವಾಹವೇಗವು ಸಮುದ್ರವನ್ನು ಪ್ರವೇಶಿಸುವಂತೆ, ವೇಗ ಮತ್ತು ಬಲಗಳಿಂದ ಕೂಡಿದವನಾಗಿ ತನ್ನ ಶರೀರವನ್ನು ಇನ್ನೂ ಕುಗ್ಗಿಸಿ ಗರುಡನು ಒಂದು ಕ್ಷಣದಲ್ಲಿ ಆ ತಿರುಗುತ್ತಿದ್ದ ಚಕ್ರದ ಅರಗಳ ಮಧ್ಯದಲ್ಲಿ ಪ್ರವೇಶಿಸಿದನು.

ಅಧಶ್ಚಕ್ರಸ್ಯ ಚೈವಾತ್ರ ದೀಪ್ತಾನಲಸಮದ್ಯುತೀ ।
ವಿದ್ಯುಜ್ಜಿಹ್ವೌ ಮಹಾಕಾಯೌ ದೀಪ್ತಾಸ್ಯೌ ದೀಪ್ತಲೋಚನೌ ॥೫॥

ಚಕ್ಷುರ್ವಿಷೌ ಮಹಾವೀರ್ಯೌ ನಿತ್ಯಂ ಕ್ರುದ್ಧೌ ತರಸ್ವಿನೌ ।
ರಕ್ಷಾರ್ಥಮೇವಾಮೃತಸ್ಯ ದದರ್ಶ ಭುಜಗೋತ್ತಮೌ ॥೬॥

ಅವನು ಹಾಗೆ ಪ್ರವೇಶಿಸಿ, ಚಕ್ರದ ಕೆಳಗಿದ್ದ, ಉರಿಯುವ ಅಗ್ನಿಯ ಕಾಂತಿಯನ್ನು ಹೊಂದಿದ್ದ, ವಿದ್ಯುತ್ತಿನಂತಹ ನಾಲಿಗೆಗಳನ್ನು ಹೊಂದಿದ್ದ, ಉರಿಯುವ ಕಣ್ಣುಗಳನ್ನೂ ಮತ್ತು ಮುಖವನ್ನೂ ಹೊಂದಿ, ಕಣ್ಣಿನಲ್ಲಿಯೇ ವಿಷವನ್ನು ಹೊಂದಿದ್ದ, ಮಹಾಬಲವುಳ್ಳ ಯಾವಾಗಲೂ ಸಂಕ್ರುದ್ಧವಾಗಿರುವ, ವೇಗದಿಂದ ಕೂಡಿರುವ, ಅಮೃತಕಲಶದ ರಕ್ಷಣೆಯನ್ನು ಮಾಡುತ್ತಿರುವ, ಎರಡು ಶ್ರೇಷ್ಠವಾದ ಸರ್ಪಗಳನ್ನು ನೋಡಿದನು.

ಸದಾ ಸಂರಬ್ಧನಯನೌ ಸದಾ ಚಾನಿಮಿಷೇಕ್ಷಣೌ ।
ತಯೋರೇಕೋಽಪಿ ಯಂ ಪಶ್ಯೇತ್ ಸ ತೂರ್ಣಂ ಭಸ್ಮಸಾದ್ ಭವೇತ್ ॥

ಅವು ಯಾವಾಗಲೂ ಕೋಪದಿಂದ ಕೂಡಿದ ನಯನವುಳ್ಳವುಗಳಾಗಿ, ಎಂದೂ ಕಣ್ಣುಗಳನ್ನು ಮುಚ್ಚದೆ ನೋಡುತ್ತಿದ್ದವು. ಅವುಗಳಲ್ಲಿ ಒಂದು ಸರ್ಪವನ್ನು ನೋಡಿದ ಮನುಷ್ಯನೂ, ತಕ್ಷಣವೇ ಭಸ್ಮವಾಗುತ್ತಾನೆ.

ತಯೋಶ್ಚಕ್ಷೂಂಷಿ ರಜಸಾ ಸುಪರ್ಣಸ್ತೂರ್ಣಮಾವೃಣೋತ್ ।
ಅದೃಷ್ಟಪೂರ್ವಸ್ತೌ ಜಾಪಿ ಸರ್ವತಃ ಪರ್ಯಕಾಲಯತ್ ॥೮॥

ಹಿಂದೆ ಎಂದೂ ನೋಡದಿದ್ದ, ಆ ಸರ್ಪಗಳನ್ನು ನೋಡಿ ಗರುಡನು ಧೂಳಿನಿಂದ ಅವುಗಳ ಕಣ್ಣುಗಳನ್ನು ಮುಚ್ಚಿ ಎಲ್ಲಾ ಕಡೆಗಳಲ್ಲಿಯೂ ಅವುಗಳನ್ನು ಘಾಸಿಗೊಳಿಸಿದನು.

ತಯೋರಂಗೇ ಸಮಾಕ್ರಮ್ಯ ವೈನತೇಯೋಽಂತರಿಕ್ಷಗಃ ।
ಆಚ್ಛಿನತ್ ತರಸಾ ಮಧ್ಯೇ ಸೋಮಮಭ್ಯದ್ರವತ್ ತತಃ ॥೯॥

ಅಂತರಿಕ್ಷಚಾರಿಯಾದ ಗರುಡನು ಅವುಗಳ ಶರೀರದ ಮೇಲೆ ಕುಳಿತು ತನ್ನ ಕೊಕ್ಕಿನಿಂದ ಮಧ್ಯಭಾಗವನ್ನು ಸೀಳಿ, ಅಮೃತಕಲಶದ ಕಡೆಗೆ ಧಾವಿಸಿದನು.

ಸಮುತ್ಪಾಟ್ಯಾಮೃತಂ ತತ್ತು ವೈನತೇಯಸ್ತತೋ ಬಲೀ ।
ಉತ್ಪಪಾತ ಜವೇನೈವ ಯಂತ್ರಮುನ್ಮಥ್ಯ ವೀರ್ಯವಾನ್ ॥೧೦॥

ಬಲಿಷ್ಠನಾದ ವೈನತೇಯನು ಅಮೃತಕಲಶವನ್ನು ಅಲ್ಲಿಂದ ಎತ್ತಿ, ಯಂತ್ರವನ್ನು ನಾಶಗೊಳಿಸಿ, ಪರಾಕ್ರಮಶಾಲಿಯಾದ ಅವನು ವೇಗದಿಂದ ಅಂತರಿಕ್ಷಕ್ಕೆ ಹಾರಿದನು..

ಅಪೀತ್ವೈವಾಮೃತಂ ಪಕ್ಷೀ ಪರಿಗೃಹ್ಯಾಶು ವೀರ್ಯವಾನ್ ।
ಆಗಚ್ಛದಪರಿಶ್ರಾಂತ ಆಚ್ಛಾದ್ಯಾರ್ಕಪ್ರಭಾಂ ಖಗಃ ॥೧೧॥

ಗಗನಚಾರಿಯಾದ ಮತ್ತು ಪರಾಕ್ರಮಶಾಲಿಯಾದ ಗರುಡನು, ಅಮೃತದ ಕಲಶವನ್ನು ತೆಗೆದುಕೊಂಡು ಅಮೃತವನ್ನು ಪಾನಮಾಡದೆಯೇ, ಸೂರ್ಯನ ಕಾಂತಿಯನ್ನು ಆಚ್ಛಾದಿಸಿ, ಯಾವ ಶ್ರಮವಿಲ್ಲದೆ, ಮುಂದೆ ಹೊರಟನು.

ವಿಷ್ಣುನಾ ಚ ತದಾಕಾಶೇ ವೈನತೇಯಃ ಸಮೇಯಿವಾನ್ ।
ತಸ್ಯ ನಾರಾಯಣಸ್ತುಷ್ಟಸ್ತೇನಾತುಲ್ಯೇನ ಕರ್ಮಣಾ ॥೧೨॥

ಹಾಗೆ ಹೊರಟ ಗರುಡನು ಆಕಾಶದಲ್ಲಿ ವಿಷ್ಣುವನ್ನು ಸಂಧಿಸಿದನು. ನಾರಾಯಣನಾದರೋ ಅವನ ಅಸದೃಶಕರ್ಮದಿಂದ ಅವನಿಗೆ ಸಂತುಷ್ಟನಾದನು.

ತಮುವಾಚಾವ್ಯಯೋ ದೇವೋ ವರದೋಽಸ್ಮೀತಿ ಖೇಚರಮ್ ।
ಸ ವವ್ರೇ ತವ ತಿಷ್ಠೇಯಮುಪರೀತ್ಯಂತರಿಕ್ಷಗಃ ॥೧೩॥

ಅವ್ಯಯನಾದ ನಾರಾಯಣನು ಗರುಡನನ್ನು ಕುರಿತು, ನಾನು ವರವನ್ನು ಕೊಡುತ್ತೇನೆ, ಕೇಳು ಎಂದು ಹೇಳಿದನು. ಅಂತರಿಕ್ಷಚಾರಿಯಾದ ಆ ಗರುಡನು, ನಾನು ನಿನ್ನ ಶಿರಸ್ಸಿನ ಮೇಲೆ ಇರುತ್ತೇನೆ ಎಂದು ವರವನ್ನು ಕೇಳಿದನು.

ವಿಷ್ಣುವಿನ ರಥದ ಧ್ವಜದಲ್ಲಿ ಮೇಲ್ಭಾಗದಲ್ಲಿ ಗರುಡನು ಇರುವುದರಿಂದ ವಿಷ್ಣುವಿನ ಶಿರಸ್ಸಿಗಿಂತಲೂ ಎತ್ತರದ ಪ್ರದೇಶದಲ್ಲಿ ಇದ್ದಂತಾಗುತ್ತದೆ ಎಂದು ಅಭಿಪ್ರಾಯ.

ಉವಾಚ ಚೈನಂ ಭೂಯೋಽಪಿ ನಾರಾಯಣಮಿದಂ ವಚಃ ।
ಅಜರಶ್ಚಾಮೃತಶ್ಚ ಸ್ಯಾಮಮೃತೇನ ವಿನಾಽಪ್ಯಹಮ್ ॥೧೪॥

ಪುನಃ ನಾರಾಯಣನನ್ನು ಕುರಿತು, ನಾನು ಅಮೃತಪಾನ ಮಾಡದೆಯೂ ಜರಾಮರಣರಹಿತನಾಗಬೇಕು ಎಂದು ಹೇಳಿದನು (ವರವನ್ನು ಕೇಳಿದನು).

ಏವಮಸ್ತ್ವಿತಿ ತಂ ವಿಷ್ಣುರುವಾಚ ವಿನತಾಸುತಮ್ ।
ಪ್ರತಿಗೃಹ್ಯ ವರೌ ತೌ ತು ಗರುಡೋ ವಿಷ್ಣುಮಬ್ರವೀತ್ ॥೧೫॥

ವಿಷ್ಣುವು ವಿನತೆಯ ಪುತ್ರನಾದ ಗರುಡನನ್ನು ಕುರಿತು ''ಹಾಗೆಯೇ ಆಗಲಿ'' ಎಂದು ಹೇಳಿದನು. ಗರುಡನು ಆ ಎರಡು ವರಗಳನ್ನು ಸ್ವೀಕರಿಸಿ ವಿಷ್ಣುವನ್ನು ಕುರಿತು ಹೇಳಿದನು.

ಭವತೋಽಪಿ ವರಂ ದದ್ಮಿ ವೃಣೋತು ಭಗವಾನಪಿ ।
ತಂ ವವ್ರೇ ವಾಹನಂ ಕೃಷ್ಣೋ ಗರುತ್ಮಂತಂ ಮಹಾಬಲಮ್ ॥೧೬॥

ನಿನಗೂ ವರವನ್ನು ಕೊಡುತ್ತೇನೆ. ಭಗವಂತನಾದ ನೀನೂ ವರವನ್ನು ಕೇಳು ಎಂದು ಹೇಳಲು, ಕೃಷ್ಣನು ಮಹಾಬಲನಾದ ಗರುಡನನ್ನು ನೀನು ನನ್ನ ವಾಹನವಾಗಿರು ಎಂದು ವರವನ್ನು ಕೇಳಿದನು.

ಧ್ವಜಂ ಚ ಚಕ್ರೇ ಭಗವಾನ್ ಉಪರಿ ಸ್ಥಾಸ್ಯಸೀತಿ ತಮ್ ।
ತಥೇತ್ಯೇವಾಬ್ರವೀತ್ ಪಕ್ಷೀ ಭಗವಂತಂ ಸನಾತನಮ್ ॥೧೭॥

ಭಗವಂತನು ''ಅಷ್ಟೇ ಅಲ್ಲದೆ, ನೀನು ನನ್ನ ಧ್ವಜದಲ್ಲಿಯೂ ಇರಬೇಕು. ಆಗ ನನ್ನ ಮೇಲೆ ಇರುತ್ತಿಯೆ'' ಎಂದು ಹೇಳಿದನು. ಗರುಡನು ಸನಾತನನಾದ ಭಗವಂತನನ್ನು ಕುರಿತು ''ಹಾಗೆಯೇ ಆಗಲಿ'' ಎಂದು ಹೇಳಿದನು.

ಅನುಗಮ್ಯ ಖಗಂ ತ್ವಿಂದ್ರೋ ವಜ್ರೇಣಾಂಗೇ ನ್ಯಪಾತಯತ್ ।
ವಿಹಂಗಮಂ ಸುರಾನ್ ಜಿತ್ವಾ ಹರಂತಮಮೃತಂ ಬಲಾತ್ ॥೧೮॥

ಆ ವೇಳೆಗೆ ದೇವತೆಗಳನ್ನು ಜಯಿಸಿ ತನ್ನ ಬಲದಿಂದ ಅಮೃತವನ್ನು ಅಪಹರಿಸಿಕೊಂಡು ಹೋಗುತ್ತಿದ್ದಂತಹ, ಗರುಡನನ್ನು ಹಿಂಬಾಲಿಸಿ ಇಂದ್ರನು ಅವನ ಮೇಲೆ ವಜ್ರಾಯುಧವನ್ನು ಪ್ರಯೋಗಿಸಿದನು.

ತಮುವಾಚೇಂದ್ರಮಾಲೋಕ್ಯ ಗರುಡಃ ಪತತಾಂ ವರಃ ।
ಪ್ರಹಸನ್ ಶ್ಲಕ್ಷ್ಣಯಾ ವಾಚಾ ತಥಾ ವಜ್ರಸಮಾಹತಃ ॥೧೯॥

ವಜ್ರದಿಂದ ಹೀಗೆ ಹೊಡೆಯಲ್ಪಟ್ಟ ಪಕ್ಷಿಶ್ರೇಷ್ಠನಾದ ಗರುಡನು, ಇಂದ್ರನನ್ನು ನೋಡಿ ನಗುತ್ತಾ ಮಧುರವಾದ ಮಾತುಗಳಿಂದ ಅವನನ್ನು ಕುರಿತು ಹೇಳಿದನು.

ಋಷೇರ್ಮಾನಂ ಕರಿಷ್ಯಾಮಿ ವಜ್ರಂ ಯಸ್ಯಾಸ್ಥಿಸಂಭವಮ್ ।
ವಜ್ರಸ್ಯ ಚ ಕರಿಷ್ಯಾಮಿ ತವ ಚೈವ ಶತಕ್ರತೋ ॥೨೦॥

ಶತಕ್ರತುವೇ, ನಾನು ಯಾವ ದಧೀಚಿಋಷಿಗಳ ಅಸ್ಥಿಯಿಂದ ವಜ್ರಾಯುಧವು ನಿರ್ಮಿತವಾಗಿದೆಯೋ, ಆ ಋಷಿಗಳಿಗೂ, ವಜ್ರಾಯುಧಕ್ಕೂ ಮತ್ತು ನಿನಗೂ ಗೌರವವನ್ನು ಕೊಡುತ್ತೇನೆ.

ಏತತ್ ಪತ್ರಂ ತ್ಯಜಾಮ್ಯೇಕಂ ಯಸ್ಯಾಂತಂ ನೋಪಲಪ್ಸ್ಯಸೇ ।
ನ ಹಿ ವಜ್ರನಿಪಾತೇನ ವೇದನಾ ಮೇಽಸ್ತಿ ಕಾಚನ ॥೨೧॥

ಎಲೈ ಶತಕ್ರತುವೇ, ನನ್ನ ಒಂದು ಗರಿಯನ್ನು ಾನೇ ಕೆಳಗೆ ಉದುರಿಸುತ್ತೇನೆ. ಆ ಗರಿಯ ಅಂತವನ್ನೂ ನೀನು ನೋಡಲಾರೆ. ನಿನ್ನ ವಜ್ರಾಯುಧಪ್ರಯೋಗದಿಂದ ನನಗೆ ಯಾವ ವೇದನೆಯೂ ಉಂಟಾಗುವುದಿಲ್ಲ.

ಇತ್ಯೇವಮುಕ್ತ್ವಾ ಗರುಡಃ ಪತ್ರಂ ತ್ವೇಕಂ ವ್ಯಸರ್ಜಯತ್ ।
ತತ್ರೈವ ಸರ್ವಭೂತಾನಿ ವಿಸ್ಮಿತಾನ್ಯಬ್ರುವಂಸ್ತದಾ ॥೨೨॥

ಸುರೂಪಂ ಪತ್ರಮಾಲಕ್ಷ್ಯ ಸುಪರ್ಣೋಽಯಂ ಭವತ್ವಿತಿ ।
ತ್ರಿಧಾಕೃತ್ವಾ ತದಾ ವಜ್ರಂ ಗತಂ ಸ್ಥಾನಂ ಸ್ವಮೇವ ಹಿ ॥೨೩॥

ಹೀಗೆ ಹೇಳಿ ಗರುಡನು ತನ್ನ ರೆಕ್ಕೆಯಿಂದ ಒಂದು ಗರಿಯನ್ನು ಉದುರಿಸಿದನು. ಅದನ್ನು ನೋಡಿದ ಎಲ್ಲರೂ ವಿಸ್ಮಿತರಾಗಿ ತಮ್ಮ ತಮ್ಮೊಳಗೆ ಮಾತನಾಡಿಕೊಂಡು ಇಂತಹ ಸುಂದರವಾದ ರೆಕ್ಕೆ (ಪತ್ರವನ್ನು) ಹೊಂದಿರುವ ಇವನಿಗೆ 'ಸುಪರ್ಣ'ನೆಂದು ಹೆಸರಾಗಲಿ ಎಂದು ಹೇಳಿದರು. ವಜ್ರವು ಆ ಗರಿಯನ್ನು ಮೂರುಭಾಗವಾಗಿ ಕತ್ತರಿಸಿ ತನ್ನ ಸ್ವಸ್ಥಾನಕ್ಕೆ ಹೊರಟುಹೋಯಿತು.

ದೃಷ್ಟ್ವಾ ತದದ್ಭುತಂ ಚಾಪಿ ಸಹಸ್ರಾಕ್ಷಃ ಪುರಂದರಃ ।
ಖಿಗೋ ಮಹದಿದಂ ಭೂತಮಿತಿ ಮತ್ವಾऽಭ್ಯಭಾಷತ ॥೨೪॥

ಸಹಸ್ರಾಕ್ಷನಾದ ಪುರಂದರನು ಈ ಅದ್ಭುತವನ್ನು ನೋಡಿ ಈ ಪಕ್ಷಿಯು ವಿಷ್ಣು ಮೊದಲಾದವರ ಶ್ರೇಷ್ಠರ ಗುಂಪಿನಲ್ಲಿ ಸೇರಿದುದು ಎಂದು ತಿಳಿದು ಪಕ್ಷಿಯನ್ನು ಕುರಿತು ಮಾತನಾಡಿದನು.

ಬಲಂ ವಿಜ್ಞಾತುಮಿಚ್ಛಾಮಿ ಯತ್ ತೇ ಪರಮನುತ್ತಮಮ್ ।
ಸಖ್ಯಂ ಚಾನಂತ್ಯಮಿಚ್ಛಾಮಿ ತ್ವಯಾ ಸಹ ಖಿಗೋತ್ತಮ ॥೨೫॥

ಎಲೈ ಪಕ್ಷಿಶ್ರೇಷ್ಠನೇ, ನಿನ್ನ ಶ್ರೇಷ್ಠವಾದ ಮತ್ತು ಉತ್ತಮವಾದ ಬಲವನ್ನು ತಿಳಿಯಲು ಅಪೇಕ್ಷಿಸುತ್ತೇನೆ. ಹಾಗೆಯೇ, ನಿನ್ನ ಜೊತೆಯಲ್ಲಿ ಶಾಶ್ವತವಾದ ಸ್ನೇಹವನ್ನು ಹೊಂದಲು ಬಯಸುತ್ತೇನೆ.

॥ ಇತಿ ಶ್ರೀಮನ್ಮಹಾಭಾರತೇ ಶತಸಹಸ್ರಿಕಾಯಾಂಸಂಹಿತಾಯಾಮಾದಿಪರ್ವಣಿ ಅಷ್ಟಾವಿಂಶೋऽಧ್ಯಾಯಃ ॥

॥ ಇತಿ ಆಸ್ತೀಕಪರ್ವಣಿ ಷೋಡಶೋऽಧ್ಯಾಯಃ ॥

ಇಲ್ಲಿಗೆ ಮಹಾಭಾರತದ ಆದಿಪರ್ವದಲ್ಲಿ ಇಪ್ಪತ್ತೆಂಟನೆಯ ಅಧ್ಯಾಯ ಮುಗಿಯಿತು.

★★★★★

ಇಪ್ಪತ್ತೊಂಭತ್ತನೆಯ ಅಧ್ಯಾಯ

(ಇಂದ್ರಗರುಡಸಂವಾದ, ಅವರ ಸ್ನೇಹ, ಇಂದ್ರನಿಗೆ ವರದಾನ, ಗರುಡಕಥಾ ಸಮಾಪ್ತಿ.)

ಸೂತಃ

ಇತ್ಯೇವಮುಕ್ತೋ ಗರುಡಃ ಪ್ರತ್ಯುವಾಚ ಶಚೀಪತಿಮ್ ।
ಸಖ್ಯಂ ಮೇಽಸ್ತು ತ್ವಯಾ ದೇವ ಯಥೇಚ್ಛಸಿ ಪುರಂದರ ।
ಬಲಂ ತು ಮಮ ಜಾನೀಹಿ ಮಹಚ್ಚಾನಂತ್ಯಮೇವ ಚ ॥೧॥

ಹೀಗೆ ಹೇಳಲ್ಪಟ್ಟ ಗರುಡನು ಶಚೀಪತಿಯನ್ನುದ್ದೇಶಿಸಿ ದೇವನೇ, ಪುರಂದರನೇ, ನೀನು ಬಯಸಿದಂತೆ ನಿನ್ನ ಜೊತೆಯಲ್ಲಿ ನನಗೆ ಸಖ್ಯವೇ ಇರಲಿ. ನನ್ನ ಅಪರಿಮಿತವಾದ, ಶ್ರೇಷ್ಠವಾದ ಬಲವನ್ನು ತಿಳಿದುಕೋ.

ಕಾಮಂ ನೈವ ಪ್ರಶಂಸಂತಿ ಸಂತಃ ಸ್ವಗುಣಸಂಸ್ತವಮ್ ।
ಗುಣಸಂಕೀರ್ತನಂ ಚಾಪಿ ಸ್ವಯಮೇವ ಶತಕ್ರತೋ ।
ಸಖೇತಿ ಕೃತ್ವಾ ತು ಸಖೇ ಪೃಷ್ಟೋ ವಕ್ಷ್ಯಾಮ್ಯಹಂ ತ್ವಯಾ ॥೨॥

ಸಜ್ಜನರು ತಮ್ಮ ಗುಣವನ್ನು ತಾವೇ ಸ್ತೋತ್ರಮಾಡುವುದನ್ನು ಎಂದೂ ಪ್ರಶಂಸಿಸುವುದಿಲ್ಲ ಅಥವಾ ತಮ್ಮ ಗುಣವನ್ನು ಇನ್ನೊಬ್ಬರು ಸ್ತೋತ್ರಮಾಡುವುದನ್ನೂ ಪ್ರಶಂಸಿಸುವುದಿಲ್ಲ. ಆದರೆ, ಎಲೈ ಇಂದ್ರನೇ, ಸ್ನೇಹಿತನಾದ ನೀನು ಕೇಳುತ್ತಿದ್ದೀಯೆ ಎಂಬ ಕಾರಣದಿಂದ ನಾನು ಹೇಳುವೆನು.

ನ ಹ್ಯಾತ್ಮಸ್ತವಸಂಯುಕ್ತಂ ವಕ್ತವ್ಯಮನಿಮಿತ್ತತಃ ।
ಸಪರ್ವತವನಾಮುರ್ವೀಂ ಸಸಾಗರನದೀಮಿಮಾಮ್ ॥೩॥

ಪಕ್ಷೇಣೈಕೇನ ವೈ ಶಕ್ರ ತ್ವಾಂ ಚೈವಾತ್ಮಾವಲಂಬಿನಮ್ ।
ಸರ್ವಾನ್ ಸಪಿಂಡಿತಾನ್ ವಾಪಿ ಲೋಕಾನ್ ಸಸ್ಥಾಣುಜಂಗಮಾನ್।
ವಹೇಯಮಪರಿಶ್ರಾಂತೋ ವಿದ್ಧೀದಂ ಮೇ ಮಹದ್ಬಲಮ್ ॥೪॥

ಯಾವ ನಿಮಿತ್ತವೂ ಇಲ್ಲದೆ, ತನ್ನ ಗುಣದ ಸ್ತೋತ್ರರೂಪವಾದ ಮಾತುಗಳನ್ನು ಆಡಬಾರದು. ಎಲೈ ಶಕ್ರನೇ, ಈ ಎಲ್ಲಾ ಪರ್ವತಕಾನನಗಳಿಂದ ಕೂಡಿದ, ಸಾಗರನದಿಗಳಿಂದ ಕೂಡಿದ ಭೂಮಿಯನ್ನೂ, ಅದನ್ನು ಅವಲಂಬಿಸುವ ನಿನ್ನನ್ನೂ ಸೇರಿ ಒಂದೇ ರೆಕ್ಕೆಯಿಂದ ಎತ್ತುತ್ತೇನೆ. ಸ್ಥಾವರಜಂಗಮಾತ್ಮಕವಾದ ಪ್ರಾಣಿಗಳಿಂದ ಸಹಿತವಾದ ಎಲ್ಲಾಲೋಕಗಳನ್ನೂ ಒಟ್ಟುಗೂಡಿಸಿ ನಾನು ಹೊತ್ತುಕೊಂಡು ಹೋಗುತ್ತೇನೆ. ಇದು ನನ್ನ ಶ್ರೇಷ್ಠವಾದ ಬಲವೆಂದು ತಿಳಿ.

ಸೂತಃ

ಇತ್ಯುಕ್ತೋ ವಚನಂ ವೀರಃ ಕಿರೀಟೀ ಶ್ರೀಮತಾಂ ವರಃ ।
ಆಹ ಶೌನಕ ದೇವೇಂದ್ರಃ ಸರ್ವಭೂತಹಿತಃ ಪ್ರಭುಃ ॥೫॥

ಎಲೈ ಶೌನಕನೇ, ಹೀಗೆ ಹೇಳಲ್ಪಟ್ಟ ಸರ್ವಭೂತಹಿತದಲ್ಲಿ ರತನಾದ, ಪ್ರಭುವಾದ, ಸಂಪದ್ಯುಕ್ತರಲ್ಲಿ ಶ್ರೇಷ್ಠನಾದ, ವೀರನಾದ, ಸರ್ವಾಭರಣಭೂಷಿತನಾದ ದೇವೇಂದ್ರನು ಗರುಡನನ್ನು ಕುರಿತು ಹೀಗೆ ಹೇಳಿದನು.

ಏವಮೇವ ಯಥಾऽऽಹ ತ್ವಂ ಸರ್ವಂ ಸಂಭಾವಯೇ ತ್ವಯಿ ।
ಪ್ರಗೃಹ್ಯತಾಮಿದಾನೀಂ ಮೇ ಸಖ್ಯಮಾನಂತ್ಯಮುತ್ತಮಮ್ ॥೬॥

ನೀನು ಹೇಗೆ ಹೇಳಿದೆಯೋ ಅವೆಲ್ಲವೂ ನಿನ್ನಲ್ಲಿ ಸಂಭಾವಿತವಾದುದು ಎಂದು ತಿಳಿಯುತ್ತೇನೆ. ಈಗಂತೂ ನನ್ನ ಶ್ರೇಷ್ಠವಾದ ಮತ್ತು ಶಾಶ್ವತವಾದ ಸಖ್ಯವನ್ನು ಸ್ವೀಕರಿಸು.

ನ ಕಾರ್ಯಂ ತವ ಸೋಮೇನ ಮಮ ಸೋಮಃ ಪ್ರದೀಯತಾಮ್।
ಅಸ್ಮಾಂಸ್ತೇ ಹಿ ಪ್ರಬಾಧೇಯುರ್ಯೇಭ್ಯೋ ದದ್ಯಾದ್ ಭವಾನಿದಮ್ ॥

ನಿನಗೆ ಅಮೃತದಿಂದ ಆಗಬೇಕಾದುದೇನೂ ಇಲ್ಲ. ಆದ್ದರಿಂದ ಅಮೃತವನ್ನು ನನಗೇ ಕೊಟ್ಟುಬಿಡು. ಏಕೆಂದರೆ, ನೀನು ಯಾರಿಗೆ ಈ ಅಮೃತವನ್ನು ಕೊಡುವೆಯೋ ಅವರು ನಮ್ಮನ್ನು ಬಾಧಿಸಬಹುದು.

ಗರುಡಃ

ಕಿಂಚಿತ್ ಕಾರಣಮುದ್ದಿಶ್ಯ ಸೋಮೋऽಯಂ ನೀಯತೇ ಮಯಾ ।
ನ ದಾಸ್ಯಾಮಿ ಸಮಾಪಾತುಂ ಸೋಮಂ ಕಸ್ಯೈಚಿದಪ್ಯಹಮ್ ॥೮॥

ಯತ್ರೇಮಂ ತು ಸಹಸ್ರಾಕ್ಷ ನಿಕ್ಷಿಪೇಯಮಹಂ ಶುಭಮ್ ।
ತ್ವಮಾದಾಯ ತತಸ್ತೂರ್ಣಂ ಹರೇಥಾಸ್ತ್ರಿವೇಶ್ವರ ॥೯॥

ಒಂದು ನಿರ್ದಿಷ್ಟವಾದ ಕಾರಣದಿಂದಾಗಿ ನಾನು ಈ ಅಮೃತವನ್ನು ತೆಗೆದುಕೊಂಡು ಹೋಗುತ್ತಿದ್ದೇನೆ. ನಾನು ಯಾರಿಗೂ ಅಮೃತವನ್ನು ಕುಡಿಯಲು ಕೊಡುವುದಿಲ್ಲ. ಎಲೈ ಸಹಸ್ರಾಕ್ಷನೇ, ನಾನು ಈ ಪರಿಶುದ್ಧವಾದ ಅಮೃತವನ್ನು ಎಲ್ಲಿ ಇಡುತ್ತೇನೆಯೋ ದೇವೇಶ್ವರನಾದ ನೀನು ಅಲ್ಲಿಗೆ ಬಂದು ಆ ಅಮೃತವನ್ನು ಅಪಹರಿಸಿಕೊಂಡು ಹೋಗು.

ಶಕ್ರಃ

ವಾಕ್ಯೇನಾನೇನ ತುಷ್ಟೋऽಹಂ ಯತ್ತ್ವಯೋಕ್ತಮಿಹಾಂಡಜ ।
ಯದಿಚ್ಛಸಿ ವರಂ ಮತ್ತಸ್ತದ್ ಗೃಹಾಣ ಖಗೋತ್ತಮ ॥೧೦॥

ಪಕ್ಷಿಶ್ರೇಷ್ಠನಾದ ಗರುಡನೇ, ನಿನ್ನ ಈ ಮಾತಿನಿಂದ ನಾನು ಸಂತುಷ್ಟನಾಗಿದ್ದೇನೆ. ನೀನು ನನ್ನಿಂದ ಬೇಕಾದ ವರವನ್ನು ಸ್ವೀಕರಿಸು.

ಸೂತಃ

ಇತ್ಯುಕ್ತಃ ಪ್ರತ್ಯುವಾಚೇದಂ ಕದ್ರೂಪುತ್ರಾನನುಸ್ಮರನ್ ।
ಸ್ಮೃತ್ವಾ ಚೈವೋಪಧಿಕೃತಂ ಮಾತುರ್ದಾಸ್ಯನಿಮಿತ್ತತಃ ॥೧೧॥

ಹೀಗೆ ಹೇಳಲ್ಪಟ್ಟ ಗರುಡನು ಕದ್ರುವಿನ ಮಕ್ಕಳು ಮಾಡಿದ ಮೋಸದ ನಿಮಿತ್ತದಿಂದ ತನ್ನ ತಾಯಿಗೆ ಉಂಟಾದ ದಾಸ್ಯವನ್ನು ಸ್ಮರಣೆಮಾಡಿಕೊಂಡು ಉತ್ತರವನ್ನು ಕೊಟ್ಟನು.

ಗರುಡಃ

ಈಶೋऽಹಮಪಿ ಸರ್ವಸ್ಯ ಕರಿಷ್ಯಾಮಿ ತ್ವದರ್ಥಿತಮ್ ।
ಭವೇಯುರ್ಭುಜಗಾಃ ಶಕ್ರ ಮಮ ಭಕ್ಷ್ಯಾ ನ ಸಂಶಯಃ ॥೧೨॥

ನಾನು ಎಲ್ಲಾಲೋಕಗಳಿಗೂ ಪ್ರಭುವಾದರೂ, ನೀನು ಹೇಳುವಂತೆ ನಡೆದುಕೊಳ್ಳುವೆನು. ಎಲೈ ಶಕ್ರನೇ, ಸರ್ಪಗಳು ನನಗೆ ಆಹಾರವಾಗಲಿ. ಈ ವಿಷಯದಲ್ಲಿ ಯಾವ ಸಂಶಯವೂ ಇಲ್ಲ.

ಸೂತಃ

ತಥೇತ್ಯುಕ್ತ್ವಾ ತನ್ವಗಚ್ಛತ್ ತಂ ತದಾ ದಾನವಸೂದನಃ ।
ಹರಿಷ್ಯಾಮಿ ವಿನಿಕ್ಷಿಪ್ತಂ ಸೋಮಮಿತ್ಯನುಭಾಷ್ಯ ತಮ್ ॥೧೩॥

ಆಜಗಾಮ ತತಸ್ತೂರ್ಣಂ ಸುಪರ್ಣೋ ಮಾತುರಂತಿಕಮ್ ।
ಅಥ ಸರ್ಪಾನುವಾಚೇದಂ ಸರ್ವಾನ್ ಪರಮಹೃಷ್ಟವತ್ ॥೧೪॥

ಆಗ ದಾನವಸೂದನನಾದ ಇಂದ್ರನು ''ಹಾಗೆಯೇ ಆಗಲಿ'' ನೀನು ಇಟ್ಟಕಡೆಯಿಂದ ನಾನು ಅಮೃತವನ್ನು ಅಪಹರಿಸುತ್ತೇನೆ ಎಂದು ಗರುಡನನ್ನು ಕುರಿತು ಹೇಳಿ ಅವನನ್ನು ಹಿಂಬಾಲಿಸಿದನು. ಅನಂತರ ಗರುಡನು ಶೀಘ್ರವಾಗಿ ತನ್ನ ತಾಯಿಯ ಬಳಿಗೆ ಬಂದನು.

ಇದಮಾನೀತಮಮೃತಂ ನಿಕ್ಷಿಪಾಮಿ ಕುಶೇಷು ವಃ ।
ಸ್ನಾತಾ ಮಂಗಲಸಂಯುಕ್ತಾಸ್ತತಃ ಪ್ರಾಶ್ನೀತ ಪನ್ನಗಾಃ ॥೧೫॥

ಅನಂತರ, ಪರಮಸಂತೋಷದಿಂದ ಕೂಡಿದವನಂತೆ, ಎಲ್ಲಾ ಸರ್ಪಗಳನ್ನು ಉದ್ದೇಶಿಸಿ, ''ಇದೋ, ಈ ಅಮೃತವನ್ನು ತಂದಿದ್ದೇನೆ. ಇದನ್ನು ನಿಮಗೋಸ್ಕರವಾಗಿ ದರ್ಭೆಗಳ ಮೇಲೆ ಇಡುತ್ತೇನೆ. ಎಲೈ ಸರ್ಪಗಳೇ, ನೀವು ಸ್ನಾನವನ್ನು ಮಾಡಿ ಮಂಗಳಸಂಯುಕ್ತರಾಗಿ ಅನಂತರ ಅಮೃತವನ್ನು ಪಾನಮಾಡಿ'' ಎಂದು ಹೇಳಿದನು.

ಅದಾಸೀ ಚೈವ ಮಾತೇಯಮದ್ಯಪ್ರಭೃತಿ ಚಾಸ್ತು ಮೇ ।
ಯಥೋಕ್ತಂ ಭವತಾಮೇತದ್ ವಚೋ ಮೇ ಪ್ರತಿಪಾದಿತಮ್ ॥೧೬॥

ನನ್ನ ತಾಯಿಯು ಇಂದಿನಿಂದ ದಾಸ್ಯದಿಂದ ವಿಮುಕ್ತಳಾಗಲಿ. ನೀವು ಹೇಳಿದಂತೆಯೇ ನಾನು ನಡೆದುಕೊಂಡಿದ್ದೇನೆ(ಎಂದು ಹೇಳಿದನು).

ಸೂತಃ

ತತಃ ಸ್ನಾತುಂ ಗತಾಃ ಸರ್ಪಾಃ ಪ್ರತ್ಯುಕ್ತ್ವಾ ತಂ ತಥೇತ್ಯುತ ।
ಶಕ್ರೋಽಪ್ಯಮೃತಮಾದಾಯ ಜಗಾಮ ತ್ರಿದಿವಂ ಪುನಃ ॥೧೭॥

ಆಗ ಸರ್ಪಗಳೆಲ್ಲವೂ ''ಹಾಗೆಯೇ ಆಗಲಿ'' ಎಂದು ಹೇಳಿ ಸ್ನಾನವನ್ನು ಮಾಡಲು ಹೊರಟವು. ಇಂದ್ರನಾದರೋ ಆ ಮಧ್ಯದಲ್ಲಿ ಬಂದು ಅಮೃತವನ್ನು ತೆಗೆದುಕೊಂಡು ಸ್ವರ್ಗಕ್ಕೆ ಹೊರಟುಹೋದನು.

ಅಥಗತಾಸ್ತಮುದ್ದೇಶಂ ಸರ್ಪಾಃ ಸೋಮಾರ್ಥಿನಸ್ತದಾ ।
ಸ್ನಾತಾಶ್ಚ ಕೃತಜಪ್ಯಾಶ್ಚ ಪ್ರಹೃಷ್ಟಾಃ ಕೃತಮಂಗಲಾಃ ॥೧೮॥

ಅನಂತರ ಅಮೃತಾರ್ಥಿಗಳಾದ ಸರ್ಪಗಳು, ಸ್ನಾನವನ್ನು ಮಾಡಿ, ಜಪವನ್ನು ಮಾಡಿ, ಮಂಗಳವನ್ನು ಮಾಡಿಕೊಂಡು, ಸಂತೋಷದಿಂದ ಆ ಪ್ರದೇಶಕ್ಕೆ ಬಂದವು.

ತದ್ ವಿಜ್ಞಾಯ ಹೃತಂ ಸರ್ಪಾಃ ಶಕ್ರಮಾಯಾಕೃತಂ ಚ ತತ್ ।
ಸೋಮಸ್ಥಾನಮಿದಂ ಚೇತಿ ದರ್ಭಾಂಸ್ತೇ ಲಿಲಿಹುಸ್ತದಾ ॥೧೯॥

ಸರ್ಪಗಳು ಇಂದ್ರನು ಮೋಸದಿಂದ ಮಾಡಿದ ಕಾರ್ಯವನ್ನು ತಿಳಿದು, ಇದು ಅಮೃತವನ್ನಿಟ್ಟ ಜಾಗ ಎಂದು ತಿಳಿದು, ಆ ದರ್ಭೆಗಳನ್ನೇ ನೆಕ್ಕಿದವು.

ತತೋ ದ್ವೈಧೀಕೃತಾ ಜಿಹ್ವಾಃ ಸರ್ಪಾಣಾಂ ತೇನ ಕರ್ಮಣಾ ।
ಏವಂ ತದಮೃತಂ ತೇನಾಹೃತಂ ಮಾತ್ರರ್ಥಮೇವ ಚ ॥೨೦॥

ದ್ವಿಜಿಹ್ವಾಶ್ಚ ಕೃತಾಃ ಸರ್ಪಾ ಗರುಡೇನ ಮಹಾತ್ಮನಾ ।
ಅಭವಂಶ್ಚಾಮೃತಸ್ಪರ್ಶಾದ್ ದರ್ಭಾಸ್ತೇऽಥ ಪವಿತ್ರಿಣಃ ॥೨೧॥

ಆ ಕ್ರಿಯೆಯಿಂದ ಸರ್ಪಗಳ ಜಿಹ್ವೆಗಳು ಸೀಳಿಹೋಗಿ ಎರಡೆರಡಾದವು. ಹೀಗೆ ಮಹಾತ್ಮನಾದ ಗರುಡನು ತಾಯಿಯ ಸಲುವಾಗಿ ಅಮೃತವನ್ನು ತೆಗೆದುಕೊಂಡು ಹೋದನು. ಸರ್ಪಗಳು ದ್ವಿಜಿಹ್ವಗಳಾದವು ಮತ್ತು ಅಮೃತಸ್ಪರ್ಶದಿಂದ ದರ್ಭೆಗಳು ಪವಿತ್ರವಾದವು.

ತತಃ ಸುಪರ್ಣಃ ಪರಮಪ್ರಹೃಷ್ಟವಾನ್
ವಿಹೃತ್ಯ ಮಾತ್ರಾ ಸಹ ತತ್ರ ಕಾನನೇ ।
ಭುಜಂಗಭಕ್ಷಃ ಪರಮಾರ್ಚಿತಃ ಖಗೈ-
ರದೀನಕೀರ್ತಿರ್ವಿನತಾಮನಂದಯತ್ ॥೨೨॥

ಅನಂತರ ಗರುಡನು ಪರಮಸಂತೋಷದಿಂದ ತಾಯಿಯ ಜೊತೆಯಲ್ಲಿ ವಿಹರಿಸಿ, ಸರ್ಪಗಳನ್ನು ಭಕ್ಷಿಸುತ್ತಾ ಎಲ್ಲಾ ಪಕ್ಷಿಗಳಿಂದಲೂ ಪೂಜಿಸಲ್ಪಟ್ಟು ತಾಯಿಯಾದ ವಿನತೆಗೆ ಆನಂದವನ್ನು ನೀಡಿದನು.

ಇಮಾಂ ಕಥಾಂ ಯಃ ಶೃಣುಯಾನ್ನರಃ ಸದಾ
ಪಠೇತ ವಾ ದ್ವಿಜಗಣಮುಖ್ಯಸಂಸದಿ ।
ಅಸಂಶಯಂ ತ್ರಿದಿವಮಿಯಾತ್ ಸುಪುಣ್ಯಭಾಜ್-
ಮಹಾತ್ಮನಃ ಪತಗಪತೇಃ ಪ್ರಕೀರ್ತನಾತ್ ॥೨೩॥

ಯಾವ ಮನುಷ್ಯನು ಮಹಾತ್ಮನಾದ ಗರುಡನ ಈ ಕಥೆಯನ್ನು ಕೇಳುತ್ತಾನೆಯೋ ಅಥವಾ ಬ್ರಾಹ್ಮಣರ ಸಮೂಹದಲ್ಲಿ ಇದನ್ನು ಪಠಿಸುತ್ತಾನೆಯೋ ಅವನು ಆ ಕಾರಣದಿಂದ ನಿಸ್ಸಂಶಯವಾಗಿ ಪುಣ್ಯವನ್ನು ಸಂಪಾದಿಸಿ ಸ್ವರ್ಗವನ್ನು ಪಡೆಯುತ್ತಾನೆ.

॥ ಇತಿ ಶ್ರೀಮನ್ಮಹಾಭಾರತೇ ಶತಸಹಸ್ರಿಕಾಯಾಂಸಂಹಿತಾಯಾಮಾದಿಪರ್ವಣಿ ಏಕೋನತ್ರಿಂಶೋऽಧ್ಯಾಯಃ ॥

॥ ಇತಿ ಆಸ್ತೀಕಪರ್ವಣಿ ಸಪ್ತದಶೋऽಧ್ಯಾಯಃ ॥

ಇಲ್ಲಿಗೆ ಮಹಾಭಾರತದ ಆದಿಪರ್ವದಲ್ಲಿ ಇಪ್ಪತ್ತೊಂಭತ್ತನೆಯ ಅಧ್ಯಾಯ ಮುಗಿಯಿತು.

★★★★★

ಮೂವತ್ತನೆಯ ಅಧ್ಯಾಯ

(ಸರ್ಪಗಳ ವಂಶವಿಸ್ತಾರ)

ಶೌನಕಃ

ಭುಜಂಗಮಾನಾಂ ಶಾಪಸ್ಯ ಮಾತ್ರಾ ಚೈವ ಸುತೇನ ಚ ।
ವಿನತಾಯಾಸ್ತ್ವಯಾ ಪ್ರೋಕ್ತಂ ಕಾರಣಂ ಸೂತನಂದನ ॥೧॥

ವರಪ್ರದಾನಂ ಭರ್ತ್ರಾ ಚ ಕದ್ರೂವಿನತಯೋಸ್ತಥಾ ।
ನಾಮನೀ ಚೈವ ತೇ ಪ್ರೋಕ್ತೇ ಪಕ್ಷಿಣೋರ್ವೈನತೇಯಯೋಃ । ॥೨॥

ಪನ್ನಗಾನಾಂ ತು ನಾಮಾನಿ ನ ಕೀರ್ತಯಸಿ ಸೂತಜ ।
ಪ್ರಾಧಾನ್ಯೇನಾಪಿ ನಾಮಾನಿ ಶ್ರೋತುಮಿಚ್ಛಾಮಹೇ ವಯಮ್ ॥೩॥

ಎಲೈ ಸೂತನಂದನನೇ, ನೀನು ತಾಯಿಯಾದ ಕದ್ರುವು ಸರ್ಪಗಳಿಗೆ ಕೊಟ್ಟ ಶಾಪವನ್ನೂ ಮತ್ತು ಪುತ್ರನಾದ ಅರುಣನು ತಾಯಿಯಾದ ವಿನತೆಗೆ ಕೊಟ್ಟ ಶಾಪವನ್ನೂ

ಮತ್ತು ಅದರ ಕಾರಣವನ್ನೂ ಹೇಳಿದ್ದೀಯೆ ಮತ್ತು ಕದ್ರುವಿನತೆಯರಿಗೆ ಪತಿಯಾದ ಕಾಶ್ಯಪರು ಕೊಟ್ಟ ವರವನ್ನೂ, ವಿನತೆಯ ಪಕ್ಷಿರೂಪರಾದ ಎರಡು ಮಕ್ಕಳ ಹೆಸರುಗಳನ್ನೂ ಹೇಳಿದ್ದೀಯೆ. ಆದರೆ, ಎಲೈ ಸೂತಪುತ್ರನೇ, ಸರ್ಪಗಳ ಹೆಸರುಗಳನ್ನು ಮಾತ್ರ ಹೇಳುತ್ತಿಲ್ಲ. ನಾವು ಪ್ರಧಾನವಾದ ಸರ್ಪಗಳ ಹೆಸರನ್ನಾದರೂ ಕೇಳಲು ಬಯಸುತ್ತೇವೆ.

ಸೂತಃ

ಬಹುತ್ವಾನ್ನಾಮಧೇಯಾನಿ ಭುಜಂಗಾನಾಂ ತಪೋಧನ ।
ನ ಕೀರ್ತಯಿಷ್ಯೇ ಸರ್ವೇಷಾಂ ಪ್ರಾಧಾನ್ಯೇನ ತು ಮೇ ಶೃಣು ॥೪॥

ತಪೋಧನನೇ, ಸರ್ಪಗಳು ಬಹುವಾಗಿರುವುದರಿಂದ ಆ ಎಲ್ಲಾ ಸರ್ಪಗಳ ಹೆಸರನ್ನು ನಾನು ಹೇಳುವುದಿಲ್ಲ. ಪ್ರಧಾನವಾದ ಸರ್ಪಗಳ ಹೆಸರನ್ನು ಮಾತ್ರ ಹೇಳುತ್ತೇನೆ. ಅದನ್ನು ಕೇಳು.

ಶೇಷಃ ಪ್ರಥಮತೋ ಜಾತೋ ವಾಸುಕಿಸ್ತದನಂತರಮ್ ।
ಐರಾವತಸ್ತಕ್ಷಕಶ್ಚ ಕಾರ್ಕೋಟಕಧನಂಜಯೌ ॥೫॥

ಕಾಳಿಯೋ ಮಣಿನಾಗಶ್ಚ ನಾಗಶ್ಚಾಪೂರಣಸ್ತಥಾ ।
ನಾಗಸ್ತಥಾ ಪಂಚಶಿರಾ ಏಲಾಪತ್ರೋಽಥ ವಾಮನಃ ॥೬॥

ಶೇಷನು ಮೊದಲು ಜನಿಸಿದವನು. ಅನಂತರ ವಾಸುಕಿ. ಅನಂತರ ಐರಾವತ, ತಕ್ಷಕ, ಕಾರ್ಕೋಟಕ, ಧನಂಜಯ, ಕಾಳೀಯ, ಮಣಿನಾಗ, ಆಪೂರಣ, ಪಂಚಶಿರಾ, ಏಲಾಪತ್ರ. ವಾಮನ,

ನೀಲಾನೀಲೌ ತಥಾ ನಾಗೌ ಕಲ್ಮಾಷಶಬಲೌ ತಥಾ ।
ಆರ್ಯಕೋದ್ರ್ದಕಶ್ಚೈವ ನಾಗೌ ವೈ ಶಲಪೋತಕೌ ॥೭॥

ಸುಮನಾ ವೈ ದಧಿಮುಖಸ್ತಥಾ ವಿಮಲಪಿಂಡಕಃ ।
ವಿಮಲಃ ಪಿಂಡಕಶ್ಚೈವ ಶಂಖೋ ವಾಲಶಿಖಸ್ತಥಾ ॥೮॥

ನೀಲ ಮತ್ತು ಅನೀಲ ಎಂಬ ಎರಡು ಸರ್ಪಗಳೂ, ಕಲ್ಮಾಷ ಮತ್ತು ಶಬಲ ಎಂಬ ಎರಡು ಸರ್ಪಗಳೂ, ಹಾಗೆಯೇ, ಆರ್ಯಕ, ಆರ್ದ್ರಕ ಎಂಬ ಎರಡು

ಸರ್ಪಗಳೂ ಮತ್ತು ಶಲ, ಪೋತಕ ಎಂಬ ಎರಡು ಸರ್ಪಗಳೂ, ಸುಮನ, ದಧಿಮುಖ, ವಿಮಲಪಿಂಡಕ, ವಿಮಲ, ಪಿಂಡಕ, ಶಂಖ, ಬಾಲಶಿಖ

ಆಪ್ತಃ ಕೋಟರಕಶ್ಚೈವ ಶಂಖಪಾಲಶಿಖಿಸ್ತಥಾ ।
ನಿಷ್ಠೂರಕೋ ಹೇಮಗುಹೋ ನಹುಷಃ ಪಿಂಗಲಸ್ತಥಾ ॥೯॥

ಬಾಹ್ಯಕಂಠೋ ಹಸ್ತಿಬಕಸ್ತಥಾ ಮುದ್ಗರಪಿಂಡಕಃ ।
ಕಂಬಲಾಶ್ವತರೌ ಚಾಪಿ ನಾಗಃ ಕಾಳಿಕಟಸ್ತಥಾ ॥೧೦॥

ಆಪ್ತ, ಕೋಟರಕ, ಶಂಖಪಾಲ, ಶಿಖಿ, ನಿಷ್ಠೂರಕ, ಹೇಮಗುಹ, ನಹುಷ, ಪಿಂಗಲ, ಬಾಹ್ಯಕಂಠ, ಹಸ್ತಿಬಕ, ಮುದ್ಗರಪಿಂಡಕ, ಕಂಬಲ, ಅಶ್ವತರ, ಕಾಳಿಕಟ,

ವೃತ್ತಸಂವೃತ್ತಕೌ ಚಾಪಿ ದ್ವೌ ಚ ಪದ್ಮಾವಿತಿ ಶ್ರುತೌ ।
ನಾಗಃ ಶಂಖಿನಕಶ್ಚೈವ ತಥಾ ಕೂಷ್ಮಾಂಡಕೂರ್ಪಕೌ ॥೧೧॥

ಕ್ಷೇಮಕಶ್ಚ ಮಹಾನಾಗೋ ನಾಗಾಃ ಪಾಂಡರಕಸ್ತಥಾ ।
ಕರವೀರಃ ಪುಷ್ಪದಂಷ್ಟ್ರ ಏಲಕೋ ಬಿಲ್ವಪಿಂಡಕಃ ॥೧೨॥

ವೃತ್ತ ಮತ್ತು ಸಂವೃತ್ತ, ಈ ಎರಡು ಸರ್ಪಗಳಿಗೆ ಪದ್ಮ ಎಂದೂ ಹೆಸರು, ಶಂಖಿನಕ, ಕೂಷ್ಮಾಂಡ, ಕೂರ್ಪಕ, ಕ್ಷೇಮಕ, ಮಹಾನಾಗ, ಪಾಂಡರಕ, ಕರವೀರ, ಪುಷ್ಪದಂಷ್ಟ್ರ, ಏಲಕ, ಬಿಲ್ವಪಿಂಡಕ,

ಮೂಷಿಕಾದಃ ಶಂಖಶಿರಾಃ ಪೂರ್ಣದಂಷ್ಟ್ರೋ ಹರಿದ್ರಕಃ ।
ಕುಮುದಃ ಕುಮುದಾಕ್ಷಶ್ಚ ತಿತ್ತಿರಿರ್ಹಲಿಕಸ್ತಥಾ ॥೧೩॥

ಅಪರಾಜಿತೋ ಜ್ಯೋತಿಕಶ್ಚ ಪನ್ನಗಃ ಶ್ರೀವಹಸ್ತಥಾ ।
ಕೌರವ್ಯೋ ಧೃತರಾಷ್ಟ್ರಶ್ಚ ಪುಷ್ಕರಃ ಶಲ್ಯಕಸ್ತಥಾ ॥೧೪॥

ಮೂಷಿಕಾದ, ಶಂಖಶಿರ, ಪೂರ್ಣದಂಷ್ಟ್ರ, ಹರಿದ್ರಕ, ಕುಮುದ, ಕುಮುದಾಕ್ಷ, ತಿತ್ತಿರಿ, ಹಲಿಕ, ಅಪರಾಜಿತ, ಜ್ಯೋತಿಕ, ಶ್ರೀವಹ, ಕೌರವ್ಯ, ಧೃತರಾಷ್ಟ್ರ, ಪುಷ್ಕರ, ಶಲ್ಯಕ.

ವಿರಾಜಶ್ಚ ಸುಬಾಹುಶ್ಚ ಸಾಲಿಪಿಂಡಶ್ಚ ವೀರ್ಯವಾನ್ ।
ಹಸ್ತಿಭದ್ರಃ ಪಿತರಕಃ ಮುಖರಃ ಕೋಣನಾಶಕಃ ॥೧೫॥

ಕುಂಜರಃ ಕುರಕಃ ಶೈಲಃ ತಥಾ ನಾಗಃ ಪ್ರಭಾಕರಃ ।
ಕುಮುದಃ ಕುಮುದಾಕ್ಷಶ್ಚ ತಿಕಿರಿರ್ಮಧ್ಯತಿತ್ತಿರಿಃ ॥೧೬॥

ವಿರಾಜ, ಸುಬಾಹು, ಸಾಲಿಪಿಂಡ, ವೀರ್ಯವಾನ್, ಹಸ್ತಿಭದ್ರ, ಪಿಠರಕ, ಮುಖರಿ, ಕೋಣನಾಶಕ, ಕುಂಜರ, ಕುರಕ, ಶೈಲ, ಪ್ರಭಾಕರ, ಕುಮುದ, ಕುಮುದಾಕ್ಷ, ತಿಕಿರಿ, ಮಧ್ಯತಿತ್ತಿರಿ,

ಕರ್ಕರಾಕರ್ಕರೌ ಲೋಹೌ ಕುಂಡೋದರಮಹೋದರೌ ।
ಏತೇ ಪ್ರಾಧಾನ್ಯತೋ ನಾಗಾಃ ಕೀರ್ತಿತಾ ದ್ವಿಜಸತ್ತಮ ॥೧೭॥

ಕರ್ಕರ, ಅಕರ್ಕರ ಮತ್ತು ಕೆಂಪುಬಣ್ಣದ ಕುಂಡೋದರ, ಮಹೋದರ. ಎಲೈ ವೀರಶ್ರೇಷ್ಠನೇ, ಈ ಪ್ರಧಾನವಾದ ನಾಗಗಳ ಹೆಸರನ್ನು ಹೇಳಿದ್ದೇನೆ.

ಬಹುತ್ವಾನ್ನಾಮಧೇಯಾನಾಮಿತರೇ ನಾನುಕೀರ್ತಿತಾಃ ।
ಏತೇಷಾಂ ಪ್ರಸವೋ ಯಶ್ಚ ಪ್ರಸವಸ್ಯ ಚ ಸಂತತಿಃ ॥೧೮॥

ಅಸಂಖ್ಯೇಯೇತಿ ಮತ್ವಾ ತಾನ್ ನ ಬ್ರವೀಮಿ ದ್ವಿಜೋತ್ತಮ ।
ಬಹೂನಿ ಚ ಸಹಸ್ರಾಣಿ ಪ್ರಯುತಾನ್ಯರ್ಬುದಾನಿ ಚ ।
ಅಶಕ್ಯಾನ್ಯೇವ ಸಂಖ್ಯಾತುಂ ಭುಜಂಗಾನಾಂ ತಪೋಧನ ॥೧೯॥

ಅವುಗಳ ಹೆಸರುಗಳು ಇನ್ನೂ ಅನೇಕವಿರುವುದರಿಂದ ನಾನು ಅದನ್ನು ಹೇಳಲಿಲ್ಲ. ಇವುಗಳ ಮಕ್ಕಳು ಮತ್ತು ಅವರ ಸಂತತಿಯಂತೂ ಅಸಂಖ್ಯೇಯವಾಗಿದೆ. ಎಲೈ ದ್ವಿಜೋತ್ತಮನೇ, ಆ ಕಾರಣದಿಂದ ನಾನು ನಿನಗೆ ಅದನ್ನು ಹೇಳುವುದಿಲ್ಲ. ಎಲೈ ತಪೋಧನನೇ, ಸರ್ಪಗಳು ಅನೇಕ ಸಹಸ್ರಸಂಖ್ಯೆಯಲ್ಲಿ, ಪ್ರಯುತಗಳ ಸಂಖ್ಯೆಯಲ್ಲಿ, ಅರ್ಬುದಗಳ ಸಂಖ್ಯೆಯಲ್ಲಿ ಇವೆ. ಸರ್ಪಗಳ ಸಂಖ್ಯೆಯನ್ನು ಎಣಿಸುವುದು ಅಶಕ್ಯವಾದುದು.

॥ ಇತಿ ಶ್ರೀಮನ್ಮಹಾಭಾರತೇ ಶತಸಹಸ್ರಿಕಾಯಾಂಸಂಹಿತಾಯಾಮಾದಿಪರ್ವಣಿ
ತ್ರಿಂಶೋऽಧ್ಯಾಯಃ ॥

॥ ಇತಿ ಆಸ್ತೀಕಪರ್ವಣಿ ಅಷ್ಟಾದಶೋऽಧ್ಯಾಯಃ ॥

ಇಲ್ಲಿಗೆ ಮಹಾಭಾರತದ ಆದಿಪರ್ವದಲ್ಲಿ ಮೂವತ್ತನೆಯ ಅಧ್ಯಾಯ ಮುಗಿಯಿತು.

★★★★★

ಮೂವತ್ತೊಂದನೆಯ ಅಧ್ಯಾಯ

(ಸರ್ಪಗಳ ದುರ್ನಡತೆಯಿಂದ ತಪ್ತರಾದ ಶೇಷದೇವರ ತಪಸ್ಸು. ಬ್ರಹ್ಮದೇವರ ವರದಿಂದ ಗರುಡನ ಜೊತೆಯಲ್ಲಿ ಸಖ್ಯ. ಭೂಮಿಯ ವಿವರದಲ್ಲಿಳಿದು ಭೂಮಿಯ ಧಾರಣೆ.)

ಶೌನಕಃ

ಏತೇ ವೈ ಭುಜಗಾಸ್ತಾತ ವೀರ್ಯವಂತೋ ದುರಾಸದಾಃ ।
ಶಾಪಂ ತಂ ತ್ವವಿಜ್ಞಾಯ ಕೃತವಂತೋ ನು ಕಿಂ ಪರಮ್ ॥೧॥

ಪ್ರೀತಿಪಾತ್ರನಾದ ಸೂತಪುತ್ರನೇ, ಈ ಸರ್ಪಗಳು ಮಹಾಪರಾಕ್ರಮಶಾಲಿಗಳೆಂದೂ, ಅವುಗಳ ಸಮೀಪಕ್ಕೆ ಹೋಗಲೂ ಸಾಧ್ಯವಿಲ್ಲವೆಂದೂ ತಿಳಿಸಿದ್ದೀಯೆ. ಈ ಶಾಪವನ್ನು ತಿಳಿದ ಆ ಸರ್ಪಗಳು ಮುಂದೇನು ಮಾಡಿದವು?

ಸೂತಃ

ತೇಷಾಂ ತು ಭಗವಾನ್ ಶೇಷಸ್ತ್ಯಕ್ತ್ವಾ ಸರ್ವಾನ್ ಮಹಾಯಶಾಃ ।
ತಪೋ ವಿಪುಲಮಾತಸ್ಥೇ ವಾಯುಭಕ್ಷೋ ಜಿತೇಂದ್ರಿಯಃ ।
ಗಂಧಮಾದನಮಾಸಾದ್ಯ ಬದರ್ಯಾಂ ಚ ತಪೋರತಃ ॥೨॥

ಮಹಾಕೀರ್ತಿಶಾಲಿಯಾದ, ಪೂಜ್ಯನಾದ ಶೇಷನು, ಆ ಎಲ್ಲಾ ಸರ್ಪಗಳನ್ನೂ ತ್ಯಜಿಸಿ, ಜಿತೇಂದ್ರಿಯನಾಗಿ, ವಾಯುಭಕ್ಷನಾಗಿ, ಗಂಧಮಾದನಪರ್ವತಕ್ಕೆ ಹೋಗಿ, ಬದರೀಕ್ಷೇತ್ರದಲ್ಲಿ ಅಗಾಧವಾದ ತಪಸ್ಸಿನಲ್ಲಿ ನಿರತನಾದನು.

ದಶಾರ್ಣೇ ಪುಷ್ಕರಾರಣ್ಯೇ ತಥಾ ಹಿಮವತಸ್ತಟೇ ।
ತೇಷು ತೇಷು ಚ ಪುಣ್ಯೇಷು ತೀರ್ಥೇಷ್ವಾಯತನೇಷು ಚ ।
ಏಕಾಂತಶೀಲೋ ನಿಯತಃ ಸತತಂ ವಿಜಿತೇಂದ್ರಿಯಃ ॥೩॥

ಅವನು ದಶಾರ್ಣದಲ್ಲಿ, ಪುಷ್ಕರಕ್ಷೇತ್ರದಲ್ಲಿ, ಹಿಮಾಲಯದ ತಪ್ಪಲಿನಲ್ಲಿ ಮತ್ತು ಬೇರೆ ಬೇರೆ ಪುಣ್ಯಕ್ಷೇತ್ರಗಳಲ್ಲಿ ಮತ್ತು ತೀರ್ಥಗಳಲ್ಲಿ ಏಕಾಂತಪ್ರಿಯನಾಗಿ,

ಮೌನವ್ರತಧಾರಿಯಾಗಿ, ಇಂದ್ರಿಯಜಯದಿಂದ ಕೂಡಿದವನಾಗಿ ಸತತವಾಗಿ ತಪಸ್ಸನ್ನು ಆಚರಿಸಿದನು.

ತಪ್ಯಮಾನಂ ತಪೋ ಘೋರಂ ತಂ ದದರ್ಶ ಪಿತಾಮಹಃ ।
ಪರಿಶುಷ್ಕಮಾಂಸತ್ವಕ್ಸ್ನಾಯುಂ ಜಟಾಚೀರಧರಂ ಪ್ರಭುಃ ॥೪॥

ಘೋರವಾದ ತಪಸ್ಸನ್ನು ಆಚರಿಸುತ್ತಾ, ದೇಹದ ಮಾಂಸ, ಸ್ನಾಯುಗಳೆಲ್ಲವೂ ಒಣಗಿಹೋದ ಜಟಾಚೀರಧಾರಿಯಾದ ಅವನನ್ನು ಪ್ರಭುಗಳೂ, ಪಿತಾಮಹರೂ ಆದ ಬ್ರಹ್ಮದೇವರು ನೋಡಿದರು.

ತಮಬ್ರವೀತ್ಸತ್ಯಧೃತಿಂ ತಪ್ಯಮಾನಂ ಪಿತಾಮಹಃ ।
ಕಿಮಿದಂ ಕುರುಷೇ ಶೇಷ ಪ್ರಜಾನಾಂ ಸ್ವಸ್ತಿ ವೈ ಕುರು ॥೫॥

ತ್ವಂ ಹಿ ತೀವ್ರೇಣ ತಪಸಾ ಪ್ರಜಾಸ್ತಾಪಯಸೇಽನಘ ।
ಬ್ರೂಹಿ ಕಾಮಂ ಚ ಮೇ ಶೇಷ ಯತ್ತೇ ಹೃದಿ ಚಿರಸ್ಥಿತಮ್ ॥ ೬॥

ಬಹಳ ಧೈರ್ಯದಿಂದ ಕೂಡಿದವನಾಗಿ ಹಾಗೆ ತಪಸ್ಸನ್ನು ಮಾಡುತ್ತಿದ್ದ ಶೇಷನನ್ನು ಕುರಿತು ಬ್ರಹ್ಮದೇವರು ಮಾತನಾಡಿದರು. ಶೇಷನೇ, ಇದೇನು ಮಾಡುತ್ತಿದ್ದೀಯೆ? ಪ್ರಜೆಗಳಿಗೆ ಹಿತವನ್ನು ಮಾಡು. ಅನಘನೇ, ನಿನ್ನ ತೀವ್ರವಾದ ತಪಸ್ಸಿನಿಂದ ಪ್ರಜೆಗಳು ತಪ್ತರಾಗಿದ್ದಾರೆ. ಶೇಷನೇ, ನಿನ್ನ ಮನಸ್ಸಿನಲ್ಲಿ ಬಹಳ ದಿನದಿಂದ ಇರುವ ಆಸೆಯನ್ನು ಹೇಳು.

ಶೇಷಃ

ಸೋದರ್ಯಾ ಮಮ ಸರ್ವೇ ಹಿ ಭ್ರಾತರೋ ಮಂದಚೇತಸಃ ।
ಸಹ ತೈರ್ನೋತ್ಸಹೇ ವಸ್ತುಂ ತದ್ ಭವಾನನುಮನ್ಯತಾಮ್ ॥೭॥

ನನ್ನ ಸಹೋದರರೆಲ್ಲರೂ ಮಂದಬುದ್ಧಿಯುಳ್ಳವರು. ನಾನು ಅವರ ಜೊತೆಯಲ್ಲಿ ವಾಸಿಸಲು ಇಷ್ಟಪಡುವುದಿಲ್ಲ. ತಾವು ಅದಕ್ಕೆ ಅನುಮತಿಯನ್ನು ಕೊಡಬೇಕು.

ಅಭ್ಯಸೂಯಂತಿ ಸತತಂ ಪರಸ್ಪರಮಮಿತ್ರವತ್ ।
ತತೋಽಹಂ ತಪ ಆತಿಷ್ಠೇ ನೈತಾನ್ ಪಶ್ಯೇಯಮಿತ್ಯುತ ॥೮॥

ಅವರು ಶತ್ರುಗಳಂತೆ ಪರಸ್ಪರವಾಗಿ ಅಸೂಯೆಪಡುತ್ತಿದ್ದಾರೆ. ಆದ್ದರಿಂದ ನಾನು ಅವರನ್ನು ನೋಡಬಾರದು ಎಂಬ ಉದ್ದೇಶದಿಂದ ತಪಸ್ಸನ್ನು ಮಾಡುತ್ತಿದ್ದೇನೆ.

ಅಮರ್ಷಯಂತಿ ಸತತಂ ಸಸುತಾಂ ವಿನತಾಂ ಚ ತೇ ।
ಅಸ್ಮಾಕಂ ಚಾಪರೋ ಭ್ರಾತಾ ವೈನತೇಯಃ ಪಿತಾಮಹ ॥೯॥

ತಂ ಚ ದ್ವಿಷಂತಿ ಚಾತ್ಯರ್ಥಂ ಸ ಚಾಪಿ ಸುಮಹಾಬಲಃ ।
ವರಪ್ರದಾನಾತ್ ಸ್ವಪಿತುಃ ಕಾಶ್ಯಪಸ್ಯ ಮಹಾತ್ಮನಃ ॥೧೦॥

ಅವರು ವಿನತೆಯನ್ನೂ, ಅವಳ ಮಗನಾದ ಗರುಡನನ್ನೂ ಸತತವಾಗಿ ಕೋಪಗೊಳಿಸುತ್ತಿದ್ದಾರೆ. ಪಿತಾಮಹನೇ, ವಿನತೆಯ ಮಗನಾದ ಗರುಡನು ನಮ್ಮ ಇನ್ನೊಬ್ಬ ಸಹೋದರನಷ್ಟೆ. ಇವರು ಅವನನ್ನೂ ಬಹಳವಾಗಿ ದ್ವೇಷಿಸುತ್ತಿದ್ದಾರೆ. ಅವನಾದರೋ, ನಮ್ಮ ತಂದೆಯಾದ ಮಹಾತ್ಮರಾದ ಕಾಶ್ಯಪರಾದ ವರಪ್ರದಾನದಿಂದ ಮಹಾಬಲಶಾಲಿಯಾಗಿದ್ದಾನೆ.

ಸೋಽಹಂ ತಪಃ ಸಮಾಸ್ಥಾಯ ಮೋಕ್ಷ್ಯಾಮೀದಂ ಕಳೇಬರಮ್ ।
ಕಥಂ ಮೇ ಪ್ರೇತ್ಯಭಾವೇಽಪಿ ತೈರ್ನ ಸ್ಯಾತ್ ಸಹ ಸಂಗಮಃ ॥೧೧॥

ಆದ್ದರಿಂದ ನಾನು ತಪಸ್ಸನ್ನು ಆಚರಿಸಿ ಈ ಶರೀರವನ್ನು ಪರಿತ್ಯಜಿಸುವುದೆಂದು ನಿರ್ಧರಿಸಿದ್ದೇನೆ. ಮರಣವನ್ನು ಹೊಂದಿದ ಮೇಲೆಯೂ ನನಗೆ ಅವರ ಜೊತೆಯಲ್ಲಿ ಸಂಗಮವು ಹೇಗೆ ಆಗದೆ ಇದ್ದೀತು?

ಬ್ರಹ್ಮಾ

ಜಾನಾಮಿ ಶೇಷ ಸರ್ವೇಷಾಂ ಭ್ರಾತೄಣಾಂ ತೇ ವಿಚೇಷ್ಟಿತಮ್ ।
ಮಾತುಶ್ಚಾಪ್ಯಪರಾಧಾದ್ವೈ ಭ್ರಾತೄಣಾಂ ತೇ ಮಹದ್ಭಯಮ್ ॥೧೨॥

ಎಲೈ ಶೇಷನೇ, ನಾನು ನಿನ್ನ ಎಲ್ಲಾ ಸಹೋದರರ ನಡತೆಯನ್ನೂ ತಿಳಿದಿದ್ದೇನೆ. ತಾಯಿಯಾದ ವಿನತೆಗೆ ಮಾಡಿದ ಅಪರಾಧದಿಂದ ಆ ನಿನ್ನ ಸಹೋದರರಿಗೆ ದೊಡ್ಡ ಭಯವು ಪ್ರಾಪ್ತವಾಗಿದೆ.

ಕೃತೋಽತ್ರ ಪರಿಹಾರಶ್ಚ ಪೂರ್ವಮೇವ ಭುಜಂಗಮ ।
ಭ್ರಾತೄಣಾಂ ತವ ಸರ್ವೇಷಾಂ ಸುವೃತ್ತಾನಾಂ ವಿಮೋಕ್ಷಣಮ್ ॥೧೩॥

ಎಲೈ ಭುಜಂಗಮನೇ, ಈ ವಿಷಯದಲ್ಲಿ ಮೊದಲೇ ಪರಿಹಾರವನ್ನು ವ್ಯವಸ್ಥೆ ಮಾಡಿದ್ದೇನೆ. ಒಳ್ಳೆಯ ನಡತೆಯುಳ್ಳ ನಿನ್ನ ಎಲ್ಲಾ ಸಹೋದರರನ್ನೂ ಈ ಭಯದಿಂದ ಪಾರುಮಾಡಿದ್ದೇನೆ.

ಶಾಪಾತ್ ತಸ್ಮಾನ್ಮಹಾಘೋರಾತ್ ಮುಕ್ತಾತ್ಮಾ ತ್ವಂ ಮಹಾಬಲ ।
ವೃಣೀಷ್ವ ಚ ವರಂ ಮತ್ತಃ ಶೇಷ ಯತ್ತೇऽಭಿಕಾಂಕ್ಷಿತಮ್ ॥೧೪॥

ಎಲೈ ಮಹಾಬಲನೇ, ನೀನು ಆ ಮಹಾಘೋರವಾದ ಶಾಪದಿಂದ ಮುಕ್ತನಾಗಿದ್ದೀಯೆ. ಶೇಷನೇ, ನಿನಗೆ ಇಷ್ಟವಾದ ವರವನ್ನು ನನ್ನಿಂದ ಕೇಳಿ ಪಡೆದುಕೋ.

ದಿತ್ಸಾಮಿ ಹಿ ವರಂ ತೇऽದ್ಯ ಪ್ರೀತಿರ್ಮೇ ಪರಮಾ ತ್ವಯಿ ।
ದಿಷ್ಟ್ಯಾ ಚ ಬುದ್ಧಿರ್ಧರ್ಮೇ ತೇ ನಿವಿಷ್ಟಾ ಭುಜಗೋತ್ತಮ ।
ಅತೋ ಭೂಯಶ್ಚ ತೇ ಬುದ್ಧಿರ್ಧರ್ಮೇ ಭವತು ಸುಸ್ಥಿರಾ ॥೧೫॥

ನಾನು ಈ ದಿನ ವರವನ್ನು ಕೊಡಲು ಬಯಸುತ್ತಿದ್ದೇನೆ. ನಿನ್ನಲ್ಲಿ ನನಗೆ ಬಹಳ ಪ್ರೀತಿಯಿದೆ. ಎಲೈ ಭುಜಗಶ್ರೇಷ್ಠನೇ, ದೇವರ ದಯದಿಂದ ನಿನಗೆ ಧರ್ಮದಲ್ಲಿಯೇ ಬುದ್ಧಿಯು ನೆಲೆಸಿದೆ. ನಿನ್ನ ಬುದ್ಧಿಯು ಇದಕ್ಕಿಂತ ಹೆಚ್ಚಾಗಿ ಸ್ಥಿರವಾಗಿ ಧರ್ಮದಲ್ಲಿ ನೆಲೆಸಲಿ.

ಶೇಷಃ

ಧರ್ಮೇ ಮೇ ರಮತಾಂ ಬುದ್ಧಿಃ ಶಮೇ ತಪಸಿ ಚೇಶ್ವರ ॥೧೬॥

ಎಲೈ ಪ್ರಭುವೇ, ನನ್ನ ಬುದ್ಧಿಯು ಧರ್ಮದಲ್ಲಿಯೂ, ಭಗವನ್ನಿಷ್ಠೆಯಲ್ಲಿಯೂ, ತಪಸ್ಸಿನಲ್ಲಿಯೂ ಸಂತೋಷವನ್ನು ಪಡೆಯಲಿ.

ಬ್ರಹ್ಮಾ

ಪ್ರೀತೋऽಸ್ಮ್ಯನೇನ ತೇ ಶೇಷ ದಮೇನ ಪ್ರಶಮೇನ ಚ ।
ತ್ವಯಾ ತ್ವಿದಂ ವಚಃ ಕಾರ್ಯಂ ಮನ್ನಿಯೋಗಾತ್ ಪ್ರಜಾಹಿತಮ್ ॥

ಎಲೈ ಶೇಷನೇ, ನಾನು ನಿನ್ನ ಇಂದ್ರಿಯನಿಗ್ರಹದಿಂದಲೂ ಮತ್ತು ಭಗವನ್ನಿಷ್ಠೆಯಿಂದಲೂ ಸಂತುಷ್ಟನಾಗಿದ್ದೇನೆ. ನನ್ನ ಆದೇಶದಂತೆ, ನೀನು ಪ್ರಜೆಗಳಿಗೆ ಹಿತವಾದ ಈ ಕಾರ್ಯವನ್ನು ಮಾಡಬೇಕು.

ಇಮಾಂ ಮಹೀಂ ಶೈಲವನೋಪಪನ್ನಾಂ
ಸಸಾಗರಾಂ ಸನಗರಪತ್ತನಾಂ ಚ ।
ತ್ವಂ ಶೇಷ ಸಮ್ಯಕ್ ಚಲಿತಾಂ ಯಥಾವತ್
ಸಂಗೃಹ್ಯ ತಿಷ್ಠಸ್ವ ಯಥಾऽಚಲಾ ಸ್ಯಾತ್ ॥೧೮॥

ಎಲೈ ಶೇಷನೇ, ಶೈಲವನಕಾನನಗಳಿಂದಲೂ, ಸಾಗರನಗರ ಪಟ್ಟಣಗಳಿಂದಲೂ ಕೂಡಿದ ಈ ಭೂಮಿಯು ಅಲುಗಾಡುತ್ತಿದೆ. ನೀನು ಈ ಭೂಮಿಯು ಸ್ಥಿರವಾಗಿರುವಂತೆ ಅದನ್ನು ಧರಿಸಿ ಕುಳಿತುಕೊಳ್ಳಬೇಕು.

ಶೇಷಃ

ಯಥಾಹ ದೇವೋ ವರದಃ ಪ್ರಜಾಪತಿ -
ರ್ಮಹೀಪತಿರ್ಭುವನಪತಿರ್ಜಗತ್ಪತಿಃ ।
ತಥಾ ಮಹೀಂ ಧಾರಯಿತಾऽಸ್ಮಿ ನಿಶ್ಚಲಾಂ
ಪ್ರಯಚ್ಛ ತಾಂ ಮೇ ಶಿರಸಿ ಪ್ರಜಾಪತೇ ॥೧೯॥

ನನಗೆ ವರವನ್ನು ನೀಡಿದ ಪ್ರಜಾಪತಿಯೂ, ಮಹೀಪತಿಯೂ, ಭುವನಪತಿಯೂ, ಜಗತ್ಪತಿಯೂ ಆದ ತಾವು ಹೇಳಿದಂತೆ, ನಾನು ಭೂಮಿಯನ್ನು ಅಲುಗಾಡದಂತೆ ಧರಿಸುತ್ತೇನೆ. ಎಲೈ ಪ್ರಜಾಪತಿಯೇ, ನನ್ನ ಶಿರಸ್ಸಿನಲ್ಲಿ ಭೂಮಿಯನ್ನು ಇಡು.

ಬ್ರಹ್ಮಾ

ಅಧೋ ಮಹೀಂ ಗಚ್ಛ ಭುಜಂಗಮೋತ್ತಮ
ಸ್ವಯಂ ತವೈಷಾ ವಿವರಂ ಪ್ರದಾಸ್ಯತಿ ।
ಇಮಾಂ ಧರಾಂ ಧಾರಯತಾ ತ್ವಯಾ ಹಿ ಮೇ
ಮಹತ್ ಪ್ರಿಯಂ ಶೇಷ ಕೃತಂ ಭವಿಷ್ಯತಿ ॥೨೦॥

ಎಲೈ ಭುಜಗಶ್ರೇಷ್ಠನೇ, ನೀನು ಭೂಮಿಯ ಕೆಳಗೆ ಹೋಗು. ಭೂಮಿಯು ತಾನಾಗಿಯೇ ನಿನಗೆ ದಾರಿಯನ್ನು ಕೊಡುವುದು. ಎಲೈ ಶೇಷನೇ, ಈ ಭೂಮಿಯನ್ನು ಧರಿಸುವ ನಿನ್ನಿಂದ ನನಗೆ ಬಹಳ ಪ್ರಿಯವಾದ ಕಾರ್ಯವು ಮಾಡಲ್ಪಡುತ್ತದೆ.

ಶೇಷೋऽಸಿ ನಾಗೋತ್ತಮ ಧರ್ಮದೇವೋ
ಮಹೀಮಿಮಾಂ ಧಾರಯಸೇ ಮದೇಕಃ ।

ಅನಂತಭೋಗಂ ಪರಿಗೃಹ್ಯ ಸರ್ವಂ
ಯಥಾऽಹಮೇವಂ ಬಲಭಿತ್ ತಥಾ ಭವಾನ್ ॥೨೧॥

ಎಲೈ ನಾಗೋತ್ತಮನೇ, ನೀನು ಧರ್ಮದೇವನಾದ ಶೇಷನಾಗಿದ್ದೀಯೆ. ಹೇಗೆ ನಾನು ಪ್ರಜೆಗಳಿಂದ ಭೋಜ್ಯವಾದ ಭೋಗಗಳ ಒಂದೊಂದು ಅಂಶವನ್ನು ತೆಗೆದುಕೊಂಡು ಎಲ್ಲಾ ಲೋಕಗಳನ್ನೂ ಧರಿಸಿದ್ದೇನೆಯೋ ಮತ್ತು ಹೇಗೆ ಇಂದ್ರನು ಪ್ರಜೆಗಳ ಭೋಗಾಂಶವನ್ನು ತೆಗೆದುಕೊಂಡು ಜಗತ್ತನ್ನು ಧರಿಸಿದ್ದಾನೆಯೋ, ಅದರಂತೆ ನೀನು ಸಹ ಪ್ರಜೆಗಳ ಭೋಗಗಳಿಂದ ಒಂದೊಂದು ಅಂಶವನ್ನು ತೆಗೆದುಕೊಂಡು ಒಬ್ಬನೇ ಈ ಭೂಮಿಯನ್ನು ಶಿರಸ್ಸಿನಲ್ಲಿ ಧರಿಸು.

ಸೂತಃ

ತಥೇತಿ ಚೋಕ್ತ್ವಾ ವಿವರಂ ಪ್ರವಿಶ್ಯ ಸ
ಪ್ರಭುರ್ಭವೋ ಭುಜಗವರಾಗ್ರಜಃ ಸ್ಥಿತಃ ।
ಬಿಭರ್ತಿ ದೇವೀಂ ಶಿರಸಾ ಮಹೀಮಿಮಾಂ
ಸಮುದ್ರನೇಮಿಂ ಪರಿಗೃಹ್ಯ ಸರ್ವಶಃ ॥೨೨॥

ಶೇಷನು ''ಹಾಗೆಯೇ ಆಗಲಿ'' ಎಂದು ಹೇಳಿ ಭೂಮಿಯ ವಿವರವನ್ನು ಪ್ರವೇಶಿಸಿ, ಸರ್ಪಜಾತಿಯಲ್ಲಿ ಮೊದಲು ಜನಿಸಿದವನೂ ಆದ ಅವನು ಸಮುದ್ರಪರಿಖೆಯಾದ ಈ ಭೂಮಿಯನ್ನು ಶಿರಸ್ಸಿನಲ್ಲಿ ಧರಿಸಿ ಸ್ಥಿರನಾಗಿರುತ್ತಾನೆ.

ಅಧೋ ಭೂಮೇರ್ವಸತ್ಯೇವ ನಾಗೋऽನಂತಃ ಪ್ರತಾಪವಾನ್ ।
ಧಾರಯನ್ ವಸುಧಾಮೇಕಃ ಶಾಸನಾದ್ ಬ್ರಹ್ಮಣೋ ವಿಭುಃ ॥೨೩॥

ಪ್ರತಾಪಶಾಲಿಯಾದ, ಈ ಅನಂತನಾಗನು ಬ್ರಹ್ಮದೇವರ ಶಾಸನದಂತೆ ಭೂಮಿಯ ಕೆಳಗೆ ಇದ್ದು, ಭೂಮಿಯನ್ನು ಧರಿಸಿದ್ದಾನೆ.

ಸುಪರ್ಣಂ ಚ ಸಖಾಯಂ ವೈ ಭಗವಾನಮರೋತ್ತಮಃ ।
ಪ್ರಾದಾದೇನಮನಂತಾಯ ವೈನತೇಯಂ ಪಿತಾಮಹಃ ॥೨೪॥

ಪಿತಾಮಹರೂ, ದೇವಶ್ರೇಷ್ಠರೂ, ಪೂಜ್ಯರೂ ಆದ ಬ್ರಹ್ಮದೇವರು ವಿನತೆಯ ಪುತ್ರನಾದ ಗರುಡನನ್ನು ಶೇಷನಿಗೆ ಸ್ನೇಹಿತನನ್ನಾಗಿ ನೀಡಿದರು.

ಅನಂತೇ ಚ ಪ್ರಯಾತೇ ತು ವಾಸುಕಿಃ ಸುಮಹಾಬಲಃ ।
ಅಭ್ಯಗಚ್ಛತ ನಾಗೈಸ್ತು ದೇವೈರಿವ ಚ ವಾಸವಃ ॥೨೫॥

ಅನಂತನು ಹೊರಟುಹೋಗುತ್ತಿರಲು ಮಹಾಬಲಶಾಲಿಯಾದ ವಾಸುಕಿಯು ದೇವತೆಗಳ ಜೊತೆಯಲ್ಲಿ ಇಂದ್ರನು ಮಂತ್ರಾಲೋಚನೆ ಮಾಡಿದಂತೆ ಉಳಿದ ನಾಗಗಳ ಜೊತೆಯಲ್ಲಿ ಮಂತ್ರಾಲೋಚನೆ ನಡೆಸಲು ಸೇರಿದನು.

॥ ಇತಿ ಶ್ರೀಮನ್ಮಹಾಭಾರತೇ ಶತಸಹಸ್ರಿಕಾಯಾಂಸಂಹಿತಾಯಾಮಾದಿಪರ್ವಣಿ ಏಕತ್ರಿಂಶೋऽಧ್ಯಾಯಃ ॥

॥ ಇತಿ ಆಸ್ತೀಕಪರ್ವಣಿ ಏಕೋನವಿಂಶೋऽಧ್ಯಾಯಃ ॥

ಇಲ್ಲಿಗೆ ಮಹಾಭಾರತದ ಆದಿಪರ್ವದಲ್ಲಿ ಮೂವತ್ತೊಂದನೆಯ ಅಧ್ಯಾಯ ಮುಗಿಯಿತು.

★★★★★

ಮೂವತ್ತೆರಡನೆಯ ಅಧ್ಯಾಯ

(ತಾಯಿಯ ಶಾಪದ ಪರಿಹಾರಕ್ಕಾಗಿ ಸರ್ಪಗಳ ಜೊತೆಯಲ್ಲಿ ವಾಸುಕಿಯ ಮಂತ್ರಾಲೋಚನೆ. ಸರ್ಪಯಾಗವನ್ನು ನಿವಾರಿಸಲು ಸರ್ಪಗಳಿಂದ ಬೇರೆಬೇರೆ ಉಪಾಯಗಳ ಸೂಚನೆ.)

ಸೂತಃ

ಮಾತುಃ ಸಕಾಶಾತ್ ತಂ ಶಾಪಂ ಶ್ರುತ್ವಾ ಪನ್ನಗಸತ್ತಮಃ ।
ವಾಸುಕಿಶ್ಚಿಂತಯಾಮಾಸ ಶಾಪೋऽಯಂ ನ ಭವೇತ್ ಕಥಮ್ ॥೧॥

ತತಃ ಸ ಮಂತ್ರಯಾಮಾಸ ಭ್ರಾತೃಭಿಃ ಸಹ ಸರ್ವಶಃ ।
ಐರಾವತಪ್ರಭೃತಿಭಿರ್ಯೇ ಸ್ಮ ಧರ್ಮಪರಾಯಣಾಃ ॥೨॥

ತಾಯಿಯ ಶಾಪವನ್ನು ತಿಳಿದ ಸರ್ಪಶ್ರೇಷ್ಠನಾದ ವಾಸುಕಿಯು ಈ ಶಾಪವನ್ನು ನಿವಾರಿಸುವುದು ಹೇಗೆ ಎಂದು ಚಿಂತಿಸಿದನು. ಆಗ ಅವನು ಐರಾವತ ಮೊದಲಾದ ಧರ್ಮಪರಾಯಣರಾದ ಎಲ್ಲಾ ಸಹೋದರ ಸರ್ಪಗಳ ಜೊತೆಯಲ್ಲಿ ಮಂತ್ರಾಲೋಚನೆಯನ್ನು ನಡೆಸಿದನು.

ವಾಸುಕಿಃ

ಅಯಂ ಶಾಪೋ ಯಥೋತ್ಸ್ರಷ್ಟೋ ವಿದಿತೋ ವಸ್ತಥಾऽನಘಾಃ ।
ತಸ್ಯ ಶಾಪಸ್ಯ ಮೋಕ್ಷಾರ್ಥಂ ಮಂತ್ರಯಿತ್ವಾ ಯತಾಮಹೇ ॥೩॥

ಎಲೈ ಪರಿಶುದ್ಧರಾದವರೇ, ಈ ಶಾಪವು ಬಂದ ರೀತಿಯು ನಿಮಗೆ ತಿಳಿದಿದೆ. ನಾವು ಮಂತ್ರಾಲೋಚನೆಯನ್ನು ಮಾಡಿ ಆ ಶಾಪದ ವಿಮೋಚನೆಗಾಗಿ ಪ್ರಯತ್ನವನ್ನು ಮಾಡೋಣ.

ಸರ್ವೇಷಾಮಪಿ ಶಾಪಾನಾಂ ಪ್ರತಿಘಾತೋ ಹಿ ವಿದ್ಯತೇ ।
ನ ತು ಮಾತ್ರಾऽಭಿಶಪ್ತಾನಾಂ ಮೋಕ್ಷೋ ವಿದ್ಯೇತ ಪನ್ನಗಾಃ ॥೪॥

ಸರ್ವಶಾಪಗಳಿಗೂ ಒಂದು ಪ್ರತೀಕಾರವು ಇರುತ್ತದೆ. ಆದರೆ, ಎಲೈ ಸರ್ಪಗಳೇ, ತಾಯಿಯು ಕೊಟ್ಟ ಶಾಪಕ್ಕೆ ಯಾವ ಪ್ರತೀಕಾರವೂ ಕಾಣುವುದಿಲ್ಲ.

ಅವ್ಯಯಸ್ಯಾಪ್ರಮೇಯಸ್ಯ ಸತ್ಯಸ್ಯ ಚ ತಥಾಗ್ರತಃ ।
ಶಪ್ತಾ ಇತ್ಯೇವ ಮೇ ಶ್ರುತ್ವಾ ಜಾಯತೇ ಹೃದಿ ವೇಪಥುಃ ॥೫॥

ಅಪ್ರಮೇಯಮಹಿಮರೂ, ಶಾಶ್ವತರೂ ಆದ ಬ್ರಹ್ಮದೇವರ ಎದುರಿನಲ್ಲಿ ತಾಯಿಯು ಶಾಪವನ್ನು ಕೊಟ್ಟಳು ಎಂದು ಕೇಳಿ ನನ್ನ ಹೃದಯವು ನಡುಗುತ್ತಿದೆ.

'ಸತ್ಯಃ ಕೋ ಹಂಸವಾಹನಃ' ಎಂಬ ಕೋಶಕ್ಕೆ ಅನುಗುಣವಾಗಿ ಸತ್ಯ ಎಂದರೆ ಬ್ರಹ್ಮದೇವರು ಎಂದು ಅರ್ಥ. ಕದ್ರುವು ಶಾಪವನ್ನು ಕೊಟ್ಟಾಗ ಅಲ್ಲಿ ದೈವವಶಾತ್ ಬ್ರಹ್ಮದೇವರು ಇದ್ದರು ಎಂಬ ಸಂಗತಿಯು ಈ ಶ್ಲೋಕದಿಂದ ತಿಳಿದುಬರುತ್ತದೆ.

ನೂನಂ ಸರ್ವವಿನಾಶೋऽಯಮಸ್ಮಾಕಂ ಸಮುದಾಹೃತಃ ।
ನ ಹ್ಯಸ್ಮಾನ್ ಸೋऽವ್ಯಯೋ ದೇವಃ ಶಪಂತೀಂ ಪ್ರತ್ಯಪೇಧಯತ್ ॥೬॥

ನಿಶ್ಚಿತವಾಗಿ ನಮ್ಮೆಲ್ಲರ ವಿನಾಶವು ಉದ್ದಿಷ್ಟವಾಗಿದೆ ಎಂದು ತೋರುತ್ತದೆ. ಅವ್ಯಯರಾದ ಬ್ರಹ್ಮದೇವರು ನಮಗೆ ಶಾಪವನ್ನು ಕೊಡುವ ನಮ್ಮ ತಾಯಿಯನ್ನು ಪ್ರತಿಷೇಧಿಸಲಿಲ್ಲ.

ತಸ್ಮಾತ್ ಸಮ್ಮಂತ್ರಯಾಮೋऽದ್ಯ ಭುಜಂಗಾನಾಮನಾಮಯಮ್ ।
ಯಥಾ ಭವೇಚ್ಚ ಸರ್ವೇಷಾಂ ಮಾ ನಃ ಕಾಲೋऽತ್ಯಗಾದಯಮ್ ॥

ಆದ್ದರಿಂದ ನಾವೆಲ್ಲರೂ ಸೇರಿ ಸರ್ಪಗಳಿಗೆ ಏನು ಮಾಡಿದರೆ ಕ್ಷೇಮವಾಗುತ್ತದೆ ಎಂದು ಈ ದಿನ ಮಂತ್ರಾಲೋಚನೆ ಮಾಡೋಣ. ಈ ಕಾಲವನ್ನು ವ್ಯರ್ಥವಾಗಿ ಕಳೆಯುವುದು ಬೇಡ.

ಅಪಿ ಮಂತ್ರಯಮಾಣಾ ಹಿ ಹೇತುಂ ಪಶ್ಯಾಮ ಮೋಕ್ಷಣೇ ।
ಯಥಾ ನಷ್ಟಂ ಪುರಾ ದೇವೋ ಗೂಢಮಗ್ನಿಂ ಗುಹಾಗತಮ್ ॥೮॥

ಹೀಗೆ ಮಂತ್ರಾಲೋಚನೆಯನ್ನು ಮಾಡಿದರೆ, ಹಿಂದೆ ಭೃಗುಋಷಿಗಳ ಶಾಪದಿಂದ ನಷ್ಟನಾಗಿ ಪರ್ವತದ ಗುಹೆಯಲ್ಲಿ ಅಡಗಿದ್ದ ಅಗ್ನಿಯನ್ನು ಬ್ರಹ್ಮದೇವರು ನೋಡಿದಂತೆ ನಮಗೂ ಒಂದು ಉಪಾಯವು ಗೋಚರಿಸುತ್ತದೆ.

ಯಥಾ ಸ ಯಜ್ಞೋ ನ ಭವೇದ್ ಯಥಾ ಚಾಪಿ ಪರಾಭವೇತ್ ।
ಜನಮೇಜಯಸ್ಯ ಸರ್ಪಾಣಾಂ ವಿನಾಶಕರಣಂ ಹಿತಮ್ ॥೯॥

ಹೇಗೆ ಮಾಡಿದರೆ ಆ ಯಜ್ಞವೇ ನಡೆಯುವುದಿಲ್ಲವೋ ಅಥವಾ ಜನಮೇಜಯನಿಗೆ ಹಿತವಾದ ಎಲ್ಲಾ ಸರ್ಪಗಳ ವಿನಾಶಕ್ಕೆ ಕಾರಣವಾದ ಆ ಯಜ್ಞವು ಪ್ರಾರಂಭವಾದರೂ ಮಧ್ಯದಲ್ಲಿಯೇ ನಿಂತುಹೋಗುತ್ತದೆಯೋ ಅಂತಹ ಉಪಾಯವನ್ನು ಕುರಿತು ಮಂತ್ರಾಲೋಚನೆಯನ್ನು ಮಾಡೋಣ.

ಸೂತಃ

ತಥೇತ್ಯುಕ್ತ್ವಾ ತತಃ ಸರ್ವೇ ಕಾದ್ರವೇಯಾಃ ಸಮಾಗತಾಃ ।
ಸಮಯಂ ಚಕ್ರಿರೇ ತತ್ರ ಮಂತ್ರಬುದ್ಧಿವಿಶಾರದಾಃ ॥೧೦॥

ಆಗ ಕದ್ರುವಿನ ಮಕ್ಕಳಾದ ಎಲ್ಲಾ ಸರ್ಪಗಳೂ ಅಲ್ಲಿಗೆ ಬಂದು ಮಂತ್ರಾಲೋಚನೆಯಲ್ಲಿ ನಿಪುಣರಾದ ಅವರೆಲ್ಲರೂ ಒಂದು ಉಪಾಯವನ್ನು ಹುಡುಕುತ್ತೇವೆ ಎಂದು ಪ್ರತಿಜ್ಞೆಮಾಡಿ ಅಲ್ಲಿ ಕುಳಿತರು.

ಏಕೇ ತತ್ರಾಬ್ರುವನ್ ನಾಗಾ ವಯಂ ಭೂತ್ವಾ ದ್ವಿಜೋತ್ತಮಾಃ ।
ಜನಮೇಜಯಂ ತಂ ಭಿಕ್ಷಾಮೋ ಯಜ್ಞಸ್ತೇ ನ ಭವೇದಿತಿ ॥೧೧॥

ಅಲ್ಲಿ ಕೆಲವು ಸರ್ಪಗಳು ನಾವು ಬ್ರಾಹ್ಮಣಶ್ರೇಷ್ಠರಾಗಿ ರೂಪವನ್ನು ತಾಳಿ ಜನಮೇಜಯನ ಬಳಿಗೆ ಹೋಗಿ ಈ ಯಜ್ಞವು ನಡೆಯುವುದು ಬೇಡ ಎಂದು ಅವನಲ್ಲಿ ಭಿಕ್ಷೆಯನ್ನು ಬೇಡೋಣ ಎಂದು ಹೇಳಿದವು.

ವಾಸುಕಿಃ

ಅಯಂ ಶಾಪೋ ಯಥೋತ್ಸೃಷ್ಟೋ ವಿದಿತೋ ವಸ್ತಥಾऽನಘಾಃ ।
ತಸ್ಯ ಶಾಪಸ್ಯ ಮೋಕ್ಷಾರ್ಥಂ ಮಂತ್ರಯಿತ್ವಾ ಯತಾಮಹೇ ॥೩॥

ಎಲೈ ಪರಿಶುದ್ಧರಾದವರೇ, ಈ ಶಾಪವು ಬಂದ ರೀತಿಯು ನಿಮಗೆ ತಿಳಿದಿದೆ. ನಾವು ಮಂತ್ರಾಲೋಚನೆಯನ್ನು ಮಾಡಿ ಆ ಶಾಪದ ವಿಮೋಚನೆಗಾಗಿ ಪ್ರಯತ್ನವನ್ನು ಮಾಡೋಣ.

ಸರ್ವೇಷಾಮಪಿ ಶಾಪಾನಾಂ ಪ್ರತಿಘಾತೋ ಹಿ ವಿದ್ಯತೇ ।
ನ ತು ಮಾತ್ರಾऽಭಿಶಪ್ತಾನಾಂ ಮೋಕ್ಷೋ ವಿದ್ಯೇತ ಪನ್ನಗಾಃ ॥೪॥

ಸರ್ವಶಾಪಗಳಿಗೂ ಒಂದು ಪ್ರತೀಕಾರವು ಇರುತ್ತದೆ. ಆದರೆ, ಎಲೈ ಸರ್ಪಗಳೇ, ತಾಯಿಯು ಕೊಟ್ಟ ಶಾಪಕ್ಕೆ ಯಾವ ಪ್ರತೀಕಾರವೂ ಕಾಣುವುದಿಲ್ಲ.

ಅವ್ಯಯಸ್ಯಾಪ್ರಮೇಯಸ್ಯ ಸತ್ಯಸ್ಯ ಚ ತಥಾಗ್ರತಃ ।
ಶಪ್ತಾ ಇತ್ಯೇವ ಮೇ ಶ್ರುತ್ವಾ ಜಾಯತೇ ಹೃದಿ ವೇಪಥುಃ ॥೫॥

ಅಪ್ರಮೇಯಮಹಿಮರೂ, ಶಾಶ್ವತರೂ ಆದ ಬ್ರಹ್ಮದೇವರ ಎದುರಿನಲ್ಲಿ ತಾಯಿಯು ಶಾಪವನ್ನು ಕೊಟ್ಟಳು ಎಂದು ಕೇಳಿ ನನ್ನ ಹೃದಯವು ನಡುಗುತ್ತಿದೆ.

'ಸತ್ಯಃ ಕೋ ಹಂಸವಾಹನಃ' ಎಂಬ ಕೋಶಕ್ಕೆ ಅನುಗುಣವಾಗಿ ಸತ್ಯ ಎಂದರೆ ಬ್ರಹ್ಮದೇವರು ಎಂದು ಅರ್ಥ. ಕದ್ರುವು ಶಾಪವನ್ನು ಕೊಟ್ಟಾಗ ಅಲ್ಲಿ ದೈವವಶಾತ್ ಬ್ರಹ್ಮದೇವರು ಇದ್ದರು ಎಂಬ ಸಂಗತಿಯು ಈ ಶ್ಲೋಕದಿಂದ ತಿಳಿದುಬರುತ್ತದೆ.

ನೂನಂ ಸರ್ವವಿನಾಶೋऽಯಮಸ್ಮಾಕಂ ಸಮುದಾಹೃತಃ ।
ನ ಹ್ಯಸ್ಮಾನ್ ಸೋऽವ್ಯಯೋ ದೇವಃ ಶಪಂತೀಂ ಪ್ರತ್ಯಪೇಧಯತ್ ॥೬॥

ನಿಶ್ಚಿತವಾಗಿ ನಮ್ಮೆಲ್ಲರ ವಿನಾಶವು ಉದ್ದಿಷ್ಟವಾಗಿದೆ ಎಂದು ತೋರುತ್ತದೆ. ಅವ್ಯಯರಾದ ಬ್ರಹ್ಮದೇವರು ನಮಗೆ ಶಾಪವನ್ನು ಕೊಡುವ ನಮ್ಮ ತಾಯಿಯನ್ನು ಪ್ರತಿಷೇಧಿಸಲಿಲ್ಲ.

ತಸ್ಮಾತ್ ಸಮ್ಮಂತ್ರಯಾಮೋऽದ್ಯ ಭುಜಂಗಾನಾಮನಾಮಯಮ್ ।
ಯಥಾ ಭವೇಚ್ಚ ಸರ್ವೇಷಾಂ ಮಾ ನಃ ಕಾಲೋऽತ್ಯಗಾದಯಮ್ ॥

ಆದ್ದರಿಂದ ನಾವೆಲ್ಲರೂ ಸೇರಿ ಸರ್ಪಗಳಿಗೆ ಏನು ಮಾಡಿದರೆ ಕ್ಷೇಮವಾಗುತ್ತದೆ ಎಂದು ಈ ದಿನ ಮಂತ್ರಾಲೋಚನೆ ಮಾಡೋಣ. ಈ ಕಾಲವನ್ನು ವ್ಯರ್ಥವಾಗಿ ಕಳೆಯುವುದು ಬೇಡ.

ಅಪಿ ಮಂತ್ರಯಮಾಣಾ ಹಿ ಹೇತುಂ ಪಶ್ಯಾಮ ಮೋಕ್ಷಣೇ ।
ಯಥಾ ನಷ್ಟಂ ಪುರಾ ದೇವೋ ಗೂಢಮಗ್ನಿಂ ಗುಹಾಗತಮ್ ॥೮॥

ಹೀಗೆ ಮಂತ್ರಾಲೋಚನೆಯನ್ನು ಮಾಡಿದರೆ, ಹಿಂದೆ ಭೃಗುಋಷಿಗಳ ಶಾಪದಿಂದ ನಷ್ಟನಾಗಿ ಪರ್ವತದ ಗುಹೆಯಲ್ಲಿ ಅಡಗಿದ್ದ ಅಗ್ನಿಯನ್ನು ಬ್ರಹ್ಮದೇವರು ನೋಡಿದಂತೆ ನಮಗೂ ಒಂದು ಉಪಾಯವು ಗೋಚರಿಸುತ್ತದೆ.

ಯಥಾ ಸ ಯಜ್ಞೋ ನ ಭವೇದ್ ಯಥಾ ಚಾಪಿ ಪರಾಭವೇತ್ ।
ಜನಮೇಜಯಸ್ಯ ಸರ್ಪಾಣಾಂ ವಿನಾಶಕರಣಂ ಹಿತಮ್ ॥೯॥

ಹೇಗೆ ಮಾಡಿದರೆ ಆ ಯಜ್ಞವೇ ನಡೆಯುವುದಿಲ್ಲವೋ ಅಥವಾ ಜನಮೇಜಯನಿಗೆ ಹಿತವಾದ ಎಲ್ಲಾ ಸರ್ಪಗಳ ವಿನಾಶಕ್ಕೆ ಕಾರಣವಾದ ಆ ಯಜ್ಞವು ಪ್ರಾರಂಭವಾದರೂ ಮಧ್ಯದಲ್ಲಿಯೇ ನಿಂತುಹೋಗುತ್ತದೆಯೋ ಅಂತಹ ಉಪಾಯವನ್ನು ಕುರಿತು ಮಂತ್ರಾಲೋಚನೆಯನ್ನು ಮಾಡೋಣ.

ಸೂತಃ

ತಥೇತ್ಯುಕ್ತ್ವಾ ತತಃ ಸರ್ವೇ ಕಾದ್ರವೇಯಾಃ ಸಮಾಗತಾಃ ।
ಸಮಯಂ ಚಕ್ರಿರೇ ತತ್ರ ಮಂತ್ರಬುದ್ಧಿವಿಶಾರದಾಃ ॥೧೦॥

ಆಗ ಕದ್ರುವಿನ ಮಕ್ಕಳಾದ ಎಲ್ಲಾ ಸರ್ಪಗಳೂ ಅಲ್ಲಿಗೆ ಬಂದು ಮಂತ್ರಾಲೋಚನೆಯಲ್ಲಿ ನಿಪುಣರಾದ ಅವರೆಲ್ಲರೂ ಒಂದು ಉಪಾಯವನ್ನು ಹುಡುಕುತ್ತೇವೆ ಎಂದು ಪ್ರತಿಜ್ಞೆಮಾಡಿ ಅಲ್ಲಿ ಕುಳಿತರು.

ಏಕೇ ತತ್ರಾಬ್ರುವನ್ ನಾಗಾ ವಯಂ ಭೂತ್ವಾ ದ್ವಿಜೋತ್ತಮಾಃ ।
ಜನಮೇಜಯಂ ತಂ ಭಿಕ್ಷಾಮೋ ಯಜ್ಞಸ್ತೇ ನ ಭವೇದಿತಿ ॥೧೧॥

ಅಲ್ಲಿ ಕೆಲವು ಸರ್ಪಗಳು ನಾವು ಬ್ರಾಹ್ಮಣಶ್ರೇಷ್ಠರಾಗಿ ರೂಪವನ್ನು ತಾಳಿ ಜನಮೇಜಯನ ಬಳಿಗೆ ಹೋಗಿ ಈ ಯಜ್ಞವು ನಡೆಯುವುದು ಬೇಡ ಎಂದು ಅವನಲ್ಲಿ ಭಿಕ್ಷೆಯನ್ನು ಬೇಡೋಣ ಎಂದು ಹೇಳಿದವು.

ಅಪರೇ ತ್ವಬ್ರುವನ್ ನಾಗಾಸ್ತತ್ರ ಪಂಡಿತಮಾನಿನಃ ।
ಮಂತ್ರಿಣೋಽಸ್ಯ ವಯಂ ಸರ್ವೇ ಭವಿಷ್ಯಾಮಃ ಸುಸತ್ತಮಾಃ ॥೧೨॥

ತಾವು ಮೇಧಾವಿಗಳೆಂದು ಭಾವಿಸಿದ್ದ ಇನ್ನೂ ಕೆಲವು ಸರ್ಪಗಳು ನಾವು ಅವನ ಬಳಿಗೆ ಹೋಗಿ ಅವನ ಶ್ರೇಷ್ಠರಾದ ಮಂತ್ರಿಗಳಾಗೋಣ.

ಸ ನಃ ಪೃಚ್ಛತಿ ಕಾರ್ಯೇಷು ಸರ್ವೇಷ್ವರ್ಥವಿನಿಶ್ಚಯಮ್ ।
ತತ್ರ ಬುದ್ಧಿಂ ಪ್ರವಕ್ಷ್ಯಾಮೋ ಯಥಾ ಯಜ್ಞೋ ನ ವರ್ತತೇ ॥೧೩॥

ಅವನ ಎಲ್ಲಾ ಕಾರ್ಯಗಳಲ್ಲಿಯೂ, ಅದರ ಅನುಷ್ಠಾನದ ವಿಷಯದಲ್ಲಿ ನಮ್ಮನ್ನು ಕೇಳುತ್ತಾನೆ. ಆಗ ಅವನಿಗೆ ಬುದ್ಧಿಯನ್ನು ಹೇಳಿ ಯಜ್ಞವು ನಡೆಯದಂತೆ ಮಾಡೋಣ.

ಸ ನೋ ಬಹುಮತಾನ್ ರಾಜಾ ಬುದ್ಧೌ ಬುದ್ಧಿಮತಾಂ ವರಃ ।
ಯಜ್ಞಾರ್ಥಂ ಪೃಚ್ಛತಿ ವ್ಯಕ್ತಂ ನೇತಿ ವಕ್ಷ್ಯಾಮಹೇ ವಯಮ್ ॥೧೪॥

ಮೇಧಾವಿಗಳಲ್ಲಿ ಶ್ರೇಷ್ಠನಾದ ಆ ರಾಜನು ನಮ್ಮನ್ನು ಬುದ್ಧಿವಿಶಾರದರೆಂದು ತಿಳಿದವನಾಗಿ ಯಜ್ಞದ ಸಲುವಾಗಿ ನಮ್ಮನ್ನು ಕೇಳುತ್ತಾನೆ. ಆಗ ನಾವು ಯಜ್ಞವನ್ನು ಮಾಡುವುದು ಬೇಡ ಎಂದು ಹೇಳೋಣ.

ದರ್ಶಯಂತೋ ಬಹೂನ್ ಪ್ರೇತ್ಯ ಚೇಹ ಸುದಾರುಣಾನ್ ।
ಹೇತುಭಿಃ ಕಾರಣೈಶ್ಚೈವ ಯಥಾ ಯಜ್ಞೋ ಭವೇನ್ನ ಸಃ ॥೧೫॥

ಯಜ್ಞದಲ್ಲಿ ಪ್ರಾಣಹಿಂಸೆ ಇರುವುದರಿಂದ ಅದರಿಂದ ದಾರುಣವಾದ ದೋಷವು ಉಂಟಾಗುವುದೆಂದೂ, ಒಂದುಪಕ್ಷ ಯಜ್ಞವನ್ನು ಮಾಡಿದರೂ ಮೃತನಾದ ನಿನ್ನ ತಂದೆಯು ಪುನಃ ಬರುವುದಿಲ್ಲವೆಂದೂ ಹೇಳಿ, ಆ ಯಜ್ಞವು ನಡೆಯದಂತೆ ಮಾಡೋಣ.

ಅಥವಾ ಯ ಉಪಾಧ್ಯಾಯೋ ಯಜ್ಞೇ ತಸ್ಯ ಭವಿಷ್ಯತಿ ।
ಸರ್ಪಸತ್ರವಿಧಾನಜ್ಞೋ ರಾಜಕಾರ್ಯಹಿತೇ ರತಃ ॥೧೬॥

ತಂ ಗತ್ವಾ ದಶತಾಂ ಕಶ್ಚಿದ್ ಭುಜಗಃ ಸ ಮರಿಷ್ಯತಿ ।
ತಸ್ಮಿನ್ ಹತೇ ಯಜ್ಞಕಾರೇ ಯಜ್ಞೋಽಸೌ ನ ಭವಿಷ್ಯತಿ ॥೧೭॥

ಅಥವಾ ಅವನ ಯಜ್ಞದಲ್ಲಿ ರಾಜಕಾರ್ಯದಲ್ಲಿ ನಿರತನಾದ ಮತ್ತು ರಾಜಹಿತದಲ್ಲೇ ತತ್ಪರನಾದ, ಸರ್ಪಯಾಗ ವಿಧಾನವನ್ನು ತಿಳಿದ ಒಬ್ಬ ಪುರೋಹಿತನಿರುತ್ತಾನಷ್ಟೆ. ನಮ್ಮಲ್ಲಿ ಯಾವುದಾದರೂ ಒಂದು ಸರ್ಪವು ಹೋಗಿ ಅವನನ್ನು ಕಡಿಯಬೇಕು. ಅವನು ಮರಣವನ್ನು ಹೊಂದುವನು. ಯಜ್ಞವನ್ನು ಮಾಡುವ ಪುರೋಹಿತನು ಮರಣವನ್ನು ಹೊಂದುತ್ತಿರಲು ಯಜ್ಞವು ತಾನಾಗಿಯೇ ನಿಂತುಹೋಗುವುದು.

ಯೇ ಚಾನ್ಯೇ ಸರ್ಪಸತ್ರಜ್ಞಾ ಭವಿಷ್ಯಂತ್ಯತ್ರ ಋತ್ವಿಜಃ ।
ತಾನ್ ಸರ್ವಾನ್ ವೈ ದಶಿಷ್ಯಾಮಃ ಕ್ರತುರ್ನೈವಂ ಭವಿಷ್ಯತಿ ॥೧೮॥

ಅಲ್ಲಿ ಸರ್ಪಸತ್ರ ವಿಧಾನವನ್ನು ತಿಳಿದ ಬೇರೆ ಋತ್ವಿಜರು ಯಾರಾದರೂ ಇದ್ದರೆ, ಅವರೆಲ್ಲರನ್ನೂ ಕಡಿದು ಮೃತ್ಯುವಶರನ್ನಾಗಿ ಮಾಡೋಣ. ಹಾಗೆ ಮಾಡಿದರೆ, ಯಾಗವು ನಡೆಯುವುದಿಲ್ಲ.

ತತ್ರಾಪರೇ ಮಂತ್ರಯಂತಿ ಧರ್ಮಾತ್ಮಾನೋ ಭುಜಂಗಮಾಃ ।
ಅಬುದ್ಧಿರೇಷಾ ಯುಷ್ಮಾಕಂ ಬ್ರಹ್ಮಹತ್ಯಾ ನ ಶೋಭನಾ ॥೧೯॥

ಆಗ ಅಲ್ಲಿ ಧರ್ಮಬುದ್ಧಿಯುಳ್ಳ ಬೇರೆ ಅನೇಕ ಸರ್ಪಗಳು ಹೀಗೆ ಮಂತ್ರಾಲೋಚನೆಯನ್ನು ಮಾಡಿ ಹೇಳಿದವು. ಈ ನಿಮ್ಮ ಬುದ್ಧಿಯು ಸರಿಯಾದುದಲ್ಲ. ಬ್ರಹ್ಮಹತ್ಯವು ಎಂದೂ ಒಳ್ಳೆಯದಲ್ಲ.

ಸಂಪತ್ ಸುಧರ್ಮಮೂಲಾ ವೈ ವ್ಯಸನೇ ಶಾಂತಿರುತ್ತಮಾ ।
ಅಧರ್ಮೋತ್ತರತಾ ನಾಮ ವ್ಯಕ್ತಂ ವ್ಯಾಪಾದ್ಯತೇ ಜಗತ್ ॥೨೦॥

ಶ್ರೇಷ್ಠವಾದ ಧರ್ಮದಿಂದಲೇ ಸಂಪತ್ತು ಉಂಟಾಗುತ್ತದೆ. ಕಷ್ಟಕ್ಕೆ ಸಿಲುಕಿದಾಗ ಶಾಂತಿಯಿಂದಿರುವುದು ಶ್ರೇಷ್ಠವಾದುದು. ಅಧರ್ಮವನ್ನು ಆಚರಿಸಿದರೆ, ಅನಂತರದಲ್ಲಿ ಆ ಅಧರ್ಮವು ಜಗತ್ತನ್ನೇ (ನಮ್ಮನ್ನೇ) ನಾಶಮಾಡುತ್ತದೆ.

ಅಪರೇ ತ್ವಬ್ರುವನ್ ನಾಗಾಃ ಸಮಿದ್ಧಂ ಜಾತವೇದಸಮ್ ।
ವರ್ಷೈರ್ನಿರ್ವಾಪಯಿಷ್ಯಾಮೋ ಮೇಘಾ ಭೂತ್ವಾ ಸವಿದ್ಯುತಃ ॥೨೧॥

ಇನ್ನೂ ಕೆಲವು ಸರ್ಪಗಳು, ನಾವು ಮಿಂಚುಗಳಿಂದ ಕೂಡಿದ ಮೇಘಗಳಾಗಿ ಉರಿಯುತ್ತಿರುವ ಅಗ್ನಿಯನ್ನು ಮಳೆಯ ಧಾರೆಗಳಿಂದ ಶಾಂತವನ್ನಾಗಿ ಮಾಡೋಣ ಎಂದು ಹೇಳಿದವು.

ಸ್ರುಗ್ಭಾಂಡಾನ್ ನಿಶಿ ಗತ್ವಾ ಚಾಪ್ಯಪರೇ ಭುಜಗೋತ್ತಮಾಃ ।
ಪ್ರಮತ್ತಾನಾಂ ಹರಂತ್ವಾಶು ವಿಘ್ನ ಏವಂ ಭವಿಷ್ಯತಿ ॥೨೨॥

ಕೆಲವು ಸರ್ಪಗಳು ರಾತ್ರಿಯಲ್ಲಿ ಹೋಗಿ ಋತ್ವಿಜರು ಗಮನಿಸದಿರುವಂತೆ ಅವರ ಸ್ರುಗ್ಭಾಂಡಗಳನ್ನು ಅಪಹರಿಸೋಣ. ಆಗ ಯಜ್ಞಕ್ಕೆ ವಿಘ್ನವು ಉಂಟಾಗುವುದು.

ಯಜ್ಞೇ ವಾ ಭುಜಗಾಸ್ತಸ್ಮಿನ್ ಶತಶೋಽಥ ಸಹಸ್ರಶಃ ।
ಜನಂ ದಶಂತು ವೈ ಸರ್ವಮೇವಂ ತ್ರಾಸೋ ಭವಿಷ್ಯತಿ ॥೨೩॥

ಅಥವಾ ಆ ಯಜ್ಞದಲ್ಲಿ ನೂರಾರು ಸಾವಿರಾರು ಸಂಖ್ಯೆಯಲ್ಲಿ ಹೋಗಿ ಅಲ್ಲಿಗೆ ಬಂದ ಜನಗಳನ್ನೆಲ್ಲಾ ಸರ್ಪಗಳು ಕಡಿಯಲಿ. ಆಗ ಎಲ್ಲರಿಗೂ ಹೆದರಿಕೆ ಉಂಟಾಗಿ ಯಜ್ಞವು ನಿಂತು ಹೋಗುತ್ತದೆ.

ಅಥವಾ ಸಂಸೃತಂ ಭೋಜ್ಯಂ ದೂಷಯಂತು ಭುಜಂಗಮಾಃ ।
ಸ್ವೇದಮೂತ್ರಪುರೀಷೇಣ ಸರ್ವಭೋಜ್ಯವಿನಾಶನಮ್ ॥೨೪॥

ಅಥವಾ ಸರ್ಪಗಳು ಅಲ್ಲಿ ಸಿದ್ಧಪಡಿಸಿದ ಅನ್ನವನ್ನು ತಮ್ಮ ಬೆವರು, ಮೂತ್ರ ಮತ್ತು ಮಲಗಳಿಂದ ದೂಷಿಸಿ, ಎಲ್ಲಾ ಭೋಜ್ಯಪದಾರ್ಥಗಳನ್ನೂ ನಾಶಮಾಡಲಿ.

ಅಪರೇ ತ್ವಬ್ರುವಂಸ್ತತ್ರ ಋತ್ವಿಜೋಽಸ್ಯ ಭವಾಮಹೇ ।
ಯಜ್ಞವಿಘ್ನಂ ಕರಿಷ್ಯಾಮೋ ದೀಯತಾಂ ದಕ್ಷಿಣಾ ಇತಿ ।
ವಶ್ಯತಾಂ ಚಾಗಾತೋಽಸೌ ನಃ ಕರಿಷ್ಯತಿ ಯಥೇಪ್ಸಿತಮ್ ॥೨೫॥

ಆಗ ಇನ್ನೂ ಕೆಲವು ಸರ್ಪಗಳು ನಾವು ಹೋಗಿ ಅವನ ಋತ್ವಿಜರಾಗಿ ನಮಗೆ ದಕ್ಷಿಣೆಯನ್ನು ಕೊಡು ಎಂದು ಕೇಳಿ ಯಜ್ಞವನ್ನು ಅರ್ಧದಲ್ಲಿಯೇ ನಿಲ್ಲಿಸೋಣ. ನಮಗೆ ವಶವಾಗಿರುವ ಅವನು ನಾವು ಹೇಳಿದಂತೆಯೇ ಮಾಡಬೇಕಾಗುವುದು ಎಂದು ಹೇಳಿದವು.

ಅಪರೇ ತ್ವಬ್ರುವನ್ ನಾಗಾ ಜಲೇ ಪ್ರಕ್ರೀಡಿತಂ ನೃಪಮ್ ।
ಗೃಹಮಾನೀಯ ಬಧ್ನೀಮಃ ಕ್ರತುರೇವಂ ಭವೇನ್ನ ಸಃ ॥೨೬॥

ಇನ್ನೂ ಕೆಲವು ಸರ್ಪಗಳು ಜಲಕ್ರೀಡೆಗಾಗಿ ನೀರಿನಲ್ಲಿ ಇಳಿದ ರಾಜನನ್ನು ನಮ್ಮ ಮನೆಗೆ ತಂದು ಕಟ್ಟಿಹಾಕೋಣ. ಹೀಗೆ ಮಾಡಿದರೆ, ಆ ಯಜ್ಞವು ನಡೆಯುವುದಿಲ್ಲ ಎಂದು ಹೇಳಿದವು.

ಅಪರೇ ತ್ವಬ್ರುವಂಸ್ತತ್ರ ನಾಗಾಃ ದುಷ್ಕೃತಕಾರಿಣಃ ।
ದಶಾಮ್ಯೇನಂ ಪ್ರಗೃಹ್ಯಾಶು ಕ್ರತುರ್ನೈವ ಭವಿಷ್ಯತಿ ॥೨೭॥

ಇನ್ನೂ ಕೆಲವು ದುಷ್ಟಬುದ್ಧಿಯುಳ್ಳ ಸರ್ಪಗಳು ಅವನನ್ನು ಹಿಡಿದು ಕಚ್ಚೋಣ. ಆಗ ಯಜ್ಞವು ನಡೆಯುವುದಿಲ್ಲ ಎಂದು ಹೇಳಿದವು.

ಏಷಾ ನೋ ನೈಷ್ಕಿಕೀ ಬುದ್ಧಿಃ ಸರ್ವೇಷಾಮೇವ ಸಮ್ಮತಾ ।
ಯಥಾ ವಾ ಮನ್ಯಸೇ ರಾಜಂಸ್ತತ್ ಕ್ಷಿಪ್ರಂ ಸಂವಿಧೀಯತಾಮ್ ।

ಸರ್ಪರಾಜನಾದ ವಾಸುಕಿಯೇ, ಇದು ನಮ್ಮೆಲ್ಲರಿಗೂ ಸಮ್ಮತವಾದ, ದೃಢವಾದ ನಿರ್ಧಾರ. ನಿನ್ನ ಅಭಿಪ್ರಾಯವು ಹೇಗಿದೆಯೋ ಅದರಂತೆ ಬೇಗ ಏನಾದರೂ ಮಾಡು.

ಇತ್ಯುಕ್ತ್ವಾ ಸಮುದೈಕ್ಷಂತ ವಾಸುಕಿಂ ಪನ್ನಗೇಶ್ವರಮ್ ।
ವಾಸುಕಿಶ್ಚಾಪಿ ಸಂಚಿಂತ್ಯ ತಾನುವಾಚ ಭುಜಂಗಮಾನ್ ॥೨೯॥

ಹೀಗೆ ಹೇಳಿ ಆ ಸರ್ಪಗಳು ಸರ್ಪರಾಜನಾದ ವಾಸುಕಿಯ ಮುಖವನ್ನು ನೋಡಿದವು. ವಾಸುಕಿಯಾದರೋ, ಚೆನ್ನಾಗಿ ಚಿಂತಿಸಿ ಆ ಸರ್ಪಗಳನ್ನು ಕುರಿತು ಮಾತನಾಡಿದನು.

ವಾಸುಕಿಃ

ನೈಷಾ ವೋ ನೈಷ್ಕಿಕೀ ಬುದ್ಧಿರ್ಮತಾ ಕರ್ತುಂ ಭುಜಂಗಮಾಃ ।
ಸರ್ವೇಷಾಮೇವ ಮೇ ಬುದ್ಧಿಃ ಪನ್ನಗಾನಾಂ ನ ರೋಚತೇ ॥೩೦॥
ಕಿಂ ತತ್ರ ಸಂವಿಧಾತವ್ಯಂ ಭವತಾಂ ಯದ್ಧಿತಂ ಭವೇತ್ ।
ಅನೇನಾಹಂ ಭೃಶಂ ತಪ್ಯೇ ಗುಣದೋಷೌ ಮದಾಶ್ರಿತೌ ॥೩೧॥

ಎಲೈ ಸರ್ಪಗಳೇ, ನಿಮ್ಮ ಈ ನಿರ್ಧಾರಿತವಾದ ಬುದ್ಧಿಯಂತೆ ನಡೆದುಕೊಳ್ಳಲು ಸಾಧ್ಯವಿಲ್ಲ. ನೀವು ಹೇಳಿದ ಯಾವ ಮಾತುಗಳೂ ನನಗೆ ಶೋಭಿಸುತ್ತಿಲ್ಲ. ಆದರೂ ನಿಮಗೆ ನಾನು ಹಿತವನ್ನು ಮಾಡಲೇಬೇಕು. ಅದಕ್ಕಾಗಿ ನಾನು ಬಹಳ ತಾಪವನ್ನು ಅನುಭವಿಸುತ್ತಿದ್ದೇನೆ. ನಾನು ಏನು ಮಾಡುವೆನೋ ಅದರ ಗುಣದೋಷಗಳ ಜವಾಬ್ದಾರಿಯು ನನ್ನದೇ ಆಗಿರುತ್ತದೆ.

॥ ಇತಿ ಶ್ರೀಮನ್ಮಹಾಭಾರತೇ ಶತಸಹಸ್ರಿಕಾಯಾಂಸಂಹಿತಾಯಾಮಾದಿಪರ್ವಣಿ ದ್ವಾತ್ರಿಂಶೋಽಧ್ಯಾಯಃ॥

॥ ಇತಿ ಆಸ್ತೀಕಪರ್ವಣಿ ವಿಂಶೋಽಧ್ಯಾಯಃ ॥

ಇಲ್ಲಿಗೆ ಮಹಾಭಾರತದ ಆದಿಪರ್ವದಲ್ಲಿ ಮೂವತ್ತೆರಡನೆಯ ಅಧ್ಯಾಯ ಮುಗಿಯಿತು.

ಮೂವತ್ಮೂರನೆಯ ಅಧ್ಯಾಯ

(ಏಲಾಪತ್ರನೆಂಬ ನಾಗನಿಂದ ಶಾಪಮೋಕ್ಷೋಪಾಯ ಸೂಚನೆ.)

ಸೂತಃ

ಶ್ರುತ್ವಾ ತು ವಚನಂ ತೇಷಾಂ ಸರ್ವೇಷಾಮಪಿ ಚೈವ ಹಿ ।
ವಾಸುಕೇಶ್ಚ ವಚಃ ಶ್ರುತ್ವಾ ಏಲಾಪತ್ರೋಽಬ್ರವೀದಿದಮ್ ॥೧॥

ಅವರೆಲ್ಲರ ಮಾತುಗಳನ್ನೂ ಕೇಳಿ, ವಾಸುಕಿಯ ಮಾತನ್ನೂ ಕೇಳಿ, ಏಲಾಪತ್ರನೆಂಬ ನಾಗನು ಈ ಮಾತುಗಳನ್ನು ಆಡಿದನು.

ಏಲಾಪತ್ರಃ

ನ ಸ ಯಜ್ಞೋ ನ ಭವಿತಾ ಸ ಚ ರಾಜಾ ತಥಾವಿಧಃ ।
ಜನಮೇಜಯಃ ಪಾಂಡವೇಯೋ ಯತೋಽಸ್ಮಾಕಮಿದಂ ಭಯಮ್ ॥

ಆ ಯಜ್ಞವು ನಡೆಯುವುದಿಲ್ಲ ಎಂಬುದು ಇಲ್ಲ. ಪಾಂಡುವಂಶದಲ್ಲಿ ಹುಟ್ಟಿದ, ನಮ್ಮ ಭಯಕ್ಕೆ ಕಾರಣನಾದ ಜನಮೇಜಯರಾಜನಾದರೋ ಮೃತ್ಯುವಶನಾಗುತ್ತಾನೆ ಎಂಬುದೂ ಇಲ್ಲ. (ಯಜ್ಞವನ್ನು ನಿಲ್ಲಿಸಲು ಅಥವಾ ರಾಜನನ್ನು ಕೊಲ್ಲಲು ಸಾಧ್ಯವಾಗುವುದಿಲ್ಲ ಎಂದು ಅಭಿಪ್ರಾಯ.)

ದೈವೇನೋಪಹತಂ ರಾಜನ್ ನ ಕರ್ತವ್ಯಂ ಚ ಪೌರುಷಮ್ ।
ಸ ದೈವಮೇವಾಶ್ರಯೇತ ನಾನ್ಯತ್ ತತ್ರ ಪರಾಯಣಮ್ ॥೩॥

ಎಲೈ ರಾಜನಾದ ವಾಸುಕಿಯೇ, ದೈವವು ವಿರುದ್ಧವಾಗಿರುವಾಗ ಪುರುಷಪ್ರಯತ್ನವನ್ನು ಮಾಡಬಾರದು. ನಾವೂ ದೈವವನ್ನೇ ಆಶ್ರಯಿಸಬೇಕು. ಅದನ್ನು ಬಿಟ್ಟು ಬೇರೆ ಶ್ರೇಷ್ಠವಾದ ಗತಿಯಿಲ್ಲ

ತದಿದಂ ದೈವಮಸ್ಮಾಕಂ ಭಯಂ ಪನ್ನಗಸತ್ತಮಾಃ ।
ದೈವಮೇವಾಶ್ರಯಾಮೋಽತ್ರ ಶೃಣುಧ್ವಂ ಚ ವಚೋ ಮಮ ॥೪॥

ಅಲ್ಲಿಂದ ಮುಂದಕ್ಕೆ ವಾಸುಕಿಯು ಬಹಳ ಸಂತೋಷದಿಂದ ಕೂಡಿದವನಾಗಿ ತಂಗಿಯಾದ ಜರತ್ಕಾರುವನ್ನು ಎಚ್ಚರಿಕೆಯಿಂದ ರಕ್ಷಣೆಮಾಡಿದನು.

ತತೋಽತೀವಮಹಾನ್ ಕಾಲಃ ಸಮತೀತ ಇವಾಭವತ್ ।
ತತೋ ದೇವಾಸುರಾಃ ಸರ್ವೇ ಮಮಂಥುರ್ವರುಣಾಲಯಮ್ ॥೩॥

ಅನಂತರ ಬಹಳ ಕಾಲವು ಕಳೆಯಿತು. ಆಗ ದೇವಾಸುರರು ಎಲ್ಲರೂ ಸೇರಿ ಸಮುದ್ರಮಥನವನ್ನು ಮಾಡಿದರು.

ತತ್ರ ನೇತ್ರಮಭೂನ್ನಾಗೋ ವಾಸುಕಿರ್ಬಲಿನಾಂ ವರಃ ।
ಸುಸಂಸ್ಥಾಪ್ಯ ಚ ತತ್ಕರ್ಮ ಪಿತಾಮಹಮಥಾಬ್ರುವನ್ ॥೪॥

ಆಗ ಬಲಿಷ್ಠನಾದ ವಾಸುಕಿಯು ಹಗ್ಗವಾಗಿ ಮಾಡಲ್ಪಟ್ಟನು. ದೇವತೆಗಳು ಸಮುದ್ರಮಥನ ಕಾರ್ಯವನ್ನು ಮುಗಿಸಿ ಬ್ರಹ್ಮದೇವರನ್ನು ಕುರಿತು ಹೇಳಿದರು.

ಭಗವನ್ ಶಾಪಭೀತೋಽಯಂ ವಾಸುಕಿಸ್ತಪ್ಯತೇ ಭೃಶಮ್ ।
ತಸ್ಯೇದಂ ಮನಸಃ ಶಲ್ಯಂ ಸಮುದ್ಧರ್ತುಂ ತ್ವಮರ್ಹಸಿ ॥೫॥

ಪೂಜ್ಯನೇ, ಈ ವಾಸುಕಿಯು ತಾಯಿಯ ಶಾಪದಿಂದ ಬಹಳವಾಗಿ ಹೆದರಿ ಹೋಗಿದ್ದಾನೆ. ಅವನ ಮನಸ್ಸಿನಲ್ಲಿ ಶಲ್ಯದಂತೆ ನಾಟಿರುವ ಈ ದುಃಖವನ್ನು ನೀನು ಪರಿಹರಿಸಬೇಕು.

ಜನನ್ಯಾಃ ಶಾಪಜಂ ದೇವ ಜ್ಞಾತೀನಾಂ ಹಿತಕಾಂಕ್ಷಿಣಃ ।
ಭೀತೋ ಹ್ಯಯಂ ಸದಾಽಸ್ಮಾಕಂ ಪ್ರಿಯಕಾರೀ ಚ ನಾಗರಾಟ್ ।
ಕುರು ಪ್ರಸಾದಂ ದೇವೇಶ ಶಮಯಾಸ್ಯ ಮನೋಜ್ವರಮ್ ॥೬॥

ಎಲೈ ದೇವನೇ, ತನ್ನ ಬಂಧುಗಳ ಹಿತಕಾಂಕ್ಷಿಯಾದ ಇವನು ತಾಯಿಯ ಶಾಪದಿಂದ ಹೆದರಿದ್ದಾನೆ. ಈ ನಾಗರಾಜನು ಯಾವಾಗಲೂ ನಮಗೆ ಪ್ರಿಯವನ್ನು ಮಾಡುವವನು ಆಗಿದ್ದಾನೆ. ಅವನ ಮನೋಜ್ವರವನ್ನು ಉಪಶಮನಗೊಳಿಸು.

ಬ್ರಹ್ಮಾ

ಮಯ್ಯೇವ ತತ್ ವಿತೀರ್ಣಂ ವೈ ವಚನಂ ಮನಸಾಽಮರಾಃ ।
ಏಲಾಪತ್ರೇಣ ನಾಗೇನ ಯದತ್ರಾಭಿಹಿತಂ ಪುರಾ ॥೭॥

ತತ್ ಕರೋತ್ವೇಷ ನಾಗೇಂದ್ರಃ ಕಾಲೇ ಪ್ರಾಪ್ತೇ ವಚಸ್ತದಾ ।
ವಿನಶಿಷ್ಯಂತಿ ಯೇ ಪಾಪಾ ನ ತು ತೇ ಧರ್ಮಚಾರಿಣಃ ॥೮॥

ಎಲೈ ದೇವತೆಗಳೇ, ಈ ಶಾಪವಿಮೋಚನೆಯು ನನ್ನಿಂದಲೇ ಮೊದಲು ಮನಸ್ಸಿನಲ್ಲಿಯೇ ಸಂಕಲ್ಪಿಸಲ್ಪಟ್ಟಿದೆ. ಹಿಂದೆ ಏಲಾಪತ್ರನಾಗನು ಏನನ್ನು ಹೇಳಿದನೋ ಅದನ್ನು ಯೋಗ್ಯವಾದ ಕಾಲದಲ್ಲಿ ನಾಗೇಂದ್ರನಾದ ಈ ವಾಸುಕಿಯು ಅನುಷ್ಠಾನ ಮಾಡಲಿ. ಪಾಪಿಷ್ಠರಾದ ನಾಗಗಳು ವಿನಾಶವನ್ನು ಹೊಂದುತ್ತವೆ. ಧರ್ಮಚಾರಿಗಳಾದ ನಾಗಗಳು ವಿನಾಶವನ್ನು ಹೊಂದುವುದಿಲ್ಲ.

ಉತ್ಪನ್ನಃ ಸ ಜರತ್ಕಾರುಸ್ತಪಸ್ಯುಗ್ರೇ ರತೋ ದ್ವಿಜಃ ।
ತಸ್ಮೈ ತಾಂ ಭಗಿನೀಂ ಕಾಲೇ ಜರತ್ಕಾರುಂ ಪ್ರಯಚ್ಛತು ॥೯॥

ಆ ಜರತ್ಕಾರು ಎಂಬ ಬ್ರಾಹ್ಮಣನು ಉತ್ಪನ್ನನಾಗಿ, ಉಗ್ರವಾದ ತಪಸ್ಸಿನಲ್ಲಿ ನಿರತನಾಗಿದ್ದಾನೆ. ಯೋಗ್ಯವಾದ ಕಾಲದಲ್ಲಿ ವಾಸುಕಿಯು ಅವನಿಗೆ ತನ್ನ ತಂಗಿಯಾದ ಜರತ್ಕಾರುವನ್ನು ಕೊಡಲಿ.

ಏಲಾಪತ್ರೇಣ ಚ ವಚಸ್ತದೋಕ್ತಂ ಭುಜಗೋತ್ತಮ ।
ಪನ್ನಗಾನಾಂ ಹಿತಂ ದೇವಾಸ್ತಥಾ ತನ್ನ ತದನ್ಯಥಾ ॥೧೦॥

ಎಲೈ ಭುಜಗೋತ್ತಮನಾದ ವಾಸುಕಿಯೇ, ಏಲಾಪತ್ರನು ಆಗ ಹೇಳಿದ ಮಾತುಗಳೇ ನಾಗಗಳಿಗೆ ಹಿತವನ್ನು ಮಾಡುವಂತಹವು. ಎಲೈ ದೇವತೆಗಳೇ, ಅದನ್ನು ಹಾಗೆಯೇ ಮಾಡಬೇಕು. ಬೇರೆ ಯಾವ ದಾರಿಯೂ ಇಲ್ಲ.

ಸೂತಃ

ಏತಚ್ಛ್ರುತ್ವಾ ಸ ನಾಗೇಂದ್ರಃ ಪಿತಾಮಹವಚಸ್ತದಾ ।
ಸರ್ಪಾನ್ ಬಹೂನ್ ಜರತ್ಕಾರೋರ್ನಿತ್ಯಯುಕ್ತಃ ಸಮಾದಧಾತ್ ॥

ಜರತ್ಕಾರುರ್ಯದಾ ಭಾರ್ಯಾಮಿಚ್ಛೇದ್ ವರಯಿತುಂ ಪ್ರಭುಃ ।
ಶೀಘ್ರಮೇತ್ಯ ಮಮಾऽऽಖ್ಯೇಯಂ ತನ್ನಃ ಶ್ರೇಯೋ ಭವಿಷ್ಯತಿ ॥

ಬ್ರಹ್ಮದೇವರ ಈ ಮಾತುಗಳನ್ನು ಕೇಳಿದ ನಾಗೇಂದ್ರನಾದ ವಾಸುಕಿಯು ಜರತ್ಕಾರುವು ಯಾವಾಗ ಕನ್ಯಾಪೇಕ್ಷೆಯನ್ನು ಸೂಚಿಸುತ್ತಾನೆಯೋ, ಆಗ ಬೇಗ ಬಂದು

ನನಗೆ ಆ ವಿಷಯವನ್ನು ತಿಳಿಸಬೇಕು. ಅದರಿಂದ ನಮಗೆ ಶ್ರೇಯಸ್ಸು ಉಂಟಾಗುವುದು ಎಂದು ಹೇಳಿ ಅನೇಕ ಸರ್ಪಗಳನ್ನು ಅಲ್ಲಲ್ಲಿ ಜರತ್ಕಾರುವಿನ ವಿಷಯವನ್ನು ತಿಳಿಯಲು ನಿಯೋಜಿಸಿದನು.

॥ ಇತಿ ಶ್ರೀಮನ್ಮಹಾಭಾರತೇ ಶತಸಹಸ್ರಿಕಾಯಾಂಸಂಹಿತಾಯಾಮಾದಿಪರ್ವಣಿ ಚತುಃಸ್ತ್ರಿಂಶೋಽಧ್ಯಾಯಃ ॥

॥ ಇತಿ ಆಸ್ತೀಕಪರ್ವಣಿ ದ್ವಾವಿಂಶೋಽಧ್ಯಾಯಃ ॥

ಇಲ್ಲಿಗೆ ಮಹಾಭಾರತದ ಆದಿಪರ್ವದಲ್ಲಿ ಮೂವತ್ನಾಲ್ಕನೆಯ ಅಧ್ಯಾಯ ಮುಗಿಯಿತು.

★★★★★

ಮೂವತ್ತೈದನೆಯ ಅಧ್ಯಾಯ

(ಪರೀಕ್ಷಿತನ ಕಥೆ. ಶಮೀಕರ ಕುತ್ತಿಗೆಯಲ್ಲಿ ಮೃತಸರ್ಪದ ಪ್ರಕ್ಷೇಪ.)

ಶೌನಕಃ

ಜರತ್ಕಾರುರಿತಿ ಪ್ರೋಕ್ತೋ ಯಸ್ತ್ವಯಾ ಸೂತನಂದನ ।
ಇಚ್ಛಾಮ್ಯೇತದಹಂ ತಸ್ಯ ಋಷೇಃ ಶ್ರೋತುಂ ಮಹಾತ್ಮನಃ ॥೧॥

ಕಿಂ ಕಾರಣಂ ಜರತ್ಕಾರೋರ್ನಾಮೈತತ್ ಪ್ರಥಿತಂ ಭುವಿ ।
ಜರತ್ಕಾರುನಿರುಕ್ತಂ ತ್ವಂ ಯಥಾವದ್ ವಕ್ತುಮರ್ಹಸಿ ॥೨॥

ಎಲೈ ಸೂತನಂದನನೇ, ನೀನು ಜರತ್ಕಾರು ಎಂದು ಹೇಳಿದೆಯಷ್ಟೆ. ನಾನು ಮಹಾತ್ಮನಾದ ಆ ಋಷಿಯ ವಿಷಯದಲ್ಲಿ ಇನ್ನೂ ಹೆಚ್ಚು ಕೇಳಲು ಬಯಸುತ್ತೇನೆ. ಜರತ್ಕಾರು ಎಂಬ ಹೆಸರು ಭೂಮಿಯಲ್ಲಿ ಹೇಗೆ ಪ್ರಸಿದ್ಧವಾಯಿತು? ಜರತ್ಕಾರು ಎಂಬ ಶಬ್ದದ ಅರ್ಥವನ್ನು ನೀನು ನನಗೆ ಸರಿಯಾಗಿ ಹೇಳಬೇಕು.

ಸೂತಃ

ಜರೇತಿ ಕ್ಷಯಮಾಹುರ್ವೈ ದಾರುಣಂ ಕಾರುಸಂಜ್ಞಿತಮ್ ।
ಶರೀರಂ ಕಾರು ತಸ್ಯಾಸೀತ್ ತತ್ ಸ ಧೀಮಾನ್ ಶನೈಃ ಶನೈಃ ॥೩॥

ಕ್ಷಪಯಾಮಾಸ ತೀವ್ರೇಣ ತಪಸ್ಯೇತ್ಯೇವಮುಚ್ಯತೇ ।
ಜರತ್ಕಾರುರಿತಿ ಬ್ರಹ್ಮನ್ ವಾಸುಕೇರ್ಭಗಿನೀಪತಿಃ ॥೪॥

'ಜರಾ' ಎಂದರೆ ಕ್ಷಯ (ನಾಶ) ಎಂದು ಅರ್ಥ. 'ಕಾರು' ಎಂದರೆ ದಾರುಣವಾದುದು ಎಂದು ಅರ್ಥ. ಅವನ ಶರೀರವು ದಾರುಣವಾಗಿದ್ದಿತು. ಮೇಧಾವಿಯಾದ ಅವನು ತೀವ್ರವಾದ ತಪಸ್ಸನ್ನು ಮಾಡುತ್ತಾ ದೇಹವನ್ನು ಸವೆಸುತ್ತಿದ್ದನು. ಆದ್ದರಿಂದ ವಾಸುಕಿಯ ತಂಗಿಯ ಪತಿಯಾದ ಅವನಿಗೆ ಜರತ್ಕಾರು ಎಂದು ಹೆಸರು.

ಏವಮುಕ್ತಸ್ತು ಧರ್ಮಾತ್ಮಾ ಶೌನಕಃ ಪ್ರಾಹ ತಂ ತದಾ ।
ಉಗ್ರಶ್ರವಸಮಾಮಂತ್ರ್ಯ ಉಪಪನ್ನಮಿತಿ ಬ್ರುವನ್ ।
ಉಕ್ತಂ ತಾತ ತ್ವಯಾ ಯಂ ತ್ವಾಮರ್ಥಂ ಸಂಪೃಷ್ಟವಾನಹಮ್ ॥೫॥

ಹೀಗೆ ಹೇಳಲ್ಪಟ್ಟ ಧರ್ಮಾತ್ಮನಾದ ಶೌನಕರು ಸೂತಪುತ್ರರಾದ ಉಗ್ರಶ್ರವರನ್ನು ಕುರಿತು ಯುಕ್ತವಾದುದು ಎಂದು ಹೇಳಿ ಅವರನ್ನು ಅಭಿಮುಖೀಕರಿಸಿಕೊಂಡು, ಪ್ರೀತಿಪಾತ್ರನೇ, ನಾನು ಯಾವ ಪ್ರಶ್ನೆಯನ್ನು ಕೇಳಿದ್ದೇನೋ ಅದಕ್ಕೆ ನೀನು ಉತ್ತರವನ್ನು ಹೇಳಿದ್ದೀಯೆ ಎಂದು ಹೇಳಿದರು.

ಸೂತಃ

ಅಥ ಕಾಲಸ್ಯ ಮಹತಃ ಸ ಮುನಿಃ ಸಂಶಿತವ್ರತಃ ।
ತಪಸ್ಯಭಿರತೋ ಧೀಮಾನ್ ನ ದಾರಾನಭ್ಯಕಾಂಕ್ಷತ ॥೬॥

ಅನಂತರ ಶ್ರೇಷ್ಠವ್ರತಧಾರಿಯಾದ, ಋಷಿಯಾದ, ಮೇಧಾವಿಯಾದ ಆ ಜರತ್ಕಾರುವು ತಪಸ್ಸಿನಲ್ಲಿ ಅಭಿರತರಾಗಿ ಬಹುಕಾಲವು ಕಳೆದರೂ ಪತ್ನಿಯನ್ನೇ ಬಯಸಲಿಲ್ಲ.

ಸ ಹ್ಯೂರ್ಧ್ವರೇತಾಸ್ತಪಸಿ ಪ್ರವೃತ್ತಃ
ಸ್ವಾಧ್ಯಾಯವಾನ್ ವೀತಭಯಕ್ಲಮಶ್ಚ ।
ಚಚಾರ ಸರ್ವಾಂ ಪೃಥಿವೀಂ ಮಹಾತ್ಮಾ
ನ ಚಾಪಿ ದಾರಾನ್ ಮನಸಾऽಭ್ಯಕಾಂಕ್ಷತ್ ॥೭॥

ಊರ್ಧ್ವರೇತಸ್ಕರಾಗಿ ತಪಸ್ಸಿನಲ್ಲಿ ನಿರತರಾದ ಅವರು ಭಯ, ಶ್ರಮಗಳಿಂದ ರಹಿತರಾಗಿ ಯಾವಾಗಲೂ ಸ್ವಾಧ್ಯಾಯಶೀಲರಾಗಿ ಎಲ್ಲಾ ಭೂಮಿಯಲ್ಲಿಯೂ

ಎಲೈ ಪನ್ನಗಶ್ರೇಷ್ಠರೇ, ನಮಗೆ ಉಂಟಾಗಿರುವ ಈ ಭಯವು ದೈವದಿಂದಲೇ ಉಂಟಾಗಿದೆ. ಆದ್ದರಿಂದ ನಾವು ದೈವವನ್ನೇ ಆಶ್ರಯಿಸೋಣ. ನನ್ನ ಮಾತನ್ನು ಕೇಳಿ.

ಅಹಂ ಶಾಪೇ ಸಮುತ್ಸೃಷ್ಟೇ ಸಮಶ್ರೌಷಂ ವಚಸ್ತದಾ ।
ಮಾತುರುತ್ಸಂಗಮಾರೂಢೋ ಭಯಾತ್ ಪನ್ನಗಸತ್ತಮಾಃ ॥೫॥

ದೇವಾನಾಂ ಪನ್ನಗಶ್ರೇಷ್ಠಾ ತೀಕ್ಷ್ಣಾ ಇತಿ ವಚಃ ಪ್ರಭೋ
ಪಿತಾಮಹಮುಪಾಗಮ್ಯ ದುಃಖಾರ್ತಾನಾಂ ಮಹಾತ್ಮನಾಮ್ ॥೬॥

ನಾನು ನನ್ನ ತಾಯಿಯು ಶಾಪವನ್ನು ಕೊಟ್ಟಾಗ ಅವಳ ತೊಡೆಯ ಮೇಲೆ ಕುಳಿತು ದೇವತೆಗಳ ಜೊತೆಯಲ್ಲಿ ಬಂದ ಬ್ರಹ್ಮದೇವರನ್ನು ನೋಡಿ, ಗಾಬರಿಯಿಂದ ತಾಯಿಯ ತೊಡೆಯ ಮೇಲೆ ಕುಳಿತು, ದೇವತೆಗಳು ಆಡಿದ ಈ ದಿತಿಯು ಬಹಳ ಕ್ರೂರಳಾದವಳು ಎಂಬ ಮಾತನ್ನು ಕೇಳಿದೆ.

ದೇವಾಃ

ಕಾ ಹಿ ಲಬ್ಧ್ವಾ ಪ್ರಿಯಾನ್ಪುತ್ರಾನ್ ಶಪೇದೇವಂ ಪಿತಾಮಹ ।
ಋತೇ ಕದ್ರೂಂ ತೀಕ್ಷ್ಣರೂಪಾಂ ದೇವದೇವ ತವಾಗ್ರತಃ ॥೭॥

ಎಲೈ ದೇವದೇವರಾದ ಬ್ರಹ್ಮದೇವರೇ, ಈ ಕದ್ರು ಒಬ್ಬಳನ್ನು ಬಿಟ್ಟು ಪ್ರಿಯಳಾದ ಪುತ್ರರನ್ನು ಪಡೆದ ಯಾವ ತಾಯಿಯು ತಾನೇ ನಿನ್ನ ಎದುರಿಗೆ ಇಂತಹ ಉಗ್ರವಾದ ಶಾಪವನ್ನು ಕೊಡುತ್ತಾಳೆ?

ತಥೇತಿ ಚ ವಚಸ್ತಸ್ಯಾಸ್ತ್ವಯಾಪ್ಯುಕ್ತಂ ಪಿತಾಮಹ ।
ಏತದಿಚ್ಛಾಮ ವಿಜ್ಞಾತುಂ ಕಾರಣಂ ಯನ್ನ ವಾರಿತಾ ॥೮॥

ಎಲೈ ಪಿತಾಮಹನೇ, ನೀನೂ ಸಹ ''ಹಾಗೆಯೇ ಆಗಲಿ'' ಎಂದು ಹೇಳಿದೆ. ನೀನು ಆ ಶಾಪವನ್ನು ತಡೆಯದೆ ಇರುವುದಕ್ಕೆ ನಾವು ಕಾರಣವನ್ನು ತಿಳಿಯಲು ಇಚ್ಛಿಸುತ್ತೇವೆ.

ಕದ್ರುದೇವಿಯು ಶಾಪವನ್ನು ಕೊಡುವಾಗ ದುಷ್ಟಸರ್ಪಗಳ ನಾಶವನ್ನು ಮಾಡಿ ಧಾರ್ಮಿಕವಾದ ಸರ್ಪಗಳ ರಕ್ಷಣೆಯನ್ನು ಮಾಡಲು ದೇವತೆಗಳ ಜೊತೆಯಲ್ಲಿ ಬ್ರಹ್ಮದೇವರು ಕದ್ರುವಿನ ನಿವಾಸಕ್ಕೆ ಬಂದಿದ್ದರು ಎಂಬ ಕಥೆಯನ್ನು ಹೇಳದಿದ್ದರೂ ಸಹ ಹೇಳಿದಂತೆಯೇ ಆಗಿದೆ.

ಬ್ರಹ್ಮಾ

ಬಹವಃ ಪನ್ನಗಾಸ್ತೀಕ್ಷ್ಣಾ ಭೀಮವೀರ್ಯಾ ವಿಷೋದ್ಬಣಾಃ ।
ಪ್ರಜಾನಾಂ ಹಿತಕಾಮೋಽಹಂ ನ ಚ ವಾರಿತವಾಂಸ್ತದಾ ॥೯॥

ಅನೇಕ ಸರ್ಪಗಳು ಭಯಂಕರ ಪರಾಕ್ರಮವುಳ್ಳವೂ, ತೀಕ್ಷ್ಣವಾದ ವಿಷವುಳ್ಳವೂ ಆಗಿವೆ. ಆದ್ದರಿಂದ ಪ್ರಜೆಗಳ ಹಿತವನ್ನು ಬಯಿಸಿದ ನಾನು ಆ ಸಮಯದಲ್ಲಿ ಆ ಶಾಪವನ್ನು ಪ್ರತಿಷೇಧಿಸಲಿಲ್ಲ.

ಯೇ ದಂದಶೂಕಾಃ ಕ್ಷುದ್ರಾಶ್ಚ ಪಾಪಚಾರಾ ವಿಷೋದ್ಬಣಾಃ ।
ತೇಷಾಂ ವಿನಾಶೋ ಭವಿತಾ ನ ತು ಯೇ ಧರ್ಮಚಾರಿಣಃ ॥೧೦॥

ಯಾವ ಸರ್ಪಗಳು ಕಚ್ಚುವ ಸ್ವಭಾವವುಳ್ಳದ್ದಾಗಿ, ಕ್ಷುದ್ರಗಳಾಗಿ, ಪಾಪರತಗಳಾಗಿ, ಉಲ್ಬಣವಾದ ವಿಷವನ್ನು ಹೊಂದಿರುತ್ತವೆಯೋ ಅಂತಹ ಸರ್ಪಗಳಿಗೆ ವಿನಾಶವುಂಟಾಗುವುದು. ಧರ್ಮಚಾರಿಗಳಾದ ಸರ್ಪಗಳಿಗೆ ವಿನಾಶವುಂಟಾಗುವುದಿಲ್ಲ.

ಯನ್ನಿಮಿತ್ತಶ್ಚ ಭವಿತಾ ಮೋಕ್ಷಸ್ತೇಷಾಂ ಮಹಾಭಯಾತ್ ।
ಪನ್ನಗಾನಾಂ ನಿಬೋಧಧ್ವಂ ಯಥಾ ವೈ ಗದಿತಂ ಮಯಾ ॥೧೧॥

ಅಂತಹ ಧರ್ಮಚಾರಿಗಳಾದ ಸರ್ಪಗಳಿಗೆ ಯಾವ ಕಾರಣದಿಂದ ಅಂತಹ ಮಹಾಭಯದಿಂದ ಮೋಚನೆಯುಂಟಾಗುವುದೆಂಬುದನ್ನು ನಾನು ತಿಳಿಸುತ್ತೇನೆ. ಅದನ್ನು ನೀವು ತಿಳಿಯಿರಿ.

ಯಾಯಾವರಕುಲೇ ಧೀಮಾನ್ ಭವಿಷ್ಯತಿ ಮಹಾನೃಷಿಃ ।
ಜರತ್ಕಾರುರಿತಿ ಖ್ಯಾತಸ್ತೇಜಸ್ವೀ ವಿಜಿತೇಂದ್ರಿಯಃ ॥೧೨॥

ಯಾಯಾವರಕುಲದಲ್ಲಿ ಮೇಧಾವಿಯಾದ ಜರತ್ಕಾರು ಎಂಬ ಹೆಸರಿನ ದೊಡ್ಡ ಋಷಿಗಳು ಜನಿಸುತ್ತಾರೆ. ತೇಜಸ್ವಿಗಳಾದ ಅವರು ಜಿತೇಂದ್ರಿಯರೂ, ಪ್ರಖ್ಯಾತರೂ ಆಗಿರುತ್ತಾರೆ.

ತಸ್ಯ ಪುತ್ರೋ ಜರತ್ಕಾರೋರುತ್ಪತ್ಸ್ಯತಿ ಮಹಾತಪಾಃ ।
ಆಸ್ತೀಕೋ ನಾಮ ಯಜ್ವಾಂ ಸ ಪ್ರತಿಷೇತ್ಸ್ಯತಿ ತಂ ತದಾ ।
ತತ್ರ ಮೋಕ್ಷ್ಯಂತಿ ಭುಜಗಾ ಯೇ ಭವಿಷ್ಯಂತಿ ಧಾರ್ಮಿಕಾಃ ॥೧೩॥

ಆ ಜರತ್ಕಾರುವಿಗೆ ಮಹಾತಪಸ್ಸಿಯಾದ ಆಸ್ತೀಕನೆಂಬ ಪುತ್ರನು ಜನಿಸುವನು. ಅವನು ಹೋಗಿ ಯಜ್ಞವನ್ನು ಪ್ರತಿಷೇಧಮಾಡುತ್ತಾನೆ. ಆಗ ಧಾರ್ಮಿಕ ಸರ್ಪಗಳೆಲ್ಲವೂ ವಿಮೋಚನೆಯನ್ನು ಹೊಂದುವವು.

ದೇವಾಃ

ಸ ಮುನಿಪ್ರವರೋ ದೇವ ಜರತ್ಕಾರುರ್ಮಹಾತಪಾಃ ।
ಕಸ್ಯಾಂ ಪುತ್ರಂ ಮಹಾತ್ಮಾನಂ ಜನಯಿಷ್ಯತಿ ವೀರ್ಯವಾನ್ ॥೧೪॥

ಎಲೈ ಬ್ರಹ್ಮದೇವನೇ, ಮಹಾತಪಸ್ವಿಯೂ, ಶ್ರೇಷ್ಠಋಷಿಯೂ ವೀರ್ಯವಂತನೂ ಆದ ಜರತ್ಕಾರುವು ಯಾವ ಪತ್ನಿಯಲ್ಲಿ ಮಹಾತ್ಮನಾದ ಪುತ್ರನನ್ನು ಪಡೆಯುವನು?

ಬ್ರಹ್ಮಾ

ಸನಾಮಾಯಾಂ ಸನಾಮಾ ಸ ಕನ್ಯಾಯಾಂ ದ್ವಿಜಸತ್ತಮಃ ।
ಅಪತ್ಯಂ ವೀರ್ಯವಾನ್ ದೇವಾ ವೀರ್ಯವಜ್ಜನಯಿಷ್ಯತಿ ॥೧೫॥

ಆ ದ್ವಿಜಶ್ರೇಷ್ಠನಾದ ಜರತ್ಕಾರುವು ತನ್ನ ಹೆಸರಿನ ಕನ್ಯೆಯನ್ನೇ ವಿವಾಹ ಮಾಡಿಕೊಂಡು ಸಾಮರ್ಥ್ಯೋಪೇತನಾದ ಮಗನನ್ನು ಪಡೆಯುವನು.

ಏಲಾಪತ್ರಃ

ಏವಮಸ್ತ್ವಿತಿ ತಂ ದೇವಾಃ ಪಿತಾಮಹಮಥಾಬ್ರುವನ್ ।
ಉಕ್ತ್ವಾ ಚೈವಂ ಗತಾ ದೇವಾಃ ಸ ಚ ದೇವಃ ಪಿತಾಮಹಃ ॥೧೬॥

ಆಗ ದೇವತೆಗಳು ಬ್ರಹ್ಮದೇವರನ್ನು ಕುರಿತು ''ಹಾಗೆಯೇ ಆಗಲಿ'' ಎಂದು ಹೇಳಿದರು. ಹೀಗೆ ಹೇಳಿ ದೇವತೆಗಳೂ ಮತ್ತು ಬ್ರಹ್ಮದೇವರೂ ಸಹ ತಮ್ಮ ತಮ್ಮ ಸ್ಥಾನಗಳಿಗೆ ಹೋದರು.

ಸೋಽಹಮೇವಂ ಪ್ರಪಶ್ಯಾಮಿ ವಾಸುಕೇ ಭಗಿನೀಂ ತವ ।
ಜರತ್ಕಾರುರಿತಿ ಖ್ಯಾತಾಂ ತಾಂ ತಸ್ಮೈ ಪ್ರತಿಪಾದಯ ॥೧೭॥

ಆದ್ದರಿಂದ ನನಗೆ ಇದು ಉಪಾಯವಾಗಿ ತೋರುತ್ತದೆ. ಎಲೈ ವಾಸುಕಿಯೇ, ಜರತ್ಕಾರು ಎಂಬ ಹೆಸರಿನ ಪ್ರಸಿದ್ಧಳಾದ ನಿನ್ನ ತಂಗಿಯನ್ನು ಅವನಿಗೆ ದಾನಮಾಡು.

ಭೈಕ್ಷವದ್ ಭಿಕ್ಷಮಾಣಾಯ ನಾಗಾನಾಂ ಭಯಶಾಂತಯೇ ।
ಋಷಯೇ ಸುವ್ರತಾಯ ತ್ವಮೇಷ ಮೋಕ್ಷ : ಶ್ರುತೋ ಮಯಾ ॥೧೮॥

ನಾಗಗಳಿಗೆ ಉಂಟಾದ ಭಯದ ಪರಿಹಾರಕ್ಕೋಸ್ಕರವಾಗಿ ಭಿಕ್ಷೆಯಂತೆ ಕನ್ಯೆಯನ್ನು ಬೇಡುವ ಒಳ್ಳೆಯ ವ್ರತಧಾರಿಯಾದ ಆ ಋಷಿಗೆ ನೀನು ತಂಗಿಯನ್ನು ಕೊಡು. ಇದು ಶಾಪಮೋಚನೆಯ ಉಪಾಯ. ಇದನ್ನು ನಾನು ಹಿಂದೆ ಕೇಳಿದ್ದೇನೆ.

॥ ಇತಿ ಶ್ರೀಮನ್ಮಹಾಭಾರತೇ ಶತಸಹಸ್ರಿಕಾಯಾಂಸಂಹಿತಾಯಾಮಾದಿಪರ್ವಣಿ
ತ್ರಯತ್ರಿಂಶೋऽಧ್ಯಾಯಃ ॥

॥ ಇತಿ ಆಸ್ತೀಕಪರ್ವಣಿ ಏಕವಿಂಶೋऽಧ್ಯಾಯಃ ॥

ಇಲ್ಲಿಗೆ ಮಹಾಭಾರತದ ಆದಿಪರ್ವದಲ್ಲಿ ಮೂವತ್ಮೂರನೆಯ ಅಧ್ಯಾಯ ಮುಗಿಯಿತು.

★★★★★

ಮೂವತ್ತಾಲ್ಕನೆಯ ಅಧ್ಯಾಯ

(ಏಲಾಪತ್ರನ ವಚನದಂತೆ ವಾಸುಕಿಯಿಂದ ತಂಗಿಯ ರಕ್ಷಣೆ. ದೇವತೆಗಳಿಗೆ ಬ್ರಹ್ಮದೇವರ ಹಿತವಚನ.)

ಸೂತಃ

ಏಲಾಪತ್ರಸ್ಯ ತು ವಚಃ ಶ್ರುತ್ವಾ ನಾಗಾ ದ್ವಿಜೋತ್ತಮ ।
ಸರ್ವೇ ತೇ ಹೃಷ್ಟಮನಸಃ ಸಾಧು ಸಾಧ್ವಿತ್ಯಪೂಜಯನ್ ॥ ೧ ॥

ಎಲೈ ಬ್ರಾಹ್ಮಣಶ್ರೇಷ್ಠನೇ, ಏಲಾಪತ್ರನ ಮಾತುಗಳನ್ನು ಕೇಳಿ ಎಲ್ಲಾ ನಾಗಗಳೂ ಸಂತೋಷದಿಂದ ಕೂಡಿದವುಗಳಾಗಿ ''ಒಳ್ಳೆಯದು, ಒಳ್ಳೆಯದು'' ಎಂದು ಪ್ರಶಂಸಿಸಿದವು.

ತತಃ ಪ್ರಭೃತಿ ತಾಂ ಕನ್ಯಾಂ ವಾಸುಕಿಃ ಪರ್ಯರಕ್ಷತ ।
ಜರತ್ಕಾರುಂ ಸ್ವಸಾರಂ ವೈ ಮಹದ್ ಹರ್ಷಮವಾಪ ಸಃ ॥೨ ॥

ನಿನ್ನ ಪೌರುಷವು ಎಲ್ಲಿ ಹೋಯಿತು? ನಿನ್ನ ಗರ್ವದಿಂದ ಕೂಡಿದ ಅಂತಹ ಮಾತುಗಳು ಎಲ್ಲಿ ಹೋದವು? ನೀನು ಆ ರೀತಿಯಲ್ಲಿ ಶವವನ್ನು ಧರಿಸಿರುವ ನಿನ್ನ ತಂದೆಯನ್ನು ನೋಡುವಿ.

॥ ಇತಿ ಶ್ರೀಮನ್ಮಹಾಭಾರತೇ ಶತಸಹಸ್ರಿಕಾಯಾಂಸಂಹಿತಾಯಾಮಾದಿಪರ್ವಣಿ ಪಂಚತ್ರಿಂಶೋಽಧ್ಯಾಯಃ ॥

॥ ಇತಿ ಆಸ್ತೀಕಪರ್ವಣಿ ತ್ರಯವಿಂಶೋಽಧ್ಯಾಯಃ ॥

ಇಲ್ಲಿಗೆ ಮಹಾಭಾರತದ ಆದಿಪರ್ವದಲ್ಲಿ ಮೂವತ್ತೈದನೆಯ ಅಧ್ಯಾಯ ಮುಗಿಯಿತು.

★★★★★

ಮೂವತ್ತಾರನೆಯ ಅಧ್ಯಾಯ

(ಪುತ್ರನ ಶಾಪಪ್ರದಾನವನ್ನು ಕೇಳಿದ ತಂದೆಯಾದ ಶಮೀಕರ ಅಸಂತೋಷ ಮತ್ತು ಶೃಂಗಿಯನ್ನು ಕುರಿತು ಉಪದೇಶ.)

ಸೂತಃ

ಏವಮುಕ್ತಃ ಸ ತೇಜಸ್ವೀ ಶೃಂಗೀ ಕೋಪಸಮನ್ವಿತಃ ।
ಮೃತಧಾರಂ ಗುರುಂ ಶ್ರುತ್ವಾ ಪರ್ಯತಪ್ಯತ ಮನ್ಯುನಾ ॥೧॥

ಇದನ್ನು ಕೇಳಿದ ತೇಜಸ್ವಿಯಾದ ಶೃಂಗಿಯು ಕೋಪಸಮನ್ವಿತನಾಗಿ ತಂದೆಯು ಶವವನ್ನು ಧರಿಸಿರುವನೆಂದು ಕೇಳಿ, ಸಿಟ್ಟಿನಿಂದ ಉರಿದನು.

ಸ ತಂ ಕೃಶಮಭಿಪ್ರೇಕ್ಷ್ಯ ಸೂನೃತಾಂ ವಾಚಮುತ್ಸೃಜನ್ ।
ಅಪೃಚ್ಛತ್ತ ಕಥಂ ತಾತಃ ಸ ಮೇಽದ್ಯ ಮೃತಧಾರಕಃ ॥೨॥

ಅವನು ಆ ಕೃಶನನ್ನು ಉದ್ದೇಶಿಸಿ ಮಧುರವಾದ ಮಾತನ್ನಾಡುತ್ತಾ ನನ್ನ ತಂದೆಯು ಈ ದಿನ ಹೇಗೆ ಆ ಮೃತವಾದ ಸರ್ಪವನ್ನು ಧರಿಸಿದನು ಎಂದು ಕೇಳಿದನು.

ಕೃಶಃ

ರಾಜ್ಞಾ ಪರೀಕ್ಷಿತಾ ತತ್ರ ಮೃಗಯಾಂ ಪರಿಧಾವತಾ ।
ಅವಸಕ್ತಃ ಪಿತುಸ್ತೇऽದ್ಯ ಮೃತಃ ಸ್ಕಂಧೇ ಭುಜಂಗಮಃ ॥೩॥

ಬೇಟೆಯನ್ನು ಆಡುತ್ತಾ ಸಂಚರಿಸುತ್ತಿದ್ದ ಪರೀಕ್ಷಿತರಾಜನು ನಿನ್ನ ತಂದೆಯ ಕೊರಳಿನಲ್ಲಿ ಮೃತವಾದ ಸರ್ಪವನ್ನು ಹಾಕಿದನು.

ಶೃಂಗೀ

ಕಿಂ ಮೇ ಪಿತ್ರಾ ಕೃತಂ ತಸ್ಯ ರಾಜ್ಞೋऽನಿಷ್ಟಂ ದುರಾತ್ಮನಃ ।
ಬ್ರೂಹಿ ತ್ವಂ ಕೃಶ ತತ್ತ್ವೇನ ಪಶ್ಯ ಮೇ ತಪಸೋ ಬಲಮ್ ॥೪॥

ಆ ದುರಾತ್ಮನಾದ ರಾಜನಿಗೆ ನನ್ನ ತಂದೆಯು ಏನು ಅಪರಾಧವನ್ನು ಮಾಡಿದ್ದನು ಎಂದು ನೀನು ಹೇಳು. ಎಲೈ ಕೃಶನೇ, ನನ್ನ ತಪಸ್ಸಿನ ಬಲವನ್ನು ಸರಿಯಾಗಿ ನೋಡು.

ಕೃಶಃ

ಸ ರಾಜಾ ಮೃಗಯಾಂ ಯಾತಃ ಪರೀಕ್ಷಿದಭಿಮನ್ಯುಜಃ ।
ಸಸಾರ ಮೃಗಮೇಕಾಕೀ ವಿದ್ಧೋऽಯಾನ್ನಷ್ಟವಾನ್ ಮೃಗಃ ॥೫॥

ಅಭಿಮನ್ಯುವಿನ ಪುತ್ರನಾದ ಆ ಪರೀಕ್ಷಿತ್ ರಾಜನು ಬೇಟೆಯಾಡುತ್ತಾ ಏಕಾಕಿಯಾಗಿ ಒಂದು ಮೃಗವನ್ನು ಹಿಂಬಾಲಿಸಿದನು. ಅವನಿಂದ ಹೊಡೆಯಲ್ಪಟ್ಟ ಆ ಮೃಗವು ಕಣ್ಮರೆಯಾಯಿತು.

ನ ಚಾಪ ಸ ಮೃಗಂ ರಾಜಾ ಚರಂಸ್ತಸ್ಮಿನ್ಮಹಾವನೇ ।
ಪಿತರಂ ತೇ ಸ ದೃಷ್ಟ್ವೈವ ಪಪ್ರಚ್ಛಾನಭಿಭಾಷಿಣಮ್ ॥೬॥

ಆ ರಾಜನು ಆ ದೊಡ್ಡ ಕಾಡಿನಲ್ಲಿ ಎಷ್ಟು ತಿರುಗಾಡಿದರೂ ಆ ಮೃಗವು ಗೋಚರಿಸಲಿಲ್ಲ. ಆಗ ಮೌನವ್ರತವನ್ನು ಧರಿಸಿದ್ದ ನಿನ್ನ ತಂದೆಯನ್ನು ನೋಡಿ ಅವನು ಪ್ರಶ್ನೆಯನ್ನು ಮಾಡಿದನು.

ತಂ ಸ್ಥಾಣುಭೂತಂ ತಿಷ್ಠಂತಂ ಕ್ಷುತ್ತೃಷಾಶ್ರಮಾನ್ವಿತಃ ।
ಪುನಃಪುನರ್ಮೃಗಂ ನಷ್ಟಂ ಪಪ್ರಚ್ಛ ಪಿತರಂ ತವ ॥೭॥

ಅವನು ಹಸಿವುನೀರಡಿಕೆ ಮತ್ತು ಆಯಾಸದಿಂದ ಬಳಲಿದವನಾಗಿ ಅಲುಗಾಡದೇ ಕಂಬದಂತೆ ಕುಳಿತಿದ್ದ ನಿನ್ನ ತಂದೆಯನ್ನು ಪುನಃ ಪುನಃ ಕಣ್ಣರೆಯಾದ ಮೃಗದ ಬಗ್ಗೆ ಕೇಳಿದನು.

ಸ ಚ ಮೌನವ್ರತೋಪೇತೋ ನೈವ ತಂ ಪ್ರತ್ಯಭಾಷತ ।
ತಸ್ಯ ರಾಜಾ ಧನುಷ್ಕೋಟ್ಯಾ ಸರ್ಪಂ ಸ್ಕಂಧೇ ಸಮಾಸೃಜತ್ ॥೮॥

ಮೌನವ್ರತಧಾರಿಯಾದ ನಿನ್ನ ತಂದೆಯು ಅವನಿಗೆ ಉತ್ತರವನ್ನು ಕೊಡಲಿಲ್ಲ. ಆಗ ರಾಜನು ತನ್ನ ಬಿಲ್ಲಿನ ತುದಿಯಿಂದ ಒಂದು ಮೃತಸರ್ಪವನ್ನು ಎತ್ತಿ ಅವನ ಕೊರಳಿಗೆ ಹಾಕಿದನು.

ಶೃಂಗಿನ್ ತವ ಪಿತಾ ಸೌಮ್ಯ ತಥೈವಾಸ್ತೇ ಯತವ್ರತಃ ।
ಸೋಽಪಿ ರಾಜಾ ಸ್ವನಗರಂ ಪ್ರತಿಯಾತೋ ಗಜಾಹ್ವಯಮ್ ॥೯॥

ಏಳೈ ಶೃಂಗಿಯೇ ನಿನ್ನ ವ್ರತಧಾರಿಯಾದ ತಂದೆಯು ಇನ್ನೂ ಅದೇ ರೀತಿಯಲ್ಲಿಯೇ ಇದ್ದಾನೆ. ಪ್ರೀತಿಪಾತ್ರನೇ, ಆ ರಾಜನಾದರೋ ತನ್ನ ನಗರವಾದ ಹಸ್ತಿನಪುರಕ್ಕೆ ಹೊರಟುಹೋದನು.

ಸೂತಃ

ಶ್ರುತ್ವೈತದ್ ಋಷಿಪುತ್ರಃ ಸ ಭೃಶಂ ಕ್ರುದ್ಧೋ ವ್ಯತಿಷ್ಠತ ।
ಕೋಪಸಂರಕ್ತನಯನಃ ಪ್ರಜ್ವಲನ್ನಿವ ಮನ್ಯುನಾ ॥೧೦॥

ಇದನ್ನು ಕೇಳಿದ ಕೂಡಲೇ ಆ ಋಷಿಕುಮಾರನು ಅತ್ಯಂತ ಕ್ರುದ್ಧನಾದನು. ಕೋಪದಿಂದ ಕೆಂಪಾದ ಕಣ್ಣುಳ್ಳವನಾಗಿ ಕ್ರೋಧದಿಂದ ಅಗ್ನಿಯಂತೆ ಪ್ರಜ್ವಲಿಸಿದನು.

ಆವಿಷ್ಟಃ ಸ ತು ಕೋಪೇನ ಶಶಾಪ ನೃಪತಿಂ ತದಾ ।
ವಾರ್ಯುಪಸ್ಪೃಶ್ಯ ತೇಜಸ್ವೀ ಕ್ರೋಧೇನ ಚ ಬಲಾತ್ಕೃತಃ ॥೧೧॥

ಆ ತೇಜಸ್ವಿಯಾದ ಶೃಂಗಿಯು ಕ್ರೋಧಕ್ಕೆ ವಶನಾಗಿ ಕೈಕಾಲುಗಳನ್ನು ತೊಳೆದು ಶುದ್ಧನಾಗಿ ಆ ರಾಜನಿಗೆ ಕೋಪದಿಂದ ಶಾಪವನ್ನು ಕೊಟ್ಟನು.

ಶೃಂಗೀ

ಯೋಽಸೌ ವೃದ್ಧಸ್ಯ ತಾತಸ್ಯ ತಥಾ ಕೃಚ್ಛ್ರಗತಸ್ಯ ಚ ।
ಸ್ಕಂಧೇ ಮೃತಮವಾಸ್ರಾಕ್ಷೀತ್ ಪನ್ನಗಂ ರಾಜಕಿಲ್ಬಿಷೀ ॥೧೨॥

ತಂ ಪಾಪಮತಿಸಂರಬ್ಧಸ್ತಕ್ಷಕಃ ಪನ್ನಗೋತ್ತಮಃ ।
ಆಶೀವಿಷಸ್ತಿಗ್ಮತೇಜಾ ಮದ್ವಾಕ್ಯಬಲಚೋದಿತಃ ॥೧೩॥

ಸಪ್ತರಾತ್ರಾದಿತೋ ನೇತಾ ಯಮಸ್ಯ ಸದನಂ ಪ್ರತಿ ।
ದ್ವಿಜಾನಾಮವಮಂತಾರಂ ಕುರೂಣಾಮಯಶಸ್ಕರಮ್ ॥೧೪॥

ಯಾವ ದುಷ್ಟನಾದ ರಾಜನು ವೃದ್ಧನಾದ, ಕಷ್ಟದಲ್ಲಿರುವ ನನ್ನ ತಂದೆಯ ಕೊರಳಿನಲ್ಲಿ ಮೃತವಾದ ಸರ್ಪವನ್ನು ಹಾಕಿದನೋ ಆ ಪಾಪಮತಿಯಾದ ರಾಜನನ್ನು ನನ್ನ ವಾಕ್ಯದ ಬಲದಿಂದ ಪ್ರೇರಿತನಾದ, ದೃಷ್ಟಿಯಲ್ಲಿಯೇ ವಿಷವನ್ನು ಹೊಂದಿದ, ಕ್ರೂರಪರಾಕ್ರಮವನ್ನು ಹೊಂದಿದ ಪನ್ನಗಶ್ರೇಷ್ಠನಾದ ತಕ್ಷಕನು ಇಂದಿನಿಂದ ಏಳು ದಿನಗಳಲ್ಲಿ ಕುರುವಂಶಕ್ಕೆ ಅಪಕೀರ್ತಿಯನ್ನುತಂದ ಮತ್ತು ಬ್ರಾಹ್ಮಣರಿಗೆ ಅವಮಾನವನ್ನು ಮಾಡಿದ ಆ ರಾಜನನ್ನು ಯಮಪಟ್ಟಣಕ್ಕೆ ಕರೆದೊಯ್ಯಲಿ.

ಸೂತಃ

ಇತಿ ಶಪ್ತ್ವಾ ನೃಪಂ ಕ್ರುದ್ಧಃ ಶೃಂಗೀ ಪಿತರಮಭ್ಯಗಾತ್ ।
ಆಸೀನಂ ಗೋಚರೇ ತಸ್ಮಿನ್ ವಹಂತಂ ಶವಪನ್ನಗಮ್ ॥೧೫॥

ಹೀಗೆ ಕೋಪದಿಂದ ರಾಜನಿಗೆ ಶಾಪವನ್ನು ಕೊಟ್ಟು ಶೃಂಗಿಯು ಗೋಚಾರಪ್ರದೇಶದಲ್ಲಿ ಸ್ಕಂಧದಲ್ಲಿ ಸರ್ಪವನ್ನು ಧರಿಸಿಕುಳಿತಿದ್ದ ತನ್ನ ತಂದೆಯ ಸಮೀಪಕ್ಕೆ ಬಂದನು.

ಸ ತಮಾಲಕ್ಷ್ಯ ಪಿತರಂ ಶೃಂಗೀ ಸ್ಕಂಧಗತೇನ ವೈ ।
ಶವೇನ ಭುಜಗೇನಾಸೀದ್ ಭೂಯಃ ಕ್ರೋಧಸಮನ್ವಿತಃ ।
ದುಃಖಾಚ್ಚಾಶ್ರೂಣಿ ಮುಂಚನ್ ವೈ ಪಿತರಂ ಚೇದಮಬ್ರವೀತ್ ॥೧೬॥

ಅವನು ಕೊರಳಿನಲ್ಲಿ ಶವವನ್ನು ಧರಿಸಿದ ತಂದೆಯನ್ನು ನೋಡಿ, ಇನ್ನೂ ಹೆಚ್ಚುಕೋಪವುಳ್ಳವನಾಗಿ ದುಃಖದಿಂದ ಕಣ್ಣೀರನ್ನು ಸುರಿಸುತ್ತಾ ತಂದೆಯನ್ನು ಕುರಿತು ಈ ಮಾತುಗಳನ್ನು ಆಡಿದನು.

ಸಂಚರಿಸಿದರು. ಮಹಾತ್ಮರಾದ ಅವರು ಮನಸ್ಸಿನಲ್ಲಿಯೂ ಸಹ ಪತ್ನಿಯನ್ನು ಬಯಸಲಿಲ್ಲ.

ತತಃ ಪರಸ್ಮಿನ್ ಸಂಪ್ರಾಪ್ತೇ ಕಾಲೇ ಕಸ್ಮಿಂಶ್ಚಿದೇವ ತು ।
ಪರೀಕ್ಷಿದಿತಿ ವಿಖ್ಯಾತೋ ರಾಜಾ ಕೌರವವಂಶಭೃತ್ ॥೮॥

ಯಥಾ ಪಾಂಡುರ್ಮಹಾಬಾಹುರ್ಧನುರ್ಧರವರೋ ಯುಧಿ ।
ಪಾಂಡುಸ್ತು ಮೃಗಯಾಶೀಲಃ ಪುರಾಸ್ಯ ಪ್ರಪಿತಾಮಹಃ ॥೯॥

ಮೃಗಾನ್ ವಿಧ್ಯನ್ ವರಾಹಾಂಶ್ಚ ತರಕ್ಷೂನ್ ಮಹಿಷಾಂಸ್ತದಾ ।
ಅನ್ಯಾಂಶ್ಚ ವಿವಿಧಾನ್ ವನ್ಯಾನ್ ಜಘಾನ ಪೃಥಿವೀಪತಿಃ ॥೧೦॥

ಅನಂತರ ಅವರಿಗೆ ಪರವಯಸ್ಸು ಪ್ರಾಪ್ತವಾಗುತ್ತಿರಲು, ಒಮ್ಮೆ ಕೌರವವಂಶಸಂಭೂತನಾದ, ಪರೀಕ್ಷಿತನೆಂಬ ಪ್ರಖ್ಯಾತನಾದ ರಾಜನು, ಪಾಂಡುವಿನಂತೆ ಮಹಾಬಾಹುವೂ, ಶ್ರೇಷ್ಠವಾದ ಧನುಸ್ಸನ್ನು ಧರಿಸಿದವನೂ, ಯುದ್ಧಕುಶಲನೂ ಆಗಿದ್ದನು. ಅವನು ತನ್ನ ಪ್ರಪಿತಾಮಹನಾದ ಪಾಂಡುವಿನಂತೆ ಬೇಟೆಯಾಡುವ ಚಟವನ್ನು ಹೊಂದಿದವನಾಗಿ ಜಿಂಕೆಗಳನ್ನೂ, ವರಾಹಗಳನ್ನೂ. ಹುಲಿಗಳನ್ನೂ, ಕಾಡುಕೋಣಗಳನ್ನೂ ಮತ್ತೂ ಇನ್ನೂ ಅನೇಕವಿಧವಾದ ವನ್ಯಪ್ರಾಣಿಗಳನ್ನೂ ಸಂಹರಿಸಿದನು.

ಸ ಕದಾಚಿನ್ಮೃಗಾನ್ ವಿದ್ಧ್ವಾ ಬಾಣೇನ ನತಪರ್ವಣಾ ।
ಪೃಷ್ಠತೋ ಧನುರಾದಾಯ ಸಸಾರ ಗಹನೇ ವನೇ ॥೧೧॥

ಅವನು ಒಮ್ಮೆ ತನ್ನ ಬಾಗಿದ ತುದಿಯುಳ್ಳ ಬಾಣದಿಂದ ಮೃಗಗಳನ್ನು ಹೊಡೆದು ಗಹನವಾದ ವನದಲ್ಲಿ ಗಾಯಗೊಂಡ ಒಂದು ಮೃಗವನ್ನು ಅದರ ಹಿಂದೆ ಧನುಸ್ಸನ್ನು ತೆಗೆದುಕೊಂಡು ಹಿಂಬಾಲಿಸಿದನು.

ಯಥಾ ಹಿ ಭಗವಾನ್ ರುದ್ರೋ ವಿದ್ಧ್ವಾ ಯಜ್ಞಮೃಗಂ ದಿವಿ ।
ಅನ್ವಗಚ್ಛದ್ ಧನುಷ್ಪಾಣಿಃ ಪರ್ಯಟನ್ ವೇಷವಾಂಸ್ತತಃ ॥೧೨॥

ಹೇಗೆ ಪರಮಪೂಜ್ಯರಾದ ರುದ್ರದೇವರು ಯಜ್ಞಮೃಗವನ್ನು ಬಾಣಪ್ರಯೋಗದಿಂದ ಹಿಂಸಿಸಿ ಕಿರಾತನ ವೇಷವನ್ನು ಧರಿಸಿ, ಕೈಯಲ್ಲಿ ಧನುಸ್ಸನ್ನು

ಹಿಡಿದು ಆ ಮೃಗವನ್ನು ಹಿಂಬಾಲಿಸಿದರೋ, ಅದರಂತೆ ಪರೀಕ್ಷಿತರಾಜನೂ ಹಿಂಬಾಲಿಸಿದನು.

ನ ಹಿ ತೇನ ಮೃಗೋ ವಿದ್ಧೋ ಜೀವನ್ ಗಚ್ಛತಿ ವೈ ವನಮ್ ।
ಅಪೂರ್ವರೂಪಂ ತತ್ರಾಸೀದ್ ರಾಜ್ಞಃ ಸ್ವರ್ಗಗತಿಂ ಪ್ರತಿ ॥೧೩॥

ಅವನ ಬಾಣದ ಪ್ರಹಾರವನ್ನು ಪಡೆದ ಯಾವ ಮೃಗವೂ ಜೀವಸಹಿತವಾಗಿ ಕಾಡಿಗೆ ಹೋಗುತ್ತಿರಲಿಲ್ಲ. ಅಂತಹ ಸಂದರ್ಭದಲ್ಲಿ ರಾಜನ ಸ್ವರ್ಗಗಮನಕ್ಕೆ ಕಾರಣವಾದ ಒಂದು ಅಪೂರ್ವವಾದ ಘಟನೆಯು ಅಲ್ಲಿ ನಡೆಯಿತು.

ಪಾಂಡವೇಯಸ್ಯ ರಾಜರ್ಷೇಃ ವಿದ್ಧೋ ಯನ್ನಷ್ಟವಾನ್ ಮೃಗಃ ।
ದೂರಂ ಚಾಪಹೃತಸ್ತೇನ ಮೃಗೇಣ ಸ ಮಹೀಪತಿಃ ॥೧೪॥

ಪಾಂಡವಕುಲದಲ್ಲಿ ಜನಿಸಿದ ಆ ರಾಜರ್ಷಿಯಿಂದ ಹೊಡೆಯಲ್ಪಟ್ಟ ಮೃಗವು ಆ ಕಾಡಿನಲ್ಲಿ ಕಣ್ಮರೆಯಾಯಿತು. ಅದು ಆ ರಾಜನನ್ನು ಬಹಳ ದೂರದವರೆಗೆ ಎಳೆಯಿತು.

ಪರಿಶ್ರಾಂತಃ ಪಿಪಾಸಾರ್ತ ಆಸಸಾದ ಮುನಿಂ ವನೇ ।
ಗವಾಂ ಪ್ರಚಾರೇಷ್ವಾಸೀನಂ ವತ್ಸಾನಾಂ ಮುಖನಿಸ್ಸೃತಮ್ ।
ಭೂಯಿಷ್ಠಮುಪಯುಂಜಾನಂ ಫೇನಂ ವೈ ಪಿಬತಾಂ ಪಯಃ ॥೧೫॥

ಬಳಲಿಕೆಯಿಂದಲೂ ಮತ್ತು ಬಾಯಾರಿಕೆಯಿಂದಲೂ ಪೀಡಿತನಾದ ಆ ರಾಜನು ಗೋವುಗಳ ಸಂಚಾರಪ್ರದೇಶದಲ್ಲಿ ಕರುಗಳ ಮುಖದಿಂದ ಹೊರಬಂದ ಬಹಳವಾದ ಹಾಲಿನ ನೊರೆಯನ್ನು ಪಾನಮಾಡುತ್ತಿದ್ದಂತಹ ಒಬ್ಬ ಋಷಿಯ ಸಮೀಪಕ್ಕೆ ಬಂದನು.

ತಮಭಿದ್ರುತ್ಯ ವೇಗೇನ ಸ ರಾಜಾ ಸಂಶಿತವ್ರತಃ ।
ಅಪೃಚ್ಛದ್ ಧನುರುದ್ಯಮ್ಯ ತಂ ಮೃಗಂ ಕ್ಷುಚ್ಛ್ರಮಾನ್ವಿತಃ ॥೧೬॥

ಸಂಶಿತವ್ರತನಾದ ಆ ರಾಜನು ವೇಗವಾಗಿ ಅವನ ಸಮೀಪಕ್ಕೆ ಬಂದು ಹಸಿವು ಶ್ರಮಗಳಿಂದ ಬಳಲಿದವನಾಗಿ ಕೈಯಲ್ಲಿದ್ದ ಧನುಸ್ಸನ್ನು ಎತ್ತಿ ಕಳೆದುಹೋದ ಮೃಗದ ವಿಷಯದಲ್ಲಿ ವಿಚಾರಿಸಿದನು.

ಭೋ ಭೋ ಬ್ರಹ್ಮನ್ನಹಂ ರಾಜಾ ಪರೀಕ್ಷಿದಭಿಮನ್ಯುಜಃ ।
ಮಯಾ ವಿದ್ಧೋ ಮೃಗೋ ನಷ್ಟಃ ಕಚ್ಚಿತ್ ತ್ವಂ ದೃಷ್ಟವಾನಸಿ ॥೧೭॥

ಎಲೈ ಬ್ರಾಹ್ಮಣನೇ, ನಾನು ಅಭಿಮನ್ಯುವಿನ ಮಗನಾದ ಪರೀಕ್ಷಿತ್ ಎಂಬ ರಾಜ. ನನ್ನ ಬಾಣದಿಂದ ಹೊಡೆಯಲ್ಪಟ್ಟ ಒಂದು ಮೃಗವು ಕಣ್ಮರೆಯಾಯಿತು. ನೀನೇನಾದರೂ ಅದನ್ನು ನೋಡಿದ್ದೀಯಾ?

ಸ ಮುನಿಸ್ತಸ್ಯ ನೋವಾಚ ಕಿಂಚಿನ್ಮೌನವ್ರತೇ ಸ್ಥಿತಃ ।
ತಸ್ಯ ಸ್ಕಂಧೇ ಮೃತಂ ಸರ್ಪಂ ಕ್ರುದ್ಧೋ ರಾಜಾ ಸಮಾಸೃಜತ್ ।
ಧನುಷ್ಕೋಟ್ಯಾ ಸಮುತ್ಕ್ಷಿಪ್ಯ ಸ ಚೈನಂ ಸಮುದೈಕ್ಷತ ॥೧೮॥

ಮೌನವ್ರತದಲ್ಲಿದ್ದ ಆ ಮುನಿಯು ಅವನನ್ನು ಕುರಿತು ಏನೂ ಮಾತನಾಡಲಿಲ್ಲ. ಕೋಪಗೊಂಡ ರಾಜನು ತನ್ನ ಬಿಲ್ಲಿನ ತುದಿಯಿಂದ ಒಂದು ಮೃತವಾದ ಸರ್ಪವನ್ನು ಎತ್ತಿ ಅದನ್ನು ಅವನ ಕೊರಳಿಗೆ ಹಾಕಿದನು. ಆ ಮುನಿಯಾದರೋ ರಾಜನನ್ನು ನೋಡಿದನು.

ನ ಚ ಕಿಂಚಿದುವಾಚೈನಂ ಶುಭಂ ವಾ ಯದಿ ವಾऽಶುಭಮ್ ।
ಸ ರಾಜಾ ಕ್ರೋಧಮುತ್ಸೃಜ್ಯ ವ್ಯಥಿತಸ್ತಂ ತಥಾಗತಮ್ ।
ದೃಷ್ಟ್ವಾ ಜಗಾಮ ನಗರೀಂ ಋಷಿಸ್ತಾ ಸ್ಥೇ ತಥೈವ ಸಃ ॥೧೯॥

ಆದರೆ, ಒಳ್ಳೆಯದನ್ನಾಗಲೀ, ಕೆಟ್ಟದನ್ನಾಗಲೀ, ಯಾವ ಮಾತನ್ನೂ ರಾಜನನ್ನು ಕುರಿತು ಆಡಲಿಲ್ಲ. ರಾಜನು ತನ್ನ ಕೋಪವನ್ನು ತ್ಯಜಿಸಿ ಅಂತಹ ಪರಿಸ್ಥಿತಿಯಲ್ಲಿದ್ದ ಋಷಿಯನ್ನು ನೋಡಿ ವ್ಯಥಿತನಾಗಿ ತನ್ನ ನಗರಕ್ಕೆ ಹಿಂದಿರುಗಿದನು. ಋಷಿಯು ಮಾತ್ರ ಅದೇ ಸ್ಥಿತಿಯಲ್ಲಿಯೇ ಇದ್ದನು.

ತರುಣಸ್ತಸ್ಯ ಪುತ್ರೋऽಭೂತ್ ತಿಗ್ಮತೇಜಾ ಮಹಾತಪಾಃ ।
ಶೃಂಗೀ ನಾಮ ಮಹಾಕ್ರೋಧೋ ದುಷ್ಪ್ರಸಾದೋ ಮಹಾವ್ರತಃ ॥೨೦॥

ಆ ಮುನಿಗೆ ಕ್ರೂರಪರಾಕ್ರಮವುಳ್ಳವನೂ, ಮಹಾತಪಸ್ವಿಯೂ, ಮಹಾಕ್ರೋಧವುಳ್ಳವನೂ, ಸಮಾಧಾನಪಡಿಸಲು ಅಸಾಧ್ಯನಾದವನೂ, ಮಹಾವ್ರತಗಳನ್ನು ಧರಿಸಿದವನೂ, ತರುಣನೂ ಆದ, ಶೃಂಗಿ ಎಂಬ ಒಬ್ಬ ಪುತ್ರನಿದ್ದನು.

ಸ ದೇವವರಮೀಶಾನಂ ಸರ್ವಭೂತಹಿತೇ ರತಃ ।
ಬ್ರಹ್ಮಾಣಮುಪತಸ್ಥೇ ವೈ ಕಾಲೇ ಕಾಲೇ ಸುಸಂಯತಃ ॥೨೧॥

ಸರ್ವಭೂತಹಿತದಲ್ಲಿ ರತನಾದ ಅವನು ಬೇರೆ ಬೇರೆ ಕಾಲಗಳಲ್ಲಿ ಮೌನವ್ರತದಿಂದ ಕೂಡಿದವನಾಗಿ, ದೇವಶ್ರೇಷ್ಠನಾದ, ಸರ್ವಪ್ರಭುವಾದ ಬ್ರಹ್ಮದೇವರನ್ನು ಕುರಿತು ಸ್ತೋತ್ರಮಾಡಿ ತಪಸ್ಸನ್ನು ಮಾಡುತ್ತಿದ್ದನು.

ಸ ತೇನ ಸಮನುಜ್ಞಾತೋ ಬ್ರಹ್ಮಣಾ ಗೃಹಮೇಯಿವಾನ್ ।
ಸಖ್ಯೋಕ್ತಃ ಕ್ರೀಡಮಾನೇನ ಸ ತತ್ರ ಹಸತಾ ಕಿಲ ॥೨೨॥

ಸಂರಬ್ಧಃ ಕೋಪನೋಽತೀವ ವಿಷಕಲ್ಪೋ ಮುನೇಃ ಸುತಃ ।
ಋಷಿಪುತ್ರೇಣ ಚರ್ಮಾರ್ಥಂ ಕೃಶೇನ ದ್ವಿಜಸತ್ತಮ ॥೨೩॥

ಅವನು ಬ್ರಹ್ಮದೇವರನ್ನು ನೋಡಿ ಅವರಿಂದ ಅನುಮತಿಯನ್ನು ಪಡೆದು ಆಶ್ರಮಕ್ಕೆ ಹಿಂದಿರುಗಿದನು. ಆಗ ಜೊತೆಯಲ್ಲಿ ಆಡುತ್ತಿದ್ದ ಅವನ ಸ್ನೇಹಿತನು ನಗುತ್ತಾ ಅವನನ್ನು ಕುರಿತು ಮಾತನಾಡಿದನು. ಎಲೈ ಬ್ರಾಹ್ಮಣಶ್ರೇಷ್ಠನೇ, ಮೊದಲು ಬಹಳ ಕೋಪವುಳ್ಳವನೂ, ವಿಷಕಲ್ಪನೂ, ಋಷಿಪುತ್ರನೂ ಆದ ಆ ಶೃಂಗಿಯು ಒಂದು ಕೃಷ್ಣಾಜಿನದ ಸಲುವಾಗಿ ಕೃಶ ಎಂಬ ಇನ್ನೊಬ್ಬ ಋಷಿಕುಮಾರನ ಜೊತೆಯಲ್ಲಿ ಕಲಹವನ್ನು ಮಾಡಿದ್ದನು.

ಕೃಶಃ

ತೇಜಸ್ವಿನಸ್ತವ ಪಿತಾ ತಥೈವ ಚ ತಪಸ್ವಿನಃ ।
ಶವಂ ಸ್ಕಂಧೇನ ವಹತಿ ಮಾ ಶೃಂಗಿನ್ ಗರ್ವಿತೋ ಭವ ॥೨೪॥

ತೇಜಸ್ವಿಯಾದ ಮತ್ತು ತಪಸ್ವಿಯಾದ, ನಿನ್ನಂತೆಯೇ ಇರುವ ನಿನ್ನ ತಂದೆಯು ತನ್ನ ಕೊರಳಿನಲ್ಲಿ ಶವವನ್ನು ಧರಿಸಿದ್ದಾನೆ. ಶೃಂಗಿಯೇ ಅಹಂಕಾರ ಪಡಬೇಡ.

ವ್ಯಾಹರತ್ಸ್ವೃಷಿಪುತ್ರೇಷು ಮಾಽತ್ರ ಕಿಂಚಿದ್ವಚೋ ವದೀಃ ।
ಅಸ್ಮದ್ವಿಧೇಷು ಸಿದ್ಧೇಷು ಬ್ರಹ್ಮವಿತ್ಸು ತಪಸ್ವಿಷು ॥೨೫॥

ನನ್ನಂತಹ ಬ್ರಹ್ಮಜ್ಞಾನಿಗಳಾದ, ತಪಸ್ವಿಗಳಾದ, ಸಿದ್ಧರಾದ ಋಷಿಕುಮಾರರು ಹೀಗೆ ಮಾತನಾಡುತ್ತಿರುವಾಗ ನೀನು ಯಾವ ಪ್ರತ್ಯುತ್ತರವನ್ನೂ ಕೊಡಬೇಡ.

ಕ್ವ ತೇ ಪುರುಷಮಾನಿತ್ವಂ ಕ್ವ ತೇ ವಾಚಸ್ತಥಾವಿಧಾಃ ।
ದರ್ಪಜಾಃ ಪಿತರಂ ದೃಷ್ಟ್ವಾ ಯಸ್ತ್ವಂ ಶವಧರಂ ತಥಾ ॥೨೬॥

ಶೃಂಗೀ

ಶ್ರುತ್ವೇಮಾಂ ಧರ್ಷಣಾಂ ತಾತ ತವ ತೇನ ದುರಾತ್ಮನಾ ।
ರಾಜ್ಞಾ ಪರೀಕ್ಷಿತಾ ಕೋಪಾದಶಪಂ ತಮಹಂ ನೃಪಮ್ ॥೧೭॥

ತಂದೆಯೇ, ಆ ದುರಾತ್ಮನಾದ ಪರೀಕ್ಷಿತ್‌ರಾಜನು ನಿನಗೆ ಇಂತಹ ಅವಮಾನ ಮಾಡಿದುದನ್ನು ಕೇಳಿ, ನಾನು ಆ ರಾಜನಿಗೆ ಕೋಪದಿಂದ ಶಾಪವನ್ನು ನೀಡಿದೆನು.

ತದರ್ಹತಿ ಸದಾ ಚೋಗ್ರಂ ಶಾಪಂ ಕುರುಕುಲಾಧಮಃ ।
ಸಪ್ತಮೇಽಹನಿ ತಂ ಪಾಪಂ ತಕ್ಷಕಃ ಪನ್ನಗೋತ್ತಮಃ ।
ವೈವಸ್ವತಸ್ಯ ಭವನಂ ನೇತಾ ಪರಮದಾರುಣಮ್ ॥೧೮॥

ಕುರುಕುಲಾಧಮನಾದ ಆ ರಾಜನು ಉಗ್ರವಾದ ಶಾಪಕ್ಕೆ ಯೋಗ್ಯನಾಗಿದ್ದಾನೆ. ಇವತ್ತಿಗೆ ಏಳನೆಯ ದಿವಸ ಪರಮಕ್ರೂರಿಯೂ, ಪಾಪಿಯೂ ಆದ ಆ ರಾಜನನ್ನು ಪನ್ನಗಶ್ರೇಷ್ಠನಾದ ತಕ್ಷಕನು ಯಮನ ಪಟ್ಟಣಕ್ಕೆ ಕಳುಹಿಸುತ್ತಾನೆ.

ಸೂತಃ

ತಮಬ್ರವೀತ್ ಪಿತಾ ಬ್ರಹ್ಮಂಸ್ತಥಾ ಕೋಪಸಮನ್ವಿತಮ್ ।
ನ ಮೇ ಪ್ರಿಯಂ ಕೃತಂ ತಾತ ನೈಷ ಧರ್ಮಸ್ತಪಸ್ವಿನಾಮ್ ॥೧೯॥

ಹಾಗೆ ಕೋಪದಿಂದ ಕೂಡಿದ್ದ ಮಗನನ್ನು ನೋಡಿ ತಂದೆಯು, ಪ್ರೀತಿಪಾತ್ರನೇ, ನೀನು ಮಾಡಿದ ಕೆಲಸವು ನನಗೆ ಸಂತೋಷವನ್ನುಂಟು ಮಾಡುವುದಿಲ್ಲ. ಇದು ತಪಸ್ವಿಗಳ ಧರ್ಮವಲ್ಲ ಎಂದು ಹೇಳಿದನು.

ವಯಂ ತಸ್ಯ ನರೇಂದ್ರಸ್ಯ ವಿಷಯೇ ನಿವಸಾಮಹೇ ।
ನ್ಯಾಯತೋ ರಕ್ಷಿತಾಸ್ತೇನ ತಸ್ಯ ಶಾಪಂ ನ ರೋಚಯೇ ॥೨೦॥

ನಾವು ಆ ನರೇಂದ್ರನ ರಾಜ್ಯದಲ್ಲಿ ವಾಸವನ್ನು ಮಾಡುತ್ತಿದ್ದೇವೆ. ಅವನು ನಮ್ಮನ್ನು ನ್ಯಾಯದಿಂದ ರಕ್ಷಿಸಿದ್ದಾನೆ. ಅವನಿಗೆ ಶಾಪವನ್ನು ಕೊಟ್ಟಿದುದು ನನಗೆ ಇಷ್ಟವಾಗುವುದಿಲ್ಲ.

ಸರ್ವಥಾ ವರ್ತಮಾನಸ್ಯ ರಾಜ್ಞೋ ಹಿ ವಿಷಯೇ ಸದಾ ।
ಕ್ಷಂತವ್ಯಂ ಪುತ್ರ ಧರ್ಮೋ ಹಿ ಹತೋ ಹಂತಿ ನ ಸಂಶಯಃ ॥೨೧॥

ರಾಜನ ರಾಜ್ಯದಲ್ಲಿ ವಾಸಮಾಡುವ ನಮ್ಮಿಂದ ರಾಜನ ದೋಷವು ಸರ್ವಥಾ ಕ್ಷಮಿಸಲ್ಪಡಬೇಕು. ಪುತ್ರನೇ, ನಾವು ಧರ್ಮವನ್ನು ಕೊಂದರೆ, ಅದು ನಮ್ಮನ್ನು ನಿಸ್ಸಂಶಯವಾಗಿ ಕೊಲ್ಲುತ್ತದೆ. (ಒಬ್ಬ ಪುರುಷನನ್ನು ಕೊಂದರೆ, ಅವನು ಕೊಂದ ವ್ಯಕ್ತಿಗೆ ದೇಹನಾಶವನ್ನಾಗಲೀ ಅಥವಾ ತಪೋನಾಶವನ್ನಾಗಲೀ ಉಂಟುಮಾಡಿ ಕೊಲ್ಲುತ್ತಾನೆ.)

ಯದಿ ರಾಜಾ ನ ರಕ್ಷೇತ ಪೀಡಾ ವೈ ನಃ ಪರಾ ಭವೇತ್ ।
ನ ಶಕ್ನುಯಾಮ ಚರಿತುಂ ಧರ್ಮಂ ಪುತ್ರ ಯಥಾಸುಖಮ್ ॥೨೨॥

ರಾಜನು ಒಂದುಪಕ್ಷ ನಮ್ಮನ್ನು ರಕ್ಷಿಸದಿದ್ದರೆ, ನಮಗೆ ಬಹಳ ಪೀಡೆಯಾಗುತ್ತಿತ್ತು. ಪುತ್ರನೇ, ನಾವು ಸುಖವಾಗಿ ಧರ್ಮಾಚರಣೆಯನ್ನು ಮಾಡಲು ಸಾಧ್ಯವಾಗುತ್ತಿರಲಿಲ್ಲ.

ರಕ್ಷ್ಯಮಾಣಾ ವಯಂ ತಾತ ರಾಜಭಿಃಶಾಸ್ತ್ರದೃಷ್ಟಿಭಿಃ ।
ಚರಾಮೋ ವಿಪುಲಂ ಧರ್ಮಂ ತೇಷಾಂ ನಾಶೋಽಸ್ತಿ ಧರ್ಮತಃ ॥

ಪ್ರೀತಿಪಾತ್ರನೇ, ಶಾಸ್ತ್ರದೃಷ್ಟಿಯುಳ್ಳ ರಾಜರುಗಳಿಂದ ಪಾಲಿಸಲ್ಪಡುವ ನಾವು ವಿಪುಲವಾದ ಧರ್ಮವನ್ನು ಆಚರಿಸುತ್ತೇವೆ. ಎಲ್ಲಾ ಪ್ರಜೆಗಳ ರಕ್ಷಣಾರೂಪವಾದ ಅನೇಕ ಕಾರ್ಯಗಳನ್ನು ಮಾಡುವ ರಾಜರು ಒಮ್ಮೊಮ್ಮೆ ಧರ್ಮದಿಂದ ಎಡವುತ್ತಾರೆ.

ಪರೀಕ್ಷಿತ್ತು ವಿಶೇಷೇಣ ಯಥಾಽಸ್ಯ ಪ್ರಪಿತಾಮಹಃ ।
ರಕ್ಷತ್ಯಸ್ಮಾನ್ ಯಥಾ ರಾಜ್ಞಾ ರಕ್ಷಿತವ್ಯಾಃ ಪ್ರಜಾಸ್ತಥಾ ॥೨೪॥

ಪರೀಕ್ಷಿತ್ ರಾಜನಾದರೋ ಅವನ ಪ್ರಪಿತಾಮಹನಾದ ಪಾಂಡುವಿನಂತೆ ರಾಜನು ಪ್ರಜೆಗಳನ್ನು ಹೇಗೆ ರಕ್ಷಿಸಬೇಕೋ ಹಾಗೆ ನಮ್ಮನ್ನು ವಿಶೇಷವಾಗಿ ರಕ್ಷಿಸುತ್ತಿದ್ದಾನೆ.

ತೇನೇಹ ಕ್ಷುಧಿತೇನೈತ್ಯ ಶ್ರಾಂತೇನ ಮೃಗಾಲಿಪ್ಸುನಾ ।
ಅಜಾನತಾ ವ್ರತಮಿದಂ ಕೃತಮೇತದಸಂಶಯಮ್ ॥೨೫॥

ಅವನು ಮೃಗವನ್ನು ಹಿಂಬಾಲಿಸಿ ಹಸಿದು ಬಳಲಿ ಬಂದು ನನ್ನ ಮೌನವ್ರತವನ್ನು ತಿಳಿಯದೆ, ಈ ಕೆಲಸವನ್ನು ಮಾಡಿದನೆಂಬ ವಿಷಯದಲ್ಲಿ ಸಂಶಯವಿಲ್ಲ.

ಕಸ್ಮಾದಿದಂ ತ್ವಯಾ ಬಾಲ್ಯಾತ್ ಸಹಸಾ ದುಷ್ಕೃತಂ ಕೃತಮ್ ।
ನ ಹ್ಯರ್ಹತಿ ನೃಪಃ ಶಾಪಮ್ ಅಸ್ಮತ್ತಃ ಪುತ್ರ ಸರ್ವಥಾ ॥೨೬॥

ನೀನು ಏಕೆ ಬಾಲ್ಯದಿಂದ ಮತ್ತು ವಿಚಾರಮಾಡದೆ ಇಂತಹ ದುಷ್ಕಾರ್ಯವನ್ನು ಮಾಡಿದೆ? ಪುತ್ರನೇ, ಆ ರಾಜನು ನಮ್ಮಿಂದ ಯಾವುದೇ ರೀತಿಯ ಶಾಪಕ್ಕೂ ಅರ್ಹನಲ್ಲ.

॥ ಇತಿ ಶ್ರೀಮನ್ಮಹಾಭಾರತೇ ಶತಸಹಸ್ರಿಕಾಯಾಂಸಂಹಿತಾಯಾಮಾದಿಪರ್ವಣಿ ಷಡ್‌ತ್ರಿಂಶೋऽಧ್ಯಾಯಃ ॥

॥ ಇತಿ ಆಸ್ತೀಕಪರ್ವಣಿ ಚತುರ್ವಿಂಶೋऽಧ್ಯಾಯಃ ॥

ಇಲ್ಲಿಗೆ ಮಹಾಭಾರತದ ಆದಿಪರ್ವದಲ್ಲಿ ಮೂವತ್ತಾರನೆಯ ಅಧ್ಯಾಯ ಮುಗಿಯಿತು.

★★★★★

ಮೂವತ್ತೇಳನೆಯ ಅಧ್ಯಾಯ

(ತಂದೆಯಿಂದ ಶೃಂಗಿಗೆ ಮುಂದುವರೆದ ಉಪದೇಶ. ಶಿಷ್ಯನಿಂದ ರಾಜನಿಗೆ ವಾರ್ತಾಹರಣ. ತಕ್ಷಕ ಮತ್ತು ಕಾಶ್ಯಪಬ್ರಾಹ್ಮಣರ ಸಂವಾದ.)

ಶೃಂಗೀ

ಯದ್ಯೇತತ್ ಸಾಹಸಂ ತಾತ ಯದಿ ವಾ ದುಷ್ಕೃತಂ ಕೃತಮ್ ।
ಪ್ರಿಯಂ ವಾಪ್ಯಪ್ರಿಯಂ ವಾಪಿ ವಾಗುಕ್ತಾ ನ ಮೃಷಾ ಮಮ ॥೧॥

ತಂದೆಯೇ ನಾನು ಮಾಡಿದ ಈ ಕಾರ್ಯವು ವಿಚಾರಪೂರ್ವಕವಲ್ಲದ್ದೇ ಆಗಲಿ ಅಥವಾ ಪಾಪವೇ ಆಗಲಿ ಅಥವಾ ನಿನಗೆ ಪ್ರಿಯವೇ ಆಗಲಿ ಅಥವಾ ಅಪ್ರಿಯವೇ ಆಗಲಿ, ಏನಾದರೂ ನಾನು ಆಡಿದ ಮಾತು ಎಂದೂ ಸುಳ್ಳಾಗುವುದಿಲ್ಲ.

ನೈವಾನ್ಯಥಾ ತದ್ ಭವಿತಾ ಪಿತರೇತದ್ ಬ್ರವೀಮಿ ತೇ ।
ನಾಹಂ ಮೃಷಾ ಬ್ರುವನ್ ಸ್ವಾಮಿನ್ ಸ್ವೈರೇಷ್ವಪಿ ಕುತಃ ಶಪನ್ ॥೨॥

ತಂದೆಯೇ, ಈ ಮಾತು ವ್ಯತ್ಯಾಸವಾಗುವುದಿಲ್ಲ. ಇದನ್ನು ನಿನಗೆ ಹೇಳುತ್ತಿದ್ದೇನೆ. ಸ್ವಾಮಿಯೇ, ನಾನು ವಿನೋದಕ್ಕಾಗಿಯೂ ಸುಳ್ಳನ್ನು ಆಡಿದವನಲ್ಲ. ಇನ್ನು ಶಾಪವನ್ನು ಕೊಡುವಾಗ ಹೇಗೆ ಸುಳ್ಳನ್ನು ಹೇಳುತ್ತೇನೆ?

ಶಮೀಕಃ

ಜಾನಾಮ್ಯುಗ್ರಭಾವಂ ತ್ವಾಂ ತಾತ ಸತ್ಯಗಿರಂ ತಥಾ ।
ನಾನೃತಂ ಹ್ಯುಕ್ತಪೂರ್ವಂ ತೇ ನೈತನ್ಮಿಥ್ಯಾ ಭವಿಷ್ಯತಿ ॥೩॥

ಪ್ರೀತಿಪಾತ್ರನೇ, ನೀನು ಉಗ್ರಸ್ವಭಾವದವನೆಂದೂ, ಸತ್ಯವಚನನೆಂದೂ ನಾನು ತಿಳಿದಿದ್ದೇನೆ. ನೀನು ಎಂದೂ ಸುಳ್ಳು ಮಾತನಾಡಿಲ್ಲ. ಆದ್ದರಿಂದ ಈ ಮಾತೂ ಸಹ ಸುಳ್ಳಾಗುವುದಿಲ್ಲ.

ಪಿತ್ರಾ ಪುತ್ರೋ ವಯಃಸ್ಥೋऽಪಿ ಸತತಂ ವಾಚ್ಯ ಏವ ಚ ।
ಯಥಾ ಸ್ಯಾದ್ ಗುಣಯುಕ್ತಶ್ಚ ಪ್ರಾಪ್ನುಯಾಚ್ಚ ಮಹದ್ಯಶಃ ॥೪॥

ತಂದೆಯಾದವನು ಮಗನು ಪ್ರಾಪ್ತವಯಸ್ಕನಾದರೂ ಅವನು ಗುಣಯುಕ್ತನಾಗುವಂತೆ, ಮಹಾಕೀರ್ತಿಯನ್ನು ಪಡೆಯುವಂತೆ ಅವನಿಗೆ ಉಪದೇಶವನ್ನು ಮಾಡಲೇಬೇಕು.

ಕಿಂ ಪುನರ್ಬಾಲ ಏವ ತ್ವಂ ತಪಸಾ ಭಾವಿತಃ ಪ್ರಭೋ ।
ವರ್ಧತೇ ಚ ಪ್ರಭವತಾಂ ಕೋಪೋऽತೀವ ಮಹಾತ್ಮನಾಮ್ ॥೫॥

ಹೀಗಿರುವಾಗ ನೀನು ಬಾಲಕನಾಗಿ, ತಪಸ್ಸಿನಿಂದ ಬೆಳೆಯುತ್ತಿದ್ದೀಯೆ. ಪ್ರಭುವೇ, ತಪಸ್ಸಿನಿಂದ ಅಭಿವೃದ್ಧಿಯನ್ನು ಹೊಂದುವ ಮಹಾತ್ಮರಿಗೆ ಜೊತೆಯಲ್ಲಿಯೇ ಕೋಪವೂ ಬೆಳೆಯುತ್ತದೆ.

ಸೋऽಹಂ ವಕ್ಷ್ಯಾಮಿ ವಕ್ತವ್ಯಂ ತ್ವಯಿ ಧರ್ಮವತಾಂ ವರ ।
ಪುತ್ರತ್ವಂ ಬಾಲಕತ್ವಂ ಚ ತವಾವೇಕ್ಷ್ಯ ಚ ಸಾಹಸಮ್ ॥೬॥

ಧರ್ಮವಂತರಲ್ಲಿ ಶ್ರೇಷ್ಠನಾದವನೇ, ನೀನು ನನ್ನ ಪುತ್ರನೆಂಬುದನ್ನೂ, ಬಾಲಕನೆಂಬುದನ್ನೂ, ವಿಚಾರವಿಲ್ಲದೇ ಕಾರ್ಯವನ್ನು ಮಾಡುವವನು ಎಂಬುದನ್ನೂ ಗಮನಿಸಿ ನಾನು ಹೇಳಬೇಕಾದ ವಿಷಯವನ್ನು ನಿನಗೆ ಹೇಳುವೆನು.

ಸ ತ್ವಂ ಶಮಪರೋ ಭೂತ್ವಾ ವನ್ಯಮಾಹಾರಮಾಚರನ್ ।
ಚರನ್ ಕ್ರೋಧಮಿಮಂ ತ್ಯಕ್ತ್ವಾ ನೈವ ಧರ್ಮಂ ಪ್ರಹಾಸ್ಯಸಿ ॥೭॥

ನೀನು ಶಾಂತಿಯನ್ನು ಹೊಂದಿ, ಕಾಡಿನಲ್ಲಿ ಸಿಕ್ಕುವ ಆಹಾರವನ್ನು ಸೇವಿಸಿ, ತಪಸ್ಸನ್ನು ಮಾಡಿ ಕ್ರೋಧವನ್ನು ತ್ಯಜಿಸಿದರೆ, ಆಗ ಧರ್ಮದಿಂದ ಚ್ಯುತನಾಗುವುದಿಲ್ಲ.

ಕ್ರೋಧೋ ಹಿ ಧರ್ಮಂ ಹರತಿ ಯತೀನಾಂ ದುಃಖಸಂಚಿತಮ್ ।
ತತೋ ಧರ್ಮವಿಹೀನಾನಾಂ ಗತಿರಿಷ್ಟಾ ನ ವಿದ್ಯತೇ ॥೮॥

ಆಧ್ಯಾತ್ಮಮಾರ್ಗದಲ್ಲಿ ಪ್ರಯತ್ನಶೀಲರಾದವರು ಕಷ್ಟಪಟ್ಟು ಸಂಪಾದಿಸಿದ ಧರ್ಮವನ್ನು ಕ್ರೋಧವು ನಾಶಮಾಡುತ್ತದೆ. ಅನಂತರ ಧರ್ಮರಹಿತರಾದವರಿಗೆ ಇಷ್ಟವಾದ ಪರಗತಿಯು ಉಂಟಾಗುವುದಿಲ್ಲ.

ಶಮ ಏವ ಯತೀನಾಂ ಹಿ ಕ್ಷಮಿಣಾಂ ಸಿದ್ಧಿಕಾರಕಃ ।
ಕ್ಷಮಾವತಾಮಯಂ ಲೋಕಃ ಪರಶ್ಚಾಪಿ ಕ್ಷಮಾವತಾಮ್ ॥೯॥

ಯತ್ನಶೀಲರಾದವರಿಗೂ ಮತ್ತು ಸಹನಶೀಲರಾದವರಿಗೂ ಶಾಂತಿಯೇ ಸಿದ್ಧಿಯನ್ನುಂಟು ಮಾಡುವಂತಹುದು. ಸಹನಶೀಲರಾದವರಿಗೆ ಈ ಲೋಕವೂ ಇರುತ್ತದೆ, ಪರಲೋಕವೂ ಇರುತ್ತದೆ.

ತಸ್ಮಾಚ್ಚರೇಥಾಃ ಸತತಂ ಕ್ಷಮಾಶೀಲೋ ಜಿತೇಂದ್ರಿಯಃ ।
ಕ್ಷಮಯಾ ಪ್ರಾಪ್ಸ್ಯತೇ ಲೋಕಂ ಬ್ರಹ್ಮಣಃ ಸಮನಂತರಮ್ ॥೧೦॥

ಆದ್ದರಿಂದ ಕ್ಷಮಾಶೀಲನಾಗಿ, ಜಿತೇಂದ್ರಿಯನಾಗಿ, ಯಾವಾಗಲೂ ಧರ್ಮವನ್ನು ಆಚರಿಸು. ಕ್ಷಮೆಯಿಂದ ಅನಂತರದಲ್ಲಿ ಬ್ರಹ್ಮಲೋಕವೂ ಪ್ರಾಪ್ತವಾಗುತ್ತದೆ.

ಮಯಾ ತು ಶಮಮಾಸ್ಥಾಯ ಯಚ್ಛಕ್ಯಂ ಕರ್ತುಮದ್ಯ ವೈ ।
ತತ್ ಕರಿಷ್ಯಾಮಿ ತಾತಾಹಂ ಪ್ರೇಷಯಿಷ್ಯೇ ನೃಪಾಯ ವೈ ॥೧೧॥

ಪ್ರೀತಿಪಾತ್ರನೇ, ಈ ದಿನ ನಾನು ಶಾಂತಿಯನ್ನು ಹೊಂದಿ ಏನು ಮಾಡಲು ಸಾಧ್ಯವೋ ಅದನ್ನು ಮಾಡುವೆನು. ರಾಜನಿಗೆ ಈ ಸಂದೇಶವನ್ನು ಕಳುಹಿಸುವೆನು.

ಮಮ ಪುತ್ರೇಣ ಶಪ್ತೋಽಸಿ ಬಾಲೇನಾಕೃತಬುದ್ಧಿನಾ ।
ಮಮೇಮಾಂ ಧರ್ಷಣಾಂ ತತ್ತಃ ಪ್ರೇಕ್ಷ್ಯ ರಾಜನ್ನಮರ್ಷಿಣಾ ॥೧೨॥

ಎಲೈ ರಾಜನೇ, ನೀನು ನನಗೆ ಮಾಡಿದ ಅವಮಾನದ ನಿಮಿತ್ತದಿಂದಾಗಿ ಕ್ರೋಧಶೀಲನಾದ, ಬಾಲಕನಾದ, ಪಕ್ವಬುದ್ಧಿಯಿಲ್ಲದ ನನ್ನ ಪುತ್ರನಿಂದ ಶಪಿಸಲ್ಪಟ್ಟಿದ್ದೀಯೆ. (ಎಂದು ಸಂದೇಶವನ್ನು ಕಳುಹಿಸುವೆನು.)

ಸೂತಃ

ಏವಮಾದಿಶ್ಯ ಶಿಷ್ಯಂ ಸ ಪ್ರೇಷಯಾಮಾಸ ಸುವ್ರತಃ ।
ಪರೀಕ್ಷಿತೇ ನೃಪತಯೇ ದಯಾಪೂರ್ಣೋ ಮಹಾತಪಾಃ ॥೧೩॥

ಸಂದಿಶ್ಯ ಕುಶಲಪ್ರಶ್ನಂ ಕಾರ್ಯವೃತ್ತಾಂತಮೇವ ಚ ।
ಶಿಷ್ಯಂ ಗೌರಮುಖಂ ನಾಮ ಶೀಘ್ರವಂತಂ ಗುಣಾನ್ವಿತಮ್ ॥೧೪॥

ಸುವ್ರತನೂ, ದಯಾಪೂರ್ಣನೂ, ಮಹಾತಪಸ್ವಿಯೂ ಆದ ಆ ಶಮೀಕಋಷಿಯು ಶಿಷ್ಯನಿಗೆ ಆದೇಶವನ್ನು ನೀಡಿ, ಜೊತೆಗೆ ಪರೀಕ್ಷಿತನಿಗೆ ತಿಳಿಸಬೇಕಾದ ಸಂದೇಶವನ್ನು ತಿಳಿಸಿ, ಕುಶಲಪ್ರಶ್ನೆಯನ್ನು ಮಾಡಿ, ಅನಂತರ ಬಂದ ಉದ್ದೇಶವನ್ನು ತಿಳಿಸಬೇಕೆಂದು ತಿಳಿಸಿ, ಗುಣವಂತನಾದ, ಶೀಘ್ರಗಾಮಿಯಾದ ಗೌರಮುಖನೆಂಬ ಶಿಷ್ಯನನ್ನು ಕಳುಹಿಸಿದನು.

ಸೋಽಪಗಮ್ಯ ತತಃ ಶೀಘ್ರಂ ನರೇಂದ್ರಂ ಕುರುವರ್ಧನಮ್ ।
ವಿವೇಶ ಭವನಂ ರಾಜ್ಞಃ ಪೂರ್ವಂ ದ್ವಾಃಸ್ಥೈರ್ನಿವೇದಿತಃ ॥೧೫॥

ಆ ಶಿಷ್ಯನಾದರೋ, ಅಲ್ಲಿಂದ ಶೀಘ್ರವಾಗಿ ಹೊರಟು ಕುರುವಂಶವರ್ಧನನಾದ ಪರೀಕ್ಷಿತ್ ರಾಜನ ಅರಮನೆಯನ್ನು ತಲುಪಿ, ದ್ವಾರಪಾಲಕರಿಂದ ಮೊದಲು ನಿವೇದಿಸಲ್ಪಟ್ಟು, ರಾಜಭವನವನ್ನು ಪ್ರವೇಶಿಸಿದನು.

ಪೂಜಿತಸ್ತು ನರೇಂದ್ರೇಣ ದ್ವಿಜೋ ಗೌರಮುಖಸ್ತತಃ ।
ಆಚಖ್ಯೌ ಚ ಪರಿಶ್ರಾಂತೋ ರಾಜ್ಞಃ ಸರ್ವಂವಿಶೇಷತಃ ।
ಶಮೀಕವಚನಂ ಘೋರಂ ಯಥೋಕ್ತಂ ಮಂತ್ರಿಸನ್ನಿಧೌ ॥೧೬॥

ಆ ನರೇಂದ್ರನಿಂದ ಪೂಜಿತನಾದ, ಮಾರ್ಗಾಯಾಸದಿಂದ ಬಳಲಿದ್ದ ಗೌರಮುಖನು, ಮಂತ್ರಿಗಳ ಸನ್ನಿಧಿಯಲ್ಲಿ ಆ ರಾಜನಿಗೆ ಎಲ್ಲಾ ವಿಷಯಗಳನ್ನೂ ಶಮೀಕರ ಘೋರವಾದ ವಚನವನ್ನೂ, ಅವರು ಹೇಳಿದಂತೆಯೇ ನಿವೇದಿಸಿದನು.

ಗೌರಮುಖಃ

ಶಮೀಕೋ ನಾಮ ರಾಜೇಂದ್ರ ವಿಷಯೇ ವರ್ತತೇ ತವ ।
ಋಷಿಃ ಶಮದಮೋಪೇತೋ ಮೌನವ್ರತಸಮನ್ವಿತಃ ॥೧೭॥

ಎಲೈ ರಾಜೇಂದ್ರನೇ, ಶಮದಮೋಪೇತರೂ, ಮೌನವ್ರತಧಾರಿಗಳೂ ಆದ ಶಮೀಕರೆಂಬ ಋಷಿಗಳು ನಿನ್ನ ರಾಜ್ಯದಲ್ಲಿ ವಾಸಿಸುತ್ತಿದ್ದಾರೆ.

ತಸ್ಯ ತ್ವಯಾ ನರವ್ಯಾಘ್ರ ಸ್ಕಂಧೇ ಭರತಸತ್ತಮ ।
ಅವಸಕ್ತೋ ಧನುಷ್ಕೋಟ್ಯಾ ಸರ್ಪಃ ಪ್ರಾಣೈರ್ವಿಯೋಜಿತಃ ॥೧೮॥

ಎಲೈ ಭರತಶ್ರೇಷ್ಠನಾದ ನರವ್ಯಾಘ್ರನೇ, ನೀನು ಅವರ ಕೊರಳಿನಲ್ಲಿ ಒಂದು ಮೃತವಾದ ಸರ್ಪವನ್ನು ಬಿಲ್ಲಿನ ತುದಿಯಿಂದ ಎತ್ತಿ ಹಾಕಿದ್ದೀಯೆ.

ಕ್ಷಾಂತವಾಂಸ್ತವ ತತ್ಕರ್ಮ ಪುತ್ರಸ್ತಸ್ಯ ನ ಚಕ್ಷಮೇ ।
ತೇನ ಶಪ್ತೋಽಸಿ ರಾಜೇಂದ್ರ ಪಿತುರಜ್ಞಾತಮದ್ಯ ವೈ ॥೧೯॥

ಅವರು ನಿನ್ನ ಅಪರಾಧವನ್ನು ಕ್ಷಮಿಸಿದ್ದಾರೆ. ಆದರೆ, ಅವರ ಪುತ್ರನು ಕ್ಷಮಿಸಲಿಲ್ಲ. ರಾಜೇಂದ್ರನೇ, ತಂದೆಗೆ ತಿಳಿಯದಂತೆಯೇ ಆ ಪುತ್ರನು ನಿನಗೆ ಶಾಪವನ್ನು ನೀಡಿದ್ದಾನೆ.

ತಕ್ಷಕಾತ್ ಸಪ್ತರಾತ್ರೇಣ ಮೃತ್ಯುರ್ವೈ ತೇ ಭವಿಷ್ಯತಿ ।
ತತ್ರ ರಕ್ಷಾಂ ಕುರುಷ್ವೇತಿ ಪುನಃ ಪುನರಥಾಬ್ರವೀತ್ ॥೨೦॥

ಇವತ್ತಿಗೆ ಏಳನೆಯ ದಿನದಲ್ಲಿ ತಕ್ಷಕನಿಂದ ನಿನಗೆ ಮೃತ್ಯುವು ಉಂಟಾಗುವುದು. ಅದಕ್ಕೆ ಬೇಕಾದ ರಕ್ಷಣೆಯನ್ನು ಮಾಡಿಕೋ ಎಂದು ಗುರುಗಳು ಪುನಃ ಪುನಃ ಹೇಳಿಕಳುಹಿಸಿದ್ದಾರೆ.

ತದನ್ಯಥಾ ನ ಶಕ್ಯಂ ಚ ಕರ್ತುಂ ಕೇನಚಿದಪ್ಯುತ ।
ನ ಹಿ ಶಕ್ನೋತಿ ಸಂಯಂತುಂ ಪುತ್ರಂ ಕೋಪಸಮನ್ವಿತಮ್ ।
ತತೋಽಹಂ ಪ್ರೇಷಿತಸ್ತೇನ ತವ ರಾಜನ್ ಹಿತಾರ್ಥಿನಾ ॥೨೧॥

ಆ ಶಾಪವನ್ನು ಬದಲಾಯಿಸಲು ಯಾರಿಂದಲೂ ಸಾಧ್ಯವಿಲ್ಲ. ಋಷಿಗಳು ಕೋಪಯುಕ್ತನಾದ ತಮ್ಮ ಪುತ್ರನನ್ನು ನಿಯಂತ್ರಿಸಲು ಸಾಧ್ಯವಾಗಲಿಲ್ಲ. ಆದ್ದರಿಂದ ಎಲೈ ರಾಜನೇ, ನಿನ್ನ ಹಿತವನ್ನು ಬಯಸಿದ ಅವರು ನನ್ನನ್ನು ನಿನ್ನ ಬಳಿಗೆ ಕಳುಹಿಸಿದ್ದಾರೆ.

ಸೂತಃ

ಇತಿ ಶ್ರುತ್ವಾ ವಚೋ ಘೋರಂ ಸ ರಾಜಾ ಕುರುನಂದನಃ ।
ಪರ್ಯತಪ್ಯತ ತತ್ಪಾಪಂ ಕೃತ್ವಾ ಬ್ರಹ್ಮನ್ ಮಹಾತ್ಮನಃ ॥೨೨॥

ಎಲೈ ಬ್ರಾಹ್ಮಣನೇ, ಕುರುನಂದನನಾದ ಆ ರಾಜನು ಈ ಘೋರವಾದ ವಚನವನ್ನು ಕೇಳಿ, ಆ ಮಹಾತ್ಮರಿಗೆ ತಾನು ಮಾಡಿದ ಅಪರಾಧದ ನಿಮಿತ್ತದಿಂದ ಬಹಳ ಪರಿತಾಪವನ್ನು ಹೊಂದಿದನು.

ತಂ ಚ ಮೌನವ್ರತಧರಂ ಶ್ರುತ್ವಾ ಮುನಿವರಂ ತದಾ ।
ಭೂಯ ಏವಾಭವದ್ ರಾಜಾ ಶೋಕಸಂತಪ್ತಮಾನಸಃ ॥೨೩॥

ಅವರಾದರೋ ಮೌನವ್ರತವನ್ನು ಧರಿಸಿದ ಮುನಿಶ್ರೇಷ್ಠರು ಎಂದು ತಿಳಿದು ಅವನ ಮನಸ್ಸಿನ ಶೋಕ ಮತ್ತು ಸಂತಾಪಗಳು ಇನ್ನೂ ಹೆಚ್ಚಾದವು.

ಅನುಕ್ರೋಶಾನ್ಮತಂ ತಸ್ಯ ಶಮೀಕಸ್ಯೋಪಧಾರ್ಯ ತು ।
ಪರ್ಯತಪ್ಯತ ಭೂಯೋಽಪಿ ಕೃತ್ವಾ ತತ್ ಕಿಲ್ಬಿಷಂ ಮುನೇ ॥೨೪॥

ಎಲೈ ಶೌನಕರೇ, ಶಮೀಕಋಷಿಗಳ ಕರುಣೆಯನ್ನು ತಿಳಿದು ಅವನು ತಾನು ಆ ಋಷಿಗಳಿಗೆ ಅಪರಾಧವನ್ನು ಮಾಡಿದವನಾಗಿ ಇನ್ನೂ ಹೆಚ್ಚು ಪರಿತಾಪವನ್ನು ಹೊಂದಿದನು.

ನ ಹಿ ಮೃತ್ಯುಂ ತಥಾ ರಾಜಾ ಶ್ರುತ್ವಾ ವೈ ಸೋಽನ್ವತಪ್ಯತ ।
ಅಶೋಚದಮರಪ್ರಖ್ಯೋ ಯಥಾ ಕೃತ್ವೇಹ ಕರ್ಮ ತತ್ ॥೨೫॥

ಆ ರಾಜನು ತನ್ನ ಮೃತ್ಯುವನ್ನು ಕುರಿತು ಹೆಚ್ಚು ಸಂತಾಪವನ್ನು ಹೊಂದಲಿಲ್ಲ. ಆದರೆ, ಅಮರಸದೃಶನಾದ ಅವನು ತಾನು ಮಾಡಿದ ಪಾಪಕೃತ್ಯದ ನಿಮಿತ್ತದಿಂದಾಗಿ ಬಹಳ ದುಃಖಪಟ್ಟನು.

ತತಸ್ತಂ ಪೂಜಯಾಮಾಸ ರಾಜಾ ಗೌರಮುಖಂ ತದಾ ।
ಭೂಯಃ ಪ್ರಸಾದಂ ಭಗವಾನ್ ಕರೋತ್ವಿತಿ ಮಮೈಷ ವೈ ॥೨೬॥

ಅನಂತರ ರಾಜನು ಗೌರಮುಖನನ್ನು ಸತ್ಕರಿಸಿ, ಪೂಜ್ಯರು (ನಿಮ್ಮ ಗುರುಗಳು) ನನ್ನ ಮೇಲೆ ಇನ್ನೂ ಅನುಗ್ರಹವನ್ನು ಮಾಡಬೇಕು ಎಂದು ಕೇಳಿಕೊಂಡನು.

ಶ್ರುತ್ವಾ ತದ್ವಚನಂ ರಾಜ್ಞೋ ಮುನಿರ್ಗೌರಮುಖಸ್ತದಾ ।
ತಮನುಜ್ಞಾಪ್ಯ ವೇಗೇನ ಪ್ರಜಗಾಮಾಶ್ರಮಂ ಗುರೋಃ ॥೨೭॥

ಮುನಿಯಾದ ಗೌರಮುಖನು ಆಗ ರಾಜನ ಆ ಮಾತುಗಳನ್ನು ಕೇಳಿ, ರಾಜನ ಅನುಮತಿಯನ್ನು ಪಡೆದು ವೇಗವಾಗಿ ಗುರುಗಳ ಆಶ್ರಮಕ್ಕೆ ಹಿಂದಿರುಗಿದನು.

ತಸ್ಮಿಂಸ್ತು ಗತಮಾತ್ರೇ ತು ರಾಜಾ ಗೌರಮುಖೇ ತದಾ ।
ಮಂತ್ರಿಭಿರ್ಮಂತ್ರಯಾಮಾಸ ಸಹ ಸಂವಿಗ್ನಮಾನಸಃ ॥೨೮॥

ಗೌರಮುಖನು ಅರಮನೆಯಿಂದ ಹೋಗುತ್ತಿರಲು ರಾಜನು ಮನಸ್ಸಿನಲ್ಲಿ ಉದ್ವೇಗಕ್ಕೆ ಒಳಗಾದವನಾಗಿ ಮಂತ್ರಿಗಳ ಜೊತೆಯಲ್ಲಿ ಮಂತ್ರಾಲೋಚನೆಯನ್ನು ನಡೆಸಿದನು.

ನಿಶ್ಚಿತ್ಯ ಮಂತ್ರಿಭಿಶ್ಚೈವ ಸಹಿತೋ ಮಂತ್ರತತ್ತ್ವವಿತ್ ।
ಪ್ರಾಸಾದಂ ಕಾರಯಾಮಾಸ ಏಕಸ್ತಂಭಂ ಸುರಕ್ಷಿತಮ್ ॥೨೯॥

ಮಂತ್ರದ ರಹಸ್ಯವನ್ನು ತಿಳಿದ ಅವನು ಮಂತ್ರಿಗಳ ಜೊತೆಯಲ್ಲಿ ಆಲೋಚಿಸಿ, ಏಕಸ್ತಂಭದ ಮೇಲೆ ಸುರಕ್ಷಿತವಾದ ಒಂದು ಪ್ರಾಸಾದವನ್ನು ನಿರ್ಮಿಸಿದನು.

ರಕ್ಷಾಂ ಚ ವಿದಧೇ ತತ್ರ ಭಿಷಜಶ್ಚೌಷಧಾನಿ ಚ ।
ಬ್ರಾಹ್ಮಣಾನ್ ಸಿದ್ಧಮಂತ್ರಾಂಶ್ಚ ಸರ್ವತೋ ವೈ ನ್ಯವೇಶಯತ್ ॥೩೦॥

ಅಲ್ಲಿ ಅನೇಕ ವಿಧವಾದ ರಕ್ಷೆಗಳನ್ನೂ, ವೈದ್ಯರನ್ನೂ ಮತ್ತು ಔಷಧಿಗಳನ್ನೂ ಇರಿಸಿದನು. ಮಂತ್ರಸಿದ್ಧರಾದ ಬ್ರಾಹ್ಮಣರನ್ನು ಎಲ್ಲಾ ಕಡೆಗಳಲ್ಲಿಯೂ ಇರಿಸಿದನು.

ರಾಜಕಾರ್ಯಾಣಿ ತತ್ರಸ್ಥಃ ಸರ್ವಾಣ್ಯೇವಾಕರೋಚ್ಚ ಸಃ ।
ಮಂತ್ರಿಭಿಃ ಸಹ ಮಂತ್ರಜ್ಞೈಃ ಸಮಂತಾತ್ ಪರಿರಕ್ಷಿತಃ ॥೩೧॥

ಮಂತ್ರಜ್ಞರಾದ ಮಂತ್ರಿಗಳಿಂದ ಎಲ್ಲಾ ರೀತಿಯಲ್ಲಿಯೂ ರಕ್ಷಿಸಲ್ಪಟ್ಟ ಅವನು ಆ ಪ್ರಾಸಾದದಿಂದಲೇ ಎಲ್ಲಾ ರಾಜಕಾರ್ಯಗಳನ್ನೂ ನೆರವೇರಿಸಿದನು.

ಪ್ರಾಪ್ತೇ ತು ದಿವಸೇ ತಸ್ಮಿನ್ ಸಪ್ತಮೇ ದ್ವಿಜಸತ್ತಮ ।
ಕಾಶ್ಯಪೋಽಭ್ಯಾಗಮದ್ ವಿದ್ವಾಂಸ್ತಂ ರಾಜಾನಂ ಚಿಕಿತ್ಸಿತುಮ್ ॥೩೨॥

ಎಲೈ ಬ್ರಾಹ್ಮಣಶ್ರೇಷ್ಠನೇ, ಏಳನೆಯ ದಿವಸವು ಪ್ರಾಪ್ತವಾಗುತ್ತಿರಲು, ವಿದ್ವಾಂಸನಾದ ಒಬ್ಬ ಕಾಶ್ಯಪಬ್ರಾಹ್ಮಣನು ರಾಜನಿಗೆ ಚಿಕಿತ್ಸೆಯನ್ನು ನೀಡುವುದಕ್ಕೋಸ್ಕರ ಬೇಗ ಬರುತ್ತಿದ್ದನು.

ಶ್ರುತಂ ಹಿ ತೇನ ತದಭೂದದ್ಯ ತಂ ರಾಜಸತ್ತಮಮ್ ।
ತಕ್ಷಕಃ ಪನ್ನಗಶ್ರೇಷ್ಠೋ ನೇಷ್ಯತೇ ಯಮಸಾದನಮ್ ॥೩೩॥

ತಂ ದಷ್ಟಂ ಭುಜಗೇಂದ್ರೇಣ ಕರಿಷ್ಯೇऽಹಮಪಜ್ವರಮ್ ।
ತತ್ರ ಮೇऽರ್ಥಶ್ಚ ಧರ್ಮಶ್ಚ ಭವೇದಿತಿ ವಿಚಿಂತಯನ್ ॥೩೪॥

ಈ ದಿನ ಪನ್ನಗಶ್ರೇಷ್ಠನಾದ ತಕ್ಷಕನು ರಾಜನನ್ನು ಯಮಲೋಕಕ್ಕೆ ಕಳುಹಿಸುತ್ತಾನೆ ಎಂಬ ವಾರ್ತೆಯನ್ನು ಅವನು ಕೇಳಿದ್ದನು. ಸರ್ಪದಿಂದ ಕಚ್ಚಲ್ಪಟ್ಟ ಆ ರಾಜನನ್ನು ನಾನು ನೀರೋಗಿಯನ್ನಾಗಿ ಮಾಡುವೆನು. ಅದರಿಂದ ನನಗೆ ಅರ್ಥವೂ, ಧರ್ಮವೂ ಪ್ರಾಪ್ತವಾಗುತ್ತದೆ ಎಂದು ಯೋಚಿಸುತ್ತಾ (ಬರುತ್ತಿದ್ದನು).

ತಂ ದದರ್ಶ ಸ ನಾಗೇಂದ್ರಸ್ತಕ್ಷಕಃ ಕಾಶ್ಯಪಂ ಪಥಿ ।
ಗಚ್ಛಂತಮೇಕಮನಸಂ ದ್ವಿಜೋ ಭೂತ್ವಾ ವಯೋऽಧಿಕಃ ॥೩೫॥

ತಮಬ್ರವೀತ್ ಪನ್ನಗೇಂದ್ರಃ ಕಾಶ್ಯಪಂ ಮುನಿಸತ್ತಮ ।
ಕ್ವ ಭವಾಂಸ್ತ್ವರಿತೋ ಯಾತಿ ಕಿಂ ಚ ಕಾರ್ಯಂ ಚಿಕೀರ್ಷತಿ ॥೩೬॥

ಆ ಕಾಶ್ಯಪಬ್ರಾಹ್ಮಣನು ಏಕಾಗ್ರಮನಸ್ಸಿನಿಂದ ಮಾರ್ಗದಲ್ಲಿ ಬರುತ್ತಿದ್ದುದನ್ನು ವೃದ್ಧಬ್ರಾಹ್ಮಣನ ವೇಷವನ್ನು ಧರಿಸಿದ್ದ ತಕ್ಷಕನು ನೋಡಿದನು. ಅವನನ್ನು ನೋಡಿದ ಪನ್ನಗೇಂದ್ರನು ಋಷಿಶ್ರೇಷ್ಠನಾದ ಆ ಕಾಶ್ಯಪನನ್ನು ಕುರಿತು ಎಲ್ಲಿಗೆ ಇಷ್ಟು ಶೀಘ್ರವಾಗಿ ಹೋಗುತ್ತಿದ್ದೀಯೆ? ಏನು ಕಾರ್ಯವನ್ನು ಮಾಡಲು ಬಯಸುತ್ತಿದ್ದೀಯೆ ಎಂದು ಕೇಳಿದನು.

ಕಾಶ್ಯಪಃ

ನೃಪಂ ಕುರುಕುಲೋತ್ಪನ್ನಂ ಪರೀಕ್ಷಿತಮರಿಂದಮಮ್ ।
ತಕ್ಷಕಃ ಪನ್ನಗಶ್ರೇಷ್ಠಸ್ತೇಜಸಾऽದ್ಯ ಪ್ರಧಕ್ಷ್ಯತಿ ॥೩೭॥

ಕುರುಕುಲೋತ್ತಮನಾದ, ಅರಿಂದಮನಾದ ಪರೀಕ್ಷಿತ್ ರಾಜನನ್ನು ಈ ದಿನ ಪನ್ನಗಶ್ರೇಷ್ಠನಾದ ತಕ್ಷಕನು ತನ್ನ ತೇಜಸ್ಸಿನಿಂದ ಸುಡುವನು.

ತಂ ದಷ್ಟಂ ಪನ್ನಗೇಂದ್ರೇಣ ತೇನಾಗ್ನಿಸಮತೇಜಸಾ ।
ಪಾಂಡವಾನಾಂ ಕುಲಕರಂ ರಾಜಾನಮಮಿತೌಜಸಮ್ ।
ಗಚ್ಛಾಮಿ ಸೋऽಹಂ ತ್ವರಿತಃ ಸದ್ಯಃ ಕರ್ತುಮಪಜ್ವರಮ್ ॥೩೮॥

ಅಗ್ನಿ ಸಮಾನವಾದ ತೇಜಸ್ಸನ್ನು ಹೊಂದಿದ, ಪನ್ನಗೇಂದ್ರನಾದ ತಕ್ಷಕನಿಂದ ಕಡಿಯಲ್ಪಟ್ಟ, ಪಾಂಡವರ ವಂಶೋದ್ಧಾರಕನಾದ, ಅಮಿತಪರಾಕ್ರಮಿಯಾದ ಆ ರಾಜನನ್ನು ತಕ್ಷಣ ವಿಷದಿಂದ ಮುಕ್ತನನ್ನಾಗಿ ಮಾಡಲು ನಾನು ತ್ವರಿತವಾಗಿ ಹೋಗುತ್ತಿದ್ದೇನೆ.

ತಕ್ಷಕಃ

ಅಹಂ ಸ ತಕ್ಷಕೋ ಬ್ರಹ್ಮಂಸ್ತಂ ಧಕ್ಷ್ಯಾಮಿ ಮಹೀಪತಿಮ್ ।
ನಿವರ್ತಸ್ವ ಮಯ ದಷ್ಟಂ ನ ಶಕ್ಯಂ ಸ್ಯಾಚ್ಚಿಕಿತ್ಸಿತುಮ್ ॥೩೯॥

ಎಲೈ ಬ್ರಾಹ್ಮಣನೇ, ನಾನೇ ಆ ತಕ್ಷಕ. ನಾನು ರಾಜನನ್ನು ಸುಡುವೆನು. ನೀನು ಹಿಂದಿರುಗು. ನಾನು ಕಚ್ಚಿದ ಮೇಲೆ ಯಾರೂ ಚಿಕಿತ್ಸೆಯನ್ನು ಮಾಡಲು ಸಾಧ್ಯವಿಲ್ಲ.

ಕಾಶ್ಯಪಃ

ಅಹಂ ತು ನೃಪತಿಂ ನಾಗ ತ್ವಯಾ ದಷ್ಟಮಪಜ್ವರಮ್ ।
ಕರಿಷ್ಯ ಇತಿ ಮೇ ಬುದ್ಧಿರ್ವಿದ್ಯಾಬಲಮುಪಾಶ್ರಿತಃ ॥೪೦॥

ಎಲೈ ನಾಗನೇ, ನೀನು ಕಚ್ಚಿದ ಆ ರಾಜನನ್ನು ನಾನು ಬದುಕಿಸುತ್ತೇನೆ. ನನ್ನ ಬುದ್ಧಿ ಮತ್ತು ವಿದ್ಯೆಯ ಬಲಗಳಿಂದ ಕೂಡಿದವನಾಗಿ ನಾನು ಅವನನ್ನು ಈ ದಿನ ಅಪಜ್ವರನನ್ನಾಗಿ ಮಾಡುತ್ತೇನೆ ಎಂದು ನನ್ನ ಭಾವನೆ.

॥ ಇತಿ ಶ್ರೀಮನ್ಮಹಾಭಾರತೇ ಶತಸಹಸ್ರಿಕಾಯಾಂಸಂಹಿತಾಯಾಮಾದಿಪರ್ವಣಿ
ಸಪ್ತತ್ರಿಂಶೋऽಧ್ಯಾಯಃ ॥

॥ ಇತಿ ಆಸ್ತೀಕಪರ್ವಣಿ ಪಂಚವಿಂಶೋऽಧ್ಯಾಯಃ ॥

ಇಲ್ಲಿಗೆ ಮಹಾಭಾರತದ ಆದಿಪರ್ವದಲ್ಲಿ ಮೂವತ್ತೇಳನೆಯ ಅಧ್ಯಾಯ ಮುಗಿಯಿತು.

★★★★★

ಮೂವತ್ತೆಂಟನೆಯ ಅಧ್ಯಾಯ

(ತಕ್ಷಕನಿಂದ ಕಾಶ್ಯಪ ಪರೀಕ್ಷೆ. ಧನವನ್ನು ಕೊಟ್ಟು ಅವನ ನಿವರ್ತನೆ. ಫಲದಲ್ಲಿ ಕ್ರಿಮಿರೂಪದಿಂದ ಪ್ರವೇಶಿಸಿ ರಾಜನ ಕಂಠವೇಷ್ಟನೆ.)

ತಕ್ಷಕಃ

ದಷ್ಟಂ ಯದಿ ಮಯೇಹ ತ್ವಂ ಶಕ್ತಃ ಕಿಂಚಿಚ್ಚಿಕಿತ್ಸಿತುಮ್ ।
ತತೋ ದಗ್ಧಂ ಮಯಾ ವೃಕ್ಷಮಿಮಂ ಜೀವಯ ಕಾಶ್ಯಪ ॥೧॥

ನಾನು ಕಚ್ಚಿದ ವಸ್ತುವನ್ನು ನೀನು ಚಿಕಿತ್ಸೆಮಾಡಲು ಸಾಧ್ಯವಾಗುವುದಾದರೆ, ಎಲೈ ಕಾಶ್ಯಪನೇ, ನಾನು ಕಚ್ಚಿವಿಷದಿಂದ ಸುಡುವ ಈ ಮರವನ್ನು ಬದುಕಿಸು.

ಪರಂ ಮಂತ್ರಬಲಂ ಯತ್ ತೇ ದರ್ಶಯಸ್ವ ಯತಸ್ವ ಚ ।
ನ್ಯಗ್ರೋಧಮೇನಂ ಧಕ್ಷ್ಯಾಮಿ ಪಶ್ಯತಸ್ತೇ ದ್ವಿಜೋತ್ತಮ ॥೨॥

ದ್ವಿಜಶ್ರೇಷ್ಠನೇ, ಈ ವಟವೃಕ್ಷವನ್ನು ನಿನ್ನ ಕಣ್ಣೆದುರಿಗೆ ಸುಡುವೆನು. ನಿನ್ನ ಶ್ರೇಷ್ಠವಾದ ಮಂತ್ರಬಲವನ್ನು ತೋರಿಸು. ಪ್ರಯತ್ನಮಾಡು.

ಕಾಶ್ಯಪಃ

ದಶ ನಾಗೇಂದ್ರ ವೃಕ್ಷಂ ತ್ವಂ ಯಮೇನಮಭಿಮನ್ಯಸೇ ।
ಅಹಮೇನಂ ತ್ವಯಾ ದಗ್ಧಂ ಜೀವಯಿಷ್ಯೇ ಭುಜಂಗಮ ॥೩॥

ಎಲೈ ನಾಗೇಂದ್ರನೇ, ನಿನಗೆ ಯಾವುದು ಬೇಕೋ ಆ ಮರವನ್ನು ಕಚ್ಚು. ಎಲೈ ಸರ್ಪರಾಜನೇ, ಆ ಮರವನ್ನು ನಾನು ಬದುಕಿಸುವೆನು.

ಸೂತಃ

ಏವಮುಕ್ತಃ ಸ ನಾಗೇಂದ್ರಃ ಕಾಶ್ಯಪೇನ ಮಹಾತ್ಮನಾ ।
ಅದಶದ್ ವೃಕ್ಷಮಭ್ಯೇತ್ಯ ನ್ಯಗ್ರೋಧಂ ಪನ್ನಗೋತ್ತಮಃ ॥೪॥

ಮಹಾತ್ಮನಾದ ಕಾಶ್ಯಪನಿಂದ ಹೀಗೆ ಹೇಳಲ್ಪಟ್ಟ ಸರ್ಪರಾಜನಾದ ಆ ತಕ್ಷಕನು ವಟವೃಕ್ಷವನ್ನು ಸಮೀಪಿಸಿ ಅದನ್ನು ಕಚ್ಚಿದನು.

ಸ ವೃಕ್ಷಸ್ತೇನ ದಷ್ಟಃ ಸನ್ ಸದ್ಯ ಏವ ಮಹಾದ್ಯುತೇ ।
ಆಶೀವಿಷವಿಷೋಪೇತಃ ಪ್ರಜಜ್ವಾಲ ಸಮಂತತಃ ॥೫॥

ಮಹಾದ್ಯುತಿಯಾದ ಶೌನಕನೇ, ಆ ವೃಕ್ಷವು ಅವನು ಕಚ್ಚಿದ ತಕ್ಷಣ ಸರ್ಪದ ವಿಷದ ಪ್ರಭಾವಕ್ಕೆ ಒಳಗಾಗಿ ಎಲ್ಲಾ ಕಡೆಯಲ್ಲಿಯೂ ಉರಿಯಲು ಪ್ರಾರಂಭಿಸಿತು.

ತಂ ದಗ್ಧ್ವಾ ಸ ನಗಂ ನಾಗಃ ಕಾಶ್ಯಪಂ ಪುನರಬ್ರವೀತ್ ।
ಕುರು ಯತ್ನಂ ದ್ವಿಜಶ್ರೇಷ್ಠ ಜೀವಯೈನಂ ವನಸ್ಪತಿಮ್ ॥೬॥

ಆ ವೃಕ್ಷವನ್ನು ದಹಿಸಿ ತಕ್ಷಕನು ಕಾಶ್ಯಪನನ್ನು ಕುರಿತು ಎಲೈ ಬ್ರಾಹ್ಮಣೋತ್ತಮನೇ, ಪ್ರಯತ್ನವನ್ನು ಮಾಡಿ ಈ ವನಸ್ಪತಿಯನ್ನು ಬದುಕಿಸು ಎಂದು ಪುನಃ ಹೇಳಿದನು.

ಸೂತಃ

ಭಸ್ಮೀಭೂತಂ ತತೋ ವೃಕ್ಷಂ ಪನ್ನಗೇಂದ್ರಸ್ಯ ತೇಜಸಾ ।
ಭಸ್ಮ ಸರ್ವಂ ಸಮಾಹೃತ್ಯ ಕಾಶ್ಯಪೋ ವಾಕ್ಯಮಬ್ರವೀತ್ ॥೭॥

ಆಗ ಪನ್ನಗೇಂದ್ರನ ತೇಜಸ್ಸಿನಿಂದ ಭಸ್ಮವಾದ ಆ ವೃಕ್ಷದ ಭಸ್ಮವನ್ನೆಲ್ಲಾ ಒಂದುಗೂಡಿಸಿ ಕಾಶ್ಯಪನು ಈ ಮಾತನ್ನು ಆಡಿದನು.

ಕಾಶ್ಯಪಃ

ವಿದ್ಯಾಬಲಂ ಪನ್ನಗೇಂದ್ರ ಪಶ್ಯ ಮೇಽಸ್ಮಿನ್ ವನಸ್ಪತೌ ।
ಅಹಂ ಸಂಜೀವಯಾಮ್ಯೇನಂ ಪಶ್ಯತಸ್ತೇ ಭುಜಂಗಮ ॥೮॥

ಎಲೈ ಪನ್ನಗೇಂದ್ರನೇ, ಈ ವನಸ್ಪತಿಯಲ್ಲಿ ನನ್ನ ವಿದ್ಯೆಯ ಸಾಮರ್ಥ್ಯವನ್ನು ನೋಡು. ಎಲೈ ಸರ್ಪರಾಜನೇ, ನಿನ್ನ ಕಣ್ಣೆದುರಿಗೇ ನಾನು ಈ ವೃಕ್ಷವನ್ನು ಬದುಕಿಸುತ್ತೇನೆ.

ಸೂತಃ

ತತಃ ಸ ಭಗವಾನ್ ವಿದ್ವಾನ್ ಕಾಶ್ಯಪೋ ದ್ವಿಜಸತ್ತಮಃ ।
ಭಸ್ಮರಾಶೀಕೃತಂ ವೃಕ್ಷಂ ವಿದ್ಯಯಾ ಸಮಜೀವಯತ್ ॥೯॥

ಅನಂತರ ಜ್ಞಾನಿಯಾದ, ಬ್ರಾಹ್ಮಣಶ್ರೇಷ್ಠನಾದ, ಪೂಜ್ಯನಾದ ಆ ಕಾಶ್ಯಪನು ಒಂದು ಭಸ್ಮದ ರಾಶಿಯಾಗಿ ಮಾಡಲ್ಪಟ್ಟ ಆ ವೃಕ್ಷವನ್ನು ತನ್ನ ವಿದ್ಯೆಯಿಂದ ಬದುಕಿಸಿದನು.

ಸಹಾಂಕುರಂ ಚ ಕೃತವಾನ್ ವಿದ್ವಾನ್ ಪರ್ಣದ್ವಯಾನ್ವಿತಮ್ ।
ಪಲಾಶಿನಂ ಶಾಖಿನಂ ಚ ತಥಾ ವಿಟಪಿನಂ ಪುನಃ ॥೧೦॥

ಅವನು ಮೊದಲು ಅಂಕುರ, ಅನಂತರ ಎರಡು ಎಲೆಗಳು, ಅನಂತರ ಸಣ್ಣ ರೆಂಬೆ, ಅನಂತರ ರೆಂಬೆಗಳೂ ಮತ್ತು ಶಾಖೆಗಳೂ ಇವುಗಳಿಂದ ಕೂಡಿ ಮೊದಲಿನಂತೆ ವೃಕ್ಷವನ್ನು ಮಾಡಿದನು.

ತಂ ದೃಷ್ಟ್ವಾ ಜೀವಿತಂ ವೃಕ್ಷಂ ಕಾಶ್ಯಪೇನ ಮಹಾತ್ಮನಾ ।
ಉವಾಚ ತಕ್ಷಕೋ ಬ್ರಹ್ಮನ್ನೇತದತ್ಯದ್ಭುತಂ ತ್ವಯಿ ॥೧೧॥

ಮಹಾತ್ಮನಾದ ಕಾಶ್ಯಪನು ಆ ವೃಕ್ಷವನ್ನು ಬದುಕಿಸಿದುದನ್ನು ನೋಡಿ ತಕ್ಷಕನು ಬ್ರಾಹ್ಮಣನೇ, ಈ ವೃಕ್ಷದಲ್ಲಿ ನೀನು ತೋರಿಸಿದ ಸಾಮರ್ಥ್ಯವು ಅದ್ಭುತವಾಗಿದೆ ಎಂದು ಹೇಳಿದನು.

ವಿಪ್ರೇಂದ್ರ ಯದ್ ವಿಷಂ ಹನ್ಯಾ ಮಮ ವಾ ಮದ್ವಿಧಸ್ಯ ವಾ ।
ಕಂ ತ್ವಮರ್ಥಮಭಿಪ್ರೇಕ್ಷ್ಯ ಯಾಸಿ ತತ್ರ ದ್ವಿಜೋತ್ತಮ ॥೧೨॥

ಎಲೈ ಬ್ರಾಹ್ಮಣಶ್ರೇಷ್ಠನೇ, ನೀನು ಯಾವ ಉದ್ದೇಶದಿಂದ ನನ್ನ ಅಥವಾ ನನ್ನಂತಹವನ ವಿಷವನ್ನು ಪರಿಹಾರಮಾಡಲು ಹೊರಟಿದ್ದೀಯೆ?

ಯತ್ ತೇಽಭಿಲಷಿತಂ ಬ್ರಹ್ಮನ್ ಫಲಂ ತಸ್ಮಾನ್ನೃಪೋತ್ತಮಾತ್ ।
ಅಹಮೇವ ಪ್ರದಾಸ್ಯಾಮಿ ನಿವರ್ತಸ್ವ ದ್ವಿಜೋತ್ತಮ ॥೧೩॥

ಎಲೈ ಬ್ರಾಹ್ಮಣಶ್ರೇಷ್ಠನೇ, ಆ ನೃಪಶ್ರೇಷ್ಠನಿಂದ ನೀನು ಯಾವ ಫಲವನ್ನು ಬಯಸುವಿಯೋ ಅದನ್ನು ನಾನೇ ನಿನಗೆ ಕೊಡುವೆನು. ಇಲ್ಲಿಂದ ಹಿಂದಿರುಗು.

ವಿಪ್ರಶಾಪಾಭಿಭೂತೇ ಚ ಕ್ಷೀಣಾಯುಷಿ ನರಾಧಿಪೇ ।
ಅಟಮಾನಸ್ಯ ತೇ ವಿದ್ಯಾಸಿದ್ಧಿಃ ಸಂಶಯಿತಾ ಭವೇತ್ ॥೧೪॥

ರಾಜನು ಬ್ರಾಹ್ಮಣಶಾಪಕ್ಕೆ ಒಳಗಾಗಿ ಆಯುಸ್ಸನ್ನು ಕಳೆದುಕೊಂಡಿರುವಾಗ ಅಲ್ಲಿಗೆ ಹೋಗುತ್ತಿರುವ ನಿನ್ನ ವಿದ್ಯಾಸಿದ್ಧಿಯು ಸಂಶಯಗ್ರಸ್ತವಾಗುತ್ತದೆ.

ತತೋ ಯಶಃ ಪ್ರದೀಪ್ತಂ ತೇ ತ್ರಿಷು ಲೋಕೇಷು ವಿಶ್ರುತಮ್ ।
ವಿರಶ್ಮಿರಿವ ತಿಗ್ಮಾಂಶುರಂತರ್ಧಾನಮಿತೋ ವ್ರಜೇತ್ ॥೧೫॥

ಆಗ ಮೂರುಲೋಕದಲ್ಲೂ ಪ್ರಖ್ಯಾತವಾದ ನಿನ್ನ ಕೀರ್ತಿಯು ರಶ್ಮಿಗಳನ್ನು ಕಳೆದುಕೊಂಡ ಸೂರ್ಯನಂತೆ ಅಂತರ್ಧಾನವನ್ನು ಹೊಂದುತ್ತದೆ.

ಕಾಶ್ಯಪಃ

ಧನಾರ್ಥೀಂ ಯಾಮ್ಯಹಂ ತತ್ರ ತನ್ಮೇ ದಿಶ ಭುಜಂಗಮ ।
ತತೋಽಹಂ ನಿವರ್ತಿಷ್ಯೇ ಗೃಹಾಯೋರಗಸತ್ತಮ ॥೧೬॥

ಎಲೈ ಸರ್ಪರಾಜನೇ, ನಾನು ಧನಾರ್ಥಿಯಾಗಿ ಅಲ್ಲಿಗೆ ಹೋಗುತ್ತಿದ್ದೇನೆ. ಅದನ್ನು ನನಗೆ ಕೊಡು. ಎಲೈ ಉರಗಶ್ರೇಷ್ಠನೇ, ಆಗ ನಾನು ನನ್ನ ಮನೆಗೆ ಹಿಂದಿರುಗುವೆನು.

ತಕ್ಷಕಃ

ಯಾವದ್ ಧನಂ ಪ್ರಾರ್ಥಯಸೇ ತಸ್ಮಾದ್ ರಾಜ್ಞಸ್ತತೋಽಧಿಕಮ್ ।
ಅಹಂ ತೇಽದ್ಯ ಪ್ರದಾಸ್ಯಾಮಿ ನಿವರ್ತಸ್ವ ದ್ವಿಜೋತ್ತಮ ॥೧೭॥

ಎಲೈ ಬ್ರಾಹ್ಮಣಶ್ರೇಷ್ಠನೇ, ಆ ರಾಜನಿಂದ ಎಷ್ಟು ಧನವನ್ನು ನೀನು ಬಯಸುವೆಯೋ ಅದಕ್ಕಿಂತ ಹೆಚ್ಚಿನ ಧನವನ್ನು ನಾನು ಈ ದಿನ ನಿನಗೆ ಕೊಡುವೆನು, ಹಿಂದಿರುಗು.

ಸೂತಃ

ತಕ್ಷಕಸ್ಯ ವಚಃ ಶ್ರುತ್ವಾ ಕಾಶ್ಯಪೋ ದ್ವಿಜಸತ್ತಮಃ ।
ಪ್ರದಧ್ಯೌ ಸುಮಹಾತೇಜಾ ರಾಜಾನಂ ಪ್ರತಿ ಬುದ್ಧಿಮಾನ್ ॥೧೮॥

ದ್ವಿಜಶ್ರೇಷ್ಠನಾದ, ಮೇಧಾವಿಯೂ, ಮಹಾತೇಜಸ್ವಿಯೂ ಆದ ಆ ಕಾಶ್ಯಪನು ತಕ್ಷಕನ ಮಾತನ್ನು ಕೇಳಿ ಆ ರಾಜನನ್ನು ಕುರಿತು ಧ್ಯಾನಮಾಡಿದನು.

ದಿವ್ಯಜ್ಞಾನೇನ ತೇಜಸ್ವೀ ಜ್ಞಾತ್ವಾ ತಂ ನೃಪತಿಂ ತದಾ ।
ಕ್ಷೀಣಾಯುಷಂ ಪಾಂಡವೇಯಮಪಾವರ್ತತ ಕಾಶ್ಯಪಃ ।
ಲಬ್ಧ್ವಾ ವಿತ್ತಂ ಮುನಿವರಸ್ತಕ್ಷಕಾದ್ ಯಾವದೀಪ್ಸಿತಮ್ ॥೧೯॥

ತೇಜಸ್ವಿಯಾದ ಅವನು ತನ್ನ ದಿವ್ಯಜ್ಞಾನದಿಂದ ರಾಜನ ಆಯುಸ್ಸು ಮುಗಿದಿರುವುದನ್ನು ಗಮನಿಸಿ, ತಕ್ಷಕನಿಂದ ಅಪೇಕ್ಷಿತವಾದಷ್ಟು ಧನವನ್ನು ಪಡೆದು ಹಿಂದಿರುಗಿದನು.

ನಿವೃತ್ತೇ ಕಾಶ್ಯಪೇ ತಸ್ಮಿನ್ ಸಮಯೇನ ಮಹಾತ್ಮನಿ ।
ಜಗಾಮ ತಕ್ಷಕಸ್ತೂರ್ಣಂ ನಗರಂ ನಾಗಸಾಹ್ವಯಮ್ ॥೨೦॥

ಮಹಾತ್ಮನಾದ ಕಾಶ್ಯಪನು ತನ್ನ ಷರತ್ತಿನ ಪ್ರಕಾರ ಹಿಂದಿರುಗುತ್ತಿರಲು ತಕ್ಷಕನು ಬೇಗ ಹಸ್ತಿನಪುರವನ್ನು ತಲುಪಿದನು.

ಅಥ ಶುಶ್ರಾವ ಗಚ್ಛನ್ ಸ ತಕ್ಷಕೋ ಜಗತೀಪತಿಮ್ ।
ಮಂತ್ರೈರ್ವಿಷಹರೈರ್ದಿವ್ಯೈ ರಕ್ಷ್ಯಮಾಣಂ ಪ್ರಯತ್ನತಃ ॥೨೧॥

ಆಗ ಆ ತಕ್ಷಕನು ಹೋಗುತ್ತಾ, ರಾಜನು ದಿವ್ಯವಾದ ವಿಷಹರ ಮಂತ್ರಗಳಿಂದ ಪ್ರಯತ್ನಪೂರ್ವಕವಾಗಿ ರಕ್ಷಿಸಲ್ಪಡುತ್ತಿದ್ದಾನೆಂಬ ವಾರ್ತೆಯನ್ನು ಕೇಳಿದನು.

ಸಂಚಿಂತಯಾಮಾಸ ತದಾ ಮಾಯಾಯೋಗೇನ ಪಾರ್ಥಿವಃ ।
ಮಯಾ ವಂಚಯಿತವ್ಯೋಽಸೌ ಕ ಉಪಾಯೋ ಭವೇದಿತಿ ॥೨೨॥

ಆಗ ಅವನು, ನಾನು ಈ ರಾಜನನ್ನು ಮಾಯೆಯಿಂದ ವಂಚಿಸಬೇಕು. ಅದಕ್ಕೆ ಏನು ಉಪಾಯವನ್ನು ಮಾಡುವುದು ಎಂದು ಆಲೋಚಿಸಿದನು.

ತತಸ್ತಾಪಸರೂಪೇಣ ಪ್ರಾಹಿಣೋತ್ ಸ ಭುಜಂಗಮಾನ್ ।
ಫಲಪತ್ರೋದಕಂ ಗೃಹ್ಯ ರಾಜ್ಞೇ ನಾಗೋಽಥ ತಕ್ಷಕಃ ॥೨೩॥

ಅನಂತರ ತಾಪಸರೂಪವನ್ನು ಧರಿಸಿದ ಸರ್ಪಗಳನ್ನು ಕಳುಹಿಸಿ ರಾಜನಿಗೆ ಫಲಪತ್ರೋದಕಗಳನ್ನು ತೆಗೆದುಕೊಂಡು ಹೋಗುವಂತೆ ಸರ್ಪಗಳಿಗೆ ಹೇಳಿ ಅವರು ತೆಗೆದುಕೊಂಡು ಹೋಗುವ ಒಂದು ಫಲದಲ್ಲಿ ತಾನೂ ಪ್ರವಿಷ್ಟನಾದನು.

ತಕ್ಷಕಃ

ಗಚ್ಛಧ್ವಂ ಯೂಯಮವ್ಯಗ್ರಾ ರಾಜಾನಂ ಕಾರ್ಯವತ್ತಯಾ ।
ಫಲಪತ್ರೋದಕಂ ನಾಗಾಃ ಪ್ರತಿಗ್ರಾಹಯಿತುಂ ನೃಪಮ್ ॥೨೪॥

ಎಲೈ ಸರ್ಪಗಳೇ, ನೀವು ನಮಗೆ ಅಭೀಷ್ಟವಾದ ಕಾರ್ಯವನ್ನು ನೆರವೇರಿಸಲು ರಾಜನಿಗೆ ಫಲಪತ್ರೋದಕಗಳನ್ನು ಕೊಡಲು ಬಹಳ ಎಚ್ಚರಿಕೆಯಿಂದ ಹೊರಡಿ.

ಸೂತಃ

ತೇ ತಕ್ಷಕಸಮಾದಿಷ್ಟಾಸ್ತಥಾ ಚಕ್ರುರ್ಭುಜಂಗಮಾಃ ।
ಉಪನಿನ್ಯುಸ್ತದಾ ರಾಜ್ಞೇ ದರ್ಭಾನಾಪಃ ಫಲಾನಿ ಚ ॥೨೫॥

ತಕ್ಷಕನಿಂದ ಹೀಗೆ ಆದೇಶಿಸಲ್ಪಟ್ಟ ಆ ಸರ್ಪಗಳು ಹಾಗೆಯೇ ಮಾಡಿ ರಾಜನಿಗೆ ದರ್ಭೆಗಳನ್ನೂ, ಜಲವನ್ನೂ, ಫಲಗಳನ್ನೂ ತೆಗೆದುಕೊಂಡು ಹೋದರು.

ತಚ್ಚ ಸರ್ವಂ ಸ ರಾಜೇಂದ್ರಃ ಪ್ರತಿಜಗ್ರಾಹ ವೀರ್ಯವಾನ್ ।
ಶ್ರುತ್ವಾ ತು ತೇಷಾಂಕಾರ್ಯಾಣಿ ಗಮ್ಯತಾಮಿತ್ಯುವಾಚ ತಾನ್ ॥೨೬॥

ಪರಾಕ್ರಮಶಾಲಿಯಾದ ಆ ರಾಜೇಂದ್ರನು ಅವೆಲ್ಲವನ್ನೂ ಸ್ವೀಕರಿಸಿದನು. ಅನಂತರ ಅವರ ಯೋಗಕ್ಷೇಮವನ್ನು ವಿಚಾರಿಸಿ ನೀವು ಹೊರಡಬಹುದು ಎಂದು ಹೇಳಿದನು.

ಗತೇಷು ತೇಷು ನಾಗೇಷು ತಾಪಸಚ್ಛದ್ಮರೂಪಿಷು ।
ಅಮಾತ್ಯಾನ್ ಸುಹೃದಶ್ಚೈವ ಪ್ರೋವಾಚ ಸ ನರಾಧಿಪಃ ॥೨೭॥

ತಾಪಸವೇಷವನ್ನು ಧರಿಸಿದ್ದ ಆ ಸರ್ಪಗಳು ಹೊರಟುಹೋಗುತ್ತಿರಲು, ರಾಜನು ತನ್ನ ಅಮಾತ್ಯರನ್ನೂ ಮತ್ತು ಸ್ನೇಹಿತರನ್ನೂ ಕುರಿತು ಮಾತನಾಡಿದನು.

ಭಕ್ಷಯಂತು ಭವಂತೋ ವೈ ಫಲಾನೀಮಾನಿ ಸರ್ವಶಃ ।
ತಾಪಸೈರುಪನೀತಾನಿ ಫಲಾನಿ ಸಹಿತಾ ಮಯಾ ॥೨೮॥

ನೀವೆಲ್ಲರೂ ತಾಪಸರು ತಂದು ಕೊಟ್ಟ ಈ ಫಲಗಳನ್ನು ನನ್ನ ಜೊತೆಯಲ್ಲಿ ಭಕ್ಷಿಸಿ.

ತತೋ ರಾಜಾ ಸಸಚಿವಃ ಫಲಾನ್ಯತ್ತುಮಿಯೇಷ ಸಃ ।
ತದ್ ಗೃಹೀತಂ ಫಲಂ ರಾಜ್ಞಾ ಯದಾ ಕೃಮಿರಭೂದಣುಃ ।
ಹ್ರಸ್ವಕಃ ಕೃಷ್ಣನಯನಸ್ತಾಮ್ರೋ ವರ್ಣೇನ ಶೌನಕ ॥೨೯॥

ಅನಂತರ ರಾಜನು ಸಚಿವರ ಜೊತೆಯಲ್ಲಿ ಆ ಹಣ್ಣನ್ನು ತಿನ್ನಲು ಬಯಸಿದನು. ಎಲೈ ಶೌನಕನೇ, ರಾಜನು ತನ್ನ ಕೈಯಲ್ಲಿ ಯಾವ ಹಣ್ಣನ್ನು ತೆಗೆದುಕೊಂಡನೋ ಅದರಲ್ಲಿ ಒಂದು ಸಣ್ಣ ಕಪ್ಪುಬಣ್ಣದ ಕಣ್ಣುಳ್ಳ, ಕೆಂಪುಬಣ್ಣದ ಒಂದು ಕ್ರಿಮಿ ಇದ್ದಿತು.

ಸ ತಂ ಗೃಹ್ಯ ನೃಪಶ್ರೇಷ್ಠಃ ಸಚಿವಾನಿದಮಬ್ರವೀತ್ ।
ಅಸ್ತಮಭ್ಯೇತಿ ಸವಿತಾ ವಿಷಾದದ್ಯ ನ ಮೇ ಭಯಮ್ ।
ಸತ್ಯವಾಗಸ್ತು ಸ ಮುನಿಃ ಕೃಮಿಕೋ ಮಾಂ ದಶತ್ವಯಮ್ ॥೩೦॥

ಆ ರಾಜಶ್ರೇಷ್ಠನು ಆ ಹಣ್ಣನ್ನು ಕೈಯಲ್ಲಿ ಹಿಡಿದು ಸಚಿವರನ್ನು ಕುರಿತು ಸೂರ್ಯನು ಅಸ್ತಂಗತನಾಗುತ್ತಿದ್ದಾನೆ. ಈ ದಿನ ಇನ್ನು ನನಗೆ ವಿಷದ ಭಯವಿಲ್ಲ. ಆ ಋಷಿಕುಮಾರನ ಮಾತು ಸತ್ಯವಾಗಲಿ. ಈ ಕ್ರಿಮಿಯು ನನ್ನನ್ನು ಕಚ್ಚಲಿ ಎಂದು ಹೇಳಿದನು.

ತಕ್ಷಕೋ ನಾಮ ಭೂತ್ವಾ ವೈ ತಥಾ ಪರಿಹೃತಂ ಭವೇತ್ ।
ತೇ ಚೈನಮನ್ವವರ್ತಂತ ಮಂತ್ರಿಣಃ ಕಾಲಚೋದಿತಾಃ ॥೩೧॥

ಈ ಕ್ರಿಮಿಗೆ ತಕ್ಷಕನೆಂದು ಹೆಸರಾಗಲಿ. ಆ ವಿಪ್ರಶಾಪವು ಪರಿಹಾರವನ್ನು ಹೊಂದುತ್ತದೆ (ತಕ್ಷಕನು ಕಚ್ಚಿದಂತೆಯೂ ಆಗುತ್ತದೆ ಮತ್ತು ನನ್ನ ಪ್ರಾಣವೂ ಉಳಿಯುತ್ತದೆ.) ಎಂದು ಹೇಳಿದನು. ಕಾಲಪ್ರೇರಿತರಾದ ಆ ಮಂತ್ರಿಗಳು ಹಾಗೆಯೇ ಆಗಲಿ ಎಂದು ಅವನನ್ನು ಅನುಮೋದಿಸಿದರು.

ಏವಮುಕ್ತ್ವಾ ಸ ರಾಜೇಂದ್ರೋ ಗ್ರೀವಾಯಾಂ ಸನ್ನಿವೇಶ್ಯ ಹ ।
ಕೃಮಿಂ ತಂ ಪ್ರಾಹಸತ್ ತೂರ್ಣಂ ಮುಮೂರ್ಷುರ್ನಷ್ಟಚೇತನಃ ।
ಹಸನ್ನೇವ ಚ ಕೋಪೇನ ತಕ್ಷಕೇಣಾಭಿವೇಷ್ಟಿತಃ ॥೩೨॥

ಹೀಗೆ ಹೇಳಿದ ರಾಜನು ತನ್ನ ಕತ್ತಿನ ಬಳಿ ಆ ಹಣ್ಣನ್ನು ಇಟ್ಟುಕೊಂಡು ಮರಣವು ಸನ್ನಿಹಿತವಾಗಿದ್ದ, ಪ್ರಜ್ಞೆಯನ್ನು ಕಳೆದುಕೊಳ್ಳುತ್ತಿದ್ದ ಅವನು ಆ ಕ್ರಿಮಿಯನ್ನು ನೋಡಿ ಗಟ್ಟಿಯಾಗಿ ನಕ್ಕನು. ಅವನು ನಗುತ್ತಿರುವಂತೆಯೇ, ತಕ್ಷಕನು ಶೀಘ್ರವಾಗಿ ಕೋಪದಿಂದ ಅವನನ್ನು ಸುತ್ತಿಕೊಂಡನು.

॥ ಇತಿ ಶ್ರೀಮನ್ಮಹಾಭಾರತೇ ಶತಸಹಸ್ರಿಕಾಯಾಂಸಂಹಿತಾಯಾಮಾದಿಪರ್ವಣಿ
ಅಷ್ಟತ್ರಿಂಶೋऽಧ್ಯಾಯಃ ॥

॥ ಇತಿ ಆಸ್ತೀಕಪರ್ವಣಿ ಷಡ್‌ವಿಂಶೋऽಧ್ಯಾಯಃ ॥

ಇಲ್ಲಿಗೆ ಮಹಾಭಾರತದ ಆದಿಪರ್ವದಲ್ಲಿ ಮೂವತ್ತೆಂಟನೆಯ ಅಧ್ಯಾಯ ಮುಗಿಯಿತು.

★★★★★

ಮೂವತ್ತೊಂಭತ್ತನೆಯ ಅಧ್ಯಾಯ

(ಪರೀಕ್ಷಿತನ ಮರಣ. ಜನಮೇಜಯನ ರಾಜ್ಯಾಭಿಷೇಕ. ವಪುಷ್ಟಮೆಯ ಜೊತೆಯಲ್ಲಿ ವಿವಾಹ.)

ಸೂತಃ

ತಂ ತಥಾ ಮಂತ್ರಿಣೋ ದೃಷ್ಟ್ವಾ ಭೋಗೇನ ಪರಿವೇಷ್ಟಿತಮ್ ।
ವಿವರ್ಣವದನಾಃ ಸರ್ವೇ ರುರುದುರ್ಭೃಶದುಃಖಿತಾಃ ॥೧॥

ರಾಜನು ಆ ಸರ್ಪದಿಂದ ವೇಷ್ಟಿತನಾಗಿರುವುದನ್ನು ನೋಡಿದ ಮಂತ್ರಿಗಳೆಲ್ಲರೂ ತಮ್ಮ ಮುಖದ ಕಾಂತಿಯನ್ನು ಕಳೆದುಕೊಂಡು ಬಹಳ ದುಃಖಿತರಾಗಿ ರೋದನವನ್ನು ಮಾಡಿದರು.

ತಂ ತು ನಾಗಂ ತಥಾ ದೃಷ್ಟ್ವಾ ಮಂತ್ರಿಣಸ್ತೇ ಪ್ರದುದ್ರುವುಃ ।
ಅಪಶ್ಯಂಶ್ಚೈವ ತೇ ಯಾಂತಮಾಕಾಶೇ ನಾಗಮದ್ಭುತಮ್ ॥೨॥

ಸೀಮಂತಮಿವ ಕುರ್ವಾಣಂ ನಭಸಃ ಪದ್ಮವರ್ಚಸಾ ।
ತಕ್ಷಕಂ ಪನ್ನಗಶ್ರೇಷ್ಠಂ ಭೃಶಂ ಶೋಕಪರಾಯಣಾಃ ॥೩॥

ಆ ರೀತಿಯಲ್ಲಿರುವ ಆ ಸರ್ಪವನ್ನು ನೋಡಿದ ಮಂತ್ರಿಗಳು ಶೋಕಪರಾಯಣರಾಗಿ ಅಲ್ಲಿಂದ ಓಡಿಹೋದರು. ಹಾಗೆ ಓಡುತ್ತಾ ಅವರು ಪದ್ಮಕಾಂತಿಯುಳ್ಳ ಪನ್ನಗಶ್ರೇಷ್ಠನಾದ, ಅದ್ಭುತನಾದ ತಕ್ಷಕನು ಆಕಾಶಮಾರ್ಗದಲ್ಲಿ, ಆಕಾಶಕ್ಕೆ ಬೈತಲೆಯನ್ನು ತೆಗೆದಂತೆ ಹೋಗುತ್ತಿರುವುದನ್ನು ನೋಡಿದರು.

ತತಸ್ತು ತೇ ತದ್ಗೃಹಮಗ್ನಿನಾ ವೃತಂ
ಪ್ರದೀಪ್ಯಮಾನಂ ವಿಷಜೇನ ಭೋಗಿನಃ ।
ಭಯಾತ್ ಪರಿತ್ಯಜ್ಯ ದಿಶಃ ಪ್ರಪೇದಿರೇ
ಪಪಾತ ತಚ್ಚಾಶನಿತಾಡಿತಂ ಯಥಾ ॥೪॥

ಅನಂತರ ಅವರು ಆ ಗೃಹವು ಸರ್ಪದ ವಿಷದಿಂದ ಉಂಟಾದ ಅಗ್ನಿಯಿಂದ ಉರಿಯುತ್ತಿರುವುದನ್ನು ನೋಡಿ ಭಯದಿಂದ ಆ ಗೃಹವನ್ನು ತ್ಯಜಿಸಿ ದಿಕ್ಕುದಿಕ್ಕುಗಳಿಗೆ ಓಡಿಹೋದರು. ಸಿಡಿಲು ಬಡಿದ ವೃಕ್ಷದಂತೆ ಆ ಗೃಹವು ಬಿದ್ದುಹೋಯಿತು.

ತತೋ ನೃಪೇ ತಕ್ಷಕತೇಜಸಾ ಹತೇ
ಪ್ರಯುಜ್ಯ ಸರ್ವಾಃ ಪರಲೋಕಸತ್ಕ್ರಿಯಾಃ ।
ಶುಚಿರ್ದ್ವಿಜೋ ರಾಜಪುರೋಹಿತಸ್ತದಾ
ತಥೈವ ತೇ ತಸ್ಯ ನೃಪಸ್ಯ ಮಂತ್ರಿಣಃ ॥೫॥

ನೃಪಂ ಶಿಶುಂ ತಸ್ಯ ನೃಪಸ್ಯ ಚಕ್ರಿರೇ
ಸಮಂತ್ರಿಣಸ್ತತ್ಪುರವಾಸಿನೋ ಜನಾಃ ।
ನೃಪಂ ಯಮಾಹುಸ್ತಮಮಿತ್ರಘಾತಿನಂ
ಕುರುಪ್ರವೀರಂ ಜನಮೇಜಯಂ ನೃಪಾಃ ॥೬॥

ಅನಂತರ ತಕ್ಷಕನ ವೀರ್ಯದಿಂದ ರಾಜನು ಮೃತನಾಗುತ್ತಿರಲು, ಎಲ್ಲಾ ಉತ್ತರ ಕ್ರಿಯೆಗಳನ್ನೂ ಮಾಡಿದರು. ಆ ರಾಜನ ಮಂತ್ರಿಗಳೂ ಮತ್ತು ರಾಜಪುರೋಹಿತನಾದ ಬ್ರಾಹ್ಮಣನೂ ಶುಚಿರ್ಭೂತರಾಗಿ ಆ ರಾಜನ ಶಿಶುವನ್ನು ಪುರವಾಸಿಗಳ ಜೊತೆಯಲ್ಲಿ ಸೇರಿ ರಾಜನನ್ನಾಗಿ ಮಾಡಿದರು. ಕುರುಪ್ರವೀರನಾದ ಆ ರಾಜನನ್ನು ಶತ್ರುಸೂದನನಾದ ಜನಮೇಜಯನೆಂದು ಎಲ್ಲರೂ ಕರೆಯುತ್ತಾರೆ.

ಸ ಬಾಲ ಏವಾರ್ಯಮತಿರ್ನ್ಯಪೋತ್ತಮಃ
ಸಹೈವ ತೈರ್ಮಂತ್ರಿಪುರೋಹಿತೈಸ್ತದಾ ।
ಶಶಾಸ ರಾಜ್ಯಂ ಕುರುಪುಂಗವಾಗ್ರಜೋ
ಯಥಾಽಸ್ಯ ವೀರಃ ಪ್ರಪಿತಾಮಹಸ್ತಥಾ ॥೭॥

ಬಾಲಕನಾಗಿದ್ದರೂ ಸಹ ಆ ರಾಜೋತ್ತಮನು ಶ್ರೇಷ್ಠವಾದ ಬುದ್ಧಿಯುಳ್ಳವನಾಗಿ, ಮಂತ್ರಿಗಳ ಮತ್ತು ಪುರೋಹಿತರ ಬಲದಿಂದ ತನ್ನ ಪ್ರಪಿತಾಮಹರಾದ ಕುರುಪುಂಗವರಾದ ಪಾಂಡವರಲ್ಲಿ ಅಗ್ರಜನಾದ ವೀರನಾದ ಧರ್ಮರಾಜನಂತೆ ರಾಜ್ಯವನ್ನು ಆಳಿದನು.

ತತಸ್ತು ರಾಜಾನಮಮಿತ್ರತಾಪನಂ
ಸಮೀಕ್ಷ್ಯ ತೇ ತಸ್ಯ ನೃಪಸ್ಯ ಮಂತ್ರಿಣಃ ।
ಸುವರ್ಣವರ್ಮಾಣಮುಪೇತ್ಯ ಕಾಶಿಪಂ
ವಪುಷ್ಟಮಾರ್ಥೇ ವರಯಾಂಪ್ರಚಕ್ರಮುಃ ॥೮॥

ಆಗ ಶತ್ರುತಾಪನನಾದ ಆ ಜನಮೇಜಯರಾಜನನ್ನು ನೋಡಿ ಅವನ ಮಂತ್ರಿಗಳು ಕಾಶೀರಾಜನಾದ ಸುವರ್ಣವರ್ಮನನ್ನು ಸಮೀಪಿಸಿ, ಅವನ ಮಗಳಾದ ವಪುಷ್ಟಮೆಯನ್ನು ವಿವಾಹಮಾಡಿಕೊಡುವಂತೆ ಪ್ರಾರ್ಥಿಸಿದರು.

ತತಃ ಸ ರಾಜಾ ಪ್ರದದೌ ವಪುಷ್ಟಮಾಂ
ಕುರುಪ್ರವೀರಾಯ ಪರೀಕ್ಷ್ಯ ಧರ್ಮತಃ ।
ಸ ಚಾಪಿ ತಾಂ ಪ್ರಾಪ್ಯ ಮುದಾ ಯುತೋಽಭವತ್
ನ ಚಾನ್ಯನಾರೀಷು ಮನೋ ದಧೇ ಕ್ವಚಿತ್ ॥೯॥

ಆಗ ಆ ಕಾಶೀರಾಜನು ಶಾಸ್ತ್ರರೀತಿಯಿಂದ ಮಾಡಬೇಕಾದ ವರಪರೀಕ್ಷೆಯನ್ನು ಮಾಡಿ ಕುರುಪ್ರವೀರನಾದ ಜನಮೇಜಯನಿಗೆ ವಪುಷ್ಟಮೆಯನ್ನು ವಿವಾಹ ಮಾಡಿಕೊಟ್ಟನು. ಜನಮೇಜಯನಾದರೋ ವಪುಷ್ಟಮೆಯನ್ನು ಪಡೆದು ಸಂತೋಷದಿಂದ ಕೂಡಿದವನಾಗಿ ಬೇರೆ ಯಾವ ಸ್ತ್ರೀಯರನ್ನೂ ಮನಸ್ಸಿನಲ್ಲಿಯೂ ಎಣಿಸಲಿಲ್ಲ.

ಸರಸ್ಸು ಪುಲ್ಲೇಷು ನಗೇಷು ಸಾನುಷು
ಪ್ರಸನ್ನಚೇತಾ ವಿಜಹಾರ ವೀರ್ಯವಾನ್ ।
ತಥಾ ಸ ರಾಜಪ್ರವರೋ ವಿಜಹ್ರಿವಾನ್
ಯಥೋರ್ವಶೀಂ ಪ್ರಾಪ್ಯ ಪುರಾ ಪುರೂರವಾಃ ॥೧೦॥

ರಾಜಶ್ರೇಷ್ಠನಾದ ಅವನು ಸರೋವರಗಳಲ್ಲಿ, ಅರಳಿದ ವೃಕ್ಷಗಳುಳ್ಳ ಪರ್ವತಶಿಖರಗಳಲ್ಲಿ, ಪ್ರಸನ್ನಮನಸ್ಸಿನಿಂದಲೂ ಮತ್ತು ಅಧಿಕಬಲದಿಂದಲೂ ಕೂಡಿದವನಾಗಿ, ಊರ್ವಶಿಯನ್ನು ಪಡೆದು ಪುರೂರವನು ಹಿಂದೆ ಅವಳ ಜೊತೆಯಲ್ಲಿ ವಿಹರಿಸಿದಂತೆ ವಪುಷ್ಟಮೆಯ ಜೊತೆಯಲ್ಲಿ ವಿಹರಿಸಿದನು.

ವಪುಷ್ಟಮಾ ಚಾಪಿ ವರಂ ಪತಿಂ ತದಾ
ಪ್ರತೀತರೂಪಂ ತಮವಾಪ್ಯ ಭೂಮಿಪಮ್ ।
ಅನನ್ಯಭಾವಾ ರಮಯಾಂಬಭೂವ ಸಾ
ವಿಹಾರಕಾಲೇಷ್ವವರೋಧಸುಂದರೀ ॥೧೧॥

ವಪುಷ್ಟಮೆಯಾದರೋ ಪ್ರಸಿದ್ಧನಾದ ಮತ್ತು ಶ್ರೇಷ್ಠನಾದ ಆ ರಾಜನನ್ನು ಪತಿಯಾಗಿ ಪಡೆದು ಅವನಲ್ಲಿ ಅನನ್ಯವಾದ ಮನಸ್ಸನ್ನು ಇಟ್ಟವಳಾಗಿ ಅಂತಃಪುರದಲ್ಲಿ ಸುಂದರಿಯಾಗಿದ್ದ ಅವಳು ವಿಹಾರಕಾಲದಲ್ಲಿ ರಾಜನನ್ನು ಸಂತೋಷಪಡಿಸಿದಳು.

॥ ಇತಿ ಶ್ರೀಮನ್ಮಹಾಭಾರತೇ ಶತಸಹಸ್ರಿಕಾಯಾಂಸಂಹಿತಾಯಾಮಾದಿಪರ್ವಣಿ ಏಕೋನತ್ವಾರಿಂಶೋऽಧ್ಯಾಯಃ ॥

॥ ಇತಿ ಆಸ್ತೀಕಪರ್ವಣಿ ಸಪ್ತವಿಂಶೋऽಧ್ಯಾಯಃ ॥

ಇಲ್ಲಿಗೆ ಮಹಾಭಾರತದ ಆದಿಪರ್ವದಲ್ಲಿ ಮೂವತ್ತೊಂಭತ್ತನೆಯ ಅಧ್ಯಾಯ ಮುಗಿಯಿತು.

★★★★★

ನಲವತ್ತನೆಯ ಅಧ್ಯಾಯ

(ಜರತ್ಕಾರುವಿನ ಕಥೆ. ಪಿತೃಗಳ ಜೊತೆಯಲ್ಲಿ ಅವನ ಸಂವಾದ.)

ಸೂತಃ

ಏತಸ್ಮಿನ್ನೇವ ಕಾಲೇ ತು ಜರತ್ಕಾರುರ್ಮಹಾತಪಾಃ ।
ಚಚಾರ ಪೃಥಿವೀಂ ಕೃತ್ಸ್ನಾಂ ಯತ್ರಸಾಯಂಗೃಹೋ ಮುನಿಃ ॥೧॥

ಈ ಸಮಯಕ್ಕೆ ಸರಿಯಾಗಿ ಮಹಾತಪಸ್ವಿಯಾದ ಜರತ್ಕಾರುವು ಸಾಯಂಕಾಲದಲ್ಲಿ ಎಲ್ಲಿರುತ್ತಾನೆಯೋ ಅಲ್ಲಿಯೇ ಬಿಡಾರವನ್ನು ಮಾಡುತ್ತಾ ಸಮಸ್ತವಾದ ಭೂಮಿಯನ್ನು ಸಂಚರಿಸಿದನು.

ಚರನ್ ದೀಕ್ಷಾಂ ಮಹಾತೇಜಾ ದುಶ್ಚರಾಮಕೃತಾತ್ಮಭಿಃ ।
ತೀರ್ಥೇಷ್ವಾಯತನಂ ಕುರ್ವನ್ ಪುಣ್ಯೇಷು ವಿಚಚಾರ ಹ ॥೨॥

ಮನೋನಿಗ್ರಹವಿಲ್ಲದ ಪುರುಷರಿಂದ ಆಚರಿಸಲ್ಪಡಲು ಅಸಾಧ್ಯವಾದ ತಪಸ್ಸನ್ನು ಆಚರಿಸುತ್ತಾ ಮಹಾತೇಜಸ್ವಿಯಾದ ಅವನು ಪುಣ್ಯತೀರ್ಥಗಳಲ್ಲಿ ನಿವಾಸ ಮಾಡುತ್ತಾ ಸಂಚರಿಸಿದನು.

ವಾಯುಭಕ್ಷೋ ನಿರಾಹಾರಃ ಶುಷ್ಯನ್ನಹರಹರ್ಮುನಿಃ ।
ಸ ದದರ್ಶ ಪಿತೄನ್ ಗರ್ತೇ ಲಂಬಮಾನಾನಧೋಮುಖಾನ್ ॥೩॥

ವಾಯುಭಕ್ಷನೂ, ನಿರಾಹಾರನೂ ಆದ ಅವನು ದಿನದಿನಕ್ಕೆ ಒಣಗುತ್ತಾ, ತನ್ನ ಪಿತೃಗಳು ಒಂದು ಹಳ್ಳದಲ್ಲಿ ಅಧೋಮುಖವಾಗಿ ಜೋಲಾಡುತ್ತಿರುವುದನ್ನು ನೋಡಿದನು.

ಏಕತಂತ್ವವಶಿಷ್ಟಾನ್ ವೈ ವೀರಣಸ್ತಂಬಮಾಶ್ರಿತಾನ್ ।
ತಂ ತಂತುಂ ಚ ಶನೈರಾಖುಮಾದದಾನಂ ಬಿಲೇಶಯಮ್ ॥೪॥

ನಿರಾಹಾರಾನ್ ಕೃಶಾನ್ ಜೀರ್ಣಾನ್ ಗರ್ತೇऽಸ್ಮಿನ್ ತ್ರಾಣಮಿಚ್ಛತಃ।
ಉಪಸೃತ್ಯ ಸ ತಾನ್ ದೀನಾನನುರೂಪೋऽಭ್ಯಭಾಷತ ॥೫॥

ಒಂದೇ ಒಂದು ಕಡ್ಡಿಯು ಉಳಿದಿದ್ದ ಒಂದು ಲಾವಂಚದ ಪೊದೆಯನ್ನು ಆಶ್ರಯಿಸಿದ, ನಿರಾಹಾರರೂ, ಕೃಶರೂ, ಜೀರ್ಣರೂ ಮತ್ತು ರಕ್ಷಣೆಯನ್ನು ಬಯಸುವವರೂ ಆದ ತನ್ನ ಪಿತೃಗಳನ್ನೂ, ಆ ಉಳಿದ ಒಂದು ಕಡ್ಡಿಯನ್ನೂ ನಿಧಾನವಾಗಿ ಕಚ್ಚುತ್ತಿದ್ದ ಒಂದು ಮೂಷಿಕವನ್ನೂ ಗಮನಿಸಿ, ದೀನರಾದ ಆ ಪುರುಷರನ್ನು ಸಮೀಪಿಸಿ ಅನುರೂಪವಾಗಿ ಮಾತನಾಡಿದನು.

ಜರತ್ಕಾರುಃ

ಕೇ ಭವಂತೋऽವಲಂಬಂತೇ ವೀರಣಸ್ತಂಬಮಾಶ್ರಿತಾಃ ।
ದುರ್ಬಲಂ ಖಾದಿತಂ ಮೂಲೇ ಹ್ಯಾಖುನಾ ಬಿಲವಾಸಿನಾ ॥೬॥

ನೀವು ಯಾರು? ಈ ವೀರಣಸ್ತಂಬವನ್ನು ಆಶ್ರಯಿಸಿ ಎಲ್ಲರೂ ಜೋಲಾಡುತ್ತಿದ್ದೀರಿ. ಈ ವೀರಣಸ್ತಂಬವನ್ನೂ ಸಹ ಬಿಲವಾಸಿಯಾದ ಮೂಷಿಕವು ಮೂಲದಲ್ಲಿ ಭಕ್ಷಿಸಿದೆ.

ವೀರಣಸ್ತಂಬಕೇ ಮೂಲಂ ಯದಪ್ಯೇಕಮಿಹ ಸ್ಥಿತಮ್ ।
ತದಪ್ಯಯಂ ಶನೈರಾಖುರಾದತ್ತೇ ದಶನೈಃ ಶಿತೈಃ ॥೭॥

ಈ ವೀರಣಸ್ತಂಭದಲ್ಲಿ ಒಂದು ತೃಣವು ಮಾತ್ರ ಉಳಿದಿದೆ. ಅದನ್ನೂ ಸಹ ಈ ಮೂಷಿಕವು ತನ್ನ ಹರಿತವಾದ ದಂತಗಳಿಂದ ಕಡಿಯುತ್ತಿದೆ.

ಛಿದ್ಯತೇऽಲ್ಪಾವಶಿಷ್ಟತ್ವಾದೇತದಪ್ಯಚಿರಾದಿವ ।
ತತಃ ಸಂಪತಿತಾರೋ ವೈ ಗರ್ತೇ ಹ್ಯಸ್ಮಿನ್ನಧೋಮುಖಾಃ ॥೮॥

ಆ ಹುಲ್ಲುಕಡ್ಡಿಯಲ್ಲಿ ಇನ್ನು ಸ್ವಲ್ಪಭಾಗವೇ ಉಳಿದಿರುವುದರಿಂದ ಸದ್ಯದಲ್ಲಿಯೇ ಅದೂ ಛೇದಿಸಲ್ಪಡುತ್ತದೆ. ಆಗ ನೀವೆಲ್ಲರೂ ಈ ಹಳ್ಳದಲ್ಲಿ ಅಧೋಮುಖರಾಗಿ ಬೀಳುವಿರಿ.

ತೇನ ಮೇ ದುಃಖಮುತ್ಪನ್ನಂ ದೃಷ್ಟ್ವಾ ಯುಷ್ಮಾನಧೋಮುಖಾನ್ ।
ಕೃಚ್ಛ್ರಮಾಪದಮಾಪನ್ನಾನ್ ಪ್ರಿಯಂ ಕಿಂ ಕರವಾಣಿ ವಃ ॥೯॥

ಅದರಿಂದ ಅಧೋಮುಖರಾಗಿ ಜೋಲಾಡುತ್ತಾ ಈ ಕೆಟ್ಟ ಆಪತ್ತಿಗೆ ಸಿಲುಕಿದ ನಿಮ್ಮನ್ನು ನೋಡಿ ನನಗೆ ದುಃಖವಾಗಿದೆ. ನಿಮಗೆ ನಾನು ಏನು ಪ್ರಿಯವನ್ನು ಮಾಡಲಿ?

ತಪಸೋऽಸ್ಯ ಚತುರ್ಥೇನ ತೃತೀಯೇನಾಪಿ ವಾ ಪುನಃ ।
ಅರ್ಧೇನ ವಾಪಿ ಸಂತರ್ತುಮ್ ಆಪದಂ ಬ್ರೂತ ಮಾ ಚಿರಮ್ ॥

ನನ್ನ ತಪಸ್ಸಿನ ನಾಲ್ಕನೆಯ ಒಂದು ಭಾಗದಿಂದಲಾಗಲಿ ಅಥವಾ ಮೂರನೆಯ ಒಂದು ಭಾಗದಿಂದಲಾಗಲಿ ಅಥವಾ ಅರ್ಧಭಾಗದಿಂದಲಾಗಲಿ ನಿಮ್ಮನ್ನು ಆಪತ್ತಿನಿಂದ ದಾಟಿಸಲು ಇಚ್ಛಿಸುತ್ತೇನೆ. ಬೇಗ ಹೇಳಿ.

ಅಥವಾऽಪಿ ಸಮಗ್ರೇಣ ತರಂತು ತಪಸಾ ಮಮ ।
ಭವಂತಃ ಸರ್ವ ಏವಾಸ್ಮಾತ್ ಕಾಮಮೇವಾಭಿಧೀಯತಾಮ್

ಅಥವಾ ನನ್ನ ಸಮಗ್ರವಾದ ತಪಸ್ಸಿನ ಫಲದಿಂದಲೇ ನೀವೆಲ್ಲರೂ ಈ ಆಪತ್ತಿನಿಂದ ದಾಟಿ. ತಕ್ಷಣದಲ್ಲಿಯೇ ನೀವು ಯಾರು ಎಂದು ತಿಳಿಸಿ.

ಪಿತರಃ

ವೃದ್ಧೋ ಭವಾನ್ ಬ್ರಹ್ಮಚಾರೀ ಯೋ ನಸ್ತ್ರಾತುಮಿಹೇಚ್ಛತಿ ।
ನ ತು ವಿಪ್ರಾಗ್ರ್ಯ ತಪಸಾ ಶಕ್ಯಮೇತದ್ ವ್ಯಪೋಹಿತುಮ್ ॥೧೨॥

ಬ್ರಾಹ್ಮಣಶ್ರೇಷ್ಠನೇ, ವೃದ್ಧಬ್ರಹ್ಮಚಾರಿಯಾದ ನೀನು ನಮ್ಮನ್ನು ರಕ್ಷಿಸಲು ಬಯಸುತ್ತಿದ್ದೀಯೆ. ಆದರೆ ನಮ್ಮ ಆಪತ್ತನ್ನು ತಪೋಬಲದಿಂದ ಪರಿಹರಿಸಲು ಸಾಧ್ಯವಿಲ್ಲ.

ಅಸ್ತಿ ನಸ್ತಾತ ತಪಸಃ ಫಲಂ ಪ್ರವದತಾಂ ವರ ।
ಸಂತಾನಪ್ರಕ್ಷಯಾದ್ ಬ್ರಹ್ಮನ್ ಪತಾಮ ನಿರಯೇಽಶುಭೇ ॥೧೩॥

ಮಾತನಾಡುವವರಲ್ಲಿ ಶ್ರೇಷ್ಠನಾದವನೇ, ನಮಗೆ ನಮ್ಮ ತಪಸ್ಸಿನ ಫಲವೇ ಇದೆ. ಆದರೆ, ಬ್ರಾಹ್ಮಣನೇ, ನಮ್ಮ ಸಂತಾನವು ನಾಶವಾಗಿರುವುದರಿಂದ ನಾವು ಅಶುಚಿಯಾದ ನರಕದಲ್ಲಿ ಬೀಳುತ್ತಿದ್ದೇವೆ.

ಲಂಬತಾಮಿಹ ನಸ್ತಾತ ನ ಜ್ಞಾನಂ ಪ್ರತಿಭಾತಿ ವೈ ।
ತೇನ ತ್ವಾಂ ನಾಭಿಜಾನೀಮೋ ಲೋಕೇ ವಿಖ್ಯಾತಪೌರುಷಮ್ ॥೧೪॥

ಪ್ರೀತಿಪಾತ್ರನೇ, ಈ ಹಳ್ಳದಲ್ಲಿ ಜೋಲಾಡುತ್ತಿರುವ ನಮಗೆ ಜ್ಞಾನವು ಅಸ್ಪಷ್ಟವಾಗಿದೆ. ಆದ್ದರಿಂದ ಪ್ರಪಂಚದಲ್ಲಿ ವಿಖ್ಯಾತವಾದ ಕೀರ್ತಿಯುಳ್ಳ ನಿನ್ನನ್ನು ನಾವು ಯಾರು ಎಂದು ಗುರುತಿಸುತ್ತಿಲ್ಲ.

ವೃದ್ಧೋ ಭವಾನ್ ಮಹಾಯೋಗೀ ಯೋ ನಃ
ಶೋಚ್ಯಾನ್ ಸುದುಃಖಿತಾನ್ ।
ಶೋಚಸ್ಯುಪೇತ್ಯ ಕಾರುಣ್ಯಾಚ್ಛ್ರುಣು ಯೇ ವೈ ವಯಂ ದ್ವಿಜ ।
ಶೋಚ್ಯಾನ್ ಸುದುಃಖಿತಾನಸ್ಮಾನ್ ಕಸ್ಮಾದ್ ವೇದವಿದಾಂ ವರ ॥೧೫॥

ನೀನು ವೃದ್ಧನಾದ ಮಹಾಯೋಗಿ. ಎಲೈ ವೇದವೇತ್ತರಲ್ಲಿ ಶ್ರೇಷ್ಠನಾದವನೇ, ಶೋಚನೀಯರೂ, ದುಃಖಗ್ರಸ್ತರೂ ಆದ ನಮ್ಮನ್ನು ಕುರಿತು ನೀನು ಏಕೆ ಕರುಣೆಯಿಂದ ಶೋಕವನ್ನು ಪಡುತ್ತಿದ್ದೀಯೆ? ನಾವು ಯಾರೆಂದು ಹೇಳುತ್ತೇವೆ, ಕೇಳು.

ಯಾಯಾವರಾ ನಾಮ ವಯಮ್ ಋಷಯಃ ಸಂಶಿತವ್ರತಾಃ ।
ಲೋಕಾತ್ ಪುಣ್ಯಾದಿಹ ಭ್ರಷ್ಟಾಃ ಸಂತಾನಪ್ರಕ್ಷಯಾನ್ವಿತಾಃ ।
ಪ್ರಣಷ್ಟಂ ನಸ್ತಪಃ ಪುಣ್ಯಂ ನ ಹಿ ನಸ್ತಂತುರಸ್ತಿ ವೈ ॥೧೭॥

ನಾವು ಶ್ರೇಷ್ಠವಾದ ವ್ರತಧಾರಿಗಳಾದ ಯಾಯಾವರ ಎಂಬ ಋಷಿಗಳು. ನಮ್ಮ ಸಂತಾನವು ನಾಶಹೊಂದಿದ ಕಾರಣ ಪುಣ್ಯಲೋಕದಿಂದ ಕೆಳಗೆ ಬಿದ್ದಿದ್ದೇವೆ. ನಮ್ಮ ತಪಸ್ಸು ಮತ್ತು ಪುಣ್ಯವು ನಷ್ಟವಾಗಿದೆ. ನಮ್ಮ ಕುಲದಲ್ಲಿ ಸಂತಾನವಿಲ್ಲ.

ಅಸ್ತಿ ತ್ವೇಕೋऽದ್ಯ ನಸ್ತಂತುಃ ಸೋऽಪಿ ನಾಸ್ತಿ ಯಥಾ ತಥಾ ।
ಮಂದಭಾಗ್ಯೋऽಲ್ಪಭಾಗ್ಯಾನಾಂ ಬಂಧುಃ ಸ ಕಿಲ ನಃ ಕುಲಮ್ ॥೧೮॥

ನಮ್ಮ ಕುಲತಂತುವಾಗಿ ಒಬ್ಬನೇ ಒಬ್ಬನು ಉಳಿದಿದ್ದಾನೆ. ಅವನು ಯಾವ ರೀತಿಯಲ್ಲಿರಬೇಕೋ ಆ ರೀತಿಯಲ್ಲಿ ಇಲ್ಲ. ಮಂದಭಾಗ್ಯನಾದ ಅವನೊಬ್ಬನೇ ಅಲ್ಪಭಾಗ್ಯರಾದ ನಮಗೆ ಬಂಧು. ಅವನೇ ನಮ್ಮ ಕುಲ.

ಜರತ್ಕಾರುರಿತಿ ಖ್ಯಾತೋ ವೇದವೇದಾಂಗಪಾರಗಃ ।
ನಿಯತಾತ್ಮಾ ಮಹಾತ್ಮಾ ಚ ಸುವ್ರತಃ ಸುಮಹಾತಪಾಃ ॥೧೯॥

ಅವನು ವೇದವೇದಾಂಗ ಪಾರಂಗತನಾದವನು. ಜರತ್ಕಾರು ಎಂಬ ಹೆಸರಿನಿಂದ ಪ್ರಖ್ಯಾತನಾಗಿದ್ದಾನೆ. ಅವನು ಮನೋನಿಗ್ರಹವುಳ್ಳ ವ್ರತಧಾರಿಯಾದ, ಮಹಾತಪಸ್ವಿಯಾದ ಮಹಾನುಭಾವನು.

ತೇನ ಸ್ಮ ತಪಸೋ ಲೋಭಾತ್ ಕೃಚ್ಛ್ರಮಾಪಾದಿತಾ ವಯಮ್ ।
ನ ತಸ್ಯ ಭಾರ್ಯಾ ಪುತ್ರೋ ವಾ ಬಾಂಧವೋ ವಾऽಪಿ ಕಶ್ಚನ ॥೨೦॥

ಅವನ ತಪಸ್ಸಿನ ಲೋಭದಿಂದ ನಾವು ಈ ಕಷ್ಟಕ್ಕೆ ಸಿಲುಕಿದ್ದೇವೆ. ಅವನಿಗೆ ಪತ್ನಿಯಾಗಲಿ, ಪುತ್ರನಾಗಲಿ, ಅಥವಾ ಯಾವ ಬಂಧುವಾಗಲಿ ಇಲ್ಲ.

ತಸ್ಮಾಲ್ಲಂಬಾಮಹೇ ಗರ್ತೇ ನಷ್ಟಸಂಜ್ಞಾ ಹ್ಯನಾಥವತ್ ।
ಸ ವಕ್ತವ್ಯಸ್ತ್ವಯಾ ದೃಷ್ಟ್ವಾ ಹ್ಯಸ್ಮಾಕಂ ನಾಥವತ್ತಯಾ ॥೨೧॥

ಆದ್ದರಿಂದ ಈ ಹಳ್ಳದಲ್ಲಿ ಸಂಜ್ಞೆಯನ್ನು ಕಳೆದುಕೊಂಡು ಅನಾಥರಂತೆ ಜೋಲಾಡುತ್ತಿದ್ದೇವೆ. ಅವನನ್ನು ನೀನು ಎಲ್ಲಾದರೂ ನೋಡಿದರೆ, ಅವನು ನಮ್ಮ ಪ್ರಭುವೆಂದು ಅವನಿಗೆ ತಿಳಿಸಬೇಕು.

ಪಿತರಸ್ತೇऽವಲಂಬಂತೇ ಗರ್ತೇ ದೀನಾ ಅಧೋಮುಖಾಃ ।
ಸಾಧು ದಾರಾನ್ ಕುರುಷ್ವೇತಿ ಪ್ರಜಾಯಸ್ವೇತಿ ಚಾಭಿಭೋ ॥೨೨॥

ನಿನ್ನ ಪಿತೃಗಳು ದೀನರಾಗಿ ಹಳ್ಳದಲ್ಲಿ ಅಧೋಮುಖರಾಗಿ ಜೋಲಾಡುತ್ತಿದ್ದಾರೆ. ನೀನು ಬೇಗ ವಿವಾಹವನ್ನು ಮಾಡಿಕೊಂಡು ಮಕ್ಕಳನ್ನು ಪಡೆಯಬೇಕು ಎಂದು ಅವನಿಗೆ ತಿಳಿಸಬೇಕು.

ಕುಲತಂತುರ್ಹಿ ನಃ ಶಿಷ್ಟಃ ಸ ಏಕಸ್ತು ತಪೋಧನಃ ।
ಯಂ ತು ಪಶ್ಯಸಿ ನೋ ಬ್ರಹ್ಮನ್ ವೀರಣಸ್ತಂಬಮಾಶ್ರಿತಾನ್ ।
ಏಷೋಽಸ್ಮಾಕಂ ಕುಲಸ್ತಂಬ ಆಸೀತ್ ಸ ಕುಲವರ್ಧನಃ ॥೨೩॥

ನಮ್ಮ ಕುಲತಂತುವಾಗಿ ಉಳಿದವನು ತಪೋಧನನಾದ ಅವನೊಬ್ಬನೇ. ಎಲೈ ಬ್ರಾಹ್ಮಣನೇ, ಯಾವ ವೀರಣಸ್ತಂಬವನ್ನು ನೋಡುತ್ತಿದ್ದೀಯೋ ಇದು ನಮ್ಮ ಕುಲ. ಅದು ಹಿಂದೆ ಅನೇಕ ತೃಣಗಳಿಂದ ಕೂಡಿ ಪುಷ್ಟವಾಗಿದ್ದಿತು.

ಯಾನಿ ಪಶ್ಯಸಿ ವೈ ಬ್ರಹ್ಮನ್ ಮೂಲಾನೀಹಾಸ್ಯ ವೀರುಧಃ ।
ಏತೇ ನಸ್ತಂತವಸ್ತಾತ ಕಾಲೇನ ಪರಿಭಕ್ಷಿತಾಃ ॥೨೪॥

ಎಲೈ ಬ್ರಾಹ್ಮಣನೇ, ನೀನು ಯಾವ ಮೂಲಗಳನ್ನು ಮಾತ್ರ ನೋಡುತ್ತಿದ್ದೀಯೋ ಅವೆಲ್ಲವೂ ಕಾಲದಿಂದ ಭಕ್ಷಿತವಾದ ನಮ್ಮ ಕುಲತಂತುಗಳು.

ಯತ್ತ್ವೇಕಂ ಪಶ್ಯಸಿ ಬ್ರಹ್ಮನ್ ಮೂಲಮಸ್ಯಾರ್ಧಭಕ್ಷಿತಮ್ ।
ತಸ್ಯ ಲಂಬಾಮಹೇ ಸರ್ವೇ ಸೋಽಪ್ಯೇಕಸ್ತಪ ಆಸ್ಥಿತಃ ॥೨೫॥

ಎಲೈ ಬ್ರಾಹ್ಮಣನೇ, ಯಾವ ಉಳಿದ ಒಂದು ಹುಲ್ಲುಕಡ್ಡಿಯು ಅರ್ಧಭಕ್ಷಿತವಾಗಿರುವುದನ್ನು ನೋಡುತ್ತಿದ್ದೀಯೋ, ಅವನೇ ನಮ್ಮ ಕುಲತಂತುವಾದ ಆ ತಪಸ್ವಿ. ಅವನನ್ನು ಆಶ್ರಯಿಸಿ ನಾವು ಇಲ್ಲಿ ಜೋತಾಡುತ್ತಿದ್ದೇವೆ.

ಯಮಾಖುಂ ಪಶ್ಯಸಿ ಬ್ರಹ್ಮನ್ ಕಾಲ ಏವ ಮಹಾಬಲಃ ।
ಜರತ್ಕಾರುಂ ತಪೋಲುಬ್ಧಂ ಮಂದಾತ್ಮಾನಮಚೇತಸಮ್ ॥೨೬॥

ಬ್ರಾಹ್ಮಣನೇ, ಯಾವ ಮೂಷಿಕವನ್ನು ನೋಡುತ್ತಿದ್ದೀಯೋ ಅದು ಮಹಾಬಲವುಳ್ಳ ಕಾಲ. ಅದು ಮಂದಭಾಗ್ಯನಾದ, ಪ್ರಜ್ಞಾಶೂನ್ಯನಾದ, ತಪಸ್ಸಿನ ದುರಾಶೆಯನ್ನು ಹೊಂದಿರುವ ಜರತ್ಕಾರುವನ್ನು ಭಕ್ಷಿಸುತ್ತಿದೆ.

ನ ಹಿ ನಸ್ತತ್ತಪಸ್ತಸ್ಯ ತಾರಯಿಷ್ಯತಿ ಸತ್ತಮ ।
ಛಿನ್ನಮೂಲಾನ್ ಪರಿಭ್ರಷ್ಟಾನ್ ಕಾಲೋಪಹತಚೇತಸಃ ।
ಆಪ್ರತಿಷ್ಠಾನ್ ಪ್ರಪಶ್ಯಾಸ್ಮಾನ್ ಯಥಾ ದುಷ್ಕೃತಿನಸ್ತಥಾ ॥೨೭॥

ಎಲೈ ಸಜ್ಜನರಲ್ಲಿ ಶ್ರೇಷ್ಠನಾದವನೇ, ಅವನ ತಪಸ್ಸು ಮೂಲವನ್ನು ಕಳೆದುಕೊಂಡು ಪರಿಭ್ರಷ್ಟರಾದ, ಕಾಲಪ್ರಭಾವದಿಂದ ಬುದ್ಧಿಶೂನ್ಯರಾದ ನಮ್ಮನ್ನು ಆಪತ್ತಿನಿಂದ ದಾಟಿಸುವುದಿಲ್ಲ. ಪಾಪವನ್ನು ಮಾಡಿದವರಂತೆ, ನೆಲೆಯಿಲ್ಲದ ನಮ್ಮನ್ನು ನೋಡು.

ಅಸ್ಮಾಸು ಪತಿತೇಷ್ವತ್ರ ಸಹ ಪೂರ್ವೈಃ ಪಿತಾಮಹೈಃ ।
ಛಿನ್ನಃ ಕಾಲೇನ ಸೋಽಪ್ಯತ್ರ ಗಂತಾ ವೈ ನರಕಂ ತತಃ ॥೨೮॥

ನಾವು ನಮ್ಮ ಪೂರ್ವಪಿತಾಮಹರ ಜೊತೆಯಲ್ಲಿ ಈ ಹಳ್ಳದಲ್ಲಿ ಬಿದ್ದ ಮೇಲೆ ಅವನೂ ಸಹ ಮೂಲಚ್ಛೇದವನ್ನು ಹೊಂದಿದವನಾಗಿ ಇಲ್ಲಿ ಬಿದ್ದು ಕಾಲಕ್ರಮದಲ್ಲಿ ನರಕವನ್ನು ಸೇರುವನು.

ತಪೋ ವಾಽಪ್ಯಥ ವಾ ಯಜ್ಞೋ ಯಚ್ಚಾನ್ಯತ್ಪಾವನಂ ಮಹತ್ ।
ತತ್ಸರ್ವಂ ನ ಸಮಂ ತಾತ ಸಂತತ್ಯೈ ಕೃತತ್ ಸತಾಂ ಮತಮ್ ॥೩೦॥

ಪ್ರೀತಿಪಾತ್ರನೇ, ತಪಸ್ಸಾಗಲೀ ಅಥವಾ ಯಜ್ಞಯಾಗಲೀ ಅಥವಾ ಬೇರೆ ಯಾವ ಪವಿತ್ರವಾದ ಕರ್ಮವೇ ಆಗಲಿ, ಅವೆಲ್ಲವೂ ಸತ್ಸಂತತಿಗೆ ಸಮಾನವಾದುದಲ್ಲ ಎಂದು ಸಜ್ಜನರ ಅಭಿಪ್ರಾಯ.

ಸ ತಾತ ದೃಷ್ಟ್ವಾ ಬ್ರೂಯಾಸ್ತ್ವಂ ಜರತ್ಕಾರುಂ ತಪಸ್ವಿನಮ್ ।
ಯಥಾ ದೃಷ್ಟಮಿದಂ ಚಾದ್ಯ ತ್ವಯಾಽಽಖ್ಯೇಯಮಶೇಷತಃ ॥೩೧॥

ಎಲೈ ಪ್ರೀತಿಪಾತ್ರನೇ, ನೀನು ತಪಸ್ವಿಯಾದ ಆ ಜರತ್ಕಾರುವನ್ನು ನೋಡಿದರೆ, ನೀನು ಇಲ್ಲಿ ಏನನ್ನು ನೋಡುತ್ತಿದ್ದೀಯೋ ಅವೆಲ್ಲವನ್ನೂ ಪೂರ್ಣವಾಗಿ ಅವನಿಗೆ ಹಾಗೆಯೇ ಹೇಳು.

ಯಥಾ ದಾರಾನ್ ಪ್ರಕುರ್ಯಾತ್ ಸ ಪುತ್ರಾಂಶ್ಚೋತ್ಪಾದಯೇದ್ ಯಥಾ ।
ತಥಾ ಬ್ರಹ್ಮಂಸ್ತ್ವಯಾ ವಾಚ್ಯಃ ಸೋಽಸ್ಮಾಕಂ ನಾಥವತ್ತಯಾ ॥೩೨॥

ಬ್ರಾಹ್ಮಣನೇ, ಅವನು ವಿವಾಹವನ್ನು ಮಾಡಿಕೊಂಡು ಪುತ್ರರನ್ನು ಪಡೆಯುವಂತೆ ನೀನು ಅವನಿಗೆ ತಿಳಿಸಬೇಕು. ಅವನೇ ನಮಗೆ ನಾಥನೆಂದೂ ತಿಳಿಸಬೇಕು.

॥ ಇತಿ ಶ್ರೀಮನ್ಮಹಾಭಾರತೇ ಶತಸಹಸ್ರಿಕಾಯಾಂಸಂಹಿತಾಯಮಾದಿಪರ್ವಣಿ ಚತ್ವಾರಿಂಶೋऽಧ್ಯಾಯಃ ॥

॥ ಇತಿ ಆಸ್ತೀಕಪರ್ವಣಿ ಅಷ್ಟಾವಿಂಶೋ೯ऽಧ್ಯಾಯಃ ॥

ಇಲ್ಲಿಗೆ ಮಹಾಭಾರತದ ಆದಿಪರ್ವದಲ್ಲಿ ನಲವತ್ತನೆಯ ಅಧ್ಯಾಯ ಮುಗಿಯಿತು.

★★★★★

ನಲವತ್ತೊಂದನೆಯ ಅಧ್ಯಾಯ

(ಪಿತೃಗಳ ಮಾತಿನಂತೆ ಜರತ್ಕಾರುವಿನ ಕನ್ಯಾನ್ವೇಷಣೆ. ವಿವಾಹದಲ್ಲಿ ಸಮಯಬಂಧ.)

ಸೂತಃ

ಏತಚ್ಛ್ರುತ್ವಾ ಜರತ್ಕಾರುಃ ಭೃಶಂ ಶೋಕಪರಾಯಣಃ ।
ಉವಾಚ ಸ್ವಾನ್ ಪಿತೄನ್ ದುಃಖಾದ್ ಬಾಷ್ಪಸಂದಿಗ್ಧಯಾ ಗಿರಾ ॥೧॥

ಇದನ್ನು ಕೇಳಿದ ಜರತ್ಕಾರುವು ಬಹಳ ಶೋಕತಪ್ತನಾಗಿ ತನ್ನ ಪಿತೃಗಳನ್ನು ಕುರಿತು ಕಣ್ಣೀರಿನಿಂದ ಗದ್ಗದವಾದ ಕಂಠದಿಂದ ಮಾತನಾಡಿದನು.

ಪೂರ್ವೇ ಭವಂತಃ ಸರ್ವೇ ವೈ ಪಿತರಃ ಸಪಿತಾಮಹಾಃ ।
ತದ್ ಬ್ರೂತ ಯನ್ಮಯಾ ಕಾರ್ಯಂ ಭವತಾಂ ಪ್ರಿಯಕಾಮ್ಯಯಾ ॥೨॥

ನೀವೆಲ್ಲರೂ ನನ್ನ ಪೂರ್ವ ಪಿತೃಗಳು ಮತ್ತು ಪಿತಾಮಹರು. ನಾನು ಈ ದಿನ ನಿಮಗೆ ಹಿತವನ್ನು ಮಾಡಲು ಏನು ಮಾಡಬೇಕೆಂಬುದನ್ನು ತಿಳಿಸಿ.

ಅಹಮೇವ ಜರತ್ಕಾರುಃ ಕಿಲ್ಬಿಷೀ ಭವತಾಂ ಸುತಃ ।
ತಂ ದಂಡಂ ಧಾರಯತ ಮೇ ದುಷ್ಕೃತೇರಕೃತಾತ್ಮನಃ ॥೩॥

ನಾನೇ ಜರತ್ಕಾರು. ನಿಮ್ಮ ವಂಶದ ಪಾಪಿಯಾದ ಪುತ್ರ. ದುಷ್ಟನಾದ ಮತ್ತು ಪರೋಪಕಾರಿಯಲ್ಲದ ನನಗೆ ಶಿಕ್ಷೆಯನ್ನು ಕೊಡಿ.

ಪಿತರಃ

ಪುತ್ರ ದಿಷ್ಟ್ಯಾSಸಿ ಸಂಪ್ರಾಪ್ತ ಇಮಂ ದೇಶಂ ಯದೃಚ್ಛಯಾ ।
ಕಿಮರ್ಥಂ ಚ ತ್ವಯಾ ಬ್ರಹ್ಮನ್ ನ ಕೃತೋ ದಾರಸಂಗ್ರಹಃ ॥೪॥

ಪುತ್ರನೇ, ಸುದೈವದಿಂದ ನೀನು ಈ ದಿನ ಇಲ್ಲಿಗೆ ಯದೃಚ್ಛೆಯಿಂದ ಪ್ರಾಪ್ತನಾಗಿ ಬಂದಿದ್ದೀಯೆ. ಬ್ರಾಹ್ಮಣನೇ, ನೀನು ಏಕೆ ವಿವಾಹವನ್ನು ಮಾಡಿಕೊಳ್ಳಲಿಲ್ಲ?

ಧರ್ಮಾರ್ಥಕಾಮೈಸ್ತು ಸುಖೈಃ ಪ್ರಹೀನಾ
ಭಿಕ್ಷಾಟನಾ ಕರ್ಪಟಬದ್ಧಗಾತ್ರಾಃ ।
ಕ್ಷುತ್‌ಕ್ಷಾಮಕಂಠಾ ವಸುಧಾಂ ಭ್ರಮಂತೋ
ದಾರಾನ್ ಪರಿತ್ಯಜ್ಯ ಗತಾ ನರಾ ಯೇ ॥೫॥

ಪತ್ನಿಯನ್ನು ಪರಿತ್ಯಾಗ ಮಾಡಿ ಹೋದ ಜನರು ಧರ್ಮಾರ್ಥಕಾಮಗಳಿಂದಲೂ ಸುಖಗಳಿಂದಲೂ ಹೀನರಾಗಿ ಒಂದು ಕೆಟ್ಟ ವಸ್ತ್ರವನ್ನು ಉಟ್ಟುಕೊಂಡು ಹಸಿವಿನಿಂದ ಸೊರಗಿದ ದೇಹವುಳ್ಳವರಾಗಿ ಭಿಕ್ಷಾಟನೆಯನ್ನು ಮಾಡುತ್ತಾ ಭೂಮಿಯಲ್ಲೆಲ್ಲಾ ಸಂಚರಿಸುತ್ತಾರೆ.

ನ ತು ಕ್ರತುಶತೈರ್ಲೋಕಾನ್ ಸ್ವರ್ಗಂ ಪ್ರಾಪ್ಸ್ಯಂತಿ ಮಾನವಾಃ ।
ತಪೋಭಿರ್ವಿವಿಧೈಶ್ಚಾಪಿ ಯಾನ್ ಲೋಕಾನ್ ಪುತ್ರಿಣೋ ಗತಾಃ ॥೬॥

ಸತ್ಪುತ್ರರನ್ನು ಪಡೆದವರು ಯಾವ ಸ್ವರ್ಗಲೋಕವನ್ನು ಹೊಂದುತ್ತಾರೆಯೋ ಅಂತಹ ಲೋಕಗಳನ್ನು ನೂರು ಯಾಗಗಳಿಂದಲಾಗಲೀ, ವಿವಿಧವಾದ ತಪಸ್ಸುಗಳಿಂದಾಗಲೀ ಪಡೆಯಲು ಸಾಧ್ಯವಿಲ್ಲ.

ಜರತ್ಕಾರುಃ

ಮಮಾಯಂ ಪಿತರೋ ನಿತ್ಯಂ ಹೃದ್ಯರ್ಥಃ ಪರಿವರ್ತತೇ ।
ಊರ್ಧ್ವರೇತಾಃ ಶರೀರಂ ವೈ ಪ್ರಾಪಯೇಯಮಮುತ್ರ ಹ ॥೭॥

ಪಿತೃಗಳೇ, ನಾನು ಊರ್ಧ್ವರೇತಸ್ಕನಾಗಿ, ಶರೀರವನ್ನು ತಪಸ್ಸಿನಿಂದ ಸವೆಸಬೇಕೆಂದು ಮನಸ್ಸಿನಲ್ಲಿ ಸಂಕಲ್ಪವನ್ನು ಮಾಡಿದ್ದೇನೆ.

ಏವಂ ದೃಷ್ಟ್ವಾ ತು ಭವತಃ ಶಕುಂತಾನಿವ ಲಂಬಿತಾನ್ ।
ಮಯಾ ನಿವರ್ತಿತಾ ಬುದ್ಧಿರ್ಬ್ರಹ್ಮಚರ್ಯಾತ್ ಪಿತಾಮಹಾಃ

ಎಲೈ ಪಿತಾಮಹರೇ, ಆದರೆ ಕಪೋತಪಕ್ಷಿಗಳಂತೆ ನೇತಾಡುತ್ತಿರುವ ನಿಮ್ಮನ್ನು ನೋಡಿ ನನ್ನ ಆ ಬುದ್ಧಿಯನ್ನು ಬದಲಾಯಿಸಿ ಬ್ರಹ್ಮಚರ್ಯದಿಂದ ಹಿಂದಕ್ಕೆ ಸರಿದಿದ್ದೇನೆ.

ಕರಿಷ್ಯೇ ವಃ ಪ್ರಿಯಂ ಕಾರ್ಯಂ ನಿಯೋಜ್ಯೋ ನಾತ್ರ ಸಂಶಯಃ ।
ಸನಾಮಾಂ ಯದ್ಯಹಂ ಕನ್ಯಾಮುಪಲಪ್ಸ್ಯೇ ಕದಾಚನ ॥೯॥

ನಾನು ನಿಮಗೆ ವಿಧೇಯನಾದವನು. ಇದರಲ್ಲಿ ಸಂಶಯವಿಲ್ಲ. ನನಗೆ ನನ್ನ ಹೆಸರಿನ ಕನ್ಯೆಯೊಬ್ಬಳು ದೊರೆತರೆ, ನಾನು ನಿಮಗೆ ಪ್ರಿಯವಾದ ಕಾರ್ಯವನ್ನು ಮಾಡುವೆನು.

ಭವಿಷ್ಯತಿ ಚ ಯಾ ಕಾಚಿದ್ ಭೈಕ್ಷವತ್ ಸ್ವಯಮುದ್ಯತಾ ।
ಪ್ರತಿಗ್ರಹೀತಾ ತಾಮಸ್ಮಿ ನ ಭರೇಯಂ ಚ ತಾಮಹಮ್ ॥೧೦॥

ಯಾವ ಕನ್ಯೆಯು ಭಿಕ್ಷೆಯಂತೆ ನನಗೆ ಸ್ವಯಂ ಕೊಡಲ್ಪಡುತ್ತಾಳೆಯೋ ಅಂತಹ ಕನ್ಯೆಯನ್ನು ನಾನು ವಿವಾಹ ಮಾಡಿಕೊಳ್ಳುತ್ತೇನೆ. ಆದರೆ, ಅವಳನ್ನು ಪೋಷಿಸುವುದಿಲ್ಲ.

ಏವಂವಿಧಮಹಂ ಕುರ್ಯಾಂ ನಿವೇಶಂ ಪ್ರಾಪ್ನುಯಾಂ ಯದಿ ।
ಅನ್ಯಥಾ ನ ಕರಿಷ್ಯೇಽಹಂ ಸತ್ಯಮೇತತ್ ಪಿತಾಮಹಾಃ ॥೧೧॥

ಇಂತಹ ಒಂದು ಅವಕಾಶವು ದೊರೆತರೆ, ನಾನು ವಿವಾಹವನ್ನು ಮಾಡಿಕೊಳ್ಳುತ್ತೇನೆ. ಪಿತಾಮಹರೇ, ಇಲ್ಲದಿದ್ದರೆ, ಮಾಡಿಕೊಳ್ಳುವುದಿಲ್ಲ. ಇದು ಸತ್ಯವಾದ ಮಾತು.

ತತ್ರ ಚೋತ್ಪತ್ಸ್ಯತೇ ಜಂತುರ್ಭವತಾಂ ತಾರಣಾಯ ವೈ ।
ಸಾಂತ್ವಿತಾಶ್ಚಾವ್ಯಥಾಶ್ಚೈವ ತಿಷ್ಠಂತು ಪಿತರೋ ಮಮ ॥೧೨॥

ಅವಳಲ್ಲಿ ನಿಮ್ಮನ್ನು ಈ ದುಃಖದಿಂದ ಪಾರುಮಾಡುವ ಒಂದು ಶಿಶುವು ಜನಿಸಿದರೆ, ನನ್ನ ಪಿತೃಗಳಾದ ನೀವು ದುಃಖವನ್ನು ದಾಟಿ, ಸಮಾಧಾನದಿಂದ ಇರಿ.

ಸೂತಃ

ಏವಮುಕ್ತ್ವಾ ತು ಸ ಪಿತೄಂಶ್ಚಚಾರ ಪೃಥಿವೀಂ ಮುನಿಃ ।
ನ ಚ ಸ್ಮ ಲಭತೇ ಭಾರ್ಯಾಂ ವೃದ್ಧೋಽಯಮಿತಿ ಶೌನಕ ॥೧೩॥

ಪಿತೃಗಳನ್ನು ಕುರಿತು ಹೀಗೆ ಹೇಳಿ ಆ ಋಷಿಯು ಭೂಮಿಯಲ್ಲೆಲ್ಲಾ ಸಂಚರಿಸಿದನು. ಎಲೈ ಶೌನಕನೇ, ಅವನು ವೃದ್ಧನಾದವನು ಎಂಬ ಕಾರಣದಿಂದ ಕನ್ಯೆಯನ್ನು ಪಡೆಯಲಿಲ್ಲ.

ಯದಾ ನಿರ್ವೇದಮಾಪನ್ನಃ ಪಿತೃಭಿಶ್ಚೋದಿತಸ್ತಥಾ ।
ತದಾऽರಣ್ಯಂ ಸ ಗತ್ವೋಚ್ಚೈಃ ಚುಕ್ರೋಶ ಭೃಶದುಃಖಿತಃ ॥೧೪॥

ಪಿತೃಗಳಿಂದ ಪ್ರೇರಿಸಲ್ಪಟ್ಟು ಪ್ರಯತ್ನಮಾಡಿದರೂ ಕನ್ಯೆಯು ದೊರೆಯದಿದ್ದಾಗ, ಅವನು ಬೇಸರಗೊಂಡು ಅರಣ್ಯಕ್ಕೆ ಹೋಗಿ, ಬಹಳ ದುಃಖದಿಂದ ಕೂಡಿದವನಾಗಿ ಗಟ್ಟಿಯಾಗಿ ಕಿರುಚಿದನು.

ಯಾನಿ ಭೂತಾನಿ ಸಂತೀಹ ಜಂಗಮಸ್ಥಾವರಾಣಿ ಚ ।
ಅಂತರ್ಹಿತಾನಿ ವಾ ಯಾನಿ ತಾನಿ ಶೃಣ್ವಂತು ಮೇ ವಚಃ ॥೧೫॥

ಈ ಅರಣ್ಯದಲ್ಲಿ ಜಂಗಮ ಮತ್ತು ಸ್ಥಾವರಗಳಾದ ಯಾವ ಭೂತಗಳಿವೆಯೋ ಅಥವಾ ಅಂತರ್ಧಾನವನ್ನು ಹೊಂದಿದ ಯಾವ ಭೂತಗಳಿವೆಯೋ, ಅವರೆಲ್ಲರೂ ನನ್ನ ಮಾತನ್ನು ಕೇಳಿ.

ಉಗ್ರೇ ತಪಸಿ ವರ್ತಂತಂ ಪಿತರಶ್ಚೋದಯಂತಿ ಮಾಮ್ ।
ನಿವಿಶಸ್ವೇತಿ ದುಃಖಾರ್ತಾಸ್ತೇಷಾಂ ಪ್ರಿಯಚಿಕೀರ್ಷಯಾ ॥೧೬॥

ನಿವೇಶಾರ್ಥ್ಯಖಿಲಾಂ ಭೂಮಿಂ ಕನ್ಯಾಭೈಕ್ಷಂ ಚರಾಮಿ ಭೋ ।
ದರಿದ್ರೋ ದುಃಖಶೀಲಶ್ಚ ಪಿತೃಭಿಃ ಸುನಿಯೋಜಿತಃ ॥೧೭॥

ಉಗ್ರವಾದ ತಪಸ್ಸಿನಲ್ಲಿ ರತನಾಗಿರುವ ನನ್ನನ್ನು ದುಃಖಾರ್ತರಾದ ನನ್ನ ಪಿತೃಗಳು ವಿವಾಹವನ್ನು ಮಾಡಿಕೋ ಎಂದು ಒತ್ತಾಯವನ್ನು ಮಾಡುತ್ತಿದ್ದಾರೆ. ಅವರಿಗೆ ಪ್ರಿಯವನ್ನುಂಟು ಮಾಡುವ ಸಲುವಾಗಿ ಅವರ ಆ ಆಜ್ಞೆಗೆ ಒಳಗಾದ, ದರಿದ್ರನೂ, ದುಃಖಶೀಲನೂ ಆದ ನಾನು ವಿವಾಹವನ್ನು ಮಾಡಿಕೊಳ್ಳಲು ಇಚ್ಛಿಸಿ ಕನ್ಯಾಭಿಕ್ಷದ ಸಲುವಾಗಿ ಭೂಮಿಯಲ್ಲಿ ಸಂಚರಿಸುತ್ತಿದ್ದೇನೆ.

ಯಸ್ಯ ಕನ್ಯಾऽಸ್ತಿ ಭೂತಸ್ಯ ಗುಣೈಃ ಸಮ್ಯಕ್ ಪ್ರಕೀರ್ತಿತಾ ।
ಪ್ರಯಚ್ಛತು ಸ ಮೇ ಕನ್ಯಾಂ ಚರತಃ ಸರ್ವತೋ ದಿಶಮ್ ॥೧೮॥

ಯಾರಿಗಾದರೂ ನಾನು ಹೇಳಿದಂತಹ ಗುಣವುಳ್ಳ ಕನ್ಯೆಯಿದ್ದರೆ, ಎಲ್ಲಾ ದಿಕ್ಕುಗಳಲ್ಲಿಯೂ ಸಂಚಾರ ಮಾಡುತ್ತಿರುವ ನನಗೆ ಆ ಕನ್ಯೆಯನ್ನು ಕೊಡಿ.

ಮಮ ಕನ್ಯಾ ಸನಾಮಾ ಯಾ ಭೈಕ್ಷವಚ್ಚೋದ್ಯತಾ ಭವೇತ್ ।
ಭರೇಯಂ ಚೈವ ಯಾಂ ನಾಹಂ ತಾಂ ಮೇ ಕನ್ಯಾಂ ಪ್ರಯಚ್ಛತು ॥

ಆ ಕನ್ಯೆಯು ನನ್ನ ಹೆಸರಿನವಳೇ ಆಗಿರಬೇಕು. ಭಿಕ್ಷೆಯಂತೆ ನನಗೆ ಕೊಡಲ್ಪಡಬೇಕು. ನಾನು ಅವಳನ್ನು ಪೋಷಿಸುವುದಿಲ್ಲ. ಅಂತಹ ಕನ್ಯೆಯನ್ನು ನನಗೆ ಕೊಡಿ.

ತತಸ್ತೇ ಪನ್ನಗಾ ಯೇ ವೈ ಜರತ್ಕಾರೌ ಸಮಾಹಿತಾಃ ।
ತಾಮಾದಾಯ ಪ್ರವೃತ್ತಿಂ ತೇ ವಾಸುಕೇಃ ಪ್ರತ್ಯವೇದಯನ್ ॥೨೦॥

ಆಗ ಜರತ್ಕಾರುವಿನ ವಾರ್ತೆಯನ್ನು ತಿಳಿಯಲು ವಾಸುಕಿಯು ಅಲ್ಲಲ್ಲಿ ನೇಮಿಸಿದ್ದ ಸರ್ಪಗಳು ಈ ವಾರ್ತೆಯನ್ನು ತೆಗೆದುಕೊಂಡು ಹೋಗಿ ವಾಸುಕಿಗೆ ತಲುಪಿಸಿದವು.

ತೇಷಾಂ ಶ್ರುತ್ವಾಽಥ ನಾಗೇಂದ್ರಃ ತಾಂ ಕನ್ಯಾಂ ಸಮಲಂಕೃತಾಮ್ ।
ಪ್ರಗೃಹ್ಯಾರಣ್ಯಮಗಮತ್ ಸಮೀಪಂ ತಸ್ಯ ಪನ್ನಗಃ ॥೨೧॥

ಅವರ ಮಾತುಗಳನ್ನು ಕೇಳಿದ ನಾಗೇಂದ್ರನಾದ ವಾಸುಕಿಯು ಚೆನ್ನಾಗಿ ಅಲಂಕೃತಳಾದ ಆ ಕನ್ಯೆಯನ್ನು ಕರೆದುಕೊಂಡು ಅರಣ್ಯದಲ್ಲಿ ಜರತ್ಕಾರುವಿನ ಸಮೀಪಕ್ಕೆ ಬಂದನು.

ತಾಂ ತಸ್ಮೈ ಭೈಕ್ಷವತ್ ಕನ್ಯಾಂ ಪ್ರಾದಾತ್ ತತ್ರ ಮಹಾತ್ಮನೇ ।
ನಾಗೇಂದ್ರೋ ವಾಸುಕಿರ್ಬ್ರಹ್ಮನ್ ನ ಸ ತಾಂ ಪ್ರತ್ಯಗೃಹ್ಣತ ॥೨೨॥

ಅಸನಾಮೇತಿ ವೈ ಕೃತ್ವಾ ಭರಣೇ ಚಾವಿಚಾರಿತೇ ।
ಮೋಕ್ಷಭಾವೇ ಸ್ಥಿತಶ್ಚಾಪಿ ಮಂದೀಭೂತಃ ಪರಿಗ್ರಹೇ ॥೨೩॥

ಎಲೈ ಬ್ರಾಹ್ಮಣಶ್ರೇಷ್ಠನೇ, ನಾಗೇಂದ್ರನಾದ ವಾಸುಕಿಯು ಮಹಾತ್ಮನಾದ ಜರತ್ಕಾರುವಿಗೆ ಆ ಕನ್ಯೆಯನ್ನು ಭಿಕ್ಷೆಯಂತೆ ನೀಡಿದನು. ಆದರೆ ಜರತ್ಕಾರುವು ಸ್ವೀಕರಿಸಲಿಲ್ಲ. ಅವಳ ಹೆಸರನ್ನು ತಿಳಿಯದೆ, ಅವಳ ಪೋಷಣೆಯ ಬಗ್ಗೆ ತನ್ನ ಷರತ್ತನ್ನು ಹೇಳದೆ, ಮೋಕ್ಷಸಾಧನೆಯಲ್ಲಿಯೇ ನಿರತನಾದ ಅವನು ವಿವಾಹದಲ್ಲಿ ಮಾಂದ್ಯವನ್ನು ತಾಳಿದನು.

ತತೋ ನಾಮ ಸ ಕನ್ಯಾಯಾಃ ಪಪ್ರಚ್ಛ ಭೃಗುನಂದನ ।
ವಾಸುಕೇ ಭರಣಂ ಚಾಸ್ಯಾ ನ ಕುರ್ಯಾಮಿತ್ಯುವಾಚ ಹ ॥೨೪॥

ಎಲೈ ಭೃಗುನಂದನನೇ, ಆಗ ಅವನು ಅವಳ ಹೆಸರನ್ನು ಕೇಳಿದನು ಮತ್ತು ವಾಸುಕಿಯೇ, ನಾನು ಇವಳ ಪೋಷಣೆಯನ್ನು ಮಾಡುವುದಿಲ್ಲ ಎಂದೂ ಹೇಳಿದನು.

॥ ಇತಿ ಶ್ರೀಮನ್ಮಹಾಭಾರತೇ ಶತಸಹಸ್ರಿಕಾಯಾಂಸಂಹಿತಾಯಮಾದಿಪರ್ವಣಿ ಏಕಚತ್ವಾರಿಂಶೋऽಧ್ಯಾಯಃ ॥

॥ ಇತಿ ಆಸ್ತೀಕಪರ್ವಣಿ ಏಕೋನತ್ರಿಂಶೋऽಧ್ಯಾಯಃ ॥

ಇಲ್ಲಿಗೆ ಮಹಾಭಾರತದ ಆದಿಪರ್ವದಲ್ಲಿ ನಲವತ್ತೊಂದನೆಯ ಅಧ್ಯಾಯ ಮುಗಿಯಿತು.

★★★★★

ನಲವತ್ತೆರಡನೆಯ ಅಧ್ಯಾಯ

(ಜರತ್ಕಾರುವಿನ ವಿವಾಹ, ಪತ್ನಿಯ ಗರ್ಭೋತ್ಪತ್ತಿ ಮತ್ತು ವ್ಯಾಜದಿಂದ ಪತ್ನಿಯ ಪರಿತ್ಯಾಗ.)

ಸೂತಃ

ವಾಸುಕಿಸ್ತ ಬ್ರುವೀದ್ ವಾಕ್ಯಂ ಜರತ್ಕಾರುಮೃಷಿಂ ತದಾ ।
ಸನಾಮಾ ತವ ಕನ್ಯೇಯಂ ಸ್ವಸಾ ಮೇ ತಪಸಾನ್ವಿತಾ ॥೧॥

ಪ್ರದಾಸ್ಯಾಮಿ ಚ ತೇ ಭಾರ್ಯಾಂ ಪ್ರತೀಚ್ಛೇಮಾಂ ದ್ವಿಜೋತ್ತಮ ।
ರಕ್ಷಣಂ ಚ ಕರಿಷ್ಯೇऽಸ್ಯಾಃ ಸರ್ವಶಕ್ತ್ಯಾತಪೋಧನ ।

ತ್ವದರ್ಥಂ ರಕ್ಷ್ಯತೇ ಚೈಷಾ ಮಯಾ ಮುನಿವರ ಪ್ರಭೋ ॥೨॥

ವಾಸುಕಿಯು ಆಗ ಜರತ್ಕಾರುಮುನಿಯನ್ನು ಕುರಿತು ಮಾತನಾಡಿದನು. ದ್ವಿಜೋತ್ತಮನೇ, ಇವಳು ನಿನ್ನ ಹೆಸರಿನವಳೇ ಆದ ನನ್ನ ತಂಗಿ. ತಪಸ್ಸಿನಿಂದ ಕೂಡಿದವಳಾಗಿದ್ದಾಳೆ. ನಾನು ಅವಳನ್ನು ನಿನಗೆ ಪ್ರದಾನಮಾಡುತ್ತಿದ್ದೇನೆ. ಪತ್ನಿಯಾಗಿ ಸ್ವೀಕರಿಸು. ತಪೋಧನನೇ, ನಾನು ಸರ್ವರೀತಿಯಿಂದಲೂ ಇವಳ ರಕ್ಷಣೆಯನ್ನು

ಮಾಡುತ್ತೇನೆ. ಮುನಿಶ್ರೇಷ್ಠನೇ, ಪ್ರಭುವೇ, ನಾನು ಇಲ್ಲಿಯವರೆಗೆ ನಿನ್ನ ಸಲುವಾಗಿಯೇ ಇವಳನ್ನು ರಕ್ಷಿಸಿಕೊಂಡಿದ್ದೆ.

ಋಷಿಃ

ನ ಭರಿಷ್ಯೇऽಹಮೇತಾಂ ವೈ ಏಷ ಮೇ ಸಮಯಃ ಕೃತಃ ।
ಅಪ್ರಿಯಂ ನ ಚ ಕರ್ತವ್ಯಂ ಕೃತೇ ಚೈವ ತ್ಯಜಾಮ್ಯಹಮ್ ॥೩॥

ನಾನು ಇವಳನ್ನು ಪೋಷಿಸುವುದಿಲ್ಲ. ಇದು ನನ್ನ ಷರತ್ತು. ಅವಳು ನನಗೆ ಯಾವ ಅಪ್ರಿಯವನ್ನೂ ಮಾಡಬಾರದು. ಹಾಗೆ ಮಾಡಿದರೆ, ನಾನು ಅವಳನ್ನು ಬಿಡುತ್ತೇನೆ.

ಸೂತಃ

ಪ್ರತಿಶ್ರುತೇ ತು ನಾಗೇನ ಭರಿಷ್ಯೇ ಭಗಿನೀಮಿತಿ ।
ಜರತ್ಕಾರುಸ್ತದಾ ವೇಶ್ಮ ಭುಜಗಸ್ಯ ಜಗಾಮ ಹ ॥೪॥

ವಾಸುಕಿಯು ನನ್ನ ತಂಗಿಯನ್ನೂ ನಾನೇ ಪೋಷಿಸುತ್ತೇನೆ ಎಂದು ಪ್ರತಿಜ್ಞೆಯನ್ನು ಮಾಡಿದ ಮೇಲೆ ಜರತ್ಕಾರುವು ವಾಸುಕಿಯ ಗೃಹಕ್ಕೆ ಹೋದನು.

ತತ್ರ ಮಂತ್ರವಿದಾಂ ಶ್ರೇಷ್ಠಸ್ತಪೋವೃದ್ಧೋ ಮಹಾಮತಿಃ ।
ಜಗ್ರಾಹ ಪಾಣಿಂ ಧರ್ಮಾತ್ಮಾ ವಿಧಿಮಂತ್ರಪುರಸ್ಕೃತಃ ॥೫॥

ಅಲ್ಲಿ ಮೇಧಾವಿಯೂ, ತಪೋವೃದ್ಧನೂ, ಮಂತ್ರಜ್ಞರಲ್ಲಿ ಶ್ರೇಷ್ಠನೂ, ಧರ್ಮಾತ್ಮನೂ ಆದ ಅವನು ವಿಧಿಮಂತ್ರಪೂರ್ವಕವಾಗಿ ಅವಳ ಪಾಣಿಗ್ರಹಣವನ್ನು ಮಾಡಿದನು.

ತತೋ ವಾಸಗೃಹಂ ಶುಭ್ರಂ ಪನ್ನಗೇಂದ್ರಸ್ಯ ಧೀಮತಃ ।
ಜಗಾಮ ಭಾರ್ಯಾಮಾದಾಯ ಸ್ತೂಯಮಾನೋ ಮಹರ್ಷಿಭಿಃ ॥೬॥

ಅನಂತರ, ಮಹರ್ಷಿಗಳಿಂದ ಸ್ತೋತ್ರಮಾಡಲ್ಪಟ್ಟು, ತನ್ನ ಪತ್ನಿಯನ್ನು ಕರೆದುಕೊಂಡು ಮೇಧಾವಿಯಾದ, ಸರ್ಪರಾಜನಾದ ವಾಸುಕಿಯ ಶುಭ್ರವಾದ ಶಯನಗೃಹಕ್ಕೆ ಹೋದನು.

ಶಯನಂ ತತ್ರ ವೈ ಕ್ಲೃಪ್ತಂ ಸ್ವರ್ಹ್ಯಾಸ್ತರಣಸಂವೃತಮ್ ।
ತತ್ರ ಭಾರ್ಯಾಸಹಾಯಃ ಸ ಜರತ್ಕಾರುರುವಾಸ ಹ ।
ಸ ತತ್ರ ಸಮಯಂ ಚಕ್ರೇ ಭಾರ್ಯಯಾ ಸಹ ಸತ್ತಮಃ ॥೭॥

ಅವನು ಒಳ್ಳೆಯ ಹೊದಿಕೆಗಳಿಂದ ಕೂಡಿದ ಹಾಸಿಗೆಯುಳ್ಳ ಶಯನಗೃಹವನ್ನು ತಲುಪಿ, ಅಲ್ಲಿ ಭಾರ್ಯೆಯ ಜೊತೆಯಲ್ಲಿ ವಾಸಮಾಡಿದನು. ಸಜ್ಜನರಲ್ಲಿ ಶ್ರೇಷ್ಠನಾದ ಅವನು ಪತ್ನಿಯ ಜೊತೆಯಲ್ಲಿ ಒಂದು ಒಪ್ಪಂದವನ್ನು ಮಾಡಿಕೊಂಡನು.

ಜರತ್ಕಾರುಃ

ಏಪ್ರಿಯಂ ಮೇ ನ ಕರ್ತವ್ಯಂ ನ ಚ ವಾಚ್ಯಂ ಕದಾಚನ ।
ತ್ಯಜೇಯಮಪ್ರಿಯೇ ಹಿತ್ವಾ ಕೃತೇ ವಾಸಂ ಚ ತೇ ಗೃಹೇ ।
ಏತದ್ ಗೃಹಾಣ ವಚನಂ ಮಯಾ ಯತ್ ಸಮುದೀರಿತಮ್ ॥೮॥

ನನಗೆ ಎಂದೂ ಅಪ್ರಿಯವನ್ನು ಮಾಡಬಾರದು ಮತ್ತು ಅಪ್ರಿಯವಾಗಿ ಮಾತನಾಡಬಾರದು. ಏನಾದರೂ ಅಪ್ರಿಯವನ್ನು ಮಾಡಿದರೆ, ನಿನ್ನ ಮನೆಯಲ್ಲಿ ವಾಸಿಸುವುದನ್ನು ಬಿಟ್ಟು ನಿನ್ನನ್ನು ಪರಿತ್ಯಾಗಮಾಡುತ್ತೇನೆ. ನಾನು ಹೇಳುತ್ತಿರುವ ಈ ಮಾತುಗಳನ್ನು ಚೆನ್ನಾಗಿ ನೆನಪಿಡು.

ಸೂತಃ

ತತಃ ಪರಮಸಂವಿಗ್ನಾ ಸ್ವಸಾ ನಾಗಪತೇಸ್ತು ಸಾ ।
ಅತಿದುಃಖಾನ್ವಿತಾ ವಾಕ್ಯಂ ತಮುವಾಚೈವಮುಸ್ತಿ ತಿ ॥೯॥

ಆಗ ಬಹಳ ಉದ್ವೇಗಕ್ಕೆ ಒಳಗಾದ ವಾಸುಕಿಯ ತಂಗಿಯಾದ ಅವಳು ಬಹಳ ದುಃಖದಿಂದ ಕೂಡಿದವಳಾಗಿ ಹಾಗೆಯೇ ಆಗಲಿ ಎಂದು ಹೇಳಿದಳು.

ತಥೈವ ಸಾ ಚ ಭರ್ತಾರಂ ದುಃಖಶೀಲಮುಪಾಚರತ್ ।
ಉಪಾಯೈಃ ಶ್ವೇತಕಾಕೀಯೈಃ ಪ್ರಿಯಕಾಮಾ ಮನಸ್ವಿನೀ ॥೧೦॥

ಹಾಗೆಯೇ ಅವಳು ದುಃಖಶೀಲನಾದ ತನ್ನ ಪತಿಯನ್ನು ಉಪಚರಿಸಿದಳು. ಧೈರ್ಯಶಾಲಿಯಾದ ಅವಳು ಪತಿಗೆ ಹಿತವನ್ನು ಮಾಡಲು ಬಯಸಿ, ಶ್ವೇತಕಾಕೀಯ ಉಪಾಯಗಳಿಂದಲೂ ಅವನನ್ನು ಉಪಚರಿಸಿದಳು.

'ಶ್ವೇತಕಾಕೀಯ' ಎಂದರೆ ಅನುಕೂಲವಾಗಿ ಮಾತನಾಡುವುದು ಎಂದು ಅರ್ಥ. ಕಾಗೆಯು ಬೆಳ್ಳಗಿದೆ ಎಂದು ಹೇಳಿದರೆ, ನಿಷೇಧವನ್ನು ಮಾಡದೆ ಹೌದು ಎಂದು ಹೇಳುವುದು ಒಂದು ಅನುಕೂಲವಚನದ ಪ್ರಕಾರ.

ಋತುಕಾಲೇ ತತಃ ಸ್ನಾತಾ ಕದಾಚಿದ್ ವಾಸುಕೇಃ ಸ್ವಸಾ ।
ಭರ್ತಾರಂ ತು ಯಥಾನ್ಯಾಯಮ್ ಉಪತಸ್ಥೇ ಮಹಾಮುನಿಮ್ ॥

ಒಮ್ಮೆ ವಾಸುಕಿಯ ತಂಗಿಯಾದ ಅವಳು ಋತುಸ್ನಾತಳಾಗಿ ಮಹಾಮುನಿಯಾದ ತನ್ನ ಪತಿಯನ್ನು ವಿಧಿವತ್ತಾಗಿ ಸಮೀಪಿಸಿದಳು.

ತತಸ್ತಸ್ಯಾಂ ಸಮಭವದ್ ಗರ್ಭೋ ಜ್ವಲನಸನ್ನಿಭಃ ।
ಅತೀವ ತಪಸಾ ಯುಕ್ತೋ ವೈಶ್ವಾನರಸಮದ್ಯುತಿಃ ।
ಶುಕ್ಲಪಕ್ಷೇ ಯಥಾ ಸೋಮೋ ವ್ಯವರ್ಧತ ತಥೈವ ಸಃ ॥೧೨॥

ಆಗ ಅವಳಲ್ಲಿ ಅಗ್ನಿಸದೃಶವಾದ ಗರ್ಭವು ಉಂಟಾಯಿತು. ಋಷಿಯ ತಪಸ್ಸಿನಿಂದ ಅಗ್ನಿಗೆ ಸಮಾನವಾದ ಕಾಂತಿಯುಳ್ಳದ್ದಾಗಿ ಆ ಗರ್ಭವು ಶುಕ್ಲಪಕ್ಷದ ಚಂದ್ರನಂತೆ ಅಭಿವೃದ್ಧಿಯನ್ನು ಹೊಂದಿತು.

ತತಃ ಕತಿಪಯಾಹಸ್ಸು ಜರತ್ಕಾರುರ್ಮಹಾತಪಾಃ ।
ಉತ್ಸಂಗೇಽಸ್ಯಾಃ ಶಿರಃ ಕೃತ್ವಾ ಸುಷ್ವಾಪ ಪರಿಖಿನ್ನವತ್ ॥೧೩॥

ಅನಂತರ ಕೆಲವು ದಿನಗಳು ಕಳೆದ ಮೇಲೆ ಮಹಾತಪಸ್ವಿಯಾದ ಜರತ್ಕಾರುವು ಅವಳ ತೊಡೆಯ ಮೇಲೆ ತಲೆಯನ್ನಿಟ್ಟು ದಣಿದವನಂತೆ ಮಲಗಿ ನಿದ್ರೆಮಾಡಿದನು.

ತಸ್ಮಿಂಶ್ಚ ಸುಪ್ತೇ ವಿಪ್ರೇಂದ್ರೇ ಸವಿತಾಽಸ್ತಮಿಯಾದ್ ಗಿರಿಮ್ ।
ಅಹ್ನಃ ಪರಿಕ್ಷಯೇ ಬ್ರಹ್ಮಂಸ್ತತಃ ಸಾಽಚಿಂತಯತ್ ತದಾ ॥೧೪॥

ವಾಸುಕೇರ್ಭಗಿನೀ ಭೀತಾ ಧರ್ಮಲೋಪಾನ್ಮನಸ್ವಿನೀ ।
ಕಿಂ ನು ಮೇ ಸುಕೃತಂ ಭೂಯಾದ್ ಭರ್ತುರುತ್ಥಾಪನೇನ ವಾ ॥೧೫॥

ಆ ವಿಪ್ರೇಂದ್ರನು ನಿದ್ರಿಸುತ್ತಿರಲು ಸೂರ್ಯನು ಅಸ್ತಗಿರಿಯನ್ನು ಸಮೀಪಿಸಿದನು. ಬ್ರಾಹ್ಮಣನೇ, ದಿನವು ಪರಿಕ್ಷಯವನ್ನು ಹೊಂದುವ ಸ್ಥಿತಿಯಲ್ಲಿರಲು ವಾಸುಕಿಯ ತಂಗಿಯಾದ ಧೈರ್ಯಶಾಲಿನಿಯಾದ ಜರುತ್ಕಾರವು ಧರ್ಮಲೋಪದಿಂದ ಭೀತಳಾಗಿ, ನಾನು ಏನು ಮಾಡಿದರೆ ಒಳ್ಳೆಯದಾಗುತ್ತದೆ. ಪತಿಯನ್ನು ಎಬ್ಬಿಸಲೋ ಅಥವಾ ಧರ್ಮಲೋಪವನ್ನು ಸಹಿಸಲೋ ಎಂದು ಚಿಂತಿಸಿದಳು.

ದುಃಖಶೀಲೋ ಹಿ ಧರ್ಮಾತ್ಮಾ ಕಥಂ ನಾಸ್ಯಾಪರಾಧ್ನುಯಾಮ್ ।
ಕೋಪೋ ವಾ ಧರ್ಮಶೀಲಸ್ಯ ಧರ್ಮಲೋಪೋऽಥವಾ ಪುನಃ ।
ಧರ್ಮಲೋಪೋ ಗರೀಯಾನ್ ವೈ ಸ್ಯಾದಿತ್ಯತ್ರಾಕರೋನ್ಮತಿಮ್ ॥೧೬॥

ಧರ್ಮಾತ್ಮನಾದ ನನ್ನ ಪತಿಯು ಯಾವಾಗಲೂ ದುಃಖಶೀಲನಾದವನು (ಕಷ್ಟಗಳನ್ನು ಅನುಭವಿಸುವವನು). ನಾನು ಏನು ಮಾಡಿದರೆ ಅವನಿಗೆ ಅಪರಾಧವಾಗದೇ ಇರಬಹುದು? ಎಬ್ಬಿಸಿದರೆ ಅವನಿಗೆ ಕೋಪವುಂಟಾಗುತ್ತದೆ ಅಥವಾ ಎಬ್ಬಿಸದಿದ್ದರೆ, ಧರ್ಮಶೀಲನಾದ ಅವನಿಗೆ ಧರ್ಮಲೋಪವುಂಟಾಗುತ್ತದೆ. ಪತಿಯ ಕೋಪಕ್ಕಿಂತ ಪತಿಯ ಧರ್ಮಲೋಪವು ಹೆಚ್ಚು ಅನಿಷ್ಟವಾದುದು ಎಂದು ಮನಸ್ಸಿನಲ್ಲಿ ನಿರ್ಧರಿಸಿದಳು.

ಉತ್ಥಾಪಯಿಷ್ಯೇ ಯದ್ಯೇನಂ ಧ್ರುವಂ ಕೋಪೋ ಭವಿಷ್ಯತಿ ।
ಧರ್ಮಲೋಪೋ ಭವೇದಸ್ಯ ಸಂಧ್ಯಾತಿಕ್ರಮಣೇ ಧ್ರುವಮ್ ॥೧೭॥

ನಾನು ಇವನನ್ನು ಎಬ್ಬಿಸಿದರೆ, ಖಂಡಿತವಾಗಿ ಇವನು ಕೋಪಗೊಳ್ಳುವನು. ಆದರೆ, ಸಂಧ್ಯಾಕಾಲವನ್ನು ಅತಿಕ್ರಮ ಮಾಡಿದರೆ, ಅವನಿಗೆ ಖಂಡಿತವಾಗಿ ಧರ್ಮಲೋಪವುಂಟಾಗುತ್ತದೆ.

ಇತಿ ನಿಶ್ಚಿತ್ಯ ಮನಸಾ ಜರತ್ಕಾರುರ್ಭುಜಂಗಮಾ ।
ತಮೃಷಿಂ ದೀಪ್ತತಪಸಂ ಶಯಾನಮನಲೋಪಮಮ್ ।
ಉವಾಚೇದಂ ವಚಃ ಶ್ಲಕ್ಷ್ಣಂ ತತೋ ಮಧುರಭಾಷಿಣೀ ॥೧೮॥

ಹೀಗೆ ಸರ್ಪಿಣಿಯಾದ ಜರತ್ಕಾರುವು ಮನಸ್ಸಿನಲ್ಲಿ ನಿಶ್ಚಯಿಸಿ, ಅಗ್ನಿಗೆ ಸದೃಶವಾದಂತಹ, ದೀಪ್ತವಾದ ತಪಸ್ಸನ್ನು ಹೊಂದಿದ ನಿದ್ರಿಸುತ್ತಿರುವ ಆ ಋಷಿಯನ್ನು ಕುರಿತು ಮಧುರಭಾಷಿಣಿಯಾದ ಅವಳು ಮಧುರವಾದ ಈ ಮಾತುಗಳನ್ನು ಆಡಿದಳು.

ಉತ್ತಿಷ್ಠ ತ್ವಂ ಮಹಾಭಾಗ ಸೂರ್ಯೋऽಸ್ತಮುಪಗಚ್ಛತಿ ।
ಸಂಧ್ಯಾಮುಪಾಸ್ವ ಭಗವನ್ ಅಪಃ ಸ್ಪೃಷ್ಟ್ವಾ ಮಹಾವ್ರತಃ ।
ಪ್ರಾದುಷ್ಕೃತಾಗ್ನಿಹೋತ್ರೋऽಯಂ ಮುಹೂರ್ತೋ ರಮ್ಯದಾರುಣಃ ॥

ಮಹಾಭಾವನೇ, ಸೂರ್ಯನು ಅಸ್ತಂಗತನಾಗುತ್ತಿದ್ದಾನೆ. ಪೂಜ್ಯನೇ, ಮಹಾವ್ರತಧಾರಿಯಾದ ನೀನು ಎದ್ದು ನೀರಿನಿಂದ ಶುದ್ಧಿಯನ್ನು ಹೊಂದಿ

ಸಂಧ್ಯೋಪಾಸನೆಯನ್ನು ಮಾಡು. ಈ ಮುಹೂರ್ತವು ಪ್ರಾದುರ್ಭೂತವಾದ ಅಗ್ನಿಹೋತ್ರವುಳ್ಳದ್ದಾಗಿದೆ. ಇದು ಸಕಾಲದಲ್ಲಿ ಅಗ್ನಿಹೋತ್ರವನ್ನು ಮಾಡಿದರೆ ರಮ್ಯವೂ, ಇಲ್ಲದಿದ್ದರೆ ದಾರುಣವೂ ಆಗುತ್ತದೆ.

ಅಗ್ನಿಹೋತ್ರವನ್ನು ಇಟ್ಟವರು ಸೂರ್ಯಾಸ್ತಕ್ಕಿಂತ ಮೊದಲೇ ಅಗ್ನಿಯ ಪ್ರಾದುರ್ಭಾವವನ್ನು ಮಾಡಬೇಕು. ಹೋಮವನ್ನು ಸೂರ್ಯಾಸ್ತಕ್ಕಿಂತ ಮೊದಲು ಅಥವಾ ಅನಂತರವೂ ಮಾಡಬಹುದು.

ಸಂಧ್ಯಾ ಪ್ರವರ್ತತೇ ಚೇಯಂ ಪಶ್ಚಿಮಸ್ಯಾಂ ದಿಶಿ ಪ್ರಭೋ ।
ಏವಮುಕ್ತಃ ಸ ಭಗವಾನ್ ಜರತ್ಕಾರುರ್ಮಹಾತಪಾಃ ।
ಭಾರ್ಯಾಂ ತಾಂ ಸ್ಫುರಮಾಣೋಷ್ಮ ಇದಂ ವಚನಮಬ್ರವೀತ್ ॥

ಪ್ರಭುವೇ, ಪಶ್ಚಿಮದಿಕ್ಕಿನಲ್ಲಿ ಸಂಧ್ಯೆಯು ಪ್ರವೃತ್ತವಾಗಿದೆ. ಹೀಗೆ ಹೇಳಲ್ಪಟ್ಟ ಮಹಾತಪಸ್ವಿಯಾದ ಪೂಜ್ಯನಾದ ಜರತ್ಕಾರುವು, ಕೋಪದಿಂದ ಅದುರುವ ತುಟಿಗಳಿಂದ ಪತ್ನಿಯನ್ನು ಕುರಿತು ಹೀಗೆ ಮಾತನಾಡಿದನು.

ಜರತ್ಕಾರುಃ

ಅವಮಾನಃ ಪ್ರಯುಕ್ತೋಽಯಂ ತ್ವಯಾ ಮೇಽದ್ಯ ಭುಜಂಗಮೇ ।
ಸಮೀಪೇ ತೇ ನ ವತ್ಸ್ಯಾಮಿ ಗಮಿಷ್ಯಾಮಿ ಯಥಾಗತಮ್ ॥೨೧॥

ಎಲೌ ಸರ್ಪಿಣಿಯೇ, ನೀನು ಈ ದಿನ ನನಗೆ ಅವಮಾನವನ್ನು ಮಾಡಿದ್ದೀಯೆ. ಇನ್ನು ನಿನ್ನ ಸಮೀಪದಲ್ಲಿ ನಾನು ವಾಸವನ್ನು ಮಾಡುವುದಿಲ್ಲ. ನಾನು ಬಂದಂತೆಯೇ ಹೊರಟುಹೋಗುವೆನು.

ನ ಹಿ ತೇಜೋಽಸ್ತಿ ವಾಮೋರು ಮಯಿ ಸುಪ್ತೇ ವಿಭಾವಸೋಃ ।
ಅಸ್ತಂ ಗಂತುಂ ಯಥಾಕಾಲಮಿತಿ ಮೇ ವರ್ತತೇ ಮತಿಃ ॥೨೨॥

ಸುಂದರಿಯೇ, ನಾನು ನಿದ್ರಿಸುತ್ತಿರುವಾಗ ಸೂರ್ಯನಿಗೆ ಕಾಲಕ್ಕೆ ಸರಿಯಾಗಿ ಅಸ್ತಂಗತನಾಗಲು ಸಾಮರ್ಥ್ಯವಿಲ್ಲ ಎಂದು ನನ್ನ ಅಭಿಪ್ರಾಯ.

ನ ಚಾಹ್ಯವಮತಸ್ಯೇಹ ವಸ್ತುಂ ರೋಚೇತ ಕಸ್ಯಚಿತ್ ।
ಕಿಂ ಪುನರ್ಧರ್ಮಶೀಲಸ್ಯ ಮಮ ವಾ ಮದ್ವಿಧಸ್ಯ ವಾ ॥೨೩॥

ಎಲೌ ಸರ್ಪಕುಮಾರಿಯೇ, ಅವಮಾನವಾದ ಸ್ಥಳದಲ್ಲಿ ಯಾರೂ ವಾಸವನ್ನು ಮಾಡಬಾರದು. ಹೀಗಿರುವಾಗ ನಾನಾಗಲೀ ಧರ್ಮಶೀಲನಾದ ನನ್ನಂತಹವನಾಗಲೀ ಹೇಗೆ ವಾಸಮಾಡಲು ಸಾಧ್ಯ ?

ಸೂತಃ

ಏವಮುಕ್ತಾ ಜರತ್ಕಾರುರ್ಭರ್ತ್ರಾ ಹೃದಯಕಂಪನಮ್ ।
ಅಬ್ರವೀದ್ ಭಗಿನೀ ತತ್ರ ವಾಸುಕೇಸ್ತು ನಿವೇಶನೇ ॥೨೪॥

ಹೀಗೆ ಪತಿಯಾದ ಜರತ್ಕಾರುವಿನಿಂದ ಹೃದಯವನ್ನು ನಡುಗಿಸುವ ಮಾತುಗಳನ್ನು ಕೇಳಿದ ವಾಸುಕಿಯ ತಂಗಿಯು ಆ ಗೃಹದಲ್ಲಿ ಅವನನ್ನು ಕುರಿತು ಮಾತನಾಡಿದಳು.

ನಾವಮಾನಾತ್ ಕೃತವತೀ ತವಾಹಂ ಪ್ರತಿಬೋಧನಮ್ ।
ಧರ್ಮಲೋಪೋ ನ ತೇ ವಿಪ್ರ ಸ್ಯಾದಿತ್ಯೇವಂ ಕೃತಂ ಮಯಾ ॥೨೫॥

ನಿನಗೆ ಅವಮಾನವನ್ನು ಮಾಡುವುದಕ್ಕೋಸ್ಕರ ನಾನು ನಿನ್ನನ್ನು ಎಬ್ಬಿಸಲಿಲ್ಲ. ಎಲೈ ಬ್ರಾಹ್ಮಣನೇ, ಎಬ್ಬಿಸದಿದ್ದರೆ ಧರ್ಮಲೋಪವಾಗುವುದು ಎಂಬ ಕಾರಣದಿಂದ ಹೀಗೆ ಮಾಡಿದೆ.

ಉವಾಚ ಭಾರ್ಯಾಮಿತ್ಯುಕ್ತೋ ಜರತ್ಕಾರುರ್ಮಹಾತಪಾಃ ।
ಋಷಿಃ ಕೋಪಸಮಾವಿಷ್ಟಃ ತ್ಯಕ್ತುಕಾಮೋ ಭುಜಂಗಮಾಮ್ ॥೨೬॥

ಪತ್ನಿಯಿಂದ ಹೀಗೆ ಹೇಳಲ್ಪಟ್ಟ ಮಹಾತಪಸ್ವಿಯಾದ ಜರತ್ಕಾರುವು ಸರ್ಪಕನ್ಯೆಯಾದ ಅವಳನ್ನು ಪರಿತ್ಯಾಗ ಮಾಡಲು ನಿಶ್ಚಯಿಸಿ, ಕೋಪದಿಂದ ಕೂಡಿದವನಾಗಿ ಅವಳನ್ನು ಕುರಿತು ಮಾತನಾಡಿದನು.

ನ ಮೇ ವಾಗನೃತಂ ಪ್ರಾಹ ಗಮಿಷ್ಯೇऽಹಂ ಭುಜಂಗಮೇ ।
ಸಮಯೋ ಹ್ಯೇಷ ಮೇ ಪೂರ್ವಂ ತ್ವಯಾ ಸಹ ಮಿಥಃ ಕೃತಃ ॥೨೭॥

ಎಲೌ ಸರ್ಪಿಣಿಯೇ, ನನ್ನ ಮಾತು ಎಂದೂ ಸುಳ್ಳಾಗುವುದಿಲ್ಲ. ನಾನು ಹೊರಟುಹೋಗುವೆನು. ನಾನು ಮೊದಲೇ ನಿನ್ನ ಜೊತೆಯಲ್ಲಿ ಈ ರೀತಿ ಒಪ್ಪಂದವನ್ನು ಮಾಡಿಕೊಂಡಿದ್ದೆನಷ್ಟೆ.

ಸುಖಮಧ್ಯುಷಿತೋ ಭದ್ರೇ ಬ್ರೂಯಾಸ್ತ್ವಂ ಭ್ರಾತರಂ ಶುಭೇ ।
ಇತೋ ಮಯಿ ಗತೇ ಭೀರು ಗತಃ ಸ ಭಗವಾನಿತಿ ।
ತ್ವಂ ಚಾಪಿ ಮಯಿ ನಿಷ್ಕ್ರಾಂತೇ ನ ಶೋಕಂ ಕರ್ತುಮರ್ಹಸಿ ॥೨೮॥

ಮಂಗಳಸ್ವರೂಪಳೇ, ನಾನು ನಿನ್ನ ಜೊತೆಯಲ್ಲಿ ಈ ಮನೆಯಲ್ಲಿ ಸುಖವಾಗಿ ವಾಸಮಾಡಿದೆ. ನಾನು ಹೊರಟುಹೋದ ಮೇಲೆ ನೀನು ನಿನ್ನ ಅಣ್ಣನಿಗೆ ಪೂಜ್ಯರು ಹೊರಟುಹೋದರು ಎಂದು ಹೇಳು. ಎಲೌ ಭೀರುವೇ, ನಾನು ಹೊರಟುಹೋದ ಮೇಲೆ ನೀನು ದುಃಖವನ್ನು ಪಡಬೇಡ.

ಸೂತಃ

ಇತ್ಯುಕ್ತಾ ಸಾऽನವದ್ಯಾಂಗೀ ಪ್ರತ್ಯುವಾಚ ಪತಿಂ ತದಾ ।
ಜರತ್ಕಾರುಂ ಜರತ್ಕಾರುಃ ಚಿಂತಾಶೋಕಸಮನ್ವಿತಾ ॥೨೯॥

ಬಾಷ್ಪಗದ್ಗದಯಾ ವಾಚಾ ಮುಖೇನ ಪರಿಶುಷ್ಯತಾ ।
ಕೃತಾಂಜಲಿರ್ವರಾರೋಹಾ ಪರ್ಯಶ್ರುನಯನಾ ತತಃ ॥೩೦॥

ಹೀಗೆ ಹೇಳಲ್ಪಟ್ಟ ಆ ನಿರ್ದುಷ್ಟವಾದ ಶರೀರವುಳ್ಳ ಜರತ್ಕಾರುವು ಚಿಂತಾಶೋಕಗಳಿಂದ ಕೂಡಿದವಳಾಗಿ, ಬಾಷ್ಪಗದ್ಗದವಾದ ಕಂಠದಿಂದ ಮತ್ತು ಬಾಡಿದ ಮುಖದಿಂದ ಕೂಡಿದವಳಾಗಿ, ಕಣ್ಣುಗಳಲ್ಲಿ ನೀರನ್ನು ತುಂಬಿಕೊಂಡು ಸುಂದರಿಯಾದ ಆ ಜರತ್ಕಾರುವು ಕೈಗಳನ್ನು ಮುಗಿದು ಹೇಳಿದಳು.

ಧೈರ್ಯಮಾಲಂಭ್ಯ ವಾಮೋರುಃ ಹೃದಯೇನ ಪ್ರದೂಯತಾ ।
ನ ಮಾಮರ್ಹಸಿ ಧರ್ಮಜ್ಞ ಪರಿತ್ಯಕ್ತುಮನಾಗಸೀಮ್ ।
ಧರ್ಮೇ ಸ್ಥಿತಾಂ ಸ್ಥಿತೋ ಧರ್ಮೇ ಸದಾ ಪ್ರಿಯಹಿತೇ ರತಾಮ್ ॥೩೧॥

ಸುಂದರಿಯಾದ ಆ ಕನ್ಯೆಯು ಮನಸ್ಸಿನಲ್ಲಿ ಬಹಳ ದುಃಖವಿದ್ದರೂ, ಧೈರ್ಯವನ್ನು ತಂದುಕೊಂಡು ಪತಿಯನ್ನು ಕುರಿತು, ಧರ್ಮಜ್ಞನೇ, ನಿರಪರಾಧಿಯಾದ ನನ್ನನ್ನು ಪರಿತ್ಯಾಗ ಮಾಡಬೇಡ. ನಾನು ಯಾವಾಗಲೂ ಧರ್ಮದಲ್ಲೇ ಇದ್ದು, ಯಾವಾಗಲೂ ನಿನ್ನ ಪ್ರಿಯದಲ್ಲಿಯೂ, ಹಿತದಲ್ಲಿಯೂ ರತಳಾಗಿದ್ದೆನಷ್ಟೆ.

ಎಲೌ ಸರ್ಪಕುಮಾರಿಯೇ, ಅವಮಾನವಾದ ಸ್ಥಳದಲ್ಲಿ ಯಾರೂ ವಾಸವನ್ನು ಮಾಡಬಾರದು. ಹೀಗಿರುವಾಗ ನಾನಾಗಲೀ ಧರ್ಮಶೀಲನಾದ ನನ್ನಂತಹವನಾಗಲೀ ಹೇಗೆ ವಾಸಮಾಡಲು ಸಾಧ್ಯ ?

ಸೂತಃ

ಏವಮುಕ್ತಾ ಜರತ್ಕಾರುರ್ಭರ್ತ್ರಾ ಹೃದಯಕಂಪನಮ್ ।
ಅಬ್ರವೀದ್ ಭಗಿನೀ ತತ್ರ ವಾಸುಕೇಸ್ತು ನಿವೇಶನೇ ॥೨೪॥

ಹೀಗೆ ಪತಿಯಾದ ಜರತ್ಕಾರುವಿನಿಂದ ಹೃದಯವನ್ನು ನಡುಗಿಸುವ ಮಾತುಗಳನ್ನು ಕೇಳಿದ ವಾಸುಕಿಯ ತಂಗಿಯು ಆ ಗೃಹದಲ್ಲಿ ಅವನನ್ನು ಕುರಿತು ಮಾತನಾಡಿದಳು.

ನಾವಮಾನಾತ್ ಕೃತವತೀ ತವಾಹಂ ಪ್ರತಿಬೋಧನಮ್ ।
ಧರ್ಮಲೋಪೋ ನ ತೇ ವಿಪ್ರ ಸ್ಯಾದಿತ್ಯೇವಂ ಕೃತಂ ಮಯಾ ॥೨೫॥

ನಿನಗೆ ಅವಮಾನವನ್ನು ಮಾಡುವುದಕ್ಕೋಸ್ಕರ ನಾನು ನಿನ್ನನ್ನು ಎಬ್ಬಿಸಲಿಲ್ಲ. ಎಲೈ ಬ್ರಾಹ್ಮಣನೇ, ಎಬ್ಬಿಸದಿದ್ದರೆ ಧರ್ಮಲೋಪವಾಗುವುದು ಎಂಬ ಕಾರಣದಿಂದ ಹೀಗೆ ಮಾಡಿದೆ.

ಉವಾಚ ಭಾರ್ಯಾಮಿತ್ಯುಕ್ತೋ ಜರತ್ಕಾರುರ್ಮಹಾತಪಾಃ ।
ಋಷಿಃ ಕೋಪಸಮಾವಿಷ್ಟಃ ತ್ಯಕ್ತುಕಾಮೋ ಭುಜಂಗಮಾಮ್ ॥೨೬॥

ಪತ್ನಿಯಿಂದ ಹೀಗೆ ಹೇಳಲ್ಪಟ್ಟ ಮಹಾತಪಸ್ವಿಯಾದ ಜರತ್ಕಾರುವು ಸರ್ಪಕನ್ಯೆಯಾದ ಅವಳನ್ನು ಪರಿತ್ಯಾಗ ಮಾಡಲು ನಿಶ್ಚಯಿಸಿ, ಕೋಪದಿಂದ ಕೂಡಿದವನಾಗಿ ಅವಳನ್ನು ಕುರಿತು ಮಾತನಾಡಿದನು.

ನ ಮೇ ವಾಗನೃತಂ ಪ್ರಾಹ ಗಮಿಷ್ಯೇಽಹಂ ಭುಜಂಗಮೇ ।
ಸಮಯೋ ಹ್ಯೇಷ ಮೇ ಪೂರ್ವಂ ತ್ವಯಾ ಸಹ ಮಿಥಃ ಕೃತಃ ॥೨೭॥

ಎಲೌ ಸರ್ಪಿಣಿಯೇ, ನನ್ನ ಮಾತು ಎಂದೂ ಸುಳ್ಳಾಗುವುದಿಲ್ಲ. ನಾನು ಹೊರಟುಹೋಗುವೆನು. ನಾನು ಮೊದಲೇ ನಿನ್ನ ಜೊತೆಯಲ್ಲಿ ಈ ರೀತಿ ಒಪ್ಪಂದವನ್ನು ಮಾಡಿಕೊಂಡಿದ್ದೆನಷ್ಟೆ.

ಸುಖಮಧ್ಯುಷಿತೋ ಭದ್ರೇ ಬ್ರೂಯಾಸ್ತ್ವಂ ಭ್ರಾತರಂ ಶುಭೇ ।
ಇತೋ ಮಯಿ ಗತೇ ಭೀರು ಗತಃ ಸ ಭಗವಾನಿತಿ ।
ತ್ವಂ ಚಾಪಿ ಮಯಿ ನಿಷ್ಕ್ರಾಂತೇ ನ ಶೋಕಂ ಕರ್ತುಮರ್ಹಸಿ ॥೨೮॥

ಮಂಗಳಸ್ವರೂಪಳೇ, ನಾನು ನಿನ್ನ ಜೊತೆಯಲ್ಲಿ ಈ ಮನೆಯಲ್ಲಿ ಸುಖವಾಗಿ ವಾಸಮಾಡಿದೆ. ನಾನು ಹೊರಟುಹೋದ ಮೇಲೆ ನೀನು ನಿನ್ನ ಅಣ್ಣನಿಗೆ ಪೂಜ್ಯರು ಹೊರಟುಹೋದರು ಎಂದು ಹೇಳು. ಎಲೌ ಭೀರುವೇ, ನಾನು ಹೊರಟುಹೋದ ಮೇಲೆ ನೀನು ದುಃಖವನ್ನು ಪಡಬೇಡ.

ಸೂತಃ

ಇತ್ಯುಕ್ತಾ ಸಾऽನವದ್ಯಾಂಗೀ ಪ್ರತ್ಯುವಾಚ ಪತಿಂ ತದಾ ।
ಜರತ್ಕಾರುಂ ಜರತ್ಕಾರುಃ ಚಿಂತಾಶೋಕಸಮನ್ವಿತಾ ॥೨೯॥

ಬಾಷ್ಪಗದ್ಗದಯಾ ವಾಚಾ ಮುಖೇನ ಪರಿಶುಷ್ಯತಾ ।
ಕೃತಾಂಜಲಿರ್ವರಾರೋಹಾ ಪರ್ಯಶ್ರುನಯನಾ ತತಃ ॥೩೦॥

ಹೀಗೆ ಹೇಳಲ್ಪಟ್ಟ ಆ ನಿರ್ದುಷ್ಟವಾದ ಶರೀರವುಳ್ಳ ಜರತ್ಕಾರುವು ಚಿಂತಾಶೋಕಗಳಿಂದ ಕೂಡಿದವಳಾಗಿ, ಬಾಷ್ಪಗದ್ಗದವಾದ ಕಂಠದಿಂದ ಮತ್ತು ಬಾಡಿದ ಮುಖದಿಂದ ಕೂಡಿದವಳಾಗಿ, ಕಣ್ಣುಗಳಲ್ಲಿ ನೀರನ್ನು ತುಂಬಿಕೊಂಡು ಸುಂದರಿಯಾದ ಆ ಜರತ್ಕಾರುವು ಕೈಗಳನ್ನು ಮುಗಿದು ಹೇಳಿದಳು.

ಧೈರ್ಯಮಾಲಂಭ್ಯ ವಾಮೋರುಃ ಹೃದಯೇನ ಪ್ರದೂಯತಾ ।
ನ ಮಾಮರ್ಹಸಿ ಧರ್ಮಜ್ಞ ಪರಿತ್ಯಕ್ತುಮನಾಗಸೀಮ್ ।
ಧರ್ಮೇ ಸ್ಥಿತಾಂ ಸ್ಥಿತೋ ಧರ್ಮೇ ಸದಾ ಪ್ರಿಯಹಿತೇ ರತಾಮ್ ॥೩೧॥

ಸುಂದರಿಯಾದ ಆ ಕನ್ಯೆಯು ಮನಸ್ಸಿನಲ್ಲಿ ಬಹಳ ದುಃಖವಿದ್ದರೂ, ಧೈರ್ಯವನ್ನು ತಂದುಕೊಂಡು ಪತಿಯನ್ನು ಕುರಿತು, ಧರ್ಮಜ್ಞನೇ, ನಿರಪರಾಧಿಯಾದ ನನ್ನನ್ನು ಪರಿತ್ಯಾಗ ಮಾಡಬೇಡ. ನಾನು ಯಾವಾಗಲೂ ಧರ್ಮದಲ್ಲೇ ಇದ್ದು, ಯಾವಾಗಲೂ ನಿನ್ನ ಪ್ರಿಯದಲ್ಲಿಯೂ, ಹಿತದಲ್ಲಿಯೂ ರತಳಾಗಿದ್ದೆನಷ್ಟೆ.

ಪ್ರದಾನೇ ಕಾರಣಂ ಯಚ್ಚ ಮಮಂ ತುಭ್ಯಂ ದ್ವಿಜೋತ್ತಮ ।
ತದಲಬ್ಧವತೀಂ ಮಂದಾಂ ಕಿಂ ಮಾಂ ವಕ್ಷ್ಯತಿ ವಾಸುಕಿಃ ॥೩೨॥

ಎಲೈ ದ್ವಿಜೋತ್ತಮನೇ, ನನ್ನನ್ನು ನಿನಗೆ ವಿವಾಹ ಮಾಡಿಕೊಡಲು ಯಾವ ಪ್ರಯೋಜನದ ಉದ್ದೇಶವಿದ್ದಿತೋ, ನಾನು ಆ ಪ್ರಯೋಜನವನ್ನು ಪಡೆಯದಿದ್ದರೆ, ದೌರ್ಭಾಗ್ಯಶಾಲಿನಿಯಾದ ನನ್ನನ್ನು ಕುರಿತು ವಾಸುಕಿಯು ಏನು ಹೇಳುತ್ತಾನೆ?

ಮಾತೃಶಾಪಾಭಿಭೂತಾನಾಂ ಜ್ಞಾತೀನಾಂ ಮಮ ಸತ್ತಮ ।
ಅಪತ್ಯಮೀಪ್ಸಿತಂ ತ್ವತ್ತಃ ತಚ್ಚ ತಾವನ್ನ ದೃಶ್ಯತೇ ॥೩೩॥

ಎಲೈ ಸಜ್ಜನರಲ್ಲಿ ಶ್ರೇಷ್ಠನಾದವನೇ, ತಾಯಿಯ ಶಾಪಕ್ಕೆ ಒಳಗಾಗಿ ದುಃಖತಪ್ತರಾದ ನನ್ನ ಬಂಧುಗಳನ್ನು ಈ ದುಃಖದಿಂದ ದಾಟಿಸಲು ನಿನ್ನಿಂದ ನಾನು ಪುತ್ರಲಾಭವನ್ನು ಬಯಸಿದ್ದೆ. ಆದರೆ, ಅದರ ಯಾವ ಸೂಚನೆಯೂ ಕಾಣುತ್ತಿಲ್ಲ.

ತ್ವತ್ತೋ ಹ್ಯಪತ್ಯಲಾಭೇನ ಜ್ಞಾತೀನಾಂ ಮೇ ಸುಖಂ ಭವೇತ್ ।
ಸಂಪ್ರಯೋಗೋ ಭವೇನ್ನಾಯಂ ಮಮ ಮೋಘಸ್ತ್ವಯಾ ದ್ವಿಜ ।
ಜ್ಞಾತೀನಾಂ ಹಿತಮಿಚ್ಛಂತೀ ಭಗವಂಸ್ತ್ವಾಂ ಪ್ರಸಾದಯೇ ॥೩೪॥

ನಿನ್ನಿಂದ ನಾನು ಒಬ್ಬ ಮಗನನ್ನು ಪಡೆದರೆ, ನನ್ನ ಬಂಧುಗಳಿಗೆ ಸುಖವಾದೀತು. ಎಲೈ ಬ್ರಾಹ್ಮಣನೇ, ನನಗೆ ಉಂಟಾದ ನಿನ್ನ ಸಮಾಗಮವು ಎಂದೂ ವ್ಯರ್ಥವಾಗಬಾರದಷ್ಟೆ? ಪೂಜ್ಯನೇ, ಬಂಧುಗಳ ಹಿತವನ್ನು ಬಯಸುವ ನಾನು ನೀನು ಪ್ರಸನ್ನನಾಗು ಎಂದು ಪ್ರಾರ್ಥಿಸುತ್ತಿದ್ದೇನೆ.

ಇಮಮವ್ಯಕ್ತರೂಪಂ ಮೇ ಗರ್ಭಮಾಧಾಯ ಸತ್ತಮ ।
ಕಥಂ ತ್ಯಕ್ತ್ವಾ ಮಹಾಭಾಗ ಗಂತುಮಿಚ್ಛಸ್ಯನಾಗಸೀಮ್ ॥೩೫॥

ಎಲೈ ಸಜ್ಜನರಲ್ಲಿ ಶ್ರೇಷ್ಠನಾದವನೇ, ನನ್ನಲ್ಲಿ ಅವ್ಯಕ್ತವಾದ ಗರ್ಭವನ್ನು ಆಧಾನಮಾಡಿ ನಿರಪರಾಧಿಯಾದ ನನ್ನನ್ನು ಬಿಟ್ಟು ನೀನು ಹೇಗೆ ಹೋಗಲು ಇಚ್ಛಿಸುತ್ತೀಯೆ.

(ಈ ಶ್ಲೋಕವು ಬಹಳ ಕೋಶಗಳಲ್ಲಿ ಕಂಡುಬರುವುದಿಲ್ಲ.)

ಸೂತಃ

ಏವಮುಕ್ತಸ್ತು ಸ ಮುನಿರ್ಭಾರ್ಯಾಂ ವಚನಮಬ್ರವೀತ್ ।
ಯದ್ ಯುಕ್ತಮನುರೂಪಂ ಚ ಜರತ್ಕಾರುಂ ತಪೋಧನಃ ॥೩೬॥

ಪತ್ನಿಯಿಂದ ಹೀಗೆ ಹೇಳಲ್ಪಟ್ಟ ತಪೋಧನನಾದ ಜರತ್ಕಾರುವು ಅವಳನ್ನು ಕುರಿತು ಯುಕ್ತವೂ ಅನುರೂಪವೂ ಆದ ಈ ಮಾತನ್ನು ಆಡಿದನು.

ಅಸ್ತ್ಯೇಷ ಗರ್ಭಃ ಸುಭಗೇ ತವ ವೈಶ್ವಾನರೋಪಮಃ ।
ಋಷಿಃ ಪರಮಧರ್ಮಾತ್ಮಾ ವೇದವೇದಾಂಗಪಾರಗಃ ॥೩೭॥

ಸುಂದರಿಯೇ, ನಿನ್ನ ಗರ್ಭದಲ್ಲಿ ಅಗ್ನಿಸದೃಶನಾದ, ವೇದವೇದಾಂಗ ಪಾರಂಗತನಾದ, ಪರಮ ಧರ್ಮಾತ್ಮನಾದ ಒಬ್ಬ ಋಷಿ ಇದ್ದಾನೆ.

ಏವಮುಕ್ತ್ವಾ ಸ ಧರ್ಮಾತ್ಮಾ ಜರತ್ಕಾರುರ್ಮಹಾಮುನಿಃ ।
ವಿಹಾಯ ತಪಸೇ ಭೂಯೋ ಜಗಾಮ ಕೃತನಿಶ್ಚಯಃ ॥೩೮॥

ಹೀಗೆ ಹೇಳಿ ಧರ್ಮಾತ್ಮನಾದ ಜರತ್ಕಾರು ಮಹಾಮುನಿಯು ಪುನಃ ತಪಸ್ಸು ಮಾಡುವುದೆಂದೇ ನಿರ್ಧರಿಸಿ ಅಲ್ಲಿಂದ ಹೊರಟನು.

॥ ಇತಿ ಶ್ರೀಮನ್ಮಹಾಭಾರತೇ ಶತಸಹಸ್ರಿಕಾಯಾಂಸಂಹಿತಾಯಾಮಾದಿಪರ್ವಣಿ
ದ್ವಿಚತ್ವಾರಿಂಶೋऽಧ್ಯಾಯಃ ॥

॥ ಇತಿ ಆಸ್ತೀಕಪರ್ವಣಿ ತ್ರಿಂಶೋऽಧ್ಯಾಯಃ ॥

ಇಲ್ಲಿಗೆ ಮಹಾಭಾರತದ ಆದಿಪರ್ವದಲ್ಲಿ ನಲವತ್ತೆರಡನೆಯ ಅಧ್ಯಾಯ ಮುಗಿಯಿತು.

★★★★★

ನಲವತ್ಮೂರನೆಯ ಅಧ್ಯಾಯ

(ತಂಗಿಯಿಂದ ವಾಸುಕಿಗೆ ವೃತ್ತಾಂತ ಕಥನ. ಗರ್ಭೋತ್ಪತ್ತಿ ಶ್ರವಣದಿಂದ ವಾಸುಕಿಯ ಹರ್ಷ. ಆಸ್ತೀಕನ ಉತ್ಪತ್ತಿ.)

ಸೂತಃ

ಗತಮಾತ್ರಂ ತು ಭರ್ತಾರಂ ಜರತ್ಕಾರುರವೇದಯತ್ ।
ಭ್ರಾತುಸ್ತ್ವರಿತಮಾಗಮ್ಯ ಯಥಾತಥ್ಯಂ ತಪೋಧನ ॥೧॥

ಎಲೈ ತಪೋಧನನೇ, ಪತಿಯು ಹೊರಟುಹೋಗುತ್ತಿರಲು ಜರತ್ಕಾರುವು ಶೀಘ್ರವಾಗಿ ಬಂದು ಅಣ್ಣನಿಗೆ ನಡೆದ ಸಂಗತಿಯನ್ನು ತಿಳಿಸಿದಳು.

ತದಾ ಸ ಭುಜಗಶ್ರೇಷ್ಠಃ ಶ್ರುತ್ವಾ ಸುಮಹದಪ್ರಿಯಮ್ ।
ಉವಾಚ ಭಗಿನೀಂ ದೀನಾಂ ತಥಾ ದೀನತರಃ ಸ್ವಯಮ್ ॥೨॥

ಆಗ ಆ ಭುಜಗಶ್ರೇಷ್ಠನು ಅತ್ಯಂತ ಅಪ್ರಿಯವಾದ ಆ ವಾರ್ತೆಯನ್ನು ಕೇಳಿ, ತಂಗಿಗಿಂತಲೂ ದೀನನಾಗಿ ದೀನಳಾದವಳನ್ನು ಕುರಿತು ಮಾತನಾಡಿದನು.

ವಾಸುಕಿಃ

ಜಾನಾಸಿ ಭದ್ರೇ ಯತ್ ಕಾರ್ಯಂ ಪ್ರದಾನೇ ಕಾರಣಂ ಚ ಯತ್ ।
ಪನ್ನಗಾನಾಂ ಹಿತಾರ್ಥಾಯ ಪುತ್ರಃ ಸ್ಯಾತ್ ತೇ ತತೋ ಯದಿ ॥೩॥

ಸ ಸರ್ಪಸತ್ರಾತ್ ಕಿಲ ನೋ ಮೋಕ್ಷಯಿಷ್ಯತಿ ವೀರ್ಯವಾನ್ ।
ಏವಂ ಪಿತಾಮಹಃ ಪೂರ್ವಮ್ ಉಕ್ತವಾನ್ ಮಾಂ ಸುರೈಃ ಸಹ ॥೪॥

ಮಂಗಳಸ್ವರೂಪಳೇ, ನಿನ್ನನ್ನು ಅವನಿಗೆ ಮದುವೆ ಮಾಡಿಕೊಡಲು ಏನು ಉದ್ದೇಶವೆಂದು ತಿಳಿದಿರುವಿಯಷ್ಟೆ. ನಿನಗೆ ಸರ್ಪಗಳ ಹಿತಕ್ಕೋಸ್ಕರವಾಗಿ ಅವನಿಂದ ಒಬ್ಬಪುತ್ರನು ಜನಿಸಿದರೆ, ವೀರ್ಯಶಾಲಿಯಾದ ಆ ಪುತ್ರನು ಸರ್ಪಸತ್ರದಿಂದ ನಮ್ಮನ್ನು

ವಿಮೋಚನೆಗೊಳಿಸುವನು. ಹೀಗೆ ಬ್ರಹ್ಮದೇವರು ದೇವತೆಗಳ ಜೊತೆಯಲ್ಲಿದ್ದ ನನ್ನನ್ನು ಕುರಿತು ಹಿಂದೆ ಹೇಳಿದ್ದರು.

ಅಪ್ಯಸ್ತಿ ಗರ್ಭಃ ಸುಭಗೇ ತಸ್ಮಾತ್ ತೇ ಮುನಿಸತ್ತಮಾತ್ ।
ನ ಚೇಚ್ಛಾಮ್ಯಫಲಂ ತಸ್ಯ ದಾರಕರ್ಮ ಮನೀಷಿಣಃ ॥೫॥

ಸೌಭಾಗ್ಯಶಾಲಿನಿಯೇ, ಆ ಶ್ರೇಷ್ಠವಾದ ಮುನಿಗಳಿಂದ ನಿನಗೇನಾದರೂ ಗರ್ಭವು ಉಂಟಾಗಿದೆಯೇ? ಮೇಧಾವಿಯಾದ ಅವನು ಮಾಡಿಕೊಂಡ ವಿವಾಹಕರ್ಮವು ನಿಷ್ಫಲವಾಗುವುದೆಂದು ನಾನು ಎಣಿಸುವುದಿಲ್ಲ.

ಕಾಮಂ ಚ ಮಮ ನ ನ್ಯಾಯ್ಯಂ ಪ್ರಷ್ಟುಂ ತ್ವಾಂ ಕಾರ್ಯಮೀದೃಶಮ್ ।
ಕಿಂತು ಕಾರ್ಯಗರೀಯಸ್ತ್ವಾತ್ ತಸ್ಮಾದಹಮಚೂಚುದಮ್ ॥೬॥

ನಾನು ನಿನ್ನನ್ನು ಕುರಿತು ಇಂತಹ ಪ್ರಶ್ನೆಯನ್ನು ಕೇಳುವುದು ಖಂಡಿತವಾಗಿ ನ್ಯಾಯವಲ್ಲ. ಆದರೂ ಮುಂದಾಗಬೇಕಾದ ಕಾರ್ಯದ ಗೌರವದಿಂದ ನಾನು ಈ ಪ್ರಶ್ನೆಯನ್ನು ಕೇಳಿದೆ.

ದುರ್ವಾಸತಾಂ ವಿದಿತ್ವಾ ಚ ಭರ್ತುಸ್ತೇಽತಿತಪಸ್ವಿನಃ ।
ನೈನಮನ್ವಾಗಮಿಷ್ಯಾಮಿ ಕದಾಚಿದ್ಧಿ ಶಪೇತ್ ಸ ಮಾಮ್ ॥೭॥

ಅತಿ ತಪಸ್ವಿಯಾದ ನಿನ್ನ ಪತಿಯು ಎಲ್ಲಾ ಸ್ಥಳಗಳಲ್ಲಿಯೂ ಕಷ್ಟದಿಂದ ವಾಸಿಸುವುದನ್ನು ತಿಳಿದು ನಾನು ಅವನನ್ನು ಹಿಂಬಾಲಿಸುವುದಿಲ್ಲ. ಅವನು ಒಂದುಪಕ್ಷ ನನಗೆ ಶಾಪವನ್ನೂ ಕೊಡಬಹುದು.

ಆಚಕ್ಷ್ವ ಭದ್ರೇ ಭರ್ತುಸ್ತ್ವಂ ಸರ್ವಮೇವ ವಿಚೇಷ್ಟಿತಮ್ ।
ಶಲ್ಯಮುದ್ಧರ ಮೇ ಘೋರಮಿದಂ ಹೃದಯಸಂಸ್ಥಿತಮ್ ॥೮॥

ಮಂಗಳಸ್ವರೂಪಳೇ, ನಿನ್ನ ಪತಿಯ ಎಲ್ಲಾ ನಡವಳಿಕೆಯನ್ನೂ ನನಗೆ ಹೇಳು. ನನ್ನ ಹೃದಯದಲ್ಲಿ ಶಲ್ಯದಂತೆ ನಾಟಿರುವ ಈ ಘೋರವಾದ ಚಿಂತೆಯನ್ನು ದೂರಮಾಡು.

ಸೂತಃ

ಜರತ್ಕಾರುಸ್ತತೋ ವಾಕ್ಯಮ್ ಇತ್ಯುಕ್ತಾ ಪ್ರತ್ಯುವಾಚ ಹ ।
ಆಶ್ವಾಸಯಂತೀ ಸಂತಪ್ತಂ ವಾಸುಕಿಂ ಪನ್ನಗೋತ್ತಮಮ್ ॥೯॥

ಹೀಗೆ ಹೇಳಲ್ಪಟ್ಟ ಜರತ್ಕಾರುವು ಸಂತಪ್ತನಾಗಿದ್ದ ಪನ್ನಗಶ್ರೇಷ್ಠನಾದ ವಾಸುಕಿಯನ್ನು ಸಮಾಧಾನಮಾಡುತ್ತಾ ಹೀಗೆ ಉತ್ತರವನ್ನು ಕೊಟ್ಟಳಷ್ಟೆ.

ಜರತ್ಕಾರುಃ

ಪೃಷ್ಟೋ ಮಯಾऽಪತ್ಯಹೇತೋಃ ಸ ಮಹಾತ್ಮಾ ಮಹಾತಪಾಃ ।
ಅಸ್ತೀತ್ಯುದರಮುದ್ದಿಶ್ಯ ಮಮೇದಂ ಗತವಾಂಶ್ಚ ಸಃ ॥೧೦॥

ನಾನು ಪುತ್ರನ ವಿಷಯದಲ್ಲಿ ಪ್ರಶ್ನೆಯನ್ನು ಮಾಡಿದಾಗ ಮಹಾತ್ಮರಾದ ಆ ತಪಸ್ವಿಗಳು ನನ್ನ ಉದರವನ್ನು ತೋರಿಸಿ ಇದೆ ಎಂದು ಹೇಳಿ ಹೊರಟುಹೋದರು.

ನೈವರೇಷ್ವಪಿ ತತೋ ನಾಹಂ ಸ್ಮರಾಮಿ ವಿತಥಂ ಕ್ವಚಿತ್ ।
ಉಕ್ತಪೂರ್ವಂ ಕುತೋ ವಾಕ್ಯಂ ಸಾಂಪರಾಯೇ ಸ ವಕ್ಷ್ಯತಿ ॥೧೧॥

ಅವರು ನನ್ನ ಜೊತೆಯಲ್ಲಿ ವಿನೋದ ಸಂದರ್ಭಗಳಲ್ಲಿಯೂ ಸುಳ್ಳು ಮಾತನ್ನು ಆಡಿಲ್ಲ. ಹೀಗಿರುವಾಗ ನನ್ನನ್ನು ಬಿಟ್ಟುಹೊರಡುವ ಕಾಲದಲ್ಲಿ ಒಳ್ಳೆಯ ವಾಕ್ಯವನ್ನು ಹೇಳುವ ಸಂದರ್ಭವಿರುವಾಗ ಏಕೆ ಅವರು ಸುಳ್ಳನ್ನು ಹೇಳುತ್ತಾರೆ?

ನ ಸಂತಾಪಸ್ತ್ವಯಾ ಕಾರ್ಯಃ ಕಾರ್ಯಂ ಪ್ರತಿ ಭುಜಂಗಮೇ ।
ಉತ್ಪತ್ಸ್ಯತಿ ಹಿ ಮೇ ಪುತ್ರೋ ಜ್ವಲನಾರ್ಕಸಮದ್ಯುತಿಃ ॥೧೨॥

ಎಲೌ ಸರ್ಪಿಣಿಯೇ, ನಿನ್ನ ಉದ್ದೇಶದ ಬಗ್ಗೆ ಸಂತಾಪ ಪಡಬೇಡ. ನಿನಗೆ ಜ್ವಲಿಸುವ ಅಗ್ನಿಯ ಸಮಾನವಾದ ಕಾಂತಿಯುಳ್ಳ ಒಬ್ಬ ಪುತ್ರನು ಜನಿಸುವನು.

ಇತ್ಯುಕ್ತ್ವಾ ಹಿ ಸ ಮಾಂ ಭ್ರಾತರ್ಗತೋ ಭರ್ತಾ ತಪೋಧನಃ ।
ತಸ್ಮಾದ್ ವ್ಯೇತು ಪರಂ ದುಃಖಿಂ ತವೇದಂ ಮನಸಿ ಸ್ಥಿತಮ್ ॥೧೩॥

ಅಣ್ಣನೇ, ಹೀಗೆ ಹೇಳಿ ಆ ತಪೋಧನನಾದ ಆ ನನ್ನ ಪತಿಯು ಹೊರಟುಹೋದನು. ಆದ್ದರಿಂದ ನಿನ್ನ ಮನಸ್ಸಿನಲ್ಲಿ ಇರುವ ಈ ದುಃಖವನ್ನು ಪರಿತ್ಯಜಿಸು.

ಸೂತಃ

ಏತಚ್ಛ್ರುತ್ವಾ ಸ ನಾಗೇಂದ್ರೋ ವಾಸುಕಿಃ ಪರಯಾ ಮುದಾ ।
ಏವಮಸ್ತ್ವಿತಿ ತದ್ವಾಕ್ಯಂ ಭಗಿನ್ಯಾಃ ಪ್ರತ್ಯಗೃಹ್ಣತ ॥೧೪॥

ಈ ಮಾತುಗಳನ್ನು ಕೇಳಿದ ನಾಗೇಂದ್ರನಾದ ವಾಸುಕಿಯು ಬಹಳ ಸಂತೋಷದಿಂದ ಕೂಡಿದವನಾಗಿ, ನೀನು ಹೇಳಿದಂತೆಯೇ ಆಗಲಿ ಎಂದು ತಂಗಿಯ ಮಾತುಗಳನ್ನು ಸ್ವೀಕರಿಸಿದನು.

ಸಾಂತ್ವಮಾನಾರ್ಥದಾನೈಶ್ಚ ಪೂಜಯಾ ಚಾನುರೂಪಯಾ ।
ಸೋದರ್ಯಾಂ ಪೂಜಯಾಮಾಸ ಸ್ವಸಾರಂ ಪನ್ನಗೋತ್ತಮಃ ॥೧೫॥

ಪನ್ನಗಶ್ರೇಷ್ಠನಾದ ವಾಸುಕಿಯು ಅನುರೂಪವಾದ ಸಮಾಧಾನದ ಮಾತುಗಳು, ಸಮ್ಮಾನ ಮತ್ತು ಅರ್ಥದಾನಗಳಿಂದ ತನ್ನ ತಂಗಿಯನ್ನು ಸತ್ಕರಿಸಿದನು.

ತತಃ ಪ್ರವವೃಧೇ ಗರ್ಭೋ ವೈಶ್ವಾನರಸಮಪ್ರಭಃ ।
ಯಥಾ ಸೋಮೋ ದ್ವಿಜಶ್ರೇಷ್ಠ ಶುಕ್ಲಪಕ್ಷೋದಿತೋ ದಿವಿ ॥೧೬॥

ಎಲೈ ದ್ವಿಜಶ್ರೇಷ್ಠನೇ, ಅನಂತರ ವೈಶ್ವಾನರನಿಗೆ ಸಮಾನವಾದ ಕಾಂತಿಯುಳ್ಳ ಆ ಗರ್ಭವು, ಶುಕ್ಲಪಕ್ಷದಲ್ಲಿ ಆಕಾಶದಲ್ಲಿ ಉದಯಿಸುವ ಚಂದ್ರನಂತೆ ದಿನೇ ದಿನೇ ಅಭಿವೃದ್ಧಿಯನ್ನು ಹೊಂದಿತು.

ಯಥಾಕಾಲಂ ತು ಸಾ ಬ್ರಹ್ಮನ್ ಪ್ರಜಜ್ಞೇ ಭುಜಗಸ್ವಸಾ ।
ಕುಮಾರಂ ದೇವಗರ್ಭಾಭಂ ಪಿತೃಮಾತೃಭಯಾಪಹಮ್ ॥೧೭॥

ಎಲೈ ಬ್ರಾಹ್ಮಣನೇ, ವಾಸುಕಿಯ ತಂಗಿಯಾದ ಜರತ್ಕಾರುವು ಯೋಗ್ಯವಾದ ಕಾಲದಲ್ಲಿ ದೇವಕುಮಾರನಂತೆ ಕಂಗೊಳಿಸುವ, ತಂದೆತಾಯಿಗಳ ಭಯವನ್ನು ಹೋಗಲಾಡಿಸುವ ಒಬ್ಬ ಸುಪುತ್ರನನ್ನು ಪಡೆದಳು.

ವವೃಧೇ ಸ ಚ ತತ್ರೈವ ನಾಗರಾಜನಿವೇಶನೇ ।
ವೇದಾಂಶ್ಚಾಧ್ಯಗಮೌ ಸಾಂಗಾನ್ ಭಾರ್ಗವಚ್ಯವನಾದ್ ದ್ವಿಜಾತ್ ॥

ಆ ಕುಮಾರನು ನಾಗರಾಜನಾದ ವಾಸುಕಿಯ ಗೃಹದಲ್ಲಿಯೇ ಬೆಳೆದನು. ಭಾರ್ಗವಚ್ಯವನ ವಂಶದ ಒಬ್ಬ ಬ್ರಾಹ್ಮಣರಿಂದ ಸಾಂಗವಾದ ವೇದಗಳ ಅಧ್ಯಯನವನ್ನೂ ಮಾಡಿದನು.

ಚರಿತವ್ರತೋ ಬಾಲ ಏವ ಬುದ್ಧಿಸತ್ತ್ವಸಮನ್ವಿತಃ ।
ನಾಮ ತಸ್ಯಾಭವತ್ ಖ್ಯಾತಂ ಲೋಕೇಷ್ವಸ್ತೀಕ ಇತ್ಯುತ ॥೧೯॥

ಬಾಲ್ಯದಿಂದಲೇ ವ್ರತಗಳನ್ನು ಆಚರಿಸುವ ಅವನು ಬುದ್ಧಿಮತ್ತು ಸದ್ಗುಣಗಳಿಂದ ಕೂಡಿದವನಾಗಿದ್ದನು ಮತ್ತು ಲೋಕದಲ್ಲಿ ಅವನಿಗೆ ಅಸ್ತೀಕ (ಆಸ್ತೀಕ) ಎಂಬ ಹೆಸರು ಪ್ರಖ್ಯಾತವಾಯಿತು.

ಅಸ್ತೀತ್ಯುಕ್ತ್ವಾ ಗತೋ ಯಸ್ಮಾತ್ ಪಿತಾ ಗರ್ಭಸ್ಥಮೇವ ತಮ್ ।
ಏವಂ ತಸ್ಮಾದಿದಂ ತಸ್ಯ ನಾಮಾಸ್ತಿಕೇತಿ ವಿಶ್ರುತಮ್ ॥೨೦॥

ಅವನ ತಂದೆಯು ಗರ್ಭದಲ್ಲಿದ್ದ ಅವನನ್ನು ಕುರಿತು 'ಅಸ್ತಿ' ಎಂದು ಹೇಳಿ ಹೊರಟುಹೋದ ಕಾರಣದಿಂದ ಅವನಿಗೆ ಅಸ್ತೀಕನೆಂಬ ಹೆಸರೇ ಪ್ರಸಿದ್ಧವಾಯಿತು.

ಸ ಬಾಲ ಏವ ತತ್ರಸ್ಥಃ ಚರನ್ನಮಿತ ಬುದ್ಧಿಮಾನ್ ।
ಗೃಹೇ ಪನ್ನಗರಾಜಸ್ಯ ಪ್ರಯತ್ನಾತ್ತಪ್ರ್ಯರಕ್ಷ್ಯತ ॥೨೧॥

ಅಮಿತ ಮೇಧಾವಿಯಾದ ಅವನು ಸರ್ಪರಾಜನಾದ ವಾಸುಕಿಯ ಮನೆಯಲ್ಲಿಯೇ ಇದ್ದವನಾಗಿ, ಪ್ರಯತ್ನಪೂರ್ವಕವಾಗಿ ವಾಸುಕಿಯಿಂದ ರಕ್ಷಿಸಲ್ಪಟ್ಟನು.

ಭಗವಾನಿವ ದೇವೇಶಃ ಶೂಲಪಾಣಿರಿವ ಪ್ರಭುಃ ।
ವಿವರ್ಧಮಾನಃ ಸರ್ವಾಂಸ್ತಾನ್ ಪನ್ನಗಾನಭ್ಯಹರ್ಷಯತ್ ॥೨೨॥

ದೇವತೆಗಳ ಒಡೆಯನಾದ ಬ್ರಹ್ಮನಂತೆ, ಶೂಲಪಾಣಿಯಾದ ಪ್ರಭುವಾದ ರುದ್ರದೇವರಂತೆ, ಬೆಳೆಯುತ್ತಿದ್ದ ಅವನು ಎಲ್ಲಾ ಸರ್ಪಗಳಿಗೂ ಸಂತೋಷವನ್ನುಂಟು ಮಾಡಿದನು.

॥ ಇತಿ ಶ್ರೀಮನ್ಮಹಾಭಾರತೇ ಶತಸಹಸ್ರಿಕಾಯಾಂಸಂಹಿತಾಯಾಮಾದಿಪರ್ವಣಿ
ತ್ರಿಚತ್ವಾರಿಂಶೋऽಧ್ಯಾಯಃ ॥

॥ ಇತಿ ಆಸ್ತೀಕಪರ್ವಣಿ ಏಕತ್ರಿಂಶೋऽಧ್ಯಾಯಃ ॥

ಇಲ್ಲಿಗೆ ಮಹಾಭಾರತದ ಆದಿಪರ್ವದಲ್ಲಿ ನಲವತ್ಮೂರನೆಯ ಅಧ್ಯಾಯ ಮುಗಿಯಿತು.

★★★★★

ನಲವತ್ತನಾಲ್ಕನೆಯ ಅಧ್ಯಾಯ

(ಪರೀಕ್ಷಿದ್ರಾಜನ ಮರಣವಿಷಯದಲ್ಲಿ ಮಂತ್ರಿಗಳನ್ನು ಕುರಿತು ಜನಮೇಜಯನ ಪ್ರಶ್ನೆ. ಮಂತ್ರಿಗಳ ಉತ್ತರ.)

ಶೌನಕಃ

ಯದಪೃಚ್ಛತ್ ತದಾ ರಾಜಾ ಮಂತ್ರಿಣೋ ಜನಮೇಜಯಃ ।
ಪಿತುಃ ಸ್ವರ್ಗಗತಿಂ ತನ್ಮೇ ವಿಸ್ತರೇಣ ಪುನರ್ವದ ॥೧॥

ಜನಮೇಜಯರಾಜನು ಮಂತ್ರಿಗಳನ್ನು ಕುರಿತು ತನ್ನ ತಂದೆಯ ಮರಣದ ಬಗ್ಗೆ ಕೇಳಿದ ಸಂಗತಿಯನ್ನು ನನಗೆ ವಿಸ್ತಾರವಾಗಿ ಇನ್ನೊಮ್ಮೆ ಹೇಳು.

ಸೂತಃ

ಶೃಣು ಬ್ರಹ್ಮನ್ ಯಥಾಪೃಷ್ಟಾ ಮಂತ್ರಿಣೋ ನೃಪತೇಸ್ತದಾ ।
ಆಖ್ಯಾತವಂತಸ್ತೇ ಸರ್ವೇ ನಿಧನಂ ತತ್ ಪರೀಕ್ಷಿತಃ ॥೨॥

ಎಲೈ ಬ್ರಾಹ್ಮಣನೇ, ರಾಜನಿಂದ ಕೇಳಲ್ಪಟ್ಟ ಮಂತ್ರಿಗಳು ಅವನ ಪ್ರಶ್ನೆಗೆ ಅನುಗುಣವಾಗಿ ಪರೀಕ್ಷಿದ್ರಾಜನ ನಿಧನವನ್ನು ಹೇಗೆ ಹೇಳಿದರು ಎಂಬುದನ್ನು ಕೇಳು.

ಜನಮೇಜಯಃ

ಜಾನಂತಿ ತು ಭವಂತಸ್ತದ್ ಯಥಾವೃತ್ತಃ ಪಿತಾ ಮಮ ।
ಆಸೀದ್ ಯಥಾ ಸ ನಿಧನಂ ಗತಃ ಕಾಲೇ ಮಹಾಯಶಾಃ ॥೩॥

ನೀವೆಲ್ಲರೂ ನನ್ನ ತಂದೆಯು ಎಂತಹ ನಡತೆಯಿಂದ ಕೂಡಿದ್ದನೆಂದೂ, ಮಹಾಕೀರ್ತಿವಂತನಾದ ಅವನಿಗೆ ಕಾಲಕ್ರಮದಲ್ಲಿ ಮೃತ್ಯುವು ಹೇಗೆ ಉಂಟಾಯಿತು ಎಂಬುದನ್ನೂ ತಿಳಿದಿದ್ದೀರಿ.

ಶ್ರುತ್ವಾ ಭವತ್ಸಕಾಶಾದ್ಧಿ ಪಿತುರ್ವಧಮಶೇಷತಃ ।
ಕಲ್ಯಾಣಂ ಪ್ರತಿಪತ್ಸ್ಯಾಮಿ ವಿಪರೀತಂ ನ ಜಾತುಚಿತ್ ॥೪॥

ನಿಮ್ಮ ಮುಖದಿಂದ ತಂದೆಯ ವಧೆಯನ್ನು ಸಂಪೂರ್ಣವಾಗಿ ಕೇಳಿ, ಅನಂತರ ಮಂಗಳವಾದ ಯಾವ ಕಾರ್ಯವನ್ನು ಮಾಡಬೇಕೆಂದು ನಿರ್ಧರಿಸುವೆನು. ಅದಕ್ಕೆ ವಿಪರೀತವಾಗಿ ಎಂದರೆ ಅದನ್ನು ತಿಳಿಯದೆ ಏನನ್ನೂ ಮಾಡುವುದಿಲ್ಲ.

ಸೂತಃ

ಮಂತ್ರಿಣೋಽಥಾಬ್ರುವನ್ ವಾಕ್ಯಂ ಪೃಷ್ಟಾಸ್ತೇನ ಮಹಾತ್ಮನಾ ।
ಸರ್ವಧರ್ಮವಿದಃ ಪ್ರಾಜ್ಞಾ ರಾಜಾನಂ ಜನಮೇಜಯಮ್ ॥೫॥

ಮಹಾತ್ಮನಾದ ರಾಜನಿಂದ ಪ್ರಶ್ನೆ ಮಾಡಲ್ಪಟ್ಟ, ಸರ್ವಧರ್ಮಜ್ಞರಾದ, ಪ್ರಾಜ್ಞರಾದ ಅವನ ಮಂತ್ರಿಗಳು ಜನಮೇಜಯರಾಜನನ್ನುಕುರಿತು ಅನಂತರ ಮಾತನಾಡಿದರು.

ಶೃಣು ಪಾರ್ಥಿವ ಯದ್ರೂಪಂ ಪಿತುಸ್ತವ ಮಹಾತ್ಮನಃ ।
ಚರಿತಂ ಪಾರ್ಥಿವೇಂದ್ರಸ್ಯ ಯಥಾ ಸ ನಿಧನಂ ಗತಃ ॥ ೬॥

ಎಲೈ ರಾಜನೇ, ಮಹಾತ್ಮನಾದ ನಿನ್ನ ತಂದೆಯ ಆಕೃತಿಯನ್ನೂ, ಪಾರ್ಥಿವೇಂದ್ರನಾದ ಅವನ ಚರಿತ್ರೆಯನ್ನೂ ಮತ್ತು ಅವನು ಹೇಗೆ ನಿಧನ ಹೊಂದಿದನು ಎಂಬ ವಿಷಯವನ್ನೂ ಕೇಳು.

ಮಂತ್ರಿಣಃ

ಧರ್ಮಾತ್ಮಾ ಚ ಮಹಾತ್ಮಾ ಚ ಪ್ರಜಾಪಾಲಃ ಪಿತಾ ತವ ।
ಆಸೀದಿಹ ಯಥಾವೃತ್ತಃ ಸ ಮಹಾತ್ಮಾ ಶೃಣುಷ್ವ ತತ್ ॥೭॥

ಧರ್ಮಾತ್ಮನೂ, ಮಹಾತ್ಮನೂ, ಪ್ರಜಾಪಾಲಕನೂ ಆದ ನಿನ್ನ ತಂದೆಯು ಎಂತಹ ನಡತೆಯಿಂದ ಕೂಡಿದ್ದನು ಎಂಬುದನ್ನು ಕೇಳು.

ಚಾತುರ್ವರ್ಣ್ಯಂ ಸ್ವಧರ್ಮಸ್ಥಂ ಕೃತ್ವಾ ತತ್ ಪರ್ಯರಕ್ಷತ ।
ಧರ್ಮತೋ ಧರ್ಮವಿದ್ ರಾಜಾ ಧರ್ಮೋ ವಿಗ್ರಹವಾನಿವ ॥೮॥

ಚಾತರ್ವರ್ಣ್ಯವನ್ನು, ತಮ್ಮ ತಮ್ಮ ಧರ್ಮಗಳನ್ನು ಅನುಷ್ಠಾನವನ್ನು ಮಾಡುವವರನ್ನಾಗಿ ಮಾಡಿ, ಧರ್ಮವನ್ನು ತಿಳಿದ ಆ ರಾಜನು ಶರೀರವನ್ನು ಧರಿಸಿದ ಧರ್ಮದಂತೆ ಧರ್ಮದಿಂದಲೇ ಎಲ್ಲರನ್ನೂ ರಕ್ಷಿಸಿದನು.

ಅರಕ್ಷತ್ ಪೃಥಿವೀಂ ದೇವೀಂ ಶ್ರೀಮಾನತುಲವಿಕ್ರಮಃ ।
ದ್ವೇಷ್ಟಾರಸ್ತಸ್ಯ ನೈವಾಸನ್ ಸ ಚ ನ ದ್ವೇಷ್ಟಿ ಕಂಚನ ॥೯॥

ಅತುಲ ಪರಾಕ್ರಮಿಯಾದ, ಕಾಂತಿಯುಕ್ತನಾದ ಅವನು ದೇವಿಯಾದ ಭೂಮಿಯನ್ನು ರಕ್ಷಿಸಿದನು. ಅವನನ್ನು ಯಾರೂ ದ್ವೇಷಿಸುತ್ತಿರಲಿಲ್ಲ. ಅವನೂ ಸಹ ಯಾರನ್ನೂ ದ್ವೇಷಿಸುತ್ತಿರಲಿಲ್ಲ.

ಸಮಃ ಸರ್ವೇಷು ಭೂತೇಷು ಪ್ರಜಾಪ್ರತಿರಿವಾಭವತ್ ।
ಬ್ರಾಹ್ಮಣಾಃ ಕ್ಷತ್ರಿಯಾ ವೈಶ್ಯಾಃ ಶೂದ್ರಾಶ್ಚೈವ ಸ್ವಕರ್ಮಸು ॥೧೦॥

ಸ್ಥಿತಾಃ ಸುಮನಸೋ ರಾಜಂಸ್ತೇನ ರಾಜ್ಞಾ ಸ್ವನುಷ್ಠಿತಾಃ ।
ವಿಧವಾನಾಥಕೃಪಣಾನ್ ವಿಕಲಾಂಶ್ಚ ಬಭಾರ ಸಃ ॥೧೧॥

ಅವನು ಪ್ರಜಾಪತಿಯಾದ ಬ್ರಹ್ಮನಂತೆ ಎಲ್ಲಾ ಪ್ರಜೆಗಳಲ್ಲಿಯೂ ಸಮಾನನಾಗಿದ್ದನು. ಬ್ರಾಹ್ಮಣರು, ಕ್ಷತ್ರಿಯರು, ವೈಶ್ಯರು ಮತ್ತು ಶೂದ್ರರು ಸಂತೋಷದಿಂದ ಕೂಡಿದ ಮನಸ್ಸುಳ್ಳವರಾಗಿ ತಮ್ಮ ತಮ್ಮ ಕರ್ಮಗಳಲ್ಲಿ ನಿರತರಾಗಿದ್ದರು. ಎಲೈ ರಾಜನೇ, ರಾಜನಾದ ಅವನು ಅವರಿಂದ ಅವರವರಿಗೆ ಯೋಗ್ಯವಾದ ಕರ್ಮಗಳನ್ನು ಮಾಡಿಸಿದನು. ಅವನು ವಿಧವೆಯರನ್ನೂ, ಅನಾಥರನ್ನೂ, ಕೃಪಣರನ್ನೂ ಮತ್ತು ವಿಕಲಾಂಗರನ್ನೂ ಪೋಷಿಸಿದನು.

ಸುದರ್ಶಃ ಸರ್ವಭೂತಾನಾಮಾಸೀತ್ ಸೋಮ ಇವಾಪರಃ ।
ಹೃಷ್ಟಪುಷ್ಟಜನಃ ಶ್ರೀಮಾನ್ ಸತ್ಯವಾಗ್ ದೃಢವಿಕ್ರಮಃ ॥೧೨॥

ಅವನು ನೋಡುವುದಕ್ಕೆ ಇನ್ನೊಬ್ಬ ಚಂದ್ರನಂತೆ ಸುಂದರನಾಗಿದ್ದನು. ಹೃಷ್ಟಪುಷ್ಟರಾದ ಪ್ರಜೆಗಳಿಂದ ಕೂಡಿದವನಾಗಿದ್ದನು. ಕಾಂತಿಯುಕ್ತನೂ, ಸತ್ಯವಚನನೂ, ದೃಢವಾದ ವಿಕ್ರಮವುಳ್ಳವನೂ ಆಗಿದ್ದನು.

ಧನುರ್ವೇದೇ ಚ ಶಿಷ್ಯೋಽಭೂತ್ ನೃಪಃ ಶಾರದ್ವತಸ್ಯ ಸಃ ।
ಜೀತೇಂದ್ರಿಯಶ್ಚಾತ್ಮವಾಂಶ್ಚ ಮೇಧಾವೀ ವೃದ್ಧಸೇವಯಾ ॥೧೩॥

ಆ ರಾಜನು ಧನುರ್ವಿದ್ಯೆಯಲ್ಲಿ ಕೃಪಾಚಾರ್ಯರ ಶಿಷ್ಯನಾದನು. ಅವನು ಜಿತೇಂದ್ರಿಯನೂ, ಜಿತಮನಸ್ಕನೂ ಮತ್ತು ವೃದ್ಧಸೇವೆಯನ್ನು ಮಾಡಿದ ಕಾರಣದಿಂದ ಮೇಧಾವಿಯೂ ಆಗಿದ್ದನು.

ಷಡ್‌ವರ್ಗಜಿನ್ಮಹಬುದ್ಧಿರ್ನೀತಿಕರ್ಮವಿದುತ್ತಮಃ ।
ಗೋವಿಂದಸ್ಯ ಪ್ರಿಯಶ್ಚಾಸೀತ್ ಪಿತಾ ತೇ ಜನಮೇಜಯ ।
ಲೋಕಸ್ಯ ಚೈವ ಸರ್ವಸ್ಯ ಪ್ರಿಯ ಆಸೀನ್ಮಹಾಯಶಾಃ ॥೧೪॥

ಎಲೈ ಜನಮೇಜಯನೇ, ನಿನ್ನ ತಂದೆಯು ಕಾಮಾದಿ ಷಡ್ವರ್ಗವನ್ನು ಜಯಿಸಿದ್ದನು. ಮಹಾಬುದ್ಧಿಯುಳ್ಳವನಾಗಿದ್ದನು. ನೀತಿಶಾಸ್ತ್ರವನ್ನೂ ಮತ್ತು ಎಲ್ಲಾ ಕಾರ್ಯಗಳನ್ನೂ ತಿಳಿದವರಲ್ಲಿ ಶ್ರೇಷ್ಠನಾಗಿದ್ದನು. ಅಲ್ಲದೇ, ಕೃಷ್ಣನಿಗೆ ಪ್ರಿಯನೂ ಆಗಿದ್ದನು. ಮಹಾಯಶಸ್ವಿಯಾದ ಅವನು ಎಲ್ಲಾ ಜನರಿಗೂ ಪ್ರಿಯನಾಗಿದ್ದನು.

ಪರಿಕ್ಷೀಣೇಷು ಕುರುಷು ಉತ್ತರಾಯಾಮಜಾಯತ ।
ಪರೀಕ್ಷಿದಭವತ್ ತೇನ ಸೌಭದ್ರಸ್ಯಾತ್ಮಜೋ ಬಲೀ ।
ರಾಜಧರ್ಮಾರ್ಥಕುಶಲೋ ಯುಕ್ತಃ ಸರ್ವಗುಣೈರ್ನೃಪ ॥೧೫॥

ಕುರುವಂಶವು ಪರಿಕ್ಷಯಯನ್ನು ಹೊಂದುತ್ತಿರಲು ಅವನು ಉತ್ತರೆಯಲ್ಲಿ ಜನಿಸಿದನು. ಆದ್ದರಿಂದ ಸುಭದ್ರೆಯ ಮಗನಾದ ಬಲಿಷ್ಠನಾದ ಅವನಿಗೆ ಪರೀಕ್ಷಿತ್ ಎಂಬ ಹೆಸರು ಬಂದಿತು. ಎಲೈ ರಾಜನೇ, ಅವನು ರಾಜಕಾರ್ಯಗಳಲ್ಲಿಯೂ, ಧರ್ಮಶಾಸ್ತ್ರದಲ್ಲಿಯೂ, ಅರ್ಥಶಾಸ್ತ್ರದಲ್ಲಿಯೂ ಕುಶಲನಾಗಿ ಎಲ್ಲಾ ಗುಣಗಳಿಂದಲೂ ಕೂಡಿದವನಾಗಿದ್ದನು.

ಪ್ರಜಾ ಇಮಾಸ್ತವ ಪಿತಾ ಷಷ್ಟಿವರ್ಷಾಣ್ಯಪಾಲಯತ್ ।
ತತೋ ದಿಷ್ಟಾಂತಮಾಪನ್ನಃ ಸರ್ಪೇಣಾನತಿವರ್ತಿನಾ ॥೧೬॥

ನಿನ್ನ ತಂದೆಯು ಅವನಿಗೆ ಅರವತ್ತು ವರ್ಷಗಳಾಗುವವರೆಗೆ ಈ ಪ್ರಜೆಗಳನ್ನು ರಕ್ಷಿಸಿದನು. ಅನಂತರ ವಿಧಿಯನ್ನು ಮೀರಲಾರದ ಸರ್ಪದಿಂದ ನಾಶವನ್ನು ಹೊಂದಿದನು.

ತತಸ್ತ್ವಂ ಪುರುಷಶ್ರೇಷ್ಠ ಧರ್ಮೇಣ ಪ್ರತಿಪೇದಿವಾನ್ ।
ಇದಂ ವರ್ಷಸಹಸ್ರಾಯ ರಾಜ್ಯಂ ಕುಲಧರಾಗತಮ್।
ಬಾಲ ಏವಭಿಜಾತೋಽಸಿ ಸರ್ವಭೂತಾನುಕಂಪನಃ ॥೧೭॥

ಪುರುಷಶ್ರೇಷ್ಠನೇ, ಅನಂತರ ಒಂದು ಸಹಸ್ರವರ್ಷಗಳ ಕಾಲ ಕುಲಪರಂಪರೆಯಿಂದ ಪ್ರಾಪ್ತವಾಗಿ ಮುಂದುವರೆಯುವ ಈ ಪಾಂಡವರ ರಾಜ್ಯವನ್ನು ನೀನು ಬಾಲಕನಾಗಿರುವಾಗಲೇ ಧರ್ಮದಿಂದ ಪಡೆದಿದ್ದೀಯೆ. ನೀನು ಎಲ್ಲಾ ಪ್ರಾಣಿಗಳಲ್ಲಿಯೂ ದಯೆಯುಳ್ಳವನಾಗಿದ್ದೀಯೆ.

ಜನಮೇಜಯಃ

ನಾಸ್ಮಿನ್ ಕುಲೇ ಜಾತು ಬಭೂವ ರಾಜಾ
ಯೋ ನ ಪ್ರಜಾನಾಂ ಪ್ರಿಯಕೃತ್ ಪ್ರಿಯಶ್ಚ ।
ವಿಶೇಷತಃ ಪ್ರೇಕ್ಷ್ಯ ಪಿತಾಮಹಾನಾಂ
ವೃತ್ತಂ ಮಹದ್‌ವೃತ್ತಪರಾಯಣಾನಾಮ್ ॥೧೮॥

ಈ ಕುಲದಲ್ಲಿ ಪ್ರಜೆಗಳಲ್ಲಿ ಹಿತವನ್ನು ಮಾಡದ ಮತ್ತು ಪ್ರಜೆಗಳಲ್ಲಿ ಪ್ರಿಯವನ್ನು ಮಾಡದ ಯಾವ ರಾಜನೂ ಇರಲಿಲ್ಲ. ವಿಶೇಷವಾಗಿ ಮಹಾನಡತೆಯನ್ನು ಹೊಂದಿದ್ದ ಪಿತಾಮಹರಾದ ಪಾಂಡವರ ನಡತೆಯನ್ನು ತಿಳಿದವನು ಎಂದೂ ಅದಕ್ಕೆ ವಿರುದ್ಧವಾಗಿ ನಡೆಯಲಿಲ್ಲ.

ಕಥಂ ನಿಧನಮಾಪನ್ನಃ ಪಿತಾ ಮಮ ತಥಾವಿಧಃ ।
ಆಚಕ್ಷಧ್ವಂ ಯಥಾವನ್ಮೇ ಶ್ರೋತುಮಿಚ್ಛಾಮಿ ತತ್ತ್ವತಃ ॥೧೯॥

ಅಂತಹ ನನ್ನ ತಂದೆಯು ಹೇಗೆ ನಿಧನನಾದನು ಎಂದು ನನಗೆ ಸರಿಯಾಗಿ ತಿಳಿಸಿ. ನಾನು ಅದನ್ನು ಸರಿಯಾಗಿ ತಿಳಿಯಲು ಬಯಸುತ್ತೇನೆ.

ಸೂತಃ

ಏವಂ ಸಂಬೋಧಿತಾ ರಾಜ್ಞಾ ಮಂತ್ರಿಣಸ್ತೇ ನರಾಧಿಪಮ್ ।
ಊಚುಃ ಸರ್ವೇ ಯಥಾತತ್ತ್ವಂ ರಾಜ್ಞಃ ಪ್ರಿಯಹಿತೇ ರತಾಃ ॥೨೦॥

ಹೀಗೆ ರಾಜನಿಂದ ಸಂಬೋಧಿಸಲ್ಪಟ್ಟ ರಾಜನ ಪ್ರಿಯ ಮತ್ತು ಹಿತಗಳಲ್ಲಿಯೇ ಆಸಕ್ತರಾದ ಅವನ ಎಲ್ಲಾ ಮಂತ್ರಿಗಳೂ ರಾಜನನ್ನು ಕುರಿತು ಘಟನೆಗಳು ನಡೆದ ರೀತಿಯನ್ನು ಹೇಳಿದರು.

ಮಂತ್ರಿಣಃ

ಸ ರಾಜಾ ಪೃಥಿವೀಪಾಲಃ ಸರ್ವಶಸ್ತ್ರವಿದಾಂ ವರಃ ।
ಬಭೂವ ಮೃಗಯಾಶೀಲಃ ತವ ರಾಜನ್ ಪಿತಾ ಸದಾ ॥೨೧॥

ಯಥಾ ಪಾಂಡುರ್ಮಹಾಭಾಗೋ ಧನುರ್ಧರವರೋ ಯುಧಿ ।
ಅಸ್ಮಾಸ್ವಾಸಜ್ಯ ಸರ್ವಾಣಿ ರಾಜಕಾರ್ಯಾಣ್ಯಶೇಷತಃ ॥೨೨॥

ರಾಜನೇ, ಪೃಥಿವೀಪಾಲನೂ, ಸರ್ವಶಸ್ತ್ರಧಾರಿಗಳಲ್ಲಿ ಅಗ್ರಗಣ್ಯನೂ ಆದ ನಿನ್ನ ತಂದೆಯು ಬೇಟೆಯಾಡುವ ವ್ಯಸನವನ್ನು ಹೊಂದಿದ್ದನು. ಅವನು ಎಲ್ಲಾ ರಾಜಕಾರ್ಯಗಳನ್ನೂ ನಮಗೇ ಒಪ್ಪಿಸಿ ಮಹಾನುಭಾವನಾದ ಪಾಂಡುವಿನಂತೆ ಯುದ್ಧದಲ್ಲಿ ಧನುರ್ಧಾರಿಗಳಲ್ಲಿ ಶ್ರೇಷ್ಠನಾದ ಅವನು (ಮೃಗಯಾಶೀಲನಾದನು).

ಸ ಕದಾಚಿದ್ ವನಚರೋ ಮೃಗಂ ವಿವ್ಯಾಧ ಪತ್ರಿಣಾ ।
ವಿದ್ಧ್ವಾ ಚಾನ್ವಸರತ್ ತೂರ್ಣಂ ಸ ಮೃಗಂ ಗಹನೇ ವನೇ ॥೨೩॥

ಒಮ್ಮೆ ಕಾಡಿನಲ್ಲಿ ಸಂಚರಿಸುತ್ತಿದ್ದ ಅವನು ಬಾಣದಿಂದ ಒಂದು ಮೃಗವನ್ನು ಹೊಡೆದು ಆ ದಟ್ಟವಾದ ಕಾಡಿನಲ್ಲಿ ಆ ಮೃಗವನ್ನು ಶೀಘ್ರವಾಗಿ ಹಿಂಬಾಲಿಸಿದನು.

ಪದಾತಿರ್ಬದ್ಧನಿಸ್ತ್ರಿಂಶಃ ಶರಪಾಣಿರ್ಧನುರ್ಧರಃ ।
ನ ಚಾಸಸಾದ ಗಹನೇ ಮೃಗಂ ನಷ್ಟಂ ಪಿತಾ ತವ ॥೨೪॥

ಸೊಂಟದಲ್ಲಿ ಕತ್ತಿಯನ್ನು ಕಟ್ಟಿಕೊಂಡು, ಕೈಯಲ್ಲಿ ಧನುರ್ಬಾಣಗಳನ್ನು ಹಿಡಿದು ಪದಾತಿಯಾಗಿ ಹೊರಟ ಆ ನಿನ್ನ ತಂದೆಗೆ ಕಾಡಿನಲ್ಲಿ ಕಣ್ಮರೆಯಾದ ಆ ಮೃಗವು ದೊರೆಯಲಿಲ್ಲ.

ಪರಿಶ್ರಾಂತೋ ವಯಃಸ್ಥಶ್ಚ ಷಷ್ಟಿವರ್ಷೋ ಜರಾನ್ವಿತಃ ।
ಕ್ಷುಧಿತಃ ಸ ಮಹಾರಣ್ಯೇ ದದರ್ಶ ಮುನಿಮಂತಿಕೇ ॥೨೫॥

ಅರವತ್ತು ವರ್ಷ ವಯಸ್ಸಿನವನಾಗಿ ಮುಪ್ಪಿನಿಂದ ಕೂಡಿ, ಅಪರ ವಯಃಸ್ಥನಾಗಿ ಬಳಲಿ, ಹಸಿದ ಅವನು ಆ ಮಹಾರಣ್ಯದಲ್ಲಿ ಸಮೀಪದಲ್ಲಿ ಒಬ್ಬ ಮುನಿಯನ್ನು ನೋಡಿದನು.

ಸ ತಂ ಪಪ್ರಚ್ಛ ರಾಜೇಂದ್ರೋ ಮುನಿಂ ಮೌನವ್ರತಾನ್ವಿತಮ್ ।
ನ ಚ ಕಿಂಚಿದುವಾಚೈನಂ ಸ ಮುನಿಃ ಪೃಚ್ಛತೋಽಪಿ ಸನ್ ॥೨೬॥

ಆ ರಾಜೇಂದ್ರನು ಮೌನವ್ರತಧಾರಿಯಾದ ಆ ಋಷಿಯನ್ನು ಮೃಗದ ವಿಷಯದಲ್ಲಿ ಪ್ರಶ್ನೆಮಾಡಿದನು. ಆ ಮುನಿಯು ಪ್ರಶ್ನೆಮಾಡುವ ರಾಜನಿಗಿಂತ ಬಹಳ ಉತ್ತಮನಾಗಿದ್ದರೂ, ರಾಜನನ್ನು ಕುರಿತು ಏನನ್ನೂ ಮಾತನಾಡಲಿಲ್ಲ.

ತತೋ ರಾಜಾ ಕ್ಷುಚ್ಛ್ರಮಾರ್ತಃ ತಂ ಮುನಿಂ ಸ್ಥಾಣುವತ್ ಸ್ಥಿತಮ್ ।
ಮೌನವ್ರತಧರಂ ಶ್ರಾಂತಃ ಸದ್ಯೋ ಮನ್ಯುವಶಂ ಗತಃ ॥೨೭॥

ನ ಬುಬೋಧ ಚ ತಂ ರಾಜಾ ಮೌನವ್ರತಧರಂ ಮುನಿಮ್ ।
ಸ ತಂ ಮನ್ಯುಸಮಾವಿಷ್ಟೋ ಧರ್ಷಯಾಮಾಸ ತೇ ಪಿತಾ ॥೨೮॥

ಅನಂತರ ಹಸಿವು ಮತ್ತು ಆಯಾಸದಿಂದ ಪೀಡಿತನಾದ ಆ ರಾಜನು ತಕ್ಷಣದಲ್ಲಿ ಕೋಪಕ್ಕೆ ಒಳಗಾದವನಾಗಿ, ಬಳಲಿದವನಾಗಿ, ಮೌನವ್ರತವನ್ನು ಧರಿಸಿ ಮರದ ಬುಡದಂತೆ ಅಲುಗಾಡದೇ ಕುಳಿತಿದ್ದ ಆ ಮುನಿಯನ್ನು ಮೌನವ್ರತಧರನೆಂದು ತಿಳಿಯಲಿಲ್ಲ. ಕೋಪಕ್ಕೆ ವಶನಾದ ನಿನ್ನ ತಂದೆಯು ಆ ಮುನಿಗೆ ಅವಮಾನವನ್ನು ಮಾಡಿದನು.

ಮೃತಂ ಸರ್ಪಂ ಧನುಷ್ಕೋಟ್ಯಾ ಸಮುತ್ಕ್ಷಿಪ್ಯ ಧರಾತಳಾತ್ ।
ತಸ್ಯ ಶುದ್ಧಾತ್ಮನಃ ಪ್ರಾದಾತ್ ಸ್ಕಂಧೇ ಭಾರತಸತ್ತಮ ॥೨೯॥

ಎಲೈ ಭಾರತಸತ್ತಮನೇ, ಅವನು ಭೂಮಿಯ ಮೇಲೆ ಬಿದ್ದಿದ್ದ ಒಂದು ಮೃತಸರ್ಪವನ್ನು ತನ್ನ ಬಿಲ್ಲಿನ ತುದಿಯಿಂದ ಎತ್ತಿ ಆ ಪರಿಶುದ್ಧನಾದ ಮುನಿಯ ಕೊರಳಿನಲ್ಲಿ ಹಾಕಿದನು.

ತಂ ನೋವಾಚ ಸ ಧರ್ಮಾತ್ಮಾ ರಾಜಾನಂ ಸಾಧ್ವಸಾಧು ವಾ ।
ತಸ್ಥೌ ತಥೈವ ನಾಕ್ರುಧ್ಯತ್ ಸರ್ಪಂ ಸ್ಕಂಧೇನ ಧಾರಯನ್ ॥೩೦॥

ಆ ಧರ್ಮಾತ್ಮನಾದ ಮುನಿಯು ರಾಜನನ್ನು ಕುರಿತು ಒಳ್ಳೆಯದನ್ನಾಗಲೀ, ಕೆಟ್ಟದ್ದನ್ನಾಗಲೀ ಏನೂ ಮಾತನಾಡಲಿಲ್ಲ. ಕೋಪಗೊಳ್ಳದೆ ಅವನು ಸರ್ಪವನ್ನು ತನ್ನ ಕೊರಳಿನಲ್ಲಿ ಧರಿಸಿ ಹಾಗೆಯೇ ಕುಳಿತಿದ್ದನು.

॥ ಇತಿ ಶ್ರೀಮನ್ಮಹಾಭಾರತೇ ಶತಸಹಸ್ರಿಕಾಯಾಂಸಂಹಿತಾಯಾಮಾದಿಪರ್ವಣಿ ಚತುಶ್ಚತ್ವಾರಿಂಶೋಽಧ್ಯಾಯಃ ॥

॥ ಇತಿ ಆಸ್ತೀಕಪರ್ವಣಿ ದ್ವಾತ್ರಿಂಶೋಽಧ್ಯಾಯಃ ॥

ಇಲ್ಲಿಗೆ ಮಹಾಭಾರತದ ಆದಿಪರ್ವದಲ್ಲಿ ನಲವತ್ತನಾಲ್ಕನೆಯ ಅಧ್ಯಾಯ ಮುಗಿಯಿತು.

ನಲವತ್ತೈದನೆಯ ಅಧ್ಯಾಯ

(ಮಂತ್ರಿಗಳ ವಚನವನ್ನು ಕೇಳಿ ತಕ್ಷಕನ ಮೇಲೆ ರಾಜನ ಕೋಪ ಮತ್ತು ಸರ್ಪಯಾಗ ಸಂಕಲ್ಪ.)

ಮಂತ್ರಿಣಃ

ತತಃ ಸ ರಾಜಾ ರಾಜೇಂದ್ರ ಸ್ಕಂಧೇ ತಸ್ಯ ಭುಜಂಗಮಮ್ ।
ಮುನೇಃ ಕುತ್ಸಾಮ್ಸ ಆಸಜ್ಯ ಸ್ವಪುರಂ ಪುನರಾಯಯೌ ॥೧॥

ಎಲೈ ರಾಜೇಂದ್ರನೇ, ಆಗ ಹಸಿವಿನಿಂದ ಸೊರಗಿದ ರಾಜನು ಮುನಿಯ ಕೊರಳಿನಲ್ಲಿ ಆ ಸರ್ಪವನ್ನು ಹಾಕಿ ತನ್ನ ಪಟ್ಟಣಕ್ಕೆ ಹಿಂದಿರುಗಿದನು.

ಋಷೇಸ್ತಸ್ಯ ತು ಪುತ್ರೋಽಭೂದ್ ಭುವಿ ಜಾತೋ ಮಹಾಯಶಾಃ।
ಶೃಂಗೀ ನಾಮ ಮಹಾತೇಜಾಃ ತಿಗ್ಮವೀರ್ಯೋಽತಿಕೋಪನಃ ॥೨॥

ಆ ಋಷಿಗೆ ಮಹಾಕೀರ್ತಿಶಾಲಿಯಾದ (ಗೋವಿನಲ್ಲಿ ಜನಿಸಿದ) ಶೃಂಗೀ ಎಂಬ ಒಬ್ಬ ಪುತ್ರನಿದ್ದನು. ಅವನು ಮಹಾತೇಜಸ್ವಿಯೂ, ಬಹಳ ಕೋಪವುಳ್ಳವನೂ ಮತ್ತು ಕ್ರೂರವಾದ ಶಕ್ತಿಯುಳ್ಳವನೂ ಆಗಿದ್ದನು.

ಬ್ರಹ್ಮಾಣಂ ಸೋಽಪ್ಯುಪಾಗಮ್ಯ ಮುನಿಃ ಪೂಜಾಂ ಚಕಾರ ಹ ।
ಸೋಽನುಜ್ಞಾತೋ ಗತಸ್ತತ್ರ ಶೃಂಗೀ ಶುಶ್ರಾವ ತಂ ತದಾ ॥೩॥

ಸಖ್ಯುಃ ಸಕಾಶಾತ್ ಪಿತರಂ ಪಿತ್ರಾ ತೇ ಧರ್ಷಿತಂ ತದಾ ।
ಮೃತಂ ಸರ್ಪಂ ಸಮಾಸಕ್ತಂ ಪಿತ್ರಾ ತೇ ಜನಮೇಜಯ ।
ವಹಂತಂ ಕುರುಶಾರ್ದೂಲ ಸ್ಕಂಧೇನಾನಪಕಾರಿಣಮ್ ॥೪॥

ಅವನು ಬ್ರಹ್ಮದೇವರನ್ನು ಸಮೀಪಿಸಿ ಅವರ ಪೂಜೆಯನ್ನು ಮಾಡಿದನು. ಬ್ರಹ್ಮದೇವರ ಅನುಮತಿಯನ್ನು ಪಡೆದು ಮರಳಿ ಬಂದ ಶೃಂಗಿಯು ನಿನ್ನ ತಂದೆಯಿಂದ ತನ್ನ ತಂದೆಯು ಅವಮಾನಕ್ಕೆ ಒಳಗಾಗಿರುವ ವಾರ್ತೆಯನ್ನು ತನ್ನ ಸ್ನೇಹಿತನಿಂದ

ಕೇಳಿದನು. ಎಲೈ ಜನಮೇಜಯನೇ, ಕುರುಶಾರ್ದೂಲನೇ, ಆ ಸ್ನೇಹಿತನು ಅನಪಕಾರಿಯಾದ ನಿನ್ನ ತಂದೆಯು ಅವನು ಹಾಕಿದ ಮೃತಸರ್ಪವನ್ನು ಇನ್ನೂ ಹಾಗೆಯೇ ಹೊತ್ತುಕೊಂಡಿದ್ದಾನೆ ಎಂದೂ ಹೇಳಿದನು.

ತಪಸ್ವಿನಂ ಮಹಾತ್ಮಾನಂ ತಂ ಮುನಿಪ್ರವರಂ ನೃಪ ।
ಜಿತೇಂದ್ರಿಯಂ ವಿಶುದ್ಧಂ ಚ ಸ್ಥಿತಂ ಕರ್ಮಣ್ಯಥಾದ್ಭುತೇ ।
ತಪಸಾ ದ್ಯೋತಿತಾತ್ಮಾನಂ ಸ್ವೇಷ್ವಂಗೇಷು ಯುತಂ ತದಾ ॥೫॥

ಶುಭಾಚಾರಂ ಶುಭಕಥಂ ಸುಸ್ಥಿರಂ ತಮಲೋಲುಪಮ್ ।
ಅಕ್ಷುದ್ರಮನಸೂಯಂ ಚ ವೃದ್ಧಂ ಮೌನವ್ರತೇ ಸ್ಥಿತಮ್ ॥೬॥
ಶರಣ್ಯಂ ಸರ್ವಭೂತಾನಾಂ ಪಿತ್ರಾ ವಿಪ್ರಕೃತಂ ತವ ।

ಶಶಾಪಾಥ ಸ ತಚ್ಛ್ರುತ್ವಾ ಪಿತರಂ ತೇ ರುಷಾನ್ವಿತಃ ॥೭॥

ಎಲೈ ರಾಜನೇ, ತಪಸ್ವಿಯೂ, ಮಹಾತ್ಮನೂ, ಮುನಿಶ್ರೇಷ್ಠನೂ, ಜಿತೇಂದ್ರಿಯನೂ, ವಿಶುದ್ಧನೂ, ಅದ್ಭುತಕರ್ಮಗಳನ್ನು ಮಾಡುವ ಸಾಮರ್ಥ್ಯವನ್ನು ಹೊಂದಿದವನೂ, ತಪಸ್ಸಿನಿಂದ ಮನಸ್ಸಿನ ಪ್ರಕಾಶವನ್ನು ಪಡೆದವನೂ, ತನಗೆ ಪ್ರಿಯವಾದ ವೇದಾಂಗಗಳಲ್ಲಿಯೇ ನಿರತನಾದವನೂ, ಒಳ್ಳೆಯ ಆಚಾರವುಳ್ಳವನೂ, ಒಳ್ಳೆಯ ಮಾತನ್ನುಳ್ಳವನೂ, ಒಳ್ಳೆಯ ಸ್ಥೈರ್ಯವಿರುವವನೂ, ವಿಷಯಾಸಕ್ತನಾಗದವನೂ, ಕ್ಷುದ್ರತನವಿಲ್ಲದವನೂ, ಅಸೂಯಾಪರನಲ್ಲದವನೂ, ವೃದ್ಧನೂ, ಮೌನವ್ರತವನ್ನು ಧರಿಸಿದವನೂ, ಎಲ್ಲಾ ಪ್ರಾಣಿಗಳಿಗೂ ಆಶ್ರಯದಾತನೂ, ಆದ ತನ್ನ ತಂದೆಯು ನಿನ್ನ ತಂದೆಯಿಂದ ಅವಮಾನಕ್ಕೆ ಒಳಗಾಗಿರುವುದನ್ನು ಕೇಳಿದ ಅವನು ಕೋಪದಿಂದ ಕೂಡಿದವನಾಗಿ ಆಗ ಶಾಪವನ್ನು ಕೊಟ್ಟನು.

ಋಷೇಃ ಪುತ್ರೋ ಮಹಾತೇಜಾ ಬಾಲೋಽಪಿ ಸ್ಥವಿರೈರ್ವರಃ ।
ಸ ಕ್ಷಿಪ್ರಮುದಕಂ ಸ್ಪೃಷ್ಟ್ವಾ ರೋಷಾದಿದಮುವಾಚ ಹ ।
ಪಿತರಂ ತೇಽಭಿಸಂಧಾಯ ತೇಜಸಾ ಪ್ರಜ್ವಲನ್ನಿವ ॥೮॥

ಋಷಿಕುಮಾರನಾಗಿ ಬಾಲಕನಾಗಿದ್ದರೂ, ವೃದ್ಧರಿಗಿಂತ ಶ್ರೇಷ್ಠನಾದ, ಮಹಾತೇಜಸ್ವಿಯಾದ ಅವನು ಬೇಗ ಕೈಯಲ್ಲಿ ನೀರನ್ನು ತೆಗೆದುಕೊಂಡು, ನಿನ್ನ ತಂದೆಯನ್ನು ಉದ್ದೇಶಿಸಿ, ತೇಜಸ್ಸಿನಿಂದ ಉರಿಯುವವನಂತೆ ರೋಷದಿಂದ ಈ ಮಾತುಗಳನ್ನು ಹೇಳಿದನಷ್ಟೆ.

ಅನಾಗಸಿ ಗುರೌ ಯೋ ಮೇ ಮೃತಂ ಸರ್ಪಮವಾಸೃಜತ್ ।
ತಂ ನಾಗಸ್ತಕ್ಷಕಃ ಕ್ರುದ್ಧಸ್ತೇಜಸಾ ಸಾದಯಿಷ್ಯತಿ ।
ಸಪ್ತರಾತ್ರಾದಿತಃ ಪಾಪಂ ಪಶ್ಯ ಮೇ ತಪಸೋ ಬಲಮ್ ॥೯॥

ಅನಪರಾಧಿಯಾದ ನನ್ನ ತಂದೆಯ ಕೊರಳಿನಲ್ಲಿ ಯಾವನು ಮೃತಸರ್ಪವನ್ನು ಹಾಕಿದನೋ, ಆ ಪಾಪಿಗೆ ಇವತ್ತಿಗೆ ಏಳನೆಯ ದಿವಸದಲ್ಲಿ ತನ್ನ ತೇಜಸ್ಸಿನಿಂದ ಕ್ರುದ್ಧನಾದ ತಕ್ಷಕನಾಗನು ಮರಣವನ್ನು ಉಂಟುಮಾಡುತ್ತಾನೆ. ನನ್ನ ತಪಸ್ಸಿನ ಬಲವನ್ನು ನೋಡು.

ಇತ್ಯುಕ್ತ್ವಾ ಪ್ರಯಯೌ ತತ್ರ ಪಿತಾ ಯತ್ರಾಸ್ಯ ಸೋಽಭವತ್ ।
ದೃಷ್ಟ್ವಾ ಚ ಪಿತರಂ ತಸ್ಮೈ ಶಾಪಂ ತಂ ಪ್ರತ್ಯವೇದಯತ್ ॥೧೦॥

ಹೀಗೆ ಹೇಳಿ ಅವನು ತನ್ನ ತಂದೆ ಇದ್ದ ಕಡೆಗೆ ಹೋದನು ಮತ್ತು ತಂದೆಯನ್ನು ನೋಡಿ ಅವನಿಗೆ ರಾಜನಿಗೆ ತಾನು ಕೊಟ್ಟ ಶಾಪವನ್ನು ನಿವೇದಿಸಿದನು.

ಸ ಚಾಪಿ ಮುನಿಶಾರ್ದೂಲಃ ಪ್ರೇಷಯಾಮಾಸ ತೇ ಪಿತುಃ ।
ಶಪ್ತೋಽಸಿ ಮಮ ಪುತ್ರೇಣ ಯತ್ತೋ ಭವ ಮಹೀಪತೇ ।
ತಕ್ಷಕಸ್ತ್ವಾಂ ಮಹಾರಾಜ ಸಪ್ತರಾತ್ರೇಣ ಧಕ್ಷ್ಯತಿ ॥೧೧॥

ತಂದೆಯಾದ ಆ ಮುನಿಶಾರ್ದೂಲನಾದರೋ, ನಿನ್ನ ತಂದೆಗೆ ರಾಜನೇ, ನನ್ನ ಪುತ್ರನಿಂದ ಶಪಿಸಲ್ಪಟ್ಟಿದ್ದೀಯೆ. ಮಹಾರಾಜನೇ, ಈ ದಿನಕ್ಕೆ ಏಳನೆಯ ದಿನ ತಕ್ಷಕನು ನಿನ್ನನ್ನು ದಹಿಸುತ್ತಾನೆ. ಎಚ್ಚರಿಕೆಯಿಂದ ಇರು ಎಂಬ ವಾರ್ತೆಯನ್ನು ಹೇಳಿ ಕಳುಹಿಸಿದನು.

ಶ್ರುತ್ವಾ ತು ತದ್ವಚೋ ಘೋರಂ ಪಿತಾ ತೇ ಜನಮೇಜಯ ।
ಯತ್ತೋಽಭವತ್ ಪರಿತ್ರಸ್ತಃ ತಕ್ಷಕಾತ್ ಪನ್ನಗೋತ್ತಮಾತ್ ॥೧೨॥

ಎಲೈ ಜನಮೇಜಯನೇ, ಆ ಘೋರವಾದ ಮಾತನ್ನು ಕೇಳಿದ ನಿನ್ನ ತಂದೆಯು, ಪನ್ನಗಶ್ರೇಷ್ಠನಾದ ತಕ್ಷಕನಿಗೆ ಹೆದರಿ, ಬಹಳ ಎಚ್ಚರಿಕೆಯಿಂದಿದ್ದನು.

ತತಸ್ತಸ್ಮಿಂಸ್ತು ದಿವಸೇ ಸಪ್ತಮೇ ಸಮುಪಸ್ಥಿತೇ ।
ರಾಜ್ಞಃ ಸಮೀಪಂ ಬ್ರಹ್ಮರ್ಷಿಃ ಕಾಶ್ಯಪೋ ಗಂತುಮೈಚ್ಛತ ॥೧೩॥

ಅನಂತರ ಆ ಏಳನೆಯ ದಿವಸವು ಪ್ರಾಪ್ತವಾಗುತ್ತಿರಲು, ಬ್ರಹ್ಮರ್ಷಿಯಾದ ಕಾಶ್ಯಪನು ರಾಜನ ಸಮೀಪಕ್ಕೆ ಹೋಗಲು ಬಯಸಿದನು.

ತಂ ದದರ್ಶಾಥ ನಾಗೇಂದ್ರಃ ತಕ್ಷಕಃ ಕಾಶ್ಯಪಂ ತದಾ ।
ತಮಬ್ರವೀತ್ ಪನ್ನಗೇಂದ್ರಃ ಕಾಶ್ಯಪಂ ತ್ವರಿತಂ ವ್ರಜನ್ ।
ಕ್ವ ಭವಾಂಸ್ತ್ವರಿತೋ ಯಾತಿ ಕಿಂ ಚ ಕಾರ್ಯಂ ಚಿಕೀರ್ಷತಿ ॥೧೪॥

ನಾಗೇಂದ್ರನಾದ ತಕ್ಷಕನು ಆ ಕಾಶ್ಯಪಬ್ರಾಹ್ಮಣನನ್ನು ನೋಡಿದನು. ಪನ್ನಗೇಂದ್ರನು ತ್ವರಿತವಾಗಿ ಹೋಗುತ್ತಿದ್ದ ಆ ಕಾಶ್ಯಪನನ್ನು ಕುರಿತು ನೀನು ಎಲ್ಲಿಗೆ ವೇಗವಾಗಿ ಹೋಗುತ್ತಿದ್ದೀಯೆ? ಏನು ಮಾಡಲು ಬಯಸುತ್ತಿದ್ದೀಯೆ ಎಂದು ಕೇಳಿದನು.

ಕಾಶ್ಯಪಃ

ಯತ್ರ ರಾಜಾ ಕುರುಶ್ರೇಷ್ಠಃ ಪರೀಕ್ಷಿನ್ನಾಮ ವೈ ಧೃತಃ ।
ತಕ್ಷಕೇಣ ಭುಜಂಗೇಣ ಧಕ್ಷ್ಯತೇ ಕಿಲ ತತ್ರ ವೈ ॥೧೫॥

ಗಚ್ಛಾಮ್ಯಹಂ ತಂ ತ್ವರಿತಃ ಸದ್ಯಃ ಕರ್ತುಮಪಜ್ವರಮ್ ।
ಮಯಾऽಭಿಮಂತ್ರಿತಂ ಚಾಪಿ ನ ಸರ್ಪೋ ಧರ್ಷಯಿಷ್ಯತಿ ॥೧೬॥

ಕುರುಶ್ರೇಷ್ಠನಾದ ಪರೀಕ್ಷಿದ್ರಾಜನು ಏಕಸ್ತಂಭನಿವಾಸದಲ್ಲಿ ಇರುವನಷ್ಟೆ. ಅಲ್ಲಿ ಅವನು ತಕ್ಷಕನಾಗನಿಂದ ದಹಿಸಲ್ಪಡುವನು. ನಾನು ರಾಜನಿಗೆ ವಿಷದ ಬಾಧೆಯನ್ನು ನಿವಾರಿಸಲು ಶೀಘ್ರವಾಗಿ ಅಲ್ಲಿಗೆ ಹೋಗುತ್ತಿದ್ದೇನೆ. ನಾನು ಅಭಿಮಂತ್ರಣವನ್ನು ಮಾಡಿದರೆ, ಸರ್ಪವು ಅವನ ಮೇಲೆ ಯಾವ ಪ್ರಭಾವವನ್ನೂ ಬೀರಲಾರದು.

ತಕ್ಷಕಃ

ಕಿಮರ್ಥಂ ತಂ ಮಯಾ ದಷ್ಟಂ ಸಂಜೀವಯಿತುಮಿಚ್ಛಸಿ ।
ಬ್ರೂಹಿ ಕಾಮಮಹಂ ತೇऽದ್ಯ ದದ್ಮಿ ಸ್ವಂ ವೇಶ್ಮ ಗಮ್ಯತಾಮ್ ॥೧೭॥

ನೀನು ನನ್ನಿಂದ ಕಚ್ಚಲ್ಪಟ್ಟ ಆ ರಾಜನನ್ನು ಏತಕ್ಕೆ ಬದುಕಿಸಲು ಬಯಸುತ್ತೀಯೆ? ನಿನ್ನ ಮನಸ್ಸಿನಲ್ಲಿ ಏನು ಆಸೆಯಿದೆಯೋ ಹೇಳು, ಅದನ್ನು ನಾನು ಕೊಡುತ್ತೇನೆ. ನಿನ್ನ ಮನೆಗೆ ಹಿಂದಿರುಗು.

ಮಂತ್ರಿಣಃ

ಧನಲಿಪ್ಸುರಹಂ ತತ್ರ ಯಾಮೀತ್ಯುಕ್ತಶ್ಚ ತೇನ ಸಃ ।
ತಮುವಾಚ ಮಹಾತ್ಮಾನಂ ವಾರಯನ್ ಶ್ಲಕ್ಷ್ಣಯಾ ಗಿರಾ ॥೧೮॥

ನಾನು ಧನಾಪೇಕ್ಷಿಯಾಗಿ ಅಲ್ಲಿಗೆ ಹೋಗುತ್ತಿದ್ದೇನೆ ಎಂದು ಹೇಳಲ್ಪಟ್ಟ ತಕ್ಷಕನು ಮಹಾತ್ಮನಾದ ಆ ಬ್ರಾಹ್ಮಣನನ್ನು ಮಧುರವಾದ ಮಾತುಗಳಿಂದ ಹೋಗದಂತೆ ನಿಷೇಧಮಾಡುತ್ತಾ ಅವನನ್ನು ಕುರಿತು ಹೇಳಿದನು.

ಯಾವದ್ಧನಂ ಪ್ರಾರ್ಥಯಸೇ ರಾಜ್ಞಸ್ತಸ್ಮಾತ್ ತತೋಽಧಿಕಮ್ ।
ಗೃಹಾಣ ಮತ್ತ ಏವ ತ್ವಂ ಸನ್ನಿವರ್ತಸ್ವ ಚಾನಘ ॥೧೯॥

ದೋಷದೂರನಾದವನೇ, ಆ ರಾಜನಿಂದ ಎಷ್ಟು ಧನವನ್ನು ಬಯಸುವೆಯೋ, ಅದಕ್ಕಿಂತ ಅಧಿಕವಾದ ಧನವನ್ನು ನನ್ನಿಂದಲೇ ಸ್ವೀಕರಿಸು. ನೀನು ಮನೆಗೆ ಹಿಂದಿರುಗು.

ಸ ಏವಮುಕ್ತೋ ನಾಗೇನ ಕಾಶ್ಯಪೋ ದ್ವಿಪದಾಂ ವರಃ ।
ಲಬ್ಧ್ವಾ ವಿತ್ತಂ ನಿವವೃತೇ ತಕ್ಷಕಾದ್ ಯಾವದೀಪ್ಸಿತಮ್ ॥೨೦॥

ತಕ್ಷಕನಾಗನಿಂದ ಹೀಗೆ ಹೇಳಲ್ಪಟ್ಟ ದ್ವಿಪದಶ್ರೇಷ್ಠನಾದ ಕಾಶ್ಯಪಬ್ರಾಹ್ಮಣನು ತಕ್ಷಕನಿಂದ ತನಗೆ ಅಪೇಕ್ಷಿತವಾದಷ್ಟು ಧನವನ್ನು ಪಡೆದು ಹಿಂದಿರುಗಿದನು.

ತಸ್ಮಿನ್ ಪ್ರತಿಗತೇ ವಿಪ್ರೇ ತಕ್ಷಕಃ ಛದ್ಮನಾऽऽಕೃತಃ ।
ತಂ ನೃಪಂ ನೃಪತಿಶ್ರೇಷ್ಠಂ ಪಿತರಂ ಧಾರ್ಮಿಕಂ ತವ ॥೨೧॥

ಪ್ರಾಸಾದಸ್ಥಂ ಕ್ಷಣೇನೈವ ದಗ್ಧವಾನ್ ವಿಷವಹ್ನಿನಾ ।
ತತಸ್ತ್ವಂ ಪುರುಷವ್ಯಾಘ್ರ ವಿಜಯಾಯಾಭಿಷೇಚಿತಃ ॥೨೨॥

ಆ ಬ್ರಾಹ್ಮಣನು ಹೊರಟುಹೋಗುತ್ತಿರಲು ತಕ್ಷಕನು ಒಂದು ಕ್ರಿಮಿಯ ಛದ್ಮರೂಪವನ್ನು ಧರಿಸಿ ಪ್ರಾಸಾದದಲ್ಲಿದ್ದ ನೃಪತಿಶ್ರೇಷ್ಠನಾದ, ಧಾರ್ಮಿಕನಾದ ನಿನ್ನ ತಂದೆಯನ್ನು ಒಂದು ಕ್ಷಣದಲ್ಲಿ ತನ್ನ ವಿಷಾಗ್ನಿಯಿಂದ ದಹಿಸಿದನು. ಪುರುಷವ್ಯಾಘ್ರನೇ, ಅನಂತರ ನೀನು ವಿಜಯದ ಸಲುವಾಗಿ ರಾಜ್ಯದಲ್ಲಿ ಅಭಿಷೇಕ ಮಾಡಲ್ಪಟ್ಟೆ.

ಏತದ್ ದೃಷ್ಟಂ ಶ್ರುತಂ ಚಾಪಿ ಯಥಾವನ್ನೃಪಸತ್ತಮ ॥
ಅಸ್ಮಾಭಿರ್ನಿಖಿಲಂ ವೃತ್ತಂ ಕಥಿತಂ ತೇऽತಿದಾರುಣಮ್ ॥೨೩॥

ಎಲೈ ರಾಜಶ್ರೇಷ್ಠನೇ, ಇದು ನಾವು ನೋಡಿದ ಮತ್ತು ಕೇಳಿದ ವೃತ್ತಾಂತ. ಈ ಅತಿದಾರುಣವಾದ ವೃತ್ತಾಂತವನ್ನು ಸಮಗ್ರವಾಗಿ ನಿನಗೆ ಹೇಳಿದ್ದೇವೆ.

ಶ್ರುತ್ವಾ ಚೈತನ್ನೃಪಶ್ರೇಷ್ಠ ಪಾರ್ಥಿವಸ್ಯ ಪರಾಭವಮ್ ।
ಅಸ್ಯ ಚರ್ಷೇರುದಂಕಸ್ಯ ವಿಧತ್ಸ್ವ ಯದನಂತರಮ್ ॥೨೪॥

ಎಲೈ ನೃಪಶ್ರೇಷ್ಠನೇ, ರಾಜನಾದ ನಿನ್ನ ತಂದೆಯ ಪರಾಭವವನ್ನೂ, ಉದಂಕಋಷಿಗಳ ಪರಾಭವವನ್ನೂ ಕೇಳಿ ಏನು ಕಾರ್ಯವನ್ನು ಮಾಡಬೇಕೋ ಅದನ್ನು ಮಾಡು.

ಜನಮೇಜಯಃ

ಏತತ್ತು ಶ್ರೋತುಮಿಚ್ಛಾಮಿ ಹ್ಯಟವ್ಯಾಂ ನಿರ್ಜನೇ ವನೇ ।
ಸಂವಾದಃ ಪನ್ನಗೇಂದ್ರಸ್ಯ ಕಾಶ್ಯಪಸ್ಯ ಚ ಯಸ್ತದಾ ॥೨೫॥

ಕೇನ ದೃಷ್ಟಃ ಶ್ರುತಶ್ಚಾಪಿ ಭವತಾಂ ಶ್ರೋತ್ರಮಾಗತಮ್ ।
ಶ್ರುತ್ವಾಽಹಂ ಪ್ರವಿಧಾಸ್ಯಾಮಿ ಪನ್ನಗಾಂತಕರೀಂ ಮತೀಮ್ ॥೨೬॥

ನಾನು ಈ ವಿಷಯವನ್ನು ಕೇಳಲು ಬಯಸುತ್ತೇನೆ. ನಿರ್ಜನವಾದ ಆ ಕಾಡಿನಲ್ಲಿ ಪನ್ನಗೇಂದ್ರನಾದ ತಕ್ಷನಿಗೂ ಮತ್ತು ಕಾಶ್ಯಪರಿಗೂ ನಡೆದ ಸಂಭಾಷಣೆಯು ಯಾರಿಂದ ಕೇಳಲ್ಪಟ್ಟು ಅಥವಾ ನೋಡಲ್ಪಟ್ಟು, ನಿಮ್ಮ ಕಿವಿಯನ್ನು ತಲುಪಿತು? ಅದನ್ನು ಕೇಳಿ ನಾನು ಸರ್ಪನಾಶಕರವಾದ ಬುದ್ಧಿಯನ್ನು ತಳೆಯುತ್ತೇನೆ.

ಮಂತ್ರಿಣಃ

ಶೃಣು ರಾಜನ್ ಯಥಾಽಸ್ಮಾಕಂ ಯೇನೈತತ್ ಕಥಿತಂ ಪುರಾ ।
ಸಮಾಗಮಂ ದ್ವಿಜೇಂದ್ರಸ್ಯ ಪನ್ನಗೇಂದ್ರಸ್ಯ ಚಾಧ್ವನಿ ॥೨೭॥

ರಾಜನೇ, ಯಾರಿಂದ ಮತ್ತು ಹೇಗೆ ಮಾರ್ಗದಲ್ಲಿ ದ್ವಿಜೇಂದ್ರನ ಮತ್ತು ನಾಗೇಂದ್ರನ ಸಮಾಗಮವು ಹಿಂದೆ ಉಂಟಾಯಿತೆಂಬುದನ್ನೂ, ಹೇಳಲ್ಪಟ್ಟಿತೆಂಬುದನ್ನೂ, ನೀನೂ ಕೇಳು.

ತಸ್ಮಿನ್ ವನೇಚರಃ ಕಶ್ಚಿದಿಂಧನಾರ್ಥಾಯ ಪಾರ್ಥಿವ ।
ವಿಚಿನ್ವನ್ ಪೂರ್ವಮಾರೂಢಃ ಶುಷ್ಕಶಾಖಂ ವನಸ್ಪತಿಮ್ ॥೨೮॥

ಅಬುಧ್ಯಮಾನೌ ತತ್ರಾಸ್ತಾಂ ವೃಕ್ಷಸ್ಥಂ ಪನ್ನಗದ್ವಿಜೌ ।
ಸ ತು ತೇನೈವ ವೃಕ್ಷೇಣ ಭಸ್ಮೀಭೂತೋಽಭವತ್ ತದಾ ॥೨೯॥

ಎಲೈ ರಾಜನೇ, ಆ ಕಾಡಿನಲ್ಲಿ ವನಚರನಾದ ಒಬ್ಬನು ಕಟ್ಟಿಗೆಯನ್ನು ಹುಡುಕುತ್ತಾ ಒಣಗಿದ ಕೊಂಬೆಯನ್ನುಳ್ಳ ಆ ವೃಕ್ಷದ ಮೇಲೆ ಮೊದಲೇ ಹತ್ತಿ ಕುಳಿತಿದ್ದನು. ತಕ್ಷಕ ಮತ್ತು ಕಾಶ್ಯಪಬ್ರಾಹ್ಮಣರಿಬ್ಬರೂ ವೃಕ್ಷದ ಮೇಲಿದ್ದ ಆ ವನಚರನನ್ನು ಗಮನಿಸಲಿಲ್ಲ. ಆ ವನಚರನಾದರೋ, ಆ ವೃಕ್ಷದ ಜೊತೆಯಲ್ಲಿಯೇ ಭಸ್ಮವಾದನು.

ದ್ವಿಜಪ್ರಭಾವಾದ್ ರಾಜೇಂದ್ರ ಜೀವಿತಃ ಸವನಸ್ಪತಿಃ ।
ತೇನಾಗತ್ಯ ನರಶ್ರೇಷ್ಠ ನಗರೇಽಸ್ಮಿನ್ ನಿವೇದಿತಮ್ ॥೩೦॥

ಎಲೈ ರಾಜೇಂದ್ರನೇ, ಕಾಶ್ಯಪರ ಪ್ರಭಾವದಿಂದ ಆ ವನಸ್ಪತಿಯು ಪುನಃ ಜೀವನವನ್ನು ಪಡೆಯಿತು. ಆ ವನಚರನು ನಗರಕ್ಕೆ ಬಂದು ತಕ್ಷಕನಿಗೂ ಮತ್ತು ಆ ಬ್ರಾಹ್ಮಣನಿಗೂ ನಡೆದ ಎಲ್ಲಾ ವೃತ್ತಾಂತವನ್ನೂ ನಿವೇದಿಸಿದನು.

ಯಥಾವೃತ್ತಂ ತು ತತ್ ಸರ್ವಂ ತಕ್ಷಕಸ್ಯ ದ್ವಿಜಸ್ಯ ಚ ।
ಏತತ್ ತೇ ಕಥಿತಂ ರಾಜನ್ ಯಥಾವೃತ್ತಂ ಯಥಾಶ್ರುತಮ್ ।
ಶ್ರುತ್ವಾ ತು ನೃಪಶಾರ್ದೂಲ ಪ್ರಕುರುಷ್ವ ಯಥೇಪ್ಸಿತಮ್ ॥೩೧॥

ಎಲೈ ರಾಜನೇ, ಹೀಗೆ ಆ ಘಟನೆಯು ನಡೆದಂತೆ ಮತ್ತು ನಾವು ಕೇಳಿದಂತೆ, ನಿನಗೆ ನಿರೂಪಿಸಿದ್ದೇವೆ. ನೃಪಶಾರ್ದೂಲನೇ, ಇದನ್ನು ಕೇಳಿ ನಿನಗೆ ಇಷ್ಟಬಂದಂತೆ ಮಾಡು.

ಸೂತಃ

ಮಂತ್ರಿಣಾಂ ವಚನಂ ಶ್ರುತ್ವಾ ಸ ರಾಜಾ ಜನಮೇಜಯಃ ।
ಪರ್ಯತಪ್ಯತ ದುಃಖಾರ್ತಃ ಪ್ರತ್ಯಪಿಂಕ್ಷತ್ ಕರೇ ಕರಮ್ ॥೩೨॥

ಮಂತ್ರಿಗಳ ಮಾತನ್ನು ಕೇಳಿದ ಆ ಜನಮೇಜಯರಾಜನು ದುಃಖದಿಂದ ಆರ್ತನಾಗಿ ಪರಿತಾಪವನ್ನು ಹೊಂದಿ, ಕೈಯಲ್ಲಿ ಕೈಯನ್ನು ಹಿಸುಕಿದನು.

ನಿಃಶ್ವಸನ್ನುಷ್ಣಮಸಕೃದ್ ದೀರ್ಘಂ ರಾಜೀವಲೋಚನಃ ।
ಮುಮೋಚಾಶ್ರೂಣಿ ಚ ತದಾ ನೇತ್ರಾಭ್ಯಾಂ ಪ್ರರುದನ್ ನೃಪಃ ।
ಉವಾಚ ಚ ಮಹೀಪಾಲೋ ದುಃಖಶೋಕಸಮನ್ವಿತಃ ॥೩೩॥

ಪದ್ಮನೇತ್ರನಾದ ಅವನು ಅನೇಕ ಬಾರಿ ದೀರ್ಘವಾದ ನಿಟ್ಟುಸಿರನ್ನು ಬಿಡುತ್ತಾ, ಕಣ್ಣಿಂದ ನೀರನ್ನು ಸುರಿಸಿ ಆಗ ರೋದನವನ್ನು ಮಾಡಿದನು. ದುಃಖಶೋಕಸಮನ್ವಿತವಾದ ರಾಜನು ಆಗ ಹೀಗೆ ಹೇಳಿದನು.

ಶ್ರುತ್ವೈತದ್ ಭವತಾಂ ವಾಕ್ಯಂ ಪಿತುಃ ಸ್ವರ್ಗಗತಿಂ ಪ್ರತಿ ।
ನಿಶ್ಚಿತೇಯಂ ಮಮ ಮತಿರ್ಯಾ ವೈ ತಾಂ ಮೇ ನಿಬೋಧತ ॥೩೪॥

ಮಂತ್ರಿಗಳೇ, ನನ್ನ ತಂದೆಯ ಸ್ವರ್ಗಗಮನದ ವಿಷಯದಲ್ಲಿ ನಿಮ್ಮ ಈ ಮಾತುಗಳನ್ನು ಕೇಳಿ ನನಗೆ ಯಾವ ಬುದ್ಧಿಯು ಉಂಟಾಗಿದೆ ಎಂಬುದನ್ನು ಹೇಳುತ್ತೇನೆ ಕೇಳಿ.

ಅನಂತರಮಹಂ ಮನ್ಯೇ ತಕ್ಷಕಸ್ಯ ದುರಾತ್ಮನಃ ।
ಪ್ರತಿಕರ್ತವ್ಯಮಿತ್ಯೇವಂ ಯೇನ ಮೇ ಹಿಂಸಿತಃ ಪಿತಾ ॥೩೫॥

ಯಾವ ತಕ್ಷಕನು ನನ್ನ ತಂದೆಯನ್ನು ವಧೆಮಾಡಿದನೋ ಅಂತಹ ದುರಾತ್ಮನಾದ ತಕ್ಷಕನಿಗೆ ತಕ್ಷಣವೇ ಪ್ರತಿಕಾರವನ್ನು ಮಾಡುವುದು ಯೋಗ್ಯವೆಂದು ನಾನು ಭಾವಿಸುತ್ತೇನೆ.

ಋಷೇರ್ಹಿ ಶೃಂಗೇರ್ವಚನಂ ಕೃತ್ವಾ ದಷ್ಟ್ವಾ ಚ ಪಾರ್ಥಿವಃ ।
ಯದ್ಯಾಗಚ್ಛೇದ್ಯಸೌ ವಿಪ್ರೋ ನನು ಜೀವೇತ್ ಪಿತಾ ಮಮ ॥೩೬॥

ಪರಿಹೀಯೇತ ಕಿಂ ತಸ್ಯ ಯದಿ ಜೀವೇತ್ ಸ ಪಾರ್ಥಿವಃ ।
ಕಾಶ್ಯಪಸ್ಯ ಪ್ರಯೋಗೇಣ ಮಂತ್ರಿಣಃ ಸುನಯೇನ ಚ ।
ಸ ಚ ವಾರಿತವಾನ್ ಮೋಹಾತ್ ಕಾಶ್ಯಪಂ ದ್ವಿಜಸತ್ತಮಮ್ ॥೩೭॥

ಆ ಸರ್ಪವು ಶೃಂಗಿಋಷಿಯ ವಚನದಂತೆ ಮಾಡಿ ಅವನನ್ನು ಕಚ್ಚಿದ ಮೇಲೆ ಈ ಬ್ರಾಹ್ಮಣನು ಅಲ್ಲಿಗೆ ಹೋಗಿದ್ದರೆ, ನನ್ನ ತಂದೆಯು ಬದುಕಿರುತ್ತಿದ್ದನಷ್ಟೆ. ಮಂತ್ರಸಿದ್ಧಿಯುಳ್ಳ ಕಾಶ್ಯಪರ ಮಂತ್ರಪ್ರಯೋಗ- ದಿಂದಲೂ ಮತ್ತು ತನ್ನ ವಿನಯಾದಿಶೋಭನ ಗುಣಗಳಿಂದಲೂ ರಾಜನಾದ ನನ್ನ ತಂದೆಯು ಬದುಕಿದ್ದರೆ, ತಕ್ಷಕನಿಗೆ ಆಗುತ್ತಿದ್ದ ಹಾನಿಯೇನು?

ಸಂಜೀವೀವಯಿಷುಂ ಪ್ರಾಪ್ತಂ ರಾಜಾನಮಪರಾಜಿತಮ್ ।
ಮಹಾನತಿಕ್ರಮೋ ಹ್ಯೇಷ ತಕ್ಷಕಸ್ಯ ದುರಾತ್ಮನಃ ।
ದ್ವಿಜಸ್ಯ ಯೋऽದದಾದ್ ವಿತ್ತಂ ಮಾ ನೃಪಂ ಜೀವಯೇದಿತಿ ॥೩೮॥

ಅವನು ಮೋಹದಿಂದ ಅಪರಾಜಿತನಾದ ರಾಜನನ್ನು ಬದುಕಿಸಲು ಬಂದ ಬ್ರಾಹ್ಮಣಶ್ರೇಷ್ಠನಾದ ಕಾಶ್ಯಪನನ್ನು ನಿಷೇಧಿಸಿದನು. ಬ್ರಾಹ್ಮಣನಿಗೆ ರಾಜನನ್ನು ಬದುಕಿಸಬೇಡ ಎಂದು ಹೇಳಿ ಧನವನ್ನು ಕೊಟ್ಟುದುದು ದುರಾತ್ಮನಾದ ತಕ್ಷಕನು ಮಾಡಿದ ಮಹಾಪರಾಧ.

ಉದಂಕಸ್ಯ ಪ್ರಿಯಂ ಕುರ್ವನ್ ಆತ್ಮನಶ್ಚ ಮನಃಪ್ರಿಯಮ್ ।
ಭವತಾಂ ಚೈವ ಸರ್ವೇಷಾಂ ಯಾಸ್ಯಾಮ್ಯಪಚಿತಿಂ ಪಿತುಃ ॥೩೯॥

ಉದಂಕನಿಗೆ ಪ್ರಿಯವನ್ನು ಮಾಡುತ್ತಾ, ನನ್ನ ಮನಸ್ಸಿಗೆ ಪ್ರಿಯವನ್ನು ಮಾಡುತ್ತಾ, ನಿಮ್ಮೆಲ್ಲರಿಗೆ ಪ್ರಿಯವನ್ನು ಮಾಡುತ್ತಾ ತಂದೆಯ ಮರಣಕ್ಕೆ ಪ್ರತೀಕಾರವನ್ನು ಮಾಡಿ ತಂದೆಯನ್ನು ಪೂಜಿಸುತ್ತೇನೆ.

॥ ಇತಿ ಶ್ರೀಮನ್ಮಹಾಭಾರತೇ ಶತಸಹಸ್ರಿಕಾಯಾಂಸಂಹಿತಾಯಾಮಾದಿಪರ್ವಣಿ
ಪಂಚಚತ್ವಾರಿಂಶೋಽಧ್ಯಾಯಃ ॥
॥ ಇತಿ ಆಸ್ತೀಕಪರ್ವಣಿ ತ್ರಯಸ್ತ್ರಿಂಶೋಽಧ್ಯಾಯಃ ॥

ಇಲ್ಲಿಗೆ ಮಹಾಭಾರತದ ಆದಿಪರ್ವದಲ್ಲಿ ನಲವತ್ತೈದನೆಯ ಅಧ್ಯಾಯ ಮುಗಿಯಿತು.

★★★★★

ನಲವತ್ತಾರನೆಯ ಅಧ್ಯಾಯ

(ಜನಮೇಜಯನಿಂದ ಋತ್ವಿಜರ ಮೂಲಕ ಸರ್ಪಯಾಗ ಪ್ರಾರಂಭ. ಅನೇಕ ಸರ್ಪಗಳ ಹೋಮ.)

ಸೂತಃ

ಏವಮುಕ್ತ್ವಾ ತತಃ ಶ್ರೀಮಾನ್ ಮಂತ್ರಿಭಿಶ್ಚಾನುಮೋದಿತಃ ।
ಆರುರೋಹ ಪ್ರತಿಜ್ಞಾಂ ಚ ಸರ್ಪಸತ್ರಾಯ ಪಾರ್ಥಿವಃ ॥೧॥

ಸಂಪದ್ಯುಕ್ತನಾದ ಆ ರಾಜನು ಹೀಗೆ ಹೇಳಿ, ಮಂತ್ರಿಗಳಿಂದಲೂ ಅನುಮೋದಿತನಾಗಿ, ಸರ್ಪಸತ್ರಕ್ಕಾಗಿ ಮಾಡಿದ ಪ್ರತಿಜ್ಞೆಯನ್ನು ನೆರವೇರಿಸಿದನು.

ಬ್ರಹ್ಮನ್ ಭರತಶಾರ್ದೂಲೋ ರಾಜಾ ಪಾರಿಕ್ಷಿತಸ್ತದಾ ।
ಪುರೋಹಿತಮಥಾಹೂಯ ಋತ್ವಿಜೋ ವಸುಧಾಧಿಪಃ ।
ಅಬ್ರವೀದ್ ವಾಕ್ಯಸಂಪನ್ನಃ ಸಂಪನ್ನಾರ್ಥಕರಂ ವಚಃ ॥೨॥

ಎಲೈ ಬ್ರಾಹ್ಮಣನೇ, ಭರತಶಾರ್ದೂಲನಾದ, ವಸುಧಾಧಿಪತಿಯಾದ, ಪರೀಕ್ಷಿತನ ಮಗನಾದ, ವಾಕ್ಯಸಂಪನ್ನನಾದ ಜನಮೇಜಯನು ಆಗ ಪುರೋಹಿತರನ್ನೂ ಮತ್ತು ಋತ್ವಿಜರನ್ನೂ ಕರೆದು, ಶ್ರೇಷ್ಠವಾದ ಮತ್ತು ಅರ್ಥಗರ್ಭಿತವಾದ ಈ ಮಾತನ್ನು ಆಡಿದನು.

ಜನಮೇಜಯಃ

ಯೋ ನೋ ಹಿಂಸಿತವಾಂಸ್ತಾತಂ ತಕ್ಷಕಃ ಸ ದುರಾತ್ಮವಾನ್ ।
ಪ್ರತಿಕುರ್ಯಾಂ ತಥಾ ತಸ್ಯ ತದ್ ಭವಂತೋ ಬ್ರುವಂತು ಮೇ ॥೩॥

ಯಾವ ದುರಾತ್ಮನಾದ ತಕ್ಷಕನು ನನ್ನ ತಂದೆಯನ್ನು ದಹಿಸಿದನೋ (ಹಿಂಸಿಸಿದನೋ) ಅವನಿಗೆ ನಾನು ಪ್ರತೀಕಾರವನ್ನು ಮಾಡಲು ಬಯಸುತ್ತೇನೆ. ಅದನ್ನು ನೀವು ನನಗೆ ಹೇಳಿ.

ಅಪಿ ತತ್ಕರ್ಮ ವಿದಿತಂ ಭವತಾಂ ಯೇನ ಪನ್ನಗಮ್ ।
ತಕ್ಷಕಂ ಸಂಪ್ರದೀಪ್ತೇऽಗ್ನೌ ಪ್ರಾಪಯೇಯಂ ಸಬಾಂಧವಾನ್ ॥೪॥

ಯಾವ ಕರ್ಮವನ್ನು ಮಾಡಿದರೆ, ತಕ್ಷಕನೂ, ಅವನ ಬಾಂಧವರೂ, ಸಂಪ್ರದೀಪ್ತವಾದ ಅಗ್ನಿಯಲ್ಲಿ ಬೀಳುವರೋ ಅಂತಹ ಕರ್ಮವು ನಿಮಗೆ ತಿಳಿದಿದೆಯೆ?

ಯಥಾ ಯೇನ ಪಿತಾ ಮಹ್ಯಂ ಪೂರ್ವಂ ದಗ್ಧೋ ವಿಷಾಗ್ನಿನಾ ।
ತಥಾऽಹಮಪಿ ತಂ ಪಾಪಂ ದಗ್ಧುಮಿಚ್ಛಾಮಿ ಪನ್ನಗಮ್ ॥೫॥

ಹೇಗೆ ಹಿಂದೆ ನನ್ನ ತಂದೆಯು ಅವನ ವಿಷಾಗ್ನಿಯಿಂದ ದಗ್ಧನಾದನೋ, ಅದರಂತೆ ನಾನೂ ಸಹ ಆ ಪಾಪಿಯಾದ ನಾಗನನ್ನು ಅಗ್ನಿಯಲ್ಲಿ ದಹನಮಾಡಲು ಬಯಸುತ್ತೇನೆ.

ಋತ್ವಿಜಃ

ಅಸ್ತಿ ರಾಜನ್ ಮಹತ್ ಸತ್ರಂ ತದರ್ಥಂ ದೇವನಿರ್ಮಿತಮ್ ।
ಸರ್ಪಸತ್ರಮಿತಿ ಖ್ಯಾತಂ ಪುರಾಣೇ ಕಥ್ಯತೇ ನೃಪ ॥೬॥

ರಾಜನೇ, ಆ ಉದ್ದೇಶದಿಂದ ದೇವತೆಗಳಿಂದ ನಿರ್ಮಿತವಾದ ಒಂದು ದೊಡ್ಡ ಯಾಗವಿದೆ. ಎಲೈ ರಾಜನೇ, ಅದು ಸರ್ಪಸತ್ರವೆಂಬ ಹೆಸರಿನಿಂದ ಪ್ರಖ್ಯಾತವಾಗಿದೆ ಮತ್ತು ಅದು ಪುರಾಣಗಳಲ್ಲಿ ಹೇಳಲ್ಪಡುತ್ತದೆ.

ಆಹರ್ತಾ ತಸ್ಯ ಸತ್ರಸ್ಯ ತ್ವನ್ನಾನ್ಯೋಽದ್ಯ ಜನಾಧಿಪ ।
ಇತಿ ಪೌರಾಣಿಕಾಃ ಪ್ರಾಹುರಸ್ಮಾಕಂ ಚಾಸ್ತಿ ಸ ಕ್ರತುಃ ॥೭॥

ಎಲೈ ರಾಜನೇ, ನಿನ್ನನ್ನು ಬಿಟ್ಟು ಬೇರೆ ಯಾರೂ ಆ ಯಾಗವನ್ನು ಮಾಡುವವರು ಇಲ್ಲವೆಂದು ಪೌರಾಣಿಕರು ಹೇಳುತ್ತಾರೆ. ನಮ್ಮಲ್ಲಿಯೂ ಆ ಯಾಗದ ವಿದ್ಯೆಯು ಇದೆ.

ಸೂತಃ

ಏವಮುಕ್ತಃ ಸ ರಾಜರ್ಷಿರ್ಮೇನೇ ಸರ್ಪಂ ಹಿ ತಕ್ಷಕಮ್ ।
ಹುತಾಶನಮುಖಂ ದೀಪ್ತಂ ಪ್ರವಿಷ್ಟಂ ದ್ವಿಜಸತ್ತಮ ॥೮॥

ಎಲೈ ಬ್ರಾಹ್ಮಣಶ್ರೇಷ್ಠನೇ, ಹೀಗೆ ಹೇಳಲ್ಪಟ್ಟ ರಾಜರ್ಷಿಯಾದ ಅವನು ತಕ್ಷಕನಾಗನು ಜ್ವಲಿಸುವ ಅಗ್ನಿಯಮುಖದಲ್ಲಿ ಪ್ರವಿಷ್ಟನಾದನು ಎಂದೇ ತಿಳಿದನು.

ತತೋಽಬ್ರವೀನ್ಮಂತ್ರವಿದಃ ಕರ್ಮಜ್ಞಾನ್ ಬ್ರಾಹ್ಮಣಾಂಸ್ತದಾ ।
ಆಹರಿಷ್ಯಾಮಿ ತತ್ಸತ್ರಂ ಸಂಭಾರಾಃ ಸಂಭ್ರಿಯಂತು ಮೇ ॥೯॥

ಅನಂತರ ಅವನು ಮಂತ್ರವೇತ್ತರೂ, ಕರ್ಮವನ್ನು ತಿಳಿದವರೂ ಆದ ಬ್ರಾಹ್ಮಣರನ್ನು ಕುರಿತು ಆ ಯಾಗವನ್ನು ನಾನು ಆಚರಿಸುವೆನು. ಅದಕ್ಕೆ ಬೇಕಾದ ಸಾಮಗ್ರಿಗಳನ್ನು ನನ್ನ ಸಲುವಾಗಿ ಸಂಗ್ರಹಿಸಿ ಎಂದು ಹೇಳಿದನು.

ತತಸ್ತ ಋತ್ವಿಜಸ್ತಸ್ಯ ಶಾಸ್ತ್ರೇಣ ದ್ವಿಜಸತ್ತಮ ।
ದೇಶಂ ತಂ ಮಾಪಯಾಮಾಸುರ್ಯಜ್ಞಾಯತನಕಾರಣಾತ್ ॥೧೦॥

ಎಲೈ ಬ್ರಾಹ್ಮಣಶ್ರೇಷ್ಠನೇ, ಅನಂತರ ಅವನ ಋತ್ವಿಜರು ಶಾಸ್ತ್ರೋಕ್ತವಿಧಾನದಿಂದ ಯಜ್ಞಶಾಲೆಯನ್ನು ನಿರ್ಮಾಣಮಾಡಲು ಭೂಮಿಯನ್ನು ಅಳೆಸಿದರು.

ಯಥಾವಜ್ಜ್ಞಾನವಿದ್ವಾಂಸಃ ಸರ್ವೇ ವಿದ್ಯಾಪರಾಂಗತಾಃ ।
ಋದ್ಧ್ಯಾ ಪರಮಯಾ ಯುಕ್ತಮಿಷ್ಟಂ ವಿದ್ವಜ್ಜನಾಯುತಮ್ ॥೧೧॥

ಪ್ರಭೂತಧನಧಾನ್ಯಾಢ್ಯಮ್ ಋತ್ವಿಜಃ ಸುನಿವೇಶಿತಮ್ ।
ನಿರ್ಮಾಯ ಚಾಪಿ ವಿಧಿವದ್ ಯಜ್ಞಾಯತನಮುತ್ತಮಮ್ ।
ರಾಜಾನಂ ದೀಕ್ಷಯಾಮಾಸುಃ ಸರ್ಪಸತ್ರಾಯ ವೈ ದ್ವಿಜಾಃ ॥೧೨॥

ಸರಿಯಾದ ಜ್ಞಾನವನ್ನು ಹೊಂದಿದ್ದ, ವಿದ್ಯಾಪಾರಂಗತರಾದ, ಆ ಎಲ್ಲಾ ಋತ್ವಿಜರು ಪರಮಸಮೃದ್ಧಿಯಿಂದ ಕೂಡಿದ, ವಿದ್ವಜ್ಜನಾಶ್ರಯವಾದ, ಬಹಳವಾದ ಧನಧಾನ್ಯಗಳಿಂದ ತುಂಬಿದ, ಭದ್ರವಾಗಿ ಕಟ್ಟಲ್ಪಟ್ಟ ಶ್ರೇಷ್ಠವಾದ ಯಜ್ಞಶಾಲೆಯನ್ನು ವಿಧಿಪೂರ್ವಕವಾಗಿ ನಿರ್ಮಾಣಮಾಡಿ ಸರ್ಪಸತ್ರದ ಸಲುವಾಗಿ ರಾಜನನ್ನು ದೀಕ್ಷಿತನನ್ನಾಗಿ ಮಾಡಿದರು.

ಇದಂ ಚಾಸೀತ್ ತತ್ರ ಪೂರ್ವಂ ಸರ್ಪಸತ್ರೇ ಭವಿಷ್ಯತಿ ।
ನಿಮಿತ್ತಂ ಮಹದುತ್ಪನ್ನಂ ಯಜ್ಞವಿಘ್ನಕರಂ ತದಾ ॥೧೩॥

ಇನ್ನೂ ಸರ್ಪಸತ್ರವು ಮುಂದೆ ನಡೆಯಬೇಕಾಗಿದ್ದ ಆ ಸಂದರ್ಭದಲ್ಲಿ ಮೊದಲೇ ಅಲ್ಲಿ ಯಜ್ಞಕ್ಕೆ ವಿಘ್ನವನ್ನು ತರುವ ದೊಡ್ಡ ಸೂಚನೆಯು ಉಂಟಾಯಿತು.

ಯಜ್ಞಾಯತನೇ ತಸ್ಮಿನ್ ಕ್ರಿಯಮಾಣೇ ವಚೋಽಬ್ರವೀತ್।
ಸ್ಥಪತಿರ್ಬುದ್ಧಿಸಂಪನ್ನೋ ವಾಸ್ತುವಿದ್ಯಾವಿಶಾರದಃ ।
ಇತ್ಯಬ್ರವೀತ್ ಸೂತ್ರಧಾರಃ ಸೂತಃ ಪೌರಾಣಿಕಸ್ತದಾ ॥೧೪॥

ಯಜ್ಞಶಾಲೆಯ ನಿರ್ಮಾಣ ಮಾಡಲ್ಪಡುತ್ತಿರಲು ವಾಸ್ತುವಿದ್ಯಾ- ವಿಶಾರದನೂ, ಮೇಧಾವಿಯೂ ಆದ ಸ್ಥಪತಿಯು (ತಾನೇ ರಾಜನಿಗೆ ಹೇಳುವುದಕ್ಕೆ ಹೆದರಿ) ರಾಜನ ವೃದ್ಧಸಾರಥಿಯ ಮೂಲಕ ಈ ಮಾತನ್ನು ಹೇಳಿದನು.

ಯಸ್ಮಿನ್ ಕಾಲೇ ಚ ದೇಶೇ ವಃ ಸ್ಥಾಪನೇಯಂ ಪ್ರಕೀರ್ತಿತಮ್ ।
ಬ್ರಾಹ್ಮಣಂ ಕಾರಣಂ ಕೃತ್ವಾ ನಾಯಂ ಸಂಸ್ಥಾಪ್ಯತೇ ಕ್ರತುಃ ॥೧೫॥

ಈ ನಿಮ್ಮ ಯಜ್ಞವು ಯಾವ ದೇಶದಲ್ಲಿ ಮತ್ತು ಕಾಲದಲ್ಲಿ ಸಮಾಪ್ತಿಗೊಳ್ಳಬೇಕೆಂದು ಸಂಕಲ್ಪಿತವಾಗಿದೆಯೋ, ಒಬ್ಬ ಬ್ರಾಹ್ಮಣ- ನಿಮಿತ್ತದಿಂದ ಈ ಯಜ್ಞವು ಹಾಗೆ ಸಮಾಪ್ತಿಗೊಳ್ಳುವುದಿಲ್ಲ.

ಏತಚ್ಛ್ರುತ್ವಾ ಚ ರಾಜಾ ಸ ಪ್ರಾಗ್ದೀಕ್ಷಾ ಕಾಲಮಬ್ರವೀತ್ ।
ಕ್ಷತ್ತಾರಂ ನೇಹ ಮೇ ಕಶ್ಚಿದಜ್ಞಾತಃ ಪ್ರವಿಶೇದಿತಿ ॥೧೬॥

ಯಜ್ಞದೀಕ್ಷೆಗಿಂತ ಪೂರ್ವದಲ್ಲಿಯೇ ಈ ಮಾತನ್ನು ಕೇಳಿದ ರಾಜನು ಸಾರಥಿಯನ್ನು ಕುರಿತು ನನಗೆ ತಿಳಿಯದಂತೆ ಇಲ್ಲಿ ಯಾರೂ ಪ್ರವೇಶವನ್ನು ಮಾಡಬಾರದು ಎಂದು ಹೇಳಿದನು.

ತತಃ ಕರ್ಮ ಪ್ರವವೃಧೇ ಸರ್ಪಸತ್ರೇ ವಿಧಾನತಃ ।
ಪರ್ಯಕ್ರಾಮಂಶ್ಚ ವಿಧಿವತ್ ಸ್ವೇ ಸ್ವೇ ಕರ್ಮಣಿ ಯಾಜಕಾಃ ॥೧೭॥

ಅನಂತರ ಸರ್ಪಸತ್ರದಲ್ಲಿ ಶಾಸ್ತ್ರವಿಧಾನದಿಂದ ಕರ್ಮವು ಪ್ರಾರಂಭವಾಯಿತು. ಯಾಜಕರು ವಿಧಿವತ್ತಾಗಿ ತಮ್ಮ ತಮ್ಮ ಕರ್ಮಗಳಲ್ಲಿ ನಿರತರಾದರು.

ವಿಧಾಯ ಕೃಷ್ಣವಾಸಾಂಸಿ ಧೂಮಸಂರಕ್ತಲೋಚನಾಃ ।
ಜುಹುವುರ್ಮಂತ್ರವಚ್ಚೈವ ಸಮಿದ್ಧಂ ಜಾತವೇದಸಮ್ ॥೧೮॥

ಕೃಷ್ಣವಸ್ತ್ರಗಳನ್ನು ಧರಿಸಿ, ಧೂಮದಿಂದ ಕೆಂಪಾದ ಕಣ್ಣುಳ್ಳವರಾಗಿ ಸಮಿದ್ಧವಾದ ಅಗ್ನಿಯಲ್ಲಿ ಮಂತ್ರಪೂರ್ವಕವಾಗಿ ಹೋಮವನ್ನು ಮಾಡಿದರು.

ಕಂಪಯಂತಶ್ಚ ಸರ್ವೇಷಾಮುರಗಾಣಾಂ ಮನಾಂಸಿ ತೇ ।
ಸರ್ಪಾನಾಜುಹುವುಸ್ತತ್ರ ಸರ್ವಾನಗ್ನಿಮುಖೇ ತದಾ ॥೧೯॥

ಅವರು ಎಲ್ಲಾ ಉರಗಗಳ ಮನಸ್ಸನ್ನು ನಡುಗಿಸುತ್ತಾ, ಅಲ್ಲಿ ಅಗ್ನಿಮುಖದಲ್ಲಿ ಆ ಎಲ್ಲಾ ಸರ್ಪಗಳನ್ನೂ ಆಹ್ವಾನಿಸಿದರು.

ತತಃ ಸರ್ಪಾಃ ಸಮಾಪೇತುಃ ಪ್ರದೀಪ್ತೇ ಹವ್ಯವಾಹನೇ ।
ವಿವೇಷ್ಟಮಾನಾಃ ಕೃಪಣಾ ಆಹ್ವಯಂತಃ ಪರಸ್ಪರಮ್ ॥೨೦॥

ಆಗ ಉರಿಯುತ್ತಿರುವ ಅಗ್ನಿಯಲ್ಲಿ ಸರ್ಪಗಳು ಹೊರಳಾಡುತ್ತಾ, ಕಾರ್ಪಣ್ಯದಿಂದ ಕೂಡಿ, ಒಬ್ಬರನ್ನೊಬ್ಬರು ಕರೆಯುತ್ತಾ ಬಿದ್ದವು.

ವಿಸ್ಫುರಂತಃ ಶ್ವಸಂತಶ್ಚ ವೇಷ್ಟಯಂತಸ್ತಥಾಪರೇ ।
ಪುಚ್ಛೈಃ ಶಿರೋಭಿಶ್ಚ ಭೃಶಂ ಚಿತ್ರಭಾನುಂ ಪ್ರಪೇದಿರೇ ॥೨೧॥

ಇನ್ನೂ ಕೆಲವು ಸರ್ಪಗಳು ಒದ್ದಾಡುತ್ತಾ, ನಿಟ್ಟುಸಿರನ್ನು ಬಿಡುತ್ತಾ , ಸಿಂಬಿಗಳನ್ನು ಸುತ್ತಿಕೊಂಡು, ತಲೆ ಮತ್ತು ಬಾಲಗಳನ್ನು ಅಲ್ಲಾಡಿಸುತ್ತಾ , ಎಲ್ಲವೂ ಅಗ್ನಿಯೊಳಗೆ ಬಿದ್ದವು.

ಶ್ವೇತಾಃ ಕೃಷ್ಣಾಶ್ಚ ರಕ್ತಾಶ್ಚ ಸ್ಥವಿರಾಃ ಶಿಶವಸ್ತಥಾ ।
ರವಂತೋ ಭೈರವಾನ್ ನಾದಾನ್ ಪೇತುರ್ದೀಪ್ತೇ ವಿಭಾವಸೌ ॥೨೨॥

ಬಿಳಿಯ ಬಣ್ಣದ, ಕಪ್ಪುಬಣ್ಣದ, ಕೆಂಪುಬಣ್ಣದ, ವಯಸ್ಸಾದ ಮತ್ತು ಶಿಶುಗಳಾದ ಸರ್ಪಗಳು ಭೈರವನಾದವನ್ನು ಮಾಡುತ್ತಾ ಪ್ರದೀಪ್ತವಾದ ಅಗ್ನಿಯಲ್ಲಿ ಬಿದ್ದವು.

ಕ್ರೋಶೋ ಯೋಜನಮಾತ್ರೋ ಹಿ ಗೋಕರ್ಣಸ್ಯ ಪ್ರಮಾಣತಃ ।
ಪತಂತ್ಯಜಸ್ರಂ ವೇಗೇನ ಚಾಶ್ನಾವಗ್ನಿಮತೋಽಪರೇ ॥೨೩॥

ಒಂದು ಕ್ರೋಶದಷ್ಟು ಉದ್ದವಾದಂತಹ, ಒಂದು ಯೋಜನದಷ್ಟು ಉದ್ದವಾದಂತಹ, ಒಂದು ಗೇಣಿನಷ್ಟು ಚಿಕ್ಕದಾದಂತಹ ಸರ್ಪಗಳು ಸತತವಾಗಿ ವೇಗದಿಂದ ಸುಕ್ಕಿನಲ್ಲಿ ಬಿದ್ದು ಅಲ್ಲಿಂದ ಅಗ್ನಿಯೊಳಗೆ ಬಿದ್ದವು. ಉಳಿದ ಸರ್ಪಗಳೂ ಅಗ್ನಿಯಲ್ಲಿ ಬಿದ್ದವು.

ಏವಂ ಶತಸಹಸ್ರಾಣಿ ಪ್ರಯುತಾನ್ಯರ್ಬುದಾನಿ ಚ ।
ಅವಶಾನಿ ಪ್ರವಿಷ್ಟಾನಿ ಪನ್ನಗಾನಾಂ ದ್ವಿಜೋತ್ತಮ ॥೨೪॥

ಎಲೈ ಬ್ರಾಹ್ಮಣಶ್ರೇಷ್ಠನೇ, ಹೀಗೆ ನೂರು ಸಾವಿರಗಟ್ಟಲೆ ಅಥವಾ ಪ್ರಯುತಗಟ್ಟಲೆ ಅಥವಾ ಅರ್ಬುದಗಳಗಟ್ಟಲೆ ಸರ್ಪಗಳು ಅವಶವಾಗಿ ಅಗ್ನಿಯನ್ನು ಪ್ರವೇಶಿಸಿದವು.

ಉಂದುರಾ ಇವ ತತ್ರಾನ್ಯೇ ಹಸ್ತಿಹಸ್ತಾ ಇವಾಪರೇ ।
ಮತ್ತಾ ಇವ ಚ ಮಾತಂಗಾ ಮಹಾಕಾಯಾ ಮಹಾಬಲಾಃ ॥೨೫॥

ಉಚ್ಚಾವಚಾಶ್ಚ ಬಹವೋ ನಾನಾವರ್ಣಾ ವಿಷೋದ್ಬಣಾಃ ।
ಘೋರಾಶ್ಚ ಪರಿಘಪ್ರಖ್ಯಾ ದಂದಶೂಕಾ ಮಹಾಬಲಾಃ ।
ಪ್ರಪೇತುರಗ್ನಾವುರಗಾ ಮಾತೃವಾಗ್ದಂಡಪೀಡಿತಾಃ ॥೨೬॥

ಒಂದು ಮೂಷಿಕಪ್ರಮಾಣದ ಗಾತ್ರದ ಸರ್ಪಗಳೂ, ಇನ್ನೂ ಕೆಲವು ಆನೆಯ ಸೊಂಡಿಲಿನ ಗಾತ್ರದ ಸರ್ಪಗಳೂ, ಇನ್ನೂ ಕೆಲವು ಮದಿಸಿದ ಆನೆಗಳಂತೆ ದೊಡ್ಡ ದೇಹವನ್ನೂ ಮಹಾಬಲವನ್ನು ಹೊಂದಿದ ಸರ್ಪಗಳೂ, ಶ್ರೇಷ್ಠವಾದ ಮತ್ತು ಕನಿಷ್ಠವಾದ ಅನೇಕವರ್ಣಗಳಿಂದ ಕೂಡಿದ, ವಿಷ ಉಲ್ಬಣವಾದ ಸರ್ಪಗಳೂ, ಕ್ರೂರರಾದ,

ಒನಕೆಯಂತಿರುವ, ಯಾವಾಗಲೂ ಕಚ್ಚುವ ಸ್ವಭಾವವುಳ್ಳ, ಮಹಾಬಲವುಳ್ಳ ಸರ್ಪಗಳೂ, ತಾಯಿಯಾದ ಕದ್ರುವಿನ ಶಾಪಕ್ಕೆ ಒಳಗಾಗಿ ಅಗ್ನಿಯಲ್ಲಿ ಬಿದ್ದವು.

॥ ಇತಿ ಶ್ರೀಮನ್ಮಹಾಭಾರತೇ ಶತಸಹಸ್ರಿಕಾಯಾಂಸಂಹಿತಾಯಾಮಾದಿಪರ್ವಣಿ
ಷಟ್‌ಚತ್ವಾರಿಂಶೋಽಧ್ಯಾಯಃ ॥
॥ ಇತಿ ಆಸ್ತೀಕಪರ್ವಣಿ ಚತುಸ್ತ್ರಿಂಶೋ೯ಽಧ್ಯಾಯಃ ॥

ಇಲ್ಲಿಗೆ ಮಹಾಭಾರತದ ಆದಿಪರ್ವದಲ್ಲಿ ಹದಿನಾರನೆಯ ಅಧ್ಯಾಯ ಮುಗಿಯಿತು.

★★★★★

ನಲವತ್ತೇಳನೆಯ ಅಧ್ಯಾಯ

(ಸರ್ಪಸತ್ರದಲ್ಲಿ ಭಾಗವಹಿಸಿದ ಋತ್ವಿಜರ ನಾಮಕೀರ್ತನೆ. ವಾಸುಕಿಯಿಂದ ತನ್ನ ತಂಗಿಯನ್ನು ಕುರಿತು ಆಸ್ತೀಕನನ್ನು ಕಳುಹಿಸಿ ಸರ್ಪಯಾಗವನ್ನು ನಿಲ್ಲಿಸುವಂತೆ ಸೂಚನೆ.)

ಶೌನಕಃ

ಸರ್ಪಸತ್ರೇ ತು ವೈ ರಾಜ್ಞಃ ಪಾಂಡವೇಯಸ್ಯ ಧೀಮತಃ ।
ಜನಮೇಜಯಸ್ಯ ಕೇ ವಾಽಽಸನ್ ಋತ್ವಿಜಃ ಪರಮರ್ಷಯಃ ॥೧॥

ಮೇಧಾವಿಯಾದ ಪಾಂಡುವಂಶೋದ್ಭವನಾದ ಜನಮೇಜಯರಾಜನ ಸರ್ಪಸತ್ರದಲ್ಲಿ ಯಾವ ಶ್ರೇಷ್ಠರಾದ ಋಷಿಗಳು ಋತ್ವಿಜರಾಗಿದ್ದರು?

ಕೇ ಸದಸ್ಯಾ ಬಭೂವುಶ್ಚ ತಸ್ಮಿನ್ ಸತ್ರೇ ಸುದಾರುಣೇ ।
ವಿಷಾದಜನನೇಽತ್ಯರ್ಥಂ ಪನ್ನಗಾನಾಂ ಭಯಾವಹೇ ॥೨॥

ಅತ್ಯಂತ ವಿಷಾದಕರವಾದ, ಸರ್ಪಗಳಿಗೆ ಭಯವನ್ನುಂಟು ಮಾಡುವ, ಘೋರವಾದ ಆ ಸತ್ರದಲ್ಲಿ ಯಾರು ಸದಸ್ಯರಾಗಿದ್ದರು?

ಸರ್ವಂ ವಿಸ್ತರತಸ್ತಾತ ಭವಾನ್ ವ್ಯಾಖ್ಯಾತುಮರ್ಹತಿ ।
ಸರ್ಪಸತ್ರವಿಧಾನಜ್ಞಾ ವಿಜ್ಞೇಯಾಸ್ತೇऽಪಿ ಸೂತಜ ॥೩॥

ಪ್ರೀತಿಪಾತ್ರನೇ, ಇವೆಲ್ಲವನ್ನೂ ನೀನು ವಿಸ್ತಾರವಾಗಿ ಹೇಳಬೇಕು. ಎಲೈ ಸೂತಪುತ್ರನೇ, ಸರ್ಪಸತ್ರದ ವಿಧಾನವನ್ನು ತಿಳಿದವರನ್ನೂ ನಾನು ತಿಳಿದುಕೊಳ್ಳಬೇಕಾಗಿದೆ.

ಸೂತಃ

ಅಹಂ ತೇ ಕಥಯಿಷ್ಯಾಮಿ ನಾಮಾನೀಹ ಮನೀಷಿಣಾಮ್ ।
ಯ ಋತ್ವಿಜಃ ಸದಸ್ಯಾಶ್ಚ ತಸ್ಯಾಸನ್ ನೃಪತೇಸ್ತದಾ ॥೪॥

ಆ ರಾಜನ ಸರ್ಪಸತ್ರದಲ್ಲಿ ಮೇಧಾವಿಗಳಾದ ಋತ್ವಿಜರೂ ಮತ್ತು ಸದಸ್ಯರೂ ಯಾರಾಗಿದ್ದರೆಂದು ಅವರ ಹೆಸರುಗಳನ್ನು ನಿನಗೆ ಹೇಳುವೆನು.

ತತ್ರ ಹೋತಾ ಬಭೂವಾಥ ಬ್ರಾಹ್ಮಣಶ್ಚಂಡಭಾರ್ಗವಃ ।
ಚ್ಯವನಸ್ಯಾನ್ವಯೇ ಜಾತಃ ಖ್ಯಾತೋ ವೇದವಿದಾಂ ವರಃ ॥೫॥

ಅಲ್ಲಿ ಚ್ಯವನಕುಲದಲ್ಲಿ ಜನಿಸಿದ, ವೇದವೇತ್ತಗಳಲ್ಲಿ ಶ್ರೇಷ್ಠನಾದ, ಪ್ರಖ್ಯಾತನಾದ, ಚಂಡಭಾರ್ಗವನೆಂಬ ಬ್ರಾಹ್ಮಣನು ಹೋತೃವಾಗಿದ್ದನು.

ಉದ್ಗಾತಾ ಬ್ರಾಹ್ಮಣೋ ವೃದ್ಧೋ ವಿದ್ವಾನ್ ಕೌತ್ಸೋऽಥ ಜೈಮಿನಿಃ ।
ಬ್ರಹ್ಮಾऽಭವಚ್ಛಾರ್ಂಗರವೋऽಥಾಧ್ವರ್ಯುರ್ಬೋಧಪಿಂಗಲಃ ॥೬॥

ವಿದ್ವಾಂಸನೂ, ಕುತ್ಸಕುಲದಲ್ಲಿ ಜನಿಸಿದವನೂ, ವೃದ್ಧನೂ, ಬ್ರಾಹ್ಮಣನೂ ಆದ ಜೈಮಿನಿಯು ಉದ್ಗಾತೃವಾಗಿದ್ದನು. ಶಾರ್ಂಗರವನು ಬ್ರಹ್ಮನಾಗಿದ್ದನು. ಬೋಧಿ ಪಿಂಗಳನು ಅಧ್ವರ್ಯುವಾಗಿದ್ದನು.

ಸದಸ್ಯಶ್ಚಾಭವದ್ ವ್ಯಾಸಃ ಪುತ್ರಶಿಷ್ಯಸಹಾಯವಾನ್ ।
ಉದ್ದಾಲಕಃ ಕಾಮಠಕಃ ಶ್ವೇತಕೇತುಶ್ಚ ಶಾಂಡಿಲಃ ॥೭॥

ಅಸಿತೋ ದೇವಲಶ್ಚೈವ ನಾರದಃ ಪರ್ವತಸ್ತಥಾ ।
ಆತ್ರೇಯಃ ಕುಂಡಜಠರೌ ದ್ವಿಜಃ ಕಿರಿಕಟಸ್ತಥಾ ॥೮॥

ವಾತ್ಸ್ಯಃ ಶ್ರುತಶ್ರವಾ ವೃದ್ಧಃ ತಪಸ್ವಾಧ್ಯಾಯಶೀಲವಾನ್ ।
ಕಹೋಲೋ ದೇವಶರ್ಮಾ ಚ ಮೌದ್ಗಲ್ಯಃ ಶಮಠೋರಗಃ ॥೯॥

ಏತೇ ಚಾನ್ಯೇ ಚ ಬಹವೋ ಬ್ರಾಹ್ಮಣಾಃ ಸಂಶಿತವ್ರತಾಃ ।
ಸದಸ್ಯಾಶ್ಚಾಭವಂಸ್ತತ್ರ ಸತ್ರೇ ಪಾರಿಕ್ಷಿತಸ್ಯ ಹ ॥೧೦॥

ಪುತ್ರ ಮತ್ತು ಶಿಷ್ಯರಿಂದ ಒಡಗೂಡಿದ ವೇದವ್ಯಾಸರು ಅಲ್ಲಿ ಸದಸ್ಯರಾಗಿದ್ದರು. ಉದ್ದಾಲಕ, ಕಾಮಠಕ, ಶ್ವೇತಕೇತು, ಶಾಂಡಿಲ, ಅಸಿತ, ದೇವಲ, ನಾರದ, ಪರ್ವತ, ಆತ್ರೇಯ, ಕುಂಡಜಟರರು, ಕಿರಿಕಟ, ವಾತ್ಸ್ಯ, ತಪಸ್ವಾಧ್ಯಾಯಶೀಲನಾದ, ವೃದ್ಧನಾದ ಶ್ರುತಶ್ರವ, ಕಹೋಳ, ದೇವಶರ್ಮ, ಮೌದ್ಗಲ್ಯ, ಶಮಠೋರಗ ಇವರೂ ಮತ್ತು ಇನ್ನೂ ಅನೇಕ ವ್ರತಧಾರಿಗಳಾದ ಶ್ರೇಷ್ಠಬ್ರಾಹ್ಮಣರು ಪರೀಕ್ಷಿದ್ರಾಜನ ಸರ್ಪಸತ್ರದಲ್ಲಿ ಅಲ್ಲಿ ಸದಸ್ಯರಾಗಿದ್ದರು.

ಜುಹ್ವತ್ಸ್ರುತಿಕ್ಷ್ವಥ ತದಾ ಸರ್ಪಸತ್ರೇ ಮಹಾಕ್ರತೌ ।
ಅಹಯಃ ಪ್ರಾಪತಂಸ್ತತ್ರ ಸರ್ವಪ್ರಾಣಿಭಯಾವಹಾಃ ॥೧೧॥

ಋತ್ವಿಜರು ಮಹಾಕ್ರತುವಾದ ಆ ಸರ್ಪಸತ್ರದಲ್ಲಿ ಹೋಮವನ್ನು ಮಾಡುತ್ತಿರಲು ಎಲ್ಲಾ ಪ್ರಾಣಿಗಳಿಗೂ ಭಯವನ್ನುಂಟು ಮಾಡುವ ಸರ್ಪಗಳು ಅಲ್ಲಿ ಅಗ್ನಿಯೊಳಗೆ ಬಿದ್ದವು.

ವಸಾಮೇದೋವಹಾಃ ಕುಲ್ಯಾ ನಾಗಾನಾಂ ಸಂಪ್ರವರ್ತಿತಾಃ ।
ವವೌ ಗಂಧಸ್ತು ತುಮುಲೋ ದಹ್ಯತಾಮನಿಶಂ ತದಾ ॥೧೨॥

ಸರ್ಪಗಳ ಕೊಬ್ಬು ಮತ್ತು ಮೇದಸ್ಸಿನಿಂದ ಉಂಟಾದ ಸಣ್ಣನದಿಗಳು ಅಲ್ಲಿ ಹರಿದವು. ಸತತವಾಗಿ ದಹಿಸಲ್ಪಡುವ ಆ ಸರ್ಪಗಳ ತೀವ್ರವಾದ ಗಂಧವು ಎಲ್ಲಾ ಕಡೆಯಲ್ಲಿಯೂ ಹರಡಿತು.

ಪತತಾಂ ಚೈವ ನಾಗಾನಾಂ ವಿಷ್ಠಿತಾನಾಂ ತಥಾಂಬರೇ ।
ಅಶ್ರೂಯತಾನಿಶಂ ಶಬ್ದೋ ದಹ್ಯತಾಂ ಚಾಗ್ನಿನಾ ಭೃಶಮ್ ॥೧೩॥

ಬೀಳುತ್ತಿರುವ ಮತ್ತು ಆಕಾಶದಲ್ಲಿ ನಿಂತಿರುವ ಮತ್ತು ಅಗ್ನಿಯಲ್ಲಿ ದಹಿಸಲ್ಪಡುವ ಸರ್ಪಗಳ ತೀವ್ರವಾದ ಶಬ್ದವು ಸತತವಾಗಿ ಕೇಳಿಬರುತ್ತಿದ್ದಿತು.

ತಕ್ಷಕಸ್ತು ಸ ನಾಗೇಂದ್ರಃ ಪುರಂದರನಿವೇಶನಮ್ ।
ಗತಃ ಶ್ರುತ್ವೈವ ರಾಜಾನಂ ದೀಕ್ಷಿತಂ ಜನಮೇಜಯಮ್ ॥೧೪॥

ನಾಗೇಂದ್ರನಾದ ತಕ್ಷಕನು ಜನಮೇಜಯರಾಜನು ಸರ್ಪಸತ್ರಕ್ಕಾಗಿ ದೀಕ್ಷಿತನಾಗಿದ್ದಾನೆ ಎಂಬ ವಾರ್ತೆಯನ್ನು ಕೇಳಿದ ತಕ್ಷಣವೇ ಇಂದ್ರನ ಮನೆಗೆ ಹೋದನು.

ತತಃ ಸರ್ವಂ ಯಥಾವೃತ್ತಮಾಖ್ಯಾಯ ಭುಜಗೋತ್ತಮಃ ।
ಅಗಚ್ಛತ್ ಶರಣಂ ಭೀತೋ ನಮಸೃತ್ವಾ ಪುರಂದರಮ್ ॥೧೫॥

ಭುಜಗಶ್ರೇಷ್ಠನಾದ ಅವನು ನಡೆದುದೆಲ್ಲವನ್ನೂ ಇಂದ್ರನಿಗೆ ಯಥಾವತ್ತಾಗಿ ನಿರೂಪಿಸಿ ಭೀತನಾಗಿ, ಇಂದ್ರನನ್ನು ನಮಸ್ಕರಿಸಿ ಅವನಿಗೆ ಶರಣಾಗತನಾದನು.

ತಮಿಂದ್ರಃ ಪ್ರಾಹ ಸುಪ್ರೀತೋ ನ ತವಾಸ್ತೀಹ ತಕ್ಷಕ ।
ಭಯಂ ನಾಗೇಂದ್ರ ತಸ್ಮಾದ್ ವೈ ಸರ್ಪಸತ್ರಾತ್ ಕಥಂಚನ ॥೧೬॥

ಸುಪ್ರೀತನಾದ ಇಂದ್ರನು ಅವನನ್ನು ಕುರಿತು ನಾಗೇಂದ್ರನಾದ ತಕ್ಷಕನೇ, ಆ ಸರ್ಪಸತ್ರದಿಂದ ನಿನಗೆ ಯಾವ ರೀತಿಯಲ್ಲಿಯೂ ಭಯವಿಲ್ಲ ಎಂದು ಹೇಳಿದನು.

ಪ್ರಸಾದಿತೋ ಮಯಾ ಪೂರ್ವಂ ತವಾರ್ಥಾಯ ಪಿತಾಮಹಃ ।
ತಸ್ಮಾತ್ ತವ ಭಯಂ ನಾಸ್ತಿ ವ್ಯೇತು ತೇ ಮಾನಸೋ ಜ್ವರಃ ॥೧೭॥

ನಾನು ಹಿಂದೆ ನಿನ್ನ ಸಲುವಾಗಿ ಬ್ರಹ್ಮದೇವರನ್ನು ಕೇಳಿ ಅವರನ್ನು ಪ್ರಸನ್ನೀಕರಿಸಿಕೊಂಡೆ. ಆದ್ದರಿಂದ ನಿನಗೆ ಭಯವಿಲ್ಲ. ಮನಸ್ಸಿನ ಸಂತಾಪವನ್ನು ತ್ಯಜಿಸು.

ಏವಮಾಶ್ವಾಸಿತಸ್ತೇನ ತತಃ ಸ ಭುಜಗೋತ್ತಮಃ ।
ಉವಾಸ ಭವನೇ ತಸ್ಯ ಶಕ್ರಸ್ಯ ಮುದಿತಃ ಸುಖೀ ॥೧೮॥

ಹೀಗೆ ಆಶ್ವಾಸನೆಯನ್ನು ಪಡೆದ ಆ ಭುಜಗಶ್ರೇಷ್ಠನಾದ ತಕ್ಷಕನು ಇಂದ್ರನ ಮನೆಯಲ್ಲಿ ಸಂತೋಷದಿಂದ ಸುಖವಾಗಿ ವಾಸಮಾಡಿದನು.

ಅಜಸ್ರಂ ನಿಪತತ್ಸ್ವಗ್ನೌ ನಾಗೇಷು ಭೃಶದುಃಖಿತಃ ।
ಅಲ್ಪಶೇಷಪರೀವಾರೋ ವಾಸುಕಿಃ ಪರ್ಯತಪ್ಯತ ॥೧೯॥

ನಾಗಗಳು ಸತತವಾಗಿ ಅಗ್ನಿಯಲ್ಲಿ ಬೀಳುತ್ತಿರಲು ಈಗ ಅಲ್ಪ ಪರಿವಾರವನ್ನು ಹೊಂದಿದ್ದ ವಾಸುಕಿಯು ಬಹಳ ದುಃಖಿತನಾಗಿ ಪರಿತಾಪವನ್ನು ಪಟ್ಟನು.

ಕಶ್ಮಲಂ ಪ್ರಾವಿಶದ್ ಘೋರಂ ವಾಸುಕಿಃ ಪನ್ನಗೇಶ್ವರಃ ।
ಸ ಘೂರ್ಣಮಾನಹೃದಯೋ ಭಗಿನೀಮಿದಮಬ್ರವೀತ್ ॥೨೦॥

ಪನ್ನಗೇಶ್ವರನಾದ ವಾಸುಕಿಯು ಘೋರವಾದ ಮೋಹಕ್ಕೆ ಒಳಗಾದನು. ಅವನು ಬಿರಿಯುತ್ತಿರುವ ಹೃದಯದಿಂದ ತಂಗಿಯನ್ನು ಕುರಿತು ಈ ಮಾತನ್ನು ಆಡಿದನು.

ವಾಸುಕಿಃ

ದಹ್ಯಂತೇಽಂಗಾನಿ ಮೇ ಭದ್ರೇ ದಿಶೋ ನ ಪ್ರತಿಭಾಂತಿ ಮಾಮ್ ।
ಸೀದಾಮೀವ ಚ ಸಮ್ಮೋಹಾದ್ ಘೂರ್ಣತೀವ ಚ ಮೇ ಮನಃ ॥

ಮಂಗಳಸ್ವರೂಪಳೇ, ನನ್ನ ಶರೀರದ ಅವಯವಗಳು ಉರಿಯುತ್ತಿವೆ. ನನಗೆ ದಿಕ್ಕುಗಳು ತೋಚುತ್ತಿಲ್ಲ. ಮೋಹದಿಂದ ನಾನು ನಾಶಹೊಂದುವಂತೆ ಕಾಣುತ್ತದೆ. ನನ್ನ ಮನಸ್ಸು ಬಿರಿದುಹೋಗುತ್ತಿದೆ.

ದೃಷ್ಟಿರ್ಭ್ರಮತಿ ಮೇಽತೀವ ಹೃದಯಂ ದೀರ್ಯತೀವ ಚ ।
ಪತಿಷ್ಯಾಮ್ಯವಶೋಽದ್ಯಾಹಂ ತಸ್ಮಿನ್ ದೀಪ್ತೇ ವಿಭಾವಸೌ ॥೨೨॥

ನನ್ನ ಕಣ್ಣಿನ ದೃಷ್ಟಿಯು ಬಹಳವಾಗಿ ತಿರುಗುತ್ತಿದೆ. ನನ್ನ ಹೃದಯವು ಬಿರಿಯುವಂತೆ ತೋರುತ್ತದೆ. ಆ ದೀಪ್ತವಾದ ಅಗ್ನಿಯಲ್ಲಿ ನಾನೂ ಸಹ ಅವಶವಾಗಿ ಬೀಳುವೆನು.

ಪಾರೀಕ್ಷಿತಸ್ಯ ಯಜ್ಞೋಽಸೌ ವರ್ತತೇಽಸ್ಮಜ್ಜಿಘಾಂಸಯಾ ।
ವ್ಯಕ್ತಂ ಮಯಾಽಪಿ ಗಂತವ್ಯಂ ಪಿತೃರಾಜನಿವೇಶನಮ್ ॥೨೩॥

ಪರೀಕ್ಷಿತನ ಮಗನಾದ ಜನಮೇಜಯನ ಈ ಯಜ್ಞವು ನಮ್ಮನ್ನು ಕೊಲ್ಲುವ ಸಲುವಾಗಿ ನಡೆಯುತ್ತಿದೆ. ಖಂಡಿತವಾಗಿ ನಾನೂ ಸಹ ಯಮದೇವರ ಮನೆಗೆ ಹೋಗಬೇಕಾಗುತ್ತದೆ.

ಅಯಂ ಸ ಕಾಲಃ ಸಂಪ್ರಾಪ್ತೋ ಯದರ್ಥಮಸಿ ಮೇ ಸ್ವಸಃ ।
ಜರತ್ಕಾರೋಃ ಪುರಾ ದತ್ತಾ ತ್ರಾಹ್ಯಸ್ಮಾನ್ ಸಹ ಬಾಂಧವಾನ್ ॥೨೪॥

ತಂಗಿಯೇ, ಯಾವ ಉದ್ದೇಶದಿಂದ ನೀನು ಹಿಂದೆ ಜರತ್ಕಾರು ಋಷಿಗಳಿಗೆ ವಿವಾಹ ಮಾಡಿಕೊಡಲ್ಪಟ್ಟೆಯೋ ಅದರ ಪ್ರಯೋಜನದ ಕಾಲವು ಈಗ ಪ್ರಾಪ್ತವಾಗಿದೆ. ನನ್ನನ್ನೂ ಮತ್ತು ಬಂಧುಗಳನ್ನೂ ರಕ್ಷಿಸು.

ಆಸ್ತೀಕಃ ಕಿಲ ತಂ ಯಜ್ಞಂ ವರ್ತಮಾನಂ ಭುಜಂಗಮೇ ।
ಪ್ರತಿಷೇತ್ಸ್ಯತಿ ಮಾಂ ಪೂರ್ವಂ ಸ್ವಯಮಾಹ ಪಿತಾಮಹಃ ॥೨೫॥

ಎಲೌ ಸರ್ಪಿಣಿಯೇ, ಆ ಯಜ್ಞವು ನಡೆಯುತ್ತಿರುವಾಗ ಆಸ್ತೀಕನು ಹೋಗಿ ಅದನ್ನು ನಿಲ್ಲಿಸುವನು ಎಂದು ಹಿಂದೆ ಬ್ರಹ್ಮದೇವರು ತಾವೇ ನನ್ನನ್ನು ಕುರಿತು ಹೇಳಿದ್ದರು.

ತದ್ ವತ್ಸೇ ಬ್ರೂಹಿ ವತ್ಸಂ ತದಾಸ್ತೀಕಂ ವೃದ್ಧಸಮ್ಮತಮ್ ।
ಮಮಾದ್ಯ ತ್ವಂ ಸಭೃತ್ಯಸ್ಯ ಮೋಕ್ಷಾರ್ಥಂ ವೇದವಿತ್ತಮಮ್ ॥೨೬॥

ಆದ್ದರಿಂದ ಎಲೌ ವತ್ಸೆ, ವೃದ್ಧಸಮ್ಮತನಾದ, ವೇದಜ್ಞರಲ್ಲಿ ಶ್ರೇಷ್ಠನಾದ, ವತ್ಸನಾದ ಆಸ್ತೀಕನಿಗೆ ಪರಿವಾರದಿಂದ ಕೂಡಿನ ನನ್ನನ್ನು ಈ ಸಂಕಟದಿಂದ ಮೋಚನೆಮಾಡಲು ಅಲ್ಲಿಗೆ ಹೋಗುವಂತೆ ಹೇಳು.

॥ ಇತಿ ಶ್ರೀಮನ್ಮಹಾಭಾರತೇ ಶತಸಹಸ್ರಿಕಾಯಾಂಸಂಹಿತಾಯಾಮಾದಿಪರ್ವಣಿ
ಸಪ್ತಚತ್ವಾರಿಂಶೋऽಧ್ಯಾಯಃ ॥
॥ ಇತಿ ಆಸ್ತೀಕಪರ್ವಣಿ ಪಂಚತ್ರಿಂಶೋऽಧ್ಯಾಯಃ ॥

ಇಲ್ಲಿಗೆ ಮಹಾಭಾರತದ ಆದಿಪರ್ವದಲ್ಲಿ ನಲವತ್ತೇಳನೆಯ ಅಧ್ಯಾಯ ಮುಗಿಯಿತು.

★★★★★

ನಲವತ್ತೆಂಟನೆಯ ಅಧ್ಯಾಯ

(ಸರ್ಪಗಳನ್ನು ರಕ್ಷಿಸಲು ತಾಯಿಯಿಂದ ಆಸ್ತೀಕನಿಗೆ ಚೋದನೆ. ಆಸ್ತೀಕನಿಂದ ಸರ್ಪವೃತ್ತಾಂತವೇದನೆ.)

ಸೂತಃ

ತತ ಆಹೂಯ ಪುತ್ರಂ ಸ್ವಂ ಜರತ್ಕಾರುರ್ಭುಜಂಗಮಾ ।
ವಾಸುಕೇರ್ನಾಗರಾಜಸ್ಯ ವಚನಾದಿದಮಬ್ರವೀತ್ ॥೧॥

ಅನಂತರ ಸರ್ಪಿಣಿಯಾದ ಜರತ್ಕಾರುವು ಮಗನನ್ನು ಕರೆದು ನಾಗರಾಜನಾದ ವಾಸುಕಿಯ ಮಾತಿನಂತೆ ಹೀಗೆ ಮಾತನಾಡಿದಳು.

ಅಹಂ ತವ ಪಿತುಃ ಪುತ್ರ ಭ್ರಾತ್ರಾ ದತ್ತಾ ನಿಮಿತ್ತತಃ ।
ಕಾಲಃ ಸ ಏಷ ಸಂಪ್ರಾಪ್ತಃ ತತ್ ಕುರುಷ್ವ ಯಥಾತಥಮ್ ॥೨॥

ಪುತ್ರನೇ, ನಾನು ನನ್ನ ಅಣ್ಣನಿಂದ ಒಂದು ಪ್ರಯೋಜನವನ್ನು ಉದ್ದೇಶಿಸಿ ನಿನ್ನ ತಂದೆಗೆ ಕೊಡಲ್ಪಟ್ಟೆ. ಆ ಪ್ರಯೋಜನದ ಕಾಲವು ಈಗ ಒದಗಿಬಂದಿದೆ. ಅದನ್ನು ಸರಿಯಾಗಿ ನೆರವೇರಿಸು.

ಆಸ್ತೀಕಃ

ಕಿನ್ನಿಮಿತ್ತಂ ಮಮ ಪಿತುಃ ದತ್ತಾ ತ್ವಂ ಮಾತುಲೇನ ಮೇ ।
ತನ್ಮಮಾಚಕ್ಷ್ವ ತತ್ತ್ವೇನ ಶ್ರುತ್ವಾ ಕರ್ತಾऽಸ್ಮಿ ತತ್ ತಥಾ ॥೩॥

ನೀನು ಯಾವ ಉದ್ದೇಶದಿಂದ ನನ್ನ ಸೋದರಮಾವನಿಂದ ನನ್ನ ತಂದೆಗೆ ಕೊಡಲ್ಪಟ್ಟೆ ಎಂಬುದನ್ನು ನನಗೆ ಹೇಳು. ಅದನ್ನು ಸರಿಯಾಗಿ ಕೇಳಿ ಅದರಂತೆ ಮಾಡುವೆನು.

ಸೂತಃ

ತತ ಆಚಷ್ಟ ಸಾ ತಸ್ಮೈ ಬಾಂಧವಾನಾಂ ಹಿತೈಷಿಣೇ ।
ಭಗಿನೀ ನಾಗರಾಜಸ್ಯ ಜರತ್ಕಾರುರವಿಕ್ಲವಾ ॥೪॥

ಆಗ ನಾಗರಾಜನಾದ ವಾಸುಕಿಯ ತಂಗಿಯಾದ ಜರತ್ಕಾರುವು ತನ್ನ ಬಂಧುಗಳ ಹಿತವನ್ನು ಬಯಸಿ ಮನಸ್ಸಿನಲ್ಲಿ ಧೈರ್ಯವನ್ನು ತಂದುಕೊಂಡು, ಅವನಿಗೆ ಹೇಳಿದಳು.

ಭುಜಂಗಾನಾಮಶೇಷಾಣಾಂ ಮಾತಾ ಕದ್ರೂರಿತಿ ಸ್ಮೃತಾ ।
ತಯಾ ಶಪ್ತಾ ಕ್ರುಧಿತಯಾ ಪುತ್ರಾ ಯಸ್ಮಾನ್ನಿಬೋಧ ತತ್ ॥೫॥

ಎಲ್ಲಾ ಸರ್ಪಗಳಿಗೆ ತಾಯಿಯಾದವಳು ಕದ್ರು ಎಂದು ಶ್ರುತವಾಗಿದೆ. ಕೋಪಗೊಂಡ ಅವಳು ತನ್ನ ಪುತ್ರರನ್ನು ಏಕೆ ಶಪಿಸಿದಳು ಎಂಬುದನ್ನು ಕೇಳು.

ಉಚ್ಚೈಃಶ್ರವಸೋऽಶ್ವರಾಜ್ಞೋ ಯನ್ಮಿಥ್ಯಾ ಕುರುತೇ ಹ ಮಾ ।
ವಿನತಾನಿಮಿತ್ತಂ ಪಣಿತೇ ದಾಸಭಾವಾಯ ಪುತ್ರಕಾಃ ॥೬॥

ಜನಮೇಜಯಸ್ಯ ವೋ ಯಜ್ಞೇ ಧಕ್ಷ್ಯತ್ಯನಿಲಸಾರಥಿಃ ।
ತತ್ರ ಪಂಚತ್ವಮಾಪನ್ನಾಃ ಪ್ರೇತಲೋಕಂ ಗಮಿಷ್ಯಥ ॥೭॥

ಎಲೈ ಪುತ್ರರೇ, ವಿನತೆಯ ಜೊತೆಯಲ್ಲಿ ಅಶ್ವಶ್ರೇಷ್ಠವಾದ ಉಚ್ಚೈಃಶ್ರವಸ್ಸಿನ ಬಾಲದ ಬಣ್ಣದ ವಿಷಯದಲ್ಲಿ ದಾಸ್ಯಭಾವದ ಪಣವನ್ನು ಒಡ್ಡಿ, ಸ್ಪರ್ಧಿಸಿದಾಗ ಅದರ ಬಾಲವನ್ನು ಕಪ್ಪುವರ್ಣವುಳ್ಳದ್ದನ್ನಾಗಿ ನೀವು ಮಾಡಲಿಲ್ಲವಾದ ಕಾರಣ, ಜನಮೇಜಯನ ಯಜ್ಞದಲ್ಲಿ ಅಗ್ನಿಯು ನಿಮ್ಮನ್ನೆಲ್ಲಾ ಸುಡುವನು. ಅಲ್ಲಿ ಮರಣವನ್ನು ಹೊಂದಿ ನೀವು ಯಮಲೋಕವನ್ನು ಸೇರುವಿರಿ.

ತಾಂ ಚ ಶಪ್ತವತೀಮೇವಂ ಸಾಕ್ಷಾಲ್ಲೋಕಪಿತಾಮಹಃ ।
ಏವಮಸ್ತ್ವಿತಿ ತದ್ವಾಕ್ಯಂ ಪ್ರೋವಾಚಾನುಮುಮೋದ ಚ ॥೮॥

ಕದ್ರುವು ಹೀಗೆ ಶಾಪವನ್ನು ಕೊಡುತ್ತಿರಲು ಲೋಕಪಿತಾಮಹರಾದ ಬ್ರಹ್ಮದೇವರು ''ಹಾಗೆಯೇ ಆಗಲಿ'' ಎಂದು ಅದೇ ವಾಕ್ಯವನ್ನು ತಾವೂ ಒಮ್ಮೆ ಉಚ್ಚರಿಸಿ ಅನುಮೋದಿಸಿದರು.

ವಾಸುಕಿಶ್ಚಾಪಿ ತಚ್ಛ್ರುತ್ವಾ ಪಿತಾಮಹವಚಸ್ತದಾ ।
ಅಮೃತೇ ಮಥಿತೇ ತಾತ ದೇವಾನ್ ಶರಣಮೇಯಿವಾನ್ ॥೯॥

ಎಲೈ ಪ್ರೀತಿಪಾತ್ರನೇ, ಬ್ರಹ್ಮದೇವರ ಮಾತನ್ನು ಕೇಳಿದ ವಾಸುಕಿಯಾದರೋ, ಅಮೃತಮಥನವನ್ನು ಮಾಡಿದ ಮೇಲೆ ದೇವತೆಗಳಿಗೆ ಶರಣಾದನು.

ಸಿದ್ಧಾರ್ಥಾಶ್ಚ ಸುರಾಃ ಸರ್ವೇ ಪ್ರಾಪ್ಯಾಮೃತಮನುತ್ತಮಮ್ ।
ಭ್ರಾತರಂ ಮೇ ಪುರಸ್ಕೃತ್ಯ ಪ್ರಜಾಪತಿಮುಪಾಗಮನ್ ॥೧೦॥

ಶ್ರೇಷ್ಠವಾದ ಅಮೃತವನ್ನು ಪಡೆದು ಕೃತಕೃತ್ಯರಾಗಿದ್ದ ಎಲ್ಲಾ ದೇವತೆಗಳು ನನ್ನ ಅಣ್ಣನನ್ನು ಮುಂದೆ ಮಾಡಿಕೊಂಡು ಬ್ರಹ್ಮದೇವರ ಬಳಿಗೆ ಹೋದರು.

ತೇ ತಂ ಪ್ರಸಾದಯಾಮಾಸುಃ ದೇವಾಃ ಸರ್ವೇ ಪಿತಾಮಹಮ್ ।
ರಾಜ್ಞಾ ವಾಸುಕಿನಾ ಸಾರ್ಧಂ ಸ ಶಾಪೋ ನ ಭವೇದಿತಿ ॥೧೧॥

ಸರ್ಪರಾಜನಾದ ವಾಸುಕಿಯ ಜೊತೆಯಲ್ಲಿ ಹೋದ ಎಲ್ಲಾ ದೇವತೆಗಳು ಬ್ರಹ್ಮದೇವರನ್ನು ಪ್ರಸನ್ನೀಕರಿಸಿಕೊಂಡು, ಆ ಶಾಪದ ಕಾರ್ಯವು ಉಂಟಾಗದೇ ಇರಲಿ ಎಂದು ಒತ್ತಾಯಿಸಿದರು.

ದೇವಾಃ

ವಾಸುಕಿರ್ನಾಗರಾಜೋಽಯಂ ದುಃಖಿತೋ ಜ್ಞಾತಿಕಾರಣಾತ್ ।
ಅಭಿಶಾಪಃ ಸ್ವಮಾತ್ರಾಽಸ್ಯ ಭಗವನ್ ನ ಭವೇತ್ ತಥಾ ॥೧೨॥

ಈ ನಾಗರಾಜನಾದ ವಾಸುಕಿಯು ತನ್ನ ಬಂಧುಗಳ ನಾಶದ ನಿಮಿತ್ತದಿಂದ ದುಃಖಿತನಾಗಿದ್ದಾನೆ. ಪೂಜ್ಯರೇ, ತನ್ನ ತಾಯಿಯಿಂದ ಕೊಡಲ್ಪಟ್ಟ ಶಾಪವು ಇವನಿಗೆ ಹಾಗೆ ಆಗುವುದು ಬೇಡ.

ಬ್ರಹ್ಮಾ

ಜರತ್ಕಾರುರ್ಜರತ್ಕಾರುಂ ಯೋ ಭಾರ್ಯಾಂ ಸಮವಾಪ್ಸ್ಯತಿ ।
ತತ್ರ ಜಾತೋ ದ್ವಿಜಃ ಶಾಪಾದ್ ಭುಜಗಾನ್ ಮೋಕ್ಷಯಿಷ್ಯತಿ ॥೧೩॥

ಜರತ್ಕಾರು ಋಷಿಯು ಜರತ್ಕಾರು ಎಂಬ ಭಾರ್ಯೆಯನ್ನು ಪಡೆಯುವನು. ಅವಳಲ್ಲಿ ಹುಟ್ಟಿದ ಒಬ್ಬ ಬ್ರಾಹ್ಮಣನು ಸರ್ಪಗಳನ್ನು ಮೋಚನೆಗೊಳಿಸುವನು.

ಜರತ್ಕಾರುಃ

ಏತಚ್ಛ್ರುತ್ವಾ ತು ವಚನಂ ವಾಸುಕಿಃ ಪನ್ನಗೇಶ್ವರಃ ।
ಪ್ರಾದಾನ್ಮಾಮಮರಪ್ರಖ್ಯ ತವ ಪಿತ್ರೇ ಮಹಾತ್ಮನೇ ॥೧೪॥

ದೇವತೆಗಳಿಗೆ ಸಮಾನನಾದವನೇ, ಇದನ್ನು ಕೇಳಿ ಸರ್ಪರಾಜನಾದ ವಾಸುಕಿಯು ನನ್ನನ್ನು ಮಹಾತ್ಮನಾದ ನಿನ್ನ ತಂದೆಗೆ ವಿವಾಹ ಮಾಡಿಕೊಟ್ಟನು.

ಪ್ರಾಗೇವಾನಾಗತೇ ಕಾಲೇ ತತ್ರ ತ್ವಂ ಮಯ್ಯಜಾಯಥಾಃ ।
ಅಯಂ ಸ ಕಾಲಃ ಸಂಪ್ರಾಪ್ತೋ ಭವಾನ್ನಸ್ತ್ರಾತುಮರ್ಹತಿ ।
ಭ್ರಾತರಂ ಚೈವ ಮೇ ತಸ್ಮಾತ್ ತ್ರಾತುಮರ್ಹಸಿ ಪಾವಕಾತ್ ॥೧೫॥

ಇದು ಸರ್ಪಯಾಗಕ್ಕಿಂತಲೂ ಬಹಳ ಹಿಂದೆಯೇ ನಡೆದ ಘಟನೆ. ಆಗ ನೀನು ನನ್ನಲ್ಲಿ ಜನಿಸಿದೆ. ಆ ಪ್ರಯೋಜನದ ಕಾಲವು ಈಗ ಒದಗಿ ಬಂದಿದೆ. ನೀನು ನಮ್ಮೆಲ್ಲರನ್ನೂ ರಕ್ಷಿಸಬೇಕು. ನನ್ನ ಅಣ್ಣನನ್ನೂ ಆ ಅಗ್ನಿಯ ಭಯದಿಂದ ರಕ್ಷಿಸಬೇಕು.

ಅಮೋಘಂ ನಃ ಕೃತಂ ನ ತತ್ಸ್ಯಾತ್ ಯದಹಂ ತವ ಧೀಮತೇ ।
ಪಿತ್ರೇ ದತ್ತಾ ವಿಮೋಕ್ಷಾರ್ಥಂ ಕಥಂ ವಾ ಪುತ್ರ ಮನ್ಯಸೇ ॥೧೬॥

ನೀನು ಹಾಗೆ ಮಾಡಿದರೆ, ನಾನು ಮೇಧಾವಿಯಾದ ನಿನ್ನ ತಂದೆಗೆ ಸರ್ಪಗಳ ವಿಮೋಚನೆಯ ಉದ್ದೇಶದಿಂದ ಕೊಡಲ್ಪಟ್ಟದ್ದು ವ್ಯರ್ಥವಾಗುವುದಿಲ್ಲ. ಪುತ್ರನೇ, ನಿನ್ನ ಅಭಿಪ್ರಾಯವೇನು?

ಸೂತಃ

ಏವಮುಕ್ತಸ್ತಥೇತ್ಯುಕ್ತ್ವಾ ಸೋಽಸ್ತೀಕೋ ಮಾತರಂ ತದಾ ।
ಅಬ್ರವೀದ್ ದುಃಖಸಂತಪ್ತಂ ವಾಸುಕಿಂ ಜೀವಯನ್ನಿವ ॥೧೭॥

ಹೀಗೆ ಹೇಳಲ್ಪಟ್ಟ ಆಸ್ತೀಕನು ತಾಯಿಯನ್ನು ಕುರಿತು ಹಾಗೆಯೇ ಮಾಡುವೆನು ಎಂದು ಹೇಳಿ ದುಃಖಸಂತಪ್ತನಾದ ವಾಸುಕಿಯನ್ನು ಬದುಕಿಸುವವನಂತೆ ಅವನಿಗೆ ಹೇಳಿದನು.

ಅಹಂ ತ್ವಾಂ ಮೋಕ್ಷಯಿಷ್ಯಾಮಿ ವಾಸುಕೇ ಪನ್ನಗೋತ್ತಮ ।
ತಸ್ಮಾಚ್ಚಾಪಾನ್ಮಹಾಸತ್ವಾತ್ ಸತ್ಯಮೇತದ್ ಬ್ರವೀಮಿ ತೇ ॥೧೮॥

ಪನ್ನಗಶ್ರೇಷ್ಠನಾದ ವಾಸುಕಿಯೇ, ಆ ಮಹಾಘೋರವಾದ ಶಾಪದಿಂದ ನಾನು ನಿನ್ನನ್ನು ವಿಮೋಚನೆಗೊಳಿಸುವೆನು. ಇದನ್ನು ಸತ್ಯವಾಗಿ ಹೇಳುತ್ತಿದ್ದೇನೆ.

ಸ್ವಸ್ಥೋ ಭವ ಮಹಾಭಾಗ ನ ಹಿ ತೇ ವಿದ್ಯತೇ ಭಯಮ್ ।
ಪ್ರಯತಿಷ್ಯೇ ತಥಾ ಸೌಮ್ಯ ಯಥಾ ಶ್ರೇಯೋ ಭವಿಷ್ಯತಿ ॥೧೯॥

ಮಹಾನುಭಾವನೇ, ಆತಂಕವನ್ನು ತೊರೆ. ನಿನಗೆ ಭಯವುಂಟಾಗುವುದಿಲ್ಲ. ಎಲ್ಲರಿಗೂ ಶ್ರೇಯಸ್ಸು ಉಂಟಾಗುವಂತೆ ನಾನು ಪ್ರಯತ್ನಪಡುವೆನು.

ನ ಮೇ ವಾಗನೃತಂ ಪ್ರಾಹ ಸ್ಮೈರೇಷ್ವಪಿ ಕುತೋಽನ್ಯಥಾ ।
ತಂ ವೈ ನೃಪವರಂ ಗತ್ವಾ ದೀಕ್ಷಿತಂ ಜನಮೇಜಯಮ್ ॥೨೦॥

ವಾಗ್ಭಿರ್ಮಂಗಲಯುಕ್ತಾಭಿಃ ತೋಷಯಿಷ್ಯಾಮಿ ಮಾತುಲ ।
ಯಥಾ ಸ ಯಜ್ಞೋ ನೃಪತೇಃ ನಿವರ್ತಿಷ್ಯತಿ ಸತ್ತಮ ॥೨೧॥

ನಾನು ಹಾಸ್ಯಕ್ಕಾಗಿಯೂ ಎಂದೂ ಸುಳ್ಳು ಮಾತನ್ನು ಆಡಿಲ್ಲ. ಈಗ ಬೇರೆ ಸಂದರ್ಭದಲ್ಲಿ ಹೇಗೆ ಸುಳ್ಳನ್ನು ಆಡುವೆನು? ಸೋದರಮಾವನೇ, ನಾನು ಯಜ್ಞದೀಕ್ಷಿತನಾದ ಆ ಜನಮೇಜಯರಾಜನ ಬಳಿಗೆ ಹೋಗಿ ಮಂಗಳಯುಕ್ತ

ದೇವಾಃ

ವಾಸುಕಿರ್ನಾಗರಾಜೋಽಯಂ ದುಃಖಿತೋ ಜ್ಞಾತಿಕಾರಣಾತ್ ।
ಅಭಿಶಾಪಃ ಸ್ವಮಾತ್ರಾಽಸ್ಯ ಭಗವನ್ ನ ಭವೇತ್ ತಥಾ ॥೧೨॥

ಈ ನಾಗರಾಜನಾದ ವಾಸುಕಿಯು ತನ್ನ ಬಂಧುಗಳ ನಾಶದ ನಿಮಿತ್ತದಿಂದ ದುಃಖಿತನಾಗಿದ್ದಾನೆ. ಪೂಜ್ಯರೇ, ತನ್ನ ತಾಯಿಯಿಂದ ಕೊಡಲ್ಪಟ್ಟ ಶಾಪವು ಇವನಿಗೆ ಹಾಗೆ ಆಗುವುದು ಬೇಡ.

ಬ್ರಹ್ಮಾ

ಜರತ್ಕಾರುರ್ಜರತ್ಕಾರುಂ ಯೋ ಭಾರ್ಯಾಂ ಸಮವಾಪ್ಸ್ಯತಿ ।
ತತ್ರ ಜಾತೋ ದ್ವಿಜಃ ಶಾಪಾದ್ ಭುಜಗಾನ್ ಮೋಕ್ಷಯಿಷ್ಯತಿ ॥೧೩॥

ಜರತ್ಕಾರು ಋಷಿಯು ಜರತ್ಕಾರು ಎಂಬ ಭಾರ್ಯೆಯನ್ನು ಪಡೆಯುವನು. ಅವಳಲ್ಲಿ ಹುಟ್ಟಿದ ಒಬ್ಬ ಬ್ರಾಹ್ಮಣನು ಸರ್ಪಗಳನ್ನು ಮೋಚನೆಗೊಳಿಸುವನು.

ಜರತ್ಕಾರುಃ

ಏತಚ್ಛ್ರುತ್ವಾ ತು ವಚನಂ ವಾಸುಕಿಃ ಪನ್ನಗೇಶ್ವರಃ ।
ಪ್ರಾದಾನ್ಮಾಮಮರಪ್ರಖ್ಯ ತವ ಪಿತ್ರೇ ಮಹಾತ್ಮನೇ ॥೧೪॥

ದೇವತೆಗಳಿಗೆ ಸಮಾನನಾದವನೇ, ಇದನ್ನು ಕೇಳಿ ಸರ್ಪರಾಜನಾದ ವಾಸುಕಿಯು ನನ್ನನ್ನು ಮಹಾತ್ಮನಾದ ನಿನ್ನ ತಂದೆಗೆ ವಿವಾಹ ಮಾಡಿಕೊಟ್ಟನು.

ಪ್ರಾಗೇವಾನಾಗತೇ ಕಾಲೇ ತತ್ರ ತ್ವಂ ಮಯ್ಯಜಾಯಥಾಃ ।
ಅಯಂ ಸ ಕಾಲಃ ಸಂಪ್ರಾಪ್ತೋ ಭವಾನ್ನಸ್ತ್ರಾತುಮರ್ಹತಿ ।
ಭ್ರಾತರಂ ಚೈವ ಮೇ ತಸ್ಮಾತ್ ತ್ರಾತುಮರ್ಹಸಿ ಪಾವಕಾತ್ ॥೧೫॥

ಇದು ಸರ್ಪಯಾಗಕ್ಕಿಂತಲೂ ಬಹಳ ಹಿಂದೆಯೇ ನಡೆದ ಘಟನೆ. ಆಗ ನೀನು ನನ್ನಲ್ಲಿ ಜನಿಸಿದೆ. ಆ ಪ್ರಯೋಜನದ ಕಾಲವು ಈಗ ಒದಗಿ ಬಂದಿದೆ. ನೀನು ನಮ್ಮೆಲ್ಲರನ್ನೂ ರಕ್ಷಿಸಬೇಕು. ನನ್ನ ಅಣ್ಣನನ್ನೂ ಆ ಅಗ್ನಿಯ ಭಯದಿಂದ ರಕ್ಷಿಸಬೇಕು.

ಅಮೋಘಂ ನಃ ಕೃತಂ ನ ತತ್ಸ್ಯಾತ್ ಯದಹಂ ತವ ಧೀಮತೇ ।
ಪಿತ್ರೇ ದತ್ತಾ ವಿಮೋಕ್ಷಾರ್ಥಂ ಕಥಂ ವಾ ಪುತ್ರ ಮನ್ಯಸೇ ॥೧೬॥

ನೀನು ಹಾಗೆ ಮಾಡಿದರೆ, ನಾನು ಮೇಧಾವಿಯಾದ ನಿನ್ನ ತಂದೆಗೆ ಸರ್ಪಗಳ ವಿಮೋಚನೆಯ ಉದ್ದೇಶದಿಂದ ಕೊಡಲ್ಪಟ್ಟದ್ದು ವ್ಯರ್ಥವಾಗುವುದಿಲ್ಲ. ಪುತ್ರನೇ, ನಿನ್ನ ಅಭಿಪ್ರಾಯವೇನು?

ಸೂತಃ

ಏವಮುಕ್ತಸ್ತಥೇತ್ಯುಕ್ತ್ವಾ ಸೋಽಸ್ತೀಕೋ ಮಾತರಂ ತದಾ ।
ಅಬ್ರವೀದ್ ದುಃಖಸಂತಪ್ತಂ ವಾಸುಕಿಂ ಜೀವಯನ್ನಿವ ॥೧೭॥

ಹೀಗೆ ಹೇಳಲ್ಪಟ್ಟ ಆಸ್ತೀಕನು ತಾಯಿಯನ್ನು ಕುರಿತು ಹಾಗೆಯೇ ಮಾಡುವೆನು ಎಂದು ಹೇಳಿ ದುಃಖಸಂತಪ್ತನಾದ ವಾಸುಕಿಯನ್ನು ಬದುಕಿಸುವವನಂತೆ ಅವನಿಗೆ ಹೇಳಿದನು.

ಅಹಂ ತ್ವಾಂ ಮೋಕ್ಷಯಿಷ್ಯಾಮಿ ವಾಸುಕೇ ಪನ್ನಗೋತ್ತಮ ।
ತಸ್ಮಾಚ್ಛಾಪಾನ್ಮಹಾಸತ್ವಾತ್ ಸತ್ಯಮೇತದ್ ಬ್ರವೀಮಿ ತೇ ॥೧೮॥

ಪನ್ನಗಶ್ರೇಷ್ಠನಾದ ವಾಸುಕಿಯೇ, ಆ ಮಹಾಘೋರವಾದ ಶಾಪದಿಂದ ನಾನು ನಿನ್ನನ್ನು ವಿಮೋಚನೆಗೊಳಿಸುವೆನು. ಇದನ್ನು ಸತ್ಯವಾಗಿ ಹೇಳುತ್ತಿದ್ದೇನೆ.

ಸ್ವಸ್ಥೋ ಭವ ಮಹಾಭಾಗ ನ ಹಿ ತೇ ವಿದ್ಯತೇ ಭಯಮ್ ।
ಪ್ರಯತಿಷ್ಯೇ ತಥಾ ಸೌಮ್ಯ ಯಥಾ ಶ್ರೇಯೋ ಭವಿಷ್ಯತಿ ॥೧೯॥

ಮಹಾನುಭಾವನೇ, ಆತಂಕವನ್ನು ತೊರೆ. ನಿನಗೆ ಭಯವುಂಟಾಗುವುದಿಲ್ಲ. ಎಲ್ಲರಿಗೂ ಶ್ರೇಯಸ್ಸು ಉಂಟಾಗುವಂತೆ ನಾನು ಪ್ರಯತ್ನಪಡುವೆನು.

ನ ಮೇ ವಾಗನೃತಂ ಪ್ರಾಹ ಸ್ಮೈರೇಷ್ವಪಿ ಕುತೋಽನ್ಯಥಾ ।
ತಂ ವೈ ನೃಪವರಂ ಗತ್ವಾ ದೀಕ್ಷಿತಂ ಜನಮೇಜಯಮ್ ॥೨೦॥

ವಾಗ್ಭಿರ್ಮಂಗಲಯುಕ್ತಾಭಿಃ ತೋಷಯಿಷ್ಯಾಮಿ ಮಾತುಲ ।
ಯಥಾ ಸ ಯಜ್ಞೋ ನೃಪತೇಃ ನಿವರ್ತಿಷ್ಯತಿ ಸತ್ತಮ ॥೨೧॥

ನಾನು ಹಾಸ್ಯಕ್ಕಾಗಿಯೂ ಎಂದೂ ಸುಳ್ಳು ಮಾತನ್ನು ಆಡಿಲ್ಲ. ಈಗ ಬೇರೆ ಸಂದರ್ಭದಲ್ಲಿ ಹೇಗೆ ಸುಳ್ಳನ್ನು ಆಡುವೆನು? ಸೋದರಮಾವನೇ, ನಾನು ಯಜ್ಞದೀಕ್ಷಿತನಾದ ಆ ಜನಮೇಜಯರಾಜನ ಬಳಿಗೆ ಹೋಗಿ ಮಂಗಳಯುಕ್ತ

ವಾಕ್ಯಗಳಿಂದ ಅವನನ್ನು ಸಂತೋಷಗೊಳಿಸುವೆನು. ಸಜ್ಜನರಲ್ಲಿ ಶ್ರೇಷ್ಠನಾದವನೇ, ಆ ರಾಜನ ಯಜ್ಞವು ನಿವೃತ್ತಿಯನ್ನು ಹೊಂದುವಂತೆ ನಾನು ಅವನನ್ನು ಸಂತೋಷಗೊಳಿಸುವೆನು.

ಸಂಭಾವಯ ಸುನಾಗೇಂದ್ರ ಮಯಿ ಸರ್ವಂ ಮಹಾದ್ಯುತೇ ।
ನ ತೇ ಮಯಿ ಮನೋ ಜಾತು ಮಿಥ್ಯಾ ಭವಿತುಮರ್ಹತಿ ॥೨೨॥

ಮಹಾದ್ಯುತಿಯಾದ, ಶ್ರೇಷ್ಠನಾದ ನಾಗೇಂದ್ರನೇ, ನನ್ನಿಂದ ಎಲ್ಲವೂ ಸಾಧ್ಯ ಎಂದು ತಿಳಿ. ಇವನಿಗೆ ಈ ಶಕ್ತಿಯು ಇಲ್ಲವೆಂದು ನಿನ್ನ ಮನಸ್ಸಿನಲ್ಲಿ ಭಾವಿಸಬೇಡ.

ವಾಸುಕಿಃ

ಆಸ್ತೀಕ ಪರಿಪೂರ್ಣೋಽಸ್ಮಿ ಹೃದಯಂ ಮೇ ವಿದೀರ್ಯತೇ ।
ದಿಶಶ್ಚ ನ ಪ್ರಜಾನಾಮಿ ಬ್ರಹ್ಮದಂಡೇನ ಪೀಡಿತಃ ॥೨೩॥

ಎಲೈ ಆಸ್ತೀಕನೇ, ನಾನು ದುಃಖದಿಂದ ಪರಿಪೂರ್ಣನಾಗಿದ್ದೇನೆ. ನನ್ನ ಹೃದಯವು ಬಿರಿಯುತ್ತಿದೆ. ಬ್ರಾಹ್ಮಣನಾದ ಚಂಡಭಾರ್ಗವನು ಮಾಡುತ್ತಿರುವ ಶಿಕ್ಷೆಯಿಂದ ಪೀಡಿತನಾಗಿ ನನಗೆ ದಿಕ್ಕುಗಳು ತೋಚುತ್ತಿಲ್ಲ.

ಆಸ್ತೀಕಃ

ನ ಸಂತಾಪಸ್ತ್ವಯಾ ಕಾರ್ಯಃ ಕಥಂಚಿತ್ ಪನ್ನಗೋತ್ತಮ ।
ಪ್ರದೀಪ್ತಾಗ್ನೇಃ ಸಮುತ್ಪನ್ನಂ ನಾಶಯಿಷ್ಯಾಮಿ ತೇ ಭಯಮ್ ॥೨೪॥

ಪನ್ನಗಶ್ರೇಷ್ಠನೇ, ನೀನು ಯಾವರೀತಿಯಿಂದಲೂ ಸಂತಾಪವನ್ನು ಪಡಬೇಡ. ಪ್ರದೀಪ್ತವಾದ ಅಗ್ನಿಯಿಂದ ಉಂಟಾದ ಭಯವನ್ನು ನಾನು ಶಮನಗೊಳಿಸುವೆನು.

ಬ್ರಹ್ಮದಂಡಂ ಮಹಾಘೋರಂ ಕಾಲಾಗ್ನಿಸಮತೇಜಸಮ್ ।
ನಾಶಯಿಷ್ಯಾಮಿ ಮಾಽನ್ಯಸ್ತ್ವಂ ಭಯಂ ಕಾರ್ಷೀಃ ಕಥಂಚನ ॥೨೫॥

ಮಹಾಘೋರವಾದ, ಕಾಲಾಗ್ನಿಗೆ ಸಮಾನವಾದ ತೇಜಸ್ಸನ್ನು ಹೊಂದಿದ ಆ ಬ್ರಹ್ಮದಂಡವನ್ನು ನಾಶಗೊಳಿಸುವೆನು. ನೀನು ಬೇರೆಯವನಲ್ಲ. ನನ್ನ ಸೋದರಮಾವ. ಆದ್ದರಿಂದ ಸರ್ವಥಾ ಭಯಪಡಬೇಡ.

ಸೂತಃ

ತತಃ ಸ ವಾಸುಕೇಘೋರ್ರಮಪನೀಯ ಮನೋಜ್ವರಮ್ ।
ಆಧಾಯ ಚಾತ್ಮನೋಽಂಗೇಷು ಜಗಾಮ ತ್ವರಿತೋ ಭೃಶಮ್ ॥

ಜನಮೇಜಯಸ್ಯ ತಂ ಯಜ್ಞಂ ಸರ್ವೈಃ ಸಮುದಿತಂ ಗುಣೈಃ ।
ಮೋಕ್ಷಾಯ ಭುಜಗೇಂದ್ರಾಣಾಮಾಸ್ತೀಕೋ ದ್ವಿಜಸತ್ತಮಃ ॥೨೭॥

ಅನಂತರ ಅವನು ವಾಸುಕಿಯ ಘೋರವಾದ ಮನೋಜ್ವರವನ್ನು ಪರಿಹರಿಸಿ, ಆತಂಕರಹಿತವಾದ ತನ್ನ ಮನಸ್ಸಿನಲ್ಲಿ ರಾಜನನ್ನು ಸ್ತೋತ್ರ ಮಾಡಲು ಬೇಕಾದ ಶಿಕ್ಷಾಕಲ್ಪ ಮೊದಲಾದ ಅಂಗಗಳನ್ನು ಸರಿಯಾಗಿ ಇರಿಸಿಕೊಂಡು, ಸರ್ಪಯಾಗದ ಸ್ತೋತ್ರಕ್ಕೆ ಅಂಗಗಳಾದ ಪುಣ್ಯಶ್ಲೋಕರಾದ ದೇವಾದಿಗಳ ಯಜ್ಞದಲ್ಲಿ ಸನ್ನಿಹಿತನಾದ ಪರಮಾತ್ಮನ ಅವಯವಗಳಲ್ಲಿ ತನ್ನ ಮನಸ್ಸನ್ನು ಸ್ಥಾಪಿಸಿ, ಆ ದ್ವಿಜಶ್ರೇಷ್ಠನಾದ ಆಸ್ತೀಕನು, ಶ್ರೇಷ್ಠವಾದ ಸರ್ಪಗಳನ್ನು ಮೋಚನೆಗೊಳಿಸುವುದಕ್ಕೋಸ್ಕರ, ಎಲ್ಲಾ ಗುಣಗಳಿಂದಲೂ ಸಂಪನ್ನನಾದ ಜನಮೇಜಯರಾಜನ ಆ ಯಜ್ಞಕ್ಕೆ ಶೀಘ್ರವಾಗಿ ಹೊರಟನು.

ಸ ಗತ್ವಾಽಪಶ್ಯದಾಸ್ತೀಕೋ ಯಜ್ಞಾಯತನಮುತ್ತಮಮ್ ।
ವೃತಂ ಸದಸ್ಯೈರ್ಬಹುಭಿಃ ಸೂರ್ಯವಹ್ನಿಸಮಪ್ರಭೈಃ ॥೨೮॥

ಅವನು ಹೋಗಿ ಸೂರ್ಯವಹ್ನಿಗಳಿಗೆ ಸಮಾನವಾದ ಕಾಂತಿಯುಳ್ಳ, ಅನೇಕ ಸದಸ್ಯರಿಂದ ಆವೃತವಾದ, ಶ್ರೇಷ್ಠವಾದ ಯಜ್ಞಶಾಲೆಯನ್ನು ನೋಡಿದನು.

ಸ ತತ್ರ ವಾರಿತೋ ದ್ವಾಸ್ಥೈರತಿಷ್ಠದ್ ದ್ವಿಜಸತ್ತಮಃ ।
ಅಭಿತುಷ್ಟಾವ ಯಜ್ಞಂ ತಂ ಪ್ರವೇಶಾರ್ಥಂ ದ್ವಿಜೋತ್ತಮಃ ॥೨೯॥

ಆ ದ್ವಿಜಶ್ರೇಷ್ಠನು ದ್ವಾರಪಾಲಕರಿಂದ ತಡೆಯಲ್ಪಟ್ಟವನಾಗಿ ಪ್ರವೇಶವನ್ನು ಪಡೆಯುವ ಉದ್ದೇಶದಿಂದ ಅಲ್ಲಿಯೇ ನಿಂತು ಆ ಯಜ್ಞವನ್ನು ಸ್ತೋತ್ರಮಾಡಿದನು.

ಸ ಪ್ರಾಪ್ಯ ಯಜ್ಞಾಯತನಂ ವರಿಷ್ಠೋ ದ್ವಿಜಸತ್ತಮಃ ।
ತುಷ್ಟಾವ ರಾಜಾನಮಮುಂ ಸದಸ್ಯಾನಗ್ನಿಮೇವ ಚ ॥೩೦॥

ಆ ಗುಣವಂತನಾದ ದ್ವಿಜಶ್ರೇಷ್ಠನು ಯಜ್ಞಶಾಲೆಯನ್ನು ಸಮೀಪಿಸಿ ಆ ರಾಜನನ್ನೂ, ಸದಸ್ಯರನ್ನೂ ಮತ್ತು ಅಗ್ನಿಯನ್ನೂ ಸ್ತೋತ್ರಮಾಡಿದನು.

॥ ಇತಿ ಶ್ರೀಮನ್ಮಹಾಭಾರತೇ ಶತಸಹಸ್ರಿಕಾಯಾಂಸಂಹಿತಾಯಾಮಾದಿಪರ್ವಣಿ
ಅಷ್ಟಚತ್ವಾರಿಂಶೋಽಧ್ಯಾಯಃ ॥
॥ ಇತಿ ಆಸ್ತೀಕಪರ್ವಣಿ ಷಟ್‌ತ್ರಿಂಶೋಽಧ್ಯಾಯಃ ॥

ಇಲ್ಲಿಗೆ ಮಹಾಭಾರತದ ಆದಿಪರ್ವದಲ್ಲಿ ನಲವತ್ತೆಂಟನೆಯ ಅಧ್ಯಾಯ ಮುಗಿಯಿತು.

★★★★★

ನಲವತ್ತೊಂಭತ್ತನೆಯ ಅಧ್ಯಾಯ

(ಆಸ್ತೀಕನಿಂದ ಜನಮೇಜಯನ ಯಾಗದ ಪ್ರಶಂಸೆ.)

ಆಸ್ತೀಕಃ

ಸೋಮಸ್ಯ ಯಜ್ಞೋ ವರುಣಸ್ಯ ಯಜ್ಞಃ
ಪ್ರಜಾಪತೇರ್ಯಜ್ಞ ಆಸೀತ್ ಪ್ರಯಾಗೇ ।
ತಥಾ ಯಜ್ಞೋಽಯಂ ತವ ಭಾರತಾಗ್ರ್ಯ
ಪಾರೀಕ್ಷಿತ ಸ್ವಸ್ತಿ ನೋಽಸ್ತು ಪ್ರಿಯೇಭ್ಯಃ ॥೧॥

ಹಿಂದೆ ಪ್ರಯಾಗದಲ್ಲಿ ಚಂದ್ರನ ಯಜ್ಞವೂ, ವರುಣನ ಯಜ್ಞವೂ ಮತ್ತು ಬ್ರಹ್ಮದೇವರ ಯಜ್ಞವೂ ನಡೆದಿದ್ದಿತು. ಭರತ ಕುಲೋತ್ಪನ್ನನಾದ ಪರೀಕ್ಷಿತನ ಮಗನಾದ ಎಲೈ ಜನಮೇಜಯರಾಜನೇ, ನಿನ್ನ ಈ ಯಜ್ಞವು ಅದರಂತೆಯೇ ಇದೆ. ನಿನ್ನ ಹಿತೈಷಿಗಳಾದ ನಮಗೆ ಮಂಗಳವಾಗಲಿ.

ಶಕ್ರಸ್ಯ ಯಜ್ಞಃ ಶತಸಂಖ್ಯ ಉಕ್ತಃ
ತಥಾ ಪುರೋಸ್ತುಲ್ಯಸಂಖ್ಯಃ ಶತಂ ವೈ ।
ತಥಾ ಯಜ್ಞೋಽಯಂ ತವ ಭಾರತಾಗ್ರ್ಯ
ಪಾರೀಕ್ಷಿತ ಸ್ವಸ್ತಿ ನೋಽಸ್ತು ಪ್ರಿಯೇಭ್ಯಃ ॥೨॥

ಇಂದ್ರನು ನೂರು ಸಂಖ್ಯೆಗಳಲ್ಲಿ ಯಜ್ಞಗಳನ್ನು ಮಾಡಿದನೆಂದು ಹೇಳಲ್ಪಡುತ್ತದೆ. ಪೂರುವೂ ಸಹ ಸಮಾನವಾದ ನೂರು ಸಂಖ್ಯೆಯ ಯಜ್ಞಗಳನ್ನು ಮಾಡಿದವನು. ಭರತ ಕುಲೋತ್ಪನ್ನನಾದ ಪರೀಕ್ಷಿತನ ಮಗನಾದ ಎಲೈ ಜನಮೇಜಯರಾಜನೇ, ನಿನ್ನ ಈ ಯಜ್ಞವು ಅದರಂತೆಯೇ ಇದೆ. ನಿನ್ನ ಹಿತೈಷಿಗಳಾದ ನಮಗೆ ಮಂಗಳವಾಗಲಿ.

ಯಮಸ್ಯ ಯಜ್ಞೋ ಹರಿಮೇಧಸಶ್ಚ
ಯಥಾ ಯಜ್ಞೋ ರಂತಿದೇವಸ್ಯ ರಾಜ್ಞಃ ।
ತಥಾ ಯಜ್ಞೋಽಯಂ ತವ ಭಾರತಾಗ್ರ್ಯ
ಪಾರೀಕ್ಷಿತ ಸ್ವಸ್ತಿ ನೋಽಸ್ತು ಪ್ರಿಯೇಭ್ಯಃ ॥೩॥

ಹರಿಯಲ್ಲೇ ಲಗ್ನವಾದ ಬುದ್ಧಿಯುಳ್ಳ ಯಮದೇವರ ಯಜ್ಞವೂ ಹಾಗೆಯೇ ರಾಜನಾದ ರಂತಿದೇವನ ಯಜ್ಞವೂ ಹಿಂದೆ ನಡೆಯಿತು. ಭರತ ಕುಲೋತ್ಪನ್ನನಾದ ಪರೀಕ್ಷಿತನ ಮಗನಾದ ಎಲೈ ಜನಮೇಜಯರಾಜನೇ, ನಿನ್ನ ಈ ಯಜ್ಞವು ಅದರಂತೆಯೇ ಇದೆ. ನಿನ್ನ ಹಿತೈಷಿಗಳಾದ ನಮಗೆ ಮಂಗಳವಾಗಲಿ.

ಗಯಸ್ಯ ಯಜ್ಞಃ ಶತಬಿಂದುರಾಜ್ಞೋ ।
ಯಜ್ಞಸ್ತಥಾ ವೈಶ್ರವಣಸ್ಯ ರಾಜ್ಞಃ ।
ತಥಾ ಯಜ್ಞೋಽಯಂ ತವ ಭಾರತಾಗ್ರ್ಯ
ಪಾರೀಕ್ಷಿತ ಸ್ವಸ್ತಿ ನೋಽಸ್ತು ಪ್ರಿಯೇಭ್ಯಃ ॥೪॥

ಗಯನ ಯಜ್ಞವೂ, ಶತಬಿಂದು ರಾಜನ ಯಜ್ಞವೂ, ಕುಬೇರನ ಯಜ್ಞವೂ ಹಿಂದೆ ಹೇಗೆ ನಡೆಯಿತೋ, ಭರತ ಕುಲೋತ್ಪನ್ನನಾದ ಪರೀಕ್ಷಿತನ ಮಗನಾದ ಎಲೈ ಜನಮೇಜಯರಾಜನೇ, ನಿನ್ನ ಈ ಯಜ್ಞವು ಅದರಂತೆಯೇ ಇದೆ. ನಿನ್ನ ಹಿತೈಷಿಗಳಾದ ನಮಗೆ ಮಂಗಳವಾಗಲಿ.

ನೃಗಸ್ಯ ರಾಜ್ಞೋ ಹ್ಯಜಮೀಢಸ್ಯ ಚಾಸೀತ್
ಯಥಾ ಯಜ್ಞೋ ದಾಶರಥೇಶ್ಚ ರಾಜ್ಞಃ ।
ತಥಾ ಯಜ್ಞೋಽಯಂ ತವ ಭಾರತಾಗ್ರ್ಯ
ಪಾರೀಕ್ಷಿತ ಸ್ವಸ್ತಿ ನೋಽಸ್ತು ಪ್ರಿಯೇಭ್ಯಃ ॥೫॥

ಹಿಂದೆ ಅಜಮೀಢನಾದ ನೃಗರಾಜನ ಯಜ್ಞವೂ ಮತ್ತು ದಾಶರಥಿಯಾದ ರಾಜನಾದ ರಾಮನ ಯಜ್ಞವೂ ಹೇಗೆ ನಡೆಯಿತೋ, ಭರತ ಕುಲೋತ್ಪನ್ನನಾದ ಪರೀಕ್ಷಿತನ ಮಗನಾದ ಎಲೈ ಜನಮೇಜಯರಾಜನೇ, ನಿನ್ನ ಈ ಯಜ್ಞವು ಅದರಂತೆಯೇ ಇದೆ. ನಿನ್ನ ಹಿತೈಷಿಗಳಾದ ನಮಗೆ ಮಂಗಳವಾಗಲಿ.

ಯಜ್ಞಃ ಶ್ರುತೋ ಯೋ ದಿವಿ ದೇವಯೋನೇ-
ರ್ಯುಧಿಷ್ಠಿರಸ್ಯಾಜಮೀಢಸ್ಯ ರಾಜ್ಞಃ ।
ತಥಾ ಯಜ್ಞೋಽಯಂ ತವ ಭಾರತಾಗ್ರ್ಯ
ಪಾರೀಕ್ಷಿತ ಸ್ವಸ್ತಿ ನೋಽಸ್ತು ಪ್ರಿಯೇಭ್ಯಃ ॥೬॥

ದೇವತಾವತಾರನಾದ ಅಜಮೀಢನಾದ ಯುಧಿಷ್ಠಿರರಾಜನ ಯಜ್ಞವು ದೇವಲೋಕದಲ್ಲಿ ಹೇಗೆ ಪ್ರಖ್ಯಾತವಾಗಿದೆಯೋ, ಭರತ ಕುಲೋತ್ಪನ್ನನಾದ ಪರೀಕ್ಷಿತನ ಮಗನಾದ ಎಲೈ ಜನಮೇಜಯರಾಜನೇ, ನಿನ್ನ ಈ ಯಜ್ಞವು ಅದರಂತೆಯೇ ಇದೆ. ನಿನ್ನ ಹಿತೈಷಿಗಳಾದ ನಮಗೆ ಮಂಗಳವಾಗಲಿ.

ಕೃಷ್ಣಸ್ಯ ಯಜ್ಞಃ ಸತ್ಯವತ್ಯಾಃ ಸುತಸ್ಯ
ಸ್ವಯಂ ಸ್ವಕರ್ಮ ಪ್ರಚಚಾರ ಯತ್ರ ।
ತಥಾ ಯಜ್ಞೋಽಯಂ ತವ ಭಾರತಾಗ್ರ್ಯ
ಪಾರೀಕ್ಷಿತ ಸ್ವಸ್ತಿ ನೋಽಸ್ತು ಪ್ರಿಯೇಭ್ಯಃ ॥೭॥

ಸತ್ಯವತೀಸುತರಾದ ವಾಸಿಷ್ಠಕೃಷ್ಣರಾದ ವೇದವ್ಯಾಸರು ತಾವೇ ತಮ್ಮ ಪೂಜಾತ್ಮಕವಾದ ಕರ್ಮಗಳನ್ನು ಮಾಡಿ ಯಜ್ಞವನ್ನು ಮಾಡಿದರು. ಭರತ ಕುಲೋತ್ಪನ್ನನಾದ ಪರೀಕ್ಷಿತನ ಮಗನಾದ ಎಲೈ ಜನಮೇಜಯರಾಜನೇ, ನಿನ್ನ ಈ ಯಜ್ಞವು ಅದರಂತೆಯೇ ಇದೆ. ನಿನ್ನ ಹಿತೈಷಿಗಳಾದ ನಮಗೆ ಮಂಗಳವಾಗಲಿ.

ತಮ್ಮ ಪೂಜೆಯನ್ನು ತಾವೇ ಮಾಡಿದುದರಿಂದ ವೇದವ್ಯಾಸರು ಪೂಜ್ಯರೂ ಹೌದು, ಪೂಜಕರೂ ಹೌದು. ಲೋಕಶಿಕ್ಷಾರ್ಥವಾಗಿ ಮಾತ್ರ ಅವರು ಯಜ್ಞವನ್ನು ಆಚರಿಸಿದರು. ಯಜ್ಞಭೋಕ್ತೃಗಳಾದ ಕಾರಣದಿಂದ ವ್ಯಾಸರು ಕೇವಲ ಋಷಿಗಳಲ್ಲ ಸಾಕ್ಷಾತ್ ನಾರಾಯಣನೇ ಎಂದು ಇಲ್ಲಿ ಸೂಚನೆ ಮಾಡುತ್ತಾರೆ.

ಇಮೇ ಹಿ ತೇ ಸೂರ್ಯಹುತಾಶವರ್ಚಸಃ
ಸಮಾಸತೇ ವೃತ್ರಹಣಃ ಕ್ರತುಂ ಯಥಾ ।

ನೈಷಾಂ ಯಜ್ಞೇ ವಿದ್ಯತೇ ಜ್ಞಾನಮತ್ಯಾ-
ದಾನಂ ಚೈಭ್ಯೋ ನ ಪ್ರಣಶ್ಯೇತ್ ಕದಾಚಿತ್ ॥೮॥

ಸೂರ್ಯಾಗ್ನಿ ಸಮಾನ ತೇಜಸ್ಕರಾದ ಈ ಸದಸ್ಯರೆಲ್ಲರೂ ಇಂದ್ರನ ಯಜ್ಞದಲ್ಲಿ ಕುಳಿತಂತೆ ಇಲ್ಲಿ ಕುಳಿತಿದ್ದಾರೆ. ಈ ಸದಸ್ಯರು ಮಾಡುವ ಯಜ್ಞವೂ ಸಹ ಯಾವ ವಿಘ್ನಗಳಿಂದಲೂ ಉಪಹತವಾಗುವುದಿಲ್ಲ. ಇವರಿಂದ ಸ್ವೀಕರಿಸಿದ ಅಪರೋಕ್ಷಜ್ಞಾನವಾಗಲಿ ಅಥವಾ ಪರೋಕ್ಷಜ್ಞಾನವಾಗಲಿ ಎಂದೂ ನಾಶವನ್ನು ಹೊಂದುವುದಿಲ್ಲ.

ಋತ್ವಿಕ್ಸಮೋ ನಾಸ್ತಿ ಲೋಕೇಷು ಚೈವ
ದ್ವೈಪಾಯನೇನೇತಿ ವಿನಿಶ್ಚಿತಂ ಮೇ ।
ಏತಸ್ಯ ಶಿಷ್ಯಾ ಕ್ಷಿತಿಮಾಸತೇ ತೇ
ಯೇ ಋತ್ವಿಜಃ ಕರ್ಮಸು ಸ್ವೇಷು ದಕ್ಷಾಃ ॥೯॥

ಎಲ್ಲ ಲೋಕಗಳಲ್ಲಿಯೂ ವೇದವ್ಯಾಸರಿಗೆ ಸಮಾನವಾದ ಋತ್ವಿಜರು ಇಲ್ಲವೆಂದು ನನ್ನ ನಿಶ್ಚಿತವಾದ ಅಭಿಪ್ರಾಯ. ಅಂತಹ ವೇದವ್ಯಾಸರ ತಮ್ಮ ತಮ್ಮ ಕರ್ಮಗಳಲ್ಲಿ ದಕ್ಷರಾದ ಶಿಷ್ಯರು ಋತ್ವಿಜರಾಗಿ ನಿನ್ನ ಯಜ್ಞಶಾಲೆಯಲ್ಲಿ ಕುಳಿತಿದ್ದಾರೆ.

ವಿಭಾವಸುಶ್ಚಿತ್ರಭಾನುರ್ಮಹಾತ್ಮಾ
ಹಿರಣ್ಯರೇತಾ ಹುತಭುಕ್ ಕೃಷ್ಣವರ್ತ್ಮಾ ।
ಪ್ರದಕ್ಷಿಣಾವರ್ತಶಿಖಃ ಪ್ರದೀಪ್ತೋ
ಹವ್ಯಂ ತವೇದಂ ಹುತಭುಗ್ ಭುನಕ್ತಿ ॥೧೦॥

ವಿಭಾವಸು, ಚಿತ್ರಭಾನು, ಮಹಾತ್ಮ, ಹಿರಣ್ಯರೇತ, ಹುತಭುಕ್, ಕೃಷ್ಣವರ್ತ್ಮ, ಪ್ರದಕ್ಷಿಣಾವರ್ತಶಿಖ, ಪ್ರದೀಪ್ತ ಮುಂತಾದ ನಾಮಗಳಿಂದ ಶ್ರುತಿಸ್ಮೃತಿಗಳಲ್ಲಿ ಪ್ರಶಂಸಿಸಲ್ಪಡುವ ಅಗ್ನಿದೇವನು ನಿನ್ನ ಈ ಹವ್ಯವನ್ನು ಭುಂಜಿಸುತ್ತಿದ್ದಾನೆ.

ನೇಹ ತ್ವದನ್ಯೋ ವಿದ್ಯತೇ ಜೀವಲೋಕೇ
ಸಮೋ ನೃಪಃ ಪಾಲಯಿತಾ ಪ್ರಜಾನಾಮ್ ।
ಧೃತ್ಯಾ ಚ ತೇ ಪ್ರೀತಮನಾಃ ಸದಾಽಹಂ
ತ್ವಂ ವಾ ರಾಜಾ ಧರ್ಮರಾಜೋ ಯಮಶ್ಚ ॥೧೧॥

ಎಲೈ ಜನಮೇಜಯನೇ, ನಿನಗೆ ಸಮಾನವಾಗಿ ಪ್ರಜೆಗಳನ್ನು ಪಾಲಿಸುವ ಇನ್ನೊಬ್ಬ ರಾಜನು ಜೀವಲೋಕದಲ್ಲಿ ಇಲ್ಲ. ನಿನ್ನ ಧೈರ್ಯವನ್ನು ನಾನು ಯಾವಾಗಲೂ ನನ್ನ ಮನಸ್ಸಿನಲ್ಲಿ ಮೆಚ್ಚಿದ್ದೇನೆ. ನೀನೇ ಧರ್ಮರಾಜನಾದ ಯಮನಿಗೆ ಸಮನಾದ ರಾಜ.

ಶಕ್ರಃ ಸಾಕ್ಷಾದ್ ವಜ್ರಪಾಣಿರ್ಯಥೈವ
ತ್ರಾತಾ ಲೋಕೇ ತ್ವಂ ತಥೈವ ಪ್ರಜಾನಾಮ್ ।
ಅತಸ್ತ್ವಂ ನಾಥಃ ಪುಣ್ಯತಮಶ್ಚ ಲೋಕೇ
ನ ಚ ತ್ವದನ್ಯೋ ಗೃಹಪತಿರಸ್ತಿ ಯಜ್ಞೇ ॥೧೨॥

ಕೈಯಲ್ಲಿ ವಜ್ರವನ್ನು ಹಿಡಿದು ಮೂರುಲೋಕಗಳನ್ನೂ ಪಾಲನೆ ಮಾಡುವ ಇಂದ್ರನಂತೆ ನೀನು ಪ್ರಜೆಗಳನ್ನು ಪಾಲನೆಮಾಡುತ್ತಿದ್ದೀಯೆ. ಆದ್ದರಿಂದ ನೀನು ಲೋಕದಲ್ಲಿ ಸ್ವಾಮಿಯಾದವನು ಮತ್ತು ಬಹಳ ಪುಣ್ಯವಂತನು. ಯಜ್ಞದಲ್ಲಿ ನಿನ್ನಂತಹ ಯಜಮಾನನು ಎಂದೂ ದೊರೆಯುವುದಿಲ್ಲ.

ಖಟ್ವಾಂಗನಾಭಾಗದಿಲೀಪಕಲ್ಪ
ಯಯಾತಿಮಾಂಧಾತೃಸಮಪ್ರಭಾವ ।
ಆದಿತ್ಯತೇಜಃ ಪ್ರತಿಮಾನತೇಜಾ
ಭೀಷ್ಮೋ ಯಥಾ ಭ್ರಾಜಸಿ ಸುವ್ರತತ್ವೇ ॥೧೩॥

ಖಟ್ವಾಂಗ, ನಾಭಾಗ, ದಿಲೀಪರಿಗೆ ಸಮನಾದವನೇ, ಯಯಾತಿ, ಮಾಂಧಾತೃಗಳಿಗೆ ಸಮಾನವಾದ ಪ್ರಭಾವವುಳ್ಳವನೇ, ಆದಿತ್ಯನ ತೇಜಸ್ಸನ್ನು ಹೊಂದಿದವನೇ, ಇನ್ನೊಬ್ಬರಿಗೆ ಉಪಮಾನವನ್ನು ಕೊಡಬಹುದಾದ ತೇಜಸ್ಸನ್ನು ಹೊಂದಿದವನೇ, ಒಳ್ಳೆಯ ವ್ರತವನ್ನು ಧರಿಸುವ ವಿಷಯದಲ್ಲಿ ನೀನು ಭೀಷ್ಮನಂತೆ ಶೋಭಿಸುತ್ತಿದ್ದೀಯೆ.

ವಾಲ್ಮೀಕಿವತ್ ತೇ ನಿಭೃತಂ ಸ್ವವೀರ್ಯಂ
ವಸಿಷ್ಠವತ್ ತೇ ನಿಯತಶ್ಚ ಕೋಪಃ ।
ಪ್ರಭುತ್ವಮಿಂದ್ರೇಣ ಸಮಂ ಮತಂ ಮೇ
ದ್ಯುತಿಶ್ಚ ನಾರಾಯಣವದ್ ವಿಭಾತಿ ॥೧೪॥

ವಾಲ್ಮೀಕಿಯಂತೆ ನೀನು ನಿನ್ನ ಪರಾಕ್ರಮವನ್ನು ತುಂಬಿಕೊಂಡಿದ್ದೀಯೆ. ವಸಿಷ್ಠರಂತೆ ಕೋಪವನ್ನು ಜಯಿಸಿದ್ದೀಯೆ. ನಿನ್ನ ಪ್ರಭುತ್ವವು ಇಂದ್ರನ ಪ್ರಭುತ್ವಕ್ಕೆ ಸಮಾನವಾದುದು. ನಿನ್ನ ಕಾಂತಿಯು ನಾರಾಯಣನ ಕಾಂತಿಯಂತೆ ತೋರುತ್ತದೆ.

ಯಮೋ ಯಥಾ ಧರ್ಮವಿನಿಶ್ಚಯಜ್ಞಃ
ಕೃಷ್ಣೋ ಯಥಾ ಸರ್ವಗುಣೋಪಪನ್ನಃ ।
ಶ್ರಿಯಾಂ ನಿಕೇತೋಽಸಿ ಯಥಾ ವಸೂನಾಂ
ನಿಧಾನಭೂತೋಽಸಿ ತಥಾ ಕ್ರತೂನಾಮ್ ॥೧೫॥

ಯಮನು ಎಲ್ಲಾ ಧರ್ಮಗಳ ವಿನಿಶ್ಚಯಕ್ಕೆ ಹೇಗೆ ಆಶ್ರಯನಾಗಿದ್ದಾನೆಯೋ, ಹೇಗೆ ವೇದವ್ಯಾಸರು ಎಲ್ಲಾ ಗುಣಗಳಿಗೆ ಆಶ್ರಯರಾಗಿದ್ದಾರೆಯೋ, ಹಾಗೆ ನೀನು ಎಲ್ಲಾ ಸಂಪತ್ತಿಗೂ ಆಶ್ರಯನಾಗಿದ್ದೀಯೆ. ಎಲ್ಲಾ ವಸುಗಳಿಗೂ ಮತ್ತು ಯಾಗಗಳಿಗೂ ನಿಧಾನವಾಗಿದ್ದೀಯೆ. (ಸ್ಥಾಪಿಸುವ ಭೂಮಿಯಾಗಿದ್ದೀಯೆ.)

ದಂಭೋದ್ಭವೇನಾಸಿ ಸಮೋ ಬಲೇನ
ರಾಮೋ ಯಥಾ ಶಸ್ತ್ರವಿದಸ್ತ್ರವಿಚ್ಚ ।
ಔರ್ವಾತ್ರಿಜಾಭ್ಯಾಮಸಿ ತುಲ್ಯತೇಜಾ ।
ದುಷ್ಪ್ರೇಕ್ಷಣೀಯೋಽಸಿ ಭಗೀರಥೇನ ॥೧೬॥

ನೀನು ಬಲದಲ್ಲಿ ಅಗಸ್ತ್ಯರಿಗೆ ಸಮನಾಗಿದ್ದೀಯೆ. ರಾಮನಂತೆ ಶಸ್ತ್ರಜ್ಞಾನವನ್ನೂ, ಅಸ್ತ್ರಜ್ಞಾನವನ್ನೂ ಹೊಂದಿದ್ದೀಯೆ. ಔರ್ವರಿಗೆ ಮತ್ತು ಅತ್ರಿಜನಾದ ಚಂದ್ರನಿಗೆ ಸಮಾನವಾದ ಪರಾಕ್ರಮವುಳ್ಳವನಾಗಿದ್ದೀಯೆ. ದೂರದಿಂದ ಬಂದ ನನಗೆ ನೋಡಲು ಅಸಾಧ್ಯವಾದ ತೇಜಸ್ಸುಳ್ಳವನಾಗಿದ್ದೀಯೆ.

ಸೂತಃ

ಏವಂ ಸ್ತುತಾಃ ಸರ್ವ ಏವ ಪ್ರಸನ್ನಾ
ರಾಜಾ ಸದಸ್ಯಃ ಸರ್ತ್ವಿಜೋ ಹವ್ಯವಾಹಃ ।
ತೇಷಾಂ ದೃಷ್ಟ್ವಾ ಭಾವಿತಾನೀಂಗಿತಾನಿ
ಪ್ರೋವಾಚ ರಾಜಾ ಜನಮೇಜಯೋಽಥ ॥೧೭॥

ಹೀಗೆ ಸ್ತೋತ್ರಮಾಡಲ್ಪಟ್ಟ ರಾಜನೂ, ಸದಸ್ಯರೂ, ಋತ್ವಿಜರೂ, ಅಗ್ನಿಯೂ ಎಲ್ಲರೂ ಪ್ರಸನ್ನರಾದರು. ಅವರೆಲ್ಲರ ಪರಿಶುದ್ಧವಾದ ಇಂಗಿತಗಳನ್ನು ತಿಳಿದ ಜನಮೇಜಯರಾಜನು ಅನಂತರ ಮಾತನಾಡಿದನು.

॥ ಇತಿ ಶ್ರೀಮನ್ಮಹಾಭಾರತೇ ಶತಸಹಸ್ರಿಕಾಯಾಂಸಂಹಿತಾಯಾಮಾದಿಪರ್ವಣಿ ಏಕೋನಪಂಚಾಶೋಽಧ್ಯಾಯಃ ॥
॥ ಇತಿ ಆಸ್ತೀಕಪರ್ವಣಿ ಸಪ್ತತ್ರಿಂಶೋಽಧ್ಯಾಯಃ ॥

ಇಲ್ಲಿಗೆ ಮಹಾಭಾರತದ ಆದಿಪರ್ವದಲ್ಲಿ ನಲವತ್ತೊಂಭತ್ತನೆಯ ಅಧ್ಯಾಯ ಮುಗಿಯಿತು.

★★★★★

ಐವತ್ತನೆಯ ಅಧ್ಯಾಯ

(ಜನಮೇಜಯನ ಹರ್ಷ. ಬ್ರಾಹ್ಮಣವಚನದಂತೆ ಆಸ್ತೀಕನಿಗೆ ಸರ್ಪಯಾಗವಿರಾಮ ವರದಾನ.)

ಜನಮೇಜಯಃ

ಬಾಲೋ ವಾಕ್ಯಂ ಸ್ಥವಿರ ಇವ ಪ್ರಭಾಷಸೇ
ನಾಯಂ ಬಾಲಃ ಸ್ಥವಿರೋ ಧರ್ಮತೋ ಮೇ ।
ಇಚ್ಛಾಮ್ಯಹಂ ವರಮಸ್ಮೈ ಪ್ರದಾತುಂ
ತದ್ ವೈ ವಿಪ್ರಾಃ ಪ್ರವದಧ್ವಂ ಸಮೇತಾಃ ॥೧॥

ಬಾಲಕನಾದ ನೀನು ವೃದ್ಧನಂತೆ ಮಾತನಾಡುತ್ತಿದ್ದೀಯೆ. ಎಲೈ ಬ್ರಾಹ್ಮಣರೇ, ಇವನು ಬಾಲನಲ್ಲ. ಧರ್ಮದ ದೃಷ್ಟಿಯಿಂದ ಇವನು ವೃದ್ಧನೆಂದೇ ಭಾವಿಸುತ್ತೇನೆ. ಇವನಿಗೆ ವರವನ್ನು ಕೊಡಲು ನಾನು ಬಯಸುತ್ತೇನೆ. ನೀವೆಲ್ಲರೂ ಸೇರಿ ಅನುಮತಿಯನ್ನು ಕೊಡಿ.

ಸದಸ್ಯಾಃ

ಬಾಲೋಽಪಿ ವಿಪ್ರೋ ಮಾನ್ಯ ಏವೇಹ ರಾಜ್ಞಾ
ಯಶ್ಚಾವಿದ್ವಾನ್ ಯಶ್ಚ ವಿದ್ವಾನ್ ಯಥಾವತ್ ।
ಸರ್ವಾನ್ ಕಾಮಾಂಸ್ತ್ವತ್ತ ಏವಾರ್ಹತೇಽದ್ಯ
ಯಥಾ ಚ ನಸ್ತಕ್ಷಕ ಏತಿ ಶೀಘ್ರಮ್ ॥೨॥

ಬ್ರಾಹ್ಮಣನಾದವನು ಬಾಲಕನಾದರೂ ರಾಜನಿಂದ ಇಲ್ಲಿ ಮಾನ್ಯನೇ ಆಗುತ್ತಾನೆ. ಅವನು ವಿದ್ವಾಂಸನಾಗಿರಲಿ ಅಥವಾ ವಿದ್ವಾಂಸನಾಗದೇ ಇರಲಿ, ಆದರೂ ರಾಜನಿಂದ ಮಾನ್ಯನಾಗುತ್ತಾನೆ. ಇವನು ನಿನ್ನಿಂದ ಎಲ್ಲಾ ಕಾಮಗಳನ್ನೂ ಪಡೆಯಲು ಅರ್ಹನಾಗಿದ್ದಾನೆ. ತಕ್ಷಕನು ನಮ್ಮ ಬಳಿಗೆ ಶೀಘ್ರವಾಗಿ ಬರುವಂತೆ (ಅವನಿಗೆ ವರವನ್ನು ಕೊಡು).

ಸೂತಃ

ವ್ಯಾಹರ್ತುಕಾಮೇ ವರದೇ ನೃಪೇ ದ್ವಿಜಂ
ವರಂ ವೃಣೀಷ್ವೇತಿ ತಮಭ್ಯುವಾಚ ।
ಹೋತಾ ವಾಚಾ ನಾತಿಹೃಷ್ಟಾಂತರಾತ್ಮಾ
ಕರ್ಮಣ್ಯಸ್ಮಿಂಸ್ತಕ್ಷಕೋ ನೈತಿ ರಾಜನ್ ॥೩॥

ಆಗ ವರವನ್ನು ಕೊಡುವ ರಾಜನು ಬ್ರಾಹ್ಮಣನನ್ನು ಕುರಿತು ವರವನ್ನು ಕೇಳು ಎಂದು ಹೇಳಲು ಉದ್ಯುಕ್ತನಾಗುತ್ತಿರಲು ಹೋತೃವು ಅಸಂತುಷ್ಟವಾದ ಮನಸ್ಸಿನಿಂದ ಎಲೈ ರಾಜನೇ, ಈ ನಮ್ಮ ಕರ್ಮದಲ್ಲಿ ತಕ್ಷಕನು ಬರುತ್ತಿಲ್ಲ ಎಂದು ಹೇಳಿದನು.

ಜನಮೇಜಯಃ

ಯಥಾ ಚೇದಂ ಕರ್ಮ ಸಮಾಪ್ಯತೇ ಮೇ
ಯಥಾ ಚ ನಸ್ತಕ್ಷಕ ಏತಿ ಶೀಘ್ರಮ್ ।
ತಥಾ ಭವಂತಃ ಪ್ರಯತಂತು ಸರ್ವೇ
ಪರಂ ಶಕ್ತ್ಯಾ ಸ ಹಿ ಮೇ ವಿದ್ವಿಷಾಣಃ ॥೪॥

ಹೇಗೆ ಇಲ್ಲಿಗೆ ತಕ್ಷಕನು ಶೀಘ್ರವಾಗಿ ಬರುತ್ತಾನೋ ಮತ್ತು ಹೇಗೆ ಈ ನನ್ನ ಕರ್ಮವು ಸಮಾಪ್ತಿಗೊಳ್ಳುತ್ತದೋ ಅದರಂತೆ ನೀವೆಲ್ಲರೂ ಶಕ್ತಿಮೀರಿ ಪ್ರಯತ್ನಮಾಡಿ. ತಕ್ಷಕನು ನನ್ನ ವಿಶೇಷ ದ್ವೇಷಕ್ಕೆ ಪಾತ್ರನಾದವನು.

ಋತ್ವಿಜಃ

ಯಥಾ ಶಾಸ್ತ್ರಾಣಿ ನಃ ಪ್ರಾಹುರ್ನಿಮಿತ್ತಾನಿ ತಥೈವ ಚ ।
ಇಂದ್ರಸ್ಯ ಭವನೇ ರಾಜಂಸ್ತಕ್ಷಕೋ ಭಯಪೀಡಿತಃ ॥೫॥

ಎಲೈ ರಾಜನೇ, ನಮಗೆ ಶಾಸ್ತ್ರಗಳೂ ಮತ್ತು ಶಕುನಗಳೂ ತಿಳಿಸುವಂತೆ ತಕ್ಷಕನು ಭಯಪೀಡಿತನಾಗಿ ಇಂದ್ರನ ಮನೆಯಲ್ಲಿ ಇದ್ದಾನೆ.

ಯಥಾ ಸೂತೋ ಲೋಹಿತಾಕ್ಷೋ ಮಹಾತ್ಮಾ
ಪೌರಾಣಿಕೋ ವೇದಿತವಾನ್ ಪುರಸ್ತಾತ್ ।
ಸ ರಾಜಾನಂ ಪ್ರಾಹ ಹೃಷ್ಟಸ್ತದಾನೀಂ
ಯಥಾಹುರ್ವಿಪ್ರಾಸ್ತದ್ವದೇತನ್ನರೇಂದ್ರ ॥೬॥

ಹಿಂದೆ ಯಜ್ಞಭೂಮಿಯನ್ನು ಅಳೆಯುವಾಗ ಯಾವ ಮಹಾತ್ಮನೂ, ವೃದ್ಧನೂ ಆದ ಲೋಹಿತಾಕ್ಷ ಎಂಬ ಸೂತನು ರಾಜನಿಗೆ ತಿಳಿಸಿದ್ದನೋ ಅವನು ಈಗ ಸಂತೋಷದಿಂದ ರಾಜನನ್ನು ಕುರಿತು ನರೇಂದ್ರನೇ, ಬ್ರಾಹ್ಮಣರು ಹೇಳುತ್ತಿರುವುದು ಸತ್ಯವಾಗಿದೆ ಎಂದು ಹೇಳಿದನು.

ಪುರಾಣಮಾಗಮ್ಯ ತತೋ ಬ್ರವೀಮ್ಯಹಂ
ದತ್ತಂ ತಸ್ಮೈ ವರಮಿಂದ್ರೇಣ ರಾಜನ್ ।
ವಸೇಹ ತ್ವಂ ಮತ್ಸಕಾಶೇ ಸುಗುಪ್ತೋ
ನ ಪಾವಕಸ್ತ್ವಾಂ ಪ್ರದಹಿಷ್ಯತೀತಿ ॥೭॥

ಸ್ವರ್ಗಲೋಕದಿಂದ ಬಂದ ವಾರ್ತಾಹರರಿಂದ ನಾನು ತಿಳಿದು ಹೇಳುತ್ತಿದ್ದೇನೆ. ರಾಜನೇ, ನೀನು ನನ್ನ ಸಮೀಪದಲ್ಲಿ ಸುರಕ್ಷಿತನಾಗಿ ವಾಸಮಾಡು. ಅಗ್ನಿಯು ನಿನ್ನನ್ನು ದಹಿಸುವುದಿಲ್ಲ ಎಂದು ಇಂದ್ರನು ಅವನಿಗೆ ವರವನ್ನು ಕೊಟ್ಟಿದ್ದಾನೆ.

ಏತಚ್ಛ್ರುತ್ವಾ ದೀಕ್ಷಿತಸ್ತಪ್ಯಮಾನ
ಆಸ್ತೇ ಹೋತಾರಂ ಚೋದಯನ್ ಕರ್ಮಕಾಲೇ ।
ಹೋತಾ ಯತ್ತಃ ಸ ಜುಹಾವ ಮಂತ್ರೈ-
ರಥಾನ್ವಿಂದ್ರಃ ಸ್ವಯಮೇವಾಜಗಾಮ ॥೮॥

ಇದನ್ನು ಕೇಳಿದ ಯಜ್ಞದೀಕ್ಷಿತನಾದ ಜನಮೇಜಯನು ಸಂತಾಪಪಡುತ್ತಾ ಆ ಕರ್ಮಕಾಲದಲ್ಲಿ ಹೋತೃಋತ್ವಿಜನನ್ನು ಒತ್ತಾಯಪಡಿಸಿದನು. ಹೋತೃವು ಅವಧಾನದಿಂದ ಮಂತ್ರಗಳಿಂದ ಇಂದ್ರನನ್ನು ಆಹ್ವಾನಮಾಡಿದನು. ಆಗ ಇಂದ್ರನು ತಾನಾಗಿಯೇ ಬಂದನು.

ಆಯಾತು ಚೇಂದ್ರೋಽಪಿ ಸತಕ್ಷಕಃ ಪತೇದ್
ವಿಭಾವಸೌ ನಾಗರಾಜೇನ ತೂರ್ಣಮ್ ।
ಜಂಭಸ್ಯ ಹಂತೇತಿ ಜುಹಾವ ಹೋತಾ
ತದಾ ಜಗಾಮಾಹಿದತ್ತಾಭಯಃ ಪ್ರಭುಃ ॥೯॥

ಜಂಭಾರಿಯಾದ ಇಂದ್ರನು ಇಲ್ಲಿಗೆ ಬರಲಿ ಮತ್ತು ನಾಗರಾಜನಾದ ತಕ್ಷಕನ ಜೊತೆಯಲ್ಲಿ ಶೀಘ್ರವಾಗಿ ಅಗ್ನಿಯಲ್ಲಿ ಬೀಳಲಿ ಎಂದು ಹೋತೃವು ಇಂದ್ರನನ್ನು ಆಹ್ವಾನಿಸಿದನು. ಆಗ ತಕ್ಷಕನಿಗೆ ಅಭಯವನ್ನು ಕೊಟ್ಟಿದ್ದ ಪ್ರಭುವಾದ ಇಂದ್ರನು ತಾನಾಗಿಯೇ ಬಂದನು.

ವಿಮಾನಮಾರುಹ್ಯ ಮಹಾನುಭಾವಃ
ಸರ್ವೈರ್ದೇವೈಃ ಪರಿಸಂಸ್ತೂಯಮಾನಃ ।
ಬಲಾಹಕೈಶ್ಚಾಪ್ಯನುಗಮ್ಯಮಾನೋ
ವಿದ್ಯಾಧರೈರಪ್ಸರಸಾಂ ಗಣೈಶ್ಚ ॥೧೦॥

ಮಹಾನುಭಾವನಾದ ಇಂದ್ರನು ವಿಮಾನವನ್ನೇರಿ ಎಲ್ಲಾ ದೇವತೆಗಳಿಂದಲೂ ಬಹಳವಾಗಿ ಸ್ತೋತ್ರಮಾಡಲ್ಪಟ್ಟು, ಮೋಡಗಳಿಂದಲೂ (ಮೇಘಾಭಿಮಾನಿ ದೇವತೆಗಳಿಂದಲೂ), ವಿದ್ಯಾಧರರ ಮತ್ತು ಅಪ್ಸರರ ಗಣಗಳಿಂದಲೂ ಹಿಂಬಾಲಿಸಲ್ಪಟ್ಟು (ಬಂದನು).

ತಸ್ಯೋತ್ತರೀಯೇ ನಿಹಿತಃ ಸ ನಾಗೋ
ಭಯೋದ್ವಿಗ್ನಃ ಶರ್ಮ ನೈವಾಭ್ಯಗಚ್ಛತ್ ।
ತತೋ ರಾಜಾ ಮಂತ್ರವಿದೋಽಬ್ರವೀಚ್ಚ
ಕ್ರುದ್ಧಸ್ತದಾ ತಕ್ಷಕಸ್ಯಾಂತಮಿಚ್ಛನ್ ॥೧೧॥

ಅವನ ಉತ್ತರೀಯದಲ್ಲಿ ಅವಿತುಕೊಂಡಿದ್ದ ತಕ್ಷಕನು ಭಯೋದ್ವಿಗ್ನನಾಗಿ, ಸುಖವನ್ನು ಕಳೆದುಕೊಂಡನು. ಆಗ ರಾಜನು ಮಂತ್ರವೇತ್ತರಾದ ಬ್ರಾಹ್ಮಣರನ್ನು ಕುರಿತು ಕ್ರೋಧದಿಂದ ತಕ್ಷಕನ ನಾಶವನ್ನು ಬಯಸಿ ಮಾತನಾಡಿದನು.

ಜನಮೇಜಯಃ

ಇಂದ್ರಸ್ಯ ಭವನೇ ವಿಪ್ರ ಯದಿ ತಸ್ಥೌ ಸ ತಕ್ಷಕಃ ।
ತಮಿಂದ್ರೇಣೈವ ಸಹಿತಂ ಪಾತಯಧ್ವಂ ವಿಭಾವಸೌ ।
ಪಾಲಯೇದ್ ಯದಿ ತತ್ರೇಂದ್ರಃ ಸ ನಾಗಂ ತಕ್ಷಕಂ ತಥಾ ॥೧೨॥

ಬ್ರಾಹ್ಮಣರೇ, ಆ ತಕ್ಷಕನಾಗನು ಇಂದ್ರನ ಮನೆಯಲ್ಲಿ ಇರುವುದಾದರೆ ಮತ್ತು ಅವನಿಗೆ ಇಂದ್ರನು ರಕ್ಷಣೆಯನ್ನು ಕೊಡುವುದಾದರೆ, ಆ ತಕ್ಷಕನನ್ನು ಇಂದ್ರನ ಜೊತೆಯಲ್ಲಿಯೇ ಅಗ್ನಿಯಲ್ಲಿ ಬೀಳಿಸಿ.

ಸೂತಃ

ಜನಮೇಜಸಯಸ್ಯ ರಾಜ್ಞಾ ತು ಚೋದಿತಸ್ತಕ್ಷಕಂ ಪ್ರತಿ ।
ಹೋತಾSSಜುಹಾವ ತತ್ರಸ್ಥಂ ಸಶಕ್ರಂ ತಕ್ಷಕಂ ತಥಾ ॥೧೩॥

ತಕ್ಷಕನ ವಿಷಯದಲ್ಲಿ ಜನಮೇಜಯರಾಜನಿಂದ ಪ್ರೇರಿಸಲ್ಪಟ್ಟವನಾಗಿ ಹೋತೃವು ಅಲ್ಲಿದ್ದ ಇಂದ್ರನನ್ನೂ ಮತ್ತು ತಕ್ಷಕನನ್ನೂ ಆಹ್ವಾನಮಾಡಿದನು.

ಹೂಯಮಾನೇ ತಥಾ ಚೈವ ತಕ್ಷಕಃ ಸಪುರಂದರಃ ।
ಆಕಾಶೇ ದದೃಶೇ ತತ್ರ ಕ್ಷಣೇನ ವ್ಯಥಿತಸ್ತದಾ ॥೧೪॥

ಈ ರೀತಿಯಾಗಿ ಆಹ್ವಾನ ಮಾಡಲ್ಪಡುತ್ತಿರಲು ತಕ್ಷಣದಲ್ಲಿಯೇ ವ್ಯಥೆಯಿಂದ ಕೂಡಿದ ತಕ್ಷಕನು ಇಂದ್ರನ ಜೊತೆಯಲ್ಲಿ ಆಕಾಶದಲ್ಲಿ ಕಾಣಿಸಿಕೊಂಡನು.

ಪುರಂದರಸ್ತು ತಂ ಯಜ್ಞಂ ದೃಷ್ಟ್ವಾ ತು ಭಯಮಾವಿಶತ್ ।
ಹಿತ್ವಾ ತು ತಕ್ಷಕಂ ನಾಗಂ ಸ್ವಮೇವ ಭವನಂ ಯಯೌ ॥೧೫॥

ಇಂದ್ರನು ಆ ಯಜ್ಞವನ್ನು ನೋಡಿ ಭಯಸಾಗರದಲ್ಲಿ ಮುಳುಗಿದನು. ತಕ್ಷಕನನ್ನು ಅಲ್ಲಿಯೇ ಬಿಟ್ಟು ತನ್ನ ಮನೆಗೆ ಹಿಂದಿರುಗಿದನು.

ಇಂದ್ರೇ ಗತೇ ತು ನಾಗೇಂದ್ರಃ ತಕ್ಷಕೋ ಭಯಮೋಹಿತಃ ।
ಮಂತ್ರಶಕ್ತ್ಯಾ ತು ಸಪ್ತಾರ್ಚೇಃ ಸಮೀಪಮವಶೋಽಗಮತ್ ॥೧೬॥

ಇಂದ್ರನು ಹೊರಟುಹೋಗುತ್ತಿರಲು ಭಯಮೋಹಿತನಾದ ತಕ್ಷಕನಾಗೇಂದ್ರನು ಮಂತ್ರಶಕ್ತಿಯಿಂದ ಎಳೆಯಲ್ಪಟ್ಟವನಾಗಿ ಅವಶನಾಗಿ ಅಗ್ನಿಯ ಸಮೀಪಕ್ಕೆ ಬಂದನು.

ತಂ ದೃಷ್ಟ್ವಾ ಋತ್ವಿಜಸ್ತತ್ರ ವಚನಂ ಚೇದಮಬ್ರುವನ್ ।
ಅಯಮಾಯಾತಿ ವೈ ತೂರ್ಣಂ ತಕ್ಷಕಸ್ತೇ ವಶಂ ಗತಃ ।
ಶ್ರೂಯತೇಽಸ್ಯ ಮಹಾನ್ ನಾದೋ ಭೈರವಂ ರುವತೋ ಮಹತ್ ॥

ಅವನನ್ನು ನೋಡಿದ ಋತ್ವಿಜರು ರಾಜನನ್ನು ಕುರಿತು ಈ ತಕ್ಷಕನು ನಿನಗೆ ವಶನಾಗಿ ಶೀಘ್ರವಾಗಿ ಬರುತ್ತಿದ್ದಾನೆ. ಭೈರವನಾದವನ್ನು ಮಾಡುತ್ತಿರುವ ಅವನ ಮಹಾನಾದವು ಕೇಳಿಬರುತ್ತಿದೆ.

ನೂನಂ ಯುಕ್ತೋಽಯಂ ಯಜ್ಞಭೂಮೌ ಸ ನಾಗೋ
ಭ್ರಷ್ಟೋ ಮಹಾಮಂತ್ರವಿತ್ರಸ್ತಕಾಯಃ
ಆಘೂರ್ಣಮಾನೋ ಹಿ ಸಮಭ್ಯುಪೈತಿ
ತೀವ್ರಾನ್ ನಿಶ್ವಾಸಾನ್ ನಿಶ್ವಸನ್ ಪನ್ನಗೇಂದ್ರಃ ॥೧೮॥

ಆ ನಾಗನು ನಮ್ಮ ಮಹಾಮಂತ್ರಗಳಿಂದ ಶಿಥಿಲವಾದ ದೇಹವುಳ್ಳವನಾಗಿ ನಮ್ಮ ಮಂತ್ರಶಕ್ತಿಯಿಂದ ಬಿರಿದುಹೋಗುತ್ತಾ, ತೀವ್ರವಾದ ನಿಟ್ಟುಸಿರುಗಳನ್ನು ಬಿಡುತ್ತಾ ಯಜ್ಞಭೂಮಿಯಲ್ಲಿ ಬೀಳುತ್ತಿದ್ದಾನೆ.

ವರ್ತತೇ ತವ ರಾಜೇಂದ್ರ ಕರ್ಮೈತದ್ ವಿಧಿವತ್ ಪ್ರಭೋ ।
ಅಸ್ಮೈ ಚ ದ್ವಿಜಮುಖ್ಯಾಯ ವರಂ ದಾತುಂ ತ್ವಮರ್ಹಸಿ ॥೧೯॥

ಎಲೈ ಪ್ರಭುವಾದ ರಾಜೇಂದ್ರನೇ, ನಮ್ಮ ಯಜ್ಞವು ವಿಧಿವತ್ತಾಗಿ ನಡೆಯುತ್ತಿದೆ. ಈ ಬ್ರಾಹ್ಮಣಶ್ರೇಷ್ಠನಿಗೆ ನೀನು ವರವನ್ನು ಕೊಡು.

ರಾಜಾ

ಬಾಲಾಭಿರೂಪಸ್ಯ ತವಾಪ್ರಮೇಯ
ವರಂ ಪ್ರಯಚ್ಛಾಮಿ ಯಥಾನುರೂಪಮ್ ।

ವೃಣೀಷ್ವ ಯತ್ ತೇऽಭಿಮತಂ ಹೃದಿಸ್ಥಂ
ತತ್ ತೇ ಪ್ರದಾಸ್ಯಾಮ್ಯಪಿ ಚೇದದೇಯಮ್ ॥೨೦॥

ಬಾಲರೂಪವನ್ನು ಧರಿಸಿರುವ ಎಲೈ ಅಪ್ರಮೇಯಮಹಿಮನೇ, ನಿನಗೆ ಅನುರೂಪವಾದ ವರವನ್ನು ಕೊಡುತ್ತೇನೆ. ನಿನ್ನ ಮನಸ್ಸಿನಲ್ಲಿರುವ ಅಭೀಷ್ಟವಾದ ವರವನ್ನು ಕೇಳು. ಅದು ಕೊಡಬಾರದ ವಸ್ತುವಾದರೂ ಸಹ ನಾನು ನಿನಗೆ ಅದನ್ನು ಕೊಡುವೆನು.

ಸೂತಃ

ಪತಿಷ್ಯಮಾಣೇ ನಾಗೇಂದ್ರೇ ತಕ್ಷಕೇ ಜಾತವೇದಸಿ।
ಇದಮಂತರಮಿತ್ಯೇವಂ ತದಾऽऽಸ್ತೀಕೋ ನ್ಯವೇದಯತ್ ॥೨೧॥

ತಕ್ಷಕನಾಗೇಂದ್ರನು ಅಗ್ನಿಯಲ್ಲಿ ಇನ್ನೇನು ಬೀಳುತ್ತಾನೆ ಎನ್ನುವ ಸಂದರ್ಭದಲ್ಲಿ ಇದೇ ಸರಿಯಾದ ಸಮಯವೆಂದು ತಿಳಿದು ಆಸ್ತೀಕನು ರಾಜನಿಗೆ ನಿವೇದಿಸಿದನು.

ಆಸ್ತೀಕಃ

ವರಂ ದದಾಸಿ ಚೇನ್ಮಹ್ಯಂ ವೃಣೋಮಿ ಜನಮೇಜಯ ।
ಸತ್ರಂ ತೇ ವಿರಮತ್ವೇತನ್ನ ಪತೇಯುರಿಹೋರಗಾಃ ॥೨೨॥

ಜನಮೇಜಯನೆ, ನನಗೆ ವರವನ್ನು ಕೊಡುವುದಾದರೆ, ನಾನು ಈ ವರವನ್ನು ಕೇಳುತ್ತೇನೆ. ಈ ನಿನ್ನ ಸತ್ರವು ಇಲ್ಲಿಗೇ ನಿಲ್ಲಲಿ. ಇನ್ನು ಯಾವ ಸರ್ಪಗಳೂ ಅಗ್ನಿಯಲ್ಲಿ ಬೀಳುವುದು ಬೇಡ.

ಸೂತಃ

ಏವಮುಕ್ತಸ್ತದಾ ರಾಜಾ ಬ್ರಹ್ಮನ್ ಪಾರೀಕ್ಷಿತಸ್ತದಾ ।
ನಾತಿಹೃಷ್ಟಮನಾ ವಾಕ್ಯಮಾಸ್ತೀಕಮಿದಮಬ್ರವೀತ್ ॥೨೩॥

ಎಲೈ ಬ್ರಾಹ್ಮಣನೇ, ಆಸ್ತೀಕನಿಂದ ಹೀಗೆ ಹೇಳಲ್ಪಟ್ಟ ಜನಮೇಜಯರಾಜನು ಮನಸ್ಸಿನಲ್ಲಿ ಬಹಳ ಸಂತೋಷಗೊಳ್ಳದೆ, ಆಸ್ತೀಕನನ್ನು ಕುರಿತು ಹೀಗೆ ಮಾತನಾಡಿದನು.

ಸುವರ್ಣಂ ರಜತಂ ಗಾಶ್ಚ ಯಚ್ಚಾನ್ಯನ್ಮನ್ಯಸೇ ದ್ವಿಜ ।
ತತ್ ತೇ ದದ್ಯಾಂ ಸುವಾಸಾಂಸಿ ನ ನಿವರ್ತೇತ್ ಕ್ರತುರ್ಮಮ ॥೨೪॥

ಎಲೈ ಬ್ರಾಹ್ಮಣನೇ, ನಿನಗೆ ಸುವರ್ಣವನ್ನಾಗಲಿ, ರಜತವನ್ನಾಗಲಿ, ಗೋವುಗಳನ್ನಾಗಲಿ ಅಥವಾ ಅಭೀಷ್ಟವಾದ ಇನ್ನಾವುದೇ ವಸ್ತುವನ್ನಾಗಲಿ ಅಥವಾ ವಸ್ತ್ರಗಳನ್ನಾಗಲಿ ಕೊಡುವೆನು. ನನ್ನ ಈ ಯಾಗವು ಇಲ್ಲಿಗೆ ವಿರಾಮವನ್ನು ಹೊಂದದಿರಲಿ.

ಆಸ್ತೀಕಃ

ಸುವರ್ಣಂ ರಜತಂ ಗಾಶ್ಚ ನ ತ್ವಾಂ ರಾಜನ್ ವೃಣೋಮ್ಯಹಮ್ ।
ಸತ್ರಂ ತೇ ವಿರಮತ್ವೇತತ್ ಸ್ವಸ್ತಿ ಮಾತೃಕುಲಸ್ಯ ನಃ ॥೨೫॥

ರಾಜನೇ, ನಾನು ಸುವರ್ಣವನ್ನಾಗಲಿ, ರಜತವನ್ನಾಗಲಿ, ಗೋವುಗಳನ್ನಾಗಲಿ ನಿನ್ನನ್ನು ಬೇಡುತ್ತಿಲ್ಲ. ಈ ಸತ್ರವು ಇಲ್ಲಿಗೆ ನಿಲ್ಲಲಿ. ನಮ್ಮ ತಾಯಿಯ ವಂಶಕ್ಕೆ ಕ್ಷೇಮವಾಗಲಿ.

ಸೌತಿಃ

ಆಸ್ತೀಕೇನೈವಮುಕ್ತಸ್ತು ರಾಜಾ ಪಾರೀಕ್ಷಿತಸ್ತದಾ ।
ಪುನಃಪುನರುವಾಚೇದಮಾಸ್ತೀಕಂ ವದತಾಂ ವರಃ ॥೨೬॥

ಅನ್ಯಂ ವರಯ ಭದ್ರಂ ತೇ ವರಂ ದ್ವಿಜವರೋತ್ತಮ ।
ಅಯಾಚತ್ ನಚಾಪ್ಯನ್ಯಂ ವರಂ ಸ ಭೃಗುನಂದನ ॥೨೭॥

ಆಸ್ತೀಕನಿಂದ ಹೀಗೆ ಹೇಳಲ್ಪಟ್ಟ ಜನಮೇಜಯರಾಜನು ಆಸ್ತೀಕನನ್ನು ಕುರಿತು ಪುನಃ ಪುನಃ ದ್ವಿಜಶ್ರೇಷ್ಠರಲ್ಲಿ ಶ್ರೇಷ್ಠನೇ, ಮಂಗಳಸ್ವರೂಪನೇ, ಬೇರೆಯ ವರವನ್ನು ಕೇಳು ಎಂದು ಒತ್ತಾಯಪಡಿಸಿದನು. ಎಲೈ ಭೃಗುನಂದನನಾದ ಶೌನಕನೇ, ಆಸ್ತೀಕನು ಬೇರೆ ಯಾವ ವರವನ್ನೂ ಕೇಳಲಿಲ್ಲ.

ತತೋ ವೇದವಿದಸ್ತಾತ ಸದಸ್ಯಾಃ ಸರ್ವ ಏವ ತಮ್ ।
ರಾಜಾನಮೂಚುಃ ಸಹಿತಾ ಲಭತಾಂ ಬ್ರಾಹ್ಮಣೋ ವರಮ್ ॥೨೮॥

ಆಗ ವೇದಜ್ಞರಾದ ಸದಸ್ಯರೆಲ್ಲರೂ ಒಟ್ಟಿಗೇ ರಾಜನನ್ನು ಕುರಿತು ಈ ಬ್ರಾಹ್ಮಣನಿಗೆ ಅವನು ಕೇಳಿದ ವರವನ್ನು ಕೊಡು ಎಂದು ಹೇಳಿದರು.

ಶ್ರುತ್ವಾ ತನ್ನೃಪತಿರ್ವಾಕ್ಯಂ ದದೌ ತಸ್ಮೈ ವರಂ ತದಾ ।
ಸರ್ವೇಷಾಂ ಪಶ್ಯತಾಂ ತತ್ರ ಪೂರ್ಣಕಾಮೋ ದ್ವಿಜೋಽಭವತ್ ॥೨೯॥

ಬ್ರಾಹ್ಮಣರ ಮಾತನ್ನು ಕೇಳಿದ ರಾಜನು ಆಸ್ತೀಕನಿಗೆ ಆ ವರವನ್ನು ನೀಡಿದನು. ಎಲ್ಲರೂ ನೋಡುತ್ತಿರುವಂತೆ ಬ್ರಾಹ್ಮಣನು ಇಷ್ಟಾರ್ಥಗಳನ್ನು ಪೂರ್ಣಹೊಂದಿದನು.

॥ ಇತಿ ಶ್ರೀಮನ್ಮಹಾಭಾರತೇ ಶತಸಹಸ್ರಿಕಾಯಾಂಸಂಹಿತಾಯಾಮಾದಿಪರ್ವಣಿ
ಪಂಚಾಶೋಽಧ್ಯಾಯಃ ॥
॥ ಇತಿ ಆಸ್ತೀಕಪರ್ವಣಿ ಅಷ್ಟತ್ರಿಂಶೋಽಧ್ಯಾಯಃ ॥

ಇಲ್ಲಿಗೆ ಮಹಾಭಾರತದ ಆದಿಪರ್ವದಲ್ಲಿ ಐವತ್ತನೆಯ ಅಧ್ಯಾಯ ಮುಗಿಯಿತು.

★★★★★

ಐವತ್ತೊಂದನೆಯ ಅಧ್ಯಾಯ

(ಸರ್ಪಸತ್ರದಲ್ಲಿ ದಗ್ಧರಾದ ಸರ್ಪಗಳ ನಾಮಕೀರ್ತನೆ)

ಶೌನಕಃ

ಯೇ ಸರ್ಪಾಃ ಸರ್ಪಸತ್ರೇಽಸ್ಮಿನ್ ಪತಿತಾ ಹವ್ಯವಾಹನೇ ।
ತೇಷಾಂ ನಾಮಾನಿ ಸರ್ವೇಷಾಂ ಶ್ರೋತುಮಿಚ್ಛಾಮಿ ಸೂತಜ ॥೧॥

ಎಲೈ ಸೂತಕುಮಾರನೇ, ಆ ಸರ್ಪಯಾಗದಲ್ಲಿ ಅಗ್ನಿಯಲ್ಲಿ ಬಿದ್ದ ಎಲ್ಲಾ ಸರ್ಪಗಳ ಹೆಸರನ್ನು ನಾನು ಕೇಳಲು ಬಯಸುತ್ತೇನೆ.

ಸೂತಃ

ಸಹಸ್ರಾಣಿ ಬಹೂನ್ಯಸ್ಮಿನ್ ಪ್ರಯುತಾನ್ಯರ್ಬುದಾನಿ ಚ ।
ನ ಶಕ್ಯಂ ಪರಿಸಂಖ್ಯಾತುಂ ಬಹುತ್ವಾದ್ ವೇದವಿತ್ತಮ ॥೨॥

ವೇದವೇತ್ತರಲ್ಲಿ ಶ್ರೇಷ್ಠನಾದ ಶೌನಕನೇ, ಆ ಯಜ್ಞದಲ್ಲಿ ಸಾವಿರಗಟ್ಟಲೆ ಅಥವಾ ಕೋಟಿಗಟ್ಟಲೆ ಅಥವಾ ಅರ್ಬುದಗಟ್ಟಲೆ ಸರ್ಪಗಳು ಅಗ್ನಿಯಲ್ಲಿ ಬಿದ್ದವು. ಅವುಗಳ ಸಂಖ್ಯೆ ಅಪಾರವಾಗಿರುವುದರಿಂದ ಅದನ್ನು ಎಣಿಸಲು ಸಾಧ್ಯವಿಲ್ಲ. ನನ್ನ ಸ್ಮೃತಿಗೆ ಬಂದಷ್ಟು ಅವುಗಳ ಹೆಸರನ್ನು ಹೇಳುತ್ತೇನೆ ಕೇಳು.

ಯಥಾಸ್ಮೃತಿ ತು ನಾಮಾನಿ ಪನ್ನಗಾನಾಂ ನಿಬೋಧ ಮೇ ।
ನೀಲರಕ್ತಾನ್ ಸಿತಾನ್ ಘೋರಾನ್ ಮಹಾಕಾಯಾನ್ ವಿಷೋದ್ಬಣಾನ್ ॥

ನೀಲವರ್ಣದ, ರಕ್ತವರ್ಣದ, ಶ್ವೇತವರ್ಣದ, ಘೋರವೂ, ಮಹಾಶರೀರವುಳ್ಳವೂ, ಪ್ರಬಲವಾದ ವಿಷವುಳ್ಳವೂ ಆದ ಸರ್ಪಗಳ ಹೆಸರನ್ನು ನನ್ನ ಸ್ಮೃತಿಯಲ್ಲಿದಷ್ಟು ಹೇಳುವೆನು, ಅದನ್ನು ನನ್ನಿಂದ ತಿಳಿದುಕೋ.

ಕೋಟಿಕೋ ಮನಸಃ ಪೂರ್ಣಃ ಸದಯಾಲೋ ಹಲೀಢಕಃ ।
ಪಿಚ್ಚಲಃ ಕೌಣಪಃ ಶಕ್ರಃ ಕೋಣವೇಗಃ ಪ್ರಕಾಲನಃ ॥೪॥

ಹಿರಣ್ಯವಾಹಃ ಶರಣಃ ಕಕ್ಷಕಃ ಕಾಲದಂತಕಃ ।
ಏತೇ ವಾಸುಕಿಜಾ ನಾಗಾಃ ಪ್ರವಿಷ್ಟಾ ಹವ್ಯವಾಹನಮ್ ॥೫॥

ಕೋಟಿಕ, ಮನಸ, ಪೂರ್ಣ, ದಯಾಲ, ಹಳೀಡಕ, ಪಿಚ್ಚಲ, ಕೌಣಪ, ಶಕ್ರ, ಕೋಣವೇಗ, ಪ್ರಕಾಲನ, ಹಿರಣ್ಯವಾಹ, ಶರಣ, ಕಕ್ಷಕ, ಕಾಲಗ್ರಂಥಕ ಇವು ವಾಸುಕಿಯ ವಂಶದಲ್ಲಿ ಜನಿಸಿ ಅಗ್ನಿಯಲ್ಲಿ ಪ್ರವಿಷ್ಟವಾದ ಸರ್ಪಗಳು.

ತಕ್ಷಕಸ್ಯ ಕುಲಂ ತದ್ವೈ ಪ್ರವಕ್ಷ್ಯಾಮಿ ನಿಬೋಧ ತಾನ್ ।
ಪುಚ್ಛಣ್ಡಲೋ ಮಂಡಲಿಕಃ ಪಿಂಡಿಭೇತ್ತಾ ರಭೇಣಕಃ ॥೬॥

ಉಚ್ಚಿಖಃ ಸುರಸೋ ಭೃಂಗೋ ವಲ್ಲಿಹೋऽಥಾವಗೇಹಣಃ ।
ಸೀಲಃ ಸೀಲಹಣೋ ಮೂಕಃ ಸುಕುಮಾರಃ ಪ್ರವೇಪನಃ ॥೭॥

ಮುದ್ಗಿರಃ ಶರರೋಮಾ ಚ ಸುಮನೋ ವೇಗವಾಹನಃ ।
ಏತೇ ತಕ್ಷಕಜಾ ನಾಗಾಃ ಪ್ರವಿಷ್ಟಾ ಹವ್ಯವಾಹನಮ್ ॥೮॥

ನಾನು ತಕ್ಷಕನ ಕುಲವನ್ನು ಹೇಳುತ್ತೇನೆ, ಕೇಳು, ಪುಚ್ಛಣ್ಡನಲ, ಮಂಡಲಿಕ, ಪಿಂಡಿಭೇತ್ತ, ರಭೇಣಕ, ಉಚ್ಚಿಖ, ಸುರಸ, ಭೃಂಗ, ವಲ್ಲಿಹ, ಅವಗೇಹಣ, ಸೀಲ, ಸೀಲಹಣ, ಮೂಕ, ಸುಕುಮಾರ, ಪ್ರವೇಪನ, ಮುದ್ಗಿರ, ಶರರೋಮ, ಸುಮನ, ವೇಗವಾಹನ ತಕ್ಷಕನ ಕುಲಕ್ಕೆ ಸೇರಿದ ಈ ಸರ್ಪಗಳು ಅಗ್ನಿಯನ್ನು ಪ್ರವೇಶಿಸಿದವು.

ಪಾರಾವತಃ ಪಾರಿಯಾತ್ರಃ ಪಾಂಡರೋ ಹರಿಣಃ ಕೃಶಃ ।
ವಿಹಂಗಃ ಶರಭೋ ಮೋದಃ ಪ್ರಮೋದಃ ಸಂಹತಾಂಗದಃ ।
ಐರಾವತಕುಲಾ ಏತೇ ಪತಿತಾ ಹವ್ಯವಾಹನಮ್ ॥೯॥

– ಪಾರಾವತ, ಪಾರಿಯಾತ್ರ, ಪಾಂಡರ, ಹರಿಣ, ಕೃಶ, ವಿಹಂಗ, ಶರಭ, ಮೋದ, ಪ್ರಮೋದ, ಸಂಹತಾಂಗದ - ಐರಾವತಕುಲಕ್ಕೆ ಸೇರಿದ ಈ ಸರ್ಪಗಳು ಅಗ್ನಿಯಲ್ಲಿ ಬಿದ್ದವು.

ಕೌರವ್ಯಕುಲಜಾನ್ ಜಾತಾನ್ ಶೃಣು ನಾಗಾನ್ ದ್ವಿಜೋತ್ತಮ ।
ಜಟಿಲಃ ಕುಂಡಲೋ ಮುಂಡೋ ವೇಣಿಗ್ರಂಥಃ ಕುಮಾರಕಃ ॥೧೦॥

ಬಾಹುಕಃ ಶೃಂಗಯಷ್ಟಿಶ್ಚ ಧೂರ್ತಕಃ ಪೋತಪೀವರೌ ।
ಏತೇ ಕೌರವ್ಯಜಾ ನಾಗಾಃ ಪ್ರವಿಷ್ಟಾ ಹವ್ಯವಾಹನಮ್ ॥೧೧॥

ಎಲೈ ದ್ವಿಜಶ್ರೇಷ್ಠನೇ, ಕೌರವ್ಯಕುಲದಲ್ಲಿ ಜನಿಸಿದ ಸರ್ಪಗಳ ಹೆಸರನ್ನು ಕೇಳು. ಜಟಿಲ, ಕುಂಡಲ, ಮುಂಡ, ವೇಣಿಗ್ರಂಥ, ಕುಮಾರಕ, ಬಾಹುಕ, ಶೃಂಗಯಷ್ಟಿ, ಧೂರ್ತಕ, ಪೋತ, ಪೀವರ - ಕೌರವ್ಯವಂಶದಲ್ಲಿ ಜನಿಸಿದ ಈ ನಾಗಗಳು ಅಗ್ನಿಯನ್ನು ಪ್ರವೇಶಿಸಿದವು.

ಧೃತರಾಷ್ಟ್ರಕುಲೇ ಜಾತಾನ್ ಶೃಣು ನಾಗಾನ್ ಯಥಾಯಥಮ್ ।
ಕೀರ್ತ್ಯಮಾನಾನ್ ಮಯಾ ಬ್ರಹ್ಮನ್ ವಾತವೇಗಾನ್ ವಿಷೋದ್ಬಣಾನ್ ।
ಶಂಕುಕರ್ಣಃ ಪಿಂಗಲಕಃ ಕುಠಾರಮುಖಿಸೇವಕೌ ॥೧೨॥

ಪೂರ್ಣಾಂಗದಃ ಪೂರ್ಣಮುಖಃ ಪ್ರಹಸ್ತಃ ಶಕುನಿರ್ಭರಃ ।
ಅಮಾವಕಃ ಕೌಮುದಕಃ ಶ್ವಸನೋ ಮಾನವೋ ನಟಃ ॥೧೩॥

ಭೈರವೋ ಮಂಡಲೀ ಪಿಂಡಃ ಪಿಂಗಲಶ್ಚೋಡುಪಾರಕಃ ।
ಋಷಭೋ ವೇಗವಾನ್ ನಾಥಃ ಪಿಂಡಾರಕಮಹಾಹನೂ ॥೧೪॥

ರಕ್ತಾಂಗಃ ಸರ್ವಸಾರಂಗಃ ಸಮೃದ್ಧಃ ಪಟಲಾಕ್ಷಕಃ ।
ವಗಾಹಕೋ ವಾರುಣಕಃ ಸುಮಿತ್ರಶ್ಚಿತ್ರವೇದಿಕಃ ॥೧೫॥

ಪರಾಶರಸ್ತರುಣಕೋ ಮಣಿಸ್ಕಂಧಸ್ತಥಾऽರುಣಿಃ ।
ಇತಿ ನಾಗಾ ಮಯಾ ಬ್ರಹ್ಮನ್ ಕೀರ್ತಿತಾಃ ಕೀರ್ತಿವರ್ಧನ ॥೧೬॥

ಎಲೈ ಬ್ರಾಹ್ಮಣನೇ, ಧೃತರಾಷ್ಟ್ರಕುಲದಲ್ಲಿ ಜನಿಸಿದ ವಾಯುವೇಗವುಳ್ಳ ಮತ್ತು ವಿಷಉಲ್ಬಣವಾದ ನಾಗಗಳನ್ನು ತಿಳಿದಷ್ಟು ಹೇಳುತ್ತೇನೆ ಕೇಳು. ಶಂಕುಕರ್ಣ, ಪಿಂಗಲಕ, ಕುಠಾರಮುಖ, ಸೇವಕ, ಪೂರ್ಣಾಂಗದ, ಪೂರ್ಣಮುಖ, ಪ್ರಹಸ್ತ, ಶಕುನಿ, ಭರ,

ಅಮಾವಕ, ಕೌಮುದಕ, ಶ್ವಸನ, ಮಾನವ, ನಟ, ಭೈರವ, ಮಂಡಲೀ, ಪಿಂಡ, ಪಿಂಗಲ, ಉಡುಪಾರಕ, ಋಷಭ, ವೇಗವಾನ್, ನಾಥ, ಪಿಂಡಾರಕ, ಮಹಾಹನು, ರಕ್ತಾಂಗ, ಸರ್ವಸಾರಂಗ, ಸಮೃದ್ಧ, ಪಟಲಾಕ್ಷ, ವಗಾಹಕ, ವಾರುಣಕ, ಸುಮಿತ್ರ, ಚಿತ್ರವೇದಿಕ, ಪರಾಶರ, ತರುಣಕ, ಮಣಿಸ್ಕಂಧ ಮತ್ತು ಅರುಣಿ. ಎಲೈ ಕೀರ್ತಿವರ್ಧನನಾದ ಬ್ರಾಹ್ಮಣನೇ, ನಾನು ಇಷ್ಟು ನಾಗಗಳ ಹೆಸರನ್ನು ಹೇಳಿದ್ದೇನೆ.

ಪ್ರಾಧಾನ್ಯೇನ ಬಹುತ್ವಾತ್ ತು ಸರ್ವೇ ನ ಪರಿಕೀರ್ತಿತಾಃ ।
ಏತೇಷಾಂ ಪುತ್ರಪೌತ್ರಾಶ್ಚ ಪ್ರಸವಸ್ಯ ಚ ಸಂತತಿಃ ।
ನ ಶಕ್ಯಃ ಪರಿಸಂಖ್ಯಾತುಂ ಯೇ ದೀಪ್ತಂ ಪಾವಕಂ ಗತಾಃ ॥೧೭॥

ಸರ್ಪಗಳ ಸಂಖ್ಯೆಯು ಅಪಾರವಾಗಿರುವುದರಿಂದ ನಾನು ಎಲ್ಲಾ ಹೆಸರುಗಳನ್ನೂ ಹೇಳದೆ, ಪ್ರಧಾನರಾದವರ ಹೆಸರನ್ನೇ ಹೇಳಿದ್ದೇನೆ. ಈ ಸರ್ಪಗಳ ಪುತ್ರಪೌತ್ರರೂ, ಅವರ ಮಕ್ಕಳೂ, ಅವರ ಸಂತತಿಯೂ ಪರಿಗಣಿಸಲು ಸಾಧ್ಯವಿಲ್ಲ. ಅವರೆಲ್ಲರೂ ದೀಪ್ತವಾದ ಅಗ್ನಿಯಲ್ಲಿ ನಷ್ಟರಾದರು.

ಸಪ್ತಶೀರ್ಷಾಽಷ್ಟಶೀರ್ಷಾಶ್ಚ ದ್ವಿಷಟ್‌ಶೀರ್ಷಾಸ್ತಥಾಪರೇ ।
ದಶಶೀರ್ಷಾಃ ಶತಶೀರ್ಷಾಸ್ತಥಾನ್ಯೇ ಬಹುಶೀರ್ಷಕಾಃ ।
ಕಾಲಾನಲವಿಷಾ ಘೋರಾ ಹುತಾಃ ಶತಸಹಸ್ರಶಃ ॥೧೮॥

ಏಳು ಹೆಡೆಗಳುಳ್ಳ, ಎಂಟು ಹೆಡೆಗಳುಳ್ಳ, ಹನ್ನೆರಡು ಹೆಡೆಗಳುಳ್ಳ, ಹತ್ತು ಹೆಡೆಗಳುಳ್ಳ, ನೂರು ಹೆಡೆಗಳುಳ್ಳ ಮತ್ತು ಅದಕ್ಕಿಂತಲೂ ಹೆಚ್ಚು ಹೆಡೆಗಳುಳ್ಳ, ಪ್ರಳಯಕಾಲದ ವಹ್ನಿಯಂತೆ ವಿಷಪೂರಿತವಾದ ಘೋರವಾದ ಸರ್ಪಗಳು, ನೂರು ಸಹಸ್ರಾರು ಸಂಖ್ಯೆಯಲ್ಲಿ ಅಗ್ನಿಯಲ್ಲಿ ಹೋಮಮಾಡಲ್ಪಟ್ಟವು.

ಮಹಾಕಾಯಾ ಮಹಾವೀರ್ಯಾಃ ಶೈಲಶೃಂಗಸಮುಚ್ಛ್ರಯಾಃ ।
ಯೋಜನಾಯಾಮವಿಸ್ತಾರಾ ದ್ವಿಯೋಜನಸಮಾಯತಾಃ ॥೧೯॥

ಕಾಮರೂಪಾಃ ಕಾಮಬಲಾ ದೀಪ್ತರೂಪಾ ವಿಷೋದ್ಬಣಾಃ ।
ದಗ್ಧಾಸ್ತತ್ರ ಮಹಾಸತ್ರೇ ಬ್ರಹ್ಮದಂಡನಿಪೀಡಿತಾಃ ॥೨೦॥

ಮಹಾಶರೀರವುಳ್ಳ, ಮಹಾಪರಾಕ್ರಮವುಳ್ಳ, ಪರ್ವತದ ಶಿಖರದಂತೆ ಎತ್ತರವಾದ, ಒಂದು ಯೋಜನ ಅಗಲ ಮತ್ತು ಒಂದು ಯೋಜನ ಎತ್ತರವುಳ್ಳ,

ಎರಡು ಯೋಜನ ವಿಸ್ತಾರವುಳ್ಳ, ಕಾಮರೂಪವುಳ್ಳ, ಕಾಮಬಲವುಳ್ಳ ಪ್ರಕಾಶಮಾನವಾದ ರೂಪವುಳ್ಳ, ವಿಷ ಉಲ್ಬಣವಾದ ಅನೇಕ ಸರ್ಪಗಳು ಚಂಡಭಾರ್ಗವನ ಮಂತ್ರಶಕ್ತಿಗೆ ಒಳಗಾಗಿ ಆ ಮಹಾಸತ್ರದಲ್ಲಿ ಅಗ್ನಿಯಲ್ಲಿ ದಗ್ಧವಾದವು.

॥ ಇತಿ ಶ್ರೀಮನ್ಮಹಾಭಾರತೇ ಶತಸಹಸ್ರಿಕಾಯಾಂಸಂಹಿತಾಯಾಮಾದಿಪರ್ವಣಿ ಏಕಪಂಚಾಶೋऽಧ್ಯಾಯಃ ॥

॥ ಇತಿ ಆಸ್ತೀಕಪರ್ವಣಿ ಏಕೋನಚತ್ವಾರಿಂಶೋऽಧ್ಯಾಯಃ ॥

ಇಲ್ಲಿಗೆ ಮಹಾಭಾರತದ ಆದಿಪರ್ವದಲ್ಲಿ ಐವತ್ತೊಂದನೆಯ ಅಧ್ಯಾಯ ಮುಗಿಯಿತು.

★★★★★

ಐವತ್ತೆರಡನೆಯ ಅಧ್ಯಾಯ

(ಸರ್ಪಸತ್ರ ಸಮಾಪ್ತಿ. ಆಸ್ತೀಕನಿಂದ ಸರ್ಪಗಳಿಗೆ ವರದಾನ.)

ಸೂತಃ

ಇದಮತ್ಯದ್ಭುತಂ ಚಾನ್ಯದಸ್ತೀಕಸ್ಯಾಥ ಶುಶ್ರುಮಃ ।
ತಥಾ ವರೈಶ್ಚಂದ್ಯಮಾನೋ ರಾಜ್ಞಾ ಪಾರೀಕ್ಷಿತೇನ ಹ ॥೧॥

ಆಸ್ತೀಕನ ವಿಷಯದಲ್ಲಿ ಪರೀಕ್ಷಿತರಾಜನು ವರವನ್ನು ಕೇಳು ಎಂದು ಅವನನ್ನು ಕುರಿತು ಹೇಳುತ್ತಿರುವಾಗ ಇನ್ನೊಂದು ಆಶ್ಚರ್ಯದ ಘಟನೆಯು ನಡೆಯಿತೆಂದು ನಾವು ಕೇಳಿದ್ದೇವೆ.

ಇಂದ್ರಹಸ್ತಾಚ್ಚ್ಯುತೋ ನಾಗಃ ಸ ಖ ಏವ ವ್ಯವಸ್ಥಿತಃ ।
ತತಶ್ಚಿಂತಾಪರೋ ರಾಜಾ ಬಭೂವ ಜನಮೇಜಯಃ ॥೨॥

ಇಂದ್ರನ ಕೈಯಿಂದ ಜಾರಿದ ಆ ತಕ್ಷಕನು ಆಕಾಶದಲ್ಲಿಯೇ ನಿಂತನು. ಆಗ ಜನಮೇಜಯರಾಜನು ಚಿಂತಾಕ್ರಾಂತನಾದನು.

ಹೂಯಮಾನೇ ಭೃಶಂ ದೀಪ್ತೇ ವಿಧಿವತ್ ಪಾವಕೇ ತದಾ ।
ನ ಸಂಪ್ರಾಪತ್ ತದಾ ವಹ್ನೌ ತಕ್ಷಕೋ ಭಯಪೀಡಿತಃ ॥೩॥

ದೀಪ್ತವಾದ ಅಗ್ನಿಯಲ್ಲಿ ಮಂತ್ರಪೂರ್ವಕವಾಗಿ ಆಹ್ವಾನವನ್ನು ಮಾಡಿದಾಗ ಭಯಪೀಡಿತನಾದ ತಕ್ಷಕನು ಆಗ ಅಗ್ನಿಯ ಬಳಿಗೆ ಬರಲಿಲ್ಲ.

ಶೌನಕಃ

ಕಿಂ ಸೂತ ತೇಷಾಂ ವಿಪ್ರಾಣಾಂ ಮಂತ್ರಗ್ರಾಮೋ ಮಹಾತ್ಮನಾಮ್ ।
ನ ಪ್ರತ್ಯಭಾದ್ ಹುತೇಽಗ್ನೌ ಯನ್ನ ಪಪಾತ ಸ ತಕ್ಷಕಃ ॥೪॥

ಸೂತರೇ, ಇದೇನು ಆ ಮಹಾತ್ಮರಾದ ಬ್ರಾಹ್ಮಣರಿಗೆ ಮಂತ್ರಗಳು ಮರೆತುಹೋದವೋ? ತಕ್ಷಕನು ದೀಪ್ತವಾದ ಅಗ್ನಿಯಲ್ಲಿ ಏಕೆ ಬೀಳಲಿಲ್ಲ?

ಸೂತಃ

ತಮಿಂದ್ರಹಸ್ತಾದ್ ವಿಸ್ರಸ್ತಂ ವಿಪತ್ಸ್ಥಂ ಪನ್ನಗೋತ್ತಮಮ್ ।
ಆಸ್ತೀಕಸ್ತಿಷ್ಠತಿಷ್ಠೇತಿ ವಾಚಸ್ತಿಸ್ರೋಽಭ್ಯುವಾಚ ಹ ॥೫॥

ಇಂದ್ರನ ಕೈಯಿಂದ ಜಾರಿದ ವಿಪತ್ತಿಗೊಳಗಾದ ಆ ಪನ್ನಗಶ್ರೇಷ್ಠನಾದ ತಕ್ಷಕನನ್ನು ಕುರಿತು ಆಸ್ತೀಕನು 'ನಿಲ್ಲು, ನಿಲ್ಲು, ನಿಲ್ಲು'ಎಂದು ಮೂರುಬಾರಿ ಹೇಳಿದನು.

ವಿತಸ್ಥೇ ಸೋಽಂತರಿಕ್ಷೇಽಥ ಹೃದಯೇನ ವಿದೂಯತಾ ।
ಯಥಾ ತಿಷ್ಠೇತಿ ವಾಚೋಕ್ತಸ್ತಥಾ ತಸ್ಥೌ ನಭೋಽಂತರೇ ॥೬॥

ಆಗ ಆಸ್ತೀಕನು ನಿಲ್ಲುಎಂದು ಹೇಳಿದ ಮಾತಿನಂತೆ ತಕ್ಷಕನು ಆಕಾಶದ ಮಧ್ಯದಲ್ಲಿ ಅಂತರಿಕ್ಷದಲ್ಲಿಯೇ ದುಃಖಗೊಂಡ ಮನಸ್ಸಿನಿಂದ ನಿಂತನು.

ತತೋ ರಾಜಾಽಬ್ರವೀದ್ ವಾಕ್ಯಂ ಸದಸ್ಯೈಶ್ಚೋದಿತೋ ಭೃಶಮ್ ।
ಕಾಮಮೇವಂ ಭವತ್ವೇತದ್ ಯಥಾಽಸ್ತೀಕಸ್ಯ ಭಾಷಿತಮ್ ॥೭॥

ಸಮಾಪ್ಯತಾಮಿದಂ ಕರ್ಮ ಪನ್ನಗಾಃ ಸಂತ್ವನಾಮಯಾಃ ।
ಪ್ರೀಯತಾಮಯಮಸ್ತೀಕಃ ಸತ್ಯಂ ಮಮ ವಚೋಽಸ್ತು ತತ್ ॥೮॥

ಆಗ ರಾಜನು ಸದಸ್ಯರಿಂದ ಬಹಳ ಪ್ರೇರಿಸಲ್ಪಟ್ಟವನಾಗಿ ಆಸ್ತೀಕನು ಏನನ್ನು ಕೇಳುತ್ತಿದ್ದಾನೆಯೋ ಅದರಂತೆಯೇ ಆಗಲಿ. ಈ ಯಜ್ಞವು ಇಲ್ಲಿಗೇ ಸಮಾಪ್ತಿಗೊಳ್ಳಲಿ. ಉಳಿದ ಸರ್ಪಗಳಿಗೆ ಕ್ಷೇಮವಾಗಲಿ. ಈ ಆಸ್ತೀಕನಿಗೆ ಸಂತೋಷವಾಗಲಿ ಮತ್ತು ನನ್ನ ಮಾತು ಸತ್ಯವಾಗಲಿ ಎಂದು ಹೇಳಿದನು.

ತತೋ ಹಲಹಲಾಶಬ್ದಃ ಪ್ರೀತಿಜಃ ಸಮವರ್ಧತ ।
ಆಸ್ತೀಕಸ್ಯ ವರೇ ದತ್ತೇ ತಥೈವ ವಿರರಾಮ ಚ ॥೯॥

ರಾಜನು ಆಸ್ತೀಕನಿಗೆ ಹೀಗೆ ವರವನ್ನು ಕೊಡುತ್ತಿರಲು ಎಲ್ಲಾ ಕಡೆಯಲ್ಲಿಯೂ ಸಂತೋಷದಿಂದ ಉಂಟಾದ ಸುಘೋಷವು ಉಂಟಾಯಿತು.

ಸ ಯಜ್ಞಃ ಪಾಂಡವೇಯಸ್ಯ ರಾಜ್ಞಃ ಪಾರೀಕ್ಷಿತಸ್ಯ ಹ ।
ಪ್ರೀತಿಮಾನಭವದ್ರಾಜಾ ಭಾರತೋ ಜನಮೇಜಯಃ ॥೧೦॥

ಪಾಂಡವವಂಶದಲ್ಲಿ ಹುಟ್ಟಿದ, ಪರೀಕ್ಷಿತನ ಮಗನಾದ, ಜನಮೇಜಯನ ಯಜ್ಞವು ಅಲ್ಲಿಗೇ ಸಮಾಪ್ತವಾಯಿತು. ಭರತವಂಶದಲ್ಲಿ ಜನಿಸಿದ ಜನಮೇಜಯನು ಸಂತೋಷಗೊಂಡನು.

ಋತ್ವಿಗ್ಭ್ಯಃ ಸ ಸದಸ್ಯೇಭ್ಯೋ ಯೇ ತತ್ರಾಸನ್ ಸಮಾಗತಾಃ ।
ತೇಭ್ಯಶ್ಚ ಪ್ರದದೌ ವಿತ್ತಂ ಶತಶೋಽಥ ಸಹಸ್ರಶಃ ॥೧೧॥

ಲೋಹಿತಾಕ್ಷಾಯ ಸೂತಾಯ ತಥಾ ಸ್ಥಪತಯೇ ವಿಭುಃ ।
ಯೇನೋಕ್ತಂ ತತ್ರ ಸತ್ರಾಗ್ರೇ ಯಜ್ಞಸ್ಯ ವಿನಿವರ್ತನಮ್ ॥೧೨॥

ಅವನು ಋತ್ವಿಜರಿಗೂ, ಸದಸ್ಯರಿಗೂ, ಅಲ್ಲಿ ಬಂದ ಉಳಿದ ಬ್ರಾಹ್ಮಣರಿಗೂ ಮತ್ತು ಎಲ್ಲರಿಗೂ ನೂರರಗಟ್ಟಲೆಯಲ್ಲಿ, ಸಾವಿರದಗಟ್ಟಲೆಯಲ್ಲಿ ಧನವನ್ನು ದಾನಮಾಡಿದನು. ಯಜ್ಞವು ಮಧ್ಯದಲ್ಲಿಯೇ ನಿಲ್ಲುವುದು ಎಂದು ಹೇಳಿದ ಸೂತನಾದ ಲೋಹಿತಾಕ್ಷನಿಗೂ ಮತ್ತು ಸ್ಥಪತಿಗೂ ಬಹುವಿಧವಾದ ದಾನವನ್ನು ಕೊಟ್ಟನು.

ತತಶ್ಚಕಾರಾವಭೃಥಂ ವಿಧಿದೃಷ್ಟೇನ ಕರ್ಮಣಾ ।
ಆಸ್ತೀಕಂ ಪ್ರೇಷಯಾಮಾಸ ಗೃಹಾನೇವ ಸುಸತ್ಕೃತಮ್ ॥೧೩॥

ರಾಜಾ ಪ್ರೀತಮನಾಃ ಪ್ರೀತಂ ಕೃತಕೃತ್ಯಂ ಮನೀಷಿಣಮ್ ।
ಪುನರಾಗಮನಂ ಕಾರ್ಯಮಿತಿ ಚೈನಂ ವಚೋಽಬ್ರವೀತ್ ॥೧೪॥

ಭವಿಷ್ಯಸಿ ಸದಸ್ಯೋ ಮೇ ವಾಜಿಮೇಧೇ ಮಹಾಕ್ರತೌ ।
ತಥೇತ್ಯುಕ್ತ್ವಾ ಪ್ರದುದ್ರಾವ ಸ ಚಾಸ್ತೀಕೋ ಮುದಾ ಯುತಃ ॥೧೫॥

ಅನಂತರ ರಾಜನು ವಿಧಿಪೂರ್ವಕವಾಗಿ ಅವಭೃತಸ್ನಾನವನ್ನು ಮಾಡಿದನು. ಆಸ್ತೀಕನನ್ನು ಚೆನ್ನಾಗಿ ಸತ್ಕರಿಸಿ ಅವನ ಮನೆಗೆ ಕಳುಹಿಸಿಕೊಟ್ಟನು. ರಾಜನು ಬಹಳ ಸಂತೋಷದಿಂದ ಕೂಡಿದವನಾಗಿ, ಸಂತೋಷದಿಂದ ಕೂಡಿದ್ದ, ಕೃತಕೃತ್ಯನಾದ, ಮೇಧಾವಿಯಾದ ಆಸ್ತೀಕನನ್ನು ಕುರಿತು ಪುನಃ ನನ್ನ ರಾಜ್ಯಕ್ಕೆ ಬರಬೇಕು, ನಾನು ಮುಂದೆ ಮಾಡುವ ಅಶ್ವಮೇಧಮಹಾಯಾಗದಲ್ಲಿ ನೀನು ಸದಸ್ಯನಾಗಿರಬೇಕು ಎಂದು ಹೇಳಿದನು. ಹಾಗೆಯೇ ಆಗಲಿ ಎಂದು ಹೇಳಿ ಆಸ್ತೀಕನು ಸಂತೋಷದಿಂದ ಕೂಡಿದವನಾಗಿ ಅಲ್ಲಿಂದ ಓಡಿದನು.

ಕೃತ್ವಾ ಸ್ವಕಾರ್ಯಮತುಳಂ ತೋಷಯಿತ್ವಾ ಚ ಪಾರ್ಥಿವಮ್ ।
ಸ ಗತ್ವಾ ಪರಮಪ್ರೀತೋ ಮಾತರಂ ಮಾತುಲಂ ಚ ತಮ್ ।
ಅಭಿಗಮ್ಯೋಪಸಂಗೃಹ್ಯ ಯಥಾವೃತ್ತಂ ನ್ಯವೇದಯತ್ ॥೧೬॥

ಅಸದೃಶವಾದ ರೀತಿಯಲ್ಲಿ ತನ್ನ ಕಾರ್ಯವನ್ನು ಸಾಧಿಸಿ, ರಾಜನನ್ನು ಸಂತೋಷಪಡಿಸಿ, ಪರಮಸಂತೋಷವುಳ್ಳವನಾಗಿ ಅವನು ಹೋಗಿ ತಾಯಿಗೂ ಮತ್ತು ಸೋದರಮಾವನಿಗೂ ನಮಸ್ಕರಿಸಿ ನಡೆದ ಘಟನೆಯನ್ನೆಲ್ಲಾ ಯಥಾವತ್ತಾಗಿ ನಿರೂಪಿಸಿದನು.

ಏತಚ್ಛ್ರುತ್ವಾ ಪ್ರೀಯಮಾಣಾಃ ಸಮೇತಾ
ಯೇ ತತ್ರಾಸನ್ ಪನ್ನಗಾ ವೀತಮೋಹಾಃ ।
ತ ಅಸ್ತೀಕೇ ಪ್ರೀತಿಮಂತೋ ಬಭೂವು-
ರಾಹುಶ್ಚೈನಂ ವರಮಿಷ್ಟಂ ವೃಣೀಷ್ವ ॥೧೭॥

ಇದನ್ನು ಕೇಳಿದ ಅಲ್ಲಿ ಇದ್ದ ನಾಗಗಳೆಲ್ಲವೂ ಭಯವನ್ನು ಕಳೆದುಕೊಂಡು ಬಹಳ ಸಂತೋಷದಿಂದ ಕೂಡಿ, ಆಸ್ತೀಕನ ಮೇಲೆ ಬಹಳ ಸಂತೋಷವನ್ನು ಹೊಂದಿ ನಿನಗೆ ಬೇಕಾದ ವರವನ್ನು ಕೇಳು ಎಂದು ಹೇಳಿದವು.

ಭೂಯೋಭೂಯಃ ಸಂಸ್ತವೈರಭ್ಯುವಂಸ್ತಂ
ಕಿಂ ತೇ ಪ್ರಿಯಂ ಕರವಾಮಾದ್ಯ ವಿದ್ವನ್ ।
ಪ್ರೀತಾ ವಯಂ ಮೋಕ್ಷಿತಾಶ್ಚೈವ ಸರ್ವೇ
ಕಾಮಂ ಕಿಂ ತೇ ಕರವಾಮಾದ್ಯ ವತ್ಸ ॥೧೮॥

ಪುನಃ ಪುನಃ ಅನೇಕ ರೀತಿಯಲ್ಲಿ ಅವನನ್ನು ಸ್ತೋತ್ರಮಾಡಿ, ವಿದ್ವಾಂಸನೇ, ನಿನಗೆ ನಾವು ಯಾವ ಪ್ರಿಯವನ್ನು ಮಾಡೋಣ? ನಾವೆಲ್ಲರೂ ಸಂತೋಷಗೊಂಡಿದ್ದೇವೆ. ನಾವೆಲ್ಲರೂ ಸಂಕಟದಿಂದ ಪಾರಾಗಿದ್ದೇವೆ. ವತ್ಸ, ನಿನ್ನ ಮನಸ್ಸಿರುವ ಯಾವ ಆಸೆಯನ್ನು ನಾವು ಪೂರ್ಯಿಸೋಣ ಎಂದು ಕೇಳಿದವು.

ಆಸ್ತೀಕಃ

ಸಾಯಂ ಪ್ರಾತಃ ಪನ್ನಗೇಂದ್ರಾ ನರೇಂದ್ರಾ
ಲೋಕೇ ವಿಪ್ರಾ ಮಾನವಾಶ್ಚೇತರೇಪಿ ।
ಧರ್ಮಾಖ್ಯಾನಂ ಯೇ ವದೇಯುರ್ಮಮೇದಂ
ತೇಷಾಂ ಯಷ್ಮನ್ನೈವ ಕಿಂಚಿದ್ ಭಯಂ ಸ್ಯಾತ್ ॥೧೯॥

ಎಲೈ ಪನ್ನಗಶ್ರೇಷ್ಠರೇ, ರಾಜರಾಗಲಿ, ಬ್ರಾಹ್ಮಣರಾಗಲಿ ಅಥವಾ ಉಳಿದ ಮಾನವರಾಗಲಿ, ಸಾಯಂಕಾಲದಲ್ಲಿ ಮತ್ತು ಪ್ರಾತಃಕಾಲದಲ್ಲಿ ಯಾರು ನನ್ನ ಈ ಧರ್ಮಾಖ್ಯಾನವನ್ನು ಹೇಳುತ್ತಾರೆಯೋ ಅವರಿಗೆ ನಿಮ್ಮಿಂದ ಯಾವ ಭಯವೂ ಇರಬಾರದು.

ಸೂತಃ

ತೈಶ್ಚಾಪ್ಯುಕ್ತೋ ಭಾಗಿನೇಯಃ ಪ್ರಸನ್ನೈ-
ರೇತತ್ ಸತ್ಯಂ ವಚನಂ ತೇ ಚರಾಮ ।
ಪ್ರೀತ್ಯಾ ಯುಕ್ತಾ ಈಪ್ಸಿತಂ ಸರ್ವತಸ್ತೇ
ಕರ್ತಾರಃ ಸ್ಮ ಪ್ರವಣಾ ಭಾಗಿನೇಯ ॥೨೦॥

ಪ್ರಸನ್ನರಾದ ಆ ಸರ್ಪಗಳಿಂದಲೂ, ವಾಸುಕಿಯ ಭಾಗಿನೇಯನಾದ ಆಸ್ತೀಕನನ್ನು ಕುರಿತು ಸತ್ಯವಾಗಿ ನಿನ್ನ ವಚನವನ್ನು ಪಾಲಿಸುತ್ತೇವೆ. ಭಾಗಿನೇಯನೇ, ನಾವು ಅತ್ಯಂತ ಪ್ರೀತರಾಗಿ ನಿನ್ನ ಬಗ್ಗೆ ವಿನಯವನ್ನು ತೋರಿಸಿ ನಿನಗೆ ಇಷ್ಟವಾದ ಕಾರ್ಯವನ್ನು ಎಲ್ಲರೂ ಮಾಡುತ್ತೇವೆ ಎಂದು ಹೇಳಿದವು.

ಆಸ್ತೀಕಃ

ಜರತ್ಕಾರೋರ್ಜರತ್ಕಾರ್ವಾಂ ಸಮುತ್ಪನ್ನೋ ಮಹಾಯಶಾಃ ।
ಆಸ್ತೀಕಃ ಸತ್ಯಸಂಧೋ ಮಾಂ ಪನ್ನಗೇಭ್ಯೋಽಭಿರಕ್ಷತು ॥೨೧॥

ಜರತ್ಕಾರುವಿನಿಂದ ಜರತ್ಕಾರುವಿನಲ್ಲಿ ಜನಿಸಿದ ಮಹಾಕೀರ್ತಿ- ಶಾಲಿಯಾದ, ಸತ್ಯಸಂಧನಾದ ಆಸ್ತೀಕನು ನನ್ನನ್ನು ಸರ್ಪಗಳಿಂದ ರಕ್ಷಿಸಲಿ.

ಆಸ್ತೀಕಂ ಚಾರ್ತಿಮಂತಂ ಚ ಸುನೀಥಂ ಚಾಪಿ ಯಃ ಸ್ಮರೇತ್ ।
ದಿವಾ ವಾ ಯದಿ ವಾ ರಾತ್ರೌ ನಾಸ್ತಿ ಸರ್ಪಭಯಂ ಕ್ವಚಿತ್ ॥೨೨॥

ಆಸ್ತೀಕನನ್ನೂ, ದುಃಖದಲ್ಲಿದ್ದ ತಕ್ಷಕನನ್ನೂ ಮತ್ತು ಸುನೀಥನನ್ನೂ ಯಾರು ಹಗಲಿನಲ್ಲಾಗಲಿ, ಅಥವಾ ರಾತ್ರಿಯಲ್ಲಾಗಲಿ ಸ್ಮರಿಸುವರೋ ಅವರಿಗೆ ಸರ್ಪಭಯವಿಲ್ಲ.

ಅಪಸರ್ಪಸ್ವ ಭದ್ರಂ ತೇ ದೂರಂ ಗಚ್ಛ ಮಹಾಯಶಾಃ ।
ಆಸ್ತೀಕಃ ಸರ್ಪಸತ್ರೇವಃ ಪನ್ನಗಾನ್ ಯೋಽಭ್ಯರಕ್ಷತ ॥೨೩॥

ಎಲೈ ಸರ್ಪವೇ, ನೀನು ದೂರಸರಿದು ಹೋಗು. ನಿನಗೆ ಮಂಗಳವಾಗಲಿ. ಮಹಾಕೀರ್ತಿಶಾಲಿಯಾದ ಆಸ್ತೀಕನು ಸರ್ಪಸತ್ರದಲ್ಲಿ ನಿಮ್ಮನ್ನು ರಕ್ಷಿಸಿದ್ದಾನೆ.

ಜನಮೇಜಯಸ್ಯ ಯಜ್ಞಾಂತ ಆಸ್ತೀಕವಚನಂ ಶೃಣು ।
ಆಸ್ತೀಕವಚನಂ ಶ್ರುತ್ವಾ ಯಃ ಸರ್ಪೋ ನ ನಿವರ್ತತೇ ॥೨೪॥

ಶತಧಾ ಭಿದ್ಯತೇ ಮೂರ್ಧಾ ಗಿರಿರ್ವಜ್ರಹತೋ ಯಥಾ ।
ಇತಿಸ್ಮರಂ ಮಹಾನಾಗಾ ನೈನಂ ಹಿಂಸಿತುಮರ್ಹಥ ।
ಆಸ್ತೀಕಂ ಯಃ ಸ್ಮರೇನ್ನಿತ್ಯಂ ತಮಪ್ಯಾಕಾಶಗೋಚರೇ ॥೨೫॥

ಜನಮೇಜಯನ ಸರ್ಪಯಾಗದ ಕೊನೆಯಲ್ಲಿ ಆಸ್ತೀಕನು ಹೇಳಿದ ಮಾತನ್ನು ಕೇಳು. ಆಸ್ತೀಕನ ಮಾತನ್ನು ಕೇಳಿ ಯಾವ ಸರ್ಪವು ಹಿಂದೆ ಸರಿಯುವುದಿಲ್ಲವೋ ಅದರ ತಲೆಯು ವಜ್ರದಿಂದ ಹೊಡೆಯಲ್ಪಟ್ಟ ಪರ್ವತದಂತೆ ನೂರುಭಾಗವಾಗಿ ಸೀಳುತ್ತದೆ. ಎಲೈ ಮಹಾನಾಗಗಳೇ, ಹೀಗೆ ಯಾರು ಸ್ಮರಣೆಮಾಡುತ್ತಾರೆಯೋ ಮತ್ತು ಆಸ್ತೀಕನನ್ನು ಯಾರು ನಿತ್ಯವೂ ಸ್ಮರಣೆಮಾಡುತ್ತಾರೆಯೋ, ಆ ಮನುಷ್ಯನನ್ನು ಭೂಮಿಯಲ್ಲಾಗಲಿ, ಆಕಾಶದಲ್ಲಾಗಲಿ, ನೀವು ಹಿಂಸಿಸಬಾರದು.

ಆಸ್ತೀಕೇನೋರಗೈಃ ಸಾರ್ಧಂ ಯಃ ಪುರಾ ಸಮಯಃ ಕೃತಃ ।
ಯದಿ ಸತ್ಯಂ ಮಹಾನಾಗಾ ನೈನಂ ಹಿಂಸಿತುಮರ್ಹಥ ॥೨೬॥

ಎಲೈ ಮಹಾಸರ್ಪಗಳೇ, ಆಸ್ತೀಕನು ಸರ್ಪಗಳ ಜೊತೆಯಲ್ಲಿ ಹಿಂದೆ ಮಾಡಿಕೊಂಡ ನಿಬಂಧನೆಯು ಸತ್ಯವಾದರೆ, ನೀವು ಇಂತಹವರನ್ನು ಹಿಂಸಿಸಬಾರದು.

ಸೂತಃ

ಮೋಕ್ಷಯಿತ್ವಾ ಸ ಭಗವಾನ್ ಸರ್ಪಸತ್ರಾದ್ ಭುಜಂಗಮಾನ್ ।
ಜಗಾಮ ಕಾಲೇ ಧರ್ಮಾತ್ಮಾ ದಿಷ್ಟಾಂತಂ ಪುತ್ರಪೌತ್ರವಾನ್ ॥೨೭॥

ಹೀಗೆ ಪೂಜ್ಯನೂ, ಧರ್ಮಾತ್ಮನೂ ಆದ ಆಸ್ತೀಕನು ಸರ್ಪಗಳನ್ನು ಸರ್ಪಸತ್ರದಿಂದ ಮೋಚನೆಗೊಳಿಸಿ, ಪುತ್ರಪೌತ್ರರನ್ನು ಹೊಂದಿ ಕಾಲಕ್ರಮದಲ್ಲಿ ನಾಶವನ್ನು ಹೊಂದಿದನು.

ಆಸ್ತೀಕಂ ಮುಯಾSSಖ್ಯಾನಂ ಯಥಾವತ್ ತವ ಕೀರ್ತಿತಮ್ ।
ಯತ್ ಕೀರ್ತಯಿತ್ವಾ ಸರ್ಪೇಭ್ಯೋ ನ ಭಯಂ ವಿದ್ಯತೇ ಕ್ವಚಿತ್ ॥

ನಾನು ಆಸ್ತೀಕನ ಶ್ರೇಷ್ಠವಾದ ಈ ಆಖ್ಯಾನವನ್ನು ಯಥಾರ್ಥವಾಗಿ ನಿನಗೆ ನಿರೂಪಿಸಿದ್ದೇನೆ. ಇದನ್ನು ಕೀರ್ತಿಸುವವರಿಗೆ ಎಂದೂ ಸರ್ಪಭಯವು ಉಂಟಾಗುವುದಿಲ್ಲ.

ಶ್ರುತ್ವಾ ಧರ್ಮಿಷ್ಠಮಾಖ್ಯಾನಮಾಸ್ತೀಕಂ ಪುಣ್ಯವರ್ಧನಮ್ ।
ಆಸ್ತೀಕಸ್ಯ ಕವೇರ್ವಿಪ್ರ ಶ್ರೀಮಚ್ಚರಿತಮಾದಿತಃ ॥೨೯॥

ಸರ್ವಪಾಪವಿನಿರ್ಮುಕ್ತೋ ದೀರ್ಘಮಾಯುಷ್ಯಮಾಪ್ನುಯಾತ್ ।
ಗಾರ್ಹಸ್ಥ್ಯಂ ಧರ್ಮಮಖಿಲಂ ಪ್ರಯಾಯಾತ್ ಪುತ್ರಪೌತ್ರವಾನ್॥

ಈ ಆಸ್ತೀಕನ ಧರ್ಮಿಷ್ಠವಾದ ಆಖ್ಯಾನವನ್ನು ಕೇಳಿದರೆ, ಪುಣ್ಯವು ಅಭಿವೃದ್ಧಿಯಾಗುತ್ತದೆ. ಎಲೈ ಬ್ರಾಹ್ಮಣನೇ, ಜ್ಞಾನಿಯಾದ ಆಸ್ತೀಕನ ಶ್ರೀಮದ್‌ಚರಿತ್ರೆಯನ್ನು ಮೊದಲು ಕೇಳಿದರೆ, ಎಲ್ಲಾ ಪಾಪಗಳಿಂದಲೂ ನಿರ್ಮುಕ್ತನಾಗಿ ದೀರ್ಘಾಯುಷ್ಯವನ್ನು ಹೊಂದುತ್ತಾನೆ. ಎಲ್ಲಾ ಗೃಹಸ್ಥಧರ್ಮಗಳನ್ನೂ ಪಾಲಿಸುವವನಾಗಿ, ಪುತ್ರಪೌತ್ರರ ಸಂಪತ್ತನ್ನೂ ಪಡೆಯುವನು.

॥ ಇತಿ ಶ್ರೀಮನ್ಮಹಾಭಾರತೇ ಶತಸಹಸ್ರಿಕಾಯಾಂಸಂಹಿತಾಯಾಮಾದಿಪರ್ವಣಿ ದ್ವಿಪಂಚಾಶೋSಧ್ಯಾಯಃ ॥
॥ ಇತಿ ಆಸ್ತೀಕಪರ್ವಣಿ ಚತ್ವಾರಿಂಶೋSಧ್ಯಾಯಃ ॥

॥ ಆಸ್ತೀಕಪರ್ವ ಸಮಾಪ್ತಮ್ ॥

ಇಲ್ಲಿಗೆ ಮಹಾಭಾರತದ ಆದಿಪರ್ವದಲ್ಲಿ ಐವತ್ತೆರಡನೆಯ ಅಧ್ಯಾಯ ಮುಗಿಯಿತು.

ಇಲ್ಲಿಗೆ ಆಸ್ತೀಕಪರ್ವವು ಮುಗಿಯಿತು.

೬. ಸಂಭವಪರ್ವ

(ಅಂಶಾವತರಣ ಪರ್ವ)

ಐವತ್ತೂರನೆಯ ಅಧ್ಯಾಯ

(ಭಾರತ ಕಥೆಯನ್ನು ಹೇಳಲು ಸೂತರ ಪ್ರತಿಜ್ಞೆ, ವ್ಯಾಸರಿಂದ ವೈಶಂಪಾಯನರಿಗೆ ಭಾರತಕಥೆಯನ್ನು ಹೇಳಲು ಪ್ರೇರಣೆ)

ಶೌನಕಃ

ಭೃಗುವಂಶಾತ್ ಪ್ರಭೃತ್ಯೇತತ್ ತ್ವಯಾ ಮೇ ಕಥಿತಂ ಮಹತ್ ।
ಆಖ್ಯಾನಮಖಿಲಂ ತಾತ ಭೃಶಂ ಪ್ರೀತೋಽಸ್ಮಿ ತೇಽನಘ ॥೧॥

ಪೂಜ್ಯರೇ, ಭೃಗುವಂಶದಿಂದ ಆರಂಭಿಸಿ ಈ ದೊಡ್ಡ ಆಖ್ಯಾನವನ್ನು ನೀವು ನನಗೆ ಹೇಳಿದ್ದೀರಿ. ಎಲೈ ದೋಷರಹಿತರೇ, ಇದರಿಂದ ನಾನು ತುಂಬಾ ಸಂತೋಷಗೊಂಡಿದ್ದೇನೆ.

ಪ್ರವಕ್ಷ್ಯೇ ಚೈವ ಯತ್ ತ್ವಾಽಹಂ ಯಥಾವತ್ ಸೂತನಂದನ ।
ಯಾಃ ಕಥಾ ವ್ಯಾಸಸಂಪ್ರೋಕ್ತಾಃ ತಾಶ್ಚ ಭೂಯಃ ಪ್ರಚಕ್ಷ್ವ ಮೇ ॥೨॥

ಸೂತನಂದನರೇ, ನಾನು ನಿಮ್ಮನ್ನು ಪುನಃ ಕೇಳುತ್ತಿದ್ದೇನೆ. ವ್ಯಾಸರು ಹೇಳಿದ ಕಥೆಯನ್ನು ಯಥಾವತ್ತಾಗಿ ಇನ್ನೊಮ್ಮೆ ಹೇಳಿರಿ.

ತಸ್ಮಿನ್ ಪರಮದುಷ್ಪ್ರಾಪೇ ಸರ್ಪಸತ್ರೇ ಮಹಾತ್ಮನಃ ।
ಕರ್ಮಾಂತರೇಷು ವಿಧಿವತ್ ಸದಸ್ಯಾನಾಂ ತಥಾ ಕವೇ ॥೩॥

ಯಾ ಬಭೂವುಃ ಕಥಾಶ್ಚಿತ್ರಾ ಯೇಷ್ವರ್ಥೇಷು ಯಥಾತಥಮ್ ।
ತತ್ತ ಇಚ್ಛಾಮ್ಯಹಂ ಶ್ರೋತುಂ ಸೂತ ತ್ವಂ ವೈ ವಿಚಕ್ಷ್ವ ನಃ ॥೪॥

ಪರಮದುರ್ಲಭವಾದ ಜನಮೇಜಯನ ಆ ಸರ್ಪಯಾಗದಲ್ಲಿ ಬೇರೆಬೇರೆ ಕ್ರಿಯೆಗಳ ಮಧ್ಯದಲ್ಲಿ ಅಲ್ಲಿದ್ದ ಸದಸ್ಯರುಗಳಲ್ಲಿ ಯಾವ ಯಾವ ವಿಷಯದಲ್ಲಿ ಯಾವ ಯಾವ ಕಥೆಗಳು ಹೇಳಲ್ಪಟ್ಟಿದ್ದವೋ ಅವೆಲ್ಲವನ್ನೂ ನಿಮ್ಮಿಂದ ಕೇಳಲು ಬಯಸುತ್ತೇನೆ. ಜ್ಞಾನಿಗಳಾದ ಸೂತರೇ, ನಮಗೆ ಅವೆಲ್ಲವನ್ನೂ ತಿಳಿಸಿ

ಸೂತಃ

ಕರ್ಮಾಂತರೇಷ್ವಕಥಯನ್ ದ್ವಿಜಾ ವೇದಾಶ್ರಯಾಃ ಕಥಾಃ ।
ವ್ಯಾಸಸ್ತು ಭಗವಾನ್ ನಿತ್ಯಮಬ್ರವೀದ್ ಭಾರತಂ ಮಹತ್ ॥೫॥

ಕರ್ಮಗಳ ಮಧ್ಯದಲ್ಲಿ ಬ್ರಾಹ್ಮಣರು ವೇದಕ್ಕೆ ಸಂಬಂಧಿಸಿದ ಕಥೆಗಳನ್ನು ಹೇಳುತ್ತಿದ್ದರು. ಭಗವಾನ್ ವ್ಯಾಸರು ನಿತ್ಯವೂ ಮಹಾಭಾರತಕಥೆಯನ್ನು ಹೇಳುತ್ತಿದ್ದರು.

ಶೌನಕಃ

ಮಹಾಭಾರತಮತ್ಯಂತಂ ಪಾಂಡವಾನಾಂ ಯಶಸ್ಕರಮ್ ।
ಜನಮೇಜಯೇನ ಪೃಷ್ಟೋ ಯತ್ ಕೃಷ್ಣದ್ವೈಪಾಯನಸ್ತದಾ ॥೬॥

ಶ್ರಾವಯಾಮಾಸ ವಿಧಿವತ್ ತದಾ ಕರ್ಮಾಂತರೇಷು ಸಃ ।
ತಾಮಹಂ ವಿಧಿವತ್ ಪುಣ್ಯಾಂ ಶ್ರೋತುಮಿಚ್ಛಾಮಿ ವೈ ಕಥಾಮ್ ॥೭॥

ಜನಮೇಜಯನಿಂದ ಪ್ರಶ್ನಿಸಲ್ಪಟ್ಟವರಾಗಿ ವ್ಯಾಸರು ಕರ್ಮಗಳ ಮಧ್ಯದಲ್ಲಿ ಪಾಂಡವರ ಯಶೋಗಾಥೆಯಾದ ಯಾವ ಮಹಾಭಾರತವನ್ನು ಹೇಳಿದರೋ ಆ ಕಥೆಯನ್ನು ನಾನು ವಿಧಿವತ್ತಾಗಿ ಕೇಳಬಯಸುತ್ತೇನೆ.

ಮನಸಾಗರಸಂಭೂತಾಂ ಮಹರ್ಷೇಃ ಪುಣ್ಯಕರ್ಮಣಃ ।
ಕಥಯಸ್ವ ಸತಾಂ ಶ್ರೇಷ್ಠ ಪರಂ ಕೌತೂಹಲಂ ಹಿ ನಃ ॥೮॥

ಪುಣ್ಯಕರ್ಮರಾದ ಮಹರ್ಷಿಗಳಾದ ವ್ಯಾಸರ ಮನಸ್ಸೆಂಬ ಸಮುದ್ರದಲ್ಲಿ ಉದಯಿಸಿದ ಆ ಕಥೆಯನ್ನು ಹೇಳಿ. ಸಜ್ಜನರಲ್ಲಿ ಶ್ರೇಷ್ಠರಾದ ಎಲೈ ಸೂತರೇ ನಮಗೆ ಅದನ್ನು ಕೇಳಲು ತುಂಬಾ ಕುತೂಹಲವಿದೆ.

ಸೂತಃ

ಹಂತ ತೇ ಕಥಯಿಷ್ಯಾಮಿ ಮಹದಾಖ್ಯಾನಮುತ್ತಮಮ್ ।
ಕೃಷ್ಣದ್ವೈಪಾಯನಮತಂ ಮಹಾಭಾರತಮದ್ಭುತಮ್ ॥೯॥

ಸಂತೋಷ, ವೇದವ್ಯಾಸರಿಗೆ ಅಭಿಮತವಾದ ಅದ್ಭುತವಾದ, ಅತ್ಯಂತ ಶ್ರೇಷ್ಠವಾದ ಮಹಾಭಾರತಕಥೆಯನ್ನು ನಿನಗೆ ಹೇಳುವೆನು.

ತಚ್ಛ್ರುಣುಷ್ವೋತ್ತಮಮತೇ ಕಥ್ಯಮಾನಂ ಮಯಾ ದ್ವಿಜ ।
ಶಂಸಿತುಂ ತನ್ಮನೋಹರ್ಷೋ ಮಮಾಪೀಹ ಪ್ರವರ್ಧತೇ ॥೧೦॥

ಶ್ರೇಷ್ಠವಾದ ಬುದ್ಧಿಯುಳ್ಳ ಎಲೈ ಬ್ರಾಹ್ಮಣರೇ, ನನ್ನಿಂದ ಹೇಳಲ್ಪಡುವ ಆ ಕಥೆಯನ್ನು ನೀವು ಕೇಳಿ. ಆ ಕಥೆಯನ್ನು ಹೇಳಲು ನನ್ನ ಮನಸ್ಸಿಗೂ ಬಹಳ ಹರ್ಷವುಂಟಾಗುತ್ತಿದೆ.

ಶ್ರುತ್ವಾ ತು ಸರ್ಪಸತ್ರಾಯ ದೀಕ್ಷಿತಂ ಜನಮೇಜಯಮ್ ।
ಅಭ್ಯಾಗಚ್ಛದ್ ಋಷಿರ್ವಿದ್ವಾನ್ ಕೃಷ್ಣದ್ವೈಪಾಯನಸ್ತದಾ ॥೧೧॥

ಸರ್ಪಸತ್ರದ ಉದ್ದೇಶದಿಂದ ಜನಮೇಜಯನು ದೀಕ್ಷಿತನಾಗಿರುವ ವಿಷಯವನ್ನು ಕೇಳಿ ವಿದ್ವಾಂಸರಾದ ವೇದವ್ಯಾಸ ಋಷಿಗಳು ಆಗ ಅಲ್ಲಿಗೆ ಪ್ರಾಪ್ತರಾಗಿ ಬಂದರು.

ಜನಯಾಮಾಸ ಯಂ ಕಾಳೀ ಶಕ್ತೇಃ ಪುತ್ರಾತ್ ಪರಾಶರಾತ್ ।
ಕನ್ಯೈವ ಯಮುನಾದ್ವೀಪೇ ಪಾಂಡವಾನಾಂ ಪಿತಾಮಹಮ್ ॥೧೨॥

ಪಾಂಡವರ ಪಿತಾಮಹರಾದ ಯಾವ ವೇದವ್ಯಾಸರನ್ನು ಯಾವ ಕಾಳಿಯು ಕನ್ಯೆಯಾಗಿದ್ದಾಗಲೇ (ಸತ್ಯವತಿಯು) ಪರಾಶರರಿಂದ ಯಮುನೆಯ ದ್ವೀಪದಲ್ಲಿ ಪಡೆದಳೋ (ಅಂತಹ ವ್ಯಾಸರು ಬಂದರು)

ಜಾತಮಾತ್ರಶ್ಚ ಯಃ ಸದ್ಯೋ ವವೃಧೇ ವೇದವಿತ್ತಮಃ ।
ವೇದಾಂಶ್ಚಾಧ್ಯಜಗೇ ಸಾಂಗಾನಿತಿಹಾಸಾಂಶ್ಚ ಸರ್ವಶಃ ॥೧೩॥

ವೇದಗಳನ್ನು ತಿಳಿದವರಲ್ಲಿ ಶ್ರೇಷ್ಠರಾದ, ಯಾರು ಅವತಾರ ಮಾಡಿದ ಕೂಡಲೇ ಎಲ್ಲಾ ವೇದಗಳನ್ನೂ ವೇದಾಂಗಗಳನ್ನೂ ಮತ್ತು ಇತಿಹಾಸಗಳನ್ನೂ ಸಂಪೂರ್ಣವಾಗಿ ಅಧ್ಯಯನ ಮಾಡಿದರೋ (ಅಂತಹ ವ್ಯಾಸರು ಬಂದರು).

ಯಂ ನಾತಿ ತಪಸಾ ಕಶ್ಚಿನ್ ನ ವೇದಾಧ್ಯಯನೇನ ಚ ।
ನ ವ್ರತೈರ್ನೋಪವಾಸೇನ ನ ಪ್ರಶಾಂತ್ಯಾ ನ ಮನ್ಯುನಾ ॥೧೪॥

ಯಾರನ್ನು ತಪಸ್ಸಿನಲ್ಲಾಗಲೀ, ವೇದಾಧ್ಯಯನದಲ್ಲಾಗಲೀ, ವ್ರತೋಪವಾಸಗಳಲ್ಲಾಗಲೀ, ಶಾಂತಿಯಲ್ಲಾಗಲೀ, ಅಥವಾ ಕೆಟ್ಟವಿಷಯಗಳ ಮೇಲಿನ ಸಿಟ್ಟಿನಿಂದಾಗಲೀ ಯಾರೂ ಮೀರಲು ಸಾಧ್ಯವಿಲ್ಲವೋ (ಅಂತಹ ವೇದವ್ಯಾಸರು ಬಂದರು)

ವಿವ್ಯಾಸೈಕಂ ಚತುರ್ಧಾ ಯೋ ವೇದಂ ವೇದವಿದಾಂ ವರಃ ।
ಪರಾವರಜ್ಞೋ ಬ್ರಹ್ಮರ್ಷಿಃ ಕವಿಃ ಸತ್ಯವ್ರತಃ ಶುಚಿಃ ॥೧೫॥

ಬ್ರಹ್ಮರ್ಷಿಗಳಾದ ಜ್ಞಾನಿಗಳೂ, ಸತ್ಯವ್ರತರೂ, ಶುದ್ಧರೂ, ವೇದವನ್ನು ತಿಳಿದವರಲ್ಲಿ ಶ್ರೇಷ್ಠರೂ, ಆ ಪರಾಶರರ ಕುಮಾರರೂ ಆದ ಯಾರು ವೇದಗಳನ್ನು ಋಗ್ವೇದಾದಿರೂಪದಿಂದ ನಾಲ್ಕು ವಿಭಾಗಗಳನ್ನು ಮಾಡಿದರೋ (ಅಂತಹ ವೇದವ್ಯಾಸರು ಬಂದರು)

ಯಃ ಪಾಂಡುಂ ಧೃತರಾಷ್ಟ್ರಂ ಚ ವಿದುರಂ ಚಾಪ್ಯಜೀಜನತ್ ।
ಶಂತನೋಃ ಸಂತತಿಂ ಸನ್ನಮುದ್ಧರಿಷ್ಯನ್ ಮಹಾತಪಾಃ ॥೧೬॥

ಮಹಾತಪಸ್ವಿಗಳಾದ ಯಾರು ನಶಿಸಿಹೋಗುತ್ತಿದ್ದ ಶಂತನುವಿನ ಸಂತತಿಯನ್ನು ಉದ್ಧರಿಸುವವರಾಗಿ ಧೃತರಾಷ್ಟ್ರ, ಪಾಂಡು ಮತ್ತು ವಿದುರನನ್ನು ಪಡೆದರೋ (ಅಂತಹ ವೇದವ್ಯಾಸರು ಬಂದರು)

ಜನಮೇಜಯಸ್ಯ ರಾಜರ್ಷೇಃ ತಸ್ಮಿನ್ ಸತ್ರೇ ಮಹಾತ್ಮನಃ ।
ವಿವೇಶ ಶಿಷ್ಯೈಃ ಸಹಿತೋ ವೇದವೇದಾಂಗಪಾರಗೈಃ ॥೧೭॥

ಮಹಾತ್ಮನಾದ ರಾಜರ್ಷಿಯಾದ ಜನಮೇಜಯನ ಆ ಸರ್ಪಯಾಗದಲ್ಲಿ ವೇದವೇದಾಂಗಪಾರಂಗತರಾದ ಶಿಷ್ಯರಿಂದ ಕೂಡಿಕೊಂಡು ವ್ಯಾಸರು ಪ್ರವೇಶಿಸಿದರು.

ತತ್ರ ರಾಜಾನಮಾಸೀನಂ ದದರ್ಶ ಜನಮೇಜಯಮ್ ।
ವೃತಂ ಸದಸ್ಯೈರ್ಬಹುಭಿರ್ದೇವೈರಿವ ಶತಕ್ರತುಮ್ ॥೧೮॥

ಅನಂತರ ದೇವತೆಗಳಿಂದ ಸುತ್ತುವರಿಯಲ್ಪಟ್ಟ ಇಂದ್ರನಂತೆ ಅನೇಕ ಸದಸ್ಯರಿಂದ ಸುತ್ತುವರಿಯಲ್ಪಟ್ಟ ಜನಮೇಜಯನು ಆಸನದಲ್ಲಿ ಕುಳಿತಿರುವುದನ್ನು ಅವರು ನೋಡಿದರು.

ತಥಾ ಮೂರ್ಧಾವಸಿಕ್ತೈಶ್ಚ ನಾನಾಜನಪದೇಶ್ವರೈಃ ।
ಋತ್ವಿಗ್ಭಿರ್ದೇವಕಲ್ಪೈಶ್ಚ ಕುಶಲೈರ್ಯಜ್ಞಸಂಸ್ತರೇ ॥೧೯॥

ಹಾಗೆಯೇ ಮೂರ್ಧಾಭಿಷಿಕ್ತರಾದ ಅನೇಕ ರಾಜರುಗಳಿಂದಲೂ ದೇವತೆಗಳಂತಿದ್ದ ಅನೇಕ ಋತ್ವಿಜರಿಂದಲೂ, ಅನೇಕ ವಿಶ್ವಾಸಪಾತ್ರರಿಂದಲೂ ಸುತ್ತುವರಿಯಲ್ಪಟ್ಟ ಆ ರಾಜನು ಯಜ್ಞಭೂಮಿಯಲ್ಲಿ ಕುಳಿತಿರುವುದನ್ನು ನೋಡಿದರು.

ಜನಮೇಜಯಸ್ತು ರಾಜರ್ಷಿರ್ದೃಷ್ಟ್ವಾ ತಮೃಷಿಮಾಗತಮ್ ।
ಸಗಣೋऽಭ್ಯುದ್ಯತಸ್ತೂರ್ಣಂ ತತೋ ಭಾರತಸತ್ತಮಃ ॥೨೦॥

ಆಗ ಭರತವಂಶಶ್ರೇಷ್ಠನಾದ ಜನಮೇಜಯನು ಆ ಋಷಿಗಳು ಬಂದುದನ್ನು ನೋಡಿ ತನ್ನ ಪರಿವಾರದ ಜೊತೆಯಲ್ಲಿ ತಕ್ಷಣ ಎದ್ದು ಅವರನ್ನು ಎದುರುಗೊಳ್ಳಲು ಹೋದನು.

ಕಾಂಚನಂ ವಿಷ್ಟರಂ ತಸ್ಮೈ ಸ ಏವ ನೃಪತಿಃ ಸ್ವಯಮ್ ।
ಆಸನಂ ಕಲ್ಪಯಾಮಾಸ ಯಥಾ ಶಕ್ರೋ ಬೃಹಸ್ಪತೇಃ ॥೨೧॥

ಇಂದ್ರನು ಬೃಹಸ್ಪತಿಗೆ ಮಾಡಿದಂತೆ ಅವರಿಗೆ ಸುವರ್ಣಮಯವಾದ ಆಸನವನ್ನು ರಾಜನು ತಾನೇ ಅಣಿಗೊಳಿಸಿದನು.

ತತ್ರೋಪವಿಷ್ಟಂ ವರದಂ ದೇವರ್ಷಿಗಣಪೂಜಿತಮ್ ।
ಪೂಜಯಾಮಾಸ ರಾಜೇಂದ್ರಃ ಶಾಸ್ತ್ರದೃಷ್ಟೇನ ಕರ್ಮಣಾ ॥೨೨॥

ಆ ಆಸನದಲ್ಲಿ ಕುಳಿತ ದೇವತೆಗಳ ಮತ್ತು ಋಷಿಗಳ ಗಣದಿಂದ ಪೂಜಿತರಾದ ವರಪ್ರದರಾದ ಆ ವ್ಯಾಸರನ್ನು ರಾಜೇಂದ್ರನಾದ ಜನಮೇಜಯನು ಶಾಸ್ತ್ರೋಕ್ತರೀತಿಯಿಂದ ಪೂಜಿಸಿದನು.

ಪಾದ್ಯಮಾಚಮನೀಯಂ ಚ ರಾಜ್ಯಂ ಗಾಂ ಚ ವಿಧಾನತಃ ।
ಪಿತಾಮಹಾಯ ಕೃಷ್ಣಾಯ ತದರ್ಹಾಯ ನ್ಯವೇದಯತ್ ॥೨೩॥

ಪಾದ್ಯ, ಆಚಮನ, ಒಳ್ಳೆಯ ಮಾತುಗಳು, ಗೋವು ಮತ್ತು ರಾಜ್ಯವನ್ನು ತನ್ನ ಪಿತಾಮಹರಾದ, ಪಾಂಡವರ ಪಿತಾಮಹರಾದ, ಸತ್ಪಾತ್ರರಲ್ಲಿ ಶ್ರೇಷ್ಠರಾದ, ವ್ಯಾಸರಿಗೆ ನಿವೇದಿಸಿದನು.

ಪ್ರತಿಗೃಹ್ಯ ಚ ತಾಂ ಪೂಜಾಂ ಪಾಂಡವಾಜ್ಜನಮೇಜಯಾತ್ ।
ಗಾಂ ಚೈವ ಸಮನುಜ್ಞಾಯ ಮುನಿಃ ಪ್ರೀತೋಽಭವತ್ ತದಾ ॥೨೪॥

ಆಗ ಪಾಂಡವರ ವಂಶಜನಾದ ಜನಮೇಜಯನಿಂದ ಮಾಡಲ್ಪಟ್ಟ ಆ ಪೂಜೆಯನ್ನೂ, ಗೋವನ್ನೂ ಸ್ವೀಕರಿಸಿ ವೇದವ್ಯಾಸರು ಸಂತುಷ್ಟರಾದರು.

ತಥಾ ಸಂಪೂಜಯಿತ್ವಾ ತು ಯತ್ನೇನ ಪ್ರಪಿತಾಮಹಮ್ ।
ಉಪೋಪವಿಶ್ಯ ಪ್ರೀತಾತ್ಮಾ ಪರ್ಯಪೃಚ್ಛದನಾಮಯಮ್ ॥೨೫॥

ಆ ರೀತಿಯಲ್ಲಿ ತಮ್ಮ ಪ್ರಪಿತಾಮಹರಾದ ವ್ಯಾಸರನ್ನು ಪ್ರಯತ್ನಪೂರ್ವಕವಾಗಿ ಚೆನ್ನಾಗಿ ಪೂಜಿಸಿ ಸಂತೋಷಗೊಂಡ ಜನಮೇಜಯನು ಅವರ ಹತ್ತಿರ ಕುಳಿತು ಕುಶಲಪ್ರಶ್ನೆಯನ್ನು ಮಾಡಿದನು.

ಭಗವಾನಪಿ ತಂ ದೃಷ್ಟ್ವಾ ಕುಶಲಂ ಪರಿವೇದ್ಯ ಚ ।
ಸದಸ್ಯೈಃ ಪೂಜಿತಃ ಸರ್ವೈಃ ಸದಸ್ಯಾನಭ್ಯಪೂಜಯತ್ ॥೨೬॥

ವ್ಯಾಸರೂ ಸಹ ಅವನನ್ನು ನೋಡಿ ಕ್ಷೇಮವನ್ನು ತಿಳಿಸಿ ಅನಂತರ ಎಲ್ಲಾ ಸದಸ್ಯರಿಂದಲೂ ಪೂಜಿಸಲ್ಪಟ್ಟವರಾಗಿ ತಾವೂ ಸದಸ್ಯರನ್ನು ಚೆನ್ನಾಗಿ ಪೂಜಿಸಿದರು.

ತತಸ್ತಂ ಸಹಿತಂ ಸರ್ವೈಃ ಕಥಾಂತೇ ಜನಮೇಜಯಃ ।
ಇಮಮರ್ಥಂ ಕುರುಶ್ರೇಷ್ಠಃ ಪರ್ಯಪೃಚ್ಛತ್ ಕೃತಾಂಜಲಿಃ ॥೨೭॥

ಅನಂತರ ಕುಶಲಪ್ರಶ್ನೆಗಳು ಮುಗಿದ ಮೇಲೆ ಕುರುಶ್ರೇಷ್ಠನಾದ ಜನಮೇಜಯನು ಕೈಗಳನ್ನು ಮುಗಿದು ಎಲ್ಲರ ಜೊತೆಯಲ್ಲಿ ಕುಳಿತಿದ್ದ ವ್ಯಾಸರನ್ನು ಕುರಿತು ಈ ಪ್ರಶ್ನೆಯನ್ನು ಕೇಳಿದನು.

ಕುರೂಣಾಂ ಪಾಂಡವಾನಾಂ ಚ ಭವಾನ್ ಪ್ರತ್ಯಕ್ಷದರ್ಶಿವಾನ್ ।
ತೇಷಾಂ ಚರಿತಮಿಚ್ಛಾಮಿ ಕಥ್ಯಮಾನಮಿಹ ತ್ವಯಾ ॥೨೮॥

ನೀವು ಪಾಂಡವರನ್ನೂ ಕೌರವರನ್ನೂ ಪ್ರತ್ಯಕ್ಷವಾಗಿ ನೋಡಿದವರು. ಆದ್ದರಿಂದ ಅವರ ಚರಿತ್ರೆಯನ್ನು ನಿಮ್ಮಿಂದ ಕೇಳಲು ಬಯಸುತ್ತೇನೆ.

ಕಥಂ ಚ ಭಗವನ್ ಭೇದಸ್ತೇಷಾಮಾಸೀನ್ಮಹಾತ್ಮನಾಮ್ ।
ತಚ್ಚ ಯುದ್ಧಂ ಕಥಮಭೂತ್ ಭೂತಾಂತಕರಣಂ ಮಹತ್ ॥೨೯॥

ಪೂಜ್ಯರೇ ಅಂತಹ ಮಹಾತ್ಮರಲ್ಲಿ ಹೇಗೆ ವೈಷಮ್ಯವುಂಟಾಯಿತು? ಎಲ್ಲಾ ಪ್ರಾಣಿಗಳ ನಾಶಕ್ಕೆ ಕಾರಣವಾದ ಆ ಮಹಾಯುದ್ಧವು ಹೇಗೆ ಜರುಗಿತು?

ಪಿತಾಮಹಾನಾಂ ಸರ್ವೇಷಾಂ ದೈವೇನಾವಿಷ್ಟಚೇತಸಾಮ್ ।
ಇಚ್ಛಾಮಿ ತತ್ತ್ವತಃ ಶ್ರೋತುಂ ಭಗವನ್ ಕುಶಲೋ ಹ್ಯಸಿ ॥೩೦॥

ಪೂಜ್ಯರೇ ದೈವಪ್ರೇರಿತರಾದ ಆ ನನ್ನ ಎಲ್ಲಾ ಪೂರ್ವಜರ ವೃತ್ತಾಂತವನ್ನು ನಿಮ್ಮಿಂದ ಕೇಳಲು ಬಯಸುತ್ತೇನೆ. ತಾವು ಈ ವಿಷಯದಲ್ಲಿ ನಿಪುಣರಾದವರು.

ಸೂತಃ

ತಸ್ಯ ತದ್ವಚನಂ ಶ್ರುತ್ವಾ ಕೃಷ್ಣದ್ವೈಪಾಯನಸ್ತದಾ ।
ಶಶಾಸ ಶಿಷ್ಯಮಾಸೀನಂ ವೈಶಂಪಾಯನಮಂತಿಕಾತ್ ॥೩೧॥

ರಾಜನ ಆ ಮಾತನ್ನು ಕೇಳಿ ವೇದವ್ಯಾಸರು ಆಗ ಸಮೀಪದಲ್ಲಿ ಕುಳಿತಿದ್ದ ವೈಶಂಪಾಯನರಿಗೆ ಆಜ್ಞೆಮಾಡಿದರು.

ಕುರೂಣಾಂ ಪಾಂಡವಾನಾಂ ಚ ಯಥಾ ಭೇದೋऽಭವತ್ ಪುರಾ ।
ತ್ವಮಸ್ಮೈ ಸರ್ವಮಾಚಕ್ಷ್ವ ಯನ್ಮತ್ತಃ ಶ್ರುತವಾನಸಿ ॥೩೨॥

ಕೌರವರಿಗೆ ಮತ್ತು ಪಾಂಡವರಿಗೆ ಹೇಗೆ ವಿರೋಧವುಂಟಾಯಿತೆಂದು ನನ್ನಿಂದ ನೀನು ಹಿಂದೆ ಹೇಗೆ ಕೇಳಿದ್ದೀಯೋ ಅವೆಲ್ಲವನ್ನೂ ನೀನು ಇವನಿಗೆ ನಿರೂಪಿಸು.

ಗುರೋರ್ವಚನಮಾಜ್ಞಾಯ ಸ ತು ವಿಪ್ರರ್ಷಭಸ್ತದಾ ।
ಆಚಚಕ್ಷೇ ತತಃ ಸರ್ವಮಿತಿಹಾಸಂ ಪುರಾತನಮ್ ॥೩೩॥

ರಾಜ್ಞೋ ತಸ್ಯೈ ಸದಸ್ಯೇಭ್ಯಃ ಕ್ಷತ್ರಿಯೇಭ್ಯಶ್ಚ ಸರ್ವಶಃ ।
ಭೇದಂ ರಾಜ್ಯವಿನಾಶಂ ಚ ಕುರುಪಾಂಡವಯೋಸ್ತದಾ ॥೩೪॥

ಆಗ ವಿಪ್ರಶ್ರೇಷ್ಠರಾದ ವೈಶಂಪಾಯನರು ಗುರುಗಳ ಮಾತನ್ನು ಕೇಳಿ ಆ ರಾಜನಿಗೂ, ಸದಸ್ಯರಿಗೂ, ಉಳಿದ ಕ್ಷತ್ರಿಯರಿಗೂ ಕುರುಪಾಂಡವರ ವಿರೋಧ, ರಾಜ್ಯವಿನಾಶ ಮೊದಲಾದ ಎಲ್ಲಾ ಇತಿಹಾಸವನ್ನೂ ಹೇಳಿದರು.

॥ ಇತಿ ಶ್ರೀಮನ್ಮಹಾಭಾರತೇ ಶತಸಹಸ್ರಿಕಾಯಾಂಸಂಹಿತಾಯಾಮಾದಿಪರ್ವಣಿ
ತ್ರಿಪಂಚಾಶೋऽಧ್ಯಾಯಃ ॥
॥ ಇತಿ ಸಂಭವಪರ್ವಣಿ ಪ್ರಥಮೋऽಧ್ಯಾಯಃ ॥

ಇಲ್ಲಿಗೆ ಮಹಾಭಾರತದ ಆದಿಪರ್ವದಲ್ಲಿ ಐವತ್ತ್ಮೂರನೆಯ ಅಧ್ಯಾಯ ಮುಗಿಯಿತು.

★★★★★

ಐವತ್ತನಾಲ್ಕನೆಯ ಅಧ್ಯಾಯ

(ವೈಶಂಪಾಯನರಿಂದ ಸಂಕ್ಷೇಪವಾಗಿ ಭಾರತಕಥಾ ನಿರೂಪಣೆ)

ವೈಶಂಪಾಯನಃ

ಶೃಣು ರಾಜನ್ ಯಥಾ ವೀರಾ ಭ್ರಾತರಃ ಪಂಚ ಪಾಂಡವಾಃ ।
ವಿರೋಧಮನ್ವಗಚ್ಛಂತ ಧಾರ್ತರಾಷ್ಟ್ರೈರ್ದುರಾತ್ಮಭಿಃ ॥೧॥

ಎಲೈ ರಾಜನೇ, ವೀರರೂ ಅಣ್ಣತಮ್ಮಂದಿರೂ ಆದ ಪಂಚಪಾಂಡವರು ದುಷ್ಟರಾದ ಧೃತರಾಷ್ಟ್ರನ ಮಕ್ಕಳ ಜೊತೆಯಲ್ಲಿ ಹೇಗೆ ವಿರೋಧವನ್ನು ಗಳಿಸಿದರು ಎಂದು (ಹೇಳುತ್ತೇನೆ) ಕೇಳು.

ಗುರವೇ ಪ್ರಾಂಜ್ ನಮಸ್ಕೃತ್ವಾ ಮನೋಬುದ್ಧಿಸಮಾಧಿಭಿಃ ।
ಸಂಪೂಜ್ಯ ಚ ದ್ವಿಜಾನ್ ಸರ್ವಾಂಸ್ತಥಾನ್ಯಾನ್ ವಿದುಷೋ ಜನಾನ್ ॥

ಮಹರ್ಷೇಃ ಸರ್ವಲೋಕೇಷು ವಿಶ್ರುತಸ್ಯಾಸ್ಯ ಧೀಮತಃ ।
ಪ್ರವಕ್ಷ್ಯಾಮಿ ಮತಂ ಕೃತ್ಸ್ನಂ ವ್ಯಾಸಸ್ಯಾಮಿತತೇಜಸಃ ॥೩॥

ಮೊದಲು ಸಮಾಧಾನವುಳ್ಳ ಮನಸ್ಸುಬುದ್ಧಿಗಳಿಂದ ಗುರುಗಳನ್ನು ನಮಸ್ಕರಿಸಿ, ಎಲ್ಲಾ ಬ್ರಾಹ್ಮಣರನ್ನೂ ಪೂಜಿಸಿ, ಉಳಿದ ಜ್ಞಾನಿಜನರನ್ನೂ ಪೂಜಿಸಿ

ಸರ್ವಲೋಕಗಳಲ್ಲಿಯೂ ವಿಖ್ಯಾತರಾದವರೂ, ಧೀಮಂತರೂ, ಅಮಿತಪರಾಕ್ರಮಿಗಳೂ ಆದ ಈ ವ್ಯಾಸರಿಗೆ ಒಪ್ಪುವಂತೆ ಎಲ್ಲವನ್ನೂ ಹೇಳುತ್ತೇನೆ.

ಶ್ರೋತುಂ ಪಾತ್ರಂ ತು ರಾಜಂಸ್ತ್ವಂ ಪ್ರಾಪ್ಯೇಮಾಂ ಭಾರತೀಂ ಶುಭಾಮ್ ।
ಗುರೋರ್ವಕ್ತುಂ ಪರಿಸ್ಪಂದೋ ಮುದಾ ಪ್ರೋತ್ಸಹಯತೀವ ಮಾಮ್ ॥೪॥

ಎಲೈ ರಾಜನೇ ಭಾರತಕಥೆಯನ್ನು ಕೇಳಲು ನೀನು ಅರ್ಹನಾಗಿದ್ದೀಯೆ. ಇವನಿಗೆ ಭಾರತಕಥೆಯನ್ನು ಹೇಳು ಎಂಬ ಗುರುಗಳ ಆಜ್ಞೆಯಿಂದ ಉಂಟಾದ ರೋಮಾಂಚನವು ಕಥೆಯನ್ನು ಹೇಳಲು ನನಗೆ ಉತ್ಸಾಹವನ್ನು ತುಂಬುತ್ತಿದೆ.

ಶೃಣು ರಾಜನ್ ಯಥಾ ಭೇದಃ ಕುರುಪಾಂಡವಯೋರಭೂತ್ ।
ರಾಜ್ಯಾರ್ಥೇ ದ್ಯೂತಸಂಭೂತೋ ವನವಾಸಸ್ತಥೈವ ಚ ॥೫॥

ಎಲೈ ರಾಜನೇ, ಕುರುಪಾಂಡವರಿಗೆ ರಾಜ್ಯನಿಮಿತ್ತವಾಗಿ ಹೇಗೆ ದ್ಯೂತದಿಂದುಂಟಾದ ವಿರೋಧವು ಜನಿಸಿತು ಮತ್ತು ಹಾಗೆಯೇ ವನವಾಸವೂ ಉಂಟಾಯಿತು ಎಂದು ಕೇಳು.

ಯಥಾ ಚ ಯದ್ಧಮಭವತ್ ಪೃಥಿವೀಕ್ಷಯಕಾರಕಮ್ ।
ತತ್ ತೇऽಹಂ ಸಂಪ್ರವಕ್ಷ್ಯಾಮಿ ಪೃಚ್ಛತೇ ಭರತರ್ಷಭ ॥೬॥

ಎಲೈ ಭರತರ್ಷಭನೇ, ಭೂಮಿಯ ನಾಶಕ್ಕೆ ಕಾರಣವಾದ ಆ ಯುದ್ಧವು ಹೇಗೆ ನಡೆಯಿತು ಎಂದೂ, ಪ್ರಶ್ನೆಮಾಡುತ್ತಿರುವ ನಿನಗೆ ನಾನು ಚೆನ್ನಾಗಿ ತಿಳಿಸುತ್ತೇನೆ.

ಮೃತೇ ಪಿತರಿ ತೇ ವೀರಾ ವನಾದೇತ್ಯ ಸ್ವಮಂದಿರಮ್ ।
ನಚಿರಾದೇವ ವಿದ್ವಾಂಸೋ ವೇದೇ ಧನುಷಿ ಚಾಭವನ್ ॥೭॥

ತಂದೆಯಾದ ಪಾಂಡುವು ಮೃತನಾದ ಮೇಲೆ ಆ ವೀರರು ತಮ್ಮ ಮನೆಗೆ ಹಿಂದಿರುಗಿ ಅಲ್ಪ ಕಾಲದಲ್ಲಿಯೇ ವೇದದಲ್ಲಿಯೂ, ಧನುರ್ವಿದ್ಯೆಯಲ್ಲಿಯೂ ವಿದ್ವಾಂಸರಾದರು.

ತಾಂಸ್ತಥಾ ರೂಪಸಂಪನ್ನಾನ್ ವೀರ್ಯೇಣ ಪರಮೇಣ ಹ ।
ನಾಮೃಷ್ಯನ್ ಕುರವೋ ದೃಷ್ಟ್ವಾ ಪಾಂಡವಾನ್ ಧೃತರಾಷ್ಟ್ರಜಾಃ ॥೮॥

ಹಾಗೆ ಸುಂದರರೂಪದಿಂದಲೂ, ಅಪಾರವಾದ ಪರಾಕ್ರಮದಿಂದಲೂ ಯುಕ್ತರಾದ ಪಾಂಡವರನ್ನು ನೋಡಿ ಧೃತರಾಷ್ಟ್ರನ ಮಕ್ಕಳು ಸಹಿಸಲಿಲ್ಲ.

ತತೋ ದುರ್ಯೋಧನಃ ಕ್ರೂರಃ ಕರ್ಣಸ್ತಸ್ಯ ಮತೇ ಸ್ಥಿತಃ ।
ಪಾಂಡವಾನ್ ವಿವಿಧೋಪಾಯೈ ರಾಜ್ಯಹೇತೋರಪೀಡಯತ್ ॥

ಅನಂತರ ಕ್ರೂರನಾದ ದುರ್ಯೋಧನನು ಅವನ ಅಭಿಪ್ರಾಯದಂತೆಯೇ ನಡೆಯುವ ಕರ್ಣನೂ ರಾಜ್ಯದ ಸಲುವಾಗಿ ಅನೇಕ ಉಪಾಯಗಳಿಂದ ಪಾಂಡವರನ್ನು ಪೀಡಿಸಿದರು.

ದದಾವಥ ವಿಷಂ ಪಾಪೋ ಭೀಮಾಯ ಧೃತರಾಷ್ಟ್ರಜಃ ।
ಜರಯಾಮಾಸ ತದ್ವೀರಸ್ತ ನ್ನೇನ ಸಹ ಭಾರತ ॥೧೦॥

ಅನಂತರ ಪಾಪಿಯಾದ ದುರ್ಯೋಧನನು ಭೀಮನಿಗೆ ವಿಷಯುಕ್ತವಾದ ಅನ್ನವನ್ನು ನೀಡಿದನು. ವೀರನಾದ ಭೀಮನು ಅನ್ನದ ಜೊತೆಯಲ್ಲಿ ವಿಷವನ್ನೂ ಜೀರ್ಣಿಸಿಕೊಂಡನು.

ಪ್ರಮಾಣಕೋಟ್ಯಾಂ ಕ್ರೀಡಿತ್ವಾ ಬಧ್ವಾ ಸುಪ್ತಮನಾಗಸಮ್ ।
ಬದ್ಧೈವ ಮಧ್ಯೇ ಗಂಗಾಯಾಃ ಪ್ರಕ್ಷಿಪ್ಯ ಪುನರಾವ್ರಜತ್ ॥೧೧॥

ದುರ್ಯೋಧನನು ಗಂಗೆಯ ಪ್ರಮಾಣಕೋಟಿ ಮಡುವಿನಲ್ಲಿ ವಿಹಾರಮಾಡಿ ದಣಿದು ನಿದ್ರಿಸುತ್ತಿದ್ದ ನಿರಪರಾಧಿಯಾದ ಭೀಮನನ್ನು (ಉಕ್ಕಿನ) ಹಗ್ಗಗಳಿಂದ ಕಟ್ಟಿ ಗಂಗೆಯ ಮಧ್ಯದಲ್ಲಿ ಹಾಕಿ ಮನೆಗೆ ಬಂದನು.

ಯದಾ ಪ್ರಬುದ್ಧಃ ಕೌಂತೇಯಸ್ತದಾ ಸಂಛಿದ್ಯ ಬಂಧನಾನ್ ।
ಉದತಿಷ್ಠನ್ಮಹಾರಾಜ ಭೀಮಸೇನೋ ಗತವ್ಯಥಃ ॥೧೨॥

ಎಲೈ ಮಹಾರಾಜನೇ, ಆಗ ಎಚ್ಚರಗೊಂಡ ಭೀಮನು ನಿರಾಲೋಚನೆಯಿಂದ ಆ ಹಗ್ಗಗಳನ್ನು ಕಡಿದುಹಾಕಿ ಮೇಲೆದ್ದು ಬಂದನು.

ಆಶೀವಿಷೈಃ ಕೃಷ್ಣಸರ್ಪೈಃ ಸುಪ್ತಂ ಚೈನಮದಂಶಯತ್ ।
ಸರ್ವೇಷ್ವೇವಾಂಗದೇಶೇಷು ನ ಮಮಾರ ಸ ಶತ್ರುಹಾ ॥೧೩॥

ಮಲಗಿ ನಿದ್ರಿಸುತ್ತಿದ್ದ ಭೀಮಸೇನನಿಗೆ ಕೃಷ್ಣಸರ್ಪಗಳಿಂದಲೂ, ಅನೇಕ ವಿಷಸರ್ಪಗಳಿಂದಲೂ ದೇಹದ ಎಲ್ಲಾ ಭಾಗಗಳಿಗೂ ಕಚ್ಚಿಸಿದನು. ಆದರೆ ಶತ್ರುಸಂಹಾರಶೀಲನಾದ ಭೀಮನು ಮರಣಹೊಂದಲಿಲ್ಲ.

ಉಪಾಯೈರ್ವಿವಿಧೈಃ ಕ್ಷುದ್ರಃ ಸಂವೃತೈರ್ವಿವೃತೈರಪಿ ।
ಪೀಡಯಾಮಾಸ ದುಷ್ಟಾತ್ಮಾ ನ ಚ ಕಿಂಚಿದಸಾಧಯತ್ ॥೧೪॥

ದುಷ್ಟಮನಸ್ಸಿನವನೂ ನೀಚನೂ ಆದ ದುರ್ಯೋಧನನು ರಹಸ್ಯವಾಗಿ ಮತ್ತು ಬಹಿರಂಗವಾಗಿ ಅನೇಕ ಉಪಾಯಗಳಿಂದ ಪೀಡಿಸಿದನು. ಆದರೆ ಅವುಗಳಿಂದ ಏನನ್ನೂ ಸಾಧಿಸಲು ಶಕ್ತನಾಗಲಿಲ್ಲ.

ಸ ತೇಷಾಂ ವಿಪ್ರಕಾರೇಷು ತೇಷು ತೇಷು ಮಹಾಮತಿಃ ।
ಮೋಕ್ಷಣೇ ಪ್ರತಿಘಾತೇ ಚ ವಿದುರಃ ಪ್ರಹಿತೋಽಭವತ್ ॥೧೫॥

ಮಹಾಮತಿಯಾಗಿದ್ದ ವಿದುರನು ಆಯಾ ಪ್ರತೀಕಾರಗಳಿಗೆ ನಿರೋಧಮಾಡುವ ವಿಷಯದಲ್ಲಿಯೂ, ಆಪತ್ತುಗಳಿಂದ ಮೋಚನೆಮಾಡುವ ವಿಷಯದಲ್ಲಿಯೂ ಪಾಂಡವರಿಗೆ ಅತ್ಯಂತ ಹಿತಕಾರಿಯಾಗಿದ್ದನು.

ಸ್ವರ್ಗಸ್ಥೋ ಜೀವಲೋಕಸ್ಯ ಯಥಾ ಶಕ್ರಃ ಸುಖಾವಹಃ ।
ಪಾಂಡವಾನಾಂ ತಥಾ ನಿತ್ಯಂ ವಿದುರೋಽಪಿ ಸುಖಾವಹಃ ॥೧೬॥

ಸ್ವರ್ಗದಲ್ಲಿದ್ದು ಇಂದ್ರನು ಹೇಗೆ ಜೀವಲೋಕಕ್ಕೆ ಸುಖಪ್ರದನೋ ಹಾಗೆ ವಿದುರನು ಪಾಂಡವರಿಗೆ ಯಾವಾಗಲೂ ಸುಖಕಾರಿಯಾಗಿದ್ದನು.

ಯದಾ ತು ವಿವಿಧೋಪಾಯೈಃ ಸಂವೃತೈರ್ವಿವೃತೈರಪಿ ।
ನಾಶಕ್ನೋದ್ ಸ ವಿಹಂತುಂ ತಾನ್ ದೈವೇನಾತ್ಯಂತರಕ್ಷಿತಾನ್ ॥೧೭॥

ತತೋ ದುರ್ಯೋಧನಃ ಕ್ಷುದ್ರಃ ಕರ್ಣಶ್ಚ ಸಹಸೌಬಲಃ ।
ಧೃತರಾಷ್ಟ್ರಮನುಜ್ಞಾಪ್ಯ ಜಾತುಷಂ ಚಕ್ರುರಾಲಯಮ್ ॥೧೮॥

ಪ್ರಕಾಶವಾದ ಅಥವಾ ರಹಸ್ಯವಾದ ಅನೇಕ ಉಪಾಯಗಳಿಂದ ದೈವರಕ್ಷಿತರಾಗಿ ಪಾಂಡವರನ್ನು ಸಾಧ್ಯವಿಲ್ಲದೇ ಹೋದಾಗ ಕ್ಷುದ್ರನಾದ ದುರ್ಯೋಧನನು ಕರ್ಣಮತ್ತು ಶಕುನಿಯ ಜೊತೆ ಸೇರಿ ಧೃತರಾಷ್ಟ್ರನ ಅನುಜ್ಞೆಯನ್ನು ಪಡೆದು ಅರಗಿನ ಮನೆಯನ್ನು ನಿರ್ಮಿಸಿದರು.

ತತ್ರ ತಾನ್ ವಾಸಯಾಮಾಸ ಪಾಂಡವಾನಂಬಿಕಾಸುತಃ ।
ಸುತಪ್ರಿಯೈಷೀ ತಾನ್ ರಾಜಾ ಪಾಂಡವಾನಮಿತೌಜಸಃ ॥೧೯॥

ತನ್ನ ಮಕ್ಕಳಿಗೆ ಹಿತವನ್ನು ಬಯಸುವ ಅಂಬಿಕಾಸುತನಾದ ಧೃತರಾಷ್ಟ್ರನು ಅಮಿತ ಪರಾಕ್ರಮಿಗಳಾದ ಆ ಪಾಂಡವರನ್ನು ಅರಗಿನ ಮನೆಯಲ್ಲಿ ವಾಸಮಾಡಿಸಿದನು.

ತತೋ ವಿವಾಸಯಾಮಾಸ ರಾಜ್ಯಭೋಗಬುಭುಕ್ಷಯಾ ।
ಪ್ರಸ್ಥಾನೇ ಚಾಭವನ್ಮಿತ್ರಂ ಕ್ಷತ್ತಾ ತೇಷಾಂ ಮಹಾತ್ಮನಾಮ್ ॥೨೦॥

ಅನಂತರ ರಾಜ್ಯವನ್ನು ಭೋಗಿಸುವ ಇಚ್ಛೆಯಿಂದ ಪಾಂಡವರನ್ನು ಹಸ್ತಿನಾವತಿಯಿಂದ ವಾರಣಾವತಕ್ಕೆ ಕಳುಹಿಸಿದನು. ಮಹಾತ್ಮರಾದ ಪಾಂಡವರ ಪ್ರಯಾಣದ ಸಮಯದಲ್ಲಿ ವಿದುರನು ಅವರಿಗೆ ಮಿತ್ರನಾಗಿ ವರ್ತಿಸಿದನು.

ತೇ ಪ್ರಾತಿಷ್ಠನ್ ನಗರಾತ್ ಸಹಿತಾ ನಾಗಸಾಹ್ವಯಾತ್ ।
ತತಃ ಸಂಪ್ರಾಪ್ಯ ಕೌಂತೇಯಾ ನಗರಂ ವಾರಣಾವತಮ್ ॥೨೧॥

ನ್ಯವಸಂತ ಮಹಾತ್ಮಾನೋ ಮಾತ್ರಾ ಸಹ ಪರಂತಪಾಃ ।
ಆದೀಪ್ಯ ಜಾತುಷಂ ವೇಶ್ಮ ದಗ್ಧ್ವಾ ತತ್ರ ಪುರೋಚನಮ್ ॥೨೨॥

ಪಾಂಡವರೆಲ್ಲರೂ ಒಟ್ಟಿಗೆ ಹಸ್ತಿನಾವತಿನ್ನು ಬಿಟ್ಟು ವಾರಣಾವತವನ್ನು ತಲುಪಿ ತಾಯಿಯ ಜೊತೆಯಲ್ಲಿ ಅಲ್ಲಿ ವಾಸಮಾಡಿದರು. ಅನಂತರ ಸೂಕ್ತಸಮಯದಲ್ಲಿ ಅರಗಿನ ಮನೆಗೆ ಅಗ್ನಿಯನ್ನು ಕೊಟ್ಟುಪುರೋಚನನನ್ನು ಸುಟ್ಟು(ಅಲ್ಲಿಂದ ತೆರಳಿದರು)

ಮಾರ್ಗಭೋಜೀವ ಲೋಕಸ್ಯ ಯಥಾ ಶುಕ್ರಃ ಸುಖಾವಹಃ ।
ಪಾಂಡವಾನಾಂ ತಥಾ ನಿತ್ಯಂ ವಿದುರೋಽಭೂತ್ ಸುಖಾವಹಃ ॥೨೩॥

ಮಾರ್ಗತಿಳಿಯದವರಿಗೆ ಹೇಗೆ ಆಕಾಶದಲ್ಲಿ ಶುಕ್ರನು ತನ್ನ ಪ್ರಕಾಶದಿಂದ ಸುಖವನ್ನುಂಟುಮಾಡುತ್ತಾನೆಯೋ ಹಾಗೆ ವಿದುರನು ಪಾಂಡವರಿಗೆ ಯಾವಾಗಲೂ ಸುಖಕರನಾಗಿದ್ದನು.

ಸ ದಾಹಯಚ್ಚ ವಿಸ್ರಬ್ಧಾನ್ ಪಾವಕೇನ ಪುನಸ್ತದಾ ।
ವಿದುರಸ್ಯೈವ ವಚನಾತ್ ಖನಿತ್ರೀ ವಿಹಿತಾ ತತಃ ॥೨೪॥

ವಿದುರನೇ, ನಿಶ್ಚಿಂತೆಯಿಂದ ಮಲಗಿದ್ದ ಪುರೋಚನ ಮೊದಲಾದವರನ್ನು ಭೀಮಸೇನನಿಂದ ಸುಡಿಸಿದನು. ವಿದುರನ ಮಾತಿನಂತೆಯೇ ಅರಗಿನ ಮನೆಯಿಂದ ಹೊರಗೆ ಹೋಗುವುದಕ್ಕೆ ಒಂದು ಸುರಂಗವನ್ನು ನಿರ್ಮಿಸಲಾಗಿದ್ದಿತು.

ಮೋಕ್ಷಯಾಮಾಸ ವೇಗೇನ ತೇ ಮುಕ್ತಾಃ ಪ್ರಾದ್ರವನ್ ಭಯಾತ್ ।
ತತೋ ಮಹಾವನೇ ಘೋರೇ ಹಿಡಿಂಬಂ ನಾಮ ರಾಕ್ಷಸಮ್ ॥೨೫॥

ಭೀಮಸೇನೋಽವಧೀತ್ ಕ್ರುದ್ಧೋ ಭುವಿ ಭೀಮಪರಾಕ್ರಮಃ ।
ಪ್ರಾಪ್ತಾ ಹಿಡಿಂಬೀ ಭೀಮೇನ ಯತ್ರ ಜಾತೋ ಘಟೋತ್ಕಚಃ ॥೨೬॥

ವಿದುರನು ಶೀಘ್ರವಾಗಿ ಅವರನ್ನು ಅರಗಿನ ಮನೆಯ ಅಪಾಯದಿಂದ ಪಾರುಮಾಡಿದನು. ಮುಕ್ತರಾದ ಅವರು ಭಯದಿಂದ ವೇಗವಾಗಿ ಓಡಿ ದೊಡ್ಡಕಾಡಿನಲ್ಲಿ ಹಿಡಿಂಬನೆಂಬ ರಾಕ್ಷಸನನ್ನು ಸಂಧಿಸಿದರು. ಭೂಮಿಯಲ್ಲಿ ಭಯಂಕರವಾದ ಪರಾಕ್ರಮವುಳ್ಳ ಭೀಮಸೇನನು ಕ್ರುದ್ಧನಾಗಿ ಹಿಡಿಂಬನನ್ನು ಸಂಹಾರಮಾಡಿ ಹಿಡಿಂಬಿಯನ್ನು ಪತ್ನಿಯಾಗಿ ಸ್ವೀಕರಿಸಿದನು. ಅವಳಲ್ಲಿ ಘಟೋತ್ಕಚನ ಜನನವಾಯಿತು.

ಅಥ ಸಂಧಾಯ ತೇ ವೀರಾ ಏಕಚಕ್ರಾಂ ವ್ರಜಂಸ್ತದಾ ।
ಬ್ರಹ್ಮರೂಪಧರಾ ಭೂತ್ವಾ ಮಾತ್ರಾ ಸಹ ಪರಂತಪಾಃ ॥೨೭॥

ಅನಂತರ ಕ್ಷತ್ರಿಯವೇಷವನ್ನು ಮರೆಮಾಚುವುದಕ್ಕೆ ಎಲ್ಲರೂ ಸಮ್ಮತಿಸಿ ಬ್ರಾಹ್ಮಣವೇಷವನ್ನು ಧರಿಸಿ ತಾಯಿಯ ಜೊತೆಯಲ್ಲಿ ಏಕಚಕ್ರನಗರವನ್ನು ಸೇರಿದರು.

ತತ್ರ ತೇ ಬ್ರಾಹ್ಮಣಾರ್ಥಾಯ ಬಕಂ ಹತ್ವಾ ಮಹಾಬಲಮ್ ।
ಬ್ರಾಹ್ಮಣೈಃ ಸಹಿತಾ ಜಗ್ಮುಃ ಪಾಂಚಾಲಾನಾಂ ಪುರಂ ತತಃ ॥೨೮॥

ಅಲ್ಲಿ ಅವರು ಆಶ್ರಯವನ್ನು ಕೊಟ್ಟ ಬ್ರಾಹ್ಮಣನ ಸಲುವಾಗಿ ಮಹಾಬಲಿಷ್ಠನಾದ ಬಕಾಸುರನನ್ನು ಕೊಂದು ಅಲ್ಲಿಂದ ಬ್ರಾಹ್ಮಣರ ಜೊತೆಯಲ್ಲಿ ಪಾಂಚಾಲರಾಜನಾದ ದ್ರುಪದನ ಪಟ್ಟಣಕ್ಕೆ ಹೋದರು.

ತತ್ರ ತೇ ದ್ರೌಪದೀಂ ಲಬ್ಧ್ವಾ ಬಹೂನ್ ಮಾಸಾನ್ ಸುಖೋಷಿತಾಃ ।
ಸಹಿತಾ ಹಸ್ತಿನಪುರಂ ಪ್ರತ್ಯಾಜಗ್ಮುರರಿಂದಮಾಃ ॥೨೯॥

ಅಲ್ಲಿ ಅವರು ದ್ರೌಪದಿಯನ್ನು ಪಡೆದು ಅನೇಕ ತಿಂಗಳುಗಳಕಾಲ ಸುಖವಾಗಿ ವಾಸಿಸಿ ಶತ್ರುದಮನಶೀಲರಾಗಿ ಎಲ್ಲರೂ ಜೊತೆಯಲ್ಲಿ ಹಸ್ತಿನಪುರಕ್ಕೆ ಹಿಂದಿರುಗಿದರು.

ಉಕ್ತಾಸ್ತೇ ಧೃತರಾಷ್ಟ್ರೇಣ ರಾಜ್ಞಾ ಶಾಂತನವೇನ ಚ ।
ಭ್ರಾತೃಭಿರ್ವಿಗ್ರಹಸ್ತಾತ ಕಥಂ ವೋ ನ ಭವೇದಿತಿ ॥೩೦॥

ತಸ್ಮಾಜ್ಜನಪದೋಪೇತಂ ಸುವಿಭಕ್ತಮಹಾಪಥಮ್ ।
ವಾಸಾಯ ಖಾಂಡವಪ್ರಸ್ಥೇ ವ್ರಜಧ್ವಂ ಗತಮನ್ಯವಃ ॥೩೧॥

ಅಲ್ಲಿ ಅವರಿಗೆ ಭೀಷ್ಮನೂ ಮತ್ತು ಧೃತರಾಷ್ಟ್ರನೂ ಸಹ ಅಣ್ಣತಮ್ಮಂದಿರಿಗೆ ವಿರೋಧವಾಗದಿರುವ ಉದ್ದೇಶದಿಂದ ಒಳ್ಳೆಯ ಮಾರ್ಗಗಳಿಂದ ಕೂಡಿದ ಮತ್ತು ಸತ್ಪುರುಷರಿಂದ ಕೂಡಿದ ಇಂದ್ರಪ್ರಸ್ಥಕ್ಕೆ ಏನೂ ಬೇಸರ ಅಥವಾ ಕೋಪವನ್ನು ಮಾಡಿಕೊಳ್ಳದೆ ವಾಸಿಸಲು ಹೋಗಿ ಎಂದು ಹೇಳಲ್ಪಟ್ಟರು.

ತಯೋಸ್ತೇ ವಚನಾಜ್ಜಗ್ಮುಃ ಸಹ ಸರ್ವೈಃ ಸುಹೃಜ್ಜನೈಃ ।
ನಗರಂ ಖಾಂಡವಪ್ರಸ್ಥಂ ರತ್ನಮಾದಾಯ ಭಾಗಶಃ ॥೩೨॥

ಅವರಿಬ್ಬರ ಮಾತಿನಂತೆ ಪಾಂಡವರು ಕೋಶದಿಂದ ಸ್ವಲ್ಪಭಾಗ ರತ್ನವನ್ನು ತೆಗೆದುಕೊಂಡು ತಮ್ಮ ಎಲ್ಲಾ ಹಿತೈಷಿಗಳ ಜೊತೆಯಲ್ಲಿ ಖಾಂಡವಪ್ರಸ್ಥಕ್ಕೆ ಹೋದರು.

ತತ್ರ ತೇ ನ್ಯವಸನ್ ರಾಜನ್ ಸಂವತ್ಸರಗಣಾನ್ ಬಹೂನ್ ।
ವಶೇ ಶಸ್ತ್ರಪ್ರತಾಪೇನ ಕುರ್ವಂತೋಽನ್ಯಾನ್ ಮಹೀಕ್ಷಿತಃ ॥೩೩॥

ಏವಂ ಧರ್ಮಪ್ರಧಾನಾಸ್ತೇ ಸತ್ಯವ್ರತಪರಾಯಣಾಃ ।
ಅಪ್ರಮತ್ತಾಃ ಸ್ಥಿತಾಃ ಕ್ಷಾತ್ರ್ಯಾಃ ಪ್ರತಪಂತೋಽಹಿತಾನ್ ಬಲಾತ್ ॥೩೪॥

ಅಲ್ಲಿ ಅವರು ಅನೇಕ ವರ್ಷಗಳಕಾಲ ತಮ್ಮ ಶಸ್ತ್ರಪ್ರತಾಪದಿಂದ ಬೇರೆ ರಾಜರನ್ನು ವಶಪಡಿಸಿಕೊಂಡು ಧರ್ಮವನ್ನಾಚರಿಸುತ್ತಾ ಸತ್ಯವ್ರತಪರಾಯಣರಾಗಿ ಕ್ಷತ್ರಿಯಧರ್ಮದಿಂದ ಎಂದೂ ಚ್ಯುತರಾಗದೆ ತಮ್ಮ ಬಲದಿಂದ ಶತ್ರುಗಳನ್ನು ಪೀಡಿಸುತ್ತಾ ವಾಸಮಾಡಿದರು.

ಅಜಯದ್ ಭೀಮಸೇನಸ್ತು ದಿಶಂ ಪ್ರಾಚೀಂ ಮಹಾಬಲಃ ।
ಉದೀಚೀಮರ್ಜುನೋ ವೀರಃ ಪ್ರತೀಚೀಂ ನಕುಲಸ್ತಥಾ ॥೩೫॥

ಮಹಾಬಲನಾದ ಭೀಮಸೇನನು ಪೂರ್ವದಿಕ್ಕನ್ನು ಜಯಿಸಿದನು. ವೀರನಾದ ಅರ್ಜುನನು ಉತ್ತರದಿಕ್ಕನ್ನು ಹಾಗೆಯೇ ನಕುಲನು ಪಶ್ಚಿಮ ದಿಕ್ಕನ್ನೂ ಜಯಿಸಿದರು.

ದಕ್ಷಿಣಾಂ ಸಹದೇವಸ್ತು ವಿಜಿಗ್ಯೇ ಪರವೀರಹಾ ।
ಏವಂ ಚಕ್ರುರಿಮಾಂ ಸರ್ವೇ ವಶೇ ಕೃತ್ಸ್ನಾಂ ವಸುಂಧರಾಮ್ ॥೩೬॥

ಶತ್ರುವೀರರನ್ನು ಸಂಹರಿಸುವ ಸಹದೇವನು ದಕ್ಷಿಣ ದಿಕ್ಕನ್ನು ಜಯಿಸಿದನು. ಹೀಗೆ ಅವರೆಲ್ಲರೂ ಸೇರಿ ಸಮಗ್ರವಾದ ಭೂಮಿಯನ್ನು ತಮ್ಮ ವಶಮಾಡಿಕೊಂಡರು.

ಪಂಚಭಿಃ ಸೂರ್ಯಸಂಕಾಶೈಃ ಸೂರ್ಯೇಣ ಚ ವಸುಂಧರಾ ।
ಷಟ್‌ಸೂರ್ಯೇವ ಚ ಬಭ್ರಾಜೇ ಪಾಂಡವೈಃ ಸತ್ಯವಿಕ್ರಮೈಃ ॥೩೭॥

ಸತ್ಯವಿಕ್ರಮರಾದ ಐದು ಸೂರ್ಯರಂತೆ ಬೆಳಗುವ ಆ ಪಾಂಡವರಿಂದ ಮತ್ತು ಆಕಾಶದಲ್ಲಿ ಬೆಳಗುವ ಸೂರ್ಯನಿಂದ ಕೂಡಿ ಜಗತ್ತು ಆರು ಸೂರ್ಯರನ್ನು ಹೊಂದಿದಂತೆ ಶೋಭಿಸಿತು.

ತತೋ ನಿಮಿತ್ತೇ ಕಸ್ಮಿಂಶ್ಚಿದ್ ಧರ್ಮರಾಜೋ ಯುಧಿಷ್ಠಿರಃ ।
ವನಂ ಪ್ರಸ್ಥಾಪಯಾಮಾಸ ಭ್ರಾತರಂ ವೈ ಧನಂಜಯಮ್ ॥೩೮॥

ಅನಂತರ ಯಾವುದೋ ಒಂದು ಕಾರಣಕ್ಕಾಗಿ ಧರ್ಮರಾಜನು ತನ್ನ ತಮ್ಮನಾದ ಅರ್ಜುನನನ್ನು ವನವಾಸಕ್ಕೆ ಕಳುಹಿಸಿದನು.

ಧೈರ್ಯಾತ್ ಧರ್ಮಾಚ್ಚ ಸತ್ಯಾಚ್ಚ ವಿಜಯಾಚ್ಚಾಧಿಕಪ್ರಿಯಮ್ ।
ಅರ್ಜುನೋ ಭ್ರಾತರಂ ಜ್ಯೇಷ್ಠಂ ನಾತ್ಯವರ್ತತ ಜಾತುಚಿತ್ ॥೩೯॥

ಧೈರ್ಯದಿಂದ, ಧರ್ಮದಿಂದ, ಸತ್ಯದಿಂದ ಮತ್ತು ವಿಜಯದಿಂದ ಅಣ್ಣನಾದ ಧರ್ಮರಾಜನನ್ನು ಅರ್ಜುನನು ಎಂದೂ ಮೀರುತ್ತಿರಲಿಲ್ಲ.

ಸ ವೈ ಸಂವತ್ಸರಂ ಪೂರ್ಣಂ ಮಾಸಂ ಚೈವ ವನೇ ವಸನ್ ।
ತೀರ್ಥಯಾತ್ರಾಂ ಚ ಕೃತವಾನ್ ನಾಗಕನ್ಯಾಮವಾಪ್ಯ ಚ ॥೪೦॥

ಅವನು ಒಟ್ಟು ಹದಿಮೂರು ತಿಂಗಳ ಕಾಲ ವನವಾಸವನ್ನು ಮಾಡಿ ತೀರ್ಥಯಾತ್ರೆಯನ್ನು ಮಾಡಿ ನಾಗಕನ್ಯೆಯಾದ ಉಲೂಪಿಯನ್ನು ಪತ್ನಿಯಾಗಿ ಪಡೆದನು.

ಅಲ್ಲಿ ಅವರು ದ್ರೌಪದಿಯನ್ನು ಪಡೆದು ಅನೇಕ ತಿಂಗಳುಗಳಕಾಲ ಸುಖವಾಗಿ ವಾಸಿಸಿ ಶತ್ರುದಮನಶೀಲರಾಗಿ ಎಲ್ಲರೂ ಜೊತೆಯಲ್ಲಿ ಹಸ್ತಿನಪುರಕ್ಕೆ ಹಿಂದಿರುಗಿದರು.

ಉಕ್ತಾಸ್ತೇ ಧೃತರಾಷ್ಟ್ರೇಣ ರಾಜ್ಞಾ ಶಾಂತನವೇನ ಚ ।
ಭ್ರಾತೃಭಿರ್ವಿಗ್ರಹಸ್ತಾತ ಕಥಂ ವೋ ನ ಭವೇದಿತಿ ॥೩೦॥

ತಸ್ಮಾಜ್ಜನಪದೋಪೇತಂ ಸುವಿಭಕ್ತಮಹಾಪಥಮ್ ।
ವಾಸಾಯ ಖಾಂಡವಪ್ರಸ್ಥೇ ವ್ರಜಧ್ವಂ ಗತಮನ್ಯವಃ ॥೩೧॥

ಅಲ್ಲಿ ಅವರಿಗೆ ಭೀಷ್ಮನೂ ಮತ್ತು ಧೃತರಾಷ್ಟ್ರನೂ ಸಹ ಅಣ್ಣತಮ್ಮಂದಿರಿಗೆ ವಿರೋಧವಾಗದಿರುವ ಉದ್ದೇಶದಿಂದ ಒಳ್ಳೆಯ ಮಾರ್ಗಗಳಿಂದ ಕೂಡಿದ ಮತ್ತು ಸತ್ಪುರುಷರಿಂದ ಕೂಡಿದ ಇಂದ್ರಪ್ರಸ್ಥಕ್ಕೆ ಏನೂ ಬೇಸರ ಅಥವಾ ಕೋಪವನ್ನು ಮಾಡಿಕೊಳ್ಳದೆ ವಾಸಿಸಲು ಹೋಗಿ ಎಂದು ಹೇಳಲ್ಪಟ್ಟರು.

ತಯೋಸ್ತೇ ವಚನಾಜ್ಜಗ್ಮುಃ ಸಹ ಸರ್ವೈಃ ಸುಹೃಜ್ಜನೈಃ ।
ನಗರಂ ಖಾಂಡವಪ್ರಸ್ಥಂ ರತ್ನಮಾದಾಯ ಭಾಗಶಃ ॥೩೨॥

ಅವರಿಬ್ಬರ ಮಾತಿನಂತೆ ಪಾಂಡವರು ಕೋಶದಿಂದ ಸ್ವಲ್ಪಭಾಗ ರತ್ನವನ್ನು ತೆಗೆದುಕೊಂಡು ತಮ್ಮ ಎಲ್ಲಾ ಹಿತೈಷಿಗಳ ಜೊತೆಯಲ್ಲಿ ಖಾಂಡವಪ್ರಸ್ಥಕ್ಕೆ ಹೋದರು.

ತತ್ರ ತೇ ನ್ಯವಸನ್ ರಾಜನ್ ಸಂವತ್ಸರಗಣಾನ್ ಬಹೂನ್ ।
ವಶೇ ಶಸ್ತ್ರಪ್ರತಾಪೇನ ಕುರ್ವಂತೋಽನ್ಯಾನ್ ಮಹೀಕ್ಷಿತಃ ॥೩೩॥

ಏವಂ ಧರ್ಮಪ್ರಧಾನಾಸ್ತೇ ಸತ್ಯವ್ರತಪರಾಯಣಾಃ ।
ಅಪ್ರಮತ್ತಾಃ ಸ್ಥಿತಾಃ ಕ್ಷಾತ್ರಾಃ ಪ್ರತಪಂತೋಽಹಿತಾನ್ ಬಲಾತ್ ॥೩೪॥

ಅಲ್ಲಿ ಅವರು ಅನೇಕ ವರ್ಷಗಳಕಾಲ ತಮ್ಮ ಶಸ್ತ್ರಪ್ರತಾಪದಿಂದ ಬೇರೆ ರಾಜರನ್ನು ವಶಪಡಿಸಿಕೊಂಡು ಧರ್ಮವನ್ನಾಚರಿಸುತ್ತಾ ಸತ್ಯವ್ರತಪರಾಯಣರಾಗಿ ಕ್ಷತ್ರಿಯಧರ್ಮದಿಂದ ಎಂದೂ ಚ್ಯುತರಾಗದೆ ತಮ್ಮ ಬಲದಿಂದ ಶತ್ರುಗಳನ್ನು ಪೀಡಿಸುತ್ತಾ ವಾಸಮಾಡಿದರು.

ಅಜಯದ್ ಭೀಮಸೇನಸ್ತು ದಿಶಂ ಪ್ರಾಚೀಂ ಮಹಾಬಲಃ ।
ಉದೀಚೀಮರ್ಜುನೋ ವೀರಃ ಪ್ರತೀಚೀಂ ನಕುಲಸ್ತಥಾ ॥೩೫॥

ಮಹಾಬಲನಾದ ಭೀಮಸೇನನು ಪೂರ್ವದಿಕ್ಕನ್ನು ಜಯಿಸಿದನು. ವೀರನಾದ ಅರ್ಜುನನು ಉತ್ತರದಿಕ್ಕನ್ನು ಹಾಗೆಯೇ ನಕುಲನು ಪಶ್ಚಿಮ ದಿಕ್ಕನ್ನೂ ಜಯಿಸಿದರು.

ದಕ್ಷಿಣಾಂ ಸಹದೇವಸ್ತು ವಿಜಿಗ್ಯೇ ಪರವೀರಹಾ ।
ಏವಂ ಚಕ್ರುರಿಮಾಂ ಸರ್ವೇ ವಶೇ ಕೃತ್ಸ್ನಾಂ ವಸುಂಧರಾಮ್ ॥೩೬॥

ಶತ್ರುವೀರರನ್ನು ಸಂಹರಿಸುವ ಸಹದೇವನು ದಕ್ಷಿಣ ದಿಕ್ಕನ್ನು ಜಯಿಸಿದನು. ಹೀಗೆ ಅವರೆಲ್ಲರೂ ಸೇರಿ ಸಮಗ್ರವಾದ ಭೂಮಿಯನ್ನು ತಮ್ಮ ವಶಮಾಡಿಕೊಂಡರು.

ಪಂಚಭಿಃ ಸೂರ್ಯಸಂಕಾಶೈಃ ಸೂರ್ಯೈರ್ಣ ಚ ವಸುಂಧರಾ ।
ಷಟ್‌ಸೂರ್ಯೈವ ಚ ಬಭ್ರಾಜೇ ಪಾಂಡವೈಃ ಸತ್ಯವಿಕ್ರಮೈಃ ॥೩೭॥

ಸತ್ಯವಿಕ್ರಮರಾದ ಐದು ಸೂರ್ಯರಂತೆ ಬೆಳಗುವ ಆ ಪಾಂಡವರಿಂದ ಮತ್ತು ಆಕಾಶದಲ್ಲಿ ಬೆಳಗುವ ಸೂರ್ಯನಿಂದ ಕೂಡಿ ಜಗತ್ತು ಆರು ಸೂರ್ಯರನ್ನು ಹೊಂದಿದಂತೆ ಶೋಭಿಸಿತು.

ತತೋ ನಿಮಿತ್ತೇ ಕಸ್ಮಿಂಶ್ಚಿದ್ ಧರ್ಮರಾಜೋ ಯುಧಿಷ್ಠಿರಃ ।
ವನಂ ಪ್ರಸ್ಥಾಪಯಾಮಾಸ ಭ್ರಾತರಂ ವೈ ಧನಂಜಯಮ್ ॥೩೮॥

ಅನಂತರ ಯಾವುದೋ ಒಂದು ಕಾರಣಕ್ಕಾಗಿ ಧರ್ಮರಾಜನು ತನ್ನ ತಮ್ಮನಾದ ಅರ್ಜುನನನ್ನು ವನವಾಸಕ್ಕೆ ಕಳುಹಿಸಿದನು.

ಧೈರ್ಯಾತ್ ಧರ್ಮಾಚ್ಚ ಸತ್ಯಾಚ್ಚ ವಿಜಯಾಚ್ಚಾಧಿಕಪ್ರಿಯಮ್ ।
ಅರ್ಜುನೋ ಭ್ರಾತರಂ ಜ್ಯೇಷ್ಠಂ ನಾತ್ಯವರ್ತತ ಜಾತುಚಿತ್ ॥೩೯॥

ಧೈರ್ಯದಿಂದ, ಧರ್ಮದಿಂದ, ಸತ್ಯದಿಂದ ಮತ್ತು ವಿಜಯದಿಂದ ಅಣ್ಣನಾದ ಧರ್ಮರಾಜನನ್ನು ಅರ್ಜುನನು ಎಂದೂ ಮೀರುತ್ತಿರಲಿಲ್ಲ.

ಸ ವೈ ಸಂವತ್ಸರಂ ಪೂರ್ಣಂ ಮಾಸಂ ಚೈವ ವನೇ ವಸನ್ ।
ತೀರ್ಥಯಾತ್ರಾಂ ಚ ಕೃತವಾನ್ ನಾಗಕನ್ಯಾಮವಾಪ್ಯ ಚ ॥೪೦॥

ಅವನು ಒಟ್ಟು ಹದಿಮೂರು ತಿಂಗಳ ಕಾಲ ವನವಾಸವನ್ನು ಮಾಡಿ ತೀರ್ಥಯಾತ್ರೆಯನ್ನು ಮಾಡಿ ನಾಗಕನ್ಯೆಯಾದ ಉಲೂಪಿಯನ್ನು ಪತ್ನಿಯಾಗಿ ಪಡೆದನು.

ಅಥ ಪಾಂಡ್ಯಸ್ಯ ತನಯಾಮವಾಪ್ಯ ಸ ಧನಂಜಯಃ ।
ತತೋಽಗಚ್ಛದ್ಧೃಷೀಕೇಶಂ ದ್ವಾರವತ್ಯಾಂ ಕದಾಚನ ॥೪೧॥

ಅನಂತರ ಪಾಂಡ್ಯದೇಶದ ರಾಜಕುಮಾರಿಯಾದ ಚಿತ್ರಾಂಗದೆಯನ್ನು ಪತ್ನಿಯಾಗಿ ಪಡೆದು ಅರ್ಜುನನು ಕಾಲಕ್ರಮದಲ್ಲಿ ದ್ವಾರಕೆಗೆ ಹೋಗಿ ಕೃಷ್ಣನನ್ನು ಕಂಡನು.

ತತ್ರ ಲೇಭೇ ಚ ಬೀಭತ್ಸುರ್ಭಾರ್ಯಾಂ ರಾಜೀವಲೋಚನಾಮ್ ।
ಅನುಜಾಂ ವಾಸುದೇವಸ್ಯ ಸುಭದ್ರಾಂ ಭದ್ರಭಾಷಿಣೀಮ್ ॥೪೨॥

ಅಲ್ಲಿ ಅವನು ಕೃಷ್ಣನ ತಂಗಿಯಾದ ಮಂಜುಭಾಷಿಣಿಯೂ, ಕಮಲನಯನೆಯೂ ಆದ ಸುಭದ್ರೆಯನ್ನು ಪತ್ನಿಯಾಗಿ ಪಡೆದನು.

ಸಾ ಶಚೀವ ಮಹೇಂದ್ರೇಣ ಶ್ರೀಃ ಕೃಷ್ಣೇನೇವ ಸಂಗತಾ ।
ಸುಭದ್ರಾ ಯುಯುಜೇ ಪ್ರೀತಾ ಪಾಂಡವೇನಾರ್ಜುನೇನ ಚ ॥೪೩॥

ಸುಭದ್ರೆಯು ಅರ್ಜುನನನ್ನು ಹೊಂದಿ ಇಂದ್ರನ ಜೊತೆಯಲ್ಲಿ ಕೂಡಿದ ಶಚಿಯಂತೆ, ನಾರಾಯಣನನ್ನು ಸೇರಿದ ಲಕ್ಷ್ಮಿಯಂತೆ ಶೋಭಿಸಿದಳು.

ತತ್ರ ಸಂತರ್ಪಯಾಮಾಸ ಕೌಂತೇಯೋ ಹವ್ಯವಾಹನಮ್ ।
ಬೀಭತ್ಸುರ್ವಾಸುದೇವೇನ ಸಹಿತಃ ಖಾಂಡವೇ ವನೇ ॥೪೪॥

ಅಲ್ಲಿ ಅರ್ಜುನನು ಕೃಷ್ಣನಿಂದ ಸಹಿತನಾಗಿ ಖಾಂಡವವನದಲ್ಲಿ ಅಗ್ನಿದೇವನನ್ನು ತೃಪ್ತಿಪಡಿಸಿದನು.

ನಾತಿಭಾರೋಽಥ ಪಾರ್ಥಸ್ಯ ಕೇಶವೇನಾಭವತ್ ಸಹ ।
ವ್ಯವಸಾಯದ್ವಿತೀಯೇನ ವಿಷ್ಣೋಃ ಶತ್ರುವಧೇಷ್ವಿವ ॥೪೫॥

ಅರ್ಜುನನಿಗೆ ಆ ಕಾರ್ಯವು ಕೃಷ್ಣನ ಸಹಾಯವಿದ್ದ ಕಾರಣದಿಂದ ಕೃಷ್ಣನಿಗೆ ಕಂಸಾದಿಶತ್ರುವಧೆಯು ಅನಾಯಾಸವಾಗಿ ಜರುಗಿದಂತೆ, ಹೆಚ್ಚು ಪ್ರಯತ್ನವಿಲ್ಲದೆಯೇ ಜರುಗಿತು.

ಪಾರ್ಥಾಯಾಗ್ನಿರ್ದದೌ ತತ್ರ ಗಾಂಡೀವಂ ಧನುರುತ್ತಮಮ್ ।
ಇಷುಧೀ ಚಾಕ್ಷಯೌ ಬಾಣೈ ರಥಂ ಚ ಕಪಿಲಕ್ಷಣಮ್ ॥೪೬॥

ಅಗ್ನಿಯು ಅರ್ಜುನನಿಗೆ ಗಾಂಡೀವ ಧನುಸ್ಸನ್ನು, ಬಾಣಗಳಿಂದ ತುಂಬಿದ್ದ ಅಕ್ಷಯ ಬತ್ತಳಿಕೆಯನ್ನೂ, ಕಪಿಯ ಚಿಹ್ನೆಯನ್ನು ಧರಿಸಿದ್ದ ರಥವನ್ನೂ ಕೊಟ್ಟನು.

ಮೋಚಯಾಮಾಸ ಬೀಭತ್ಸುರ್ಮಯಂ ತತ್ರ ಮಹಾಸುರಮ್ ।
ಸ ಚಕಾರ ಸಭಾಂ ದಿವ್ಯಾಂ ಸರ್ವರತ್ನವಿಭೂಷಿತಾಮ್ ॥೪೭॥

ಖಾಂಡವದಹನಕಾಲದಲ್ಲಿ ಅರ್ಜುನನು ಮಹಾಸುರನಾದ ಮಯನನ್ನು ಅಗ್ನಿಯಿಂದ ಪಾರುಮಾಡಿದನು. ಮಯನು ಪಾಂಡವರ ಸಲುವಾಗಿ ಸರ್ವರತ್ನಭೂಷಿತವಾದ ದಿವ್ಯಸಭೆಯನ್ನು ನಿರ್ಮಾಣ ಮಾಡಿದನು.

ತಸ್ಯಾಂ ದುರ್ಯೋಧನಃ ಕ್ಷುದ್ರೋ ಲೋಭಂ ಚಕ್ರೇ ಸುದುರ್ಮತಿಃ ।
ತತೋಽಕ್ಷೈರ್ವಂಚಯಿತ್ವಾ ಚ ಸೌಬಲೇನ ಯುಧಿಷ್ಠಿರಮ್ ॥೪೮॥

ವನಂ ಪ್ರಸ್ಥಾಪಯಾಮಾಸ ಸಪ್ತವರ್ಷಾಣಿ ಪಂಚ ಚ ।
ಅಜ್ಞಾತಮೇಕಂ ರಾಷ್ಟ್ರೇ ತು ತತೋ ವರ್ಷಂ ತ್ರಯೋದಶಮ್ ॥೪೯॥

ನೀಚನೂ, ದುರ್ಬುದ್ಧಿಯೂ ಆದ ದುರ್ಯೋಧನನು ಆ ಸಭೆಯಲ್ಲಿ ದುರಾಸೆಯನ್ನು ಮಾಡಿದನು. ಅನಂತರ ಪಗಡೆಯ ಆಟದಲ್ಲಿ ಶಕುನಿಯಿಂದ ಧರ್ಮರಾಜನನ್ನು ವಂಚಿಸಿ ಹನ್ನೆರಡು ವರ್ಷ ವನವಾಸ ಮತ್ತು ಅನಂತರದ ಒಂದು ವರ್ಷ ಅಜ್ಞಾತವಾಸಕ್ಕಾಗಿ ಧರ್ಮರಾಜನನ್ನು ಕಳುಹಿಸಿದನು.

ಗತೇ ತ್ರಯೋದಶೇ ವರ್ಷೇ ಯಾಚಮಾನಾಃ ಸ್ವಕಂ ವಸು ।
ನಾಲಭಂತ ಮಹಾರಾಜ ತತೋ ಯುದ್ಧಮವರ್ತತ ॥೫೦॥

ಹದಿಮೂರು ವರ್ಷಗಳು ಕಳೆದಮೇಲೆ ತಮ್ಮ ಸಂಪತ್ತನ್ನು ಬೇಡಿದರೂ ಸಹ ಪಾಂಡವರು ಅದನ್ನು ಪಡೆಯಲಿಲ್ಲ. ಆ ಕಾರಣದಿಂದ ಯುದ್ಧವು ಜರುಗಿತು.

ತತಸ್ತೇ ಸರ್ವಮುತ್ಸಾದ್ಯ ಹತ್ವಾ ದುರ್ಯೋಧನಂ ರಣೇ ।
ರಾಜ್ಯಂ ತದಂತೇ ಭೂಯಿಷ್ಠಂ ಪ್ರತ್ಯಪದ್ಯಂತ ಪಾಂಡವಾಃ ॥೫೧॥

ಆಗ ಪಾಂಡವರು ಯುದ್ಧದಲ್ಲಿ ಎಲ್ಲರನ್ನೂ ಸಂಹರಿಸಿ, ದುರ್ಯೋಧನನನ್ನು ಕೊಂದು ತಮ್ಮ ಶ್ರೇಷ್ಠವಾದ ರಾಜ್ಯವನ್ನು ಮರಳಿ ಪಡೆದರು.

ಇಷ್ಟ್ವಾ ಕ್ರತೂಂಶ್ಚ ವಿವಿಧಾನಶ್ವಮೇಧಾದಿಕಾನ್ ಬಹೂನ್ ।
ಧೃತರಾಷ್ಟ್ರೇ ಗತೇ ಸ್ವರ್ಗಂ ವಿದುರೇ ಪಂಚತಾಂ ಗತೇ ॥೫೨॥

ಗಮಯಿತ್ವಾ ಸ್ತ್ರಿಯಃ ಸ್ವರ್ಗಂ ರಾಜ್ಞಾಮಮಿತತೇಜಸಾಮ್ ।
ವಾರ್ಷ್ಣೇಯೇ ನಿಲಯಂ ಪ್ರಾಪ್ತೇ ವಿಷ್ಣುದಾರಾನ್ ಪ್ರರಕ್ಷ್ಯ ಚ ।
ಮಹಾಪ್ರಸ್ಥಾನಿಕಾನ್ ಕೃತ್ವಾ ಗತಾಃ ಸ್ವರ್ಗಮನುತ್ತಮಮ್ ॥೫೩॥

ಅನಂತರ ಪಾಂಡವರು ಅಶ್ವಮೇಧಾದಿ ಅನೇಕ ಯಾಗಗಳನ್ನು ಮಾಡಿ ಧೃತರಾಷ್ಟ್ರನೂ, ವಿದುರನೂ ಸ್ವರ್ಗಸ್ಥರಾದ ಮೇಲೆ, ಅಮಿತಪರಾಕ್ರಮಿಗಳಾದ ಎಲ್ಲಾ ರಾಜರ ಪತ್ನಿಯರನ್ನೂ ಸ್ವರ್ಗಕ್ಕೆ ಕಳುಹಿಸಿ ಕೃಷ್ಣನೂ ಪರಂಧಾಮವನ್ನು ಸೇರಿದಮೇಲೆ, ಕೃಷ್ಣಪತ್ನಿಯರನ್ನು ರಕ್ಷಿಸಿ, ಮಹಾಪ್ರಸ್ಥಾನವನ್ನು ಮಾಡಿ ಶ್ರೇಷ್ಠವಾದ ಸ್ವರ್ಗವನ್ನು ಪಡೆದರು. ಅಂತ್ಯಕಾಲದಲ್ಲಿ ಭಗವತ್ ಪ್ರದಕ್ಷಿಣೆ, ಭಗವದರ್ಚನೆಗಳನ್ನು ನಡೆಸಿ ದೇಹವನ್ನು ಬೇರ್ಪಡಿಸುವುದು ಮಹಾಪ್ರಸ್ಥಾನವೆನಿಸಿದೆ.

ಏವಮೇತತ್ ಪುರಾವೃತ್ತಂ ತೇಷಾಮಕ್ಲಿಷ್ಟಕರ್ಮಣಾಮ್ ।
ಭೇದೋ ರಾಜ್ಯವಿನಾಶಶ್ಚ ಜಯಶ್ಚ ಜಯತಾಂವರ ॥೫೪॥

ಎಲೈ ವಿಜಯಿಗಳಲ್ಲಿ ಶ್ರೇಷ್ಠನೇ, ಅಕ್ಲಿಷ್ಟಕಾರಿಗಳಾದ ಪಾಂಡವರಿಗೆ ದುರ್ಯೋಧನಾದಿಗಳೊಟ್ಟಿಗೆ ವಿರೋಧವು, ಕೆಟ್ಟದಾದ ದ್ಯೂತವನ್ನು ಆಚರಿಸಿದ ಕಾರಣ ರಾಜ್ಯನಾಶವೂ ಪುನಃ ಕೊನೆಯಲ್ಲಿ ಜಯವೂ ಈ ರೀತಿಯಲ್ಲಿ ಹಿಂದೆ ನಡೆಯಿತು.

॥ ಇತಿ ಶ್ರೀಮನ್ಮಹಾಭಾರತೇ ಶತಸಹಸ್ರಿಕಾಯಾಂಸಂಹಿತಾಯಾಮಾದಿಪರ್ವಣಿ
ಚತುಃಪಂಚಾಶೋಽಧ್ಯಾಯಃ ॥
॥ ಇತಿ ಸಂಭವಪರ್ವಣಿ ದ್ವಿತೀಯೋಽಧ್ಯಾಯಃ ॥

ಇಲ್ಲಿಗೆ ಮಹಾಭಾರತದ ಆದಿಪರ್ವದಲ್ಲಿ ಐವತ್ನಾಲ್ಕನೆಯ ಅಧ್ಯಾಯ ಮುಗಿಯಿತು.

★★★★★

ಐವತ್ತೈದನೆಯ ಅಧ್ಯಾಯ

(ಭಾರತಪ್ರಶಂಸೆ ಮತ್ತು ಭಾರತಶ್ರವಣದ ಫಲನಿರೂಪಣೆ)

ಜನಮೇಜಯಃ

ಕಥಿತಂ ವೈ ಸಮಾಸೇನ ತ್ವಯಾ ಸರ್ವಂ ದ್ವಿಜೋತ್ತಮ ।
ಮಹಾಭಾರತಮಾಖ್ಯಾನಂ ಕುರೂಣಾಂ ಚರಿತಂ ಮಹತ್ ॥೧॥

ಎಲೈ ದ್ವಿಜೋತ್ತಮರಾದ ವೈಶಂಪಾಯನರೇ, ಕುರುಗಳ ಮಹಾಚರಿತ್ರೆಯಾದ ಮಹಾಭಾರತದ ಆಖ್ಯಾನವು ಸಂಕ್ಷೇಪವಾಗಿ ಹೇಳಲ್ಪಟ್ಟಿತು.

ಕಥಾಂ ತೇಷಾಂ ವಿಚಿತ್ರಾರ್ಥಾಮಿಮಾಂ ಕಥಯತಿ ತ್ವಯಿ ।
ವಿಸ್ತರಶ್ರವಣೇ ಜಾತಂ ಕೌತೂಹಲಮತೀವ ಮೇ ॥೨॥

ವಿಚಿತ್ರಾರ್ಥಗಳಿಂದ ಕೂಡಿರುವ ಈ ಕಥೆಯನ್ನು ನೀವು ಹೇಳುತ್ತಿರುವಂತೆಯೇ ಇದನ್ನು ವಿಸ್ತಾರವಾಗಿ ಕೇಳಬೇಕೆಂಬ ಕುತೂಹಲವು ನನಗೆ ಉಂಟಾಗಿದೆ.

ಸ ಭವಾನ್ ವಿಸ್ತರೇಣೇಮಾಂ ಪುನರಾಖ್ಯಾತುಮರ್ಹತಿ ।
ನ ಹಿ ತೃಪ್ಯಾಮಿ ಪೂರ್ವೇಷಾಂ ಶೃಣ್ವಾನಶ್ಚರಿತಂ ಮಹತ್ ॥೩॥

ತಾವು ಇದೇ ಕಥೆಯನ್ನು ಮತ್ತೆ ವಿಸ್ತಾರವಾಗಿ ಹೇಳಬೇಕು. ನಮ್ಮ ಪೂರ್ವಜರ ಮಹಾಚರಿತ್ರೆಯನ್ನು ಕೇಳುತ್ತಿರುವ ನನಗೆ ತೃಪ್ತಿಯೇ ಉಂಟಾಗುತ್ತಿಲ್ಲ.

ನ ತತ್ಕಾರಣಮಲ್ಪಂ ಹಿ ಧರ್ಮಜ್ಞಾ ಯತ್ರ ಪಾಂಡವಾಃ ।
ಅವಧ್ಯಾನ್ ಸರ್ವತೋ ಜಘ್ನುಃ ಪ್ರಶಸ್ಯಂತಶ್ಚ ಮಾನವೈಃ ॥೪॥

ಧರ್ಮವನ್ನು ತಿಳಿದವರೂ, ಎಲ್ಲ ಮನುಷ್ಯರಿಂದಲೂ ಸ್ತುತ್ಯರಾದವರೂ ಆದ ಪಾಂಡವರು ಅವಧ್ಯರಾದ ಗುರುಹಿರಿಯರನ್ನು ಸಂಹಾರಮಾಡಲು ಅಲ್ಪವಾದ ಕಾರಣವು ಇರಲಾರದು.

ಕಿಮರ್ಥಂ ತೇ ಮಹಾವೀರ್ಯಾಃ ಶಾಂತಾಃ ಸಂತೋಽಪ್ಯನಾಗಸಃ ।
ಪ್ರಯುಜ್ಯಮಾನಾನ್ ಸಂಕ್ಲೇಶಾನ್ ಕ್ಷಾಂತವಂತೋ ದುರಾತ್ಮಭಿಃ ॥೫॥

ಮಹಾಪರಾಕ್ರಮಶಾಲಿಗಳೂ, ಶಾಂತರೂ, ನಿರಪರಾಧಿಗಳೂ ಮತ್ತು ಸಜ್ಜನರೂ ಆದ ಅವರು ದುರಾತ್ಮರು ಕೊಟ್ಟ ಅನೇಕ ಪೀಡೆಗಳನ್ನು ಯಾವ ಕಾರಣದಿಂದ ಸಹಿಸಿದರು?

ಕಥಂ ನಾಗಾಯುತಬಲೋ ಬಾಹುಶಾ(ಷಾ)ಳೀ ವೃಕೋದರಃ ।
ಪರಿಕ್ಲಿಶ್ಯನ್ನಪಿ ಕ್ರೋಧಂ ಧೃತವಾನ್ ವೈ ಪರಂತಪಃ ॥೬॥

ಹತ್ತುಸಾವಿರ ಆನೆಯ ಬಲವುಳ್ಳವನೂ, ಶ್ರೇಷ್ಠಬಾಹುಬಲವುಳ್ಳವನೂ , ಶತ್ರುಸಂಹಾರಕನೂ ಆದ ಭೀಮನು ಪೀಡೆಗೆ ಒಳಗಾದರೂ ಸಹ ಹೇಗೆ ಕ್ರೋಧವನ್ನು ತಡೆದುಕೊಂಡನು?

ಕಥಂ ಸಾ ದ್ರೌಪದೀ ಕೃಷ್ಣಾ ಕ್ಲಿಶ್ಯಮಾನಾ ದುರಾತ್ಮಭಿಃ ।
ಶಕ್ತಾ ಸತೀ ಧಾರ್ತರಾಷ್ಟ್ರಾನ್ ನಾದಹದ್ ಘೋರಚಕ್ಷುಷಾ ॥೭॥

ದುರಾತ್ಮರಿಂದ ಪೀಡೆಗೊಳಗಾದ ಆ ದ್ರೌಪದಿಯು ಪೀಡೆಗೊಳಗಾದಾಗ ಆ ದುರ್ಯೋಧನಾದಿಗಳನ್ನು, ಸಮರ್ಥಳಾಗಿದ್ದರೂ ಸಹ ಏಕೆ ತನ್ನ ಘೋರ ದೃಷ್ಟಿಯಿಂದ ದಹಿಸಲಿಲ್ಲ?

ಕಥಂ ವ್ಯಸನಿನಂ ದ್ಯೂತೇ ಪಾರ್ಥೌ ಮಾದ್ರೀಸುತೌ ತದಾ ।
ಅನ್ವವ್ರಜಂತ ರಾಜಾನಂ ವಂಚ್ಯಮಾನಾ ದುರಾತ್ಮಭಿಃ ॥೮॥

ದುರಾತ್ಮರಿಂದ ವಂಚಿತರಾದ ಭೀಮಾರ್ಜುನರೂ ಮತ್ತು ಮಾದ್ರಿಯ ಮಕ್ಕಳಾದ ನಕುಲ ಸಹದೇವರೂ ದ್ಯೂತದ ಚಟವುಳ್ಳ ಧರ್ಮರಾಜನನ್ನು ಹೇಗೆ ಹಿಂಬಾಲಿಸಿದರು?

ಕಥಂ ಧರ್ಮಭೃತಾಂ ಶ್ರೇಷ್ಠಃ ಸುತೋ ಧರ್ಮಸ್ಯ ಧರ್ಮವಿತ್ ।
ಅನರ್ಹಃ ಪರಮಂ ಕ್ಲೇಶಂ ಸೋಢವಾನ್ ಸ ಯುಧಿಷ್ಠಿರಃ ॥೯॥

ಯಮಧರ್ಮನ ಮಗನಾದ, ಕ್ಲೇಶಗಳನ್ನು ಅನುಭವಿಸಲು ಅನರ್ಹನಾದ, ಧರ್ಮವೇತ್ತವಾದ ಯುಧಿಷ್ಠಿರನು ಹೇಗೆ (ಇಂತಹ) ಪರಮ ಕ್ಲೇಶಗಳನ್ನು ಸಹಿಸಿದನು?

ಕಥಂ ಚ ಬಹುಲಾಂ ಸೇನಾಂ ಪಾಂಡವಃ ಕೃಷ್ಣಸಾರಥಿಃ ।
ಅಸ್ಯನ್ನೇಕೋऽನಯತ್ ಸರ್ವಾಂ ಪಿತೃಲೋಕಂ ಧನಂಜಯಃ ॥೧೦॥

ಕೃಷ್ಣಸಾರಥಿಯಾಗಿದ್ದ, ಪಾಂಡುವಿನ ಮಗನಾದ ಧನಂಜಯನು ಹೇಗೆ ಒಬ್ಬನೇ ಬಾಣಪ್ರಯೋಗವನ್ನು ಮಾಡಿ ದೊಡ್ಡ ಸೇನೆಯನ್ನು ಗೆದ್ದು ಎಲ್ಲರನ್ನೂ ಪಿತೃಲೋಕಕ್ಕೆ ಕಳುಹಿಸಿದನು?

ಏತದಾಚಕ್ಷ್ವ ಮೇ ಸರ್ವಂ ಯಥಾವೃತ್ತಂ ತಪೋಧನ ।
ಯದ್ಯಚ್ಚ ಕೃತವಂತಸ್ತೇ ತತ್ರತತ್ರ ಮಹಾರಥಾಃ ॥೧೧॥

ಎಲೈ ತಪೋಧನರೇ, ಇವೆಲ್ಲವನ್ನೂ ಮತ್ತು ಆ ಮಹಾತ್ಮರು ಎಲ್ಲೆಲ್ಲಿ ಏನು ಮಾಡಿದರೆಂಬ ಎಲ್ಲಾ ವಿಷಯಗಳನ್ನೂ ಹೇಗೆ ಹೇಗೆ ನಡೆಯಿತೋ ಹಾಗೆಯೇ ನನಗೆ ಎಲ್ಲವನ್ನೂ ತಿಳಿಸಿ.

ವೈಶಂಪಾಯನಃ

ಮಹರ್ಷೇಃ ಸರ್ವಲೋಕಸ್ಯ ಪೂಜಿತಸ್ಯ ಮಹಾತ್ಮನಃ ।
ಪ್ರವಕ್ಷ್ಯಾಮಿ ಮತಂ ಕೃತ್ಸ್ನಂ ವ್ಯಾಸಸ್ಯಾಮಿತತೇಜಸಃ ॥೧೨॥

ಸರ್ವಲೋಕಪೂಜಿತರಾದ ಮಹಾತ್ಮರಾದ ವ್ಯಾಸಮಹರ್ಷಿಗಳ ಅಭಿಪ್ರಾಯದಂತೆಯೇ ಎಲ್ಲವನ್ನೂ ಸಮಗ್ರವಾಗಿ ತಿಳಿಸುತ್ತೇನೆ.

ಇದಂ ಶತಸಹಸ್ರಂ ಹಿ ಶ್ಲೋಕಾನಾಂ ಪುಣ್ಯಕರ್ಮಣಾಮ್ ।
ಉಪಾಖ್ಯಾನೈಃ ಸಹ ಜ್ಞೇಯಂ ಶ್ರಾವ್ಯಂ ಭಾರತಮುತ್ತಮಮ್ ॥೧೩॥

ಈ ಶ್ರೇಷ್ಠವಾದ ಮಹಾಭಾರತವು ಪುಣ್ಯಕಾರ್ಯವನ್ನು ಮಾಡಿದವರ ಉಪಾಖ್ಯಾನಗಳಿಂದ ಕೂಡಿ ಒಂದು ಲಕ್ಷ ಶ್ಲೋಕಾತ್ಮಕವಾಗಿದ್ದು ಕೇಳಲು ಬಹಳ ಸೊಗಸಾಗಿದೆ ಎಂದು ತಿಳಿಯಬೇಕು.

ಸಂಕ್ಷೇಪೇಣ ತು ವಕ್ಷ್ಯಾಮಿ ಸರ್ವಮೇತನ್ನರಾಧಿಪ ।
ಅಧ್ಯಾಯಾನಾಂ ಸಹಸ್ರೇ ದ್ವೇ ಪರ್ವಣಾಂ ಶತಮೇವ ಚ ॥೧೪॥

ಎಲೈ ರಾಜನೇ, ಇವೆಲ್ಲವನ್ನೂ ನಾನು ನಿನಗೆ ಸಂಕ್ಷೇಪವಾಗಿ ತಿಳಿಸುತ್ತೇನೆ. ಇದರಲ್ಲಿ ಎರಡು ಸಹಸ್ರ ಅಧ್ಯಾಯಗಳೂ, ಒಂದುನೂರು ಅವಾಂತರ ಪರ್ವಗಳೂ ಇವೆ.

ಕಿಮರ್ಥಂ ತೇ ಮಹಾವೀರ್ಯಾಃ ಶಾಂತಾಃ ಸಂತೋಽಪ್ಯನಾಗಸಃ ।
ಪ್ರಯುಜ್ಯಮಾನಾನ್ ಸಂಕ್ಲೇಶಾನ್ ಕ್ಷಾಂತವಂತೋ ದುರಾತ್ಮಭಿಃ ॥೫॥

ಮಹಾಪರಾಕ್ರಮಶಾಲಿಗಳೂ, ಶಾಂತರೂ, ನಿರಪರಾಧಿಗಳೂ ಮತ್ತು ಸಜ್ಜನರೂ ಆದ ಅವರು ದುರಾತ್ಮರು ಕೊಟ್ಟ ಅನೇಕ ಪೀಡೆಗಳನ್ನು ಯಾವ ಕಾರಣದಿಂದ ಸಹಿಸಿದರು?

ಕಥಂ ನಾಗಾಯುತಬಲೋ ಬಾಹುಶಾ(ಷಾ)ಳೀ ವೃಕೋದರಃ ।
ಪರಿಕ್ಲಿಶ್ಯನ್ನಪಿ ಕ್ರೋಧಂ ಧೃತವಾನ್ ವೈ ಪರಂತಪಃ ॥೬॥

ಹತ್ತುಸಾವಿರ ಆನೆಯ ಬಲವುಳ್ಳವನೂ, ಶ್ರೇಷ್ಠಬಾಹುಬಲವುಳ್ಳವನೂ , ಶತ್ರುಸಂಹಾರಕನೂ ಆದ ಭೀಮನು ಪೀಡೆಗೆ ಒಳಗಾದರೂ ಸಹ ಹೇಗೆ ಕ್ರೋಧವನ್ನು ತಡೆದುಕೊಂಡನು?

ಕಥಂ ಸಾ ದ್ರೌಪದೀ ಕೃಷ್ಣಾ ಕ್ಲಿಶ್ಯಮಾನಾ ದುರಾತ್ಮಭಿಃ ।
ಶಕ್ತಾ ಸತೀ ಧಾರ್ತರಾಷ್ಟ್ರಾನ್ ನಾದಹದ್ ಘೋರಚಕ್ಷುಷಾ ॥೭॥

ದುರಾತ್ಮರಿಂದ ಪೀಡೆಗೊಳಗಾದ ಆ ದ್ರೌಪದಿಯು ಪೀಡೆಗೊಳಗಾದಾಗ ಆ ದುರ್ಯೋಧನಾದಿಗಳನ್ನು, ಸಮರ್ಥಳಾಗಿದ್ದರೂ ಸಹ ಏಕೆ ತನ್ನ ಘೋರ ದೃಷ್ಟಿಯಿಂದ ದಹಿಸಲಿಲ್ಲ?

ಕಥಂ ವ್ಯಸನಿನಂ ದ್ಯೂತೇ ಪಾರ್ಥೌ ಮಾದ್ರೀಸುತೌ ತದಾ ।
ಅನ್ವವ್ರಜಂತ ರಾಜಾನಂ ವಂಚ್ಯಮಾನಾ ದುರಾತ್ಮಭಿಃ ॥೮॥

ದುರಾತ್ಮರಿಂದ ವಂಚಿತರಾದ ಭೀಮಾರ್ಜುನರೂ ಮತ್ತು ಮಾದ್ರಿಯ ಮಕ್ಕಳಾದ ನಕುಲ ಸಹದೇವರೂ ದ್ಯೂತದ ಚಟವುಳ್ಳ ಧರ್ಮರಾಜನನ್ನು ಹೇಗೆ ಹಿಂಬಾಲಿಸಿದರು?

ಕಥಂ ಧರ್ಮಭೃತಾಂ ಶ್ರೇಷ್ಠಃ ಸುತೋ ಧರ್ಮಸ್ಯ ಧರ್ಮವಿತ್ ।
ಅನರ್ಹಃ ಪರಮಂ ಕ್ಲೇಶಂ ಸೋಢವಾನ್ ಸ ಯುಧಿಷ್ಠಿರಃ ॥೯॥

ಯಮಧರ್ಮನ ಮಗನಾದ, ಕ್ಲೇಶಗಳನ್ನು ಅನುಭವಿಸಲು ಅನರ್ಹನಾದ, ಧರ್ಮವೇತ್ತವಾದ ಯುಧಿಷ್ಠಿರನು ಹೇಗೆ (ಇಂತಹ) ಪರಮ ಕ್ಲೇಶಗಳನ್ನು ಸಹಿಸಿದನು?

ಕಥಂ ಚ ಬಹುಲಾಂ ಸೇನಾಂ ಪಾಂಡವಃ ಕೃಷ್ಣಸಾರಥಿಃ ।
ಅಸ್ಯನ್ನೇಕೋऽನಯತ್ ಸರ್ವಾಂ ಪಿತೃಲೋಕಂ ಧನಂಜಯಃ ॥೧೦॥

ಕೃಷ್ಣಸಾರಥಿಯಾಗಿದ್ದ, ಪಾಂಡುವಿನ ಮಗನಾದ ಧನಂಜಯನು ಹೇಗೆ ಒಬ್ಬನೇ ಬಾಣಪ್ರಯೋಗವನ್ನು ಮಾಡಿ ದೊಡ್ಡ ಸೇನೆಯನ್ನು ಗೆದ್ದು ಎಲ್ಲರನ್ನೂ ಪಿತೃಲೋಕಕ್ಕೆ ಕಳುಹಿಸಿದನು?

ಏತದಾಚಕ್ಷ್ವ ಮೇ ಸರ್ವಂ ಯಥಾವೃತ್ತಂ ತಪೋಧನ ।
ಯದ್ಯಚ್ಚ ಕೃತವಂತಸ್ತೇ ತತ್ರತತ್ರ ಮಹಾರಥಾಃ ॥೧೧॥

ಎಲೈ ತಪೋಧನರೇ, ಇವೆಲ್ಲವನ್ನೂ ಮತ್ತು ಆ ಮಹಾತ್ಮರು ಎಲ್ಲೆಲ್ಲಿ ಏನು ಮಾಡಿದರೆಂಬ ಎಲ್ಲಾ ವಿಷಯಗಳನ್ನೂ ಹೇಗೆ ಹೇಗೆ ನಡೆಯಿತೋ ಹಾಗೆಯೇ ನನಗೆ ಎಲ್ಲವನ್ನೂ ತಿಳಿಸಿ.

ವೈಶಂಪಾಯನಃ

ಮಹರ್ಷೇಃ ಸರ್ವಲೋಕಸ್ಯ ಪೂಜಿತಸ್ಯ ಮಹಾತ್ಮನಃ ।
ಪ್ರವಕ್ಷ್ಯಾಮಿ ಮತಂ ಕೃತ್ಸ್ನಂ ವ್ಯಾಸಸ್ಯಾಮಿತತೇಜಸಃ ॥೧೨॥

ಸರ್ವಲೋಕಪೂಜಿತರಾದ ಮಹಾತ್ಮರಾದ ವ್ಯಾಸಮಹರ್ಷಿಗಳ ಅಭಿಪ್ರಾಯದಂತೆಯೇ ಎಲ್ಲವನ್ನೂ ಸಮಗ್ರವಾಗಿ ತಿಳಿಸುತ್ತೇನೆ.

ಇದಂ ಶತಸಹಸ್ರಂ ಹಿ ಶ್ಲೋಕಾನಾಂ ಪುಣ್ಯಕರ್ಮಣಾಮ್ ।
ಉಪಾಖ್ಯಾನೈಃ ಸಹ ಜ್ಞೇಯಂ ಶ್ರಾವ್ಯಂ ಭಾರತಮುತ್ತಮಮ್ ॥೧೩॥

ಈ ಶ್ರೇಷ್ಠವಾದ ಮಹಾಭಾರತವು ಪುಣ್ಯಕಾರ್ಯವನ್ನು ಮಾಡಿದವರ ಉಪಾಖ್ಯಾನಗಳಿಂದ ಕೂಡಿ ಒಂದು ಲಕ್ಷ ಶ್ಲೋಕಾತ್ಮಕವಾಗಿದ್ದು ಕೇಳಲು ಬಹಳ ಸೊಗಸಾಗಿದೆ ಎಂದು ತಿಳಿಯಬೇಕು.

ಸಂಕ್ಷೇಪೇಣ ತು ವಕ್ಷ್ಯಾಮಿ ಸರ್ವಮೇತನ್ನರಾಧಿಪ ।
ಅಧ್ಯಾಯಾನಾಂ ಸಹಸ್ರೇ ದ್ವೇ ಪರ್ವಣಾಂ ಶತಮೇವ ಚ ॥೧೪॥

ಎಲೈ ರಾಜನೇ, ಇವೆಲ್ಲವನ್ನೂ ನಾನು ನಿನಗೆ ಸಂಕ್ಷೇಪವಾಗಿ ತಿಳಿಸುತ್ತೇನೆ. ಇದರಲ್ಲಿ ಎರಡು ಸಹಸ್ರ ಅಧ್ಯಾಯಗಳೂ, ಒಂದುನೂರು ಅವಾಂತರ ಪರ್ವಗಳೂ ಇವೆ.

ಶ್ಲೋಕಾನಾಂ ತು ಸಹಸ್ರಾಣಿ ನವತಿಶ್ಚ ದಶೈವ ತು ।
ತತೋಽಷ್ಟಾದಶಭಿಃ ಪರ್ವೈಃ ಸಂಗೃಹೀತಂ ಮಹಾತ್ಮನಾ ॥೧೫॥

ತೊಂಭತ್ತುಸಾವಿರ ಮತ್ತು ಹತ್ತುಸಾವಿರ ಶ್ಲೋಕಗಳನ್ನೊಳಗೊಂಡ ಇದರಲ್ಲಿ ಮಹಾತ್ಮರಾದ ವ್ಯಾಸರು ಹದಿನೆಂಟು ಪರ್ವಗಳಲ್ಲಿ ಎಲ್ಲವನ್ನೂ ಸಂಗ್ರಹಿಸಿದ್ದಾರೆ.

ಯ ಇದಂ ಶ್ರಾವಯೇದ್ ವಿದ್ವಾನ್ ಯಶ್ಚೇದಂ ಶೃಣುಯಾನ್ನರಃ ।
ಸ ಪ್ರಾಪ್ಯ ಬ್ರಹ್ಮಣಃ ಸ್ಥಾನಂ ದೇವೈರ್ಯಾತಿ ಚ ತುಲ್ಯತಾಮ್ ॥೧೬॥

ಯಾರು ಈ ಭಾರತವನ್ನು ಪಾರಾಯಣ ಮಾಡುತ್ತಾರೋ ಮತ್ತು ಯಾರು ಕೇಳುತ್ತಾರೋ ಅವರು ಬ್ರಹ್ಮದೇವರ ಲೋಕವನ್ನು ಹೊಂದಿ ದೇವತೆಗಳಿಗೆ ಸಮಾನರಾಗುತ್ತಾರೆ

ಇದಂ ಹಿ ವೇದೈಃ ಸಮಿತಂ ಪವಿತ್ರಂ ಚೋತ್ತಮಂ ಮಹತ್ ।
ಶ್ರಾವ್ಯಾಣಾಮುತ್ತಮಂ ಶ್ರಾವ್ಯಂ ಪುರಾಣಮೃಷಿಸಂಸ್ತುತಮ್ ॥೧೭॥

ಶ್ರೇಷ್ಠವಾದ ಮತ್ತು ಪವಿತ್ರವಾದ ಈ ಭಾರತವು ಶ್ರವಣಮಾಡಬೇಕಾದುದರಲ್ಲಿ ಅತ್ಯಂತ ಶ್ರೇಷ್ಠವಾದುದು. ಇದು ಮಹರ್ಷಿಗಳಾದ ವ್ಯಾಸರಿಂದ ಪ್ರಣೀತವಾದ, ಕೇಳಲೇಬೇಕಾದ ಪುರಾಣ.

ಅಸ್ಮಿನ್ನರ್ಥಶ್ಚ ಧರ್ಮಶ್ಚ ನಿಖಿಲೇನೋಪದಿಶ್ಯತೇ ।
ಇತಿಹಾಸೇ ಮಹಾಪುಣ್ಯೇ ಬುದ್ಧಿಶ್ಚ ಪರಮಾರ್ಪಿತಾ ॥೧೮॥

ಈ ಮಹಾಪುಣ್ಯಪ್ರದವಾದ ಇತಿಹಾಸದಲ್ಲಿ ಅರ್ಥವೂ, ಧರ್ಮವೂ ಮತ್ತು ಭಗವದರ್ಪಿತವಾದ ಬುದ್ಧಿಯೂ ಸಮಗ್ರವಾಗಿ ನಿರೂಪಿತವಾಗಿದೆ.

ಅಕ್ಷುದ್ರಾನ್ ದಾನಶೀಲಾಂಶ್ಚ ಸತ್ಯಶೀಲಾನನಾಸ್ತಿಕಾನ್ ।
ಕಾರ್ಷ್ಣಂ ವೇದಮಿಮಂ ವಿದ್ವಾನ್ ಶ್ರಾವಯಿತ್ವಾಽರ್ಥಮಶ್ನುತೇ ॥೧೯॥

ವೇದವ್ಯಾಸರಿಂದ ರಚಿತವಾದ ವೇದವೆಂದೇ ಪ್ರಸಿದ್ಧವಾದ ಈ ಭಾರತವನ್ನು ಕ್ಷುದ್ರತನವಿಲ್ಲದ, ದಾನಶೀಲರಾದ, ಸತ್ಯಶೀಲರಾದ ಮತ್ತು ಆಸ್ತಿಕರಾದ ಜನರಿಗೆ ಶ್ರವಣಮಾಡಿಸಿದ ವಿದ್ವಾಂಸನು ಎಲ್ಲಾ ಪುರುಷಾರ್ಥಗಳನ್ನೂ ಪಡೆಯುತ್ತಾನೆ.

ಭ್ರೂಣಹತ್ಯಾಕೃತಂ ಪಾಪಂ ತಥಾ ಜಹ್ಯಾನ್ನ ಸಂಶಯಃ ।
ಇತಿಹಾಸಮಿಮಂ ಶ್ರುತ್ವಾ ಪುರುಷೋಽಪಿ ಸುದಾರುಣಃ ॥೨೦॥

ಅತ್ಯುಗ್ರವಾದ ಪುರುಷನೂ ಸಹ ಈ ಭಾರತವನ್ನು ಶ್ರವಣಮಾಡಿದರೆ ಭ್ರೂಣಹತ್ಯೆಯನ್ನು ಮಾಡಿದ ಪಾಪದಿಂದಲೂ ಸಹ ನಿಸ್ಸಂಶಯವಾಗಿ ನಿರ್ಮುಕ್ತನಾಗುತ್ತಾನೆ.

ಜಯೋ ನಾಮೇತಿಹಾಸೋಽಯಂ ಶ್ರೋತವ್ಯೋ ವಿಜಿಗೀಷುಣಾ ।
ಮಹೀಂ ವಿಜಯತೇ ಕೃತ್ಸ್ನಾಂ ಶತ್ರೂಂಶ್ಚಾಪ್ಯಧಿ ತಿಷ್ಠತಿ ॥೨೧॥

ಯುದ್ಧದಲ್ಲಿ ಜಯವನ್ನು ಬಯಸುವ ರಾಜನು ಜಯ ಎಂಬ ಹೆಸರಿನ ಈ ಇತಿಹಾಸವನ್ನು ಶ್ರವಣ ಮಾಡಿದರೆ ಸಮಗ್ರವಾದ ಭೂಮಿಯನ್ನು ಗೆಲ್ಲುತ್ತಾನೆ ಮತ್ತು ಶತ್ರುಗಳನ್ನು ಮೆಟ್ಟಿನಿಲ್ಲುತ್ತಾನೆ.

ಇದಂ ಪುಂಸವನಂ ಚೈವ ಇದಂ ಸ್ವಸ್ತ್ಯಯನಂ ಮಹತ್ ।
ಮಹರ್ಷಿಯುವರಾಜಾಭ್ಯಾಂ ಶ್ರೋತವ್ಯಂ ಸ್ಯಾತ್ ಪುನಃಪುನಃ ॥೨೨॥

ಇದರ ಶ್ರವಣವು ಪುಂ (ಗಂಡು) ಸಂತಾನವನ್ನು ತಂದುಕೊಡುತ್ತದೆ ಮತ್ತು ಪರಮ ಮಂಗಳಪ್ರದವಾಗಿದೆ. ಮಹರ್ಷಿಗಳೂ ಮತ್ತು ಯೌವನಸ್ಥರಾಜರೂ ಸಹ ಇದನ್ನು ಮತ್ತೆ ಮತ್ತೆ ಕೇಳಬೇಕು.

ಅರ್ಥಶಾಸ್ತ್ರಮಿದಂ ಪುಣ್ಯಂ ಧರ್ಮಶಾಸ್ತ್ರಮಿದಂ ಮಹತ್ ।
ಮೋಕ್ಷಶಾಸ್ತ್ರಮಿದಂ ಪ್ರೋಕ್ತಂ ವ್ಯಾಸೇನಾಮಿತತೇಜಸಾ ॥೨೩॥

ವ್ಯಾಸರು ಹೇಳಿದ ಈ ಭಾರತವು ಪುಣ್ಯಕರವಾದ ಅರ್ಥಶಾಸ್ತ್ರ. ಇದು ಮಹತ್ವದಿಂದ ಕೂಡಿದ ಧರ್ಮಶಾಸ್ತ್ರ ಇದು ಮೋಕ್ಷಶಾಸ್ತ್ರ.

ಧರ್ಮೇ ಚಾರ್ಥೇ ಚ ಕಾಮೇ ಚ ಮೋಕ್ಷೇ ಚ ಭರತರ್ಷಭ ।
ಯದಿಹಾಸ್ತಿ ತದನ್ಯತ್ರ ಯನ್ನೇಹಾಸ್ತಿ ನ ಕುತ್ರಚಿತ್ ॥೨೪॥

ಎಲೈ ಭರತರ್ಷಭನೇ, ಧರ್ಮ, ಅರ್ಥ, ಕಾಮ, ಮೋಕ್ಷಗಳ ವಿಷಯದಲ್ಲಿ ಇಲ್ಲಿ ಏನು ಹೇಳಲ್ಪಟ್ಟಿದೆಯೋ ಅದೇ ಬೇರೆ ಗ್ರಂಥಗಳಲ್ಲಿ ಹೇಳಲ್ಪಡುತ್ತದೆ. ಇಲ್ಲಿ ಯಾವುದನ್ನು ಹೇಳಿಲ್ಲವೋ ಅದು ಎಲ್ಲಿಯೂ ಇಲ್ಲ (ದೊರೆಯುವುದಿಲ್ಲ).

ಇದಂ ಹಿ ಬ್ರಾಹ್ಮಣೈರ್ಲೋಕೇ ಆಖ್ಯಾತಂ ಬ್ರಾಹ್ಮಣೇಷ್ವಿಹ ।
ಸಂಪ್ರತ್ಯಾಚಕ್ಷತೇ ಚೈವ ಕಥಯಿಷ್ಯಂತಿ ಚಾಪರೇ ॥೨೫॥

ಬ್ರಾಹ್ಮಣರಿಂದ ಬ್ರಾಹ್ಮಣರಿಗೆ ಹೇಳಲ್ಪಟ್ಟ ಈ ಭಾರತವನ್ನು ಈಗಲೂ ಕೆಲವರು ಪ್ರವಚನ ಮಾಡುತ್ತಾರೆ. ಇನ್ನೂ ಕೆಲವರು ಮುಂದೆಯೂ ಕಥೆಯ ರೂಪದಲ್ಲಿ ಹೇಳುತ್ತಾರೆ.

ಪುತ್ರಾಃ ಶುಶ್ರೂಷವಃ ಸಂತಿ ಪ್ರೇಷ್ಯಾಶ್ಚ ಪ್ರಿಯವಾದಿನಃ ।
ಭಾರತಾನಾಂ ಮಹಜ್ಜನ್ಮ ಶೃಣ್ವತೋ ಹ್ಯನಸೂಯಯಾ ॥೨೬॥

ಭರತಕುಲದಲ್ಲಿ ಹುಟ್ಟಿದವರ ಶ್ರೇಷ್ಠವಾದ ಜನ್ಮವನ್ನು ಅಸೂಯೆ ಇಲ್ಲದೆ ಕೇಳುವವರಿಗೆ ಹೇಳಿದ ಮಾತನ್ನು ಕೇಳುವ ಮತ್ತು ಸೇವೆ ಮಾಡುವ ಗಂಡುಮಕ್ಕಳೂ, ಪ್ರಿಯವನ್ನೇ ನುಡಿಯುವ ಸೇವಕರೂ ಉಂಟಾಗುತ್ತಾರೆ.

ಧನ್ಯಂ ಯಶಸ್ಯಮಾಯುಷ್ಯಂ ಸ್ವರ್ಗ್ಯಂ ಪುಣ್ಯಂ ತಥೈವ ಚ ।
ಶರೀರೇಣ ಕೃತಂ ಪಾಪಂ ವಾಚಾ ಚ ಮನಸೈವ ಚ ।
ಸರ್ವಂ ತ್ಯಜತಿ ಚ ಕ್ಷಿಪ್ರಮೇತತ್ ಶೃಣ್ವನ್ ನರಃ ಸದಾ ॥೨೭॥

ಈ ಭಾರತದ ಶ್ರವಣವು ಧನಪ್ರದವಾದದ್ದು, ಕೀರ್ತಿಪ್ರದವಾದದ್ದು, ದೀರ್ಘಾಯುಷ್ಯಪ್ರದವಾದದ್ದು ಮತ್ತು ಪುಣ್ಯಪ್ರದವಾದದ್ದು. ಇದರ ಶ್ರವಣದಿಂದ ಮನುಷ್ಯರು ಶರೀರ, ವಾಕ್ ಮತ್ತು ಮನಸ್ಸಿನಿಂದ ಮಾಡಿದ ಪಾಪಗಳು ಶೀಘ್ರವಾಗಿ ನಾಶಹೊಂದುತ್ತದೆ.

ಕೃಷ್ಣದ್ವೈಪಾಯನೇನೇದಂ ಕೃತಂ ಧರ್ಮಚಿಕೀರ್ಷುಣಾ ।
ಕೀರ್ತಿಂ ಪ್ರಥಯತಾ ಲೋಕೇ ಪಾಂಡವಾನಾಂ ಯಶಸ್ವಿನಾಮ್ ।
ಅನ್ಯೇಷಾಂ ಕ್ಷತ್ರಿಯಾಣಾಂ ಚ ಭೂರಿದ್ರವಿಣತೇಜಸಾಮ್ ॥೨೮॥

ಧರ್ಮಪ್ರದವಾಗಿರಬೇಕೆಂಬ ಉದ್ದೇಶದಿಂದ ವ್ಯಾಸರು ಯಶಸ್ವಿಗಳಾದ ಪಾಂಡವರ ಕೀರ್ತಿಯನ್ನು ಜಗತ್ತಿನಲ್ಲಿ ಹರಡುವುದಕ್ಕೆ ಮತ್ತು ಬಹಳ ಧನ ಮತ್ತು ಪರಾಕ್ರಮವುಳ್ಳ ಬೇರೆ ಕ್ಷತ್ರಿಯರ ಕೀರ್ತಿಯನ್ನು ಪ್ರಸರಿಸುವುದಕ್ಕೆ ರಚಿಸಿದರು.

ಯೋಽಧೀತೇ ಭಾರತಂ ಪುಣ್ಯಂ ಬ್ರಾಹ್ಮಣೋ ನಿಯತವ್ರತಃ ।
ಚತುರೋ ವಾರ್ಷಿಕಾನ್ ಮಾಸಾನ್ ಸರ್ವಪಾಪೈಃ ಪ್ರಮುಚ್ಯತೇ ॥೨೯॥

ಯಾವ ಬ್ರಾಹ್ಮಣನು ಮಳೆಗಾಲದ ನಾಲ್ಕು ತಿಂಗಳಲ್ಲಿ ನಿಯಮಬದ್ಧನಾಗಿ ಭಾರತವನ್ನು ಅಧ್ಯಯನ ಮಾಡುವನೋ ಅವನು ಸರ್ವಪಾಪಗಳಿಂದಲೂ ಮುಕ್ತನಾಗುವನು.

ವಿಜ್ಞೇಯಃ ಸರ್ವವೇದಾನಾಂ ಪಾರಣೇ ಭಾರತಂ ವದನ್ ।
ದೇವಾ ಬ್ರಹ್ಮರ್ಷಯೋ ಯತ್ರ ಪುಣ್ಯಾ ರಾಜರ್ಷಯಸ್ತಥಾ ॥೩೦॥

ಸರ್ವ ವೇದಗಳನ್ನು ಪಾರಾಯಣ ಮಾಡುವಾಗ ಯಾವನು ಭಾರತವನ್ನು ಪ್ರವಚನ ಮಾಡುತ್ತಾನೆಯೋ ಅವನು ವಿಶಿಷ್ಟ(ಉತ್ತಮ)ನೆಂದು ತಿಳಿಯಬೇಕು. ಇಲ್ಲಿ ಪಾವನರಾದ ದೇವತೆಗಳ, ಬ್ರಹ್ಮರ್ಷಿಗಳ ಮತ್ತು ರಾಜರ್ಷಿಗಳ ಕಥೆಯು ಹೇಳಲ್ಪಟ್ಟಿದೆ.

ದೇವಾ ಬ್ರಹ್ಮರ್ಷಯೋ ಯತ್ರ ಪುಣ್ಯಾ ರಾಜರ್ಷಯಸ್ತಥಾ ।
ಕೀರ್ತ್ಯಂತೇ ಹತಪಾಪ್ಮಾನಃ ಕೀರ್ತ್ಯಂತೇ ಕೇಶವಸ್ತಥಾ ॥೩೧॥

ಭಗವಾಂಶ್ಚಾಪಿ ದೇವೇಶೋ ಯತ್ರ ದೇವೀ ಚ ಕೀರ್ತ್ಯತೇ ।
ಅನೇಕಜನ್ಮನೋ ಯತ್ರ ಕಾರ್ತ್ತಿಕೇಯಸ್ಯ ಸಂಭವಃ ॥೩೨॥

ಪಾಪರಹಿತರಾದ ದೇವತೆಗಳು, ರಾಜರ್ಷಿಗಳು ಮತ್ತು ಬ್ರಹ್ಮರ್ಷಿಗಳು ಇಲ್ಲಿ ಕೀರ್ತಿಸಲ್ಪಡುತ್ತಾರೆ. (ಸರ್ವೋತ್ತಮನಾದ) ಭಗವಂತನಾದ ಕೇಶವನೂ, ದೇವಿಯೂ ಇಲ್ಲಿ ಕೀರ್ತಿಸಲ್ಪಡುತ್ತಾರೆ. ಅನೇಕ ಜನ್ಮಗಳುಳ್ಳ ಷಣ್ಮುಖನ ಅವತಾರವನ್ನೂ ಹೇಳಲಾಗಿದೆ. (ಗೌರೀ, ವಹ್ನಿ, ಶರೀರಗಳಲ್ಲಿ ಜನಿಸಿದ್ದರಿಂದ ಅನೇಕ ಜನ್ಮಗಳುಳ್ಳವನು ಕಾರ್ತಿಕೇಯ).

ಬ್ರಹ್ಮಣೋ ಭಾರ್ಗವಾನಾಂ ಚ ಮಾಹಾತ್ಮ್ಯಂ ಯತ್ರ ವರ್ಣ್ಯತೇ ।
ಸರ್ವಶ್ರುತಿಸಮೂಹೋಽಯಂ ಶ್ರೋತವ್ಯೋ ಧರ್ಮಬುದ್ಧಿಭಿಃ ॥೩೩॥

ವೇದಗಳ ಮತ್ತು ಭೃಗುಕುಲದಲ್ಲಿ ಉತ್ಪನ್ನರಾದವರ ಮಹಾತ್ಮೆಯು ಇಲ್ಲಿ ವರ್ಣಿತವಾಗಿದೆ. ಎಲ್ಲಾ ವೇದಗಳ ಸಾರವಾದ ಈ ಭಾರತವನ್ನು ಧರ್ಮಬುದ್ಧಿಯುಳ್ಳವರು ಕೇಳಬೇಕು.

ಯಶ್ಚೇದಂ ಪಠತೇ ವಿದ್ವಾನ್ ಸದಾ ಪರ್ವಸುಪರ್ವಸು ।
ಧೂತಪಾಪ್ಮಾ ಜಿತಸ್ವರ್ಗೋ ಬ್ರಹ್ಮಲೋಕಂ ಸ ಗಚ್ಛತಿ ॥೩೪॥

ಯಾವನು ಇದರ ಅರ್ಥಾನುಸಂಧಾನಪೂರ್ವಕವಾಗಿ ಯಾವಾಗಲೂ ಇದನ್ನು ಎಲ್ಲಾ ಪರ್ವಕಾಲಗಳಲ್ಲಿಯೂ ಓದುತ್ತಾನೆಯೋ ಅವನು ಪಾಪನಿಮುಕ್ತನಾಗಿ ಸ್ವರ್ಗಲೋಕವನ್ನೂ ಅನಂತರ ಬ್ರಹ್ಮಲೋಕವನ್ನೂ ಸೇರುತ್ತಾನೆ.

ಯಶ್ಚ ರಾಜಾ ಶೃಣೋತೀದಮಖಿಲಾಮಶ್ನುತೇ ಮಹೀಮ್ ।
ಪ್ರಸೂತೇ ಗರ್ಭಿಣೀ ಪುತ್ರಂ ಕನ್ಯಾ ಚಾಪು ಪ್ರದೀಯತೇ ।
ವಣಿಜಃ ಸಿದ್ಧಯಾತ್ರಾಃ ಸ್ಯುರ್ವೀರಾ ವಿಜಯಮಾಪ್ನುಯುಃ ॥೩೫॥

ಇದರ ಶ್ರವಣದಿಂದ ರಾಜನು ಸಮಗ್ರವಾದ ಭೂಮಿಜಯವನ್ನು ಹೊಂದುತ್ತಾನೆ. ಗರ್ಭಿಣಿಯು ಗಂಡುಮಗುವನ್ನು ಪಡೆಯುತ್ತಾಳೆ. ಕನ್ಯೆಯರಿಗೆ ಬೇಗ ವಿವಾಹಭಾಗ್ಯವು ಒದಗುತ್ತದೆ. ವರ್ತಕರು ತಮ್ಮ ವ್ಯಾಪಾರಾರ್ಥವಾದ ಯಾತ್ರೆಯಲ್ಲಿ ಯಶಸ್ಸನ್ನು ಗಳಿಸುತ್ತಾರೆ. ವೀರರು ಯುದ್ಧದಲ್ಲಿ ವಿಜಯವನ್ನು ಪಡೆಯುತ್ತಾರೆ.

ಆಸ್ತಿಕಾನ್ ಶ್ರಾವಯೇನ್ನಿತ್ಯಂ ಬ್ರಾಹ್ಮಣಾಂಶ್ಚಾನಸೂಯಕಾನ್ ।
ವೇದವಿದ್ಯಾವ್ರತಸ್ನಾತಾನ್ ಕ್ಷತ್ರಿಯಾನ್ ಜಯಮಾಸ್ಥಿತಾನ್ ।
ಸ್ವಧರ್ಮನಿತ್ಯಾನ್ ವೈಶ್ಯಾಂಶ್ಚ ಶ್ರಾವಯೇತ್ ಕ್ಷತ್ರಸಂಶ್ರಿತಾನ್ ॥೩೬॥

ಆಸ್ತಿಕರಾದ, ಅಸೂಯಾರಹಿತರಾದ, ವೇದವಿದ್ಯಾಸ್ನಾತರಾದ ಬ್ರಾಹ್ಮಣರಿಗೂ, ಜಯವನ್ನು ಬಯಸುವ ಕ್ಷತ್ರಿಯರಿಗೂ, ಸ್ವಧರ್ಮನಿರತರಾದ ಮತ್ತು ಕ್ಷತ್ರಿಯರನ್ನು ಅನುಸರಿಸುವ ವೈಶ್ಯರಿಗೂ ಈ ಕಥೆಯನ್ನು ಹೇಳಬೇಕು.

ಏಷ ಧರ್ಮಃ ಪುರಾ ದೃಷ್ಟಃ ಸರ್ವಧರ್ಮೇಷು ಭಾರತ ।
ಬ್ರಾಹ್ಮಣಾಚ್ಛ್ರವಣಂ ರಾಜನ್ ವಿಶೇಷೇಣ ವಿಧೀಯತೇ ॥೩೭॥

ಎಲ್ಲಾ ಧರ್ಮಶಾಸ್ತ್ರಗಳಲ್ಲಿಯೂ ಇದು ವಿಶೇಷವಾದ ಧರ್ಮವೆಂದು ಮೊದಲಿನಿಂದಲೂ ಹೇಳಲ್ಪಟ್ಟಿದೆ. ಎಲೈ ರಾಜನೇ, ಬ್ರಾಹ್ಮಣನ ಮುಖದಿಂದ ಶ್ರವಣಮಾಡುವುದನ್ನು ಎಲ್ಲಾ ಶಾಸ್ತ್ರಗಳೂ ವಿಶೇಷವಾಗಿ ವಿಧಾನಮಾಡುತ್ತವೆ.

ಭೂಯೋ ಭೂಯಃ ಪಠೇನ್ನಿತ್ಯಂ ಸ ಗಚ್ಛೇತ್ ಪರಮಾಂ ಗತಿಮ್ ।
ಶ್ಲೋಕಂ ವಾಪ್ಯನುಗೃಹ್ಣೀತ ತಥಾऽರ್ಧಶ್ಲೋಕಮೇವ ವಾ ।
ಅಪಿ ಪಾದಂ ಪಠೇನ್ನಿತ್ಯಂ ನ ಚ ನಿರ್ಭಾರತೋ ಭವೇತ್ ॥೩೮॥

ಮತ್ತೆ ಮತ್ತೆ ಭಾರತವನ್ನು ಪಠನ ಮಾಡುವವನು ಶ್ರೇಷ್ಠವಾದ ಗತಿಯನ್ನು ಹೊಂದುತ್ತಾನೆ. ಒಂದು ದಿನದಲ್ಲಿ ಭಾರತದ ಒಂದು ಶ್ಲೋಕವನ್ನಾಗಲೀ, ಅರ್ಧಶ್ಲೋಕವನ್ನಾಗಲೀ, ಕಾಲುಭಾಗ ಶ್ಲೋಕವನ್ನಾಗಲೀ ಪಠಿಸಬೇಕು. ಭಾರತವನ್ನು ಪಠಿಸದೆ ದಿನವನ್ನು ಕಳೆಯಬಾರದು.

ಇಹ ನೈಕಾಶ್ರಯಂ ಜನ್ಮ ರಾಜರ್ಷೀಣಾಂ ಮಹಾತ್ಮನಾಮ್ ।
ಇಹ ಮಂತ್ರವರಃ ಪ್ರೋಕ್ತೋ ಧರ್ಮಶ್ಚ ನೈಕದರ್ಶನಃ ॥೫೯॥

ಇಲ್ಲಿ ಮಹಾತ್ಮರಾದ ರಾಜರ್ಷಿಗಳ ಅನೇಕವಿಧವಾದ ಜನ್ಮವನ್ನು ಹೇಳಲಾಗಿದೆ. ಇಲ್ಲಿ ಶ್ರೇಷ್ಠವಾದ ಮಂತ್ರವೂ (ಮಂತ್ರಾಲೋಚನೆಯೂ) ಮತ್ತು ಅನೇಕ ಶಾಸ್ತ್ರಗಳಿಗೆ ಅನುಗುಣವಾದ ಧರ್ಮವೂ ಹೇಳಲ್ಪಟ್ಟಿದೆ.

ಚತುರೋ ವಾರ್ಷಿಕಾನ್ಮಾಸಾನ್ ಸರ್ವಪಾಪೈಃ ಪ್ರಮುಚ್ಯತೇ ।
ವಿಜ್ಞೇಯಃ ಸರ್ವವೇದಾನಾಂ ಪಾರಣೇ ಭಾರತಂ ವದನ್ ॥

ಇಹ ಯುದ್ಧಾನಿ ಚಿತ್ರಾಣಿ ರಾಜ್ಞಾಂ ವೃದ್ಧಿರಿಹೈವ ಚ ।
ಋಷೀಣಾಂ ಚ ಕಥಾಸ್ತಾತ ಇಹ ಗಂಧರ್ವರಕ್ಷಸಾಮ್ ।
ಇಹ ತತ್ತತ್ ಸಮಾಸಾದ್ಯ ವಿಹಿತೋ ವಾಕ್ಯವಿಸ್ತರಃ ॥೪೦॥

ಇಲ್ಲಿ ವಿಚಿತ್ರವಾದ ಯುದ್ಧಗಳೂ, ರಾಜರುಗಳ ಅಭಿವೃದ್ಧಿಯೂ, ಋಷಿಗಳ, ಗಂಧರ್ವರ ಮತ್ತು ರಾಕ್ಷಸರ ಕಥೆಯೂ ಹೇಳಲ್ಪಟ್ಟಿದೆ. ಇಲ್ಲಿ ಈ ಎಲ್ಲಾ ವಿಷಯಗಳನ್ನೂ ಚೆನ್ನಾಗಿ ತಿಳಿದು ವಾಕ್ಯವಿಸ್ತಾರವನ್ನು ಹೆಣೆಯಲಾಗಿದೆ.

ತೀರ್ಥಾನಾಮಿಹ ಪುಣ್ಯಾನಾಂ ದರ್ಶನಂ ಚೈವ ಕೀರ್ತಿತಮ್ ।
ವನಾನಾಂ ಪರ್ವತಾನಾಂ ಚ ನದೀನಾಂ ಚ ನದಸ್ಯ ಚ ॥೪೧॥

ದೇಶಾನಾಂ ಚೈವ ದಿವ್ಯಾನಾಂ ಪುರಾಣಾಂ ಚೈವ ಕೀರ್ತಿತಮ್ ।
ಉಪಚಾರಸ್ತಥೈವಾಗ್ರ್ಯೋ ಯುದ್ಧಮಪ್ರತಿಮಾನುಷಮ್ ॥೪೨॥

ಇಲ್ಲಿ ಪುಣ್ಯತೀರ್ಥಗಳ ದರ್ಶನವನ್ನು ಮಾಡಬೇಕೆಂಬುದನ್ನೂ , ವನಗಳು, ಪರ್ವತಗಳು, ನದಿಗಳು ಮತ್ತು ನದಗಳನ್ನೂ ವರ್ಣಿಸಲಾಗಿದೆ. ಅನೇಕ ದೇಶಗಳನ್ನೂ,

ದಿವ್ಯವಾದ ಪಟ್ಟಣಗಳನ್ನೂ ವರ್ಣಿಸಲಾಗಿದೆ. ಶ್ರೇಷ್ಠವಾದ ಅತಿಥಿಸತ್ಕಾರವನ್ನೂ ಮತ್ತು ಅಮಾನುಷವಾದ ಯುದ್ಧವನ್ನೂ ವರ್ಣಿಸಲಾಗಿದೆ.

ಇಹ ಸತ್ಕಾರಯೋಗಶ್ಚ ಭಾರತೇ ಪರಮರ್ಷಿಣಾ ।
ರಥಾಶ್ವೇಭನರೇಂದ್ರಾಣಾಂ ಕಲ್ಪನಾ ಯುದ್ಧಕೌಶಲಮ್ ।
ಅಶ್ವಜಾತಿರನೇಕಾ ಚ ಸರ್ವಮಸ್ಮಿನ್ ಸಮರ್ಪಿತಮ್ ॥೪೩॥

ಈ ಭಾರತದಲ್ಲಿ ವೇದವ್ಯಾಸರು ಸತ್ಕಾರದ ಪ್ರಕಾರಗಳನ್ನೂ, ಆನೆ, ಕುದುರೆ, ರಥ ಮತ್ತು ಕಾಲಾಳುಗಳ ಕಲ್ಪನೆಯನ್ನೂ ತಿಳಿಸಿದ್ದಾರೆ. ಯುದ್ಧಕೌಶಲವನ್ನೂ ಮತ್ತು ಅನೇಕ ಅಶ್ವಜಾತಿಗಳು ಮುಂತಾದ ಎಲ್ಲವನ್ನೂ ಇಲ್ಲಿ ವರ್ಣಿಸಲಾಗಿದೆ.

ಯಥಾ ಸಮುದ್ರೋ ಭಗವಾನ್ ಯಥಾ ಚ ಹಿಮವಾನ್ ಗಿರಿಃ ।
ಖ್ಯಾತೌ ರತ್ನಾಕರೌ ತದ್ವನ್ಮಹಾಭಾರತಮುಚ್ಯತೇ ॥೪೪॥

ಹೇಗೆ ಸಮುದ್ರವೂ ಮತ್ತು ಹಿಮಾಲಯ ಪರ್ವತವೂ ರತ್ನಾಕರಗಳೆಂದು ಪ್ರಸಿದ್ಧವಾಗಿವೆಯೋ ಹಾಗೆ ಮಹಾಭಾರತವು ಸೂಕ್ತಿರತ್ನಾಕರವೆಂದು ಪ್ರಸಿದ್ಧವಾಗಿದೆ.

ನಾಪ್ರೀತಿರುಪಪದ್ಯೇತ ಯಥಾ ಪ್ರಾಪ್ಯ ತ್ರಿವಿಷ್ಟಪಮ್ ।
ಪುಣ್ಯಂ ತಥೇದಮಾಖ್ಯಾನಂ ಶ್ರುತ್ವಾ ಪ್ರೀತಿರ್ಭವತ್ಯುತ ।
ಕುಲಸ್ಯ ವೃದ್ಧಯೇ ರಾಜನ್ನಾಯುಷೋ ವಿಜಯಾಯ ಚ ॥೪೫॥

ಸ್ವರ್ಗಲೋಕವನ್ನು ಹೊಂದಿದವರು ಹೇಗೆ ಅಸಮಾಧಾನಪಡಲು ಕಾರಣವಿಲ್ಲವೋ ಹಾಗೆಯೇ ಈ ಮಹಾಭಾರತವನ್ನು ಶ್ರವಣಮಾಡಿ ಅಸಂತೋಷದಿಂದಿರಲು ಸಾಧ್ಯವಿಲ್ಲ. ಇದರಿಂದ ಕುಲದ ವೃದ್ಧಿಯೂ, ಆಯುಸ್ಸಿನ ವೃದ್ಧಿಯೂ ಮತ್ತು ವಿಜಯವೂ ಉಂಟಾಗುತ್ತದೆ.

ಶೃಣು ಕೀರ್ತಯತಃ ಕೃತ್ಸ್ನಮಿತಿಹಾಸಂ ಪುರಾತನಮ್ ।
ಶ್ರಾವಯೋಬ್ರಾಹ್ಮಣಾನ್ ಶ್ರಾದ್ಧೇ ಯಶ್ಚೇಮಂ ಪಾದಮಂತತಃ ॥೪೬॥

ಈ ಸಮಗ್ರವಾದ ಆಖ್ಯಾನವನ್ನು ಹೇಳುವವರಿಗೆ ಮತ್ತು ಪಿತೃಕಾರ್ಯಸಂದರ್ಭದಲ್ಲಿ ಬ್ರಾಹ್ಮಣರನ್ನುದ್ದೇಶಿಸಿ ಒಂದು ಪಾದವನ್ನಾದರೂ ಹೇಳುವವರಿಗೆ ಉಂಟಾಗುವ ಫಲವನ್ನು ಕೇಳು.

ಅಕ್ಷಯಂ ಸ್ವರ್ಗಗಾಮೀಯಮುಪಾವರ್ತೇತ್ ಪಿತೄನಿಹ ।
ಪ್ರಾತರ್ಯದೇನಃ ಕುರುತೇ ಇಂದ್ರಿಯೈರ್ಬ್ರಾಹ್ಮಣಶ್ಚರನ್ ॥೪೭॥

ಮಹಾಭಾರತಮಾಖ್ಯಾಯ ಪಶ್ಚಾತ್ ಸಂಧ್ಯಾಂ ಪ್ರಮುಚ್ಯತೇ ।
ರಾತ್ರ್ಯಾಂ ಯದೇನಃ ಕುರುತ ಇಂದ್ರಿಯೈರ್ಬ್ರಾಹ್ಮಣಶ್ಚರನ್ ।
ಮಹಾಭಾರತಮಾಖ್ಯಾಯ ಪೂರ್ವಾಂ ಸಂಧ್ಯಾಂ ಪ್ರಮುಚ್ಯತೇ ॥

ಸ್ವರ್ಗಕ್ಕೆ ಹೋಗುವವರು ಅಪೇಕ್ಷಿಸುವ ಅಕ್ಷಯವಾದ ಪುಣ್ಯವು ದೊರೆಯುತ್ತದೆ. ಪ್ರಾತಃಕಾಲದಲ್ಲಿ ಮಾಡಿದ ಪಾಪಗಳು ಸಾಯಂಕಾಲದಲ್ಲಿ ಭಾರತವನ್ನು ಹೇಳುವುದರಿಂದ ಸಾಯಂಕಾಲದಲ್ಲಿ ನಾಶವಾಗುತ್ತವೆ. ಹಾಗೆಯೇ ರಾತ್ರಿಯಕಾಲದಲ್ಲಿ ಮಾಡಿದ ಪಾಪಗಳು ಪ್ರಾತಃಕಾಲದಲ್ಲಿ ಭಾರತವನ್ನು ಹೇಳುವುದರಿಂದ ಪ್ರಾತಃಕಾಲದಲ್ಲಿ ನಾಶಹೊಂದುತ್ತವೆ.

[೧]ಭಾರತಾನಾಂ ಮಹಜ್ಜನ್ಮ ಮಹಾಭಾರತಮುಚ್ಯತೇ ।
ನಿರುಕ್ತಮಸ್ಯ ಯೋ ವೇದ ಸರ್ವಪಾಪೈಃ ಪ್ರಮುಚ್ಯತೇ ॥೪೯॥

ತ್ರಿಭರ್ವರ್ಷೈರ್ಮಹಾರಾಜ ಕೃಷ್ಣದ್ವೈಪಾಯೋಽಬ್ರವೀತ್ ।
ನಿತ್ಯೋತ್ಥಿತೋ ಮಹಾಯೋಗೀ ಮಹಾಭಾರತಮಾದಿತಃ ॥೫೦॥

೧ ಮಹತ್ತ್ವಾತ್ ಭಾರವತ್ತ್ವಾಚ್ಚ, ಪಾಠಾಂತರ

ವೇದವ್ಯಾಸರು ಅವತಾರ ಮಾಡಿದ ನಂತರ ಮೂರನೆಯ ವರ್ಷದಲ್ಲಿ ಮಹಾಭಾರತವನ್ನು ರಚಿಸಿದರು. ಭರತವಂಶದಲ್ಲಿ ಜನಿಸಿದವರ ಶ್ರೇಷ್ಠವಾದ ಜನ್ಮವನ್ನು ನಿರೂಪಿಸುವುದರಿಂದ ಇದಕ್ಕೆ ಮಹಾಭಾರತವೆಂದು ಹೆಸರು. ಈ ನಿರ್ವಚನವನ್ನು ತಿಳಿದವನು ಸರ್ವಪಾಪಗಳಿಂದಲೂ ನಿರ್ಮುಕ್ತನಾಗುತ್ತಾನೆ.

॥ ಇತಿ ಶ್ರೀಮನ್ಮಹಾಭಾರತೇ ಶತಸಹಸ್ರಿಕಾಯಾಂಸಂಹಿತಾಯಾಮಾದಿಪರ್ವಣಿ
ಪಂಚಪಂಚಾಶತ್ತಮೋಽಧ್ಯಾಯಃ ॥
॥ ಇತಿ ಸಂಭವಪರ್ವಣಿ ತೃತೀಯೋಽಧ್ಯಾಯಃ ॥

ಇಲ್ಲಿಗೆ ಮಹಾಭಾರತದ ಆದಿಪರ್ವದಲ್ಲಿ ಐವತ್ತೈದನೆಯ ಅಧ್ಯಾಯ ಮುಗಿಯಿತು.

★★★★★

ದಿವ್ಯವಾದ ಪಟ್ಟಣಗಳನ್ನೂ ವರ್ಣಿಸಲಾಗಿದೆ. ಶ್ರೇಷ್ಠವಾದ ಅತಿಥಿಸತ್ಕಾರವನ್ನೂ ಮತ್ತು ಅಮಾನುಷವಾದ ಯುದ್ಧವನ್ನೂ ವರ್ಣಿಸಲಾಗಿದೆ.

ಇಹ ಸತ್ಕಾರಯೋಗಶ್ಚ ಭಾರತೇ ಪರಮರ್ಷಿಣಾ ।
ರಥಾಶ್ವೇಭನರೇಂದ್ರಾಣಾಂ ಕಲ್ಪನಾ ಯುದ್ಧಕೌಶಲಮ್ ।
ಅಶ್ವಜಾತಿರನೇಕಾ ಚ ಸರ್ವಮಸ್ಮಿನ್ ಸಮರ್ಪಿತಮ್ ॥೪೩॥

ಈ ಭಾರತದಲ್ಲಿ ವೇದವ್ಯಾಸರು ಸತ್ಕಾರದ ಪ್ರಕಾರಗಳನ್ನೂ, ಆನೆ, ಕುದುರೆ, ರಥ ಮತ್ತು ಕಾಲಾಳುಗಳ ಕಲ್ಪನೆಯನ್ನೂ ತಿಳಿಸಿದ್ದಾರೆ. ಯುದ್ಧಕೌಶಲವನ್ನೂ ಮತ್ತು ಅನೇಕ ಅಶ್ವಜಾತಿಗಳು ಮುಂತಾದ ಎಲ್ಲವನ್ನೂ ಇಲ್ಲಿ ವರ್ಣಿಸಲಾಗಿದೆ.

ಯಥಾ ಸಮುದ್ರೋ ಭಗವಾನ್ ಯಥಾ ಚ ಹಿಮವಾನ್ ಗಿರಿಃ ।
ಖ್ಯಾತೌ ರತ್ನಾಕರೌ ತದ್ವನ್ಮಹಾಭಾರತಮುಚ್ಯತೇ ॥೪೪॥

ಹೇಗೆ ಸಮುದ್ರವೂ ಮತ್ತು ಹಿಮಾಲಯ ಪರ್ವತವೂ ರತ್ನಾಕರಗಳೆಂದು ಪ್ರಸಿದ್ಧವಾಗಿವೆಯೋ ಹಾಗೆ ಮಹಾಭಾರತವು ಸೂಕ್ತಿರತ್ನಾಕರವೆಂದು ಪ್ರಸಿದ್ಧವಾಗಿದೆ.

ನಾಪ್ರೀತಿರುಪಪದ್ಯೇತ ಯಥಾ ಪ್ರಾಪ್ಯ ತ್ರಿವಿಷ್ಟಪಮ್ ।
ಪುಣ್ಯಂ ತಥೇದಮಾಖ್ಯಾನಂ ಶ್ರುತ್ವಾ ಪ್ರೀತಿರ್ಭವತ್ಯುತ ।
ಕುಲಸ್ಯ ವೃದ್ಧಯೇ ರಾಜನ್ನಾಯುಷೋ ವಿಜಯಾಯ ಚ ॥೪೫॥

ಸ್ವರ್ಗಲೋಕವನ್ನು ಹೊಂದಿದವರು ಹೇಗೆ ಅಸಮಾಧಾನಪಡಲು ಕಾರಣವಿಲ್ಲವೋ ಹಾಗೆಯೇ ಈ ಮಹಾಭಾರತವನ್ನು ಶ್ರವಣಮಾಡಿ ಅಸಂತೋಷದಿಂದಿರಲು ಸಾಧ್ಯವಿಲ್ಲ. ಇದರಿಂದ ಕುಲದ ವೃದ್ಧಿಯೂ, ಆಯುಸ್ಸಿನ ವೃದ್ಧಿಯೂ ಮತ್ತು ವಿಜಯವೂ ಉಂಟಾಗುತ್ತದೆ.

ಶೃಣು ಕೀರ್ತಯತಃ ಕೃತ್ಸ್ನಮಿತಿಹಾಸಂ ಪುರಾತನಮ್ ।
ಶ್ರಾವಯೋಬ್ರಾಹ್ಮಣಾನ್ ಶ್ರಾದ್ಧೇ ಯಶ್ಚೇಮಂ ಪಾದಮಂತತಃ ॥೪೬॥

ಈ ಸಮಗ್ರವಾದ ಆಖ್ಯಾನವನ್ನು ಹೇಳುವವರಿಗೆ ಮತ್ತು ಪಿತೃಕಾರ್ಯಸಂದರ್ಭದಲ್ಲಿ ಬ್ರಾಹ್ಮಣರನ್ನುದ್ದೇಶಿಸಿ ಒಂದು ಪಾದವನ್ನಾದರೂ ಹೇಳುವವರಿಗೆ ಉಂಟಾಗುವ ಫಲವನ್ನು ಕೇಳು.

ಅಕ್ಷಯಂ ಸ್ವರ್ಗಗಾಮೀಯಮುಪಾವರ್ತೇತ್ ಪಿತೄನಿಹ ।
ಪ್ರಾತರ್ಯದೇನಃ ಕುರುತೇ ಇಂದ್ರಿಯೈರ್ಬ್ರಾಹ್ಮಣಶ್ಚರನ್ ॥೪೭॥

ಮಹಾಭಾರತಮಾಖ್ಯಾಯ ಪಶ್ಚಾತ್ ಸಂಧ್ಯಾಂ ಪ್ರಮುಚ್ಯತೇ ।
ರಾತ್ರ್ಯಾಂ ಯದೇನಃ ಕುರುತ ಇಂದ್ರಿಯೈರ್ಬ್ರಾಹ್ಮಣಶ್ಚರನ್ ।
ಮಹಾಭಾರತಮಾಖ್ಯಾಯ ಪೂರ್ವಾಂ ಸಂಧ್ಯಾಂ ಪ್ರಮುಚ್ಯತೇ ॥

ಸ್ವರ್ಗಕ್ಕೆ ಹೋಗುವವರು ಅಪೇಕ್ಷಿಸುವ ಅಕ್ಷಯವಾದ ಪುಣ್ಯವು ದೊರೆಯುತ್ತದೆ. ಪ್ರಾತಃಕಾಲದಲ್ಲಿ ಮಾಡಿದ ಪಾಪಗಳು ಸಾಯಂಕಾಲದಲ್ಲಿ ಭಾರತವನ್ನು ಹೇಳುವುದರಿಂದ ಸಾಯಂಕಾಲದಲ್ಲಿ ನಾಶವಾಗುತ್ತವೆ. ಹಾಗೆಯೇ ರಾತ್ರಿಯಕಾಲದಲ್ಲಿ ಮಾಡಿದ ಪಾಪಗಳು ಪ್ರಾತಃಕಾಲದಲ್ಲಿ ಭಾರತವನ್ನು ಹೇಳುವುದರಿಂದ ಪ್ರಾತಃಕಾಲದಲ್ಲಿ ನಾಶಹೊಂದುತ್ತವೆ.

[೧]ಭಾರತಾನಾಂ ಮಹಜ್ಜನ್ಮ ಮಹಾಭಾರತಮುಚ್ಯತೇ ।
ನಿರುಕ್ತಮಸ್ಯ ಯೋ ವೇದ ಸರ್ವಪಾಪೈಃ ಪ್ರಮುಚ್ಯತೇ ॥೪೯॥

ತ್ರಿಭಿರ್ವರ್ಷೈರ್ಮಹಾರಾಜ ಕೃಷ್ಣದ್ವೈಪಾಯೋಽಬ್ರವೀತ್ ।
ನಿತ್ಯೋತ್ಥಿತೋ ಮಹಾಯೋಗೀ ಮಹಾಭಾರತಮಾದಿತಃ ॥೫೦॥

೧ ಮಹತ್ತ್ವಾತ್ ಭಾರವತ್ತ್ವಾಚ್ಚ, ಪಾಠಾಂತರ

ವೇದವ್ಯಾಸರು ಅವತಾರ ಮಾಡಿದ ನಂತರ ಮೂರನೆಯ ವರ್ಷದಲ್ಲಿ ಮಹಾಭಾರತವನ್ನು ರಚಿಸಿದರು. ಭರತವಂಶದಲ್ಲಿ ಜನಿಸಿದವರ ಶ್ರೇಷ್ಠವಾದ ಜನ್ಮವನ್ನು ನಿರೂಪಿಸುವುದರಿಂದ ಇದಕ್ಕೆ ಮಹಾಭಾರತವೆಂದು ಹೆಸರು. ಈ ನಿರ್ವಚನವನ್ನು ತಿಳಿದವನು ಸರ್ವಪಾಪಗಳಿಂದಲೂ ನಿರ್ಮುಕ್ತನಾಗುತ್ತಾನೆ.

॥ ಇತಿ ಶ್ರೀಮನ್ಮಹಾಭಾರತೇ ಶತಸಹಸ್ರಿಕಾಯಾಂಸಂಹಿತಾಯಾಮಾದಿಪರ್ವಣಿ
ಪಂಚಪಂಚಾಶತ್ತಮೋಽಧ್ಯಾಯಃ ॥
॥ ಇತಿ ಸಂಭವಪರ್ವಣಿ ತೃತೀಯೋಽಧ್ಯಾಯಃ ॥

ಇಲ್ಲಿಗೆ ಮಹಾಭಾರತದ ಆದಿಪರ್ವದಲ್ಲಿ ಐವತ್ತೈದನೆಯ ಅಧ್ಯಾಯ ಮುಗಿಯಿತು.

★★★★★

ಐವತ್ತಾರನೆಯ ಅಧ್ಯಾಯ

(ಪುರುವಂಶ ನಿರೂಪಣೆ)

ವೈಶಂಪಾಯನಃ

ಪುರೋರ್ವಂಶಂ ಮಹಾಧನ್ಯಂ ರಾಜ್ಞಾಮಮಿತತೇಜಸಾಮ್ ।
ಪ್ರವಕ್ಷ್ಯಾಮಿ ಪಿತೄಣಾಂ ತೇ ತೇಷಾಂ ನಾಮಾನಿ ಮೇ ಶೃಣು ॥೧॥

ಮಹಾಧನ್ಯವಾದ ಪುರುವಂಶವನ್ನೂ ಅದರಲ್ಲಿ ಜನಿಸಿದ ಮಹಾಪರಾಕ್ರಮಶಾಲಿ ರಾಜರುಗಳಾದ ನಿನ್ನ ಪಿತೃಗಳ ಹೆಸರುಗಳನ್ನೂ ನಾನು ಹೇಳುತ್ತೇನೆ ಕೇಳು.

ಅವ್ಯಕ್ತಪ್ರಭವೋ ಬ್ರಹ್ಮಾ ಶಾಶ್ವತೋ ನಿತ್ಯ ಅವ್ಯಯಃ ।
ತಸ್ಮಾನ್ಮರೀಚಿಃ ಸಂಜಜ್ಞೇ ದಕ್ಷಶ್ಚೈವ ಪ್ರಜಾಪತಿಃ ॥೨॥

ಅವ್ಯಕ್ತಸ್ವಭಾವದವನಾದ ನಾರಾಯಣನಿಂದ ನಾರಾಯಣನಂತೆ ಶಾಶ್ವತನೂ, ನಿತ್ಯನೂ, ಅವ್ಯಯನೂ ಆದ ಬ್ರಹ್ಮನು ಜನಿಸಿದನು. ಬ್ರಹ್ಮನಿಂದ ಮರೀಚಿಗಳೂ ಮತ್ತು ದಕ್ಷಪ್ರಜಾಪತಿಯೂ ಜನಿಸಿದರು.

ಅಂಗುಷ್ಠಾದ್ ದಕ್ಷಮಸೃಜಚ್ಚಕ್ಷುಭ್ಯಾಂ ಚ ಮರೀಚಿನಮ್ ।
ಮರೀಚೇಃ ಕಾಶ್ಯಪಃ ಪುತ್ರೋ ದಕ್ಷಸ್ಯ ದುಹಿತಾऽದಿತಿಃ ॥೩॥

ಬ್ರಹ್ಮನು ಅಂಗುಷ್ಠದಿಂದ ದಕ್ಷನನ್ನೂ, ನೇತ್ರಗಳಿಂದ ಮರೀಚಿಗಳನ್ನೂ ಸೃಜಿಸಿದನು. ಮರೀಚಿಯ ಮಕ್ಕಳು ಕಶ್ಯಪರು. ದಕ್ಷನ ಮಗಳು ಅದಿತಿ.

ಅದಿತ್ಯಾಂ ಕಾಶ್ಯಪಸ್ಯ ವಿವಸ್ವಾನ್ । ವಿವಸ್ವತೋ ಮನುಃ ಮನೋ-
ರಿಳಾ ॥ ಇಳಾಯಾಃ ಪುರೂರವಾಃ । ಪುರೂರವಸ ಆಯುಃ ।
ಆಯುಷೋ ನಹುಷಃ । ನಹುಷಸ್ಯ ಯಯಾತಿಃ ॥೪॥

ಕಶ್ಯಪರಿಗೆ ಅದಿತಿಯಲ್ಲಿ ವಿವಸ್ವಂತನು ಪುತ್ರನಾಗಿ ಜನಿಸಿದನು. ವಿವಸ್ವಂತನ ಮಗ ಮನು. ಮನುವಿನ ಮಗಳು ಇಳಾ. ಇಳೆಯ ಮಗ ಪುರೂರವ. ಪುರೂರವನ ಮಗ ಆಯು. ಆಯವಿನ ಮಗ ನಹುಷ. ನಹುಷನ ಮಗ ಯಯಾತಿ.

ಯಯಾತೇರ್ದ್ವೇ ಭಾರ್ಯೇ ಬಭೂವತುಃ । ಉಶನಸೋ ದುಹಿತಾ
ದೇವಯಾನೀ । ವೃಷಪರ್ವಣಶ್ಚ ದುಹಿತಾ ಶರ್ಮಿಷ್ಠಾ ನಾಮ ॥೫॥

ಯಯಾತಿಗೆ ಇಬ್ಬರು ಪತ್ನಿಯರಿದ್ದರು. ಶುಕ್ರಾಚಾರ್ಯರ ಮಗಳಾದ ದೇವಯಾನಿ ಒಬ್ಬಳು. ವೃಷಪರ್ವನ ಮಗಳಾದ ಶರ್ಮಿಷ್ಠೆ ಇನ್ನೊಬ್ಬಳು.

ತತ್ರಾನುವಂಶೋ ಭವತಿ ॥೬॥

ಯದುಂ ಚ ತುರ್ವಶುಂ ಚೋಭೌ ದೇವಯಾನೀ ವ್ಯಜಾಯತ ।
ದ್ರುಹ್ಯುಂ ಚಾನುಂ ಚ ಪೂರುಂ ಚ ಶರ್ಮಿಷ್ಠಾ ವಾರ್ಷಪರ್ವಣೀ ॥೭॥

ಈ ವಂಶವನ್ನು ವರ್ಣನೆ ಮಾಡಲು ಅನುಕೂಲವಾದ ಶ್ಲೋಕ ಹೀಗಿದೆ - ದೇವಯಾನಿಯು ಯದು ಮತ್ತು ತುರ್ವಶು ಎಂಬ ಎರಡು ಮಕ್ಕಳನ್ನು ಪಡೆದಳು. ವೃಷಪರ್ವನ ಮಗಳಾದ ಶರ್ಮಿಷ್ಠೆಯು ದ್ರುಹ್ಯು, ಅನು, ಮತ್ತು ಪೂರು ಎಂಬ ಮೂರು ಮಕ್ಕಳನ್ನು ಪಡೆದಳು.

ತತ್ರ ಯದೋರ್ಯಾದವಾಃ । ಪೂರೋಃ ಪೌರವಾಃ ।
ಪೂರೋರ್ಭಾರ್ಯಾ ಕೌಸಲ್ಯಾ ಬಭೂವ ।
ತಸ್ಯಾಮಸ್ಯ ಜಜ್ಞೇ ಜನಮೇಜಯಃ ॥೮॥

ಅವರಲ್ಲಿ ಯದುವಿನಿಂದ ಯಾದವರು ಜನಿಸಿದರು. ಪೂರುವಿನಿಂದ ಪೌರವರು. ಪೂರುವಿನ ಪತ್ನಿ ಕೋಸಲದೇಶದ ರಾಜಕುಮಾರಿ. ಅವಳಲ್ಲಿ ಅವನಿಗೆ ಜನಮೇಜಯನು ಜನಿಸಿದನು.

ಸ ತ್ರೀನ್ ಹಯಮೇಧಾನಾಜಹಾರ ।
ವಿಶ್ವಜಿತಾ ಚೇಷ್ಟ್ವಾ ವನಂ ಪ್ರವಿವೇಶ ॥೯॥

ಜನಮೇಜಯನು ಮೂರು ಅಶ್ವಮೇಧಯಾಗಗಳನ್ನು ಮಾಡಿದನು. ಅನಂತರ ವಿಶ್ವಜಿತ್ ಎಂಬ ಯಾಗವನ್ನು ಮಾಡಿ (ತಪಸ್ಸಿಗಾಗಿ) ಕಾಡಿಗೆ ಹೋದನು.

ಜನಮೇಜಯಸ್ತು ಖಲು ಸುನಂದಾಂ ನಾಮೋಪಯೇಮೇ । ಮಾಗಧಿಃ
ತಸ್ಯಾಮಸ್ಯ ಜಜ್ಞೇ ಪ್ರಾಚೀನ್ವಾನ್ ॥೧೦॥

ಜನಮೇಜಯನು ಸುನಂದೆಯನ್ನು ವಿವಾಹವಾಗಿದ್ದನು. ಅವಳಲ್ಲಿ ಅವನಿಗೆ ಮಗಧವಂಶದ ಪ್ರಾಚೀನ್ವಾನ್ ಎಂಬ ಮಗನು ಜನಿಸಿದನು.

ಯಃ ಪ್ರಾಚೀಂ ದಿಶಂ ಜಿಗಾಯ ಯಾವತ್ಸೂರ್ಯೋದಯಾತ್ ।
ತತ್ತಸ್ಯ ಪ್ರಾಚೀತ್ವಮ್ ॥೧೧॥

ಅವನು ಸೂರ್ಯೋದಯ ಕಾಲದಷ್ಟು ಕಾಲದಲ್ಲಿಯೇ ಸಮಗ್ರವಾದ ಪೂರ್ವ ದಿಕ್ಕನ್ನು ಜಯಿಸಿದನು. ಆದ್ದರಿಂದ ಅವನಿಗೆ ಪ್ರಾಚೀನ್ವಂತ ಎಂದು ಹೆಸರು.

ಪ್ರಾಚೀನ್ವಾಂಸ್ತು ಖಲ್ವಾಶ್ಮಕೀಮುಪಯೇಮೇ ಸುಷ್ಮ್ವಾಂ ನಾಮ
ಯಾದವೀಮ್ । ತಸ್ಯಾಮಸ್ಯ ಜಜ್ಞೇ ಶಯ್ಯಾತಿಃ ॥೧೨॥

ಪ್ರಾಚೀನ್ವಂತನು ಅಶ್ಮಕನ ಮಗಳಾದ ಸುಷ್ಮ್ವಾ ಎಂಬ ಯಾದವಿಯನ್ನು ವಿವಾಹವಾದನು. ಅವಳಲ್ಲಿ ಅವನಿಗೆ ಶಯ್ಯಾತಿ ಎಂಬ ಮಗನು ಜನಿಸಿದನು.

ಶಯ್ಯಾತಿಸ್ತು ತ್ರಿಶಂಕೋರ್ದುಹಿತರಂ ವರಾಂಗೀಂ ನಾಮೋಪಯೇಮೇ ।
ತಸ್ಯಾಮಸ್ಯ ಜಜ್ಞೇಽಹಂಪಾತಿಃ ॥೧೩॥

ಶಯ್ಯಾತಿಯು ತ್ರಿಶಂಕುವಿನ ಮಗಳಾದ ವರಾಂಗಿಯನ್ನು ವಿವಾಹವಾದನು. ಅವಳಲ್ಲಿ ಅವನಿಗೆ ಅಹಂಪಾತಿ ಎಂಬ ಮಗನು ಜನಿಸಿದನು.

ಅಹಂಪಾತಿಸ್ತು ಖಲು ಕೃತವೀರ್ಯದುಹಿತರಮುಪಯೇಮೇ
ಭಾನುಮತೀಂ ನಾಮ । ತಸ್ಯಾಮಸ್ಯ ಸಾರ್ವಭೌಮಃ ॥೧೪॥

ಅಹಂಪಾತಿಯು ಕೃತವೀರ್ಯನ ಮಗಳಾದ ಭಾನುಮತಿಯನ್ನು ವಿವಾಹಮಾಡಿಕೊಂಡನು. ಅವಳಲ್ಲಿ ಅವನಿಗೆ ಸಾರ್ವಭೌಮನೆಂಬ ಮಗನು ಜನಿಸಿದನು.

ಸಾರ್ವಭೌಮಸ್ತು ಖಲು ಜಿತ್ವಾऽऽಜಹಾರ ಕೈಕಯೀಂ
ಸುಂದರಾಂ ನಾಮ । ತಸ್ಯಾಮಸ್ಯ ಜಜ್ಞೇ ಜಯತ್ಸೇನಃ ॥೧೫॥

ಸಾರ್ವಭೌಮನು ಕೇಕಯದೇಶದ ರಾಜಕುಮಾರಿಯಾದ ಸುಂದರೆಯನ್ನು ವೀರ್ಯಪರಾಕ್ರಮಗಳಿಂದ ಸಂಪಾದಿಸಿ ತಂದನು. ಅವಳಲ್ಲಿ ಅವನಿಗೆ ಜಯತ್ಸೇನನು ಜನಿಸಿದನು.

ಜಯತ್ಸೇನಸ್ತು ಖಲು ವೈದರ್ಭೀಮುಪಯೇಮೇ ಸುಷಾವಾಂ
ನಾಮ । ತಸ್ಯಾಮಸ್ಯ ಜಜ್ಞೇ ಅಪರಾಚೀನಃ ॥೧೬॥

ಜಯತ್ಸೇನನು ವಿದರ್ಭರಾಜಕುಮಾರಿಯಾದ ಸುಷಾವಾಳನ್ನು ವಿವಾಹಮಾಡಿಕೊಂಡನು. ಅವಳಲ್ಲಿ ಅವನಿಗೆ ಅಪರಾಚೀನನು ಜನಿಸಿದನು.

ಅಪರಾಚೀನಸ್ತು ಖಲು ವೈದರ್ಭೀಮಪರಾಮುಪಯೇಮೇ
ಮರ್ಯಾದಾಂ ನಾಮ । ತಸ್ಯಾಮಸ್ಯ ಜಜ್ಞೇ ಋಕ್ಷಃ ॥೧೭॥

ಅಪರಾಚೀನನು ಮರ್ಯಾದಾ ಎಂಬ ವಿದರ್ಭದೇಶದ ಇನ್ನೊಬ್ಬ ಕನ್ಯೆಯನ್ನು ವಿವಾಹಮಾಡಿಕೊಂಡನು. ಅವಳಲ್ಲಿ ಅವನಿಗೆ ಋಕ್ಷನು ಜನಿಸಿದನು.

ಋಕ್ಷಸ್ತು ವಾಮದೇವ್ಯಾಮಂಗರಾಜಕನ್ಯಾಯಾಮೃಕ್ಷಂ ಪುತ್ರಮಜೀಜನತ್ ॥

ಋಕ್ಷನಾದರೋ ಅಂಗಾರರಾಜನ ಮಗಳಾದ ವಾಮದೇವಿಯನ್ನು ಮದುವೆಮಾಡಿಕೊಂಡು ಅವಳಲ್ಲಿ ಋಕ್ಷನೆಂಬ ಮಗನನ್ನು ಪಡೆದನು.

ಋಕ್ಷಸ್ತು ಖಲು ತಕ್ಷಕದುಹಿತರಂ ಜ್ವಲಂತೀಂ ನಾಮೋಪಯೇಮೇ ।
ತಸ್ಯಾಮಂತಿನಾರಮುತ್ಪಾದಯಾಮಾಸ ॥೧೯॥

ಋಕ್ಷನು ತಕ್ಷಕನ ಮಗಳಾದ ಜ್ವಲಂತೀ ಎಂಬ ಕನ್ಯೆಯನ್ನು ವಿವಾಹಮಾಡಿಕೊಂಡು ಅವಳಲ್ಲಿ ಅಂತಿನಾರನೆಂಬ ಮಗನನ್ನು ಪಡೆದನು.

ಅಂತಿನಾರಸ್ತು ಸರಸ್ವತ್ಯಾಂ ದ್ವಾದಶವಾರ್ಷಿಕಂ ಸತ್ರಮಾಜಹಾರ ।
ತಮುದವಸಾನೇ ನಿವೃತ್ತೇ ಸರಸ್ವತ್ಯಭಿಗಮ್ಯ ಭರ್ತಾರಂ
ವರಯಾಮಾಸ । ತಸ್ಯಾಂ ಪುತ್ರಂ ಜನಯಾಮಾಸ ತ್ರಸುಂ ನಾಮ ॥

ಅಂತಿನಾರನು ಸರಸ್ವತೀ ನದಿಯ ತೀರದಲ್ಲಿ ಹನ್ನೆರಡುವರ್ಷಗಳ ಕಾಲದ ಒಂದು ಸತ್ರಯಾಗವನ್ನು ಮಾಡಿದನು. ಆ ಉತ್ಸವದ ಕೊನೆಯಲ್ಲಿ ಸರಸ್ವತಿಯು (ನದಿ) ಬಂದು ಅಂತಿನಾರನನ್ನು ವರಿಸಿದಳು. ಅವಳಲ್ಲಿ ಅವನಿಗೆ ತ್ರಸು ಎಂಬ ಮಗನು ಹುಟ್ಟಿದನು.

ಅತ್ರಾನುವಂಶೋ ಭವತಿ ॥

ತ್ರಸ್ನುಃ ಸರಸ್ವತೀಪುತ್ರ ಅಂತಿನಾರಾದಜಾಯತ ।
ಇಲಿಲಂ ಜನಯಾಮಾಸ ಕಾಲಿಂದ್ಯಾಂ ತ್ರಸ್ನುರಾತ್ಮಜಮ್ ॥೨೧॥

ಆ ವಂಶವನ್ನು ವರ್ಣನೆ ಮಾಡಲು ಅನುಕೂಲವಾದ ಶ್ಲೋಕ ಹೀಗಿದೆ-

ತ್ರಸ್ನುವು ಅಂತಿನಾರನಿಂದ ಸರಸ್ವತಿಯಲ್ಲಿ ಪುತ್ರನಾಗಿ ಜನಿಸಿದನು. ತ್ರಸುವು ಕಾಳಿಂದಿಯನ್ನು ವಿವಾಹಮಾಡಿಕೊಂಡು ಇಲಿಲ ಎಂಬ ಮಗನನ್ನು ಪಡೆದನು.

ಸ ಏವ ದುಷ್ಪಂತೋ ವಿಶ್ವಾಮಿತ್ರದುಹಿತರಂ ಶಕುಂತಲಾಂ ನಾಮ ।
ತಸ್ಯಾಮಸ್ಯ ಜಜ್ಞೇ ಭರತಃ ॥೨೨॥

ಇಲಿಲನೇ ದುಷ್ಪಂತ - ಅವನು ವಿಶ್ವಾಮಿತ್ರರ ಮಗಳಾದ ಶಕುಂತಲೆಯನ್ನು ವಿವಾಹಮಾಡಿಕೊಂಡನು.ಅವಳಲ್ಲಿ ಅವನಿಗೆ ಭರತನು ಮಗನಾಗಿ ಜನಿಸಿದನು.

ತತ್ರೇಮೌ ಶ್ಲೋಕೌ ಭವತಃ

ಮಾತಾ ಭಸ್ತ್ರಾ ಪಿತುಃ ಪುತ್ರೋ ಯಸ್ಯಾಜ್ಜಾತಃ ಸ ಏವ ಸಃ ।
ಭರಸ್ವ ಪುತ್ರಂ ದುಷ್ಪಂತ ಸತ್ಯಮಾಹ ಶಕುಂತಲಾ ॥೨೩॥

ಆ ವಿಷಯದಲ್ಲಿ ಈ ಎರಡು ಶ್ಲೋಕಗಳಿವೆ.

ತಾಯಿಯು ತಿದಿ (ಇದ್ದಂತೆ). ಯಾವನಿಂದ ಹುಟ್ಟಿದ್ದಾನೆಯೋ ಆ ಮಗನು ಆ ತಂದೆಗೇ ಸೇರಿದವನು. ಎಲೈ ದುಷ್ಪಂತನೇ ಭರತನನ್ನು ಸಾಕು. ಶಕುಂತಲೆಯು ಸತ್ಯವನ್ನು ಹೇಳುತ್ತಿದ್ದಾಳೆ.

ರೇತೋಧಾಃ ಪುತ್ರಂ ನಯತಿ ನರದೇವ ಯಮಕ್ಷಯಮ್ ।
ತ್ವಂ ಚಾಸ್ಯ ಧಾತಾ ಗರ್ಭಸ್ಯ ಸತ್ಯಮಾಹ ಶಕುಂತಲಾ ॥೨೪॥

ಎಲೈ ರಾಜನೇ ಮಗನು ತಂದೆಯನ್ನು ಅಕ್ಷಯಲೋಕಗಳಿಗೆ ಕರೆದೊಯ್ಯುತ್ತಾನೆ. ಶಕುಂತಲೆಯಲ್ಲಿ ಗರ್ಭಾಧಾನ ಮಾಡಿದವನು ನೀನು. ಶಕುಂತಲೆಯು ಸತ್ಯವನ್ನು ಹೇಳುತ್ತಿದ್ದಾಳೆ. (ವಿಭಕ್ತಿ ವಿಪರಿಣಾಮದಿಂದ ಅರ್ಥಮಾಡಬೇಕು).

ತತೋಽಸ್ಯ ಭರತತ್ವಮ್ ॥೨೫॥

ಆದ್ದರಿಂದ ಅವನಿಗೆ ಭರತ (ಸಾಕಲ್ಪಟ್ಟವನು) ಎಂದು ಹೆಸರು.

ಭರತಸ್ತು ಖಲು ಕಾಶೇಯೀಂ ಸಾರ್ವಸೇನೀಮುಪಯೇಮೇ ಸುನಂದಾಂ ನಾಮ । ತಸ್ಯಾಮಸ್ಯ ಜಜ್ಞೇ ಭುಮನ್ಯುಃ ॥೨೬॥

ಭರತನು ಕಾಶಿರಾಜನ ಮಗಳಾದ ಸುನಂದೆಯನ್ನು ವಿವಾಹಮಾಡಿಕೊಂಡನು. ಅವಳಲ್ಲಿ ಅವನಿಗೆ ಭುಮನ್ಯುವು ಜನಿಸಿದನು.

ಭುಮನ್ಯುಸ್ತು ಖಲು ದಾಶಾರ್ಹೀಮುಪಯೇಮೇ ಸುಪರ್ಣಾಂ ನಾಮ । ತಸ್ಯಾಮಸ್ಯ ಜಜ್ಞೇ ಸುಹೋತ್ರಃ ॥೨೭॥

ಭುಮನ್ಯುವಾದರೋ ದಾಶಾರ್ಹಾಧಿಪತಿಯ ಮಗಳಾದ ಸುಪರ್ಣಾ ಎಂಬ ಕನ್ಯೆಯನ್ನು ವಿವಾಹಮಾಡಿಕೊಂಡನು. ಅವಳಲ್ಲಿ ಅವನಿಗೆ ಸುಹೋತ್ರನು ಜನಿಸಿದನು.

ಸುಹೋತ್ರಸ್ತು ಖಲ್ವೈಕ್ಷ್ವಾಕೀಮುಪಯೇಮೇ ಜಯಂತೀಂ ನಾಮ । ತಸ್ಯಾಮಸ್ಯ ಜಜ್ಞೇ ಹಸ್ತೀ । ಯ ಇದಂ ಪುರಂ ಸ್ಥಾಪಯಾಮಾಸ । ತಸ್ಮಾದ್ಧಸ್ತಿನಪುರತ್ವಮ್ ॥೨೮॥

ಸುಹೋತ್ರನಾದರೋ ಇಕ್ಷ್ವಾಕುವಂಶದ ಜಯಂತಿಯನ್ನು ವಿವಾಹಮಾಡಿಕೊಂಡನು. ಅವಳಲ್ಲಿ ಅವನಿಗೆ ಹಸ್ತಿ ಎಂಬ ಮಗನು ಜನಿಸಿದನು. ಅವನು ಈ ಪುರವನ್ನು ನಿರ್ಮಿಸಿದನು. ಆದ್ದರಿಂದ ಇದಕ್ಕೆ ಹಸ್ತಿನಪುರವೆಂದು ಹೆಸರು.

ಹಸ್ತೀ ತು ಖಲು ತ್ರೈಗರ್ತೀಮುಪಯೇಮೇ ಯಶೋಧರಾಂ ನಾಮ । ತಸ್ಯಾಮಸ್ಯ ಜಜ್ಞೇ ವಿಕುಂಜನಃ ॥೨೯॥

ಹಸ್ತಿಯು ತ್ರಿಗರ್ತದೇಶದ ಯಶೋಧರೆಯನ್ನು ವಿವಾಹ ಮಾಡಿಕೊಂಡನು. ಅವಳಲ್ಲಿ ಅವನಿಗೆ ವಿಕುಂಜನ ಎಂಬ ಮಗನು ಜನಿಸಿದನು.

ವಿಕುಂಜನಸ್ತು ದಾಶಾರ್ಹೀಮುಪಯೇಮೇ ವಿಂದಾಂ ನಾಮ । ತಸ್ಯಾಮಸ್ಯ ಜಜ್ಞೇಽಜಮೀಢಃ ॥೩೦॥

ವಿಕುಂಜನನು ದಾಶಾರ್ಹದೇಶದ ವಿಂದೆಯನ್ನು ವಿವಾಹ ಮಾಡಿಕೊಂಡನು. ಅವಳಲ್ಲಿ ಅವನಿಗೆ ಅಜಮೀಢನು ಜನಿಸಿದನು.

ಅಜಮೀಢಸ್ಯ ತು ಚತುರ್ವಿಂಶತಿಪುತ್ರಶತಂ ಬಭೂವ ಕೈಕಯ್ಯಾಂ
ನಾಗಾಯಾಂ ಗಾಂಧಾರ್ಯಾಂ ವಿಮಲಾಯಾಮೃಕ್ಷಾಯಾಮಿತಿ ।
ಪೃಥಗ್ವಂಶಕರ್ತಾರೋ ನೃಪತಯಃ ॥೩೧॥

ಅಜಮೀಢನಿಗೆ ಕೈಕೇಯೀ, ನಾಗಾ, ಗಾಂಧಾರೀ, ವಿಮಲಾ ಮತ್ತು ಋಕ್ಷಾ ಎಂಬ ಐದು ಪತ್ನಿಯರಲ್ಲಿ ಎರಡುಸಾವಿರದ ನಾಲ್ಕುನೂರು ಪುತ್ರರು ಜನಿಸಿದರು. ಅವರೆಲ್ಲರೂ ಬೇರೆ ಬೇರೆ ವಂಶಪ್ರವರ್ತಕರಾದ ರಾಜರಾದರು.

ಅಜಮೀಢಾದೃಕ್ಷಾಯಾಂ ವಂಶಕರ್ತಾ ಸಂವರಣೋ ಜಜ್ಞೇ ॥೩೨॥

ಅಜಮೀಢನಿಗೆ ಋಕ್ಷೆಯಲ್ಲಿ ವಂಶಕರ್ತನಾದ ಸಂವರಣನೆಂಬ ಪುತ್ರನು ಜನಿಸಿದನು.

ಸಂವರಣಸ್ತು ಖಲು ವೈವಸ್ವತೀಂ ತಪತೀಂ ನಾಮೋಪಯೇಮೇ ।
ತಸ್ಯಾಮಸ್ಯ ಜಜ್ಞೇ ಕುರುಃ ॥೩೩॥

ಸಂವರಣನು ವಿವಸ್ವಂತ (ಸೂರ್ಯ)ನ ಮಗಳಾದ ತಪತಿಯನ್ನು ಮದುವೆಯಾದನು. ಅಲ್ಲಿ ಅವನಿಗೆ ಕುರುವು ಜನಿಸಿದನು.

ಕುರುಸ್ತು ದಾಶಾರ್ಹೇಮುಪಯೇಮೇ ಶುಭಾಂಗೀಂ ನಾಮ ।
ತಸ್ಯಾಮಸ್ಯ ಜಜ್ಞೇ ವಿಡೂರಥಃ ॥೩೪॥

ಕುರುವು ದಾಶಾರ್ಹದೇಶದ ಶುಭಾಂಗಿಯನ್ನು ಮದುವೆಯಾದನು. ಅವಳಲ್ಲಿ ಅವನಿಗೆ ವಿಡೂರಥನು ಜನಿಸಿದನು.

ವಿಡೂರಥಸ್ತು ಖಲು ಮಾಗಧೀಮುಪಯೇಮೇ ಸಂಪ್ರಯಾಂ
ನಾಮ । ತಸ್ಯಾಮಸ್ಯ ಜಜ್ಞೇಽನಶ್ವಾನ್ ॥೩೫॥

ವಿಡೂರಥನು ಮಗಧದೇಶದ ಸಂಪ್ರಿಯೆಯನ್ನು ಮದುವೆಯಾದನು. ಅವಳಲ್ಲಿ ಅವನಿಗೆ ಅನಶ್ವಾನ್ ಎಂಬ ಮಗನು ಜನಿಸಿದನು.

ಅನಶ್ವಾಂಸ್ತು ಮಾಗಧೀಮುಪಯೇಮೇ ಸುವೇಷಾಂ ನಾಮ ।
ತಸ್ಯಾಮಸ್ಯ ಜಜ್ಞೇ ಪರೀಕ್ಷಿತ್ ॥೩೬॥

ಅನಶ್ವಂತನು ಮಗಧದೇಶದ ಸುವೇಷೆಯನ್ನು ಮದುವೆಯಾದನು. ಅವಳಲ್ಲಿ ಅವನಿಗೆ ಪರೀಕ್ಷಿತನು ಹುಟ್ಟಿದನು.

ಪರೀಕ್ಷಿತ್ತು ಬಾಹುಕಾಮುಪಯೇಮೇऽಮೃತಾಂ ನಾಮ ।
ತಸ್ಯಾಮಸ್ಯ ಜಜ್ಞೇ ಭೀಮಸೇನಃ ॥೩೭॥

ಪರೀಕ್ಷಿತನು ಬಾಹುಕದೇಶದ ಅಮೃತೆಯನ್ನು ಮದುವೆಯಾದನು. ಅವಳಲ್ಲಿ ಅವನಿಗೆ ಭೀಮಸೇನನು ಜನಿಸಿದನು.

ಭೀಮಸೇನಸ್ತು ಖಲು ಕೈಕಯೀಮುಪಯೇಮೇ ಸುಕುಮಾರೀಂ
ನಾಮ । ತಸ್ಯಾಮಸ್ಯ ಜಜ್ಞೇ ಪರ್ಯಶ್ರವಾಃ ।
ಯಮಾಹುಃ ಪ್ರತೀಪ ಇತಿ ॥೩೮॥

ಭೀಮಸೇನನು ಕೇಕಯದೇಶದ ಸುಕುಮಾರಿಯನ್ನು ಮದುವೆಯಾದನು. ಅವಳಲ್ಲಿ ಅವನಿಗೆ ಪರ್ಯಶ್ರವ ಎಂಬ ಮಗನು ಜನಿಸಿದನು. ಪರ್ಯಶ್ರವನಿಗೆ ಪ್ರತೀಪ ಎಂದೂ ಹೆಸರು.

ಪ್ರತೀಪಸ್ತು ಶೈಬ್ಯಾಮುಪಯೇಮೇ ಸುನಂದಾಂ ನಾಮ ।
ತಸ್ಯಾಂ ತ್ರೀನ್ ಪುತ್ರಾನುತ್ಪಾದಯಾಮಾಸ
ದೇವಾಪಿಂ ಶಂತನುಂ ಬಾಹ್ಲೀಕಂ ಚೇತಿ ॥೩೯॥

ಪ್ರತೀಪನು ಶೈಬ್ಯರಾಜಕುಮಾರಿಯಾದ ಸುನಂದೆಯನ್ನು ಮದುವೆಯಾದನು. ಅವಳಲ್ಲಿ ಅವನು ದೇವಾಪಿ, ಶಂತನು ಮತ್ತು ಬಾಹ್ಲೀಕ ಎಂಬ ಮೂರು ಮಕ್ಕಳನ್ನು ಪಡೆದನು.

ದೇವಾಪಿಸ್ತು ಖಲು ಬಾಲ ಏವಾರಣ್ಯಂ ಪ್ರವಿವೇಶ ।
ಶಂತನುಸ್ತು ಮಹೀಪಾಲೋऽಭವತ್ ॥೪೦॥

ದೇವಾಪಿಯು ಬಾಲ್ಯದಲ್ಲಿಯೇ ಅರಣ್ಯಕ್ಕೆ ಹೋದನು. ಶಂತನುವು ರಾಜನಾದನು.

ತತ್ರ ಶ್ಲೋಕೋ ಭವತಿ -

ಯಂ ಯಂ ಕರಾಭ್ಯಾಂ ಸ್ಪೃಶತಿ ಜೀರ್ಣಂ ಸ ಸುಖಮಶ್ನುತೇ ।
ಪುನರ್ಯುವಾऽऽಭ್ಯಾಂ ಭವತಿ ತಸ್ಮಾತ್ ತಂ ಶಂತನುಂ ವಿದುಃ ॥೪೧॥

ಅವನ ವಿಷಯದಲ್ಲಿ ಈ ಶ್ಲೋಕವಿದೆ -

ಮುಪ್ಪಿನಲ್ಲಿದ್ದ ಯಾರು ಯಾರನ್ನು ತನ್ನ ಕೈಗಳಿಂದ ಮುಟ್ಟುತ್ತಾನೋ ಅವರು ವೃದ್ಧಾಪ್ಯದ ದೋಷವನ್ನು ಕಳೆದುಕೊಂಡು ಸುಖವನ್ನು ಹೊಂದುತ್ತಾರೆ. ಆ ಸ್ಪರ್ಶ ಮಾಡುವ ಎರಡು ಕೈಗಳ ಮಹಿಮೆಯಿಂದ (ಮುದುಕನು) ಪುನಃ ಯುವಕನಾಗುತ್ತಾನೆ. ಆದ್ದರಿಂದ ಅವನಿಗೆ ಶಂತನು ಎನ್ನುತ್ತಾರೆ.

ತತ್ತಸ್ಯ ಶಂತನುತ್ವಮ್ ॥

ಇದೇ ಅವನಿಗೆ ಶಂತನು ಎಂದು ಹೆಸರು ಬರಲು ಕಾರಣ.

ಶಂತನುಸ್ತು ಖಲು ಗಂಗಾಂ ಭಾಗೀರಥೀಮುಪಯೇಮೇ । ತಸ್ಯಾಮಸ್ಯ ಜಜ್ಞೇ ದೇವವ್ರತೋ ನಾಮ ಯಮಾಹುರ್ಭೀಷ್ಮ ಇತಿ ॥೪೨॥

ಶಂತನುವು ಭಗೀರಥನ ಮಗಳಾದ ಗಂಗೆಯನ್ನು ವಿವಾಹಮಾಡಿಕೊಂಡನು. ಅವಳಲ್ಲಿ ಅವನಿಗೆ ದೇವವ್ರತನೆಂಬ ಮಗನು ಜನಿಸಿದನು. ಇವನನ್ನೇ ಭೀಷ್ಮ ಎಂದೂ ಕರೆಯುತ್ತಾರೆ.

ಭೀಷ್ಮಸ್ತು ಪಿತುಃ ಪ್ರೀತಿಚಿಕೀರ್ಷಯಾ ಸತ್ಯವತೀಮಾನಯಾಮಾಸ ಮಾತರಮ್ । ಯಾಮಾಹುಃ ಕಾಳೀತಿ ॥೪೩॥

ಭೀಷ್ಮನು ತಂದೆಗೆ ಹಿತವನ್ನು ಮಾಡಲು (ದಾಶರಾಜನ ಮಗಳಾದ) ಸತ್ಯವತಿಯನ್ನು (ತನ್ನ) ತಾಯಿಯಾಗಿ ಕರೆತಂದನು. ಅವಳಿಗೆ ಕಾಳಿ ಎಂದೂ ಹೆಸರು.

ತಸ್ಯಾಂ ಪೂರ್ವಂ ಪರಾಶರಾತ್ ಕನ್ಯಾಗರ್ಭೋ ದ್ವೈಪಾಯನಃ ।
ತಸ್ಯಾಮೇವ ಶಂತನೋರ್ದ್ವೌ ಪುತ್ರೌ ಬಭೂವತುಃ
ಚಿತ್ರಾಂಗದೋ ವಿಚಿತ್ರವೀರ್ಯಶ್ಚೇತಿ ॥೪೪॥

ಸತ್ಯವತಿಯಲ್ಲಿ ಇದಕ್ಕೆ ಮೊದಲು ಕನ್ಯಾವಸ್ಥೆಯಲ್ಲಿಯೇ ಪರಾಶರರಿಂದ ವ್ಯಾಸರು ಜನಿಸಿದ್ದರು. ಅವಳಲ್ಲಿಯೇ (ಅನಂತರ) ಶಂತನುವು ಚಿತ್ರಾಂಗದ ಮತ್ತು ವಿಚಿತ್ರವೀರ್ಯ ಎಂಬ ಎರಡು ಮಕ್ಕಳನ್ನು ಪಡೆದನು.

ಚಿತ್ರಾಂಗದಸ್ತ್ವಪ್ರಾಪ್ತಯೌವನ ಏವ ಗಂಧರ್ವೇಣ ನಿಹತಃ ।
ತತೋ ವಿಚಿತ್ರವೀರ್ಯೋ ರಾಜಾ ಬಭೂವ ॥೪೫॥

ಚಿತ್ರಾಂಗದನು ಯೌವನಾವಸ್ಥೆಗೆ ಬರುವುದಕ್ಕೆ ಮೊದಲೇ ಗಂಧರ್ವನಿಂದ ಹತನಾದನು. ಆದ್ದರಿಂದ ವಿಚಿತ್ರವೀರ್ಯನು ರಾಜನಾದನು.

ವಿಚಿತ್ರವೀರ್ಯಸ್ತು ಖಲು ಕಾಶಿರಾಜಸ್ಯ ಸುತೇ
ಅಂಬಿಕಾಂಬಾಲಿಕೇ ಉದವಹತ್ ।
ಸ ವಿಚಿತ್ರವೀರ್ಯೋಽನುತ್ಪನ್ನಾಪತ್ಯ ಏವ ವಿದೇಹತ್ವಂ ಪ್ರಾಪ್ತಃ ॥೪೬॥

ವಿಚಿತ್ರವೀರ್ಯನು ಕಾಶಿರಾಜನ ಮಕ್ಕಳಾದ ಅಂಬಿಕೆ ಮತ್ತು ಅಂಬಾಲಿಕೆ ಎಂಬ ಇಬ್ಬರನ್ನು ಮದುವೆಯಾದನು. ಆದರೆ ಅವರಲ್ಲಿ ಮಕ್ಕಳನ್ನು ಪಡೆಯುವುದಕ್ಕಿಂತ ಮೊದಲೇ ಮೃತನಾದನು.

ತತೋ ಸತ್ಯವತೀ ಚಿಂತಯಾಮಾಸ । ಕಥಂ ನು ಖಲು ಶಂತನೋಃ
ಪಿಂಡವಿಚ್ಛೇದೋ ನ ಸ್ಯಾದಿತಿ ॥೪೭॥

ಆಗ ಸತ್ಯವತಿಯು ಶಂತನುವಿನ ವಂಶವು ವಿಚ್ಛೇದ ಹೊಂದದಿರುವುದಕ್ಕೆ ಏನು ಮಾಡಬೇಕೆಂದು ಚಿಂತಿಸಿದಳು.

ಸಾಽಥ ದ್ವೈಪಾಯನಂ ಚಿಂತಯಾಮಾಸ ಸೋಽಗ್ರತಃ ಸ್ಥಿತಃ ಕಿಂ
ಕರವಾಣೀತಿ ಮಾತರಿ । ತಂ ಸತ್ಯವತ್ಯುವಾಚ ಭ್ರಾತಾ
ತೇಽನಪತ್ಯ ಏವ ಸ್ವರ್ಗತಃ ತಸ್ಯಾರ್ಥೇಽಪತ್ಯಮುತ್ಪಾದಯೇತಿ ॥೪೮॥

ಆಗ ಅವಳು ವೇದವ್ಯಾಸರನ್ನು ಸ್ಮರಿಸಿದಳು. ವ್ಯಾಸರು ಎದುರಿಗೆ ಬಂದು ನಿಂತು ಏನು ಮಾಡಲಿ ಎಂದು ತಾಯಿಯನ್ನು ಕೇಳಿದರು. ಆಗ ಸತ್ಯವತಿಯು ನಿನ್ನ ತಮ್ಮನು ಮಕ್ಕಳನ್ನು ಪಡೆಯದೇ ಸ್ವರ್ಗಸ್ಥನಾಗಿದ್ದಾನೆ. ಅವನ ಸಲುವಾಗಿ ಮಕ್ಕಳನ್ನು ಪಡೆ ಎಂದು ಹೇಳಿದಳು.

ಸ ಪರಮಿತ್ಯುವಾಚ ಸ ತತ್ರ ತ್ರೀನ್ ಪುತ್ರಾನುತ್ಪಾದಯಾಮಾಸ ।
ಧೃತರಾಷ್ಟ್ರಂ ಪಾಂಡುಂ ವಿದುರಂ ಚೇತಿ ॥೪೯॥

ವ್ಯಾಸರು ಹಾಗೆಯೇ ಆಗಲಿ ಎಂದು ಹೇಳಿ ಧೃತರಾಷ್ಟ್ರ ಪಾಂಡು ಮತ್ತು ವಿದುರ ಎಂಬ ಮೂರು ಮಕ್ಕಳನ್ನು ಪಡೆದರು.

ಧೃತರಾಷ್ಟ್ರಸ್ಯ ರಾಜ್ಞಃ ಪುತ್ರಾಣಾಂ ಶತಂ ಬಭೂವ ಗಾಂಧರ್ಯಾಂ
ವರದಾನಾತ್ ತೇಷಾಂ ಚ ಧಾರ್ತರಾಷ್ಟ್ರಾಣಾಂ ಚತ್ವಾರಃ ಪ್ರಧಾನಾಃ
ದುರ್ಯೋಧನೋ ದುಶ್ಶಾಸನೋ ವಿಕರ್ಣಶ್ಚಿತ್ರಸೇನಶ್ಚ ಇತಿ ॥೫೦॥

ಧೃತರಾಷ್ಟ್ರರಾಜನ ಪತ್ನಿಯಾದ ಗಾಂಧಾರಿಗೆ ವರಬಲದಿಂದ ನೂರು ಪುತ್ರರು ಜನಿಸಿದರು. ಅವರಲ್ಲಿ ದುರ್ಯೋಧನ, ದುಶ್ಶಾಸನ, ವಿಕರ್ಣ ಮತ್ತು ಚಿತ್ರಸೇನ ಎಂಬುವರು ಪ್ರಧಾನರು.

ಪಾಂಡೋಸ್ತು ಕುಂತೀ ಮಾದ್ರೀತಿ ಸ್ತ್ರೀರತ್ನೇ ಬಭೂವತುಃ ।
ಸ ಮೃಗಯಾಂ ಚರನ್ ಮೈಥುನಗತಮೃಷಿಂ
ಮೃಗಚಾರಿಣಂ ಬಾಣೇನಾಜಘಾನ ॥೫೧॥

ಪಾಂಡುವಿಗೆ ಕುಂತಿ ಮತ್ತು ಮಾದ್ರಿ ಎಂಬ ರತ್ನಪ್ರಾಯಸ್ತ್ರೀಯರಾಗಿದ್ದ ಇಬ್ಬರು ಪತ್ನಿಯರಾಗಿದ್ದರು. ಪಾಂಡುವು ಬೇಟೆಯಾಡುತ್ತಾ ಮೃಗವೇಷದಲ್ಲಿ ಮೈಥುನನಿರತರಾಗಿದ್ದ ಒಬ್ಬ ಋಷಿಯನ್ನು ಬಾಣದಿಂದ ಹೊಡೆದನು.

ಸ ಬಾಣವಿದ್ಧ ಉವಾಚ ಪಾಂಡುಮ್ ।

ಅತ್ರ ಶ್ಲೋಕೋ ಭವತಿ -

ಯೋಽಕೃತಾರ್ಥಂ ಹಿ ಮಾಂ ಕ್ರೂರ ಬಾಣೇನಾಘ್ನಾ ಮೃಗವ್ರತಮ್ ।
ತ್ವಾಮಪ್ಯೇತಾದೃಶೋ ಭಾವಃ ಕ್ಷಿಪ್ರಮೇವ ಗಮಿಷ್ಯತಿ ಇತಿ
ಮೃಗವ್ರತಚಾರಿಣಾ ಋಷಿಣಾ ಶಪ್ತಃ ॥೫೨॥

ಬಾಣದ ಏಟನ್ನು ತಿಂದ ಋಷಿಯು ಪಾಂಡುವನ್ನು ಕುರಿತು ಹೇಳಿದನು.

ಈ ವಿಷಯದಲ್ಲಿ ಹೀಗೆ ಶ್ಲೋಕವಿದೆ -

ಎಲೈ ಕ್ರೂರನೇ, ಮೃಗವ್ರತವನ್ನು ಧರಿಸಿದ (ಮೃಗರೂಪದಿಂದ) ಕಾಮದಲ್ಲಿ ತೃಪ್ತಿಯನ್ನು ಪಡೆಯದ ನನ್ನನ್ನು ಹೀಗೆ ನೀನು ಬಾಣದಿಂದ (ಹೊಡೆದು) ಕೊಲ್ಲುತ್ತಿರುವುದರಿಂದ ಕ್ಷಿಪ್ರದಲ್ಲಿಯೇ ನಿನಗೂ ಇಂತಹ ಅವಸ್ಥೆಯೇ ಪ್ರಾಪ್ತವಾಗಲಿ. ಹೀಗೆ ಪಾಂಡುವು ಮೃಗವ್ರತಧಾರಿಯಾದ ಋಷಿಯಿಂದ ಶಪಿಸಲ್ಪಟ್ಟನು.

ಸ ವಿಷಣ್ಣರೂಪಃ ಪಾಂಡುಸ್ತಂ ಶಾಪಂ ಪರಿಹರನ್
ನೋಪಸರ್ಪತಿ ಭಾರ್ಯೇ ॥೫೩॥

ಪಾಂಡುವು ವಿಷಣ್ಣನಾಗಿ ಶಾಪದಿಂದ ಬರಲಿರುವ ಮರಣಾವಸ್ಥೆಯನ್ನು ಪರಿಹರಿಸಿಕೊಳ್ಳುವ ಉದ್ದೇಶದಿಂದ ತನ್ನ ಪತ್ನಿಯರ ಸಮೀಪಕ್ಕೆ ಹೋಗುತ್ತಿರಲಿಲ್ಲ.

ಅಹ ಚ । ಸ್ವಚಾಪಲ್ಯಾದಿದಂ ಪ್ರಾಪ್ತವಾನಹಮ್ ।
ಶೃಣೋಮಿ ನಾನಪತ್ಯಸ್ಯ ಲೋಕಾಃ ಸಂತೀತಿ ।
ಮಮಾರ್ಥೇ ಪುತ್ರಾನುತ್ಪಾದಯೇತಿ ಕುಂತೀಮುವಾಚ ॥೫೪॥

ಹೀಗೆ ಹೇಳಿದನೂ ಕೂಡ. ನನ್ನ ಚಾಪಲ್ಯದೋಷದಿಂದಲೇ ನಾನು ಈ ಶಾಪವನ್ನು ಪಡೆದಿದ್ದೇನೆ. ಮಕ್ಕಳಿಲ್ಲದವರಿಗೆ ಸದ್ಗತಿಯಿಲ್ಲವೆಂದು ಕೇಳಿದ್ದೇನೆ. ಆದ್ದರಿಂದ ನನ್ನ ಸಲುವಾಗಿ ಮಕ್ಕಳನ್ನು ಪಡೆ ಎಂದು ಕುಂತಿಗೆ ಹೇಳಿದನು.

ಸಾ ಪುತ್ರಾನುತ್ಪಾದಯಾಮಾಸ ಧರ್ಮಾದ್
ಯುಧಿಷ್ಠಿರಂ ಮಾರುತಾದ್ ಭೀಮಸೇನಮಿಂದ್ರಾದರ್ಜುನಮಿತಿ ॥೫೫॥

ಅವಳು ಯಮನಿಂದ ಯುಧಿಷ್ಠಿರನನ್ನೂ, ವಾಯುದೇವನಿಂದ ಭೀಮಸೇನನನ್ನೂ, ದೇವೇಂದ್ರನಿಂದ ಅರ್ಜುನನನ್ನೂ - ಹೀಗೆ ಮೂರು ಮಕ್ಕಳನ್ನು ಪಡೆದಳು.

ಪ್ರಹೃಷ್ಟರೂಪಃ ಪಾಂಡುರುವಾಚೈವಮ್ ಇಯಂ ತೇ ಮಾದ್ರೀಸಪತ್ನೀ
ಹ್ಯನಪತ್ಯಾ ವ್ರೀಡಿತಾ ಸಾಧ್ವೀ ಚೈವಮಸ್ಯಾಮಪತ್ಯಮುತ್ಪಾದ್ಯತಾಮಿತಿ
ಸಾ ತಥೇತಿ ತಸ್ಯೈ ವ್ರತಮಾದಿದೇಶ ॥೫೬॥

ಪಾಂಡುವು ಹರ್ಷಿತನಾಗಿ (ಕುಂತಿಯನ್ನು ಕುರಿತು) ನಿನ್ನ ಸಪತ್ನಿಯಾದ ಸಾಧ್ವಿಯಾದ ಮಾದ್ರಿಯು ಮಕ್ಕಳಿಲ್ಲದೆ ನಾಚಿಕೆಯಂದಿದ್ದಾಳೆ. ಆದ್ದರಿಂದ ಅವಳಲ್ಲಿಯೂ ನಿನ್ನಂತೆಯೇ ಮಕ್ಕಳನ್ನು ಪಡೆ ಎಂದು ಹೇಳಿದನು. ಕುಂತಿಯು ಹಾಗೆಯೇ ಆಗಲಿ ಎಂದು ಹೇಳಿ ಮಾದ್ರಿಗೆ ವ್ರತವನ್ನು ಉಪದೇಶಮಾಡಿದಳು.

ತಸ್ಯಾಂ ನಕುಲಸಹದೇವೌ ಯಮಾವಶ್ವಿಭ್ಯಾಂ ಜಜ್ಞಾತೇ ॥೫೯॥

ಮಾದ್ರಿಯಲ್ಲಿ ಅಶ್ವಿನೀದೇವತೆಗಳಿಂದ ನಕುಲಸಹದೇವರು ಅವಳಿ ಮಕ್ಕಳಾಗಿ ಜನಿಸಿದರು.

ಮಾದ್ರೀಂ ತು ಸ್ವಲಂಕೃತಾಂ ದೃಷ್ಟ್ವಾ ಪಾಂಡುರ್ಭಾವಂ ಚಕ್ರೇ ।
ಸ ತಾಂ ಪ್ರಾಪ್ಯೈವ ವಿದೇಹತ್ವಂ ಪ್ರಾಪ್ತಃ ॥೬೦॥

ಒಮ್ಮೆ ಅಲಂಕೃತಳಾದ ಮಾದ್ರಿಯನ್ನು ನೋಡಿ ಪಾಂಡುವು ಕಾಮವಶನಾದನು. ಅವನು ಅವಳನ್ನು ಸೇರಿ ಸ್ವರ್ಗಸ್ಥನಾದನು.

ತತ್ಸೇನಂ ಚಿತಾಯಾಮನ್ವಾರುರೋಹ ಮಾದ್ರೀ । ಕುಂತೀಂ ಚೋವಾಚ
ಯಮಯೋರಾರ್ಯಯಾऽಪ್ರಮತ್ತಯಾ ಭವಿತವ್ಯಮಿತಿ ॥೬೧॥

ಮಾದ್ರಿಯು ಚಿತೆಯಲ್ಲಿ ಅವನ ಜೊತೆ ಸಹಗಮನವನ್ನು ಮಾಡಿದಳು. (ಅದಕ್ಕಿಂತ ಮೊದಲು) ಕುಂತಿಗೆ ತನ್ನ ಅವಳಿ ಮಕ್ಕಳನ್ನು ಎಚ್ಚರದಿಂದ ನೋಡಿಕೊಳ್ಳಬೇಕೆಂದು ಹೇಳಿದಳು.

ತತಃ ಪಂಚ ಪಾಂಡವಾನ್ ಕುಂತ್ಯಾ ಸಹ ಹಸ್ತಿನಪುರಂ
ನಯಂತಿ ಸ್ಮ ಸುತಪಸ್ವಿನಃ ॥೬೨॥

ಅನಂತರ ಪಾಂಡುವಿನ ಐದು ಮಕ್ಕಳನ್ನೂ ಋಷಿಗಳು ಹಸ್ತಿನಪುರಕ್ಕೆ ಕರೆತಂದರು.

ತತ್ರ ಭೀಷ್ಮಾಯ ಧೃತರಾಷ್ಟ್ರವಿದುರಯೋಃ ಸ್ವರ್ಗಗಮನಂ
ಯಾಥಾತಥ್ಯಂ ನಿವೇದಯಂತಿ ಸ್ಮ ತಪಸ್ವಿನಃ ॥೬೩॥

ಅಲ್ಲಿ ತಪಸ್ವಿಗಳು (ಋಷಿಗಳು) ಭೀಷ್ಮ, ಧೃತರಾಷ್ಟ್ರ ಮತ್ತು ವಿದುರರನ್ನು ಕುರಿತು ಪಾಂಡುವಿನ ಸ್ವರ್ಗಗಮನ ವೃತ್ತಾಂತವನ್ನು ಯಥಾವತ್ತಾಗಿ ತಿಳಿಸಿದರು.

ಪಾಂಡವಾನ್ ಸಹ ಕುಂತ್ಯಾ ಜತುಗೃಹೇ
ದಾಹಯಿತುಕಾಮೋ ಧೃತರಾಷ್ಟ್ರಾತ್ಮಜೋऽಭೂತ್ ॥೬೪॥

ಧೃತರಾಷ್ಟ್ರನ ಮಗನಾದ ದುರ್ಯೋಧನನು ಪಾಂಡವರನ್ನು ಅರಗಿನ ಮನೆಯಲ್ಲಿ ಕುಂತಿಯ ಜೊತೆಯಲ್ಲಿ ಸುಡಲು ಬಯಸಿದನು.

ತಾಂಶ್ಚ ವಿದುರೋ ಮೋಕ್ಷಯಿತ್ವಾ ಪ್ರೀತೋऽಭವತ್ ॥೬೫॥

ವಿದುರನು ಅವರನ್ನು ಪಾರುಮಾಡಿ ಸಂತುಷ್ಟನಾದನು.

ತತೋ ಹಿಡಿಂಬಂ ಹತ್ವಾ ಪುತ್ರಮುತ್ಪಾದಯಾಮಾಸ ಭೀಮಃ ।
ತತ ಏಕಚಕ್ರಾಂ ಜಗ್ಮುಃ ಕುಶಲಿನಃ ॥೬೬॥

ಅನಂತರ ಹಿಡಿಂಬನನ್ನು ಕೊಂದು ಭೀಮಸೇನನು (ಹಿಡಿಂಬೆಯಲ್ಲಿ) ಘಟೋತ್ಕಚನೆಂಬ ಮಗನನ್ನು ಪಡೆದನು. ಅಲ್ಲಿಂದ ಪಾಂಡವರು ಕ್ಷೇಮದಿಂದ ಏಕಚಕ್ರನಗರಕ್ಕೆ ಬಂದರು.

ಪಾಂಚಾಲವಿಷಯಂ ಗತ್ವಾ ಸ್ವಯಂವರೇ ದ್ರೌಪದೀಂ
ಲಬ್ಧ್ವಾ ಽರ್ಧರಾಜ್ಯಂ ಪ್ರಾಪ್ಯೇಂದ್ರಪ್ರಸ್ಥನಿವಾಸಿನಸ್ತಸ್ಯಾಂ
ಪುತ್ರಾನುತ್ಪಾ ದಯಾಮಾಸುರ್ದ್ರೌಪದ್ಯಾಂ ಪ್ರತಿವಿಂಧ್ಯಂ
ಯುಧಿಷ್ಠಿರಃ ಸುತಸೋಮಂ ವೃಕೋದರಃ ಶ್ರುತಕೀರ್ತಿಮರ್ಜುನಃ ।
ಶತಾನೀಕಂ ನಕುಲಃ । ಶ್ರುತಕರ್ಮಾಣಂ ಸಹದೇವ ಇತಿ ॥೬೭॥

ಪಾಂಡವರು ಪಾಂಚಾಲದೇಶಕ್ಕೆ ಹೋಗಿ ಸ್ವಯಂವರದಲ್ಲಿ ದ್ರೌಪದಿಯನ್ನು ಪಡೆದು (ಹಸ್ತಿನಪುರಕ್ಕೆ ಹಿಂದಿರುಗಿ) ಅರ್ಧರಾಜ್ಯವನ್ನು ಪಡೆದು ಇಂದ್ರಪ್ರಸ್ಥನಿವಾಸಿಗಳಾದರು. ದ್ರೌಪದಿಯಲ್ಲಿ ಎಲ್ಲರೂ ಮಕ್ಕಳನ್ನು ಪಡೆದರು. ಯುಧಿಷ್ಠಿರನ ಮಗ ಪ್ರತಿವಿಂಧ್ಯ, ಭೀಮಸೇನನ ಮಗ ಸುತಸೋಮ, ಅರ್ಜುನನ ಮಗ ಶ್ರುತಕೀರ್ತಿ, ನಕುಲನ ಮಗ ಶತಾನೀಕ ಮತ್ತು ಸಹದೇವನ ಮಗ ಶ್ರುತಕರ್ಮ.

ಶೈಬ್ಯಸ್ಯ ಕನ್ಯಾಂ ದೇವಕೀಂ ನಾಮೋಪಯೇಮೇ ಯುಧಿಷ್ಠಿರಃ । ತಸ್ಯಾಂ
ಪುತ್ರಂ ಜನಯಾಮಾಸ ಯುಧಿಷ್ಠಿರೋ ಯೌಧೇಯಂ ನಾಮ ॥೬೮॥

ಯುಧಿಷ್ಠಿರನು ಶೈಬ್ಯದೇಶದ ಕನ್ಯೆಯಾದ ದೇವಕಿಯನ್ನು ಮದುವೆಮಾಡಿಕೊಂಡು ಅವಳಲ್ಲಿ ಯೌಧೇಯನೆಂಬ ಮಗನನ್ನು ಪಡೆದನು.

ಭೀಮಸೇನಸ್ತು ಖಲು ವಾರಾಣಸ್ಯಾಂ ಕಾಶಿರಾಜಕನ್ಯಾಂ ಬಲಧಾರೀಂ
ನಾಮೋದವಹತ್ ಸ್ವಯಂವರಸ್ಥಾಮ್ । ತಸ್ಯಾಮಸ್ಯ ಜಜ್ಞೇ ಶರ್ವತ್ರಾತಃ ॥

ಭೀಮಸೇನನಾದರೋ ಕಾಶಿರಾಜನ ಮಗಳಾದ ಬಲಧಾರಿಯನ್ನು ಸ್ವಯಂವರದಲ್ಲಿ ವಿವಾಹವಾದನು. ಅವಳಲ್ಲಿ ಅವನಿಗೆ ಶರ್ವತ್ರಾತನೆಂಬ ಮಗನು ಜನಿಸಿದನು.

ಭೀಮಸೇನಸ್ತು ಪೂರ್ವಮೇವ ಹಿಡಿಂಬಾಯಾಂ ರಾಕ್ಷಸ್ಯಾಂ
ಜನಯಾಮಾಸ ಘಟೋತ್ಕಚಂ ನಾಮ ॥೭೦॥

ಇದಕ್ಕೆ ಮೊದಲೇ ಭೀಮಸೇನನು ರಾಕ್ಷಸಿಯಾದ ಹಿಡಿಂಬೆಯಲ್ಲಿ ಘಟೋತ್ಕಚನೆಂಬ ಮಗನನ್ನು ಪಡೆದಿದ್ದನು.

ಅರ್ಜುನಸ್ತು ಖಲು ದ್ವಾರವತೀಂ ಗತ್ವಾ ಭಗವತೋ
ವಾಸುದೇವಸ್ಯ ಭಗಿನೀಂ ಸುಭದ್ರಾಂ ನಾಮೋದವಹತ್ ।
ತಸ್ಯಾಮಭಿಮನ್ಯುಂ ನಾಮ ಪುತ್ರಂ ಜನಯಾಮಾಸ ॥೭೧॥

ಅರ್ಜುನನು ದ್ವಾರಾವತಿಗೆ ಹೋಗಿ ಭಗವಂತನಾದ ಕೃಷ್ಣನ ತಂಗಿಯಾದ ಸುಭದ್ರೆಯನ್ನು ವಿವಾಹವಾದನು. ಅವಳಲ್ಲಿ ಅಭಿಮನ್ಯುವೆಂಬ ಮಗನನ್ನು ಪಡೆದನು.

ಅರ್ಜುನಶ್ಚ ನಾಗಕನ್ಯಾಯಾಮುಲೂಪ್ಯಾಮಿರಾವಂತಂ
ನಾಮ ಪುತ್ರಂ ಜನಯಾಮಾಸ ॥೭೨॥

ಅರ್ಜುನನು ನಾಗಕನ್ಯೆಯಾದ ಉಲೂಪಿಯಲ್ಲಿ ಇರಾವಂತನೆಂಬ ಮಗನನ್ನು ಪಡೆದನು.

ತತೋ ಮಣಲೂರುಪತಿಕನ್ಯಾಯಾಂ ಚಿತ್ರಾಂಗದಾಯಾಮರ್ಜುನಃ
ಪುತ್ರಮುತ್ಪಾದಯಾಮಾಸ ಬಭ್ರುವಾಹನಂ ನಾಮ ॥೭೩॥

ಅನಂತರ ಅರ್ಜುನನು ಮಣಲೂರುರಾಜಕುಮಾರಿಯಾದ ಚಿತ್ರಾಂಗದೆಯನ್ನು ಮದುವೆಯಾಗಿ ಅವಳಲ್ಲಿ ಬಭ್ರುವಾಹನನೆಂಬ ಮಗನನ್ನು ಪಡೆದನು.

ನಕುಲಸ್ತು ಖಲು ಚೈದ್ಯಾಂ ರೇಣುಮತೀಂ ನಾಮೋಪಯೇಮೇ ।
ತಸ್ಯಾಂ ಪುತ್ರಂ ಜನಯಾಮಾಸ ನಿರಮಿತ್ರಂ ನಾಮ ॥೭೪॥

ನಕುಲನು ಚೇದಿದೇಶದ ರೇಣುಮತಿಯನ್ನು ವಿವಾಹಮಾಡಿಕೊಂಡನು. ಅವಳಲ್ಲಿ ನಿರಮಿತ್ರ ಎಂಬ ಪುತ್ರನನ್ನು ಪಡೆದನು.

ಸಹದೇವಸ್ತು ಖಲು ಮಾದ್ರೀಮೇವ ಸ್ವಯಂವರೇ ವಿಜಯಾಂ
ನಾಮೋದವಹದ್ ಭಾರ್ಯಾಮ್ । ತಸ್ಯಾಂ ಪುತ್ರಂ ಜನಯಾಮಾಸ
ಸುಹೋತ್ರಂ ನಾಮ ॥೭೫॥

ಸಹದೇವನಾದರೋ ಮದ್ರದೇಶದ ರಾಜಕುಮಾರಿಯಾದ ವಿಜಯಾ ಎಂಬುವಳನ್ನು ಪತ್ನಿಯಾಗಿ ಪಡೆದು ಅವಳಲ್ಲಿ ಸುಹೋತ್ರನೆಂಬ ಮಗನನ್ನು ಪಡೆದನು.

ಏತೇ ತ್ರಯೋದಶ ಪುತ್ರಾಃ ಪಾಂಡವಾನಾಮ್ ॥೭೬॥

ಪಾಂಡವರ ಮಕ್ಕಳು ಈ ಹದಿಮೂರು ಜನರು.

ವಿರಾಟಸ್ಯ ದುಹಿತರಮುತ್ತರಾಂ ನಾಮಾಭಿಮನ್ಯುರುಪಯೇಮೇ ।
ತಸ್ಯಾಮಸ್ಯ ಪರಾಸುರ್ಗರ್ಭೋಽಜಾಯತ ॥೭೭॥

ಅಭಿಮನ್ಯುವು ವಿರಾಟನ ಮಗಳಾದ ಉತ್ತರೆಯನ್ನು ಮದುವೆಮಾಡಿಕೊಂಡನು. ಅವಳಲ್ಲಿ ಅವನಿಗೆ ಮೃತವಾದ ಶಿಶುವು ಜನಿಸಿತು.

ತಮುತ್ಸಂಗೇ ಪ್ರತಿಜಗ್ರಾಹ ಪೃಥಿವೀ ನಿಯೋಗಾತ್ ಪುರುಷೋತ್ತಮಸ್ಯ ॥

ಭೂಮಿಯ ಅಪ್ಪಣೆಯಂತೆ (ಉತ್ತರೆಯು) ಆ ಶಿಶುವನ್ನು ಪುರುಷೋತ್ತಮನಾದ ಕೃಷ್ಣನ ತೊಡೆಯ ಮೇಲೆ ಇಟ್ಟಳು.

ಸುಭದ್ರಾಯಾಃ ಷಾಣ್ಮಾಸಿಕಂ ಗರ್ಭಮಿಮಂ ಜೀವಯಾಮಿ
ಪಾದಸ್ಪರ್ಶಾದಿತಿ ವಾಸುದೇವ ಉವಾಚ ॥೭೮॥

ಆರುತಿಂಗಳಿಗೆ ಜನಿಸಿದ ಸುಭದ್ರೆಯ ಈ ಗರ್ಭವನ್ನು ಪಾದಸ್ಪರ್ಶದಿಂದ ಬದುಕಿಸುತ್ತೇನೆಂದು ಕೃಷ್ಣನು ಹೇಳಿದನು.

ಅಹಂ ಜೀವಯಾಮಿ ಕುಮಾರಮನಂತವೀರ್ಯಂ ಜಾತ
ಏವಾಯಮಜಾಯತ । ಅಭಿಮನ್ಯೋಃ ಸತ್ಯೇನ ಚೇಯಂ ಪೃಥಿವೀ
ಧಾರಯತ್ವಿತಿ ವಾಸುದೇವಸ್ಯ ಪಾದಸ್ಪರ್ಶಾತ್ ಸಜೀವೋಽಜಾಯತ ॥

ಹುಟ್ಟುವಾಗಲೇ ಶ್ವಾಸವಿಲ್ಲದೆ ಹುಟ್ಟಿದ ಈ ಶಿಶುವನ್ನು ನಾನು ಬದುಕಿಸುತ್ತೇನೆ. ಅಭಿಮನ್ಯುವಿನ ಸತ್ಯದಿಂದ ಮಹಾಪರಾಕ್ರಮಶಾಲಿಯಾದ ಈ ಶಿಶುವನ್ನು ಭೂಮಿಯು ಧರಿಸಲಿ (ಎಂದು ಹೇಳಿದನು) ಕೃಷ್ಣನ ಪಾದಸ್ಪರ್ಶದಿಂದ ಮಗುವಿಗೆ ಜೀವ ಕೂಡಿಕೊಂಡಿತು.

ನಾಮ ತಸ್ಯಾಕರೋತ್ ಸುಭದ್ರಾ । ಪರಿಕ್ಷೀಣೇ ಕುಲೇ ಜಾತ
ಉತ್ತರಾಯಾಂ ಪರಂತಪಃ । ಪರೀಕ್ಷಿದಭಯತ್ ತಸ್ಮಾತ್
ಸೌಭದ್ರಾತ್ ತು ಯಶಸ್ವಿನಃ ॥೮೦॥

ಅವನಿಗೆ ಸುಭದ್ರೆಯು ನಾಮಕರಣವನ್ನು ಮಾಡಿದಳು. ಕುಲಕ್ಷಯವು ಸನ್ನಿಹಿತವಾದಾಗ ಸುಭದ್ರೆಯ ಮಗನಾದ ಅಭಿಮನ್ಯುವಿನಿಂದ ಈ ಶತ್ರುತಾಪನನಾದ ಕುಮಾರನು ಹುಟ್ಟಿದನು. ಆದ್ದರಿಂದ ಪರೀಕ್ಷಿತ್ ಎಂದು ಹೆಸರು ಬಂದಿತು.

ಪರೀಕ್ಷಿತ್ ತು ಖಲು ಮುದ್ರವತೀಂ ನಾಮೋಪಯೇಮೇ ।
ತಸ್ಯಾಂ ತತ್ರ ಭವಾನ್ ಜನಮೇಜಯಃ ॥೮೧॥

ಪರೀಕ್ಷಿತನು ಮುದ್ರವತಿಯನ್ನು ವಿವಾಹಮಾಡಿಕೊಂಡನು. ಅವಳಲ್ಲಿ ಅವನಿಗೆ ಜನಿಸಿದ ಮಗನು ನೀನೇ ಜನಮೇಜಯ.

ಜನಮೇಜಯಾತ್ತು ಭವತಃ ಖಲು ವಪುಷ್ಟಮಾಯಾಂ
ಪುತ್ರೌ ದ್ವೌ ಶತಾನೀಕಃ ಶಂಖಶ್ಚ ॥೮೨॥

ಜನಮೇಜಯನಾದ ನಿನ್ನಿಂದ ವಪುಷ್ಟಮೆಯಲ್ಲಿ ಶತಾನೀಕ ಮತ್ತು ಶಂಖ ಎಂಬ ಎರಡು ಮಕ್ಕಳು ಜನಿಸಿದರಷ್ಟೆ.

ಶತಾನೀಕಸ್ತು ಖಲು ವೈದೇಹೀಮುಪಯೇಮೇ ।
ತಸ್ಯಾಮಸ್ಯ ಜಜ್ಞೇ ಪುತ್ರೋಽಶ್ವಮೇಧದತ್ತಃ ॥೮೩॥

ಶತಾನೀಕನು ವೈದೇಹಿಯನ್ನು ಮದುವೆ ಮಾಡಿಕೊಂಡನು. ಅವಳಲ್ಲಿ ಅವನಿಗೆ ಅಶ್ವಮೇಧದತ್ತನೆಂಬ ಮಗನು ಜನಿಸಿದನು.

ಇತ್ಯೇವ ಪೂರೋರ್ವಂಶಶ್ಚ ಪಾಂಡವಾನಾಂ ಚ ಕೀರ್ತಿತಃ ।
ಪೂರೋರ್ವಂಶಮಿಮಂ ಶ್ರುತ್ವಾ ಸರ್ವಪಾಪೈಃ ಪ್ರಮುಚ್ಯತೇ ॥೮೪॥

ಇದು ಪುರುವಿನ ಮತ್ತು ಪಾಂಡವರ ವಂಶ. ಈ ಪುರುವಂಶವನ್ನು ಶ್ರವಣಮಾಡಿದವನು ಸರ್ವಪಾಪಗಳಿಂದಲೂ ನಿರ್ಮುಕ್ತನಾಗುತ್ತಾನೆ.

॥ ಇತಿ ಶ್ರೀಮನ್ಮಹಾಭಾರತೇ ಶತಸಹಸ್ರಿಕಾಯಾಂಸಂಹಿತಾಯಾಮಾದಿಪರ್ವಣಿ
ಷಟ್‌ಪಂಚಾಶತ್ತಮೋಽಧ್ಯಾಯಃ ॥
॥ ಇತಿ ಸಂಭವಪರ್ವಣಿ ಚತುರ್ಥೋಽಧ್ಯಾಯಃ ॥

ಇಲ್ಲಿಗೆ ಮಹಾಭಾರತದ ಆದಿಪರ್ವದಲ್ಲಿ ಐವತ್ತಾರನೆಯ ಅಧ್ಯಾಯ ಮುಗಿಯಿತು.

★★★★★

ಮಹಾಭಾರತ ತಾತ್ಪರ್ಯ ನಿರ್ಣಯ

ಅಧ್ಯಾಯ-೧೦

ಕಲಿಸ್ತ್ವಯಂ ಬ್ರಹ್ಮವರಾದಿದಾನೀಂ
ವಿಬಾಧತೇಽಸ್ಮಾನ್ ಸಕಲಾನ್ ಪ್ರಜಾಶ್ಚ ।
ಅಜ್ಞಾನ ಮಿಥ್ಯಾಮತಿರೂಪತೋಽಸೌ
ಪ್ರವಿಶ್ಯ ಸಜ್ಞಾನವಿರುದ್ಧರೂಪಃ ॥೩೬॥

ಯಥಾರ್ಥಜ್ಞಾನಕ್ಕೆ ವಿರುದ್ಧ ಸ್ವರೂಪನಾದ ಈ ಕಲಿ ಬ್ರಹ್ಮವರದಿಂದ ಈಗ ಅಜ್ಞಾನ ಮಿಥ್ಯಾಜ್ಞಾನರೂಪದಿಂದ ನಮ್ಮನ್ನೂ ಎಲ್ಲ ಜನರನ್ನೂ ಪ್ರವೇಶಿಸಿ ಬಾಧಿಸುತ್ತಿದ್ದಾನೆ.

ತ್ವದಾಜ್ಞಯಾ ತಸ್ಯ ವರೋಽಬ್ಜಜೇನ ದತ್ತಃ ಸ ಆವಿಶ್ಯ ಶಿವಂ ಚಕಾರ ।
ಕದಾಗಮಾಂಸ್ತಸ್ಯ ಕುಯುಕ್ತಿಬಾಧಾನ್ ನ ಹಿ ತ್ವದನ್ಯಶ್ಚರಿತುಂ ಸಮರ್ಥಃ ॥

ನಿನ್ನ ಆಜ್ಞೆಯಿಂದಲೆ ಬ್ರಹ್ಮ ಅವನಿಗೆ ವರವಿತ್ತಿದ್ದ. ಅದರಿಂದ ಆತ ಶಿವನಲ್ಲಿ ಆವೇಶಗೊಂಡು ದುಷ್ಟಶಾಸ್ತ್ರಗಳನ್ನು ರಚಿಸಿದ. ಅವನ ಕುಯುಕ್ತಿಗಳನ್ನು ಖಂದನ ಮಾಡಲು ನಿನಗಿಂತ ಬೇರೆ ಸಮರ್ಥರಿಲ್ಲ.

ವೇದಾಶ್ಚ ಸರ್ವೇ ಸಹಶಾಸ್ತ್ರ ಸಂಘಾ ಉತ್ಸಾದಿತಾಸ್ತೇನ ನ ಸಂತಿ ತೇಽದ್ಯ ।
ತತ್ಸಾಧು ಭೂಮಾವವತೀರ್ಯ ವೇದಾನುದ್ಧೃತ್ಯ ಶಾಸ್ತ್ರಾಣಿ ಕುರುಷ್ವ ಸಮ್ಯಕ್

ಶಾಸ್ತ್ರಸಮೂಹಗಳ ಜೊತೆಗೆ ಸಕಲ ವೇದಗಳೂ ಕಲಿಯಿಂದ ನಾಶಹೊಂದಿವೆ. ಅವು ಈಗ ಇಲ್ಲ. ಅದರಿಂದ ನೀನು ಭೂಮಿಯಲ್ಲಿ ಅವತರಿಸಿ ವೇದಗಳನ್ನು ಉದ್ಧರಿಸಿ ಶಾಸ್ತ್ರಗಳನ್ನೂ ಚೆನ್ನಾಗಿ ರಚಿಸು.

ಅದೃಶ್ಯಮಜ್ಞೇಯಮತರ್ಕ್ಯರೂಪಂ ಕಲಿಂ ನಿಲೀನಂ ಹೃದಯೇಽಖಿಲಸ್ಯ ।
ಸಚ್ಛಾಸ್ತ್ರಶಸ್ತ್ರೇಣ ನಿಹತ್ಯ ಶೀಘ್ರಂ ಪದಂ ನಿಜಂ ದೇಹಿ ಮಹಾಜನಸ್ಯ ॥

ಕಲಿ ಅದೃಶ್ಯ , ಅಜ್ಞೇಯ. ಅವನ ರೂಪವನ್ನು ಊಹಿಸಲೂ ಸಾಧ್ಯವಿಲ್ಲ. ಎಲ್ಲರ ಹೃದಯದಲ್ಲಿ ಅಡಗಿರುತ್ತಾನೆ. ಅವನನ್ನು ಸಚ್ಛಾಸ್ತ್ರವೆಂಬ ಶಸ್ತ್ರದಿಂದ ವಧಿಸಿ ಬೇಗನೆ ಭಕ್ತಜನರಿಗೆ ನಿನ್ನ ಲೋಕವನ್ನು ನೀಡು.

ಋತೇ ಭವಂತಂ ನ ಹಿ ತಂ ನಿಹಂತಾ
ತ್ವಮೇಕ ಏವಾಖಿಲಶಕ್ತಿಪೂರ್ಣಃ ।
ತತೋ ಭವಂತಂ ಶರಣಂ ಗತಾ ವಯಂ
ತಮೋನಿಹತ್ಯೈ ನಿಜಬೋಧವಿಗ್ರಹಮ್ ॥೪೦॥

ನೀನು ಹೊರತು ಇನ್ನಾರೂ ಕಲಿಯನ್ನು ಕೊಲ್ಲುವವರಿಲ್ಲ. ನೀನೊಬ್ಬನೆ ಸರ್ವಶಕ್ತಿ ಪೂರ್ಣ. ಅದರಿಂದ ಅಜ್ಞಾನನಾಶಕ್ಕಾಗಿ ಸ್ವರೂಪಜ್ಞಾನ ಶರೀರಯಾದ ನಿನ್ನನ್ನೆ ನಾನು ಶರಣುಹೊಂದಿರುವೆವು.

ಇತೀರಿತಸ್ತೈರಭಯಂ ಪ್ರದಾಯ ಸುರೇಶ್ವರಾಣಾಂ ಪರಮೋಽಪ್ರಮೇಯಃ ।
ಪ್ರಾದುರ್ಬಭೂವಾಮೃತಭೂರಿಮಾಯಾಂ ವಿಶುದ್ಧ ವಿಜ್ಞಾನ ಘನಸ್ವರೂಪಃ ॥

ದೇವತೆಗಳು ಹೀಗೆ ಹೇಳಿದಾಗ ಶುದ್ಧಜ್ಞಾನ ಸ್ವರೂಪನೂ ಮುಕ್ತರಿಗೆ ಆಶ್ರಯನೂ ಅಪ್ರಮೇಯನೂ ಸರ್ವೋತ್ತಮನೂ ಆದ ಶ್ರೀಹರಿ ದೇವೋತ್ತಮರಿಗೆ ಅಭಯ ನೀಡಿ. ಭೂಮಿಯಲ್ಲಿ ಪ್ರಾದುರ್ಭವಿಸಿದ.

ವಸಿಷ್ಠನಾಮಾ ಕಮಲೋದ್ಭವಾತ್ಮಜಃ
ಸುತೋಽಸ್ಯ ಶಕ್ತಿಸ್ತನಯಃ ಪರಾಶರಃ ।
ತಸ್ಯೋತ್ತಮಂ ಸೋಽಪಿ ತಪೋಽಚರದ್ಧರಿಃ
ಸುತೋ ಮಮ ಸ್ಯಾದಿತಿ ತದ್ಧರಿರ್ದದೌ ॥೪೨॥

ಬ್ರಹ್ಮನ ಪುತ್ರ ವಸಿಷ್ಠ. ವಸಿಷ್ಠನ ಪುತ್ರ ಶಕ್ತಿ . ಶಕ್ತಿಯ ಪುತ್ರ ಪರಾಶರ. ಪರಾಶರನು ಶ್ರೀಹರಿ ತನಗೆ ಪುತ್ರನಾಗಿ ಅವತರಿಸಬೇಕೆಂದು ಉತ್ತಮವಾದ ತಪಸ್ಸು ಮಾಡಿದ. ಹರಿ ಅವನಿಗೆ ಆ ವರವನ್ನಿತ್ತ .

ಉವಾಚ ಚೈನಂ ಭಗವಾನ್ ಸುತೋಷಿತೋ
ವಸೋರ್ಮದೀಯಸ್ಯ ಸುತಾಸ್ತಿ ಶೋಭನಾ ।
ವನೇ ಮೃಗಾರ್ಥಂ ಚರತೋಽಸ್ಯ ವೀರ್ಯಂ
ಪಪಾತ ಭಾರ್ಯಾಂ ಮನಸಾ ಗತಸ್ಯ ॥೪೩॥

ಭಗವಂತ ಸಂತುಷ್ಟನಾಗಿ ಪರಾಶರನಿಗೆ ನುಡಿದ- 'ನನ್ನ ಭಕ್ತನಾದ ವಸುಚಕ್ರವರ್ತಿಗೆ ಪುಣ್ಯವತಿಯಾದ ಮಗಳಿದ್ದಾಳೆ. ಹೇಗೆಂದರೆ ಅವನು ಬೇಟೆಗಾಗಿ ಕಾಡಿನಲ್ಲಿ ಸಂಚರಿಸುತ್ತಿದ್ದಾಗ ಮಡದಿಯ ನೆನಪಾದುದರಿಂದ ವೀರ್ಯ ಪತನ ಹೊಂದಿತು.

ತಚ್ಛ್ಯೇನ ಹಸ್ತೇ ಪ್ರದದೌ ಸ ತಸ್ಯೈ
ದಾತುಂ ತದನ್ಯೇನ ತು ಯುಧ್ಯತೋಽಪತತ್ ।
ಜಗ್ರಾಸ ತನ್ಮತ್ಸ್ಯವಧೂರ್ಯಮಸ್ತು
ರ್ಜಲಸ್ಥಮೇನಾಂ ಜಗೃಹುಶ್ಚ ದಾಶಾಃ ॥೪೪॥

ವೀರ್ಯವನ್ನು ರಾಣಿಗೆ ಕೊಡಲು ಒಂದು ಗಿಡುಗನ ಕೈಗಿತ್ತ ರಾಜ. ಆ ಗಿಡುಗ ಇನ್ನೊಂದು ಗಿಡುಗನೊಡನೆ ಹೋರಾಡುವಾಗ ವೀರ್ಯ ಕೆಳಗೆ ಯಮುನೆಯ ನೀರಲ್ಲಿ ಬಿದ್ದಿತು. ಅದನ್ನು ಒಂದು ಹೆಣ್ಣು ಮೀನು ನುಂಗಿತು. ಮೀನನನ್ನು ಬೆಸ್ತರು ಹಿಡಿದರು.

ತದ್ಗರ್ಭತೋಽಭೂನ್ಮಿಥುನಂ ಸ್ವರಾಜ್ಞೇ
ನ್ಯವೇದಯನ್ಸೋಽಪಿ ವಸೋಃ ಸಮರ್ಪಯತ್ ।
ಪುತ್ರಂ ಸಮಾದಾಯ ಸುತಾಂ ಸ ತಸ್ಮೈ
ದದೌ ಸುತೋಽಭೂದಥ ಮತ್ಸ್ಯರಾಜಃ ॥೪೫॥

ಮೀನಿನ ಹೊಟ್ಟೆಯಿಂದ ಹೆಣ್ಣುಗಂಡು ಅವಳಿಮಕ್ಕಳು ಜನಿಸಿದರು. ಅವರನ್ನು ಬೆಸ್ತರು ತಮ್ಮ ಒಡೆಯನಿಗಿತ್ತರು. ಅವನು ವಸುರಾಜನಿಗೆ ನೀಡಿದ. ಆತ ಮಗನನ್ನು ಮಾತ್ರ ಇಟ್ಟುಕೊಂಡು ಮಗಳನ್ನು ಅವನಿಗೇ ಕೊಟ್ಟ. ಬಳಿಕ ಮಗ ಮತ್ಸ್ಯದ ಉದರದಿಂದ ಬಂದವನ್ನಾದ್ದರಿಂದ ಮತ್ಸ್ಯರಾಜನೆನಿಸಿದ.

ಕನ್ಯಾ ತು ಸಾ ದಾಶರಾಜಸ್ಯ ಸದ್ಮ-
ನ್ಯವರ್ಧತಾತೀವ ಸುರೂಪಯುಕ್ತಾ ।
ನಾಮ್ನಾ ಚ ಸಾ ಸತ್ಯವತೀತಿ ತಸ್ಯಾಂ
ತವಾತ್ಮಜೋಽಹಂ ಭವಿತಾಸ್ಮ್ಯಜೋಽಪಿ ॥೪೬॥

'ಆ ಕನ್ಯೆ ಬೆಸ್ತರ ಒಡೆಯನ ಮನೆಯಲ್ಲಿ ಅತ್ಯಂತ ಸೌಂದರ್ಯಯುಕ್ತಳಾಗಿ ಬೆಳೆದಿರುವಳು. ಅವಳ ಹೆಸರು ಸತ್ಯವತಿ ಎಂದು. ನಾನು ಜನನರಹಿತನಾಗಿದ್ದರೂ ಅವಳಲ್ಲಿ ನಿನ್ನ ಮಗನಾಗಿ ಹುಟ್ಟುತ್ತೇನೆ' ಎಂದು ಹರಿ ಪರಾಶರನಿಗೆ ವರವಿತ್ತ.

ಇತೀರಿತಶ್ಚಕ್ರಧರೇಣ ತಾಂ ಮುನಿ
ರ್ಜಗಾಮ ಮಾರ್ತಾಂಡಸುತಾಂ ಸಮುದ್ರಗಾಮ್ ।
ಉತ್ತಾರಯಂತೀಮಥ ತತ್ರ ವಿಷ್ಣುಃ
ಪ್ರಾದುರ್ಬಭೂವಾಶು ವಿಶುದ್ಧ ಚಿದ್ಘನಃ ॥೪೭॥

ಚಕ್ರಧಾರಿ ಶ್ರೀಹರಿ ಹೀಗೆ ಹೇಳಿದಾಗ ಪರಾಶರ ಸಮುದ್ರಗಾಮಿಯಾದ ಯಮುನಾ ನದಿಯನ್ನು ದಾಟಿಸುತ್ತಿದ್ದ ಸತ್ಯವತಿಯನ್ನು ಕಂಡು ವಿವಾಹ ಮಾಡಿಕೊಂಡ ಬಳಿಕ ಸಂಗ ಮಾಡಿದ. ಅವಳಲ್ಲಿ ತಕ್ಷಣವೆ ಶುದ್ಧಜ್ಞಾನ ಸ್ವರೂಪನಾದ ಹರಿ ಪ್ರಾದುರ್ಭವಿಸಿದ.

ವಿಸ್ತೀರ್ಣವಕ್ತ್ರಃ ಕಮಳಾಯತಾಕ್ಷೋ
ಬೃಹದ್ಭುಜಃ ಕಂಬುಸಮಾನಕಂಠಃ ।
ಸಮಸ್ತವೇದಾನ್ಮುಖತಃ ಸಮುದ್ಗಿರನ್
ಅನಂತಚಂದ್ರಾಧಿಕಕಾಂತಸನ್ಮುಖಃ ॥೫೪॥

ವಿಶಾಲವಾದ ಎದೆಯವರು, ಕಮಲದಂಥ ನಿಡಿದಾದ ಕಣ್ಣಿನವರು, ನಿಡಿದಾದ ತೋಳಿನವರು, ಶಂಖವನ್ನು ಹೋಲುವ ಕಂಠದವರು, ಸಮಸ್ತ ವೇದಗಳನ್ನು ಮುಖದಿಂದ ಉಪದೇಶಿಸುವವರು, ಅನಂತ ಚಂದ್ರರಿಗಿಂತಲೂ ಅಧಿಕಕಾಂತಿಯ ಮುಖವುಳ್ಳವರು, ವೇದವ್ಯಾಸರು.

ಪ್ರಬೋಧಮುದ್ರಾಭಯದೋರ್ದ್ವಯಾನ್ವಿತೋ
ಯಜ್ಞೋಪವೀತಾಜಿನಮೇಖಲೋಲ್ಲಸನ್ ।
ದೃಶಾ ಮಹಾಜ್ಞಾನಭುಜಂಗದಷ್ಟ-
ಮುಜ್ಜೀವಯಾನೋ ಜಗದತ್ಯರೋಚತ ॥೫೫॥

ಜ್ಞಾನ ಅಭಯ ಮುದ್ರೆಗಳನ್ನು ತೋರುವ ಎರಡು ಕೈಗಳುಳ್ಳವರು, ಯಜ್ಞೋಪವೀತ ಕೃಷ್ಣಾಜಿನ ಮುಂಜಿಗಳಿಂದ ಶೋಭಿಸುತ್ತ, ಮಹಾ ಅಜ್ಞಾನವೆಂಬ ಹಾವಿನ ಕಡಿತಕ್ಕೆ ತುತ್ತಾದ ಜಗತ್ತನ್ನು ಕಣ್ಣನೋಟದಿಂದಲೆ ಪುನರುಜ್ಜೀವನಗೊಳಿಸುವವರು, ಇಂಥ ವೇದವ್ಯಾಸರು ಜಗತ್ತನ್ನೇ ಮೀರಿಸುವ ಪ್ರಕಾಶದಿಂದ ಬೆಳಗಿದರು.

ಸ ಲೋಕಧರ್ಮಾಭಿರಿರಕ್ಷಯಾ ಪಿತು-
ರ್ದ್ವಿಜತ್ವಮಾಪ್ಯಾಶು ಪಿತುರ್ದದೌ ನಿಜಮ್ ।

ಜ್ಞಾನಂ ತಯೋಃ ಸಂಸ್ಮೃತಿಮಾತ್ರತಃಸ್ಸದಾ
ಪ್ರತ್ಯಕ್ಷಭಾವಂ ಪರಮಾತ್ಮನೋ ದದೌ ॥೫೬॥

ಲೋಕಮರ್ಯಾದೆಯನ್ನು ಕಾಪಾಡುವ ಇಚ್ಛೆಯಿಂದ ವೇದವ್ಯಾಸರು ತಕ್ಷಣವೆ, ಅಂದರೆ ಪ್ರಾದುರ್ಭವಿಸಿ ಏಳುದಿನಗಳೊಳಗೆ, ತಂದೆಯಿಂದ ಉಪನಯನ ಸಂಸ್ಕಾರ ಪಡೆದು ತಂದೆಗೆ ತನ್ನ ಜ್ಞಾನವನ್ನು ಉಪದೇಶಿಸಿದರು. ತಂದೆ ತಾಯಿಗಳಿಬ್ಬರಿಗೂ ತಾನು ಸ್ಮರಣಮಾತ್ರದಿಂದಲೆ ಪ್ರತ್ಯಕ್ಷನಾಗುವ ವರವಿತ್ತರು.

ದ್ವೈಪಾಯನಃ ಸೋಽಥ ಜಗಾಮ ಮೇರುಂ
ಚತುರ್ಮುಖಾದ್ಯೈರನುಗಮ್ಯಮಾನಃ ।
ಉದ್ಧೃತ್ಯ ವೇದಾನಖಿಲಾನ್ಸುರೇಭ್ಯೋ
ದದೌ ಮುನಿಭ್ಯಶ್ಚ ಯಥಾದಿಸೃಷ್ಟೌ ॥೫೭॥

ಬಳಿಕ ದ್ವೀಪದಲ್ಲಿ ಅವತರಿಸಿದ ವೇದವ್ಯಾಸರು ಬ್ರಹ್ಮಾದಿಗಳು ತನ್ನನ್ನು ಹಿಂಬಾಲಿಸುತ್ತಿದ್ದಂತೆ ಮೇರು ಪರ್ವತಕ್ಕೆ ಹೋಗಿ ಆದಿ ಸೃಷ್ಟಿಯಲ್ಲಿ ಹೇಗೋ ಹಾಗೆ ಎಲ್ಲ ವೇದಗಳನ್ನೂ ಉದ್ಧರಿಸಿ ದೇವತೆಗಳಿಗೂ ಮುನಿಗಳಿಗೂ ಉಪದೇಶಿಸಿದರು.

ಸರ್ವಾಣಿ ಶಾಸ್ತ್ರಾಣಿ ತಥೈವ ಕೃತ್ವಾ
ವಿನಿರ್ಣಯಂ ಬ್ರಹ್ಮಸೂತ್ರಂ ಚಕಾರ ।
ತಚ್ಛುಶ್ರುವುರ್ಬ್ರಹ್ಮಗಿರೀಶಮುಖ್ಯಾಃ
ಸುರಾ ಮುನೀನಾಂ ಪ್ರವರಾಶ್ಚ ತಸ್ಮಾತ್ ॥೫೮॥

ವೇದವ್ಯಾಸರು ಸಕಲ ಶಾಸ್ತ್ರಗಳನ್ನೂ ನಿರ್ಮಿಸಿ ಅವೆಲ್ಲಕ್ಕೂ ವಿಶೇಷವಾಗಿ ತಾತ್ಪರ್ಯ ನಿರ್ಣಾಯಕವಾದ ಬ್ರಹ್ಮಸೂತ್ರವನ್ನೂ ರಚಿಸಿದರು. ಅದನ್ನು ಬ್ರಹ್ಮರುದ್ರಾದಿ ದೇವತೆಗಳೂ ಮುನಿಶ್ರೇಷ್ಠರೂ ವೇದವ್ಯಾಸರಿಂದಲೆ ಶ್ರವಣ ಮಾಡಿದರು.

ಸಮಸ್ತ ಶಾಸ್ತ್ರಾರ್ಥನಿದರ್ಶನಾತ್ಮಕಂ
ಚಕ್ರೇ ಮಹಾಭಾರತ ನಾಮಧೇಯಮ್ ।
ವೇದೋತ್ತಮಂ ತಚ್ಚ ವಿಧಾತೃಶಂಕರ-
ಪ್ರಧಾನಕೈಸ್ತನ್ಮುಖತಃ ಸುರೈಃ ಶ್ರುತಮ್ ॥೫೯॥

ಸಕಲ ಶಾಸ್ತ್ರಾರ್ಥಗಳಿಗೂ ನಿದರ್ಶನ ರೂಪವಾಗಿ ವೇದಕ್ಕಿಂತಲೂ ಉತ್ತಮವಾದ ಮಹಾಭಾರತವೆಂಬ ಗ್ರಂಥವನ್ನೂ ವೇದವ್ಯಾಸರು ರಚಿಸಿದರು. ಅದನ್ನೂ ಬ್ರಹ್ಮರುದ್ರಾದಿ ದೇವತೆಗಳು ವೇದವ್ಯಾಸರ ಮುಖದಿಂದಲೆ ಶ್ರವಣ ಮಾಡಿದರು.

ಅಥೋ ಗಿರೀಶಾದಿ ಮನೋನುಶಾಯೀ
ಕಲಿರ್ಮಮಾರಾಶು ಸುವಾಙ್ಮಯೈ ಶರೈಃ ।
ನಿಕೃತ್ತಶೀರ್ಷೋ ಭಗವನ್ಮುಖೇರಿತೈ
ಸುರಾಶ್ಚ ಸಜ್ಞಾನಸುಧಾರಸಂ ಪಪುಃ ॥೬೦॥

ಭಗವಂತನ ಮುಖದಿಂದ ಹೊರಹೊಮ್ಮಿದ ಒಳ್ಳೆಯ ವಾಙ್ಮಯ ಬಾಣಗಳಿಂದ ರುದ್ರಾದಿಗಳ ಮನದಲ್ಲಿ ಮನೆಮಾಡಿದ್ದ ಕಲಿ ಶಿರಶ್ಛೇದಗೊಂಡು ಬೇಗನೆ ಮರಣ ಹೊಂದಿದ. ದೇವತೆಗಳು ಒಳ್ಳೆಯ ಜ್ಞಾನಾಮೃತ ರಸವನ್ನು ಪಾನಮಾಡಿದರು.

ಅಥೋ ಮನುಷ್ಯೇಷು ತಥಾಸುರೇಷು
ರೂಪಾಂತರೈಃ ಕಲಿರೇವಾವಶಿಷ್ಟಃ ।
ತತೋ ಮನುಷ್ಯೇಷು ಚ ಸತ್ಸು ಸಂಸ್ಥಿತೋ
ವಿನಾಶ್ಯ ಇತ್ಯೇಷ ಹರಿರ್ವ್ಯಚಿಂತಯತ್ ॥೬೧॥

ಆದರೂ ಮನುಷ್ಯರಲ್ಲಿ ಮತ್ತು ಅಸುರರಲ್ಲಿ ಬೇರೆ ರೂಪಗಳಿಂದ ಇದ್ದ ಕಲಿ ಇನ್ನೂ ಸಾಯದೆ ಉಳಿದೇ ಇದ್ದ. ಅದರಿಂದ ಮನುಷ್ಯೋತ್ತಮರಲ್ಲಿ ಇರುವ ಕಲಿಯನ್ನು ನಾಶಪಡಿಸಬೇಕೆಂದು ವೇದವ್ಯಾಸರು ಆಲೋಚಿಸಿದರು.

ತತೋ ನೃಣಾಂ ಕಾಲಬಲಾತ್ ಸುಮಂದ-
ಮಾಯುರ್ಮತಿಂ ಕರ್ಮ ಚ ವೀಕ್ಷ್ಯ ಕೃಷ್ಣಃ ।
ವಿವ್ಯಾಸ ವೇದಾನ್ ಸ ವಿಭುಶ್ಚತುರ್ಧಾ
ಚಕ್ರೇ ತಥಾ ಭಾಗವತಂ ಪುರಾಣಮ್ ॥೬೨॥

ಮನುಷ್ಯೋತ್ತಮರಿಗೆ ಕಾಲಪ್ರಭಾವದಿಂದ ಆಯುಷ್ಯ ಬುದ್ಧಿ ಕರ್ಮಾಚರಣೆ ಎಲ್ಲವೂ ಕಡಿಮೆಯಾಗಿರುವುದನ್ನು ಕಂಡು ಸರ್ವಶಕ್ತರಾದ ವೇದವ್ಯಾಸರು ಮೂಲವೇದಗಳನ್ನು ನಾಲ್ಕು ಭಾಗವಾಗಿ ವಿಭಾಗಿಸಿದರು ಮತ್ತು ವೈಷ್ಣವ ಪುರಾಣಗಳನ್ನು ರಚಿಸಿದರು.

ಯೇ ಯೇ ಚ ಸಂತಸ್ತಮಸಾನುವಿಷ್ಟಾಸ್ತಾಂ
ಸ್ತಾನ್ಸುವಾಕ್ಯೈಸ್ತಮಸೋ ವಿಮುಂಚನ್ ।
ಚಚಾರ ಲೋಕಾನ್ ಸ ಪಥಿ ಪ್ರಯಾಂತಂ
ಕೀಟಂ ವ್ಯಪಶ್ಯತ್ತಮುವಾಚ ಕೃಷ್ಣಃ ॥೬೩॥

ಯಾವ ಯಾವ ಸಜ್ಜನರು ಅಜ್ಞಾನಾವೇಶಕ್ಕೊಳಗಾಗಿದ್ದರೋ ಅವರನ್ನೆಲ್ಲ ಒಳ್ಳೆಯ ಉಪದೇಶಗಳಿಂದ ಅಜ್ಞಾನಮುಕ್ತರನ್ನಾಗಿ ಮಾಡುತ್ತ ವೇದವ್ಯಾಸರು ಲೋಕಸಂಚಾರ ಮಾಡಿದರು. ಒಮ್ಮೆ ದಾರಿಯಲ್ಲಿ ಓಡಾಡುತ್ತಿದ್ದ ಒಂದು ಕೀಟವನ್ನು ಕಂಡರು. ಅದಕ್ಕೆ ಹೀಗೆ ಹೇಳಿದರು.

ಭವಸ್ವ ರಾಜಾ ಕುಶರೀರಮೇತತ್ ತ್ಯಕ್ತ್ವೇತಿ ನೈಚ್ಛತ್ ತದಸೌ ತತಸ್ತಮ್ ।
ಅತ್ಯಕ್ತದೇಹಂ ನೃಪತಿಂ ಚಕಾರ ಪುರಾ ಸ್ವಭಕ್ತಂ ವೃಷಲಂ ಸುಲುಬ್ಧಮ್ ॥೬೪॥

'ಈ ಕೆಟ್ಟ ಶರೀರವನ್ನು ತೊರೆದು ರಾಜನಾಗು' ಎಂದು ವೇದವ್ಯಾಸರು ಕೀಟಕ್ಕೆ ಹೇಳಿದರು. ಆದರೆ ಅದು ಶರೀರತ್ಯಾಗ ಮಾಡಲು ಒಪ್ಪಲಿಲ್ಲ. ಆದರಿಂದ ಶರೀರ ತ್ಯಾಗ ಮಾಡಿಸದೆಯೆ ರಾಜನನ್ನಾಗಿ ಮಾಡಿದರು. ಏಕೆಂದರೆ ಅವನು ಹಿಂದಿನ ಜನ್ಮದಲ್ಲಿ ತನ್ನ ಭಕ್ತನೆ ಆದ ಒಬ್ಬ ಶೂದ್ರನಾಗಿದ್ದ. ಆದರೆ ಮಹಾಲೋಭಿ.

ಲೋಭಾತ್ ಸ ಕೀಟತ್ವಮುಪೇತ್ಯ ಕೃಷ್ಣಪ್ರಸಾದತಶ್ಚಾಶು ಬಭೂವ ರಾಜಾ ।
ತದೈವ ತಂ ಸರ್ವನೃಪಾಃ ಪ್ರಣೇಮುರ್ದದುಃ ಕರಂ ಚಾಸ್ಯ ಯಥೈವ ವೈಶ್ಯಾ॥

ಲೋಭದಿಂದ ಕೀಟಜನ್ಮ ಹೊಂದಿದ್ದರೂ ವೇದವ್ಯಾಸರ ಅನುಗ್ರಹದಿಂದ ತಕ್ಷಣವೆ ರಾಜನಾದ. ಆಗಲೆ ಅವನಿಗೆ ಎಲ್ಲ ರಾಜರೂ ತಲೆಬಾಗಿದರು. ವೈಶ್ಯರಂತೆ ಕರವನ್ನೂ ಸಲ್ಲಿಸಿದರು.

ಉವಾಚ ತಂ ಭಗವಾನ್ ಮುಕ್ತಿಮಸ್ಮಿಂಸ್ತವ
ಕ್ಷಣೇ ದಾತುಮಹಂ ಸಮರ್ಥಃ ।
ತಥಾಪಿ ಸೀಮಾರ್ಥಮವಾಪ್ಯ ವಿಪ್ರತನುಂ
ವಿಮುಕ್ತೋ ಭವ ಮತ್ಪ್ರಸಾದಾತ್ ॥೬೬॥

ಭಗವಾನ್ ವ್ಯಾಸರು ಆ ಕೀಟಕ್ಕೆ ಹೇಳಿದರು, 'ನಾನು ನಿನಗೆ ಮುಕ್ತಿಯನ್ನು ಈ ಕ್ಷಣವೆ ಕೊಡಲು ಸಮರ್ಥ. ಆದರೂ ಲೋಕಮರ್ಯಾದಾರಕ್ಷಣೆಗಾಗಿ ಬ್ರಾಹ್ಮಣ ಜನ್ಮ ಹೊಂದಿಯೆ ನನ್ನ ಅನುಗ್ರಹದಿಂದ ಮುಕ್ತನಾಗು'.

ಜ್ಞಾನಂ ಚ ತಸ್ಮೈ ವಿಮಲಂ ದದೌ
ಸ ಮಹೀಂ ಚ ಸರ್ವಾಂ ಬುಭುಜೇ ತದಂತೇ ।
ತ್ಯಕ್ತ್ವಾ ತನುಂ ವಿಪ್ರವರತ್ವಮೇತ್ಯ ಪದಂ ಹರೇರಾಪ ಸುತತ್ವವೇದೀ ॥

ಆ ಕೀಟರಾಜನಿಗೆ ವೇದವ್ಯಾಸರು ನಿರ್ಮಲ ಜ್ಞಾನವಿತ್ತರು. ಆತ ಇಡಿ ಭೂಮಿಯನ್ನು ಆಳಿದ. ಕೊನೆಯಲ್ಲಿ ಆ ಶರೀರವನ್ನು ತೊರೆದು ಶ್ರೇಷ್ಠ ಬ್ರಾಹ್ಮಣ ಜನ್ಮ ಹೊಂದಿ ಒಳ್ಳೆಯ ತತ್ವಜ್ಞಾನಿಯಾಗಿ ಹರಿಪದವನ್ನು ಹೊಂದಿದ.

ಏವಂ ಬಹೂನ್ ಸಂಸೃತಿ ಬಂಧತಃ ಪ್ರಭು-
ರ್ವ್ಯಮೋಚಯದ್ ವ್ಯಾಸತನುರ್ಜನಾರ್ದನಃ ।
ಬಹೂನ್ಯಚಿಂತ್ಯಾನಿ ಚ ತಸ್ಯ ಕರ್ಮಾ-
ಣ್ಯಶೇಷದೇವೇಶಸದೋದಿತಾನಿ ॥೬೮॥

ಹೀಗೆ ಸರ್ವಶಕ್ತನಾದ ವ್ಯಾಸರೂಪಿ ಹರಿ ಅನೇಕ ಮಂದಿಯನ್ನು ಸಂಸಾರ ಬಂಧನದಿಂದ ಬಿಡುಗಡೆ ಹೊಂದಿಸಿದ. ಅವನ ಲೀಲೆಗಳು ಬಹಳ ಅಚಿಂತ್ಯ. ಎಲ್ಲ ದೇವಶ್ರೇಷ್ಠರು ಅವುಗಳನ್ನು ಸದಾ ಸ್ತುತಿಸುತ್ತಿದ್ದಾರೆ.

ಅಥಾಸ್ಯ ಪುತ್ರತ್ವಮವಾಪ್ತುಮಿಚ್ಛಂ-
ಶ್ಚಚಾರ ರುದ್ರಃ ಸುತಪಸ್ತದೀಯಮ್ ।
ದದೌ ಚ ತಸ್ಮೈ ಭಗವಾನ್ ವರಂ ತಂ
ಸ್ವಯಂ ಚ ತಪ್ತ್ವೈವ ತಪೋ ವಿಮೋಹಯನ್ ॥೬೯॥

ರುದ್ರನು ವ್ಯಾಸರ ಮಗನಾಗಿ ಹುಟ್ಟಲು ಬಯಸಿ ಉತ್ತಮ ತಪಸ್ಸನ್ನು ಮಾಡಿದ ವ್ಯಾಸರು ತಾವು ಶಿವನನ್ನು ಕುರಿತು ತಪಸ್ಸು ಮಾಡಿದಂತೆ ತೋರಿ ಅಯೋಗ್ಯರನ್ನು ಮೋಹಗೊಳಿಸುತ್ತಲೆ ಶಿವನಿಗೆ ಅವನು ಬಯಸಿದ ವರ ನೀಡಿದರು.

ವಿಮೋಹನಾಯಾಸುರಸರ್ಗಿಣಾಂ ಪ್ರಭುಃ
ಸ್ವಯಂ ಕರೋತೀವ ತಪಃ ಪ್ರದರ್ಶಯೇತ್ ।
ಕಾಮಾದಿದೋಷಾಂಶ್ಚ ಮೃಷೈವ ದರ್ಶಯೇ-
ನ್ನ ತಾವತಾ ತೇಽಸ್ಯ ಹಿ ಸಂತಿ ಕುತ್ರಚಿತ್ ॥೭೦॥

ಸರ್ವಶಕ್ತರಾದ ವ್ಯಾಸರು ಅಸುರ ಸ್ವಭಾವದವರಿಗೆ ಮೋಹ ಉಂಟುಮಾಡುವುದಕ್ಕಾಗಿಯೇ ಸ್ವತಃ ತಪಗೈಯುವಂತೆ ತೋರಿಸಿಕೊಳ್ಳುತ್ತಾರೆ. ಕಾಮಾದಿ ದೋಷಗಳನ್ನು ಸುಮ್ಮನೆ ಪ್ರದರ್ಶನ ಮಾಡುತ್ತಾರೆ. ಅಷ್ಟರಿಂದಲೆ ಅವರಿಗೆ ಈ ದೋಷಗಳು ಯಾವ ಕಾಲದಲ್ಲಿಯೂ ಇವೆ ಎಂದಾಗುವುದಿಲ್ಲ.

ತತಸ್ತ್ವರಣ್ಯೋ ಸ ಬಭೂವ ಪುತ್ರಕಃ
ಶಿವಸ್ಯ ಸೋಽಭೂಚ್ಛುಕನಾಮಧೇಯಃ ।
ಶುಕೀ ಹಿ ಭೂತ್ವಾ ಹ್ಯಭ್ಯಗಮದ್ಘೃತಾಚೀ
ವ್ಯಾಸಂ ವಿಮಥ್ನಂತಮುತಾರಣೀ ತಮ್ ॥೭೧॥

ಹೀಗೆ ಶಿವನಿಗೆ ವ್ಯಾಸರು ವರ ಕೊಟ್ಟಿದ್ದರಿಂದ ಅರಣಿಗಳಲ್ಲಿ ಶಿವ ವ್ಯಾಸರಿಗೆ ಮಗನಾಗಿ ಹುಟ್ಟಿದ. ಮುಂದೆ ಅವನು ಶುಕ ಎಂಬ ಹೆಸರಿನವನಾದ. ಏಕೆಂದರೆ ಅರಣಿ ಮಥನ ಮಾಡುತ್ತಿದ್ದ ವ್ಯಾಸರ ಬಳಿಗೆ ಘೃತಾಚಿ ಎಂಬ ಅಪ್ಸರೆ ಹೆಣ್ಣು ಗಿಳಿಯಾಗಿ ತಾನೆ ಬಂದಿದ್ದಳು!

ಅಕಾಮಯನ್ ಕಾಮುಕವತ್ ಸ ಭೂತ್ವಾ
ತಯಾರ್ಥಿತಸ್ತಂ ಶುಕನಾಮಧೇಯಮ್ ।
ಚಕ್ರೇ ಹ್ಯರಣ್ಯೋಸ್ತನಯಂ ಚ ಸೃಷ್ಟ್ವಾ
ವಿಮೋಹಯಂ ಸ್ತತ್ವಮಾರ್ಗೇಷ್ವಯೋಗ್ಯಾನ್ ॥೭೨॥

ಘೃತಾಚಿಯನ್ನು ವೇದವ್ಯಾಸರು ಕಾಮಿಸಲಿಲ್ಲ. ತತ್ವಮಾರ್ಗಗಳಲ್ಲಿ ಅಯೋಗ್ಯರಾದವರನ್ನು ಮೋಹಗೊಳಿಸುವುದಕ್ಕಾಗಿ ಕಾಮಿಸಿದಂತೆ ತೋರಿಕೊಂಡು ಒಬ್ಬ ಮಗನನ್ನು ಅರಣಿಗಳಲ್ಲಿ ಹುಟ್ಟಿಸಿ ಆ ಮಗನಿಗೆ ಘೃತಾಚಿಯ ಅಪೇಕ್ಷೆಯಂತೆ ಶುಕ ಎಂದೇ ಹೆಸರಿಟ್ಟರು.

ಶುಕಂ ತಮಾಶು ಪ್ರವಿವೇಶ ವಾಯು-
ರ್ವ್ಯಾಸಸ್ಯ ಸೇವಾರ್ಥಮಥಾಸ್ಯ ಸರ್ವಮ್ ।
ಜ್ಞಾನಂ ದದೌ ಭಗವಾನ್ ಸರ್ವ ವೇದಾನ್
ಸ ಭಾರತಂ ಭಾಗವತಂ ಪುರಾಣಮ್ ॥೭೩॥

ವೇದವ್ಯಾಸರ ಸೇವೆಗಾಗಿ ವಾಯು ಬೇಗನೆ ಶುಕನಲ್ಲಿ ಆವೇಶಗೊಂಡ. ಭಗವಾನ್ ವ್ಯಾಸರು. ಆ ಶುಕನಿಗೆ ಸರ್ವಜ್ಞತ್ವವನ್ನು ನೀಡಿದರು. ಎಲ್ಲ ವೇದಗಳನ್ನೂ ಭಾರತವನ್ನೂ ಭಾಗವತ ಮುಂತಾದ ವೈಷ್ಣವ ಪುರಾಣಗಳನ್ನೂ ಉಪದೇಶಿಸಿದರು.

ಶೇಷೋಽಥ ಪೈಲಂ ಮುನಿಮಾವಿಶತ್ ತದಾ
ವೀಶಃ ಸುಮಂತುಮಪಿ ವಾರುಣಂ ಮುನಿಮ್ ।
ಬ್ರಹ್ಮಾವಿಶತ್ ತಮುತ ವೈಶಪಾಯನಂ
ಶಕ್ರಶ್ಚ ಜೈಮಿನಿಮಥಾವಿಶದ್ ವಿಭುಃ ॥೭೪॥

ಬಳಿಕ ವೇದವ್ಯಾಸರು ಉಪದೇಶ ಮಾಡುವ ಕಾಲದಲ್ಲಿ ಶೇಷ ಪೈಲಮುನಿಯನ್ನು ಪ್ರವೇಶಿಸಿದ. ಆಗಲೆ ವರುಣಪುತ್ರನಾದ ಸುಮಂತುಮುನಿಯನ್ನು ಗರುಡ ಪ್ರವೇಶಿಸಿದ. ಬ್ರಹ್ಮ ವೈಶಂಪಾಯನನನ್ನೂ ಇಂದ್ರ ಜೈಮಿನಿಯನ್ನೂ ಪ್ರವೇಶಿಸಿದ.

ಕೃಷ್ಣಸ್ಯ ಪಾದಪರಿಸೇವನೋತ್ಸುಕಾಃ
ಸುರೇಶ್ವರಾ ವಿವಿಶುರಾಶು ತಾನ್ ಮುನೀನ್ ।
ಸಮಸ್ತವಿದ್ಯಾಃ ಪ್ರತಿಪಾದ್ಯ ತೇಷ್ವಸೌ
ಪ್ರವರ್ತಕಾಂಸ್ತಾನ್ವಿದಧೇ ಹರಿಃ ಪುನಃ ॥೭೫॥

ಶ್ರೀವೇದವ್ಯಾಸರ ಪಾದಸೇವೆ ಮಾಡುವ ತವಕವುಳ್ಳವರಾಗಿ ದೇವೋತ್ತಮರು ಆ ಮುನಿಗಳನ್ನು ಬೇಗನೆ ಪ್ರವೇಶ ಮಾಡಿದರು. ವ್ಯಾಸರು ಎಲ್ಲ ಶಾಸ್ತ್ರಗಳನ್ನೂ ಅವರಿಗೆ ಉಪದೇಶಿಸಿ ಅವರನ್ನು ಆ ಶಾಸ್ತ್ರಗಳಿಗೆ ಪ್ರವರ್ತಕರನ್ನಾಗಿ ಮಾಡಿದರು.

ಋಚಾಂ ಪ್ರವರ್ತಕಂ ಪೈಲಂ ಯಜುಷಾಂ ಚ ಪ್ರವರ್ತಕಮ್ ।
ವೈಶಂಪಾಯನಮೇವೈಕಂ ದ್ವಿತೀಯಂ ಸೂರ್ಯಮೇವ ಚ ॥೭೬॥

ಶ್ರೀವ್ಯಾಸರು ಋಗ್ವೇದಕ್ಕೆ ಪೈಲಮುನಿಯನ್ನು ಪ್ರವರ್ತಕನನ್ನಾಗಿ ಮಾಡಿದರು. ಯಜುರ್ವೇದಗಳಿಗೆ ವೈಶಂಪಾಯನನನ್ನು ಒಬ್ಬ ಪ್ರವರ್ತಕನನ್ನಾಗಿಯೂ ಸೂರ್ಯನನ್ನು ಇನ್ನೊಬ್ಬ ಪ್ರವರ್ತಕನನ್ನಾಗಿಯೂ ಮಾಡಿದರು.

ಚಕ್ರೇಽಥ ಜೈಮಿನಿಂ ಸಾಮ್ನಾಮಥರ್ವಾಂಗಿರಸಾಮಪಿ ।
ಸುಮಂತುಂ ಭಾರತಸ್ಯಾಪಿ ವೈಶಂಪಾಯನಮಾದಿಶತ್ ॥೭೭॥

ಸಾಮವೇದಕ್ಕೆ ಜೈಮಿನಿಯನ್ನೂ ಅಥರ್ವಾಂಗಿರಸ ವೇದಕ್ಕೆ ಸುಮಂತವನ್ನೂ ಭಾರತಕ್ಕೆ ಪುನಃ ವೈಶಂಪಾಯನನನ್ನೂ ಪ್ರವರ್ತಕರನ್ನಾಗಿ ಮಾಡಿದರು.

ಪ್ರವರ್ತನೇ ಮಾನುಷೇಷು ಗಂಧರ್ವಾದಿಷು ಚಾತ್ಮಜಮ್ ।
ನಾರದಂ ಪಾಠಯಿತ್ವಾ ಚ ದೇವಲೋಕ ಪ್ರವೃತ್ತಯೇ ॥೭೮॥

ಆದಿಶತ್ ಸಸೃಜೇ ಸೋಽಥ ರೋಮಾಂಚಾದ್ ರೋಮಹರ್ಷಣಮ್
ತಂ ಭಾರತಪುರಾಣಾನಾಂ ಮಹಾರಾಮಾಯಣಸ್ಯ ಚ ॥೭೯॥

ಪಂಚರಾತ್ರಸ್ಯ ಕೃತ್ಸ್ನಸ್ಯ ಪ್ರವೃತ್ತ್ಯರ್ಥಮಥಾದಿಶತ್ ।
ತಮಾವಿಶತ್ ಕಾಮದೇವಃ ಕೃಷ್ಣಸೇವಾಸಮುತ್ಸುಕಃ ॥೮೦॥

ಮಗನಾದ ಶುಕಮುನಿಗೆ ಎಲ್ಲ ಶಾಸ್ತ್ರಗಳನ್ನು ಉಪದೇಶಿಸಿ ಮನುಷ್ಯರಲ್ಲಿಯೂ ಗಂಧರ್ವಾದಿಗಳಲ್ಲಿಯೂ ಅವುಗಳನ್ನು ಪ್ರಸಾರ ಮಾಡಲು ಆದೇಶಿಸಿದರು. ನಾರದರಿಗೂ ಉಪದೇಶಿಸಿ ದೇವಲೋಕದಲ್ಲಿ ಪ್ರವರ್ತಿಸಲು ಆದೇಶಿಸಿದರು. ಬಳಿಕ ರೋಮಾಂಚದಿಂದ ರೋಮಹರ್ಷಣವನ್ನು ಹುಟ್ಟಿಸಿದರು. ಅವನಿಗೆ ಭಾರತ ಪುರಾಣಗಳ ಮಹಾರಾಮಾಯಣದ ಮತ್ತು ಸಕಲ ಪಂಚರಾತ್ರಗಳ ಪ್ರವೃತ್ತಿಗೆ ಆದೇಶಿಸಿದರು. ವೇದವ್ಯಾಸರ ಸೇವೆಗೆ ಉತ್ಸುಕನಾದ ಕಾಮದೇವ ರೋಮಹರ್ಷಣನಲ್ಲಿ ಪ್ರವೇಶಿಸಿದ.

ಸ ತಸ್ಮೈ ಜ್ಞಾನಮಖಿಲಂ ದದೌ ದ್ವೈಪಾಯನಃ ಪ್ರಭುಃ ।
ಸನತ್ಕುಮಾರಪ್ರಮುಖಾಂಶ್ಚಕ್ರೇ ಯೋಗಪ್ರವರ್ತಕಾನ್ ॥೮೧॥

ಭೃಗ್ವಾದೀನ್ ಕರ್ಮ ಯೋಗಸ್ಯ ಜ್ಞಾನಂ ದತ್ವಾಮಲಂ ಶುಭಮ್ ।
ಜೈಮಿನಿಂ ಕರ್ಮಮೀಮಾಂಸಾಕರ್ತಾರಮಕರೋತ್ ಪ್ರಭುಃ ॥೮೨॥

ಪ್ರಭು ವೇದವ್ಯಾಸರು ರೋಮಹರ್ಷಣನಿಗೆ ಸಕಲ ಶಾಸ್ತ್ರಗಳ ಜ್ಞಾನವನ್ನೂ ನೀಡಿದರು. ನಿರ್ಮಲವಾದ ಪುಣ್ಯಕರವಾದ ಜ್ಞಾನ ನೀಡಿ ಸನತ್ಕುಮಾರ ಮುಂತಾದವರನ್ನು ಧ್ಯಾನಯೋಗ ಪ್ರವರ್ತಕರನ್ನಾಗಿಯೂ ಭೃಗು ಮುಂತಾದವರನ್ನು ಕರ್ಮಯೋಗ ಪ್ರವರ್ತಕರನ್ನಾಗಿಯೂ ಜೈಮಿನಿಯನ್ನು ಕರ್ಮಮೀಮಾಂಸಾ ಕರ್ತನನ್ನಾಗಿಯೂ ಮಾಡಿದರು.

ದೇವಮೀಮಾಂಸಿಕಾದ್ಯಂತಂ ಕೃತ್ವಾ ಪೈಲಮಥಾದಿಶತ್ ।
ಶೇಷಂ ಚ ಮಧ್ಯಕರಣೇ ಪುರಾಣಾನ್ಯಥ ಚಾಕರೋತ್ ॥೮೩॥

ದೇವಮೀಮಾಂಸೆಯ ಆದ್ಯಂತ ಭಾಗಗಳನ್ನು ತಾನೆ ರಚಿಸಿ ಮಧ್ಯಭಾಗವನ್ನು ರಚಿಸಲು ಪೈಲಮುನಿಯನ್ನೂ ಶೇಷನನ್ನೂ ಆದೇಶಿಸಿದರು. ಬಳಿಕ ಪುರಾಣಗಳನ್ನು ರಚಿಸಿದರು.

ಶೈವಾನ್ ಪಾಶುಪತಾಚ್ಚಕ್ರೇ ಸಂಶಯಾರ್ಥಂ ಸುರದ್ವಿಷಾಮ್ ।
ವೈಷ್ಣವಾನ್ ಪಂಚರಾತ್ರಾಚ್ಚ ಯಥಾರ್ಥಜ್ಞಾನಸಿದ್ಧಯೇ ॥೮೪॥

ದೈತ್ಯರಿಗೆ ತತ್ವವಿಷಯದಲ್ಲಿ ಸಂಶಯ ಭ್ರಾಂತಿಗಳನ್ನು ಉಂಟುಮಾಡುವುದಕ್ಕಾಗಿ ಪಾಶುಪತಾಗಮದಿಂದ ಶಿವಸರ್ವೋತ್ತಮತ್ವವನ್ನು ಹೇಳುವ ಪುರಾಣ ಗ್ರಂಥ ಸಂಗ್ರಹಗಳನ್ನು ವ್ಯಾಸರು ಮಾಡಿದರು. ಸಜ್ಜನರಿಗೆ ಯಥಾರ್ಥ ಜ್ಞಾನಸಿದ್ಧಿಗಾಗಿ ಪಂಚರಾತ್ರಾಗಮದಿಂದ ವಿಷ್ಣು ಸರ್ವೋತ್ತಮತ್ವವನ್ನು ಹೇಳುವ ಪುರಾಣ ಗ್ರಂಥ ಸಂಗ್ರಹಗಳನ್ನು ಮಾಡಿದರು.

ಬ್ರಾಹ್ಮಾಂಶ್ಚ ವೇದತಶ್ಚಕ್ರೇ ಪುರಾಣಗ್ರಂಥಸಂಗ್ರಹಾನ್ ।
ಏವಂ ಜ್ಞಾನಂ ಪುನಃ ಪ್ರಾಪುರ್ದೇವಾಶ್ಚ ಋಷಯಸ್ತಥಾ ॥೮೫॥

ವೇದದಿಂದ ಬ್ರಾಹ್ಮ ಪುರಾಣ ಗ್ರಂಥ ಸಂಗ್ರಹಗಳನ್ನು ರಚಿಸಿದರು. ಹೀಗೆ ದೇವತೆಗಳೂ ಋಷಿಗಳೂ ಪುನಃ ಜ್ಞಾನವನ್ನು ಪಡೆದರು.

ಸನತ್ಕುಮಾರಪ್ರಮುಖಾ ಯೋಗಿನೋ ಮಾನುಷಾಸ್ತಥಾ ।
ಕೃಷ್ಣದ್ವೈಪಾಯನಾತ್ ಪ್ರಾಪ್ಯ ಜ್ಞಾನಂ ತೇ ಮುಮುದುಃ ಸುರಾಃ ॥೮೬॥

ಸನತ್ಕುಮಾರ ಮುಂತಾದ ಯೋಗಿಗಳೂ, ದೇವತೆಗಳೂ ಮಾನವರೂ ಪುನಃ ಜ್ಞಾನವನ್ನು ಪಡೆದರು. ಅವರೆಲ್ಲರೂ ವೇದವ್ಯಾಸರಿಂದ ಜ್ಞಾನವನ್ನು ಪಡೆದು ಸುಖಿಗಳಾದರು.

ಸಮಸ್ತ ವಿಜ್ಞಾನ ಗಭಸ್ತಿ ಚಕ್ರಂ
ವಿತಾಯ ವಿಜ್ಞಾನಮಹಾದಿವಾಕರಃ ।
ನಿವೀಯ ಚಾಜ್ಞಾನತಮೋ ಜಗತ್ತತಂ
ಪ್ರಭಾಸತೇ ಭಾನುರಿವಾವಭಾಸಯನ್ ॥೮೭॥

ಜ್ಞಾನಮಯ ಮಹಾಸೂರ್ಯರಾದ ವೇದವ್ಯಾಸರು ಪೂರ್ಣಜ್ಞಾನ ರೂಪದ ಪ್ರಕಾಶ ಪುಂಜವನ್ನು ಎಲ್ಲೆಡೆ ಹರಡಿ ಜಗತ್ತಿನಲ್ಲಿ ವ್ಯಾಪಿಸಿದ ಅಜ್ಞಾನದ ಕತ್ತಲನ್ನು ಪಾನ ಮಾಡಿ ಸೂರ್ಯನಂತೆ ಎಲ್ಲವನ್ನೂ ಬೆಳಗಿಸುತ್ತ ಹೊಳೆಯುತ್ತಾರೆ.

ಚತುರ್ಮುಖೇಶಾನ ಸುರೇಂದ್ರ ಪೂರ್ವಕೈಃ
ಸದಾ ಸುರೈಃ ಸೇವಿತಪಾದಪಲ್ಲವಃ ।
ಪ್ರಕಾಶಯಂಸ್ತೇಷು ಸದಾತ್ಮಗುಹ್ಯಂ
ಮುಮೋದ ಮೇರೌ ಚ ತಥಾ ಬದರ್ಯಾಮ್ ॥೮೮॥

ಬ್ರಹ್ಮರುದ್ರ ದೇವೇಂದ್ರ ಮುಂತಾದ ದೇವತೆಗಳಿಂದ ಸೇವಿತವಾದ ಎಳೆ ಚಿಗುರಿನಂಥ ಪಾದಗಳುಳ್ಳ ವೇದವ್ಯಾಸರು ಆ ದೇವತೆಗಳಲ್ಲಿ ತನ್ನ ರಹಸ್ಯವನ್ನು ಸದಾ ಪ್ರಕಟಪಡಿಸುತ್ತ ಮೇರು ಪರ್ವತದಲ್ಲಿಯೂ ಬದರೀಕ್ಷೇತ್ರದಲ್ಲಿಯೂ ಆನಂದಿಸಿದರು.

★ ★ ★ ★

ಐವತ್ತೇಳನೆಯ ಅಧ್ಯಾಯ

(ಉಪರಿಚರೋಪಾಖ್ಯಾನ ಮತ್ತು ವೇದವ್ಯಾಸದೇವರ ಪ್ರಾದುರ್ಭಾವ.)

ವೈಶಂಪಾಯನಃ

ರಾಜೋಪರಿಚರೋ ನಾಮ ಧರ್ಮನಿತ್ಯೋ ಮಹೀಪತಿಃ ।
ಬಭೂವ ಮೃಗಯಾಶೀಲಃ ಶಶ್ವತ್ ಸ್ವಾಧ್ಯಾಯವಾಂಛುಚಿಃ ॥೧॥

ರಾಜೋಪರಿಚರ ಎಂಬ ರಾಜನು ನಿತ್ಯವೂ ಧರ್ಮವನ್ನು ಆಚರಿಸುವವನೂ, ಯಾವಾಗಲೂ ಸ್ವಾಧ್ಯಾಯವನ್ನು ಮಾಡುವವನೂ, ಶುಚಿಯಾದವನೂ, ಮತ್ತು ಮೃಗಯಾಶೀಲನೂ ಆಗಿದ್ದನು.

ಸ ಚೇದಿವಿಷಯಂ ರಮ್ಯಂ ವಸುಃ ಪೌರವನಂದನಃ ।
ಇಂದ್ರೋಪದೇಶಾಜ್ಜಗ್ರಾಹ ಸ್ಪೃಹಣೀಯಂ ಮಹೀಪತಿಃ ॥೨॥

ಎಲೈ ಪೌರವಕುಲದಲ್ಲಿ ಜನಿಸಿದವನೇ, ಆ ವಸುವಾದ ರಾಜನು ರಮ್ಯವಾದ ಎಲ್ಲರೂ ಅಪೇಕ್ಷೆಪಡುವ ಚೇದಿದೇಶವನ್ನು ಇಂದ್ರನ ಆದೇಶದಂತೆ ತನ್ನ ರಾಜ್ಯವಾಗಿ ಸ್ವೀಕರಿಸಿದನು.

ತಮಾಶ್ರಮೇ ನ್ಯಸ್ತಶಸ್ತ್ರಂ ನಿವಸಂತಂ ತಪೋರತಿಮ್ ।
ದೇವರಾಡ್ ಯಜ್ಞಸಹಿತ ಉಪತಸ್ಥೇ ಮರುದ್ಗಣೈಃ ॥೩॥

ಶಸ್ತ್ರತ್ಯಾಗವನ್ನು ಮಾಡಿ, ತಪಸ್ಸಿನಲ್ಲಿ ರತನಾಗಿ ಆಶ್ರಮದಲ್ಲಿ ವಾಸಮಾಡುವ, ಆ ವಸುರಾಜನ ಸಮೀಪಕ್ಕೆ ಮರುದ್ಗಣಸಹಿತನಾಗಿ ಮತ್ತು ಯಜ್ಞಾಭಿಮಾನಿದೇವತೆಗಳ ಸಹಿತನಾಗಿ ಇಂದ್ರನು ಬಂದು ಅವನನ್ನು ಓಲೈಸಿದನು.

ಇಂದ್ರೋಽಹಮಿತಿ ಧೈರ್ಯೇಣ ತಪಸಾ ಚೇತ್ಯಮನ್ಯತ ।
ತಂ ವೈ ದೇವಪತಿಃ ಸಾಕ್ಷಾತ್ ತಪಸಃ ಸನ್ನ್ಯವರ್ತಯತ್ ॥೪॥

ಉಪರಿಚರ ವಸುವು ತನ್ನ ಧೈರ್ಯ ಮತ್ತು ತಪಸ್ಸುಗಳ ನಿಮಿತ್ತದಿಂದ ತಾನೇ ಇಂದ್ರಪದವಿಯನ್ನು ಪಡೆದಿದ್ದೇನೆ ಎಂದು ತಿಳಿದಿದ್ದನು. ಅವನನ್ನು ದೇವರಾಜನಾದ ಇಂದ್ರನು ತಾನಾಗಿ ಬಂದು, ತಪಸ್ಸಿನಿಂದ ನಿವೃತ್ತನಾಗುವಂತೆ ಮಾಡಿದನು.

ಇಂದ್ರಃ

ನ ಸಂಕೀರ್ಯೇತ ಧರ್ಮೋಽಯಂ ಪೃಥಿವ್ಯಾಂ ಪೃಥಿವೀಪತೇ ।
ತಂ ಪಾಹಿ ಧರ್ಮೋ ಹಿ ಧೃತಃ ಕೃತ್ಸ್ನಂ ಪಾಲಯತೇ ಜಗತ್ ॥೫॥

ಎಲೈ ರಾಜನೇ ಭೂಮಿಯಲ್ಲಿ ಧರ್ಮದ ಸಂಕರ ಉಂಟಾಗಬಾರದು. ಬ್ರಹ್ಮದೇವರೇ ಬ್ರಹ್ಮದೇವರಾಗಬೇಕು, ಇಂದ್ರನೇ ಇಂದ್ರನಾಗಬೇಕು. ಚಕ್ರವರ್ತಿಯು ಚಕ್ರವರ್ತಿಯಾಗಬೇಕು ಎಂಬ ನಿಯಮವಿದೆ. ಇದು ವ್ಯತ್ಯಾಸವಾಗಿ, ಚಕ್ರವರ್ತಿ ಇಂದ್ರನಾದರೆ ಧರ್ಮದ ಸಂಕರವಾಗುತ್ತದೆ. ಹಾಗಾಗಬಾರದು. ನೀನು ಧರ್ಮವನ್ನು ರಕ್ಷಿಸು. ರಕ್ಷಿಸಲ್ಪಟ್ಟ ಧರ್ಮವು ಸಮಸ್ತ ಜಗತ್ತನ್ನು ರಕ್ಷಿಸುತ್ತದೆ. (ಆದ್ದರಿಂದ ನೀನು ನಿನ್ನನ್ನು ಇಂದ್ರನೆಂದು ತಿಳಿಯಬೇಡ.)

ಲೌಕ್ಯಂ ಧರ್ಮಂ ಪಾಲಯ ತ್ವಂ ನಿತ್ಯಯುಕ್ತಃ ಸಮಾಹಿತಃ ।
ಧರ್ಮಯುಕ್ತಸ್ತತೋ ಲೋಕಾನ್ ಪುಣ್ಯಾನ್ ಪ್ರಾಪ್ಸ್ಯಸಿ ಶಾಶ್ವತಾನ್ ॥೬॥

ನಿತ್ಯವೂ ಯೋಗಯುಕ್ತನಾಗಿ ಸಮಾಧಾನದಿಂದ ಕೂಡಿದ್ದು, ಲೋಕದ ಧರ್ಮವನ್ನು ಪಾಲಿಸು. ಈ ಧರ್ಮಾಚರಣೆಯಿಂದ ನೀನು ಅನಂತರ ಶಾಶ್ವತವಾದ ಪುಣ್ಯಲೋಕಗಳನ್ನು ಹೊಂದುವಿ.

ದಿವಿಷ್ಠಸ್ಯ ಭುವಿಷ್ಠಶ್ಚ ಸಖಾ ಭೂತ್ವಾ ಮಮ ಪ್ರಿಯಃ ।
ಊಢಃ ಪೃಥಿವ್ಯಾ ಯೋ ದೇಶಸ್ತಮಾವಸ ನರಾಧಿಪ ॥೭॥

ಸ್ವರ್ಗಲೋಕದಲ್ಲಿರುವ ನನಗೆ ಭೂಲೋಕದಲ್ಲಿರುವ ನೀನು ಸ್ನೇಹಿತನೂ ಮತ್ತು ಪ್ರಿಯನೂ ಆಗಿದ್ದು, ಭೂಮಿಯ ಕೆಚ್ಚಲಿನಂತಿರುವ ಈ ಚೇದಿದೇಶವನ್ನು ಸ್ವೀಕರಿಸಿ ವಾಸಮಾಡು.

ಉತ್ತರಾಭಿಮುಖವಾಗಿ ಗೋರೂಪವಾದ ಭೂಮಿಗೆ ಪರಶುರಾಮದೇವರು ಸೃಷ್ಟಿಸಿದ ಈ ಸ್ಥಳವು ಎತ್ತರವಾಗಿದ್ದು ವೇದಿಕೆಯಂತಿದೆ. ಆದ್ದರಿಂದ ಅದಕ್ಕೆ ವೇದಿ

ಎಂತಲೂ, ಚೇದಿ ಎಂತಲೂ ಹೆಸರು. ಪಶುಗಳಿಗೆ ಬೇಕಾದ ಧನಧಾನ್ಯಗಳನ್ನು ಕೊಡುವುದರಿಂದ ಅದು ಗೋವಿನ ಕೆಚ್ಚಲಿನಂತೆ ಇದೆ.

ಪಶವ್ಯಶ್ಚೈವ ಪುಣ್ಯಶ್ಚ ಸುಸ್ಥಿರೋ ಧನಧಾನ್ಯವಾನ್ ।
ಸುರಕ್ಷಶ್ಚೈವ ಧನ್ಯಶ್ಚ ಭಾಗ್ಯೈಶ್ಚೂಮಿಗಣೈರ್ಯುತಃ ॥೯॥

ಈ ದೇಶವು ಪುಣ್ಯಪ್ರದವಾದದ್ದು. ಪ್ರಕೃತಿಬಾಧೆಯಿಲ್ಲದಂತಹದು. ಪಶುಗಳಿಗೆ ಹಿತವಾದುದು. ಧನಧಾನ್ಯ ಸಮೃದ್ಧಿವುಳ್ಳದ್ದು, ರಕ್ಷಿಸಲು ಸುಲಭವಾದದ್ದು, ಧನ್ಯವಾದದ್ದು. ಮತ್ತು ಬೇರೆ ಗಣಗಳಿಂದ ಆವೃತವಾದದ್ದು.

ಅತ್ಯನ್ಯಾನೇಷ ದೇಶೋ ಹಿ ಧನರತ್ನಾದಿಭಿರ್ಯುತಃ ।
ವಸುಪೂರ್ಣಾಂ ಹಿ ವಸುಧಾಂ ವಸ ವೇದಿಷು ವೇ (ಚೇ) ದಿಪ ॥೯॥

ಎಲೈ ಚೇದಿಪಾಲನೇ ಈ ದೇಶವು ಧನರತ್ನಾದಿಗಳಿಂದ ಸಂಯುತವಾಗಿ ಬೇರೆ ದೇಶಗಳನ್ನು ಮೀರಿದೆ. ಆದ್ದರಿಂದ ವಸುಪೂರ್ಣವಾದ ಈ ಭಾಗದಲ್ಲಿ ವಾಸವನ್ನು ಮಾಡು.

ಧರ್ಮಶೀಲಾ ಜನಪದಾಃ ಸುಸಂತುಷ್ಟಾಶ್ಚ ಸಾಧವಃ ।
ನ ಚ ಮಿಥ್ಯಾಪ್ರಲಾಪೋಽತ್ರ ಸ್ಫೈರೇಷ್ವಪಿ ತತೋಽನ್ಯಥಾ ॥೧೦॥

ಇಲ್ಲಿ ವಾಸಿಸುವ ಜನರು ಧರ್ಮಶೀಲರು, ಸಾಧುಗಳು ಮತ್ತು ಸುಸಂತುಷ್ಟರಾದವರು. ಇಲ್ಲಿ ವಿನೋದಕ್ಕಾದರೂ ಸಹ ಯಾರೂ ಸುಳ್ಳು ಮಾತನಾಡುವುದಿಲ್ಲ.

ನ ಚ ಪಿತ್ರಾ ವಿಭಜ್ಯಂತೇ ನರಾ ಗುರುಹಿತೇ ರತಾಃ ।
ಯುಂಜಂತಿ ಧುರಿ ನಾಗಾಶ್ಚ ಕೃಶಾನ್ ಸಂಧುಕ್ಷಯಂತಿ ಚ ॥೧೧॥

ತಂದೆಯನ್ನು ಬಿಟ್ಟು ಮಕ್ಕಳು ಬೇರೆಕಡೆಗೆ ಹೋಗುವುದಿಲ್ಲ. ಎಲ್ಲರೂ ಹಿರಿಯರ ಸೇವೆಯಲ್ಲಿ ನಿರತರಾಗಿರುವವರು. ಹಸುಗಳನ್ನು ಭಾರ ಎಳೆಯಲು ಉಪಯೋಗಿಸುವುದಿಲ್ಲ. ಕೃಶವಾದವರನ್ನು ಪೋಷಿಸುತ್ತಾರೆ. ಸರ್ಪಗಳು ದರಿದ್ರರಾದವರಿಗೆ ನಿಧಿಯನ್ನು ತಂದುಕೊಟ್ಟು ಪೋಷಿಸುತ್ತವೆ.

ಸರ್ವೇ ವರ್ಣಾಃ ಸ್ವಧರ್ಮಸ್ಥಾಃ ಸದಾ ಚೇದಿಷು ಮಾನವಾಃ ।
ನ ತೇಷ್ವವಿದಿತಂ ಕಿಂಚಿತ್ ತ್ರಿಷು ಲೋಕೇಷು ಯದ್ ಭವೇತ್ ॥೧೨॥

ಚೇದಿ ದೇಶದಲ್ಲಿ ಬೇರೆ ಬೇರೆ ವರ್ಣಕ್ಕೆ ಸೇರಿದ ಎಲ್ಲ ಮಾನವರೂ ತಮ್ಮ ತಮ್ಮ ಧರ್ಮಗಳಲ್ಲಿ ನಿರತರಾಗಿರುತ್ತಾರೆ. ಅವರು ಮೂರು ಲೋಕದಲ್ಲಿ ತಿಳಿಯದ ವಿಷಯವು ಯಾವುದೂ ಇಲ್ಲ.

ದೇವೋಪಭೋಗ್ಯಂ ದಿವ್ಯಂ ತ್ವಮಾಕಾಶಂ ಸ್ಫಾಟಿಕಂ ಮಹತ್ ।
ಆಕಾಶಗಂ ಚ ದಿವ್ಯಂ ಚ ವಿಮಾನಮುಪಲಪ್ಸ್ಯಸಿ ॥೧೩॥

ನೀನು ದೇವತೆಗಳ ಭೋಗಕ್ಕೆ ಯೋಗ್ಯವಾದ ದಿವ್ಯವಾದ ಆಕಾಶದಲ್ಲಿ ಸಂಚರಿಸುವ ದಿವ್ಯವಾದ ಪ್ರಕಾಶಿಸುವ ವಿಮಾನವನ್ನು ಪಡೆಯುತ್ತೀಯೆ.

ತ್ವಮೇಕಃ ಸರ್ವಮರ್ತ್ಯೇಷು ವಿಮಾನವರಮಾಸ್ಥಿತಃ ।
ಚರಿಷ್ಯಸ್ಯುಪರಿಸ್ಥೋ ವೈ ದೇವೋ ವಿಗ್ರಹವಾನಿವ ॥೧೪॥

ಎಲ್ಲ ಮಾನವರಲ್ಲಿ ನೀನೊಬ್ಬನೇ ಶ್ರೇಷ್ಠವಾದ ವಿಮಾನವನ್ನು ಏರಿದವನಾಗಿ ಶರೀರವುಳ್ಳ ದೇವತೆಯಂತೆ ಎಲ್ಲರ ಮೇಲಿದ್ದು ಸಂಚರಿಸುವಿ.

ದದಾಮಿ ತೇ ವೈಜಯಂತೀಂ ಮಾಲಾಮಮ್ಲಾನಪಂಕಜಾಮ್ ।
ಧಾರಯಿಷ್ಯಸಿ ಸಂಗ್ರಾಮೇ ಯಾಂ ತ್ವಂ ಶಸ್ತ್ರೈರವಿಕ್ಷತಃ ॥೧೫॥

ನಿನಗೆ ಎಂದೂ ಬಾಡದಿದ್ದ ಕಮಲಪುಷ್ಪಗಳಿಂದ ಕೂಡಿದ ವೈಜಯಂತೀ ಮಾಲೆಯನ್ನು ಕೊಡುತ್ತೇನೆ. ನೀನು ಅದನ್ನು ಧರಿಸಿದರೆ ಯುದ್ಧದಲ್ಲಿ ಯಾವ ಶಸ್ತ್ರಗಳಿಂದಲೂ ಗಾಯಗೊಳ್ಳುವುದಿಲ್ಲ.

ಲಕ್ಷಣಂ ಚೈತದೇವೇಹ ಭವಿತಾ ತೇ ನರಾಧಿಪ ।
ಇಂದ್ರಮಾಲೇತಿ ವಿಖ್ಯಾತಾಂ ಧನ್ಯಾಮಪ್ರತಿಮಾಂ ವಹ ॥೧೬॥

ಎಲೈ ರಾಜನೇ ನಿನಗೆ ಇದೇ ಲಕ್ಷಣವಾಗುತ್ತದೆ. ಇಂದ್ರಮಾಲೆಯೆಂದು ಪ್ರಸಿದ್ಧವಾದ ಧನ್ಯವಾದ ಅಸದೃಶವಾದ ಈ ಮಾಲೆಯನ್ನು ಧರಿಸು.

ಏವಂ ತು ಸಾಂತ್ವಾನ್ನೃಪತಿಂ ತಪಸಃ ಸನ್ನ್ಯವರ್ತಯತ್ ।
ಪ್ರಯಯೌ ದೈವತೈಃ ಸಾರ್ಧಂ ಕೃತ್ವಾ ಕಾರ್ಯಂ ದಿವೌಕಸಾಮ್ ॥೧೭॥

ಹೀಗೆ ಸಮಾಧಾನದ ಮಾತುಗಳಿಂದ ವಸುವನ್ನು ತಪಸ್ಸಿನಿಂದ ಹಿಂದಿರುಗಿಸಿ ದೇವತೆಗಳ ಕಾರ್ಯವನ್ನು ಸಾಧಿಸಿ, ದೇವತೆಗಳ ಜೊತೆಯಲ್ಲಿ ಇಂದ್ರನು ಸ್ವರ್ಗಕ್ಕೆ ಹೋದನು.

ವೈಶಂಪಾಯನಃ

ತಸ್ಮೈ ಚ ವೈಷ್ಣವೀಂ ಯಷ್ಟಿಂ ದದೌ ವೃತ್ರನಿಷೂದನಃ ।
ಇಷ್ಟಪ್ರದಾನಮುದ್ದಿಶ್ಯ ಶಿಷ್ಟಾನಾಂ ಪರಿಪಾಲಿನೀಮ್ ॥೧೮॥

ವೃತ್ರಹರ್ತ್ಯವಾದ ಇಂದ್ರನು ಅವನಿಗೆ ಇಷ್ಟಪ್ರಾಪ್ತಿಯಾಗಲಿ ಎಂಬ ಉದ್ದೇಶದಿಂದ ಶಿಷ್ಟರನ್ನು ಪರಿಪಾಲಿಸುವ ಒಂದು ವೈಷ್ಣವ ಯಷ್ಟಿಯನ್ನು ಕೊಟ್ಟನು.

ತತಸ್ತು ರಾಜಾ ಚೇದೀನಾಮಿಂದ್ರಾಭರಣಭೂಷಿತಃ ।
ಇಂದ್ರದತ್ತಂ ವಿಮಾನಂ ತದಾಸ್ಥಾಯ ಪ್ರಯಯೌ ಪುರೀಮ್ ॥೧೯॥

ಅನಂತರ ಚೇದಿರಾಜನು, ಇಂದ್ರನು ಕೊಟ್ಟ ಆಭರಣಗಳಿಂದ ಭೂಷಿತನಾಗಿ, ಇಂದ್ರನು ಕೊಟ್ಟ ವಿಮಾನವನ್ನು ಏರಿ ತನ್ನ ಪಟ್ಟಣಕ್ಕೆ ಬಂದನು.

ಸ ತು ಶಕ್ರಸ್ಯ ಪೂಜಾರ್ಥಂ ಭೂಮೌ ಭೂಮಿಪತಿಸ್ತದಾ ।
ಪ್ರವೇಶಂ ಕಾರಯಾಮಾಸ ಸರ್ವೋತ್ಸವವರಂ ತದಾ ।
ಮಾರ್ಗಶೀರ್ಷೇ ಮಹಾರಾಜ ಗತೇ ಸಂವತ್ಸರೇ ತದಾ ॥೨೦॥

ತನಗೆ ಉಪಕಾರವನ್ನು ಮಾಡಿದ ಇಂದ್ರನನ್ನು ಪೂಜಿಸಲು ಆ ಭೂಮಿಪತಿರಾಜನು ಒಂದು ವರ್ಷ ಕಳೆದ ನಂತರ ಮಾರ್ಗಶಿರ ಮಾಸದಲ್ಲಿ ಎಲ್ಲಾ ಉತ್ಸವಗಳಿಗಿಂತ ಮಿಗಿಲಾದ ಒಂದು ಉತ್ಸವವನ್ನು ಮಾಡಿಸಿದನು.

ತದಾ ಪ್ರಭೃತಿ ಚಾದ್ಯಾಪಿ ಯಷ್ಟ್ಯಾಃ ಕ್ಷಿತಿಪಸತ್ತಮೈಃ ।
ಪ್ರವೇಶಃ ಕ್ರಿಯತೇ ರಾಜನ್ ಯಥಾ ತೇನ ಪ್ರವರ್ತಿತಃ ।
ಅಪರೇದ್ಯುಸ್ತತಸ್ತಸ್ಯಾಃ ಕ್ರಿಯತೇऽತ್ಯುಚ್ಛ್ರಯೋ ನರೈಃ ॥೨೧॥

ಅಲಂಕೃತಾಯಾಃ ಪುಲಕೈರ್ಗಂಧಮಾಲ್ಯೈಶ್ಚ ಭೂಷಣೈಃ ।
ಮಾಲ್ಯದಾಮಪರಿಕ್ಷಿಪ್ತಾಂ ದ್ವಾತ್ರಿಂಶತ್ಕಿಷ್ಕುಸಂಯುತಾಮ್ ॥೨೨॥

ಅಂದಿನಿಂದ ಪ್ರಾರಂಭಿಸಿ ಇಂದಿನವರೆಗೂ ರಾಜರು ಆ ಇಂದ್ರಯಷ್ಟಿಗೆ ಉತ್ಸವವನ್ನು ಮಾಡುತ್ತಾರೆ. ಪೂಜೆ ಮಾಡಿದ ಮರುದಿವಸ ಆ ಇಂದ್ರಯಷ್ಟಿಯನ್ನು (ಇಂದ್ರ ಧ್ವಜವನ್ನು) ಮೇಲಕ್ಕೆ ಎತ್ತುತ್ತಾರೆ. ಆ ಇಂದ್ರಯಷ್ಟಿಯನ್ನು ಕಸ್ತೂರಿಗಂಧ ಮಾಲೆ, ಮತ್ತು ಭೂಷಣಗಳಿಂದ ಅಲಂಕರಿಸಿ, ಹೂವಿನ ಮಾಲೆಗಳನ್ನು ಸುತ್ತುತ್ತಾರೆ.

ಉದ್ಧೃತ್ಯ ಪೀಠಕೇ ಚಾಪಿ ದ್ವಾದಶಾರತ್ನಿಕೋಚ್ಛ್ರಿತೇ ।
ಮಹಾರಜನವಾಸಾಂಸಿ ಪರಿಕ್ಷಿಪ್ಯ ಧ್ವಜೋತ್ತಮಮ್ ॥೨೩॥

ವಾಸೋಭಿರನ್ನಪಾನೈಶ್ಚ ಪೂಜಿತೈರ್ಬ್ರಾಹ್ಮಣರ್ಷಭೈಃ ।
ಪುಣ್ಯಾಹವಾಚನಂ ಕೃತ್ವಾ ಧ್ವಜ ಉಚ್ಛ್ರಿಯತೇ ತದಾ ॥೨೪॥

ಮೂವತ್ತೆರಡು ಕಿಷ್ಕು (ಒಂದು ಹಸ್ತ ಪರಿಮಿತ ದೇಶ) ಎತ್ತರವಿರುವ ಆ ಇಂದ್ರಧ್ವಜವನ್ನು ಹನ್ನೆರಡು ಮೊಳ ಎತ್ತರದ ಪೀಠದಲ್ಲಿ ಎತ್ತಿನಿಲ್ಲಿಸಿ ಬೆಲೆ ಬಾಳುವ ವಸ್ತ್ರಗಳಿಂದ ಆ ಧ್ವಜವನ್ನು ಸುತ್ತಿ ಅಲಂಕರಿಸುತ್ತಾರೆ. ಬ್ರಾಹ್ಮಣಶ್ರೇಷ್ಠರಿಂದ ಪುಣ್ಯಾಹವಾಚನವನ್ನು ಮಾಡಿಸಿ, ಅನ್ನ , ಪಾನ, ವಸ್ತ್ರಗಳಿಂದ ಅವರನ್ನು ಪೂಜಿಸಿ ಅನಂತರ ಧ್ವಜವನ್ನು ಮೇಲಕ್ಕೆ ಎತ್ತುತ್ತಾರೆ.

ಶಂಖಭೇರೀಮೃದಂಗೈಶ್ಚ ಸನ್ನಾಹಃ ಕ್ರಿಯತೇ ತದಾ ।
ಭಗವಾನ್ ಪೂಜ್ಯತೇ ಚಾತ್ರ ಯಷ್ಟಿರೂಪೇಣ ವಾಸವಃ ॥೨೫॥

ಆಗ ಶಂಖಭೇರಿ ಮತ್ತು ಮೃದಂಗಗಳ ಘೋಷಗಳನ್ನು ಮಾಡುತ್ತಾರೆ. ಆ ಧ್ವಜದಲ್ಲಿ ಇಂದ್ರನನ್ನೇ ಆವಾಹಿಸಿ ಅವನನ್ನು ಪೂಜಿಸುತ್ತಾರೆ.

ಮಾಣಿಭದ್ರಾದಯೋ ಯಕ್ಷಾಃ ಪೂಜ್ಯಂತೇ ದೈವತೈಃ ಸಹ ।
ನಾನಾವಿಧಾನಿ ದಾನಾನಿ ದತ್ತ್ವಾ ಽರ್ತಿಭ್ಯಃ ಸುಹೃಜ್ಜನೈಃ ॥೨೬॥

ಅಲಂಕೃತ್ವಾ ಮಾಲ್ಯದಾಮೈರ್ವಸ್ತ್ರೈರ್ನಾನಾವಿಧೈಸ್ತಥಾ ।
ದೃತಿಭಿಃ ಸಜಲೈಃ ಸರ್ವೇ ಕ್ರೀಡಿತ್ವಾ ನೃಪಶಾಸನಾತ್ ॥೨೭॥

ಇಂದ್ರನೇ ಅಲ್ಲದೇ ಆ ಧ್ವಜದಲ್ಲಿ ಇನ್ನೂ ಕೆಲವು ದೇವತೆಗಳೂ ಮಣಿಭದ್ರ ಮೊದಲಾದ ಯಕ್ಷರೂ ಪೂಜಿಸಲ್ಪಡುತ್ತಾರೆ. ಅದಕ್ಕೆ ಮೊದಲು ಅನೇಕ ವಿಧವಾದ ದಾನಗಳನ್ನು ಯೋಗ್ಯರಿಗೆ ಕೊಡುತ್ತಾರೆ. ಸುಹೃಜ್ಜನರು ನಾನಾವಿಧಗಳಾದ

ಹೀಗೆ ಸಮಾಧಾನದ ಮಾತುಗಳಿಂದ ವಸುವನ್ನು ತಪಸ್ಸಿನಿಂದ ಹಿಂದಿರುಗಿಸಿ ದೇವತೆಗಳ ಕಾರ್ಯವನ್ನು ಸಾಧಿಸಿ, ದೇವತೆಗಳ ಜೊತೆಯಲ್ಲಿ ಇಂದ್ರನು ಸ್ವರ್ಗಕ್ಕೆ ಹೋದನು.

ವೈಶಂಪಾಯನಃ

ತಸ್ಮೈ ಚ ವೈಷ್ಣವೀಂ ಯಷ್ಟಿಂ ದದೌ ವೃತ್ರನಿಷೂದನಃ ।
ಇಷ್ಟಪ್ರದಾನಮುದ್ದಿಶ್ಯ ಶಿಷ್ಟಾನಾಂ ಪರಿಪಾಲಿನೀಮ್ ॥೧೮॥

ವೃತ್ರಹರ್ತ್ಯವಾದ ಇಂದ್ರನು ಅವನಿಗೆ ಇಷ್ಟಪ್ರಾಪ್ತಿಯಾಗಲಿ ಎಂಬ ಉದ್ದೇಶದಿಂದ ಶಿಷ್ಟರನ್ನು ಪರಿಪಾಲಿಸುವ ಒಂದು ವೈಷ್ಣವ ಯಷ್ಟಿಯನ್ನು ಕೊಟ್ಟನು.

ತತಸ್ತು ರಾಜಾ ಚೇದೀನಾಮಿಂದ್ರಾಭರಣಭೂಷಿತಃ ।
ಇಂದ್ರದತ್ತಂ ವಿಮಾನಂ ತದಾಸ್ಥಾಯ ಪ್ರಯಯೌ ಪುರೀಮ್ ॥೧೯॥

ಅನಂತರ ಚೇದಿರಾಜನು, ಇಂದ್ರನು ಕೊಟ್ಟ ಆಭರಣಗಳಿಂದ ಭೂಷಿತನಾಗಿ, ಇಂದ್ರನು ಕೊಟ್ಟ ವಿಮಾನವನ್ನು ಏರಿ ತನ್ನ ಪಟ್ಟಣಕ್ಕೆ ಬಂದನು.

ಸ ತು ಶಕ್ರಸ್ಯ ಪೂಜಾರ್ಥಂ ಭೂಮೌ ಭೂಮಿಪತಿಸ್ತದಾ ।
ಪ್ರವೇಶಂ ಕಾರಯಾಮಾಸ ಸರ್ವೋತ್ಸವವರಂ ತದಾ ।
ಮಾರ್ಗಶೀರ್ಷೇ ಮಹಾರಾಜ ಗತೇ ಸಂವತ್ಸರೇ ತದಾ ॥೨೦॥

ತನಗೆ ಉಪಕಾರವನ್ನು ಮಾಡಿದ ಇಂದ್ರನನ್ನು ಪೂಜಿಸಲು ಆ ಭೂಮಿಪತಿರಾಜನು ಒಂದು ವರ್ಷ ಕಳೆದ ನಂತರ ಮಾರ್ಗಶಿರ ಮಾಸದಲ್ಲಿ ಎಲ್ಲಾ ಉತ್ಸವಗಳಿಗಿಂತ ಮಿಗಿಲಾದ ಒಂದು ಉತ್ಸವವನ್ನು ಮಾಡಿಸಿದನು.

ತದಾ ಪ್ರಭೃತಿ ಚಾದ್ಯಾಪಿ ಯಷ್ಟ್ಯಾಃ ಕ್ಷಿತಿಪಸತ್ತಮೈಃ ।
ಪ್ರವೇಶಃ ಕ್ರಿಯತೇ ರಾಜನ್ ಯಥಾ ತೇನ ಪ್ರವರ್ತಿತಃ ।
ಅಪರೇದ್ಯುಸ್ತತಸ್ತಸ್ಯಾಃ ಕ್ರಿಯತೇऽತ್ಯುಚ್ಛ್ರಯೋ ನರೈಃ ॥೨೧॥

ಅಲಂಕೃತಾಯಾಃ ಪುಲಕೈರ್ಗಂಧಮಾಲ್ಯೈಶ್ಚ ಭೂಷಣೈಃ ।
ಮಾಲ್ಯದಾಮಪರಿಕ್ಷಿಪ್ತಾಂ ದ್ವಾತ್ರಿಂಶತ್ಕಿಷ್ಕುಸಂಯುತಾಮ್ ॥೨೨॥

ಅಂದಿನಿಂದ ಪ್ರಾರಂಭಿಸಿ ಇಂದಿನವರೆಗೂ ರಾಜರು ಆ ಇಂದ್ರಯಷ್ಟಿಗೆ ಉತ್ಸವವನ್ನು ಮಾಡುತ್ತಾರೆ. ಪೂಜೆ ಮಾಡಿದ ಮರುದಿವಸ ಆ ಇಂದ್ರಯಷ್ಟಿಯನ್ನು (ಇಂದ್ರ ಧ್ವಜವನ್ನು) ಮೇಲಕ್ಕೆ ಎತ್ತುತ್ತಾರೆ. ಆ ಇಂದ್ರಯಷ್ಟಿಯನ್ನು ಕಸ್ತೂರಿಗಂಧ ಮಾಲೆ, ಮತ್ತು ಭೂಷಣಗಳಿಂದ ಅಲಂಕರಿಸಿ, ಹೂವಿನ ಮಾಲೆಗಳನ್ನು ಸುತ್ತುತ್ತಾರೆ.

ಉದ್ಧೃತ್ಯ ಪೀಠಕೇ ಚಾಪಿ ದ್ವಾದಶಾರತ್ನಿಕೋಚ್ಛ್ರಿತೇ ।
ಮಹಾರಜನವಾಸಾಂಸಿ ಪರಿಕ್ಷಿಪ್ಯ ಧ್ವಜೋತ್ತಮಮ್ ॥೨೩॥

ವಾಸೋಭಿರನ್ನಪಾನೈಶ್ಚ ಪೂಜಿತೈರ್ಬ್ರಾಹ್ಮಣರ್ಷಭೈಃ ।
ಪುಣ್ಯಾಹವಾಚನಂ ಕೃತ್ವಾ ಧ್ವಜ ಉಚ್ಛ್ರಿಯತೇ ತದಾ ॥೨೪॥

ಮೂವತ್ತೆರಡು ಕಿಷ್ಕು (ಒಂದು ಹಸ್ತ ಪರಿಮಿತ ದೇಶ) ಎತ್ತರವಿರುವ ಆ ಇಂದ್ರಧ್ವಜವನ್ನು ಹನ್ನೆರಡು ಮೊಳ ಎತ್ತರದ ಪೀಠದಲ್ಲಿ ಎತ್ತಿನಿಲ್ಲಿಸಿ ಬೆಲೆ ಬಾಳುವ ವಸ್ತ್ರಗಳಿಂದ ಆ ಧ್ವಜವನ್ನು ಸುತ್ತಿ ಅಲಂಕರಿಸುತ್ತಾರೆ. ಬ್ರಾಹ್ಮಣಶ್ರೇಷ್ಠರಿಂದ ಪುಣ್ಯಾಹವಾಚನವನ್ನು ಮಾಡಿಸಿ, ಅನ್ನ , ಪಾನ, ವಸ್ತ್ರಗಳಿಂದ ಅವರನ್ನು ಪೂಜಿಸಿ ಅನಂತರ ಧ್ವಜವನ್ನು ಮೇಲಕ್ಕೆ ಎತ್ತುತ್ತಾರೆ.

ಶಂಖಭೇರೀಮೃದಂಗೈಶ್ಚ ಸನ್ನಾಹಃ ಕ್ರಿಯತೇ ತದಾ ।
ಭಗವಾನ್ ಪೂಜ್ಯತೇ ಚಾತ್ರ ಯಷ್ಟಿರೂಪೇಣ ವಾಸವಃ ॥೨೫॥

ಆಗ ಶಂಖಭೇರಿ ಮತ್ತು ಮೃದಂಗಗಳ ಘೋಷಗಳನ್ನು ಮಾಡುತ್ತಾರೆ. ಆ ಧ್ವಜದಲ್ಲಿ ಇಂದ್ರನನ್ನೇ ಆವಾಹಿಸಿ ಅವನನ್ನು ಪೂಜಿಸುತ್ತಾರೆ.

ಮಾಣಿಭದ್ರಾದಯೋ ಯಕ್ಷಾಃ ಪೂಜ್ಯಂತೇ ದೈವತೈಃ ಸಹ ।
ನಾನಾವಿಧಾನಿ ದಾನಾನಿ ದತ್ತ್ವಾऽರ್ಥಿಭ್ಯಃ ಸುಹೃಜ್ಜನೈಃ ॥೨೬॥

ಅಲಂಕೃತ್ವಾ ಮಾಲ್ಯದಾಮೈರ್ವಸ್ತ್ರೈರ್ನಾನಾವಿಧೈಸ್ತಥಾ ।
ಧೃತಿಭಿಃ ಸಜಲೈಃ ಸರ್ವೇ ಕ್ರೀಡಿತ್ವಾ ನೃಪಶಾಸನಾತ್ ॥೨೭॥

ಇಂದ್ರನೇ ಅಲ್ಲದೇ ಆ ಧ್ವಜದಲ್ಲಿ ಇನ್ನೂ ಕೆಲವು ದೇವತೆಗಳೂ ಮಣಿಭದ್ರ ಮೊದಲಾದ ಯಕ್ಷರೂ ಪೂಜಿಸಲ್ಪಡುತ್ತಾರೆ. ಅದಕ್ಕೆ ಮೊದಲು ಅನೇಕ ವಿಧವಾದ ದಾನಗಳನ್ನು ಯೋಗ್ಯರಿಗೆ ಕೊಡುತ್ತಾರೆ. ಸುಹೃಜ್ಜನರು ನಾನಾವಿಧಗಳಾದ

ಮಾಲ್ಯವಸ್ತ್ರಗಳಿಂದ ಅಲಂಕಾರವನ್ನು ಮಾಡಿಕೊಂಡು ರಾಜಶಾಸನದಂತೆ ಎಲ್ಲರೂ ಓಕುಳಿಯಾಡುತ್ತಾರೆ.

ಸಂಭಾಜಯಿತ್ವಾ ರಾಜಾನಂ ಕೃತ್ವಾ ನರ್ಮಾಶ್ರಯಾಃ ಕಥಾಃ ।
ರಮಂತೇ ನಾಗರಾಃ ಸರ್ವೇ ತಥಾ ಜಾನಪದೈಃ ಸಹ ॥೨೮॥

ರಾಜನನ್ನು ಗೌರವಿಸಿ ವಿವಿಧ ಹಾಸ್ಯದ ಮಾತುಗಳನ್ನು ಆಡಿ ಎಲ್ಲಾ ನಗರವಾಸಿಗಳು ಮತ್ತು ಗ್ರಾಮವಾಸಿಗಳು ಸಂತೋಷ ಪಡುತ್ತಾರೆ.

ಸೂತಾಶ್ಚ ಮಾಗಧಾಶ್ಚೈವ ರಮಂತೇ ನಟನರ್ತಕಾಃ ।
ಪ್ರೀತ್ಯಾ ತು ನೃಪಶಾರ್ದೂಲ ಸರ್ವೇ ಚಕ್ರುರ್ಮಹೋತ್ಸವಮ್ ॥೨೯॥

ಎಲೈ ರಾಜಶ್ರೇಷ್ಠನೇ ಸೂತರು, ಮಾಗಧರು, ನಟನರ್ತಕರು ಎಲ್ಲರೂ ಸಂತೋಷ ಪಡುತ್ತಾರೆ. ಎಲ್ಲರೂ ಪ್ರೀತಿಯಿಂದ ಈ ಮಹೋತ್ಸವವನ್ನು ಆಚರಿಸಿದರು.

ಸಾಂತಃಪುರಃ ಸಹಾಮಾತ್ಯಃ ಸರ್ವಾಭರಣಭೂಷಿತಃ ।
ಮಹಾರಜನವಾಸಾಂಸಿ ವಸಿತ್ವಾ ವೇದಿರಾಟ್ ತಥಾ ॥೩೦॥

ರೇಜೇ ವೇದಿಪತಿಸ್ತತ್ರ ದಿವಿ ದೇವಪತಿರ್ಯಥಾ ।
ಜಾತಿಭಿಸ್ತೂಲಿಕೇನಾಕ್ತಸ್ತಥಾ ಸ ಮುಮುದೇ ಸದಾ ॥೩೧॥

ವೇದಿಪತಿಯಾದ ಉಪರಿಚರನೂ ಸಹ ಸರ್ವಾಭರಣಭೂಷಿತನಾಗಿ ದಿವ್ಯವಾದ ವಸ್ತ್ರಗಳನ್ನು ಧರಿಸಿ ಅಂತಃಪುರದ ಜನರು ಮತ್ತು ಅಮಾತ್ಯರ ಜೊತೆಯಲ್ಲಿ ಸ್ವರ್ಗಲೋಕದಲ್ಲಿ ಇಂದ್ರನಂತೆ ಮೆರೆದನು. ಸುಗಂಧದ್ರವ್ಯಗಳಿಂದ ಲಿಪ್ತನಾಗಿ ಅವನು ಸಂತೋಷಪಟ್ಟನು.

ಏವಂ ಜಾನಪದಾಃ ಸರ್ವೇ ಚಕ್ರುರಿಂದ್ರಮಖಂ ತಥಾ ।
ಯಥಾ ವೇದಿಪತಿಃ ಪ್ರೀತ್ಯಾ ಚಕಾರೇಂದ್ರಮಖಂ ವಸುಃ ॥೩೨॥

ವೇದಿಪತಿಯಾದ ಉಪರಿಚರವಸುವು ಇಂದ್ರನಿಗೆ ಉತ್ಸವವನ್ನು ಮಾಡಿದಂತೆ ಎಲ್ಲಾ ಗ್ರಾಮಗಳಲ್ಲಿಯೂ ಇಂದ್ರನಿಗೆ ಉತ್ಸವವನ್ನು ಮಾಡಿದರು.

ಏತಾಂ ಪೂಜಾಂ ಮಹೇಂದ್ರಸ್ತು ದೃಷ್ಟ್ವಾ ತೇನ ಕೃತಾಂ ಶುಭಾಮ್ ।
ಹರಿಭಿರ್ವಾಜಿಭಿರ್ಯುಕ್ತಮಂತರಿಕ್ಷಗತಂ ರಥಮ್ ॥೩೩॥

ಆಸ್ಥಾಯ ಸಹ ಶಚ್ಯಾ ಚ ವೃತೋ ಹ್ಯಪ್ಸರಸಾಂ ಗಣೈಃ ।
ವಸುನಾ ರಾಜಮುಖ್ಯೇನ ಪ್ರೀತಿಮಾನಭವದ್ ವಿಭುಃ ॥೩೪॥

ಮಹೇಂದ್ರನಾದರೋ ಅಶ್ವಗಳನ್ನು ಹೂಡಿದ ತನ್ನ ರಥದಲ್ಲಿ ಅಂತರಿಕ್ಷದಲ್ಲಿ ಶಚಿಯ ಜೊತೆಯಲ್ಲಿ ಯುಕ್ತನಾಗಿ ಅಪ್ಸರೆಯರ ಸಮೂಹದಿಂದ ಸುತ್ತುವರಿಯಲ್ಪಟ್ಟವನಾಗಿ ರಾಜನು ಮಾಡಿದ ಈ ಮಹೋತ್ಸವವನ್ನು ನೋಡಿ ರಾಜಶ್ರೇಷ್ಠನಾದ ವಸುವಿನ ಜೊತೆಯಲ್ಲಿ ಪ್ರೀತಿಯುಳ್ಳವನಾದನು.

ಇಂದ್ರಃ

ಯೇ ಪೂಜಯಿಷ್ಯಂತಿ ನರಾ ರಾಜಾನಶ್ಚ ಮಖಂ ಮಮ ।
ಕಾರಯಿಷ್ಯಂತಿ ಚ ಮುದಾ ಯಥಾ ವೇದಿಪತಿರ್ನೃಪಃ ॥೩೫॥

ತೇಷಾಂ ಶ್ರೀರ್ವಿಜಯಶ್ಚೈವ ಸ್ವರಾಷ್ಟ್ರಾಣಾಂ ಭವಿಷ್ಯತಿ ।
ತೇಷಾಂ ಸ್ಫೀತಾ ಜನಪದಾ ಮುದಿತಾಶ್ಚ ಭವಂತ್ಯುತ ॥೩೬॥

ಎಲೈ ರಾಜನೇ ಯಾವ ರಾಜನು ನನಗೆ ವೇದಿಪತಿಯಾದ ವಸುವು ಮಾಡಿದಂತೆ ಸಂತೋಷದಿಂದ ಉತ್ಸವವನ್ನು ಮಾಡುತ್ತಾರೋ ಅವರಿಗೂ, ಅವರ ರಾಷ್ಟ್ರದವರಿಗೆಲ್ಲರಿಗೂ ಸಂಪತ್ತು ಮತ್ತು ವಿಜಯಗಳು ಉಂಟಾಗುತ್ತದೆ. ಅವರ ಜನಪದರೆಲ್ಲರೂ ಪರಿಶುದ್ಧರಾಗಿದ್ದು ಸಂತೋಷದಿಂದ ಇರುತ್ತಾರೆ.

ನಿರೀತಿಕಾನಿ ಸಸ್ಯಾನಿ ಭವಂತಿ ಬಹುಧಾ ನೃಪ ।
ರಾಕ್ಷಸಾಶ್ಚ ಪಿಶಾಚಾಶ್ಚ ನ ಲುಂಪಂತೇ ಕಥಂಚನ ॥೩೭॥

ಅಲ್ಲಿ ಈತಿಬಾಧೆಗಳು ಇರುವುದಿಲ್ಲ. ಸಸ್ಯಗಳು ಚೆನ್ನಾಗಿ ಬೆಳೆಯುತ್ತವೆ. ರಾಕ್ಷಸರು ಮತ್ತು ಪಿಶಾಚಿಗಳು ಆ ದೇಶವನ್ನು ಎಂದೂ ಲೂಟಿಮಾಡುವುದಿಲ್ಲ.

ವೈಶಂಪಾಯನಃ

ಏವಮುಕ್ತೋ ಮಹಾತ್ಮಾಽಥ ಮಹೇಂದ್ರೇಣ ನರಾಧಿಪ ।
ವಸುಃ ಪ್ರೀತ್ಯಾ ಮಘವತಾ ಮಹೇಂದ್ರೇಣಾಭಿಷೇಚಿತಃ ॥೩೮॥

ಎಲೈ ರಾಜನೇ ಮಹೇಂದ್ರನು ಈ ರೀತಿಯಲ್ಲಿ ಮಾತನಾಡಿ ಪ್ರೀತಿಯಿಂದ ತಾನೇ ವಸುವಿಗೆ ಅಭಿಷೇಕವನ್ನು ಮಾಡಿದನು.

ಉತ್ಸವಂ ಕಾರಯಿಷ್ಯಂತಿ ಸದಾ ಶಕ್ರಸ್ಯ ಯೇ ಜನಾಃ ।
ಭೂಮಿದಾನಾದಿಭಿರ್ದಾನೈರ್ಯಥಾ ತತ್ರ ಭವಂತಿ ವೈ ॥೩೯॥

ಯಾವ ಜನರು ಯಾವಾಗಲೂ ಹೀಗೆ ಭೂಮಿದಾನಾದಿಗಳನ್ನು ಕೊಟ್ಟು ಇಂದ್ರನಿಗೆ ಉತ್ಸವವನ್ನು ಮಾಡುತ್ತಾರೆಯೋ, ಅಲ್ಲಿ ಎಲ್ಲಾ ಮಂಗಳಗಳೂ ಉಂಟಾಗುತ್ತವೆ.'

ವರದಾನಮಹಾಯಜ್ಞೈಸ್ತಥಾ ಶಕ್ರೋತ್ಸವೇನ ಚ ।
ಇಂದ್ರಪ್ರೀತ್ಯಾ ಭೂಮಿಪತಿಶ್ಚಕಾರೇಂದ್ರಮಹೋತ್ಸವಮ್ ॥೪೦॥

ಉಪರಿಚರ ರಾಜನು ಕೇಳಿದವರಿಗೆ ಬೇಕಾದ ವರಗಳನ್ನು ಕೊಟ್ಟು, ಮಹಾಯಜ್ಞಗಳನ್ನು ಮಾಡಿ, ಇಂದ್ರನ ಪ್ರೀತಿಗಾಗಿ ಹೀಗೆ ಇಂದ್ರ ಮಹೋತ್ಸವವನ್ನು ಜರುಗಿಸಿದನು.

ಪುತ್ರಾಶ್ಚಾಸ್ಯ ಮಹಾವೀರ್ಯಾಃ ಪಂಚಾಸನ್ನಮಿತೌಜಸಃ ।
ನಾನಾರಾಜ್ಯೇಷು ಚ ಸುತಾನ್ ಸ ಸಮ್ರಾಡಭ್ಯಷೇಚಯತ್ ॥೪೧॥

ಅವನಿಗೆ ಮಹಾಪರಾಕ್ರಮಿಗಳೂ, ಅಮಿತ ಸಾಮರ್ಥ್ಯವುಳ್ಳವರೂ ಆದ ಐದು ಮಕ್ಕಳು. ಅವನು ಅವರನ್ನು ಬೇರೆ ಬೇರೆ ರಾಜ್ಯಗಳಲ್ಲಿ ಅಭಿಷೇಕ ಮಾಡಿದನು.

ಮಹಾರಥೋ ಮಗಧರಾಡ್ ವಿಶ್ರುತೋ ಯೋ ಬೃಹದ್ರಥಃ ।
ಪ್ರತ್ಯಗ್ರಶ್ಚ ಕುಶಾಗ್ರಶ್ಚ ಯಮಾಹುರ್ಮಾಣಿವಾಹನಮ್ ॥೪೨॥

ಮಚ್ಚಿಲ್ಲಶ್ಚ ಯದುಶ್ಚೈವ ರಾಜನ್ಯಶ್ಚಾಪರಾಜಿತಃ ।
ಏವಂ ಪಂಚ ಸುತಾಸ್ತಸ್ಯ ರಾಜರ್ಷೇರ್ಭೂರಿತೇಜಸಃ ॥೪೩॥

ಮಹಾರಥಿಕನಾದ ಮಗಧದೇಶಾಧಿಪತಿಯಾದ ಬೃಹದ್ರಥನು ಒಬ್ಬನು. (ಇವನು ಜರಾಸಂಧನ ತಂದೆ) ಪ್ರತ್ಯಗ್ರ ಎರಡನೆಯವನು. ಮಣಿವಾಹನನೆಂದು ಕರೆಯಲ್ಪಡುವ ಕುಶಾಗ್ರನು ಮೂರನೆಯವನು. ಮಚ್ಚಿಲ್ಲ ಮತ್ತು ಅಪರಾಜಿತನಾದ ಯದು ಎಂಬುವರು ನಾಲ್ಕು ಮತ್ತು ಐದನೆಯವರು. ಹೀಗೆ ಭೂರಿಪರಾಕ್ರಮವುಳ್ಳ ವಸುರಾಜನಿಗೆ ಐವರು ಮಕ್ಕಳು.

ನ್ಯವೇಶಯನ್ ನಾಮಭಿಃ ಸ್ವೈರ್ದೇಶಾಂಶ್ಚೈವ ಪುರಾಣಿ ಚ ।
ವಾಸವಾಃ ಪಂಚ ರಾಜಾನಃ ಸರ್ವೇ ವಂಶಕರಾಃ ಪೃಥಕ್ ॥೪೪॥

ಅವರವರ ಹೆಸರುಗಳಿಂದಲೇ ಪ್ರಸಿದ್ಧವಾದ ದೇಶ ಮತ್ತು ಪಟ್ಟಣಗಳಲ್ಲಿ ಅವರನ್ನು ಸ್ಥಾಪಿಸಿದನು. ವಸುವಿನ ಮಕ್ಕಳಾದ ಈ ಐದು ಜನರೂ ತಮ್ಮ ಬೇರೆ ಬೇರೆ ವಂಶಗಳಿಗೆ ಪ್ರವರ್ತಕರಾದರು.

ವರದಾದಿಂದ್ರಪ್ರಾಸಾದಾದಾಕಾಶಸ್ಫಾಟಿಕೇ ರಥೇ ।
ಉಪತಸ್ಥುರ್ಮಹಾತ್ಮಾನಂ ಗಂಧರ್ವಾಪ್ಸರಸೋ ನೃಪಮ್ ।
ರಾಜೋಪರಿಚರೇತ್ಯೇವಮವೋಚನ್ ಪಾರ್ಥಿವಾ ನೃಪಮ್ ॥೪೫॥

ಇಂದ್ರನ ಅನುಗ್ರಹದಿಂದ ಹೊಳೆಯುವ ಸ್ಫಟಿಕದ ವಿಮಾನದಲ್ಲಿ ಕುಳಿತ ಮಹಾತ್ಮನಾದ ಉಪರಿಚರವಸುವನ್ನು ಗಂಧರ್ವರು ಮತ್ತು ಅಪ್ಸರೆಯರು ಒಲೈಸಿದರು. ರಾಜರೆಲ್ಲರೂ ಎಲ್ಲ ರಾಜರ ಮೇಲೆ ಅವನು ಸಂಚರಿಸುವುದರಿಂದ ಅವನನ್ನು ರಾಜೋಪರಿಚರ ಎಂದು ಕರೆದರು.

ಪುರೋಪವಾಹಿನೀಂ ತಸ್ಯ ನದೀಂ ಶುಕ್ತಿಮತೀಂ ಗಿರಿಃ ।
ಅರೌತ್ಸೀಚ್ಚೇತನಾಯುಕ್ತಃ ಕಾಮಾತ್ ಕೋಲಾಹಲಃ ಕಿಲ ।
ಗಿರಿಂ ಕೋಲಾಹಲಂ ತಂ ತು ಪದಾ ವಸುರತಾಡಯತ್ ॥೪೬॥

ಅವನ ಪಟ್ಟಣದ ಸಮೀಪದಲ್ಲಿ ಹರಿಯುವ ಶುಕ್ತಿಮತೀ ನದಿಯನ್ನು ಅವನ ಪಟ್ಟಣದಲ್ಲಿದ್ದ ಕೋಲಾಹಲವೆಂಬ ಪರ್ವತವು ಚೈತನ್ಯವುಳ್ಳ ದೇಹವನ್ನು ಧರಿಸಿ, ನನ್ನಲ್ಲಿಯೇ ಈ ನದಿಯು ಹರಿಯಬೇಕು ಎಂಬ ಬಯಕೆಯಿಂದ ಸುತ್ತುವರೆದನು. ಆಗ ಉಪರಿಚರನು ತನ್ನ ಪಾದದಿಂದ ಪರ್ವತವನ್ನು ಒದ್ದು ಶುಕ್ತಿಮತಿಯು ಹೊರಗೆ ಬರುವಂತೆ ಮಾಡಿದನು.

ನಿಶ್ಚಕ್ರಾಮ ನದೀ ತಸ್ಯ ಪ್ರಹಾರವಿವರೇಣ ಸಾ ।
ತಸ್ಯಾಂ ನದ್ಯಾಮಜನಯನ್ಮಿಥುನಂ ಪರ್ವತಃ ಸ್ವಯಮ್ ॥೪೭॥

ಅವನ ಪಾದಪ್ರಹಾರದಿಂದ ಉಂಟಾದ ವಿವರದಿಂದ ಶುಕ್ತಿಮತಿಯು ಹೊರಗೆ ಬಂದಳು. ದೇಹವನ್ನು ಧರಿಸಿದ ಆ ನದಿಯಲ್ಲಿ ಕೋಲಾಹಲ ಪರ್ವತನು ಎರಡು ಮಕ್ಕಳನ್ನು ಪಡೆದನು.

ತಸ್ಮಾದ್ ವಿಮೋಕ್ಷಣಾತ್ ಪ್ರೀತಾ ನದೀ ರಾಜ್ಞೇ ನ್ಯವೇದಯತ್ ।
ಮಹಿಷೀ ಭವಿತಾ ಕನ್ಯಾ ಪೌಷ್ಯಃ ಸೇನಾಪತಿರ್ಭವತ್ ॥೪೮॥

ಕೋಲಾಹಲ ಪರ್ವತದಿಂದ ಬಿಡಿಸಿದ ರಾಜನ ಮೇಲಿನ ಪ್ರೀತಿಯಿಂದ ಶುಕ್ತಿಮತಿಯು ಎರಡು ಮಕ್ಕಳನ್ನು ರಾಜನಿಗೆ ಒಪ್ಪಿಸಿದಳು. ಅದರಲ್ಲಿ ಹೆಣ್ಣುಮಗುವು ಉಪರಿಚರನ ರಾಣಿಯಾದಳು. ಗಂಡುಮಗುವು ಪೌಷ್ಯನೆನಿಸಿಕೊಂಡು ಅವನ ಸೇನಾಪತಿಯಾದನು.

ಶುಕ್ತಿಮತ್ಯಾ ವಚಃ ಶ್ರುತ್ವಾ ದೃಷ್ಟ್ವಾ ತೌ ರಾಜಸತ್ತಮಃ ।
ಯಃ ಪುಮಾನಭವತ್ ತತ್ರ ತಂ ಸ ರಾಜರ್ಷಿಸತ್ತಮಃ ॥೪೯॥

ವಸುರ್ವಸುಪ್ರದಶ್ಚಕ್ರೇ ಸೇನಾಪತಿಮರಿಂದಮಮ್ ।
ಚಕಾರ ಪತ್ನೀಂ ಕನ್ಯಾಂ ತು ದಯಿತಾಂ ಗಿರಿಕಾಂ ನೃಪಃ ॥೫೦॥

ಶುಕ್ತಿಮತಿಯ ಮಾತನ್ನು ಕೇಳಿ ಆ ರಾಜಶ್ರೇಷ್ಠನು ಆ ಮಕ್ಕಳನ್ನು ನೋಡಿ ಅವರಲ್ಲಿ ಗಂಡುಮಗುವನ್ನು ಶತ್ರುಸಂಹಾರಕನಾದ ಸೇನಾಪತಿಯನ್ನಾಗಿ ಮಾಡಿದನು. ಆ ಹೆಣ್ಣನ್ನು ತನ್ನ ಪ್ರಿಯಳಾದ ಗಿರಿಕಾ ಎಂಬ ಪತ್ನಿಯನ್ನಾಗಿ ಮಾಡಿಕೊಂಡನು.

ವಸೋಃ ಪತ್ನೀ ತು ದಯಿತಾ ಕಾಮಾತ್ ಕಾಲೇ ನ್ಯವೇದಯತ್ ।
ಋತುಕಾಲಮನುಪ್ರಾಪ್ತಾ ಸ್ನಾತಾ ಪುಂಸವನೇ ಶುಚಿಃ ॥೫೧॥

ವಸುವಿನ ಪ್ರಿಯಳಾದ ಪತ್ನಿಯು ಋತುಸ್ನಾತಳಾಗಿ ಕಾಮಾವಿಷ್ಟಳಾಗಿ ಶುಚಿಯಾಗಿ ತನ್ನ ಪರಿಸ್ಥಿತಿಯನ್ನು ವಸುವಿಗೆ ತಿಳಿಸಿದಳು.

ತದಹಃ ಪಿತರಶ್ಚೈನಮೂಚುರ್ಜಹಿ ಮೃಗಾನಿತಿ ।
ಶ್ರುತ್ವಾ ಪಿತೃವಚಃ ಪ್ರೀತಸ್ತದಾ ಮತಿಮತಾಂ ವರಃ ॥೫೨॥

ಸ ಪಿತ್ರ್ಯಾಣಾಂ ನಿಯೋಗಂ ತಮನತಿಕ್ರಮ್ಯ ಪಾರ್ಥಿವಃ ।
ಚಚಾರ ಮೃಗಯಾಂ ಕಾಮೀ ಗಿರಿಕಾಮೇವ ಸಂಸ್ಮರನ್ ॥೫೩॥

ಅದೇ ದಿವಸ ವಸುವಿನ ತಂದೆಯು ಜಿಂಕೆಗಳನ್ನು ಬೇಟೆಯಾಡಿಕೊಂಡು ತೆಗೆದುಕೊಂಡು ಬಾ ಎಂದು ಹೇಳಿದರು. ತಂದೆಯ ಆಜ್ಞೆಯನ್ನು ಕೇಳಿ, ಸಂತೋಷಗೊಂಡ ವಿವೇಕಿಯಾದ ವಸುವು ತಂದೆಯ ಆಜ್ಞೆಯನ್ನು ಮೀರದೆ ಕಾಡಿಗೆ ಹೋಗಿ ಕಾಮಾರ್ತನಾಗಿ ತನ್ನ ಪತ್ನಿಯಾದ ಗಿರಿಕೆಯನ್ನೇ ಸ್ಮರಿಸಿಕೊಂಡು ಬೇಟೆಯಾಡಿದನು.

ಅತೀವ ರೂಪಸಮಪನ್ನಾಂ ಸಾಕ್ಷಾಚ್ಛ್ರಿಯಮಿವಾಪರಾಮ್ ।
ಭಾರ್ಯಾಂ ಚಿಂತಯಮಾನಸ್ಯ ಮನ್ಮಥಾಗ್ನಿರವರ್ಧತ ॥೫೪॥

ಇನ್ನೊಬ್ಬ ಲಕ್ಷ್ಮೀದೇವಿಯಂತೆ ಅತ್ಯಂತ ಸುಂದರಿಯಾದ ತನ್ನ ಪತ್ನಿಯನ್ನು ಸ್ಮರಿಸುತ್ತಿದ್ದ ಅವನಿಗೆ ಕಾಮಾಗ್ನಿಯು ಅಭಿವೃದ್ಧವಾಯಿತು. ಮತ್ತು ಮನೋಹರವಾದ ಕಾಡಿನಲ್ಲಿ ತಿರುಗುವ ಅವನಿಗೆ ರೇತಃಸ್ಖಲನವಾಯಿತು.

ತಸ್ಯ ರೇತಃ ಪ್ರಚಸ್ಕಂದ ಚರತೋ ರುಚಿರೇ ವನೇ ।
ಸ್ಕನ್ನಮಾತ್ರೇಣ ತದ್ರೇತೋ ವೃಕ್ಷಪರ್ಣೇನ ಭೂಮಿಪಃ ॥೫೫॥

ಪ್ರತಿಜಗ್ರಾಹ ಮಿಥ್ಯಾ ಮೇ ನ ಸ್ಕಂದೇದ್ ರೇತ ಇತ್ಯುತ ।
ಋತುಶ್ಚ ತಸ್ಯಾಃ ಪತ್ನ್ಯಾ ಮೇ ನ ಮೋಘಃ ಸ್ಯಾದಿತಿ ಪ್ರಭುಃ ॥೫೬॥

ರೇತಸ್ಸು ಸ್ಖಲನವಾದ ಕೂಡಲೇ ರಾಜನು ಅದನ್ನು ಒಂದು ಎಲೆಯಲ್ಲಿ ಹಿಡಿದು ನನ್ನ ರೇತಸ್ಸು ವ್ಯರ್ಥವಾಗಬಾರದು. ಮತ್ತು ನನ್ನ ಪತ್ನಿಯ ಋತುಕಾಲವು ವ್ಯರ್ಥವಾಗಬಾರದೆಂದು ಯೋಚಿಸಿದನು.

ಸಂಚಿಂತ್ಯೈವ ತದಾ ರಾಜಾ ವಿಚಾರ್ಯ ಚ ಪುನಃ ಪುನಃ ।
ಅಮೋಘತ್ವಂ ಚ ವಿಜ್ಞಾಯ ತೇಜಸೋ ರಾಜಸತ್ತಮಃ ॥೫೭॥

ಶುಕ್ರಪ್ರಸ್ಥಾಪನೇ ಕಾಲಂ ಮಹಿಷ್ಯಾಃ ಪ್ರಸಮೀಕ್ಷ್ಯ ಚ ।
ಅಭಿಮಂತ್ರ್ಯ ಚ ತಚ್ಛುಕ್ರಮಾರಾತ್ ತಿಷ್ಠಂತಮಾಶುಗಮ್ ।
ಸೂಕ್ಷ್ಮಧರ್ಮಾರ್ಥತತ್ತ್ವಜ್ಞೋ ಜ್ಞಾತ್ವಾ ಶ್ಯೇನಂ ತತೋಽಬ್ರವೀತ್ ॥೫೮॥

ರಾಜನು ಹೀಗೆ ಚಿಂತಿಸಿ ಮತ್ತೆ ಮತ್ತೆ ವಿಚಾರ ಮಾಡಿ ತನ್ನ ರೇತಸ್ಸಿನ ಅಮೋಘತ್ವವನ್ನು ತಿಳಿದು ಆ ರೇತಸ್ಸನ್ನು ತನ್ನ ಪತ್ನಿಗೆ ತಲುಪಿಸುವುದು ಸೂಕ್ತವೆಂದು ಭಾವಿಸಿ ಅದನ್ನು ಅಭಿಮಂತ್ರಿಸಿ ಹತ್ತಿರದಲ್ಲಿದ್ದ ಒಂದು ಶ್ಯೇನ (ಗಿಡುಗ) ಪಕ್ಷಿಯನ್ನು ಕುರಿತು ಸೂಕ್ಷ್ಮಧರ್ಮಾರ್ಥವನ್ನು ತಿಳಿದ ಅವನು ಹೀಗೆ ಹೇಳಿದನು.

ಮತ್ಪ್ರಿಯಾರ್ಥಮಿದಂ ಸೌಮ್ಯ ಶುಕ್ರಂ ಮಮ ಗೃಹಂ ನಯ ।
ಗಿರಿಕಾಯಾಃ ಪ್ರಯಚ್ಛಾಶು ತಸ್ಯಾ ಹ್ಯಾರ್ತವಮದ್ಯ ವೈ ॥೫೯॥

ಎಲೌ ಪ್ರೀತಿಪಾತ್ರನೇ ನನಗೆ ಸಂತೋಷವುಂಟು ಮಾಡಲು ಈ ನನ್ನ ರೇತಸ್ಸನ್ನು ಮನೆಗೆ ತೆಗೆದುಕೊಂಡು ಹೋಗಿ ಗಿರಿಕೆಗೆ ಕೊಡು. ಈ ದಿನ ಅವಳ ಋತುಕಾಲವಾಗಿದೆ.

ಗೃಹೀತ್ವಾ ತತ್ ತದಾ ಶ್ಯೇನಸ್ತೂರ್ಣಮುತ್ಪತ್ಯ ವೇಗವಾನ್ ।
ಜವಂ ಪರಮಮಾಸ್ಥಾಯ ಪ್ರದುದ್ರಾವ ವಿಹಂಗಮಃ ।
ತಮಪಶ್ಯದಥಾಯಾಂತಂ ಶ್ಯೇನಂ ಶ್ಯೇನಸ್ತಥಾऽಪರಃ ॥೬೦॥

ಅಭ್ಯದ್ರವಚ್ಚ ತಂ ಸದ್ಯೋ ದೃಷ್ಟ್ವೈವಾಮಿಷಶಂಕಯಾ ।
ತುಂಡಯುದ್ಧಮಥಾಕಾಶೇ ತಾವುಭೌ ಸಂಪ್ರಚಕ್ರತುಃ ॥೬೧॥

ಯುದ್ಧ್ಯತೋರಪತದ್ ರೇತಸ್ತಚ್ಚಾಪಿ ಯಮುನಾಂಭಸಿ ।
ತತ್ರಾದ್ರಿಕೇತಿ ವಿಖ್ಯಾತಾ ಬ್ರಹ್ಮಶಾಪಾದ್ ವರಾಪ್ಸರಾಃ ।
ಮೀನಭಾವಮನುಪ್ರಾಪ್ತಾ ಬಭೂವ ಯಮುನಾಚರೀ ॥೬೨॥

ಆಗ ಆ ಶ್ಯೇನನು ಅದನ್ನು ತೆಗೆದುಕೊಂಡು ಮೇಲಕ್ಕೆ ಹಾರಿ ವೇಗವನ್ನು ಸಾಧಿಸಿ ಹಾರಲು ಪ್ರಾರಂಭಿಸಿತು. ಹಾಗೇ ಹೋಗುತ್ತಿರುವ ಆ ಶ್ಯೇನವನ್ನು ಇನ್ನೊಂದು ಶ್ಯೇನಪಕ್ಷಿಯು ನೋಡಿ ಅದರ ಕಾಲಿನಲ್ಲಿರುವುದು ಮಾಂಸವೆಂದು ಶಂಕಿಸಿ ಅದರ ಹಿಂದೆ ಹಾರಿಹೋಯಿತು. ಆಕಾಶದಲ್ಲಿ ಆ ಎರಡು ಶ್ಯೇನ ಪಕ್ಷಿಗಳು ಕೊಕ್ಕುಗಳಿಂದ ಯುದ್ಧಮಾಡಿದವು. ಹಾಗೆ ಯುದ್ಧಮಾಡುವಾಗ ಆ ರೇತಸ್ಸು ಯಮುನಾನದಿಯ ನೀರಿನಲ್ಲಿ ಬಿದ್ದುಹೋಯಿತು. ಆ ಯಮುನೆಯ ನೀರಿನಲ್ಲಿ ಅದ್ರಿಕೆಯೆಂಬ ಶ್ರೇಷ್ಠಳಾದ ಅಪ್ಸರೆಯು ಬ್ರಹ್ಮದೇವರ ಶಾಪದಿಂದ ಮೀನಿನ ರೂಪದಲ್ಲಿ ಜನ್ಮವೆತ್ತಿ ಸಂಚರಿಸುತ್ತಿದ್ದಳು.

ಶ್ಯೇನಪಾದಾತ್ ಪರಿಭ್ರಷ್ಟಂ ತದ್ವೀರ್ಯಮಥ ವಾಸವಮ್ ।
ಜಗ್ರಾಹ ತರಸೋತ್ಪತ್ಯ ಸಾऽದ್ರಿಕಾ ಮತ್ಸ್ಯರೂಪಿಣೀ ॥೬೩॥

ಶ್ಯೇನಪಾದದಿಂದ ಕೆಳಗೆ ಬಿದ್ದ ಆ ವಸುವೀರ್ಯವನ್ನು ಮತ್ಸ್ಯರೂಪದಲ್ಲಿದ್ದ ಅದ್ರಿಕೆಯು ಬೇಗ ಮೇಲಕ್ಕೆ ಹಾರಿ ಸ್ವೀಕರಿಸಿದಳು.

ಕದಾಚಿದಥ ಮತ್ಸ್ಯೀಂ ತಾಂ ಬಬಂಧುರ್ಮತ್ಸ್ಯಘಾತಕಾಃ ।
ಉಜ್ಜಹ್ರುರುದರಾತ್ ತಸ್ಯಾ ಸ್ತ್ರೀಪುಮಾಂಸೌ ಚ ಮಾನುಷೌ ।
ಆಶ್ಚರ್ಯಭೂತಂ ಮತ್ವಾ ತತ್ ರಾಜ್ಞಸ್ತೇ ಪ್ರತ್ಯವೇದಯನ್ ॥೬೪॥

ಕಾಲಕ್ರಮದಲ್ಲಿ ಒಂದು ಸಲ ಮೀನು ಹಿಡಿಯುವವರು ಆ ಹೆಣ್ಣುಮೀನನ್ನು ಹಿಡಿದು ಎತ್ತಿ ಅದರ ಉದರದಲ್ಲಿ ಮನುಷ್ಯರೂಪದ ಒಂದು ಹೆಣ್ಣು ಮತ್ತು ಗಂಡುಶಿಶುವನ್ನು ನೋಡಿ ಆಶ್ಚರ್ಯಚಕಿತರಾಗಿ ಅದನ್ನು ದಾಶರಾಜನಿಗೆ ನಿವೇದಿಸಿದರು.

ಕಾಯೇ ಮತ್ಸ್ಯ ಇಮೌ ರಾಜನ್ ಸಂಭೂತೌ ಮಾನುಷಾವಿತಿ ।
ತಯೋಃ ಪುಮಾಂಸಂ ಜಗ್ರಾಹ ರಾಜೋಪರಿಚರಸ್ತದಾ ॥೬೫॥

ಎಲೈ ರಾಜನೇ ಹೆಣ್ಣುಮೀನಿನ ಉದರದಲ್ಲಿ ಇವೆರಡು ಮನುಷ್ಯ ಶಿಶುಗಳಿದ್ದವು ಎಂದು ಹೇಳಿದರು. ಆಗ ಉಪರಿಚರ ರಾಜನು ಅದರಲ್ಲಿ ಗಂಡುಮಗುವನ್ನು ಸ್ವೀಕರಿಸಿದನು.

ಸ ಮಾತ್ಸ್ಯೋ ನಾಮ ರಾಜಾऽऽಸೀದ್ ಧಾರ್ಮಿಕಃ ಸತ್ಯಸಂಗರಃ ।
ಸಾऽಪ್ಸರಾ ಮುಕ್ತಶಾಪಾ ಚ ಕ್ಷಣೇನ ಸಮಪದ್ಯತ ॥೬೬॥

ಆ ಗಂಡುಮಗುವು ಕಾಲಕ್ರಮದಲ್ಲಿ ಧಾರ್ಮಿಕನೂ, ಸತ್ಯಸಂಧನೂ ಆದ ಮತ್ಸ್ಯರಾಜನಾದನು. ಆ ಹೆಣ್ಣು ಶಿಶುವು ಶಾಪದಿಂದ ಮುಕ್ತಳಾಗಿ ತಕ್ಷಣ ಅಪ್ಸರೆಯಾದಳು.

ಪುರೋಕ್ತಾ ಸಾ ಭಗವತಾ ತಿರ್ಯಗ್ಯೋನಿಗತಾऽऽಶು ವೈ ।
ಮಾನುಷೌ ಜನಯಿತ್ವಾ ತು ಮುಕ್ತಶಾಪಾ ಭವಿಷ್ಯಸಿ ॥೬೭॥

ಹಿಂದೆ ಬ್ರಹ್ಮದೇವರು ಅವಳಿಗೆ ನೀನು ಮಾನವ ಶಿಶುಗಳನ್ನು ಪ್ರಸವಿಸಿದ ತಕ್ಷಣ ಶಾಪಮುಕ್ತಳಾಗುವಿ ಎಂದು ಹೇಳಿದ್ದರು.

ಸುತೌ ಸಂಜನಯಿತ್ವಾ ಸಾ ವಿಶಸ್ತಾ ಮತ್ಸ್ಯಘಾತಿಭಿಃ ।
ಸಂತ್ಯಜ್ಯ ಮತ್ಸ್ಯರೂಪಂ ಸಾ ದಿವ್ಯಂ ರೂಪಮವಾಪ್ಯ ಚ ।
ಸಿದ್ಧರ್ಷಿಚಾರಣಪಥಂ ಜಗಾಮಾಪ್ಸರಸಾಂವರಾ ॥೬೮॥

ಮಕ್ಕಳನ್ನು ಪಡೆದ ಮೇಲೆ ಬೆಸ್ತರು ಅವಳನ್ನು ಸೀಳಿದಾಗ ಅವಳು ಮತ್ಸ್ಯರೂಪವನ್ನು ಬಿಟ್ಟು ದಿವ್ಯರೂಪವನ್ನು ಧರಿಸಿ ಶ್ರೇಷ್ಠಳಾದ ಅಪ್ಸರೆಯಾಗಿ ಸಿದ್ಧಚಾರಣ ಮಾರ್ಗದಲ್ಲಿ ಹೊರಟುಹೋದಳು.

ಯಾ ಕನ್ಯಾ ದುಹಿತಾ ಮತ್ಸ್ಯಾ ಸಾ ಚಾಸೀನ್ಮತ್ಸ್ಯಗಂಧಿನೀ ।
ರಾಜ್ಞಾ ದತ್ತಾ ಚ ದಾಶಾಯ ಸುತೇಯಂ ತೇ ಭವತ್ವಿತಿ ।
ಸಾ ತು ರೂಪಸಮಾಯುಕ್ತಾ ಸರ್ವೈಃ ಸಮುದಿತಾ ಗುಣೈಃ ॥೬೯॥

ಆ ಹೆಣ್ಣುಮೀನಿನ ಉದರದಲ್ಲಿದ್ದ ಹೆಣ್ಣು ಶಿಶುವು ಮತ್ಸ್ಯಕನ್ಯೆಯೆಂದು ಪ್ರಸಿದ್ಧಳಾದಳು. ಉಪರಿಚರರಾಜನು ಅವಳನ್ನು ದಾಶರಾಜನಿಗೆ ಕೊಟ್ಟು ಇವಳು ನಿನ್ನ

ಮಗಳಾಗಿರಲಿ ಎಂದನು. ಅವಳು ಎಲ್ಲಾ ಗುಣಗಳಿಂದಲೂ ಯುಕ್ತಳಾಗಿ ಒಳ್ಳೆಯ ರೂಪವನ್ನು ಧರಿಸಿದವಳಾಗಿ ಬೆಳೆದಳು.

ಸಾ ತು ಸತ್ಯವತೀ ನಾಮ ಮತ್ಸ್ಯಗಾತ್ರಾಭಿಸಂಶ್ರಯಾತ್ ।
ಆಸೀತ್ ಸಾ ಮತ್ಸ್ಯಗಂಧೈವ ಕಂಚಿತ್ಕಾಲಂ ಶುಚಿಸ್ಮಿತಾ ॥೭೦॥

ಅವಳು ಸತ್ಯವತೀ ಎಂಬ ಹೆಸರುಳ್ಳವಳಾಗಿ ಮತ್ಸ್ಯದೇಹದ ಸಂಬಂಧದಿಂದ ಮತ್ಸ್ಯಗಂಧವನ್ನೇ ಉಳ್ಳವಳಾಗಿ ನಗುನಗುತ್ತಾ ಕೆಲವು ಕಾಲ ಬೆಳೆದಳು.

ಶುಶ್ರೂಷಾರ್ಥಂ ಪಿತುರ್ನಾವಂ ತಾಂ ತು ವಾಹಯತೀಂ ಜಲೇ ।
ತೀರ್ಥಯಾತ್ರಾಂ ಪರಿಕ್ರಾಮನ್ನಪಶ್ಯದ್ ವೈ ಪರಾಶರಃ ॥೭೧॥

ತಂದೆಯ ಸೇವೆಯನ್ನು ಮಾಡಲು ನೀರಿನಲ್ಲಿ ನಾವೆಯನ್ನು ನಡೆಸುತ್ತಿದ್ದ ಅವಳನ್ನು ತೀರ್ಥಯಾತ್ರೆಯ ಕ್ರಮದಿಂದ ಅಲ್ಲಿಗೆ ಬಂದ ಪರಾಶರರು ನೋಡಿದರು.

ಅತೀವ ರೂಪಸಂಪನ್ನಾಂ ಸಿದ್ಧಾನಾಮಪಿ ಕಾಂಕ್ಷಿತಾಮ್ ।
ದೃಷ್ಟ್ವೈವ ಸ ಚ ತಾಂ ಧೀಮಾಂಶ್ಚಕಮೇ ಚಾರುದರ್ಶನಾಮ್ ॥೭೨॥

ತುಂಬ ಸುಂದರಿಯೂ, ಸಿದ್ಧರಿಗೂ ಅಪೇಕ್ಷಿತಳಾದವಳೂ, ಸುನೇತ್ರೆಯೂ ಆದ ಅವಳನ್ನು ನೋಡಿ ಮೇಧಾವಿಗಳಾದ ಅವರು ಅವಳನ್ನು ಕಾಮಿಸಿದರು.

ವಿದ್ವಾಂಸ್ತಾಂ ವಾಸವೀಂ ಕನ್ಯಾಂ ಕಾರ್ಯವಾನ್ ಮುನಿಪುಂಗವಃ ।
ಸಂಭವಂ ಚಿಂತಯಿತ್ವಾ ತಾಂ ಜ್ಞಾತ್ವಾ ಪ್ರೋವಾಚ ಶಕ್ತಿಜಃ ।
ಕ್ವ ಕರ್ಣಧಾರೋ ನೌರ್ಯೇನ ನೀಯತೇ ಬ್ರೂಹಿ ಭಾಮಿನಿ ॥೭೩॥

ಆ ಮುನಿಪುಂಗವರು ಅವಳು ವಸುವಿನ ಮಗಳೆಂದು ತಿಳಿದು ಮುಂದೆ ಆಗಲಿರುವ ದೇವತಾಕಾರ್ಯವನ್ನು ಗಮನಿಸಿ (ವ್ಯಾಸರ ಉತ್ಪತ್ತಿಯನ್ನು ಗಮನಿಸಿ), ಅವಳನ್ನು ಕುರಿತು ಎಲೈ ಸುಂದರಿಯೆ ಈ ನಾವೆಯನ್ನು ನಡೆಸುವ ನಾವಿಕನು ಎಲ್ಲಿ ಎಂದು ಕೇಳಿದರು.

ಮತ್ಸ್ಯಗಂಧಾ

ಅನಪತ್ಯಸ್ಯ ದಾಶಸ್ಯ ಸುತಾ ತತ್ಪ್ರಿಯಕಾಮ್ಯಯಾ ।
ಸಹಸ್ರಜನಸಂಪೂರ್ಣಾ ನೌರ್ಮಯಾ ವಾಹ್ಯತೇ ದ್ವಿಜ ॥೭೪॥

ನಾನು ದಾಶರಾಜನ ಮಗಳು. ಅವನಿಗೆ ಗಂಡುಮಕ್ಕಳಿಲ್ಲ. ಎಲೈ ಬ್ರಾಹ್ಮಣರೇ ನಾನು ಸಾವಿರ ಜನರಿರುವ ನಾವೆಯನ್ನೂ ಕೂಡ ನಡೆಸುತ್ತೇನೆ ಎಂದು ಹೇಳಿದಳು.

ಪರಾಶರಃ

ಶೋಭನಂ ವಾಸವಿ ಶುಭೇ ಕಿಂ ಚಿರಾಯಸಿ ವಾಹ್ಯತಾಮ್ ।
ಕಲಶಂ ಭವಿತಾ ಭದ್ರೇ ಸಹಸ್ರಾರ್ಧೇನ ಸಮ್ಮಿತಮ್ ।
ಅಹಂ ಶೇಷೋ ಭವಿಷ್ಯಾಮಿ ನೀಯತಾಮಚಿರೇಣ ನೌಃ ॥೭೫॥

ಎಲೌ ವಸುಪುತ್ರಿಯೇ ಒಳ್ಳೆಯದು. ಮಂಗಳಸ್ವರೂಪಳೇ ಏಕೆ ತಡಮಾಡುತ್ತಿದ್ದೀಯೇ? ನಾವೆಯನ್ನು ನಡೆಸು. ನನ್ನ ಕಮಂಡಲುವು ಐನೂರು ಜನ ಭಾರವುಳ್ಳದ್ದು. ನಾನು ಐನೂರ ಜನರ ಭಾರವನ್ನು ಹೊಂದಿದ್ದೇನೆ. ಸಾವಿರಜನವಾಯಿತು. ನಾವೆಯನ್ನು ಶೀಘ್ರವಾಗಿ ನಡೆಸು. (ಇದು ವಿನೋದದ ಅರ್ಥ) ಯಮುನಾ ನದಿಯ ಆಚೆಯ ದಡದಲ್ಲಿ ಐನೂರು ಋಷಿಗಳಿಂದ ಮಂಗಳಕಾರ್ಯದ ಕಲಶ ಪೂಜೆಯು ನಡೆಯುತ್ತದೆ. ನಾನು ಇಲ್ಲಿಯೇ ಉಳಿದುಬಿಡುತ್ತೇನೆ. ಆದ್ದರಿಂದ ಶೀಘ್ರವಾಗಿ ನಾವೆಯನ್ನು ನಡೆಸು. ಅಥವಾ ಅಭಿವೃದ್ಧವಾದ ಸಹಸ್ರಪಾದಾದಿಗಳಿಂದ ಕೂಡಿದ ನಾರಾಯಣನು ವೇದವ್ಯಾಸನಾಗಿ ಅವತರಿಸುತ್ತಾನೆ. ನೀನು ಅವನಿಗೆ ತಾಯಿಯಾಗುತ್ತೀಯೆ, ನಾನು ತಂದೆಯಾಗುತ್ತೇನೆ. ಆದ್ದರಿಂದ ನಾವೆಯನ್ನು ಶೀಘ್ರವಾಗಿ ನಡೆಸು. (ಇದು ಗೂಢಾರ್ಥ)

ವೈಶಂಪಾಯನಃ

ಮತ್ಸ್ಯಗಂಧಾ ತಥೇತ್ಯುಕ್ತ್ವಾ ನಾವಂ ವಾಹಯತೀ ಜಲೇ ।
ವೀಕ್ಷಮಾಣಂ ಮುನಿಂ ದೃಷ್ಟ್ವಾ ಪ್ರೋವಾಚೇದಂ ಪಚಸ್ತದಾ ॥೭೬॥

ಮತ್ಸ್ಯಗಂಧೆಯು ಹಾಗೆಯೇ ಆಗಲಿ ಎಂದು ಹೇಳಿ, ಜಲದಲ್ಲಿ ನಾವೆಯನ್ನು ನಡೆಸುತ್ತಾ, ಋಷಿಗಳು ತನ್ನನ್ನೇ ನೋಡುತ್ತಿರುವುದನ್ನು ಕಂಡು ಈ ಮಾತನ್ನು ಆಡಿದಳು.

ಮತ್ಸ್ಯಗಂಧಾ

ಮತ್ಸ್ಯಗಂಧೇತಿ ಮಾಮಾಹುರ್ದಾಶರಾಜಸುತಾಂ ಜನಾಃ ।
ಜನ್ಮ ಶೋಕಾಭಿತಪ್ತಾಯಾಃ ಕಥಂ ಜ್ಞಾಸ್ಯಸಿ ಕಥ್ಯತಾಮ್ ॥೭೭॥

ದಾಶರಾಜನ ಮಗಳಾದ ನನ್ನನ್ನು ಜನರು ಮತ್ಸ್ಯಗಂಧಾ ಎಂದು ಕರೆಯುತ್ತಾರೆ. ಶೋಕತಪ್ತಳಾದ ನನ್ನ ಜನ್ಮವನ್ನು ದಿವ್ಯದೃಷ್ಟಿಯಿಂದ ನೀವು ಹೇಗೆ ತಿಳಿಯುತ್ತೀರಿ ಹೇಳಿ.

ಪರಾಶರಃ

ದಿವ್ಯಜ್ಞಾನೇನ ದೃಷ್ಟಂ ಹಿ ದೃಷ್ಟಮಾತ್ರೇಣ ತೇ ವಪುಃ ।
ಪ್ರಣಯಗ್ರಹಣಾರ್ಥಾಯ ವಕ್ಷ್ಯೇ ವಾಸವಿ ತಚ್ಛೃಣು ॥೭೮॥

ಎಲೌ ವಸುಕುಮಾರಿಯೇ ಸಕಲ ಸೂಕ್ಷ್ಮವಿಷಯಗಳನ್ನು ಗಮನಿಸುವ ನನ್ನ ದಿವ್ಯಜ್ಞಾನದಿಂದ ನಿನ್ನ ದೇಹವನ್ನು ನೋಡಿದೆನು. ನಿನ್ನ ಮೇಲಿನ ಪ್ರೀತಿಯಿಂದ ಹೇಳುತ್ತೇನೆ ಅದನ್ನು ಕೇಳು.

ಬರ್ಹಿಷದ್ ಇತಿ ವಿಖ್ಯಾತಾಃ ಪಿತರಃ ಸೋಮಪಾಸ್ತು ತೇ ।
ತೇಷಾಂ ತ್ವಂ ಮಾನಸೀ ಕನ್ಯಾ ಅಚ್ಛೋದಾ ನಾಮ ವಿಶ್ರುತಾ ॥೭೯॥

ಬರ್ಹಿಷದರು ಎಂದು ಪ್ರಖ್ಯಾತರಾದ ಸೋಮಪರು ನಿನ್ನ ಪಿತೃಗಳು. ನೀನು ಅವರ ಮಾನಸೀ ಕನ್ಯಾ . ಅಚ್ಛೋದಾ ಎಂದು ವಿಖ್ಯಾತಳಾಗಿದ್ದೆ.

ಅಚ್ಛೋದಂ ನಾಮ ತದ್ ದಿವ್ಯಂ ಸರೋ ಯಸ್ಮಾತ್ ಸಮುತ್ಥಿತಮ್।
ಭಗವಾನ್ ಪೂಜ್ಯತೇ ಚಾತ್ರ ಹರರೂಪೇಣ ಶಂಕರಃ ॥೮೦॥

ಅಚ್ಛೋದ ಎಂಬ ದಿವ್ಯಸರೋವರವು ನಿನ್ನಿಂದಲೇ ಉತ್ಪನ್ನವಾಯಿತು. ಅಲ್ಲಿ ಅಘಹರರೂಪನಾದ ಭಗವಂತನಾದ ಶಂಕರನು ಪೂಜಿಸಲ್ಪಡುತ್ತಾನೆ.

ತ್ವಯಾ ನ ದೃಷ್ಟಪೂರ್ವಾಸ್ತು ಪಿತರಸ್ತೇ ಕದಾಚನ ।
ಸಂಭೂತಾ ಮನಸಾ ತೇಷಾಂ ಪಿತೄನ್ ಸ್ವಾನ್ ನಾಭಿಜಾನತೀ ॥೮೧॥

ನೀನು ಎಂದೂ ನಿನ್ನ ಆ ಪಿತೃಗಳನ್ನು ನೋಡಿರಲಿಲ್ಲ. ಅವರ ಮಾನಸ ಕನ್ಯೆಯಾದ ಕಾರಣದಿಂದ, ಆ ಪಿತೃಗಳ ಗುರುತೂ ನಿನಗೆ ಇರಲಿಲ್ಲ.

ಸಾ ತ್ವನ್ಯಂ ಪಿತರಂ ವವ್ರೇ ಸ್ವಾನತಿಕ್ರಮ್ಯ ತಾನ್ ಪಿತೄನ್ ।
ನಾಮ್ನಾ ವಸುರಿತಿ ಖ್ಯಾತಂ ಮನುಪುತ್ರಂ ಮಹೀಶ್ವರಮ್ ।
ಅದ್ರಿಕಾऽಪ್ಸರಸಾ ಯುಕ್ತಂ ವಿಮಾನೇ ದಿವಿ ವಿಷ್ಠಿತಮ್ ॥೮೨॥

ಅಂತಹ ನೀನು ನಿನ್ನ ಸ್ವಂತ ಪಿತೃಗಳನ್ನು ಬಿಟ್ಟು, ಭಿನ್ನನಾದ ಅಪ್ಸರೆಯಾದ ಅದ್ರಿಕೆಯ ಜೊತೆಯಲ್ಲಿ ವಿಮಾನದಲ್ಲಿ ಅಂತರಿಕ್ಷದಲ್ಲಿ ಇದ್ದಂತಹ ಮನುಪುತ್ರನಾದ ವಸು ಎಂಬ ರಾಜನನ್ನು ಪಿತೃ ಎಂದು ಅಂಗೀಕರಿಸಿದೆ.

ಸಾ ತೇನ ವ್ಯಭಿಚಾರೇಣ ಮನಸಾ ಕಾಮಚಾರಿಣೇ
ಪಿತರಂ ಪ್ರಾರ್ಥಯಿತ್ವಾಽನ್ಯಂ ಯೋಗಾದ್ ಭ್ರಷ್ಟಾ ಪಪಾತ ಹ ॥೮೩॥

ಈ ಮಾನಸ ಅಪರಾಧದಿಂದ ತಂದೆಯನ್ನು ಬಿಟ್ಟು ಬೇರೆಯವನನ್ನು ತಂದೆಯೆಂದು ಪ್ರಾರ್ಥಿಸಿದುದರಿಂದ ಯೋಗಭ್ರಷ್ಟಳಾಗಿ ಕೆಳಗೆ ಬಿದ್ದೆ.

ಅಪಶ್ಯತ್ ಪತಮಾನಾ ಸಾ ವಿಮಾನತ್ರಯಮಂತಿಕಾತ್ ।
ತ್ರಸರೇಣುಪ್ರಮಾಣಾಂಸ್ತಾಂಸ್ತತ್ರಾಪಶ್ಯತ್ ಸ್ವಕಾನ್ ಪಿತೄನ್ ।
ಸುಸೂಕ್ಷ್ಮಾನಪರಿವ್ಯಕ್ತಾನಂಗೈರಂಗೇಷ್ವವಾಹಿತಾನ್ ॥೮೪॥

ಕೆಳಗೆ ಬೀಳುತ್ತಾ ನೀನು ಹತ್ತಿರದಲ್ಲಿ ಮೂರು ವಿಮಾನಗಳಿದ್ದಂತಹ, ಸಣ್ಣ ಕಣದಷ್ಟು ಪರಿಮಾಣದ ಶರೀರವುಳ್ಳ, ಶರೀರದ ಒಂದು ಅಂಗದಲ್ಲಿ ಇನ್ನೊಂದು ಅಂಗವು ಸೇರಿಕೊಂಡಂತಿರುವ ನಿನ್ನ ನಿಜವಾದ ಪಿತೃಗಳನ್ನು ನೋಡಿದೆ.

ತಾತೇತಿ ತಾನುವಾಚಾರ್ತಾ ಪತಂತೀ ಸಾ ಹ್ಯಧೋಮುಖೀ ।
ತೈರುಕ್ತಾ ಸಾ ತು ಮಾ ಭೈಷೀಸ್ತೇನ ಸಾ ಸಂಸ್ಥಿತಾ ದಿವಿ ॥೮೫॥

ಅಧೋಮುಖಿಯಾಗಿ ಕೆಳಗೆ ಬೀಳುತ್ತಿದ್ದ ನೀನು, ಆರ್ತ ಸ್ವರದಿಂದ ಅವರನ್ನು ತಂದೆಯೆಂದು ಕರೆದೆ. ಅವರು ಹೆದರಬೇಡ ಎಂದು ಅಭಯವಿತ್ತರು. ಆಗ ನೀನು ಅಂತರಿಕ್ಷದಲ್ಲಿಯೇ ನಿಂತೆ.

ತತಃ ಪ್ರಸಾದಯಾಮಾಸ ಸ್ವಾನ್ ಪಿತೄನ್ ದೀನಯಾ ಗಿರಾ ।
ತ ಊಚುಃ ಪಿತರಃ ಕನ್ಯಾಂ ಭ್ರಷ್ಟೈಶ್ವರ್ಯಾಂ ವ್ಯತಿಕ್ರಮಾತ್ ।
ಭ್ರಷ್ಟೈಶ್ವರ್ಯಾ ಸ್ವದೋಷೇಣ ತಪ್ಯಸೇ ತ್ವಂ ಶುಚಿಸ್ಮಿತೇ ॥೮೬॥

ಅನಂತರ ಅವಳು ದೈನ್ಯದ ಮಾತುಗಳಿಂದ ತನ್ನ ಪಿತೃಗಳನ್ನು ಪ್ರಸನ್ನೀಕರಿಸಲು ಪ್ರಯತ್ನಿಸಿದಳು. ಮಾನಸ ವ್ಯಭಿಚಾರದಿಂದ ಐಶ್ವರ್ಯಚ್ಯುತಳಾದ ಅವಳನ್ನು ಕುರಿತು ಪಿತೃಗಳು ಹೇಳಿದರು. ಎಲೌ ಶುಚಿಸ್ಮಿತೆಯೇ ನಿನ್ನ ದೋಷದಿಂದ ನೀನು ಐಶ್ವರ್ಯಭ್ರಷ್ಟಳಾಗಿ ತಾಪ ಪಡುತ್ತಿದ್ದೀಯೆ.

ಯೈರಾರಭಂತೇ ಕರ್ಮಾಣಿ ಶರೀರೈರಿಹ ದೇವತಾಃ ।
ತೈರೇವ ತತ್ಕರ್ಮಫಲಂ ಪ್ರಾಪ್ನುವಂತಿ ಸ್ಮ ದೇವತಾಃ ।
ಮನುಷ್ಯಾಸ್ತ್ವನ್ಯದೇಹೇನ ಶುಭಾಶುಭಮಿತಿ ಸ್ಥಿತಿಃ ॥೮೭॥

ದೇವತೆಗಳು ಯಾವ ಶರೀರದಿಂದ ಕರ್ಮವನ್ನು ಮಾಡುತ್ತಾರೋ, ಆ ಕರ್ಮಗಳ ಫಲಗಳನ್ನು ಭಗವನ್ನಿಯತವಾಗಿ ಅದೇ ಶರೀರದಲ್ಲಿ ಅನುಭವಿಸುತ್ತಾರೆ. (ಏಕೆಂದರೆ ಅವರು ಕಲ್ಪಾಂತಜೀವಿಗಳು) ಆದರೆ ಮನುಷ್ಯರು ಒಂದು ಜನ್ಮದಲ್ಲಿ ಮಾಡಿದ ಶುಭಾಶುಭ ಕರ್ಮಗಳ ಫಲವನ್ನು ಇನ್ನೊಂದು ದೇಹದಲ್ಲಿ ಅನುಭವಿಸುತ್ತಾರೆ.

ಸದ್ಯಃ ಫಲಂತಿ ಕರ್ಮಾಣಿ ದೇವತ್ವೇ ಪ್ರೇತ್ಯ ಮಾನುಷೇ ।
ತಸ್ಮಾತ್ ತ್ವಂ ಪತಸೇ ಪುತ್ರಿ ಪ್ರೇತ್ಯ ತ್ವಂ ಪ್ರಾಪ್ಸ್ಯಸೇ ಫಲಮ್ ॥೮೮॥

ದೇವತೆಗಳಿಗೆ ಕರ್ಮಗಳು ತಕ್ಷಣ ಫಲಗಳನ್ನು ಕೊಡುತ್ತವೆ. ಮನುಷ್ಯರು ಮರಣ ಹೊಂದಿದ ಮೇಲೆ ಫಲವನ್ನು ಹೊಂದುತ್ತಾರೆ. ಎಲೌ ಮಗಳೆ ಆದ್ದರಿಂದ ನೀನು ದುಃಖಪಡುತ್ತಿದ್ದೀಯೆ. ಮರಣ ಹೊಂದಿದ ಮೇಲೆ ಫಲವನ್ನು (ಸುಖವನ್ನು) ಪಡೆಯುತ್ತೀಯೆ.

ಪಿತೃಹೀನಾ ತು ಕನ್ಯಾತ್ವಂ ವಸೋರ್ಹಿ ಸಮುಪಾಗತಾ ।
ಮತ್ಸ್ಯಯೋನೌ ಸಮುತ್ಪನ್ನಾ ಸುತಾ ರಾಜ್ಞೋ ಭವಿಷ್ಯಸಿ ॥೮೯॥

ನೀನು ಪಿತೃಹೀನೆಯಾದ ಕನ್ಯೆಯಾಗಿ ಜನಿಸಿ ವಸುವಿನ ಸಮೀಪವನ್ನು ಸೇರುತ್ತೀಯೆ. ಮತ್ಸ್ಯಯೋನಿಯಲ್ಲಿ ಜನಿಸಿ ದಾಶರಾಜನ ಮಗಳಾಗಿ ಬೆಳೆಯುತ್ತೀಯೆ.

ಅದ್ರಿಕಾ ಮತ್ಸ್ಯರೂಪಾऽಭೂದ್ ಗಂಗಾಯಮುನಸಂಗಮೇ ।
ಪರಾಶರಸ್ಯ ದಾಯಾದಂ ತ್ವಂ ಪುತ್ರಂ ಜನಯಿಷ್ಯಸಿ ॥೯೦॥

ಗಂಗಾಯಮುನಾ ಸಂಗಮದಲ್ಲಿ ಅದ್ರಿಕಾ ಅಪ್ಸರೆಯು ಮತ್ಸ್ಯರೂಪಳಾಗಿದ್ದಳು. ನೀನು ಅವಳಲ್ಲಿ ಜನಿಸಿ ಪರಾಶರರ ಪುತ್ರರಾದ ವ್ಯಾಸರನ್ನು ಮಗನಾಗಿ ಪಡೆಯುತ್ತೀಯೆ.

ವ್ಯತಿಕ್ರಮಾತ್ ಪಿತೄಣಾಂ ಚ ಪ್ರಾಪ್ಸ್ಯತೇ ಜನ್ಮ ಕುತ್ಸಿತಮ್ ।
ಅಸ್ಯೈವ ರಾಜ್ಞಸ್ತ್ವಂ ಕನ್ಯಾ ಹ್ಯದ್ರಿಕಾಯಾಂ ಭವಿಷ್ಯಸಿ ॥೯೧॥

ಪಿತೃಗಳಿಗೆ ತಪ್ಪಾಗಿ ತಿಳಿದು ವ್ಯತಿಕ್ರಮವನ್ನು ಮಾಡಿದ್ದರಿಂದ ನಿನಗೆ ನೀಚ ಜನ್ಮವು ಬರುತ್ತದೆ. ನೀನು ಇದೇ ರಾಜನ ಮಗಳಾಗಿ (ವಸುರಾಜನ) ಅದ್ರಿಕೆಯಲ್ಲಿ ಜನಿಸುತ್ತೀಯೆ.

ಅಷ್ಟಾವಿಂಶೇ ಭವಿತ್ರೀ ತ್ವಂ ದ್ವಾಪರೇ ಮತ್ಸ್ಯಯೋನಿಜಾ ।
ಏವಮುಕ್ತಾ ಪುರಾ ತೈಸ್ತ್ವಂ ಜಾತಾ ಸತ್ಯವತೀ ಶುಭಾ ॥೯೨॥

ಅದ್ರಿಕೇತ್ಯಭವಿಖ್ಯಾತಾ ಬ್ರಹ್ಮಶಾಪಾದ್ ವರಾಪ್ಸರಾಃ ।
ಮೀನಭಾವಮನುಪ್ರಾಪ್ತಾ ತ್ವಾಂ ಜನಿತ್ವಾ ಗತಾ ದಿವಮ್ ॥೯೩॥

ಇಪ್ಪತ್ತೆಂಟನೆಯ ದ್ವಾಪರಯುಗದಲ್ಲಿ ನೀನು ಮತ್ಸ್ಯಯೋನಿಯಲ್ಲಿ ಜನಿಸುತ್ತೀಯೆ ಹೀಗೆ ನಿನ್ನ ಪಿತೃಗಳು ಹಿಂದೆ ಹೇಳಿದ್ದರು. ಆದ್ದರಿಂದ ಈಗ ಶುಭಫಲವನ್ನು ಹೊಂದಿ ಸತ್ಯವತಿಯಾಗಿ ಜನಿಸಿದ್ದೀಯೆ. ಬ್ರಹ್ಮಶಾಪಕ್ಕೆ ಒಳಗಾಗಿದ್ದ ಅಪ್ಸರೆಯಾದ ಅದ್ರಿಕೆಯು ಮತ್ಸ್ಯವಾಗಿ ಜನಿಸಿ ನಿನ್ನನ್ನು ಪ್ರಸವಿಸಿ ಸ್ವರ್ಗವನ್ನು ಸೇರಿದಳು.

ತಸ್ಯಾಂ ಜಾತಾऽಸಿ ಯಾ ಕನ್ಯಾ ರಾಜ್ಞೋ ವೀರ್ಯೇಣ ಚೈವ ಹಿ ।
ತಸ್ಮಾದ್ ವಾಸವಿ ಭದ್ರಂ ತೇ ಯಾಚೇ ತ್ವಾಂ ಶಂಕರಂ ಸುತಮ್ ॥೯೪॥

ಆ ಅದ್ರಿಕೆಯಲ್ಲಿ ವಸುರಾಜನ ವೀರ್ಯದಿಂದ ನೀನು ಜನಿಸಿದ್ದೀಯೆ. ಆದ್ದರಿಂದ ವಸುಪುತ್ರಿಯೇ ನಿನಗೆ ಮಂಗಳವಾಗಲಿ. ಜಗತ್ತಿಗೆ ಕ್ಷೇಮವನ್ನುಂಟು ಮಾಡುವ ಮಗನನ್ನು ನಿನ್ನಿಂದ ಅಪೇಕ್ಷಿಸುತ್ತೇನೆ.

ವೈಶಂಪಾಯನಃ

ವಿಸ್ಮಯಾದ್ ಹೃಷ್ಟಸರ್ವಾಂಗೀ ಜಾತಿಸ್ಮರಣತಾಂ ಗತಾ ।
ಸಾऽಬ್ರವೀತ್ ಪಶ್ಯ ಭಗವನ್ ಪರೇ ಪಾರೇ ಮುನೀನಿಮಾನ್ ।
ಆವಯೋರ್ದೃಶ್ಯಯೋರೇಭಿಃ ಕಥಂ ನು ಸ್ಯಾತ್ ಸಮಾಗಮಃ ॥೯೫॥

ಸತ್ಯವತಿಯು ಪೂರ್ವಜನ್ಮದ ಸ್ಮರಣೆಯನ್ನು ಪಡೆದು ವಿಸ್ಮಯ ಮತ್ತು ಸಂತೋಷದಿಂದ ಕೂಡಿದವಳಾಗಿ ಪರಾಶರರನ್ನು ಕುರಿತು ಪೂಜ್ಯರೇ, ಯಮುನೆಯ ಆಚೆಯ ದಡದಲ್ಲಿರುವ ಈ ಋಷಿಗಳನ್ನು ನೋಡಿ. ಅವರಿಗೆ ನಾವು ಕಾಣಿಸುತ್ತಿರುವಾಗ ನಮ್ಮ ಸಮಾಗಮವು ಹೇಗೆ ಸಾಧ್ಯ ಎಂದು ಕೇಳಿದಳು.

ಏವಂ ತಯೋಕ್ತೋ ಭಗವಾನ್ ನೀಹಾರಮಸೃಜತ್ ಪ್ರಭುಃ ।
ಯೇನ ದೇಶಃ ಸ ಸರ್ವಸ್ತು ತಮೋವೃತ ಇವಾಭವತ್ ॥೯೬॥

ಹೀಗೆ ಅವಳಿಂದ ಹೇಳಲ್ಪಟ್ಟವರಾಗಿ, ಪೂಜ್ಯರಾದ ಮತ್ತು ಸಮರ್ಥರಾದ ಪರಾಶರರು ಮಂಜನ್ನು ಸೃಷ್ಟಿಸಿದರು. ಅದರಿಂದ ಆ ಪ್ರದೇಶವೆಲ್ಲವೂ ಕತ್ತಲು ಕವಿದಂತಾಯಿತು.

ದೃಷ್ಟ್ವಾ ಸೃಷ್ಟಂ ತು ನೀಹಾರಂ ತತಸ್ತಂ ಪರಮರ್ಷಿಣಾ ।
ವಿಸ್ಮಿತಾ ತ್ವಬ್ರವೀತ್ ಕನ್ಯಾ ವ್ರೀಡಿತಾ ಚ ಮನಸ್ವಿನೀ ॥೯೭॥

ವಿದ್ಧಿ ಮಾಂ ಭಗವನ್ ಕನ್ಯಾಂ ಸದಾ ಪಿತೃವಶಾನುಗಾಮ್ ।
ತತ್ಸಂಯೋಗಾಚ್ಚ ದುಷ್ಯೇತ ಕನ್ಯಾಭಾವೋ ಮಮಾऽನಘ ॥೯೮॥

ಪರಮ ಋಷಿಗಳಿಂದ ಸೃಷ್ಟವಾದ ಆ ಮಂಜನ್ನು ನೋಡಿ ಆಶ್ಚರ್ಯಗೊಂಡವಳಾಗಿ ಧೈರ್ಯಶಾಲಿನಿಯಾದ ಆ ಕನ್ಯೆಯು ನಾಚಿಕೆಯಿಂದ ಹೀಗೆ ಮಾತನಾಡಿದಳು - ಪೂಜ್ಯರೇ ನಾನು ಯಾವಾಗಲೂ ತಂದೆಯ ವಶದಲ್ಲಿರುವ ಕನ್ಯೆ. ಎಲೈ ದೋಷರಹಿತರೇ ನಿಮ್ಮ ಸಮಾಗಮದಿಂದ ನನ್ನ ಕನ್ಯಾಭಾವವು ದೂಷಿತವಾಗುತ್ತದೆ.

ಕನ್ಯಾತ್ವೇ ದೂಷಿತೇ ಚಾಹಂ ಕಥಂ ಶಕ್ಷ್ಯೇ ದ್ವಿಜೋತ್ತಮ ।
ಗಂತುಂ ಗೃಹಂ ಗೃಹೇ ಚಾಪಿ ಧೀಮನ್ ನ ಸ್ಥಾತುಮುತ್ಸಹೇ ॥೯೯॥

ಎಲೈ ಬ್ರಾಹ್ಮಣ ಶ್ರೇಷ್ಠರೇ ನನ್ನ ಕನ್ಯಾಭಾವವು ದೂಷಿತವಾದ ಮೇಲೆ ನಾನು ಮನೆಗೆ ಹೇಗೆ ಹೋಗಲಿ? ಮೇಧಾವಿಗಳಾದ ಋಷಿಗಳೇ, ನಾನು ಮನೆಯಲ್ಲಿ ಹೇಗೆ ಇರಲಿ?

ಏವಮುಕ್ತವತೀಂ ತಾಂ ತು ಪ್ರೀತಿಮಾನ್ ಋಷಿಸತ್ತಮಃ ।
ಉವಾಚ ಮತ್ಪ್ರಿಯಂ ಕೃತ್ವಾ ಪುನಃ ಕನ್ಯಾ ಭವಿಷ್ಯಸಿ ।
ವೃಣೀಷ್ವ ಚ ವರಂ ಭದ್ರೇ ಯಂ ತ್ವಮಿಚ್ಛಸಿ ಭಾಮಿನಿ ॥೧೦೦॥

ಹೀಗೆ ಹೇಳಿದ ಆ ಕನ್ಯೆಯನ್ನು ಕುರಿತು ಸಂತೋಷಗೊಂಡ ಋಷಿಶ್ರೇಷ್ಠರು ಎಲೌ ಸುಂದರಿಯೆ ಮತ್ತು ಮಂಗಳಸ್ವರೂಪಳೇ, ನನಗೆ ಪ್ರಿಯವನ್ನು ಉಂಟುಮಾಡುವುದರಿಂದ ನೀನು ಪುನಃ ಕನ್ಯೆಯೇ ಆಗುತ್ತೀಯೆ. ನಿನಗೆ ಅಭೀಷ್ಟವಾದ ವರವನ್ನು ಕೇಳು ಎಂದು ಹೇಳಿದರು.

ವೃಥಾ ಹಿ ನ ಪ್ರಸಾದೋ ಮೇ ಭೂತಪೂರ್ವಃ ಶುಚಿಸ್ಮಿತೇ ।
ಏವಮುಕ್ತಾ ವರಂ ವವ್ರೇ ಗಾತ್ರಸೌಗಂಧ್ಯಮುತ್ತಮಮ್ ॥೧೦೧॥

ಎಲೌ ಶುಚಿಸ್ಮಿತೆಯೇ ಹಿಂದೆ ಎಂದೂ ನನ್ನ ಅನುಗ್ರಹವು ವ್ಯರ್ಥವಾಗಿಲ್ಲ. ಹೀಗೆ ಹೇಳಲ್ಪಟ್ಟ ಸತ್ಯವತಿಯು ತನ್ನ ದೇಹಕ್ಕೆ ಉತ್ತಮವಾದ ಸುಗಂಧವನ್ನು ವರವಾಗಿ ಕೇಳಿದಳು.

ಸ ಚಾಸ್ಯೈ ಭಗವಾನ್ ಪ್ರಾದಾದ್ ಮನಸಾ ಕಾಂಕ್ಷಿತಂ ಪ್ರಭುಃ ।
ತತೋ ಲಬ್ಧವತೀ ಪ್ರೀತಾ ಸ್ತ್ರೀಭಾವಗುಣಭೂಷಿತಾ ।
ಜಗಾಮ ಸಹ ಸಂಸರ್ಗಂ ಋಷಿಣಾಽದ್ಭುತಕರ್ಮಣಾ ॥೧೦೨॥

ಸಮರ್ಥರಾದ ಋಷಿಗಳು ಅವಳಿಗೆ ಅವಳ ಮನಸ್ಸಿಗೆ ಇಷ್ಟವಾದ ವರವನ್ನು ಕೊಟ್ಟರು. ವರವನ್ನು ಪಡೆದ ಅವಳು ಸಂತುಷ್ಟಳಾಗಿ ಸ್ತ್ರೀಸಹಜವಾದ ಗುಣಗಳಿಂದ ಭೂಷಿತಳಾಗಿ ಅದ್ಭುತಕರ್ಮವುಳ್ಳ ಋಷಿಗಳಿಂದ ಸಂಸರ್ಗವನ್ನು ಹೊಂದಿದಳು.

ತೇನ ಗಂಧವತೀತ್ಯೇವಂ ನಾಮಾಸ್ಯಾಃ ಪ್ರಥಿತಂ ಭುವಿ ।
ತಸ್ಯಾಸ್ತು ಯೋಜನಾದ್ ಗಂಧಮಾಜಿಘ್ರಂತಿ ನರಾ ಭುವಿ ।
ತತೋ ಯೋಜನಗಂಧೇತಿ ದ್ವಿತೀಯಂ ನಾಮ ವಿಶ್ರುತಮ್ ॥೧೦೩॥

ಅನಂತರ ಅವಳಿಗೆ ಗಂಧವತೀ ಎಂದೇ ಹೆಸರು ಪ್ರಸಿದ್ಧವಾಯಿತು. ಅವಳ ದೇಹದ ಸುಗಂಧವನ್ನು ಮನುಷ್ಯರು ಒಂದು ಯೋಜನ ದೂರದಿಂದಲೂ ಆಘ್ರಾಣಿಸುತ್ತಿದ್ದರು. ಆದ್ದರಿಂದ ಅವಳಿಗೆ ಯೋಜನಗಂಧಾ ಎಂಬ ಎರಡನೆಯ ಹೆಸರು ಪ್ರಸಿದ್ಧವಾಯಿತು.

ವೈಶಂಪಾಯನಃ

ವೀರಾಸನಮುಪಾಸ್ಥಾಯ ಯೋಗೀ ಧ್ಯಾನಪರೋಽಭವತ್ ।
ತೂಷ್ಣೀಂಭೂತಾಂ ತದಾ ಕಾಳೀಂ ಜ್ವಲಂತೀಂ ಯೋಗತೇಜಸಾ ॥೧೦೪॥

ಆ ಯೋಗಿಗಳಾದ ಋಷಿಗಳು ವೀರಾಸನದಲ್ಲಿ ಕುಳಿತು ಧ್ಯಾನಪರರಾದರು. ಸತ್ಯವತಿಯಾದರೋ ಯೋಗತೇಜಸ್ಸಿನಿಂದ ಬೆಳಗುತ್ತಾ ಸಮ್ಮುಖದಲ್ಲಿ ಮೌನವಾಗಿ ನಿಂತಳು.

(ಸತ್ಯವತಿಯ ಸಮಾಗಮಕ್ಕಿಂತ ಮುಂಚೆ ನಡೆದ ಘಟನೆಗಳನ್ನು ಈ ಶ್ಲೋಕದಿಂದ ಪ್ರಾರಂಭಿಸಿ ವಿಸ್ತಾರವಾಗಿ ನಿರೂಪಿಸುತ್ತಾರೆ.)

ದೃಷ್ಟ್ವಾ ತಾಂ ಚ ಸಮಾಧಾಯ ವಿಚಾರ್ಯ ಚ ಪುನಃ ಪುನಃ ।
ಸ ಚಿಂತಯಾಮಾಸ ಮುನಿಃ ಕಿಂಕೃತೇ ಚ ಕೃತಂ ಭವೇತ್ ॥೧೦೫॥

ಋಷಿಗಳು ಅವಳನ್ನು ನೋಡಿ ಸಮಾಧಾನವನ್ನು ಹೊಂದಿ ಮತ್ತೆ ಮತ್ತೆ ವಿಚಾರ ಮಾಡಿ ಏನು ಮಾಡಿದರೆ ಎಲ್ಲವೂ ಸರಿಯಾಗುತ್ತದೆ ಎಂದು ಚಿಂತಿಸಿದರು.

ಶಿಷ್ಟಾನಾಂ ತು ಸಮಾಚಾರಃ ಶಿಷ್ಟಾಚಾರ ಇತಿ ಸ್ಮೃತಃ ।
ಶ್ರುತಿಸ್ಮೃತಿವಿದೋ ವಿಪ್ರಾಃ ಜ್ಞಾನಾದ್ ಧರ್ಮಿಷ್ಠ ಉಚ್ಯತೇ ॥೧೦೬॥

ಶಿಷ್ಟರು ನಡೆದುಕೊಳ್ಳುವ ರೀತಿಗೆ ಶಿಷ್ಟಾಚಾರ ಎಂದು ಕರೆಯುತ್ತಾರೆ. ಶ್ರುತಿ-ಸ್ಮೃತಿಗಳನ್ನು ತಿಳಿದವರನ್ನು ವಿಪ್ರರೆಂದು ಕರೆಯುತ್ತಾರೆ. ಜ್ಞಾನವಂತನಾದವನನ್ನು ಧರ್ಮಿಷ್ಠನೆಂದು ಕರೆಯುತ್ತಾರೆ.

ಧರ್ಮಜ್ಞೈರ್ವಿಹಿತೋ ಧರ್ಮಃ ಶ್ರೌತಃ ಸ್ಮಾರ್ತೋ ದ್ವಿಧಾ ದ್ವಿಜೈಃ ।
ದಾರಾಗ್ನಿಹೋತ್ರಮಿಜ್ಯಾ ಚ ಶ್ರೌತಮೇತದ್ಧಿ ಲಕ್ಷಣಮ್ ॥೧೦೭॥

ಧರ್ಮಜ್ಞರು ವಿಧಾನ ಮಾಡಿದ ಧರ್ಮವನ್ನು ಬ್ರಾಹ್ಮಣರು ಶ್ರೌತ, ಸ್ಮಾರ್ತ ಎಂದು ಎರಡು ರೀತಿ ವಿಭಾಗಿಸುತ್ತಾರೆ. ವಿವಾಹ, ಅಗ್ನಿಹೋತ್ರ ಮತ್ತು ಹೋಮಗಳು ಶ್ರೌತಕರ್ಮದಲ್ಲಿ ಜರುಗುತ್ತವೆ.

ಸ್ಮಾರ್ತೋ ವರ್ಣಾಶ್ರಮಾಚಾರೋ ಯಮೈಶ್ಚ ನಿಯಮೈರ್ಯುತಃ ।
ಧರ್ಮೇತಿ ಧಾರಣೇ ಧಾತುರ್ಮಹತ್ತ್ವೇ ಚೈವ ಪಠ್ಯತೇ ॥೧೦೮॥

ಆಯಾ ವರ್ಣಾಶ್ರಮಗಳಿಗೆ ಅನುಗುಣವಾದ ಧರ್ಮಗಳನ್ನು ಮತ್ತು ಅವುಗಳಿಗೆ ಸಂಬಂಧಿಸಿದ ಯಮನಿಯಮಗಳನ್ನೂ ಸೇರಿಸಿ ಸ್ಮಾರ್ತ ಆಚಾರವೆಂದು ಕರೆಯುತ್ತಾರೆ. ಧರ್ಮ ಎಂಬ ಪದದಲ್ಲಿ ಇರುವ ಧಾತುವು, ಧಾರಣ ಎಂದರೆ ಲೋಕವನ್ನು ಧರಿಸುವುದು ಎಂಬ ಅರ್ಥದಲ್ಲಿದೆ. ಆ ಧಾತುವಿಗೆ ಮಹತ್ವವನ್ನುಂಟು ಮಾಡುವುದು ಎಂದೂ ಅರ್ಥವಿದೆ.

ತತ್ರೇಷ್ಟಫಲದೋ ಧರ್ಮ ಆಚಾರ್ಯೈರುಪದಿಶ್ಯತೇ ।
ಅನಿಷ್ಟಫಲಭಾಕ್ ಚೇತಿ ತೈರಧರ್ಮೋ ವಿಭಾಷ್ಯತೇ ।
ತಸ್ಮಾದಿಷ್ಟಫಲಾರ್ಥಾಯ ಧರ್ಮಮೇವ ಸಮಾಚರೇತ್ ॥೧೦೯॥

ಆ ಆಚಾರಗಳಲ್ಲಿ ಒಳ್ಳೆಯ ಫಲವನ್ನು ಕೊಡುವ ಆಚಾರಗಳನ್ನು ಜ್ಞಾನಿಗಳು ಧರ್ಮವೆಂದು ಕರೆಯುತ್ತಾರೆ. ಅನಿಷ್ಟಫಲವನ್ನು ಕೊಡುವ ಆಚಾರಗಳು ಅಧರ್ಮವೆಂದು ಕರೆಯಲ್ಪಡುತ್ತವೆ. ಆದ್ದರಿಂದ ಇಷ್ಟಫಲವನ್ನು ಪಡೆಯಲು ಧರ್ಮವನ್ನೇ ಆಚರಿಸಬೇಕು.

ಬ್ರಾಹ್ಮೋ ದೈವಸ್ತಥೈವಾರ್ಷಃ ಪ್ರಜಾಪತ್ಯಶ್ಚ ಧಾರ್ಮಿಕಃ
ವಿವಾಹೋ ಬ್ರಾಹ್ಮಣಾನಾಂ ತು ಗಾಂಧರ್ವೋ ನೈವ ಧಾರ್ಮಿಕಃ ॥

ತ್ರಿವರ್ಣೇತರಜಾತೀನಾಂ ಗಾಂಧರ್ವೋ೨ಸುರರಕ್ಷಸಾಮ್ ।
ಪೈಶಾಚೋ ನೈವ ಕರ್ತವ್ಯೋ ವಿವಾಹಶ್ಚಾಷ್ಟಮೋ೨ಧಮಃ ॥೧೧೧॥

ವಿವಾಹಗಳಲ್ಲಿ ಬ್ರಾಹ್ಮ, ದೈವ, ಆರ್ಷ, ಪ್ರಜಾಪತ್ಯ ವಿವಾಹಗಳು ಧಾರ್ಮಿಕವೆಂದು ಕರೆಯಲ್ಪಡುತ್ತವೆ. ಈ ವಿವಾಹಗಳು ಬ್ರಾಹ್ಮಣರಿಗೆ ವಿಹಿತವಾಗಿದೆ. ಗಾಂಧರ್ವವಿವಾಹವು ಎಂದೂ ಬ್ರಾಹ್ಮಣರಿಗೆ ಧಾರ್ಮಿಕವಾದುದಲ್ಲ. ಮೂರು ವರ್ಣವನ್ನು ಬಿಟ್ಟುಉಳಿದವರಿಗೂ, ಅಸುರ, ರಾಕ್ಷಸರಿಗೂ, ಗಾಂಧರ್ವವಿವಾಹವು ವಿಹಿತವಾಗಿದೆ. ಪೈಶಾಚವಿವಾಹವೆಂಬ ಎಂಟನೆಯ ವಿವಾಹವನ್ನು ಎಂದೂ ಮಾಡಬಾರದು. ಅದು ಅತ್ಯಂತ ಅಧಮವಾದುದು.

ಸಾಮರ್ಷಾಂ ವ್ಯಂಗಿಕಾಂ ಕನ್ಯಾಂ ಮಾತುಶ್ಚ ಕುಲಜಾಂ ತಥಾ ।
ವೃದ್ಧಾಂ ಪತಿವ್ರತಾಂ ವಂಧ್ಯಾಂ ಪತಿತಾಂ ಚ ರಜಸ್ವಲಾಮ್ ॥೧೧೨॥

ಅಪಸ್ಮಾರಕುಲೇ ಜಾತಾಂ ಪಿಂಗಲಾಂ ಕುಷ್ಠಿನೀಂ ವ್ರಣೇಮ್ ।
ನ ಚಾಸ್ನಾತಾಂ ಸ್ತ್ರಿಯಂ ಗಚ್ಛೇದಿತಿ ಧರ್ಮಾನುಶಾಸನಮ್ ॥೧೧೩॥

ಸಿಟ್ಟಿನಿಂದ ಕೂಡಿದ ಕನ್ಯೆಯನ್ನು, ಅಂಗವಿಕಲಳಾದವಳನ್ನು, ತಾಯಿಯ ಕುಲದಲ್ಲಿ ಹುಟ್ಟಿದವಳನ್ನು, ತನಗಿಂತ ವಯಸ್ಸಿನಲ್ಲಿ ಅಧಿಕಳಾದವಳನ್ನು ಬೇರೆಯವರನಿಗೆ ವಾಚಾದತ್ತಳಾದವಳನ್ನು, ಜಾತಕಾದಿ ಲಕ್ಷಣಗಳಿಂದ ವಂಧ್ಯೆ ಎಂದು ತಿಳಿದವಳನ್ನು, ಮಹಾಪಾಪಗಳಿಂದ ಪತಿತಳಾದವಳನ್ನು, ರಜಸ್ವಲೆಯಾಗಿರುವವಳನ್ನು,

ವಂಶಪರಂಪರೆಯಿಂದ ಮೂರ್ಛೆಯುಳ್ಳ ವಂಶದಲ್ಲಿ ಬಂದವಳನ್ನು, ವೈಷ್ಯೆಯನ್ನು, ಕುಷ್ಠರೋಗವುಳ್ಳವಳನ್ನು, ವೈಯೆಲ್ಲಾ ಗಾಯವಿರುವವಳನ್ನು, ಸ್ನಾನ ಮಾಡದಿರುವವಳನ್ನು ಸಮಾಗಮ ಮಾಡಬಾರದೆಂದು ಧರ್ಮಾನುಶಾಸನವಿದೆ.

ಪಿತಾ ಪಿತಾಮಹೋ ಭ್ರಾತಾ ಮಾತಾ ಮಾತುಲ ಏವ ಚ ।
ಉಪಾಧ್ಯಾಯರ್ತ್ವಿಜಶ್ಚೈವ ಕನ್ಯಾದಾನೇ ಪ್ರಭೂತ್ತಮಾಃ ।
ಏತೈರ್ದತ್ತಾಂ ನಿಷೇವೇತ ನಾದತ್ತಾಮಾದದೀತ ಚ ॥೧೧೪॥

ತಂದೆ, ತಾತ, ಅಣ್ಣ, ತಾಯಿ, ಸೋದರಮಾವ, ಗುರುಗಳು ಮತ್ತು ಪುರೋಹಿತರು ಕನ್ಯಾದಾನ ಮಾಡುವುದಕ್ಕೆ ಅಧಿಕಾರಿಗಳು. ಇವರು ದಾನ ಮಾಡಿದ ಕನ್ಯೆಯನ್ನು ಸ್ವೀಕರಿಸಬೇಕು. ದಾನ ಮಾಡದಿದ್ದ ಕನ್ಯೆಯನ್ನು ಎಂದೂ ಸ್ವೀಕರಿಸಬಾರದು.

ಇತ್ಯೇವಮೃಷಯಃ ಪ್ರಾಹುರ್ವಿವಾಹೇ ಧರ್ಮವಿತ್ತಮಾಃ ।
ಅಸ್ಯಾ ನಾಸ್ತಿ ಪಿತಾ ಭ್ರಾತಾ ಮಾತಾ ಮಾತುಲ ಏವ ಚ ॥೧೧೫॥

ಧರ್ಮವನ್ನು ವಿಶೇಷವಾಗಿ ತಿಳಿದ ಋಷಿಗಳು ವಿವಾಹದ ಅಧಿಕಾರದ ವಿಷಯದಲ್ಲಿ ಹೀಗೆ ಹೇಳುತ್ತಾರೆ - ಈ ಸತ್ಯವತಿಗಾದರೋ (ಸತ್ಯವತಿಗೆ ಕಾಳೀ ಎಂದು ಹೆಸರು) ತಂದೆಯಾಗಲೀ, ಅಣ್ಣನಾಗಲೀ, ತಾಯಿಯಾಗಲೀ, ಸೋದರಮಾವನಾಗಲೀ ಇಲ್ಲ.

ಗಾಂಧರ್ವೇಣ ವಿವಾಹೇನ ನ ಸ್ಪೃಶಾಮಿ ಯದೃಚ್ಛಯಾ ।
ಕ್ರಿಯಾಹೀನಂ ತು ಗಾಂಧರ್ವಂ ನ ಕರ್ತವ್ಯಮನಾಪದಿ ॥೧೧೬॥

ನನ್ನ ಮನಸ್ಸಿಗೆ ಬಂದಂತೆ ನಾನು ಗಾಂಧರ್ವವಿವಾಹವನ್ನು ಎಂದೂ ಮಾಡಿಕೊಳ್ಳುವುದಿಲ್ಲ. ಕ್ರಿಯಾಹೀನವಾದ ಗಾಂಧರ್ವವಿವಾಹವನ್ನು ಆಪತ್ತು ಇಲ್ಲದಿರುವಾಗ ಎಂದೂ ಮಾಡಿಕೊಳ್ಳಬಾರದು.

ಯದಸ್ಯಾಂ ಜಾಯತೇ ಪುತ್ರೋ ವೇದವ್ಯಾಸೋ ಭವೇದೃಷಿಃ ।
ಕ್ರಿಯಾಹೀನಃ ಕಥಂ ವಿಪ್ರೋ ಭವೇದೃಷಿರುದಾರಧೀಃ ॥೧೧೭॥

ಇವಳಲ್ಲಿ ಮಹಾಋಷಿಗಳಾದ ವೇದವ್ಯಾಸರು ಅವತರಿಸುವವರಿದ್ದಾರೆ. ಕ್ರಿಯಾಹೀನವಾದರೆ ಮೇಧಾವಿಗಳೂ, ಉದಾರಬುದ್ಧಿಯುಳ್ಳವರೂ, ಆದ ಋಷಿಗಳು ಹೇಗೆ ಜನಿಸುತ್ತಾರೆ.

ಏವಂ ಚಿಂತಯತೋ ಭಾವಂ ಮಹರ್ಷೇರ್ಭಾವಿತಾತ್ಮನಃ ।
ಜ್ಞಾತ್ವಾ ಚೈವಾಭ್ಯವರ್ತಂತ ಪಿತರೋ ಬರ್ಹಿಷದಸ್ತದಾ ।
ಪೂರ್ವಂ ಸ್ವಾಗತಮಿತ್ಯುಕ್ತ್ವಾ ವಸಿಷ್ಠಃ ಪ್ರತ್ಯಭಾಷತ ॥೧೧೮॥

ಹೀಗೆ ಚಿಂತಿಸುತ್ತಿರುವ ಶುದ್ಧವಾದ ಮನಸ್ಸಿನ ಆ ಮಹರ್ಷಿಗಳ ಅಭಿಪ್ರಾಯವನ್ನು ತಿಳಿದು ಸತ್ಯವತಿಯ ಪಿತೃಗಳಾಗಿದ್ದ ಬರ್ಹಿಷದರು ತಾವಾಗಿಯೇ ಅಲ್ಲಿಗೆ ಬಂದರು. ವಸಿಷ್ಠರು ಅವರಿಗೆ ಸ್ವಾಗತವನ್ನು ಕೋರಿ ಮಾತನಾಡಿದರು.

ಪಿತೃಗಣಾಃ

ಅಸ್ಮಾಕಂ ಮಾನಸೀಂ ಕನ್ಯಾಮಸ್ಮಚ್ಛಾಸನವಾಸಿನೀಮ್ ।
ಯದೀಚ್ಛೇಚ್ಛಸಿ ಪುತ್ರಾರ್ಥಂ ಕನ್ಯಾಂ ಗೃಹ್ಣೀಷ್ವ ಮಾಚಿರಮ್ ॥೧೧೯॥

ನಮ್ಮ ಮಾನಸಪುತ್ರಿಯಾದ ನಮ್ಮ ಶಾಸನದಲ್ಲಿಯೇ ಇರುವ ಈ ಕನ್ಯೆಯನ್ನು ಪುತ್ರನನ್ನು ಪಡೆಯುವ ಸಲುವಾಗಿ ಸ್ವೀಕರಿಸಬೇಕೆಂಬ ಇಚ್ಛೆಯು ಇದ್ದರೆ ತಡಮಾಡದೇ ಈ ಕನ್ಯೆಯನ್ನು ಸ್ವೀಕರಿಸಿ.

ಪಿತೄಣಾಂ ವಚನಂ ಶ್ರುತ್ವಾ ವಸಿಷ್ಠಃ ಪ್ರತ್ಯಭಾಷತ ।
ಮಹರ್ಷೀಣಾಂ ವಚಃ ಸತ್ಯಂ ಪುರಾಣೇಽಪಿ ಮಯಾ ಶ್ರುತಮ್ ।
ಪರಾಶರೋ ಬ್ರಹ್ಮಚಾರೀ ಪ್ರಜಾರ್ಥೀ ಮಮ ವಂಶಧೃಕ್ ॥೧೨೦॥

ಪಿತೃಗಳ ಆ ವಚನವನ್ನು ಕೇಳಿ ವಸಿಷ್ಠರು ಮಾತನಾಡಿದರು. ಮಹರ್ಷಿಗಳ ವಚನವು ಯಾವಾಗಲೂ ಸತ್ಯವೆಂದು ಪುರಾಣಗಳಲ್ಲಿ ಕೇಳಿದ್ದೇವೆ. ಬ್ರಹ್ಮಚಾರಿಗಳಾದ ಪರಾಶರರು ಪ್ರಜಾರ್ಥಿಗಳಾಗಿದ್ದಾರೆ. ಮತ್ತು ನನ್ನ ವಂಶದವರಾಗಿದ್ದಾರೆ.

ಏವಂ ಸಂಭಾಷಮಾಣೇ ತು ವಸಿಷ್ಠೇ ಪಿತೃಭಿಃ ಸಹ ।
ಋಷಯೋಽಭ್ಯಾಗಮಂಸ್ತತ್ರ ನೈಮಿಶಾರಣ್ಯವಾಸಿನಃ ॥೧೨೧॥

ವಿವಾಹಂ ದ್ರಷ್ಟುಮಿಚ್ಛಂತಃ ಶಕ್ತಿಪುತ್ರಸ್ಯ ಧರ್ಮತಃ ।
ಅರುಂಧತೀ ಮಹಾಭಾಗಾ ಅದೃಶ್ಯಂತ್ಯಾ ಸಹೈವ ಸಾ ॥೧೨೨॥

ಹೀಗೆ ವಸಿಷ್ಠರು ಪಿತೃಗಳ ಜೊತೆಯಲ್ಲಿ ಮಾತನಾಡುತ್ತಿರುವಾಗ, ವಸಿಷ್ಠರ ಮಕ್ಕಳಾದ ಶಕ್ತಿಯಮಕ್ಕಳಾದ ಪರಾಶರರ ಧಾರ್ಮಿಕವಿವಾಹವನ್ನು ನೋಡುವ

ಇಚ್ಛೆಯುಳ್ಳವರಾಗಿ, ನೈಮಿಶಾರಣ್ಯವಾಸಿಗಳಾದ ಋಷಿಗಳು ಅಲ್ಲಿಗೆ ಬಂದರು. ಮಹಾನುಭಾವಳಾದ ಅರುಧಂತಿಯು ತನ್ನ ಸೊಸೆಯಾದ ಶಕ್ತಿಋಷಿಗಳ ಪತ್ನಿಯಾದ ಅದೃಶ್ಯಂತಿಯ ಜೊತೆಯಲ್ಲಿ ಅಲ್ಲಿಗೆ ಬಂದಳು.

ವಿಶ್ವಕರ್ಮಕೃತಾಂ ದಿವ್ಯಾಂ ಪರ್ಣಶಾಲಾಂ ಪ್ರವಿಶ್ಯ ಸಾ ।
ವೈವಾಹಿಕಾಂಶ್ಚ ಸಂಭಾರಾನ್ ಸಂಕಲ್ಪ್ಯ ಚ ಯಥಾಕ್ರಮಮ್ ॥೧೨೩॥

ಅರುಂಧತೀ ಸತ್ಯವತೀಂ ವಧೂಂ ಸಂಗೃಹ್ಯ ಪಾಣಿನಾ ।
ಭದ್ರಾಸನೇ ಪ್ರತಿಷ್ಠಾಪ್ಯ ಇಂದ್ರಾಣೀಂ ಸಮಕಾರಯತ್ ॥೧೨೪॥

ವಿಶ್ವಕರ್ಮನಿಂದ ನಿರ್ಮಿತವಾದ ದಿವ್ಯವಾದ ಪರ್ಣಶಾಲೆಯನ್ನು ಪ್ರವೇಶಿಸಿ, ಅವಳು ವೈವಾಹಿಕ ಸಿದ್ಧತೆಗಳನ್ನು ಯಥಾಕ್ರಮವಾಗಿ ನಡೆಸಿದಳು. ಅರುಂಧತಿಯು ವಧುವಾದ ಸತ್ಯವತಿಯನ್ನು ಕೈಯಲ್ಲಿ ಹಿಡಿದು ಮಂಗಳವಾದ ಆಸನದಲ್ಲಿ ಕುಳ್ಳಿರಿಸಿ, ಶಚೀದೇವಿಯ ಸನ್ನಿಧಾನವು ಉಂಟಾಗುವಂತೆ ಮಾಡಿದಳು.

ಆಪೂರ್ಯಮಾಣಪಕ್ಷೇ ತು ವೈಶಾಖೇ ಸೋಮದೈವತೇ ।
ಶುಭಗ್ರಹೇ ತ್ರಯೋದಶ್ಯಾಂ ಮುಹೂರ್ತೇ ಮೈತ್ರ ಆಗತೇ ।
ವಿವಾಹಕಾಲ ಇತ್ಯುಕ್ತ್ವಾ ವಸಿಷ್ಠೋ ಮುನಿಭಿಃ ಸಹ ॥೧೨೫॥

ವೈಶಾಖಮಾಸದ ಶುಕ್ಲಪಕ್ಷದಲ್ಲಿ ಸೋಮವಾರದಂದು ಶುಭಗ್ರಹಗಳ ಯೋಗವಿರುವಾಗ ತ್ರಯೋದಶಿಯ ದಿವಸ ಮೈತ್ರಮುಹೂರ್ತವು ವಿವಾಹಕಾಲ ಎಂದು ವಸಿಷ್ಠರು ಋಷಿಗಳ ಜೊತೆಯಲ್ಲಿ ನಿರ್ಧರಿಸಿದರು.

ಯಮುನಾದ್ವೀಪಮಾಸಾದ್ಯ ಶಿಷ್ಯೈಶ್ಚ ಮುನಿಪತ್ನಿಭಿಃ ।
ಸ್ಥಂಡಿಲಂ ಚತುರಶ್ರಂ ಚ ಗೋಮಯೇನೋಪಲಿಪ್ಯ ಚ ॥೧೨೬॥

ಅಕ್ಷತೈಃ ಫಲಪುಷ್ಪೈಶ್ಚ ಸ್ವಸ್ತಿಕೈರಾಮ್ರಪಲ್ಲವೈಃ ।
ಜಲಪೂರ್ಣಘಟೈಶ್ಚೈವ ಸರ್ವತಸ್ತೂಪಶೋಭಿತಮ್ ॥೧೨೭॥

ಯಮುನೆಯಲ್ಲಿ (ಪರಾಶರರು ತಮ್ಮ ತಪಶ್ಶಕ್ತಿಯಿಂದ ಸೃಷ್ಟಿಮಾಡಿದ್ದ) ದ್ವೀಪವನ್ನು ತಲುಪಿ ಮುನಿಪತ್ನಿಯರಿಂದಲೂ, ಶಿಷ್ಯರಿಂದಲೂ ಸಹಕೃತರಾಗಿ, ಚತುರಶ್ರ ಮಂಡಲವನ್ನು ಮಾಡಿ, ಗೋಮಯದಿಂದ ಅದನ್ನು ಸಾರಿಸಿ, ಅಕ್ಷತೆಗಳಿಂದಲೂ,

ಫಲಪುಷ್ಪಗಳಿಂದಲೂ, ಸ್ವಸ್ತಿಕಗಳಿಂದಲೂ, ಮಾವಿನ ಚಿಗುರುಗಳಿಂದಲೂ, ಜಲಪೂರ್ಣಘಟಗಳಿಂದಲೂ ಅದನ್ನು ಸಂಪೂರ್ಣವಾಗಿ ಅಣಿಗೊಳಿಸಿದರು.

ತಸ್ಯ ಮಧ್ಯೇ ಪ್ರತಿಷ್ಠಾಪ್ಯ ಬ್ರಸ್ಯಾಂ ಮುನಿವರಂ ತದಾ ।
ಸಿದ್ಧಾರ್ಥಯವಕಲ್ಕೈಶ್ಚ ಸ್ನಾತಂ ಸರ್ವೌಷಧೈರಪಿ ॥೧೨೮॥

ಅದರ ಮಧ್ಯೆ ಋಷಿಯ ಆಸನದಲ್ಲಿ ಋಷಿಶ್ರೇಷ್ಠರಾದ ಪರಾಶರರನ್ನು ಕುಳ್ಳಿರಿಸಿ, ಸಾಸಿವೆ ಮತ್ತು ಗೋಧಿಯ ಚೂರ್ಣಗಳಿಂದ ಮತ್ತು ಎಲ್ಲಾ ಓಷಧಿಗಳಿಂದಲೂ ಸ್ನಾನವನ್ನು ಮಾಡಿಸಿದರು.

ಕೃತ್ವಾಽರ್ಜುನಾನಿ ವಸ್ತ್ರಾಣಿ ಪರಿಧಾಸ್ಯ ಮಹಾಮುನಿಃ ।
ವಾಚಯಿತ್ವಾ ತು ಪುಣ್ಯಾಹಮಕ್ಷತೈಶ್ಚ ಸಮರ್ಚ್ಯ ತಮ್ ॥೧೨೯॥

ಸ್ನಾನವನ್ನು ಮಾಡಿದ ಪರಾಶರರು ಶುಭ್ರವಾದ ಬಿಳಿಯ ವಸ್ತ್ರಗಳನ್ನು ಧರಿಸಿದರು. ಅನಂತರ ಋಷಿಗಳು ಪುಣ್ಯಾಹವಾಚನವನ್ನು ಮಾಡಿಸಿ, ಅಕ್ಷತೆಗಳಿಂದ ಪರಾಶರರನ್ನು ಅರ್ಚಿಸಿದರು.

ಗಂಧಾನುಲಿಪ್ತಃ ಸ್ರಗ್ವೀ ಚ ಸರ್ವತೋದ್ವೋವಧೂಗೃಹೇ ।
ಸಪದಾತಿಸ್ತದಾ ಗತ್ವಾ ವಧೂಜ್ಞಾತಿಭಿರರ್ಚಿತಃ ॥೧೩೦॥

ಶರೀರಕ್ಕೆ ಗಂಧವನ್ನು ಲೇಪಿಸಿಕೊಂಡು, ಕೊರಳಿನಲ್ಲಿ ಹೂಮಾಲೆಯನ್ನು ಧರಿಸಿದ ಪರಾಶರರು ಆ ವಧೂಗೃಹಕ್ಕೆ ನಡೆದುಕೊಂಡು ಹೋಗಿ, ವಧುವಿನ ಬಂಧುಗಳಿಂದ ಪೂಜಿಸಲ್ಪಟ್ಟರು.

ಸ್ನಾತಾಮಹತಸಂವೀತಾಂ ಗಂಧಾಲಿಪ್ತಾಂ ಸ್ರಗುಜ್ಜ್ವಲಾಮ್ ।
ವಧೂಂ ಮಂಗಲಸಂಯುಕ್ತಾಮಿಷುಹಸ್ತಾಂ ಸಮೀಕ್ಷ್ಯ ಚ ।
ಉವಾಚ ವಚನಂ ಕಾಲೇ ಕಾಲಜ್ಞಃ ಸರ್ವಧರ್ಮವಿತ್ ॥೧೩೧॥

ಸ್ನಾತಳಾಗಿದ್ದ ಖಂಡಿಸದ ವಸ್ತ್ರಗಳನ್ನು ಧರಿಸಿದ್ದ, ಗಂಧಾನುಲೇಪಿತಳಾಗಿದ್ದ ಉಜ್ವಲವಾದ ಹೂಮಾಲೆಯನ್ನು ಧರಿಸಿದ್ದ, ಮಂಗಲದ್ರವ್ಯ ಸಂಯುಕ್ತಳಾಗಿ ಕೈಯಲ್ಲಿ ಬಾಣವನ್ನು ಹಿಡಿದಿದ್ದ, ವಧುವಾದ ಸತ್ಯವತಿಯನ್ನು ನೋಡಿ ಸರ್ವಧರ್ಮವನ್ನೂ ತಿಳಿದಿದ್ದ ಮತ್ತು ಸಮಯಪ್ರಜ್ಞೆಯುಳ್ಳ ಪರಾಶರರು ಆಗ ಹೀಗೆ ಮಾತನಾಡಿದರು.

(ಸತ್ಯವತಿಯು ಕ್ಷತ್ರಿಯ ಕನ್ಯೆಯಾದುದರಿಂದ ಮಂಗಳ ಸಮಯದಲ್ಲಿ ಕೈಯಲ್ಲಿ ಬಾಣವನ್ನು ಹಿಡಿದಿರುತ್ತಾಳೆ.)

ಪ್ರತಿಗ್ರಹೋ ದಾತೃವಶಃ ಶ್ರುತಮೇವಂ ಮಯಾ ಪುರಾ ।
ಯಥಾ ವಕ್ಷ್ಯಂತಿ ಪಿತರಸ್ತತ್ ಕರಿಷ್ಯಾಮಹೇ ವಯಮ್ ।
ತದ್ ಧರ್ಮಿಷ್ಠಂ ಯಶಸ್ಯಂ ಚ ವಚನಂ ಸತ್ಯವಾದಿನಾಮ್ ॥೧೩೨॥

ಪ್ರತಿಗ್ರಹವು ದಾತೃವಶ ಎಂದು ನಾನು ಹಿಂದೆ ಕೇಳಿದ್ದೇನೆ. ಇವಳ ಪಿತೃಗಳು ಹೇಗೆ ಹೇಳುತ್ತಾರೆಯೋ, ಹಾಗೇ ನಡೆದುಕೊಳ್ಳುತ್ತೇನೆ. ಸತ್ಯವಾದಿಗಳಾದ ಅವರ ಮಾತು, ಧರ್ಮಿಷ್ಠವಾದುದು. ಮತ್ತು ಕೀರ್ತಿಕರವಾದುದು.

ವೈಶಂಪಾಯನಃ

ಶ್ರುತ್ವಾ ತು ವಚನಂ ಸರ್ವೇ ನಿಸ್ಸಂಗಾ ನಿಷ್ಪರಿಗ್ರಹಾಃ ।
ವಸುಂ ಪರಮಧರ್ಮಿಷ್ಠಮಾನೀಯೇದಂ ವಚೋಽಬ್ರುವನ್ ॥೧೩೩॥

ನಿಸ್ಸಂಗರೂ, ನಿಷ್ಪರಿಗ್ರಹರೂ ಆದ ಆ ಪಿತೃಗಳು ಪರಾಶರರ ಮಾತನ್ನು ಕೇಳಿ, ಪರಮಧರ್ಮಿಷ್ಠನಾದ ವಸುವನ್ನು ಕರೆತಂದು ಹೀಗೆ ಮಾತನಾಡಿದರು.

ಮತ್ಸ್ಯಯೋನೌ ತು ಸಾ ಭೂತಾ ತವ ಪುತ್ರೀ ವಿಶೇಷತಃ ।
ಪರಾಶರಾಯ ಮುನಯೇ ದಾತುಮರ್ಹಸಿ ಧರ್ಮತಃ ॥೧೩೪॥

ಮತ್ಸ್ಯಯೋನಿಯಲ್ಲಿ ಜನಿಸಿದ ಇವಳು ವಿಶೇಷವಾಗಿ ನಿನ್ನ ಮಗಳು. ಪಾರಶರ ಋಷಿಗಳಿಗೆ ದಾನವನ್ನು ಮಾಡಲು ಆದ್ದರಿಂದ ನೀನೇ ಯೋಗ್ಯನಾದ ಅಧಿಕಾರಿ.

ವಸುಃ

ಸತ್ಯಂ ಮಮ ಸುತಾ ಸಾ ಹಿ ದಾಶರಾಜೇನ ವರ್ದ್ಧಿತಾ ।
ಅಹಂ ಪ್ರಭುಃ ಪ್ರದಾನೇ ತು ಪ್ರಜಾಪಾಲಃ ಪ್ರಜಾರ್ಥಿನಾಮ್ ॥೧೩೫॥

ನಿಶ್ಚಯವಾಗಿ ಅವಳು ನನ್ನ ಮಗಳು. ದಾಶರಾಜನು ಬೆಳೆಸಿದ್ದಾನೆ. ಪ್ರಜಾರ್ಥಿಗಳಾದ ಋಷಿಗಳಿಗೆ ಅವಳನ್ನು ದಾನ ಮಾಡಲು ಪ್ರಜಾಪಾಲಕನಾದ ನಾನು ಅಧಿಕಾರವನ್ನು ಹೊಂದಿದ್ದೇನೆ.

ಪಿತರಃ

ನಿರಾಶಿಷೋ ವಯಂ ಸರ್ವೇ ಯೋಗಿನಃ ಸತತಂ ವಿಭೋ ।
ಕನ್ಯಾದಾನೇನ ಸಂಬಂಧೋ ದಕ್ಷಿಣಾಬಂಧ ಉಚ್ಯತೇ ॥೧೩೬॥

ಎಲೈ ರಾಜನೇ ನಾವೆಲ್ಲರೂ ಯೋಗಿಗಳು ನಮಗೆ ಯಾವ ಆಸೆಯೂ ಇಲ್ಲ. ಕನ್ಯಾದಾನದಿಂದ ಉಂಟಾಗುವ ಸಂಬಂಧವನ್ನು ದಕ್ಷಿಣಾಬಂಧವೆಂದು ಕರೆಯುತ್ತಾರೆ.

ಕರ್ಮಭೂಮಿರ್ಹಿ ಮಾನುಷ್ಯಂ ಭೋಗಭೂಮಿಸ್ತ್ರಿವಿಷ್ಟಪಮ್ ।
ಇಹ ಪುಣ್ಯಕೃತೋ ಯಾಂತಿ ಸ್ವರ್ಗಲೋಕಂ ನ ಸಂಶಯಃ ॥೧೩೭॥

ಮನುಷ್ಯಲೋಕವು ಕರ್ಮಭೂಮಿ. ಸ್ವರ್ಗಲೋಕವು ಭೋಗಭೂಮಿ ಮನುಷ್ಯಲೋಕದಲ್ಲಿ ಪುಣ್ಯವನ್ನು ಮಾಡಿದವರು ಸ್ವರ್ಗಲೋಕವನ್ನು ಹೊಂದುತ್ತಾರೆ. ಈ ವಿಷಯದಲ್ಲಿ ಸಂಶಯವಿಲ್ಲ.

ಮನುಷ್ಯಲೋಕೇ ನಿಷ್ಕೃತಿನೋ ನರಕಂ ಯಾಂತಿ ನಿರ್ಘೃಣಾಃ ।
ದಕ್ಷಿಣಾಬಂಧ ಇತ್ಯುಕ್ತೇ ಇಮೇ ಸುಕೃತದುಷ್ಕೃತೇ ।
ದಕ್ಷಿಣಾಬಂಧಸಂಯುಕ್ತಾ ಯೋಗಿನಃ ಪ್ರತಿವರ್ತತೇ ॥೧೩೮॥

ಮನುಷ್ಯಲೋಕದಲ್ಲಿ ದುಷ್ಕರ್ಮವನ್ನು ಮಾಡುವವರು ಮತ್ತು ದಯಾಹೀನರು ನರಕಕ್ಕೆ ಹೋಗುತ್ತಾರೆ. ವಧುವಿನ ಕಡೆಯವರು ವರನಿಗೆ ಧರ್ಮದ ಕೆಲಸವನ್ನು ಮಾಡು. ಅಧರ್ಮದಿಂದ ದೂರವಿರು ಎಂದು ಆಶೀರ್ವಾದ ಮಾಡುವುದೇ ದಕ್ಷಿಣಾಬಂಧವೆನಿಸುತ್ತದೆ. ವಿಶೇಷವಾಗಿ ಯೋಗಿಗಳು ಮಾಡುವ ವಿವಾಹಕ್ರಿಯೆಯು ದಕ್ಷಿಣಾಬಂಧದಿಂದ ಕೂಡಿರುತ್ತದೆ.

ತಸ್ಮಾನ್ನೋ ಮಾನಸೀಂ ಕನ್ಯಾಂ ಯೋಗಭ್ರಷ್ಟಾಂ ವಿಶಾಂಪತೇ ।
ಸುತಾಂ ತಾಂ ತವ ಸಂಪ್ರಾಪ್ತಾಂ ಸತೀಂ ಭಿಕ್ಷಾಂ ದದಸ್ವ ವೈ ।
ಇತ್ಯುಕ್ತ್ವಾ ಪಿತರಃ ಸರ್ವೇ ಕ್ಷಣಾದಂತರ್ಹಿತಾಸ್ತದಾ ॥೧೩೯॥

ಎಲೈ ರಾಜನೇ ಆದ್ದರಿಂದ ಯೋಗಭ್ರಷ್ಟರಾದ ನಮ್ಮ ಮಾನಸಕನ್ಯೆಯಾದ ನಿನ್ನ ಮಗಳಾಗಿ ನಿನ್ನ ಕೈ ಸೇರಿದ ಈ ಸಾಧ್ವಿಯನ್ನು ಭಿಕ್ಷೆಯಾಗಿ ಕೊಡು. ಹೀಗೆ ಹೇಳಿ ಎಲ್ಲಾ ಪಿತೃಗಳು ತಕ್ಷಣದಲ್ಲಿಯೇ ಅಂತರ್ಧಾನ ಹೊಂದಿದರು.

ವೈಶಂಪಾಯನಃ

ಯಾಜ್ಞವಲ್ಕ್ಯಂ ಸಮಾಹೂಯ ವಿವಾಹಾಚಾರ್ಯಮಿತ್ಯುತ ।
ವಸುಂ ಚಾಪಿ ಸಮಾಹೂಯ ವಸಿಷ್ಠೋ ಮುನಿಭಿಃ ಸಹ ।
ವಿವಾಹಂ ಕಾರಯಾಮಾಸ ಶ್ರುತಿದೃಷ್ಟೇನ ಕರ್ಮಣಾ ॥೧೪೦॥

ವಸಿಷ್ಠರು, ಯಾಜ್ಞವಲ್ಕ್ಯರನ್ನು ವಿವಾಹಪುರೋಹಿತರೆಂದು ಕರೆದು ವಸುವನ್ನೂ ಆಹ್ವಾನಿಸಿ, ಋಷಿಗಳ ಜೊತೆಯಲ್ಲಿ ಸೇರಿ ಶ್ರೌತವಿಧಾನದಿಂದ ವಿವಾಹವನ್ನು ಮಾಡಿಸಿದರು.

ವಸುಃ

ಪರಾಶರ ಮಹಾಪ್ರಾಜ್ಞ ತವ ಪುತ್ರಪ್ರದಾಮಿಮಾಮ್ ।
ಪ್ರತೀಚ್ಛಯೈನಾಂ ಭದ್ರಂ ತೇ ಪಾಣಿಂ ಗೃಹ್ಣೀಷ್ವ ಪಾಣಿನಾ ॥೧೪೧॥

ಮಹಾಪ್ರಾಜ್ಞರಾದ ಪರಾಶರರೇ, ನಿಮಗೆ ಪುತ್ರಪ್ರದಳಾದ ಇವಳನ್ನು ಸ್ವೀಕರಿಸಿ. ನಿಮಗೆ ಮಂಗಳವಾಗಲಿ. ಇವಳ ಪಾಣಿಯನ್ನು ನಿಮ್ಮ ಪಾಣಿಯಿಂದ ಗ್ರಹಣ ಮಾಡಿ.

ವೈಶಂಪಾಯನಃ

ವಸೋಸ್ತು ವಚನಂ ಶ್ರುತ್ವಾ ಯಾಜ್ಞವಲ್ಕ್ಯಮತೇ ಸ್ಥಿತಃ ।
ಕೃತಕೌತುಕಮಾಂಗಲ್ಯಃ ಪಾಣಿನಾ ಪಾಣಿಮಸ್ಪೃಶತ್ ॥೧೪೨॥

ಪರಾಶರರು ವಸುವಿನ ಮಾತನ್ನು ಕೇಳಿ ಯಾಜ್ಞವಲ್ಕ್ಯರ ಅಭಿಪ್ರಾಯದಂತೆ ಕಂಕಣಬಂಧವುಳ್ಳ ತಮ್ಮ ಪಾಣಿಯಿಂದ ಸತ್ಯವತಿಯ ಪಾಣಿಯನ್ನು ಗ್ರಹಣಮಾಡಿದರು.

ಪ್ರಭೂತಾಜ್ಯೇನ ಹವಿಷಾ ಹುತ್ವಾ ಮಂತ್ರೈರ್ಹುತಾಶನಮ್ ।
ತ್ರಿರಗ್ನಿಂ ತು ಪರಿಕ್ರಮ್ಯ ಸಮಭ್ಯರ್ಚ್ಯ ಹುತಾಶನಮ್ ॥೧೪೩॥

ಮಹರ್ಷೀನ್ ಯಾಜ್ಞವಲ್ಕ್ಯಾದೀನ್ ದಕ್ಷಿಣಾಭಿಃ ಪ್ರತೋಷ್ಯ ಚ ।
ಲಬ್ಧಾನುಜ್ಞೋ ವಿವಾಹ್ಯಾಶು ಪ್ರದಕ್ಷಿಣಮಥಾಕರೋತ್ ॥೧೪೪॥

ಮಂತ್ರಪೂರ್ವಕವಾಗಿ ಒಳ್ಳೆಯ ಆಜ್ಯರೂಪ ಹವಿಸ್ಸಿನಿಂದ ಅಗ್ನಿಯಲ್ಲಿ ಹೋಮವನ್ನು ಮಾಡಿ, ಮೂರುಸಲ ಅಗ್ನಿಪ್ರದಕ್ಷಿಣೆಯನ್ನು ಮಾಡಿ, ಅಗ್ನಿಗೆ ನಮಸ್ಕರಿಸಿ

ಮಹರ್ಷಿಗಳಾದ ಯಾಜ್ಞವಲ್ಕ್ಯ ಮೊದಲಾದವರನ್ನು ದಕ್ಷಿಣೆಯಿಂದ ಸಂತೋಷಪಡಿಸಿ ಅವರ ಅನುಮತಿಯನ್ನು ಪಡೆದು, ವಿವಾಹವನ್ನು ಮಾಡಿಕೊಂಡು ಪರಾಶರರು ಅವರಿಗೆ ಪ್ರದಕ್ಷಿಣೆಯನ್ನು ಮಾಡಿದರು.

ಪರಾಶರೇ ಕೃತೋದ್ವಾಹೇ ದೇವಾಃ ಸರ್ಷಿಗಣಾಸ್ತದಾ ।
ಹೃಷ್ಟಾ ಜಗ್ಮುಃ ಕ್ಷಣಾದೇವ ವೇದವ್ಯಾಸೋ ಭವತ್ವಿತಿ ॥೧೪೫॥

ಪರಾಶರರು ವಿವಾಹಮಾಡಿಕೊಳ್ಳುತ್ತಿರಲು ಬಂದಿದ್ದ ದೇವತೆಗಳು ಮತ್ತು ಋಷಿಗಣಗಳು ಸಂತುಷ್ಟರಾಗಿ, ವೇದವ್ಯಾಸರ ಅವತಾರವಾಗಲಿ ಎಂದು ಹೇಳಿ ಒಂದು ಕ್ಷಣದಲ್ಲಿ ಹೊರಟುಹೋದರು.

ಏವಂ ಸತ್ಯವತೀ ಹೃಷ್ಟಾ ಪೂಜಾಂ ಲಬ್ಧ್ವಾ ಯಥೇಷ್ಟತಃ ।
ಪರಾಶರೇಣ ಸಂಯುಕ್ತಾ ಸದ್ಯೋ ಗರ್ಭಂ ಸುಷಾವ ಸಾ ॥೧೪೬॥

ಹೀಗೆ ಸತ್ಯವತಿಯು ತನ್ನ ಮನಸ್ಸಿಗೆ ಒಪ್ಪುವಂತೆ ಸತ್ಕಾರವನ್ನು ಪಡೆದು ಸಂತುಷ್ಟಳಾಗಿ ಪರಾಶರರ ಸಮಾಗಮವನ್ನು ಹೊಂದಿ, ತಕ್ಷಣದಲ್ಲಿಯೇ ಗರ್ಭವನ್ನು ಪ್ರಸವಿಸಿದಳು.

ಜಜ್ಞೇ ಚ ಯಮುನಾದ್ವೀಪೇ ಪಾರಾಶರ್ಯಃ ಸುವೀರ್ಯವಾನ್ ।
ಜಾತಮಾತ್ರಃ ಸ ವವೃಧೇ ಸಪ್ತವರ್ಷೋಽಭವತ್ ತದಾ ॥೧೪೭॥

ಯಮುನಾನದಿಯ ಆ ದ್ವೀಪದಲ್ಲಿ ಮಹಾಸಾಮರ್ಥ್ಯೋಪೇತರಾದ ಪರಾಶರರ ಮಗನಾಗಿ ವ್ಯಾಸರು ಜನಿಸಿದರು. ಹುಟ್ಟಿದ ತಕ್ಷಣವೇ ಅವರು ಬೆಳೆದು ಏಳುವರ್ಷದವರಾದರು.

ಸ್ನಾತ್ವಾಽಭಿವಾದ್ಯ ಪಿತರಂ ತಸ್ಥೌ ವ್ಯಾಸಃ ಸಮಾಹಿತಃ ।
ಸ್ವಸ್ತೀತಿ ವಚನಂ ಚೋಕ್ತ್ವಾ ದದೌ ಕಲಶಮುತ್ತಮಮ್ ॥೧೪೮॥

ವ್ಯಾಸರು ಸ್ನಾನವನ್ನು ಮಾಡಿ, ತಂದೆಗೆ ನಮಸ್ಕರಿಸಿ ಸಮಾಧಾನದಿಂದ ಕೂಡಿದವರಾಗಿ ನಿಂತುಕೊಂಡರು. ಪರಾಶರರು ಮಂಗಳವಾಗಲಿ ಎಂದು ಹೇಳಿ ಒಳ್ಳೆಯ ಕಮಂಡಲುವನ್ನು ನೀಡಿದರು.

ಗೃಹೀತ್ವಾ ಕಲಶಂ ಪಾರ್ಶ್ವೇ ತಸ್ಥೌ ವ್ಯಾಸಃ ಸಮಾಹಿತಃ ।
ತತೋ ದಾಶಭಯಾತ್ ಪತ್ನೀ ಸ್ನಾತ್ವಾ ಕನ್ಯಾ ಬಭೂವ ಸಾ ॥೧೪೯॥

ವ್ಯಾಸರು ಕಮಂಡಲುವನ್ನು ಸ್ವೀಕರಿಸಿ ಪಾರ್ಶ್ವದಲ್ಲಿ ವಿನಯಶೀಲರಾಗಿ ನಿಂತರು. ಅನಂತರ ದಾಶನ ಭಯದಿಂದ ಸತ್ಯವತಿಯು ಸ್ನಾನವನ್ನು ಮಾಡಿ ಪುನಃ ಕನ್ಯೆಯೇ ಆದಳು.

ಅಭಿವಾದ್ಯ ಮುನೇಃ ಪಾದೌ ಪುತ್ರಂ ಜಗ್ರಾಹ ಪಾಣಿನಾ ।
ಸ್ಪೃಷ್ಟಮಾತ್ರೇ ಸ ನಿರ್ಗತ್ಸ್ಯ ಮಾತರಂ ವಾಕ್ಯಮಬ್ರವೀತ್ ॥೧೫೦॥

ಋಷಿಗಳ ಪಾದಗಳಿಗೆ ನಮಸ್ಕರಿಸಿ ತನ್ನ ಹಸ್ತಗಳಿಂದ ಪುತ್ರನನ್ನು ಎತ್ತಿಕೊಳ್ಳಲು ಉದ್ಯುಕ್ತಳಾದಳು. ತಾಯಿಯು ಮುಟ್ಟಿದ ತಕ್ಷಣ ಅವಳನ್ನು ಗದರಿಸಿ ತಾಯಿಯನ್ನು ಕುರಿತು ವ್ಯಾಸರು ಮಾತನಾಡಿದರು.

ಮಮ ಪಿತ್ರಾ ತು ಸಂಸ್ಪರ್ಶಾನ್ಮಾತಸ್ತ್ವಮಭವಃ ಶುಚಿಃ ।
ಅದ್ಯ ದಾಶಸುತಾ ಕನ್ಯಾ ನ ಸ್ಪೃಶೇರ್ಮಾಮನಿಂದಿತೇ ॥೧೫೧॥

ತಾಯಿಯೇ ನನ್ನ ತಂದೆಯ ಸಂಸ್ಪರ್ಶದಿಂದ ನೀನು ಶುದ್ಧಳಾಗಿದ್ದೆ. ಈಗ ಪುನಃ ಕನ್ಯೆಯಾಗಿ ದಾಶಸುತೆಯಾಗಿದ್ದೀಯೆ. ಆದ್ದರಿಂದ ಏಲೌ ಅನಿಂದಿತಳಾದವಳೇ ನನ್ನನ್ನು ಮುಟ್ಟಬೇಡ.

ವೈಶಂಪಾಯನಃ

ವ್ಯಾಸಸ್ಯ ವಚನಂ ಶ್ರುತ್ವಾ ಬಾಷ್ಪಪೂರ್ಣಮುಖೀ ತದಾ ।
ಮನುಷ್ಯಭಾವಾತ್ ಸಾ ಯೋಷಿತ್ ಪಪಾತ ಮುನಿಪಾದಯೋಃ ॥

ವ್ಯಾಸರ ವಚನವನ್ನು ಕೇಳಿ ಕಣ್ಣುಗಳಲ್ಲಿ ನೀರುತುಂಬಿಕೊಂಡು ಸತ್ಯವತಿಯು ಮನುಷ್ಯಭಾವದಿಂದ ಪರಾಶರರ ಪಾದಗಳ ಮೇಲೆ ಬಿದ್ದಳು.

ವೈಶಂಪಾಯನಃ

ಮಹಾಪ್ರಸಾದೋ ಭಗವಾನ್ ಪುತ್ರಂ ಪ್ರೋವಾಚ ಧರ್ಮವಿತ್ ।
ಮಾ ತ್ವಮೇವಂವಿಧಂ ಕಾರ್ಷೀರ್ನೈತದ್ ಧರ್ಮ್ಯಂ ಮತಂ ಹಿ ನಃ ॥

ಮಹಾನುಗ್ರಹಶಾಲಿಗಳಾದ ಧರ್ಮಜ್ಞರಾದ ಪೂಜ್ಯರಾದ ಪರಾಶರರು ಮಗು, ಹೀಗೆ ಮಾಡಬೇಡ. ನೀನು ಮಾಡುತ್ತಿರುವುದು ನನ್ನ ದೃಷ್ಟಿಯಲ್ಲಿ ಧರ್ಮವಲ್ಲ ಎಂದು ಹೇಳಿದರು.

ದೂಷ್ಯೌ ನ ಮಾತಾಪಿತರೌ ತಥಾ ಪೂರ್ವೋಪಕಾರಿಣೌ ।
ಧಾರಣಾದ್ ದುಃಖಸಹನಾತ್ ತಯೋರ್ಮಾತಾ ಗರೀಯಸೀ ॥೧೫೪॥

ತಂದೆತಾಯಿಗಳನ್ನು ಹಾಗೆಯೇ ಹಿಂದೆ ಉಪಕಾರಮಾಡಿದವರನ್ನು ಎಂದೂ ದೂಷಿಸಬಾರದು. ಗರ್ಭದಲ್ಲಿ ಹೊರುವುದರಿಂದ ಮತ್ತು ಪ್ರಸವದ ವೇದನೆಯನ್ನು ಅನುಭವಿಸುವುದರಿಂದ ಅವರಲ್ಲಿ ತಾಯಿಯು ಶ್ರೇಷ್ಠಳಾದವಳು.

ಬೀಜಕ್ಷೇತ್ರಸಮಾಯೋಗೇ ಸಸ್ಯಂ ಜಾಯತಿ ಲೌಕಿಕಮ್ ।
ಜಾಯತೇ ಚ ಸುತಸ್ತದ್ವತ್ ಪುರುಷಸ್ತ್ರೀಸಮಾಗಮೇ ॥೧೫೫॥

ಭೂಮಿ ಮತ್ತು ಬೀಜದ ಸಂಯೋಗವು ಉಂಟಾದಾಗ ಲೋಕದಲ್ಲಿ ಸಸ್ಯವು ಹುಟ್ಟುತ್ತದೆ. ಹಾಗೆಯೇ ಸ್ತ್ರೀಪುರುಷರ ಸಮಾಗಮದಿಂದ ಸುತನು ಜನಿಸುತ್ತಾನೆ.

ಮೃಗೀಣಾಂ ಪಕ್ಷಿಣಾಂ ಚೈವ ಅಪ್ಸರಾಣಾಂ ತಥೈವ ಚ ।
ಶೂದ್ರಯೋನ್ಯಾಂ ಚ ಜಾಯಂತೇ ಮುನಯೋ ವೇದಪಾರಗಾಃ ॥೧೫೬॥

ವೇದಪಾರಂಗತರಾದ ಋಷಿಗಳು ಮೃಗಯೋನಿಯಲ್ಲಿಯೂ, ಪಕ್ಷಿಯೋನಿಯಲ್ಲಿಯೂ, ಅಪ್ಸರೆಯರ ಯೋನಿಯಲ್ಲಿಯೂ, ಅಥವಾ ಶೂದ್ರಯೋನಿಯಲ್ಲಿಯೂ ಜನಿಸುತ್ತಾರೆ.

ಋಷ್ಯಶೃಂಗೋ ಮೃಗೀಪುತ್ರಃ ಕಣ್ವೋ ಬಾರ್ಹಿಸುತಸ್ತಥಾ ।
ಅಗಸ್ತ್ಯಶ್ಚ ವಸಿಷ್ಠಶ್ಚ ಊರ್ವಶ್ಯಾಂ ಜನಿತಾವುಭೌ ॥೧೫೭॥

ಋಷ್ಯಶೃಂಗರು ಹೆಣ್ಣುಜಿಂಕೆಯ ಪುತ್ರ. ಕಣ್ವರು ನವಿಲಿನ ಗರ್ಭದಲ್ಲಿ ಜನಿಸಿದರು. ಅಗಸ್ತ್ಯ ಮತ್ತು ವಸಿಷ್ಠರು ಊರ್ವಶಿಯಲ್ಲಿ ಜನಿಸಿದರು.

ಸೋಮಶ್ರವಾಸ್ತು ಸರ್ಪ್ಯಾಂ ತು ಅಶ್ವಿನಾವಶ್ವಸಂಭವೌ ।
ಸ್ಕಂದಃ ಸ್ಖನ್ನೇನ ಶುಕ್ಲೇನ ಜಾತಃ ಶರವಣೇ ಪುರಾ ॥೧೫೮॥

ಸೋಮಶ್ರವನು ಹೆಣ್ಣುಸರ್ಪದಲ್ಲಿ ಜನಿಸಿದರು. ಅಶ್ವಿನಿದೇವತೆಗಳು ಅಶ್ವಯೋನಿಯಲ್ಲಿ ಜನಿಸಿದರು. ಸ್ಕಂದನು ಸ್ಖಲನಗೊಂಡ ವೀರ್ಯವು ಬಿದ್ದ ಶರವಣದಲ್ಲಿ ಜನಿಸಿದನು.

ವ್ಯಾಸರು ಕಮಂಡಲುವನ್ನು ಸ್ವೀಕರಿಸಿ ಪಾರ್ಶ್ವದಲ್ಲಿ ವಿನಯಶೀಲರಾಗಿ ನಿಂತರು. ಅನಂತರ ದಾಶನ ಭಯದಿಂದ ಸತ್ಯವತಿಯು ಸ್ನಾನವನ್ನು ಮಾಡಿ ಪುನಃ ಕನ್ಯೆಯೇ ಆದಳು.

ಅಭಿವಾದ್ಯ ಮುನೇಃ ಪಾದೌ ಪುತ್ರಂ ಜಗ್ರಾಹ ಪಾಣಿನಾ ।
ಸ್ಪೃಷ್ಟಮಾತ್ರೇ ಸ ನಿರ್ಗತ್ಸ್ಯ ಮಾತರಂ ವಾಕ್ಯಮಬ್ರವೀತ್ ॥೧೫೦॥

ಋಷಿಗಳ ಪಾದಗಳಿಗೆ ನಮಸ್ಕರಿಸಿ ತನ್ನ ಹಸ್ತಗಳಿಂದ ಪುತ್ರನನ್ನು ಎತ್ತಿಕೊಳ್ಳಲು ಉದ್ಯುಕ್ತಳಾದಳು. ತಾಯಿಯು ಮುಟ್ಟಿದ ತಕ್ಷಣ ಅವಳನ್ನು ಗದರಿಸಿ ತಾಯಿಯನ್ನು ಕುರಿತು ವ್ಯಾಸರು ಮಾತನಾಡಿದರು.

ಮಮ ಪಿತ್ರಾ ತು ಸಂಸ್ಪರ್ಶಾನ್ಮಾತಸ್ತ್ವಮಭವಃ ಶುಚಿಃ ।
ಅದ್ಯ ದಾಶಸುತಾ ಕನ್ಯಾ ನ ಸ್ಪೃಶೇರ್ಮಾಮನಿಂದಿತೇ ॥೧೫೧॥

ತಾಯಿಯೇ ನನ್ನ ತಂದೆಯ ಸಂಸ್ಪರ್ಶದಿಂದ ನೀನು ಶುದ್ಧಳಾಗಿದ್ದೆ. ಈಗ ಪುನಃ ಕನ್ಯೆಯಾಗಿ ದಾಶಸುತೆಯಾಗಿದ್ದೀಯೆ. ಆದ್ದರಿಂದ ಏಲೌ ಅನಿಂದಿತಳಾದವಳೇ ನನ್ನನ್ನು ಮುಟ್ಟಬೇಡ.

ವೈಶಂಪಾಯನಃ

ವ್ಯಾಸಸ್ಯ ವಚನಂ ಶ್ರುತ್ವಾ ಬಾಷ್ಪಪೂರ್ಣಮುಖೀ ತದಾ ।
ಮನುಷ್ಯಭಾವಾತ್ ಸಾ ಯೋಷಿತ್ ಪಪಾತ ಮುನಿಪಾದಯೋಃ ॥

ವ್ಯಾಸರ ವಚನವನ್ನು ಕೇಳಿ ಕಣ್ಣುಗಳಲ್ಲಿ ನೀರುತುಂಬಿಕೊಂಡು ಸತ್ಯವತಿಯು ಮನುಷ್ಯಭಾವದಿಂದ ಪರಾಶರರ ಪಾದಗಳ ಮೇಲೆ ಬಿದ್ದಳು.

ವೈಶಂಪಾಯನಃ

ಮಹಾಪ್ರಸಾದೋ ಭಗವಾನ್ ಪುತ್ರಂ ಪ್ರೋವಾಚ ಧರ್ಮವಿತ್ ।
ಮಾ ತ್ವಮೇವಂವಿಧಂ ಕಾರ್ಷೀರ್ನೈತದ್ ಧರ್ಮ್ಯಂ ಮತಂ ಹಿ ನಃ ॥

ಮಹಾನುಗ್ರಹಶಾಲಿಗಳಾದ ಧರ್ಮಜ್ಞರಾದ ಪೂಜ್ಯರಾದ ಪರಾಶರರು ಮಗು, ಹೀಗೆ ಮಾಡಬೇಡ. ನೀನು ಮಾಡುತ್ತಿರುವುದು ನನ್ನ ದೃಷ್ಟಿಯಲ್ಲಿ ಧರ್ಮವಲ್ಲ ಎಂದು ಹೇಳಿದರು.

ದೂಷ್ಯೌ ನ ಮಾತಾಪಿತರೌ ತಥಾ ಪೂರ್ವೋಪಕಾರಿಣೌ ।
ಧಾರಣಾದ್ ದುಃಖಿಸಹನಾತ್ ತಯೋರ್ಮಾತಾ ಗರೀಯಸೀ ॥೧೫೪॥

ತಂದೆತಾಯಿಗಳನ್ನು ಹಾಗೆಯೇ ಹಿಂದೆ ಉಪಕಾರಮಾಡಿದವರನ್ನು ಎಂದೂ ದೂಷಿಸಬಾರದು. ಗರ್ಭದಲ್ಲಿ ಹೊರುವುದರಿಂದ ಮತ್ತು ಪ್ರಸವದ ವೇದನೆಯನ್ನು ಅನುಭವಿಸುವುದರಿಂದ ಅವರಲ್ಲಿ ತಾಯಿಯು ಶ್ರೇಷ್ಠಳಾದವಳು.

ಬೀಜಕ್ಷೇತ್ರಸಮಾಯೋಗೇ ಸಸ್ಯಂ ಜಾಯತಿ ಲೌಕಿಕಮ್ ।
ಜಾಯತೇ ಚ ಸುತಸ್ತದ್ವತ್ ಪುರುಷಸ್ತ್ರೀಸಮಾಗಮೇ ॥೧೫೫॥

ಭೂಮಿ ಮತ್ತು ಬೀಜದ ಸಂಯೋಗವು ಉಂಟಾದಾಗ ಲೋಕದಲ್ಲಿ ಸಸ್ಯವು ಹುಟ್ಟುತ್ತದೆ. ಹಾಗೆಯೇ ಸ್ತ್ರೀಪುರುಷರ ಸಮಾಗಮದಿಂದ ಸುತನು ಜನಿಸುತ್ತಾನೆ.

ಮೃಗೀಣಾಂ ಪಕ್ಷಿಣಾಂ ಚೈವ ಅಪ್ಸರಾಣಾಂ ತಥೈವ ಚ ।
ಶೂದ್ರಯೋನ್ಯಾಂ ಚ ಜಾಯಂತೇ ಮುನಯೋ ವೇದಪಾರಗಾಃ ॥೧೫೬॥

ವೇದಪಾರಂಗತರಾದ ಋಷಿಗಳು ಮೃಗಯೋನಿಯಲ್ಲಿಯೂ, ಪಕ್ಷಿಯೋನಿಯಲ್ಲಿಯೂ, ಅಪ್ಸರೆಯರ ಯೋನಿಯಲ್ಲಿಯೂ, ಅಥವಾ ಶೂದ್ರಯೋನಿಯಲ್ಲಿಯೂ ಜನಿಸುತ್ತಾರೆ.

ಋಷ್ಯಶೃಂಗೋ ಮೃಗೀಪುತ್ರಃ ಕಣ್ವೋ ಬಾರ್ಹಿಸುತಸ್ತಥಾ ।
ಅಗಸ್ತ್ಯಶ್ಚ ವಸಿಷ್ಠಶ್ಚ ಊರ್ವಶ್ಯಾಂ ಜನಿತಾವುಭೌ ॥೧೫೭॥

ಋಷ್ಯಶೃಂಗರು ಹೆಣ್ಣುಜಿಂಕೆಯ ಪುತ್ರ. ಕಣ್ವರು ನವಿಲಿನ ಗರ್ಭದಲ್ಲಿ ಜನಿಸಿದರು. ಅಗಸ್ತ್ಯ ಮತ್ತು ವಸಿಷ್ಠರು ಊರ್ವಶಿಯಲ್ಲಿ ಜನಿಸಿದರು.

ಸೋಮಶ್ರವಾಸ್ತು ಸರ್ಪ್ಯಾಂ ತು ಅಶ್ವಿನಾವಶ್ವಸಂಭವೌ ।
ಸ್ಕಂದಃ ಸ್ಖನ್ನೇನ ಶುಕ್ಲೇನ ಜಾತಃ ಶರವಣೇ ಪುರಾ ॥೧೫೮॥

ಸೋಮಶ್ರವನು ಹೆಣ್ಣುಸರ್ಪದಲ್ಲಿ ಜನಿಸಿದರು. ಅಶ್ವಿನಿದೇವತೆಗಳು ಅಶ್ವಯೋನಿಯಲ್ಲಿ ಜನಿಸಿದರು. ಸ್ಕಂದನು ಸ್ಖಲನಗೊಂಡ ವೀರ್ಯವು ಬಿದ್ದ ಶರವಣದಲ್ಲಿ ಜನಿಸಿದನು.

ಏವಮೇವ ಚ ದೇವಾನಾಮೃಷೀಣಾಂ ಚೈವ ಸಂಭವಃ ।
ಲೋಕವಾದಪ್ರವೃತ್ತಿರ್ಹಿ ನ ಮೀಮಾಂಸ್ಯಾ ಬುಧೈಃ ಸದಾ ॥೧೫೯॥

ಋಷಿಗಳು ಮತ್ತು ದೇವತೆಗಳು ಹುಟ್ಟುವುದು ಈ ರೀತಿಯಲ್ಲಿಯೇ. ಇದು ಸ್ಮೃತಿವಚನಗಳಲ್ಲಿ ಪ್ರಸಿದ್ಧವಾಗಿದೆ. ವಿವೇಕಿಗಳಾದವರು ಇದನ್ನು ವಿಚಾರ ಮಾಡಬಾರದು.

ವೇದವ್ಯಾಸ ಇತಿ ಪ್ರೋಕ್ತಃ ಪುರಾಣೇ ಚ ಸ್ವಯಂಭುವಾ ।
ಧರ್ಮನೇತಾ ಮಹರ್ಷೀಣಾಂ ಮನುಷ್ಯಾಣಾಂ ತ್ವಮೇವ ಚ ॥

ಪುರಾಣಗಳಲ್ಲಿ ನಿನ್ನನ್ನು ವೇದವ್ಯಾಸರೆಂದು ಕರೆದಿದ್ದಾರೆ. ಮಹರ್ಷಿಗಳಿಗೂ ಮತ್ತು ಮನುಷ್ಯರಿಗೂ ಧರ್ಮಮಾರ್ಗ ಪ್ರದರ್ಶಕನು ನೀನೇ ಆಗಿರುವಿ.

ತಸ್ಮಾತ್ ಪುತ್ರ ನ ದೂಷ್ಯೇತ ವಾಸವೀ ಯೋಗಚಾರಿಣೀ ।
ಮತ್ಪ್ರೀತ್ಯರ್ಥಂ ಮಹಾಪ್ರಾಜ್ಞ ಸಸ್ನೇಹಂ ವಕ್ತುಮರ್ಹಸಿ ॥೧೬೧॥

ಪುತ್ರನೇ, ಆದ್ದರಿಂದ ಯೋಗಚಾರಿಣಿಯಾದ ವಸುಪುತ್ರಿಯಾದ ಸತ್ಯವತಿಯನ್ನು ದೂಷಿಸಬೇಡ. ಎಲೈ ಮಹಾಪ್ರಾಜ್ಞನೇ, ನನ್ನನ್ನು ಸಂತೋಷಪಡಿಸುವುದಕ್ಕಾದರೂ ಪ್ರೀತಿಯಿಂದ ಅವಳ ಜೊತೆ ಮಾತನಾಡು.

ಪ್ರಜಾಹಿತಾರ್ಥಂ ಸಂಭೂತೋ ವಿಷ್ಣೋರ್ಭಾಗೋ ಮಹಾನೃಷಿಃ ।
ತಸ್ಮಾತ್ ಸ್ವಮಾತರಂ ಸ್ನೇಹಾತ್ ಪ್ರಬ್ರವೀಹಿ ತಪೋಧನ ॥೧೬೨॥

ಲೋಕಹಿತಕ್ಕಾಗಿ ವಿಷ್ಣುವಿನ ಅಂಶರೂಪದಿಂದ ಮಹಾಋಷಿಯಾಗಿ ಅವತರಿಸಿದ್ದೀಯೆ. ಆದ್ದರಿಂದ ಎಲೈ ತಪೋಧನನೇ, ತಾಯಿಯ ಜೊತೆಯಲ್ಲಿ ಸ್ನೇಹದಿಂದ ಮಾತನಾಡು.

ವೈಶಂಪಾಯನಃ

ಗುರೋರ್ವಚನಮಾಜ್ಞಾಯ ವ್ಯಾಸಃ ಪ್ರೀತೋऽಭವತ್ ತದಾ ।
ಚಿಂತಾಯಿತ್ವಾ ಲೋಕವೃತ್ತಂ ಮಾತುರಂಕಮಥಾವಿಶತ್ ॥೧೬೩॥

ತಂದೆಯ ಮಾತುಗಳನ್ನು ಕೇಳಿ ವ್ಯಾಸರು ಆಗ ಸಂತುಷ್ಟರಾದರು. ಲೋಕದ ನಡತೆಯನ್ನು ಚಿಂತಿಸಿ ತಾಯಿಯ ತೊಡೆಯ ಮೇಲೆ ಕುಳಿತುಕೊಂಡರು.

ಪುತ್ರಸ್ಪರ್ಶಾತ್ ತು ಲೋಕೇಷು ನಾನ್ಯತ್ ಸುಖಮತೀವ ಹಿ ।
ವ್ಯಾಸಂ ಕಮಲಪತ್ರಾಕ್ಷೀ ಪರಿಷ್ವಜ್ಯಾಶ್ರು ವರ್ತಯತ್ ।
ಸ್ತನ್ಯಾಸಾರೈಃ ಕ್ಲಿದ್ಯಮಾನಾ ಪುತ್ರಮಾಘ್ರಾಯ ಮೂರ್ಧನಿ ॥೧೬೪॥

ಪುತ್ರಸ್ಪರ್ಶಕ್ಕಿಂತ ಹೆಚ್ಚಿನ ಸುಖವು ಲೋಕದಲ್ಲಿ ಇಲ್ಲವಷ್ಟೇ? ಕಮಲನಯನೆಯಾದ ಸತ್ಯವತಿಯು ವ್ಯಾಸರನ್ನು ಆಲಿಂಗಿಸಿ ಕಣ್ಣೀರನ್ನು ಸುರಿಸಿದಳು. ತಾನಾಗಿ ಹರಿಯುವ ಸ್ತನ್ಯರಸದಿಂದ ಒದ್ದೆಯಾದವಳಾಗಿ ಮಗನನ್ನು ಶಿರಸ್ಸಿನಲ್ಲಿ ಆಘ್ರಾಣಿಸಿದಳು.

ವಾಸವೀ

ಪುತ್ರಲಾಭಾತ್ ಪರಂ ಲೋಕೇ ನಾಸ್ತೀಹ ಪ್ರಸವಾರ್ಥಿನಾಮ್ ।
ದುರ್ಲಭಂ ವೇತಿ ಮನ್ಯೇಽಹಂ ಮಯಾ ಪ್ರಾಪ್ತಂ ಮಹತ್ತಪಃ ॥೧೬೫॥

ಸಂತಾನವನ್ನು ಅಪೇಕ್ಷಿಸುವವರಿಗೆ ಪುತ್ರಲಾಭಕ್ಕಿಂತ ದೊಡ್ಡದು ಲೋಕದಲ್ಲಿ ಯಾವುದೂ ಇಲ್ಲ. ಪುತ್ರಲಾಭವು ಬಹುದುರ್ಲಭವೆಂದೇ ತಿಳಿಯುತ್ತೇನೆ. ನಾನು ಈ ದಿನ ಮಹಾತಪಸ್ಸಿನ ಫಲವನ್ನು ಪಡೆದಿದ್ದೇನೆ.

ಮಹತಾ ತಪಸಾ ತಾತ ಮಹಾಯೋಗಬಲೇನ ಚ ।
ಮಯಾ ತ್ವಂ ಹಿ ಮಹಾಪ್ರಾಜ್ಞ ಲಬ್ಧೋಽಮೃತಮಿವಾಮರೈಃ ।
ತಸ್ಮಾತ್ ತ್ವಂ ಮಾಮೃಷೇಃ ಪುತ್ರ ತ್ಯಕ್ತುಂ ನಾರ್ಹಸಿ ಸಾಂಪ್ರತಮ್ ॥

ಎಲೈ ಮಹಾಪ್ರಾಜ್ಞನೇ ಎಲೈ ಮಗುವೇ, ನಾನು ಮಹಾತಪಸ್ಸಿನಿಂದಲೂ ಮಹಾಯೋಗಬಲದಿಂದಲೂ ಈ ದಿನ ದೇವತೆಗಳು ಅಮೃತವನ್ನು ಪಡೆದಂತೆ ನಿನ್ನನ್ನು ಪಡೆದಿದ್ದೇನೆ. ಆದ್ದರಿಂದ ಪುತ್ರನೇ ಈಗ ನೀನು ನನ್ನನ್ನು ಬಿಟ್ಟು ಹೋಗಬೇಡ.

ವೈಶಂಪಾಯನಃ

ಏವಮುಕ್ತಸ್ತತಃ ಸ್ನೇಹಾದ್ ವ್ಯಾಸೋ ಮಾತರಮಬ್ರವೀತ್ ।
ತ್ವಯಾ ಸ್ಪೃಷ್ಟಃ ಪರಿಷ್ವಕ್ತೋ ಮೂರ್ಧ್ನಿ ಚಾಘ್ರಾಣಿತೋ ಮುಹುಃ ॥೧೬೭॥

ಏತಾವನ್ಮಾತ್ರಯಾ ಪ್ರೀತಾ ಭವಿಷ್ಯೇಥಾ ನೃಪಾತ್ಮಜೇ ।
ಸ್ಮೃತೋಽಹಂ ದರ್ಶಯಿಷ್ಯಾಮಿ ಕೃತ್ಯೇಷ್ವಿತಿ ಚ ಸೋಽಬ್ರವೀತ್ ॥೧೬೮॥

ಹೀಗೆ ಹೇಳಲ್ಪಟ್ಟ ವ್ಯಾಸರು ತಾಯಿಯನ್ನು ಕುರಿತು ಪ್ರೀತಿಯಿಂದ ನೀನು ನನ್ನನ್ನು ಸ್ಪರ್ಶಮಾಡಿದ್ದೀಯೆ, ಆಲಿಂಗಿಸಿದ್ದೀಯೆ, ಮತ್ತೆ ಮತ್ತೆ ಶಿರಸ್ಸಿನಲ್ಲಿ ಆಘ್ರಾಣಿಸಿದ್ದಿಯೆ, ರಾಜಕುಮಾರಿಯೇ ನೀನು ಇಷ್ಟರಿಂದಲೇ ಸಂತುಷ್ಟಳಾಗಬೇಕು. ನಿನಗೆ ಅವಶ್ಯಕವಾದಾಗ ನೀನು ಸ್ಮರಣೆ ಮಾಡಿದರೆ ನಾನು ನಿನಗೆ ದರ್ಶನವನ್ನು ಕೊಡುತ್ತೇನೆ ಎಂದು ಹೇಳಿದರು.

ಸ ಮಾತರಮನುಜ್ಞಾಪ್ಯ ತಪಸ್ಯೇವ ಮನೋ ದಧೇ ।
ತತಃ ಕನ್ಯಾಮನುಜ್ಞಾಯ ಪುನಃ ಕನ್ಯಾ ಭವತ್ವಿತಿ ।
ಪರಾಶರೋಽಪಿ ಭಗವಾನ್ ಪುತ್ರೇಣ ಸಹಿತೋ ಯಯೌ ॥೧೬೯॥

ವ್ಯಾಸರು ತಾಯಿಯ ಅನುಮತಿಯನ್ನು ಪಡೆದು ತಪಸ್ಸನ್ನೇ ಮಾಡಲು ನಿರ್ಧರಿಸಿದರು. ಆಗ ಪರಾಶರರು ಸತ್ಯವತಿಯನ್ನು ಪುನಃ ಕನ್ಯೆಯೇ ಆಗು ಎಂದು ಆಶೀರ್ವದಿಸಿ ಮಗನ ಜೊತೆಯಲ್ಲಿಯೇ ಪ್ರಯಾಣ ಮಾಡಿದರು.

ಗತ್ವಾಽಽಶ್ರಮಪದಂ ಪುಣ್ಯಂ ದೃಶ್ಯಂತ್ಯಾಶ್ಚ ಪರಾಶರಃ ।
ಜಾತಕರ್ಮಾದಿಸಂಸ್ಕಾರಂ ಕಾರಯಾಮಾಸ ಧರ್ಮತಃ ॥೧೭೦॥

ತಮ್ಮ ಪವಿತ್ರವಾದ ಆಶ್ರಮಕ್ಕೆ ಹಿಂದಿರುಗಿ ತಾಯಿಯಾದ ಸತ್ಯವತಿಯು ನೋಡುತ್ತಿರುವಂತೆಯೇ ಪರಾಶರರು ವ್ಯಾಸರಿಗೆ ಜಾತಕರ್ಮ ಮೊದಲಾದ ಧಾರ್ಮಿಕವಿಧಿಗಳನ್ನು ಮಾಡಿಸಿದರು.

ಕೃತೋಪನಯನೋ ವ್ಯಾಸೋ ಯಾಜ್ಞವಲ್ಕ್ಯೇನ ಭಾರತ ।
ವೇದಾನಧಿಜಗೌ ಸಾಂಗಾನ್ ಓಂಕಾರೇಣ ತ್ರಿಮಾತ್ರಯಾ ।
ಗುರವೇ ದಕ್ಷಿಣಾಂ ದತ್ತ್ವಾ ತಪಃ ಕರ್ತುಂ ಪ್ರಚಕ್ರಮೇ ॥೧೭೧॥

ಎಲೈ ಭಾರತನೇ ಯಾಜ್ಞವಲ್ಕ್ಯರಿಂದ ಉಪನೀತರಾದ ವ್ಯಾಸರು ತ್ರಿಮಾತ್ರೆಯಿಂದ ಕೂಡಿದ ಓಂಕಾರವನ್ನೂ, ಸಾಂಗವೇದಗಳನ್ನೂ ಅಧ್ಯಯನ ಮಾಡಿದರು. ಗುರುಗಳಿಗೆ ದಕ್ಷಿಣೆಯನ್ನು ಕೊಟ್ಟು ತಪಸ್ಸನ್ನು ಮಾಡಲು ಹೊರಟರು.

ಏವಂ ದ್ವೈಪಾಯನೋ ಜಜ್ಞೇ ಸತ್ಯವತ್ಯಾಂ ಪರಾಶರಾತ್ ।
ದ್ವೀಪೇ ನ್ಯಸ್ತಃ ಸ ಯದ್ ಬಾಲಸ್ತಸ್ಮಾದ್ ದ್ವೈಪಾಯನೋಽಭವತ್
॥೧೭೨॥

ಹೀಗೆ ವ್ಯಾಸರು ಪರಾಶರರಿಂದ ಸತ್ಯವತಿಯಲ್ಲಿ ಜನಿಸಿದರು. ದ್ವೀಪದಲ್ಲಿ ಬಾಲಕರಾಗಿ ಜನಿಸಿದ ಕಾರಣ ಅವರಿಗೆ ದ್ವೈಪಾಯನ ಎಂದು ಹೆಸರು ಬಂದಿತು.

ಪಾದಾಪಸಾರಿಣಂ ಧರ್ಮಂ ವಿದ್ವಾನ್ ಸ ತು ಯುಗೇ ಯುಗೇ ।
ಆಯುಃಶಕ್ತಿಂ ಚ ಮರ್ತ್ಯಾನಾಂ ಯುಗಾದ್ ಯುಗಮವೇಕ್ಷ್ಯ ಚ ॥

ಬ್ರಹ್ಮರ್ಷಿಬ್ರ್ಯಾಹ್ಮಣಾನಾಂ ಚ ತಥಾನುಗ್ರಹಕಾಮ್ಯಯಾ ।
ವಿವ್ಯಾಸ ವೇದಾನ್ ಯಸ್ಮಾಚ್ಚ ತಸ್ಮಾದ್ ವ್ಯಾಸ ಇತಿ ಸ್ಮೃತಃ ॥೧೭೪॥

ಯುಗದಿಂದ ಯುಗಕ್ಕೆ ಧರ್ಮವು ಒಂದು ಪಾದ ಹ್ರಾಸ ಹೊಂದುವುದನ್ನು ಕಂಡು ಹಾಗೆಯೇ ಯುಗದಿಂದ ಯುಗಕ್ಕೆ ಮನುಷ್ಯರ ಆಯುಸ್ಸು ಕಡಿಮೆಯಾಗುವುದನ್ನು ಕಂಡು ಜ್ಞಾನಿಗಳಾದ ಅವರು ಬ್ರಹ್ಮರ್ಷಿಗಳಿಗೂ ಮತ್ತು ಬ್ರಾಹ್ಮಣರಿಗೂ ಅನುಗ್ರಹಮಾಡುವ ಇಚ್ಛೆಯಿಂದ ವೇದಗಳನ್ನು ವಿಭಾಗಮಾಡಿದರು. ಆ ಕಾರಣದಿಂದ ಅವರಿಗೆ ವ್ಯಾಸರು ಎಂಬ ಹೆಸರೂ ಬಂದಿತು.

ತತಃ ಸ ಮಹರ್ಷಿರ್ವಿದ್ವಾಂಛಿಷ್ಯಾನಾಹೂಯ ಧರ್ಮವಿತ್ ।
ಸುಮಂತುಂ ಜೈಮಿನಿಂ ಪೈಲಂ ಶುಕಂ ಚೈವ ಸ್ವಮಾತ್ಮಜಮ್ ॥೧೭೫॥

ಪ್ರಭುರ್ವರಿಷ್ಠೋ ವರದೋ ವೈಶಂಪಾಯನಮೇವ ಚ ।
ವೇದಾನಧ್ಯಾಪಯಾಮಾಸ ಮಹಾಭಾರತಪಂಚಮಾನ್ ।
ಸಂಹಿತಾಸ್ತೈಃ ಪೃಥಕ್ತ್ವೇನ ಭಾರತಸ್ಯ ಪ್ರಕೀರ್ತಿತಾಃ ॥೧೭೬॥

ಅನಂತರ ಜ್ಞಾನಿಗಳೂ, ಮಹರ್ಷಿಗಳೂ, ಧರ್ಮವೇತ್ತರೂ ಆದ ಆ ಮಹರ್ಷಿಗಳು ಸುಮಂತು, ಜೈಮಿನಿ, ಪೈಲ, ತಮ್ಮ ಸುತನಾದ ಶುಕ, ಮತ್ತು ವೈಶಂಪಾಯನರು ಇವರನ್ನು ಕರೆದು ಎಲ್ಲಾ ವೇದಗಳನ್ನು ಮತ್ತು ಮಹಾಭಾರತವನ್ನೂ ಅಧ್ಯಯನ ಮಾಡಿಸಿದರು. ಪ್ರಭುಗಳೂ ಶ್ರೇಷ್ಠರೂ ಮತ್ತು ವರದರೂ ಆದ ವ್ಯಾಸರಿಂದ ಅವರೆಲ್ಲರೂ ಜ್ಞಾನವನ್ನು ಸಂಪಾದಿಸಿದರು. ಅವರೆಲ್ಲರೂ ಅಧ್ಯಯನ ಮಾಡಿದ ಮಹಾಭಾರತವು ಮಹಾಭಾರತದ ಬೇರೆ ಬೇರೆ ಸಂಹಿತೆಗಳೆಂದು ಹೇಳಲ್ಪಡುತ್ತವೆ.

ತತಃ ಸತ್ಯವತೀ ಹೃಷ್ಟಾ ಜಗಾಮ ಸ್ವಂ ನಿವೇಶನಮ್ ।
ತಸ್ಯಾಸ್ತ್ವಯೋಜನಾದ್ ಗಂಧಮಾಜಿಘ್ರಂತಿ ನರಾ ಭುವಿ ।
ದಾಶರಾಜಸ್ತು ತದ್ಗಂಧಮಾಜಿಘ್ರನ್ ಪ್ರೀತಿಮಾವಹತ್ ॥೧೭೭॥

ಅನಂತರ ಸತ್ಯವತಿಯು ಸಂತೋಷದಿಂದ ತನ್ನ ಮನೆಗೆ ಹಿಂದಿರುಗಿದಳು. ಅವಳ ಶರೀರದ ಸುಗಂಧವು ಒಂದು ಯೋಜನದೂರದಿಂದ ಮನುಷ್ಯರಿಗೆ ಆಘ್ರಾಣಿಸಲು ಸಾಧ್ಯವಾಯಿತು. ದಾಶರಾಜನೂ ಸಹ ಆ ಗಂಧವನ್ನು ಆಘ್ರಾಣಿಸಿ ಸಂತೋಷಗೊಂಡನು.

ದಾಶಃ

ತ್ವಾಮಾಹುರ್ಮತ್ಸ್ಯಗಂಧೇತಿ ಕಥಂ ಬಾಲೇ ಸುಗಂಧತಾ ।
ಅಪಾಸ್ಯ ಮತ್ಸ್ಯಗಂಧತ್ವಂ ಕೇನ ದತ್ತಾ ಸುಗಂಧತಾ ॥೧೭೮॥

ಕುಮಾರಿಯೇ ನಿನ್ನನ್ನು ಎಲ್ಲರೂ ಮತ್ಸ್ಯಗಂಧಾ ಎಂದು ಕರೆಯುತ್ತಾರೆ. ಈ ಸುಗಂಧವು ಎಲ್ಲಿಂದ ಬಂದಿತು? ಈ ಮತ್ಸ್ಯಗಂಧವನ್ನು ನಾಶಮಾಡಿ ನಿನಗೆ ಸುಗಂಧವನ್ನು ಕೊಟ್ಟವರು ಯಾರು?

ಸತ್ಯವತೀ

ಶಕ್ತೇಃ ಪುತ್ರೋ ಮಹಾಪ್ರಾಜ್ಞಃ ಪರಾಶರ ಇತಿ ಸ್ಮೃತಃ ।
ನಾವಂ ವಾಹಯಮಾನಾಯಾ ಮಮ ದೃಷ್ಟ್ವಾ ಸುಶಿಕ್ಷಿತಮ್ ॥೧೭೯॥

ಸ ಋಷಿಃ ಪರಮಪ್ರೀತಃ ಯೋಜನಾದ್ ಗಂಧತಾಂ ದದೌ ।
ಋಷೇಃ ಪ್ರಸಾದಂ ದೃಷ್ಟ್ವಾ ತು ಜನಾಃ ಪ್ರೀತಿಮುಪಾಗಮನ್ ।
ಏವಂ ಲಬ್ಧೋ ಮಹಾಗಂಧೋ ನ ರೋಷಂ ಕರ್ತುಮರ್ಹಸಿ ॥೧೮೦॥

ಶಕ್ತಿಋಷಿಗಳ ಮಕ್ಕಳಾದ ಮಹಾಪ್ರಾಜ್ಞರಾದ ಪರಾಶರರೆಂಬುವರು ನಾನು ನಾವೆಯನ್ನು ನಡೆಸುವಾಗ ನನ್ನ ಕೌಶಲವನ್ನು ನೋಡಿ ಪರಮಪ್ರಸನ್ನರಾಗಿ ಯೋಜನದಿಂದ ಆಘ್ರಾಣಿಸಬಹುದಾದ ಗಂಧವನ್ನು ಕೊಟ್ಟರು. ಋಷಿಯ ಅನುಗ್ರಹವನ್ನು ನೋಡಿದ ಜನಗಳು ಬಹಳ ಸಂತೋಷಗೊಂಡರು. ಹೀಗೆ ನನಗೆ ದಿವ್ಯಗಂಧವು ಲಭಿಸಿತು. ನೀನು ಕೋಪಗೊಳ್ಳುವ ಅವಶ್ಯಕತೆಯಿಲ್ಲ.

ವೈಶಂಪಾಯನಃ

ದಾಶರಾಜಸ್ತು ತದ್ವಾಕ್ಯಂ ಪ್ರಶಶಂಸ ನನಂದ ಚ ।
ಏತತ್ ಪವಿತ್ರಂ ಪುಣ್ಯಂ ಚ ವ್ಯಾಸಸಂಭವಮುತ್ತಮಮ್ ।
ಇತಿಹಾಸಮಿಮಂ ಶ್ರುತ್ವಾ ಪ್ರಜಾವಂತೋ ಭವಂತಿ ವೈ ॥೧೮೧॥

ದಾಶರಾಜನು ಮಗಳ ಆ ವಾಕ್ಯವನ್ನು ಕೇಳಿ ಅದನ್ನು ಪ್ರಶಂಸಿಸಿ ಸಂತೋಷ ಪಟ್ಟನು. ಈ ವ್ಯಾಸರ ಜನನದ ಆಖ್ಯಾನವು ಶ್ರೇಷ್ಠವಾದುದು. ಪವಿತ್ರವಾದುದು. ಮತ್ತು ಪುಣ್ಯಪ್ರದವಾದುದು. ಈ ಇತಿಹಾಸವನ್ನು ಕೇಳಿದವರು ನಿಶ್ಚಯವಾಗಿ ಮಕ್ಕಳನ್ನು ಪಡೆಯುತ್ತಾರೆ.

॥ ಇತಿ ಶ್ರೀಮನ್ಮಹಾಭಾರತೇ ಶತಸಹಸ್ರಿಕಾಯಾಂಸಂಹಿತಾಯಾಮಾದಿಪರ್ವಣಿ
ಸಪ್ತಪಂಚಾಶತ್ತಮೋऽಧ್ಯಾಯಃ ॥
॥ ಇತಿ ಸಂಭವಪರ್ವಣಿ ಪಂಚಮೋऽಧ್ಯಾಯಃ ॥

ಇಲ್ಲಿಗೆ ಮಹಾಭಾರತದ ಆದಿಪರ್ವದಲ್ಲಿ ಐವತ್ತೇಳನೆಯ ಅಧ್ಯಾಯ ಮುಗಿಯಿತು.

★★★★★

ಐವತ್ತೆಂಟನೆಯ ಅಧ್ಯಾಯ

(ಸಂಕ್ಷೇಪವಾಗಿ ಭೀಷ್ಮರ ಮತ್ತು ಪಾಂಡವರ ಜನ್ಮಕಥನ.)

ವೈಶಂಪಾಯನಃ

ತತೋ ಭೀಷ್ಮಃ ಶಾಂತನವೋ ಗಂಗಾಯಾಮಮಿತದ್ಯುತಿಃ ।
ವಸುವೀರ್ಯಾತ್ ಸಮಭವನ್ಮಹಾವೀರ್ಯೋ ಮಹಾಯಶಾಃ ॥೧॥

ಅನಂತರ ಅಮಿತಪರಾಕ್ರಮಿಯೂ, ಮಹಾಶೂರನೂ, ಮಹಾಕೀರ್ತಿವಂತನೂ ಆದ ಭೀಷ್ಮನು ಶಂತನುವಿನ ಮಗನಾಗಿ ಎಲ್ಲಾ ವಸುಗಳ ಸಾಮರ್ಥ್ಯವನ್ನು ಪಡೆದುಕೊಂಡು ಗಂಗೆಯಲ್ಲಿ ಅವತಾರ ಮಾಡಿದನು.

ಶೂಲೇ ಪ್ರೋತಃ ಪುರಾಣರ್ಷಿರಚೋರಶ್ಚೋರಶಂಕಯಾ ।
ಆಣಿಮಾಂಡವ್ಯ ಇತಿ ವೈ ವಿಖ್ಯಾತಃ ಸುಮಹಾಯಶಾಃ ॥೨॥

ಪ್ರಖ್ಯಾತರಾದಂತಹ ಮತ್ತು ಮಹಾಕೀರ್ತಿವಂತರಾದಂತಹ ಆಣಿಮಾಂಡವ್ಯ ಎಂಬ ಪ್ರಾಚೀನ ಋಷಿಗಳು ಕಳ್ಳತನವನ್ನು ಮಾಡದಿದ್ದರೂ ಸಹ ಇವನೇ ಕಳ್ಳ ಎಂಬ ಶಂಕೆಯಿಂದ ರಾಜಭಟರು ಅವರನ್ನು ಶೂಲಕ್ಕೆ ಏರಿಸಿದರು.

ಸ ಧರ್ಮಮಾಹೂಯ ಪುರಾ ಮಹರ್ಷಿರಿದಮುಕ್ತವಾನ್ ।
ಇಷೀಕಯಾ ಮಯಾ ಬಾಲ್ಯಾದೇಕಾ ವಿದ್ಧಾ ಶಕುಂತಿಕಾ ॥೩॥

ಕಿಲ್ಬಿಷಂ ತತ್ ಸ್ಮರೇ ಧರ್ಮ ನಾನ್ಯತ್ ಪಾಪಮಹಂ ಸ್ಮರೇ ।
ತನ್ಮೇ ಸಹಸ್ರಸಮಿತಂ ಕಸ್ಮಾನ್ನೇಹಾಜಯತ್ ತಪಃ ॥೪॥

ಆ ಅಣಿಮಾಂಡವ್ಯರು ಯಮಧರ್ಮರಾಜನನ್ನು ಕರೆದು ಹಿಂದೆ ಹೀಗೆ ಇದನ್ನು ಹೇಳಿದರು - ನಾನು ಬಾಲ್ಯದಲ್ಲಿ ಒಂದು ಹಕ್ಕಿಯನ್ನು ಒಂದು ಕಡ್ಡಿಯಿಂದ ಚುಚ್ಚಿದ್ದೆ. ಇದೊಂದರ ಸ್ಮರಣೆ ನನಗಿದೆ. ಇದನ್ನು ಬಿಟ್ಟು ನಾನು ಬೇರೆ ಯಾವ ಪಾಪವನ್ನೂ ಮಾಡಿಲ್ಲ. ನಾನು ಮಾಡಿದ ಸಹಸ್ರ ಸಹಸ್ರ ತಪಸ್ಸುಗಳು ಏಕೆ ಈ ಪಾಪವನ್ನು ಪರಿಹಾರ ಮಾಡಲಿಲ್ಲ?

ಗರೀಯಾನ್ ಬ್ರಾಹ್ಮಣವಧಃ ಸರ್ವಭೂತವಧಾದ್ ಯತಃ ।
ತಸ್ಮಾತ್ ತ್ವಂ ಕಿಲ್ಬಿಷಾದಸ್ಮಾಚ್ಛೂದ್ರಯೋನೌ ಜನಿಷ್ಯಸಿ ॥೫॥

ಬ್ರಾಹ್ಮಣವಧವು ಉಳಿದ ಎಲ್ಲಾ ಪ್ರಾಣಿಗಳ ವಧಕ್ಕಿಂತಲೂ ಘೋರವಾದ ಹೀನಾಯವಾದ ಕರ್ಮ. ಆದ್ದರಿಂದ ಈ ದೋಷದಿಂದ ನೀನು ಶೂದ್ರಯೋನಿಯಲ್ಲಿ ಅವತಾರವನ್ನು ಮಾಡು.

ತೇನ ಶಾಪೇನ ಧರ್ಮೋಽಪಿ ಶೂದ್ರಯೋನಾವಜಾಯತ ।
ವಿದ್ವಾನ್ ವಿದುರರೂಪೇಣ ಧಾರ್ಮಿಕಃ ಕಿಲ್ಬಿಷಾತ್ ತತಃ ॥೬॥

ಈ ದೋಷದಿಂದ ಮತ್ತು ಈ ಶಾಪದಿಂದ ಯಮಧರ್ಮನೂ ಕೂಡ ಶೂದ್ರಯೋನಿಯಲ್ಲಿ ವಿದ್ವಾಂಸನಾದ ವಿದುರನರೂಪದಿಂದ ಧಾರ್ಮಿಕನಾಗಿ ಅವತಾರ ಮಾಡಿದನು.

ಸಂಜಯೋ ಮುನಿಕಲ್ಪಸ್ತು ಜಜ್ಞೇ ಶೂದ್ರೋ ಗವದ್ಗಣಾತ್ ।
ಸೂರ್ಯಾಚ್ಚ ಕುಂತ್ಯಾಂ ಕನ್ಯಾಯಾಂ ಜಜ್ಞೇ ಕರ್ಣೋ ಮಹಾರಥಃ।
ಸಹಜಂ ಕವಚಂ ಬಿಭ್ರತ್ ಕಂಡಲದ್ಯೋತಿತಾನನಃ ॥೭॥

ಋಷಿಗೆ ಸಮಾನವಾಗಿದ್ದ ಸಂಜಯನು ಗವದ್ಗಣನ ಮಗನಾಗಿ ಶೂದ್ರಯೋನಿಯಲ್ಲಿ ಜನಿಸಿದನು. ಕುಂತಿಯು ಇನ್ನೂ ಕನ್ಯೆಯಾಗಿರುವಾಗಲೇ

ಸೂರ್ಯನಿಂದ ಮಹಾರಥನಾದ ಸಹಜವಾದ ಕವಚ ಮತ್ತು ಕುಂಡಲಗಳಿಂದ ಶೋಭಿಸುವ ಮುಖವುಳ್ಳ ಕರ್ಣನನ್ನು ಪಡೆದಳು.

ಅನುಗ್ರಹಾರ್ಥಂ ಲೋಕಾನಾಂ ವಿಷ್ಣುರ್ಲೋಕನಮಸ್ಕೃತಃ ।
ವಸುದೇವಾತ್ತು ದೇವಕ್ಯಾಂ ಪ್ರಾದುರ್ಭೂತೋ ಮಹಾಯಶಾಃ ॥೮॥

ಲೋಕವನ್ನು ಅನುಗ್ರಹಿಸಲು ಸರ್ವಲೋಕನಮಸ್ಕೃತನಾದ ವಿಷ್ಣುವು ವಸುದೇವನಿಂದ ದೇವಕಿಯಲ್ಲಿ ಮಹಾಕೀರ್ತಿವಂತನಾಗಿ ಪ್ರಾದುರ್ಭೂತನಾದನು.

ಅನಾದಿನಿಧನೋ ದೇವಃ ಸ ಕರ್ತಾ ನಕೃತಃ ಪ್ರಭುಃ ।
ಅವ್ಯಕ್ತಂ ತ್ವ ಕ್ಷರಂ ಬ್ರಹ್ಮ ಪ್ರಧಾನಂ ನಿರ್ಗುಣಾತ್ಮಕಮ್ ।
ಆತ್ಮಾನಮವ್ಯಯಂ ಚೈವ ಪ್ರಕೃತೇಃ ಪ್ರಭವಂ ಪರಮ್ ॥೯॥

ಪುರುಷಂ ವಿಶ್ವಕರ್ಮಾಣಂ ಸತ್ಯಯೋನಿಂ ಧ್ರುವಾಕ್ಷರಮ್ ।
ಅನಂತಮಚಲಂ ಮೇರುಂ ಹಂಸಂ ನಾರಾಯಣಂ ಪ್ರಭುಮ್ ॥೧೦॥

ಧಾತಾರಮಜರಂ ದಿವ್ಯಂ ಯಮಾಹುಃ ಪರಮವ್ಯಯಮ್ ।
ಪುರುಷಃ ಸ ವಿಭುಃ ಕರ್ತಾ ಸರ್ವಭೂತಪಿತಾಮಹಃ ।
ಧರ್ಮಸಂಸ್ಥಾಪನಾರ್ಥಾಯ ಪ್ರಜಜ್ಞೇಽಂಧಕವೃಷ್ಣಿಷು ॥೧೧॥

ಅನಾದಿನಿಧನನಾದ ದೇವನು ಎಲ್ಲವನ್ನೂ ಮಾಡುವವನು ಯಾರಿಂದಲೂ ಮಾಡಲ್ಪಡದವನು. ಸರ್ವಸಮರ್ಥನೂ, ಅವ್ಯಕ್ತನೂ, ನಾಶರಹಿತನೂ, ಗುಣಪೂರ್ಣನೂ, ಪ್ರಧಾನನಾದವನೂ, ಪ್ರಕೃತಿಯ ಗುಣತ್ರಯಗಳಿಂದ ವರ್ಜಿತನಾದವನೂ, ಮತ್ತು ಸ್ವಾಮಿಯೆಂದೂ, ನಾಶರಹಿತನೆಂದೂ, ಪ್ರಕೃತಿಗೂ ಕಾರಣನೆಂದೂ, ಷಡ್ಗುಣೈಶ್ವರ್ಯ ಸಂಪನ್ನನೆಂದೂ ಸರ್ವಕರ್ತೃವೆಂದೂ, ಸತ್ಯದ ಉಗಮಸ್ಥಾನವೆಂದೂ, ಪ್ರಣವಪ್ರತಿಪಾದ್ಯನೆಂದೂ, ಅನಂತನೆಂದೂ, ವ್ಯಾಪ್ತನೆಂದೂ, ಲಕ್ಷ್ಮೀದೇವಿಗೂ ಪ್ರೇರಕನೆಂದೂ, ಪರಿಶುದ್ಧ ಸ್ವಭಾವದವನೆಂದೂ, ನಾರಾಯಣನೆಂದೂ, ಸರ್ವಲೋಕಗಳನ್ನು ರಕ್ಷಿಸುವನೆಂದೂ, ದಿವ್ಯಮೂರ್ತಿಯೆಂದೂ, ಸರ್ವೋತ್ತಮನೆಂದು ಯಾರನ್ನು ಹೇಳುತ್ತಾರೆಯೋ, ಅವನೇ ವ್ಯಾಪ್ತನಾಗಿ, ಸರ್ವಕರ್ತೃವಾಗಿ, ಸರ್ವಭೂತಗಳಿಗೆ ಪಿತಾಮಹನೆನಿಸಿಕೊಂಡವನಾಗಿ, ಪೂರ್ಣ-ಷಡ್ಗುಣೈಶ್ವರ್ಯಸಂಪನ್ನನಾಗಿ ಧರ್ಮಸಂಸ್ಥಾಪನವನ್ನು ಮಾಡುವುದಕ್ಕೋಸ್ಕರ ಅಂಧಕ ವೃಷ್ಣಿಗಳ ಕುಲದಲ್ಲಿ ಅವತಾರ ಮಾಡಿದನು.

ಅಸ್ತ್ರಜ್ಞೌ ತು ಮಹಾವೀರ್ಯೌ ಸರ್ವಶಾಸ್ತ್ರವಿಶಾರದೌ ।
ಸಾತ್ಯಕಿಃ ಕೃತವರ್ಮಾ ಚ ನಾರಾಯಣಮನುವ್ರತೌ ।
ಸತ್ಯಕಾದ್ಧೃದಿಕಾಚ್ಚೈವ ಜಜ್ಞಾತೇಽಸ್ತ್ರವಿಶಾರದೌ ॥೧೨॥

ಮಹಾಪರಾಕ್ರಮಶಾಲಿಗಳೂ, ಎಲ್ಲಾ ಶಾಸ್ತ್ರಗಳನ್ನು ತಿಳಿದವರೂ, ಎಲ್ಲಾ ಅಸ್ತ್ರಗಳನ್ನು ತಿಳಿದವರೂ ಆದ ಯಾವಾಗಲೂ ನಾರಾಯಣನ ಭಕ್ತರಾದ ಸಾತ್ಯಕಿ ಮತ್ತು ಕೃತವರ್ಮರು ಸತ್ಯಕ ಮತ್ತು ಹೃದಿಕರಿಂದ ಜನಿಸಿದರು.

ಭರದ್ವಾಜಸ್ಯ ಚ ಸ್ಕನ್ನಂ ದ್ರೋಣ್ಯಾಂ ಶುಕ್ರಮವರ್ಧತ ।
ಮಹರ್ಷೇರುಗ್ರತಪಸಸ್ತಸ್ಮಾದ್ ದ್ರೋಣೋ ವ್ಯಜಾಯತ ॥೧೩॥

ಮಹರ್ಷಿಗಳೂ ಉಗ್ರವಾದ ತಪಸ್ಸನ್ನು ಆಚರಿಸುವವರೂ ಆದ ಭರದ್ವಾಜರ ವೀರ್ಯವು ಒಂದು ಕಲಶದಲ್ಲಿ ಬಿದ್ದು ಅಲ್ಲೇ ಅಭಿವೃದ್ಧಿಯನ್ನು ಹೊಂದಿತು. ಅದರಿಂದ ದ್ರೋಣರು ಜನಿಸಿದರು.

ಗೌತಮಾನ್ನಿಧುನಂ ಜಜ್ಞೇ ಶರಸ್ತಂಬಾಚ್ಚರದ್ವತಃ ।
ಅಶ್ವತ್ಥಾಮ್ನಶ್ಚ ಜನನೀ ಕೃಪಶ್ಚೈವ ಮಹಾರಥಃ ॥೧೪॥

ಗೌತಮವಂಶದವರಾದ ಶರದ್ವಂತರಿಂದ ಅವಳಿಮಕ್ಕಳು ಉಂಟಾದವು. ಅವುಗಳಲ್ಲಿ ಹೆಣ್ಣುಮಗುವು ಅಶ್ವತ್ಥಾಮನ ತಾಯಿಯಾದ ಕೃಪಿ ಮತ್ತು ಗಂಡುಮಗುವು ಮಹಾರಥರಾದ ಕೃಪಾಚಾರ್ಯರು

ಅಶ್ವತ್ಥಾಮಾ ತತೋ ಜಜ್ಞೇ ದ್ರೋಣಾದಸ್ತ್ರಭೃತಾಂ ವರಾತ್ ।
ಧೃಷ್ಟದ್ಯುಮ್ನವಿನಾಶಾಯ ಸೃಷ್ಟೋ ಧಾತ್ರಾ ಮಹಾತ್ಮನಾ ॥೧೫॥

ಅನಂತರ ಅಸ್ತ್ರಧಾರಿಗಳಲ್ಲಿ ಶ್ರೇಷ್ಠರಾದ ದ್ರೋಣರಿಂದ ಮಹಾನುಭಾವರಾದ ಬ್ರಹ್ಮದೇವರು ಧೃಷ್ಟದ್ಯುಮ್ನನ ವಿನಾಶಕ್ಕೆಂದೇ ಸೃಷ್ಟಿಮಾಡಿದ ಅಶ್ವತ್ಥಾಮಾಚಾರ್ಯರು ಜನಿಸಿದರು.

ತಥೈವ ಧೃಷ್ಟದ್ಯುಮ್ನೋಽಪಿ ಸಾಕ್ಷಾದಗ್ನಿಸಮದ್ಯುತಿಃ ।
ವೈತಾನೇ ಕರ್ಮಣಿ ತತಃ ಪಾವಕಾತ್ ಸಮಜಾಯತ ॥೧೬॥

ಹಾಗೆಯೇ ಅಗ್ನಿಗೆ ಸಮಾನವಾದ ಕಾಂತಿಯುಳ್ಳ ಧೃಷ್ಟದ್ಯುಮ್ನನು ಯಜ್ಞಕಾಲದಲ್ಲಿ ಅಗ್ನಿಕುಂಡದಿಂದ ಉದ್ಭವಿಸಿದನು.

ವೀರೋ ದ್ರೋಣವಿನಾಶಾಯ ಧನುಷಾ ಸಹ ವೀರ್ಯವಾನ್ ।
ತಥೈವ ವೇದ್ಯಾಂ ಕೃಷ್ಣಾಪಿ ಜಜ್ಞೇ ತೇಜಸ್ವಿನೀ ಶುಭಾ ॥೧೭॥

ಧೃಷ್ಟದ್ಯುಮ್ನನು ವೀರನಾಗಿ, ಪರಾಕ್ರಮಶಾಲಿಯಾಗಿ, ಧನುಸ್ಸಿನ ಜೊತೆಯಲ್ಲೇ ಜನಿಸಿದನು. ಹಾಗೆಯೇ ಕಾಂತಿಯುಕ್ತಳೂ ಮತ್ತು ಮಂಗಳಸ್ವರೂಪಳೂ ಆದ ದ್ರೌಪದಿಯು ವೇದಿ ಮಧ್ಯದಿಂದ ಜನಿಸಿದಳು.

ವಿಭ್ರಾಜಮಾನಾ ವಪುಷಾ ಬಿಭ್ರತೀ ರೂಪಮುತ್ತಮಮ್ ।
ಪ್ರಹ್ಲಾದಶಿಷ್ಯೋ ನಗ್ನಜಿತ್ ಸುಬಲಶ್ಚಾಭವತ್ ತದಾ ॥೧೮॥

ಅವಳು ಉತ್ತಮರೂಪವನ್ನು ಧರಿಸಿ ಹೊಳೆಯುವ ಶರೀರದಿಂದ ಜನಿಸಿದಳು. ಹಾಗೆಯೇ ಪ್ರಹ್ಲಾದಶಿಷ್ಯನಾದ ನಗ್ನಜಿತ್ ಮತ್ತು ಸುಬಲರೂ ಜನಿಸಿದರು.

ತಸ್ಯ ಪ್ರಜಾऽಧರ್ಮಧಾತ್ರೀ ಜಜ್ಞೇ ದೇವಪ್ರಕೋಪನಾತ್ ।
ಗಾಂಧಾರರಾಜಾತ್ ಪುತ್ರೋऽಭೂಚ್ಛಕುನಿಃ ಸೌಬಲಸ್ತಥಾ ॥೧೯॥

ಗಾಂಧಾರರಾಜನಾದ ಸುಬಲನಿಗೆ ದೇವತೆಗಳಿಗೆಸಗಿದ ದ್ರೋಹದಿಂದ ಅಧರ್ಮವನ್ನೇ ಧರಿಸಿದ ಶಕುನಿಯೆಂಬ ಪುತ್ರನು ಮಗನಾಗಿ ಜನಿಸಿದನು.

ದುರ್ಯೋಧನಸ್ಯ ಮಾತಾ ಚ ಜಜ್ಞಾತೇऽರ್ಥವಿದಾವುಭೌ ।
ಕೃಷ್ಣದ್ವೈಪಾಯನಾಜ್ಜಜ್ಞೇ ಧೃತರಾಷ್ಟ್ರೋ ಜನೇಶ್ವರಃ ।
ಕ್ಷೇತ್ರೇ ವಿಚಿತ್ರವೀರ್ಯಸ್ಯ ಪಾಂಡುಶ್ಚೈವ ಮಹಾಬಲಃ ॥೨೦॥

ಅಲ್ಲಿಯೇ ದುರ್ಯೋಧನನ ತಾಯಿಯಾದ ಗಾಂಧಾರಿಯೂ ಜನಿಸಿದಳು. ಅವರಿಬ್ಬರೂ ಅರ್ಥಶಾಸ್ತ್ರವನ್ನು ಚೆನ್ನಾಗಿ ತಿಳಿದವರು. ವೇದವ್ಯಾಸರಿಂದ ವಿಚಿತ್ರವೀರ್ಯನ ಪತ್ನಿಯರಲ್ಲಿ ಧೃತರಾಷ್ಟ್ರರಾಜನು, ಮಹಾಬಲಿಷ್ಠನಾದ ಪಾಂಡುವೂ ಜನಿಸಿದರು. ಅವರಿಬ್ಬರೂ ಧರ್ಮಾರ್ಥಕುಶಲರು.

ಧರ್ಮಾರ್ಥಕುಶಲೋ ಧೀಮಾನ್ ಮೇಧಾವೀ ವೀತಕಲ್ಮಷಃ ।
ವಿದುರಃ ಶೂದ್ರಯೋನೌ ತು ಜಜ್ಞೇ ದ್ವೈಪಾಯನಾದಪಿ ।
ಪಾಂಡೋಸ್ತು ಜಜ್ಞಿರೇ ಪಂಚ ಪುತ್ರಾ ದೇವಸಮಾಃ ಪೃಥಕ್ ॥೨೧॥

ಮೇಧಾವಿಯೂ, ದೋಷರಹಿತನೂ ಮಹಾಬುದ್ಧಿಶಾಲಿಯೂ ಆದ ವಿದುರನು ಕೃಷ್ಣದ್ವೈಪಾಯನರಿಂದ ಶೂದ್ರಯೋನಿಯಲ್ಲಿ ಜನಿಸಿದನು. ಪಾಂಡುವಿಗೆ ದೇವತೆಗಳಿಗೆ ಸಮಾನರಾದ ಐದು ಮಕ್ಕಳು ಜನಿಸಿದರು.

ದ್ವಯೋಃ ಸ್ತ್ರಿಯೋರ್ಗುಣಜ್ಯೇಷ್ಠ್ಯೇಷಾಮಾಸೀದ್ ಯುಧಿಷ್ಠಿರಃ ।
ಧರ್ಮಾದ್ ಯುಧಿಷ್ಠಿರೋ ಜಜ್ಞೇ ಮಾರುತಾತ್ ತು ವೃಕೋದರಃ ॥

ಕುಂತೀ ಮತ್ತು ಮಾದ್ರಿ ಈ ಇಬ್ಬರು ಪತ್ನಿಯರಲ್ಲಿ ಪಾಂಡುವಿಗೆ ಜನಿಸಿದ ಐದುಮಕ್ಕಳಲ್ಲಿ ಯುಧಿಷ್ಠಿರನು ವಯಸ್ಸಿನಿಂದಲೂ, ಗುಣಗಳಿಂದಲೂ ಜ್ಯೇಷ್ಠನಾದನು. ಯುಧಿಷ್ಠಿರನು ಯಮಧರ್ಮನಿಂದ ಜನಿಸಿದನು. ಭೀಮಸೇನನು ವಾಯುದೇವರಿಂದ ಜನಿಸಿದನು.

ಇಂದ್ರಾದ್ ಧನಂಜಯೋ ಜಜ್ಞೇ ಸರ್ವಶಾಸ್ತ್ರವಿಶಾರದಃ ।
ಜಜ್ಞಾತೇ ರೂಪಸಂಪನ್ನಾವಶ್ವಿಭ್ಯಾಂ ತು ಯಮಾವಪಿ ॥೨೩॥

ಸರ್ವಶಾಸ್ತ್ರವಿಶಾರದನಾದ ಅರ್ಜುನನು ಇಂದ್ರನಿಂದ ಜನಿಸಿದನು. ರೂಪಸಂಪನ್ನರೂ, ಗುರುಶುಶ್ರೂಷಾತತ್ಪರರೂ ಆದ ನಕುಲ-ಸಹದೇವರು ಅವಳಿಮಕ್ಕಳಾಗಿ ಅಶ್ವಿನಿದೇವತೆಗಳಿಂದ ಮಾದ್ರಿಯಲ್ಲಿ ಜನಿಸಿದರು.

ನಕುಲಃ ಸಹದೇವಶ್ಚ ಗುರುಶುಶ್ರೂಷಣೇ ರತೌ ।
ತಥಾ ಪುತ್ರಶತಂ ಜಜ್ಞೇ ಧೃತರಾಷ್ಟ್ರಸ್ಯ ಧೀಮತಃ ॥೨೪॥

ದುರ್ಯೋಧನಪ್ರಭೃತಯೋ ಯುಯುತ್ಸುಃ ಕರುಣಸ್ತಥಾ ।
ತತ್ರ ದುಶ್ಶಾಸನಶ್ಚೈವ ದುಸ್ಸಹಶ್ಚೈವ ಭಾರತ ॥೨೫॥

ದುರ್ಮರ್ಷಣೋ ವಿಕರ್ಣಶ್ಚ ಚಿತ್ರಸೇನೋ ವಿವಿಂಶತಿಃ ।
ಜಯಃ ಸತ್ಯವ್ರತಶ್ಚೈವ ಪುರುಮಿತ್ರಶ್ಚ ಭಾರತ ॥೨೬॥

ಹಾಗೆಯೇ ಧೃತರಾಷ್ಟ್ರನಿಗೆ ಗಾಂಧಾರಿಯಲ್ಲಿ ದುರ್ಯೋಧನ ಮೊದಲಾದ ನೂರು ಮಕ್ಕಳು ಜನಿಸಿದರು. ಹಾಗೆಯೇ ಕರುಣಾಪಾತ್ರನಾದ ಯುಯುತ್ಸುವು ಜನಿಸಿದನು. ಆ ನೂರು ಮಕ್ಕಳಲ್ಲಿ, ದುಶ್ಶಾಸನ, ದುಸ್ಸಹ, ದುರ್ಮರ್ಷಣ, ವಿಕರ್ಣ, ಚಿತ್ರಸೇನ, ವಿವಿಂಶತಿ, ಜಯ, ಸತ್ಯವ್ರತ, ಪುರುಮಿತ್ರ ಮೊದಲಾದವರು ಪ್ರಸಿದ್ಧರಾದವರು

ವೈಶ್ಯಾಪುತ್ರೋ ಯುಯುತ್ಸುಶ್ಚ ಏಕಾದಶಮಹಾರಥಾಃ ।
ಅಭಿಮನ್ಯುಃ ಸುಭದ್ರಾಯಾಮರ್ಜುನಾದಭ್ಯಜಾಯತ ॥೨೭॥

ದುರ್ಯೋಧನಾದಿ ಹತ್ತುಮಕ್ಕಳು ಮತ್ತು ವೈಶ್ಯೆಯಲ್ಲಿ ಜನಿಸಿದ ಯುಯುತ್ಸುವೂ ಸೇರಿ ಹನ್ನೊಂದು ಜನರೂ ಮಹಾರಥರು. ಅರ್ಜುನನಿಗೆ ಸುಭದ್ರೆಯಲ್ಲಿ ಅಭಿಮನ್ಯುವು ಜನಿಸಿದನು.

ಸ್ವಸ್ರೀಯೋ ವಾಸುದೇವಸ್ಯ ಪೌತ್ರಃ ಪಾಂಡೋರ್ಮಹಾತ್ಮನಃ ।
ಪಾಂಡವೇಭ್ಯೋ ಹಿ ಪಂಚಭ್ಯಃ ಕೃಷ್ಣಾಯಾಂ ಪಂಚ ಜಜ್ಞಿರೇ ॥೨೮॥

ಅಭಿಮನ್ಯುವು ಶ್ರೀಕೃಷ್ಣನ ತಂಗಿಯಾದ ಸುಭದ್ರೆಯ ಮಗ. ಮತ್ತು ಮಹಾತ್ಮನಾದ ಪಾಂಡುವಿನ ಪೌತ್ರ. ಪಾಂಡವರಿಗೆ ದ್ರೌಪದಿಯಲ್ಲಿ ಕ್ರಮವಾಗಿ ಐದು ಮಕ್ಕಳು ಜನಿಸಿದರು.

ಕುಮಾರಾ ರೂಪಸಂಪನ್ನಾಃ ಸರ್ವಶಾಸ್ತ್ರವಿಶಾರದಾಃ ।
ಪ್ರತಿವಿಂದ್ಯೋ ಯುಧಿಷ್ಠಿರಾತ್ ಸುತಸೋಮೋ ವೃಕೋದರಾತ್ ॥೨೯॥

ಎಲ್ಲ ಕುಮಾರರೂ ರೂಪಸಂಪನ್ನರೂ ಮತ್ತು ಎಲ್ಲಾ ಶಾಸ್ತ್ರಗಳಲ್ಲೂ ವಿಶಾರದರು. ಯುಧಿಷ್ಠಿರನಿಗೆ ಪ್ರತಿವಿಂದ್ಯ ಎಂಬ ಮಗನು, ಭೀಮಸೇನನಿಗೆ ಸುತಸೋಮನೆಂಬ ಮಗನೂ ಜನಿಸಿದರು.

ಅರ್ಜುನಾಚ್ಛ್ರುತಕೀರ್ತಿಶ್ಚ ಶತಾನೀಕಸ್ತು ನಾಕುಲಿಃ ।
ತಥೈವ ಸಹದೇವಾಚ್ಚ ಶ್ರುತಕರ್ಮಾ ಪ್ರತಾಪವಾನ್ ॥೩೦॥

ಅರ್ಜುನನಿಗೆ ಶ್ರುತಕೀರ್ತಿಯೆಂಬ ಮಗನೂ, ನಕುಲನಿಗೆ ಶತಾನೀಕ ಎಂಬ ಮಗನೂ, ಹಾಗೆಯೇ ಸಹದೇವನಿಗೆ ಪ್ರತಾಪಶಾಲಿಯಾದ ಶ್ರುತಕರ್ಮನೆಂಬ ಮಗನೂ ಜನಿಸಿದರು.

ಹಿಡಿಂಬಾಯಾಂ ತು ಭೀಮಸ್ಯ ವನೇ ಜಜ್ಞೇ ಘಟೋತ್ಕಚಃ ।
ಶಿಖಂಡೀ ದ್ರುಪದಾಜ್ಜಜ್ಞೇ ಕನ್ಯಾ ಪುತ್ರತ್ವಮಾಗತಾ ॥೩೧॥

ಭೀಮಸೇನನಿಗೆ ಕಾಡಿನಲ್ಲಿ ಹಿಡಿಂಬೆಯಲ್ಲಿ ಘಟೋತ್ಕಚನು ಜನಿಸಿದನು. ಶಿಖಂಡಿಯು ದ್ರುಪದನ ಮಗಳಾಗಿ ಜನಿಸಿ ಅನಂತರ ಪುಂಸ್ತ್ವವನ್ನು ಪಡೆದು ಮಗನಾದನು.

ಯಾಂ ಯಕ್ಷಃ ಪುರುಷಂ ಚಕ್ರೇ ಸ್ಥಾಣುಪ್ರಿಯಚಿಕೀರ್ಷಯಾ ।
ಕುರೂಣಾಂ ವಿಗ್ರಹೇ ತಸ್ಮಿನ್ ಸಮಾಗಚ್ಛನ್ ಬಹೂನ್ಯಥ ।
ರಾಜ್ಞಾಂ ಶತಸಹಸ್ರಾಣಿ ಯೋತ್ಸ್ಯಮಾನಾನಿ ಸಂಯುಗೇ ॥೩೨॥

ದ್ರುಪದನ ಆ ಮಗಳನ್ನು ಗಂಧರ್ವನು ರುದ್ರದೇವರಿಗೆ ಸಂತೋಷವನ್ನುಂಟುಮಾಡುವ ಸಲುವಾಗಿ ಪುರುಷನನ್ನಾಗಿ ಮಾಡಿದನು. ಕುರುಪಾಂಡವರಿಗೆ ಯುದ್ಧವಾದಾಗ ಅನೇಕ ಶತಸಹಸ್ರ ರಾಜರುಗಳು ಮತ್ತು ಕ್ಷತ್ರಿಯರು ಯುದ್ಧದಲ್ಲಿ ಒಟ್ಟಿಗೆ ಸೇರಿದರು.

ತೇಷಾಮಪರಿಮೇಯಾನಿ ನಾಮಧೇಯಾನಿ ಸರ್ವಶಃ ।
ನ ಶಕ್ಯಂ ಪರಿಸಂಖ್ಯಾತುಂ ವರ್ಷಾಣಾಮರ್ಬುದೈರಪಿ ।
ಏತೇ ತು ಕೀರ್ತಿತಾ ಮುಖ್ಯಾ ಯೈರಾಖ್ಯಾನಮಿದಂ ತತಮ್ ॥೩೩॥

ಅನಾದಿಕಾಲದಿಂದ ಅನೇಕ ಕಲ್ಪಗಳಲ್ಲಿ ಜರುಗಿದ ಮಹಾಭಾರತ ಯುದ್ಧದಲ್ಲಿ ಪಾಲ್ಗೊಂಡವರ ಹೆಸರುಗಳನ್ನು ಎಣಿಸಲು ಅನೇಕ ಅರ್ಬುದವರ್ಷಗಳಾದರೂ ಸಾಧ್ಯವಿಲ್ಲ. (ಒಂದು ಅರ್ಬುದ ಎಂದರೆ ಹತ್ತುಕೋಟಿ ವರ್ಷ ಇಂತಹ ಅನೇಕ ಅರ್ಬುದ್ಗಳು) ನಾನು ಹೇಳಿದ ಈ ವ್ಯಕ್ತಿಗಳು ಮುಖ್ಯರಾದವರು. ಇವರ ಚರಿತೆಯಿಂದ ಮಹಾಭಾರತದ ಆಖ್ಯಾನವು ತುಂಬಿದೆ.

॥ ಇತಿ ಶ್ರೀಮನ್ಮಹಾಭಾರತೇ ಶತಸಹಸ್ರಿಕಾಯಾಂಸಂಹಿತಾಯಾಮಾದಿಪರ್ವಣಿ
ಅಷ್ಟಪಂಚಾಶತ್ತಮೋऽಧ್ಯಾಯಃ ॥
॥ ಇತಿ ಸಂಭವಪರ್ವಣಿ ಷಷ್ಠೋऽಧ್ಯಾಯಃ ॥

ಇಲ್ಲಿಗೆ ಮಹಾಭಾರತದ ಆದಿಪರ್ವದಲ್ಲಿ ಐವತ್ತೆಂಟನೆಯ ಅಧ್ಯಾಯ ಮುಗಿಯಿತು.

★★★★★

ಐವತ್ತೊಂಭತ್ತನೆಯ ಅಧ್ಯಾಯ

(ಭೂಭಾರ ಹರಣವನ್ನು ಮಾಡಲು ಅವತಾರ ಮಾಡುವಂತೆ ನಾರಾಯಣನಲ್ಲಿ ಇಂದ್ರನ ಪ್ರಾರ್ಥನೆ.)

ಜನಮೇಜಯಃ

ಯ ಏತೇ ಕೀರ್ತಿತಾ ಬ್ರಹ್ಮನ್ ಯೇ ಚಾನ್ಯೇ ನಾನುಕೀರ್ತಿತಾಃ ।
ಸಮ್ಯಕ್ ತಾನ್ ಜ್ಞಾತುಮಿಚ್ಛಾಮಿ ರಾಜ್ಞಶ್ಚಾನ್ಯಾನ್ ಸುವರ್ಚಸಃ ॥೧॥

ಯದರ್ಥಮಿಹ ಸಂಭೂತಾ ದೇವಕಲ್ಪಾ ಮಹಾರಥಾಃ ।
ಭುವಿ ತಾನ್ ಮೇ ಮಹಾಭಾಗ ಸಮ್ಯಗಾಖ್ಯಾತುಮರ್ಹಸಿ ॥೨॥

ಎಲೈ ಬ್ರಾಹ್ಮಣರಾದ ವೈಶಂಪಾಯನರೇ, ಇದುವರೆಗೆ ಯಾರ ಅವತಾರಗಳನ್ನು ಹೇಳಿದ್ದಾರೋ, ಮತ್ತು ಯಾರ ಜನ್ಮಗಳನ್ನು ಹೇಳಿಲ್ಲವೋ, ಅಂತಹ ಎಲ್ಲಾ ವರ್ಚಸ್ವಿಗಳಾದ ಬೇರೆ ರಾಜರ ವಿಷಯವನ್ನು ನಾನು ಇನ್ನೂ ಚೆನ್ನಾಗಿ ತಿಳಿದುಕೊಳ್ಳಲು ಇಚ್ಛಿಸುತ್ತೇನೆ. ಎಲೈ ಮಹಾನುಭಾವನೇ ದೇವತೆಗಳಿಗೆ ಸಮಾನರಾದ ಆ ಮಹಾರಥರು ಈ ಭೂಮಿಯಲ್ಲಿ ಯಾವ ಕಾರಣಕ್ಕಾಗಿ ಜನ್ಮತಾಳಿದರೆಂದು ನನಗೆ ಇನ್ನೂ ವಿಸ್ತಾರವಾಗಿ ತಿಳಿಯಬೇಕು.

ವೈಶಂಪಾಯನಃ

ರಹಸ್ಯಂ ಯದಿದಂ ರಾಜನ್ ದೇವಾನಾಮೃಷಿತಃ ಶ್ರುತಮ್ ।
ತತ್ತು ತೇ ಕಥಯಿಷ್ಯಾಮಿ ನಮಸ್ಕೃತ್ವಾ ಸ್ವಯಂಭುವೇ ॥೩॥

ಎಲೈ ರಾಜನೇ ಇದು ದೇವರಹಸ್ಯ , ನಾನು ಇದನ್ನು ಋಷಿಗಳಿಂದ ಕೇಳಿದ್ದೇನೆ. ದೇವರಿಗೆ ಮತ್ತು ಬ್ರಹ್ಮದೇವರಿಗೆ ನಮಸ್ಕರಿಸಿ ನಾನು ಆ ವಿಷಯವನ್ನು ನಿನಗೆ ನಿರೂಪಿಸುತ್ತೇನೆ.

ತ್ರಿಃ ಸಪ್ತಕೃತ್ವಃ ಪೃಥಿವೀಂ ಕೃತ್ವಾ ನಿಃಕ್ಷತ್ರಿಯಾಂ ಪುರಾ ।
ಜಾಮದಗ್ನ್ಯಸ್ತಪಸ್ತೇಪೇ ಮಹೇಂದ್ರೇ ಪರ್ವತೋತ್ತಮೇ ॥೪॥

ಜಮದಗ್ನಿಗಳ ಮಗನಾದ ಪರಶುರಾಮದೇವರು ಹಿಂದೆ ಇಪ್ಪತ್ತೊಂದು ಬಾರಿ ಭೂಮಿಯಲ್ಲಿ ಕ್ಷತ್ರಿಯರನ್ನು ಸಂಹರಿಸಿ, ಪರ್ವತಶ್ರೇಷ್ಠವಾದ ಮಹೇಂದ್ರಪರ್ವತಕ್ಕೆ ಹೋಗಿ, ತಪಸ್ಸನ್ನು ಮಾಡಿದರು.

ತದಾ ನಿಃಕ್ಷತ್ರಿಯೇ ಲೋಕೇ ಭಾರ್ಗವೇಣ ಕೃತೇ ಸತಿ ।
ಬ್ರಾಹ್ಮಣಾನ್ ಕ್ಷತ್ರಿಯಾ ರಾಜನ್ ಗರ್ಭಾರ್ಥಿನ್ಯೋಽಭಿಚಕ್ರಮುಃ ॥೫॥

ಎಲೈ ರಾಜನೇ ಪರಶುರಾಮದೇವರು ಹೀಗೆ ಭೂಮಿಯಲ್ಲಿ ಕ್ಷತ್ರಿಯರನ್ನು ಸಂಹಾರ ಮಾಡಿದ ಮೇಲೆ ಕ್ಷತ್ರಿಯಸ್ತ್ರೀಯರು ಗರ್ಭಧಾರಣೆಯನ್ನು ಉದ್ದೇಶಿಸಿ ಬ್ರಾಹ್ಮಣರನ್ನು ಸಮೀಪಿಸಿದರು.

ತಾಭಿಃ ಸಹ ಸಮಾಪೇತುರ್ಬ್ರಾಹ್ಮಣಾಃ ಸಂಶಿತವ್ರತಾಃ ।
ಋತಾವೃತೌ ನರವ್ಯಾಘ್ರ ನ ಕಾಮಾನ್ನಾನೃತೌ ತಥಾ ॥೬॥

ಎಲೈ ನರೇಂದ್ರನೇ, ಒಳ್ಳೆಯ ವ್ರತಧಾರಿಗಳಾದ ಬ್ರಾಹ್ಮಣರು ಆ ಕ್ಷತ್ರಿಯಸ್ತ್ರೀಯರ ಜೊತೆಯಲ್ಲಿ ಪ್ರತಿ ಋತುಕಾಲದಲ್ಲಿ ಮಾತ್ರ ಸಮಾಗಮವನ್ನು ಮಾಡಿದರು. ಕಾಮದಿಂದಲಾಗಲೀ, ಋತುಕಾಲವನ್ನು ಬಿಟ್ಟು ಬೇರೆ ಕಾಲದಲ್ಲಿ ಆಗಲೀ, ಸಮಾಗಮವನ್ನು ಮಾಡಲಿಲ್ಲ.

ತೇಭ್ಯಸ್ತು ಲೇಭಿರೇ ಗರ್ಭಾನ್ ಕ್ಷತ್ರಿಯಾಸ್ತಾಃ ಸಹಸ್ರಶಃ ।
ತತಃ ಸುಷುವಿರೇ ರಾಜನ್ ಕ್ಷತ್ರಿಯಾನ್ ವೀರಸತ್ತಮಾನ್ ॥೭॥

ಅನಂತರ ಆ ಕ್ಷತ್ರಿಯ ಸ್ತ್ರೀಯರು ಸಹಸ್ರ ಸಂಖ್ಯೆಯಲ್ಲಿ ಬ್ರಾಹ್ಮಣರಿಂದ ಗರ್ಭವನ್ನು ಧರಿಸಿದರು. ಎಲೈ ರಾಜನೇ ಅನಂತರ ಕಾಲಕ್ರಮದಲ್ಲಿ ವೀರಶ್ರೇಷ್ಠರಾದ ಕ್ಷತ್ರಿಯರನ್ನು ಪ್ರಸವಿಸಿದರು.

ಕುಮಾರಾಂಶ್ಚ ಕುಮಾರೀಶ್ಚ ಪುನಃ ಕ್ಷತ್ರಿಯವೃದ್ಧಯೇ ।
ಏವಂ ತದ್ ಬ್ರಾಹ್ಮಣೈಃ ಕ್ಷತ್ರಂ ಕ್ಷತ್ರಿಯಾಸು ತಪಸ್ವಿಭಿಃ ॥೮॥

ಹಾಗೇ ಪಡೆದ ಮಕ್ಕಳು ಪುನಃ ಕ್ಷತ್ರಿಯಜಾತಿಯ ಅಭಿವೃದ್ಧಿಗಾಗಿ ಕುಮಾರರೂ ಮತ್ತು ಕುಮಾರಿಯರೂ ಆಗಿದ್ದರು. ಹೀಗೆ ಕ್ಷತ್ರಿಯಸ್ತ್ರೀಯರಲ್ಲಿ ತಪಸ್ವಿಗಳಾದ ಬ್ರಾಹ್ಮಣರಿಂದ ಹುಟ್ಟಿದ ಆ ಕ್ಷತ್ರಿಯ ಕುಲವು ಧರ್ಮದಿಂದಲೂ, ದೀರ್ಘಾಯುಷ್ಯದಿಂದಲೂ ಕೂಡಿ ಅಭಿವೃದ್ಧಿಯನ್ನು ಹೊಂದಿತು.

ಜಾತಮೃಧ್ಯತ ಧರ್ಮೇಣ ಸುದೀರ್ಘೇಣಾಯುಷಾऽನ್ವಿತಮ್ ।
ಚತ್ವಾರೋऽಪಿ ತದಾ ವರ್ಣಾ ಬಭೂವುರ್ಬ್ರಾಹ್ಮಣೋತ್ತಮಾಃ ।
ಅಭ್ಯಗಚ್ಛನ್ ಋತೌ ನಾರೀಂ ನಾಕಾಮಾಂ ನಾನೃತೌ ತಥಾ ॥೯॥

ಆಗ ನಾಲ್ಕುವರ್ಣಗಳು ಇದ್ದು, ಬ್ರಾಹ್ಮಣರು ಪೂಜ್ಯಸ್ಥಾನದಲ್ಲಿದ್ದರು. ಯಾವ ಪುರುಷನೂ ಋತುಕಾಲವನ್ನು ಬಿಟ್ಟು, ಬೇರೆ ಕಾಲದಲ್ಲಿಯಾಗಲೀ, ಅಥವಾ ಕಾಮವಿಲ್ಲದಿದ್ದಾಲಾಗಲೀ ತಮ್ಮ ಪತ್ನಿಯ ಸಮಾಗಮವನ್ನು ಮಾಡುತ್ತಿರಲಿಲ್ಲ.

ತಥೈವಾನ್ಯಾನಿ ಭೂತಾನಿ ತಿರ್ಯಗ್ಯೋನಿಗತಾನ್ಯಪಿ ।
ಋತೌ ಹಿ ದಾರಾನ್ ಗಚ್ಛಂತಿ ತದಾ ಸ್ಮ ಭರತರ್ಷಭ ॥೧೦॥

ಎಲೈ ಭರತಶ್ರೇಷ್ಠನೇ ಆಕಾಲದಲ್ಲಿ ತಿರ್ಯಗ್ ಯೋನಿಯಲ್ಲಿರುವ ಪ್ರಾಣಿಗಳೂ ಸಹ ಆ ಸಮಯದಲ್ಲಿ ಋತುಕಾಲವನ್ನು ಬಿಟ್ಟು ಬೇರೆ ಕಾಲದಲ್ಲಿ ಸಾಮಾಗಮವನ್ನು ಮಾಡುತ್ತಿರಲಿಲ್ಲ.

ತತೋऽವರ್ಧಂತ ಧರ್ಮೇಣ ಸಹಸ್ರಶತಜೀವಿನಃ ।
ತಾಃ ಪ್ರಜಾಃ ಪೃಥಿವೀಪಾಲ ಧರ್ಮವ್ರತಪರಾಯಣಾಃ ।
ಆಧಿಭಿರ್ವ್ಯಾಧಿಭಿಶ್ಚೈವ ವಿಮುಕ್ತಾಃ ಶತಶೋ ನರಾಃ ॥೧೧॥

ಎಲೈ ಪೃಥಿವೀ ಪಾಲನೇ ಆ ಪ್ರಜೆಗಳು ಶತಸಹಸ್ರ ವರ್ಷಜೀವಿಗಳಾಗಿ, ಧರ್ಮವ್ರತ ಪರಾಯಣರಾಗಿ, ಶಾರೀರ ಮತ್ತು ಮಾನಸ ರೋಗಗಳಿಂದ ಮುಕ್ತರಾಗಿ, ನೂರಾರು ಸಂಖ್ಯೆಯಲ್ಲಿ ಅಭಿವೃದ್ಧಿಯನ್ನು ಹೊಂದಿದರು.

ಅಥೇಮಾಂ ಸಾಗರೋಪಾಂತಾಂ ನರೇಂದ್ರೇಂದ್ರ ಧರಾಂ ಕಿಲ ।
ಅಧ್ಯತಿಷ್ಠತ್ ಪುನಃ ಕ್ಷತ್ರಂ ಸಶೈಲವನಕಾನನಾಮ್ ॥೧೨॥

ಎಲೈ ರಾಜಶ್ರೇಷ್ಠನಾದವನೇ ಅನಂತರ ಸಾಗರಮೇಖಲೆಯಾದ ವನ ಮತ್ತು ಪರ್ವತಗಳಿಂದ ಕೂಡಿರುವ ಈ ಭೂಮಿಯನ್ನು ಕ್ಷತ್ರಿಯರು ಪುನಃ ಆಳಿದರು.

ಪ್ರಶಾಸತಿ ಪುನಃ ಕ್ಷತ್ರೇ ಧರ್ಮೇಣೇಮಾಂ ವಸುಂಧರಾಮ್ ।
ಬ್ರಾಹ್ಮಣಾದ್ಯಾಸ್ತತೋ ವರ್ಣಾ ಲೇಭಿರೇ ಮುದಮುತ್ತಮಾಮ್ ॥೧೩॥

ಪುನಃ ಕ್ಷತ್ರಿಯರು ಈ ಭೂಮಿಯನ್ನು ಧರ್ಮದಿಂದ ಆಳುತ್ತಿರಲು ಬ್ರಾಹ್ಮಣಾದಿ ಎಲ್ಲ ವರ್ಣಗಳು ಬಹಳ ಸಂತೋಷವನ್ನು ಹೊಂದಿದವು.

ಕಾಮಕ್ರೋಧೋದ್ಭವಾನ್ ದೋಷಾನ್ ನಿರಸ್ಯ ಚ ನರಾಧಿಪಾಃ ।
ಧರ್ಮೇಣ ದಂಡಂ ದಂಡ್ಯೇಷು ವಿತರಂತೋಽನ್ವಪಾಲಯನ್ ॥೧೪॥

ರಾಜರುಗಳು ಕಾಮಕ್ರೋಧಗಳಿಂದ ಉಂಟಾಗುವ ವೈಶಮ್ಯ ಪಕ್ಷಪಾತ ಮೊದಲಾದ ದೋಶಗಳನ್ನು ಬಿಟ್ಟು, ಶಿಕ್ಷೆಗೆ ಅರ್ಹರಾದವರಿಗೆ ಧರ್ಮಶಾಸ್ತ್ರಕ್ಕೆ ಅನುಗುಣವಾಗಿ ಶಿಕ್ಷೆಯನ್ನು ಕೊಡುತ್ತಾ ಭೂಮಿಯನ್ನು ಆಳಿದರು.

ತಥಾ ಧರ್ಮಪರೇ ಕ್ಷತ್ರೇ ಸಹಸ್ರಾಕ್ಷಃ ಶತಕ್ರತುಃ ।
ಸ್ವಾದು ದೇಶೇ ಚ ಕಾಲೇ ಚ ಹವಿಷಾऽऽಪ್ಯಾಯಯನ್ ಪ್ರಜಾಃ ॥೧೫॥

ಕ್ಷತ್ರಿಯರು ಧರ್ಮಪರರಾಗಿದ್ದ ಆ ಕಾಲದಲ್ಲಿ ಶತಕ್ರತುವಾದ ಇಂದ್ರನು ಯೋಗ್ಯವಾದ ದೇಶ ಮತ್ತು ಕಾಲಗಳಲ್ಲಿ ಮಧುರವಾದ ಹವಿಸ್ಸನ್ನು ನೀಡಿ ಪ್ರಜೆಗಳನ್ನು ಸಂತೋಷ ಪಡಿಸಿದನು.

ನ ಬಾಲ ಏವ ಮ್ರಿಯತೇ ತದಾ ಕಶ್ಚಿನ್ನರಾಧಿಪ ।
ನ ಚ ಸ್ತ್ರಿಯಂ ಪ್ರಜಾನಾತಿ ಕಶ್ಚಿದಪ್ರಾಪ್ತಯೌವನಾಮ್ ॥೧೬॥

ಎಲೈ ರಾಜನೇ, ಆ ಕಾಲದಲ್ಲಿ ಯಾರೂ ಬಾಲ್ಯದಲ್ಲಿ ಮೃತರಾಗುತ್ತಿರಲಿಲ್ಲ. ಮತ್ತು ಪ್ರೌಢಳಾಗದ ಕನ್ಯೆಯ ಮೇಲೆ ಯಾರೂ ಅತ್ಯಾಚಾರ ಮಾಡುತ್ತಿರಲಿಲ್ಲ.

ಏವಮಾಯುಷ್ಮತೀಭಿಸ್ತು ಪ್ರಜಾಭಿರ್ಭರತರ್ಷಭ ।
ಇಯಂ ಸಾಗರಪರ್ಯಂತಾ ಸಮಾಪೂರ್ಯತ ಮೇದಿನೀ ॥೧೭॥

ಎಲೈ ಭರತಶ್ರೇಷ್ಠನೇ, ಹೀಗೆ ದೀರ್ಘಾಯುಷ್ಯವುಳ್ಳ ಪ್ರಜೆಗಳಿಂದ ಸಾಗರಪರ್ಯಂತವಾದ ಈ ಭೂಮಿಯು ತುಂಬಿಹೋಯಿತು.

ಈಜಿರೇ ಚ ಮಹಾಯಜ್ಞೈಃ ಕ್ಷತ್ರಿಯಾ ಭೂರಿದಕ್ಷಿಣೈಃ ।
ಸಾಂಗೋಪನಿಷದಾನ್ ವೇದಾನ್ ವಿಪ್ರಾಶ್ಚಾಧೀಯಿರೇ ತದಾ ॥೧೮॥

ಕ್ಷತ್ರಿಯರು ಬಹಳ ದಕ್ಷಿಣೆಗಳನ್ನು ಕೊಟ್ಟು, ಮಹಾಯಜ್ಞಗಳನ್ನು ಆಚರಿಸಿದರು. ಆಗ ಬ್ರಾಹ್ಮಣರು ವೇದ, ವೇದಾಂಗ ಮತ್ತು ಉಪನಿಷತ್ತುಗಳನ್ನು ಅಧ್ಯಯನ ಮಾಡುತ್ತಿದ್ದರು.

ನ ಚ ವಿಕ್ರೀಣತೇ ಬ್ರಹ್ಮ ಬ್ರಾಹ್ಮಣಾಶ್ಚ ತದಾ ನೃಪ ।
ನ ಚ ಶೂದ್ರಸಮಭ್ಯಾಶೇ ವೇದಾನುಚ್ಚಾರಯಂತ್ಯುತ ॥೧೯॥

ಎಲೈ ರಾಜನೇ, ಬ್ರಾಹ್ಮಣರು ಆ ಕಾಲದಲ್ಲಿ ಎಂದೂ ಹಣಕ್ಕಾಗಿ ವೇದವನ್ನು ಮಾರುತ್ತಿರಲಿಲ್ಲ, ಮತ್ತು ಶೂದ್ರರ ಸಮೀಪದಲ್ಲಿದ್ದಾಗ ವೇದಗಳ ಉಚ್ಚಾರಣೆಯನ್ನೂ ಮಾಡುತ್ತಿರಲಿಲ್ಲ.

ಕಾರಯಂತಃ ಕೃಷಿಂ ಗೋಭಿಸ್ತಥಾ ವೈಶ್ಯಾಃ ಕ್ಷಿತಾವಿಹ ।
ನ ಗಾಂ ಯುಂಜಂತಿ ಧುರಿ ಕೃಶಾಂಗಾಂ ಚಾಪ್ಯಜೀವಯನ್ ॥೨೦॥

ಎತ್ತುಗಳಿಂದ ಭೂಮಿಯಲ್ಲಿ ಕೃಷಿಯನ್ನು ಮಾಡುವ ವೈಶ್ಯರು ಹಸುವನ್ನು ಎಂದೂ ನೊಗಕ್ಕೆ ಕಟ್ಟುತ್ತಿರಲಿಲ್ಲ. ಮತ್ತು ಕೃಶವಾದ ಹಸುಗಳನ್ನು ಪಾಲಿಸುತ್ತಿದ್ದರು.

ಫೇನಪಾಂಶ್ಚ ತದಾ ವತ್ಸಾನ್ ನ ದುಹಂತಿ ಸ್ಮ ಮಾನವಾಃ ।
ನ ಕೂಟಮಾನೈರ್ವಣಿಜಃ ಪಣ್ಯಂ ವಿಕ್ರೀಣತೇ ತದಾ ॥೨೧॥

ಹಸುಗಳ ಕರುಗಳು ಚಿಕ್ಕದಾಗಿದ್ದು ಇನ್ನೂ ಹಾಲಿನ ನೊರೆಯನ್ನು ಮಾತ್ರ ಕುಡಿಯುತ್ತಿರುವಾಗ ಮನುಷ್ಯರು ಆ ಹಸುಗಳಿಂದ ಹಾಲನ್ನು ಕರೆಯುತ್ತಿರಲಿಲ್ಲ. ಆ ಕಾಲದಲ್ಲಿ ವರ್ತಕರು ಮೋಸದ ಅಳತೆಯಿಂದ ಎಂದೂ ವ್ಯಾಪಾರ ಮಾಡುತ್ತಿರಲಿಲ್ಲ.

ಕರ್ಮಾಣಿ ಚ ನರವ್ಯಾಘ್ರ ಧರ್ಮೋಪೇತಾನಿ ಮಾನವಾಃ ।
ಧರ್ಮಮೇವಾನುಪಶ್ಯಂತಶ್ಚಕ್ರುರ್ಧರ್ಮಪರಾಯಣಾಃ ॥೨೨॥

ಎಲೈ ನರೇಂದ್ರನೇ, ಮಾನವರು ಧರ್ಮದ ಒಂದೇ ದೃಷ್ಟಿಯುಳ್ಳವರಾಗಿ ಧರ್ಮಪರಾಯಣರಾಗಿ, ಧರ್ಮದಿಂದ ಯುಕ್ತವಾದ ಕರ್ಮವನ್ನು ಮಾತ್ರ ಮಾಡುತ್ತಿದ್ದರು.

ಸ್ವಕರ್ಮನಿರತಾಶ್ಚಾಸನ್ ಸರ್ವೇ ವರ್ಣಾ ನರಾಧಿಪ ।
ಏವಂ ತದಾ ನರವ್ಯಾಘ್ರ ಧರ್ಮೋ ನ ಹ್ರಸತೇ ಕ್ವಚಿತ್ ॥೨೩॥

ಎಲೈ ನರಾಧಿಪನೇ ಆಗ ಎಲ್ಲಾ ವರ್ಣದವರೂ ತಮ್ಮ ತಮ್ಮ ವರ್ಣಕ್ಕೆ ಉಚಿತವಾದ ಕರ್ಮಗಳನ್ನೇ ಮಾಡುತ್ತಿದ್ದರು. ಎಲೈ ನರೇಂದ್ರನೇ ಆ ಕಾರಣದಿಂದ ಆಗ ಧರ್ಮಕ್ಕೆ ಹ್ರಾಸವುಂಟಾಗಲಿಲ್ಲ.

ಕಾಲೇ ಗಾವಃ ಪ್ರಸೂಯಂತೇ ನಾರ್ಯಶ್ಚ ಭರತರ್ಷಭ ।
ಫಲಂತ್ಯೃತುಷು ವೃಕ್ಷಾಶ್ಚ ಪುಷ್ಪಾಣಿ ಚ ಫಲಾನಿ ಚ ॥೨೪॥

ಎಲೈ ಭರತಶ್ರೇಷ್ಠನೇ ಗೋವುಗಳು ಮತ್ತು ಸ್ತ್ರೀಯರು ಸರಿಯಾದ ಕಾಲದಲ್ಲಿ ಪ್ರಸವಿಸುತ್ತಿದ್ದರು. ವೃಕ್ಷಗಳು ಋತುಕಾಲಕ್ಕೆ ಸರಿಯಾಗಿ ಪುಷ್ಪಗಳನ್ನು ಮತ್ತು ಫಲಗಳನ್ನು ಕೊಡುತ್ತಿದ್ದವು.

ಏವಂ ಕೃತಯುಗೇ ಸಮ್ಯಗ್ ವರ್ತಮಾನೇ ತದಾ ನೃಪ ।
ಆಪೂರ್ಯತ ಮಹೀ ಕೃತ್ಸ್ನಾ ಪ್ರಾಣಿಭಿರ್ಬಹುಭಿರ್ಭೃಶಮ್ ॥೨೫॥

ಎಲೈ ರಾಜನೇ ಹೀಗೆ ಕೃತಯುಗವು ಚೆನ್ನಾಗಿ ಪ್ರತಿಷ್ಠಿತವಾಗಿದ್ದ ಆ ಕಾಲದಲ್ಲಿ ಭೂಮಿಯೆಲ್ಲವೂ ಬಹುವಿಧಪ್ರಾಣಿಗಳಿಂದ ತುಂಬಿಹೋಯಿತು.

ತತಃ ಸಮುದಿತೇ ಲೋಕೇ ಮಾನುಷೈರ್ಭರತರ್ಷಭ ।
ಅಸುರಾ ಜಜ್ಞಿರೇ ಕ್ಷೇತ್ರೇ ರಾಜ್ಞಾಂ ಮನುಜಪುಂಗವ ॥೨೬॥

ಎಲೈ ಭರತರ್ಷಭನೇ, ಮನುಜಶ್ರೇಷ್ಠನೇ ಹೀಗೆ ಮನುಷ್ಯರು ಉನ್ನತಸ್ಥಿತಿಯಲ್ಲಿದ್ದಾಗ ಅಸುರರು ರಾಜಪತ್ನಿಯರಲ್ಲಿ ಜನಿಸಿದರು.

ಆದಿತ್ಯೈರ್ಹಿ ತದಾ ದೈತ್ಯಾ ಬಹುಶೋ ನಿರ್ಜಿತಾ ಯುಧಿ ।
ಐಶ್ವರ್ಯಾದ್ ಭ್ರಂಶಿತಾಶ್ಚೈವ ಸಂಬಭೂವುಃ ಕ್ಷಿತಾವಿಹ ॥೨೭॥

ದೇವತೆಗಳಿಂದ ಅನೇಕ ಬಾರಿ ಯುದ್ಧದಲ್ಲಿ ಪರಾಜಿತರಾಗಿ ಐಶ್ವರ್ಯಭ್ರಷ್ಟರಾದ ದೈತ್ಯರು ಈ ಭೂಮಿಯಲ್ಲಿ ಜನಿಸಿದರು.

ಇಹ ದೇವತ್ವಮಿಚ್ಛಂತೋ ಮಾನುಷೇಷು ಪ್ರಜಜ್ಞಿರೇ ।
ಜಜ್ಞಿರೇ ಭುವಿ ಭೂತೇಷು ತೇಷು ತೇಷ್ವಸುರಾ ವಿಭೋ ॥೨೮॥

ಎಲೈ ಪ್ರಭುವೇ ಮನುಷ್ಯರಾಗಿ ಜನಿಸಿ ತಪಸ್ಸನ್ನು ಮಾಡಿ ದೇವತ್ವವನ್ನು ಪಡೆಯುವೆವು ಎಂಬ ಆಸೆಯಿಂದ ಅಸುರರು ಮನುಷ್ಯ ಜನ್ಮದಲ್ಲಿ ಜನಿಸಿದರು. ಅಲ್ಲದೇ ಭೂಮಿಯಲ್ಲಿ ಬೇರೆ ಬೇರೆ ಪ್ರಾಣಿಗಳ ರೂಪದಲ್ಲೂ ಜನಿಸಿದರು.

ಗೋಷ್ವಶ್ವೇಷು ಚ ರಾಜೇಂದ್ರ ಖರೋಷ್ವ್ರಮಹಿಷೇಷು ಚ ।
ಕ್ರವ್ಯಾದೇಷು ಚ ಭೂತೇಷು ಗಜೇಷು ಚ ಮೃಗೇಷು ಚ ॥೨೯॥

ಎಲೈ ರಾಜೇಂದ್ರನೇ ದೈತ್ಯರು ಗೋವುಗಳಲ್ಲಿಯೂ ಅಶ್ವಗಳಲ್ಲಿಯೂ ಕತ್ತೆಗಳಲ್ಲಿಯೂ, ಒಂಟೆಗಳಲ್ಲಿಯೂ, ಎಮ್ಮೆಗಳಲ್ಲಿಯೂ, ಮಾಂಸಾಹಾರಿ ಪ್ರಾಣಿಗಳಲ್ಲಿಯೂ ಆನೆಗಳಲ್ಲಿಯೂ ಜಿಂಕೆಗಳಲ್ಲಿಯೂ ಜನಿಸಿದರು.

ಜಾತೈರಿಹ ಮಹೀಪಾಲ ಜಾಯಮಾನೈಶ್ಚ ತೈರ್ಮಹೀ ।
ನ ಶಶಾಕಾತ್ಮನಾತ್ಮಾನಮಿಯಂ ಧಾರಯಿತುಂ ಧರಾ ॥೩೦॥

ಎಲೈ ಮಹೀಪಾಲನೇ ಹುಟ್ಟಿದ ಮತ್ತು ಹುಟ್ಟುತ್ತಿರುವ ಈ ದೈತ್ಯರ ಭಾರವನ್ನು ಎಷ್ಟುಪ್ರಯತ್ನಪಟ್ಟರೂ ಭರಿಸಲು ಆಗ ಭೂಮಿಗೆ ಸಾಧ್ಯವಾಗಲಿಲ್ಲ.

ಅಥ ಜಾತಾ ಮಹೀಪಾಲಾಃ ಕೇಚಿನ್ಮದಬಲಾನ್ವಿತಾಃ ।
ದಿತೇಃ ಪುತ್ರಾ ದನೋಶ್ಚೈವ ದೇವಲೋಕಾದಿಹಾಗತಾಃ ॥೩೧॥

ವೀರ್ಯವಂತೋऽವಲಿಪ್ತಾಸ್ತೇ ನಾನಾರೂಪಧರಾ ಮಹೀಮ್ ।
ಇಮಾಂ ಸಾಗರಪರ್ಯಂತಾಂ ಪರೀಯುರರಿಮರ್ದನಾಃ ॥೩೨॥

ಅನಂತರ ದಿತಿಯ ಮತ್ತು ದನುವಿನ ಮಕ್ಕಳಾದ ಅಸುರರು ದೇವಲೋಕದಿಂದ ಇಲ್ಲಿಗೆ ಬಂದು, ಮದಬಲಾನ್ವಿತರಾಗಿ ಪರಾಕ್ರಮದಿಂದ ಅಹಂಕಾರಿಗಳಾಗಿ, ರಾಜರುಗಳಾಗಿ ಇನ್ನು ಕೆಲವರು ಬೇರೆ ಬೇರೆ ರೂಪಗಳನ್ನು ಧರಿಸಿದವರಾಗಿ ಶತ್ರುಗಳ ಸಂಹಾರವನ್ನು ಮಾಡುತ್ತಾ , ಸಾಗರಪರ್ಯಂತವಾದ ಈ ಭೂಮಿಯಲ್ಲಿ ತಿರುಗಾಡಿದರು.

ಬ್ರಾಹ್ಮಣಾನ್ ಕ್ಷತ್ರಿಯನ್ ವೈಶ್ಯಾಂಸ್ತಥಾ ಶೂದ್ರಾನಪೀಡಯನ್ ।
ಅನ್ಯಾನಿ ಚೈವ ಭೂತಾನಿ ಪೀಡಯಾಮಾಸುರೋಜಸಾ ॥೩೩॥

ಅವರು ತಮ್ಮ ಬಲದಿಂದ ಬ್ರಾಹ್ಮಣರನ್ನೂ, ಕ್ಷತ್ರಿಯರನ್ನೂ, ವೈಶ್ಯರನ್ನೂ, ಶೂದ್ರರನ್ನೂ ಮತ್ತು ಇನ್ನೂ ಅನೇಕ ಪ್ರಾಣಿಗಳನ್ನೂ ಪೀಡಿಸಿದರು.

ತ್ರಾಸಯಂತೋ ವಿನಿಘ್ನಂತಸ್ತಾಂಸ್ತಾನ್ ಭೂತಗಣಾಂಶ್ಚ ತೇ ।
ವಿಚೇರುಃ ಸರ್ವತೋ ರಾಜನ್ ಮಹೀಂ ಶತಸಹಸ್ರಶಃ ॥೩೪॥

ಎಲೈ ರಾಜನೇ ಅವರು ಆ ಪ್ರಾಣಿಗಳ ಸಮೂಹವನ್ನು ಹೆದರಿಸುತ್ತಾ ಮತ್ತು ಕೊಲ್ಲುತ್ತಾ ನೂರು ಸಾವಿರ ಸಂಖ್ಯೆಗಳಲ್ಲಿ ಒಟ್ಟಾಗಿ ಭೂಮಿಯಲ್ಲಿ ಎಲ್ಲಾ ಕಡೆಯಲ್ಲಿಯೂ ತಿರುಗಿದರು.

ಆಶ್ರಮಸ್ಥಾನ್ ಮಹರ್ಷೀಂಶ್ಚ ಧರ್ಷಯಂತಸ್ತತಸ್ತತಃ ।
ಅಬ್ರಹ್ಮಣ್ಯಾ ವೀರ್ಯಮದಾ ಮತ್ತಾ ಮದಬಲೇನ ಚ ॥೩೫॥

ಅವರು ಅಬ್ರಹ್ಮಣ್ಯರಾಗಿ ತಮ್ಮ ಶೌರ್ಯದ ಮದದಿಂದಲೂ, ಸೇನೆಯ ಬಲದಿಂದಲೂ ಅಲ್ಲಲ್ಲಿ ಆಶ್ರಮಗಳಲ್ಲಿದ್ದ ಮಹರ್ಷಿಗಳನ್ನು ಅವಮಾನಿಸುತ್ತಾ ತಿರುಗಾಡಿದರು.

ಏವಂ ವೀರ್ಯಬಲೋತ್ಸಿಕ್ತೈರ್ಭೂರಿಯಂ ತೈರ್ಮಹಾಸುರೈಃ ।
ಪೀಡ್ಯಮಾನಾ ಮಹೀಪಾಲ ಬ್ರಹ್ಮಾಣಮುಪಚಕ್ರಮೇ ॥೩೬॥

ಎಲೈ ಮಹೀಪಾಲನೇ, ಹೀಗೆ ವೀರ್ಯ ಮತ್ತು ಬಲಗಳ ಮದದಿಂದ ದುರಹಂಕಾರಿಗಳಾದ ಆ ಮಹಾಸುರರ ಪೀಡೆಯನ್ನು ತಾಳಲಾರದೆ ಭೂದೇವಿಯು ಬ್ರಹ್ಮದೇವರ ಸಮೀಪಕ್ಕೆ ಹೋದಳು.

ಇಮಾಂ ಮಹೀಂ ತದಾ ರಾಜನ್ ನಾಗಾಶ್ಚ ನ ನಗಾ ಗಜಾಃ ।
ತದಾ ಧಾರಯಿತುಂ ಶೇಕುರಾಕ್ರಾಂತಾಂ ದಾನವೈರ್ಬಲಾತ್ ॥೩೭॥

ಎಲೈ ರಾಜನೇ ಆಗ ದಾನವರ ಭಾರದಿಂದ ತುಂಬಿದ ಈ ಭೂಮಿಯನ್ನು ದಿಗ್ಗಜಗಳಾಗಲೀ, ಶೇಷ ಮೊದಲಾದ ಸರ್ಪಗಳಾಗಲೀ, ಕುಲಾಚಲಗಳಾದ ಪರ್ವತಗಳಾಗಲೀ ಧರಿಸಲು ಸಾಧ್ಯವಾಗಲಿಲ್ಲ.

ತತೋ ಮಹೀ ಮಹೀಪಾಲ ಭಾರಾರ್ತಾ ಭಯಪೀಡಿತಾ ।
ಜಗಾಮ ಶರಣಂ ದೇವಂ ಸರ್ವಭೂತಪಿತಾಮಹಮ್ ॥೩೮॥

ಎಲೈ ಮಹೀಪಾಲನೇ ಆಗ ದೈತ್ಯರ ಭಾರದಿಂದ ಖಿನ್ನಳಾದ ಮತ್ತು ಭಯಗ್ರಸ್ತಳಾದ ಭೂದೇವಿಯು ಸರ್ವಭೂತಪಿತಾಮಹರಾದ ಬ್ರಹ್ಮದೇವರನ್ನು ಶರಣು ಹೊಂದಿದಳು.

ಸಾ ಸಂಯುತಂ ಮಹಾಭಾಗೈರ್ದೇವದ್ವಿಜಮಹರ್ಷಿಭಿಃ ।
ದದರ್ಶ ದೇವಂ ಬ್ರಹ್ಮಾಣಂ ಲೋಕಕರ್ತಾರಮವ್ಯಯಮ್ ॥೫೯॥

ಭೂದೇವಿಯು ಸೃಷ್ಟಿಕರ್ತನಾದಂತಹ, ನಾಶರಹಿತನಾದಂತಹ ಮಹಾನುಭಾವರಾದ ದೇವತೆಗಳಿಂದಲೂ, ಬ್ರಾಹ್ಮಣರಿಂದಲೂ, ಮಹರ್ಷಿಗಳಿಂದಲೂ ಸುತ್ತುವರಿಯಲ್ಪಟ್ಟಿದ್ದಂತಹ ಬ್ರಹ್ಮದೇವರನ್ನು ನೋಡಿದಳು.

ಗಂಧರ್ವೈರಪ್ಸರೋಭಿಶ್ಚ ವಂದಿಕರ್ಮಸು ನಿಷ್ಠಿತೈಃ ।
ವಂದ್ಯಮಾನಂ ಮುದೋಪೇತೈರ್ವವಂದೇ ಚೈನಮೇತ್ಯ ಸಾ ॥೬೦॥

ಅವಳು ಸೂತಮಾಗಧವಂದಿಗಳ ಕರ್ಮಗಳಲ್ಲಿ ನಿರತರಾದ ಸಂತೋಷಯುಕ್ತರಾದ, ಗಂಧರ್ವರು ಮತ್ತು ಅಪ್ಸರೆಯರಿಂದ ವಂದಿಸಲ್ಪಡುವ ಬ್ರಹ್ಮದೇವರನ್ನು ಸಮೀಪಿಸಿ ನಮಸ್ಕರಿಸಿದಳು.

ಅಥ ವಿಜ್ಞಾಪಯಾಮಾಸ ಭೂಮಿಸ್ತಂ ಶರಣೈಷಿಣೀ ।
ಸನ್ನಿಧೌ ಲೋಕಪಾಲಾನಾಂ ಸರ್ವೇಷಾಮೇವ ಭಾರತ ॥೬೧॥

ಅನಂತರ ಬ್ರಹ್ಮದೇವರಿಂದ ರಕ್ಷಣೆಯನ್ನು ಬಯಸುವವಳಾಗಿ, ಎಲ್ಲಾ ಲೋಕಪಾಲಕರ ಸನ್ನಿಧಿಯಲ್ಲಿ ಬ್ರಹ್ಮದೇವರನ್ನು ಕುರಿತು ವಿಜ್ಞಾಪಿಸಿದಳು.

ತತ್ ಪ್ರಧಾನಾತ್ಮನಸ್ತಸ್ಯ ಭೂಮೇಃ ಕೃತ್ಯಂ ಸ್ವಯಂಭುವಃ ।
ಪೂರ್ವಮೇವಾಭವದ್ ರಾಜನ್ ವಿದಿತಂ ಪರಮೇಷ್ಠಿನಃ ॥೬೨॥

ಎಲೈ ರಾಜನೇ ದೇವೋತ್ತಮರಾದ ಬ್ರಹ್ಮದೇವರಿಗೆ ಭೂದೇವಿಯ ಈ ಪರಿಸ್ಥಿತಿಯು ಮೊದಲೇ ತಿಳಿದಿದ್ದಿತು.

ಸ್ರಷ್ಟಾ ಹಿ ಜಗತಃ ಕಸ್ಮಾನ್ನ ಸಂಬುಧ್ಯೇತ ಭಾರತ ।
ಸಾಸುರಾಣಾಂ ಚ ಲೋಕಾನಾಮಶೇಷೇಣ ಮನೋಗತಮ್ ॥೬೩॥

ಎಲೈ ಭಾರತನೇ ಎಲ್ಲಾ ಲೋಕಗಳನ್ನೂ ಸೃಷ್ಟಿಸುವ ಬ್ರಹ್ಮದೇವರಿಗೆ ಎಲ್ಲಾ ಆಸುರರ ಮತ್ತು ಇತರ ಜೀವರ ಮನಸ್ಸಿನ ಅಭಿಪ್ರಾಯವು ತಿಳಿಯದೇ ಇರಲು ಹೇಗೆ ಸಾಧ್ಯ ?

ತಾಮುವಾಚ ಮಹಾರಾಜ ಭೂಮಿಂ ಭೂಮಿಪತಿರ್ವಿಭುಃ ।
ಪ್ರಭವಃ ಸರ್ವಭೂತಾನಾಮೀಶಃ ಶಂಭುಃ ಪ್ರಜಾಪತಿಃ ॥೬೪॥

ಎಲೈ ಮಹಾರಾಜನೇ ಭೂಮಿಗೆ ಒಡೆಯನಾದಂತಹ, ಎಲ್ಲಾ ಪ್ರಾಣಿಗಳಿಗೂ ಜನಕನಾದಂತಹ, ಎಲ್ಲಾ ಪ್ರಾಣಿಗಳೂ ಒಡೆಯನಾದಂತಹ, ಸುಖನಿಧಿಯಾದ ಪ್ರಜಾಪತಿಯಾದ ಬ್ರಹ್ಮದೇವರು ಭೂಮಿಯನ್ನು ಕುರಿತು ಮಾತನಾಡಿದರು.

ಯದರ್ಥಮಸಿ ಸಂಪ್ರಾಪ್ತಾ ಮತ್ಸಕಾಶಂ ವಸುಂಧರೇ ।
ತದರ್ಥಂ ಸನ್ನಿಯೋಕ್ಷ್ಯಾಮಿ ಸರ್ವಾನೇವ ದಿವೌಕಸಃ ॥೪೫॥

ಎಲೌ ಭೂಮಿಯೇ ಯಾವ ಉದ್ದೇಶದಿಂದ ನೀನು ನನ್ನ ಬಳಿಗೆ ಬಂದಿದ್ದೀಯೋ ಅದರ ಸಲುವಾಗಿ, ನಾನು ಎಲ್ಲಾ ದೇವತೆಗಳಿಗೆ ಆದೇಶವನ್ನು ಕೊಡುತ್ತೇನೆ.

ಇತ್ಯುಕ್ತ್ವಾ ಸ ಮಹೀಂ ದೇವೋ ಬ್ರಹ್ಮಾ ರಾಜನ್ ವಿಸೃಜ್ಯ ಚ ।
ಆದಿದೇಶ ತದಾ ಸರ್ವಾನ್ ವಿಬುಧಾನ್ ಭೂತಕೃತ್ ಸ್ವಯಮ್ ॥೪೬॥

ಎಲೈ ರಾಜನೇ ಭೂಮಿಯನ್ನು ಕುರಿತು ಹೀಗೆ ಹೇಳಿ, ಅವಳನ್ನು ಕಳುಹಿಸಿಕೊಟ್ಟು ಸೃಷ್ಟಿಕರ್ತರಾದ ಬ್ರಹ್ಮದೇವರು ಎಲ್ಲಾ ದೇವತೆಗಳಿಗೂ ತಾವೇ ಆದೇಶವನ್ನು ನೀಡಿದರು.

ಅಸ್ಯಾ ಭೂಮೇರ್ನಿರಸಿತುಂ ಭಾರಂ ಭಾಗೈಃ ಪೃಥಕ್ಪೃಥಕ್ ।
ಅಸ್ಯಾಮೇವ ಪ್ರಸೂಯಧ್ವಂ ತಿರೋಧಾಯೇತಿ ಚಾಬ್ರವೀತ್ ॥೪೭॥

ಎಲೈ ದೇವತೆಗಳೇ ಈ ಭೂಮಿಯ ಭಾರವನ್ನು ಪರಿಹರಿಸಲು ನಿಮ್ಮ ನಿಮ್ಮ ಅಂಶಗಳಿಂದ ಬೇರೆ ಬೇರೆಯಾಗಿ ವೇಷಾಂತರ ಮಾಡಿಕೊಂಡು ಇದೇ ಭೂಮಿಯಲ್ಲಿ ಜನಿಸಿ ಎಂದು ಹೇಳಿದರು.

ತಥೈವ ಚ ಸಮಾನೀಯ ಗಂಧರ್ವಾಪ್ಸರಸಾಂ ಗಣಾನ್ ।
ಉವಾಚ ಭಗವಾನ್ ಸರ್ವಾನಿದಂ ವಚನಮುತ್ತರಮ್ ॥೪೮॥

ಹಾಗೆಯೇ ಗಂಧರ್ವರ ಮತ್ತು ಅಪ್ಸರೆಯರ ಗಣಗಳನ್ನು ಕರೆಸಿ, ಪೂಜ್ಯರಾದ ಬ್ರಹ್ಮದೇವರು ಅವರೆಲ್ಲರನ್ನೂ ಕುರಿತು ಈ ಶ್ರೇಷ್ಠವಾದ ಮಾತನ್ನು ಆಡಿದರು.

ಸ್ವೈಸ್ವೈರಂಶೈಃ ಪ್ರಸೂಯಧ್ವಂ ಯಥೇಷ್ಟಂ ಮಾನುಷೇಷ್ವಿತಿ ।
ಅಥ ಶಕ್ರಾದಯಃ ಸರ್ವೇ ಶ್ರುತ್ವಾ ಸುರಗುರೋರ್ವಚಃ ।
ತಥ್ಯಮರ್ಘ್ಯಂ ಚ ಪಥ್ಯಂ ಚ ತಸ್ಯ ತೇ ಜಗೃಹುಸ್ತದಾ ॥೪೯॥

ನಿಮ್ಮ ನಿಮ್ಮ ಅಂಶಗಳಿಂದ ನಿಮಗೆ ಇಷ್ಟವಾದಂತೆ ಭೂಮಿಯಲ್ಲಿ ಮನುಷ್ಯರಲ್ಲಿ ಅವತಾರ ಮಾಡಿ ಎಂದು ಹೇಳಿದರು. ಆಗ ಇಂದ್ರ ಬಳಗದವರೆಲ್ಲರೂ ದೇವತೆಗಳ ಗುರುವಾದ ಬ್ರಹ್ಮದೇವರ ಯಥಾರ್ಥವಾದ ಕಾರ್ಯಸಾಧಕವಾದ ಮತ್ತು ಹಿತವಾದ ವಚನಗಳನ್ನು ಅಂಗೀಕರಿಸಿದರು.

ತಥಾ ತೇ ಸರ್ವಶೋಂಽಶೈಃ ಸ್ವೈರ್ಗಂತುಂ ಭೂಮಿಂ ಕೃತಕ್ಷಣಾಃ ।
ನಾರಾಯಣಮಮಿತ್ರಘ್ನಂ ವೈಕುಂಠಮುಪಚಕ್ರಮುಃ ॥೫೦॥

ಯಃ ಸ ಚಕ್ರಗದಾಪಾಣಿಃ ಪೀತವಾಸಾಸಿತಪ್ರಭಃ ।
ಪದ್ಮನಾಭಃ ಸುರಾರಿಘ್ನಃ ಪೃಥುಚಾರ್ವಂಚಿತೇಕ್ಷಣಃ ॥೫೧॥

ಹಾಗೆಯೇ ಅವರೆಲ್ಲರೂ ತಮ್ಮ ತಮ್ಮ ಅಂಶಗಳಿಂದ ಭೂಮಿಗೆ ಬರಲು ನಿರ್ಧರಿಸಿದವರಾಗಿ ಚಕ್ರಗದಾಪಾಣಿಯೂ, ಪೀತಾಂಬರಧಾರಿಯೂ, ನೀಲಮೇಘಶ್ಯಾಮನೂ, ಪದ್ಮನಾಭನೂ, ರಾಕ್ಷಸಾರಿಯೂ, ವಿಶಾಲನೇತ್ರನೂ, ಶತ್ರುಸಂಹಾರಿಯೂ ಆದ ನಾರಾಯಣನನ್ನು ಸಮೀಪಿಸಿದರು.

ತಂ ಭುವಃ ಶೋಧನಾಯೇಂದ್ರ ಉವಾಚ ಪುರುಷೋತ್ತಮಮ್ ।
ಅಂಶೇನಾವತರಸ್ವೇತಿ ತಥೇತ್ಯಾಹ ಚ ತಂ ಹರಿಃ ॥೫೨॥

ಇಂದ್ರನು ಭೂಭಾರವನ್ನು ಹರಣಮಾಡಲು ಅಂಶದಿಂದ ಅವತಾರ ಮಾಡಬೇಕೆಂದು ಪುರುಷೋತ್ತಮನಾದ ನಾರಾಯಣನನ್ನು ಪ್ರಾರ್ಥಿಸಿದನು. ಹರಿಯು ಇಂದ್ರನನ್ನು ಕುರಿತು ಹಾಗೆಯೇ ಆಗಲಿ ಎಂದು ಹೇಳಿದನು.

॥ ಇತಿ ಶ್ರೀಮನ್ಮಹಾಭಾರತೇ ಶತಸಹಸ್ರಿಕಾಯಾಂಸಂಹಿತಾಯಾಮಾದಿಪರ್ವಣಿ
ಏಕೋನಷಷ್ಟಿತಮೋಽಧ್ಯಾಯಃ ॥
॥ ಇತಿ ಸಂಭವಪರ್ವಣಿ ಸಪ್ತಮೋಽಧ್ಯಾಯಃ ॥

ಇಲ್ಲಿಗೆ ಮಹಾಭಾರತದ ಆದಿಪರ್ವದಲ್ಲಿ ಐವತ್ತೊಂಭತ್ತನೆಯ ಅಧ್ಯಾಯ ಮುಗಿಯಿತು.

★ ★ ★ ★

ಅರವತ್ತನೆಯ ಅಧ್ಯಾಯ

(ಅದಿತಿ ಮೊದಲಾದ ದಕ್ಷಕನ್ಯೆಯರ ವಂಶದ ಕಥನ.)

ವೈಶಂಪಾಯನಃ

ಅಥ ನಾರಾಯಣೇನೇಂದ್ರಶ್ಚಕಾರ ಸಹ ಸಂವಿದಮ್ ।
ಅವತರ್ತುಂ ಮಹೀಂ ಸ್ವರ್ಗಾದಂಶತಃ ಸಹಿತಃ ಸುರೈಃ ॥೧॥

ಅನಂತರ ಇಂದ್ರನು ದೇವತೆಗಳ ಸಹಿತವಾಗಿ ಸ್ವರ್ಗವನ್ನು ಬಿಟ್ಟು ಭೂಮಿಯಲ್ಲಿ ಅಂಶದಿಂದ ಅವತಾರವನ್ನು ಮಾಡಲು ನಾರಾಯಣನ ಜೊತೆಯಲ್ಲಿ ಮಾತುಕಥೆಯನ್ನು ನಡೆಸಿದನು.

ಆದಿಶ್ಯ ಚ ಸ್ವಯಂ ಶಕ್ರಃ ಸರ್ವಾನೇವ ದಿವೌಕಸಃ ।
ನಿರ್ಜಗಾಮ ಪುನಸ್ತಸ್ಮಾತ್ ಕ್ಷಯಾನ್ನಾರಾಯಣಸ್ಯ ಹ ॥೨॥

ಇಂದ್ರನು ಎಲ್ಲಾ ದೇವತೆಗಳಿಗೂ ತಾನೇ ಆದೇಶವನ್ನು ನೀಡಿ, ಆ ನಾರಾಯಣನ ಮನೆಯಿಂದ ಹೊರಗೆ ಬಂದನು.

ತೇऽಮರಾರಿವಿನಾಶಾಯ ಸರ್ವಲೋಕಹಿತಾಯ ಚ ।
ಅವತೇರುಃ ಕ್ರಮೇಣೈವ ಮಹೀಂ ಸ್ವರ್ಗಾದ್ ದಿವೌಕಸಃ ॥೩॥

ಆ ದೇವತೆಗಳು ಅಸುರರ ವಿನಾಶಕ್ಕಾಗಿ ಮತ್ತು ಸರ್ವಲೋಕದ ಹಿತಕ್ಕಾಗಿ ಸ್ವರ್ಗವನ್ನು ಬಿಟ್ಟು ಕ್ರಮವಾಗಿ ಭೂಮಿಯಲ್ಲಿ ಅವತಾರ ಮಾಡಿದರು.

ತತೋ ಬ್ರಹ್ಮರ್ಷಿವಂಶೇಷು ಪಾರ್ಥಿವರ್ಷಿಕುಲೇಷು ಚ ।
ಜಜ್ಞಿರೇ ರಾಜಶಾರ್ದೂಲ ಯಥಾಕಾಮಂ ದಿವೌಕಸಃ ॥೪॥

ಎಲೈ ರಾಜಶಾರ್ದೂಲನೇ ಅನಂತರ ದೇವತೆಗಳು ಬ್ರಹ್ಮರ್ಷಿವಂಶದಲ್ಲಿಯೂ, ಮತ್ತು ರಾಜರ್ಷಿವಂಶದಲ್ಲಿಯೂ ತಮ್ಮ ತಮ್ಮ ಇಚ್ಛೆಗೆ ಅನುಗುಣವಾಗಿ ಜನಿಸಿದರು.

ದಾನವಾನ್ ರಾಕ್ಷಸಾಂಶ್ಚೈವ ಗಂಧರ್ವಾನ್ ಪನ್ನಗಾಂಸ್ತಥಾ ।
ಪುರುಷಾದಾನಿ ಚಾನ್ಯಾನಿ ಜಘ್ನುಃ ಸತ್ತ್ವಾನ್ಯನೇಕಶಃ ॥೫॥

ಅವರು ದಾನವರನ್ನೂ, ರಾಕ್ಷಸರನ್ನೂ, ಗಂಧರ್ವರನ್ನೂ, ಸರ್ಪಗಳನ್ನೂ, ನರಭಕ್ಷಕರನ್ನೂ ಮತ್ತು ಬೇರೆ ಪ್ರಾಣಿಗಳನ್ನೂ ಅನೇಕ ಸಂಖ್ಯೆಯಲ್ಲಿ ಕೊಂದರು.

ದಾನವಾ ರಾಕ್ಷಸಾಶ್ಚೈವ ಗಂಧರ್ವಾಃ ಪನ್ನಗಾಸ್ತಥಾ ।
ನ ತಾನ್ ಬಲಸ್ಥಾನ್ ಬಾಲ್ಯೇಽಪಿ ಜಘ್ನುರ್ಭರತಸತ್ತಮ ॥೬॥

ಎಲೈ ಭರತಶ್ರೇಷ್ಠನೇ ದಾನವರು, ರಾಕ್ಷಸರು, ಗಂಧರ್ವರು ಮತ್ತು ಸರ್ಪಗಳು ಬಾಲ್ಯದಲ್ಲಿಯೇ ಬಲಿಷ್ಠರಾದ ಆ ದೇವತೆಗಳನ್ನು ಕೊಲ್ಲಲು ಸಾಧ್ಯವಾಗಲಿಲ್ಲ.

ಜನಮೇಜಯಃ

ದೇವದಾನವಸಂಘಾನಾಂ ಗಂಧರ್ವಾಪ್ಸರಸಾಂ ತಥಾ ।
ದಾನವಾನಾಂ ಚ ಸರ್ವೇಷಾಂ ತಥಾ ವೈ ಯಕ್ಷರಕ್ಷಸಾಮ್ ॥೭॥

ಶ್ರೋತುಮಿಚ್ಛಾಮಿ ತತ್ತ್ವೇನ ಸಂಭವಂ ಕೃತ್ಸ್ನಮಾದಿತಃ ।
ಪ್ರಾಣಿನಾಂ ಚೈವ ಸರ್ವೇಷಾಂ ಸರ್ವಶಃ ಸರ್ವವಿದ್ಧ್ಯಸಿ ॥೮॥

ದೇವ, ದಾನವ ಸಮೂಹಗಳ ಹಾಗೂ ಗಂಧರ್ವ, ಅಪ್ಸರಗಣಗಳ ಹಾಗೆಯೇ ಎಲ್ಲಾ ದಾನವರ ಮತ್ತು ಯಕ್ಷರಾಕ್ಷಸರ ಉತ್ಪತ್ತಿಯನ್ನು ಮೊದಲಿನಿಂದ ಸಮಗ್ರವಾಗಿ ಬಯಸುತ್ತೇನೆ. ಉಳಿದ ಪ್ರಾಣಿಗಳ ಉತ್ಪತ್ತಿಯನ್ನು ಸಮಗ್ರವಾಗಿ ಕೇಳಬಯಸುತ್ತೇನೆ. ನೀವು ಎಲ್ಲವನ್ನೂ ತಿಳಿದವರಾಗಿದ್ದೀರಿ.

ವೈಶಂಪಾಯನಃ

ಹಂತ ತೇ ಕಥಯಿಷ್ಯಾಮಿ ನಮಸ್ಕೃತ್ಯ ಸ್ವಯಂಭುವೇ ।
ಸುರಾದೀನಾಮಹಂ ಸಮ್ಯಕ್ ಸಂಭವಂ ಕೃತ್ಸ್ನಮಾದಿತಃ ॥೯॥

ಸಂತೋಷ. ಸ್ವಯಂಭುವಿಗೆ ನಮಸ್ಕಾರವನ್ನು ಮಾಡಿ ದೇವತೆಗಳು ಮೊದಲಾದವರ ಸಮಗ್ರವಾದ ಉತ್ಪತ್ತಿಯನ್ನು ಮೊದಲಿನಿಂದ ನಿಮಗೆ ಹೇಳುವೆನು.

ಬ್ರಹ್ಮಣೋ ಮಾನಸಾಃ ಪುತ್ರಾ ವಿದಿತಾಃ ಷಣ್ಮಹರ್ಷಯಃ ।
ಮರೀಚಿರತ್ರ್ಯಂಗಿರಸೌ ಪುಲಸ್ತ್ಯಃ ಪುಲಹಃ ಕ್ರತುಃ ॥೧೦॥

ಮರೀಚಿಯು, ಅತ್ರಿ, ಅಂಗೀರಸ, ಪುಲಸ್ತ್ಯ, ಪುಲಹ ಮತ್ತು ಕ್ರತು ಈ ಆರು ಮಹರ್ಷಿಗಳು ಬ್ರಹ್ಮದೇವರ ಮಾನಸಪುತ್ರರೆಂದು ಪ್ರಸಿದ್ಧರಾದವರು.

ಮರೀಚೇಃ ಕಾಶ್ಯಪಃ ಪುತ್ರಃ ಕಾಶ್ಯಪಾತ್ತು ಇಮಾಃ ಪ್ರಜಾಃ ।
ಪ್ರಜಜ್ಞಿರೇ ಮಹಾಭಾಗಾ ದಕ್ಷಕನ್ಯಾಸ್ತ್ರಯೋದಶ ॥೧೧॥

ಮರೀಚಿಯ ಮಕ್ಕಳು ಕಾಶ್ಯಪರು. ಕಾಶ್ಯಪರ ಪತ್ನಿಯರಾದ ಮಹಾನುಭಾವರಾದ ದಕ್ಷಪ್ರಜಾಪತಿಯ ಹದಿಮೂರು ಕನ್ನಿಕೆಯರು ಈ ಎಲ್ಲಾ ಪ್ರಜೆಗಳನ್ನೂ ಪ್ರಸವಿದರು.

ಅದಿತಿರ್ದಿತಿರ್ದನುಃ ಕಾಲಾ ಅನಾಯುಃ ಸಿಂಹಿಕಾ ಮುನಿಃ ।
ಕ್ರೋಧಾ ಧ್ರುವಾ ಅರಿಷ್ಟಾ ಚ ವಿನತಾ ಕಪಿಲಾ ತಥಾ ॥೧೨॥

ಕದ್ರೂಶ್ಚ ಪುರುಷವ್ಯಾಘ್ರ ದಕ್ಷಕನ್ಯಾಶ್ಚ ಭಾರತ ।
ಏತಾಸಾಂ ವೀರ್ಯಸಂಪನ್ನಂ ಪುತ್ರಪೌತ್ರಮನಂತಕಮ್ ॥೧೩॥

ಅದಿತಿ, ದಿತಿ, ದನು, ಕಾಲಾ, ಅನಾಯು, ಸಿಂಹಿಕಾ, ಮುನಿ, ಕ್ರೋಧ, ಧ್ರುವಾ, ಅರಿಷ್ಟ, ವಿನತಾ, ಕಪಿಲಾ ಮತ್ತು ಕದ್ರು ಇವರೇ ಆ ದಕ್ಷಕನ್ಯೆಯರು. ಎಲೈ ಪುರುಷವ್ಯಾಘ್ರನೇ ಇವರುಗಳ ಶೌರ್ಯಸಂಪನ್ನರಾದ ಮಕ್ಕಳು ಮತ್ತು ಮೊಮ್ಮಕ್ಕಳು ಅನಂತವಾಗಿದ್ದಾರೆ.

ಅದಿತ್ಯಾಂ ದ್ವಾದಶಾದಿತ್ಯಾಃ ಸಂಭೂತಾ ಭುವನೇಶ್ವರಾಃ ।
ಯೇ ರಾಜನ್ ನಾಮತಸ್ತಾಂಸ್ತೇ ಕೀರ್ತಯಿಷ್ಯಾಮಿ ಭಾರತ ॥೧೪॥

ಎಲೈ ರಾಜನೇ ಅದಿತಿಯಲ್ಲಿ ಜನಿಸಿದ ಲೋಕೇಶ್ವರರಾದ ದ್ವಾದಶಾದಿತ್ಯರ ನಾಮಗಳನ್ನು ನಿನಗೆ ಹೇಳುವೆನು.

ಧಾತಾ ಮಿತ್ರೋಽರ್ಯಮಾ ಶಕ್ರೋ ವರುಣಸ್ತ್ವಂಶ ಏವ ಚ ।
ಭಗೋ ವಿವಸ್ವಾ ನ್ ಪೂಷಾ ಚ ಸವಿತಾ ದಶಮಸ್ತಥಾ ॥೧೫॥

ಏಕಾದಶಸ್ತಥಾ ತ್ವಷ್ಟಾ ವಿಷ್ಣುರ್ದ್ವಾದಶ ಉಚ್ಯತೇ ।
ಜಘನ್ಯಜಶ್ಚ ಸರ್ವೇಷಾಮಾದಿತ್ಯಾನಾಂ ಗುಣಾಧಿಕಃ ॥೧೬॥

ಧಾತಾ, ಮಿತ್ರ, ಅರ್ಯಮಾ, ಇಂದ್ರ, ವರುಣ, ಅಂಶ, ಭಗ, ವಿವಸ್ವಾನ್, ಪೂಷಾ, ಸವಿತಾ ಹತ್ತನೆಯವನು, ಹನ್ನೊಂದನೆಯ ತ್ವಷ್ಟಾ, ಮತ್ತು ಹನ್ನೆರಡನೆಯವನಾದ

ವಿಷ್ಣು. ವಿಷ್ಣುವು ಅದಿತಿಯ ಮಕ್ಕಳಲ್ಲಿ ಚಿಕ್ಕವನಾದರೂ ಗುಣಗಳಿಂದ ಯಾವಾಗಲೂ ದೊಡ್ಡವನು.

ಏಕ ಏವ ದಿತೇಃ ಪುತ್ರೋ ಹಿರಣ್ಯಕಶಿಪುಃ ಸ್ಮೃತಃ ।
ನಾಮ್ನಾ ಖ್ಯಾತಾಸ್ತು ತಸ್ಯೈತೇ ಪುತ್ರಾ ಪಂಚ ಮಹಾತ್ಮನಃ ॥೧೭॥

ದಿತಿಗೆ ಹಿರಣ್ಯಕಶಿಪು ಎಂದು ಪ್ರಖ್ಯಾತನಾದ ಒಬ್ಬನೇ ಮಗ. ಆ ಮಹಾತ್ಮನಿಗೆ ಪ್ರಸಿದ್ಧರಾದ ಈ ಐದುಜನ ಮಕ್ಕಳು.

ಪ್ರಹ್ಲಾದಃ ಪೂರ್ವಜಸ್ತೇಷಾಂ ಸಂಹ್ಲಾದಸ್ತದನಂತರಃ ।
ಅನುಹ್ಲಾದಸ್ತೃತೀಯೋಽಭೂತ್ ತಸ್ಮಾಚ್ಚ ಶಿವಿಬಾಷ್ಕಲೌ ॥೧೮॥

ಅವರಲ್ಲಿ ಪ್ರಹ್ಲಾದನು ಮೊದಲನೆಯವನು. ಸಂಹ್ಲಾದನು ಅನಂತರದವನು, ಅನುಹ್ಲಾದನು ಮೂರನೆಯವನು. ಮತ್ತು ಶಿವಿ(ಶಿಬಿ), ಬಾಷ್ಕಲರು ನಾಲ್ಕು, ಐದನೆಯವರು.

ಪ್ರಹ್ಲಾದಸ್ಯ ತ್ರಯಃ ಪುತ್ರಾಃ ಖ್ಯಾತಾಃ ಸರ್ವತ್ರ ಭಾರತ ।
ವಿರೋಚನಶ್ಚ ಕುಂಭಶ್ಚ ನಿಕುಂಭಶ್ಚೇತಿ ವಿಶ್ರುತಾಃ ॥೧೯॥

ಎಲೈ ಭಾರತನೇ ಪ್ರಹ್ಲಾದನಿಗೆ ಎಲ್ಲೆಡೆಯಲ್ಲಿಯೂ ಪ್ರಖ್ಯಾತರಾದ ಮೂರುಜನ ಮಕ್ಕಳು. ಅವರು ವಿರೋಚನ, ಕುಂಭ, ನಿಕುಂಭ ಎಂದು ಪ್ರಖ್ಯಾತರಾದವರು.

ವಿರೋಚನಸ್ಯ ಪುತ್ರೋಽಭೂದ್ ಬಲಿರೇಕಃ ಪ್ರತಾಪವಾನ್ ।
ಬಲೇಶ್ಚ ಪ್ರಥಿತಃ ಪುತ್ರೋ ಬಾಣೋ ನಾಮ ಮಹಾಸುರಃ ॥೨೦॥

ವಿರೋಚನನಿಗೆ ಪ್ರತಾಪಶಾಲಿಯಾದ ಬಲಿಯು ಒಬ್ಬನೇ ಮಗ. ಬಲಿಯ ಮಗನಾದರೂ ಪ್ರಖ್ಯಾತನಾದ ಬಾಣನೆಂಬ ಮಹಾಸುರ.

ಚತ್ವಾರಿಂಶದ್ ದನೋಃ ಪುತ್ರಾಃ ಖ್ಯಾತಾಃ ಸರ್ವತ್ರ ಭಾರತ ।
ತೇಷಾಂ ಪ್ರಥಮಜೋ ರಾಜನ್ ವಿಪ್ರಚಿತ್ತಿರ್ಮಹಾಸುರಃ ॥೨೧॥

ಎಲೈ ಭಾರತರಾಜನೇ ದನುವಿನ ಮಕ್ಕಳು ನಲವತ್ತು ಮಂದಿಯೆಂದು ಎಲ್ಲಕಡೆ ಪ್ರಖ್ಯಾತರಾದವರು. ಅವರಲ್ಲಿ ಮಹಾಸುರನಾದ ವಿಪ್ರಚಿತ್ತಿಯು ಮೊದಲನೆಯವನು.

ಶಂಬರೋ ನಮುಚಿಶ್ಚೈವ ಪುಲೋಮಾ ಚೇತಿ ವಿಶ್ರುತಾಃ ।
ಅಸಿಲೋಮಾ ಚ ಕೇಶೀ ಚ ದುರ್ಜಯಶ್ಚೈವ ದಾನವಃ ॥೨೨॥

ಅಯಶ್ಶಿರಾ ಅಶ್ವಶಿರಾ ಅಯಶ್ಶಂಕುಶ್ಚ ವೀರ್ಯವಾನ್ ।
ತಥಾ ಗಗನಮೂರ್ಧಾ ಚ ವೇಗವಾನ್ ಕೇತುಮಾಂಸ್ತಥಾ ॥೨೩॥

ಸ್ವರ್ಭಾನುರಶ್ವೋಽಶ್ವಪತಿರ್ವೃಷಪರ್ವಾಽಜಕಸ್ತಥಾ ।
ಅಶ್ವಗ್ರೀವಶ್ಚ ಸೂಕ್ಷ್ಮಶ್ಚ ತುಹುಂಡಶ್ಚ ಮಹಾಸುರಃ ॥೨೪॥

ಸ್ವಸ್ರವಶ್ಚೈಕವಿತ್ತಶ್ಚ ವಿರೂಪಾಕ್ಷೋ ಗರಾಗರೌ ।
ನಿಚಂದ್ರಶ್ಚ ನಿಕುಂಭಶ್ಚ ಕುಪಥಃ ಕಾಪಥಸ್ತಥಾ ॥೨೫॥

ಶರಭಃ ಶಲಭಶ್ಚೈವ ಸೂರ್ಯಾಚಂದ್ರಮಸೌ ತಥಾ ।
ಇತ್ಯಾಖ್ಯಾತಾಃ ದನೋರ್ವಂಶೇ ದಾನವಾಃ ಪರಿಕೀರ್ತಿತಾಃ ॥೨೬॥

ಶಂಬರ, ನಮುಚಿ ಮತ್ತು ಪುಲೋಮಾ ಎಂದು ಪ್ರಸಿದ್ಧರಾದವರು. ಅತಿಲೋಮ, ಕೇಶೀ, ದುರ್ಜಯ, ಅಯಶ್ಶಿರಾ, ಅಶ್ವಶಿರಾ, ಅಯಶ್ಶಂಕು, ಗನನಮೂರ್ಧಾ, ವೇಗವಾನ್, ಕೇತುಮಾನ್, ಸ್ವರ್ಭಾನು, ಅಶ್ವ, ಅಶ್ವಪತಿ, ವೃಷಪರ್ವಾ, ಅಜಕ, ಅಶ್ವಗ್ರೀವ, ಸೂಕ್ಷ್ಮ, ತುಹುಂಡ, ಸ್ವಸ್ರವ, ಏಕವಿತ್ತ, ವಿರೂಪಾಕ್ಷ, ಗರ, ಅಗರ, ನಿಚಂದ್ರ, ನಿಕುಂಭ, ಕುಪಥ, ಕಾಪಥ, ಶರಭ, ಶಲಭ, ಸೂರ್ಯ, ಚಂದ್ರ ಹೀಗೆ ದನುವಿನ ಮಕ್ಕಳು ಹೆಸರಿಸಲ್ಪಡುತ್ತಾರೆ.

ಅನ್ಯೌ ತು ಖಲು ದೇವಾನಾಂ ಸೂರ್ಯಾಚಂದ್ರಮಸೌ ಸ್ಮೃತೌ ।
ಅನ್ಯೌ ದಾನವಮುಖ್ಯಾನಾಂ ಸೂರ್ಯಾಚಂದ್ರಮಸೌ ತಥಾ ॥೨೭॥

ದೇವತೆಗಳ ಗುಂಪಿನಲ್ಲಿದ್ದು ಹಗಲು, ರಾತ್ರಿಗೆ ಕಾರಣರಾದ ಸೂರ್ಯ, ಚಂದ್ರರು ಬೇರೆ. ದನುವಿನ ಮಕ್ಕಳಾದ ಸೂರ್ಯ, ಚಂದ್ರರು ಬೇರೆ.

ಇಮೇ ಚ ವಂಶೇ ಪ್ರಥಿತಾಃ ಸತ್ಯವಂತೋ ಮಹಾಬಲಾಃ ।
ದನೋಃ ಪುತ್ರಾನ್ವಯೇ ಜಾತಾ ದಶ ದಾನವಪುಂಗವಾಃ ॥೨೮॥

ಇವರು ಈ ವಂಶದಲ್ಲಿ ಸತ್ಯವಂತರು ಮತ್ತು ಮಹಾಬಲಿಷ್ಠರೆಂದು ಪ್ರಸಿದ್ಧರಾದವರು. ದನುವಿನ ಮಕ್ಕಳ ವಂಶದಲ್ಲಿ ಈ ಹತ್ತುಜನ ದಾನವಶ್ರೇಷ್ಠರು ಜನಿಸಿದರು.

ಏಕಾಕ್ಷೋ ಮೃತಪೋ ವೀರಃ ಪ್ರಲಂಬನರಕಾವಪಿ ।
ವಾತಾಪಿಃ ಶತ್ರುತಪನಃ ಸದಶ್ವಶ್ಚ ಮಹಾಸುರಃ ॥೨೯॥

ಗವಿಷ್ಠಶ್ಚ ವನಾಯುಶ್ಚ ದೀರ್ಘಜಿಹ್ವಶ್ಚ ವೀರ್ಯವಾನ್ ।
ಅಸಂಖ್ಯೇಯಾಃ ಸ್ಮೃತಾಸ್ತೇಷಾಂ ಪುತ್ರಪೌತ್ರಾಶ್ಚ ಭಾರತ ॥೩೦॥

ಏಕಾಕ್ಷ, ಮೃತಪ, ವೀರ, ಪ್ರಲಂಬ, ನರಕ, ವಾತಾಪಿ, ಶತ್ರುತಪನ, ಸದಶ್ವ, ಗವಿಷ್ಠ, ವನಾಯು, ದೀರ್ಘಜಿಹ್ವ ಈ ಶೌರ್ಯಶಾಲಿಗಳು ಪರಾಕ್ರಮಶಾಲಿಗಳು ಅವರು. ಎಲ್ಲೆ ಭಾರತನೇ ಅವರ ಮಕ್ಕಳು ಮತ್ತು ಮೊಮ್ಮಕ್ಕಳ ಸಂಖ್ಯೆಗೆ ಲೆಕ್ಕವೇ ಇಲ್ಲ.

ಸಿಂಹಿಕಾ ಸುಷುವೇ ಪುತ್ರಂ ರಾಹುಂ ಚಂದ್ರಾರ್ಕಸೂದನಮ್ ।
ಸುಚಂದ್ರಂ ಚಂದ್ರಹರ್ತಾರಂ ತಥಾ ಚಂದ್ರವಿಮರ್ದನಮ್ ॥೩೧॥

ಸಿಂಹಿಕೆಯು ಚಂದ್ರ ಸೂರ್ಯರ ವೈರಿಯಾದ ರಾಹುವನ್ನೂ, ಮತ್ತು ಸುಚಂದ್ರ, ಚಂದ್ರಹರ್ತಾ ಮತ್ತು ಚಂದ್ರವಿಮರ್ದನ ಎಂಬ ಬೇರೆ ಮಕ್ಕಳನ್ನೂ ಪಡೆದಳು.

ಕ್ರೂರಸ್ವಭಾವಂ ಕ್ರೂರಾಯಾಃ ಪುತ್ರಪೌತ್ರಮನಂತಕಮ್ ।
ಗಣಃ ಕ್ರೋಧವಶೋ ನಾಮ ರೌದ್ರಕರ್ಮಾऽರಿಮರ್ದನಃ ॥೩೨॥

ಕಾಶ್ಯಪರ ಪತ್ನಿಯಾದ ಕ್ರೂರಾ ಎಂಬುವಳಲ್ಲಿ ಜನಿಸಿದ ಪುತ್ರ ಪೌತ್ರರು ಅನಂತವಾಗಿದ್ದಾರೆ. ಉಗ್ರಕರ್ಮರಾದ ಶತ್ರುಮರ್ದನರಾದ ಕ್ರೋಧವಶ ಎಂಬ ಗಣವು ಕ್ರೋಧಾ ಎಂಬ ಪತ್ನಿಯ ಮಕ್ಕಳು.

ಅನಾಯುಷಶ್ಚ ಪುತ್ರಾಸ್ತು ಚತ್ವಾರೋऽಸುರಸತ್ತಮಾಃ ।
ಪ್ರಕ್ಷರೋ ಬಲವೀರೌ ಚ ವೃತ್ರಶ್ಚೈವ ಮಹಾಸುರಃ ॥೩೩॥

ಅನಾಯುವಿನ ಮಕ್ಕಳು ನಾಲ್ವರು ಅಸುರಶ್ರೇಷ್ಠರು. ಅವರು ಪ್ರಕ್ಷರ, ಬಲ, ವೀರ ಮತ್ತು ವೃತ್ರಾಸುರ.

ಕಾಲಾಯಾಃ ಪ್ರಥಿತಾಃ ಪುತ್ರಾಃ ಕಾಲಕಲ್ಪಾಃ ಪ್ರಹಾರಿಣಃ ।
ಭುವಿ ಖ್ಯಾತಾ ಮಹಾವೀರ್ಯಾ ದಾನವೇಷು ಪರಂತಪ ॥೩೪॥

ಕಾಲಾ ಎಂಬ ಪತ್ನಿಯ ಮಕ್ಕಳು ಯಮಕಲ್ಪರಾಗಿ, ಸಂಹಾರಕರಾಗಿ, ಭೂಮಿಯಲ್ಲಿ ಪ್ರಸಿದ್ಧರಾಗಿ, ದಾನವರಲ್ಲಿ ಮಹಾಪರಾಕ್ರಮಶಾಲಿಗಳಾಗಿ ಇರುವವರು.

ವಿನಾಶನಶ್ಚ ಕ್ರೋಧಶ್ಚ ಕ್ರೋಧಹಂತಾ ಚ ವೀರ್ಯವಾನ್ ।
ವಿವರ್ಧನಃ ಕ್ರೋಧಶತ್ರುಃ ಕಾಲಕೇಯಾ ಮಹಾಸುರಾಃ ॥೩೫॥

ಕಾಲಾ ಎಂಬ ಪತ್ನಿಯ ಮಕ್ಕಳಲ್ಲಿ ಮುಖ್ಯರಾದವರು, ವಿನಾಶನ, ಕ್ರೋಧ, ಕ್ರೋಧಹಂತಾ, ವಿವರ್ಧನ ಮತ್ತು ಕ್ರೋಧಶತ್ರು ಎಂಬ ಪರಾಕ್ರಮಶಾಲಿಗಳಾದ ಮಹಾಸುರರು.

ಅಸುರಾಣಾಮುಪಾಧ್ಯಾಯಶ್ಶುಕ್ರಃ ಪುತ್ರಃ ಕವೇರಿತಿ ।
ಖ್ಯಾತಾಶ್ಚೋಶನಸಃ ಪುತ್ರಾಶ್ಚತ್ವಾರೋಽಸುರಯಾಜಕಾಃ ॥೩೬॥

ಅಸುರರ ಉಪಾಧ್ಯಾಯರಾದ ಶುಕ್ರಾಚಾರ್ಯರು ಭೃಗುವಿನ ಮಕ್ಕಳಾದ ಕವಿಯ ಮಕ್ಕಳು. ಶುಕ್ರಾಚಾರ್ಯರಿಗೆ ಪ್ರಸಿದ್ಧರಾದ ನಾಲ್ಕು ಮಕ್ಕಳು. ಅವರೆಲ್ಲರೂ ಅಸುರರಿಗೆ ಪುರೋಹಿತರು.

ತ್ವಷ್ಟಾರಸ್ತಥಾತ್ರಿಶ್ಚ ದ್ವಾವನ್ಯೌ ಭದ್ರಕರ್ಮಿಣೌ ।
ತೇಜಸಾ ಸೂರ್ಯಸಂಕಾಶಾ ಬ್ರಹ್ಮಲೋಕಪ್ರಭಾವನಾಃ ॥೩೭॥

ಚಿಕ್ಕವನಾದ ತ್ವಷ್ಟ್ರ, ಅತ್ರಿ, ಮತ್ತಿಬ್ಬರು ಮಂಗಳಕರ್ಮವನ್ನು ಮಾಡುವವರು, ತಮ್ಮ ಕಾಂತಿಯಿಂದ ಸೂರ್ಯನಂತೆ ಬೆಳಗಿ ಬ್ರಹ್ಮಲೋಕವನ್ನು ಉಂಟುಮಾಡಿಕೊಡುವವರು.

ಇತ್ಯೇಷ ವಂಶಪ್ರಭವಃ ಕಥಿತಸ್ತೇ ತರಸ್ವಿನಾಮ್ ।
ಅಸುರಾಣಾಂ ಸುರಾಣಾಂ ಚ ಪುರಾಣೇ ಸಂಶ್ರುತೋ ಮಯಾ ॥೩೮॥

ಇದು ಪುರಾಣಗಳಲ್ಲಿ ನಾನು ಕೇಳಿದ ದೇವತೆಗಳ ಮತ್ತು ಅಸುರರ ವಂಶವಿಸ್ತಾರ. ಇದನ್ನು ನಾನು ನಿನಗೆ ತಿಳಿಸಿದ್ದೇನೆ.

ಏತೇಷಾಂ ಯದಪತ್ಯಂ ತು ನ ಶಕ್ಯಂ ತದಶೇಷತಃ ।
ಪ್ರಸಂಖ್ಯಾತುಂ ಮಹೀಪಾಲ ಗಣಭೂತಮನಂತಕಮ್ ॥೩೯॥

ಎಲೈ ರಾಜನೇ ಇವರ ಮಕ್ಕಳನ್ನು ಸಂಪೂರ್ಣವಾಗಿ ಎಣಿಸಲು ಸಾಧ್ಯವಿಲ್ಲ. ಅವರು ಅನಂತ ಗಣರೂಪರಾಗಿದ್ದಾರೆ.

ತಾರ್ಕ್ಷ್ಯಶ್ಚಾರಿಷ್ಟನೇಮಿಶ್ಚ ತಥೈವ ಗರುಡಾರುಣೌ ।
ಆರುಣೇರ್ವಾರುಣಿಶ್ಚೈವ ವೈನತೇಯಾಃ ಪ್ರಕೀರ್ತಿತಾಃ ॥೪೦॥

ತಾರ್ಕ್ಷ್ಯ, ಅರಿಷ್ಟನೇಮಿ, ಗರುಡ, ಅರುಣ, ಆರುಣಿ ಮತ್ತು ವಾರುಣಿ ಇವರು ವಿನತಾದೇವಿಯ ಮಕ್ಕಳು.

ಶೇಷೋऽನಂತೋ ವಾಸುಕಿಶ್ಚ ತಕ್ಷಕಶ್ಚ ಭುಜಂಗಮಃ ।
ಕೂರ್ಮಶ್ಚ ಕುಲಿಕಶ್ಚೈವ ಕಾದ್ರವೇಯಾ ಇತಿ ಸ್ಮೃತಾಃ ॥೪೧॥

ಶೇಷ, ಅನಂತ, ವಾಸುಕಿ, ತಕ್ಷಕ, ಭುಜಂಗಮ, ಕೂರ್ಮ, ಕುಲಿಕ ಮೊದಲಾದವರು ಕದ್ರೂ ದೇವಿಯ ಮಕ್ಕಳು.

ಭೀಮಸೇನೋಗ್ರಸೇನೌ ಚ ಸುಪರ್ಣೋ ವರುಣಸ್ತಥಾ ।
ಗೋಪತಿರ್ಧೃತರಾಷ್ಟ್ರಶ್ಚ ಸೂರ್ಯವರ್ಚಾಶ್ಚ ಸಪ್ತಮಃ ॥೪೨॥

ಪತ್ರವಾನರ್ಕವರ್ಣಶ್ಚ ಪ್ರಯುತಶ್ಚೈವ ವಿಶ್ರುತಃ ।
ಭೀಮಶ್ಚಿತ್ರರಥಶ್ಚೈವ ವಿಖ್ಯಾತಃ ಸರ್ವವಿದ್ ವಶೀ ॥೪೩॥

ತಥಾ ಶಾಲಿಶಿರಾ ರಾಜನ್ ಪ್ರದ್ಯುಮ್ನಶ್ಚ ಚತುರ್ದಶಃ ।
ಕಲಃ ಪಂಚದಶಶ್ಚೈವ ನಾರದಶ್ಚೈವ ಷೋಡಶಃ ॥೪೪॥

ಇತ್ಯೇತೇ ದೇವಗಂಧರ್ವಾ ಮೌನೇಯಾಃ ಪರಿಕೀರ್ತಿತಾಃ
ಅತಸ್ತ್ವನ್ಯಾನಿ ಭೂತಾನಿ ಕೀರ್ತಯಿಷ್ಯಾಮಿ ಭಾರತ ॥೪೫॥

ಭೀಮಸೇನ, ಉಗ್ರಸೇನ, ಸುಪರ್ಣ, ವರುಣ, ಗೋಪತಿ, ಧೃತರಾಷ್ಟ್ರ, ಸೂರ್ಯವರ್ಚ, ಪತ್ರವಾನ್, ಅರ್ಕವರ್ಣ, ಪ್ರಯುತ, ಭೀಮ, ವಿಖ್ಯಾತನಾದ ಚಿತ್ರರಥ, ಸರ್ವವಿದ್, ವಶೀ, ಶಾಲಿಶಿರಾ, ಪ್ರದ್ಯುಮ್ನ, ಕಲ, ಮತ್ತು ಹದಿನಾರನೆಯವರಾದ ನಾರದರು. ಇವರೆಲ್ಲರೂ ಕಶ್ಯಪರ ಪತ್ನಿಯಾದ ಮುನಿದೇವಿಯ

ಮಕ್ಕಳು ಮತ್ತು ದೇವಗಂಧರ್ವರೆಂದು ಪ್ರಸಿದ್ಧರಾದವರು. ಇನ್ನು ಮುಂದೆ ಬೇರೆಯ ಮಕ್ಕಳ ವಿಷಯವನ್ನು ಹೇಳುತ್ತೇನೆ.

ಅನವದ್ಯಾಮನುವಶಾಮನೂನಾಮರುಣಾಂ ಪ್ರಿಯಾಮ್ ।
ಅನೂಷಾಂ ಸುಭಗಾಂ ಭಾಸೀಮಿತಿ ಪ್ರಾವಾ ವ್ಯಜಾಯತ ॥೪೬॥

ಕಶ್ಯಪರ ಪತ್ನಿಯಾದ ಪ್ರಾವಾದೇವಿಯು, ಅನವದ್ಯಾ, ಅನುವಶಾ, ಅನೂನಾ, ಅರುಣಾ, ಪ್ರಿಯಾ, ಅನೂಷಾ, ಸುಭಗಾ ಮತ್ತು ಭಾಸೀ ಎಂಬ ಹೆಣ್ಣುಮಕ್ಕಳನ್ನು ಪಡೆದಳು.

ಸಿದ್ಧಃ ಪೂರ್ಣಶ್ಚ ವರ್ಹೀ ಚ ಪೂರ್ಣಾಶಶ್ಚ ಮಹಾಯಶಾಃ ।
ಬ್ರಹ್ಮಚಾರೀ ರತಿಗುಣಃ ಸುಪರ್ಣಶ್ಚೈವ ಸಪ್ತಮಃ ॥೪೭॥

ವಿಶ್ವಾವಸುಶ್ಚ ಭಾನುಶ್ಚ ಸುಚಂದ್ರೋ ದಶಮಸ್ತಥಾ ।
ಇತ್ಯೇತೇ ದೇವಗಂಧರ್ವಾಃ ಪ್ರಾವೇಯಾಃ ಪರಿಕೀರ್ತಿತಾಃ ॥೪೮॥

ಸಿದ್ಧ, ಪೂರ್ಣ, ವರ್ಹೀ, ಮಹಾಯಶಸ್ವಿಯಾದ ಪೂರ್ಣಾಶ, ಬ್ರಹ್ಮಚಾರಿ, ರತಿಗುಣ, ಏಳನೆಯವನಾದ ಸುಪರ್ಣ, ವಿಶ್ವಾವಸು, ಭಾನು, ಮತ್ತು ಹತ್ತನೆಯವನಾದ ಸುಚಂದ್ರ. ಈ ದೇವಗಂಧರ್ವರು ಕಶ್ಯಪರ ಪತ್ನಿಯಾದ ಪ್ರಾವಾದೇವಿಯ ಮಕ್ಕಳು.

ಇಮಂ ತ್ವಪ್ಸರಸಾಂ ವಂಶಂ ಪ್ರಥಿತಂ ಪುಣ್ಯಲಕ್ಷಣಮ್ ।
ಅರಿಷ್ಟಾ ಸುಮಹಾಭಾಗಾ ದೇವೀ ದೇವರ್ಷಿತಃ ಪುರಾ ॥೪೯॥

ಮಹಾನುಭಾವಳಾದ ಅರಿಷ್ಟಾದೇವಿಯು ದೇವರ್ಷಿಗಳಾದ ಕಾಶ್ಯಪರಿಂದ ಅಪ್ಸರೆಯರನ್ನು ಪಡೆದಳು.

ಅಲಂಬುಸಾ ಮಿಶ್ರಕೇಶೀ ವಿದ್ಯುದ್ವರ್ಣಾ ತಿಲೋತ್ತಮಾ ।
ಅರುಣಾ ರಕ್ಷಿತಾ ಚೈವ ರಂಭಾ ತದ್ವನ್ಮನೋರಮಾ ॥೫೦॥

ಅಸಿತಾ ಚ ಸುಬಾಹುಶ್ಚ ಸುವ್ರತಾ ಸುಭುಜಾ ತಥಾ ।
ಸುಪ್ರಿಯಾ ಚ ಸುಬಾಹುಶ್ಚ ವಿಖ್ಯಾತೌ ಚ ಹಹಾ ಹುಹೂ ।
ತುಂಬುರುಶ್ಚೇತಿ ಚತ್ವಾರಃ ಸ್ಮೃತಾ ಗಂಧರ್ವಸತ್ತಮಾಃ ॥೫೧॥

ಅಪ್ಸರೆಯರಾದ ಅಲಂಬುಸಾ, ಮಿಶ್ರಕೇಶೀ, ವಿದ್ಯುದ್ವರ್ಣಾ, ತಿಲೋತ್ತಮಾ, ಅರುಣಾ, ರಕ್ಷಿತಾ, ಮನೋರಮೆಯಾದ ರಂಭೆ, ಅಸಿತಾ, ಸುಬಾಹು, ಸುವ್ರತಾ, ಸುಭುಜಾ, ಸುಪ್ರಿಯಾ ಮತ್ತು ಸುಬಾಹು ಪ್ರಖ್ಯಾತರಾದ ಹಹಾ ಹುಹೂ ಮತ್ತು ತುಂಬುರು ಈ ನಾಲ್ವರು ಗಂಧರ್ವಶ್ರೇಷ್ಠರು ಅರಿಷ್ಟಾದೇವಿಯ ಮಕ್ಕಳು.

ಅಮೃತಂ ಬ್ರಾಹ್ಮಣಾ ಗಾವೋ ಗಂಧರ್ವಾಪ್ಸರಸಸ್ತಥಾ ।
ಅಪತ್ಯಂ ಕಪಿಲಾಯಾಸ್ತು ಪುರಾಣೇ ಪರಿಕೀರ್ತಿತಮ್ ।
ಇತಿ ತೇ ಸರ್ವಭೂತಾನಾಂ ಸಂಭವಃ ಕಥಿತೋ ಮಯಾ ॥೫೨॥

ಕಪಿಲಾ ಎಂಬ ಪತ್ನಿಯ ಮಕ್ಕಳು ಬ್ರಾಹ್ಮಣರು, ಗೋವುಗಳು, ಗಂಧರ್ವರು, ಅಪ್ಸರೆಯರು, ಮತ್ತು ಅಮೃತಾಭಿಮಾನಿದೇವತೆಯೆಂದು ಪುರಾಣಗಳಲ್ಲಿ ಪ್ರಸಿದ್ಧವಾಗಿದೆ. ಹೀಗೆ ನಾನು ನಿನಗೆ ಎಲ್ಲಾ ಜೀವರ ಉತ್ಪತ್ತಿಯನ್ನು ತಿಳಿಸಿದ್ದೇನೆ.

ಯಥಾವತ್ ಪರಿಸಂಖ್ಯಾತೋ ಗಂಧರ್ವಾಪ್ಸರಸಾಂ ತಥಾ ।
ಭುಜಂಗಾನಾಂ ಸುಪರ್ಣಾನಾಮಸುರಾಣಾಂ ತಥೈವ ಚ ॥೫೩॥

ಗವಾಂ ಚ ಬ್ರಾಹ್ಮಣಾನಾಂ ಚ ಶ್ರೀಮತಾಂ ಪುಣ್ಯಕರ್ಮಣಾಮ್ ।
ಆಯುಷ್ಯಶ್ಚೈವ ಪುಣ್ಯಶ್ಚ ಧನ್ಯಃ ಶ್ರುತಿಸುಖಾವಹಃ ।
ಶ್ರೋತವ್ಯಶ್ಚೈವ ಸತತಂ ಶ್ರಾವ್ಯಶ್ಚೈವಾನಸೂಯತಾ ॥೫೪॥

ಗಂಧರ್ವರ, ಅಪ್ಸರೆಯರ, ಸರ್ಪಗಳ, ಪಕ್ಷಿಗಳ, ಅಸುರರ, ಗೋವುಗಳ, ಬ್ರಾಹ್ಮಣರ ಮತ್ತು ಸಂಪದ್ಯುಕ್ತರಾದ ಪುಣ್ಯಶಾಲಿಗಳ ಉತ್ಪತ್ತಿಯನ್ನು ನಿನಗೆ ತಿಳಿಸಿದ್ದೇನೆ. ಈ ವಂಶದ ಶ್ರವಣವು ಶ್ರುತಿಗೆ ಇಂಪಾಗಿದ್ದು, ಆಯುಷ್ಯವನ್ನೂ, ಪುಣ್ಯವನ್ನೂ ಮತ್ತು ಧನವನ್ನೂ ಕೊಡುವಂತಹುದು. ಇದು ಅಸೂಯೆಯನ್ನು ಬಿಟ್ಟು ಯಾವಾಗಲೂ ಕೇಳಬೇಕಾದದ್ದು.

ಇಮಂ ತು ವಂಶಂ ನಿಯಮೇನ ಯಃ ಪಠೇತ್
ಮಹಾತ್ಮನಾಂ ಬ್ರಾಹ್ಮಣದೇವಸನ್ನಿಧೌ ।
ಅಪತ್ಯಲಾಭಂ ಲಭತೇ ಚ ಪುಷ್ಕಳಂ
ಶ್ರಿಯಂ ಯಶಂ ಪ್ರೇತ್ಯ ಚ ಶೋಭನಾಂ ಗತಿಮ್ ॥೫೫॥

ಮಹಾತ್ಮರ ಈ ವಂಶವನ್ನು ಯಾವನು ನಿಯಮದಿಂದ ಪಠಿಸುತ್ತಾನೆಯೋ, ಅವನು ಮಕ್ಕಳನ್ನು ಪಡೆಯುತ್ತಾನೆ. ಪುಷ್ಕಳವಾದ ಸಂಪತ್ತನ್ನು ಮತ್ತು ಕೀರ್ತಿಯನ್ನು ಪಡೆಯುತ್ತಾನೆ. ದೇಹತ್ಯಾಗವನ್ನು ಮಾಡಿದ ಮೇಲೆ ಸದ್ಗತಿಯನ್ನು ಹೊಂದುತ್ತಾನೆ.

॥ ಇತಿ ಶ್ರೀಮನ್ಮಹಾಭಾರತೇ ಶತಸಹಸ್ರಿಕಾಯಾಂಸಂಹಿತಾಯಾಮಾದಿಪರ್ವಣಿ ಷಷ್ಟಿತಮೋऽಧ್ಯಾಯಃ ॥
॥ ಇತಿ ಸಂಭವಪರ್ವಣಿ ಅಷ್ಟಮೋऽಧ್ಯಾಯಃ ॥

ಇಲ್ಲಿಗೆ ಮಹಾಭಾರತದ ಆದಿಪರ್ವದಲ್ಲಿ ಅರವತ್ತನೆಯ ಅಧ್ಯಾಯ ಮುಗಿಯಿತು.

★★★★★

ಅರವತ್ತೊಂದನೆಯ ಅಧ್ಯಾಯ

(ಋಷ್ಯಾದಿ ವಂಶಕಥನ.)

ವೈಶಂಪಾಯನಃ

ಬ್ರಹ್ಮಣೋ ಮಾನಸಾಃ ಪುತ್ರಾ ಏದಿತಾಃ ಷಣ್ಮಹರ್ಷಯಃ ।
ಏಕಾದಶ ತಥಾ ರುದ್ರಾಃ ಸ್ಥಾಣೋಶ್ಚೈವ ಹಿ ಮಾನಸಾಃ ॥೧॥

ಷಣ್ಮಹರ್ಷಿಗಳು ಬ್ರಹ್ಮದೇವರ ಮಾನಸಪುತ್ರರೆಂದು ಪ್ರಸಿದ್ಧರಾದವರು. ಹಾಗೆಯೇ ಏಕಾದಶರುದ್ರರೂ ಸಹ ಬ್ರಹ್ಮದೇವರ ಮಾನಸ ಪುತ್ರರು.

ಮೃಗವ್ಯಾಧಶ್ಚ ಶರ್ವಶ್ಚ ನಿರೃತಿಶ್ಚ ಮಹಾಯಶಾಃ ।
ಅಜೈಕಪಾದಹಿರ್ಬುಧ್ನ್ಯಃ ಪಿನಾಕೀ ಚ ಪರಂತಪಃ ॥೨॥

ದಹನಶ್ಚೇಶ್ವರಶ್ಚೈವ ಕಪಾಲೀ ಚ ಮಹಾದ್ಯುತಿಃ ।
ಸ್ಥಾಣುರ್ಭವಶ್ಚ ಭಗವಾನ್ ರುದ್ರಾ ಏಕಾದಶ ಸ್ಮೃತಾಃ ॥೩॥

ಮೃಗವ್ಯಾಧ, ಶರ್ವ, ನಿರೃತಿ, ಅಜೈಕಪಾತ್, ಅಹಿರ್ಬುಧ್ನ್ಯ, ಪಿನಾಕೀ, ದಹನ, ಈಶ್ವರ, ಕಪಾಲೀ, ಸ್ಥಾಣು, ಪೂಜ್ಯನಾದ ಭವ ಇವರು ಏಕಾದಶ ರುದ್ರರೆಂದು ಪ್ರಸಿದ್ಧರಾಗಿದ್ದಾರೆ.

ಮರೀಚಿರಂಗಿರಾಶ್ಚಾತ್ರಿಃ ಪುಲಸ್ತ್ಯಃ ಪುಲಹಃ ಕ್ರತುಃ ।
ಷಡೇತೇ ಬ್ರಹ್ಮಣಃ ಪುತ್ರಾ ವೀರ್ಯವಂತೋ ಮಹರ್ಷಯಃ ॥೪॥

ಮರೀಚಿ, ಅಂಗಿರಸ, ಅತ್ರಿ, ಪುಲಸ್ತ್ಯ, ಪುಲಹ, ಕ್ರತು ಈ ಆರು ಜನ ಪರಾಕ್ರಮಶಾಲಿಗಳಾದ ಮಹರ್ಷಿಗಳು ಬ್ರಹ್ಮದೇವರ ಪುತ್ರರು.

ತ್ರಯಸ್ತ್ವಂಗಿರಸಃ ಪುತ್ರಾ ಲೋಕೇ ಸರ್ವತ್ರ ವಿಶ್ರುತಾಃ ।
ಬೃಹಸ್ಪತಿರುಚಥ್ಯಶ್ಚ ಸಂವರ್ತಶ್ಚ ದೃಢವ್ರತಾಃ ॥೫॥

ಅಂಗಿರಸರ ಮಕ್ಕಳು ಸರ್ವಲೋಕದಲ್ಲಿಯೂ ಪ್ರಸಿದ್ಧರಾದ ಮೂವರು. ಅವರು ಒಳ್ಳೆಯ ವ್ರತಧಾರಿಗಳಾದ ಬೃಹಸ್ಪತಿ, ಉಚಥ್ಯ ಮತ್ತು ಸಂವರ್ತ ಎಂಬುವರು.

ಅತ್ರೇಸ್ತು ಬಹವಃ ಪುತ್ರಾಃ ಶ್ರೂಯಂತೇ ಮನುಜಾಧಿಪ ।
ಸರ್ವೇ ವೇದವಿದಃ ಸಿದ್ಧಾಃ ಶಾಂತಾತ್ಮಾನೋ ಮಹರ್ಷಯಃ ॥೬॥

ಎಲೈ ರಾಜನೇ, ಅತ್ರಿಋಷಿಗಳಿಗೆ ಅನೇಕ ಮಕ್ಕಳೆಂದು ಕೇಳಿದ್ದೇನೆ. ಅವರೆಲ್ಲರೂ ವೇದವಿದ್ವಾಂಸರೂ, ಶಾಂತಮನಸ್ಸುಳ್ಳವರೂ, ಸಿದ್ಧರೂ ಆದ ಮಹರ್ಷಿಗಳು.

ರಾಕ್ಷಸಾಸ್ತು ಪುಲಸ್ತ್ಯಸ್ಯ ವಾನರಾಃ ಕಿನ್ನರಾಸ್ತಥಾ ।
ಯಕ್ಷಾಶ್ಚ ಮನುಜವ್ಯಾಘ್ರ ಹ್ಯಪತ್ಯಂ ತಸ್ಯ ಧೀಮತಃ ॥೭॥

ಎಲೈ ಪುರುಷಶ್ರೇಷ್ಠನೇ ಮೇಧಾವಿಗಳಾದ ಪುಲಸ್ತ್ಯರ ಮಕ್ಕಳು ರಾಕ್ಷಸರು, ವಾನರರು, ಕಿನ್ನರರು ಮತ್ತು ಯಕ್ಷರು.

ಪುಲಹಸ್ಯ ಸುತಾ ರಾಜನ್ ಶರಭಾಃ ಪರಿಕೀರ್ತಿತಾಃ ।
ಸಿಂಹಾ ಕಿಂಪುರುಷಾ ವ್ಯಾಘ್ರಾ ರೂಕ್ಷಾ ಈಹಾಮೃಗಾ ವೃಕಾಃ ॥೮॥

ಎಲೈ ರಾಜನೇ ಶರಭಗಳು, ಸಿಂಹಗಳು, ಕಿಂಪುರುಷಗಳು, ವ್ಯಾಘ್ರಗಳು, ಉಗ್ರವಾದ ಈಹಾಮೃಗಗಳು ಮತ್ತು ತೋಳಗಳು ಪುಲಹರ ಮಕ್ಕಳೆಂದು ಹೇಳಲ್ಪಡುತ್ತಾರೆ.

ಕ್ರತೋಃ ಕ್ರತುಸಮಾಃ ಪುತ್ರಾಃ ಪತಂಗಸಹಚಾರಿಣಃ ।
ವಿಶ್ರುತಾಸ್ತ್ರಿಷು ಲೋಕೇಷು ಸತ್ಯವ್ರತಪರಾಯಣಾಃ ॥೯॥

ಕ್ರತುವಿಗೆ ಆತ್ಮಸಮಾನರಾದ ಸೂರ್ಯನ ಜೊತೆಯಲ್ಲೇ ಸಂಚರಿಸುವ ಮೂರುಲೋಕದಲ್ಲೂ ಪ್ರಸಿದ್ಧರಾದ ಸತ್ಯವ್ರತಪರಾಯಣರಾದ ಅನೇಕ ಮಕ್ಕಳು.

ಅಂಗುಷ್ಠಾದ್ ದಕ್ಷಿಣಾದ್ ದಕ್ಷ ಉತ್ಪನ್ನೋ ಭಗವಾನೃಷಿಃ ।
ಬ್ರಹ್ಮಣಃ ಪೃಥಿವೀಪಾಲ ಪುತ್ರಃ ಪುತ್ರವತಾಂ ವರಃ ॥೧೦॥

ಎಲೈ ರಾಜನೇ ಪೂಜ್ಯನಾದ ಮತ್ತು ಋಷಿಯಾದ ಮತ್ತು ಮಕ್ಕಳನ್ನು ಹೊಂದಿದವರಲ್ಲಿ ಶ್ರೇಷ್ಠನಾದ ದಕ್ಷಪ್ರಜಾಪತಿಯು ಬ್ರಹ್ಮದೇವರ ದಕ್ಷಿಣಾಂಗುಷ್ಠದಿಂದ ಪುತ್ರನಾಗಿ ಜನಿಸಿದನು.

ಮಹರ್ಷೇಸ್ತಸ್ಯ ಭಾರ್ಯಾ ತು ವಾಮಾಂಗುಷ್ಠಾದಜಾಯತ ।
ತಸ್ಯಾಂ ಪಂಚಾಶತಂ ಕನ್ಯಾಃ ಸ ಏವಾಜನಯನ್ಮುನಿಃ ॥೧೧॥

ಮಹರ್ಷಿಯಾದ ಅವನ ಪತ್ನಿಯು ಬ್ರಹ್ಮದೇವನ ವಾಮಾಂಗುಷ್ಠದಿಂದ ಜನಿಸಿದಳು. ಅವಳಲ್ಲಿ ಮುನಿ ಸಮಾನನಾದ ಅವನು ಐವತ್ತು ಹೆಣ್ಣುಮಕ್ಕಳನ್ನು ಪಡೆದನು.

ತಾಃ ಸರ್ವಾಸ್ತ್ವನವದ್ಯಾಂಗ್ಯಃ ಕನ್ಯಾಃ ಕಮಲಲೋಚನಾಃ ।
ಪುತ್ರಿಕಾಃ ಸ್ಥಾಪಯಾಮಾಸ ನಷ್ಟಪುತ್ರಃ ಪ್ರಜಾಪತಿಃ ॥೧೨॥

ಆ ಎಲ್ಲಾ ಕನ್ಯೆಯರೂ ನಿರ್ದುಷ್ಟವಾದ ದೇಹವುಳ್ಳವರು. ಮತ್ತು ಕಮಲನಯನೆಯರು. ಗಂಡುಮಕ್ಕಳನ್ನು ಕಳೆದುಕೊಂಡ ದಕ್ಷಪ್ರಜಾಪತಿಯು ತನ್ನ ಹೆಣ್ಣುಮಕ್ಕಳನ್ನು ಪ್ರಪಂಚದಲ್ಲಿ ಸ್ಥಾಪಿಸಿದನು.

ದದೌ ಸ ದಶ ಧರ್ಮಾಯ ಸಪ್ತವಿಂಶತಿ ಚೇಂದವೇ ।
ದಿವ್ಯೇನ ವಿಧಿನಾ ರಾಜನ್ ಕಾಶ್ಯಪಾಯ ತ್ರಯೋದಶ ॥೧೩॥

ಎಲೈ ರಾಜನೇ ದಕ್ಷಪ್ರಜಾಪತಿಯು ಹತ್ತು ಕನ್ಯೆಯರನ್ನು ಯಮಧರ್ಮನಿಗೂ, ಇಪ್ಪತ್ತೇಳು ಕನ್ಯೆಯರನ್ನು ಚಂದ್ರನಿಗೂ, ಹದಿಮೂರು ಕನ್ಯೆಯರನ್ನು ಕಾಶ್ಯಪರಿಗೂ ದಿವ್ಯವಾದ ವಿಧಾನದಿಂದ ವಿವಾಹ ಮಾಡಿಕೊಟ್ಟನು.

ನಾಮತೋ ಧರ್ಮಪತ್ನ್ಯಸ್ತಾಃ ಕೀರ್ತ್ಯಮಾನಾ ನಿಬೋಧ ಮೇ ।
ಮೂರ್ತಿರ್ಲಕ್ಷ್ಮೀರ್ಧೃತಿರ್ಮೇಧಾ ಪುಷ್ಟಿಃ ಶ್ರದ್ಧಾ ಕ್ರಿಯಾ ತಥಾ ॥೧೪॥

ಬುದ್ಧಿರ್ಲಜ್ಜಾ ಮತಿಶ್ಚೈವ ಪತ್ನ್ಯೋ ಧರ್ಮಸ್ಯ ತಾ ದಶ ।
ಭಾರ್ಯಾ ಹ್ಯೇತಾಶ್ಚ ಧರ್ಮಸ್ಯ ವಿಹಿತಾಶ್ಚ ಸ್ವಯಂಭುವಾ ॥೧೫॥

ಯಮಧರ್ಮಪತ್ನಿಯರ ನಾಮಗಳನ್ನು ಹೇಳುತ್ತೇನೆ ಕೇಳು - ಮೂರ್ತಿ, ಲಕ್ಷ್ಮೀ, ಧೃತಿ, ಮೇಧಾ, ಪುಷ್ಟಿ, ಶ್ರದ್ಧಾ, ಕ್ರಿಯಾ, ಬುದ್ಧಿ, ಲಜ್ಜಾ ಮತ್ತು ಮತಿ ಈ ಹತ್ತುಜನರು ಧರ್ಮರಾಜನ ಪತ್ನಿಯರು. ಇವರು ಯಮಧರ್ಮನ ಪತ್ನಿಯರಾಗಬೇಕೆಂದು ಬ್ರಹ್ಮದೇವರು ಮೊದಲೇ ನಿರ್ಧಾರಮಾಡಿದ್ದರು.

ಸಪ್ತವಿಂಶತಿ ಸೋಮಸ್ಯ ಪತ್ನ್ಯೋ ಲೋಕಪರಿಶ್ರುತಾಃ ।
ಕಾಲಸ್ಯ ನಯನೇ ಯುಕ್ತಾ ಧರ್ಮಪತ್ನ್ಯಃ ಶುಚಿವ್ರತಾಃ ॥೧೬॥

ಸರ್ವಾ ನಕ್ಷತ್ರಯೋಗಿನ್ಯೋ ಲೋಕಯಾತ್ರಾವಿಧೌ ಸ್ಥಿತಾಃ ।
ಪಿತಾಮಹೋ ಮುನಿರ್ದೇವಃ ತಸ್ಯ ಪುತ್ರಃ ಪ್ರಜಾಪತಿಃ ॥೧೭॥

ಚಂದ್ರನ ಪತ್ನಿಯರು ಲೋಕಪ್ರಸಿದ್ಧರಾದ ಇಪ್ಪತ್ತೇಳುಮಂದಿ. ಕಾಲಚಕ್ರದಲ್ಲಿ ನಿಯೋಜಿಸಲ್ಪಟ್ಟ ಅವರೆಲ್ಲರೂ ಧಾರ್ಮಿಕರು ಮತ್ತು ಒಳ್ಳೆಯ ವ್ರತವನ್ನು ಧರಿಸಿದವರು. ಎಲ್ಲರೂ ನಕ್ಷತ್ರದ ಹೆಸರನ್ನು ಹೊಂದಿದವರು. ಮತ್ತು ಲೋಕಯಾತ್ರೆಗೆ ಸಹಕಾರಿಗಳಾದವರು. ಋಷಿಗಳಾದ ಬ್ರಹ್ಮದೇವರ ಮಕ್ಕಳು ಕಾಶ್ಯಪರು. ಅವರೂ ಒಬ್ಬ ಪ್ರಜಾಪತಿಗಳು.

ತಸ್ಯಾಷ್ಟೌ ವಸವಃ ಪುತ್ರಾಸ್ತೇಷಾಂ ವಕ್ಷ್ಯಾಮಿ ವಿಸ್ತರಮ್ ।
ಧರೋ ಧ್ರುವಶ್ಚ ಸೋಮಶ್ಚ ಆಪಶ್ಚೈವಾನಿಲೋಽನಲಃ ॥೧೮॥

ಪ್ರತ್ಯೂಷಶ್ಚ ಪ್ರಭಾಸಶ್ಚ ವಸವೋಽಷ್ಟಾವಿತಿ ಸ್ಮೃತಾಃ ।
ಧೂಮ್ರಾಯಾಶ್ಚ ಧರಃ ಪುತ್ರೋ ಬ್ರಹ್ಮವಿದ್ಯಾಸುತೋ ಧ್ರುವಃ ॥೧೯॥

ಅವರಿಗೆ ಅಷ್ಟವಸುಗಳು ಪುತ್ರರು. ಅವರ ವಿಸ್ತಾರವನ್ನು ಹೇಳುವೆನು ಕೇಳು. ಧರ, ಧ್ರುವ, ಸೋಮ, ಆಪ, ಅನಿಲ, ಅನಲ, ಪ್ರತ್ಯೂಷ ಮತ್ತು ಪ್ರಭಾಸ ಇವರು ಅಷ್ಟವಸುಗಳೆಂದು ಪ್ರಸಿದ್ಧರಾದವರು. ದಕ್ಷಪ್ರಜಾಪತಿಯ ಇತರ ಹೆಣ್ಣುಮಕ್ಕಳಲ್ಲಿ ಒಬ್ಬಳಾದ ಧೂಮ್ರ ಎಂಬುವಳ ಪುತ್ರ ಧರ. ಬ್ರಹ್ಮಜಾ ಎಂಬುವಳ ಮಗ ಧ್ರುವ.

ಚಂದ್ರಮಾಶ್ಚ ಮನಸ್ವಿನ್ಯಾಃ ಶ್ವಸಾಯಾಃ ಶ್ವಸನಸ್ತಥಾ ।
ರಸಾಯಾಶ್ಚ ರಸಃ ಪುತ್ರಃ ಶಾಂಡಿಲ್ಯಾಯಾ ಹುತಾಶನಃ ॥೨೦॥

ಮನಸ್ವಿನಿ ಎಂಬುವಳ ಪುತ್ರ ಚಂದ್ರ, ಶ್ವಸಾ ಎಂಬುವಳ ಪುತ್ರ ಶ್ವಸನ. ರಸಾ ಎಂಬುವಳ ಪುತ್ರ ರಸ, ಶಾಂಡಿಲ್ಯಾ ಎಂಬುವಳ ಪುತ್ರ ಹುತಾಶನ.

ಪ್ರತ್ಯೂಷಶ್ಚ ಪ್ರಭಾಸಶ್ಚ ಪ್ರಭಾಸಾಯಾಃ ಸುತೌ ಸ್ಮೃತೌ ।
ಧರಸ್ಯ ಪುತ್ರೋ ದ್ರವಿಣೋ ಹುತಹವ್ಯವಹಸ್ತಥಾ ॥೨೧॥

ಪ್ರತ್ಯೂಷ ಮತ್ತು ಪ್ರಭಾಸ ಇವರಿಬ್ಬರು ಪ್ರಭಾಸಾ ಎಂಬುವಳ ಮಕ್ಕಳು ಎಂದು ಪ್ರಸಿದ್ಧರು. ಧರನಿಗೆ ದ್ರವಿಣ ಮತ್ತು ಹುತಹವ್ಯವಹ ಎಂಬ ಎರಡು ಮಕ್ಕಳು.

ಆಪಸ್ಯ ಪುತ್ರೋ ವೈತಂಡ್ಯಃ ಶ್ರಮಃ ಶಾಂತೋ ಮುನಿಸ್ತಥಾ ।
ಧ್ರುವಸ್ಯ ಪುತ್ರೋ ಭಗವಾನ್ ಕಾಲೋ ಲೋಕಪ್ರಕಾಲನಃ ॥೨೨॥

ವೈತಂಡ್ಯ, ಶ್ರಮ, ಶಾಂತ ಮತ್ತು ಮುನಿ ಇವರು ಆಪ ವಸುವಿನ ಮಕ್ಕಳು. ಲೋಕವನ್ನು ಕಂಪಿಸುವ ಪೂಜ್ಯನಾದ ಕಾಲನು ಧ್ರುವನ ಪುತ್ರ.

ಸೋಮಸ್ಯ ತು ಸುತೋ ವರ್ಚಾ ವರ್ಚಸ್ವೀ ಯೇನ ಜಾಯತೇ ।
ಮನೋಹರಾಯಾಃ ಶಿಶಿರಃ ಪ್ರಾಣೋಽಥ ರಮಣಸ್ತಥಾ ॥೨೩॥

ಸೋಮನ ಮಗ ಎಲ್ಲರ ವರ್ಚಸ್ಸಿಗೂ ಕಾರಣನಾದ ವರ್ಚ ಎಂಬುವನು. ಮನೋಹರ ಎಂಬುವಳಿಗೆ ಶಿಶಿರ, ಪ್ರಾಣ ಮತ್ತು ರಮಣ ಎಂಬ ಮೂರು ಮಕ್ಕಳು.

ಅಹ್ನಃ ಸುತಃ ಸ್ಮೃತೋ ಜ್ಯೋತಿಃ ಶ್ರುತಃ ಶಾಂತಸ್ತಥಾ ಮುನಿಃ ।
ಅಗ್ನೇಃ ಪುತ್ರಃ ಕುಮಾರಶ್ಚ ಶ್ರಿಮಾಂಛರವಣಾಲಯಃ ॥೨೪॥

ಅಹನ್ನಾಮಕ ವಸುವಿನ ಪುತ್ರರು ಜ್ಯೋತಿ, ಶ್ರುತ, ಶಾಂತ ಮತ್ತು ಮುನಿ ಎಂಬುವರು. ಶರವಣಭವನಾದ ಷಣ್ಮುಖನೂ ಸಹ ಅಗ್ನಿಯ ಪುತ್ರ.

ತಸ್ಯ ಶಾಖೋ ವಿಶಾಖಶ್ಚ ನೈಗಮೇಯಶ್ಚ ಪೃಷ್ಠತಃ ।
ಕೃತ್ತಿಕಾಸ್ತನ್ಯಪಾನೇನ ಕಾರ್ತಿಕೇಯ ಇತಿ ಸ್ಮೃತಃ ॥೨೫॥

ಕುಮಾರನಿಗೆ ಶಾಖಾ, ವಿಶಾಖ ಮತ್ತು ನೈಗಮೇಯ ಎಂಬ ಮೂರು ಮಕ್ಕಳು. ಆರು ಕೃತ್ತಿಕೆಯರ ಸ್ತನ್ಯಪಾನವನ್ನು ಮಾಡಿದುದರಿಂದ ಅವನಿಗೆ ಕಾರ್ತಿಕೇಯ ಎಂದೂ ಹೆಸರು.

ಅನಿಲಸ್ಯ ಶಿವಾ ಭಾರ್ಯಾ ತಸ್ಯಾಃ ಪುತ್ರಃ ಪುರೋಜವಃ ।
ಅವಿಜ್ಞಾತಗತಿಶ್ಚೈವ ದ್ವೌ ಪುತ್ರಾವನಿಲಸ್ಯ ತು ॥೨೬॥

ಅನಿಲನ ಭಾರ್ಯೆ ಶಿವಾ. ಅವನಿಗೆ ಪುರೋಜವ, ಅವಿಜ್ಞಾತ ಮತ್ತು ಗತಿ ಎಂಬ ಮೂರುಮಕ್ಕಳು.

ಪ್ರತ್ಯೂಷಸ್ಯ ವಿದುಃ ಪುತ್ರಮೃಷಿಂ ನಾಮ್ನಾ ತು ದೇವಲಮ್ ।
ದ್ವೌ ಪುತ್ರೌ ದೇವಲಸ್ಯಾಪಿ ಕ್ಷಮಾವಂತೌ ಮನೀಷಿಣೌ ॥೨೭॥

ಪ್ರತ್ಯೂಷನ ಪುತ್ರರು ದೇವಲಋಷಿಗಳು. ದೇವಲರಿಗೂ ಸಹ ಕ್ಷಮಾಶೀಲರೂ ಮತ್ತು ಮೇಧಾವಿಗಳೂ ಆದ ಇಬ್ಬರು ಪುತ್ರರು.

ಬೃಹಸ್ಪತೇಸ್ತು ಭಗಿನೀ ವರಸ್ತ್ರೀ ಬ್ರಹ್ಮಚಾರಿಣೀ ।
ಯೋಗಸಿದ್ಧಾ ಜಗತ್ಸರ್ವಮಸಕ್ತಾ ವಿಚರತ್ಯುತ ॥೨೮॥

ಬೃಹಸ್ಪತಿಗಳ ತಂಗಿಯು ರೂಪವತಿಯಾಗಿದ್ದು ಯೋಗಸಿದ್ಧಳಾಗಿ ಬ್ರಹ್ಮಚಾರಿಣಿಯಾಗಿ ವೈರಾಗ್ಯವನ್ನು ತಾಳಿ ಜಗತ್ತಿನಲ್ಲೆಲ್ಲಾ ಸಂಚರಿಸಿದಳು.

ಪ್ರಭಾಸಸ್ಯ ತು ಭಾರ್ಯಾಯಾಂ ವಸೂನಾಮಷ್ಟಮಸ್ಯ ತು ।
ವಿಶ್ವಕರ್ಮಾ ಮಹಾಭಾಗೋ ಜಜ್ಞೇ ಶಿಲ್ಪವಿದಾಂ ವರಃ ॥೨೯॥

ಎಂಟನೆಯ ವಸುವಾದ ಪ್ರಭಾಸನ ಮಗ ಶಿಲ್ಪವಿದ್ಯೆಯನ್ನು ತಿಳಿದವರಲ್ಲಿ ಶ್ರೇಷ್ಠನಾದ ಮಹಾನುಭಾವನಾದ ವಿಶ್ವಕರ್ಮ.

ಕರ್ತಾ ಶಿಲ್ಪಸಹಸ್ರಾಣಾಂ ತ್ರಿದಶಾನಾಂ ಚ ವರ್ಧಕಿಃ ।
ಭೂಷಣಾನಾಂ ಚ ಸರ್ವೇಷಾಂ ಕರ್ತಾ ಶಿಲ್ಪವತಾಂ ವರಃ ॥೩೦॥

ಅವನು ಸಹಸ್ರಾರು ಶಿಲ್ಪಗಳನ್ನು ಮಾಡುವವನು. ದೇವತೆಗಳ ಬಡಗಿ. ಎಲ್ಲಾ ಭೂಷಣಗಳನ್ನು ಸಿದ್ಧಪಡಿಸುವ ಶಿಲ್ಪಿಶ್ರೇಷ್ಠನಾದವನು.

ಯೋ ದಿವ್ಯಾನಿ ವಿಮಾನಾನಿ ದೇವತಾನಾಂ ಚಕಾರ ಹ ।
ಮನುಷ್ಯಾಶ್ಚೋಪಜೀವಂತಿ ತಸ್ಯ ಶಿಲ್ಪಂ ಮಹಾತ್ಮನಃ ।
ಪೂಜಯಂತಿ ಚ ಯಂ ನಿತ್ಯಂ ವಿಶ್ವಕರ್ಮಾಣಮವ್ಯಯಮ್ ॥೩೧॥

ಅವನು ದೇವತೆಗಳ ಸಲುವಾಗಿ ದಿವ್ಯವಾದ ವಿಮಾನಗಳನ್ನು ನಿರ್ಮಿಸಿದನು. ಆ ಮಹಾನುಭಾವನ ಶಿಲ್ಪವಿದ್ಯೆಯ ಒಂದು ಅಂಶವನ್ನು ಮನುಷ್ಯರು ಪ್ರತಿನಿಧಿಸುತ್ತಾರೆ. ಗುಣಗಳ ಚ್ಯುತಿಯನ್ನು ಹೊಂದದ ಆ ವಿಶ್ವಕರ್ಮನನ್ನು ಯಾವಾಗಲೂ ಪೂಜಿಸುತ್ತಾರೆ.

ಸ್ತನಂ ತು ದಕ್ಷಿಣಂ ಭಿತ್ತ್ವಾ ಬ್ರಹ್ಮಣಃ ಪುರುಷೋತ್ತಮಃ ।
ನಿಸ್ಸೃತೋ ಭಗವಾನ್ ಧರ್ಮಃ ಸರ್ವಲೋಕಸುಖಾವಹಃ ।
ತ್ರಯಸ್ತಸ್ಯ ವರಾಃ ಪುತ್ರಾಃ ಸರ್ವಭೂತಮನೋಹರಾಃ ॥೩೨॥

ಪುರುಷರ ಶ್ರೇಷ್ಠತೆಗೆ ಕಾರಣನಾದ ಭಗವಾನ್ ಧರ್ಮನು ಸರ್ವಲೋಕಕ್ಕೆ ಸುಖವನ್ನುಂಟುಮಾಡುವವನಾಗಿ ಬ್ರಹ್ಮದೇವನ ದಕ್ಷಿಣ ಸ್ತನವನ್ನು ಬೇಧಿಸಿಕೊಂಡು ಹೊರಗೆ ಬಂದನು. ಎಲ್ಲಾ ಪ್ರಾಣಿಗಳಿಗೂ ಮನೋಹರರಾದ ಮೂವರು ಅವನ ಶ್ರೇಷ್ಠರಾದ ಪುತ್ರರು.

ಶಮಃ ಕಾಮಶ್ಚ ಹರ್ಷಶ್ಚ ಮನಸಃ ಪ್ರೀತಿವರ್ಧನಾಃ ।
ಕಾಮಸ್ಯ ತು ರತಿರ್ಭಾರ್ಯಾ ಶಮಸ್ಯ ಪ್ರೀತಿರಂಗನಾ ॥೩೩॥

ಎಲ್ಲರ ಮನಸ್ಸಿಗೂ ಸಂತೋಷವನ್ನುಂಟು ಮಾಡುವ ಅವರ ಹೆಸರು ಶಮ, ಕಾಮ ಮತ್ತು ಹರ್ಷ ಎಂದು. ಕಾಮನ ಪತ್ನಿಯು ರತಿ. ಶಮನ ಪತ್ನಿಯ ಹೆಸರು ಪ್ರೀತಿ.

ನಂದೀ ತು ಭಾರ್ಯಾ ಹರ್ಷಸ್ಯ ಯತ್ರ ಲೋಕಾಃ ಪ್ರತಿಷ್ಠಿತಾಃ ।
ಮರೀಚೇಃ ಕಾಶ್ಯಪಃ ಪುತ್ರಃ ಕಾಶ್ಯಪಸ್ಯ ಸುರಾಸುರಾಃ ।
ಜಜ್ಞಿರೇ ನೃಪಶಾರ್ದೂಲ ಲೋಕಾನಾಂ ಪ್ರಭವಸ್ತು ಸಃ ॥೩೪॥

ಹರ್ಷನ ಪತ್ನಿಯ ಹೆಸರು ನಂದೀ. ಇವರಲ್ಲಿ ಲೋಕವು ಪ್ರತಿಷ್ಠಿತವಾಗಿದೆ. ಮರೀಚಿಯ ಮಕ್ಕಳಾದ ಕಾಶ್ಯಪರಲ್ಲಿ ದೇವತೆಗಳು ಮತ್ತು ಅಸುರರು ಜನಿಸಿದರು. ಎಲೈ ನೃಪಶ್ರೇಷ್ಠನೇ ಕಾಶ್ಯಪರು ಎಲ್ಲ ಜೀವರಿಗೂ ಉತ್ಪತ್ತಿಸ್ಥಾನರಾದವರು.

ತ್ವಾಷ್ಟ್ರೀ ತು ಸವಿತುರ್ಭಾರ್ಯಾ ವಡವಾರೂಪಧಾರಿಣೀ ।
ಅಸೂಯತ ಮಹಾಭಾಗಾ ಸಾऽಂತರಿಕ್ಷೇऽಶ್ವಿನಾವುಭೌ ॥೩೫॥

ಸವಿತೃವಿನ ಪತ್ನಿಯಾದ ತ್ವಾಷ್ಟ್ರಿಯು ಹೆಣ್ಣು ಕುದುರೆಯ ರೂಪವನ್ನು ಧರಿಸಿ ಅಂತರಿಕ್ಷಲೋಕದಲ್ಲಿ ಅಶ್ವಿನಿದೇವತೆಗಳನ್ನು ಪಡೆದಳು.

ದ್ವಾದಶೈವಾದಿತೇಃ ಪುತ್ರಾಃ ಶಕ್ರಮುಖ್ಯಾ ನರಾಧಿಪ ।
ತೇಷಾಮವರಜೋ ವಿಷ್ಣುರ್ಯತ್ರ ಲೋಕಾಃ ಪ್ರತಿಷ್ಠಿತಾಃ ॥೩೬॥

ಅದಿತಿಯ ಮಕ್ಕಳು ಇಂದ್ರ ಮೊದಲಾದ ಹನ್ನೆರಡೇ ಮಂದಿ. ಎಲೈ ರಾಜನೇ ಅವರಲ್ಲಿ ಚಿಕ್ಕವನಾದ ವಿಷ್ಣುವನ್ನು ಎಲ್ಲಾ ಲೋಕಗಳೂ ಆಧರಿಸಿಕೊಂಡಿವೆ.

ತ್ರಯಸ್ತ್ರಿಂಶತ ಇತ್ಯೇತೇ ದೇವಾಸ್ತೇಷಾಮಹಂ ತವ ।
ಅನ್ವಯಂ ಸಂಪ್ರವಕ್ಷ್ಯಾಮಿ ಪಕ್ಷೈಶ್ಚ ಕುಲತೋ ಗಣೈಃ ॥೩೭॥

ಈ ಮೂವತ್ತ್ಮೂರು ವ್ಯಕ್ತಿಗಳೇ (ಪ್ರಧಾನರಾದ) ದೇವತೆಗಳು. ಅವರ ವಂಶವನ್ನು ಕುಲದ ದೃಷ್ಟಿಯಿಂದಲೂ, ಗಣದ ದೃಷ್ಟಿಯಿಂದಲೂ ಮತ್ತು ಯಾವ ಪಕ್ಷಕ್ಕೆ ಸೇರಿದವರು ಎಂಬ ದೃಷ್ಟಿಯಿಂದಲೂ ನಾನು ನಿನಗೆ ಹೇಳುತ್ತೇನೆ.

ರುದ್ರಾಣಾಮಪರಂ ಪಕ್ಷಂ ಸಾಧ್ಯಾನಾಂ ಮರುತಾಂ ತಥಾ ।
ವಸೂನಾಂ ಭಾರ್ಗವಂ ವಿದ್ಯಾದ್ ವಿಶ್ವೇದೇವಾಂಸ್ತಥೈವ ಚ ॥೩೮॥

ಏಕಾದಶರುದ್ರರು ಕೃಷ್ಣಪಕ್ಷದ ದೇವತೆಗಳ ಗುಂಪಿಗೆ ಸೇರಿದವರು. ಸಾಧ್ಯರು, ಮರುತ್‌ಗಳು ಮತ್ತು ವಸುಗಳು ಹಾಗೇ ವಿಶ್ವೇದೇವತೆಗಳೂ ಸಹ ಭಾರ್ಗವರ ಪಕ್ಷಕ್ಕೆ ಸೇರಿದವರು.

ವೈನತೇಯಸ್ತು ಗರುಡೋ ಬಲವಾನರುಣಸ್ತಥಾ ।
ಬೃಹಸ್ಪತಿಶ್ಚ ಭಗವಾನ್ ಆದಿತ್ಯೇಷ್ವೇವ ಗಣ್ಯತೇ ।
ಅಶ್ವಿಭ್ಯಾಂ ಗುಹ್ಯಕಾನ್ ವಿದ್ಧಿ ಸರ್ವೌಷಧ್ಯಸ್ತಥಾ ಪಶೂನ್ ॥೩೯॥

ಬಲಿಷ್ಠನಾದ ಗರುಡನೂ ಅರುಣನೂ, ಪೂಜ್ಯರಾದ ಬೃಹಸ್ಪತಿಗಳೂ ಆದಿತ್ಯರ ಗುಂಪಿನಲ್ಲಿಯೇ ಸೇರುತ್ತಾರೆ. ಗುಹ್ಯಕರು, ಎಲ್ಲಾ ಓಷಧಿಗಳು ಮತ್ತು ಎಲ್ಲಾ ಪಶುಗಳು ಅಶ್ವಿನಿದೇವತೆಗಳ ಪಕ್ಷಕ್ಕೆ ಸೇರಿದವರೆಂದು ತಿಳಿ.

ಏಷ ದೇವಗಣಾ ರಾಜನ್ ಕೀರ್ತಿತಾಸ್ತೇऽನುಪೂರ್ವಶಃ ।
ಯಂ ಕೀರ್ತಯಿತ್ವಾ ಮನುಜಃ ಸರ್ವಪಾಪೈಃ ಪ್ರಮುಚ್ಯತೇ ॥೪೦॥

ಎಲೈ ರಾಜನೇ ಇದು ದೇವತೆಗಳ ಗಣ. ನಾನು ನಿನಗೆ ಇದನ್ನು ಅನುಕ್ರಮವಾಗಿ ಹೇಳಿದ್ದೇನೆ. ಇದನ್ನು ಕೇಳುವ ಮನುಷ್ಯನು ಎಲ್ಲಾ ಪಾಪಗಳಿಂದಲೂ ನಿರ್ಮುಕ್ತನಾಗುತ್ತಾನೆ.

ಬ್ರಹ್ಮಣೋ ಹೃದಯಂ ಭಿತ್ತ್ವಾ ನಿಃಸೃತೋ ಭಗವಾನ್ ಭೃಗುಃ ।
ಭೃಗೋಃ ಪುತ್ರಃ ಕವಿರ್ವಿದ್ವಾನ್ ಶುಕ್ರಃ ಕವಿಸುತಃ ಸ್ಮೃತಃ ॥೪೧॥

ಪೂಜ್ಯರಾದ ಭೃಗುಋಷಿಗಳು ಬ್ರಹ್ಮದೇವರ ಹೃದಯವನ್ನು ಭೇದಿಸಿಕೊಂಡು ಹೊರಗೆ ಬಂದರು. ಭೃಗುಗಳ ಮಕ್ಕಳು ಖ್ಯಾತರಾದ ಕವಿಗಳು ಕವಿಯ ಮಕ್ಕಳು ಶುಕ್ರಾಚಾರ್ಯರು. ಆದ್ದರಿಂದ ಅವನಿಗೆ ಕಾವ್ಯ ಎಂದೂ ಹೆಸರು.

ತ್ರೈಲೋಕ್ಯಪ್ರಾಣಯಾತ್ರಾರ್ಥಂ ವರ್ಷಾವರ್ಷೇ ನಯಾನಯೇ ।
ಸ್ವಯಂಭುವಾ ನಿಯುಕ್ತಃ ಸನ್ ಭುವನಂ ಪರಿಧಾವತಿ ॥೪೨॥

ಶುಕ್ರಾಚಾರ್ಯರು ಮೂರುಲೋಕಗಳ ಪ್ರಾಣಯಾತ್ರೆಯನ್ನು ನಡೆಸುವ ಸಲುವಾಗಿ, ಮಳೆ ಮತ್ತು ಬರ ಹಾಗೆಯೇ ನ್ಯಾಯ ಮತ್ತು ಅನ್ಯಾಯಗಳಿಗೆ ಅಧಿಪತಿಗಳಾಗಿ ಬ್ರಹ್ಮದೇವರಿಂದ ನಿಯಮಿಸಲ್ಪಟ್ಟು ಲೋಕದಲ್ಲಿ ಸಂಚರಿಸುತ್ತಾರೆ.

ಯೋಗಾಚಾರ್ಯೋ ಮಹಾಬುದ್ಧಿರ್ದೈತ್ಯಾನಾಮಭವದ್ ಗುರುಃ ।
ಸುರಾಣಾಂ ಚಾಹಿತೇ ಯುಕ್ತೋ ಬ್ರಹ್ಮಚಾರೀ ಯತವ್ರತಃ ॥೪೩॥

ಯೋಗಾಚಾರ್ಯರೂ ಮಹಾಬುದ್ಧಿಶಾಲಿಗಳೂ ಆದ ಅವರು ದೈತ್ಯರಿಗೆ ಗುರುಗಳಾದರು. ಅವರು ಭಗವನ್ನಿಷ್ಠರಾಗಿ, ವ್ರತಗಳನ್ನು ಧರಿಸಿದವರಾಗಿ ದೇವತೆಗಳಿಗೆ ಅಪ್ರಿಯವನ್ನುಂಟು ಮಾಡುವುದರಲ್ಲಿ ನಿರತರಾಗಿರುತ್ತಾರೆ.

ತಸ್ಮಿನ್ ನಿಯುಕ್ತೇ ಗುರುಣಾ ಯೋಗಕ್ಷೇಮಾಯ ಭಾರ್ಗವೇ ।
ಅನ್ಯಮುತ್ಪಾದಯಾಮಾಸ ಪುತ್ರಂ ಭೃಗುರನಿಂದಿತಮ್ ॥೪೪॥

ಭೃಗುಕುಲದಲ್ಲಿ ಜನಿಸಿದ ಶುಕ್ರಾಚಾರ್ಯರು ಜಗತ್ತಿನ ಯೋಗಕ್ಷೇಮವನ್ನು ನೋಡಿಕೊಳ್ಳುವಂತೆ ಬ್ರಹ್ಮದೇವರಿಂದ ನಿಯಮಿಸಲ್ಪಡುತ್ತಿರಲು, ಭೃಗುಋಷಿಗಳು ದೋಷರಹಿತನಾದ ಇನ್ನೊಬ್ಬ ಪುತ್ರನನ್ನು ಪಡೆದರು.

ಚ್ಯವನಂ ದೀಪ್ತತಪಸಂ ಧರ್ಮಾತ್ಮಾನಮತೀಂದ್ರಿಯಮ್ ।
ಯಃ ಸ ರೋಷಾಚ್ಚ್ಯುತೋ ಗರ್ಭಾತ್ ಮಾತುಃ ಕ್ಷೇಮಾಯ ಭಾರತ ॥

ಅವರೇ ದೀಪ್ತ ತಪಸ್ಸುಳ್ಳ ಧರ್ಮನಿಷ್ಠೆಯುಳ್ಳ ಜಿತೇಂದ್ರಿಯರಾದ ಚ್ಯವನರು. ಅವರು ರೋಷದಿಂದ ತಾಯಿಯ ಗರ್ಭದಿಂದ ಹೊರಗೆ ಬಂದು ತಾಯಿಗೆ ಕ್ಷೇಮವನ್ನು ಉಂಟುಮಾಡಿದರು.

ಆರುಷೀ ತು ಮನೋಃ ಕನ್ಯಾ ತಸ್ಯ ಪತ್ನೀ ಮನೀಷಿಣಃ ।
ಔರ್ವಸ್ತಸ್ಯ ಋಷಿಃ ಪುತ್ರ ಊರುಂ ಭಿತ್ತ್ವಾ ವಿನಿರ್ಗತಃ ॥೪೬॥

ಆ ಮೇಧಾವಿಗಳಾದ ಚ್ಯವನರ ಪತ್ನಿಯು ಮನುವಿನ ಮಗಳಾದ ಆರುಷೀ ಎಂಬುವಳು. ಅವಳ ಪುತ್ರರಾದ ಔರ್ವಋಷಿಗಳು ಅವಳ ತೊಡೆಯನ್ನು ಬೇಧಿಸಿಕೊಂಡು ಹೊರಗೆ ಬಂದವರು.

ಮಹಾಬಲೋ ಮಹಾತೇಜಾ ಬಾಲ ಏವ ಗುಣೈರ್ಯುತಃ ।
ಋಚೀಕಸ್ತಸ್ಯ ಪುತ್ರಸ್ತು ಜಮದಗ್ನಿಸ್ತತೋಽಭವತ್ ॥೪೭॥

ಮಹಾಬಲಿಷ್ಠರೂ, ಮಹಾತೇಜಸ್ವಿಗಳೂ ಆದ ಅವರು ಬಾಲ್ಯದಿಂದಲೇ ಬಹಳಗುಣಗಳಿಂದ ಕೂಡಿದ್ದರು. ಅವರ ಮಕ್ಕಳು ಋಚೀಕರು. ಋಚೀಕರ ಪುತ್ರರು ಜಮದಗ್ನಿ ಋಷಿಗಳು.

ಜಮದಗ್ನೇಸ್ತು ಚತ್ವಾರ ಆಸನ್ ಪುತ್ರಾ ಮಹಾತ್ಮನಃ ।
ರಾಮಸ್ತೇಷಾಂ ಜಘನ್ಯೋಽಭೂದಜಘನ್ಯೈರ್ಗುಣೈರ್ವೃತಃ ॥೪೮॥

ಮಹಾತ್ಮರಾದ ಜಮದಗ್ನಿಗಳಿಗೆ ನಾಲ್ವರು ಮಕ್ಕಳಾದರು. ಅವರಲ್ಲಿ ಚಿಕ್ಕವನಾದ ಪರಶುರಾಮನು ಅನೇಕ ಗುಣಗಳಿಂದ ಕೂಡಿದವನಾಗಿ, ಸರ್ವಶ್ರೇಷ್ಠನಾಗಿದ್ದನು.

ಸರ್ವಶಾಸ್ತ್ರಾಸ್ತ್ರಕುಶಲಃ ಕ್ಷತ್ರಿಯಾಂತಕರೋ ಬಲೀ ।
ಔರ್ವಸ್ಯಾಸೀತ್ ಪುತ್ರಶತಂ ಜಮದಗ್ನಿಪುರೋಗಮಮ್ ॥೪೯॥

ಪರಶುರಾಮನು ಬಲಿಷ್ಠನಾಗಿಯೂ, ಸರ್ವಶಸ್ತ್ರಾಸ್ತ್ರಕುಶಲನಾಗಿಯೂ, ಮತ್ತು ಕ್ಷತ್ರಿಯಕುಲವನ್ನು ಸಂಹಾರ ಮಾಡುವನಾಗಿಯೂ ಇದ್ದನು. ಔರ್ವಋಷಿಗಳಿಗೆ ಜಮದಗ್ನಿಯೇ ಮೊದಲಾದ ನೂರು ಮಕ್ಕಳಾದರು,

ತೇಷಾಂ ಪುತ್ರಸಹಸ್ರಾಣಿ ಬಭೂವುರ್ಭುವಿ ಭೂಸುರಾಃ ।
ದ್ವೌ ಪುತ್ರೌ ಬ್ರಹ್ಮಣಸ್ತ್ವನ್ಯೌ ಯಯೋಸ್ತಿಷ್ಠತಿ ವೈ ಜಗತ್ ॥೫೦॥

ಆ ನೂರುಮಕ್ಕಳಿಗೆ ಸಾವಿರಾರು ಮಕ್ಕಳು ಜನಿಸಿದರು. ಅವರೆಲ್ಲರೂ ಭೂಮಿಯಲ್ಲಿ ಶ್ರೇಷ್ಠ ಬ್ರಾಹ್ಮಣರಾಗಿದ್ದರು. ಕಾಶ್ಯಪರಿಗೆ ಲೋಕಧಾರಕರಾದ ಇನ್ನಿಬ್ಬರು ಪುತ್ರರಾದರು.

ಲೋಕೇ ಧಾತಾ ವಿಧಾತಾ ಚ ಚರತೋ ಮನುನಾ ಸಹ ।
ತಯೋಸ್ತು ಭಗಿನೀ ಜ್ಯೇಷ್ಠಾ ಲಕ್ಷ್ಮೀಃ ಪದ್ಮಗೃಹಾ ಶುಭಾ ॥೫೧॥

ಅವರ ಹೆಸರು ಧಾತಾ ಮತ್ತು ವಿಧಾತಾ ಎಂದು. ಅವರು ಲೋಕದಲ್ಲಿ ಯಾವಾಗಲೂ ಮನುವಿನ ಜೊತೆಯಲ್ಲಿ ಸಂಚರಿಸುವವರು. ಅವರಿಬ್ಬರ ಅಕ್ಕನಾಗಿ ಪದ್ಮಾಲಯಳಾದ ಮಂಗಳಸ್ವರೂಪಳಾದ ಲಕ್ಷ್ಮಿಯು ಜನಿಸಿದಳು.

ತಸ್ಯಾಸ್ತು ಮಾನಸಾಃ ಪುತ್ರಾ ಯೇ ಚಾಶ್ವಾ ವ್ಯೋಮಚಾರಿಣಃ ।
ವರುಣಸ್ಯ ಭಾರ್ಯಾ ಜ್ಯೇಷ್ಠಾ ತು ಶಕ್ರದೇವೀ ವ್ಯಜಾಯತ ॥೫೨॥

ಆ ಲಕ್ಷ್ಮಿಯ ಮಾನಸಪುತ್ರರು ಆಕಾಶದಲ್ಲಿ ಸಂಚರಿಸುವ ಅಶ್ವಗಳು. ವರುಣನ ಜ್ಯೇಷ್ಠಪತ್ನಿಯಾದ ಶಕ್ರದೇವಿಯು ಅನೇಕ ಮಕ್ಕಳನ್ನು ಪಡೆದಳು.

ತಸ್ಯಾಃ ಪುತ್ರಶತಂ ವಿದ್ಧಿ ಸುರಾಂ ಚಾಸುರನಂದಿನೀಮ್ ।
ಪ್ರಜಾನಾಮನ್ನಕಾಮಾನಾಮನ್ಯೋನ್ಯಪರಿಭಕ್ಷಣಾತ್ ।
ಅಧರ್ಮಸ್ತತ್ರ ಸಂಜಾತಃ ಸರ್ವಭೂತವಿನಾಶನಃ ॥೫೩॥

ಅವರಿಗೆ ನೂರು ಗಂಡುಮಕ್ಕಳೆಂದು ತಿಳಿ. ಅಸುರರಿಗೆ ಸಂತೋಷವನ್ನುಂಟು ಮಾಡುವ ಮದ್ಯದ ದೇವತೆಯಾದ ವಾರುಣೀ ಎಂಬುವಳೂ ಅವರ ಮಗಳು. ಅನ್ನವನ್ನು ಬಯಸುವ ಪ್ರಜೆಗಳು ಪರಸ್ಪರವಾಗಿ ಒಬ್ಬರನ್ನೊಬ್ಬರು ಭಕ್ಷಣೆ ಮಾಡುವುದರಿಂದ ಉಂಟಾದ ಅಧರ್ಮಕ್ಕೆ ಅಭಿಮಾನಿಯಾದ ಅಧರ್ಮನು ವಾರುಣೀ ಮಗ. ಅವನು ಸರ್ವಭೂತವಿನಾಶಕನಾದವನು.

ತಸ್ಯಾಪಿ ನಿರೃತಿರ್ಭಾರ್ಯಾ ನೈರೃತಾ ಯೇ ತು ರಾಕ್ಷಸಾಃ ।
ಘೋರಾಸ್ತಸ್ಯಾಸ್ತ್ರಯಃ ಪುತ್ರಾಃ ಪಾಪಕರ್ಮರತಾಃ ಸದಾ ।
ಭಯೋ ಮಹಾಭಯಶ್ಚೈವ ಮೃತ್ಯುರ್ಭೂತಾಂತಕಸ್ತಥಾ ॥೫೪॥

ಅಧರ್ಮನ ಪತ್ನಿ ನಿರೃತಿ. ನಿರೃತಿಯ ಮಕ್ಕಳು ಘೋರವಾದ ಮೂರು ರಾಕ್ಷಸರು. ಅವರು ಯಾವಾಗಲೂ ಪಾಪಕರ್ಮದಲ್ಲಿ ನಿರತರಾದವರು. ಅವರ ಹೆಸರು, ಭಯ, ಮಹಾಭಯ ಮತ್ತು ಮೃತ್ಯು ಎಂದು. ಈ ಮೃತ್ಯುವು ಸರ್ವಭೂತವಿನಾಶಕನಾದವನು.

ನ ತಸ್ಯ ಭಾರ್ಯಾ ಪುತ್ರೋ ವಾ ಕಶ್ಚಿದಸ್ಯಂತಕಸ್ತು ಸಃ ।
ಶ್ಯೇನಾಂ ಕ್ರೌಂಚೀಂ ಚ ಭಾಸೀಂ ಚ ಧೃತರಾಷ್ಟ್ರೀಮಥೋ ಶುಕೀಮ್ ॥೫೫॥

ತಾಮ್ರಾऽಪಿ ಸುಷುವೇ ಕನ್ಯಾಃ ಪಂಚೈತಾ ಲೋಕವಿಶ್ರುತಾಃ ।
ದ್ವೌ ಪುತ್ರೌ ವಿನತಾಯಾಸ್ತು ವಿಖ್ಯಾತೌ ಗರುಡಾರುಣೌ ॥೫೬॥

ಮೃತ್ಯುವಿಗೆ ಹೆಂಡತಿಯಾಗಲೀ, ಮಕ್ಕಳಾಗಲೀ ಇಲ್ಲ. ಅವನು ಎಲ್ಲರನ್ನೂ ಮುಗಿಸುವವನು. ಕಾಶ್ಯಪನ ಪತ್ನಿಯಾದ ತಾಮ್ರೆಯು, ಶ್ಯೇನೀ (ಶ್ಯೇನಾ) ಕ್ರೌಂಚೀ, ಭಾಸೀ, ಧೃತರಾಷ್ಟ್ರೀ , ಮತ್ತು ಶುಕೀ ಎಂಬ ಐದು ಹೆಣ್ಣುಮಕ್ಕಳನ್ನು ಪಡೆದಳು. ವಿನತೆಗೆ ಪ್ರಸಿದ್ಧರಾದ ಗರುಡ ಮತ್ತು ಅರುಣ ಎಂಬ ಇಬ್ಬರು ಮಕ್ಕಳು.

ಭಾರ್ಯಾऽರುಣಸ್ಯ ಶ್ಯೇನೀ ತು ವೀರ್ಯವಂತೌ ಮಹಾಬಲೌ ।
ಸಂಪಾತಿಂ ಜನಯಾಮಾಸ ತಥೈವ ಚ ಜಟಾಯುಷಮ್ ॥೫೭॥

ಅರುಣನ ಭಾರ್ಯೆಯಾದ ಶ್ಯೇನಿಯು ವೀರ್ಯವಂತರೂ, ಮಹಾಬಲವುಳ್ಳವರೂ ಆದ ಸಂಪಾತಿ ಮತ್ತು ಜಟಾಯು ಎಂಬ ಇಬ್ಬರು ಮಕ್ಕಳನ್ನು ಪಡೆದಳು.

ಭಾರ್ಯಾ ಗರುತ್ಮತಶ್ಚೈವ ಭಾಸೀ ಕ್ರೌಂಚೀ ತಥಾ ಶುಕೀ ।
ಚತುರ್ಥೀ ಧೃತರಾಷ್ಟ್ರೀ ಚ ತಾಸ್ವಪತ್ಯಂ ನಿಬೋಧ ಮೇ ॥೫೮॥

ಭಾಸೀ, ಕ್ರೌಂಚೀ, ಶುಕೀ ಮತ್ತು ಧೃತರಾಷ್ಟ್ರೀ ಇವರು ಗರುಡನ ಪತ್ನಿಯರು. ಅವರ ಮಕ್ಕಳನ್ನು ತಿಳಿಸುತ್ತೇನೆ ಕೇಳು.

ಉಲೂಕಾನ್ ಸುಷುವೇ ಕ್ರೌಂಚೀ ಭಾಸೀ ಭಾಸಾನ್ ವ್ಯಜಾಯತ ।
ಶ್ಯೇನೀ ಶ್ಯೇನಾಂಶ್ಚ ಗೃಧ್ರಾಂಶ್ಚ ಜನಯಾಮಾಸ ತೇಜಸಾ ॥೫೯॥

ಕ್ರೌಂಚಿಯು ಗೂಬೆಗಳನ್ನು ಪ್ರಸವಿಸಿದಳು. ಭಾಸಿಯು ಭಾಸಾ ಪಕ್ಷಿಗಳನ್ನು ಪಡೆದಳು. ಶ್ಯೇನಿಯು ತನ್ನ ತೇಜಸ್ಸಿನಿಂದ ಗಿಡುಗಗಳನ್ನು ಮತ್ತು ಹದ್ದುಗಳನ್ನು ಮಕ್ಕಳಾಗಿ ಪಡೆದಳು.

ಧೃತರಾಷ್ಟ್ರೀ ತು ಹಂಸಾಂಶ್ಚ ಕಲಹಂಸಾಂಶ್ಚ ಸರ್ವಶಃ ।
ಚಕ್ರವಾಕಾಂಶ್ಚ ಭದ್ರಂ ತೇ ಪ್ರಜಜ್ಞೇ ಸಾ ಚ ಭಾಮಿನೀ ॥೬೦॥

ಎಲೈ ರಾಜನೇ ನಿನಗೆ ಮಂಗಳವಾಗಲಿ. ಧೃತರಾಷ್ಟ್ರಿಯಾದರೋ ಹಂಸಗಳನ್ನೂ ಎಲ್ಲಾ ಕಲಹಂಸಗಳನ್ನೂ, ಚಕ್ರವಾಕಗಳನ್ನೂ ಪ್ರಸವಿಸಿದಳು.

ಲೋಕೇ ಧಾತಾ ವಿಧಾತಾ ಚ ಚರತೋ ಮನುನಾ ಸಹ ।
ತಯೋಸ್ತು ಭಗಿನೀ ಜ್ಯೇಷ್ಠಾ ಲಕ್ಷ್ಮೀಃ ಪದ್ಮಗೃಹಾ ಶುಭಾ ॥೫೧॥

ಅವರ ಹೆಸರು ಧಾತಾ ಮತ್ತು ವಿಧಾತಾ ಎಂದು. ಅವರು ಲೋಕದಲ್ಲಿ ಯಾವಾಗಲೂ ಮನುವಿನ ಜೊತೆಯಲ್ಲಿ ಸಂಚರಿಸುವವರು. ಅವರಿಬ್ಬರ ಅಕ್ಕನಾಗಿ ಪದ್ಮಾಲಯಳಾದ ಮಂಗಳಸ್ವರೂಪಳಾದ ಲಕ್ಷ್ಮಿಯು ಜನಿಸಿದಳು.

ತಸ್ಯಾಸ್ತು ಮಾನಸಾಃ ಪುತ್ರಾ ಯೇ ಚಾಶ್ವಾ ವ್ಯೋಮಚಾರಿಣಃ ।
ವರುಣಸ್ಯ ಭಾರ್ಯಾ ಜ್ಯೇಷ್ಠಾ ತು ಶಕ್ರದೇವೀ ವ್ಯಜಾಯತ ॥೫೨॥

ಆ ಲಕ್ಷ್ಮಿಯ ಮಾನಸಪುತ್ರರು ಆಕಾಶದಲ್ಲಿ ಸಂಚರಿಸುವ ಅಶ್ವಗಳು. ವರುಣನ ಜ್ಯೇಷ್ಠಪತ್ನಿಯಾದ ಶಕ್ರದೇವಿಯು ಅನೇಕ ಮಕ್ಕಳನ್ನು ಪಡೆದಳು.

ತಸ್ಯಾಃ ಪುತ್ರಶತಂ ವಿದ್ಧಿ ಸುರಾಂ ಚಾಸುರನಂದಿನೀಮ್ ।
ಪ್ರಜಾನಾಮನ್ನಕಾಮಾನಾಮನ್ಯೋನ್ಯಪರಿಭಕ್ಷಣಾತ್ ।
ಅಧರ್ಮಸ್ತತ್ರ ಸಂಜಾತಃ ಸರ್ವಭೂತವಿನಾಶನಃ ॥೫೩॥

ಅವರಿಗೆ ನೂರು ಗಂಡುಮಕ್ಕಳೆಂದು ತಿಳಿ. ಅಸುರರಿಗೆ ಸಂತೋಷವನ್ನುಂಟು ಮಾಡುವ ಮದ್ಯದ ದೇವತೆಯಾದ ವಾರುಣೀ ಎಂಬುವಳೂ ಅವರ ಮಗಳು. ಅನ್ನವನ್ನು ಬಯಸುವ ಪ್ರಜೆಗಳು ಪರಸ್ಪರವಾಗಿ ಒಬ್ಬರನ್ನೊಬ್ಬರು ಭಕ್ಷಣೆ ಮಾಡುವುದರಿಂದ ಉಂಟಾದ ಅಧರ್ಮಕ್ಕೆ ಅಭಿಮಾನಿಯಾದ ಅಧರ್ಮನು ವಾರುಣೀ ಮಗ. ಅವನು ಸರ್ವಭೂತವಿನಾಶಕನಾದವನು.

ತಸ್ಯಾಪಿ ನಿರೃತಿರ್ಭಾರ್ಯಾ ನೈರೃತಾ ಯೇ ತು ರಾಕ್ಷಸಾಃ ।
ಘೋರಾಸ್ತಸ್ಯಾಸ್ತ್ರಯಃ ಪುತ್ರಾಃ ಪಾಪಕರ್ಮರತಾಃ ಸದಾ ।
ಭಯೋ ಮಹಾಭಯಶ್ಚೈವ ಮೃತ್ಯುರ್ಭೂತಾಂತಕಸ್ತಥಾ ॥೫೪॥

ಅಧರ್ಮನ ಪತ್ನಿ ನಿರೃತಿ. ನಿರೃತಿಯ ಮಕ್ಕಳು ಘೋರವಾದ ಮೂರು ರಾಕ್ಷಸರು. ಅವರು ಯಾವಾಗಲೂ ಪಾಪಕರ್ಮದಲ್ಲಿ ನಿರತರಾದವರು. ಅವರ ಹೆಸರು, ಭಯ, ಮಹಾಭಯ ಮತ್ತು ಮೃತ್ಯು ಎಂದು. ಈ ಮೃತ್ಯುವು ಸರ್ವಭೂತವಿನಾಶಕನಾದವನು.

ನ ತಸ್ಯ ಭಾರ್ಯಾ ಪುತ್ರೋ ವಾ ಕಶ್ಚಿದಸ್ಯಂತಕಸ್ತು ಸಃ ।
ಶ್ಯೇನಾಂ ಕ್ರೌಂಚೀಂ ಚ ಭಾಸೀಂ ಚ ಧೃತರಾಷ್ಟ್ರೀಮಥೋ ಶುಕೀಮ್ ॥೫೫॥

ತಾಮ್ರಾऽಪಿ ಸುಷುವೇ ಕನ್ಯಾಃ ಪಂಚೈತಾ ಲೋಕವಿಶ್ರುತಾಃ ।
ದ್ವೌ ಪುತ್ರೌ ವಿನತಾಯಾಸ್ತು ವಿಖ್ಯಾತೌ ಗರುಡಾರುಣೌ ॥೫೬॥

ಮೃತ್ಯುವಿಗೆ ಹೆಂಡತಿಯಾಗಲೀ, ಮಕ್ಕಳಾಗಲೀ ಇಲ್ಲ. ಅವನು ಎಲ್ಲರನ್ನೂ ಮುಗಿಸುವವನು. ಕಾಶ್ಯಪನ ಪತ್ನಿಯಾದ ತಾಮ್ರೆಯು, ಶ್ಯೇನೀ (ಶ್ಯೇನಾ) ಕ್ರೌಂಚೀ, ಭಾಸೀ, ಧೃತರಾಷ್ಟ್ರೀ, ಮತ್ತು ಶುಕೀ ಎಂಬ ಐದು ಹೆಣ್ಣುಮಕ್ಕಳನ್ನು ಪಡೆದಳು. ವಿನತೆಗೆ ಪ್ರಸಿದ್ಧರಾದ ಗರುಡ ಮತ್ತು ಅರುಣ ಎಂಬ ಇಬ್ಬರು ಮಕ್ಕಳು.

ಭಾರ್ಯಾऽರುಣಸ್ಯ ಶ್ಯೇನೀ ತು ವೀರ್ಯವಂತೌ ಮಹಾಬಲೌ ।
ಸಂಪಾತಿಂ ಜನಯಾಮಾಸ ತಥೈವ ಚ ಜಟಾಯುಷಮ್ ॥೫೭॥

ಅರುಣನ ಭಾರ್ಯೆಯಾದ ಶ್ಯೇನಿಯು ವೀರ್ಯವಂತರೂ, ಮಹಾಬಲವುಳ್ಳವರೂ ಆದ ಸಂಪಾತಿ ಮತ್ತು ಜಟಾಯು ಎಂಬ ಇಬ್ಬರು ಮಕ್ಕಳನ್ನು ಪಡೆದಳು.

ಭಾರ್ಯಾ ಗರುತ್ಮತಶ್ಚೈವ ಭಾಸೀ ಕ್ರೌಂಚೀ ತಥಾ ಶುಕೀ ।
ಚತುರ್ಥೀ ಧೃತರಾಷ್ಟ್ರೀ ಚ ತಾಸ್ವಪತ್ಯಂ ನಿಬೋಧ ಮೇ ॥೫೮॥

ಭಾಸೀ, ಕ್ರೌಂಚೀ, ಶುಕೀ ಮತ್ತು ಧೃತರಾಷ್ಟ್ರೀ ಇವರು ಗರುಡನ ಪತ್ನಿಯರು. ಅವರ ಮಕ್ಕಳನ್ನು ತಿಳಿಸುತ್ತೇನೆ ಕೇಳು.

ಉಲೂಕಾನ್ ಸುಷುವೇ ಕ್ರೌಂಚೀ ಭಾಸೀ ಭಾಸಾನ್ ವ್ಯಜಾಯತ ।
ಶ್ಯೇನೀ ಶ್ಯೇನಾಂಶ್ಚ ಗೃಧ್ರಾಂಶ್ಚ ಜನಯಾಮಾಸ ತೇಜಸಾ ॥೫೯॥

ಕ್ರೌಂಚಿಯು ಗೂಬೆಗಳನ್ನು ಪ್ರಸವಿಸಿದಳು. ಭಾಸಿಯು ಭಾಸಾ ಪಕ್ಷಿಗಳನ್ನು ಪಡೆದಳು. ಶ್ಯೇನಿಯು ತನ್ನ ತೇಜಸ್ಸಿನಿಂದ ಗಿಡುಗಗಳನ್ನು ಮತ್ತು ಹದ್ದುಗಳನ್ನು ಮಕ್ಕಳಾಗಿ ಪಡೆದಳು.

ಧೃತರಾಷ್ಟ್ರೀ ತು ಹಂಸಾಂಶ್ಚ ಕಲಹಂಸಾಂಶ್ಚ ಸರ್ವಶಃ ।
ಚಕ್ರವಾಕಾಂಶ್ಚ ಭದ್ರಂ ತೇ ಪ್ರಜಜ್ಞೇ ಸಾ ಚ ಭಾಮಿನೀ ॥೬೦॥

ಎಲೈ ರಾಜನೇ ನಿನಗೆ ಮಂಗಳವಾಗಲಿ. ಧೃತರಾಷ್ಟ್ರಿಯಾದರೋ ಹಂಸಗಳನ್ನೂ ಎಲ್ಲಾ ಕಲಹಂಸಗಳನ್ನೂ, ಚಕ್ರವಾಕಗಳನ್ನೂ ಪ್ರಸವಿಸಿದಳು.

ಶುಕೀ ವಿಜಜ್ಞೇ ಧರ್ಮಜ್ಞ ಶುಕಾನೇವ ಯಶಸ್ವಿನೀ ।
ಕಲ್ಯಾಣಗುಣಸಂಪನ್ನಾ ಸರ್ವಲಕ್ಷಣಪೂಜಿತಾ ॥೬೧॥

ಎಲೈ ಧರ್ಮಜ್ಞನೇ ಕಲ್ಯಾಣಗುಣಸಂಪನ್ನಳಾದ ಮತ್ತು ಸರ್ವಲಕ್ಷಣಭರಿತಳಾದ, ಕೀರ್ತಿಶಾಲಿನಿಯಾದ ಶುಕಿಯು ಗಿಳಿಗಳನ್ನೇ ಪ್ರಸವಿಸಿದಳು.

ತತಃ ಕ್ರೋಧವಶಾ ನಾಮ ವಿಜಜ್ಞೇ ಹ್ಯಾತ್ಮಸಂಭವಾನ್ ।
ಮೃಗೀಂ ಚ ಮೃಗಮಂದ್ರಾಂ ಚ ಹರೀಂ ಭದ್ರಮದಾಮಪಿ ॥೬೨॥

ಮಾತಂಗೀಮಪಿ ಶಾರ್ದೂಲೀಂ ಶ್ವೇತಾಂ ಸುರಭಿಮೇವ ಚ ।
ಸರ್ವಲಕ್ಷಣಸಂಪನ್ನಾಂ ಸುರಸಾಂ ವ ಯಶಸ್ವಿನೀಮ್ ॥೬೩॥

ಅನಂತರ ಕ್ರೋಧವಶಾ ಎಂಬ ಕಾಶ್ಯಪರ ಪತ್ನಿಯು ತನಗೆ ಅನುರೂಪಳಾದ ಮಕ್ಕಳನ್ನು ಪಡೆದಳು. ಅವರು ಮೃಗೀ, ಮೃಗಮಂದ್ರಾ, ಹರೀ, ಭದ್ರಮದಾ, ಮಾತಂಗೀ, ಶಾರ್ದೂಲೀ, ಶ್ವೇತಾ, ಸುರಭಿ ಮತ್ತು ಸರ್ವಲಕ್ಷಣಸಂಪನ್ನಳಾದ ಕೀರ್ತಿಶಾಲಿನಿಯಾದ ಸುರಸಾ.

ಅಪತ್ಯಂ ತು ಮೃಗಾಃ ಸರ್ವೇ ಮೃಗ್ಯಾ ನರವರಾತ್ಮಜ ।
ಋಕ್ಷಾಶ್ಚ ಮೃಗಮಂದ್ರಾಯಾಃ ಸೃಮರಾಶ್ಚಮರಾ ಅಪಿ ॥೬೪॥

ಎಲೈ ರಾಜಕುಮಾರನೇ ಎಲ್ಲಾ ಮೃಗಗಳೂ ಮೃಗಿಯ ಮಕ್ಕಳು. ಕರಡಿಗಳು, ಗವಯಗಳು, ಮತ್ತು ಚಮರೀಮೃಗಗಳು ಮೃಗಮಂದ್ರಾ ಎನ್ನುವಳ ಮಕ್ಕಳು.

ತತಸ್ತ್ವೈರಾವತಂ ನಾಗಂ ಜಜ್ಞೇ ಭದ್ರಮದಾ ಸುತಮ್ ।
ಐರಾವತಃ ಸುತಸ್ತಸ್ಯಾ ದೇವನಾಗೋ ಮಹಾಗಜಃ ॥೬೫॥

ಭದ್ರಮದೆಯು ಐರಾವತವೆಂಬ ಆನೆಯನ್ನು ಪಡೆದಳು. ಭದ್ರಮದೆಗೆ ದೇವಲೋಕದ ಮಹಾಗಜವೆನಿಸಿದ ಆನೆಯು ಮಗನಾದನು.

ಹರ್ಯಾಶ್ಚ ಹರಯೋಽಪತ್ಯಂ ವಾನರಾಶ್ಚ ಮನಸ್ವಿನಃ ।
ಗೋಲಾಂಗೂಲಾಶ್ಚ ಭದ್ರಂ ತೇ ವಿಜ್ಞಾತವ್ಯಾ ಹರೀಸುತಾಃ ॥೬೬॥

ಎಲೈ ರಾಜನೇ ನಿನಗೆ ಮಂಗಳವಾಗಲಿ. ಹರೀ ಎಂಬುವಳ ಮಕ್ಕಳು. ಹರಿಗಳು (ಕಪಿವಿಶೇಷ) ಧೈರ್ಯಶಾಲಿಗಳಾದ ವಾನರರು, ಮತ್ತು ಗೋಲಾಂಗೂಲಗಳು (ಕಪಿವಿಶೇಷ) ಇವರನ್ನು ಹರಿಯ ಮಕ್ಕಳೆಂದು ತಿಳಿಯಬೇಕು.

ಪ್ರಜಜ್ಞೇ ತ್ವಥ ಶಾರ್ದೂಲೀ ಸಿಂಹಾನ್ ವ್ಯಾಘ್ರಾಂಶ್ಚ ಭಾರತ ।
ದ್ವೀಪಿನಶ್ಚ ಮಹಾಸತ್ತ್ವಾನ್ ಸರ್ವಾನೇವ ನ ಸಂಶಯಃ ॥೬೭॥

ಅನಂತರ ಶಾರ್ದೂಲಿಯು ನಿಸ್ಸಂಶಯವಾಗಿ ಸಿಂಹಗಳನ್ನೂ, ವ್ಯಾಘ್ರಗಳನ್ನೂ, ಮಹಾಬಲಿಷ್ಠವಾದ ದ್ವೀಪಿ ಎಂಬ ಎಲ್ಲಾ ಮೃಗಗಳನ್ನೂ ಪ್ರಸವಿಸಿದಳು. (ದೇಹದಲ್ಲಿ ಅಡ್ಡದಾದ ನೂರಾರು ಕಪ್ಪು ರೇಖೆಗಳಿಂದ ಕೂಡಿರುವ ಬೃಹದ್ಗಾತ್ರದ ಶಾರ್ದೂಲಗಳೇ ಹುಲಿಗಳೆನಿಸಿವೆ). (ದುಂಡು ದುಂಡಾದ ಬಗೆಬಗೆ ಬಣ್ಣದ ರೋಮದ ಚಿಹ್ನೆಗಳುಳ್ಳಂತಹ ಸಣ್ಣಗಾತ್ರದ ಶಾರ್ದೂಲಗಳೇ ದ್ವೀಪಗಳು).

ಮಾತಂಗಾಸ್ತ್ವಥ ಮಾತಂಗ್ಯಾ ಅಪತ್ಯಾನಿ ನರಾಧಿಪ ।
ದಿಶಾಗಜಂ ತು ಶ್ವೇತಾಕ್ಷಂ ಶ್ವೇತಾऽಜನಯದಾಶುಗಮ್ ॥೬೮॥

ಮಾತಂಗಗಳು (ಆನೆಗಳು) ಮಾತಂಗೆಯ ಮಕ್ಕಳು. ಎಲೈ ರಾಜನೇ ವೇಗವಾಗಿ ಚಲಿಸುವ ಶ್ವೇತಾಕ್ಷ ಎಂಬ ದಿಗ್ಗಜವು ಶ್ವೇತೆಯ ಮಗ.

ತಥಾ ದುಹಿತರೌ ರಾಜನ್ ಸುರಭಿರ್ವೈ ವ್ಯಜಾಯತ ।
ರೋಹಿಣೀಂ ಚೈವ ಭದ್ರಂ ತೇ ಗಂಧರ್ವೀಂ ತು ಯಶಸ್ವಿನೀಮ್ ॥೬೯॥

ಎಲೈ ರಾಜನೇ ನಿನಗೆ ಮಂಗಳವಾಗಲಿ. ಹಾಗೆಯೇ ಸುರಭಿಯು ರೋಹಿಣಿ ಮತ್ತು ಗಂಧರ್ವೀ ಎಂಬ ಕೀರ್ತಿಶಾಲಿನಿಯರಾದ ಎರಡು ಹೆಣ್ಣುಮಕ್ಕಳನ್ನು ಪಡೆದಳು.

ರೋಹಿಣ್ಯಾಂ ಜಜ್ಞಿರೇ ಗಾವೋ ಗಂಧರ್ವ್ಯಾಂ ವಾಜಿನಃ ಸುತಾಃ ।
ಸುರಸಾऽಜನಯದ್ ನಾಗಾನ್ ಕದ್ರೂ ರಾಜಂಶ್ಚ ಪನ್ನಗಾನ್ ॥೭೦॥

ಎಲ್ಲ ಗೋವುಗಳು ರೋಹಿಣಿಯ ಮಕ್ಕಳು. ಎಲ್ಲಾ ಕುದುರೆಗಳು ಗಂಧರ್ವಿಯ ಮಕ್ಕಳು. ಸುರಸೆಯು ನಾಗಗಳನ್ನು, ಕದ್ರುವು ಪನ್ನಗಗಳನ್ನು ಪ್ರಸವಿಸಿದರು.

ಸುರಸಾऽಜನಯತ್ ಸರ್ಪಾನ್ ಶತಮೇಕಶಿರೋಧರಾನ್ ।
ಇಳಾಯಾಃ ಕನ್ಯಕಾ ಜಾತಾಃ ತಿಸ್ರಃ ಕಮಲಲೋಚನಾಃ ॥೭೧॥

ಸುರಸೆಯ ಮಕ್ಕಳು ಒಂದರಿಂದ ನೂರರವರೆಗೆ ಶಿರಸ್ಸುಗಳನ್ನು ಹೊಂದಿರುವ ಸರ್ಪಗಳು. ಇಳೆಯಲ್ಲಿ ಕಮಲಲೋಚನೆಯರಾದ ಮೂರು ಹೆಣ್ಣುಮಕ್ಕಳು ಜನಿಸಿದರು.

ವನಸ್ಪತೀನಾಂ ವೃಕ್ಷಾಣಾಂ ವೀರುಧಾಂ ಚೈವ ಮಾತರಃ ।
ಲತಾ ರುಹಾ ಚ ದ್ವೇ ಪ್ರೋಕ್ತೇ ವೀರುಧಾಂ ಚೈವ ತಾಃ ಸ್ಮೃತಾಃ ॥೭೨॥

ಅವರು ವನಸ್ಪತಿಗಳ ಮತ್ತು ವೃಕ್ಷಗಳ, ವೀರುಧಗಳ (ಬಳ್ಳಿಗಳ ಮತ್ತು ಪೊದೆಗಳ ತಾಯಿಯರು) ಅವರ ಹೆಸರುಗಳು ಕ್ರಮವಾಗಿ ಲತಾ, ರುಹಾ, ವೀರುಧಾ ಎಂದು. (ಹೂ ಬಿಡದೇ ಫಲವನ್ನು ನೀಡುವಂತಹ ಅಶ್ವತ್ಥಾದಿ ವೃಕ್ಷಗಳಿಗೆ ವನಸ್ಪತಿಗಳೆಂದು ಹೆಸರು. ವೀರುಧವೆಂದರೆ ಪೊದೆಗಳು).

ಗೃಹ್ಣಂತಿ ಯೇ ಏನಾ ಪುಷ್ಪಂ ಫಲಾನಿ ತರವಃ ಪೃಥಕ್ ।
ಲತಾಸುತಾಸ್ತೇ ವಿಜ್ಞೇಯಾಸ್ತಾನೇವಾಹುರ್ವನಸ್ಪತೀನ್ ॥೭೩॥

ಯಾವ ವೃಕ್ಷಗಳು ಪುಷ್ಪವನ್ನು ಕೊಡದೇ ಫಲವನ್ನು ಕೊಡುತ್ತವೆಯೋ ಅವುಗಳಿಗೆ ವಸನ್ಪತಿಗಳು ಎಂದು ಹೆಸರು. ಅವೆಲ್ಲವೂ ಲತೆಯ ಮಕ್ಕಳು.

ಪುಷ್ಪಫಲಗ್ರಹಾನ್ ವೃಕ್ಷಾನ್ ರುಹಾಯಾಃ ಪ್ರಸವಾನ್ ವಿದುಃ ।
ಲತಾ ಗುಲ್ಮಾನಿ ವಲ್ಲ್ಯಶ್ಚ ತ್ವಕ್ಸಾರತೃಣಜಾತಯಃ ।
ವೀರುಧಾಯಾಃ ಪ್ರಜಾಸ್ತಾಃ ಸ್ಯುರತ್ರ ವಂಶಃ ಸಮಾಪ್ಯತೇ ॥೭೪॥

ಯಾವ ವೃಕ್ಷಗಳು ಪುಷ್ಪಗಳನ್ನು ಕೊಟ್ಟು ಫಲಗಳನ್ನು ಕೊಡುತ್ತವೆಯೋ, ಅವೆಲ್ಲವೂ ರುಹಾ ಎಂಬುವಳ ಮಕ್ಕಳು. ಬಳ್ಳಿಗಳು, ಪೊದೆಗಳು, ಲತೆಗಳು, ತ್ವಕ್ಸಾರವಾದ ಬಿದಿರು ಮೊದಲಾದವುಗಳು ವೀರುಧಾ ಎಂಬುವಳ ಮಕ್ಕಳು. ಇಲ್ಲಿಗೆ ವಂಶಗಳು ಮುಗಿಯುತ್ತವೆ.

ಅರುಣಸ್ಯ ಭಾರ್ಯಾ ಶ್ಯೇನೀ ತು ವೀರ್ಯವಂತೌ ಮಹಾಬಲೌ ।
ಸಂಪಾತಿಂ ಜನಯಾಮಾಸ ತಥೈವ ಚ ಜಟಾಯುಷಮ್ ।
ದ್ವೌ ಪುತ್ರೌ ವಿನತಾಯಾಸ್ತು ವಿಖ್ಯಾತೌ ಗರುಡಾರುಣೌ ॥೭೫॥

ಅರುಣನ ಭಾರ್ಯೆಯಾದ ಶ್ಯೇನೆಯು ಪರಾಕ್ರಮಶಾಲಿಗಳಾದ, ಬಲಿಷ್ಠರಾದ ಸಂಪಾತಿ ಮತ್ತು ಜಟಾಯು ಎಂಬ ಎರಡು ಮಕ್ಕಳನ್ನು ಪಡೆದಳು. ವಿನತೆಯ ಮಕ್ಕಳು ಪ್ರಸಿದ್ಧರಾದ ಗರುಡ ಮತ್ತು ಅರುಣ ಎಂಬುವರು.

ಇತ್ಯೇಷ ಸರ್ವಭೂತಾನಾಂ ಮಹತಾಂ ಮನುಜಾಧಿಪ ।
ಸಂಭವಃ ಕೀರ್ತಿತಃ ಸಮ್ಯಕ್ ಮಯಾ ಮತಿಮತಾಂ ವರ ॥೭೬॥

ಎಲೈ ಮನುಜಾಧಿಪನೇ ಎಲ್ಲಾ ಮಹಾತ್ಮರ ಮತ್ತು ಎಲ್ಲಾ ಜೀವರ (ಮಹಾಭಾರತದಲ್ಲಿ ಪಾಲ್ಗೊಂಡವರ) ಉತ್ಪತ್ತಿಯ ಕ್ರಮ. ಎಲೈ ಬುದ್ಧಿವಂತರಲ್ಲಿ ಶ್ರೇಷ್ಠನಾದವನೇ ನಾನು ಇದನ್ನು ನಿನಗೆ ಚೆನ್ನಾಗಿ ತಿಳಿಸಿದ್ದೇನೆ.

ಯಂ ಶ್ರುತ್ವಾ ಪುರುಷಃ ಸಮ್ಯಕ್ ಪೂತೋ ಭವತಿ ಪಾಪತಃ ।
ಸರ್ವಜ್ಞತಾಂ ಚ ಲಭತೇ ಗತಿಮಗ್ರ್ಯಾಂ ಚ ವಿಂದತಿ ॥೭೭॥

ಇದನ್ನು ಕೇಳಿದ ಪುರುಷನು ಎಲ್ಲಾ ಪಾಪಗಳಿಂದಲೂ ನಿರ್ಮುಕ್ತನಾಗಿ ಪವಿತ್ರನಾಗುತ್ತಾನೆ. ಅವನು ಸರ್ವಜ್ಞತ್ವವನ್ನು ಪಡೆಯುತ್ತಾನೆ. ಮತ್ತು ಮರಣಾನಂತರದಲ್ಲಿ ಸದ್ಗತಿಯನ್ನು ಪಡೆಯುತ್ತಾನೆ.

॥ ಇತಿ ಶ್ರೀಮನ್ಮಹಾಭಾರತೇ ಶತಸಹಸ್ರಿಕಾಯಾಂಸಂಹಿತಾಯಾಮಾದಿಪರ್ವಣಿ
ಏಕಷಷ್ಟಿತಮೋऽಧ್ಯಾಯಃ ॥
॥ ಇತಿ ಸಂಭವಪರ್ವಣಿ ನವಮೋऽಧ್ಯಾಯಃ ॥

ಇಲ್ಲಿಗೆ ಮಹಾಭಾರತದ ಆದಿಪರ್ವದಲ್ಲಿ ಅರವತ್ತೊಂದನೆಯ ಅಧ್ಯಾಯ ಮುಗಿಯಿತು.

★★★★★

ಅರವತ್ತೆರಡನೆಯ ಅಧ್ಯಾಯ

(ಭೂಮಿಯಲ್ಲಿ ದೇವತೆಗಳ ಮತ್ತು ದಾನವರ ಅಂಶಾವತರಣ ಕಥನ.)

ಜನಮೇಜಯಃ

ದೇವಾನಾಂ ದಾನವಾನಾಂ ಚ ಯಕ್ಷಾಣಾಮಥ ರಕ್ಷಸಾಮ್ ।
ಅನ್ಯೇಷಾಂ ಚೈವ ಭೂತಾನಾಂ ಸರ್ವೇಷಾಂ ಭಗವನ್ನಹಮ್ ॥೧॥

ಶ್ರೋತುಮಿಚ್ಛಾಮಿ ತತ್ತ್ವೇನ ಮಾನುಷೇಷು ಮಹಾತ್ಮನಾಮ್ ।
ಜನ್ಮ ಕರ್ಮ ಚ ಭೂತಾನಾಮೇತೇಷಾಮನುಪೂರ್ವಶಃ ॥೨॥

ಪೂಜ್ಯರಾದ ವೈಶಂಪಾಯನರೇ, ಮನುಷ್ಯಲೋಕದಲ್ಲಿ ಮಹಾತ್ಮರಾದ ದೇವತೆಗಳ, ದಾನವರ, ಯಕ್ಷರ, ರಾಕ್ಷಸರ ಮತ್ತು ಉಳಿದ ಎಲ್ಲಾ ಜೀವರ ಅವತಾರವನ್ನೂ ಅವರು ಮಾಡಿದ ಎಲ್ಲ ಕರ್ಮಗಳನ್ನೂ ವಿಸ್ತಾರವಾಗಿ ಕೇಳಲು ಬಯಸುತ್ತೇನೆ.

ವೈಶಂಪಾಯನಃ

ಮಾನುಷೇಷು ಮನುಷ್ಯೇಂದ್ರ ಸಂಭೂತಾ ಯೇ ದಿವೌಕಸಃ ।
ನಾಮತೋ ಬಲತಶ್ಚೈವ ತಾಂಸ್ತೇ ವಕ್ಷ್ಯಾಮಿ ಸರ್ವಶಃ ॥೩॥

ಎಲೈ ರಾಜನೇ ಮನುಷ್ಯಲೋಕದಲ್ಲಿ ಅವತಾರ ಮಾಡಿದ ದೇವತೆಗಳ ನಾಮವನ್ನು ಮತ್ತು ಬಲವನ್ನು ನಿನಗೆ ಎಲ್ಲವನ್ನೂ ಹೇಳುವೆನು.

ಪ್ರಥಮಂ ದಾನವಾಂಶ್ಚೈತಾಂಸ್ತೇऽದ್ಯ ವಕ್ಷ್ಯಾಮಿ ಸರ್ವಶಃ ।
ವಿಪ್ರಚಿತ್ತಿರಿತಿ ಖ್ಯಾತೋ ಯ ಆಸೀದ್ ದಾನವರ್ಷಭಃ ॥೪॥
ಜರಾಸಂಧ ಇತಿ ಖ್ಯಾತಃ ಸ ಆಸೀನ್ಮನುಜರ್ಷಭಃ ।

ಮೊದಲು ನಿನಗೆ ಎಲ್ಲಾ ದಾನವರ ಅಂಶಾವತರಣವನ್ನು ಹೇಳುವೆನು. ವಿಪ್ರಚಿತ್ತಿ ಎಂದು ಪ್ರಸಿದ್ಧನಾದ ದಾನವಶ್ರೇಷ್ಠನು ಜರಾಸಂಧನೆಂಬ ಪ್ರಸಿದ್ಧನಾಮದಿಂದ ರಾಜನಾಗಿ ಅವತರಿಸಿದನು.

ದಿತೇಃ ಪುತ್ರಸ್ತು ಯೋ ರಾಜನ್ ಹಿರಣ್ಯಕಶಿಪುಃ ಪುರಾ ।
ಸ ಜಜ್ಞೇ ಮಾನುಷೇ ಲೋಕೇ ಶಿಶುಪಾಲ ಇತಿ ಸ್ಮೃತಃ ॥೫॥

ಹಿಂದೆ ದಿತಿಯ ಪುತ್ರನಾಗಿದ್ದ ಹಿರಣ್ಯಕಶಿಪು ಮನುಷ್ಯಲೋಕದಲ್ಲಿ ಶಿಶುಪಾಲನಾಗಿ ಜನಿಸಿದನು.

ಸಂಹ್ಲಾದ ಇತಿ ವಿಖ್ಯಾತಃ ಪ್ರಹ್ಲಾದಸ್ಯಾನುಜಶ್ಚ ಯಃ ।
ಸ ಶಲ್ಯ ಇತಿ ವಿಖ್ಯಾತೋ ಜಜ್ಞೇ ಮದ್ರೇಶ್ವರೋ ಬಲೀ ॥೬॥

ಪ್ರಹ್ಲಾದನ ತಮ್ಮನಾದ ಸಂಹ್ಲಾದ ಎಂಬುವನು ಮದ್ರದೇಶಾಧಿಪತಿಯಾಗಿ ಬಲಿಷ್ಠನಾಗಿ ಶಲ್ಯ ಎಂಬ ಹೆಸರಿಂದ ವಿಖ್ಯಾತನಾದನು.

ಅನುಹ್ಲಾದಸ್ತು ತೇಜಸ್ವೀ ಯೋऽಭೂತ್ ಖ್ಯಾತೋ ಜಘನ್ಯಜಃ ।
ಧೃಷ್ಟಕೇತುರಿತಿ ಖ್ಯಾತಃ ಸ ಬಭೂವ ನರೇಶ್ವರಃ ॥೭॥

ಪ್ರಹ್ಲಾದನ ಕೊನೆಯ ತಮ್ಮನಾದ ತೇಜಸ್ವಿಯಾದ ಅನುಹ್ಲಾದನು ಧೃಷ್ಟಕೇತು ಎಂಬ ರಾಜನಾಗಿ ಜನಿಸಿದನು.

ಯಸ್ತು ರಾಜನ್ ಶಿವಿರ್ನಾಮ ದೈತೇಯಃ ಪರಿಕೀರ್ತಿತಃ ।
ದ್ರುಮ ಇತ್ಯಭಿವಿಖ್ಯಾತಃ ಸ ಆಸೀದ್ ಭುವಿ ಪಾರ್ಥಿವ ॥೮॥

ಎಲ್ಲೆ ರಾಜನೇ ದಿತಿಯ ಮಗನಾದ ಶಿವಿ ಎಂಬುವನು ಭೂಮಿಯಲ್ಲಿ ದ್ರುಮ ಎಂಬ ಹೆಸರಿನಿಂದ ಜನಿಸಿ ಪ್ರಸಿದ್ಧನಾದನು.

ಬಾಷ್ಕಲೋ ನಾಮ ಯಸ್ತೇಷಾಮಾಸೀದಸುರಸತ್ತಮಃ ।
ಭಗದತ್ತ ಇತಿ ಖ್ಯಾತಃ ಸ ಆಸೀನ್ಮನುಜೇಶ್ವರಃ ॥೯॥

ಬಾಷ್ಕಲ ಎಂಬ ಹೆಸರಿನಿಂದ ಪ್ರಸಿದ್ಧನಾದವನು ಭಗದತ್ತರಾಜನಾಗಿ ಅವತರಿಸಿದನು. (ಭಗದತ್ತನು ಬಾಷ್ಕಲ ಅಂಶಯುತನಾದ ಕುಬೇರ)

ಅಯಃಶಿರಾ ಅಶ್ವಶಿರಾ ಅಯಃಶಂಕುಶ್ಚ ಭಾರತ ।
ತಥಾ ಗಗನಮೂರ್ಧಾ ಚ ವೇಗವಾಂಶ್ಚೈವ ಪಂಚಮಃ ॥೧೦॥

ಪಂಚೈತೇ ಜಜ್ಞಿರೇ ರಾಜನ್ ವೀರ್ಯವಂತೋ ಮಹಾಸುರಾಃ ।
ಕೇಕಯೇಷು ಮಹಾತ್ಮಾನಃ ಪಾರ್ಥಿವರ್ಷಭಸತ್ತಮಾಃ ॥೧೧॥

ಅಯಃಶಿರಾ, ಅಶ್ವಶಿರಾ, ಅಯಃಶಂಕು, ಗಗನಮೂರ್ಧಾ ಮತ್ತು ವೇಗವಾನ್ ಈ ಐವರು ಕೇಕಯ ದೇಶದ ರಾಜರುಗಳಾಗಿ ಜನಿಸಿದರು.

ಕೇತುಮಾನಿತಿ ವಿಖ್ಯಾತೋ ಯಸ್ತತೋಽನ್ಯಃ ಪ್ರತಾಪವಾನ್ ।
ಅಮಿತೌಜಾ ಇತಿ ಖ್ಯಾತಃ ಸ ಜಜ್ಞೇ ಮನುಜರ್ಷಭ ॥೧೨॥

ಆ ಗಣದಲ್ಲಿಯೇ ಸೇರಿದ ಕೇತುಮಾನ್ ಎಂಬ ಪ್ರತಾಪಶಾಲಿಯಾದವನು ಇಲ್ಲಿ ಅಮಿತೌಜಾ ಎಂಬ ಹೆಸರಿನಿಂದ ಜನಿಸಿದನು.

ಸ್ವರ್ಭಾನುರಿತಿ ವಿಖ್ಯಾತಃ ಶ್ರೀಮಾನ್ ಯಸ್ತು ಮಹಾಸುರಃ ।
ಉಗ್ರಸೇನ ಇತಿ ಖ್ಯಾತಃ ಸೋಗ್ರಕರ್ಮಾ ನರಾಧಿಪ ॥೧೩॥

ರಾಹು ಎಂಬ ಹೆಸರಿನಿಂದ ಪ್ರಖ್ಯಾತನಾದ ಮಹಾಸುರನು ಇಲ್ಲಿ ಉಗ್ರಸೇನನೆಂದು ಪ್ರಸಿದ್ಧನಾದನು. (ಇವನು ಕಂಸನ ತಂದೆಯಾದ ಉಗ್ರಸೇನನಗಿಂತ ಬೇರೆಯಾದವನು) ರಾಜನೇ ಇವನು ಉಗ್ರಸ್ವಭಾವದವನು ಮತ್ತು ಉಗ್ರಕರ್ಮಗಳನ್ನು ಮಾಡುವವನು.

ಯಸ್ತ್ವಶ್ವ ಇತಿ ವಿಖ್ಯಾತಃ ಸರ್ವಶಸ್ತ್ರಭೃತಾಂ ವರಃ ।
ಅಶೋಕೋ ನಾಮ ರಾಜಾಸೀನ್ಮಹಾವೀರ್ಯಪರಾಕ್ರಮಃ ॥೧೪॥

ಅಶ್ವ ಎಂಬ ರಥದಿಂದ ಸರ್ವಶಸ್ತ್ರಧಾರಿಗಳಲ್ಲಿ ಪ್ರಖ್ಯಾತನಾದ ಅಸುರನು ಅಶೋಕ ಎಂಬ ಹೆಸರಿನ ಮಹಾಬಲಪರಾಕ್ರಮವುಳ್ಳ ರಾಜನಾದನು.

ತಸ್ಮಾದವರಜೋ ಯಸ್ತು ರಾಜನ್ ಅಶ್ವಪತಿಸ್ಮೃತಃ ।
ದೈತೇಯಃ ಸೋಽಭವದ್ ರಾಜಾ ಹಾರ್ದಿಕ್ಯೋ ಮನುಜರ್ಷಭ॥೧೫॥

ಅವನ ತಮ್ಮನಾದ ಅಶ್ವಪತಿ ಎಂಬ ಹೆಸರಿನ ದೈತೇಯನು ಹಾರ್ದಿಕ್ಯ ಎಂಬ ಹೆಸರಿನಿಂದ ರಾಜನಾದನು. (ಇವನು ಕೃತವರ್ಮನಲ್ಲ. ಕೃತವರ್ಮನ ತಮ್ಮನಾದ ಹೃದಿಕನ ಇನ್ನೊಬ್ಬ ಮಗ.)

ವೃಷಪರ್ವೇತಿ ವಿಖ್ಯಾತ ಆಸೀದ್ ಯಸ್ತು ಮಹಾಸುರಃ ।
ದೀರ್ಘಪ್ರಜ್ಞ ಇತಿ ಖ್ಯಾತಃ ಪೃಥಿವ್ಯಾಂ ಸೋಽಭವನ್ನೃಪಃ ॥೧೬॥

ವೃಷಪರ್ವ ಎಂದು ಪ್ರಖ್ಯಾತನಾದ ಮಹಾಸುರನು ಭೂಮಿಯಲ್ಲಿ ದೀರ್ಘಪ್ರಜ್ಞ ಎಂಬ ರಾಜನಾದನು.

ಅಜಕಸ್ತ್ವನುಜೋ ರಾಜನ್ ಯ ಆಸೀದ್ ವೃಷಪರ್ವಣಃ ।
ಸ ಮಲ್ಲ ಇತಿ ವಿಖ್ಯಾತಃ ಪೃಥಿವ್ಯಾಮಭವನ್ನೃಪಃ ॥೧೭॥

ಎಲೈ ರಾಜನೇ ವೃಷಪರ್ವನ ತಮ್ಮನಾದ ಅಜಕನೆಂಬ ದೈತೇಯನು ಭೂಮಿಯಲ್ಲಿ ಮಲ್ಲ ಎಂಬ ಹೆಸರಿನ ರಾಜನಾದನು.

ಅಶ್ವಗ್ರೀವ ಇತಿ ಖ್ಯಾತಃ ಸತ್ತ್ವವಾನ್ ಯೋ ಮಹಾಸುರಃ ।
ರೋಚಮಾನ ಇತಿ ಖ್ಯಾತಃ ಪೃಥಿವ್ಯಾಮಭವನ್ನೃಪಃ ॥೧೮॥

ಅಶ್ವಗ್ರೀವ ಎಂಬ ಹೆಸರಿನ ಸತ್ವಶಾಲಿಯಾದ ಮಹಾಸುರನು ಭೂಮಿಯಲ್ಲಿ ರೋಚಮಾನ ಎಂಬ ಹೆಸರಿನಿಂದ ಪ್ರಖ್ಯಾತನಾದ ರಾಜನಾದನು.

ಸೂಕ್ಷ್ಮಸ್ತು ಸುಮತೀ ರಾಜನ್ ಕೀರ್ತಿಮಾನ್ ಯಃ ಪ್ರಕೀರ್ತಿತಃ ।
ಬೃಹಂತ ಇತಿ ವಿಖ್ಯಾತಃ ಕ್ಷಿತಾವಾಸೀತ್ ಸ ಪಾರ್ಥಿವಃ ॥೧೯॥

ಎಲೈ ರಾಜನೇ ಬುದ್ಧಿವಂತನೆಂದು ಪ್ರಸಿದ್ಧನಾದ ಸೂಕ್ಷ್ಮ ಎಂಬ ದೈತೇಯನು ಭೂಮಿಯಲ್ಲಿ ಬೃಹಂತ ಎಂಬ ಹೆಸರಿನ ರಾಜನಾದನು.

ತುಹುಂಡ ಇತಿ ವಿಖ್ಯಾತೋ ಯ ಆಸೀದಸುರೋತ್ತಮಃ ।
ಸೇನಾಬಿಂದುರಿತಿ ಖ್ಯಾತಃ ಸ ಬಭೂವ ನರಾಧಿಪಃ ॥೨೦॥

ತುಹುಂಡ ಎಂಬ ಹೆಸರಿನಿಂದ ಪ್ರಖ್ಯಾತನಾದವನು ಭೂಮಿಯಲ್ಲಿ ಸೇನಾಬಿಂದು ಎಂಬ ಹೆಸರಿನ ರಾಜನಾದನು.

ಖಸ್ರವೋ ನಾಮ ಯಸ್ತೇಷಾಮಸುರಾಣಾಂ ಪುರೋಗಮಃ ।
ರಿಪುಜಿನ್ನಾಮ ರಾಜರ್ಷಿರ್ಬಭೂವ ಭುವಿ ವಿಶ್ರುತಃ ॥೨೧॥

ಅಸುರರ ನಾಯಕನಾಗಿದ್ದ ಖಸ್ರವ ಎಂಬುವನು ಭೂಮಿಯಲ್ಲಿ ರಿಪುಜಿತ್ ಎಂಬ ಹೆಸರಿನಿಂದ ಪ್ರಖ್ಯಾತನಾದ ರಾಜನಾದನು.

ಏಕಚಕ್ರ ಇತಿ ಖ್ಯಾತೋ ಯ ಆಸೀಚ್ಚ ಮಹಾಸುರಃ ।
ಪ್ರತಿವಿಂಧ್ಯ ಇತಿ ಖ್ಯಾತೋ ಬಭೂವ ಪ್ರಥಿತಃ ಕ್ಷಿತೌ ॥೨೨॥

ಏಕಚಕ್ರ ಎಂಬ ಹೆಸರಿನಿಂದ ಪ್ರಸಿದ್ಧನಾದ ಮಹಾಸುರನು ಭೂಮಿಯಲ್ಲಿ ಪ್ರತಿವಿಂಧ್ಯನಾಮಕ ರಾಜನಾದನು. (ಇವನು ಧರ್ಮರಾಜನ ಮಗನಾದ ಪ್ರತಿವಿಂಧ್ಯನಿಗಿಂತ ಬೇರೆಯಾದವನು.)

ವಿರೂಪಾಕ್ಷಸ್ತು ದೈತೇಯಃ ಚಿತ್ರಯೋಧೀ ಮಹಾಸುರಃ ।
ಚಿತ್ರವರ್ಮೇತಿ ವಿಖ್ಯಾತಃ ಕ್ಷಿತಾವಾಸೀತ್ ಸ ಪಾರ್ಥಿವಃ ॥೨೩॥

ವಿರೂಪಾಕ್ಷನೆಂಬ ವಿಚಿತ್ರಯುದ್ಧವನ್ನು ಮಾಡುವ ಮಹಾಸುರನು ಭೂಮಿಯಲ್ಲಿ ಚಿತ್ರವರ್ಮ ಎಂಬ ಹೆಸರಿನ ರಾಜನಾದನು.

ನಾಮ್ನಾ ಹರಿಹಯೋ ರಾಜನ್ ಆಸೀದ್ ಯೋ ದಾನವರ್ಷಭಃ ।
ಸುವಾಸ್ತುರಿತಿ ವಿಖ್ಯಾತಃ ಸ ಜಜ್ಞೇ ಮನುಜರ್ಷಭಃ ॥೨೪॥

ಎಲೈ ರಾಜನೇ ದಾನವಶ್ರೇಷ್ಠನಾದ ಹರಿಹಯ ಎಂಬುವನು ಭೂಮಿಯಲ್ಲಿ ಸುವಾಸ್ತು ಎಂಬ ಹೆಸರಿನಿಂದ ಜನಿಸಿ ಪ್ರಖ್ಯಾತನಾದ ರಾಜನಾದನು.

ಪ್ರಹ್ಲಾದಸ್ತು ಮಹಾತೇಜಾಃ ಶತ್ರುಪಕ್ಷಭಯಂಕರಃ ।
ಬಾಹ್ಲೀಕೋ ನಾಮ ರಾಜಾ ಸ ಬಭೂವ ಪ್ರಥಿತಃ ಕ್ಷಿತೌ ॥೨೫॥

ಶತ್ರುಪಕ್ಷಭಯಂಕರನೂ, ಮಹಾತೇಜಸ್ವಿಯೂ ಆದ ಪ್ರಹ್ಲಾದನು ಭೂಮಿಯಲ್ಲಿ ಬಾಹ್ಲೀಕರಾಜನಾಗಿ ಅವತರಿಸಿ ಪ್ರಖ್ಯಾತನಾದನು.

ನಿಚಂದ್ರಶ್ಚಂದ್ರವಕ್ತ್ರಸ್ತು ಯ ಆಸೀದ್ದಾನವೋತ್ತಮಃ ।
ಸುಚಂದ್ರ ಇತಿ ವಿಖ್ಯಾತೋ ಭೂಮಾವಾಸೀತ್ ಸ ಪಾರ್ಥಿವಃ ॥೨೬॥

ನಿಚಂದ್ರ ಎಂಬ ಹೆಸರಿನಿಂದ ಪ್ರಸಿದ್ಧನಾದ ಚಂದ್ರಮುಖನಾದ ದಾನವನು ಭೂಮಿಯಲ್ಲಿ ಸುಚಂದ್ರ ಎಂಬ ಹೆಸರಿನಿಂದ ಜನಿಸಿ ರಾಜನಾದನು.

ನಿಕುಂಭಸ್ತ್ವಜಿತಃ ಸಂಖೇ ಮಹಾಮತಿರಜಾಯತ ।
ಭೂಮೌ ಭೂಮಿಪತಿಶ್ರೇಷ್ಠೋ ದೇವಾಧಿಕ ಇತಿ ಶ್ರುತಃ ॥೨೭॥

ಯುದ್ಧದಲ್ಲಿ ಸೋಲನ್ನು ಕಾಣದ ಬುದ್ಧಿಶಾಲಿಯಾದ ನಿಕುಂಭ ಎಂಬ ಅಸುರನು ಭೂಮಿಯಲ್ಲಿ ದೇವಾಧಿಕನೆಂಬ ರಾಜನಾಗಿ ಅವತರಿಸಿದನು.

ಶರಭೋ ನಾಮ ಯಸ್ತೇಷಾಂ ದೈತೇಯಾನಾಂ ಮಹಾಸುರಃ ।
ಪೌರವೋ ನಾಮ ರಾಜರ್ಷಿಃ ಸ ಬಭೂವ ನರೇಷ್ವಿಹ ॥೨೮॥

ದೈತೇಯರ ಗಣಕ್ಕೆ ಸೇರಿದ ಶರಭ ಎಂಬ ಮಹಾಸುರನು ಇಲ್ಲಿ ಪೌರವ ಎಂಬ ಹೆಸರಿನ ರಾಜರ್ಷಿಯಾದನು.

ಕಾಪಥಸ್ತು ಮಹಾವೀರಃ ಶ್ರೀಮಾನ್ ರಾಜೋ ಮಹಾಸುರಃ ।
ಸುಪಾರ್ಶ್ವ ಇತಿ ವಿಖ್ಯಾತಃ ಕ್ಷಿತೌ ಜಜ್ಞೇ ಮಹೀಪತಿಃ ॥೨೯॥

ಕಾಪಥ ಎಂಬ ಮಹಾವೀರನೂ, ಕಾಂತಿಯುಕ್ತನೂ ಆದ ಮಹಾಸುರನು ಸುಪಾರ್ಶ್ವ ಎಂಬ ಹೆಸರಿನಿಂದ ಭೂಮಿಯಲ್ಲಿ ಪ್ರಖ್ಯಾತನಾದ ರಾಜನಾದನು.

ಕ್ರತುಸ್ತು ರಾಜನ್ ರಾಜರ್ಷಿಃ ಕ್ಷಿತೌ ಜಜ್ಞೇ ಮಹಾಸುರಃ ।
ಪಾರ್ವತೇಯ ಇತಿ ಖ್ಯಾತಃ ಕಾಂಚನಾಚಲಸನ್ನಿಭಃ ॥೩೦॥

ಎಲೈ ರಾಜನೇ ಕ್ರತು ಎಂಬ ಹೆಸರಿನ ಮಹಾಸುರನು ಚಿನ್ನದ ಗಿರಿಯಂತೆ ಉನ್ನತವಾಗಿದ್ದು ಪಾರ್ವತೇಯ ರಾಜನಾಗಿ ಜನಿಸಿದನು. (ಈ ಕ್ರಥನು ಕೃಷ್ಣದೇವರಿಗೆ ಅಭಿಷೇಕ ಮಾಡಿದ ಕ್ರಥನಿಗಿಂತ ಭಿನ್ನನಾದವನು.)

ದ್ವಿತೀಯಃ ಶರಭಸ್ತೇಷಾಮಸುರಾಣಾಂ ಬಭೂವ ಯಃ ।
ಪ್ರಹ್ಲಾದೋ ನಾಮ ಬಾಹ್ಲೀಕೋ ಜಜ್ಞೇ ಭೂಪಃ ಪರಂತಪ ॥೩೧॥

ಆ ಅಸುರ ಗುಂಪಿಗೆ ಸೇರಿದ ಅವನ ಅನಂತರದ ಶರಭ ಎಂಬುವನು ಭೂಮಿಯಲ್ಲಿ ಬಾಹ್ಲೀಕಾಧಿಪತಿಯಾಗಿ ಪ್ರಹ್ಲಾದ ಎಂಬ ಹೆಸರಿನಿಂದ ಜನಿಸಿದನು. (ಈ ಪ್ರಹ್ಲಾದನು ನರಸಿಂಹದೇವರ ಅನುಗ್ರಹ ಪಡೆದ ಪ್ರಹ್ಲಾದನಲ್ಲ. ಬಾಹ್ಲೀಕದೇಶದಲ್ಲಿ ಯಾವುದೋ ಕಡೆ ರಾಜನಾಗಿದ್ದ ಇನ್ನೊಬ್ಬ ವ್ಯಕ್ತಿ.)

ಚಂದ್ರಸ್ತು ದಿತಿಜಶ್ರೇಷ್ಠೋ ಲೋಕೇ ತಾರಾಧಿಪೋಽಪರಃ ।
ಚಂದ್ರವರ್ಮೇತಿ ವಿಖ್ಯಾತಃ ಕಾಂಭೋಜಾನಾಂ ನರಾಧಿಪಃ ॥೩೨॥

ಅಸುರರ ಗಣಕ್ಕೆ ಸೇರಿದ ದಕ್ಷಪ್ರಜಾಪತಿಯಾದ ಚಂದ್ರನು ಚಂದ್ರವರ್ಮ ಎಂಬ ಹೆಸರಿನಿಂದ ಜನಿಸಿ ಕಾಂಭೋಜರಾಜನಾದನು. (ಇವನು ಅಸುರ ಗುಂಪಿಗೆ ಸೇರಿದ ಚಂದ್ರ. ದೇವತೆಗಳ ಗಣಕ್ಕೆ ಸೇರಿದ ಸೂರ್ಯ, ಚಂದ್ರರು ಬೇರೆ, ಅಸುರರ ಗಣಕ್ಕೆ ಸೇರಿದ ಸೂರ್ಯ, ಚಂದ್ರರು ಬೇರೆ.)

ಅರ್ಕ ಇತ್ಯಭಿವಿಖ್ಯಾತೋ ಯಸ್ತು ದಾನವಪುಂಗವಃ ।
ಇಷೀಕೋ ನಾಮ ರಾಜರ್ಷಿರ್ಬಭೂವ ಋಷಿಸತ್ತಮಃ ॥೩೩॥

ಅರ್ಕ ಎಂಬ ಹೆಸರಿನಿಂದ ಪ್ರಸಿದ್ಧನಾದ ದಾನವಶ್ರೇಷ್ಠನು ಇಷೀಕ ಎಂಬ ಹೆಸರಿನಿಂದ ಭೂಮಿಯಲ್ಲಿ ಜನಿಸಿ ರಾಜರ್ಷಿಯೆನಿಸಿಕೊಂಡನು.

ಮೃತಪಾ ಇತಿ ವಿಖ್ಯಾತೋ ಯ ಆಸೀದಸುರೋತ್ತಮಃ ।
ಪಶ್ಚಿಮಾನೂಪಕಂ ವಿದ್ಧಿ ತಂ ನೃಪಂ ನೃಪಸತ್ತಮ ॥೩೪॥

ಮೃತಪಾ ಎಂಬ ಹೆಸರಿನಿಂದ ಪ್ರಖ್ಯಾತನಾದ ಅಸುರಶ್ರೇಷ್ಠನು ಅನೂಪಕನೆಂದು ಹೆಸರಿನಿಂದ ಜನಿಸಿ ಪಶ್ಚಿಮ ಸಮುದ್ರದ ತೀರಪ್ರದೇಶಗಳಿಗೆ ರಾಜನಾದನು.

ಗವಿಷ್ಮಸ್ತು ಮಹಾತೇಜಾ ಯಃ ಪ್ರಖ್ಯಾತೋ ಮಹಾಸುರಃ ।
ದ್ರುಮಸೇನ ಇತಿ ಖ್ಯಾತಃ ಪೃಥಿವ್ಯಾಂ ಸೋಽಭವನ್ನೃಪಃ ॥೩೫॥

ಗವಿಷ್ಮ ಎಂಬ ಹೆಸರಿನಿಂದ ಪ್ರಖ್ಯಾತನಾಗಿದ್ದ ಮಹಾತೇಜಸ್ವಿಯಾದ ಅಸುರನು ದ್ರುಮಸೇನ ಎಂಬ ಹೆಸರಿನಿಂದ ಪ್ರಖ್ಯಾತನಾಗಿ ಭೂಮಿಯಲ್ಲಿ ರಾಜನಾದನು.

ಮಯೂರ ಇತಿ ವಿಖ್ಯಾತಃ ಶ್ರೀಮಾನ್ ಯಸ್ತು ಮಹಾಸುರಃ ।
ಸ ವಿಶ್ವ ಇತಿ ವಿಖ್ಯಾತೋ ಬಭೂವ ಪೃಥಿವೀಪತಿಃ ॥೩೬॥

ಮಯೂರ ಎಂಬ ಹೆಸರಿನಿಂದ ಪ್ರಖ್ಯಾತನಾದ ಮಹಾಸುರನು ವಿಶ್ವ ಎಂಬ ಹೆಸರಿನ ಪ್ರಖ್ಯಾತನಾದ ರಾಜನಾದನು.

ದೀರ್ಘಜಿಹ್ವಸ್ತು ಕೌರವ್ಯ ಯ ಉಕ್ತೋ ದಾನವರ್ಷಭಃ ।
ಕಾಶಿರಾಜ ಇತಿ ಖ್ಯಾತಃ ಪೃಥಿವ್ಯಾಮಭವನ್ನೃಪಃ ॥೩೭॥

ಎಲೈ ಕೌರವ್ಯನೇ ದೀರ್ಘಜಿಹ್ವ ಎಂಬ ಹೆಸರಿನ ದಾನವಶ್ರೇಷ್ಠನು ಭೂಮಿಯಲ್ಲಿ ಕಾಶೀರಾಜನಾಗಿ ಅವತಾರ ಮಾಡಿದನು.

ಸಿಂಹಿಕಾ ಸುಷುವೇ ಯಂ ತು ಗ್ರಹಂ ಚಂದ್ರಾರ್ಕಮರ್ದನಮ್ ।
ಕ್ರಥ ಇತ್ಯಭಿವಿಖ್ಯಾತಃ ಸ ಬಭೂವ ನರಾಧಿಪಃ ॥೩೮॥

ಚಂದ್ರ, ಸೂರ್ಯರನ್ನು ಪೀಡಿಸುವ ಸಿಂಹಿಕೆಯ ಮಗನಾದ ರಾಹುವು ಕ್ರಥ ಎಂಬ ಹೆಸರಿನ ರಾಜನಾದನು. (ಈ ಕ್ರಥನೂ ಸಹ ಕೃಷ್ಣದೇವರಿಗೆ ಅಭಿಷೇಕ ಮಾಡಿದ ಕ್ರಥನಿಗಿಂತ ಭಿನ್ನನಾದವನು.)

ಸುಪರ್ಣ ಇತಿ ವಿಖ್ಯಾತಃ ತಸ್ಮಾದವರಜಸ್ತು ಯಃ ।
ಕ್ರೋಧಕೀರ್ತಿರಿತಿ ಖ್ಯಾತಃ ಪೃಥಿವ್ಯಾಮಭವನ್ನೃಪಃ ॥೩೯॥

ಅವನ ತಮ್ಮನಾಗಿ ಸುಪರ್ಣ ಎಂಬ ಹೆಸರಿನಿಂದ ಪ್ರಖ್ಯಾತನಾದವನು ಭೂಮಿಯಲ್ಲಿ ಕ್ರೋಧಕೀರ್ತಿ ಎಂಬ ಹೆಸರಿನ ರಾಜನಾದನು.

ಚಂದ್ರಹಂತೇತಿ ಯಸ್ತೇಷಾಂ ಕೀರ್ತಿತಃ ಪ್ರವರೋಽಸುರಃ ।
ನರಕೋ ನಾಮ ರಾಜರ್ಷಿಃ ಪೃಥಿವ್ಯಾಂ ಸೋಽಭವನ್ನೃಪಃ ॥೪೦॥

ಚಂದ್ರಹಂತಾ ಎಂಬ ಹೆಸರಿನಿಂದ ಪ್ರಖ್ಯಾತನಾದ ಅಸುರಶ್ರೇಷ್ಠನು ಭೂಮಿಯಲ್ಲಿ ನರಕ ಎಂಬ ಹೆಸರಿನಿಂದ ಪ್ರಖ್ಯಾತನಾದನು.

ವಿನಾಶನಸ್ತು ಚಂದ್ರಸ್ಯ ಯ ಆಖ್ಯಾತೋ ಮಹಾಸುರಃ ।
ಜಾನಕಿರ್ನಾಮ ವಿಖ್ಯಾತಃ ಸೋಽಭವನ್ಮನುಜಾಧಿಪಃ ॥೪೧॥

ಚಂದ್ರವಿನಾಶನ ಎಂಬ ಹೆಸರಿನಿಂದ ಪ್ರಖ್ಯಾತನಾದ ಮಹಾಸುರನು ಜಾನಕಿ ಎಂಬ ಹೆಸರಿನಿಂದ ಭೂಮಿಯಲ್ಲಿ ಪ್ರಖ್ಯಾತನಾದನು.

ಅನಾಯುಷಸ್ತು ಪುತ್ರಾಣಾಂ ಚತುರ್ಣಾಂ ಪ್ರವರೋಽಸುರಃ ।
ವಿಕ್ಷರೋ ನಾಮ ರಾಜರ್ಷಿರ್ವಸುಮಿತ್ರೋಽಭವನ್ನೃಪಃ ॥೪೨॥

ಅನಾಯುವಿನ ನಾಲ್ವರು ಪುತ್ರರ ಮಧ್ಯದಲ್ಲಿ ಶ್ರೇಷ್ಠನಾದ ವಿಕ್ಷರ ಎಂಬ ಅಸುರನು ವಸುಮಿತ್ರನೆಂಬ ಹೆಸರಿನ ರಾಜರ್ಷಿಯಾದನು.

ದ್ವಿತೀಯೋ ವಿಕ್ಷರಾದ್ ಯಸ್ತು ನರಾಧಿಪ ಮಹಾಸುರಃ ।
ವರಃ ಸುರಾಷ್ಟ್ರಾಧಿಪತಿರ್ವಿಶ್ರುತಃ ಸೋಽಭವನ್ನೃಪಃ ॥೪೩॥

ಎಲೈ ರಾಜನೇ ವಿಕ್ಷರನ ತಮ್ಮನಾದ ವರನೆಂಬ ಅಸುರನು ಸುರಾಷ್ಟ್ರಾಧಿಪತಿಯಾಗಿ ಭೂಮಿಯಲ್ಲಿ ಅವತಾರ ಮಾಡಿದನು.

ಬಲವೀರ ಇತಿ ಖ್ಯಾತೋ ಯಸ್ತ್ವಾಸೀದಸುರೋತ್ತಮಃ ।
ಪೌಂಡ್ರಕೋ ಮೇರುಸಂಕಾಶೋ ಬಭೂವ ಸ ನರಾಧಿಪಃ ॥೪೪॥

ಬಲವೀರ ಎಂಬ ಹೆಸರಿನಿಂದ ಪ್ರಖ್ಯಾತನಾದ ಅಸುರಶ್ರೇಷ್ಠನಾದ ವೀರನು ಪೌಂಡ್ರಕ ಎಂಬ ಹೆಸರಿನಿಂದ ಮೇರುವಿನಂತೆ ಉನ್ನತ ಆಕಾರವನ್ನು ಹೊಂದಿದ್ದ ರಾಜನಾದನು.

ವೃತ್ರ ಇತ್ಯಭವಿಖ್ಯಾತೋ ಯಸ್ತು ರಾಜನ್ ಮಹಾಸುರಃ ।
ಮಣಿಮಾನ್ನಾಮ ರಾಜರ್ಷಿಃ ಸ ಬಭೂವ ನರಾಧಿಪಃ ॥೪೫॥

ರಾಜನೇ ವೃತ್ರ ಎಂಬ ಹೆಸರಿನಿಂದ ಪ್ರಖ್ಯಾತನಾದ ಮಹಾಸುರನು ಮಣಿಮಾನ್ ಎಂಬ ಹೆಸರಿನಿಂದ ರಾಜರ್ಷಿಯಾದನು. (ಇವನು ಕ್ರೋಧವಶಗಣದಲ್ಲಿ ಸೇರಿದ ಮಣಿಮಂತನಿಗಿಂತ ಭಿನ್ನನಾದವನು.)

ಕ್ರೋಧಹಂತೇತಿ ಯಸ್ತಸ್ಯ ಬಭೂವಾವರಜೋಽಸುರಃ ।
ದಂಡ ಇತ್ಯಭಿವಿಖ್ಯಾತಃ ಸ ಬಭೂವ ನರಾಧಿಪಃ ॥೪೬॥

ಅವನ ತಮ್ಮನಾದ ಕ್ರೋಧಹಂತಾ ಎಂಬ ಮಹಾಸುರನು ದಂಡ ಎಂಬ ಹೆಸರಿನಿಂದ ಭೂಮಿಯಲ್ಲಿ ಪ್ರಖ್ಯಾತನಾದ ರಾಜನಾದನು.

ಕ್ರೋಧವರ್ಧನ ಇತ್ಯೇವ ಯಸ್ತ್ವನ್ಯಃ ಪರಿಕೀರ್ತಿತಃ ।
ದಂಡಧಾರ ಇತಿ ಖ್ಯಾತಃ ಸೋಽಭವನ್ಮನುಜೇಶ್ವರಃ ॥೪೭॥

ಕ್ರೋಧವರ್ಧನ ಇನ್ನೊಬ್ಬ ತಮ್ಮನು ದಂಡಧಾರ ಎಂಬ ಹೆಸರಿನ ರಾಜನಾಗಿ ಅವತರಿಸಿದನು.

ಕಾಲಕೇಯಾಸ್ತು ಯೇ ಪುತ್ರಾಃ ತೇಷಾಮಷ್ಟೌ ನರಾಧಿಪಾಃ ।
ಜಜ್ಞಿರೇ ರಾಜಶಾರ್ದೂಲ ಶಾರ್ದೂಲಸಮವಿಕ್ರಮಾಃ ॥೪೮॥

ಕಾಲೇಯ ಅಥವಾ ಕಾಲಕೇಯರೆನಿಸಿದ ಎಂಟು ಮಕ್ಕಳು ಭೂಮಿಯಲ್ಲಿ ಶಾರ್ದೂಲವಿಕ್ರಮರಾಗಿ ಅವತರಿಸಿದರು.

ಮಾಗಧೇಷು ಜಯತ್ಸೇನಃ ಶ್ರೀಮಾನಾಸೀತ್ ಸ ಪಾರ್ಥಿವಃ ।
ಅಷ್ಟಾನಾಂ ಪ್ರವರಸ್ತೇಷಾಂ ಕಾಲೇಯಾನಾಂ ಮಹಾಸುರಃ ॥೪೯॥

ಕಾಲೇಯರಲ್ಲಿ ಶ್ರೇಷ್ಠನಾದ ಮಹಾಸುರನು ಮಗಧದೇಶದಲ್ಲಿ ಜಯತ್ಸೇನ ಎಂಬ ರಾಜನಾದನು.

ದ್ವಿತೀಯಸ್ತು ತತಸ್ತೇಷಾಂ ಶ್ರೀಮಾನ್ ಹರಿಹಯೋಪಮಃ ।
ಅಪರಾಜಿತ ಇತ್ಯೇವ ಸ ಬಭೂವ ನರಾಧಿಪಃ ॥೫೦॥

ಅವರಲ್ಲಿ ಎರಡನೆಯವನಾದ ಕಾಂತಿಯುಕ್ತನೂ, ಇಂದ್ರನಿಗೆ ಸಮನೂ ಆದ ಅಸುರನು ಅಪರಾಜಿತ ಎಂಬ ಹೆಸರಿನಿಂದ ಭೂಮಿಯಲ್ಲಿ ರಾಜನಾದನು.

ತೃತೀಯಸ್ತು ಮಹಾರಾಜ ಮಹಾಬಾಹುರ್ಮಹಾಸುರಃ ।
ನಿಷಾದಾಧಿಪತಿರ್ಜಜ್ಞೇ ಭುವಿ ಭೀಮಪರಾಕ್ರಮಃ ॥೫೧॥

ಎಲೈ ಮಹಾರಾಜನೇ ಅವರಲ್ಲಿ ಮೂರನೆಯವನಾದ ಮಹಾಸುರನು ಭೂಮಿಯಲ್ಲಿ ಭೀಮಪರಾಕ್ರಮವುಳ್ಳ ನಿಷಾದಾಧಿಪತಿಯಾಗಿ ಜನಿಸಿದನು.

ತೇಷಾಮನ್ಯತಮೋ ಯಸ್ತು ಚತುರ್ಥಃ ಪರಿಕೀರ್ತಿತಃ ।
ಶ್ರೋಣಿಮಾನಿತಿ ವಿಖ್ಯಾತಃ ಕ್ಷಿತೌ ರಾಜರ್ಷಿಸತ್ತಮಃ ॥೫೨॥

ಅವರಲ್ಲಿ ನಾಲ್ಕನೆಯವನಾದವನು ಭೂಮಿಯಲ್ಲಿ ಶ್ರೋಣಿಮಾನ್ ಎಂಬ ಹೆಸರಿನ ರಾಜನಾದನು.

ಪಂಚಮಸ್ತು ಬಭೂವೈಷಾಂ ಪ್ರವರೋ ಯೋ ಮಹಾಸುರಃ ।
ಮಹೌಜಾ ಇತಿ ವಿಖ್ಯಾತೋ ಬಭೂವೇಹ ಪರಂತಪಃ ॥೫೩॥

ಅವರಲ್ಲಿ ಐದನೆಯವನಾದ ಮಹಾಸುರನು ಭೂಮಿಯಲ್ಲಿ ಮಹೌಜ ಎಂಬ ಹೆಸರಿನ ಶತ್ರುತಾಪಕನಾದ ರಾಜನಾದನು.

ಷಷ್ಠಸ್ತು ಮತಿಮಾನ್ ಯೋ ವೈ ತೇಷಾಮಾಸೀನ್ಮಹಾಸುರಃ ।
ಅಭಿರೂಪ ಇತಿ ಖ್ಯಾತಃ ಕ್ಷಿತೌ ರಾಜರ್ಷಿಸತ್ತಮಃ ॥೫೪॥

ಅವರಲ್ಲಿ ಆರನೆಯವನಾದ ಮೇಧಾವಿಯಾದ ಮತಿಮಾನ್ ಎಂಬ ಮಹಾಸುರನು ಭೂಮಿಯಲ್ಲಿ ಅಭಿರೂಪ ಎಂಬ ಹೆಸರಿನ ರಾಜನಾದನು.

ಸಪ್ತಮಸ್ತು ಬಭೂವೈಷಾಂ ಪ್ರವರೋ ಯೋ ಮಹಾಸುರಃ ।
ಸಮುದ್ರಸೇನಸ್ತು ನೃಪಃ ತೇಷಾಮೇವಾಭವದ್ ಗಣಾತ್ ।
ವಿಶ್ರುತಃ ಸಾಗರಾಂತಾಯಾಂ ಕ್ಷಿತೌ ಧರ್ಮಾರ್ಥತತ್ತ್ವವಿತ್ ॥೫೫॥

ಅವರಲ್ಲಿ ಏಳನೆಯವನಾದ ಮಹಾಸುರನು ಸಮುದ್ರಸೇನನೆಂಬ ಹೆಸರಿನ ರಾಜನಾಗಿ ಭೂಮಿಯಲ್ಲಿ ಜನಿಸಿದನು. ಸಾಗರಾಂತವಾದ ಭೂಮಿಯಲ್ಲಿ ಅವನು ಧರ್ಮಾರ್ಥತತ್ತ್ವಗಳನ್ನು ತಿಳಿದವನು ಎಂದು ಪ್ರಸಿದ್ಧನಾಗಿದ್ದನು.

ಬೃಹನ್ನಾಮಾऽಷ್ಟಮಸ್ತೇಷಾಂ ಕಾಲೇಯಾನಾಂ ಮಹಾಸುರಃ ।
ಬಭೂವ ರಾಜಾ ಧರ್ಮಾತ್ಮಾ ಸರ್ವಭೂತಹಿತೇ ರತಃ ॥೫೬॥

ಅವರಲ್ಲಿ ಎಂಟನೆಯವನಾದ ಮಹಾಸುರನು ಭೂಮಿಯಲ್ಲಿ ಬೃಹತ್ ಎಂಬ ಹೆಸರಿನ ಧರ್ಮಾತ್ಮನಾದ ಸರ್ವಭೂತಹಿತನಾದ ರಾಜನಾದನು.

ಗಣಃ ಕ್ರೋಧವಶೋ ನಾಮ ಯಸ್ತು ರಾಜನ್ ಪ್ರಕೀರ್ತಿತಃ ।
ತತಃ ಸಂಜಜ್ಞಿರೇ ವೀರಾಃ ಕ್ಷಿತಾವಿಹ ನರಾಧಿಪಾಃ ॥೫೭॥

ಎಲೈ ರಾಜನೇ ಕ್ರೋಧವಶ ಎಂದು ಪ್ರಸಿದ್ಧವಾದ ಗಣದಿಂದ ಅನೇಕರು ಭೂಮಿಯಲ್ಲಿ ರಾಜರಾಗಿ ಅವತರಿಸಿದರು.

ನಂದಕಃ ಕರ್ಣವೇಷ್ಟಶ್ಚ ಸಿದ್ಧಾರ್ಥಃ ಕ್ರೀಡಕಸ್ತಥಾ ।
ಸುವೀರಶ್ಚ ಸುಬಾಹುಶ್ಚ ಮಹಾವೀರೋಽಥ ಬಾಹ್ಲಿಕಃ ।
ಕ್ರೋಧೋ ವಿಚಿತ್ರಸ್ತುವರಃ ಶ್ರೀಮಾನ್ ನೀಲಶ್ಚ ಭೂಮಿಪಃ ॥೫೮॥

ವೀರಧಾಮಾ ಚ ಕೌರವ್ಯ ಭೂರಿವಾಲಶ್ಚ ನಾಮತಃ ।
ದಂತವಕ್ರಶ್ಚ ನಾಮಾಸೀದ್ ದುರ್ಜಯಶ್ಚೈವ ನಾಮತಃ ॥೫೯॥

ರುಗ್ಮೀ ಚ ನರಶಾರ್ದೂಲ ರಾಜಾ ಚ ಜನಮೇಜಯಃ ।
ಆಷಾಢೋ ವಾಯುವೇಗಶ್ಚ ಭೂರಿತೇಜಸ್ತಥೈವ ಚ ॥೬೦॥

ಏಕಲವ್ಯಃ ಸುಮಿತ್ರಸ್ತು ವಾಟಧಾನೋಽಥ ಗೋಮುಖಿಃ ।
ಕರೂಶಕಾಶ್ಚ ರಾಜಾನಃ ಕ್ಷೇಮಧೂರ್ತಿಸ್ತಥೈವ ಚ ॥೬೧॥

ಶ್ರುತಾಯುರುದ್ಧವಶ್ಚೈವ ಬೃಹತ್ಸೇನಸ್ತಥೈವ ಚ ।
ಕ್ಷೇಮೋಗ್ರತೀರ್ಥಃ ಕುಹಕಃ ಕಳಿಂಗೇಷು ನರಾಧಿಪಃ ॥೬೨॥

ಎಲೈ ರಾಜನೇ ನಂದಕ, ಕರ್ಣವೇಷ್ಟ, ಸಿದ್ಧಾರ್ಥ, ಕ್ರೀಡಕ, ಸುವೀರ, ಸುಬಾಹು, ಮಹಾವೀರ, ಬಾಹ್ಲಿಕ, ಕ್ರೋಧ, ವಿಚಿತ್ರ, ತುವರ, ನೀಲ, ವೀರಧಾಮಾ, ಭೂರಿವಾಲ, ದಂತವಕ್ರ, ದುರ್ಜಯ, ರುಗ್ಮಿ, ಜನಮೇಜಯ, ಆಷಾಢ, ವಾಯುವೇಗ, ಭೂರಿತೇಜ, ಏಕಲವ್ಯ, ಸುಮಿತ್ರ, ವಾಟಧಾನ, ಗೋಮುಖ, ಕರೂಶಕ ರಾಜರುಗಳು, ಕ್ಷೇಮಧೂರ್ತಿ, ಶ್ರುತಾಯು, ಉದ್ಧವ, ಬೃಹತ್ಸೇನ, ಕ್ಷೇಮ, ಉಗ್ರತೀರ್ಥ, ಕುಹಕ, ಕಳಿಂಗಾಧಿಪತಿ ಇವರೆಲ್ಲರೂ ಕ್ರೋಧವಶಗಣಕ್ಕೆ ಸೇರಿದ ರಾಜರುಗಳು.

ಮತಿಮಾಂಶ್ಚ ಮನುಷ್ಯಾಣಾಮೀಶ್ವರಶ್ಚೇತಿ ವಿಶ್ರುತಃ ।
ಗಣಾತ್ ಕ್ರೋಧವಶಾದೇವ ರಾಜಪೂಗಃ ಕ್ಷಿತಾವಿಹ ।
ಜಾತಃ ಪುರಾ ಮಹಾರಾಜ ಮಹಾಕೀರ್ತಿರ್ಮಹಾಬಲಃ ॥೬೩॥

ಈಶ್ವರ ಎಂಬ ಹೆಸರಿನಿಂದ ಪ್ರಖ್ಯಾತನಾದ ಬುದ್ಧಿವಂತನಾದ ರಾಜನೂ ಸಹ ಕ್ರೋಧವಶಗಣಕ್ಕೆ ಸೇರಿದವನು. ರಾಜನೇ, ಕ್ರೋಧವಶಗಣದಿಂದಲೇ ಭೂಮಿಯಲ್ಲಿ ಮಹಾಕೀರ್ತಿ ಮತ್ತು ಬಲಗಳುಳ್ಳ ರಾಜರ ಸಮುದಾಯವು ಉಂಟಾಯಿತು.

ಕಾಲನೇಮಿರಿತಿ ಖ್ಯಾತೋ ಯೋಽಸಾವಸುರಸತ್ತಮಃ ।
ಸ ಕಂಸ ಇತಿ ವಿಖ್ಯಾತ ಉಗ್ರಸೇನಸುತೋ ಬಲೀ ॥೬೪॥

ಕಾಲನೇಮಿ ಎಂಬ ಹೆಸರಿನ ಪ್ರಖ್ಯಾತನಾದ ಅಸುರನು ಉಗ್ರಸೇನನ ಮಗನಾಗಿ ಬಲಿಷ್ಠನಾಗಿ ಜನಿಸಿ ಕಂಸ ಎಂಬ ಹೆಸರಿನಿಂದ ಪ್ರಸಿದ್ಧನಾದನು.

ಯಸ್ತಾ ಸ್ವೀದ್ ದೇವಕೋ ನಾಮ ದೇವರಾಜಸಮದ್ಯುತಿಃ ।
ಸ ಗಂಧರ್ವಪತಿರ್ಮುಖ್ಯಃ ಕ್ಷಿತೌ ಜಜ್ಞೇ ನರಾಧಿಪಃ ॥೬೫॥

ದೇವಕ ಎಂಬ ಹೆಸರಿನ ಇಂದ್ರನಿಗೆ ಸಮಾನವಾದ ಕಾಂತಿಯುಳ್ಳ ಗಂಧರ್ವಾಧಿಪತಿಯು ಭೂಮಿಯಲ್ಲಿ ದೇವಕನೆಂಬ ಹೆಸರಿನ ರಾಜನಾಗಿ ಜನಿಸಿದನು.

ಬೃಹಸ್ಪತೇರ್ಬೃಹತ್ಕೀರ್ತೇರ್ದೇವರ್ಷೇರ್ವಿದ್ಧಿ ಭಾರತ ।
ಅಂಶಾದ್ ದ್ರೋಣಂ ಸಮುತ್ಪನ್ನಂ ಭಾರದ್ವಾಜಮಯೋನಿಜಮ್ ॥೬೬॥

ಮಹಾಕೀರ್ತಿವಂತರಾದ ದೇವರ್ಷಿಗಳಾದ ಬೃಹಸ್ಪತಿಗಳ ಅಂಶದಿಂದ ಭೂಮಿಯಲ್ಲಿ ದ್ರೋಣರು ಅಯೋನಿಜರಾಗಿ ಅವತರಿಸಿದರು.

ಧನ್ವಿನಾಂ ನೃಪಶಾರ್ದೂಲ ಯಸ್ತು ಸರ್ವಾಸ್ತ್ರವಿತ್ತಮಃ ।
ಬೃಹತ್ಕೀರ್ತಿರ್ಮಹಾತೇಜಾಃ ಸ ಜಜ್ಞೇ ಮನುಜೇಷ್ವಿಹ ॥೬೭॥

ಧನುರ್ವೇದೇ ಚ ವೇದೇ ಚ ಯಂ ತಂ ವೇದವಿದೋ ವಿದುಃ ।
ವರಿಷ್ಠಮಿಷ್ಟಕರ್ಮಾಣಂ ದ್ರೋಣಂ ಸ್ವಕುಲವರ್ಧನಮ್ ॥೬೮॥

ಎಲೈ ನೃಪಶಾರ್ದೂಲನೇ ಅವರು ಧನುರ್ಧಾರಿಗಳಲ್ಲಿ ಶ್ರೇಷ್ಠರಾದವರು. ಎಲ್ಲಾ ಅಸ್ತ್ರಗಳನ್ನೂ ತಿಳಿದವರಲ್ಲಿ ಶ್ರೇಷ್ಠರಾದವರು. ಮಹಾಕೀರ್ತಿವಂತರಾಗಿ ಭೂಮಿಯಲ್ಲಿ ಜನಿಸಿದರು. ವೇದವನ್ನು ತಿಳಿದವರು ಧನುರ್ವೇದದಲ್ಲಿಯೂ ಮತ್ತು ವೇದದಲ್ಲಿಯೂ ಶ್ರೇಷ್ಠರಾದವರು ದ್ರೋಣರು ಎಂದು ಹೇಳುವಂತೆ ಪ್ರಖ್ಯಾತರಾಗಿ ದೇವತೆಗಳಿಗೆ ಇಷ್ಟವಾದ ಕರ್ಮಗಳನ್ನು ಮಾಡಿ, ತಮ್ಮ ಕುಲವನ್ನು ವರ್ಧಿಸಿದರು.

ಮಹಾದೇವಾಂತಕಾಭ್ಯಾಂ ಚ ಕಾಮಾತ್ ಕ್ರೋಧಾಚ್ಚ ಭಾರತ ।
ಏಕತ್ವಮುಪಸಂಪದ್ಯ ಜಜ್ಞೇ ವೈ ಮಾನುಷೇಷ್ವಿಹ ॥೬೯॥

ಅಶ್ವತ್ಥಾಮಾ ಮಹಾವೀರ್ಯಃ ಶತ್ರುಪಕ್ಷಭಯಂಕರಃ ।
ವೀರಃ ಕಮಲಪತ್ರಾಕ್ಷಃ ಕ್ಷಿತಾವಾಸೀನ್ನರಾಧಿಪ ॥೭೦॥

ರುದ್ರದೇವರ ಕಾಮ ಮತ್ತು ಕ್ರೋಧಪ್ರವರ್ತಕವಾದ ಮಹಾದೇವ ಮತ್ತು ಅಂತಕ ಎಂಬ ಎರಡು ಅಂಶಗಳು ಒಟ್ಟಿಗೆ ಸೇರಿ ಮನುಷ್ಯಲೋಕದಲ್ಲಿ ಅಶ್ವತ್ಥಾಮರಾಗಿ ಜನಿಸಿದರು. ಅವರು ಮಹಾವೀರ್ಯವುಳ್ಳವರೂ, ಶತ್ರುಪಕ್ಷಭಯಂಕರರೂ, ವೀರರೂ ಮತ್ತು ಕಮಲನಯನರೂ ಆಗಿದ್ದರು.

ರುದ್ರದೇವರ ಅರ್ಧನಾರೀಶ್ವರರೂಪ ಕಾಮಪ್ರವರ್ತಕವಾದ ಮಹಾದೇವ ಎಂಬ ರೂಪ. ರುದ್ರದೇವರ ಜಗತ್‌ಸಂಹಾರಕಾರಕವಾದ ಕಾಲಾಗ್ನಿರೂಪ ಅಂತಕವಾದ ರೂಪ. ಅಶ್ವತ್ಥಾಮರಲ್ಲಿ ಕಲಿಯಾದ ದುಯೋರ್ಧನನಲ್ಲಿ ಸ್ನೇಹವನ್ನು ಮಾಡಲು ಪ್ರಚೋದಿಸಿದ ರೂಪ ಮಹಾದೇವರೂಪ. ಯೋಗ್ಯರಾದ ಪಾಂಡವರಲ್ಲಿ ವಿರೋಧವನ್ನು ಮಾಡುವಂತೆ ಪ್ರಚೋದಿಸಿದ ರೂಪ ಅಂತಕರೂಪ. ಅವೆರಡೂ ರೂಪಗಳಿಂದ ರುದ್ರದೇವರೇ ಅಶ್ವತ್ಥಾಮರಾಗಿ ಜನಿಸಿದರು.

ಜಜ್ಞಿರೇ ವಸವಸ್ತ್ವಷ್ಟೌ ಗಂಗಾಯಾಂ ಶಂತನೋಃ ಸುತಾಃ ।
ವಸಿಷ್ಠಸ್ಯ ಚ ಶಾಪೇನ ನಿಯೋಗಾದ್ ವಾಸವಸ್ಯ ಚ ॥೭೧॥

ಅಷ್ಟವಸುಗಳು ವಸಿಷ್ಠರ ಶಾಪದ ನಿಮಿತ್ತದಿಂದ ಮತ್ತು ಇಂದ್ರನ ಆದೇಶದ ನಿಮಿತ್ತದಿಂದ ಗಂಗೆಯಲ್ಲಿ ಶಂತನುವಿನ ಮಕ್ಕಳಾಗಿ ಜನಿಸಿದರು.

ತೇಷಾಮವರಜೋ ಭೀಷ್ಮಃ ಕುರೂಣಾಮಭಯಂಕರಃ ।
ಮತಿಮಾನ್ ವೇದವಿದ್ ವಾಗ್ಮೀ ಸರ್ವಶತ್ರುಭಯಂಕರಃ ॥೭೨॥

ಅವರಲ್ಲಿ ಕೊನೆಯವನಾದ ಭೀಷ್ಮನು ಕುರುಗಳಿಗೆ ಯಾವಾಗಲೂ ಕ್ಷೇಮವನ್ನು ಮಾಡುವವನಾಗಿದ್ದನು. ಅವನು ಮೇಧಾವಿಯೂ, ವೇದಜ್ಞನೂ, ವಾಗ್ಮಿಯೂ, ಸರ್ವಶತ್ರುಭಯಂಕರನೂ ಆದನು.

ಜಾಮದಗ್ನ್ಯೇನ ರಾಮೇಣ ಸರ್ವಶಸ್ತ್ರಭೃತಾಂ ವರಃ ।
ಅಯುಧ್ಯತ ಮಹಾತೇಜಾ ಭಾರ್ಗವೇಣ ಮಹಾತ್ಮನಾ ॥೭೩॥

ಭೃಗುಕುಲೋತ್ಪನ್ನರಾದ ಜಮದಗ್ನಿಗಳ ಪುತ್ರರಾದ ಮಹಾತ್ಮರಾದ ಪರಶುರಾಮರ ಜೊತೆಯಲ್ಲಿ ಸರ್ವಶಸ್ತ್ರಧಾರಿಗಳಲ್ಲಿ ಶ್ರೇಷ್ಠರಾದ ಅವನು ಯುದ್ಧವನ್ನು ಮಾಡಿದರು.

ಯಸ್ತು ರಾಜನ್ ಕೃಪೋ ನಾಮ ಬ್ರಹ್ಮರ್ಷಿರಭವತ್ ಕ್ಷಿತೌ ।
ರುದ್ರಾಣಾಂ ಭಾಗತೋ ವಿದ್ಧಿ ಸಂಭೂತಮಮಿತೌಜಸಮ್ ॥೭೪॥

ರಾಜನೇ ಕೃಪ ಎಂಬ ಹೆಸರಿನ ಭೂಮಿಯಲ್ಲಿ ಜನಿಸಿದ ಬ್ರಹ್ಮರ್ಷಿಗಳನ್ನು ಏಕಾದಶರುದ್ರರಲ್ಲಿ ವಿಷ್ಕಂಬನಾಮಕ ರುದ್ರನ ಅಂಶದಿಂದ ಅಮಿತಪರಾಕ್ರಮಿಗಳಾಗಿ ಭೂಮಿಯಲ್ಲಿ ಜನಿಸಿದವರು ಎಂದು ತಿಳಿ.

ಶಕುನಿರ್ನಾಮ ಯಸ್ತಾ ಸ್ವೀದ್ ರಾಜಾ ಲೋಕೇ ಮಹಾರಥಃ ।
ದ್ವಾಪರಂ ವಿದ್ಧಿ ತಂ ರಾಜನ್ ಸಂಭೂತಮರಿಮರ್ದನಮ್ ॥೭೫॥

ಭೂಮಿಯಲ್ಲಿ ಮಹಾರಥನಾದ ಶಕುನಿ ಎಂಬ ರಾಜನು ದ್ವಾಪರ ಎಂಬ ಅಸುರನ ಅಂಶದಿಂದ ಜನಿಸಿದವನು ಎಂದು ತಿಳಿ.

ಸಾತ್ಯಕಿಃ ಸತ್ಯಸಂಧಸ್ತು ಯಃ ಕ್ಷಿತೌ ಪರಿಕೀರ್ತಿತಃ ।
ಪಕ್ಷಾತ್ ಸ ಜಜ್ಞೇ ಮರುತಾಂ ದೇವನಾಮರಿಮರ್ದನಃ ॥೭೬॥

ಭೂಮಿಯಲ್ಲಿ ಸಾತ್ಯಕಿ ಎಂಬ ಹೆಸರಿನಿಂದ ಪ್ರಸಿದ್ಧನಾದ ಸತ್ಯಸಂಧನಾದ ವಿಷ್ಣುಭಕ್ತನು ಮರುದ್ಗಣಗಳಿಗೆ ಸೇರಿದವನು ಎಂದು ತಿಳಿ.

ದ್ರುಪದಶ್ಚಾಪಿ ರಾಜರ್ಷಿಸ್ತತ ಏವಾಭವದ್ ಗಣಾತ್ ।
ಮಾನುಷೇ ನೃಪ ಲೋಕೇऽಸ್ಮಿನ್ ಸರ್ವಶಸ್ತ್ರಭೃತಾಂ ವರಃ ॥೭೭॥

ರಾಜರ್ಷಿಯಾದ ದ್ರುಪದನೂ ಸಹ ಅದೇ ಗಣಕ್ಕೆ ಸೇರಿದ ಆವಹ ಎಂಬ ಮರುತ್ ಎಂದು ತಿಳಿ. ದ್ರುಪದನು ಆವಹ ಎಂಬ ಮರುತ್‌ನ ಆವೇಶದಿಂದ ಕೂಡಿದ ಹೂಹೂ ಎಂಬ ಗಂಧರ್ವ.

ತತಶ್ಚ ಕೃತವರ್ಮಾಣಂ ವಿದ್ಧಿ ರಾಜನ್ ಮರುದ್ಗಣಾತ್ ।
ಜಾತಮಭ್ಯಧಿಕರ್ಮಾಣಂ ಕ್ಷತ್ರಿಯರ್ಷಭಸತ್ತಮಮ್ ॥೭೮॥

ಎಲೈ ರಾಜನೇ ಅಧಿಕವಾದ ಕ್ರಿಯಾಶಕ್ತಿಯುಳ್ಳ ಕ್ಷತ್ರಿಯಶ್ರೇಷ್ಠನಾದ ಕೃತವರ್ಮನನ್ನು, ಅದೇ ಗಣದಿಂದ ಅವತರಿಸಿದವನೆಂದು ತಿಳಿ. ಕೃತವರ್ಮನು ಪಾಂಚಜನ್ಯಾವೇಶಯುಕ್ತನಾದ ಪ್ರವಹನೆಂಬ ಮರುತ್.

ಮರುತಾಂ ತು ಗಣಾದ್ ವಿದ್ಧಿ ಸ ಜಜ್ಞೇ ರಿಪುಮರ್ದನಃ ।
ವಿರಾಟೋ ನಾಮ ರಾಜರ್ಷಿಃ ಪರರಾಷ್ಟ್ರವಿಮರ್ದನಃ ॥೭೯॥

ಪರರಾಷ್ಟ್ರವಿಮರ್ದನನಾದ ರಿಪುಮರ್ದನನಾದ ವಿರಾಟನೆಂಬ ರಾಜರ್ಷಿಯು ಮರುದ್ಗಣಕ್ಕೆ ಸೇರಿದವನೆಂದು ತಿಳಿ. ವಿರಾಟನು ವಿವಹ ಎಂಬ ಮರುದಂಶಯುಕ್ತನಾದ ಹಾಹಾ ಎಂಬ ಗಂಧರ್ವ.

ಅರಿಷ್ಟಾಯಾಸ್ತು ಯಃ ಪುತ್ರೋ ಹಂಸ ಇತ್ಯಭಿವಿಶ್ರುತಃ ।
ಸ ಗಂಧರ್ವಪತಿರ್ಜಜ್ಞೇ ಕುರುವಂಶವಿವರ್ಧನಃ ॥೮೦॥

ಧೃತರಾಷ್ಟ್ರ ಇತಿ ಖ್ಯಾತಃ ಕೃಷ್ಣದ್ವೈಪಾಯನಾತ್ಮಜಃ ।
ದೀರ್ಘಬಾಹುರ್ಮಹಾತೇಜಾಃ ಪ್ರಜ್ಞಾಚಕ್ಷುರ್ನರಾಧಿಪಃ ।
ಮಾತುರ್ದೋಷೇಣೈವ ಚಷೇರಂಧ ಏವ ವ್ಯಜಾಯತ ॥೮೧॥

ಅರಿಷ್ಟೆಯ ಮಗನಾದ ಹಂಸ ಎಂಬ ಪ್ರಖ್ಯಾತವಾದ ಹೆಸರಿನ ಗಂಧರ್ವರಾಜನು ಭೂಮಿಯಲ್ಲಿ ಕುರುವಂಶವಿವರ್ಧನನಾಗಿ ಕೃಷ್ಣದ್ವೈಪಾಯನರ ಪುತ್ರನಾಗಿ ಧೃತರಾಷ್ಟ್ರ ಎಂಬ ನಾಮದಿಂದ ಜನಿಸಿದನು. ದೀರ್ಘಬಾಹುವೂ, ಮಹಾತೇಜಸ್ವಿಯೂ, ಪ್ರಜ್ಞಾಚಕ್ಷುಸ್ಸನ್ನು ಹೊಂದಿದವನಾದ ಆ ರಾಜನು ತಾಯಿಯ ದೋಷದಿಂದ ವ್ಯಾಸರ ಮಗನಾಗಿ ಅಂಧನಾಗಿ ಜನಿಸಿದನು. (ಧೃತರಾಷ್ಟ್ರನು ಹಂಸನಾಮಕ ಮರುದಂಶಯುತನಾದ ಧೃತರಾಷ್ಟ್ರನೆಂಬ ಗಂಧರ್ವ.)

ಧರ್ಮಾತ್ ತು ಸುಮಹಾಭಾಗಂ ಪುತ್ರಂ ಪುತ್ರವತಾಂ ವರಮ್ ।
ವಿದುರಂ ವಿದ್ಧಿ ಲೋಕೇಽಸ್ಮಿನ್ ಜಾತಂ ಧರ್ಮಭೃತಾಂ ವರಂ ॥೮೨॥

ಮಹಾನುಭಾವನಾದ ವಿದುರನನ್ನು ಯಮಧರ್ಮನಿಂದ ಉತ್ಪನ್ನನಾದವನು. ಯಮಧರ್ಮನ ಅಂಶ ಎಂದು ತಿಳಿ. ಅವನು ಲೋಕದಲ್ಲಿ ಧರ್ಮಿಷ್ಠರಲ್ಲಿ ಶ್ರೇಷ್ಠನಾದವನು. ಮತ್ತು ಮಕ್ಕಳನ್ನು ಪಡೆದವರಲ್ಲಿಯೂ ಶ್ರೇಷ್ಠನಾದವನು.

ತಸ್ಯೈವಾವರಜೋ ಭ್ರಾತಾ ಮಹಾಸತ್ತ್ವೋ ಮಹಾಬಲಃ ।
ಮರುತಾಂ ತು ಗಣಾದ್ವಿದ್ಧಿ ಸರ್ವಶಸ್ತ್ರಭೃತಾಂವರಮ್ ।
ಪಾಂಡುರ್ಜಜ್ಞೇ ಮಹಾಭಾಗಸ್ತವ ಪೂರ್ವಪಿತಾಮಹಃ ॥೮೩॥

ಮಹಾಸತ್ತ್ವವನ್ನು, ಮಹಾಬಲವನ್ನು ಹೊಂದಿದ ಧೃತರಾಷ್ಟ್ರನ ತಮ್ಮನಾದ ಪಾಂಡುವನ್ನೂ ಸಹ ಮರುದ್ಗಣದಿಂದ ಜನಿಸಿದವನು ಎಂದು ತಿಳಿ. ಆ ಮಹಾನುಭಾವನು ನಿನ್ನ ಪೂರ್ವಪಿತಾಮಹನು. (ಪಾಂಡುವು ಪರಾವಹ ಎಂಬ ಮರುತ್‌ನ ಅಂಶವಾಗಿ ಜನಿಸಿದನು.)

ಕಲೇರಂಶಾತ್ ತು ಸಂಜಜ್ಞೇ ಭುವಿ ದುರ್ಯೋಧನೋ ನೃಪಃ ।
ದುರ್ಬುದ್ಧಿರ್ದುರ್ಮತಿಶ್ಚೈವ ಕುರೂಣಾಮಯಶಸ್ಕರಃ ॥೮೪॥

ದುರ್ಬುದ್ಧಿಯೂ, ದುರ್ಮತಿಯೂ ಮತ್ತು ಕುರುವಂಶಕ್ಕೆ ಕಳಂಕವನ್ನು ತಂದ ದುರ್ಯೋಧನನು ಕಲಿಯ ಅಂಶದಿಂದ ಜನಿಸಿದವನು ಎಂದು ತಿಳಿ.

ಜಗತೋ ಯಶ್ಚ ಸರ್ವಸ್ಯ ವಿದ್ವೇಷಕರಪೂರುಷಃ ।
ಯಃ ಸರ್ವಾನ್ ಘಾತಯಾಮಾಸ ಪೃಥಿವ್ಯಾಂ ಕ್ಷತ್ರಿಯಾನ್ ಭೃಶಮ್।
ಯೇನ ಯುದ್ಧಂ ಸಮುದ್ದಿಷ್ಟಂ ಭೂತಾಂತಕರಣಂ ಮಹತ್ ॥೮೫॥

ಅವನು ಎಲ್ಲ ಜಗತ್ತನ್ನು ದ್ವೇಷವನ್ನು ಮಾಡುವವನು. ಭೂಮಿಯಲ್ಲಿದ್ದ ಎಲ್ಲ ರಾಜರನ್ನು ಸರ್ವಭೂತಕ್ಷಯಕರವಾದ ಯುದ್ಧವನ್ನು ಪ್ರಚೋದಿಸಿ ಕೊಲ್ಲಿಸಿದವನು.

ಪೌಲಸ್ತ್ಯಾ ಭ್ರಾತರಃ ಸರ್ವೇ ಜಜ್ಞಿರೇ ಮನುಜೇಷ್ವಿಹ ।
ಶತಂ ದುಃಶಾಸನಾದೀನಾಂ ಸರ್ವೇಷಾಂ ಕ್ರೂರಕರ್ಮಣಾಮ್ ॥೮೬॥

ರಾವಣನ ಮಕ್ಕಳಾದ ನೂರು ಜನ ಅಣ್ಣತಮ್ಮಂದಿರೆಲ್ಲರೂ ಮನುಷ್ಯ ಲೋಕದಲ್ಲಿ ಕ್ರೂರಕರ್ಮಿಗಳಾದ ದುಶ್ಶಾಸನ ಮೊದಲಾದ ನೂರುಮಂದಿಯಾಗಿ ಜನಿಸಿದರು.

ದುರ್ಮುಖೋ ದುಃಸಹಶ್ಚೈವ ಯೇ ಚಾನ್ಯೇ ನಾನುಕೀರ್ತಿತಾಃ ।
ದುರ್ಯೋಧಸಹಾಯಾಸ್ತೇ ಪೌಲಸ್ತ್ಯಾ ಭರತರ್ಷಭ ॥೮೭॥

ಎಲೈ ಭರತರ್ಷಭನೇ ದುರ್ಯೋಧನನಿಗೆ ಸಹಾಯವನ್ನು ಮಾಡಿದ ದುರ್ಮುಖ, ದುಃಸಹ ಮತ್ತು ಉಳಿದವರೆಲ್ಲರೂ ರಾವಣನ ಪುತ್ರರು.

ಧರ್ಮಸ್ಯಾಂಶಾತ್ ತು ರಾಜಾನಂ ವಿದ್ಧಿ ರಾಜನ್ ಯುಧಿಷ್ಠಿರಮ್ ।
ಭೀಮಸೇನಂ ಚ ವಾತಸ್ಯ ದೇವರಾಜಸ್ಯ ಚಾರ್ಜುನಮ್ ॥೮೮॥

ರಾಜನೇ ಧರ್ಮರಾಜನನ್ನು ಯಮನ ಅಂಶದಿಂದ ಜನಿಸಿದವನೆಂದು, ಭೀಮಸೇನನನ್ನು ವಾಯುದೇವರ ಅಂಶದಿಂದ ಜನಿಸಿದವನೆಂದು, ಅರ್ಜುನನ್ನು ಇಂದ್ರನ ಅಂಶದಿಂದ ಜನಿಸಿದವನೆಂದು ತಿಳಿ.

ಅಶ್ವಿನೋಸ್ತು ತಥೈವಾಂಶೌ ರೂಪೇಣಾಪ್ರತಿಮೌ ಭುವಿ ।
ನಕುಲಃ ಸಹದೇವಶ್ಚ ಸರ್ವಭೂತಮನೋಹರೌ ॥೮೯॥

ಹಾಗೆಯೇ ಅತ್ಯಂತ ಸುಂದರರಾದ ಎಲ್ಲರ ಮನಸ್ಸನ್ನೂ ಸೆಳೆಯುವ ಅಸದೃಶವಾದ ಸೌಂದರ್ಯವುಳ್ಳ ನಕುಲ, ಸಹದೇವರನ್ನು ಅಶ್ವಿನಿದೇವತೆಗಳ ಅಂಶದಿಂದ ಜನಿಸಿದವರೆಂದು ತಿಳಿ.

ಯಃ ಸುವರ್ಚ ಇತಿ ಖ್ಯಾತಃ ಸೋಮಪುತ್ರಃ ಪ್ರತಾಪವಾನ್ ।
ಅಭಿಮನ್ಯುರ್ಬಹತ್ಕೀರ್ತಿರರ್ಜುನಸ್ಯ ಸುತೋಽಭವತ್ ॥೯೦॥

ಸುವರ್ಚ ಎಂಬ ಹೆಸರಿನಿಂದ ಪ್ರಖ್ಯಾತನಾದ ಚಂದ್ರನ ಮಗನು ಅಭಿಮನ್ಯು ಎಂಬ ಹೆಸರಿನಿಂದ ಅರ್ಜುನನ ಮಗನಾಗಿ ಪ್ರತಾಪಶಾಲಿಯೂ, ಕೀರ್ತಿಶಾಲಿಯೂ ಆಗಿ ಜನಿಸಿದನು. (ಅಭಿಮನ್ಯುವು ಚಂದ್ರಾಂಶಯುಕ್ತನಾದ ಬುಧ. ಬುಧನೂ ಸುಂದರನಾದವನು. ಚಂದ್ರನೂ ಸುಂದರನಾದವನು ಆದ್ದರಿಂದ ಅಭಿಮನ್ಯುವಿನಲ್ಲಿ ಮಹಾಸೌಂದರ್ಯ.)

ಯಸ್ಯಾವತರಣೇ ರಾಜನ್ ಸುರಾನ್ ಸೋಮೋಽಬ್ರವೀದ್ ವಚಃ ।
ಅಹಂ ದೃಷ್ಟ್ವಾಪಿ ಯಂ ಪುತ್ರಂ ಮಮ ಪ್ರಾಣೈರ್ಗರೀಯಸಮ್ ।
ಮಯಾ ಸ ಭವತಾಮೇವ ನ ಶಕ್ಯಶ್ಚಾತಿವರ್ತಿತುಮ್ ॥೯೧॥

ಸುರಕಾರ್ಯಂ ಹಿ ನಃ ಕಾರ್ಯಂ ದಾನವಾನಾಂ ಹಿ ಸೂದನಮ್ ।
ತತ್ರ ಯಾಸ್ಯತ್ಯಯಂ ಸರ್ವಾನ್ ಸಂಸ್ಥಾಪ್ಯಾತಿರಣೇ ಚಿರಮ್ ॥೯೨॥

ಎಲೈ ರಾಜನೇ ಅಭಿಮನ್ಯುವಿನ ಅವತಾರ ವಿಷಯದಲ್ಲಿ ಚಂದ್ರನು ದೇವತೆಗಳನ್ನು ಕುರಿತು ಹೀಗೆ ಹೇಳಿದನು - ನನ್ನ ಮಗನು ನನಗೆ ಪ್ರಾಣಕ್ಕಿಂತಲೂ ಪ್ರಿಯನಾದವನು. ನೀವಾಗಲೀ ಅಥವಾ ನಾನಾಗಲೀ ಅವನನ್ನು ಮೀರಲು ಸಾಧ್ಯವಿಲ್ಲ. ನಮಗೆ ಆಗಬೇಕಾದ ಸುರಕಾರ್ಯವೆಂದರೆ ದಾನವರ ನಾಶ. ಇವನು ಘೋರಯುದ್ಧದಲ್ಲಿ ದಾನವರನ್ನು ನಾಶಮಾಡಿ ಆ ಕಾರ್ಯವನ್ನು ಯಶಸ್ವಿಯಾಗಿ ಮಾಡುತ್ತಾನೆ.

ಯಶ್ಚೇಂದ್ರಿರ್ಭವಿತಾ ಲೋಕೇ ಯಸ್ಯ ನಾರಾಯಣಃ ಸಖಾ ।
ಸೋಽರ್ಜುನೇತ್ಯಭಿವಿಖ್ಯಾತಃ ಪಾಂಡೋಃ ಪುತ್ರೋ ಭವಿಷ್ಯತಿ ॥೯೩॥

ಅವನು ಅರ್ಜುನನೆಂಬ ಹೆಸರಿನಿಂದ ಪ್ರಖ್ಯಾತನಾದ ಪಾಂಡುಪುತ್ರನ ಮಗನಾಗಿ ಜನಿಸುವನು. ಅವನಿಗೆ ನಾರಾಯಣನು ಮಿತ್ರನಾಗುವನು.

ತಸ್ಯಾಯಂ ಭವಿತಾ ಪುತ್ರೋ ಬಾಲೋ ಭುವಿ ಮಹಾರಥಃ ।
ತತ್ರ ಷೋಡಶವರ್ಷಾಣಿ ವತ್ಸ್ಯತೇ ಸುರಸತ್ತಮಃ ॥೯೪॥

ಇವನು ಅರ್ಜುನನ ಮಗನಾಗಿ ಭೂಮಿಯಲ್ಲಿ ಜನಿಸಿ ಬಾಲನಾದರೂ ಮಹಾರಥಿಕನೆನಿಸುತ್ತಾನೆ. ದೇವಶ್ರೇಷ್ಠನಾದ ಇವನು ಭೂಮಿಯಲ್ಲಿ ಹದಿನಾರು ವರ್ಷ ವಾಸಮಾಡುತ್ತಾನೆ.

ತಸ್ಯ ಷೋಡಶವರ್ಷಸ್ಯ ಸುಸಂಗ್ರಾಮೋ ಭವಿಷ್ಯತಿ ।
ಕರಿಷ್ಯತಿ ಸ ಆಶ್ಚರ್ಯಂ ಕರ್ಮ ದಾನವಸೂದನಃ ॥೯೫॥

ಅವನಿಗೆ ಹದಿನಾರು ವರ್ಷವಾದಾಗ ಭೂಮಿಯಲ್ಲಿ ಘೋರವಾದ ಸಂಗ್ರಾಮವುಂಟಾಗುವುದು. ದಾನವಸೂದನನಾದ ಅವನು ಆ ಯುದ್ಧದಲ್ಲಿ ಆಶ್ಚರ್ಯಕರವಾದ ಕರ್ಮವನ್ನು ಮಾಡುವನು.

ನರನಾರಾಯಣಾಭ್ಯಾಂ ಚ ಸಂಗ್ರಾಮೋ ಭವಿತಾ ಸಕೃತ್ ।
ಚಕ್ರವ್ಯೂಹಂ ಸಮಾಸಾದ್ಯ ಯೋಧಯಿಷ್ಯತಿ ವೈ ಸುರಾಃ ॥೯೬॥

ಎಲೈ ದೇವತೆಗಳೇ, ನರನಾರಾಯಣರ ನೇತೃತ್ವದಲ್ಲಿ ನಡೆಯುವ ಆ ಯುದ್ಧದಲ್ಲಿ ಇವನು ಚಕ್ರವ್ಯೂಹವನ್ನು ಬೇಧಿಸಿ ಶತ್ರುಗಳ ಜೊತೆಯಲ್ಲಿ ಯುದ್ಧಮಾಡುವನು.

ವಿಮುಖಾಂಶ್ಚಾತ್ರ ತಾನ್ ಸರ್ವಾನ್ ಕಾರಯಿಷ್ಯತಿ ಮೇ ಸುತಃ ।
ಬಾಲಃ ಪ್ರವಿಶ್ಯ ತಂ ವ್ಯೂಹಮಭೇದ್ಯಂ ವಿಚರಿಷ್ಯತಿ ॥೯೭॥

ನನ್ನ ಮಗನಾದ ಇವನು ಬಾಲಕನಾಗಿದ್ದರೂ ಅಭೇದ್ಯವಾದ ಚಕ್ರವ್ಯೂಹವನ್ನು ಭೇದಿಸಿ ಶತ್ರುಗಳನ್ನೆಲ್ಲಾ ಹಿಮ್ಮೆಟ್ಟಿಸಿ, ಶತ್ರುಗಳ ಮಧ್ಯೆ ಸಂಚರಿಸುವನು.

ಮಹಾರಥಾನಾಂ ವೀರಾಣಾಂ ಕದನಂ ಸ ಕರಿಷ್ಯತಿ ।
ಸರ್ವೇಷಾಂ ಚೈವ ಶತ್ರೂಣಾಂ ಚತುರ್ಥಾಂಶಂ ವಿನೇಷ್ಯತಿ ।
ದಿನಾರ್ಧೇನ ಮಹಾಬಾಹುಃ ಧರ್ಮರಾಜಪುರಂ ಪ್ರತಿ ॥೯೮॥

ಅವನು ಮಹಾರಥರಾದ ವೀರರ ಜೊತೆಯಲ್ಲಿ ಯುದ್ಧವನ್ನು ಮಾಡಿ ಅರ್ಧದಿನದ ಕಾಲದಲ್ಲಿ ಆ ವೀರರ ಸೈನ್ಯದ ನಾಲ್ಕನೆಯ ಒಂದು ಭಾಗವನ್ನು ಯಮಪಟ್ಟಣಕ್ಕೆ ಕಳುಹಿಸುವನು.

ತತೋ ಮಹಾರಥೈರ್ವೀರೈಃ ಸಮೇತ್ಯ ಚ ಮಹಾರಣೇ ॥೯೯॥
ದಿನಕ್ಷಯೇ ಮಹಾಬಾಹುರ್ಮಮ ರೂಪಂ ಸಮೇಷ್ಯತಿ ।

ಅನಂತರ ಸಾಯಂಕಾಲದ ವೇಳೆಗೆ ಎಲ್ಲಾ ಮಹಾರಥರಿಂದ ಒಟ್ಟಿಗೇ ಸೇರಿ ಹತನಾಗಿ ಈ ಮಹಾಬಾಹುವು ಪುನಃ ಬಂದು ನನ್ನ ರೂಪವನ್ನು ಸೇರುವನು.

ಏಕಂ ವಂಶಧರಂ ಪುತ್ರಂ ವೀರಂ ಸಂಜನಯಿಷ್ಯತಿ ।
ಪ್ರನಷ್ಟಂ ಭಾರತಂ ವರ್ಷಂ ಸ ಭೂಯೋ ಧಾರಯಿಷ್ಯತಿ ।
ಏವಂ ಸೋಮವಚಃ ಶ್ರುತ್ವಾ ತಥೇತ್ಯೂಚುರ್ದಿವೌಕಸಃ ॥೧೦೦॥

ಇವನು ವಂಶಧರನಾದ ಒಬ್ಬ ಪುತ್ರನನ್ನು ಪಡೆಯುವನು. ಆ ಪುತ್ರನಾದರೋ ನಷ್ಟವಾದ ಭರತಕುಲವನ್ನು ಪುನಃ ಮುಂದುವರೆಸುವನು. ಹೀಗೆ ಚಂದ್ರನ ಮಾತನ್ನು ಕೇಳಿ ದೇವತೆಗಳೆಲ್ಲರೂ ಹಾಗೆಯೇ ಆಗಲಿ ಎಂದು ಹೇಳಿದರು.

ಏತತ್ ತೇ ಕಥಿತಂ ರಾಜನ್ ಮಯಾ ಜನ್ಮ ಪಿತುಃಪಿತುಃ ।
ಅಗ್ನೇರಂಶಾತ್ ತು ವಿದ್ಧಿ ತ್ವಂ ಧೃಷ್ಟದ್ಯುಮ್ನಂ ಮಹಾರಥಮ್ ॥೧೦೧॥

ರಾಜನೇ ನಿನ್ನ ತಂದೆಯ ತಂದೆಯ ಜನ್ಮದ ಬಗ್ಗೆ ನಾನು ನಿನಗೆ ತಿಳಿಸಿದ್ದೇನೆ. ಮಹಾರಥನಾದ ಧೃಷ್ಟದ್ಯುಮ್ನನು ಅಗ್ನಿಯ ಅಂಶದಿಂದ ಜನಿಸಿದವನೆಂದು ತಿಳಿ.

ಶಿಖಂಡಿನಮಥೋ ರಾಜನ್ ಸ್ತ್ರೀಪುಂಸಂ ವಿದ್ಧಿ ಗುಹ್ಯಕಮ್ ।
ದ್ರೌಪದೇಯಾಸ್ತು ಯೇ ಪಂಚ ಬಭೂವುರ್ಭರತರ್ಷಭ ।
ವಿಶ್ವೇದೇವಗಣಾನ್ ವಿದ್ಧಿ ಸಂಜಾತಾನ್ ಭರತರ್ಷಭ ॥೧೦೨॥

ನಪುಂಸಕನಾದ ಶಿಖಂಡಿಯು ಗುಹ್ಯಕ ಅಂಶದಿಂದ ಜನಿಸಿದವನೆಂದು ತಿಳಿ. (ಶಿಖಂಡಿಯು ದ್ಯುನಾಮಕವಸುವಿನ ವರಾಂಗಿ ಎಂಬ ಪತ್ನಿ. ಅವಳಲ್ಲಿ ಗುಹ್ಯಕನ ಆವೇಶವಿದೆ.) ಎಲೈ ಭರತರ್ಷಭನೇ ದ್ರೌಪದಿಯ ಮಕ್ಕಳಾದ ಪಂಚ ಉಪಪಾಂಡವರನ್ನು ವಿಶ್ವೇದೇವತೆಗಳ ಅಂಶದಿಂದ ಜನಿಸಿದವರೆಂದು ತಿಳಿ.

ಆಮುಕ್ತಕವಚಃ ಕರ್ಣೋ ಯಸ್ತು ಜಜ್ಞೇ ಮಹಾರಥಃ ।
ದಿವಾಕರಸ್ಯ ತಂ ಕರ್ಣಮಂಶಂ ವಿದ್ಧಿ ನರೋತ್ತಮಮ್ ॥೧೦೩॥

ಕವಚವನ್ನು ಧರಿಸಿಯೇ ಜನಿಸಿದ ಮಹಾರಥನು ಪುರುಷಶ್ರೇಷ್ಠನಾದ ಕರ್ಣನನ್ನು ಸೂರ್ಯನ ಅಂಶವೆಂದು ತಿಳಿ.

ಯಸ್ತು ನಾರಾಯಣೋ ನಾಮ ದೇವದೇವಃ ಸನಾತನಃ ।
ತಸ್ಯಾಂಶೋ ಮಾನುಷೇಷ್ವಾಸೀದ್ ವಾಸುದೇವಃ ಪ್ರತಾಪವಾನ್ ॥೧೦೪॥

ಸನಾತನ ದೇವದೇವನಾದ ನಾರಾಯಣನು ಮನುಷ್ಯಲೋಕದಲ್ಲಿ ವಸುದೇವನ ಪುತ್ರನಾಗಿ ಪ್ರತಾಪಶಾಲಿಯಾಗಿ ಕೃಷ್ಣನೆಂಬ ನಾಮದಿಂದ ಅವತರಿಸಿದನು.

ಶೇಷಸ್ಯಾಂಶಸ್ತು ನಾಗಸ್ಯ ಬಲದೇವೋ ಮಹಾಬಲಃ ।
ಸನತ್ಕುಮಾರಂ ಪ್ರದ್ಯುಮ್ನಂ ವಿದ್ಧಿ ರಾಜನ್ ಮಹೌಜಸಮ್ ॥೧೦೫॥

ಮಹಾಬಲಿಷ್ಠನಾದ ಬಲರಾಮನು ಶೇಷದೇವರ ಅಂಶ. ಎಲೈ ರಾಜನೇ ಕೃಷ್ಣನ ಮಗನಾದ ಮಹಾಪರಾಕ್ರಮಶಾಲಿಯಾ ಪ್ರದ್ಯುಮ್ನನನ್ನು ಸನತ್ಕುಮಾರನ ಅಂಶವೆಂದು ತಿಳಿ.

ಏವಮನ್ಯೇ ಮನುಷ್ಯೇಂದ್ರ ಬಹವೋಂಶಾ ದಿವೌಕಸಾಮ್ ।
ಜಜ್ಞಿರೇ ವಸುದೇವಸ್ಯ ಕುಲೇ ಕುಲವಿವರ್ಧನ ॥೧೦೬॥

ಎಲೈ ರಾಜನೇ ಕುಲವಿವರ್ಧನನೇ, ಹೇಗೆ ಇನ್ನೂ ಅನೇಕ ದೇವತೆಗಳು ತಮ್ಮ ಅಂಶದಿಂದ ಭೂಮಿಯಲ್ಲಿ ವಸುದೇವನ ಕುಲದಲ್ಲಿ ಜನಿಸಿದರು.

ಗಣಸ್ತ್ವಪ್ಸರಸಾಂ ಯೋ ವೈ ಮಹಾರಾಜ ಪ್ರಕೀರ್ತಿತಃ ।
ತಸ್ಯ ಭಾಗಃ ಕ್ಷಿತೌ ಜಜ್ಞೇ ನಿಯೋಗಾದ್ ವಾಸವಸ್ಯ ಚ ॥೧೦೭॥

ತಾನಿ ಷೋಡಶದೇವೀನಾಂ ಸಹಸ್ರಾಣಿ ನರಾಧಿಪ ।
ಬಭೂವುರ್ಮಾನುಷೇ ಲೋಕೇ ನಾರಾಯಣಪರಿಗ್ರಹಾಃ ॥೧೦೮॥

ಎಲೈ ಮಹಾರಾಜನೇ ಇಂದ್ರನ ಆದೇಶದಂತೆ ಅಪ್ಸರೆಯರ ಗಣಕ್ಕೆ ಸೇರಿದ ಗೋಪಸ್ತ್ರೀಯರ ಸಮುದಾಯಕ್ಕೆ ಸೇರಿದ ಹದಿನಾರು ಸಾವಿರ ಅಪ್ಸರೆಯರು ಭೂಮಿಯಲ್ಲಿ ಜನಿಸಿ ಕೃಷ್ಣದೇವರ ಪತ್ನಿಯರಾದರು.

ಶ್ರಿಯಸ್ತು ಭಾಗಃ ಸಂಜಜ್ಞೇ ರತ್ಯರ್ಥಂ ಪೃಥಿವೀತಳೇ ।
ದ್ರುಪದಸ್ಯ ಕುಲೇ ಕನ್ಯಾ ವೇದಿಮಧ್ಯಾತ್ ಸಮುತ್ಥಿತಾ ।
ನಾತಿಹ್ರಸ್ವಾ ನ ಮಹತೀ ನೀಲೋತ್ಪಲಸುಗಂಧಿನೀ ॥೧೦೯॥

ಭೂಮಿಯಲ್ಲಿ ಪಾಂಡವರ ಸುಖಕ್ಕಾಗಿ ಭಾರತೀದೇವಿಯೂ ದ್ರುಪದನ ಕುಲದಲ್ಲಿ ವೇದಿಮಧ್ಯದಿಂದ ಎದ್ದುಬಂದಳು. ಅವಳು ಅತಿ ಎತ್ತರವೂ ಅಲ್ಲದೆ ಅತಿ ಸ್ಥೌಲ್ಯವೂ ಇಲ್ಲದೆ ನೀಲೋತ್ಪಲ ಪುಷ್ಪಗಂಧವುಳ್ಳವಳಾಗಿದ್ದಳು.

ಪದ್ಮಾಯತಾಕ್ಷೀ ಸುಶ್ರೋಣೀ ಅಸಿತಾಯತಮೂರ್ಧಜಾ ।
ಸರ್ವಲಕ್ಷಣಸಂಪನ್ನಾ ವೈಡೂರ್ಯಮಣಿಸನ್ನಿಭಾ ।
ಪಂಚಾನಾಂ ಪುರುಷೇಂದ್ರಾಣಾಂ ಚಿತ್ತಪ್ರಮಥನೀ ರಹಃ ॥೧೧೦॥

ಪದ್ಮದಂತೆ ಆಯತವಾದ ಕಣ್ಣುಳ್ಳವಳು. ಸುಂದರವಾದ ಕಟಿಯುಳ್ಳವಳು, ಕಪ್ಪಾದ ದೀರ್ಘವಾದ ಕೂದಲುಳ್ಳವಳು, ಎಲ್ಲ ಲಕ್ಷಣಗಳಿಂದಲೂ ಸಹಿತಳಾದವಳು. ವೈಢೂರ್ಯದ ಮಣಿಯಂತೆ ಬೆಳಗುವವಳು. ಏಕಾಂತದಲ್ಲಿ ಪಂಚಪಾಂಡವರ ಮನಸ್ಸನ್ನು ಕಲಕುವವಳೂ ಆಗಿದ್ದಳು.

ಸಿದ್ಧಿರ್ವೃದ್ಧಿಶ್ಚ ಯೇ ದೇವ್ಯೌ ಪಂಚಾನಾಂ ಮಾತರೌ ತು ತೇ ।
ಕುಂತೀ ಮಾದ್ರೀ ಚ ಜಜ್ಞಾತೇ ಮಾದ್ರೀ ಮದ್ರಪತೇಃ ಸುತಾ ॥೧೧೧॥

ದೇವತೆಗಳ ಗಣಕ್ಕೆ ಸೇರಿದ ಸಿದ್ಧಿ ಮತ್ತು ವೃದ್ಧಿ ಎಂಬ ದೇವಿಯರು ಕುಂತಿ ಮತ್ತು ಮಾದ್ರಿಯರಾಗಿ ಜನಿಸಿದರು. ಅವರು ಪಂಚಪಾಂಡವರ ತಾಯಿಯರು. ಮಾದ್ರಿಯು ಮದ್ರದೇಶಾಧಿಪತಿಯ ಮಗಳು.

ಇತಿ ದೇವಾಸುರಾಣಾಂ ತೇ ಗಂಧರ್ವಾಪ್ಸರಸಾಂ ತಥಾ ।
ಅಂಶಾವತರಣಂ ರಾಜನ್ ರಾಕ್ಷಸಾನಾಂ ಚ ಕೀರ್ತಿತಮ್ ॥೧೧೨॥

ಎಲೈ ರಾಜನೇ ಹೀಗೆ ನಿನಗೆ ದೇವಾಸುರರ ಗಂಧರ್ವಾಪ್ಸರರ ಹಾಗೂ ರಾಕ್ಷಸರ ಅಂಶಾವತರಣವನ್ನು ತಿಳಿಸಿದ್ದೇನೆ.

ಯೇ ಪೃಥಿವ್ಯಾಂ ಸಮುದ್ಭೂತಾ ರಾಜಾನೋ ಯುದ್ಧದುರ್ಮದಾಃ ।
ಮಹಾತ್ಮನಾಂ ಯದೂನಾಂ ಚ ಯೇ ಜಾತಾ ವಿಪುಲೇ ಕುಲೇ ।
ಏತೇ ತು ಮುಖ್ಯಾಃ ಕಥಿತಾ ಮಯಾ ತೇ ರಾಜಸತ್ತಮಾಃ ॥೧೧೩॥

ಇವರು ಯುದ್ಧದುರ್ಮದರಾದ ಭೂಮಿಯಲ್ಲಿ ಜನಿಸಿದ ಶ್ರೇಷ್ಠರಾದ ರಾಜರುಗಳು. ಮಹಾತ್ಮರ ಮತ್ತು ಯದುಗಳ ವಿಸ್ತಾರವಾದ ಕುಲದಲ್ಲಿ ಜನಿಸಿದವರು. ಅವರುಗಳಲ್ಲಿ ಮುಖ್ಯರಾದ ರಾಜರ ಹೆಸರುಗಳನ್ನು ಮಾತ್ರ ನಿನಗೆ ತಿಳಿಸಿದ್ದೇನೆ.

ಧನ್ಯಂ ಯಶಸ್ಯಮಾಯುಷ್ಯಂ ಪುಣ್ಯಂ ಚ ವಿಜಯಾವಹಮ್ ।
ಇದಮಂಶಾವತರಣಂ ಶ್ರೋತವ್ಯಮನಸೂಯಯಾ ॥೧೧೪॥

ಈ ಅಂಶಾವತರಣವು ಧನ್ಯವಾದುದು. ಕೀರ್ತಿಯನ್ನು, ಆಯುಷ್ಯವನ್ನು, ಪುಣ್ಯವನ್ನು, ಮತ್ತು ವಿಜಯವನ್ನು ತಂದುಕೊಡುತ್ತದೆ. ಇದನ್ನು ಅಸೂಯೆಯನ್ನು ಬಿಟ್ಟು ಶುದ್ಧವಾದ ಮನಸ್ಸಿನಿಂದ ಕೇಳಬೇಕು.

ಅಂಶಾವರತಣಂ ಶ್ರುತ್ವಾ ದೇವಗಂಧರ್ವರಕ್ಷಸಾಮ್ ।
ಪ್ರಭಾತೇ ನಯವಿತ್ ಪ್ರಾಜ್ಞೋ ನ ಕೃಚ್ಛ್ರೇಷ್ವವಸೀದತಿ ॥೧೧೫॥

ಪ್ರಾತಃಕಾಲದಲ್ಲಿ ದೇವಗಂಧರ್ವರಾಕ್ಷಸರ ಅಂಶಾವತರಣವನ್ನು ಶ್ರವಣವನ್ನು ಮಾಡಿದ ನೀತಿಜ್ಞನಾದ ಪ್ರಾಜ್ಞನು ಕಷ್ಟದಲ್ಲಿ ಸಿಲುಕುವುದಿಲ್ಲ.

॥ ಇತಿ ಶ್ರೀಮನ್ಮಹಾಭಾರತೇ ಶತಸಹಸ್ರಿಕಾಯಾಂಸಂಹಿತಾಯಾಮಾದಿಪರ್ವಣಿ
ದ್ವಿಷಷ್ಟಿತಮೋऽಧ್ಯಾಯಃ ॥
॥ ಇತಿ ಸಂಭವಪರ್ವಣಿ ದಶಮೋऽಧ್ಯಾಯಃ ॥

ಇಲ್ಲಿಗೆ ಮಹಾಭಾರತದ ಆದಿಪರ್ವದಲ್ಲಿ ಅರವತ್ತೆರಡನೆಯ ಅಧ್ಯಾಯ ಮುಗಿಯಿತು.

★★★★★

ಅರವತ್ಮೂರನೆಯ ಅಧ್ಯಾಯ

(ಸಿಂಹಾವಲೋಕನ ನ್ಯಾಯದಿಂದ ಪುನಃ ಪೂರುವಂಶ ಕಥನ.)

ಜನಮೇಜಯಃ

ಪುತ್ರಂ ಯಯಾತೇಃ ಪ್ರಬ್ರೂಹಿ ಪೂರುಂ ಧರ್ಮಭೃತಾಂ ವರಮ್।
ಆನುಪೂರ್ವ್ಯೇಣ ಯೇ ಚಾನ್ಯೇ ಪೂರುವಂಶವಿವರ್ಧನಾಃ ॥೧॥

ಯಯಾತಿಯ ಮಗನಾದ ಧರ್ಮಿಷ್ಠರಲ್ಲಿ ಶ್ರೇಷ್ಠನಾದ ಪೂರುವಿನ ವಂಶವಿವರ್ಧನರಾದ ರಾಜರುಗಳನ್ನು ಕ್ರಮವಾಗಿ ಹೇಳು.

ವಿಸ್ತರೇಣ ಪುನರ್ಬ್ರೂಹಿ ದೌಷ್ಮಂತೇರ್ಜನಮೇಜಯಾತ್ ।
ಸಂಬಭೂವ ಯಥಾ ರಾಜಾ ಭರತೋ ದ್ವಿಜಸತ್ತಮಃ ॥೨॥

ಎಲೈ ಬ್ರಾಹ್ಮಣಶ್ರೇಷ್ಠನೇ, ದುಷ್ಷಂತನ ಮಗನಾದ ಜನಮೇಜಯನ ನಂತರ ಭರತನು ಹೇಗೆ ರಾಜನಾದನು ಎಂಬ ಕಥೆಯನ್ನು ವಿಸ್ತಾರವಾಗಿ ಹೇಳು. (ಈ ಜನಮೇಜಯನು, ಪರೀಕ್ಷಿತನ ಪುತ್ರನಲ್ಲದ ಇನ್ನೊಬ್ಬ ಜನಮೇಜಯ)

ವೈಶಂಪಾಯನಃ

ಪೂರುರ್ನೃಪತಿಶಾರ್ದೂಲೋ ಯಥೈವಾಸ್ಯ ಪಿತಾ ನೃಪ ।
ಧರ್ಮನಿತ್ಯಃ ಸ್ಥಿತೋ ರಾಜ್ಯೇ ಶಕ್ರತುಲ್ಯಪರಾಕ್ರಮಃ ॥೩॥

ಎಲೈ ರಾಜನೇ, ನೃಪತಿಶಾರ್ದೂಲನಾದ ಪೂರುವು ಅವನ ತಂದೆಯಂತೆಯೇ ಶಕ್ರನಿಗೆ ಸಮಾನವುಳ್ಳ ಪರಾಕ್ರಮವುಳ್ಳವನಾಗಿ, ಧರ್ಮನಿತ್ಯನಾಗಿ, ರಾಜ್ಯವನ್ನಾಳಿದನು.

ಪ್ರವೀರಃ ಶತರುಜ್ಯೌ ಚ ತ್ರಯಃ ಪುತ್ರಾ ಮಹಾಬಲಾಃ ।
ಪೂರೋಃ ಪೌಷ್ಯಾಮಜಾಯಂತ ಪ್ರವೀರಸ್ತತ್ರ ವಂಶಭೃತ್ ॥೪॥

ಪೂರುವಿಗೆ ಪೌಷ್ಯೆಯಲ್ಲಿ ಮಹಾಬಲರಾದ ಪ್ರವೀರ, ಶತ ಮತ್ತು ರುಜ್ಯ ಎಂಬ ಮೂರು ಮಕ್ಕಳು. ಅವರಲ್ಲಿ ಪ್ರವೀರನು ವಂಶಕರ್ತ.

" ನಮಸ್ಯುರಭವನ್ ತಸ್ಮಾದ್ ಧುರಃ ಶೈವ್ಯಾಸುತಸ್ತತಃ ।
ಪೃಥಿವ್ಯಾಂ ಸಾಗರಾಂತಾಯಾಂ ರಾಜಾ ರಾಜೀವಲೋಚನಃ ॥೫॥

ಪ್ರವೀರನ ಪುತ್ರ ನಮಸ್ಯು . ನಮಸ್ಯುವಿಗೆ ಶೈಬ್ಯೆಯಲ್ಲಿ ಜನಿಸಿದ ಪುತ್ರ ಧುರ. ರಾಜೀವಲೋಚನನಾದ ಅವನು ಸಾಗರಾಂತವಾದ ಪೃಥಿವಿಗೆ ರಾಜನಾಗಿದ್ದನು.

ಸುಭ್ರುಶ್ಚೋಭಯದೋ ವೀರಃ ಸೌವೀರತನಯಾಸ್ತ್ರಯಃ ।
ನಮಸ್ಯೋರಭವನ್ ಪುತ್ರಾಃ ಶೂರಾಃ ಸರ್ವೇ ಮಹಾರಥಾಃ ॥೬॥

ನಮಸ್ಯುವಿಗೆ ಸೌವೀರೆಯಲ್ಲಿ, ಸುಭ್ರು, ಉಭಯದ ಮತ್ತು ವೀರ ಎಂಬ ಶೂರರೂ, ಮಹಾರಥರೂ ಆದ ಮೂರು ಪುತ್ರರು ಜನಿಸಿದರು.

ಸುನ್ವಂತಂ ವಸುನಾಭಂ ಚ ಗರ್ಗರಮ್ಯೌ ಯಶಸ್ವಿನೌ ।
ಶೂರಾನುಭಯದೋ ರಾಜಾ ಜನಯಾಮಾಸ ವೀರ್ಯವಾನ್ ॥೭॥

ವೀರ್ಯಶಾಲಿಯಾದ ಉಭಯದನು, ಸುನ್ವಂತ, ವಸುನಾಭ, ಗರ್ಗ ಮತ್ತು ರಮ್ಯ ಎಂಬ ನಾಲ್ಕು ಮಕ್ಕಳನ್ನು ಪಡೆದನು.

ಯವೀಯಾನ್ ಸುನ್ವತಃ ಪುತ್ರೋ ರಥಂತರ್ಯಾಮಜಾಯತ ।
ಶೂರಶ್ಚ ದೃಢಧನ್ವಾ ಚ ವಪುಷ್ಮಾಂಶ್ಚ ನೃಪೋತ್ತಮಃ ॥೮॥

'ಯವೀಯಾನ್' ಎಂಬ ಸುನ್ವಂತನ ಪುತ್ರನು ರಥಂತರೆಯಲ್ಲಿ ಜನಿಸಿದನು. ಅವನು ಶೂರನೂ, ದೃಢಧನ್ವನೂ, ಒಳ್ಳೆಯ ದೇಹವನ್ನು ಹೊಂದಿದ್ದ ರಾಜನೂ ಆಗಿದ್ದನು.

ರುದ್ರಾಶ್ವಂ ಪೃಷದಶ್ವಂ ಚ ರಥದಶ್ವಂ ಗಯಂ ಮನುಮ್ ।
ಯವೀಯಾನ್ ಜನಯಾಮಾಸ ಗಂಧರ್ವಾನ್ ಭೀಮವಿಕ್ರಮಾನ್ ॥

ಯವೀಯಾನ್ ರಾಜನು ಭೀಮ ಪರಾಕ್ರಮಿಗಳಾದ 'ರುದ್ರಾಶ್ವ', 'ಪೃಷದಶ್ವ', 'ರಥದಶ್ವ', 'ಗಯ' ಮತ್ತು 'ಮನು' ಎಂಬ ಐದು ಗಂಧರ್ವರನ್ನು ಮಕ್ಕಳನ್ನಾಗಿ ಪಡೆದನು.

ರುದ್ರಾಶ್ವಸ್ಯ ಮಹಾಬಾಹೋರ್ದಶಾಪ್ಸರಸಿ ಸೂನವಃ ।
ಋತೇಯುರಥ ಕಕ್ಷೇಯುಃ ಕೃಪಣೇಯುಶ್ಚ ವೀರ್ಯವಾನ್ ॥೧೦॥

ಸ್ಥಂಡಿಲೇಯುರ್ಜಲೇಯುಶ್ಚ ಸ್ಥಲೇಯುಶ್ಚ ಮಹಾಬಲಃ ।
ತೇಜೋಯುರ್ಬಲವಾನ್ ವೀರಃ ರಥೇಯುಶ್ಚೇಂದ್ರವಿಕ್ರಮಃ ॥೧೧॥

ಧರ್ಮೇಯುಃ ಸಂತತೇಯುಶ್ಚ ದಶಮೋ ದೇವವಿಕ್ರಮಃ ।
ಅನಾಘೃಷ್ಯಾಃ ಸುತಾಸ್ತೇ ತು ರಾಜಸೂಯಾಶ್ವಮೇಧಿನಃ ॥೧೨॥

ಮಹಾಬಾಹುವಾದ ರುದ್ರಾಶ್ವನಿಗೆ ಅಪ್ಸರೆಯಲ್ಲಿ ಹತ್ತು ಮಕ್ಕಳು. ಅವರಿಗೆ ಋತೇಯು, ಕಕ್ಷೇಯು, ಕೃಪಣೇಯು, ಸ್ಥಂಡಿಲೇಯು, ಜಲೇಯು, ಸ್ಥಲೇಯು, ತೇಜೋಯು, ರಥೇಯು, ಧರ್ಮೇಯು, ಸಂತತೇಯು ಎಂದು ಹೆಸರು. ಅವರೆಲ್ಲರೂ ಅನಾಘೃಷಾ ಎಂಬ ಅಪ್ಸರೆಯ ಮಕ್ಕಳು. ಎಲ್ಲರೂ ರಾಜಸೂಯ, ಅಶ್ವಮೇಧಗಳನ್ನು ಆಚರಿಸಿದವರು.

ಅಂತಿನಾರಸ್ತತೋ ರಾಜನ್ ವಿದ್ವಾಂಶ್ಚರ್ತೇಯುತೋಽಭವತ್ ।
ತ್ರಸ್ನುಂ ಮೋದ್ಯಂ ಪ್ರತಿರಥಂ ದ್ರುಮಂ ಚಾಪ್ರತಿಮಂ ಯುಧಿ ॥೧೩॥

ಏತಾನ್ ವೈ ಸುಷುವೇ ಸಾಧ್ವೀ ಹ್ಯಂತಿನಾರಾದ್ ಯಶಸ್ವಿನೀ ।
ತೇಷಾಂ ತ್ರಸ್ನುರ್ಮಹಾವೀರ್ಯಃ ಪೌರವಂ ವಂಶಮುದ್ವಹನ್ ॥೧೪॥

ಋತೇಯುವಿನಿಂದ ಅಂತಿನಾರನು ಜನಿಸಿದನು. ಅಂತಿನಾರನ ಪತ್ನಿಯಾದ ಯಶಸ್ವಿನಿಯು, ತ್ರಸ್ನು, ಮೋದ್ಯ, ಪ್ರತಿರಥ, ದ್ರುಮ ಎಂಬ ಮಕ್ಕಳನ್ನು ಪಡೆದಳು. ಅವರಲ್ಲಿ ಮಹಾವೀರ್ಯನಾದ ತ್ರಸ್ನುವು ಪೌರವ ವಂಶಧಾರಕನು.

ಆಜಹಾರ ಯಶೋ ದೀಪ್ತಂ ಜಿಗಾಯೈನಾಂ ವಸುಂಧರಾಮ್ ।
ಇಲಿಲಂ ಸುಷುವೇ ತ್ರಸ್ನೋರ್ಯಮುನಾ ಚ ಯಶಸ್ವಿನೀ ॥೧೫॥

ಅವನು ದೀಪ್ತವಾದ ಯಶಸ್ಸನ್ನು ಸಂಪಾದಿಸಿ, ಸಮಗ್ರವಾದ ಭೂಮಿಯನ್ನು ಗೆದ್ದನು. ತ್ರಸ್ನುವಿನ ಪತ್ನಿಯಾದ ಯಮುನೆಯು ಇಲಿಲನನ್ನು ಪ್ರಸವಿಸಿದಳು.

ಸೋಽಪಿ ಕೃತ್ಸ್ನಾಮಿಮಾಂ ಭೂಮಿಂ ವಿಜಿಗ್ಯೇ ಜಯತಾಂ ವರಃ ।
ರಥಂತರ್ಯಾಮೃಷೀನ್ ಪಂಚ ಪಂಚಭೂತೋಪಮಾಂಸ್ತತಃ ॥೧೬॥

ಇಲಿಲೋ ಜನಯಾಮಾಸ ದುಷ್ಮಂತಪ್ರಮುಖಾಂಸ್ತಥಾ ।
ದುಷ್ಮಂತಮನಘಂ ಶೂರಂ ಪ್ರಶೂರಂ ಚಾಪಿ ಪಂಚಮಮ್ ॥೧೭॥

ಅವನೂ ಸಹ, ಜಯಶೀಲರಲ್ಲಿ ಶ್ರೇಷ್ಠನಾದವನಾಗಿ, ಸಮಗ್ರವಾದ ಭೂಮಿಯನ್ನು ಗೆದ್ದನು. ರಥಂತರೆಯಲ್ಲಿ ಇಲಿಲನು ಪಂಚಭೂತಗಳಂತೆ ಇರುವ ದುಷ್ಮಂತ ಮೊದಲಾದ ಐದು ಮಕ್ಕಳನ್ನು ಪಡೆದನು. ದುಷ್ಮಂತ, ಅನಘ, ಶೂರ, ಪ್ರಶೂರ, ಇವರಲ್ಲಿ ದುಷ್ಮಂತನು ಪ್ರಮುಖನಾದವನು.

ತೇಷಾಂ ಜ್ಯೇಷ್ಠೋ ಮಹಾರಾಜ ದುಷ್ಮಂತೋ ದುರ್ಜಯೋ ಯುಧಿ।
ದುಷ್ಮಂತಾಲ್ಲಕ್ಷ್ಮಣಾಯಾಂ ತು ಜಜ್ಞೇ ವೈ ಜನಮೇಜಯಃ ॥೧೮॥

ಶಕುಂತಲಾಯಾಂ ಭರತೋ ದೌಷ್ಮಂತಿರಭವತ್ ಸುತಃ ।
ತಸ್ಮಾದ್ ಭರತವಂಶಸ್ಯ ವಿಪ್ರತಸ್ಥೇ ಮಹದ್ಯಶಃ ॥೧೯॥

ಎಲೈ ಮಹಾರಾಜನೇ, ಅವರಲ್ಲಿ ಜ್ಯೇಷ್ಠನಾದ ದುಷ್ಮಂತನು ಯುದ್ಧದಲ್ಲಿ ದುರ್ಜಯನಾಗಿದ್ದನು. ದುಷ್ಮಂತನಿಗೆ ಲಕ್ಷ್ಮಣೆಯಲ್ಲಿ ಜನಮೇಜಯನು ಜನಿಸಿದನು.

ಶಕುಂತಲೆಯಲ್ಲಿ ದುಷ್ಷಂತನಿಗೆ ಭರತನು ಜನಿಸಿದನು. ಭರತನಿಂದ ಭರತವಂಶದ ಕೀರ್ತಿಯು ವಿಸ್ತಾರವಾಗಿ ಹರಡಿತು.

॥ ಇತಿ ಶ್ರೀಮನ್ಮಹಾಭಾರತೇ ಶತಸಹಸ್ರಿಕಾಯಾಂಸಂಹಿತಾಯಾಮಾದಿಪರ್ವಣಿ
ತ್ರಿಷಷ್ಟಿತಮೋऽಧ್ಯಾಯಃ ॥
॥ ಇತಿ ಸಂಭವಪರ್ವಣಿ ಏಕಾದಶೋऽಧ್ಯಾಯಃ ॥

ಇಲ್ಲಿಗೆ ಮಹಾಭಾರತದ ಆದಿಪರ್ವದಲ್ಲಿ ಅರವತ್ಮೂರನೆಯ ಅಧ್ಯಾಯ ಮುಗಿಯಿತು.

★★★★★

ಭಾರತಸ್ಯ ಸುಧಾಂಬೋಧೇಃ
ಭಾರತೀಶಾದಯಃ ಸುರಾಃ ।
ಯಥಾವನ್ಮಥನೇ ಶಕ್ತಾಃ
ಕೃತಶಿಕ್ಷಾ ಹರೇರ್ಮುಖಾತ್ ॥

ಭಾರತವೆಂಬುದು ಸೊದೆಯ ಕಡಲು.
ಇದನ್ನು ಮಥಿಸಲು
ಭಾರತೀಶಾದಿಗಳೇ ದಕ್ಷರು.
ಇವರಿಗಾದರೂ ಶ್ರೀಹರಿಯ
ಉಪದೇಶದ ಬಲವಿದೆ.

ISBN 978-93-81807-24-8